೫೦ ಕರ್ನಾಟಕ

ಕರ್ನಾಟಕ ಸರ್ಕಾರ

ವಿಜಯನಗರ ಅಧ್ಯಯನ

ಸಂಪುಟ - ೧೨



ವಿಜಯನಗರ ವಿಚಾರ ಸಂಕಿರಣ ೨೦೦೬ರಲ್ಲಿ
ಮಂಡಿಸಿದ ಪ್ರಬಂಧಗಳು

ಸಂಪಾದಕರು

ಡಾ. ಆರ್. ಗೋಪಾಲ್

ಬಿ.ಎಂ. ಚಿಕ್ಕಮಾರೇಗೌಡ

ಟಿ.ಎಸ್. ಗಂಗಾಧರ

ವಿಜಯನಗರ ಅಧ್ಯಯನ

ಸಂಪುಟ - ೧೨

ಹಂಪಿ ಉತ್ಸವ-೨೦೦೬ರಲ್ಲಿ ಮಂಡಿಸಿದ ಪ್ರಬಂಧಗಳು

ಸಂಪಾದಕರು

ಡಾ. ಆರ್. ಗೋಪಾಲ್

ಬಿ. ಎಂ. ಚಿಕ್ಕಮಾರೇಗೌಡ

ಟಿ. ಎಸ್. ಗಂಗಾಧರ

ಕರ್ನಾಟಕ ಸರ್ಕಾರ

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ

ಮೈಸೂರು

VIJAYANAGARA ADHYAYANA
Vol - 12

Publisher
Director
Directorate of Archaeology and Museums
Mysore - 570 001
Ph: 0821 - 2424673 / 4

First Print : 2007

Pages : 568

Price: Rs.225-00

DTP & Printed at
Sri Sadguru Printers
Mysore-570 004

ವಿಜಯನಗರ ಅಧ್ಯಯನ
ಸಂಪುಟ - ೧೨

ಪ್ರಕಾಶಕರು
ನಿರ್ದೇಶಕರು
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ
ಮೈಸೂರು - ೫೭೦ ೦೦೧
ದೂರವಾಣಿ : ೦೮೨೧ - ೨೪೨೪೬೭೩ / ೪

ಮೊದಲ ಮುದ್ರಣ : ೨೦೦೭

ಪುಟಗಳು : ೫೬೮

ಬೆಲೆ : ರೂ. ೨೨೫-೦೦

ಅಕ್ಷರ ಜೋಡಣೆ ಮತ್ತು ಮುದ್ರಣ
ಶ್ರೀ ಸದ್ಗುರು ಪ್ರಿಂಟರ್ಸ್, ಮೈಸೂರು - ೫೭೦೦೦೪

ಪ್ರಸ್ತಾವನೆ

ವಿಜಯನಗರ ಎಂದ ತಕ್ಷಣ ಕನ್ನಡಿಗರಿಗೆ ರೋಮಾಂಚನವಾಗುತ್ತದೆ. ಈ ರೀತಿ ವಿಜಯನಗರಕ್ಕೂ ಕನ್ನಡಿಗರಿಗೂ ಒಂದು ರೀತಿಯ ಭಾವನಾತ್ಮಕ ಸಂಬಂಧವಿದೆ. ವಿಜಯನಗರ ಇಂದು ಅಸ್ತಿತ್ವದಲ್ಲಿ ಇಲ್ಲದಿದ್ದರೂ ಆ ಶ್ರೇಷ್ಠ ಸಾಮ್ರಾಜ್ಯದ ಸಂಸ್ಕೃತಿ ಇಂದಿಗೂ ಕರ್ನಾಟಕದಲ್ಲಿ ಪ್ರವಹಿಸುತ್ತಿದೆ; ಇದು ಹಾಗೇ ಮುಂದು ವರಿಯುತ್ತದೆ. ಇದೇ ಒಂದು ಶ್ರೇಷ್ಠ ಸಂಸ್ಕೃತಿಯ ಮುಖ್ಯ ಲಕ್ಷಣ. ಕರ್ನಾಟಕದ ಇತಿಹಾಸ ವಿದ್ವಾಂಸರು ಈ ಸಂಸ್ಕೃತಿಯ ವಿವಿಧ ಅಂಶಗಳನ್ನು ಕುರಿತು ಸಂಶೋಧನೆ ಮಾಡುತ್ತಿದ್ದಾರೆ. ಹೊಸ ಅಪ್ರಕಟಿತ ಶಾಸನಗಳಂತೂ ಪ್ರತಿ ವರ್ಷವೂ ದೊರೆಯು ತ್ತಲೇ ಇವೆ. ಇದಕ್ಕಾಗಿ ಅನೇಕ ಸಂಶೋಧಕರು ಕ್ಷೇತ್ರಕಾರ್ಯವನ್ನೂ ವ್ಯವಸ್ಥಿತವಾಗಿ ಮಾಡುತ್ತಿದ್ದಾರೆ. ಇದೇ ರೀತಿ ಯಲ್ಲಿ ಹೊಸ ಹೊಸ ವಿಜಯನಗರ ನಾಣ್ಯಗಳೂ ಬೆಳಕಿಗೆ ಬರುತ್ತಿವೆ. ಅನೇಕ ಹೊಸ ಹಸ್ತಪ್ರತಿಗಳು ದೊರಕಿದ್ದು, ಸಾಮಾಜಿಕ ಹಾಗೂ ಧಾರ್ಮಿಕ ಇತಿಹಾಸದ ಮೇಲೆ ಹೊಸ ಬೆಳಕು ಚೆಲ್ಲಲು ಸಹಾಯ ಮಾಡುತ್ತಿವೆ. ಇದೇ ರೀತಿ ಹೊಸ ವಾಸ್ತುಶಿಲ್ಪ ಕೃತಿಗಳೂ ಬೆಳಕಿಗೆ ಬರುತ್ತಿವೆ. ಈ ರೀತಿಯ ಹೊಸ ಸಂಶೋಧನೆಗಳನ್ನು ಇತಿಹಾಸಕಾರರ ಮತ್ತು ಆಸಕ್ತ ಕನ್ನಡಿಗರ ಗಮನಕ್ಕೆ ತರುವುದೆ ಈ ವಿಚಾರ ಸಂಕಿರಣದ ಮೂಲ ಉದ್ದೇಶ. ಈ ಹಿನ್ನೆಲೆಯಲ್ಲಿ ಏರ್ಪಡಿಸುತ್ತಿರುವ ಹಂಪಿ ಉತ್ಸವದ ಅಂಗವಾಗಿ ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಪ್ರತಿವರ್ಷವೂ ವಿಜಯನಗರ ವನ್ನು ಕುರಿತಾದ ಒಂದು ವಿಚಾರಸಂಕಿರಣವನ್ನು ಏರ್ಪಡಿಸುತ್ತಿದೆ. ಇದಕ್ಕೆ ಎಲ್ಲರಿಂದಲೂ ಮನ್ನಣೆ ಸಿಕ್ಕುತ್ತಿರುವುದು ತುಂಬಾ ಸಂತೋಷದ ಸಂಗತಿ.

2006ರ ನವೆಂಬರ್ 4 ಮತ್ತು 5ರಂದು ಈ ನಿರ್ದೇಶನಾಲಯ ಏರ್ಪಡಿಸಿದ್ದ ವಿಚಾರ ಸಂಕಿರಣವನ್ನು ಕರ್ನಾಟಕದ ಸನ್ಮಾನ್ಯ ಗೃಹ ಸಚಿವರಾಗಿದ್ದ ಶ್ರೀ ಎಂ. ಪಿ. ಪ್ರಕಾಶ್‌ರವರು ಉದ್ಘಾಟಿಸಿದ್ದರು. ಖ್ಯಾತ ಇತಿಹಾಸಕಾರ ಡಾ.ಎ.ವಿ.ನರಸಿಂಹಮೂರ್ತಿಯವರು ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು. ಇದರಲ್ಲಿ ಮಾನ್ಯ ಶಾಸಕರಾದ ಶ್ರೀ ಹೆಚ್. ಆರ್. ಗವಿಯಪ್ಪನವರು ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಈ ವಿಚಾರಸಂಕಿರಣದಲ್ಲಿ ಮಂಡಿಸಿದ ಪ್ರಬಂಧಗಳ ಸಂಕಲನವೇ ಈ ಹನ್ನೆರಡನೆಯ ಸಂಪುಟ. ಈ ಪ್ರಬಂಧಗಳ ಎಲ್ಲಾ ಲೇಖಕರಿಗೂ ವಂದನೆಗಳನ್ನು ಅರ್ಪಿಸುತ್ತೇನೆ.

ಈ ವಿಚಾರ ಸಂಕಿರಣವನ್ನು ಏರ್ಪಡಿಸುವಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಐ. ಎಂ. ವಿಠ್ಠಲಮೂರ್ತಿ, ಭಾಆಸೇ, ಇವರು ಮಾರ್ಗ ದರ್ಶನ ಮಾಡಿದ್ದಾರೆ. ಇವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಈ ವಿಚಾರ ಸಂಕಿರಣವನ್ನು ಏರ್ಪಡಿಸುವಲ್ಲಿ ಸಹಾಯ ನೀಡಿದ ನಮ್ಮ ನಿರ್ದೇಶನಾಲಯದ ಎಲ್ಲಾ ಸಹೋದ್ಯೋಗಿಗಳಿಗೂ ನನ್ನ ವಂದನೆಗಳು. ಇದನ್ನು ಸುಂದರವಾಗಿ ಮುದ್ರಿಸಿಕೊಟ್ಟ ಶ್ರೀ ಸದ್ಗುರು ಪ್ರಿಂಟರ್ಸ್, ಅವರಿಗೂ ನನ್ನ ಕೃತಜ್ಞತೆಗಳು.

ಡಾ. ಆರ್. ಗೋಪಾಲ್
ನಿರ್ದೇಶಕರು

ಮೈಸೂರು
15-10-2007

ಮಾನ್ಯ ಸಚಿವ ಎಂ.ಪಿ. ಪ್ರಕಾಶ್ ಅವರ ಉದ್ಘಾಟನಾ ಭಾಷಣ

ಮಾನ್ಯ ಶಾಸಕ ಮಿತ್ರ ಶ್ರೀ ಗವಿಯಪ್ಪನವರೇ, ಈ ವಿಚಾರ ಸಂಕಿರಣದ ಅಧ್ಯಕ್ಷ ಡಾ. ಎ.ವಿ. ನರಸಿಂಹಮೂರ್ತಿಯವರೇ, ಶ್ರೀ ಕೆ. ಆರ್. ರಾಮಕೃಷ್ಣ ಅವರೇ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶಕರೇ, ಇಲ್ಲಿ ಸೇರಿರುವ ಹಿರಿಯ ಸಂಶೋಧಕರೇ, ಅಧ್ಯಾಪಕರೇ, ವಿದ್ಯಾರ್ಥಿಗಳೇ, ವಿದ್ಯಾರ್ಥಿನಿಯರೇ ಹಾಗೂ ಕುತೂಹಲಿಗಳಾದ ಮಿತ್ರರೇ,

ಕಮಲಾಪುರದಲ್ಲಿ ದಕ್ಷಿಣಭಾರತದ ಕರಾಟೆ ಪಟುಗಳ ಕಾರ್ಯಕ್ರಮವನ್ನು ಏರ್ಪಡಿಸ ಲಾಗಿತ್ತು. ಅದೂಕೂಡ ಈ ವಿಚಾರದ ಸಂಕಿರಣದ ಸಮಯದಲ್ಲೇ ಆದುದರಿಂದ ನಾನು ಅಲ್ಲಿಗೆ ಹೋಗುವುದು ಅನಿವಾರ್ಯವಾಯಿತು. ಅಲ್ಲಿಗೆ ಹೋದನಂತರ ಶ್ರೀರಾಮಕೃಷ್ಣ ಅವರು ಹತ್ತು - ಹದಿನೈದು ನಿಮಿಷಗಳಾದರೂ ಇರಬೇಕು ಎಂದು ಹೇಳಿದರು. ಆದುದರಿಂದ ನಾನು ಈ ಸಂಕಿರಣದ ಸಭೆಗೆ ತಡವಾಗಿ ಆಗಮಿಸುತ್ತಿದ್ದೇನೆ. ಅದಕ್ಕಾಗಿ ಯಾರೂ ಅನ್ಯಥಾ ಭಾವಿಸಬಾರದೆಂದು ವಿನಂತಿಸಿಕೊಳ್ಳುತ್ತೇನೆ. ನಾನು ಹೋದ ವರ್ಷ ಈ ಸಮ್ಮೇಳನದಲ್ಲಿ ಭಾಷಣ ಮಾಡುವಾಗ, ವಿಜಯನಗರದ ಸೈನಿಕರು ಸುಖಲೋಲುಪ ರಾಗಿ ತಮ್ಮ ಏಕಾಗ್ರತೆಯನ್ನು ಕಳೆದುಕೊಂಡರು. ಅದರಿಂದಾಗಿ ಎಷ್ಟೇ ಉತ್ತಮ ಸೈನ್ಯವನ್ನು ಹೊಂದಿದ್ದರೂ ವಿಜಯನಗರ ತಾಳಿಕೋಟೆ ಯುದ್ಧದಲ್ಲಿ ಹೀನಾಯ ಪರಾಜಯ ಅನುಭವಿಸಿತು ಎನ್ನುವ ಮಾತುಗಳನ್ನು ಆಡಿದ್ದೆ. ಇದಕ್ಕೆಲ್ಲ ಸಾಕಷ್ಟು ಆಧಾರಗಳಿವೆ ಎಂಬುದನ್ನೂ ನಾನು ತಿಳಿಸಿದ್ದೆ. ಆದರೆ ಕೆಲವರು ನನ್ನ ಈ ಹೇಳಿಕೆಯನ್ನು ಭಾವೋದ್ವೇಗಕ್ಕೆ ಒಳಗಾಗಿ ವಿಶೇಷವಾಗಿ ವಿಮರ್ಶಿಸಿದರು. ಇದನ್ನು ಅವರು ಐತಿಹಾಸಿಕ ದಾಖಲೆಗಳ ಮೂಲಕ ನೋಡಿದ್ದರೆ ನನ್ನ ಮಾತಿನ ಸತ್ಯತೆ ತಿಳಿಯುತ್ತಿದ್ದಿತು. ಅವರು ಹಾಗೆ ಮಾಡಲಿಲ್ಲ. ವಿಜಯನಗರ ಅನೇಕ ವಿಷಯಗಳಲ್ಲಿ ಮೇಲ್ಮೆಯನ್ನು ಸಾಧಿಸಿತು ಎನ್ನುವುದು ನಿರ್ವಿವಾದವಾದರೂ, ಆ ಸಾಮ್ರಾಜ್ಯದ ನ್ಯೂನತೆಗಳನ್ನೂ ಮರೆಮಾಚುವುದು ಇತಿಹಾಸತತ್ವಕ್ಕೆ ವಿರುದ್ಧವಾದುದು ಕೂಡ. ವಿಜಯನಗರ ಸಾಮ್ರಾಜ್ಯದ ಪತನಕ್ಕೆ ಕಾರಣಗಳನ್ನು ಹುಡುಕುವಾಗ ನಾನು ಹೇಳಿದ ಮಾತುಗಳನ್ನೂ ಗಂಭೀರವಾಗಿ ಗಮನಿಸಬೇಕು ಮತ್ತು ಪರಿಗಣಿಸಬೇಕು ಎಂದು ಇತಿಹಾಸಕಾರರಲ್ಲಿ ವಿನಂತಿ ಮಾಡುತ್ತೇನೆ. ನೈತಿಕ ಅಧಃಪತನ ವಿಜಯನಗರ ಸಾಮ್ರಾಜ್ಯದ ಅವನತಿಗೆ ಎಷ್ಟರ

ಮಟ್ಟಿಗೆ ಕಾರಣೀಭೂತವಾಯಿತು ಎಂದು ವಿಮರ್ಶೆ ಮಾಡುವುದು ನಿಮ್ಮಂಥ ಸಂಶೋಧಕರ ಕರ್ತವ್ಯ ಕೂಡ ಎಂಬುದನ್ನು ತಮಗೆ ಜ್ಞಾಪಿಸುತ್ತೇನೆ.

ಸರೋಜಿನಿ ಮಹಿಷಿಯವರು ಟೂರಿಸಂ ಮಂತ್ರಿಗಳಾಗಿದ್ದ ಸಮಯದಲ್ಲಿ ಇಲ್ಲಿ ಒಂದು ಉಪಾಹಾರ ಗೃಹ ನಿರ್ಮಿಸಬೇಕೆಂದು ಬೇಡಿಕೆ ಬಂದಿತು. ಜನ ಇಲ್ಲಿ ಬಾಯಾರಿಕೆಯಿಂದ ಬರುತ್ತಾರೆ. ಪ್ರವಾಸಿಗರ ಅನುಕೂಲಕ್ಕಾಗಿ ಇದನ್ನು ನಿರ್ಮಾಣ ಮಾಡಲಾಯಿತು. ಈ ಕಟ್ಟಡ ಕಟ್ಟಿದ್ದು ಸರೋಜಿನಿ ಮಹಿಷಿಯವರ ಕಾಲದಲ್ಲಿ. ಆಗ ಅದರ ಬಗ್ಗೆ ಯಾರೂ ಯೋಚನೆ ಮಾಡಲಿಲ್ಲ. ಕಟ್ಟಡದ ಪಕ್ಕದಲ್ಲಿ ಉತ್ಖನನ ಮಾಡುತ್ತ ಮಾಡುತ್ತ ಬಂದಾಗ ಪಕ್ಕದಲ್ಲೆಲ್ಲ ಆನೆಯ ಸರಪಳಿಗಳು ಮತ್ತು ಅದರ ಎಲುಬುಗಳು ದೊರಕಿದವು. ಅವು ಸಿಕ್ಕಿದ ಮೇಲೆ ನಿಮ್ಮ ಉತ್ಖನನ ಇಲ್ಲೇ ಮಾಡಬೇಕಾಗಿತ್ತು. ಆ ಕಡೆ ಉತ್ಖನನ ಮಾಡಿದಿರಿ; ಈ ಕಡೆ ಬಿಟ್ಟಿರಿ ಎಂದರು. ಇದನ್ನು ನಾನು ತಪ್ಪು ಎಂದು ಹೇಳುವುದಿಲ್ಲ. ಈ ಕಟ್ಟಡ ಕೆಡವಲೇಬೇಕಾಗಿತ್ತು. ಇದರ ಮೂಲಕವೇ ಹೋಗಬೇಕಾಗಿತ್ತು. ಅವತ್ತಿನ ಕಾಲದಲ್ಲಿ ನಮ್ಮ ಉತ್ಖನನಕ್ಕೆ ದೊಡ್ಡ ಪ್ರಮಾಣದಲ್ಲಿ ಹಣ ಸಿಕ್ಕುತ್ತಿರಲಿಲ್ಲ. ಸಿದ್ದನಗೌಡರು ಪ್ರಸ್ತಾಪ ಮಾಡಿದಂತೆ ಇವತ್ತೂ ಸ್ಥಿತಿಯೇನೂ ಅಷ್ಟೊಂದು ಸುಧಾರಿಸಿಲ್ಲ. ಇಲ್ಲಿ ಸಾವಿರಾರು ಐತಿಹಾಸಿಕ ಕುರುಹುಗಳಿವೆ. ಇವೆಲ್ಲವುಗಳನ್ನೂ ಸಂಶೋಧನೆ ಮಾಡುವುದಕ್ಕೆ ಯಾರೊಬ್ಬರಿಂದಲೂ ಸಾಧ್ಯವಿಲ್ಲ. ಇಡೀ ಜೀವಿತಕಾಲವನ್ನೇ ಕಳೆಯಬೇಕಾದ ಅನಿವಾರ್ಯತೆ ಇದೆ. ಅದಕ್ಕೆ ಉತ್ತಮ ಉದಾಹರಣೆ ಎಂದರೆ ನಮ್ಮ ಕೆಳದಿ ಗುಂಡಾಜೋಯಿಸರು. ಅವರು ತಿಂಗಳಿಗೊಮ್ಮೆ ಪತ್ರವನ್ನು ಬರೆಯುತ್ತಿರುತ್ತಾರೆ. ಅವರು ನಮ್ಮ ಮಲೆನಾಡಿನ ರೈಲನ್ನು ಕೆಳದಿ ಸದಾಶಿವನಾಯಕ ರೈಲು ಅಥವಾ ಕೆಳದಿಯ ರೈಲು ಎಂಬುದಾಗಿ ಮಾಡಬೇಕು ಎಂದು ಹೇಳಿ ಎಲ್ಲರಿಗೂ ಪತ್ರ ಬರಿಯುತ್ತಲೇ ಇರುತ್ತಾರೆ. ಅವರಿಗೆ ಉತ್ತರ ಬಂತೋ ಇಲ್ಲವೋ - ಅದು ಬೇರೆ ವಿಷಯ. ಇಂದು ಕರ್ನಾಟಕದ ಸರ್ಕಾರ ಲಾಂಛನವಾಗಿರುವ ಗಂಡಭೇರುಂಡದ ವಿಷಯವಾಗಿಯೂ ಅವರು ಬರೆಯುತ್ತಿರುತ್ತಾರೆ. ಇಡೀ ತಮ್ಮ ಜೀವನವನ್ನು ಮುಡುಪಾಗಿಟ್ಟುಕೊಂಡಿರುವ ಗುಂಡಾಜೋಯಿಸರಿಗೆ ಎಷ್ಟೆಲ್ಲ ತೊಂದರೆ ಆಯಿತು ಎಂದು ಗೊತ್ತು. ರಾಜಕಾರಣಿಗಳಿಂದ ಅಥವಾ ಜನಸಾಮಾನ್ಯರಿಂದ ಅವರಿಗೆ ತೊಂದರೆಯಾಗಲಿಲ್ಲ. ಅವರಿಗೆ ತೊಂದರೆಯಾದದ್ದು ಇತಿಹಾಸ ಸಂಶೋಧಕರಿಂದಲೇ. ನಮ್ಮ ರಾಜಕಾರಣದಲ್ಲಿ ಇರುವುದಕ್ಕಿಂತಲೂ ಹೆಚ್ಚು ಅಸೂಯೆ ಈ ಸಂಶೋಧಕರಲ್ಲಿ ಇರುತ್ತದೆ. ಆದುದರಿಂದ ಇತಿಹಾಸ ಸಂಶೋಧಕರು ಇಂತಹ ಅಸೂಯೆಯನ್ನು ದೂರ ಮಾಡಿ ಒಂದು ಸಾಮ್ರಾಜ್ಯದ ವಿಷಯದಲ್ಲಿ, ಒಬ್ಬ ರಾಜನ ವಿಷಯದಲ್ಲಿ, ಇಲ್ಲವೇ ಒಂದು ಧರ್ಮದ ವಿಷಯದಲ್ಲಿ ದಾಖಲೆಗಳನ್ನು ಆಧರಿಸಿ ಸಿದ್ಧಾಂತಗಳನ್ನು ಮಂಡಿಸಬೇಕು. ಅದೇ ನಿಜವಾದ ಇತಿಹಾಸ. ಅಂತಹ ಇತಿಹಾಸವನ್ನು ರಚಿಸಬೇಕೆಂದು ಈ ರೀತಿಯ ವಿಚಾರ ಸಂಕಿರಣಗಳು ನಮಗೆ

ಪದೇ ಪದೇ ನೆನಪು ಮಾಡಿಕೊಡುತ್ತವೆ. ಅದರಿಂದಲೇ ವಿಚಾರ ಸಂಕಿರಣಗಳಿಗೆ ಮಹತ್ವ ಬರುತ್ತದೆ. ಇದನ್ನು ಮುಖ್ಯವಾಗಿ ಗಮನಿಸಬೇಕು.

ಹಿಂದಿನ ಕಾಲದಲ್ಲಿ ನೂರಾರು ಎಕರೆ ಭೂಮಿಯನ್ನು ದಾನವಾಗಿ ದತ್ತಿಯಾಗಿ ದೊರೆಗಳು ನೀಡುತ್ತಿದ್ದರು. ಇಂತಹ ಭೂಮಿಗಳಿಗೆ ಇತ್ತೀಚಿನ ದಿನಗಳಲ್ಲಿ ಹೆಚ್ಚು ಬೆಲೆ ಬಂದಿತು. ನಿಮಗೆಲ್ಲರಿಗೂ ಗೊತ್ತಿರುವಂತೆ ಈಗ ಒಂದು ಎಕರೆಗೆ 2 ರಿಂದ ಹತ್ತು ಕೋಟಿ ರೂಪಾಯಿ ಬೆಲೆಯಾಗುತ್ತದೆ. ಇಂತಹ ಬೆಲೆಬಾಳುವ ಜಾಗಗಳನ್ನೂ ಗಣ್ಯರೆನಿಸಿಕೊಂಡವರು ಕಬಳಿಸಿರುವ ಉದಾಹರಣೆಗಳು ಬೇಕಾದಷ್ಟಿವೆ. ಇದರಲ್ಲಿ ರಾಜಕಾರಣಿಗಳು ಹಾಗೂ ಮಠಾಧೀಶರ ಪಾತ್ರ ವಿಶೇಷವಾಗಿ ಕಾಣಬರುತ್ತದೆ. ಇಂತಹ ಸಂಗತಿಗಳೆಲ್ಲವನ್ನೂ ಇತಿಹಾಸ ಸಂಶೋಧಕರು ಹೆಕ್ಕಿ ತೆಗೆದು, ಸಮಾಜಕ್ಕೆ ಅಥವಾ ಇತಿಹಾಸಕ್ಕೆ ಆಗಿರುವ ಅನ್ಯಾಯಗಳನ್ನು ಸರಿಪಡಿಸಲು ಮುಂದಾಗಬೇಕು. ಸಿ.ಟಿ.ಎಂ. ಕೊಟ್ರಯ್ಯನವರು ಖ್ಯಾತ ಇತಿಹಾಸಕಾರರು. ಈ ರೀತಿಯ ಬಹಳ ವಿಷಯ ತಿಳಿದವರು. ಇಂತಹ ಕುತೂಹಲಕಾರಿಯಾದ ಅಂಶಗಳನ್ನು ಮೂಲ ದಾಖಲೆಗಳ ಮುಖಾಂತರ ಕೂಲಂಕುಷವಾಗಿ ಸಂಶೋಧಿಸಿ ಉಂಬಳಿ, ದಾನ, ದತ್ತಿ, ಭೂಮಿಕಾಣಿ ಮುಂತಾದ ವಿಷಯಗಳಲ್ಲಿ ನಡೆದಿರುವ ಮೋಸಗಳನ್ನು ಬಯಲಿಗೆ ಎಳೆಯಬೇಕು.

ಇತ್ತೀಚಿನ ದಿನಗಳಲ್ಲಿ ನಾವು ಕೋಮು ಸೌಹಾರ್ದತೆ ಬಗ್ಗೆ ಮಾತನಾಡುತ್ತೇವೆ. ಇಂತಹ ಸಮಯದಲ್ಲಿ ಮಾತನಾಡುವಾಗಲೂ ಇವರು ಹಿಂದೂಗಳು, ಅವರು ಮುಸಲ್ಮಾನರು ಮತ್ತೊಬ್ಬರು ಕ್ರೈಸ್ತರು ಎಂದು ನಾವು ವರ್ಣಿಸುತ್ತೇವೆ. ಇತಿಹಾಸಕಾರರು ಬರೆಯುವಾಗಲಂತೂ, ಹಿಂದೂಗಳು ಮುಸ್ಲಿಮರ ಮೇಲೆ ಯುದ್ಧ ಮಾಡಿದರು. ಮುಸ್ಲಿಮರು ಹಿಂದೂಗಳನ್ನು ಸೋಲಿಸಿದರು ಎಂದೆಲ್ಲಾ ವರ್ಣಿಸುತ್ತೇವೆ. ವಿಜಯನಗರದ ಅರಸರು ಬಹುಮನಿಯವರ ವಿರುದ್ಧ ಹೋರಾಡಿದರು ಎಂದು ಬರೆಯುವುದು ತೀರ ವಿರಳ. ಅವರು ಆನುಷಂಗಿಕವಾಗಿ ಮುಸಲ್ಮಾನರಾಗಿದ್ದರೇ ಹೊರತು ಯುದ್ಧ ನಡೆದದ್ದು ಬಹಮನಿಯವರ ವಿರುದ್ಧವಾಗಿ. ನಮ್ಮ ಮಧ್ಯಯುಗದಲ್ಲಿ ನಡೆದ ಯುದ್ಧಗಳೆಲ್ಲ ನಡೆದದ್ದು ತಮ್ಮ ರಾಜ್ಯದ ಎಲ್ಲೆಗಳನ್ನು ವಿಸ್ತರಿಸುವಂತಹ ಪ್ರವೃತ್ತಿಯಿಂದ ಎನ್ನುವುದನ್ನು ಮರೆಯುವಂತಿಲ್ಲ ಹಾಗೂ ಅಲ್ಲಗಳೆಯುವಂತೆಯೂ ಇಲ್ಲ. ಇಲ್ಲಿ ವ್ಯಕ್ತಿ ಮುಖ್ಯವಾಗುವುದಿಲ್ಲ. ಬಿಜಾಪುರದ ಆದಿಲ್‌ಷಾಹಿಗಳನ್ನು ಅಥವಾ ದಕ್ಷಿಣದ ಎಲ್ಲ ಸಾಮ್ರಾಜ್ಯಗಳನ್ನೂ ಅವರು ಧ್ವಂಸ ಮಾಡಲಿಕ್ಕೆ ತನ್ನ ಮೊದಲ ಆಧಿಪತ್ಯದಲ್ಲಿ ಸೇರಿಸಿಕೊಳ್ಳುವುದಕ್ಕೆ ಔರಂಗಜೇಬನೇ ಕಾರಣನಾಗಿದ್ದನು. ಆ ಕಾರಣಕ್ಕಾಗಿ ನಾವು ಅದು ಮುಸ್ಲಿಂ ಮತ್ತು ಹಿಂದೂ ಎನ್ನುವಂಥ ಭಾವನೆಗಳಿಂದ ನೋಡದೆ ಅದರ ಸತ್ಯಾಸತ್ಯತೆಯನ್ನು ಹೇಳುತ್ತಾ ಹೋಗಬೇಕು. ವಿಸ್ತರಣೆಯ ಈ ಪ್ರವೃತ್ತಿಯಿಂದ ಭಾರತ ದೇಶದ ರಾಷ್ಟ್ರೀಯ ಪರಿಕಲ್ಪನೆಯ ಅಖಂಡತ್ವ ಎನ್ನುವಂತಾದ್ದು ಉಳಿಯಲಿಲ್ಲ.

ಗೋವಾದಲ್ಲಿ ಪೋರ್ಚುಗೀಸರು ಬರಬೇಕು ಎಂದು ನಾವೇ ಆಹ್ವಾನವನ್ನು ನೀಡಿದೆವು. ಅವರಷ್ಟಕ್ಕೆ ಅವರೇ ಬರಲಿಲ್ಲ. ಬಹಮನಿ ಸುಲ್ತಾನರ ಅದರಲ್ಲೂ ಆದಿಲ್ ಷಾಹಿಗಳ ದೌರ್ಜನ್ಯಗಳ ವಿರುದ್ಧ ನೀವು ಬಂದು ನಮ್ಮನ್ನು ಉಳಿಸಿರಿ ಎಂದು ಆಹ್ವಾನವನ್ನು ಗೋವಾದ ಜನಗಳು ಕೊಟ್ಟ ಕಾರಣಕ್ಕಾಗಿ ಅಲ್ಲಿಗೆ ಬಂದರು. ಹೀಗೆ ಜನಗಳು ಇಲ್ಲಿಗೆ ಬರುವುದಕ್ಕೆ ನಾವೇ ಎಷ್ಟರ ಮಟ್ಟಿಗೆ ಕಾರಣ ಎಂಬುದನ್ನು ಅಧ್ಯಯನ ಮಾಡಬೇಕಾಗಿದೆ.

ಮಧ್ಯಕಾಲದಿಂದ ಸೂರತ್ ವ್ಯಾಪಾರಕ್ಕೆ ಹೆಸರಾದ ಸ್ಥಳ. ಇಂದಿಗೂ ಕೂಡ ವಜ್ರ-ವೈಢೂರ್ಯ ವ್ಯಾಪಾರಕ್ಕೆ ಬೆಲ್ಜಿಯಂ ಬಿಟ್ಟರೆ ಇಡೀ ಪ್ರಪಂಚದಲ್ಲಿ ಹೆಸರುವಾಸಿಯಾಗಿರುವುದು ಸೂರತ್. ನಿಮಗೆಲ್ಲ ಗೊತ್ತಿರುವಂತೆ ಹತ್ತು ವರ್ಷಗಳ ಹಿಂದೆ ಇಲ್ಲಿ ಪ್ಲೇಗ್ ಬಂದು, ಇದು ಜನ ವಾಸಮಾಡುವುದಕ್ಕೆ ಅನರ್ಹವಾದ ನಗರ ಎಂದು ಹೇಳಿ ವಿಶ್ವದಲ್ಲೆಲ್ಲ ಪ್ರಚಾರ ನೀಡಲಾಯಿತು. ಆದರೆ ಇತ್ತೀಚಿನ ವರದಿಗಳ ಪ್ರಕಾರ ಜಾಗತೀಕರಣ ಮತ್ತು ಖಾಸಗೀಕರಣ ಹಾಗೂ ಉದಾರೀಕರಣದ ನೇರ ಪ್ರಭಾವದ ಮೂಲವಾಗಿ ಅನೇಕ ವಜ್ರವ್ಯಾಪಾರಿಗಳ ಯೂರೋಪಿಯನ್ ಸಮುದಾಯದವರು ಅವಾಸ್ತವವಾದಂತಹ ರೀತಿಯಲ್ಲಿ ಸೂರತ್‌ನಲ್ಲಿ ಆಗಿರುವಂತಹ ಒಂದು ಪ್ಲೇಗನ್ನು, ಇಲ್ಲಿನ ವ್ಯಾಪಾರ ಕುಂದಬೇಕು ಎನ್ನುವ ಕಾರಣಕ್ಕಾಗಿಯೇ ಅತಿರಂಜಕವಾದ ವರದಿಗಳನ್ನು ಮಾಡುವುದರ ಮೂಲಕವಾಗಿ ಸ್ಪರ್ಧಾ ಪಿತೂರಿಯನ್ನು ಮಾಡಿದರು ಎಂದು ಗೊತ್ತಾಗಿದೆ. ಅಂದರೆ ಇದು ಇತಿಹಾಸದ ಪ್ರಸ್ತುತ ಸಂಗತಿ. ಅದಕ್ಕೆ ನೂರು ಮುಖಗಳಿರುವುದಕ್ಕೆ ಸಾಧ್ಯತೆ ಗಳುಂಟು. ಆ ನೂರು ಮುಖಗಳಲ್ಲಿ ವ್ಯಾಪಾರ ಮತ್ತು ವಾಣಿಜ್ಯವೂ ಬಹಳ ಪ್ರಮುಖ ವಾದುದು. ಆಕಸ್ಮಾತ್ ಇದನ್ನು ಬಿಟ್ಟು, ಈ ಇತಿಹಾಸವನ್ನು ಗಮನಿಸಿದರೆ ಅದರ ಪ್ರಮುಖ ಅಂಶವೇ ಬಿಟ್ಟುಹೋಗುತ್ತದೆ. ಅಂದರೆ ಇತಿಹಾಸ ಎಷ್ಟರ ಮಟ್ಟಿಗೆ ಸಮಕಾಲೀನ ಸಮಸ್ಯೆಗಳನ್ನೂ ವಿಮರ್ಶಿಸಿ, ವಿಶ್ಲೇಷಿಸಿ ನೋಡಬೇಕಾಗುತ್ತದೆ ಎಂದು ತಿಳಿಯುತ್ತದೆ.

ಒಬ್ಬ ಇತಿಹಾಸತಜ್ಞ ಮತ್ತು ಸಂಶೋಧಕ ಏಕಕಾಲದಲ್ಲಿ ವಿಜ್ಞಾನಿಯಾಗಿರಬೇಕು, ಸಮಾಜ ವಿಜ್ಞಾನಿಯಾಗಿರಬೇಕು. ಅವನು ಸಾಹಿತ್ಯಾಸಕ್ತಿಯ ಅಭಿಮಾನ ಉಳ್ಳವನಾಗಿರಬೇಕು: ಜನಪದ ಸಂಶೋಧಕನಾಗಿರಬೇಕು ಮತ್ತು ಸೂಕ್ಷ್ಮ ಬುದ್ಧಿಯಿಂದ ಪ್ರಸ್ತುತದ ಜೀವನವನ್ನು ಅರ್ಥ ಮಾಡಿಕೊಳ್ಳಲಿಕ್ಕೆ ಸಾಧ್ಯವಾಗುವಂತಹ ರೀತಿಯಲ್ಲಿ ಹೇಳಬೇಕು. ಇವತ್ತು ನಾವು ಈ ಉತ್ಸವದಲ್ಲಿ ಮಹಿಳಾ ಕುಸ್ತಿಯನ್ನು ಏರ್ಪಾಡು ಮಾಡಿದ್ದೇವೆ. ಇದಕ್ಕೆ ಅನೇಕರು ಅಸಮ್ಮತಿಯನ್ನು ಸೂಚಿಸಿದ್ದೂ ಉಂಟು. ಆದರೆ ಈ ರೀತಿಯ ಕುಸ್ತಿ ವಿಜಯನಗರ ಕಾಲದಲ್ಲಿಯೂ ಇದ್ದಿತು ಎಂಬುದು ನಿಮಗೆಲ್ಲ ತಿಳಿದೇ ಇದೆ. ಹರಿಯಕ್ಕ ಎಂಬುವಳು ಕುಸ್ತಿಯನ್ನು ಮಾಡಿದ ಸಂಗತಿಯನ್ನು ಇಂದಿನ ಸಂಪುಟ

ದಲ್ಲಿರುವ ಒಂದು ಲೇಖನವೂ ತೋರಿಸಿಕೊಡುತ್ತದೆ. ಹರಿಯಕ್ಕನೆಂಬ ಮಹಿಳೆಯು ಯಾವ ರೀತಿ ಪುರುಷನನ್ನು ಮಣಿಸಿದಳು ಎಂಬುದು ಹೃದಯಂಗಮವಾಗಿ ವರ್ಣಿತ ವಾಗಿದೆ. ಆ ಶಾಸನದಲ್ಲಿ ಆಕೆಯ ಶಿಲ್ಪವೂ ಇದೆ. ಎಷ್ಟೊಂದು ಸುಂದರವಾದ ದೃಶ್ಯವಿದು. ಇದೇ ರೀತಿ ಕೃಷ್ಣದೇವರಾಯನ ಬಗೆಗೂ ಏನೇನೋ ಹೇಳಿದ್ದಾರೆ. ಅವನು ಕುಳ್ಳನಾಗಿದ್ದ; ಅವನ ಮುಖದ ಮೇಲೆ ಸಿಡುಬಿನ ಕಲೆಗಳಿದ್ದವು. ಅವನು ತೆಲುಗಿನವರಿಗೂಸಾಕಷ್ಟು ಮನ್ನಣೆ ಕೊಟ್ಟಿದ್ದ : ಅದರಿಂದ ಕನ್ನಡಿಗರಲ್ಲಿ ಸ್ವಲ್ಪ ಅಸೂಯೆ ಅಥವಾ ಅಸಮಾಧಾನ ತಂದಿರಬಹುದು ಎಂದೆಲ್ಲ ಭಾವಿಸುತ್ತೇವೆ. ಇವತ್ತಿಗೂ ಆಂಧ್ರ ಪ್ರದೇಶ ಪ್ರತ್ಯೇಕ ವಾಗಿದ್ದರೂ, ಅವರು ಹಂಪಿಯನ್ನು ತಮ್ಮ ಸಾಂಸ್ಕೃತಿಕ ರಾಜಧಾನಿ ಎಂದೇ ಭಾವಿಸು ತ್ತಾರೆ. ಇದರಿಂದಾಗಿ ಹೊಸಪೇಟೆಯನ್ನು ಆಂಧ್ರಕ್ಕೆ ಸೇರಿಸಲೇಬೇಕೆಂಬ ವಾದವೂ ಕೇಳಿ ಬಂತು. ಇವೆಲ್ಲ ಈಗ ಇತಿಹಾಸ.

ಯುನೆಸ್ಕೋದವರು ಹಂಪಿಗೆ ಬಂದರು. ಹಂಪಿಯ ಅಭಿವೃದ್ಧಿಗಾಗಿ ಅನೇಕ ಸೂತ್ರ ಗಳನ್ನು ನೀಡಿದರು. ಅದು ಅನೇಕರಿಗೆ, ಅದರಲ್ಲಿಯೂ ಸ್ಥಳೀಯರಿಗೆ ತುಂಬ ಸಂಕಷ್ಟಕ್ಕೆ ಕಾರಣವಾಯಿತು. ಒಂದು ಬ್ರಿಜ್ ಕಟ್ಟುವುದಕ್ಕೂ ನಾವು ಅವರನ್ನು ಕೇಳುವಂತೆ ಆಯಿತು. ನಿಜವಾಗಿಯೂ ಅವರ ಕೊಡುಗೆ ಏನು ಎಂದು ನಾನವರನ್ನು ಕೇಳಿದೆ. ಅದಕ್ಕೆ ಸಮಾಧಾನಕರ ಉತ್ತರ ಕಾಣಲಿಲ್ಲ. ಒಟ್ಟಿನಲ್ಲಿ ಹಂಪಿಯನ್ನು ರಕ್ಷಿಸಿ, ಅದನ್ನು ಮುಂದಿನ ಪೀಳಿಗೆಗೆ ವಹಿಸಿಕೊಡಬೇಕಾದ ಜವಾಬ್ದಾರಿ ನಮ್ಮ ಮೇಲೆ ಇದೆ. ಇದೇ ಮುಖ್ಯ ಗುರಿಯಾಗಬೇಕು.

ನಾವು ಇಷ್ಟೆಲ್ಲ ಮಾತನಾಡುತ್ತೇವೆ. ಇತಿಹಾಸದ ಬಗ್ಗೆ ಭಾಷಣ ಮಾಡುತ್ತೇವೆ. ಆದರೆ ನಿಜವಾದ ವಿಷಯ ಏನೆಂದರೆ, ನಮ್ಮಲ್ಲಿ ಎಲ್ಲರೂ ಕಂಪ್ಯೂಟರ್ ಕಡೆಗೆ ಧಾವಿಸುತ್ತಿದ್ದು, ಇತಿಹಾಸ, ಪುರಾತತ್ವ, ಶಾಸನಶಾಸ್ತ್ರ ಮುಂತಾದ ವಿಷಯಗಳನ್ನು ಅಧ್ಯಯನ ಮಾಡಲು ತೀಕ್ಷ್ಣಮತಿಯ ವಿದ್ಯಾರ್ಥಿಗಳು ಕಾಣಬರುತ್ತಿಲ್ಲ. ನಮ್ಮ ಶಾಸನ ಲಿಪಿಗಳನ್ನು ಮೂಲದಲ್ಲಿ ಓದುವವರು ತೀರ ಕಡಿಮೆಯಾಗಿದ್ದಾರೆ. ನಮ್ಮ ನಿಮ್ಮ ತಲೆಮಾರು ಆದಮೇಲೆ ಈ ಶಾಸನಗಳನ್ನು ಓದಲು ಚಿದಾನಂದಮೂರ್ತಿ, ಗೋಪಾಲ್, ಕೃಷ್ಣರವರಂತಹ ವಿದ್ವಾಂಸರು ಕಾಣ ಸಿಗುವುದಿಲ್ಲ. ಎಲ್ಲ ತಲೆಮಾರಿನಲ್ಲಿಯೂ ಪ್ರತಿಭಾವಂತರು ಬಂದೇ ಬರುತ್ತಾರೆ ಎಂದು ನನಗೆ ಗೊತ್ತು. ಆದರೆ ಅದಕ್ಕೆ ಪೂರಕವಾದ ವಾತಾವರಣವನ್ನು ನಮ್ಮ ಸಮಾಜ ಸೃಷ್ಟಿ ಮಾಡಬೇಕು. ನಮ್ಮ ಕನ್ನಡ ವಿಶ್ವ ವಿದ್ಯಾನಿಲಯ ಇದೆ. ಅದು ಇಂತಹ ಕೆಲಸಕ್ಕೆ ಆದ್ಯತೆ ನೀಡಬೇಕು. ಅಂತಹ ಜನಗಳನ್ನು, ವಿದ್ವಾಂಸರನ್ನು, ಸಂಶೋಧಕರನ್ನು ಪ್ರಚೋದಿಸಬೇಕು. ಅಂತಹ ಕೆಲಸ ನಿರಂತರವಾಗಿ ಸಾಗಲಿ ಎಂದು ಆಶಿಸುತ್ತ ಇವತ್ತು ನನಗೆ ಉದ್ಘಾಟನೆ ಮಾಡುವಂತಹ ಗೌರವವನ್ನು ಕೊಟ್ಟ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯದ ಇಲಾಖೆಯವರಿಗೂ, ಈ ಕಾರ್ಯಕ್ರಮದ

ಎಲ್ಲ ರೂವಾರಿ ಗಳಿಗೂ, ಮತ್ತು ತಮ್ಮೆಲ್ಲರಿಗೂ ಕೃತಜ್ಞತೆಯನ್ನು ಅರ್ಪಿಸಿ, ನಿಮಗೆಲ್ಲರಿಗೂ ನಮಸ್ಕಾರ ಮಾಡಿ ನನ್ನ ಉದ್ಘಾಟನಾ ಭಾಷಣವನ್ನು ಮುಕ್ತಾಯ ಗೊಳಿಸುತ್ತೇನೆ.

ಜೈ ಹಿಂದ್, ಜೈ ಕರ್ನಾಟಕ

ಪರಿವಿಡಿ

ಸಮ್ಮೇಳನದ ಅಧ್ಯಕ್ಷರ ಭಾಷಣ

ಡಾ. ಎ.ವಿ. ನರಸಿಂಹಮೂರ್ತಿ

ಸನ್ಮಾನ್ಯ ಮಂತ್ರಿಗಳಾದ ಶ್ರೀ ಎಂ.ಪಿ. ಪ್ರಕಾಶ್ ಅವರೇ, ಶಾಸಕರಾದ ಹೆಚ್. ಆರ್. ಗವಿಯಪ್ಪನವರೇ ಹಾಗೂ ಈ ವಿಚಾರ ಸಂಕಿರಣಕ್ಕೆ ಆಗಮಿಸಿರುವ ವಿಜಯನಗರ ಅಭಿಮಾನಿಗಳೇ, ಬಂಧುಗಳೇ, ಪಂಪಾಪತಿಯ ಈ ಪುಣ್ಯಕ್ಷೇತ್ರದಲ್ಲಿ ನಾವೆಲ್ಲ ಸೇರಿ ವಿಜಯನಗರ ಸಾಮ್ರಾಜ್ಯವನ್ನು ಸ್ಮರಿಸಿಕೊಳ್ಳುತ್ತಿರುವುದು ಒಂದು ಸುಯೋಗವೇ ಸರಿ. ದಕ್ಷಿಣ ಭಾರತದ ಇತಿಹಾಸದ ದಿಕ್ಕನ್ನೇ ಬದಲಾಯಿಸಿದ ಈ ಸಾಮ್ರಾಜ್ಯದ ರಾಜ-ಮಹಾರಾಜರುಗಳಿಗೆ, ಮಂತ್ರಿಗಳಿಗೆ, ಸಂತರಿಗೆ, ಸಾಹಿತಿಗಳಿಗೆ ವಾಸ್ತು ಶಿಲ್ಪಿಗಳಿಗೆ ಎಲ್ಲಕ್ಕಿಂತ ಮಿಗಿಲಾಗಿ ಭಾಗಿಗಳಾಗಿದ್ದ ಜನಸಾಮಾನ್ಯರಿಗೆ ನಮ್ಮ ನಮನಗಳನ್ನು ಅರ್ಪಿಸುವುದು ಮುಖ್ಯ ಕರ್ತವ್ಯ. ನಮ್ಮ ಜೀವನ ಹೇಗಿರಬೇಕು ಎಂದು ಕೇಳಿದರೆ, ಅದಕ್ಕೆ ಭಾರತೀಯ ಪರಂಪರೆಯಲ್ಲಿ ಒಂದು ಸ್ಪಷ್ಟ ಉತ್ತರವಿದೆ: ಮುಂಬರುವ ಪೀಳಿಗೆಗಳು ನಮ್ಮನ್ನು ನೆನೆಸಿಕೊಳ್ಳಬೇಕು : ಹಾಗೆ ಜೀವನ ಮಾಡಬೇಕು. ವಿಜಯ ನಗರ ಆ ರೀತಿಯ ಸಾರ್ಥಕ ಜೀವನವನ್ನು ನಡೆಸಿದೆ. ಆದುದರಿಂದ ನಾಲ್ಕು ಶತಮಾನ ಗಳಾದ ನಂತರವೂ ನಾವು ವಿಜಯನಗರ ಸಾಮ್ರಾಜ್ಯದ ಸಾಧನೆಗಳನ್ನು ಸ್ಮರಿಸುತ್ತೇವೆ; ಹಂಪಿಯ ಉತ್ಸವವನ್ನು ಹಬ್ಬದಂತೆ ಆಚರಿಸುತ್ತೇವೆ: ಜನ ಸಮುದಾಯದಲ್ಲಿ ಬೆರೆತು ನಮ್ಮ ಆನಂದವನ್ನು ಹಂಚಿಕೊಳ್ಳುತ್ತೇವೆ ಇಂತಹ ಉತ್ತಮ ಆಚರಣೆಯನ್ನು ಮುಂದುವರಿಸಿಕೊಂಡು ಹೋಗುತ್ತಿರುವ ಕರ್ನಾಟಕ ಸರ್ಕಾರವನ್ನು ಅಭಿನಂದಿಸಬೇಕು. ಇದೇ ಸಂದರ್ಭವನ್ನು ಉಪಯೋಗಿಸಿಕೊಂಡು ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ ಕಳೆದ ಹನ್ನೊಂದು ವರ್ಷಗಳಿಂದ ವಿಜಯಗರ ಸಾಮ್ರಾಜ್ಯದ ವಿವಿಧ ಮುಖಗಳನ್ನು ಕುರಿತಾದ ವಿಚಾರ ಸಂಕಿರಣವನ್ನು ಏರ್ಪಡಿಸು ತ್ತಿದೆ. ಅಷ್ಟೇ ಅಲ್ಲದೇ ಪ್ರತಿ ವರ್ಷದ ಈ ಸಂಕಿರಣದಲ್ಲಿ ಮಂಡಿಸಲಾದ ವಿದ್ವತ್ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುತ್ತಿದೆ. ಈ ದಿನ ಲೋಕಾರ್ಪಣೆ ಗೊಂಡ ಸಂಪುಟ ಈ ಮಾಲಿಕೆಯಲ್ಲಿ ಹನ್ನೊಂದನೆಯದು. ಇತ್ತೀಚಿನ ವರ್ಷಗಳಲ್ಲಿ ನಮ್ಮ ವಿದ್ವಾಂಸರು ವಿಜಯನಗರ ಸಾಮ್ರಾಜ್ಯವನ್ನು ಕುರಿತು ಮಾಡುತ್ತಿರುವ ಸಂಶೋಧನೆಗಳ ದಾಖಲೆಯ ಈ ಹನ್ನೊಂದು ಸಂಪುಟಗಳು ಅತ್ಯಂತ ಮಹತ್ವವಾದವುಗಳು.

ವಿಜಯನಗರವನ್ನು ಕುರಿತಾದ ಯಾವ ವಿಚಾರ ಸಂಕಿರಣವಾದರೂ, ಅದರಲ್ಲಿಯೂ ಅವರ ರಾಜಧಾನಿಯಲ್ಲೇ ನಡೆಯುವ ಈ ಸಮ್ಮೇಳನದಲ್ಲಿ ಅಧ್ಯಕ್ಷ ಭಾಷಣ

ಮಾಡುವುದು ಕಷ್ಟಕರವಾದ ಕೆಲಸ. ಅದಕ್ಕೆ ವಿಷಯದ ಅಂದರೆ ವಿಜಯಗರದ ಅಗಾಧತೆ, ವೈವಿಧ್ಯ, ಬಹುಮುಖ ಸಾಧನೆ ಹಾಗೂ ವಿಶಾಲತೆ, ವಿವಿಧ ಭಾಷೆಗಳ ಸಾವಿರಾರು ಶಾಸನಗಳು, ವೈವಿಧ್ಯಮಯ ನಾಣ್ಯಗಳು, ವಿದೇಶೀಯರ ಬರವಣಿಗೆಗಳು, ದೇಶೀಯ ಸಾಹಿತ್ಯ ಕೃತಿಗಳು, ಶ್ರೇಷ್ಠ ವಾಸ್ತು ಶಿಲ್ಪ ಕೃತಿಗಳು - ಇವುಗಳಿಂದ ಒಂದು ರೀತಿಯ ಭಯ ಉಂಟಾದರೆ ಆಶ್ಚರ್ಯವಿಲ್ಲ. ಇದರ ಜೊತೆಗೆ ನನಗೆ ಇನ್ನೊಂದು ಭಯ ಮಾನ್ಯ ಎಂ.ಪಿ. ಪ್ರಕಾಶ್ ಅವರ ಎದುರು ಮಾತನಾಡುವುದು. ಇದೇ ಜಿಲ್ಲೆ ಯವರಾದ ಇವರು ಇತಿಹಾಸಕಾರರು, ಹಂಪಿಯ ಪ್ರತಿಯೊಂದು ಅಂಗುಲದ ಪರಿಚಯವೂ ಇರುವವರು. 'ಕೆರೆಯಂ ಕಟ್ಟಿಸು, ಬಾವಿಯಂ ಸವೆಸು, ದೇವಾಗಾರಮಂ ಮಾಡಿಸು' ಎಂದು ತಾಯಿಯಿಂದ ಆಶೀರ್ವಾದ ಪಡೆದ ಲಕ್ಷ್ಮೀಧರಾಮಾತ್ಯನ ಪರಿಚಯ ನಿಮಗೆಲ್ಲರಿಗೂ ಇದೆ. ಇದೇ ಲಕ್ಷ್ಮೀಧರ ಮಂತ್ರಿ ನಾಲ್ಕು ಶತಮಾನಗಳ ನಂತರ ಶ್ರೀ ಎಂ.ಪಿ. ಪ್ರಕಾಶರ ರೂಪದಲ್ಲಿ ಕಾಣಿಸಿಕೊಳ್ಳುತ್ತಿದ್ದಾನೆ ಎಂದರೆ ಆಶ್ಚರ್ಯವಿಲ್ಲ. ಈ ವಿಜಯನಗರ ಉತ್ಸವ ಇಷ್ಟೊಂದು ವೈಭವಯುತವಾಗಿ ನಡೆಯುತ್ತಿರುವುದರಲ್ಲಿ ಅವರ ಪಾತ್ರ ಹಿರಿದಾದುದು ಎಂಬುದನ್ನು ಮರೆಯುವಂತಿಲ್ಲ.

ಇದುವರೆವಿಗೂ ಪ್ರಕಟವಾಗಿರುವ ವಿಜಯನಗರ ಅಧ್ಯಯನ ಮಾಲಿಕೆಯನ್ನು ನಾನು ಗಮನಿಸಿದ್ದೇನೆ. ಸುಮಾರು ನಾನೂರು ಸಂಶೋಧನ ಲೇಖನಗಳು ಪ್ರಕಟ ಗೊಂಡಿವೆ. ಇದರಲ್ಲಿ ಕೇವಲ ಹತ್ತು ಲೇಖನಗಳೂ ಕೂಡ ವಿಜಯನಗರ ನಾಣ್ಯಗಳಿಗೆ ಸಂಬಂಧ ಪಟ್ಟವುಗಳಿಲ್ಲ ಎಂಬುದನ್ನು ಗಮನಿಸಿದಾಗ ನಮ್ಮ ಸಂಶೋಧಕರನ್ನು ಈ ವಿಜಯನಗರ ಸುಂದರ ನಾಣ್ಯಗಳು ಆಕರ್ಷಿಸಿಲ್ಲ ಎಂಬುದು ತಿಳಿದು ಬರುತ್ತದೆ. ಹೊಸ ನಾಣ್ಯಗಳನ್ನು ಹುಡುಕುವುದು ಕಷ್ಟ ಎನ್ನುವುದು ಒಂದು ಕಾರಣವಾದರೆ, ಪ್ರೊ. ನೀಲಕಂಠಶಾಸ್ತ್ರಿಗಳು ಹೇಳುವಂತೆ ದಕ್ಷಿಣ ಭಾರತದ ನಾಣ್ಯಗಳು ಅಧ್ಯಯನ ಶ್ರಮಕ್ಕೆ ತಕ್ಕ ಪ್ರತಿಫಲ ಕೊಡುವುದಿಲ್ಲ ಎಂಬುದು ಇನ್ನೊಂದು ಕಾರಣ. ವಿಜಯನಗರ ನಾಣ್ಯಗಳ ಬಗೆಗೆ ಸ್ವಲ್ಪ ಸಂಶೋಧನೆಯನ್ನು ನಾನು ಮಾಡಿರುವುದರಿಂದ, ಇಂದು ಈ ವಿಷಯದಲ್ಲಿ ನಿಮ್ಮೊಡನೆ ನನ್ನ ಚಿಂತನೆಯನ್ನು ಹಂಚಿಕೊಳ್ಳಲು ಇಚ್ಛಿಸುತ್ತೇನೆ.

ಇತ್ತೀಚೆಗೆ ನೂರಾರು ವಿಜಯನಗರದ ಚಿನ್ನ, ಬೆಳ್ಳಿ ಮತ್ತು ತಾಮ್ರದ ಹೊಸ ನಾಣ್ಯಗಳು ಬೆಳಕಿಗೆ ಬಂದಿವೆ. ವಿಶೇಷವಾಗಿ ಈ ನಾಣ್ಯಗಳು ವಾರಾಣಸಿಯ ಭಾರತೀಯ ನಾಣ್ಯ ಶಾಸ್ತ್ರ ಸಂಘದ ನಿಯತಕಾಲಿಕೆ ಮತ್ತು ಮದರಾಸಿನ ದಕ್ಷಿಣ ಭಾರತೀಯ ನಾಣ್ಯ ಶಾಸ್ತ್ರ ಸಂಸ್ಥೆಯ ನಿಯತ ಕಾಲಿಕೆಯಲ್ಲಿ ಪ್ರಕಟವಾಗಿವೆ. ಆಸಕ್ತಿ ಇದ್ದವರು ಮಾತ್ರ ಈ ನಿಯತ ಕಾಲಿಕೆಯನ್ನು ಗಮನಿಸುವುದರಿಂದ, ಸಾಮಾನ್ಯ ಇತಿಹಾಸಕಾರರ ಗಮನಕ್ಕೆ ಈ ಆಸಕ್ತಿಕರ ವಿಜಯನಗರ ನಾಣ್ಯಗಳು ಬರುತ್ತಿಲ್ಲವೆಂಬುದನ್ನು ನಾನು ಬಲ್ಲೆ. ಎರಡು ದಶಕಗಳ ಹಿಂದೆ ಎಲ್ಲೋ ಕೆಲವು ನಾಣ್ಯಗಳು ಮಾತ್ರ ದೊರಕಿದ್ದವು. ಅವುಗಳ

ಅಧ್ಯಯನವೂ ಸರಿಯಾಗಿ ನಡೆದಿರಲಿಲ್ಲ. ಇತ್ತೀಚೆಗೆ ಇದರ ನಾಲ್ಕು ಪಟ್ಟು ನಾಣ್ಯಗಳು ದೊರಕಿದ್ದು, ಇವುಗಳ ಕ್ರಮವಾದ ವ್ಯವಸ್ಥಿತವೂ ಆದ ಅಧ್ಯಯನ ನಡೆದಿದೆ. ಇವುಗಳ ಜೊತೆಗೆ ಈ ಹಿಂದೆ ಇದ್ದಂತೆ ನಾಣ್ಯಶಾಸ್ತ್ರ ಅಧ್ಯಯನ ಉಳಿದಿಲ್ಲ. ಹೊಸ ಮಾರ್ಗಗಳು, ಹೊಸ ವೈಜ್ಞಾನಿಕ ವಿಧಾನಗಳು ನಾಣ್ಯಶಾಸ್ತ್ರಜ್ಞರ ಸಹಾಯಕ್ಕೆ ಹೊಸ ಆಯಾಮಗಳನ್ನು ಸೃಷ್ಟಿಸಿವೆ. ನಾಣ್ಯದ ಹಿಮ್ಮುಖ, ಮುಮ್ಮುಖ, ತೂಕ, ಅಗಲಗಳನ್ನು ನೀಡಿ, ತನ್ನ ಕೆಲಸ ಮುಗಿಯಿತು ಎಂದು ಭಾವಿಸಿದ್ದ ನಾಣ್ಯಶಾಸ್ತ್ರಜ್ಞ ಈಗ ನಾಣ್ಯಗಳನ್ನು ಆಯಾ ಕಾಲದ ಸಾಮಾಜಿಕ ಅವಶೇಷವೆಂದು ಗುರುತಿಸುವುದಕ್ಕೆ ಹೆಚ್ಚು ಮಹತ್ವ ನೀಡುತ್ತಿದ್ದಾನೆ. ನಾಣ್ಯ ಒಂದು ನಿರ್ಜೀವ ಲೋಹದ ಬಿಲ್ಲೆಯಲ್ಲ. ಅದು ಅಚ್ಚುಗೊಂಡ ಕಾಲದ ಸಾಂಕೇತಿಕ ವಸ್ತು, ಆ ಕಾಲದ ಸಮಾಜಕ್ಕೂ ಈ ನಾಣ್ಯಕ್ಕೂ ನಿಕಟ ಸಂಪರ್ಕ ಉಂಟು. ಆದುದರಿಂದ ಆ ಕಾಲದ ಕತೆಯನ್ನು ನಾಣ್ಯಗಳು ಹೇಳುತ್ತವೆ ಎಂಬುದನ್ನು ಈಗ ಒಪ್ಪಿಕೊಳ್ಳಲಾಗಿದೆ. ಕೃಷ್ಣದೇವರಾಯನ ವೆಂಕಟೇಶ್ವ ರನ ಹಾಗೂ ಬಾಲಕೃಷ್ಣನ ಚಿತ್ರವಿರುವ ನಾಣ್ಯಗಳ ಹಿಂದೆ ಇತಿಹಾಸದ ಒಂದು ತುಣುಕು ಇದೆ ಎಂಬುದು ಗೊತ್ತಾಗುತ್ತದೆ.

ವಿಜಯನಗರದ ನೂರಾರು ಶಾಸನಗಳು ಆ ಕಾಲದ ನಾಣ್ಯಗಳ ಮೇಲೆ ಹೊಸ ಬೆಳಕನ್ನು ಬೀರುತ್ತವೆ. ಶಾಸನಗಳಿಲ್ಲದೇ ಇದ್ದರೆ ನಾಣ್ಯ ಪದ್ಧತಿಯ ಪರಿಚಯ ಅಪೂರ್ಣವಾಗಿಯೇ ಉಳಿಯುತ್ತಿದ್ದಿತು. ಹಿಂದೂ ನಾಣ್ಯಗಳ ಮೇಲೆ ಆಯಾ ನಾಣ್ಯದ ಹೆಸರನ್ನು ಅಥವಾ ಮೌಲ್ಯವನ್ನು ನಮೂದಿಸುವ ಪದ್ಧತಿ ಇತ್ತೀಚಿನವರೆಗೆ ಇರಲಿಲ್ಲ. ಆದುದರಿಂದ ವಿಜಯನಗರದ ಒಂದು ನಾಣ್ಯದ ಹೆಸರೂ, ನಾಣ್ಯದಿಂದ ಗೊತ್ತಾಗುವು ದಿಲ್ಲ. ಇಂತಹ ಅಸ್ಪಷ್ಟತೆಯನ್ನು ನಿವಾರಿಸಿದ್ದು ವಿಜಯನಗರ ಶಾಸನಗಳು ಎಂಬುದನ್ನು ಮರೆಯುವಂತಿಲ್ಲ. ಶಾಸನಗಳಲ್ಲಿ ನಾಣ್ಯಗಳ ಹೆಸರು, ಅವುಗಳ ಪರಸ್ಪರ ಸಂಬಂಧ ಮುಂತಾದ ವಿವರಗಳು ಪ್ರಾಸಂಗಿಕವಾಗಿ ಹೇಳಲ್ಪಟ್ಟಿರುವು ದರಿಂದ, ಈ ಕಾಲದ ಅತ್ಯಂತ ಗರಿಷ್ಠ ಚಿನ್ನದ ನಾಣ್ಯ ವರಹ ಅಥವಾ ಗದ್ಯಾಣ. ಇದರಿಂದ ಹಿಡಿದು ಅರೆಕಾಸು ಎನ್ನುವ ಕನಿಷ್ಠ ಮೌಲ್ಯದ ತಾಮ್ರದ ನಾಣ್ಯದವರೆಗಿನ ಕೋಷ್ಟಕವನ್ನು ತಯಾರಿಸಬಹುದು. ದೊರಕಿರುವ ನಾಣ್ಯಗಳ ತೂಕವನ್ನು ಗಮನಿಸಿ, ಈ ನಾಣ್ಯಗಳನ್ನು ವರಹ, ಅರ್ಧ ವರಹ, ಕಾಲು ವರಹ, ಪ್ರತಾಪ, ಪಣ, ಹಾಗ, ಬೇಳೆ, ತಾರ, ಕಾಣಿ, ಕಾಸು, ಅರೆಕಾಸು ಇತ್ಯಾದಿಯಾಗಿ ಗುರುತಿಸಬಹುದು.

ವಿಜಯನಗರದ ಟಂಕ ಶಾಲೆಗಳು ಎಲ್ಲೆಲ್ಲಿದ್ದವು ಎನ್ನುವುದರ ಬಗೆಗೆ ಉಲ್ಲೇಖ ಗಳು ದೊರಕುವುದು ತೀರ ಕಷ್ಟ. ಆದರೆ ಶಾಸನಗಳಲ್ಲಿ ಈ ಕಾಲದ ನಾಣ್ಯಗಳನ್ನು ಟಂಕ ಶಾಲೆಯ ಹೆಸರುಗಳಿಂದ ಗುರುತಿಸಿರುವುದು ಗಮನಿಸಬೇಕಾದ ಅಂಶ. ತಾಡಪತ್ರಿ ಗದ್ಯಾಣ, ನೆಲ್ಲೂರು ಗದ್ಯಾಣ, ಮಧುರೆ ಗದ್ಯಾಣ, ಬಾರಕೂರು ಗದ್ಯಾಣ, ಮಂಗಳೂರು

ಗದ್ಯಾಣ, ಗುತ್ತಿ ಹೊನ್ನು, ಅದೋಣಿ ಹಣ, ತಿರುಪತಿ ಹೊನ್ನು ಮುಂತಾದ ನಾಣ್ಯಗಳು ಶಾಸನಗಳಲ್ಲಿ ಕಾಣಸಿಗುತ್ತವೆ. ಇವುಗಳು ಆಯಾ ಊರಿನಲ್ಲಿದ್ದ ಟಂಕ ಶಾಲೆಯಲ್ಲಿ ಮುದ್ರಿಸಲಾದ ನಾಣ್ಯಗಳು ಎಂಬುದನ್ನು ಸುಲಭವಾಗಿ ಗ್ರಹಿಸಬಹುದು. ಆದುದರಿಂದ ನಾಣ್ಯಗಳಲ್ಲಿ ದೊರಕದ ಈ ಮಾಹಿತಿ ಯನ್ನು ಶಾಸನಗಳು ಒದಗಿಸುತ್ತವೆ ಎಂಬುದು ಗಮನಾರ್ಹ.

ಇನ್ನು ಕೆಲವು ಶಾಸನಗಳಲ್ಲಿ ನಾಣ್ಯಗಳ ಮೌಲ್ಯವೂ ನಾಣ್ಯದ ಹೆಸರಿನ ಜೊತೆ ಸೇರಿರುವುದನ್ನು ಗಮನಿಸಬಹುದು. ಕಾಟಿಗದ್ಯಾಣ, ಅರ್ಧ ಕಾಟಿ ಗದ್ಯಾಣ, ಕಾಟಿ ಹೊನ್ನು, ಅರ್ಧ ವರಹ ಎನ್ನುವ ನಾಣ್ಯಗಳ ಉಲ್ಲೇಖಗಳು ಶಾಸನಗಳಲ್ಲಿ ಕಾಣಬರುತ್ತವೆ. ಕಾಟಿ ಎಂದರೆ ಕಾಲು ಭಾಗ ಎನ್ನುವ ಅರ್ಥವಿರುವುದರಿಂದ, ಇದನ್ನು ಸುಲಭವಾಗಿ ಅರ್ಥೈಸಬಹುದು. ನಾಣ್ಯಗಳ ಮೇಲಿರುವ ಚಿಹ್ನೆಗಳನ್ನು ಆಧರಿಸಿದ ಕೆಲವು ಪದಗಳು ಶಾಸನಗಳಲ್ಲಿ ಕಾಣಬರುತ್ತವೆ. ಉದಾಹರಣೆಗೆ ಚಕ್ರ ಗದ್ಯಾಣ, ಕಠಾರಿ ಅಂಕುಶ ಗದ್ಯಾಣ, ಬೆಣ್ಣೆ ಮುದ್ದೆ ನಾಣ್ಯ, ಆನೆಹೊನ್ನು ಮುಂತಾದ ಪದಗಳಿಂದ ವಿಜಯನಗರ ಕಾಲದ ನಾಣ್ಯಗಳನ್ನು ಗುರುತಿಸಬಹುದು. ದೊಡ್ಡ ಗದ್ಯಾಣ, ಚಿಕ್ಕ ಗದ್ಯಾಣ, ಸಣ್ಣ ಪ್ರತಾಪ ಎಂಬ ನಾಣ್ಯಗಳು ಶಾಸನಗಳಲ್ಲಿ ಕಾಣಸಿಗುತ್ತವೆ. ಕೃಷ್ಣದೇವರಾಯನು ತಿರುಪತಿಯ ವೆಂಕಟೇಶ್ವರನ ಚಿತ್ರವಿರುವ ನಾಣ್ಯಗಳನ್ನು ಟಂಕಿಸಿದನು. ಇವುಗಳ ತೂಕ ೧೧೭ ಗ್ರೇನ್ ಮತ್ತು ಅಗಲ ಮುಕ್ಕಾಲು ಅಂಗುಲ. ಸಾಮಾನ್ಯವಾಗಿ ವಿಜಯನಗರದ ಗದ್ಯಾಣಗಳು ತೂಕ ೫೨ ಮತ್ತು ಅರ್ಧಂಗುಲ ಅಗಲ. ಅಂದರೆ ತಿರುಪತಿಯ ನಾಣ್ಯ ಸಾಮಾನ್ಯ ಗದ್ಯಾಣಕ್ಕಿಂತ ಎರಡರಷ್ಟಾಯಿತು. ಇಂತಹ ನಾಣ್ಯವನ್ನು ದೊಡ್ಡ ಗದ್ಯಾಣವೆಂದೂ, ಸಾಮಾನ್ಯ 52 ಗ್ರೇನಿನ ಗದ್ಯಾಣವನ್ನು ಚಿಕ್ಕ ಗದ್ಯಾಣವೆಂದೂ ಕರೆಯುತ್ತಿದ್ದರು. ಶಾಸನಗಳಲ್ಲಿ ಕಾಣಬರುವ ಇನ್ನೊಂದು ಆಸಕ್ತಿಕರ ನಾಣ್ಯವೆಂದರೆ ಶುದ್ಧ ಗದ್ಯಾಣ ಮತ್ತು ಶುದ್ಧ ವರಹ. ಒಂದು ಶಾಸನದಲ್ಲಿ ಎಂಟು, ಎಂಟೂವರೆ ಮತ್ತು ಒಂಭತ್ತು ಭಾಗದ ಚಿನ್ನದ ನಾಣ್ಯಗಳು ವಿಜಯನಗರ ದಲ್ಲಿ ಚಲಾವಣೆಯಲ್ಲಿದ್ದವು ಎಂದು ಉಲ್ಲೇಖಿತವಾಗಿದೆ. ಇಲ್ಲಿ ಗರಿಷ್ಠ ಮೊತ್ತ ಹತ್ತು ಎಂದು ಭಾವಿಸಿದರೆ, ಇದು ಸುಮಾರಾಗಿ ಬೆಳ್ಳಿಯ ಅಥವಾ ಶುದ್ಧ ಚಿನ್ನವೆಂದು ಹೇಳಬೇಕಾಗುತ್ತದೆ. ವಿದೇಶೀ ಬರಹಗಾರರ ಮಾಹಿತಿಯ ಪ್ರಕಾರ, ವಿಜಯನಗರದ ನಾಣ್ಯಗಳು ಶೇಕಡಾ 80, 85 ಮತ್ತು 90 ರಷ್ಟು ಶುದ್ಧತೆ ಹೊಂದಿದ್ದವು ಎಂದು ತಿಳಿದುಬರುತ್ತದೆ. ಇದನ್ನು ಶುದ್ಧ ಚಿನ್ನ ಎಂದು ಕರೆಯಬಹುದು. ಆದುದರಿಂದ ಈ ರೀತಿಯ ನಾಣ್ಯಗಳನ್ನು ಶುದ್ಧ ವರಹ ಎಂದು ಕರೆಯುತ್ತಿದ್ದರು ಎಂದು ತಿಳಿಯಬಹುದು. ಹೀಗೆ ವಿಜಯನಗರ ನಾಣ್ಯಗಳು, ಅವರ ಶಾಸನಗಳಿಂದಾಗಿ ಹೆಚ್ಚು ಅರ್ಥಪೂರ್ಣವಾಗುತ್ತವೆ.

ಇದೇ ರೀತಿ ಸಮಕಾಲೀನ ಮತ್ತು ಆನಂತರದ ಸಾಹಿತ್ಯ ಗ್ರಂಥಗಳು ವಿಜಯನಗರ

ನಾಣ್ಯಗಳ ಬಗೆಗೆ ಹೆಚ್ಚಿನ ಮಾಹಿತಿಯನ್ನು ಒದಗಿಸುತ್ತವೆ. ಉದಾಹರಣೆಗೆ ಮಾನೌಮೀ ಚೌಪದ ಎಂಬ ಗ್ರಂಥವನ್ನು ಗಮನಿಸಬಹುದು. ನಂಜುಂಡಯ್ಯ ನೆಂಬುವನು ಈ ಗ್ರಂಥವನ್ನು ಸುಮಾರು ಕ್ರಿ.ಶ. 1730ರಲ್ಲಿ ಕನ್ನಡದಲ್ಲಿ ರಚಿಸಿದನೆಂದು ತಿಳಿದುಬರುತ್ತದೆ. ಇದು ವಿಜಯನಗರದ ಸಮಕಾಲೀನವಲ್ಲದಿದ್ದರೂ, ಆ ಕಾಲದ ನಾಣ್ಯಗಳನ್ನು ಕುರಿತು ಕೆಲವು ಆಸಕ್ತಿಕರ ಮಾಹಿತಿಯನ್ನು ಒದಗಿಸುತ್ತವೆ. ಇಲ್ಲಿ ಅನೇಕ ನಾಣ್ಯಗಳ ಪ್ರಸ್ತಾಪ ಬಂದಿದೆ. ಇವುಗಳಲ್ಲಿ ಮೂರು ನಾಣ್ಯಗಳನ್ನು ಕುರಿತು ನಾನು ಇಲ್ಲಿ ಪ್ರಸ್ತಾಪಿಸುತ್ತೇನೆ. ಅವೇ ಬೆಣ್ಣೆ ಮುದ್ದೆ ನಾಣ್ಯ, ಗಜ ಬೇಂಟೆಕಾರ ಹೊನ್ನು ಮತ್ತು ತಿರುಪತಿ ಹಣ. ಬೆಣ್ಣೆ ಮುದ್ದೆ ನಾಣ್ಯ, ಹೆಸರೇ ತಿಳಿಸುವಂತೆ, ಬೆಣ್ಣೆ ಮುದ್ದೆಗೆ ಸಂಬಂಧಿಸಿದುದು. ಕೂಡಲೆ ನಮಗೆ ನೆನಪಾಗುವುದು ಬೆಣ್ಣೆ ಮುದ್ದೆಯನ್ನು ಕೈಯಲ್ಲಿ ಹಿಡಿದಿರುವ ಬಾಲಕೃಷ್ಣನ ಚಿತ್ರ. ಕೃಷ್ಣದೇವರಾಯನು ಒರಿಸ್ಸಾದ ಉದಯ ಗಿರಿಯ ಮೇಲೆ ದಂಡೆತ್ತಿ ಹೋಗಿ ಗಜಪತಿ ದೊರೆಯನ್ನು ಸೋಲಿಸಿ, ಅಲ್ಲಿಂದ ಕೃಷ್ಣನ ವಿಗ್ರಹವನ್ನು ತಂದು, ಅದನ್ನು ಹಂಪಿಯ, ಕೃಷ್ಣದೇವಾಲಯದಲ್ಲಿ 1514-15ರಲ್ಲಿ ಪ್ರತಿಷ್ಠೆ ಮಾಡಿದ ಸಂಗತಿ ಶಾಸನಗಳಿಂದ ತಿಳಿದುಬಂದಿದೆ. ಇದರ ಜ್ಞಾಪಕಾರ್ಥವಾಗಿ, ಕೃಷ್ಣದೇವರಾಯನು ಚಿನ್ನ, ಬೆಳ್ಳಿ ಮತ್ತು ತಾಮ್ರಗಳಲ್ಲಿ ಬಾಲ ಕೃಷ್ಣ ನಮೂನೆಯ ನಾಣ್ಯಗಳನ್ನು ಟಂಕಿಸಿದನು. ಈ ನಮೂನೆಯ ನಾಣ್ಯಗಳು ಹೇರಳ ವಾಗಿ ದೊರಕಿವೆ. ಈ ನಾಣ್ಯದ ಮುಮ್ಮುಖದಲ್ಲಿ ಬಾಲಕೃಷ್ಣನು ಕೈಯಲ್ಲಿ ಬೆಣ್ಣೆ ಮುದ್ದೆಯನ್ನು ಹಿಡಿದುಕೊಂಡಿರುವ ಚಿತ್ರವಿದೆ. ಹಿಮ್ಮುಖದಲ್ಲಿ ಶ್ರೀಪ್ರತಾಪ ಕೃಷ್ಣರಾಯ ಎನ್ನುವ ಬರಹವಿದೆ. ಈ ನಾಣ್ಯದ ವಿನ್ಯಾಸ ಜನಗಳಿಗೆ ತುಂಬ ಪ್ರಿಯವಾಗಿ ಕಂಡು ಇವುಗಳನ್ನು ಬೆಣ್ಣೆ ಮುದ್ದೆ ನಾಣ್ಯ ಎಂದು ಗುರುತಿಸಲು ಆರಂಭಿಸಿದರು.

ಇನ್ನು ಗಜಬೇಂಟೆಕಾರ ಹೊನ್ನು ಎನ್ನುವ ನಾಣ್ಯವನ್ನು ಗಮನಿಸೋಣ. ವಿಜಯ ನಗರದ ಇಮ್ಮಡಿ ದೇವರಾಯನಿಗೆ ಆನೆಗಳ ವಿಷಯದಲ್ಲಿ ವಿಶೇಷ ಆಸಕ್ತಿ ಇದ್ದಿತು. ಆನೆಗಳ ಬೇಟೆಯಲ್ಲಿ ಇವನು ವಿಶೇಷ ಆಸಕ್ತಿ ವಹಿಸಿದ್ದನೆಂದು ಶಾಸನಗಳು ತಿಳಿಸುತ್ತವೆ. ಇವನಿಗೆ ಗಜಬೇಟೆಕಾರ ಅಥವಾ ಗಜಬೇಂಟೆಕಾರ ಎನ್ನುವ ಬಿರುದು ಇದ್ದುದು ಶಾಸನಗಳಿಂದ ತಿಳಿದುಬರುತ್ತದೆ. ದೇವರಾಯನೆಂಬ ಬರಹವಿರುವ ನಾಣ್ಯಗಳಲ್ಲಿ ಗಜಬೇಟೆಕಾರ ಎನ್ನುವಬಿರುದೂ ಇದ್ದು, ಈ ರೀತಿಯ ನಾಣ್ಯಗಳ ಮೇಲೆ ಆನೆಯ ಚಿತ್ರವಿರುವುದರಿಂದ, ಈ ರೀತಿಯ ನಾಣ್ಯಗಳನ್ನು ಟಂಕಿಸಿದವನು ವಿಜಯನಗರ ಇಮ್ಮಡಿ ದೇವರಾಯ ಎಂದು ಖಚಿತವಾಗುತ್ತದೆ. ಈ ಬರಹದ ದೆಸೆಯಿಂದಾಗಿ ಈ ನಾಣ್ಯ ಗಜ ಬೇಂಟೆಕಾರ ಹೊನ್ನು ಎಂಬ ಖ್ಯಾತಿಯನ್ನು ಪಡೆಯಿತು. ಇನ್ನು ತಿರುಪತಿಯ ನಾಣ್ಯವನ್ನು ಗಮನಿಸೋಣ. ಕೃಷ್ಣದೇವರಾಯನಿಗೆ ತಿರುಪತಿಯ ವೆಂಕಟೇಶ್ವರನ ಬಗೆಗೆ ವಿಶೇಷ ಭಕ್ತಿ ಗೌರವಗಳಿದ್ದುದು ತಿಳಿದು ಬಂದಿದೆ. ಅವನು ಆರೇಳು ಸಾರಿ ತಿರುಪತಿಗೆ ಹೋಗಿ

ದೇವರ ದರ್ಶನ ಪಡೆದಿದ್ದ ವಿಚಾರವೂ ಗೊತ್ತಾಗಿದೆ. ಒಂದು ಸಾರಿ ಈ ದೇವರಿಗೆ ಕನಕಾಭಿಷೇಕವನ್ನು ಮಾಡುವ ಸಲುವಾಗಿ ಎರಡು ವರಹಕ್ಕಿಂತಲೂ ಹೆಚ್ಚು ತೂಕದ (117 ಗ್ರೇನ್) ನಾಣ್ಯವನ್ನು ಮುದ್ರಿಸಿ ಇವುಗಳಿಂದ ದೇವರಿಗೆ ಅಭಿಷೇಕವನ್ನು ಮಾಡಿದನು. ಈ ನಾಣ್ಯದ ಮುಮ್ಮುಖದಲ್ಲಿ ಎತ್ತರವಾದ ಕಿರೀಟವನ್ನು ಧರಿಸಿರುವ, ಶಂಖ, ಚಕ್ರಗಳನ್ನು ಹಿಡಿದು ಅಭಯ ಮುದ್ರೆಯಲ್ಲಿರುವ ವೆಂಕಟೇಶ್ವರನ ಚಿತ್ರವಿದೆ. ಹಿಮ್ಮುಖದಲ್ಲಿ ಯಾವ ಬಿರುದುಗಳೂ ಇಲ್ಲದೆ ಶ್ರೀ ಕೃಷ್ಣರಾಯ ಎಂಬ ಬರಹವಿದೆ. ಕೊನೆಯ ದೊರೆಗಳಾದ ಇಮ್ಮಡಿ ಶ್ರೀರಂಗರಾಯ ಮತ್ತು ವೆಂಕಟಪತಿರಾಯ ಕೂಡ ತಿರುಪತಿ ನಮೂನೆಯ ನಾಣ್ಯಗಳನ್ನು ಟಂಕಿಸಿದರಾದರೂ, ಇವುಗಳಲ್ಲಿ ಹೆಚ್ಚು ಪ್ರಸಿದ್ಧವಾದುದು ಕೃಷ್ಣದೇವರಾಯನ ನಾಣ್ಯ. ಈ ನಾಣ್ಯವೂ ಜನಗಳಿಗೆ ಮೆಚ್ಚಿಕೆಯಾಗಿ, ಜನಗಳ ಬಾಯಲ್ಲಿ ತಿರುಪತಿಯ ನಾಣ್ಯವಾ ಯಿತು. ಹೀಗೆ ಜನಗಳ ಸ್ಮೃತಿಪಟಲದ ಮೇಲೆ ಶತಮಾನಗಳ ನಂತರವೂ ಉಳಿದ ಈ ಮೂರು ನಾಣ್ಯಗಳು ಗಮನಾರ್ಹವಾದವು. ಈ ನಾಣ್ಯಗಳೇ ಹೇಳದಂತಹ ಮಾಹಿತಿಗಳನ್ನು ಈ ಗ್ರಂಥ ಮಾನೌಮೀಚೌಪದ ಒದಗಿಸುತ್ತದೆ.

ಭರತೇಶ ವೈಭವ ಎನ್ನುವ ಗ್ರಂಥದಲ್ಲಿ 'ಕುಬೇರನಲ್ಲಿ ಕಾಟಿಯಿನು ಯಾಚಿಸಿದಂತೆ' ಎಂದು ಉಲ್ಲೇಖವಿದೆ. ಅಂದರೆ ಇಲ್ಲಿ ಇದು ಕನಿಷ್ಠಮೌಲ್ಯದ ನಾಣ್ಯ ಎಂದು ಬಿಂಬಿತವಾಗಿದೆ. ಇಲ್ಲಿ ಆಸಕ್ತಿಕರ ಸಂಗತಿ ಎಂದರೆ ೧೩ ಗ್ರೇನ್ ತೂಕದ ಈ ಕಾಟಿ ಎಂಬ ಚಿನ್ನದ ನಾಣ್ಯವನ್ನು ತೀರ ಕನಿಷ್ಠ ಎಂದು ಭಾವಿಸಿದ್ದರೆ, ಆ ಕಾಲದಲ್ಲಿ ಆರ್ಥಿಕ ಸ್ಥಿತಿಗತಿ ಎಷ್ಟು ಚೆನ್ನಾಗಿದ್ದಿತು ಎಂಬುದನ್ನು ಊಹಿಸಬಹುದು. ಬಸವ ಪುರಾಣ ಮತ್ತು ಬೊಮ್ಮರಸನ ಸೌಂದರ ಪುರಾಣಗಳಲ್ಲಿ ಅರೆಕಾಣಿ ಎಂಬ ನಾಣ್ಯದ ಪ್ರಸ್ತಾಪ ವಿದೆ. ಮಂಗರಸನ ಸೂಪಶಾಸ್ತ್ರದಲ್ಲಿ ದುಗ್ಗಾಣಿ ಎಂಬ ನಾಣ್ಯದ ಉಲ್ಲೇಖವಿದೆ. (ಕಲಸಿ ದುಗ್ಗಾಣಿಯಂದದಿ ಮಾಡಿ). 'ದುಗ್ಗಾಣಿ ಬಲು ಕೆಟ್ಟದಯ್ಯ' ಎಂದು ಪುರಂದರ ದಾಸರು ಹೇಳಿದ್ದಾರೆ. ಹೀಗೆ ಅನೇಕ ಸಾಹಿತ್ಯಿಕ ಗ್ರಂಥಗಳಲ್ಲಿ ಪ್ರಾಸಂಗಿಕವಾಗಿ ನಾಣ್ಯಗಳ ಉಲ್ಲೇಖ ಕಂಡು ಬರುತ್ತದೆ. ಈ ಎಲ್ಲ ಗ್ರಂಥಗಳನ್ನು ವ್ಯವಸ್ಥಿತವಾಗಿ ಅಧ್ಯಯನ ಮಾಡಿ, ಅಲ್ಲಿ ಕಾಣಬರುವ ನಾಣ್ಯಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸಿದರೆ, ವಿಜಯನಗರ ನಾಣ್ಯ ಅಧ್ಯಯನ ಹೆಚ್ಚು ಅರ್ಥಪೂರ್ಣವಾಗುತ್ತದೆ.

ಇನ್ನು ಮೂರನೆಯದಾಗಿ ಆ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯದಲ್ಲಿ ಸಂಚರಿಸಿದ ನಾಲ್ಕಾರು ವಿದೇಶೀಯ ಯಾತ್ರಿಕರು ತಮ್ಮ ಬರವಣಿಗೆಗಳಲ್ಲಿ ವಿಜಯನಗರ ನಾಣ್ಯಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಒದಗಿಸಿದ್ದಾರೆ. ಈ ಬರಹಗಳು ವಿಜಯನಗರ ನಾಣ್ಯಗಳ ಅಧ್ಯಯನಕ್ಕೆ ಉತ್ತಮ ಆಕರಗಳಾಗಿವೆ. ಈ ಉಲ್ಲೇಖಗಳಿಗೆ ಇನ್ನೊಂದು ಮಹತ್ವವಿದೆ. ಈ ವಿದೇಶೀ ಯಾತ್ರಿಕರು ಪ್ರಪಂಚದ ಬೇರೆ ಬೇರೆ ಭಾಗಗಳನ್ನು ಸಂದರ್ಶಿಸಿ, ಅಲ್ಲಿನ

ನಾಣ್ಯಗಳನ್ನು ಉಪಯೋಗ ಮಾಡಿದವರು. ಇಂತಹ ನಾಣ್ಯಶಾಸ್ತ್ರ ಅನುಭವ ಉಳ್ಳ ಯಾತ್ರಿಕರು, ವಿಜಯನಗರ ನಾಣ್ಯಗಳನ್ನು ಯಾವ ರೀತಿಯಿಂದ ನೋಡಿದರು ಮತ್ತು ಅವರ ತೌಲನಿಕ ಅನಿಸಿಕೆಗಳೇನು ಎಂಬುದಕ್ಕೆ ಹೆಚ್ಚಿನ ಮಹತ್ವ ಕಾಣಸಿಗುತ್ತದೆ. ಜೊತೆಗೆ ಬಹುಮಂದಿ ಯಾತ್ರಿಕರು ಸಮಕಾಲೀನರೇ ಆಗಿದ್ದುದರಿಂದ, ಅವರ ಅನಿಸಿಕೆಗಳಿಗೆ ಹೆಚ್ಚಿನ ಮಹತ್ವ. ಟಂಕ ಶಾಲೆಗಳು ನಾಣ್ಯಗಳನ್ನು ಟಂಕಿಸುವ ಕೆಲಸವನ್ನು ಮಾಡುವುದರ ಜೊತೆಗೆ, ಸರ್ಕಾರಕ್ಕೆ ನಾಣ್ಯಗಳನ್ನು ಜಮಾ ಮಾಡುವ ಹಾಗೂ ಸರ್ಕಾರದಿಂದ ಹಣ ಪಡೆಯುವ ಇಂದಿನ ಬ್ಯಾಂಕುಗಳಂತೆ ಕೆಲಸ ನಿರ್ವಹಿಸುತ್ತಿದ್ದವು ಎಂಬ ವಿಷಯ ಅಬ್ದುಲ್ ರಜಾಕನ ಬರವಣಿಗೆಯಿಂದ ತಿಳಿದು ಬರುತ್ತದೆ. ಹಣದ ವಿನಿಮಯ ಮಾಡುವವರು ಮತ್ತು ಬ್ಯಾಂಕರುಗಳು ತಮ್ಮ ಹತ್ತಿರ ಒಂದು ಸಣ್ಣ ತಕ್ಕಡಿ ಮತ್ತು ತೂಕದ ಬಟ್ಟುಗಳನ್ನು ಇಟ್ಟುಕೊಂಡಿರುತ್ತಾರೆ. ಇದು ತುಂಬ ನಿಖರವಾಗಿದ್ದು ಒಂದು ಕೂದಲೆಳೆಯ ತೂಕ ವನ್ನೂ ತೋರಿಸುತ್ತದೆ. ಜೊತೆಗೆ ಇವರು ಒರೆಗಲ್ಲನ್ನೂ ಮೇಣದಂತಹ ವಸ್ತುವನ್ನೂ ಇಟ್ಟುಕೊಂಡಿರುತ್ತಾರೆ. ಇವುಗಳಿಂದ ಇವರು ನಾಣ್ಯದ ತೂಕ ಮತ್ತು ಶುದ್ಧತೆ ಯನ್ನು ಪರೀಕ್ಷಿಸುತ್ತಾರೆ. ಇವರೆಲ್ಲ ತುಂಬ ಜಾಣರು, ತೀಕ್ಷ್ಣಮತಿಗಳು ತಮ್ಮ ಧಂಧೆಯಲ್ಲಿ ಪರಿಣತರು. ಈ ವಸ್ತುಗಳನ್ನು ಅವರು ಸಣ್ಣ ಪೆಟ್ಟಿಗೆಯಲ್ಲಿಟ್ಟು ಕೊಂಡಿರುತ್ತಾರೆ. ಇದರ ತೂಕ ಹತ್ತು ಔನ್ಸಿಗಿಂತ ಕಮ್ಮಿ ಇರುತ್ತದೆ. ಜೇಬಿನಲ್ಲಿ ಇಟ್ಟುಕೊಳ್ಳಬಹುದಾ ಗಿತ್ತು ಎಂದು ಬಾರ್ಬೊಸ ವರ್ಣಿಸಿದ್ದಾನೆ. ಡೊಮಿಂಗೊ ಪೇಸನ ಪ್ರಕಾರ ಚಿನ್ನದ ಪರ್ದಾವೊ ನಾಣ್ಯಗಳು ಭಾರತಾದ್ಯಂತ ಚಲಾವಣೆಯಲ್ಲಿದ್ದವು. ಆದರೆ ಇಂದು ತೆಗೆದುಕೊಂಡ ತಾಮ್ರದ ನಾಣ್ಯಗಳು ಬೇರೆ ರಾಜ್ಯದಲ್ಲಿ ಉಪಯೋಗಕ್ಕೆ ಬರುತ್ತಿರಲಿಲ್ಲ ಎಂದು ಸೀಸರ್ ಫ್ರೆಡರಿಕ್ ಹೇಳಿದ್ದಾನೆ. ಕೆಲವು ಯಾತ್ರಿಕರು ತಾರ ಎಂಬ ಬೆಳ್ಳಿಯ ನಾಣ್ಯದ ಬಗೆಗೆ ಮಾಹಿತಿಯನ್ನು ಒದಗಿಸಿದ್ದಾರೆ. ವಿಜಯನಗರ ನಾಣ್ಯಗಳು ನಿಸ್ಸಂದೇಹವಾಗಿ ಚೊಕ್ಕವಾದವು : ಇದುವರೆಗೆ ಒಂದು ನಾಣ್ಯವೂ ಕೃತ್ರಿಮವೆಂದು ಕಂಡು ಬಂದಿಲ್ಲ ಮತ್ತು ಈಗಲೂ ಕಾಣಬರುತ್ತಿಲ್ಲ ಎಂದು ಬಾರ್ಬೊಸ ಹೇಳಿರುವುದು ವಿಜಯನಗರ ನಾಣ್ಯ ಪದ್ಧತಿಗೆ ವಿದೇಶೀಯರು ನೀಡಿದ ಪ್ರಮಾಣ ಪತ್ರವೆಂದು ಭಾವಿಸಬಹುದು.

ಈ ವಿದೇಶೀಯ ಯಾತ್ರಿಕರ ಬರವಣಿಗೆಯ ಆಧಾರದ ಮೇಲೆ ಅಂದಿನ ಧಾರಣೆವಾಸಿಯನ್ನು ರಚಿಸಬಹುದು. ಇಂದಿನ ಚಿನ್ನ ಮತ್ತು ಬೆಳ್ಳಿಯ ಧಾರಣೆಯನ್ನು ಆಧರಿಸಿ ಹೇಳುವುದಾದರೆ, ವಿಜಯನಗರ ಕಾಲದಲ್ಲಿ ಒಬ್ಬ ಸೈನಿಕನ ತಿಂಗಳ ಸಂಬಳ ಒಂಬತ್ತು ಸಾವಿರ ರೂ.ಗಳಾಗಿತ್ತು: ನ್ಯೂನಿಜ್ ಪ್ರಕಾರ ಒಂದು ಕುದುರೆಯ ಬೆಲೆ 35 ಸಾವಿರ ರೂಗಳಾಗಿತ್ತು. ಈ ರೀತಿ ಅನೇಕ ವಸ್ತುಗಳ ಬೆಲೆಯನ್ನು ವಿದೇಶೀ ಯಾತ್ರಿಕರ ಬರವಣಿಗೆಯ ಆಧಾರದ ಮೇಲೆ ಗೊತ್ತು ಪಡಿಸಬಹುದು: ಇಂದಿನ ಬೆಲೆಯೊಂದಿಗೆ ಹೋಲಿಸಿ ತಾಳೆ ನೋಡಬಹುದು.

ಈ ರೀತಿ ವಿಜಯನಗರ ನಾಣ್ಯಗಳನ್ನು ಅಧ್ಯಯನ ಮಾಡಬೇಕಾದರೆ ವಿಜಯ ನಗರ ಶಾಸನಗಳು, ಸಮಕಾಲೀನ ಮತ್ತು ಆನಂತರದ ಸಾಹಿತ್ಯಿಕ ಗ್ರಂಥಗಳು ಮತ್ತು ವಿದೇಶೀಯ ಯಾತ್ರಿಕರ ಬರವಣಿಗೆಗಳನ್ನು ಅಧ್ಯಯನ ಮಾಡಿ, ಇವುಗಳಿಂದ ದೊರೆಯುವ ಮಾಹಿತಿಗಳ ಹಿನ್ನೆಲೆಯಲ್ಲಿ ದೊರಕಿರುವ ನಾಣ್ಯಗಳನ್ನು ಅಧ್ಯಯನ ಮಾಡಬೇಕು. ಆಗ ಸಮರ್ಪಕವಾದ ಮಾಹಿತಿಗಳು ದೊರಕುತ್ತವೆ.

ಈಗ ಇತ್ತೀಚೆಗೆ ದೊರಕಿರುವ ಕೆಲವು ಪ್ರಮುಖ ನಾಣ್ಯಗಳನ್ನು ಗಮನಿಸ ಬಹುದು. ಕ್ರಿ.ಶ. 1606ರಲ್ಲಿ ತನ್ನ ಬರವಣಿಗೆಯನ್ನು ಪೂರೈಸಿದ ಫೆರಿಷ್ತ 'ವಿಜಯ ನಗರ ಸಾಮ್ರಾಜ್ಯದಲ್ಲಿ ಬೆಳ್ಳಿಯ ನಾಣ್ಯಗಳು ಟಂಕಿಸಲ್ಪಡಲಿಲ್ಲವೆಂದು ದಾಖಲಿಸಿ ದ್ದಾನು. ವಿಜಯನಗರ ಅಧ್ಯಯನದ ಆರಂಭದ ದಿನಗಳಲ್ಲಿ ಬೆಳ್ಳಿಯ ನಾಣ್ಯಗಳು ದೊರಕಿರಲಿಲ್ಲ. ಅದನ್ನು ಆಧರಿಸಿ ವಿಜಯನಗರ ದೊರೆಗಳು ಬೆಳ್ಳಿಯ ನಾಣ್ಯಗಳನ್ನು ಟಂಕಿಸಲಿಲ್ಲವೆಂಬ ಅಭಿಪ್ರಾಯವನ್ನು ಎಲ್ಲರೂ ಒಪ್ಪಿಕೊಂಡರು. ಆದರೆ ಈಗ ಇದು ಸರಿಯಲ್ಲ ಎಂಬುದು ತಿಳಿದು ಬಂದಿದೆ. ಅಬ್ದುಲ್ ರಜಾಕನ ಪ್ರಕಾರ, ಇಮ್ಮಡಿ ದೇವರಾಯನ ಕಾಲದಲ್ಲಿ ಬೆಳ್ಳಿಯ ತಾರ ಎನ್ನುವ ನಾಣ್ಯಗಳು ಬಳಕೆಯಲ್ಲಿದ್ದವು. ಇದು ಪಣ ಎಂಬ ಚಿನ್ನದ ನಾಣ್ಯದ ಆರನೆಯ ಒಂದು ಭಾಗದ ಮೌಲ್ಯವುಳ್ಳದಾಗಿತ್ತು. ಮಾಹುವಾನನ ಪ್ರಕಾರ ತಾರ ಎಂಬ ಬೆಳ್ಳಿಯ ನಾಣ್ಯ ಪಣದ ಹದಿನೈದನೆಯ ಒಂದು ಭಾಗವಾಗಿತ್ತು. ವರ್ತೆಮನ ಪ್ರಕಾರ ಇದು ಪಣದ ಹದಿನಾರನೆಯ ಒಂದು ಭಾಗವಾಗಿತ್ತು. ಹೀಗೆ ವಿದೇಶೀಯ ಯಾತ್ರಿಕರ ಬರವಣಿಗೆಯು ತಾರ ಎಂಬ ಬೆಳ್ಳಿ ನಾಣ್ಯದ ವಿಷಯದಲ್ಲಿ ಮಾಹಿತಿ ನೀಡು ತ್ತದೆ. ಇತ್ತೀಚಿನ ವರ್ಷಗಳಲ್ಲಿ ವಿಜಯ ನಗರದ ಅರಸರ ಬೆಳ್ಳಿಯ ನಾಣ್ಯಗಳು ವಿಶೇಷವಾಗಿ ದೊರಕಿವೆ. ಬೆಳ್ಳಿಯ ನಾಣ್ಯ ಗಳನ್ನು ಟಂಕಿಸಿದ ವಿಜಯನಗರದ ಅರಸರೆಂದರೆ ಒಂದನೆಯ ಹರಿಹರ, ಒಂದನೆಯ ಬುಕ್ಕರಾಯ, ಇಮ್ಮಡಿ ಹರಿಹರ, ಮೊದಲನೆ ಮತ್ತು ಎರಡನೆಯ ದೇವರಾಯ, ಮಲ್ಲಿಕಾರ್ಜುನ, ಕೃಷ್ಣದೇವರಾಯ, ಸದಾಶಿವರಾಯ ಮತ್ತು ಶ್ರೀರಂಗರಾಯ.

ವಿಜಯನಗರ ನಾಣ್ಯಗಳ ಮೇಲಿನ ಬರಹಗಳು ಗಮನಾರ್ಹವಾದವು. ಈ ಬರಹಗಳು ನಾಗರೀ, ಕನ್ನಡ ಮತ್ತು ತೆಲುಗು ಲಿಪಿಯಲ್ಲಿ ಕಾಣಬರುತ್ತವೆ. ಇದನ್ನು ಒಟ್ಟಾರೆ ಗಮನಿಸಿದರೆ ಆಸಕ್ತಿ ಕರವಾದ ಸಂಗತಿ ತಿಳಿದುಬರುತ್ತದೆ. ಹದಿಮೂರು ರಾಜರ ಬರಹಗಳು ನಾಗರಿಯಲ್ಲಿವೆ; ಒಂಬತ್ತು ದೊರೆಗಳ ಬರಹಗಳು ಕನ್ನಡದಲ್ಲಿವೆ; ಕೊನೆಯ ಇಬ್ಬರು ರಾಜರ ನಾಣ್ಯಗಳ ಮೇಲೆ ತೆಲುಗು ಬರಹ ಕಾಣಬರುತ್ತದೆ. ವಿಜಯನಗರ ಸ್ಥಾಪಕರಾದ ಒಂದನೆಯ ಹರಿಹರ ಮತ್ತು ಒಂದನೆಯ ಬುಕ್ಕರ ನಾಣ್ಯಗಳಲ್ಲಿ ಕನ್ನಡ ಮತ್ತು ನಾಗರೀ ಲಿಪಿಗಳ ಬರಹ ಕಾಣಸಿಗುತ್ತದೆ. ಕೃಷ್ಣ ದೇವರಾಯನ ನಾಣ್ಯಗಳಲ್ಲಿಯೂ ಕೂಡ ಕನ್ನಡ ಮತ್ತು ನಾಗರೀ ಬರಹಗಳಿವೆ.

ಈಗ ಅತಿ ಮುಖ್ಯವಾದ ಇತ್ತೀಚೆಗೆ ದೊರಕಿದ ಕೆಲವು ಬೆಳ್ಳಿಯ ನಾಣ್ಯಗಳನ್ನು ಪರಿಚಯಿಸಲು ಬಯಸುತ್ತೇನೆ. ಮೊದಲನೆಯ ನಾಣ್ಯ ಹೀಗಿದೆ :

ತೂಕ 4 ಗ್ರೇನ್, ಅಗಲ 0.6"

ಮುಮ್ಮುಖ : ನಾಗರೀ ಅಕ್ಷರ 'ಹ'; ಅದರ ಪಕ್ಕದಲ್ಲಿ ಕನ್ನಡ ಸಂಖ್ಯೆ ಎರಡೂವರೆ (ಎರಡು ಎನ್ನುವ ಕನ್ನಡ ಸಂಖ್ಯೆ ಪಕ್ಕದಲ್ಲಿ ಎರಡು ಲಂಬರೇಖೆಗಳು)

ಹಿಮ್ಮುಖ : ಎರಡು ಸಾಲುಗಳ ನಾಗರೀ ಬರಹ ಹರಿ / ಹರ

ಎರಡನೆಯ ನಾಣ್ಯ : ತೂಕ 2 ಗ್ರೇನ್ : ಅಗಲ 0.4"

ಮುಮ್ಮುಖ : ಚುಕ್ಕೆಗಳಿಂದ ವಿನ್ಯಾಸಗೊಳಿಸಿದ ಗರುಡ

ಹಿಮ್ಮುಖ : ನಾಗರೀ ಅಕ್ಷರ ಹ : ಅದರ ಪಕ್ಕದಲ್ಲಿ ಕನ್ನಡದ ಒಂದೂ ಕಾಲು ಎನ್ನುವ ಸಂಖ್ಯೆ (ಒಂದು ಎನ್ನುವ ಕನ್ನಡ ಸಂಖ್ಯೆಯ ಪಕ್ಕದಲ್ಲಿ ಒಂದು ಲಂಬರೇಖೆ)

ಈ ಎರಡು ಬೆಳ್ಳಿಯ ನಾಣ್ಯಗಳು ಅನೇಕ ದೃಷ್ಟಿಗಳಿಂದ ಗಮನಾರ್ಹವಾದವು. ಮೊದಲನೆಯ ನಾಣ್ಯದ ಎರಡು ಮುಖಗಳಲ್ಲಿಯೂ ಬರಹಗಳಿದೆ. ಸಾಮಾನ್ಯವಾಗಿ ಮುಮ್ಮುಖದಲ್ಲಿ ದೇವ - ದೇವತೆಯ ಚಿತ್ರಗಳಿರಬೇಕು. ಇದೊಂದು ಅಪವಾದ, ಅದಕ್ಕೂ ಮುಖ್ಯವಾಗಿ ಇದರ ಮುಮ್ಮುಖದಲ್ಲಿ 'ಹ' ಎಂಬ ನಾಗರೀ ಅಕ್ಷರ : ಅದರ ಪಕ್ಕದಲ್ಲಿ ಎರಡೂವರೆ ಅಥವಾ ಒಂದೂಕಾಲು ಎನ್ನುವ ಕನ್ನಡ ಸಂಖ್ಯೆಯಿದೆ. ಇದು ಎರಡೂವರೆ ಅಥವಾ ಒಂದೂ ಕಾಲು ಮೌಲ್ಯದ ಹಣ ಎಂದು ಭಾವಿಸಬಹುದು. ಈ ದೃಷ್ಟಿಯಿಂದ ನಾಣ್ಯದ ಹೆಸರು ಮತ್ತು ಅದರ ಮೌಲ್ಯವನ್ನು ಹೊಂದಿರುವ ಮೊಟ್ಟ ಮೊದಲನೆಯ ಹಿಂದೂ ನಾಣ್ಯ ಎನ್ನುವ ಹೆಚ್ಚಳಕ್ಕೂ ಇದು ಪಾತ್ರವಾಗಿದೆ. ಹಣ ಎಂದಿರುವುದರಿಂದ, ಇದು ಚಿನ್ನದ ನಾಣ್ಯಮಾತ್ರವಾಗಿರದೆ, ಬೆಳ್ಳಿಯ ನಾಣ್ಯವೂ ಆಗಿದ್ದಿತೆಂದು ಗೊತ್ತಾಗುತ್ತದೆ. ತೂಕದ ದೃಷ್ಟಿಯಿಂದ ಎರಡೂವರೆ ಎನ್ನುವ ಬರಹವಿರುವ ನಾಣ್ಯದ ಅರ್ಧ ಒಂದೂಕಾಲು ಬರಹವಿರುವ ನಾಣ್ಯದ ತೂಕ. ಈ ಎಲ್ಲ ದೃಷ್ಟಿಗಳಿಂದ ಈ ಎರಡು ನಾಣ್ಯಗಳು ತುಂಬ ಮಹತ್ತರವಾದವು.

ಇದೇ ನಮೂನೆಯ ನಾಣ್ಯವನ್ನು ಇಮ್ಮಡಿ ದೇವರಾಯನೂ ಟಂಕಿಸಿದನು. ಇದೂ ಬೆಳ್ಳಿ ನಾಣ್ಯ.

ಮುಮ್ಮುಖ : ಚುಕ್ಕೆಗಳಿಂದ ವಿನ್ಯಾಸ ಗೊಳಿಸಿದ ಆನೆ : ಮೇಲ್ಭಾಗದಲ್ಲಿ ಕಮಾನಿನಲ್ಲಿ ಖಡ್ಗ

ಹಿಮ್ಮುಖ : ಹ ಎಂಬ ನಾಗರೀ ಅಕ್ಷರ : ಪಕ್ಕದಲ್ಲಿ ಎರಡೂವರೆ ಎನ್ನುವ ಕನ್ನಡ ಸಂಖ್ಯೆ.

ಇದೇ ನಮೂನೆಯ ಒಂದೂಕಾಲು ಎನ್ನುವ ಸಂಖ್ಯೆಯಿರುವ ನಾಣ್ಯಗಳೂ ದೊರಕಿವೆ. ಇಮ್ಮಡಿ ಹರಿಹರನಿಂದ ಪ್ರಾರಂಭಿಸಿದ ಈ ನಮೂನೆಯನ್ನು ಇಮ್ಮಡಿ ದೇವರಾಯನು ಮುಂದುವರಿಸಿದನೆಂದು ಹೇಳಬಹುದು. ಒಟ್ಟಿನಲ್ಲಿ ಈ ಮೇಲಿನ ನಾಲ್ಕು ಬೆಳ್ಳಿ ನಾಣ್ಯಗಳು ವಿಜಯನಗರ ನಾಣ್ಯ ಇತಿಹಾಸದಲ್ಲಿ ಪ್ರಾಮುಖ್ಯವನ್ನು ಪಡೆದಿವೆ. ಬಹುಶಃ ಇದು ಮುಸ್ಲಿಂ ನಾಣ್ಯಗಳ ಪ್ರಭಾವದಿಂದ ಆಗಿರಬೇಕೆಂದೂ, ಆದರೆ ಇದು ಅಷ್ಟಾಗಿ ಮುಂದುವರಿಯಲಿಲ್ಲವೆಂದು ಭಾವಿಸಬೇಕಾಗುತ್ತದೆ.

ಇತ್ತೀಚೆಗೆ ದೊರಕಿರುವ ಮಿಥುನ ಚಿಹ್ನೆಯಿರುವ ಬೆಳ್ಳಿಯ ನಾಣ್ಯ ಗಮನಾರ್ಹವಾದುದು. ಇದು ಯಾವ ರಾಜನಿಗೆ ಸೇರಿದ್ದು ಎಂದು ಹೇಳಲಾಗುವುದಿಲ್ಲವಾದರೂ, ಇದೊಂದು ವಿಜಯನಗರ ನಾಣ್ಯವೆಂಬುದು ತೂಕ ಮತ್ತು ವಿನ್ಯಾಸದಿಂದ ಖಚಿತವಾಗುತ್ತದೆ. ಈಗಾಗಲೇ ವೃಷಭ, ಮಿಥುನ, ಸಿಂಹ ಮತ್ತು ಮಕರ ರಾಶಿಯ ನಾಣ್ಯಗಳು ದೊರಕಿರುವುದರಿಂದ, ವಿಜಯನಗರದ ಅರಸರು ದ್ವಾದಶ ರಾಶಿಗಳ ಚಿಹ್ನೆಯನ್ನು ಹೊಂದಿದ ನಾಣ್ಯಗಳನ್ನು ಟಂಕಿಸಿರುವ ಸಾಧ್ಯತೆಗಳಿವೆ. ಈ ಕಾಲದ ಆರಂಭ ಕಾಲಕ್ಕೆ ಸೇರಬಹುದಾದ ಶೃಂಗೇರಿಯ ವಿದ್ಯಾಶಂಕರದೇವಾಲಯದಲ್ಲಿ ಆಯಾ ರಾಶಿಗಳ ತಿಂಗಳಿನಲ್ಲಿ ಅದಕ್ಕೆ ಸಂಬಂಧಿಸಿದ ಕಂಬಗಳ ಮೇಲೆ ಸೂರ್ಯನ ಕಿರಣಗಳು ಬೀಳುವಂತೆ ನಿರ್ಮಾಣ ಮಾಡಲಾಗಿದೆ ಎಂಬ ಅಂಶವನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅದೇ ರೀತಿ ಮುಘಲ್ ಚಕ್ರವರ್ತಿ ಜಹಾಂಗೀರನು ದ್ವಾದಶ ರಾಶಿಗಳ ಚಿಹ್ನೆಯನ್ನು ಹೊಂದಿದ ನಾಣ್ಯಗಳನ್ನು ಟಂಕಿಸಿದ್ದನೆಂಬುದು ಎಲ್ಲರಿಗೂ ತಿಳಿದಿರುವ ವಿಷಯ. ವಿಜಯನಗರದ ಈ ನಮೂನೆಯ ನಾಣ್ಯಗಳು ಜಹಾಂಗೀರನಿಗೆ ಮಾದರಿಯಾಗಿರಬಹುದೇ ಎನ್ನುವುದು ಕುತೂಹಲಕರವಾದ ವಿಷಯ.

ತಾಮ್ರದ ನಾಲ್ಕು ವಿಜಯನಗರ ನಾಣ್ಯಗಳು ಇತ್ತೀಚೆಗೆ ನನ್ನ ಗಮನಕ್ಕೆ ಬಂದವು. ಈ ನಾಲ್ಕೂ ನಾಣ್ಯಗಳು ವಿಜಯನಗರ ಕಾಲಕ್ಕೆ ಸೇರಿದವು ; ಆದರೆ ಯಾವ ರಾಜನದ್ದು ಎಂದು ಹೇಳಲಾಗುವುದಿಲ್ಲ: ಏಕೆಂದರೆ ಅವುಗಳ ಬರಹವನ್ನು ಪೂರ್ಣವಾಗಿ ಓದಲಾಗುತ್ತಿಲ್ಲ. ಬಹುಶಃ ಇವು ಇಮ್ಮಡಿ ದೇವರಾಯನಿಗೆ ಅಥವಾ ಕೃಷ್ಣದೇವ ರಾಯನಿಗೆ ಸೇರಿದ್ದೆಂದು ಭಾವಿಸಬಹುದು. ಈ ನಾಣ್ಯಗಳ ಮುಮ್ಮುಖದಲ್ಲಿ ವೀಣೆಯನ್ನು ನುಡಿಸುತ್ತಿರುವ ದೇವತೆಯ ಚಿತ್ರವಿದೆ. ಆಕೆಯು ಕಿರೀಟಧಾರಿ ಯಾಗಿದ್ದಾಳೆ. ಆದುದರಿಂದ ಈ ಚಿತ್ರ ಸರಸ್ವತಿಯೆಂದು ಸುಲಭವಾಗಿ ತೀರ್ಮಾನಿಸ ಬಹುದು. ಇದುವರೆಗೆ ಬ್ರಹ್ಮ-ಸರಸ್ವತಿಯರ ನಾಣ್ಯಗಳು ದೊರಕಿದ್ದವು. ಈಗ ಕೇವಲ ಸರಸ್ವತಿಯ ಚಿತ್ರವಿರುವ ನಾಣ್ಯ ದೊರಕಿರುವುದು ಗಮನಾರ್ಹ ವಾದುದು. ಇದಕ್ಕಿಂತ ಪ್ರಮುಖವಾದುದು ಈ ನಾಣ್ಯಗಳ ಮೇಲಿರುವ ವೀಣೆ. ಈ ನಾಲ್ಕೂ ವೀಣೆಗಳೂ ಒಂದೇ ರೀತಿಯಲ್ಲಿವೆ. ನೀಳವಾದ ಹಾಗೂ ನೆಟ್ಟಗಿರುವ ಕಾಯ ಮತ್ತು ಎರಡು ಬುರುಡೆಗಳು ಎದ್ದುಕಾಣುತ್ತವೆ. ಮೊದಲನೆ

ಯದರಲ್ಲಿ ಮೆಟ್ಟಿಲು ಗಳಿರುವುದು ಕಾಣಬರುತ್ತದೆ. ಈ ರೀತಿಯ ವಿನ್ಯಾಸದ ವೀಣೆಗಳು ವಿಜಯನಗರ ಕಾಲದಲ್ಲಿ ಬಳಕೆಯಲ್ಲಿದ್ದವು ಎಂಬುದು, ಆ ಕಾಲದ ದೇವಾಲಯ ಶಿಲ್ಪಗಳಿಂದ ತಿಳಿದು ಬಂದಿದೆ. ಈ ನಾಣ್ಯಗಳ ಕಾಲ ಸುಮಾರು 1520 ಎಂದು ಭಾವಿಸಲು ಅಡ್ಡಿಯಿಲ್ಲ. ಗೋವಿಂದ ದೀಕ್ಷಿತ ಅಥವಾ ವೆಂಕಟಮಖಿಯಿಂದ ವಿನ್ಯಾಸಗೊಳಿಸಲ್ಪಟ್ಟ ವೀಣೆಯ ಮೂಲರೂಪಕ್ಕಿಂತ ಸ್ವಲ್ಪ ಪ್ರಾಚೀನ ರೂಪವನ್ನು ಈ ವೀಣೆಗಳು ತೋರ್ಪಡಿಸುತ್ತವೆ ಯೆಂದು ಭಾವಿಸಬೇಕಾಗುತ್ತದೆ. ಇದೇ ಈ ನಾಣ್ಯಗಳ ವೈಶಿಷ್ಟ್ಯ.

ಇತ್ತೀಚಿನ ವಿಜಯನಗರ ನಾಣ್ಯಗಳ ಸೇರ್ಪಡೆಯಲ್ಲಿ ಗಮನಿಸಬೇಕಾದವು ಮಲ್ಲಿಕಾರ್ಜುನನ ನಂದಿನಮೂನೆಯ ಬೆಳ್ಳಿ ನಾಣ್ಯ. ಇನ್ನೊಂದು ಮುಖ್ಯ ನಾಣ್ಯವನ್ನು ಇಲ್ಲಿ ಪ್ರಸ್ತಾಪಿಸಬಹುದು. ಇದು ತಾಮ್ರದ ನಾಣ್ಯ; ತೂಕ 55 ಗ್ರೇನ್ ; ಅಗಲ 0.7"

ಮುಮ್ಮುಖ : ಸ್ತ್ರೀ ದೇವತೆಯ ಚಿತ್ರ : ಕೆಳಗೆ ಪಂಪಾ ಎನ್ನುವ ನಾಗರೀ ಬರಹ

ಹಿಮ್ಮುಖ : ಮೂರು ಸಾಲುಗಳ ನಾಗರೀ ಬರಹ ಮಲ್ಲಿ / ಕಾರ್ಜುನ/ ರಾಯ.

ಪಂಪಾ ಎನ್ನುವ ಬರಹವಿರುವುದರಿಂದ, ಇಲ್ಲಿ ಕಾಣಬರುವ ಸ್ತ್ರೀ ದೇವತೆಯನ್ನು ಪಂಪಾದೇವಿ ಎಂದು ಗುರುತಿಸಲಾಗಿದೆ. ಆದುದರಿಂದ ಇದೊಂದು ಗಮನಾರ್ಹ ನಾಣ್ಯ.

ತುಳುವ ಮನೆತನದ ನಾಣ್ಯಗಳನ್ನು ಆರಂಭಿಸಿದವನು ಕೃಷ್ಣದೇವರಾಯ ಎಂದು ಭಾವಿಸಲಾಗಿತ್ತು. ಆದರೆ ಈಗ ಅವನ ಹಿಂದಿನವನಾದ ವೀರನರಸಿಂಹನ ನಾಣ್ಯ ದೊರಕಿದೆ. ಇದರ ಮುಮುಖದಲ್ಲಿ ವೃತ್ತದೊಳಗೆ ಕುಳಿತಿರುವ ನರಸಿಂಹನ ಚಿತ್ರ ಮತ್ತು ಹಿಮ್ಮುಖದಲ್ಲಿ ನರಸಿಂಹ ಎಂಬ ನಾಗರೀ ಬರಹವಿದೆ.

ರಾಮರಾಯನು ನಾಣ್ಯಗಳನ್ನು ಟಂಕಿಸಲಿಲ್ಲವೆಂದು ಭಾವಿಸಲಾಗಿತ್ತು. ಆದರೆ ಇತ್ತೀಚೆಗೆ ರಾಮರಾಯ ವೆಂಕಟಾದ್ರಿ ಎಂಬ ಬರಹವುಳ್ಳ ನಾಣ್ಯಗಳು ದೊರಕಿದ್ದು ಕುತೂಹಲ ಉಂಟು ಮಾಡಿವೆ. ಈ ನಾಣ್ಯಗಳನ್ನು ಟಂಕಿಸಿದವನು ವೆಂಕಟಾದ್ರಿ ಎಂದು ಭಾವಿಸಲಾಗಿದೆ. ವಿಜಯನಗರ ನಾಣ್ಯಗಳಲ್ಲಿ ಹಿಂದೂ ಧರ್ಮದ ದೇವ-ದೇವತೆಗಳ ಚಿತ್ರವಿರುವುದು ಸರ್ವವಿದಿತ. ಆದರೆ ಇವುಗಳಲ್ಲಿ ಗಣೇಶನ ಚಿತ್ರವಿರುವ ನಾಣ್ಯಗಳು ದೊರೆಯದೇ ಇದ್ದುದು ಸೋಜಿಗವೆನಿಸಿತ್ತು. ಅನೇಕ ವಿಜಯನಗರ ಶಾಸನಗಳು ಶ್ರೀ ಗಣೇಶಾಯ ನಮಃ ಎನ್ನುವ ಬರಹದಿಂದ ಪ್ರಾರಂಭವಾಗುತ್ತವೆ. ಅದೇ ರೀತಿ ಯಲ್ಲಿ ವಿವಿಧ ಗಾತ್ರದ ಗಣೇಶನ ಶಿಲ್ಪಗಳು ವಿಜಯನಗರದಲ್ಲಿ ಸಾಕಷ್ಟು ದೊರಕಿವೆ. ಈ ಹಿನ್ನೆಲೆಯಲ್ಲಿ ಡಾ. ಆರ್. ಗೋಪಾಲ್ ಅವರು ಪತ್ತೆ ಮಾಡಿರುವ ಗಣೇಶನ ನಾಣ್ಯ ವಿಜಯನಗರ ನಾಣ್ಯಗಳಿಗೆ ತುಂಬ ಆಸಕ್ತಿಕರ ಸೇರ್ಪಡೆ.

ನಾನು ಇದುವರೆವಿಗೆ ವಿಜಯನಗರದ ನಾಣ್ಯ ಮತ್ತು ನಾಣ್ಯ ಪದ್ಧತಿಯ ಬಗೆಗೆ ಇತ್ತೀಚಿನ ಕೆಲವು ಪ್ರಮುಖ ಸಂಶೋಧನೆಗಳ ಬಗೆಗೆ ಮಾತ್ರ ನಿಮ್ಮ ಗಮನವನ್ನು

ಸೆಳೆದಿದ್ದೇನೆ. ನೀವು ಕ್ಷೇತ್ರ ಕಾರ್ಯ ಮಾಡುವಾಗ ಹಳ್ಳಿಗಳಲ್ಲಿ ಮತ್ತು ಇತರ ಕಡೆಗಳಲ್ಲಿರಬಹುದಾದ ನಾಣ್ಯ ಸಂಗ್ರಹಕಾರರಲ್ಲಿರುವ ನಾಣ್ಯಗಳನ್ನು ಪರೀಕ್ಷಿಸಿ, ಹೊಸ ನಮೂನೆಯ ನಾಣ್ಯಗಳನ್ನು ಇತಿಹಾಸಕಾರರ ಗಮನಕ್ಕೆ ತರಬೇಕೆಂದು ವಿನಂತಿಸಿ ಕೊಳ್ಳುತ್ತೇನೆ.

ಇನ್ನು ವಿಜಯನಗರ ಇತಿಹಾಸದ ಇತರ ವಿಷಯಗಳತ್ತ ಗಮನಹರಿಸಬಹುದು. ಅರ್ಧ ಶತಮಾನಗಳಿಂತಲೂ ಹೆಚ್ಚಿನ ಕಾಲದಿಂದ ವಿಜಯನಗರ ಸಾಮ್ರಾಜ್ಯದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದ ಬಗೆಗೆ ವಿದ್ವಾಂಸರು ಸಂಶೋಧನೆ ಮಾಡಿ ಪುಸ್ತಕಗಳನ್ನು ಮತ್ತು ಬಿಡಿ ಲೇಖನಗಳನ್ನು ಬರೆಯುತ್ತ ಬಂದಿದ್ದಾರೆ. ಈ ಎಲ್ಲ ಬರಹಗಳನ್ನೂ ಸ್ಥೂಲವಾಗಿ ಎರಡು ಭಾಗಗಳಾಗಿ ವಿಂಗಡಿಸಬಹುದು. ವಿಜಯನಗರ ಸಾಮ್ರಾಜ್ಯ ಭಾರತೀಯ ಇತಿಹಾಸದಲ್ಲಿ ಅತ್ಯುನ್ನತ ಸಾಮ್ರಾಜ್ಯ ; ಧರ್ಮವೇ ಮೂರ್ತಿ ವೆತ್ತಂತೆ ಇದ್ದ ಸಾಮ್ರಾಜ್ಯ : ದಕ್ಷಿಣ ಭಾರತ ಕಾಣದೇ ಇದ್ದ ರಾಜಕೀಯ ಮತ್ತು ಸಾಂಸ್ಕೃತಿಕ ಔನ್ನತ್ಯವನ್ನು ಈ ಸಾಮ್ರಾಜ್ಯ ಸಾಧಿಸಿತು ಇತ್ಯಾದಿ ಉತ್ಪ್ರೇಕ್ಷೆಯ ಹೇಳಿಕೆ ಗಳನ್ನೊಳಗೊಂಡ ಇತಿಹಾಸ ಮೊದಲನೆಯ ಗುಂಪಿಗೆ ಸೇರುತ್ತದೆ. ವಿಜಯನಗರ ವೈಭವವೆಲ್ಲವೂ ಮೇಲ್ನೋಟಕ್ಕೆ ತೋರಿಬರುವ ವಿಷಯಗಳೇ ಹೊರತು, ಮಹತ್ವ ಈ ಸಾಮ್ರಾಜ್ಯದಲ್ಲಿರಲಿಲ್ಲ. ಅಂತರ್ಯ ತೀರ ಜಾಳು - ಜಾಳಾಗಿತ್ತು. ಅನೇಕ ಸಾಮಾಜಿಕ ಪಿಡುಗುಗಳ ತವರುಮನೆಯಾಗಿತ್ತು ವಿಜಯನಗರ. ಅಸಹ್ಯಕರ ಅಂತಃಪುರ ಜೀವನ, ವೇಶ್ಯಾಪದ್ಧತಿ, ಗುಲಾಮಗಿರಿ, ಜಾತೀಯತೆ ಈ ಸಾಮ್ರಾಜ್ಯದಲ್ಲಿ ತುಂಬಿ ತುಳುಕುತ್ತಿತ್ತು. ವಿದೇಶೀಯ ಯಾತ್ರಿಕರು ಬರೆದ ಹೊಗಳಿಕೆಯ ಹಾಗೂ ಮೆಚ್ಚಿಗೆಯ ಮಾತುಗಳಿಗೆ ಹೆಚ್ಚಿನ ಮಹತ್ವ ನೀಡ ಬೇಕಾದುದಿಲ್ಲ. ಏಕೆಂದರೆ ಅವರೆಲ್ಲರನ್ನೂ ದೊರೆಗಳು ಚೆನ್ನಾಗಿ ನೋಡಿಕೊಂಡು, ಭೋಗದಲ್ಲಿ ಅವರನ್ನು ಇಟ್ಟಿದ್ದರು. ಆದುದರಿಂದ ಅವರು ವಂಧಿ ಮಾಗಧರಂತೆ ವರ್ಣಿಸಿದರು, ಇತ್ಯಾದಿ ಬರಹಗಳು ಎರಡನೆಯ ಗುಂಪಿಗೆ ಸೇರಿದವು. ಈ ಎರಡು ಪರಸ್ಪರ ವಿರೋಧಾತ್ಮಕವಾದ ವಿಜಯನಗರದ ಇತಿಹಾಸವನ್ನು ಗಮನಿಸಿದ ಸಾಮಾನ್ಯ ಓದುಗ, ಗೊಂದಲಕ್ಕೊಳಗಾಗಿ ಇತಿಹಾಸದ ಬಗೆಗೆ, ಇತಿಹಾಸಕಾರರ ಬಗ್ಗೆ ಜುಗುಪ್ಸೆ ಮತ್ತು ತಾತ್ಸಾರ ಭಾವವನ್ನು ತಾಳುತ್ತಿದ್ದರೆ ಅವನದೇನೂ ತಪ್ಪಿಲ್ಲ. ನಮ್ಮ ಸಿದ್ಧಾಂತಕ್ಕೆ ತಕ್ಕಂತೆ ಇತಿಹಾಸವನ್ನು ರಚಿಸುವ ಅನಿಷ್ಟ ಪದ್ಧತಿಯನ್ನು ನಾವು ಕೈ ಬಿಡುವವರೆಗೆ, ಇತಿಹಾಸಕ್ಕಾಗಲೀ ಇತಿಹಾಸಕಾರನಿಗಾಗಲೀ ಗೌರವ ದೊರೆಯುವುದಿಲ್ಲ.

ಈ ಎರಡು ಉತ್ತರ ದಕ್ಷಿಣ ಧ್ರುವಗಳಂತಿರುವ ಇತಿಹಾಸವನ್ನು ಬಿಟ್ಟು, ವಸ್ತುನಿಷ್ಠ ಇತಿಹಾಸವನ್ನು ರಚಿಸಬೇಕಾದುದು ನಮ್ಮೆಲ್ಲರ ಕರ್ತವ್ಯ. ಎಲ್ಲ ಕಾಲದ ಇತಿಹಾಸ ಗಳಿಗಿಂತಲೂ, ವಿಜಯನಗರ ಇತಿಹಾಸಕ್ಕೆ ಈ ಮಾತು ಪೂರ್ಣವಾಗಿ ಅನ್ವಯಿಸುತ್ತವೆ. ಈ ದೃಷ್ಟಿಯಿಂದ ವಿಜಯನಗರದ ವಸ್ತುನಿಷ್ಠ ಇತಿಹಾಸ ಇನ್ನೂ ರಚನೆಯಾಗಬೇಕಾಗಿದೆ.

ದಶಕಗಳ ಹಿಂದೆ ರಚಿತವಾದ ಟಿ.ವಿ. ಮಹಾಲಿಂಗಂ ಅವರ ಗ್ರಂಥಗಳೆ ಇಂದಿಗೂ ಉಪಯೋಗದಲ್ಲಿದೆ. ಇತ್ತೀಚೆಗೆ ನೂರಾರು ಶಾಸನಗಳು ದೊರಕಿವೆ ; ಹತ್ತಾರು ನಾಣ್ಯಗಳು ದೊರಕಿವೆ. ಇವುಗಳ ಉಪಯೋಗವನ್ನು ಪಡೆದುಕೊಂಡು ಹೊಸ ಗ್ರಂಥಗಳನ್ನು ರಚಿಸುವ ಅವಶ್ಯಕತೆ ಜಾಸ್ತಿಯಾಗಿದೆ. ಇತಿಹಾಸವು ಆಗಾಗ್ಗೆ ಪುನಾರಚಿತವಾಗಬೇಕು ಎನ್ನುವ ಮಾತು ವಿಜಯನಗರ ಇತಿಹಾಸ ರಚನೆಗೆ ಹೆಚ್ಚು ಅನ್ವಯಿಸುತ್ತದೆ ಎಂಬುದನ್ನು ಮರೆಯುವಂತಿಲ್ಲ.

ವಿಜಯನಗರ ವಾಸ್ತು ಶಿಲ್ಪ ಕೃತಿಗಳು ಶ್ರೀಮಂತವಾಗಿದ್ದು, ದಕ್ಷಿಣ ಭಾರತ ಇತಿಹಾಸದಲ್ಲಿ ಮಾತ್ರವಲ್ಲದೆ ಭಾರತೀಯ ಕಲಾ ಇತಿಹಾಸದಲ್ಲೇ ಪ್ರಮುಖ ಸ್ಥಾನದಲ್ಲಿದೆ ಎಂದು ಎಲ್ಲರೂ ಒಪ್ಪುತ್ತಾರೆ. ಆದರೆ ಪೂರ್ಣವಾದ ಮಾಹಿತಿಗಳನ್ನು ಒಳಗೊಂಡ ವಿಜಯನಗರ ವಾಸ್ತುಶಿಲ್ಪ ಕೃತಿಗಳನ್ನು ವಿವರಿಸುವ ಗ್ರಂಥ ರಚನೆಯಾಗಬೇಕಾಗಿದೆ. ಒಂದು ಸಣ್ಣ ಮನೆತನವಾದ ಚೋಳರ ವಾಸ್ತು ಶಿಲ್ಪಗಳನ್ನು ಕುರಿತು ಎಸ್.ಆರ್. ಬಾಲಸುಬ್ರಹ್ಮಣ್ಯಂ ಮೂರು ಭಾಗಗಳಲ್ಲಿ ವಿವರಿಸಿದ್ದಾರೆ. ಅದೇ ರೀತಿಯಲ್ಲಿ ವಿಜಯನಗರ ವಾಸ್ತು ಶಿಲ್ಪ ಕೃತಿಗಳನ್ನು ರಚಿಸಿದರೆ ಕೊನೆಯ ಪಕ್ಷ ಆರು ಸಂಪುಟಗಳಿಗಾಗುವಷ್ಟು ಸಾಮಗ್ರಿಯಿದೆ ಎನ್ನುವುದನ್ನು ಮರೆಯುವಂತಿಲ್ಲ.

ವಿಜಯನಗರ ಸಾಮ್ರಾಜ್ಯದ ಬಗೆಗೆ ಸಾಕಷ್ಟು ಸಣ್ಣ ಪುಟ್ಟ ಗ್ರಂಥಗಳು ಮತ್ತು ಬಿಡಿ ಲೇಖನಗಳು ಇವೆಯೆಂದು ಯಾರಿಗಾದರೂ ಭಾವನೆ ಬರಬಹುದು. ಒಂದು ಅರ್ಥದಲ್ಲಿ ಅದು ನಿಜವೇ ಇರಬಹುದು. ಆದರೆ ಇದು ವ್ಯವಸ್ಥಿತವಾದ ಅಧ್ಯಯನವಲ್ಲವೆಂಬುದನ್ನು ಯಾರೂ ಅಲ್ಲಗಳೆಯಲಾರರು. ವೈಯಕ್ತಿಕವಾಗಿ ವಿದ್ವಾಂಸರು ಹಾಗೂ ಸಂಶೋಧಕರು ತಮಗೆ ಇಷ್ಟವಾದ ವಿಷಯವನ್ನು ಕುರಿತು ಬರೆಯುವುದು ಅಪೇಕ್ಷಣೀಯವಾದರೂ ಸಮಗ್ರ ಚಿತ್ರಣದಲ್ಲಿ ಆ ಲೇಖನಕ್ಕೆ ತೀರ ಮಿತವಾದ ವ್ಯಾಪ್ತಿ ಇರುತ್ತದೆ ; ಹಾಗಾಗಿ ಎಂತಹ ಒಳ್ಳೆಯ ಲೇಖನವಾದರೂ ಓದುಗರ ಮೇಲೆ ಮತ್ತು ಸಮಗ್ರ ಇತಿಹಾಸದ ಮೇಲೆ ಪರಿಣಾಮಕಾರಿಯಾದ ಪ್ರಭಾವವನ್ನು ಬೀರುವುದಿಲ್ಲ.

ಆದುದರಿಂದ ಇಂದು ನಮಗೆ ತೀರ ಅವಶ್ಯಕವಾಗಿ ಬೇಕಾಗಿರುವುದು ವಿಜಯನಗರವನ್ನು ಕುರಿತಾದ ಸಮಗ್ರ ಅಧ್ಯಯನದ ವ್ಯವಸ್ಥಿತ ಯೋಜನೆ. ಸುಮಾರು ಇಪ್ಪತ್ತು - ಇಪ್ಪತ್ತೈದು ಸಂಪುಟಗಳಲ್ಲಿ ವಿಜಯನಗರವನ್ನು ಕುರಿತಾದ ಎಲ್ಲ ವಿಷಯಗಳನ್ನು ಒಳಗೊಂಡ ವಿಶ್ವಕೋಶದಂತಹ ಸಂಪುಟ ರಚನೆಗೆ ಚಾಲನೆ ನೀಡಬೇಕು. ಸನ್ಮಾನ್ಯ ಶ್ರೀ ಎಂ.ಪಿ. ಪ್ರಕಾಶ್ ಅವರ ನೇತೃತ್ವದಲ್ಲಿ, ಶ್ರೀ ವಿಠಲಮೂರ್ತಿಯವರ ಸಹಭಾಗಿತ್ವದೊಂದಿಗೆ ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯ ಇಲಾಖೆಯ ಆಶ್ರಯದಲ್ಲಿ ವಿಜಯನಗರ ಸಮಗ್ರ ಅಧ್ಯಯನ / ಸಂಶೋಧನ ಕೇಂದ್ರ ಸ್ಥಾಪನೆಯಾಗಬೇಕು. ಇದು ಸ್ಥಾವರವಾಗದೆ ಜಂಗಮವಾಗಿರಬೇಕು. ಹಿರಿಯ ಕಿರಿಯ ವಿದ್ವಾಂಸರನ್ನು, ಯುವ ಸಂಶೋಧಕ

ರನ್ನು ಕೂಡಿಸಿಕೊಂಡು, ಅವರವರ ಪರಿಣತಿಗೆ ತಕ್ಕಂತೆ ವಿಷಯಗಳನ್ನು ಅವರಿಗೆ ನೀಡಿ, ಕ್ಷೇತ್ರ ಕಾರ್ಯದ ವಿಷಯಗಳಾದರೆ, ಅದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಿ, ಇಂತಹ ಸಂಪುಟಗಳನ್ನು ಬರೆಸಬೇಕು. ಖಂಡಿತವಾಗಿ ಇದು ಅಂತರ್ ಶಿಸ್ತೀಯ ಅಧ್ಯಯನ ವಾಗಬೇಕು. ಇತಿಹಾಸಕಾರರಿಗೆ ಹೆಚ್ಚಿನ ಪಾಲು ದೊರಕಿದರೂ, ಇಲ್ಲಿ ಸಂಸ್ಕೃತ, ತೆಲುಗು, ತಮಿಳು, ಮಲಯಾಳಂ, ಪರ್ಷಿಯನ್ ಬಲ್ಲ ವಿದ್ವಾಂಸರಿಗೂ, ಭೂಗೋಳ, ಮಾನವಿಕ ಶಾಸ್ತ್ರ, ವಿಜ್ಞಾನ, ಶಾಸನ ಶಾಸ್ತ್ರ, ನಾಣ್ಯ ಶಾಸ್ತ್ರ, ಸಮಾಜ ವಿಜ್ಞಾನಗಳು, ಸಂಗೀತ ಶಾಸ್ತ್ರ, ಮುಂತಾದ ಎಲ್ಲ ವಿಷಯಗಳನ್ನೂ ಪ್ರತಿನಿಧಿಸುವಂತಹ ಪರಿಣತರಿಗೆ ಅವಕಾಶವಿರಬೇಕು. ಇಂಗ್ಲಿಷಿನಲ್ಲಿ ಹೇಳುವ ಹಾಗೆ ವಿಜಯನಗರಕ್ಕೆ ಸಂಬಂಧಿಸಿದ 'ಎ ಟು ಜಡ್' ಈ ಸಂಪುಟಗಳಲ್ಲಿರಬೇಕು. ಇದನ್ನು ಒಂದು ಕಾಲಮಿತಿಯಲ್ಲಿ ರಚಿಸಲು ನಿರ್ದೇಶನ ನೀಡಬೇಕು.

ಇದರಲ್ಲಿ ವಿಜಯನಗರ ಇತಿಹಾಸ ರಚನೆಯ ಆಕರಗಳನ್ನು ವಿಶದವಾಗಿ ಚರ್ಚಿಸಿ, ಅವುಗಳ ಮೌಲ್ಯಮಾಪನ ಮಾಡಬೇಕು. ಒಳ್ಳೆಯ ಹಾಗೂ ನೈಜ ಆಕರವಾದರೆ, ಒಳ್ಳೆಯ ಇತಿಹಾಸವನ್ನು ರಚಿಸಬಹುದು. ಆದುದರಿಂದ ಇದಕ್ಕೆ ವಿಶೇಷ ಪ್ರಾಮುಖ್ಯ ಕೊಡಬೇಕು. ಎರಡನೆಯದಾಗಿ ಸಮಗ್ರ ರಾಜಕೀಯ ಇತಿಹಾಸವನ್ನು ಖಚಿತತೆಯಿಂದ ರಚಿಸಬೇಕು. ಏಕೆಂದರೆ ರಾಜಕೀಯ ಇತಿಹಾಸದ ಹಂದರದ ಮೇಲೆ ಸಾಂಸ್ಕೃತಿಕ ಇತಿಹಾಸ ರಚನೆ ಸಾಧ್ಯ. ವಿಜಯನಗರ ಕಾಲದ ಆಡಳಿತ ಪದ್ಧತಿಯನ್ನು ವಿಶದವಾಗಿ ಚರ್ಚಿಸಬೇಕು. ಇದರಲ್ಲಿ ಆಡಳಿತಾಂಗದ ಪೂರ್ಣ ವಿವರಗಳು ದೊರೆಯುವಂತೆ ಆಗಬೇಕು. ಸಾಮಾಜಿಕ ಇತಿಹಾಸ ಒಂದು ರಾಜವಂಶಕ್ಕೆ ನೆಲಗಟ್ಟನ್ನು ಒದಗಿಸುತ್ತದೆ. ಇದರಲ್ಲಿ ಸಮಾಜದ ವಿವಿಧ ವರ್ಗಗಳ, ಅಂತಸ್ತಿನವರ, ಮಹಿಳೆಯರ, ಪೂರ್ಣವಿವರಗಳು ದಾಖಲಾಗಬೇಕು. ಸಮಗ್ರವಾದ ಆರ್ಥಿಕ ಸ್ಥಿತಿಗತಿಗಳ ಚಿತ್ರಣವನ್ನು ಪ್ರತ್ಯೇಕವಾಗಿ ವಿಮರ್ಶಿಸಬೇಕು. ಆ ಕಾಲದ ಧಾರ್ಮಿಕ ಪರಿಸ್ಥಿತಿಗಳನ್ನು ಅಧ್ಯಯನ ಮಾಡುವಾಗ ಶಾಸನಗಳು ಹಾಗೂ ನಾಣ್ಯಗಳು ಸಹಾಯಕ್ಕೆ ಬರುತ್ತವೆ. ವಿವಿಧ ಧರ್ಮಗಳ ಸಾಮರಸ್ಯ ಅಥವಾ ಭೇದಗಳು ದಾಕ್ಷಿಣ್ಯವಿಲ್ಲದೆ ದಾಖಲಾಗ ಬೇಕು. ಈ ಕಾಲದಲ್ಲಿ ರಚಿತವಾದ ತಮಿಳು, ಕನ್ನಡ, ತೆಲುಗು, ಸಂಸ್ಕೃತ ಮತ್ತು ಇತರ ಭಾಷೆಯ ಕೃತಿಗಳ ಪೂರ್ಣ ವಿಮರ್ಶೆ ನಡೆದು ಈ ಕಾಲದ ಕೊಡುಗೆ ಏನೆಂಬುದನ್ನು ನಿರ್ಧರಿಸಬೇಕು. ಕೊನೆಗೆ ವಿಜಯನಗರ ಕಾಲದ ವಾಸ್ತುಶಿಲ್ಪ ಕೃತಿಗಳ ಸಂಪೂರ್ಣ ಅಧ್ಯಯನ ನಡೆಯಬೇಕು. ಇದರಲ್ಲಿ ಕೇವಲ ಪ್ರಮುಖ ದೇವಾಲಯಗಳ ಅಧ್ಯಯನ ಸಾಲದು ; ಬರುಜುಗಳು, ಬಾವಿಗಳು, ಹೆಬ್ಬಾಗಿಲುಗಳು. ಬಿಡಿ ಶಿಲ್ಪಗಳು, ಗೋಪುರಗಳು ಮುಂತಾದವೆಲ್ಲವೂ ಇದರಲ್ಲಿ ಸೇರಬೇಕು. ಇದರಲ್ಲಿ ಇಡೀ ದಕ್ಷಿಣ ಭಾರತದ ವಿಜಯನಗರ ವಾಸ್ತು ಶಿಲ್ಪ ಕೃತಿಗಳು ಸೇರಬೇಕು. ಸಂಗೀತದ ದೃಷ್ಟಿಯಿಂದ ವಿಜಯನಗರ ಒಂದು ಪ್ರಮುಖ ಕಾಲಘಟ್ಟವೆಂದು ತಿಳಿಯಲಾಗಿದೆ.

ಇದನ್ನು ವಿವರವಾಗಿ ಅಧ್ಯಯನ ಮಾಡಬೇಕು. ನಾಲ್ಕಾರು ಸಂಪುಟಗಳಲ್ಲಿ ವಿಜಯ ನಗರದ ಎಲ್ಲ ಭಾಷೆಯ ಶಾಸನಗಳ ಪಾಠ, ಅನುವಾದ, ಟಿಪ್ಪಣಿಗಳು ವಿದ್ವಾಂಸರಿಗೆ ದೊರೆಯುವಂತೆ ಆಗಬೇಕು. ವಿಜಯನಗರ ನಾಣ್ಯಗಳು ದೆಹಲಿ, ಲಂಡನ್, ಹೈದರಾ ಬಾದ್, ಚೆನ್ನೈ ಮುಂತಾದ ಸಂಗ್ರಹಾಲಯಗಳಲ್ಲಿ ಹಾಗೂ ನಾಣ್ಯ ಸಂಗ್ರಹಕಾರರಲ್ಲಿ ಚದುರಿಹೋಗಿವೆ. ಎಲ್ಲ ವಿವರಗಳನ್ನೂ ಒಳಗೊಂಡ ವಿಜಯನಗರ ನಾಣ್ಯಯಾದಿ ಯನ್ನು ತಯಾರಿಸಬೇಕು. ಹೀಗೆ ವ್ಯವಸ್ಥಿತ ಅಧ್ಯಯನದ ಯೋಜನೆಯನ್ನು ಹಾಕಿಕೊಂಡು ನಾಲ್ಕಾರು ವರ್ಷ ಕಾರ್ಯ ಪ್ರವೃತ್ತರಾದರೆ, ಇಂದಲ್ಲ - ನಾಳೆ ವಿಜಯ ನಗರ ಇತಿಹಾಸದ ಅಧಿಕೃತ ಸಂಪುಟಗಳು ತಯಾರಾಗಿ, ಕರ್ನಾಟಕದ ಇತಿಹಾಸಕ್ಕೆ ಉತ್ತಮ ಕೊಡುಗೆ ಯಾಗಬಲ್ಲದು. ಇದನ್ನು ಆರಂಭಿಸಲು ಸುವರ್ಣ ಕರ್ನಾಟಕದ ವರ್ಷಕ್ಕಿಂತ ಬೇರೆ ಸುಮುಹೂರ್ತವಿಲ್ಲವೆಂದು ನಾನು ಅಂದು ಕೊಂಡಿದ್ದೇನೆ.

ಇದನ್ನು ಆಗಗೊಳಿಸಬೇಕೆಂದು ವಿರೂಪಾಕ್ಷ ಪಂಪಾಪತಿಯನ್ನು ನಿಮ್ಮೆಲ್ಲರ ಪರವಾಗಿ, ನನ್ನ ಪರವಾಗಿ, ಸಮಸ್ತ ಕನ್ನಡಿಗರೆಲ್ಲರ ಪರವಾಗಿ ಪ್ರಾರ್ಥಿಸುತ್ತೇನೆ. ನಿಮಗೆಲ್ಲರಿಗೂ ಸುವರ್ಣ ಕರ್ನಾಟಕದ ಶುಭಾಶಯಗಳು ಮತ್ತು ನಮಸ್ಕಾರಗಳು.


೧. ಹಂಪಿ ಪರಿಸರದ ಅಪ್ರಕಟಿತ ಶಾಸನಗಳು

ಡಾ. ಡಿ.ವಿ.ಪರಮಶಿವಮೂರ್ತಿ

ಹಂಪಿ ಪರಿಸರದಲ್ಲಿ ಕ್ಷೇತ್ರ ಕಾರ್ಯ ಕೈಗೊಂಡಾಗ ನನಗೆ ಕಂಡುಬಂದ ಕೆಲವು ಅಪ್ರಕಟಿತ ಶಾಸನಗಳನ್ನು ಕುರಿತು ಇಲ್ಲಿ ಮಂಡಿಸಲಾಗಿದೆ. ಹಂಪಿ ಪ್ರದೇಶದಲ್ಲಿ ಮತ್ತು ಸುತ್ತ ಮುತ್ತಲಿನ ಪ್ರದೇಶದಲ್ಲಿ ಹೊಸ ಹೊಸ ಶಾಸನಗಳು ಕಂಡುಬರುತ್ತಲೇ ಇವೆ. ನನ್ನ ಕ್ಷೇತ್ರಕಾರ್ಯ ಸಮಯದಲ್ಲಿ ಹಂಪಿ, ತೆಕ್ಕಲಕೋಟೆ, ಕಮಲಾಪುರ, ಶಿವಪುರ ಮತ್ತು ಹೊಸೂರಿನ ಸ್ಥಳಗಳಲ್ಲಿ ಕಂಡುಬಂದ ಕೆಲವು ಅಪ್ರಕಟಿತ ಶಾಸನಗಳು ಈ ಕೆಳಕಂಡಂತಿವೆ. ಬಿಡಿ ಬಿಡಿಯಾಗಿ ದೊರೆತಿರುವ ಇಲ್ಲಿನ ಎಲ್ಲಾ ಶಾಸನಗಳೂ ವಿಜಯನಗರ ಅರಸರಿಗೆ ಸಂಬಂಧಿಸಿದ ಶಾಸನಗಳೇ ಆಗಿವೆ. ಇವುಗಳಲ್ಲಿ ಎರಡು ಶಾಸನಗಳು ಇಮ್ಮಡಿ ಹರಿಹರನವು. ಮೂರು ಕೃಷ್ಣದೇವರಾಯನವು, ಒಂದು ಚಿಕ್ಕತಿಮ್ಮರಾಜು ಅರಸನದ್ದು ಮತ್ತು ಮಿಕ್ಕವು ಕ್ರಿ.ಶ.೧೬ ಅಥವಾ ೧೭ನೇ ಶತಮಾನಕ್ಕೆ ಸೇರಿದ ಶಾಸನಗಳಾಗಿವೆ.

1. ಹೊಸೂರುಗಡ್ಡಿ ಶಾಸನ (ಕ್ರಿ.ಶ. ೧೪೦೪)

ಈ ಶಾಸನವು ಹೊಸೂರಿನ ಗಡ್ಡಿಯಲ್ಲಿರುವ ಪಾಳು ಈಶ್ವರ ಗುಡಿಯಲ್ಲಿ ಒಳ ಭಾಗದ ಗೋಡೆಯ ಮೇಲಿದೆ. ಐದು ಸಾಲಿನಲ್ಲಿರುವ ಈ ಶಾಸನವು ಸುಂದರವಾದ ಲಿಪಿಯಲ್ಲಿದೆ. ಶಾಸನದಲ್ಲಿ ಕಾಲವನ್ನು 'ಶಾಲಿವಾಹನ ಶಕ ವರುಷ ೧೩೨೫ನೆಯ ತಾರಣ ಸಂವತ್ಸರದ ಕಾರ್ತಿಕ ಶು ೧೫, ಸೋಮವಾರ ದಕ್ಷಿಣಾಯನ' ವೆಂದು ನೀಡಿದೆ. ಇದು ಕ್ರಿ.ಶ.೧೪೦೪. ಅಕ್ಟೋಬರ್ ೧೯, ಸೋಮವಾರಕ್ಕೆ ಸರಿಹೊಂದುತ್ತದೆ. ಈ ಶಾಸನದಲ್ಲಿ ಪ್ರಸನ್ನ ರಾಮೇಶ್ವರ ದೇವರಿಗೆ ದಾನ ನೀಡಿದ ವಿಷಯವಿದೆ. ಆದರೆ ಏನನ್ನು ದಾನ ನೀಡಿದ್ದಾರೆಂಬ ಭಾಗ ಅಳಿಸಿದೆ. ಈ ಶಾಸನದ ಪ್ರಕಾರ ಶಾಸನವಿರುವ ಗುಡಿಯು ಪ್ರಸನ್ನ ರಾಮೇಶ್ವರಗುಡಿ ಎಂಬುದಾಗಿ ತಿಳಿದುಬರುತ್ತದೆ. ಇಮ್ಮಡಿ ಹರಿಹರನ ಅವಧಿಯಲ್ಲಿ ನಿರ್ಮಿಸಿದ್ದಿರಬಹುದಾದ ಈ ಗುಡಿ ಪಶ್ಚಿಮಾಭಿಮುಖವಾಗಿದ್ದು, ತೀರಾ ಸರಳವಾದ ವಾಸ್ತುವಿನಿಂದ ಕೂಡಿದೆ. ಮುಖ ಮಂಟಪ, ನವರಂಗ ಮತ್ತು ಗರ್ಭಗುಡಿಗಳಿರುವ ಈ ಗುಡಿ ತುಂಗಭದ್ರೆಯ ಕವಲು ನೀರಿನ ಹರಿವಿನ ಪಕ್ಕದಲ್ಲಿ ಬಂಡೆಯ ಮೇಲೆ ನಿರ್ಮಿಸಲಾಗಿದೆ. ನಿಧಿಗಳ್ಳರ ಹಾವಳಿಗೆ ತುತ್ತಾಗಿರುವ ಈ ಗುಡಿ ಈಗ ಪಾಳು ಗುಡಿಯಾಗಿದೆ.



ಶಾಸನಪಾಠ

೧. ಶ್ರೀ ಜಯಾಭ್ಯುದಯ ಶಾಲಿವಾಹನ ಶಕ

೨. ವರುಷ ೧೩೨೫ನೆಯ ತಾರಣ ಸಂವ

೩. ತ್ಸರದ ಕಾರ್ತಿಕ ಶು ೧೫ ಸೋ ದಕ್ಷಿಣಾ


೪. ಯನದಲು ಶ್ರೀಮತು ಪ್ರಸಂನ ರಾಮೇಶ್ವರ

೫. ದೇವರಿಗೆ ಕೊಟ್ಟ ಪಗೊ... ಯದ ಶಾಸನ||

2. ಹೊಸೂರು ಗಡ್ಡಿಯ ಎರಡನೆ ಶಾಸನ (ಕ್ರಿ.ಶ. ೧೪೦೬)

ಈ ಶಾಸನವು ಹಿಂದಿನ ಶಾಸನ ದೊರಕಿರುವ ಪಾಳು ಈಶ್ವರ ಗುಡಿಯ ಮುಂಭಾಗ ದಲ್ಲಿ ಬಂಡೆಯ ಮೇಲೆ ಕೆತ್ತಲಾಗಿದೆ. ಇದು ನೆಲ ಮಟ್ಟದ ಬಂಡೆಯಾದ್ದರಿಂದ ಜನರು ಓಡಾಡಿ ಶಾಸನವು ಬಹುಶಃ ಸವೆದುಹೋಗಿದೆ. ನಾಗರಿ ಲಿಪಿಯಲ್ಲಿರುವ ಈ ಶಾಸನವು ಕನ್ನಡ ಭಾಷೆಯಲ್ಲಿದೆ. ಶಾಸನವು ಒಟ್ಟು ಹದಿನೆಂಟು ಸಾಲುಗಳಿಂದ ಕೂಡಿದ್ದು, ಆರಂಭದ ಸಾಲುಗಳನ್ನು ಮಾತ್ರ ಗುರುತಿಸಬಹುದಾಗಿದೆ. ಶ್ರೀಹರಿ ಶ್ರೀಹರ ಎಂದು ಪ್ರಾರಂಭವಾಗಿರುವ ಈ ಶಾಸನವು ಹರಿ-ಹರನನ್ನು ಸಮಾನವಾಗಿ ಅಂದರೆ ಶೈವ -ವೈಧಿಕ ಧರ್ಮ ಸಮನ್ವಯವನ್ನು ಸೂಚಿಸುವ ಶಾಸನವಾಗಿದೆ. ಶಾಸನದಲ್ಲಿ ಕಾಲವನ್ನು 'ಶಾಲಿವಾಹನ ಶಕ ವರ್ಷದ ೧೩೨೮ನೆಯ ವ್ಯಯ ಸಂವತ್ಸರದ ಚೈತ್ರ ಶುದ್ಧ ಆದಿವಾರ' ಎಂದು ನೀಡಿದೆ. ಇದು ಕ್ರಿ. ಶ. ೧೪೦೬, ಮಾರ್ಚ್ ೨೧, ಭಾನುವಾರಕ್ಕೆ ಸರಿಹೊಂದು ತ್ತದೆ. ಈ ಅವಧಿಯಲ್ಲಿ ಇಮ್ಮಡಿ ಬುಕ್ಕನು ವಿಜಯನಗರದ ಅರಸನಾಗಿದ್ದನು. ಕಾಶ್ಯಪ

ಗೋತ್ರದ ಮಲ್ಲಿಭಟ್ಟನೆಂಬುವನು ರಾಮೇಶ್ವರ ದೇವರ ನಂದಾದೀಪಕ್ಕಾಗಿ ಏನನ್ನೋ ದಾನ ನೀಡಿದ ವಿಷಯವಿದೆ. ಶಾಸನದ ಮುಂದಿನ ಭಾಗ ಪೂರ್ಣ ಸವೆದಿರುವುದರಿಂದ ಹೆಚ್ಚಿನ ವಿಷಯ ತಿಳಿಯದಾಗಿದೆ.



ಈ ಮೇಲಿನ ಎರಡೂ ಶಾಸನಗಳ ಆಧಾರದಿಂದ ಶಾಸನ ದೊರಕಿರುವ ದೇವಾಲಯವು ಸಂಗಮ ಅರಸರ ಅವಧಿಯದ್ದೆಂದು ಹೇಳಬಹುದಾಗಿದೆ. ಅಲ್ಲದೆ ಈ ಅರಸರ ಅವಧಿಯ ದೇವಾಲಯ ಶೈಲಿಯನ್ನು ಅಧ್ಯಯನ ಮಾಡಲು ಈ ದೇವಾಲಯವು ಒಳ್ಳೆಯ ಉದಾಹರಣೆಯಾಗುತ್ತದೆ. ಹಂಪಿ ಪರಿಸರದ ಹೊರಗೆ ದೊರಕಿರುವ ಸಂಗಮರ ದೊರೆ ಇಮ್ಮಡಿ ಹರಿಹರನ ಅಪರೂಪದ ದೇವಾಲಯ ವಾಗಿಯೂ ಇದು ಮುಖ್ಯವಾಗುತ್ತದೆ. ಈ ಗುಡಿಯಿರುವ ಪರಿಸರದಲ್ಲಿ ಒಟ್ಟು ಐದು ಗುಡಿಗಳಿವೆ. ಎಲ್ಲವೂ ಪಾಳುಗುಡಿಗಳಾಗಿದ್ದು, ಇಲ್ಲಿ ಊರೊಂದು ಇದ್ದ ಲಕ್ಷಣ ಗಳಿವೆ. ಮಳೆಗಾಲದಲ್ಲಿ ನಡುಗಡ್ಡೆಯಂತಾಗುವ ಈ ಪ್ರದೇಶ ಹೆಚ್ಚು ಕಾಲ ನೀರಿನಿಂದ ಆವೃತವಾಗಿರುತ್ತದೆ.


ಶಾಸನಪಾಠ

1. ಶ್ರೀ ಹರಿ ಶ್ರೀ ಹರ
2. ಸ್ವಸ್ತಿ ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರಚಾರವೇ ತ್ರೈಲೋಕ್ಯ ನಗರಾರಂಭ
3. ಮೂಲಸ್ತಂಭಾಯ ಶಂಭವೇ | ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶ

4. ಕ ವರ್ಷದ ೧೩೨೯ ನೆಯ ವ್ಯಯ ಸಂವತ್ಸರದ ಚೈತ್ರ ಶುದ್ಧ ವಾರದಂದು ಶ್ರೀಮತು... ದಯಾ... ಸಂದಾದೀಪಕೆಕಾ ಶ್ಯಪಗೋತ್ರದಾ... ಮಲ್ಲಿಭಟ್ಟ... ರಾಮೇಶ್ವರ ದೇವರು (ಮುಂದಿನ ಭಾಗ ಅಳಿಸಿದೆ)

3. ಹೊಸೂರು ಗಡ್ಡಿ ಮೂರನೇ ಶಾಸನ (ಕ್ರಿ.ಶ.೧೬)

ಈ ಶಾಸನವು ಹೊಸೂರು ಗಡ್ಡಿಯ ಪಾಳು ಮಠದ ಕಂಬದ ಮೇಲೆ ಇದೆ. ಬಲ ಭಾಗದ ಕಂಬದ ಮೇಲಿರುವ ಈ ಶಾಸನವು ಎರಡು ಮುಖಗಳಲ್ಲಿದೆ. ಲಿಪಿಯು ಬಹಳ ಒರಟಾಗಿದ್ದು, ಕ್ರಿ.ಶ. ೧೬ನೇ ಶತಮಾನಕ್ಕೆ ಸೇರಿಸಬಹುದಾಗಿದೆ. ಶಾಸನದಲ್ಲಿ ಕಾಲದ ಭಾಗವು ಸಮರ್ಪಕವಾಗಿ ನಮೂದಾಗಿಲ್ಲ. ಕ್ಷಯನಾಮ ಸಂವತ್ಸರದ ಆಶಾಡ ಎಂದು ಮಾತ್ರ ನೀಡಿದೆ. ಈ ಕಾರಣದಿಂದ ಕಾಲವನ್ನು ನಿಖರವಾಗಿ ಗುರುತಿಸಲು ಸಾಧ್ಯವಿಲ್ಲದಾಗಿದೆ. ಶ್ರೀಗುರುಬಸವಲಿಂಗಾಯ ಎಂದು ಪ್ರಾರಂಭವಾಗುವ ಈ ಶಾಸನವು ಬದನಗಡ್ಡಿ ವಿರಕ್ತಮಠವನ್ನು ಉಲ್ಲೇಖಿಸಿ ಲಿಂಗಮುದ್ರೆಯನ್ನು ಸೂಚಿಸು ತ್ತಿದೆ. ಇದು ವಿರಕ್ತ ಮಠವೆಂದು ಸೂಚಿಸುವ ಉದ್ದೇಶ ಈ ಶಾಸನದ್ದಾಗಿದೆ. ಸ್ಥಳೀಯರ ಹೇಳಿಕೆಯ ಪ್ರಕಾರ ಈ ಮಠದಲ್ಲಿ ಹೀಗೆ ಒಬ್ಬರು ಸನ್ಯಾಸಿ ಸ್ವಾಮಿಗಳಿದ್ದರಂತೆ. ಇವರ ಬಳಿ ಬಹಳ ಸುಂದರವಾದ ಆಕಳುಗಳು ಇದ್ದು, ಸುತ್ತಮುತ್ತಲೆಲ್ಲಾ ಬಹಳ ಹೆಸರು ವಾಸಿಯಾಗಿದ್ದವಂತೆ. ಸ್ವಾಮಿಗಳು ಈ ಆಕಳುಗಳನ್ನು ಬಹಳ ಪ್ರೀತಿ ಯಿಂದ ಸಾಕುತ್ತಿದ್ದರಂತೆ. ಒಂದು ದಿನ ಅಮಾವಾಸ್ಯೆ ಕತ್ತಲಲ್ಲಿ ಸ್ವಾಮಿ ಭಿಕ್ಷಕ್ಕೆ ಊರೊಳಕ್ಕೆ ಹೋಗಿದ್ದಾಗ ಕಳ್ಳರು ಸಮಯ ಸಾಧಿಸಿ ಆಕಳು ಗಳನ್ನು ಕದ್ದೊಯ್ದರಂತೆ. ಇದರಿಂದ ಸ್ವಾಮಿಗಳಿಗೆ ಬಹಳ ನಿರಾಸೆಯಾಗಿ ಊರನ್ನು ಬಿಟ್ಟು ಹೊರಟು ಹೋದ ರಂತೆ. ಮಠದ ಕಟ್ಟಡವು ಬಹಳ ವಿಶಾಲವಾಗಿದ್ದು, ಕಂಬಗಳ ಮೇಲೆ ಯತಿಗಳು, ಭಕ್ತರು ನಮಿಸುತ್ತಿರು ವುದು, ಶಿವಲಿಂಗಗಳ ಚಿತ್ರಗಳು ಮುಂತಾದವುಗಳಿವೆ.



ಶಾಸನಪಾಠ :

1 ಶ್ರೀ ಗುರು ಬಸ
2 ವಲಿಂಗಾಯ
3 O ನಮಃ O
4 ಕ್ಷಯ ನಾಮ
5 ಸಂವಚ
6 ರದ ಆಸಾಡ
7 ಮಾಸದಲು

ಪಕ್ಕದಲ್ಲಿ


8 ಬದನಗಡ್ಡಿ
9 ವಿರತ ಮಟ
10 ಕ್ಕೆ ಲಿಂಗ ಮುದ್ರಿಕಾ
11 ವಿಯನು



ಹೊಸೂರು ಗಡ್ಡಿಯ ಪಾಳು ಈಶ್ವರ ಗುಡಿಯ ಮುಂಭಾಗದಲ್ಲಿ ಒಂದು ಜೊತೆ ಪಾದಗಳು, ಅಕ್ಕಪಕ್ಕ ಸೂರ್ಯ-ಚಂದ್ರರನ್ನು ಚಿತ್ರಿಸಲಾಗಿದೆ. ಇದರ ಬಳಿ ದೊಡ್ಡ ದಾದ ವೃತ್ತವನ್ನು ಮತ್ತು ಕುರ್ಪಿಯನ್ನೂ ಚಿತ್ರಿಸಲಾಗಿದೆ. ಇದು ಏನನ್ನು ಸೂಚಿಸು ತ್ತದೆಯೋ ತಿಳಿಯುವುದಿಲ್ಲ. ಇದರ ಅನತಿ ದೂರ ದಲ್ಲಿ ಬಂಡೆಯಲ್ಲಿ ಎರಡು ಶಿವಲಿಂಗ ಗಳನ್ನು ಮತ್ತು ಅದರ ಪಕ್ಕ ಶ್ರೀ ಎಂಬ ಅಕ್ಷರವನ್ನೂ ಕೆತ್ತಲಾಗಿದೆ.

4. ಹೊಸೂರಮ್ಮ ಗುಡಿಯ ಶಾಸನ (ಕ್ರಿ.ಶ. ೧೫೨೬)

ಇದು ಹೊಸೂರಮ್ಮ ಗುಡಿ ಆವರಣದ ಮಾತಂಗಿ ಗುಡಿಯ ಮುಖಮಂಟಪದ ಕಂಬದ ಮೇಲೆ ಇದೆ. ಇದು ಪೂರ್ಣ ಸುಣ್ಣದಲ್ಲಿ ಮುಚ್ಚಿ ಹೋಗಿತ್ತು. ಸುಣ್ಣವನ್ನು



ಕೆರೆದು ತೆಗೆದಾಗ ಈ ಶಾಸನ ಕಂಡುಬಂದಿತು. ಹತ್ತು ಸಾಲುಗಳ ಈ ಶಾಸನವು ವಿಜಯನಗರದ ದೊರೆ ಕೃಷ್ಣದೇವರಾಯನ ಅವಧಿ ಯದ್ದಾಗಿದೆ. ಶಾಸನದಲ್ಲಿ ಕಾಲ ವನ್ನು ಪಾರ್ಥಿವ ಸಂವತ್ಸರದ ಫಾಲ್ಗುಣ ಬಹುಳ ೧೪ ಮಂಗಳ ವಾರ ಎಂದು ನೀಡಿದೆ. ಇದು ಕ್ರಿ.ಶ. ೧೫೨೬, ಮಾರ್ಚ್ ೧೩, ಮಂಗಳವಾರಕ್ಕೆ ಸರಿಹೊಂದು ತ್ತದೆ. ಮಹಾಮಾಯಿಗೆ ಕಲ್ಲಿನಲ್ಲಿ ಗುಡಿಯನ್ನು ಕಟ್ಟಿಸಿದಂತೆಯೂ, ತಂದೆ-ತಾಯಿಗಳಿಗೆ ಪುಣ್ಯವಾಗಲಿ ಎಂದು ಮಾತಂಗಿ ಅಮ್ಮನ ಗುಡಿ ಮಾಡಿಸಿದಂತೆಯೂ ಉಲ್ಲೇಖ ವಿದೆ. ಅಂದರೆ ಎರಡು ಗುಡಿ ಗಳನ್ನು ಕಟ್ಟಿಸಿದ ಉಲ್ಲೇಖ ಈ ಶಾಸನದಲ್ಲಿದೆ. ನಿರ್ದಿಷ್ಟ ಕಾಲವನ್ನು ಸೂಚಿಸಲು ಕಷ್ಟವಾಗಿರುವ ಹೊಸೂರಮ್ಮನ ಕಾಲವನ್ನು ಈ ಶಾಸನದಿಂದ ನಿರ್ಧರಿಸ ಬಹುದಾಗಿದೆ. ಇದುವರೆಗೂ ಈ ದೇವಾಲಯದಲ್ಲಿ ನಾಲ್ಕು ಶಾಸನಗಳು ಪ್ರಕಟ ವಾಗಿವೆ. ಕೊಪ್ಪಳ ತಾಲ್ಲೂಕಿನ ಕಿಡಿದಾಳ್ ಗ್ರಾಮದಲ್ಲಿ ಈ ಹೊಸೂರಮ್ಮನಿಗೆ ದಾನ ನೀಡಿದ ಶಾಸನವಿದೆ. ಶಾಸನಗಳ ಆಧಾರದಿಂದ ಈ ಗುಡಿಯು ಕೃಷ್ಣದೇವ ರಾಯನ ಅವಧಿಯದ್ದೆಂದು ಹೇಳಬಹುದಾಗಿದೆ. ಗುಡಿಯ ವಾಸ್ತು ಶೈಲಿಯೂ ಇದಕ್ಕೆ ಆಧಾರವಾಗುತ್ತದೆ. ಕ್ರಿ.ಶ. ೧೫೧೩ರಲ್ಲಿ ಈ ಗುಡಿ ನಿರ್ಮಾಣವಾಗಿದೆಯೆಂದು ಹೇಳಬಹುದಾಗಿದೆ. ಶಾಸನಗಳಲ್ಲಿ ಹೊಸೂರಮ್ಮಳನ್ನು ಮಹಾಮಾಯಿ ಎಂದೇ ಕರೆಯಲಾಗಿದೆ. ಕಿಡಿದಾಳಿನ ಶಾಸನದಲ್ಲಿ ಹೊಸೂರು ದೇವತೆಯ ಚಿತ್ರವನ್ನೇ ಬಿಡಿಸಲಾಗಿದೆ.

ಶಾಸನ ಪಾಠ:

1. ಶುಭಮಸ್ತು ಪಾರ್ಥಿವ ಸಂವತ್ಸರ
2. ದ ಫಾಲ್ಗುಣ ಬ ೧೪ ಮಂಗಳ
3. ವಾರದಲಿ ಶ್ರೀ ಮಹಹಂಮಾ
4. ಯಿಗೆ ಶ್ರೀ ಕೃಷ್ಣದೇವರಾಯ ಮಹಾ

5. ರಾಯರು ಕಲ್ಲಿನಲಿ ಉ...ಗಡೆ ದೇ

6. ವಸ್ಥಾನವನು ಕಟಿಸಿದಾ ಪುರದಯಾ ಆ

7. ದೇವರಿಗೆ ಭೂಮಿಯಾ ತಂಮ್ಮ ತಂದೆ ತಾಯಿ

8. ಗಳಿಗೆ ಪುಣ್ಯವಾಗಲೆಂದು ಮಾಡಿಸಿ

9. ದ ಮಾತಂಗಿ ಅಂಮನ ಗು

10. ಡಿ ಮಂಗಳ ಶ್ರೀ ಶ್ರೀ ಶ್ರೀ

5. ಹೊಸೂರಮ್ಮ ಗುಡಿಯ ಎರಡನೆ ಶಾಸನ (ಕ್ರಿ.ಶ. ೧೫೯೦)



ಈ ಶಾಸನವು ಹೊಸೂರಮ್ಮ ಗುಡಿಯ ಮುಂದಿನ ಪಾದಗಟ್ಟೆಯ ತೋರಣ ಕಂಬದ ಮೇಲಿದೆ. ಶಾಸನಕ್ಕೆ ಕೆಂಪು ಬಣ್ಣವನ್ನು ಬಳಿಯಲಾಗಿದೆ. ಶಾಸನವು ಅಲ್ಲಲ್ಲಿ ತ್ರುಟಿತವಾಗಿರುವುದರಿಂದ ಅರ್ಥ ಸ್ಪಷ್ಟವಾಗಿಲ್ಲ. ಶಾಸನದಲ್ಲಿ ಕಾಲದ ಭಾಗವನ್ನು ಶಾಲಿವಾಹನ ಶಕ ೧೫೧೧ ನೆಯ ವಿಕೃತ ಸಂವತ್ಸರದ ವೈಶಾಖ ಬಹುಳ ೧೦ ಎಂದು ನೀಡಿದೆ. ಇದು ಕ್ರಿ.ಶ. ೧೫೯೦, ಮೇ ೧೮, ಸೋಮವಾರಕ್ಕೆ ಸರಿಹೊಂದುತ್ತದೆ. ಹೊಸೂರಮ್ಮನ ಧನಿಕರಾದವರು ಮಾಚಿಗರ ಭೈರನ ಮಗನಾದ ವೆಂಕಟಯ್ಯನಿಗೆ ಗುಡಿಯ ಸೇವೆಗಾಗಿ ದಾನ ನೀಡಿದ ವಿಷಯವಿದೆ.

1 ನಮಸ್ತುಂ

2 ಗ ಸಿರಶ್ಚುಂ

3 ಬಿ | ಚಂದ್ರ


4 ಚಾಮರಚಾರವೇ ತ್ರೈ

5 ಲೋಕ್ಯ ನಗರಾರಂಭ

6 ಮೂಲಸ್ತಂಭಾಯ ಶಂಭವೇ
7 ಸ್ವಸ್ತಿ ಶ್ರೀ ಜಯಾಬ್ಯುದಯ ಶಾಲಿ
8 ವಾಹನ ಶಕ ೧೫೧೧ ನೆಯ ವಿಕ್ರ
9 ತ ಸಂವತ್ಸರ ವೈಶಾಖ ಬ ೧೦
10 ಲು | ಹೊಸೂರಂಮನ ಧನಿ
11 ಕರೂ ಮಾಚಿಗಲ
12 ಭೈಯರ ಗೋನ
13 ಮಗಂ ವೆಂಕಟಯ ನಿ
14 ಗೆ ಧರ್ಮ ಸೇವೆಯ
15 ಮಾಡಬೇಕಾಗಿ ಕೊ
16 ಟ ಮಾನ್ಯ | ಪರಿ
17 ಚಾರಗೆ. ಯಲಿ.
18 ಯ್ಯದ ಮಾನ್ಯ ಕಂ
19 ಯಿಗಲು.. ದೊಳು
20 ಬಿಟ್ಟ ಮಾನ್ಯ ಭೂಮಿ
21 ಗೆ ....ನ
22 ವಧಿಸಿದ...
23 ... ನಾಗೂ...
24 ಸಾ....................
25 ....ದು.....
26 ......ಮಯ್ಯನಹ ಸೂರ್ಯ ಚ
27 ಂದ್ರರುಳ್ಳ ಪರಿಯಂ
28 ತ್ರದಲು ಸಲುಉದು ಮಂ
29 ಗಳ ಮಹಾ ಶ್ರೀ ಶ್ರೀ ಶ್ರೀ

6. ತೆಕ್ಕಲಕೋಟೆ ಶಾಸನ (ಕ್ರಿ. ಶ. ೧೫೧೧)

ಇದು ತೆಕ್ಕಲಕೋಟೆಯ ಬಾಲಕಿಯರ ಪ್ರೌಢಶಾಲೆಯ ಆವರಣದಲ್ಲಿ ಇದೆ. ಇದು ಸಮೀಪದ ಗುಡ್ಡದಲ್ಲಿ ಇತ್ತೆಂದು ಸ್ಥಳೀಯರು ಹೇಳುವರು. ವಿಜಯನಗರದ ಅರಸ ಕೃಷ್ಣದೇವರಾಯನ ಅವಧಿಯ ಈ ಶಾಸನವು ೨೧ ಸಾಲುಗಳನ್ನು ಒಳಗೊಂಡಿದೆ. ಶಾಸನದಲ್ಲಿ ಕಾಲವನ್ನು ಶಾಲಿವಾಹನ ಶಕವರ್ಷ ೧೪೩೩ನೆಯ ಪ್ರಜೋತ್ಪತ್ತಿ ಸಂವತ್ಸರದ ವೈಶಾಖ ಬಹುಳ ೨ ಲೂ ಎಂದು ನೀಡಿದೆ. ಇದು ಕ್ರಿ.ಶ.೧೫೧೧, ಮೇ ೧೯. ಸೋಮವಾರಕ್ಕೆ ಸರಿಹೊಂದುತ್ತದೆ. ಕೃಷ್ಣದೇವರಾಯನ ನಿರೂಪದಿಂದ ಹಸ್ತಿನಾ ವತಿಯ ವೇಂಟೆಗೆ ಸಲುವ ಹೆಕಲಕೋಟೆಯ ಸೀಮೆಗೆ ಸಲ್ಲುವ ಗ್ರಾಮಗಳ ಸುಂಕವನ್ನು ದಾನಬಿಟ್ಟ ವಿಷಯವನ್ನು ಈ ಶಾಸನ ತಿಳಿಸುತ್ತಿದೆ. ದಾನವನ್ನು ನೀಡಿದವನು ಅವನ ಕೈಕೆಳಗಿನ ನಾಯಕನೊಬ್ಬನು ನೀಡಿದ್ದಾನೆ. ಇವನ ಹೆಸರಿನ ಉಲ್ಲೇಖದ ಭಾಗ ಹಾಳಾಗಿರುವುದರಿಂದ ಅವನ ಪೂರ್ಣ ಹೆಸರು ತಿಳಿದುಬರುವುದಿಲ್ಲ.



ಶಾಸನ ಪಾಠ

1. .... ಯಾದ್ಭುದಯ ಶಾಲಿವಾ
2. ಹನ ಶಕವರ್ಷ ೧೪೩೩ ನೆಯ ಪ್ರಜೋತ್ಪ
3. ತಿ ಸಂವತ್ಸ... ವಯಿಶಾಖ ಬ ೨
4. ಲೂ ಶ್ರೀಮ ... ಹಾರಾಧಿರಾಜ
5. ಪರಮೇಶ್ವರ. ರ ಪ್ರತಾಪ ಶ್ರೀ ವೀರಾ

6. ಧಿವೀರ ಶ್ರೀಕೃಷ್ಣದೇ. ಮಹಾರಾಯರ

7. ವೊಡೆಯರ ನಿರೂಪದಿ. | ಹಸ್ತಿನಾವ

8. ತಿಯ ವೇಂಟಕೆ ಸಲುವ ಹೆ...

9. ಟೆಗೆ ಸಲುವ ಗ್ರಾಮಾನು.

10. ಕನಾಯಕರು ಆ ಕೃಷ್ಣರಾಯ.

11. ಹಾರಾಯರಿಗೆ. ಧರ್ಮ್ಮವಾಗಬೇಕೆಂ

12. ದು| ಆ ಹ ಹೆಕಲುಕೋಟೆಯ ಸೀಮೆಗೆ ಸ

13. ಲ್ವ ಗ್ರಾಮಾನುಗ್ರಾಮಗಳಿಗೆ ಸಲುವ ಸುಂ

14. ಕವನು ಬಿಟ ಸಂಮಂದ | ಯೀ ಧರ್ಮ

15. ಕೆ ಆವನಾನೊಬ್ಬನು ತಪ್ಪಿದರೆ | ಧರ್ಮ್ಮ

16. ಹೀನನೂ| ಗೋಹತ್ಯ ಬ್ರಂಹ್ಮತ್ಯ ಪಾಪವ

17. ಮಾಡಿದವರು | ತಮ್ಮ ತಂದೆ ತಾಯವಾ

18. ರಣಾಸಿಯಲು ವಧಿಸಿದವನು ಮ

19. ನೋ ಅಭಿಮಾನವಿಲ್ಲದವನು ಮೆಂ

20. ದು ಬರಸಿದ ಶಾಸನ ಧರ್ಮವೇ ಜಯ

21. ಶುಭಮಸ್ತು ಮಂಗಳ ಮಹಾ ಶ್ರೀ ಶ್ರೀ

ಈ ಶಾಸನದಲ್ಲಿ ಈಗಿನ ತೆಕ್ಕಲಕೋಟೆಯನ್ನು ಹೆಕ್ಕಲು-ಹಕ್ಕಲು ಕೋಟೆ ಎಂದು ಕರೆದಿದೆ.

7. ಸೀತಾರಾಮ ತಾಂಡಾದ ಶಾಸನ (ಕ್ರಿ.ಶ.೧೫೨೭)

ಕಾಮಲಾಪುರದಿಂದ ಸೀತಾರಾಮ ತಾಂಡಾಕ್ಕೆ ಹೋಗುವ ರಸ್ತೆಯ ಬಲ ಬದಿಯಲ್ಲಿ ಉಸ್ಲಮ್ಮನ ಗುಂಡು ಎಂಬ ದೊಡ್ಡ ಬಂಡೆಯಿದೆ. ಈ ಬಂಡೆಯ ಹಿಂಬದಿಯ ಬಂಡೆಗಲ್ಲುಗಳ ಸಮೂಹದ ದೊಡ್ಡದಾದ ಮತ್ತು ನೆತ್ತಿಯ ಭಾಗ ವಿಶಾಲವಾದ ಒಂದು ಬಂಡೆಯ ಮೇಲೆ ಕೃಷ್ಣದೇವರಾಯನ ಅವಧಿಯ ಶಾಸನವಿದೆ. ಒಟ್ಟು ಹದಿನಾರು ಸಾಲುಗಳಿರುವ ಈ ಶಾಸನವು ದಪ್ಪನಾದ ಅಕ್ಷರಗಳಿಂದ ಕೂಡಿದೆ. ಇದು ಕೃಷ್ಣದೇವರಾಯನ ಅವಧಿಯಲ್ಲಿ ಅಂದರೆ ಶಾಲಿವಾಹನ ಶಕೆ ೧೪೪೯ ಸರ್ವಜಿತು ಸಂವತ್ಸರದ ಆಶ್ವೀಜ ಮಾಸದ ಬಹುಳ ಮೂರರಂದು ಅಂದರೆ ಕ್ರಿಸ್ತಶಕೆ ೧೫೨೭, ಅಕ್ಟೋಬರ್ ೧೧, ಶುಕ್ರವಾರದಂದು ಈ ಶಾಸನವನ್ನು ಬರೆಸಲಾಗಿದೆ.

ಈ ಶಾಸನವು ನಮಗೆ ಬಹಳ ಮಹತ್ವವಾಗುವುದು ಈ ಶಾಸನದಲ್ಲಿ ಉಲ್ಲೇಖಗೊಂಡಿರುವ ಒಂದು ಕೆರೆಯ ಜೀರ್ಣೋದ್ಧಾರದ ವಿಷಯದಿಂದ. ಕಾರಣಾಂತರಗಳಿಂದ ಉಡುಸಲಮ್ಮನಕೆರೆಯು ಒಡೆದುಹೋದಾಗ ಆ ಕೆರೆಯನ್ನು ಅಂತಾಪುರದ ಪರುವತಗೌಡನೆಂಬುವನು ಪುನರ್ ನಿರ್ಮಿಸುತ್ತಾನೆ. ಇವನ ಸಾಮಾಜಿಕ ಕಳಕಳಿಗೆ ಮೆಚ್ಚಿದ ಮಾದೇನಾಯಕನೆಂಬುವನು ಈ ಪರುವತಗೌಡನಿಗೆ ಕಾಲುವೆ ಕೆಳಭಾಗದ ಹರಳಗದ್ದೆ ಎಂದು ಕರೆಯುವ ಜಾಗದಲ್ಲಿ ಆರು ಗುಳದಷ್ಟು ಗದ್ದೆಯನ್ನು ದಾನವಾಗಿ (ಮಾನ್ಯವಾಗಿ) ನೀಡುತ್ತಾನೆ. ಇಲ್ಲಿ ದಾನ ನೀಡಿದ ವ್ಯಕ್ತಿ ಮಾದೇನಾಯಕನು ದೊರೆಯಾದ ಕೃಷ್ಣದೇವರಾಯನ ಊಳಿಗದ ಕಾರ್ಯದವನೆಂದು ಶಾಸನದಲ್ಲಿ ಉಲ್ಲೇಖಿಸಿದೆ. ಅಂದರೆ ಇವನು ಅರಮನೆಯ ಸೇವಕನಿರಬೇಕು ಅಥವಾ ಅರಸನ ನೆಚ್ಚಿನ ಭಂಟನಿರಬೇಕು.


ಈ ಶಾಸನದಿಂದ ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ ಗ್ರಾಮೀಣ ಭಾಗದಲ್ಲಿ ಜೀವನಾಡಿಯಾದ, ನೀರಿನ ಪ್ರಮುಖ ಆಕರಗಳಾದ ಕೆರೆಗಳ ನಿರ್ಮಾಣ ಮತ್ತು ದುರಸ್ತಿಗಾಗಿ ನೀಡುತ್ತಿದ್ದ ಪ್ರಾಶಸ್ತ್ಯವನ್ನು, ಅಂತಹ ನಿರ್ಮಾಣಕಾರರಿಗೆ ಸಾರ್ವಜನಿಕವಾಗಿ ದೊರೆಯುತ್ತಿದ್ದ ಗೌರವ ಮತ್ತು ಮರ್ಯಾದೆಗಳನ್ನು ತಿಳಿಯಬಹು ದಾಗಿದೆ. ಅಲ್ಲದೆ ಈ ಶಾಸನದ ಪ್ರಕಾರ ಅರಸನಿಗಿಂತ ಅವನ ಊಳಿಗದವನಾದ ಮಾದೇನಾಯಕನು ದಾನ ನೀಡಿರುವುದು ಅವನ ವರ್ಚಸ್ಸನ್ನು ಮತ್ತು ಚಕ್ರವರ್ತಿ ಮತ್ತು ಊಳಿಗದವರ ನಡುವಿನ ಸಂಬಂಧಗಳ ಸ್ವರೂಪವನ್ನು ತಿಳಿಸುತ್ತದೆ. ಶಾಸನದಲ್ಲಿ ಉಲ್ಲೇಖಗೊಂಡಿರುವ ಉಡುಸಲಮ್ಮನ ಕೆರೆಯನ್ನು ಇಂದಿಗೂ ಗುರುತಿಸಬಹುದಾಗಿದೆ. ಸುಮಾರು ಮುನ್ನೂರು ಎಕರೆಯಷ್ಟು ವಿಸ್ತಾರವಾದ ಈ ಕೆರೆಯ ಏರಿಯು ಈಗಲೂ ಉತ್ತಮವಾಗಿದೆ. ಅಲ್ಲದೆ ಸ್ಥಳೀಯರು ಈ ಕೆರೆಯ ಸಮೀಪದಲ್ಲಿರುವ ಒಂದು ಹಳೆಯ ಗುಡಿಯನ್ನು ಉಸ್ಲಮ್ಮನ ಗುಡಿ (ಉಡುಸಲಮ್ಮನ ಗುಡಿ)ಯೆಂದು ಕರೆಯುವರು. ಇದರಿಂದ ಜನಪದರಲ್ಲಿ ಈ ಕೆರೆಗೆ ಸಂಬಂಧಪಟ್ಟ ಹೆಸರು ಇನ್ನೂ ಉಳಿದು ಬಂದಿರುವುದನ್ನು ಅರಿಯಬಹುದು. ಆದರೆ ಇಂದು ಈ ಕೆರೆಯ ಒಳಭಾಗವು ವ್ಯವಸಾಯಕ್ಕೆ ಬಳಕೆಯಾಗುತ್ತಿದ್ದು, ಕಬ್ಬು ಮತ್ತು ಬಾಳೆಯನ್ನು ಬೆಳೆಯುತ್ತಿರುವರು.

ಒಟ್ಟಾರೆ ಈ ಶಾಸನದ ಸಂಶೋಧನೆಯಿಂದ ಸುಮಾರು ೫೦೦ ವರ್ಷಗಳಷ್ಟು ಇತಿಹಾಸವಿರುವ ಉಡುಸಲಮ್ಮನ ಕೆರೆಯು ಅದು ಕಾರಣಾಂತರಗಳಿಂದ ಒಡೆದು ಹೋದ ವಿಷಯವನ್ನು, ಅದನ್ನು ಪುನರ್ ನಿರ್ಮಿಸಿದ ಅಂತಾಪುರದ (ಸಂಡೂರು ತಾಲೂಕಿನ) ಪರ್ವತಗೌಡನನ್ನು ಹಾಗೂ ಈ ಕಾರ್ಯಕ್ಕೆ ಪ್ರೋತ್ಸಾಹವಾಗಿ ಊಳಿಗದ ಮಾದೇನಾಯಕನು ಗದ್ದೆಯನ್ನು ದಾನ ನೀಡಿದ ವಿಷಯವು ಬೆಳಕಿಗೆ ಬಂದಂತಾಗಿದೆ.

ನಮ್ಮ ಪೂರ್ವಿಕರು ಮುಂದಾಲೋಚನೆಯಿಂದ ನಿರ್ಮಿಸಿದ ಸಾವಿರಾರು ಕೆರೆಗಳು ಇಂದು ಮನುಷ್ಯನ ದುರಾಸೆಗಳಿಗೆ ಬಲಿಯಾಗುತ್ತಿವೆ. ಈ ಕಾರಣದಿಂದ ಅಂತರ್ಜಲ ಬತ್ತಿಹೋಗಿ ನಮ್ಮ ಮುಂದಿನ ಜನಾಂಗ ಗಂಭೀರ ಸ್ವರೂಪದ ಜಲಕ್ಷಾಮವನ್ನು ಎದುರಿಸುವಂತಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಕೆರೆಗಳನ್ನು ರಕ್ಷಿಸಬೇಕೆಂದು ಸರ್ಕಾರವು ಅನೇಕ ಯೋಜನೆಗಳನ್ನು ಹಮ್ಮಿಕೊಳ್ಳುತ್ತಿದೆ. ಈ ಸಮಯದಲ್ಲಿ ಈ ಶಾಸನವು ಕೆರೆಗಳ ನಿರ್ಮಾಣ ಮತ್ತು ಜೀರ್ಣೋದ್ಧಾರದ ಕಳಕಳಿಯು ನಮ್ಮ ಗ್ರಾಮೀಣರ ಬದುಕಿನಲ್ಲಿ ಬಹಳ ಹಿಂದಿನಿಂದಲೇ ಮಹತ್ವವನ್ನು ಪಡೆದಿತ್ತೆಂದು ತೋರಿಸಿ ಕೊಡುತ್ತಿದೆ.

8. ಹಾಳು ಹತೋಟಿ ಗ್ರಾಮದ ಶಾಸನ (ಕ್ರಿ.ಶ.೧೫)

ತುಂಗಭದ್ರಾ ನದಿಯ ಎಡದಂಡೆಯಲ್ಲಿ ಹಲವು ಪಾಳು ಬಿದ್ದ ಗ್ರಾಮಗಳಿವೆ. ಅವುಗಳಲ್ಲಿ ಹತೋಟಿ ಎಂಬ ಗ್ರಾಮ ಮುಖ್ಯವಾದುದು. ಹಲವು ಶಾಸನಗಳಲ್ಲಿ ಕಂಡುಬರುವ ಅತ್ತಿವಟ್ಟಿ ಎಂಬ ಗ್ರಾಮವೇ ಈ ಹತೋಟಿ ಎಂಬ ಪಾಳುಗ್ರಾಮ. ಕೃಷ್ಣದೇವರಾಯನು ಉದಯಗಿರಿಯ ದಂಡಯಾತ್ರೆಯ ನೆನಪಿಗೆ ನಿರ್ಮಿಸಿದ ಬಾಲಕೃಷ್ಣ ದೇವಾಲಯಕ್ಕೆ ಈ ಅತ್ತಿವಟ್ಟಿ ಗ್ರಾಮವನ್ನು ದಾನ ನೀಡಿದ ವಿಷಯವನ್ನು ಶಾಸನಗಳು ತಿಳಿಸುತ್ತಿವೆ. ಈ ಪಾಳುಗ್ರಾಮದಲ್ಲಿ ಅನೇಕ ಗುಡಿಗಳು, ಕೋಟೆಯ ಅವಶೇಷಗಳು ಇಂದಿಗೂ ಉಳಿದುಬಂದಿದೆ. ಈ ಗ್ರಾಮದಲ್ಲಿ ಸೆಣಬಿನ ಕಟ್ಟಿಗೆಯ ಪೇಟೆಯಿತ್ತೆಂದು ಇಲ್ಲಿ ದೊರೆತಿರುವ ಕೃಷ್ಣದೇವರಾಯನ ಅವಧಿಯ ಶಾಸನದಿಂದ ತಿಳಿದುಬರುತ್ತದೆ. (ಶಾಸನ ಸಂಖ್ಯೆ 161. ಅತ್ತಿವಟ್ಟೆ, ಕೊಪ್ಪಳ ಜಿಲ್ಲಾ ಶಾಸನ ಸಂಪುಟ, ಕನ್ನಡ ವಿ.ವಿ.)



ಈ ಪಾಳು ಗ್ರಾಮದ ಮಧ್ಯೆ ಒಂದು ಬಂಡೆಯ ಮೇಲೆ ಮೂರು ಸಾಲಿನ ಸಣ್ಣ ಶಾಸನವೊಂದು ಪತ್ತೆಯಾಗಿದೆ. ಒಂದು ಪೀಠದ ಮೇಲೆ ಶಿವಲಿಂಗವಿರುವಂತೆಯೂ, ಪಕ್ಕದಲ್ಲಿ ಬಸವಣ್ಣನನ್ನೂ ಚಿತ್ರಿಸಿದೆ. ಶಾಸನದಲ್ಲಿ ಶರಣು ತ್ರಯಂಬಕ ದೇವರು ಎಂದು ಉಲ್ಲೇಖಿಸಿದೆ. ಈ ಶಾಸನದ ಆಧಾರದಿಂದ ಈ ಬಂಡೆಯ ಸನಿಹದಲ್ಲಿ ಶಿವ ದೇವಾಲಯವಿತ್ತೆಂದು ಊಹಿಸಬಹುದು. ಶಾಸನದ ಅಕ್ಷರಗಳು ಆರರಿಂದ ಎಂಟು ಇಂಚುಗಳಷ್ಟು ದೊಡ್ಡದಾಗಿವೆ. ಅಕ್ಷರದ ಶೈಲಿಯಿಂದ ಇದು ೧೫ನೇ ಶತಮಾನದ ಶಾಸನವೆನ್ನಬಹುದು.

ಶಾಸನಪಾಠ

1. ಸರಣು
2. ತ್ರಂಬಕಾ
3. ದ್ಯವರು

9. ಮಾಲ್ಯವಂತ ಗುಡ್ಡದ ಶಾಸನ (ಕ್ರಿ.ಶ. 18)

ಕಾಮಲಾಪುರದಿಂದ ಕಂಪ್ಲಿಗೆ ಹೋಗುವ ಮಾರ್ಗದ ಎಡ ಭಾಗದಲ್ಲಿ ಮಾಲ್ಯವಂತ ಗುಡ್ಡವಿದೆ. ಇಲ್ಲಿ ಹಳೆಯ ಕಾಲದ ಮೆಟ್ಟಿಲ ದಾರಿಯಿದ್ದು, ಆರಂಭ ವಾದ ಸ್ವಲ್ಪ ಮೆಟ್ಟಿಲನ್ನು ಹತ್ತಿದರೆ ಬಲ ಭಾಗಕ್ಕೆ ಕಾಲುದಾರಿ ಸಿಗುತ್ತದೆ. ಅದರಲ್ಲಿ ಕ್ರಮಿಸಿ ಮುಂದೆ ಬಂದರೆ ಬೃಹತ್ ಬಂಡೆ ಎದುರಾಗುತ್ತದೆ. ಈ ಬಂಡೆಯ ಪೂರ್ವ ದಿಕ್ಕಿಗೆ ಒಂದು ಸಾಲಿನ ಶಾಸನವಿದೆ. ಇದನ್ನು ಶಾಸನವೆನ್ನುವುದಕ್ಕಿಂತ ಹಸ್ತಾಕ್ಷರ ವೆನ್ನಬಹುದೆಂದು ತೋರುತ್ತದೆ. ಕ್ರಿ. ಶ.೧೭೬೩ರಲ್ಲಿ ಚೋರ ಬಸವನ ಚರಿತ್ರೆಯನ್ನು ರಚಿಸಿದ ಕೋಳೂರಿನ




ಕವಿ ಶಂಕರದೇವನ ಹಸ್ತಾಕ್ಷರ ಇದಾಗಿದೆ. ಸಂಕರ ದೇವನ ಬರಹವೆಂದು ಉಲ್ಲೇಖಿಸಿರುವ ಈ ಶಾಸನವು ಕ್ರಿ. ಶ.೧೮ನೇ ಶತಮಾನಕ್ಕೆ ಸಲ್ಲುತ್ತದೆ. ಹಂಪಿಯಲ್ಲಿ ೧೫ನೇ ಶತಮಾನದಿಂದಲೂ ನೂರಾರು ಕವಿಗಳು ನೆಲೆಸಿ ಕಾವ್ಯ ರಚನೆಗೈದ ವಿಷಯ ಸಾಹಿತ್ಯ ಚರಿತ್ರೆಯಿಂದ ತಿಳಿದುಬರುತ್ತದೆ. ಈ ಶಾಸನದ ಮುಂದೆ ಸ್ವಲ್ಪ ದೂರದಲ್ಲೇ ವೀರಭದ್ರನ ಗುಡಿಯಿದೆ. ಬಹುಶಃ ಕವಿ ಶಂಕರದೇವನು ಇಲ್ಲಿ ನೆಲೆಸಿ ತನ್ನ ಚೋರ ಬಸವನ ಕಾವ್ಯವನ್ನು ರಚಿಸಿದ್ದಾನೆಂದು ಊಹಿಸಬಹುದು.

ಶಾಸನ ಪಾಠ

1. ಸಂಕರ ದೇವನ ಬರಹ

10. ಸೋಮನಾಥ ಗುಡ್ಡದ ಶಾಸನ (ಕ್ರಿ. ಶ. ೧೪)

ಈ ಶಾಸನವು ಶಿವಪುರದಿಂದ ಹರ್ಲಾಪುರಕ್ಕೆ ಹೋಗುವ ರಸ್ತೆಯ ಎಡಕ್ಕೆ ಸಿಗುವ ಸೋಮನಾಥ ಗುಡ್ಡದ ತಪ್ಪಲಿನಲ್ಲಿದೆ. ಈ ಸೋಮನಾಥ ಗುಡ್ಡವು ಕೋಟೆಯ ಮೇಲಿದೆ ಮತ್ತು ಅಲ್ಲಿ ಸೋಮನಾಥನ ಗುಡಿಯಿದೆ. ಹರಿಹರನ ಕಾಲದಲ್ಲಿ ವಿಜಯ ನಗರ ಸಾಮ್ರಾಜ್ಯದ ಒಂದು ಗಡಿಯಾಗಿ ಈ ಸೋಮನಾಥ ಗುಡ್ಡವಿತ್ತೆಂದು ತಿಳಿದು ಬರುತ್ತದೆ. ಅವನು ಸೂಚಿಸುವ ನಾಲ್ಕು ದಿಕ್ಕಿನ ಗಡಿಗಳಲ್ಲಿ ಪಶ್ಚಿಮ ದಿಕ್ಕಿನ ಗಡಿಯಾಗಿ ಈ ಉಲ್ಲೇಖವಾಗಿದೆ. ಈ ಗಡಿಯ ತಪ್ಪಲಲ್ಲಿ ಪಾಳು ಗ್ರಾಮದ ಸ್ಥಳ ಅವಶೇಷಗಳು ಹರಡಿಬಿದ್ದಿವೆ. ಇದು ಯಾವ ಗ್ರಾಮವೆಂದು ತಿಳಿದಿರಲಿಲ್ಲ. ಈಗ ಈ ಪಾಳು ಗ್ರಾಮದ ಸಮೀಪದಲ್ಲಿ ದೊರೆತಿರುವ ಒಂದು ಶಾಸನದಿಂದ ಈ ಪಾಳು ಗ್ರಾಮದ ಹೆಸರು ಸೋಮನಾಥಪುರವೆಂದು ತಿಳಿದುಬರುತ್ತದೆ. ಸೋಮನಾಥಪುರದ ಪಕ್ಕದ ಬೆಟ್ಟವೇ ಸೋಮನಾಥ ಬೆಟ್ಟ. ಅದರ



ಮೇಲಿರುವ ಲಿಂಗವೇ ಸೋಮನಾಥಲಿಂಗ. ಇದು ಸಹಜವಾದುದು. ಊರಿಗೂ ಅದರ ಪಕ್ಕದಲ್ಲಿರುವ ಬೆಟ್ಟಕ್ಕೂ ಒಂದೇ ಹೆಸರು ಇರುವುದು ರೂಢಿ. ಅದರಂತೆ ಈ ಪಾಳುಗ್ರಾಮದ ಹೆಸರು ಸೋಮನಾಥಪುರವೆಂದು ಈ ಶಾಸನ ದಾಖಲಿಸಿದೆ. ಈ ಗ್ರಾಮದ ಸಮೀಪದ ಗ್ರಾಮಗಳ ಹೆಸರುಗಳನ್ನು ವಿಶೇಷವಾಗಿ ಗಮನಿಸಬೇಕಾಗಿದೆ. ಶಿವಪುರ, ಐಯ್ಯಗಳ ಕೆರೆ, ಹರಿಹರಪುರ, ಬಸ್ವಾಪುರ ಇವು ವೀರಶೈವ ಧರ್ಮದ ಪ್ರಭಾವವಿರುವ ಗ್ರಾಮಗಳಾಗಿವೆ.

ಶಾಸನ ಪಾಠ


1. ಶ್ರೀ ಸೋಮನಾಥಪುರದ
2. ಬಡುಗಲಿಂ ಮೂಡಲು.

ಲಿಪಿಯ ಆಧಾರದಿಂದ ಈ ಶಾಸನದ ಕಾಲವನ್ನು ಹದಿನಾಲ್ಕನೆ ಶತಮಾನ ವೆನ್ನಬಹುದು. ಅಂದರೆ ಸಂಗಮರ ಅವಧಿಗೆ ಸೇರುತ್ತದೆ.

11. ತಿರುಮಲಾಪುರ ಶಾಸನ (ಕ್ರಿ. ಶ. ೧೫೭೭)

ಬಸಾಪುರ-ತಿರುಮಲಾಪುರ ರಸ್ತೆಯ ಎಡಬದಿಯ ಗದ್ದೆಗಳ ನಡುವೆ ಒಂದು ಬೃಹತ್ ಬಂಡೆಯಿದೆ. ಅದರ ನೆತ್ತಿಯ ಮೇಲೆ ಈ ಶಾಸನವಿದೆ. ಈ ಬಂಡೆಯಿರುವ ಜಾಗವು ಎಸ್.ಪುಲ್ಲಯ್ಯ ಎಂಬುವರಿಗೆ ಸೇರಿದ್ದಾಗಿದ್ದು, ಅವರ ಕೋರಿಕೆಯ ಮೇರೆಗೆ ಈ ಶಾಸನವನ್ನು ಪರಿಶೀಲಿಸಲಾಗಿದೆ. ಇದೊಂದು ಅಪ್ರಕಟಿತ ಶಾಸನವಾಗಿದ್ದು, ವಿಜಯನಗರದ ಕೊನೆಯ ಅರಸರ ಬಗ್ಗೆ ತಿಳಿಸುವ ಅಪರೂಪದ ಶಾಸನವಾಗಿದೆ. ತಾಳಿಕೋಟೆ ಕದನದ ನಂತರದ ವಿಜಯನಗರದ ಇತಿಹಾಸ ನಮಗೆ ಅಸ್ಪಷ್ಟವಾಗಿದೆ. ಅನೇಕ ಊಹಾಪೋಹಗಳಿಗೆ ಅವಕಾಶವಾಗಿದೆ. ಈ ಅವಧಿಯಲ್ಲಿನ ಶಾಸನಗಳು ಮತ್ತು ಸಾಹಿತ್ಯ ದಾಖಲೆಗಳು ನಮಗೆ ಲಭ್ಯವಾಗುವುದಿಲ್ಲ. ಶಾಸನದಲ್ಲಿ ಕಾಲವನ್ನು ಯೀಶ್ವರ ಸಂವತ್ಸರದ ಶ್ರಾವಣ ಶುದ್ಧ ೧೦ ಲೂ ಎಂದು ಹೇಳಿದೆ. ಲಿಪಿ ಮತ್ತು ಅರಸನ ಆಧಾರದಿಂದ ಇದು ಕ್ರಿ. ಶ. ೧೫೭೭, ಜುಲೈ ೨೪, ಬುಧವಾರಕ್ಕೆ ಸೇರುತ್ತದೆ. ಶಾಸನದಲ್ಲಿ ಶ್ರೀ ಮಹಾಮಂಡಳೇಶ್ವರ ರಾಮರಾಜ ಚಿಕ್ಕತಿಂಮರಾಜಯ್ಯನು ಅಯೋಧ್ಯೆಯ ತಳವಾರ ಕರೆಯಪ್ಪ ಎಂಬುವನಿಗೆ ಗದ್ದೆಯನ್ನು ದಾನ ನೀಡಿದ ವಿಷಯವಿದೆ. ಈ ಶಾಸನದಲ್ಲಿ ಉಲ್ಲೇಖವಾಗಿರುವ ರಾಮರಾಜ ಚಿಕ್ಕತಿಂಮರಾಜನು ಯಾರೆಂಬ ಪ್ರಶ್ನೆ ಮೂಡುತ್ತದೆ. ಈ ಶಾಸನದ ಅವಧಿಯಲ್ಲಿ ವಿಜಯನಗರವನ್ನು ಆಳುತ್ತಿದ್ದವನು ಸದಾಶಿವರಾಯ (ಕ್ರಿ.ಶ. ೧೫೪೩-೧೫೭೧). ಇವನ ಅವಧಿಯಲ್ಲಿ ಸಂಪೂರ್ಣ ಅಧಿಕಾರವನ್ನು ಚಲಾಯಿಸುತ್ತಿದ್ದ ವನು ರಾಮರಾಯ. ಇವನೇ ಸರ್ವಾಧಿಕಾರಿಯಾಗಿದ್ದನು. ಈ ರಾಮರಾಯನ ಸಹೋದರರು ಇಬ್ಬರು. ಅವರೇ ತಿರುಮಲ ಮತ್ತು ವೆಂಕಟಾದ್ರಿ. ಹೀಗಾಗಿ ಈ ಶಾಸನ

ಇವರ ಕಾಲದ್ದೆಂದು ಹೇಳಲು ಸಾಧ್ಯವಿಲ್ಲ. ಹಂಪಿಯ ಹಜಾರರಾಮ ದೇವಾಲಯದಲ್ಲಿನ ಒಂದು ಶಾಸನದಲ್ಲಿ ಕೃಷ್ಣದೇವರಾಯ ಕೈಕೆಳಗಿನ ಮಾಂಡಳೇಶ್ವರ ಚಿಕ್ಕತಿಂಮರಾಜನೊಬ್ಬನ ಉಲ್ಲೇಖವಿದೆ (ನಾ. ೨೫೭, ಹಂಪಿ ಸಂಪುಟ, ಕನ್ನಡ ವಿ.ವಿ., ಆದರೆ ಇಲ್ಲಿ ರಾಮರಾಜನ ಹೆಸರಿನ ಜೋಡಣೆಯಿಲ್ಲ. ನಮಗೆ ದೊರಕಿರುವ ಶಾಸನದಲ್ಲಿ ರಾಮರಾಜ ಚಿಕ್ಕ ತಿಂಮ್ಮರಾಜನೆಂದು ಹೇಳಿದೆ. ಈ ರಾಮರಾಜ ಯಾರು ಎಂಬ ಪ್ರಶ್ನೆ ಕಾಡುತ್ತದೆ. ಲಿಪಿಯ ದೃಷ್ಟಿಯಿಂದಲೂ ಈ ಶಾಸನ ಕೃಷ್ಣದೇವರಾಯನ ಅವಧಿಗಿಂತ ನಂತರದ ಅವಧಿಯದ್ದಾಗಿದೆ. ಈ ಕಾರಣದಿಂದ ರಾಮರಾಜ ಚಿಕ್ಕತಿಮ್ಮರಾಜನೆಂದರೆ ಸದಾಶಿವರಾಯನ ಅವಧಿಯಲ್ಲಿದ್ದ ರಾಮರಾಜನ ಕೈಕೆಳಗಿನ ಅಧಿಕಾರಿಯೋ ಅಥವಾ ಸಂಬಂಧಿಕನೋ ಆಗಿರುವ ಸಾಧ್ಯತೆಯೇ ಹೆಚ್ಚು. ಇಲ್ಲದಿದ್ದರೆ ಅವನಿಗೆ ರಾಮರಾಜನೆಂಬ ವಿಶೇಷಣವಿರುತ್ತಿರಲಿಲ್ಲ. ಇದು ಸರಿಯಾದ ಊಹೆಯಾದರೆ ಶಾಸನದ ಕಾಲವು ಸಂವತ್ಸರದ ಆಧಾರದಿಂದ ಕ್ರಿ.ಶ. ೧೫೭೭ ಆಗುತ್ತದೆ.



ಶಾಸನದಲ್ಲಿ ಅಯೋಧ್ಯೆಯ ತಳವಾರ ಕರಿಯಪ್ಪನ ಉಲ್ಲೇಖ ವಿದೆ. ಈ ಅಯೋಧ್ಯೆ ಶಾಸನ ದಿಂದ ಉತ್ತರಕ್ಕೆ ಅರ್ಧ ಕಿ.ಮೀ. ದೂರದಲ್ಲಿದೆ. ಅಲ್ಲಿ ಪಾಳು ಗ್ರಾಮದ ಅವಶೇಷಗಳು, ಗುಡಿ ಗಳು ಇಂದಿಗೂ ಉಳಿದಿವೆ. ಈ ತಳವಾರ ಕರಿಯಪ್ಪನಿಗೆ ಎರೆಗದ್ದೆ ಹತ್ತು ಕೊಳಗ ಬೀಜವರಿ ಗದ್ದೆಯನ್ನು ದಾನ ನೀಡಿದ ವಿಷಯ ವನ್ನು ಈ ಶಾಸನ ದಾಖಲಿಸಿದೆ. ಶಾಸನ ಆಧಾರ ದಿಂದ ತಾಳಿಕೋಟೆ ಯುದ್ಧದ ನಂತರವೂ ವಿಜಯನಗರ ಸಾಮ್ರಾಜ್ಯ ಚೇತರಿಸಿಕೊಂಡಿತ್ತೆಂದೂ, ಮುನ್ನಿನಂತೆಯೇ ದಾನ-ಧರ್ಮಗಳು ನಡೆಯುತ್ತಿತ್ತೆಂದು ಹೇಳಬಹುದಾಗಿದೆ.

ಶಾಸನ ಪಾಠ

೧. ಯೀಶ್ವರ ಸಂವತ್ಸರ
೨. ದ ಶ್ರಾವಣ ಶು ೧೦ ಲು
೩. ಶ್ರೀ ಮಂಮಮ್ಮ್ರಹಾಮಂ
೪. ಡಳೇಶ್ವರ | ರಾಮರಾಜ
೫. ಚಿಕತಿಂಮರಾಜಯನು
೬. ಅಯೋಧ್ಯೆಯ ತ್ತಳವಾರ್ರ
೭. ಕರೆಯಪನಾಯಕಗೆ ಅ
೮. ಯೋಧೆ ಆಯದಲು ಪಾಲಿಸ್ತ
೯. ಗುಣನಿ (ಗ) ಎರೆಗದೆ ಬೀಜವ
೧೦. ರಿ ಹತ್ತು ಕೊಳಗ ಗದೆನೂ ನಿಮಗೆ ಸ
೧೧. ರ್ವ ಮಾಂನ್ಯವಾಗಿ ಪಾಲಿಸ್ತೆವೂ
೧೨. ನೀವು ಸುಖದಲಿ ಅನುಭವಿಸುವುದೂ

೨. ಇಮ್ಮಡಿ ಹರಿಹರನ ಹರಿಹರದ ಶಾಸನಗಳು

ಸಂತೇಬೆನ್ನೂರು ಸುಮತೀಂದ್ರ ನಾಡಿಗ್

ದಾವಣಗೆರೆ ಜಿಲ್ಲೆಯ ಒಂದು ತಾಲೂಕು ಕೇಂದ್ರವಾದ ಹರಿಹರ ಪುರಾಣ ಕಾಲ ದಿಂದಲೂ ಪ್ರಸಿದ್ಧವಾದ ಪುಣ್ಯಕ್ಷೇತ್ರ. ಶಂಕರ, ನಾರಾಯಣರಿಬ್ಬರಿಂದಲೂ ತನ್ನ ವಧೆಯಾಗ ಬಾರದೆಂದು ವರಪಡೆದು, ಗುಹಾಸುರನೆಂಬ ರಾಕ್ಷಸ, ಕಡೆಗೆ ಅವರಿಬ್ಬರೂ ಒಂದಾಗಿ ಏಕೋಭವಿಸಿದಾಗ ಇಲ್ಲಿ ಹತವಾಗಿ ಪುಣ್ಯಲೋಕ ಪ್ರಾಪ್ತಿಯಾದ ಕಾರಣ, ಇದೊಂದು ಪಾವನಭೂಮಿಗಾಗಿ ಹೆಸರಾಗಿದೆ. ಸ್ಕಾಂದ ಪುರಾಣದ ಕಾಶೀಖಂಡದ ಪೂರ್ವದ ಎಂಟನೇ ಅಧ್ಯಾಯದಲ್ಲಿ ಸಾಕ್ಷಾತ್ ಯಮಧರ್ಮನೇ ಹಾಡಿದ ಸ್ತೋತ್ರ ದಲ್ಲಿ ಈ ವಿಷಯ ವಿವರಿಸಲಾಗಿದೆ. ಹೀಗೆ ಶಿವ - ವಿಷ್ಣು ಭಕ್ತರಿಬ್ಬರಿಗೂ ಭಾವೈಕ್ಯದ ಸಂಗಮ ಸ್ಥಾನ ವಾಗಿರುವ ಹರಿಹರ ಧಾರ್ಮಿಕ ಕ್ಷೇತ್ರವೂ ಆಗಿದೆ. ಇದಲ್ಲದೆ ಐತಿ ಹಾಸಿಕ ಕ್ಷೇತ್ರ ವಾಗಿಯೂ ಹೆಸರುಗಳಿಸಲು ಕಾರಣ ಕರ್ನಾಟಕವನ್ನಾಳಿದ ಬಹುಪಾಲು ರಾಜವಂಶೀ ಯರು ಇಲ್ಲಿನ ಸ್ವಯಂಭೂ ಶಂಕರ ನಾರಾಯಣನಿಗೆ ಅನೇಕ ದತ್ತಿದಾನ ನೀಡಿರುವುದಾಗಿ ಅನೇಕ ಶಾಸನಗಳು ತಿಳಿಸುತ್ತವೆ. ಇಲ್ಲಿನ ದೇವಸ್ಥಾನದ ಪ್ರಾಂಗಣ ದಲ್ಲಿ ೫೦ಕ್ಕೂ ಮಿಕ್ಕಿ ಶಾಸನಗಳು ಇದ್ದು, ಕರ್ನಾಟಕದಲ್ಲಿ ಹೆಚ್ಚು ಶಾಸನಗಳಿರುವ ಸ್ಥಳಗಳಲ್ಲಿ ಹರಿಹರವೂ ಒಂದಾಗಿದೆ.

ಚಾಲುಕ್ಯರ ಕಾಲದಲ್ಲಿಯೇ ಪ್ರತಿಷ್ಠಾಪಿಸಿಲಾಗಿತ್ತೆನ್ನುವ ಇಲ್ಲಿನ ಮೂರ್ತಿ ಹರಿ ಹರೇಶ್ವರ ಮೂರ್ತಿಯ ದೇವಾಲಯಕ್ಕೆ, ನಂತರ ಹೊಯ್ಸಳ ವೀರನರಸಿಂಹನ ಮಹಾ ಪ್ರಧಾನ ಪೊಲಾಳ್ವ ಈಗಿರುವ ಬೃಹತ್ ದೇವಾಲಯ ನಿರ್ಮಿಸಿದನೆಂದು ಅಲ್ಲಿನ ಶಾಸನಗಳು ತಿಳಿಸುತ್ತವೆ. ಹೊಯ್ಸಳರ ನಂತರ ಕರ್ನಾಟಕ ಸಾಮ್ರಾಜ್ಯದ ಆಡಳಿತ ಚುಕ್ಕಾಣಿ ಹಿಡಿದ ವಿಜಯನಗರ ಅರಸರು ಈ ದೇವಾಲಯಕ್ಕೆ ಹಲವಾರು ದತ್ತಿ ದಾನ ನೀಡಿ ಶಾಸನ ಹಾಕಿಸಿರುತ್ತಾರೆ. ವಿಜಯನಗರ ಅರಸರಿಗೆ ಸಂಬಂಧಿಸಿದಂತೆ ಈ ಗ್ರಾಮದಲ್ಲಿ ಈವರೆಗೆ ೧೫ ಶಾಸನಗಳು ಲಭ್ಯವಾಗಿವೆ. ಈವರೆಗೆ ಬೆಳಕುಕಾಣದ ಇಮ್ಮಡಿ ಹರಿಹರನ ಒಂದು ಹೊಸ ಶಾಸನ ಸೇರಿ ಅವನ ಕಾಲದ ಇಲ್ಲಿರುವ ಮೂರು ಶಾಸನಗಳ ಬಗ್ಗೆ ಈ ಸಂಪ್ರಬಂಧದಲ್ಲಿ ವಿವೇಚಿಸಲಾಗಿದೆ.

ಶಾಸನ ೧ : ಹರಿಹರದ ಹರಿಹರೇಶ್ವರ ದೇವಸ್ಥಾನದ ಎದುರು ಈಗ ನಿಲ್ಲಿಸ ಲಾಗಿರುವ ಎಡದಿಂದ ನಾಲ್ಕನೇ ಶಾಸನ ಇಮ್ಮಡಿ ಹರಿಹರನ ಕಾಲದ್ದಾಗಿದ್ದು, ಈ

ಶಾಸನವನ್ನು ಕರ್ನಾಟಕ ಶಾಸನ ಪಿತಾಮಹ ಬಿ.ಎಲ್.ರೈಸರು ತಮ್ಮ ಚಿತ್ರದುರ್ಗ ಶಾಸನ ಸಂಪುಟದಲ್ಲಿ ದಾವಣಗೆರೆ - ೩೪ರಲ್ಲಿ ಪ್ರಕಟಿಸಿದ್ದಾರೆ (ಆಗ ಹರಿಹರವೂ ದಾವಣಗೆರೆ ತಾಲ್ಲೂಕಿನ ಭಾಗವಾಗಿತ್ತು). ೮೦ ಸಾಲುಗಳುಳ್ಳ ಈ ಸುದೀರ್ಘಶಾಸನ ಕನ್ನಡ ಲಿಪಿ ಯಲ್ಲಿದ್ದು, ಕನ್ನಡ ಮತ್ತು ಸಂಸ್ಕೃತ ಎರಡೂ ಭಾಷೆಯಲ್ಲಿದೆ. ಇಮ್ಮಡಿ ಹರಿಹರನ ಮಂತ್ರಿಯಾಗಿದ್ದು ಮುದ್ದ ದಂಡಾಧಿಪ, ಚಿಕ್ಕ ಹದಡಿ ಎಂದು ಬೇರೊಂದು ಹೆಸರುಳ್ಳ ಪ್ರಸಿದ್ಧ ಕೆರೆ ಹೊಂದಿದ ಕ್ಷೇತ್ರವನ್ನು ಮುದ್ದದಂಡ ನಾಯಕ ಪುರ ಎಂದು ಹೆಸರಿಟ್ಟು, ಅಗ್ರಹಾರವನ್ನಾಗಿ ಮಾಡಿ ಅದರಲ್ಲಿ ೩೭ ವೃತ್ತಿಗಳನ್ನು ಕಲ್ಪಿಸಿ, ಅದನ್ನು ಬ್ರಾಹ್ಮಣರಿಗೆ ದಾನವಾಗಿ ಕೊಟ್ಟಿದ್ದ, ಈ ೩೭ ವೃತ್ತಿಗಳಲ್ಲಿ ೧೨ ಹರಿಹರ ದೇವರಿಗೆ, ೨೪ ಬ್ರಾಹ್ಮಣರಿಗೆ ಈ ಎರಡರಿಂದ ತೆಗೆದ ಒಂದು ವೃತ್ತಿಯನ್ನು ಪ್ರಖ್ಯಾತ ವಿದ್ವಾಂಸರಾದ ಶ್ರೀಧರ ಭಟ್ಟ ಎಂಬುವನಿಗೆ ಕೊಡಲ್ಪಟ್ಟಿದ್ದು ಈ ಶಾಸನ ಶಕವರ್ಷ ೧೩೦೧ನೆಯ ಸಿದ್ಧಾರ್ಥಿ ಸಂತವ್ಸರದ (ಕ್ರಿ.ಶ.೧೩೭೯) ಕಾರ್ತೀಕ ಶುದ್ಧ ದ್ವಾದಶಿ (ಉತ್ಥಾನ ದ್ವಾದಶಿ) ಭಾನುವಾರ ಬರೆದುಕೊಟ್ಟಿರುತ್ತಾನೆ. ಉತ್ಥಾನ ದ್ವಾದಶಿ ಎಂದರೆ ಶೇಷಷಾಯಿಯಾದ ಮಹಾವಿಷ್ಣು ಯೋಗನಿದ್ರೆಯಿಂದ ಎಚ್ಚರಗೊಳ್ಳುವ ಪರ್ವದಿನ. ಈ ಪರ್ವದಿನದಲ್ಲಿ ಶಾಸನ ಬರೆಯಿಸಿ, ದಾನಕೊಟ್ಟಿದ್ದು, ಶಾಸನದಲ್ಲಿ ಉಲ್ಲೇಖಿಸಿದ ಗ್ರಾಮವನ್ನು ದಾವಣಗೆರೆ ಚನ್ನಗಿರಿ ರಸ್ತೆಯಲ್ಲಿರುವ ಹದಡಿಗ್ರಾಮವೆಂದು ಗುರುತಿಸಬಹುದಾಗಿದೆ.

ಈ ಶಾಸನದಲ್ಲಿ ಇಮ್ಮಡಿ ಹರಿಹರನನ್ನು ತಂದೆ ಆಳಿದ ನಗರದಲ್ಲಿ ಅಯೋಧ್ಯೆ ಯಲ್ಲಿ ರಾಮನಾಳಿದಂತೆ, ವಿಜಯನಗರವನ್ನು ಅವನು ಆಳುತ್ತಿದ್ದನೆಂದೂ, ಶ್ರೀರಾಮನಿಗೆ ಮಂತ್ರಿ ಸುಮಂತ ಇದ್ದ ಹಾಗೆ, ಹರಿಹರನ ಸಚಿವಶ್ರೇಷ್ಠನಾಗಿ ಮುದ್ದು ದಂಡಾಧಿಪ ಕಾರ್ಯ ನಿರ್ವಹಿಸುತ್ತಿದುದಾಗಿ ಸುಂದರವಾಗಿ ವರ್ಣಿಸಲಾಗಿದೆ.


ಈ ಶಾಸನ ಶ್ಲೋಕ, ಶಾರ್ದೂಲ, ಸ್ರಗ್ಧ ವೃತ್ತಗಳ ಪ್ರಯೋಗಗಳೊಡನೆ ಮಾಲಿನಿ, ಉಪಜಾತಿ, ಪುಷ್ಪಿತಾಗ್ರ, ರಥೋದ್ಧತ ವೃತ್ತಗಳನ್ನು ಪ್ರಯೋಗಿಸಿರುವುದು ಒಂದು ವಿಶೇಷ. ಈ ಶಾಸನ ಬರೆದವನು ಧರಣೋಜ. ಈತನು ಕವಿ, ಲಿಪಿಕಾರ ಎರಡೂ ಆಗಿರುವ ಸಾಧ್ಯತೆ ಇದೆ.

ಈ ಶಾಸನದಲ್ಲಿ ಉಲ್ಲೇಖಿಸಿರುವ ಗ್ರಾಮಗಳ ಮೇರೆಯನ್ನು ಹೇಳುವಾಗ ಕನ್ನಡ ಭಾಷೆ ಉಪಯೋಗಿಸಿದ್ದಾರೆ. ಬ್ರಾಹ್ಮಣರ ವೃತ್ತಿ, ಗೋತ್ರ, ಸೂತ್ರಗಳನ್ನು ಸಂಸ್ಕೃತ ದಲ್ಲಿ ಉಲ್ಲೇಖಿಸಲಾಗಿದೆ. ಶಾಸನದ ಕಡೆಯ ಭಾಗದಲ್ಲಿ ಶಾಪಾಶಯಗಳನ್ನು ಬರೆದು, ಅದಕ್ಕೆ ಶ್ರೀ ಹರಿಹರರಾಯನ ಬಪ್ಪ ಶ್ರೀ ವಿರೂಪಾಕ್ಷ ಎಂದು ನಮೂದಿಸಿರುವುದು ವೈಶಿಷ್ಟ್ಯವಾಗಿದೆ. ಈ ಶಿಲಾಶಾಸನದ ಮೇಲ್ಭಾಗದಲ್ಲಿ ಸೂಯಚಂದ್ರ ಚಿನ್ಹೆ ಇದ್ದು, ಗೋವು, ಬಸವ, ಶಿವಲಿಂಗ ಜೊತೆಗೆ ಬಲಿಚಕ್ರವರ್ತಿಯನ್ನು ತ್ರೀ ವಿಕ್ರಮನಾಗಿ ಶ್ರೀಮನ್ ನಾರಾಯಣ ಪಾತಾಳಲೋಕಕ್ಕೆ ಕಳುಹಿಸುತ್ತಿರುವಂತೆ ಉಬ್ಬುಚಿತ್ರ ಬಿಡಿಸಿರುವುದು ಗಮನಾರ್ಹವಾಗಿದೆ.

ಶಾಸನ ೨ : ಇದೇ ಹರಿಹರೇಶ್ವರ ದೇವಸ್ಥಾನದ ವಾಯವ್ಯಕ್ಕಿರುವ ಸುಂಕದ ಮನೆ ತನದ ಹಿತ್ತಲಿನಲ್ಲಿ, ತುಂಗಭದ್ರ ನದಿ ದಂಡೆಗೆ ಹೋಗುವ ಕಾಲುದಾರಿಯಲ್ಲಿ ಒಂದು ಶಾಸನದ ಕಲ್ಲು ಇದೆ. ಈಗ ಮುಳ್ಳು, ಗಿಡಗಂಟೆಗಳ ಮಧ್ಯೆ ನೆಲದ ಮೇಲೆ ಮಲಗಿಸಿರುವ ೧½' ಅಗಲ, ೬' ಉದ್ದ, ½' ದಪ್ಪ ಇರುವ ಈ ಶಿಲಾಶಾಸನ, ಈವರೆಗೆ ಯಾವ ಶಾಸನ ಸಂಪುಟದಲ್ಲಿ ಪ್ರಕಟವಾಗಿಲ್ಲ. ಹರಿಹರದವರೇ ಆದ ಪ್ರೊ. ಎಚ್.ಎಂ. ಶಂಕರ ನಾರಾಯಣರಾಯರು ತಮ್ಮ ಶ್ರೀಹರಿಹರ ದೇವಾಲಯ ಎಂಬ ಕ್ಷೇತ್ರ ಪರಿಚಯ ಗ್ರಂಥ ದಲ್ಲಿ ಈ ಶಾಸನ ಪರಿಚಯಿಸಿದ್ದು, ಅದರಂತೆ ೧೯೮೨ರಲ್ಲಿ ಶಾಸನ ತಜ್ಞ ಬಿ.ಆರ್. ಗೋಪಾಲ್ ಶಾಸನ ಓದಿರುವುದಾಗಿ ನಮೂದಿಸಿದ್ದಾರೆ.



ಈ ಶಾಸನವನ್ನು ಕಲ್ಲುಕಂಭದ ಒಂದು ಮುಖದಲ್ಲಿ ಕೆತ್ತಲಾಗಿದೆ. ಇತರೆ ಶಿಲಾಶಾಸನಗಳಂತೆ ಮೇಲ್ಭಾಗದಲ್ಲಿ ಸೂರ್ಯ ಚಂದ್ರ ಶಿವಲಿಂಗ ಇತ್ಯಾದಿ ಯಾವ ಉಬ್ಬು ಶಿಲ್ಪಗಳನ್ನು ಬಿಡಿಸದೆ, ಖಾಲಿಸ್ಥಾನ ಬಿಡಲಾಗಿದೆ. ಅಂಚಿನ ಎರಡೂ ಕಡೆ ಅಕ್ಷರಗಳು ಸವೆದು ಭಿನ್ನವಾಗಿ ಹೋಗಿವೆ. ೧೪ನೇ ಶತಮಾನದ ದುಂಡನೆಯ ಸುಂದರ ಅಕ್ಷರಗಳಲ್ಲಿ ಈ ಶಾಸನ ಖಂಡಿರಿಸಲಾಗಿದ್ದು, ಈ ಶಾಸನ ವಿಜನಯಗರದ ಅರಸು ಇಮ್ಮಡಿ ಹರಿಹರನ ಕಾಲದ್ದಾಗಿದೆ. ಶಾಸನದಲ್ಲಿ ನಮೂದಿಸಿದ ಕಾಲದಂತೆ ೧೩೦೯ನೇ ಪ್ರಭಾವ ಸಂವತ್ಸರದ ಕಾರ್ತಿಕ ಶುದ್ಧ೧, ಮಂಗಳವಾರ (ಅಕ್ಟೋಬರ್ ೧೫, ೧೩೮೭)ದಲ್ಲಿ ಬರೆದ ಈ ಶಾಸನ ಕನ್ನಡ ಲಿಪಿಯಲ್ಲಿದ್ದು, ಸಂಸ್ಕೃತ ಭಾಷೆಯಲ್ಲಿದೆ. ४೫ ಸಾಲುಗಳುಳ್ಳ ಈ ಶಾಸನಚಂಪಕ ಮಾಲಾ ವೃತ್ತದಿಂದ ಮೊದಲಾಗುತ್ತದೆ. ಇದರಲ್ಲಿ ಹರಿಹರ ಸ್ಥಳವನ್ನು ಕೂಡಲಿಪುರವೆಂದೂ, ಹರಿಹರೇಶ್ವರನನ್ನು ಅಚ್ಯುತ ಶಂಕರ, ಹರಿಹರ ದೇವರು ಎಂದು



ಕರೆಯಲಾಗಿದೆ. ಪ್ರಾರಂಭದಲ್ಲಿ ಸಮುದ್ರ ವರ್ಣನೆ, ಆಮೇಲೆ ಯದುವಂಶದ ಉದಯ, ನಂತರ ಅದರಲ್ಲಿ ಹುಟ್ಟಿದ ಇಮ್ಮಡಿ ಹರಿಹರರಾಯನ ಪ್ರತಾಪ, ಬಿರುದು, ಅವನು ಮಾಡಿದ ಷೋಡಶದಾನಗಳನ್ನು ತಿಳಿಸಿ, ಅಲ್ಲಿರುವ ಏಕನಾಥೇಶ್ವರಿ ದೇವಿಯನ್ನು ಸ್ತುತಿಸಿ, ಆ ದೇವಿಗೆ ಪ್ರತಿ ತಿಂಗಳೂ ಪಂಚ ಪರ್ವಗಳಲ್ಲಿ, ಮಹಾನವಮಿಯಂದು ನಡೆಸಬೇಕಾದ ಸೇವಾ ವಿವರಗಳನ್ನು ಒದಗಿಸಿ, ಅದಕ್ಕಾಗಿ ಕೊಟ್ಟ ದಾನದ ಬಗ್ಗೆ ಉಲ್ಲೇಖಿಸಲಾಗಿದೆ. ಈ ಶಾಸನವನ್ನೂ ಧರಣೋಜ ಬರೆದುದಾಗಿ ತಿಳಿಸುತ್ತದೆ. ಕೊನೆಯಲ್ಲಿ ಸಾಂಪ್ರದಾಯಿಕ ಶಾಪಾಶಯ ಇದೆ.

ಹಾಲಿ ಹರಿಹರೇಶ್ವರ ದೇವಸ್ಥಾನದ ದಕ್ಷಿಣಕ್ಕೆ ಏಕನಾಥೇಶ್ವರಿ ದೇವಸ್ಥಾನವಿದ್ದು, ಈ ಶಾಸನ ದೇವಸ್ಥಾನದ ಉತ್ತರಕ್ಕೆ ದೊರೆತಿದೆ. ಈ ಶಾಸನದಲ್ಲಿ ಉಲ್ಲೇಖಿಸಿರುವ ಏಕನಾಥೇಶ್ವರಿ ದೇವಾಲಯ, ಈಗಿರುವ ದೇವಾಲಯವೋ ಅಥವ ಬೆರೆಯದೋ ನಿರ್ದಿಷ್ಟವಾಗಿ ಹೇಳಲಾಗುತ್ತಿಲ್ಲ. ಈಗಿರುವ ಏಕನಾಥೇಶ್ವರಿ ದೇವಸ್ಥಾನಕ್ಕೂ ಈಗಲೂ ಅಲ್ಲಿನ ಜನ ಸಿಡುಬು, ಧಡಾರ, ಅಮ್ಮ ಮುಂತಾದ ರೋಗಾದ್ಯು ಪದ್ರವ್ಯಗಳು ಬಂದಾಗ ಹರಿಕೆ ತೀರಿಸುವುದು, ತನಿಎರೆಯುವುದು ಇತ್ಯಾದಿ ಪೂಜೆ ಸಲ್ಲಿಸುವ ಕ್ರಮವಿದೆ. ಶಾಸನದಲ್ಲಿ ದೇವಿಯನ್ನು ಹಾವು, ಚೇಳುಗಳ ವಿಷ ಪರಿಹರಿಸು ವಳು, ಅಗ್ನಿ, ಜಲ ಭಯ ನಿವಾರಿಸ ತಕ್ಕವಳು ಎಂದು ವರ್ಣಿಸಲಾಗಿದೆ. ಈಗ ಶಾಸನ ದೊರೆತ ಸ್ಥಳದಲ್ಲಿ ಅನೇಕ ನಾಗರಶಿಲ್ಪಗಳು ಇದ್ದು, ಅದೊಂದು ನಾಗರ ಬನವಿದ್ದಂ ತಿದೆ. ಹಾಗಾಗಿ ಅಲ್ಲಿಯೇ ಶಾಸನದ ಉಲ್ಲೇಖಿತ ಏಕನಾಥೇಶ್ವರಿ ದೇವಸ್ಥಾನವಿದ್ದು, ಈ ದೇವಾಲಯದ ಸ್ಥಳ ಬದಲಾಗಿರಬೇಕೆಂದೆನಿಸುತ್ತದೆ. ಈ ಶಾಸನದ ಸೇರ್ಪಡೆ ಯೊಂದಿಗೆ ವಿಜಯನಗರ ಅರಸ್ಸರ ಶಾಸನಗಳಲ್ಲಿ ಇನ್ನೊಂದು ಹೊಸ ಶಾಸನ ಸೇರ್ಪಡೆ ಯಾದಂತಾಗಿದ್ದು, ಶಾಸನದ ಪೂರ್ಣ ಪಾಠವನ್ನು ಪ್ರಬಂಧದ ಕಡೆಯಲ್ಲಿ ಕೊಡ ಲಾಗಿದೆ.

ಶಾಸನ ೨: ಬಿ.ಎಲ್. ರೈಸರ ಶಾಸನ ಸಂಪುಟದಲ್ಲಿ (ದಾವಣಗೆರೆ 68) ಇಮ್ಮಡಿ ಹರಿಹರನ ಒಂದು ತಾಮ್ರಶಾಸನ ಪ್ರಕಟವಾಗಿದೆ. ಅದೇ ಗ್ರಾಮದ ಶಾನು ಭೋಗರ ವಶದಲ್ಲಿದ್ದ ತಾಮ್ರಶಾಸನದ ನಕಲು ಅದು ಎಂದು ನಮೂದಿಸಿದ್ದು, ಆ ಶಾಸನದ

ಮೂಲ ಪ್ರತಿ ಆಗಲೀ, ಈ ನಕಲು ಶಾಸನವಾಗಲಿ ಈಗ ಯಾರ ಹತ್ತಿರವಿದೆ ಎಂದು ತಿಳಿದು ಬರುತ್ತಿಲ್ಲ.

ಈ ಶಾಸನವನ್ನು ಶ್ರೀ ಹರಿಹರೇಶ್ವರ ಸ್ವಾಮಿಯ ಆದೇಶದಂತೆ ಸ್ವಾಮಿಯ ಸನ್ನಿದಿಯಲ್ಲಿ ವಿಶ್ವಾಮಿತ್ರಗೋತ್ರದ ಆಶ್ವಲಾಯನ ಸೂತ್ರದ ಋಕ್‌ಶಾಖೆಯ ರಾಮ ದೇವಯ್ಯನ ಮಕ್ಕಳು ಲಿಂಗರಸರಿಗೆ, ಕೊಟ್ಟೂರು ಚಾವಡಿ ಕೆಳಗಣ, ಉಚ್ಚಂಗಿ ವೇಂಠೆಗೆ ಸೇರಿದ, ಹರಿಹರ ಸೀಮೆ ಒಳಗಣ ಶಾಂಕರಿಪುರ ಎಂಬ ಗ್ರಾಮವನ್ನು ಹಿಂದಿನ ಸ್ವಾಸ್ತಿಯೊಂದಿಗೆ ಮಹಾಜನರಿಗೆ ದೇವಾಲಯದ ಎರಡು ವೇದ ಪಾರಾಯಣದ ವೃತ್ತಿಯನ್ನು ಸಹ ಅನುಭವಿಸಿಕೊಂಡು ಬರುವಂತೆ, ಸಹಿರಣ್ಯೋದಕ ದಾನ, ಧಾರಾ ಪೂರ್ವಕವಾಗಿ ಇಮ್ಮಡಿ ಹರಿಹರ ಮಹಾರಾಜರು ಶಕ ೧೧೮೩ನೆಯ ದುಂದುಭಿ ಸಂವತ್ಸರದ ವೈಶಾಖ ಬಹುಳ ೩೦ ಅಮಾವಾಸ್ಯೆ ಭಾನುವಾರ ಕೊಟ್ಟಿದ್ದಾಗಿ ತಿಳಿಸುತ್ತದೆ. ಅದರಂತೆ ಕಾಲ ಕ್ರಿ.ಶ.೧೨೬೧. ಇಮ್ಮಡಿ ಹರಿಹರನ ಕಾಲ ೧೩೭೭-೧೪೦೬ ಎಂದು ಹಲವು ಶಾಸನಾಧಾರಗಳಿಂದ ದೃಢೀಕರಿಸಲ್ಪಟ್ಟಿದ್ದು, ಶಾಸನದಲ್ಲಿ ನಮೂದಾದ ಕಾಲ ತಪ್ಪಾಗಿರುವ ಸಾಧ್ಯತೆಯೇ ಹೆಚ್ಚು. ಈ ತಾಮ್ರ ಪತ್ರ ನಕಲಾಗಿರುವುದರಿಂದಲೂ, ನಕಲು ಮಾಡಿಕೊಳ್ಳುವಾಗಲೂ ತಪ್ಪಾಗಿರುವ ಸಾಧ್ಯತೆ ಇದೆ. ಶಾಸನದ ಪ್ರಾರಂಭಿಕ ಶ್ಲೋಕಗಳು ಮತ್ತು ಶಾಪಾಶ್ರಯ ಭಾಗ ಸಂಸ್ಕೃತದಲ್ಲಿದ್ದು, ಉಳಿದಂತೆ ಶಾಸನದ ಎಲ್ಲಾ ವಿಷಯ, ಲಿಪಿ, ಭಾಷೆ ಕನ್ನಡದಲ್ಲಿಯೇ ಇದೆ.

ಶಾಸನದಲ್ಲಿ ಪ್ರತಿ ನಾಮಧೇಯವಾಗಿ ಕೊಟ್ಟಂಥ ಶಾಂಕರೀಪುರ ಗ್ರಾಮದ ಉಲ್ಲೇಖವಿದೆ. ಈಗ ಆ ಹೆಸರಿನ ಗ್ರಾಮಗಳಾವುವೂ ಹರಿಹರದ ಸಮೀಪ ಇರುವುದಿಲ್ಲ. ಅದರ ಸಮೀಪ ಇರುವ ಸಂಕಲೀಪುರ ಎಂಬ ಗ್ರಾಮವೇ ಅದಾಗಿರಬೇಕು. ಶಾಸನದಲ್ಲಿ ಸೂಚಿಸಿರುವ ಚತುಃಸೀಮಾಗಡಿ ವಿವರದಂತೆ ಪಶ್ಚಿಮಕ್ಕೆ ಹರಿದ್ರಾನದಿ ಎಂದು ನಮೂದಿಸಿದ್ದು ಇದಕ್ಕೆ ತಾಳೆಯಾಗುತ್ತದೆ. ಹಾಲಿ ಈಗ ಹರಿದ್ರಾ ನದಿ ಹೆಸರು ಚಲಾವಣೆಯಲ್ಲಿಲ್ಲ. ಈಗ ಸೂಳೇಕೆರೆ ಹಳ್ಳ, ಶಾಗಲೆಹಳ್ಳ, ಸೊಪ್ಪಿನಹಳ್ಳ, ತುಮರಿಹಳ್ಳ, ಮಾವಿನಹೊಳೆ ಇತ್ಯಾದಿ ಕರೆಯುವ ಚಿಕ್ಕ ತೊರೆಗಳ ಸಮೂಹಕ್ಕೆ ಶಾಸನಗಳಲ್ಲಿ ಹರಿದ್ರಾ, ಹರಿದ್ರಾವತಿ ಎಂದು ಕರೆಯಲ್ಪಟ್ಟಿದೆ. ಹರಿಹರದ ಬಳಿ ಈ ನದಿ ತುಂಗಾಭದ್ರ ನದಿಗೆ ಸೇರುವುದರಿಂದಲೇ ಹರಿಹರಕ್ಕೆ ಕೂಡಲೂರು, ಕೂಡಲೀಪುರ ಎಂಬ ಹೆಸರೂ ಶಾಸನದಲ್ಲಿ ಕೊಡಲಾಗಿದೆ. ಈ ಶಾಸನವನ್ನು ಶ್ರೀ ಮನ್ಮಹಾರಾಜಾಧಿ ರಾಜ ಪರಮೇಶ್ವರ ಸರ್ವರಾಜರಕ್ಷಕ ಧರ್ಮಮೂರ್ತಿ ಹರಿಹರರಾಯ ಮಹಾರಾಯರು ವಿಶ್ವಾಮಿತ್ರ ಗೋತ್ರದ ಆಶ್ವಲಾಯನ ಸೂತ್ರದ ಋಕ್ ಶಾಖೆಯ ರಾಮದೇವಯ್ಯಗಳ ಮಕ್ಕಳು ಲಿಂಗರಸರಿಗೆ ದಾನವಾಗಿಕೊಟ್ಟಿದ್ದು ಶ್ರೀ ಹರಿಹರ ದೇವಾಲಯ ಗ್ರಂಥ ಕರ್ತೃ ಹೆಚ್. ಎಂ. ಶಂಕರನಾರಾಯಣರಾಯರು ದಾವಣಗೆರೆ - ೬೭ ಶಾಸನದಲ್ಲಿ ಉಲ್ಲೇಖಿಸಲಾದ

ರಾಮಣ್ಣ ಜೋಯಿಸರು ಈ ಶಾಸನದಲ್ಲಿ ಉಲ್ಲೇಖಿತ ರಾಮ ದೇವಯ್ಯ ಒಂದೇ ಕುಟುಂಬ ದವರಿರಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೆ ಅದು ತಪ್ಪು. ಕಾರಣ ಶಾಸನ ೬೭ರಲ್ಲಿ ಉಲ್ಲೇಖಿತ ರಾಮಣ್ಣ ಜೋಯಿಸರು ಕಾಶ್ಯಪ ಗೋತ್ರದವರೆಂದೂ, ಈ ಶಾಸನದಲ್ಲಿ ಉಲ್ಲೇಖಿತ ರಾಮದೇವಯ್ಯ ವಿಶ್ವಾಮಿತ್ರ ಗೋತ್ರದವರೆಂದು ನಮೂದಿಸಿರುವುದು ಅವರ ಅಭಿಪ್ರಾಯ ತಪ್ಪಾಗಿದೆ ಎಂದು ಸ್ಪಷ್ಟವಾಗಿ ತಿಳಿಯ ಬಹುದಾಗಿದೆ.

ಇದೇ ದಾವಣಗೆರೆ ಜಿಲ್ಲೆಗೆ ಸೇರಿದ ಹೊನ್ನಾಳಿ ತಾಲೂಕು ಕುರುವ ಗ್ರಾಮದ ಕ್ರಿ.ಶ.೧೩೯೦ರ ಶಾಸನ (ಹೊನ್ನಾಳಿ ೬) ಇಮ್ಮಡಿ ಹರಿಹರವನ್ನು ಶ್ರೀ ಮನ್ಮಹಾ ಮಂಡಳೇಶ್ವರ ಮಹಾರಾಜಾಧಿರಾಜ ರಾಜ ಪರಮೇಶ್ವರ, ಚತುಸ್ಸಮುದ್ರಾಧಿಪತಿ, ಮೂರುರಾಯರ ಗಂಡ ಶ್ರೀ ವೀರ ಹರಿಹರರಾಯರು ವಿಜಯನಗರಿಯಲುಸ್ತಿರ ರಾಜ್ಯಂಗೆಯುತಿರುವಲ್ಲಿ ಎಂದು ಉಲ್ಲೇಖಿಸಿದ್ದು, ಈ ಶಾಸನದ ವೇಳೆಗಾಗಲೇ ಇಮ್ಮಡಿ ಹರಿಹರ ಚಕ್ರವರ್ತಿ ಎಂದು ಮಾನ್ಯತೆಗಳಿಸಿರುವುದಾಗಿ ತಿಳಿಯಬಹುದಾಗಿದೆ.

ಒಟ್ಟಿನಲ್ಲಿ ಮೇಲ್ಕಂಡ ಮೂರು ಶಾಸನಗಳಿಂದ ವಿಜಯನಗರದ ಅರಸು ಹರಿಹರ ರಾಯನು ತನ್ನ ಹೆಸರಿನ ದೇವತೆಯಾದ ಹರಿಹರ ದೇವರಿಗೆ ಭಕ್ತನಾಗಿ, ಅನೇಕ ಸೇವಾ ಕೈಂಕರ್ಯ ಕೈಗೊಂಡಿದ್ದನ್ನು ತಿಳಿಯಬಹುದಾಗಿದೆ.

ಈ ಲೇಖನ ಸಿದ್ಧಪಡಿಸುವಲ್ಲಿ ಅನೇಕ ಸಲಹೆ ಸೂಚನೆ ನೀಡಿದ ಚಿತ್ರದುರ್ಗದ ಸಂಶೋಧಕ ಡಾ. ಬಿ. ರಾಜಶೇಖರಪ್ಪ, ಹರಿಹರದ ಕ್ಷೇತ್ರ ಕಾರ್ಯದಲ್ಲಿ ಸಹಕರಿಸಿದ ಹರಿಹರದ ಶ್ರೀಮತಿ ಪದ್ಮಜಾ ಶೇಷಗಿರಿರಾವ್, ಸುಂಕದ ಮಾಧವರಾಯರಿಗೆ ನನ್ನ ಅಭಿನಂದನೆಗಳು. ಒಂದು ಹೊಸ ಶಾಸನದ ಪಾಠ ಉಪಯೋಗಿಸಿಕೊಂಡಿದ್ದಕ್ಕಾಗಿ ಡಾ. ಬಿ.ಆರ್. ಗೋಪಾಲ್ ರವರಿಗೆ ಕೃತಜ್ಞನಾಗಿದ್ದೇನೆ.

ಅಪ್ರಕಟಿತ ಹೊಸ ಶಾಸನದ ಪಾಠ

ಶ್ರೀ ಹರಿಹರ ದೇವಾಲಯದಿಂದ ಈ ಪಾಠ ತೆಗೆದುಕೊಳ್ಳಲಾಗಿದೆ

೧. ಶ್ರೀಮದನಂತಭೋಗಪರಿರಂಜಿತನೂರ್ಜಿತ ಸರ್ವ.

೨. .... ನುದ್ದಾಮ ವಿನಾಯಕಾಶ್ರಿತಪದಾಂಬುಜನಚ್ಯುತಶಂಕರಂ

೩. [ದಿನಿ]. ದ್ವೀಪವ್ಯೋಮದೊಂದು. ಸಾದಡಮಲಂ. ನುರ್ಗಾಭೀಳ

೪. .... ಮಾಗಲ್ ತಱಿದು ಮನಸುಗೊಂಡು ವಿಳಯಂ...

೫. ....

೬. ದೊಳ್ ತೇಲಿಪ್ಪ [ನುಂ] .... ದಿನ್ ತಣ.. ನೆ ನಗುತಿರ್ಪಂತೆ

೭. .... ದ್ರಂ ಸಮುದ್ರಂ ||ಕಂ|| ಯಮವಿಂ ಯದುವಂಶಮದಾ [ದುದು]

೮. .... ಪನುದಯಿಪವೊಲು ಕ್ಷೀರವಾರ್ಧಿಯೊಳ್ಪಿದು ಮುದದಿಂ

೯. ....ವಾ. ಕುಮಾರರಾದಾರಭರ್ೂಗು.ಕರ ಹರಿನೃಪಾಳ. ಭೂ...

೧೦. ....ಪ್ರಭಮೆನೆ ಸಮಾನಂ.... ಸಮನೊಗೆದನಹಿತನೃಪಾಂಶ [ಕಂ]ಹರಿಹರ....

೧೧. .... ತೆ ಸುರಶಾಲಂ ಲಸತ್ಕೀರ್ತಿಲೋಲಂ ದಳಿತ ಪ್ರತ್ಯದ್ವಿಜಾಲಂ....

೧೨. ಲು ವಸನಪ್ಪಕಾಲಂ ಪ್ರತಾಪೈಕಕಾಲಂ ಖಳ.... ಶ್ವೇತಲ್ಕರಾಳ....

೧೩. .... ಭೂಮಂಡಲ ಮಂಡನ ಭುಜಾದಂಡ ವರ್ತಮಾನ ರಾಜಪರಮೇಶ್ವರ ಪ

೧೪. .... ರಾಜನ್ಯಭುಜಂಗ ಹಿಂದೂರಾಯ ಸುರತ್ರಾಣ ಶರಣಾಗತ ವಜ್ರ [ಪಂಜರ]

೧೫. ...ದನೂನ ಷೋಡಶಮಹಾದಾನಮದಗ್ರಗಣ್ಯ ದೀನಾನಾಥಶರಣ್ಯ.ಯೆ

೧೬. .ರಂ... ದಳದರಿ ಭೀಮಂ ಯದುಕುಲಲಲಾಮಂ ಸ್ಥಿರಪುಣ್ಯಶೀಲಂ....

೧೭. .... ರಿಪುನೃಪರ ಸರ್ವಸ್ವಯಂ ಕಪ್ಪಂಗೊಂಡು ಷೋಡಶಮಹಾದಾನ

೧೮. .[ತ್ರಿಪು]ರ ಸಂಹಾರನಂ ಶ್ರೀಗಿರಿಜಾವರನಂ ನಗೇಂದ್ರಧರನಂ ಜಿತ....

೧೯. ಮ ಉಕ್ತಿಕ ಛತ್ರ ಪೀತಾಂಬರ ಮಕುಟ ಪದಕಕೇಯೂರಾದಿ ಭೂ

೨೦. ಷಣ ... ನ್ವಯ ಪ್ರಭವ ಸಂವತ್ಸರದ ಕಾರ್ತಿಕ ಶುದ್ಧ ೧ ಮಂಗ....

೨೧. ಹರೀಶನೊಲ್ದಿಹಂ ಸುರುಚಿರ ತುಂಗಭದ್ರೆಯ ಸತಿ[ೀ]ರಮಿರ್ದ...

೨೨. .... ವಾಗಿ ಕೂಡಲಿಪುರುದೊಳಗೊಲ್ಮೆಯಿಂ ನೆಲಸಿದಳ್ ಜಗದಂಬಿಕೆ ದೇವಿ

೨೩. ಪ್ರಭು[ರಾನೆ] ಚಕ್ರಧರೆ ಶೂಲನ್ಯಸ್ತಹಸ್ತಾಬ್ಜೆ ನಾನಾ ಮ ....[ಏ]ಕನಾಥೆ

೨೪. ಮುದದಿ ರಕ್ಷಿಕ್ಕೆ ಭೂಚಕ್ರಮಂ || ದಯೆಗಿಪ್ಪಾ....

೨೫. .... ಸುಳಾಳ್ದಾರಿಣಿ ಪಾಲರುಮ್ ವೋಲಿಲ್ಲೆಲಿಪನ್ನೆಗಂ ಪ....

೨೬. .... ರೇಣುಕದೇವಿಯಂ ತದ್ಭೂತಾರಿ ಕುಷ್ಪುಕಾಮಮೆ ಕೀಡೆಸೆ ಸಿ

೨೭. .... ಪದಮನಶೇಷನರರಂ || ಉರಗ ವೃಶ್ಚಿಕ ವಿಷಂಗಳುರಿಜಲ ....

೨೮. ಜಗದೇಕನಾಥೆ ರಕ್ಷಿಪಲನಿಶಂ. ದೊರಳ್ ಬಡತನದೊಳಂ ಸಂಕ[ಟ]....

೨೯. .... ಳದುದ್ಧರಿಸುವಳಚಿಂತ್ಯ ರೂಪಿಣಿ ಸತತಂ || ವಚನ || ಪರಶುರಾಮ

೩೦. ಮಾತೆಯು ಜಗದ್ವಿಖ್ಯಾತೆಯುಂ ಸಮಸ್ತ....

೩೧. .... ಮನತ್ಕನಕ ಚಂಪಕರುಚಿರಗಾತ್ರೆಯುಂ ವಿಬುಧಜನಸ್ತೋತ್ರೆ. [ಯುಂ]....

೩೨. ಭೇದ್ಯಳುಂ ಸುವರ್ಣದರ್ಪಣೋಪಮಗಂಡಮಾಲೆಯಂ ಸರ್ಪಕ....

೩೩. ... ಕಳಾಕಲಿತ ಕಿರೀಟಿಯುಂ, ಅನವರತ ದರಹಸಿತವದನೆಯುಂ....

೩೪. ಕೂಡಲಿಪುರನಿವಾಸಿಯುಮಪ್ಪ ಶ್ರೀಏಕನಾಥೆ ದೇವಿಗೆ ಶ್ರೀ ವೀರ....

೩೫. .... ದೇವತೆಯ ಪೂಜೆಗೆ ಶಂಕರದೇವರಿಂ ಬಡಗಲು ಹಳ್ಳದಿಂ ತೆಂಕ

೩೬. ಸಲುವ ಅಮೃತಪಡಿಯ ವಿವರ ಪ್ರತಿಮಾಸ ಒಂದಕ್ಕಂ ನೆಲ್ಲು ಯೆ....

೩೭. ದಿನವೊಂದಕ್ಕಂ ವೀಳೆಯ ಮೂಱು ಮಹಾನವಮಿಯ ಪರ್ವದ ದಿನಕ್ಕೆ

೩೮. ... ಮೂಱು ತುಪ್ಪ ಗಿದ್ದನ ಎಣ್ಣೆ ಅದ್ದನ ಪಂಚಪರ್ವಂಗಳಲ್ಲಿ ಪ್ರತಿಪರ್ವ ಆ

೩೯. ಹರಿಹರರಾಯರು ಶ್ರೀ ಹರಿಹರದೇವರ ಶ್ರೀಕಾರ್ಯಕಂ ನ[ಏಕನಾ]

೪೦. ಥೆ ದೇವಿಗೆ ತಮ್ಮ ಮನೆಯಿಂ ಪ್ರತಿದಿನಂ ನಡೆಸುವ ವೀಳೆಯ ಒಂದು ದೇವಿ..

೪೧. ಗಳಿಗೆ ದೇವತೆಯ ಪೌಳಿಯಿಂ ಹೊಱಗೆ ಪಡುವಣದೆಸೆಯಲ್ಲಿ ....

೪೨. ಣ್ಣಾಗಿ ಕೊಟ್ಟ ಮನೆ ವೊಂದು. ಶ್ರೀ ಹರಿಹರರಾಯ ನಮಃ|| ಹರಿಹರ

೪೩. .... ಜನಸುತ ಧರಣೋಜಂ ಬರೆದನೀ ಶಿಲಾಶಾಸನಮಂ ||

೪೪. [ಸ್ವದತ್ತಾಂ ಪರದತ್ತಾಂ ವಾ ಯೋ ಹರೇತ ವಸುಂಧರಾಂ |

೪೫. [ಷಷ್ಟಿರ್ವರ್ಷ] ಸಹಸ್ರಾಣಿ ವಿಷ್ಠಾಯಾಂ [ಜಾಯತೇ ಕ್ರಿಮಿಃ]

ಗ್ರಂಥಋಣ

೧. ಶ್ರೀಹರಿಹರ ದೇವಾಲಯ - ಹೆಚ್.ಎಂ. ಶಂಕರನಾರಾಯಣರಾವ್, ಶಾರದಾಮಂದಿರ ಮೈಸೂರು (1982)

೨. ಎಪಿಗ್ರಾಫಿಯಾ ಕರ್ನಾಟಕ -ಸಂ. VII ಭಾಗ I ಮತ್ತು IX- ಬಿ.ಎಲ್. ರೈಸ್

೩. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ - ಮೈಸೂರು ವಿಶ್ವವಿದ್ಯಾನಿಲಯ

೪. ಕರ್ನಾಟಕ ಗ್ರಾಮ ಸೂಚಿ - ಕರ್ನಾಟಕ ಸರ್ಕಾರ

೫. ಸಂಗಮ ಕಾಲದ ವಿಜಯನಗರ - ಸಂ || ಪ್ರೊ. ಜಿ.ಎಸ್. ದೀಕ್ಷಿತ್

೩. ಕೃಷ್ಣದೇವರಾಯನ ಕಾಲದ ಕೆಲವು ಧಾರ್ಮಿಕ ಶಾಸನಗಳು

ಡಿ.ಎಂ. ನಾಗರಾಜು

ಕರ್ನಾಟಕದ ಅನೇಕ ರಾಜಮನೆತಗಳು ಇತಿಹಾಸದ ರಜತ ಪರದೆಯ ಮೇಲೆ ತಮ್ಮ ತಮ್ಮ ಪಾತ್ರಗಳನ್ನು ನಿರ್ವಹಿಸಿ ತಮ್ಮದೇ ಆದ ಕೀರ್ತಿ ಪತಾಕೆಯನ್ನು ಭಾರತದ ನಾನಾ ಭಾಗಗಳಲ್ಲಿ ಹಾರಿಸಿ ಇತಿಹಾಸದ ಪುಟಗಳಲ್ಲಿ ಪ್ರಜ್ವಲಿಸುತ್ತಿವೆ. ಇಂತಹ ರಾಜಮನೆತನಗಳ ಪೈಕಿ ವಿಜಯನಗರವೂ ಒಂದು. ದಕ್ಷಿಣ ಭಾರತದಲ್ಲಿ ಹೊಯ್ಸಳ ಅಧಿಪತ್ಯವು ಕೊನೆಗೊಂಡ ನಂತರ ಮುಸಲ್ಮಾನರ ದಾಳಿಯನ್ನು ತಡೆಗಟ್ಟಿ ಹಿಂದೂ ಧರ್ಮವನ್ನು ರಕ್ಷಿಸುವ ದೃಷ್ಟಿಯಿಂದ ವಿಜಯನಗರ ಸಾಮ್ರಾಜ್ಯವು ಕ್ರಿ.ಶ ೧೩೩೬ರಲ್ಲಿ ಉದ್ಭವಿಸಿತು. ಈ ಶ್ರೇಷ್ಠ ಆದರ್ಶವನ್ನಿಟ್ಟುಕೊಂಡು ಉದ್ಭವಿಸಿದ ಈ ಸಾಮ್ರಾಜ್ಯ ಹದಿನಾಲ್ಕನೇ ಶತಮಾನದಲ್ಲಿ ಪ್ರಖ್ಯಾತ ಹಾಗೂ ವಿಶಾಲ ಸಾಮ್ರಾಜ್ಯವೆನಿಸಿ ಬೆಳೆಯಲಾರಂಭಿಸಿತು. ವಿಜಯನಗರ ಸಾಮ್ರಾಜ್ಯವೂ ಕರ್ನಾಟಕದ ಭವ್ಯ ಪರಂಪರೆ ಯನ್ನು ಸಾರಿತು. ಅದು ಕನ್ನಡಿಗರ ಸಾಹಿತ್ಯ, ಸಂಸ್ಕೃತಿ, ಸಂಗೀತ ಹಾಗೂ ಶಿಲ್ಪಕಲೆಗಳ ಮಹೋನ್ನತಿಯನ್ನು ಸಾರಿದ ಸುವರ್ಣ ಕಾಲ. ವಿಜಯನಗರದ ಅರಸರು ಸಾಮ್ರಾಜ್ಯದ ಸರ್ವತೋಮುಖ ಪ್ರಗತಿಗೆ ಕಾರಣರಾದರು. ಅನೇಕ ವಿದೇಶಿ ಪ್ರವಾಸಿಗರು ಇವು ಗಳನ್ನೆಲ್ಲಾ ನೋಡಿ ಹೊಗಳಿದ್ದಾರೆ. ಸುಮಾರು ಎರಡು ಶತಮಾನಗಳಿಗೂ ಹೆಚ್ಚು ಕಾಲ ರಾಜಕೀಯ ಅಸ್ಥಿರತೆಯನ್ನು ತೊಡೆದುಹಾಕಿ ವಿಜಯನಗರವು ಭಾರತದ ಇತಿಹಾಸದಲ್ಲಿ ಚಿರಸ್ಮರಣೀಯದ್ದು. ಈ ಸಾಮ್ರಾಜ್ಯದ ಸರ್ವತೋಮುಖ ಪ್ರಗತಿಗೆ ಕಾರಣಕರ್ತರು, ಆ ಸಾಮ್ರಾಜ್ಯದ ಧ್ರುವತಾರೆ ಎನಿಸಿರುವ ಕೃಷ್ಣದೇವರಾಯರು. ಇವರು ಆ ರಾಜವಂಶದ ಮೇಲೆ ತನ್ಮೂಲಕ ಆ ಕಾಲದ ಇತಿಹಾಸದ ಮೇಲೆ ತಮ್ಮದೇ ಆದ ಪ್ರಭಾವ ಬೀರಿದ್ದಾರೆ.

ವಿಜಯನಗರದ ಇತಿಹಾಸ ತಿಳಿಯಲು ಸಾಕಷ್ಟು ಆಧಾರಗಳಿವೆ. ಒಂಭತ್ತು ಸಾವಿರಕ್ಕೂ ಹೆಚ್ಚು ಶಾಸನಗಳು ಈ ರಾಜ್ಯದ ಇತಿಹಾಸ ತಿಳಿಯಲು ಹೆಚ್ಚು ಸಹಕಾರಿ ಯಾಗಿದೆ. ಹಾಗೆಯೇ ಮುಖ್ಯ ಆಧಾರವೆಂದರೆ ವಿದೇಶಿಯರ ಬರವಣಿಗೆಗಳು. ಅಬ್ದುಲ್ ರಜಾಕ್, ಪಾಯಸ್, ನ್ಯೂನಿಜ್, ಬಾರ್ಬೋಸಾ, ನಿಕಾಲೋಕೊಂಟಿ, ಫ್ರೆಡರಿಕ್ ಮುಂತಾ ದವರ ಬರವಣಿಗೆ ನಿಜಕ್ಕೂ ಉಪಯುಕ್ತವಾಗಿದೆ. ಮುಸಲ್ಮಾನ ಇತಿಹಾಸಕಾರರಾದ ಬರೌನಿ, ನಿಜಾಮುದ್ದೀನ್ ಬಕ್ಷಿ ಷಿರಾಜಿ ಮುಂತಾದವರ ಬರವಣಿಗೆ ಪರ್ಷಿಯನ್

ಭಾಷೆಯಲ್ಲಿದ್ದು ಅವು ಮುಸಲ್ಮಾನರ ದೊರೆಗಳ ಆಡಳಿತಕ್ಕೆ ಸಂಬಂಧಪಟ್ಟವುಗಳಾಗಿದ್ದರೂ ವಿಜಯನಗರದ ಬೆಳವಣಿಗೆಯ ಬಗ್ಗೆ ಹೆಚ್ಚು ಬೆಳಕು ಚೆಲ್ಲುತ್ತವೆ. ಇವಲ್ಲದೆ ದೇಶೀಯ ಬರವಣಿಗೆಗಳಾದ 'ವಿದ್ಯಾರಣ್ಯಕಾಲಜ್ಞಾನ', ಗಂಗಾಂಬಿಕೆಯ 'ಮಧುರಾ ವಿಜಯ' 'ಡಿಂಡಿಮನ ಸಾಳ್ವಾಭ್ಯುದಯಂ' ನಂಜುಂಡನ 'ಕುಮಾರರಾಮನಕತೆ' ಲಿಂಗಣ್ಣನ 'ಕೆಳದಿ ನೃಪವಿಜಯಂ' ಮುಂತಾದವುಗಳು ಸಹ ವಿಜಯನಗರದ ಇತಿಹಾಸ ಬರೆಯಲು ಸಹಕಾರಿಯಾಗಿದೆ.

ವಿಜಯನಗರದ ಸಾಮ್ರಾಜ್ಯದ ಸ್ಥಾಪಕರು ಅವರ ಮೂಲನಿವಾಸ ಮತ್ತು ರಾಷ್ಟ್ರೀಯತೆಯ ವಿಚಾರವಾಗಿ ಹಲವಾರು ಅಭಿಪ್ರಾಯಗಳು ರೂಢಿಯಲ್ಲಿವೆ. ಇದರ ಬಗ್ಗೆ ತಿಳಿಯಲು ಹಲವು ಆಧಾರಗಳು ಇವೆ. ಒಟ್ಟಿನಲ್ಲಿ ವಿಜಯನಗರ ಸಾಮ್ರಾಜ್ಯವು ಸಂಗಮನ ಮಕ್ಕಳಾದ ಹರಿಹರ, ಬುಕ್ಕ, ಕಂಪ, ಮಾರಪ್ಪ, ಮುದ್ದಪ್ಪ ಎಂಬ ಐವರು ಸಹೋದರರಿಂದ ಸ್ಥಾಪಿತವಾಯಿತು. ಪ್ರಸಿದ್ಧ ಇತಿಹಾಸಜ್ಞ ರೆ|| ಫಾ || ಹೆರಾಸ್‌ರವರು ಇದನ್ನೆ ಸಮರ್ಥಿಸುತ್ತಾರೆ. ಡಾ. ಪಿ.ಬಿ. ದೇಸಾಯಿಯವರು ಸಹ ಈ ಸಾಮ್ರಾಜ್ಯ ಸ್ಥಾಪಕರು ಕನ್ನಡದ ಮೂಲದವರೇ ಎಂದು ಸಮರ್ಥನೀಯವಾಗಿ ಪ್ರತಿಪಾದಿಸಿದ್ದಾರೆ. ಕನ್ನಡ ನಾಡಿನವರು ಹೊಯ್ಸಳ ದೊರೆಗಳೂ ನ್ಯಾಯಬದ್ಧ ಉತ್ತರಾಧಿಕಾರಿಗಳೂ ಆಗಿದ್ದ ಹರಿಹರ ಬುಕ್ಕರು ಕ್ರಿ.ಶ.೧೩೩೬ರಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಈ ಸಹೋದರರಿಗೆ ಶ್ರೀ ವಿದ್ಯಾರಣ್ಯರೆಂಬ ಉದ್ದಾಮ ಪಂಡಿತರು ರಾಜ್ಯಸ್ಥಾಪನೆಯ ಕಾರ್ಯದಲ್ಲಿ ಮಾರ್ಗದರ್ಶನ ನೀಡಿದರು ಎಂದು ನಂಬಲಾಗಿದೆ.

ಆದರೆ ಹರಿಹರ ಮತ್ತು ಬುಕ್ಕರ ಗುರುಗಳು ಕ್ರಿಯಾಶಕ್ತಿ ಎಂದು ಇತ್ತೀಚಿನ ಇತಿಹಾಸಜ್ಞರ ಅಭಿಪ್ರಾಯ. ಈ ಸಹೋದರರು ಹಂಪೆಯಲ್ಲಿ ಸ್ಥಾಪಿಸಿದ ನಗರವೇ ವಿದ್ಯಾನಗರ. ನಂತರ ಇದು ವಿಜಯನಗರವಾಯಿತು. ಇದನ್ನೆ ತುಂಗಭದ್ರೆಯ ದಕ್ಷಿಣ ದಂಡೆಯ ಮೇಲೆ ಆನೆಗುಂದಿಯ ಹಳೆಕೋಟೆಯ ಎದುರಿಗೆ ಕಟ್ಟಲಾಯಿತು. ವಿರೂಪಾಕ್ಷನ ಹೆಸರಿನಲ್ಲೇ ಸಾಮ್ರಾಜ್ಯದ ಆಡಳಿತಸಾಗಿತು. ವರಾಹವನ್ನೇ ಸಾಮ್ರಾಜ್ಯದ ಲಾಂಛನವನ್ನಾಗಿ ಇಟ್ಟುಕೊಳ್ಳಲಾಯಿತು. ಈ ಒಂದು ರಾಜ್ಯವು ಅನುಕ್ರಮವಾಗಿ ಸಂಗಮ, ಸಾಳ್ವ, ತುಳುವ, ಅರವೀಡು ಎಂಬ ನಾಲ್ಕು ರಾಜವಂಶಗಳ ಪ್ರಭುತ್ವಕ್ಕೊಳಪಟ್ಟಿತು. ಸಾಳುವ ವಂಶದ ಆಳ್ವಿಕೆ ಕೊನೆಗೊಂಡ ಮೇಲೆ ವೀರನರಸಿಂಹನು ತುಳುವ ವಂಶದ ಮೊದಲನೇ ದೊರೆಯಾದನು. ವೀರನರಸಿಂಹನು ಕೇವಲ ನಾಲ್ಕು ವರ್ಷಗಳ ಕಾಲ ಅಂದರೆ ಕ್ರಿ.ಶ. ೧೫೦೫ ರಿಂದ ಕ್ರಿ.ಶ ೧೫೦೯ರವರೆಗೆ ರಾಜ್ಯವಾಳಿದನು. ಸಾಮಂತರ ಹಾಗೂ ಸುತ್ತಮುತ್ತಲ ಅರಸರ ಉಪಟಳದಿಂದಾಗಿ ಅವನ ಕಾಲದಲ್ಲಿ ಗಮನಾರ್ಹವಾದ ಬೆಳವಣಿಗೆ ಆಗಲಿಲ್ಲ. ಅನಂತರ ಕೃಷ್ಣದೇವರಾಯನು ೧೫೦೯ರಲ್ಲಿ ಪಟ್ಟಕ್ಕೆ ಬಂದನು.

ಕೃಷ್ಣದೇವರಾಯನು (ಕ್ರಿ.ಶ. ೧೫೦೯-೧೫೨೯) ವಿಜಯನಗರದ ಅರಸರಲ್ಲೆಲ್ಲಾ ಪ್ರಸಿದ್ಧನೆನಿಸಿದ ಕೃಷ್ಣದೇವರಾಯ ದಕ್ಷಿಣ ಭಾರತದ ಅರಸರಲ್ಲೆಲ್ಲಾ ಶ್ರೇಷ್ಠನೆಂದರೆ ತಪ್ಪಾಗಲಾರದು. ಹದಿನಾರನೆಯ ಶತಮಾನದ ಆರಂಭ ಕಾಲ ಭಾರತಾದ್ಯಂತ ಅರಾಜಕತೆ ತಲೆದೋರಿದ ಕಾಲ. ಭಾರತದ ಯಾವ ಭಾಗದಲ್ಲೂ ಆಡಳಿತವಾಗಲೀ ಸಮರ್ಥ ಆರ್ಥಿಕ ನೀತಿಯಾಗಲೀ ಜನರಲ್ಲಿ ಶಾಂತಿ ಸಮೃದ್ಧಿಯಾಗಲೀ ಇರಲಿಲ್ಲ. ವಿಜಯನಗರವು ಇದಕ್ಕೆ ಹೊರತಾಗಿರಲಿಲ್ಲ. ವಿಜಯನಗರವು ಎರಡನೇ ದೇವರಾಯನ ಕಾಲದಲ್ಲಿ ಶಾಂತಿ ಸಮೃದ್ಧಿಯನ್ನು ಕಳೆದುಕೊಂಡು ಆಂತರಿಕ ಕಲಹದಿಂದ ಮತ್ತು ಬಾಹ್ಯ ಆಕ್ರಮಣಗಳ ಜಂಜಾಟದಲ್ಲಿ ನಿಶ್ಯಕ್ತವಾಗಿತ್ತು. ಇಂತಹ ಸಂದರ್ಭದಲ್ಲಿ ಒಬ್ಬ ಯೋಗ್ಯ, ಸಮರ್ಥ ಅರಸನ ಅಗತ್ಯವಿತ್ತು. ಈ ಕೊರತೆಯನ್ನು ತುಂಬಿದವನು ಕೃಷ್ಣದೇವರಾಯ. ಅಪ್ರತಿಮ ವೀರನೂ ದಕ್ಷನೂ ಸಮರ್ಥ ಆಡಳಿತಗಾರನೂ ಕಲಾಪ್ರೇಮಿಯೂ ಆದ ಕೃಷ್ಣದೇವರಾಯ ವಿಜಯನಗರವು ಹೆಚ್ಚಿನ ವೈಭವದಿಂದ ಮೆರೆಯುವಂತೆ ಮಾಡಿದುದರಿಂದ ಅವನ ಕಾಲವು ದಕ್ಷಿಣ ಭಾರತದ ಸುವರ್ಣ ಯುಗವೆಂದು ಹೆಸರು ಪಡೆದಿದೆ. ತನ್ನ ಇಪ್ಪತ್ತು ವರ್ಷಗಳ ಆಳ್ವಿಕೆಯ ಕಾಲದಲ್ಲಿ ಹೆಚ್ಚಿನ ಸಮಯವನ್ನು ಯುದ್ಧ ಭೂಮಿಗಳಲ್ಲೇ ಕಳೆದರೂ ವಿಜಯನಗರದ ಅರಸರಲ್ಲಿ ಅಪಜಯವನ್ನು ಕಂಡರಿಯದ ಅರಸನೆಂದರೆ ಇವನೊಬ್ಬನೇ. ಇವನು ಸಾಮ್ರಾಜ್ಯದ ಆಡಳಿತವನ್ನು ಸುಧಾರಿಸಿ ಆರ್ಥಿಕತೆಯನ್ನು ಉತ್ತಮಗೊಳಿಸಿದನು. ಚಿತ್ರಕಲೆ, ನೃತ್ಯ, ಸಂಗೀತ ಮತ್ತು ಶಿಲ್ಪಕಲೆಗಳಿಗೆ ಪ್ರೋತ್ಸಾಹ ಕೊಟ್ಟನು. ಸಂಸ್ಕೃತ, ಕನ್ನಡ, ತೆಲುಗು ಮತ್ತು ತಮಿಳು ಸಾಹಿತ್ಯಗಳ ಅಭಿವೃದ್ಧಿ ಇವನ ಕಾಲದಲ್ಲಾಯಿತು. ಶ್ರೇಷ್ಠ ಕೃತಿಗಳು ರಚಿಸಲ್ಪಟ್ಟವು. ಇವನ ರಾಜ್ಯವನ್ನು ಸಂದರ್ಶಿಸಿದ ವಿದೇಶೀಯರೂ ಇವನ ದಕ್ಷತೆಗೆ ಪರಮ ಸಹಿಷ್ಣುತೆಗೆ, ಪೌರುಷಕ್ಕೆ, ವೈಭವಕ್ಕೆ ತಲೆದೂಗಿದ್ದಾರೆ.

ಪರಮತ ಸಹಿಷ್ಣುವಾದ ಕೃಷ್ಣದೇವರಾಯನು ಎಲ್ಲಾ ಧರ್ಮಗಳನ್ನು ಗೌರವಿಸುತ್ತಿದ್ದನು. ಕ್ರೈಸ್ತ, ಇಸ್ಲಾಂ ಧರ್ಮದವರಿಗೆ ಅವರವರ ಪೂಜಾಮಂದಿರಗಳನ್ನು ಕಟ್ಟಿಕೊಳ್ಳಲು ಅವಕಾಶ ಮಾಡಿಕೊಟ್ಟನು. ತನ್ನ ಸೈನ್ಯದಲ್ಲಿದ್ದ ಮಹಮ್ಮದೀಯರಿಗೆ ತಾನೇ ಮಸೀದಿಯನ್ನು ಕಟ್ಟಿಸಿಕೊಟ್ಟನು. ಪಾಳುಬಿದ್ದ ಶೈವ ಮತ್ತು ವೈಷ್ಣವ ದೇವಾಲಯಗಳನ್ನು ದುರಸ್ತಿಗೊಳಿಸಿದನು ಮತ್ತು ಹೊಸ ದೇವಾಲಯಗಳನ್ನು ಅಭಿವೃದ್ಧಿಪಡಿಸಿ ಕಟ್ಟಿಸಿದನೆಂದು ಶಾಸನಗಳಲ್ಲಿ ಉಲ್ಲೇಖವಿದೆ. ಹಂಪೆಯ ರಾಮಸ್ವಾಮಿ ದೇವಾಲಯ ವಿಸ್ತರಿಸಿದನು. ವಿರೂಪಾಕ್ಷ ದೇವಾಲಯಕ್ಕೆ ಕಲ್ಯಾಣಮಂಟಪ ವನ್ನು ಸೇರಿಸಿದನು. ರಾಜಧಾನಿಯಲ್ಲಿ ಕೃಷ್ಣಸ್ವಾಮಿ ಮತ್ತು ವಿಠಲಸ್ವಾಮಿ ದೇವಾಲಯ ಗಳನ್ನು ಕಟ್ಟಿಸಿದನು. ತನ್ನ ತಾಯಿ ನಾಗಲಾಂಬಿಕೆಯ ಸ್ಮರಣಾರ್ಥ ನಾಗಲಾಪುರ ಎಂಬ ಪಟ್ಟಣವನ್ನು ನಿರ್ಮಿಸಿದನು.

ಕ್ರಿ.ಶ. ೧೫೧೮ರ ಗುಳ್ಯ ಶಾಸನದಲ್ಲಿ ಕೃಷ್ಣದೇವರಾಯನ ಕಾಲದಲ್ಲಿ ವಿರೂಪಾಕ್ಷ ದೇವಾಲಯದ ಗರ್ಭಗೃಹ, ಸುಕನಾಸಿ ಮತ್ತು ರಂಗಮಂಟಪ ಕಟ್ಟಿದ ಉಲ್ಲೇಖವಿದೆ. ಕ್ರಿ.ಶ. ೧೫೧೧ ರ ಹಂಪೆ ದೇವನಹಳ್ಳಿ ಶಾಸನದಲ್ಲಿ ತುಂಗಭದ್ರ ದಂಡೆಯ ಮೇಲೆ ವಿರೂಪಾಕ್ಷದೇವರ ಮುಂದೆ ದಾನ ಮಾಡಿದ ಉಲ್ಲೇಖವಿದೆ.

ಕ್ರಿ.ಶ. ೧೫೧೨ರ ಉಪ್ಪಿನಹಳ್ಳಿ ಶಾಸನದಲ್ಲಿ ಮಡಕಸಿರ ತಾಲ್ಲೂಕು ಅನಂತಪುರ ಜಿಲ್ಲೆ ಹಿರಿಯ ದಾಳಿವಟದ ಅಹೋಬಲನಾರಸಿಂಹ ದೇವರ ಸೇವೆಗೆ ಉಪುಡಿಹಳ್ಳಿ ದಾನಮಾಡಿದ ವಿವರವಿದೆ. ಅನಂತಪುರ ಜಿಲ್ಲೆ ಕಲ್ಯಾಣದುರ್ಗ ತಾಲ್ಲೂಕಿನ ಕ್ರಿ.ಶ. ೧೫೧೨ರ ಕಂಬದೂರು ಶಾಸನದಲ್ಲಿ ಕುಂದರೂ (ಕಂಬದೂರ) ಸೀಮೆಯ ಮಲ್ಲಿಕಾರ್ಜುನ ದೇವರ ಸೇವೆಗೆ ರಾಯಸನ ಕೊಂಡಮರಸಯ್ಯ ಭೂಮಿ ದಾನ ಮಾಡಿದ ಉಲ್ಲೇಖವಿದೆ. ಕ್ರಿ.ಶ. ೧೫೧೩ರ ಕಾಳಹಸ್ತಿಯ ಶಾಸನದಲ್ಲಿ ಕಾಳಹಸ್ತೀಶ್ವರ ದೇವರಿಗೆ ಕತ್ತಿಗೆ ಹಾಕುವ ಮುತ್ತಿನ ಕಂಠಹಾರ ಹೆಚ್ಚು ಬೆಲೆಯುಳ್ಳ ಕಲ್ಲುಗಳ ಜೊತೆಗೆ ಬೆಳ್ಳಿ ಮತ್ತು ಚಿನ್ನದ ತಟ್ಟೆಗಳನ್ನು ಆರತಿ ಮಾಡಲು ಕೃಷ್ಣದೇವರಾಯ ದಾನ ನೀಡಿದ ಉಲ್ಲೇಖವಿದೆ. ಕನ್ನಡ ಭಾಷೆಯಲ್ಲಿ ಇದೇ ಕಾಲದ ಮತ್ತೊಂದು ಶಾಸನ ಸಂಸ್ಕೃತ ಶಾಸನ, ಇದೇ ಊರಿನ ಕಾಳಹಸ್ತಿ ದೇವರಿಗೋಸ್ಕರ ಚಿನ್ನದ ಲೋಟ ಗಿರಿಯ ಆರಸಿ ಒಂದು ಚಿನ್ನದ ತಟ್ಟೆ ಮತ್ತು ೨೫ ಬೆಳ್ಳಿ ತಟ್ಟೆಗಳನ್ನು. ಕೃಷ್ಣದೇವರಾಯ ದಾನ ಕೊಟ್ಟಿದ್ದನ್ನು ವಿವರಿಸುತ್ತದೆ. ಅದೇ ಕಾಳಹಸ್ತಿಯಲ್ಲಿ ಕ್ರಿ.ಶ. ೧೫೧೩-೧೪ರಲ್ಲಿ ಕಾಳಹಸ್ತಿ ದೇವರಿಗೆ ಚಿನ್ನದ ಪ್ರಭಾವಳಿ ಜೊತೆಗೆ ಅಮೂಲ್ಯ ಕಲ್ಲುಗಳು, ಕೆಲವು ಹಳ್ಳಿಗಳನ್ನು ಹಾಗೂ ತನ್ನ ತಂದೆ ತಾಯಿಗಳ ಅರ್ಹತೆಗೋಸ್ಕರ ಕೃಷ್ಣದೇವರಾಯನು ದಾನ ಮಾಡಿದ ನೆಂದು ಉಲ್ಲೇಖವಿದೆ. ಕ್ರಿ.ಶ. ೧೫೧೩ರ ಮೂಡಲಪುರ ಶಾಸನದಲ್ಲಿ (ಹೊಸಪೇಟೆ ಹತ್ತಿರ) ವಿಠಲದೇವರ ರಥೋತ್ಸವಕ್ಕೆ ನಿತ್ಯ ೧೫ ದಿನಕ್ಕೊಮ್ಮೆ, ತಿಂಗಳಿಗೆ ಮತ್ತು ವರ್ಷದ ಹಬ್ಬಗಳಿಗೆ ಹೊಸೂರು, ಮಾಗಣಿಯ ವೀರು ಪಾಪುರಹಳ್ಳಿಯನ್ನು ಹಾಗೂ ತನ್ನ ತಂದೆಯಾದ ನರಸಂದಣ್ಣನಾಯಕ ಒಡೆಯ ಮತ್ತು ಅವನ ತಾಯಿ ನಾಗಜಿದೇವಿ ಅಮ್ಮರವರ ಗೌರವಕ್ಕೋಸ್ಕರ ಕೃಷ್ಣದೇವರಾಯನು ದಾನ ಮಾಡಿದ ವಿವರವಿದೆ. ಕ್ರಿ.ಶ. ೧೫೧೩ರ ಹಂಪಿಯ ಶಾಸನದಲ್ಲಿ ಪ್ರಸನ್ನ ವಿರೂಪಾಕ್ಷದೇವರ ಸೇವೆಗೆ ಕೆಲವು ಹಳ್ಳಿಗಳು ಎರಡು ತೋಟಗಳನ್ನು ತನ್ನ ತಂದೆ ತಾಯಿಯ ಭಕ್ತಿ ಗೋಸ್ಕರ ಕೃಷ್ಣ ದೇವರಾಯನು ದಾನ ಮಾಡಿದ ದಾಖಲೆಯಿದೆ. ಕ್ರಿ.ಶ. ೧೫೧೩ರ ಕಾಳಹಸ್ತಿ ಶಾಸನದಲ್ಲಿ ಕಾಳಹಸ್ತೀಶ್ವರ ದೇವರ ಪಾದಕ್ಕೆ ವಿಧವಿಧವಾದ ಅಮೂಲ್ಯ ಕಲ್ಲುಗಳನ್ನು ಕೃಷ್ಣದೇವರಾಯನು ದಾನ ಮಾಡಿದ್ದನ್ನು ತಿಳಿಸುತ್ತದೆ. ಕ್ರಿ.ಶ.೧೫೧೩ರ ಹಂಪಿ ಶಾಸನದಲ್ಲಿ ವಿರೂಪಾಕ್ಷದೇವರ ಸೇವೆಗೋಸ್ಕರ ಕೆಲವು ಹಳ್ಳಿ ಗಳು, ಚಿನ್ನದ ಪಾತ್ರೆಗಳು ಮತ್ತು ತಟ್ಟೆಗಳನ್ನು ತನ್ನ ತಂದೆ ತಾಯಿ ಭಕ್ತಿಗೋಸ್ಕರ ದಾನ ಮಾಡಿದ ಉಲ್ಲೇಖವಿದೆ.

ಕಡಪ ಜಿಲ್ಲೆ, ಕಡಪ ತಾಲ್ಲೂಕು, ಪುಷ್ಪಗಿರಿಯ ಕ್ರಿ.ಶ.೧೫೧೪ರ ಶಾಸನದಲ್ಲಿ ಮುಲ್ಕನಾಡ ಸೀಮೆಯ ಒಂದು ಉಪವಿಭಾಗದ ಚನೂರ್ರ ಸೀಮೆಯಲ್ಲಿ ಚಿನ್ನ ಮಾಂಚುಪಲ್ಲಿಯ ಗ್ರಾಮವನ್ನು ಪುಷ್ಪಗಿರಿಯ ಚನ್ನಕೇಶವದೇವರ ನೈವೇದ್ಯಕೋಸ್ಕರ ಕೃಷ್ಣದೇವರಾಯನ ದಾನ ಮಾಡಿದ ಉಲ್ಲೇಖವಿದೆ. ತಮಿಳುನಾಡಿನ ಕಾಂಚೀವರಂ ಕ್ರಿ.ಶ.೧೫೧೪ರ ಶಾಸನದಲ್ಲಿ ವರದರಾಜದೇವರಿಗೆ ವರಕು ಜೊತೆಗೆ ಶುದ್ಧ ಚಿನ್ನವಿರುವ ಪುಣ್ಯಕೋಟಿ ವಿಮಾನವನ್ನು ತನ್ನ ತಂದೆ ತಾಯಿ ತನ್ನ ಭಕ್ತಿಗೋಸ್ಕರ ದಾನ ಮಾಡಿದ ವಿಷಯವಿದೆ. ರಾಮೇಶ್ವರ ಕ್ರಿ.ಶ. ೧೫೧೪ರ ಶಾಸನದಲ್ಲಿ ಪೊದ್ದಟೂರು ಹತ್ತಿರ ಘಂಟಿ ಕೋಟೆಯ ಸೀಮೆಯಲ್ಲಿ ಮಹಾರಾಮೇಶ್ವರ ಪಯಿಂಡ ಎಲೆ ಗ್ರಾಮ ರಾಮಯದೇವರ ಸೇವೆಗೋಸ್ಕರ ಕೃಷ್ಣದೇವರಾಯನು ದಾನ ಮಾಡಿದ ಉಲ್ಲೇಖವಿದೆ.

ಆಂಧ್ರ ಪ್ರದೇಶದ ಶ್ರೀಶೈಲಂ ಕ್ರಿ.ಶ. ೧೫೧೫ರ ಶಾಸನದಲ್ಲಿ ಮಲ್ಲಿಕಾರ್ಜುನ ದೇವರ ನೈವೇದ್ಯಕ್ಕೋಸ್ಕರ ಪಾರುಮಂಚಲ ಮತ್ತು ಆತ್ಮಕೂರು ಗ್ರಾಮಗಳನ್ನು, ತುಲಾ ಪುರುಷ, ರತ್ನದೇವನು ಮತ್ತು ಸಪ್ತಸಾಗರ ದಾನಗಳನ್ನು ರಾಜ ಮತ್ತು ರಾಣಿಯರಾದ ಚಿನ್ನದೇವಮ್ಮ ಮತ್ತು ತಿರುಮಲದೇವಮ್ಮ ದಾನ ನೀಡಿದ ವಿವರವಿದೆ.

ಕ್ರಿ.ಶ.೧೫೧೬-೧೭ರ ಹಂಪಿಶಾಸನದಲ್ಲಿ ಕೃಷ್ಣದೇವರಾಯನು ವಿಠಲದೇವರ ಒಂದು ನೂರು ಕಂಬಗಳ ಮಂಟಪದ ಕಟ್ಟಿಸಿದ್ದನ್ನು ವಿವರಿಸುತ್ತದೆ. ಕ್ರಿ.ಶ.೧೫೧೮ರ ಕಮಲಾಪುರ ಶಾಸನದಲ್ಲಿ ವಿಜಯನಗರದ ಅಂಜನಗಿರಿಯ ತಿರುವೆಂಗಳನಾಥ ದೇವರ ಸೇವೆಗೋಸ್ಕರ ಹಿರಿಯ ರಾಣಿ ತಿರುಮಲದೇವಿ ಅಮ್ಮ ವಿಜಯನಗರದ ಹತ್ತಿರ ಕುಮ್ಮರಗುಂಟೆ ಭೂಮಿಯನ್ನು ದಾನ ಮಾಡಿ, ಈ ದಾನವನ್ನು ತಿರುಮಲರಾಯ ಮಹಾರಾಯ ಮತ್ತು ವೈಷ್ಣವ ಧರ್ಮಸ್ಥಾಪಕ ರಾಮಾನುಜ ಮುನಿಗೆ ಭಕ್ತಿಗೋಸ್ಕರ ದಾನ ಮಾಡಿದ ಉಲ್ಲೇಖವಿದೆ.

ಕ್ರಿ.ಶ.೧೫೨೧ರ ಹೊಸಪೇಟೆ ಇಂದಿರಾನಗರ ಬಡಾವಣೆಯ ಈಶ್ವರಗುಡಿಯ ಶಾಸನದಲ್ಲಿ ತಿರುಮಲದೇವಿಯರ ಪಟ್ಟಣದ ನಾಲ್ಕು ಬಾಗಿಲ ಬಳಿ ಪ್ರತಿಷ್ಠೆಯಾದ ಕಾಶಿವಿಶ್ವನಾಥರ ದೇವರ ಪೂಜಾಕಾರ್ಯಗಳಿಗಾಗಿ ಎಲ್ಲಪ್ಪಂಣ ಕೆರೆಯ ಕೆಳಗೆ ಸಲುವ ಭೂಮಿಯನ್ನು ಅಭಿಷೇಕ ಪೂಜೆಗಾಗಿ ಕೃಷ್ಣದೇವರಾಯನು ದಾನ ನೀಡುತ್ತಾನೆ.

ಕ್ರಿ.ಶ.೧೫೨೪4ರ ಅನಂತಶಯನಗುಡಿ ಶಾಸನದಲ್ಲಿ (ಸಿರುಗುಪ್ಪ ತಾ) ಕೃಷ್ಣ ದೇವರಾಯನು ಅನಂತದೇವರನ್ನು ತಿರುಮಲಾದೇವಿ ಪಟ್ಟಣದ ಉತ್ತರಕ್ಕೆ ಪ್ರತಿಷ್ಠಾಪಿಸಿ ದೇವತಾಕಾರ್ಯಗಳಿಗೆ ಮತ್ತು ದೇವಾಲಯದ ನಿರ್ವಹಣೆಗೆ ಹತ್ತು ಸಾವಿರ ವರಹದ ವರಮಾನದ ಭೂಮಿಯನ್ನು ನೀಡಿದ ಉಲ್ಲೇಖವಿದೆ.

ಕೊನೆಯದಾಗಿ, ಕೃಷ್ಣದೇವರಾಯನಲ್ಲದೆ ವಿಜಯನಗರದ ಅರಸರು ಹಿಂದೂ ಧರ್ಮದ ಲಕ್ಷಣವಾದ ಪರಮತ ಸಹಿಷ್ಣುತೆಯನ್ನು ಮೈಗೂಡಿಸಿಕೊಂಡು ಅನ್ಯ

ಮತೀಯರಾದ ಕ್ರೈಸ್ತ, ಇಸ್ಲಾಂ ಧರ್ಮೀಯರಿಗೆ ತಮ್ಮ ಸಾಮ್ರಾಜ್ಯದಲ್ಲಿ ಆಶ್ರಯ ಕೊಟ್ಟು ಸಲಹಿದರು. ಸಾಮ್ರಾಜ್ಯದ ವಿವಿಧೆಡೆಗಳಲ್ಲಿ ದೇವಸ್ಥಾನಗಳಲ್ಲದೆ ಮಸೀದಿಗಳೂ, ಇಗರ್ಜಿಗಳೂ ಇದ್ದವು. ಎಲ್ಲಾ ಧರ್ಮಗಳಿಗೂ ಸಮಾನ ಅವಕಾಶ ಇದ್ದ ವಿಜಯನಗರದಲ್ಲಿ ಅರಸರು ಹಿಂದೂ ಸಾಧು ಸಂತರನ್ನು, ಕ್ರೈಸ್ತ ಪಾದ್ರಿಗಳನ್ನೂ, ಇಸ್ಲಾಂ ಪೀರ್‌ಗಳನ್ನು ಸಮಾನ ಗೌರವಗಳಿಂದ ಕಾಣುತ್ತಿದ್ದರು. ಹಂಪೆಯಲ್ಲಿ ಹಿಂದೂ ದೇವಾಲಯಗಳಲ್ಲದೆ ಜೈನ ಬಸದಿಗಳನ್ನು ಕಾಣಬಹುದು. ವಿಜಯನಗರದ ಅರಸರು ಶೈವ ಇಲ್ಲದೆ ವೈಷ್ಣವ ಪಂಥಕ್ಕೆ ಸೇರಿದವರಾಗಿದಷ್ಟು, ಪಂಥಭೇದಕ್ಕೆ ಅವಕಾಶವಿರಲಿಲ್ಲ. ಕೃಷ್ಣದೇವರಾಯನು ಬಹುಮನಿ ಸುಲ್ತಾನನನ್ನು ಸೆರೆಯಿಂದ ಬಿಡಿಸಿ ಪಟ್ಟದಲ್ಲಿ ಕುಳ್ಳಿರಿಸಿದುದರಿಂದ 'ಯವನರಾಜ್ಯ ಸ್ಥಾಪನಾಚಾರ್ಯ' ಎನಿಸಿದ್ದನು. ವಿಜಯನಗರವು ಸರ್ವಧರ್ಮ ಸಮನ್ವಯವನ್ನು ಸಾಧಿಸಿತು ಎಂದು ನಾವು ತಿಳಿಯಬಹುದು.

ಆಧಾರ ಸೂಚಿಗ್ರಂಥಗಳು

1. History of Karnataka - P.B. Desai
2. S.I.I. Vol - IX Part II
3. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ಭಾಗ I ಬಳ್ಳಾರಿ ಜಿಲ್ಲೆ

೪. ವಿಜಯನಗರ ಅರಸು ಶ್ರೀ ವೀರಪ್ರತಾಪ ಶ್ರೀರಂಗರಾಯರ ಕಾಲದ ಕೆರೆಗೋಡಿನ ಅಪ್ರಕಟಿತ ತಾಮ್ರ ಶಾಸನ

ಡಾ. ಎಸ್.ಜಿ. ಸಾಮಕ್, ಡಾ. ಜಗದೀಶ್

ಕೆರೆಗೋಡು, ಶಿವಮೊಗ್ಗ ಜಿಲ್ಲೆ, ಹೊಸನಗರ ತಾಲೂಕಿನ ಗರ್ತಿಕೆರೆ ಸಮೀಪವಿರುವ ಒಂದು ಸಣ್ಣ ಗ್ರಾಮ. ನಾವು ಕ್ಷೇತ್ರಕಾರ್ಯ ನಡೆಸುವ ಸಮಯದಲ್ಲಿ ಆ ಗ್ರಾಮದ ವೇದಾಂತಪ್ಪ ಗೌಡರಲ್ಲಿದ್ದ ತಾಮ್ರಶಾಸನ ಬೆಳಕಿಗೆ ಬಂದಿದೆ.೮ ಸೆ.ಮೀ. ಅಗಲ ಮತ್ತು ೧೨ಸೆಂ.ಮೀ. ಉದ್ದದ ನಾಲ್ಕು ತಾಮ್ರದ ಹಲಗೆಗಳ ಮೇಲೆ ೧೦೭ ಸಾಲುಗಳಲ್ಲಿ ಶಾಸನ ವನ್ನು ಬರೆಯಲಾಗಿದೆ. ತಾಮ್ರದ ಹಲಗೆಗಳನ್ನು ಬಂಧಿಸಿರುವ ಬಳೆಯಲ್ಲಿ ವರಾಹ ಮುದ್ರಿಕೆಯಿದೆ. ಮೊದಲ ತಾಮ್ರದ ಹಲಗೆಯ ಮುಂಬದಿಯನ್ನು ಹೊರತುಪಡಿಸಿ ಉಳಿದ ಹಲಗೆಗಳ ಎರಡು ಬದಿಯಲ್ಲಿ ಶಾಸನ ವನ್ನು ಬರೆಯಲಾಗಿದೆ. ಪ್ರತಿ ಪಟದ ಅಂಚಿನಲ್ಲಿ ಸುತ್ತಲೂ ಎರಡು ಸಮಾನಾಂತರ ಗೆರೆಗಳನ್ನು ಕೊರೆಯಲಾಗಿದೆ. ಶಾಸನದ ಪ್ರಾರಂಭದಲ್ಲಿ ಶಂಖ, ಚಕ್ರ, ತಿರುನಾಮ, ಸೂರ್ಯ, ಚಂದ್ರರನ್ನು ಚಿತ್ರಿಸಲಾಗಿದೆ. ಶಾಸನ ಪಾಠ ಈ ಕೆಳಗಿನಂತಿದೆ.

ಶಾಸನ ಪಾಠ

೧ನೆ ಹಲಗೆ ಹಿಂಭಾಗ

ಶುಭಮಸ್ತು

೧. ಶ್ರೀಮದ್ವೆಂಕಟನಾಥಾಯಾ | ವೇಣು

೨. ನಾದ ವಿನೋದನೆ | ವೆದಾತಿಶಯವೆ

೩. ದಾಂತ | ವೆದ್ಯಯಚ ನಮೋನಮಃ

೪. ಸೀತಾಲಕ್ಷ್ಮಣ ಸಂಯುಕ್ತಂ | ಅಂಜ

೫. ನೆಯಾಭಿವಂದಿತಂ | ಕಾರುಣ್ಯ

೬. ಮೂರ್ತಿಕಂಜಾಕ್ಷಂ ರಾಮಚಂದ್ರ

೭. ನಮಾಂಮ್ಯಹಂ ||೨|| ಹರೆರ್ಲಿಲಾವ

೮. ರಹಶ್ಚ ದೌಂಷ್ಟ್ರದಂಡನವಾಪವಾಃ

೯. ಹೇಮಾದ್ರಿಶಿಖರಾಯಸ್ಯ | ಧಾತ್ರಿಯ

೧೦. ತ್ರ ಶ್ರಿಯಂದದೌ ||೩|| ನಮಸ್ತುಂಗ

೧೧. ಶಿರಶ್ಚುಂಬಿ ಚಂದ್ರ ಚಾಮರ ಚಾ

೧೨. ರುವೆ ತ್ರೈಲೋಕ್ಯನಗರಾರಂಭ

೧೩. ಮೂಲಸ್ತಂಭಾಯ ಶಂಭವೆ || ೪ ||

೨ನೆ ಹಲಗೆ ಮುಂಭಾಗ

೧೪. ಸ್ವಸ್ತಿ ಶ್ರೀಜಯಾಭ್ಯುದಯ ಶ್ಯಾಲಿ

೧೫. ವಾಹನ ಶಕ ವರುಷ ೧೫೮೨ನೆಯ.

೧೬. ಶಾರ್ವರಿ ಸಂವತ್ಸರದ ಪುಷ್ಯ ಶು ೮

೧೭. ಸ್ಥಿರವಾರ ಮಕರ ಸಂಕ್ರಮಣ ಪುಂ

೧೮. ಣ್ಯ ಕಾಲದಲ್ಲಿ | ಶ್ರೀಮನ್ಮಹಾರಾಜಾಧಿ

೧೯. ರಾಜ ರಾಜ ಪರಮೇಶ್ವರ ಶ್ರೀ ವೀರಪ್ರತಾ

೨೦. ಪ ಶ್ರೀ ರಂಗರಾಯ ಮಹಾರಾಯರು

೨೧. ವಿಜಯನಗರ ಪಟ್ಟಣದಲ್ಲಿ ರತ್ನ ಶಿ

೨೨. ಹ್ಯಾಸನಾರೂಢರಾಗಿ ಸಗರ ಪೃಥ್ವಿ

೨೩. ಪಾಲನೆಯ ಮಾಡುವಸಮಯದಲ್ಲಿ

೨೪. ಅವರ ದಕ್ಷಣ ಭುಜದಂಡರಾದ |

೨೫. ಸಂಥೆಬೆಂನೂರ ಪುವಲ ಯಿಂಮಡಿ

೨೬. ಹನುಮಪ್ಪನಾಯಕರ ಪೌಉತ್ರರಾ

೨೭. ದ | ನಿಚ್ಚಮದವಣಿಗ ಹನುಮಪ್ಪ ನಾ

೨೮. ಯಕರ ಪುತ್ರರಾದ | ಸರಜಾ ಹನು

೨೯. ಮಪ್ಪ ನಾಯಕರೂ | ಕಾಶಿಪ ಗೋತ್ರದ

೩೦. ಆಶ್ವಾಯನ ಸೂತ್ರದ ಋಕ್ಷ್ಯಾಖಾದ್ಯಾ

೩೧. ಯಿ ಗಳಾದ | ನಾರೊಪಂಡಿತರ ಪೌತ್ರ

5

೨ನೆ ಹಲಗೆ ಹಿಂಭಾಗ

೩೨. ರಂಗೋಪಂಡಿತರ ಪುತ್ರ | ಬಾಳಾಜಿ
೩೩. ಪಂಡಿತರಿಗೆ | ಬರೆಸಿ ಕೊಟ ತಾಂಬ್ರದ
೩೪. ಶಾಸನದ ಕ್ರಮವೆಂತೆಂದರ್ರೆ ನಂಮ ರಾ
೩೫. ಜ್ಯಕ್ಕೆ ಸಲುವ ಕಾತೂರು ಸೀಮೆಯೊಳಗ
೩೬. ಣ ತರಿಕೆರೆ ಸ್ಥಾಳದ ಮಾಚೇನಹಳಿ ಗ್ರಾ
೩೭. ಮವನು ನಿಮಗೆ ಸಹಾಹಿರಂಣ್ಯೋದ
೩೮. ಕ ದಾನ ಧಾರಾಪೂರ್ವಕವಾಗಿ ಕೊಟ್ಟೆವು
೩೯. ಶ್ರೀಮತು ಸಂಥೆಬೆಂನೂರ ಯಿಂಮಡಿ
೪೦. ಹನುಮಪ್ಪ ನಾಯಕರ ಪೌತ್ರರಾದ | ನಿ
೪೧. ಚ್ಚ ಮದವಣಿಗ ಹನುಮಪ್ಪ ನಾಯಕ
೪೨. ರ ಪುತ್ರರಾದ | ಸರಜಾಹನುಮಪ್ಪ ನಾ
೪೩. ಯಕರು ಕಾಶ್ಯಪಗೋತ್ರದ ಆಶ್ವಾ್ಯಯ
೪೪. ನ ಸೂತ್ರದ ರುಕ್ಷ್ಯಾಖ್ಯೆಯ | ನಾರೋ
೪೫. ಪಂಡಿತರ ಪೌತ್ರ ರಂಗೋಪಂಡಿತರ ಪು
೪೬. ತ್ರ ಬಾಳಾಜಿಪಂಡಿತರಿಗೆ ಮಕರ ಶಂಕ
೪೭. ರಾಂತಿ ಪುಂಣ್ಯಕಾಲದಲ್ಲಿ | ತರಿಕೆರೆ ಸ್ಥಾ
೪೮. ಳದ ಮಾಚೆನಹಳಿ ಗ್ರಾಮವನು | ನಂ
೪೯. ಪಿತರುಗಳಿಗೆ ಅಕ್ಷಯ ಪುಂಣ್ಯ
೫೦. ಲೋಕ ಆಗಬೆಕೆಂದು...

೩ನೆ ಮುಂಭಾಗ

೫೧. ಯಿ ಚತುಸ್ಸಿಮೆಗೆ ಸಲುವ | ಭೂಮಿ ವಿ
೫೨. ವರಾ | ಮೂಡಲು | ತರಿಕೆರೆ ಹೊಲದ ಗ
೫೩. ಡಿ ಮೆರೆ | ಟೆಂಕಲು | ಯಿಂದಾವರದ
೫೪. ಹೊಲಗಡಿ | ಪಡುವಲು | ಚಿಕ್ಕಿಕಾತೂ

೫೫. ರ ಹಳ್ಳಗಡಿಮೆರೆ | ಬಡಗಲು ಶಿಮ
೫೬. ಗಂಗೆ ಹೊಲದ ಗಡಿಮೆರೆ | ಯೀಚ
೫೭. ತುಃಸ್ಸಿಮೆಗೆ | ವಾಮನ ಮುದ್ರೆ ಕಲ್ಲ ಹ
೫೮. ಕಿದ ಪ್ರಮಾಣದಲ್ಲಿ ಯೀ ಭೂಮಿ ಯೊ
೫೯. ಳಗಿದ್ದ ನಿಧಿ ನಿಕ್ಷೇಪ ಜಲಪಾಶ್ಯಾಣ ಅ
೬೦. ಕ್ಷಿಣಿ ಆಗಾಮಿ ಸಿಧ ಸಾದ್ಯಗಳೆಂ
೬೧. ಬ | ಅಷ್ಟಭೋಗಂಗಳುನು ಅನುಭ
೬೨. ವಿಸಿ ಯಂದು | ತರಿಕೆರೆ ಸ್ಥಳದ ಮಾ
೬೩. ಚೆನಹಳ್ಳಿ ಗ್ರಾಮಕ್ಕೆ ಸಲುವ ಗದ್ದೆ
೬೪. ಬೆದ್ದಲು ತೋಟ್ಟ ತುಡಿಕೆ ಕಾಡಾರಂ
೬೫. ಭ ನಿರಾರಂಭ ಕಡಿವಣ ಕಾಶ್ಯವ

೩ನೆ ಹಲಗೆ ಹಿಂಭಾಗ

೬೬. ರ್ಗ ಸಕಲ ಸರ್ವರ್ಣದಾಯ ದವಸಾ
೬೭. ದಾಯ ಮುಂತಾಗಿ ಯೆನುಂಟ್ಟಾದ
೬೮. ಉತ್ಪತ್ಯವನು ಆಗುಮಾಡಿಕಂ
೬೯. ಡು ಬಾಹದು | ಶ್ರೀಮತು ಸಂಥೆಬೆ
೭೦. ನೂರ ಯಿಂಮಡಿ ಹನುಮಪ್ಪ ನಾ
೭೧. ಯಕರು ಪುತ್ರರಾದ | ನಿಚ್ಚ ಮದ
೭೨. ವಣಿಗ ಹನುಮಪ ನಾಯಕ
೭೩. ರ ಪುತ್ರರಾದ | ಸರಜ್ಯ ಹನುಮ
೭೪. ಪ್ಪ ನಾಯ್ಕರು ಕಶ್ಯಪ ಗೋತ್ರದ ಅಶ್ವಾ
೭೫. ಯನ ಸೂತ್ರದ | ರುಕ್ಸ್ಯಾಧ್ಯಾಯಿ
೭೬. ಗಳು | ನಾರೋ ಪಂಡಿತರ ಪೌತ್ರ
೭೭. ರಾದ ರಂಗೋಜಿಪಂಡಿತರ ಪುತ್ರ
೭೮. ರಾದ ಬಾಳಾಜಿ ಪಂಡಿತರಿಗೆ | ಶ್ರೀ

೭೯. ರಾಮಚಂದ್ರದೇವರಾ ಪ್ರಿತ್ತಿ ಯಾ
೮೦. ಗಿ ರಾಮಾರ್ಪಣ ಮಾಡಿ ಕೊಟ ಭೂ

೪ನೆ ಹಲಗೆ ಮುಂಭಾಗ

೮೧. ಮೀಯೊಳಗಣ ಅಷ್ಟ ಭೋಗಂ
೮೨. ಗಳು ಸಹ ನಿಉ ನಿಂಮ ಪುತ್ರ ಪೌ
೮೩. ತ್ರ ಪಾರಂಪರಿಯಾಗಿ ಆ ಚಂದ್ರಾ
೮೪. ರ್ಕ್ಕಸ್ಥಾಯಿಗಳಾಗಿ | ಸರ್ವಮಾಂ
೮೫. ನ್ಯದಲ್ಲಿ ಅನುಭವಿಸಿಕೊಂಡು
೮೬. ಸುಖದಲ್ಲಿರಬೆಕೆಂದು ಬರಸಿ
೮೭. ಕೊಟ್ಟ ತಾಂಬ್ರದ ಧರ್ಮ ಶಾಸ್ತ್ರ
೮೮. ಧ ಲಿಖಿತು| ಯೀ ದಾನಕ್ಕೆ | ಫಲ
೮೯. ಶ್ರುತಿ | ದಾನಪಾಲನಯೋರ್ಮಧ್ಯೆ
೯೦. ದಾನಾಛ್ರೆಯೋನು ಪಾಲನಂ ದ
೯೧. ನಾತ್ಸ್ವರ್ಗ ಮ ಮಾಪ್ನೋತಿ ಪಾಲನಾ
೯೨. ದ ಚುತಂ ಪದಂ ||೧|| ಸ್ವದತ್ತಾಂ |
೯೩. ದ್ವಿಗುಣಂ ಪುಣ್ಯಂ ಪರದತ್ತಾ
೯೪. ನು ಪಾಲನಂ || ಪರದತ್ತಾಂ ಅಪಹ

೪ನೆ ಹಲಗೆ ಹಿಂಭಾಗ

೯೫. ರೇಣಪ್ಪದತ್ತಂ ನಿಶ್ಪಲಂಭವೆತು
೯೬. ||೨|| ಸ್ವದತ್ತಾ ಪುತ್ರಿಕಾ ಧಾತ್ರೀ
೯೭. ಪಿತ್ರು ದತ್ತಾ ಸಹೋದ್ರಿ | ಪರದ
೯೮. ತ್ತಾ ಚ ಮಾತಾ ಚ ದತ್ತಾ ಭುಮಿಂ
೯೯. ಪರಿತ್ಯಜೇತು | ಸ್ವದತ್ತಾಂ ಪ
೧೦೦. ಪರದತಾಂ ವಾಯೋಹರೆತ ವ
೧೦೧. ಸುಂಧರಾಂ | ಶಷ್ಟಿರ್ವರುಷ ಸ

೧೦೨. ಹಸ್ರಾಣಿ | ವಿಷ್ಟಾಯಂ ಜಾಯ

೧೦೩. ತೆ ಕ್ರಿಮಿ ||೪|| .... ಬ್ರಾಂಹಣರಿ

೧೦೪. .ಗೆ

೧೦೫.

೧೦೬. ದಿ

೧೦೭. ಪೂರ್ವಮರಿಯಾದಿ ಶ್ರೀ ರಾಮ.

ಶಾಸನ ಸಾರಾಂಶ

ಶುಭಮಸ್ತು, ತಿರುಪತಿ ವೆಂಕಟೇಶನ ಗುಣಗಾನದೊಂದಿಗೆ ಪ್ರಾರಂಭವಾಗಿರುವ ಈ ಶಾಸನ, ಶಾ.ಶಕ. ೧೫೮೨ (ಕ್ರಿ.ಶ. ೧೬೬೦) ನೇ ಶಾರ್ವರಿ ಸಂವತ್ಸರದ ಪುಷ್ಯ ಶುದ್ಧ ೮ ಸ್ಥಿರವಾರ ಮಕರ ಸಂಕ್ರಮಣ ಪುಣ್ಯ ಕಾಲದಲ್ಲಿ ಶ್ರೀಮನ್ ಮಹಾರಾಜಾಧಿ ರಾಜ ರಾಜ ಪರಮೇಶ್ವರ ಶ್ರೀ ವೀರಪ್ರತಾಪ ಶ್ರೀ ರಂಗರಾಯರು ವಿಜಯನಗರದ ಪಟ್ಟಣದಲ್ಲಿ ರತ್ನ ಸಿಂಹಾಸನಾರೂಢರಾಗಿ ರಾಜ್ಯಭಾರ ಮಾಡುತ್ತಿರುವ ಸಮಯದಲ್ಲಿ ಅವರ ದಕ್ಷಿಣ ಭುಜಬಲದಂತಿದ್ದ ಸಂತೆಬೆನ್ನೂರ ಪುವಲ ಇಮ್ಮಡಿ ಹನುಮಪ್ಪ ನಾಯಕರ ಮೊಮ್ಮಗ ಹಾಗೂ ನಿಚ್ಚ ಮದುವಣಿಗ ಹನುಮಪ್ಪ ನಾಯಕರ ಪುತ್ರರಾದ ಸರಜಾ ಹನುಮಪ್ಪ ನಾಯಕರು, ತಮ್ಮ ಪಿತೃಗಳಿಗೆ ಅಕ್ಷಯ (ಶಾಶ್ವತ) ಪುಣ್ಯ ಸಿಗಲೆಂದು ಕಾಶ್ಯಪ ಗೋತ್ರದ ಆಶ್ವಲಾಯನ ಸೂತ್ರದ ಋಕ್ ಶಾಖೆಯವರಾದ ನಾರೋ ಪಂಡಿತರ ಮೊಮ್ಮಗ, ರಂಗೋಪಂಡಿತರ ಮಗ ಬಾಳಾಜಿ ಪಂಡಿತರಿಗೆ ರಾಮಚಂದ್ರ ದೇವರ ಪ್ರೀತಿಯಾಗಿ ರಾಮಾರ್ಪಣವಾಗಿ, ತರಿಕೆರೆ ಸಮೀಪದ ಮಾಚೇನಹಳ್ಳಿ ಗ್ರಾಮವನ್ನು ಚತುಸ್ಸೀಮೆಗಡಿ ಗುರುತಿಸಿ ವಾಮನ ಮುದ್ರೆ ಕಲ್ಲನ್ನು ನೆಡಿಸಿ ದಾನ ನೀಡಿದ್ದಾರೆ. ಕೊನೆಯಲ್ಲಿ ಶಾಪಾಶಯ ಸಹಿತ ರಾಮಧ್ಯಾನದೊಂದಿಗೆ ಈ ಶಾಸನ ಕೊನೆಗೊಂಡಿದೆ.

ಈವರೆಗೆ ಸರಜಾ ಹನುಮಪ್ಪನಾಯಕನ ೧೦ ಶಾಸನಗಳು ದೊರಕಿದ್ದು ಅವುಗಳಲ್ಲಿ ೩ ತಾಮ್ರಶಾಸನಗಳಾಗಿವೆ. ಪ್ರಸ್ತುತ ಶಾಸನ ಆತನ ಕಾಲದ ೧೧ನೇ ಶಾಸನವಾಗಿದೆ. ಇದರೊಂದಿಗೆ ಸಂತೆಬೆನ್ನೂರಿನ ನಾಯಕರ ಒಟ್ಟು ೫೪ ಶಾಸನಗಳು ದೊರೆತಂತಾಗಿವೆ. ಮಲೆನಾಡಿನ ಒಳಸೆರಗಾದ ಹೊಸನಗರ ತಾಲೂಕಿನಲ್ಲಿ ಈ ಶಾಸನ ದೊರೆತಿರುವುದು ವಿಶೇಷ. ಶಾಸನ ವೇದಾಂತಪ್ಪ ಗೌಡರ ಮನೆಗೆ ಹೇಗೆ ಬಂದಿತೆಂದು ಅವರಿಗೂ ಸಹ ತಿಳಿದಿಲ್ಲ. ಈ ಶಾಸನದಲ್ಲಿ ಹನುಮಪ್ಪ ನಾಯಕನ ವಂಶಾವಳಿಯನ್ನು ಮತ್ತು ದಾನ ಪಡೆದ ಬಾಳಾಜಿ ಪಂಡಿತನ ವಂಶಾವಳಿಯನ್ನು ಮೂರು ಬಾರಿ ಪುನರಾವರ್ತಿಸಲಾಶಿಗಿದೆ.

ಸಂತೆಬೆನ್ನೂರ ನಾಯಕರ ಶಾಸನೋಕ್ತ ವಂಶಾವಳಿ ಹೀಗಿದ್ದು ಪ್ರಚಲಿತ ವಂಶಾವಳಿಯಲ್ಲಿ ಬದಲಾವಣೆ ಇರುವುದಿಲ್ಲ.

೧. ಯಿಂಮಡಿ ಹನುಮಪ್ಪ ನಾಯಕ

↓

೨. ನಿಚ್ಚ ಮದುವಣಿಗ ಹನುಮಪ್ಪ ನಾಯಕ

↓

೩. ಸರಜ ಹನುಮಪ್ಪ ನಾಯಕ

ದಾನ ಪಡೆದ ಬಾಳಾಜಿ ಪಂಡಿತರ ವಂಶಾವಳಿ.

೧. ನಾರೋಪಂಡಿತ

↓

೨. ರಂಗೋಜಿ ಪಂಡಿತ

↓

೩. ಬಾಳಾಜಿ ಪಂಡಿತ

ಪ್ರಸ್ತುತ ಶಾಸನದಲ್ಲಿ ಉಲ್ಲೇಖಿತವಾಗಿರುವ ಎಲ್ಲಾಸ್ಥಳಗಳು ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಇಂದಿಗೂ ಚಿಕ್ಕಮಗಳೂರು ಜಿಲ್ಲೆಯ ತರಿಕೆರೆ ತಾಲೂಕಿನಲ್ಲಿ ಅಸ್ತಿತ್ವದಲ್ಲಿವೆ. ಅವುಗಳೆಂದರೆ ಮಾಚೇನಹಳ್ಳಿ, ಕಾತೂರು (ಹಿರೆಕಾತೂರು), ಚಿಕ್ಕಕಾತೂರು (ಚಿಕ್ಕತ್ತೂರು), ಶಿಮಗಂಗೆ (ಶಿವಗಂಗೆ), ತರಿಕೆರೆ,ಯಿಂದಾವ ರ (ಯರದಹಂಕಲು / ಯರೇಬೈಲು).

೫. ಅಪ್ರಕಟಿತ ಆವಿನಮಡುವಿನ ಶಾಸನ

ಗಿರಿಜಾ

ಸಂಡೂರು ತಾಲ್ಲೂಕಿನ ಆವಿನಮಡುಗು ಗ್ರಾಮದಲ್ಲಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಲಾದ ಈ ಗ್ರಾಮದ ಕೆರೆಯ ಕೆಳಗಿನ ಬಂಡೆಯ ಮೇಲಿನ ಅಪ್ರಕಟಿತ ಶಾಸನ ಇದಾಗಿದೆ. ಈ ಶಾಸನವನ್ನು ಒಂದು ದೊಡ್ಡ ಬಂಡೆಯ ಮೇಲೆ ಕಂಡರಿಸಲಾಗಿದೆ. ಇದು ಸು. ೪೧/೨ ಅಡಿ ಉದ್ದ ಹಾಗೂ ೪೧/೨ ಅಡಿ ಅಗಲ ಇದೆ. ಪ್ರಾರ್ಥನಾ ಶ್ಲೋಕದಿಂದ ಶಾಪಾಶಯದವರೆಗೂ ಒಟ್ಟು ೨೦ ಸಾಲುಗಳನ್ನೊಳಗೊಂಡಿರುವ ಈ ಶಾಸನದ ಮೇಲ್ಭಾಗದಲ್ಲಿ ಶಿವಲಿಂಗ ಮತ್ತು ನಂದಿಯ ಹಾಗೂ ಸೂರ್ಯ ಮತ್ತು ಚಂದ್ರರ ಶಿಲ್ಪ ಗಳನ್ನು ಕಂಡರಿಸಲಾಗಿದೆ. ಈ ಶಾಸನದ ಬಗ್ಗೆ ಡಾ.ಸಿ.ಎಸ್.ಪಾಟೀಲರು ಬಳ್ಳಾರಿ ಜಿಲ್ಲೆ ಶಾಸನ ಸಂಪುಟ - II ರಲ್ಲಿ ಗುರುತಿಸಿದ್ದಾರಾದರೂ ಇದರ ಪೂರ್ಣ ಪಾಠವನ್ನು ನೀಡಿಲ್ಲ. ಆದ್ದರಿಂದ ಪ್ರಥಮ ಬಾರಿಗೆ ಈ ಶಾಸನದ ವಿಷಯವನ್ನು ಇಲ್ಲಿ ಚರ್ಚಿಸಲಾಗುತ್ತಿದೆ.

ವಿಜಯನಗರ ಸಾಮ್ರಾಜ್ಯದ ಸದಾಶಿವದೇವರಾಯನ ಅವಧಿಯ ಈ ಶಾಸನವು ಮಹಾಮಂಡಳೇಶ್ವರ ರಾಮರಾಜ ತಿಮ್ಮರಾಜನ ಪುತ್ರ ವಿಠಲರಾಜನ ಇತಿಹಾಸದ ಬಗ್ಗೆ ಬೆಳಕು ಬೀರುವ ದಾನ ಶಾಸನವಾಗಿದೆ. ಈ ದಾನವನ್ನು ಕೊಟ್ಟವನು ವಿಠಲರಾಜ ಮಹಾದೇವ ಅರಸು.

ಕ್ರಿ.ಶ. ೧೫೫೧ರ ಕಾಲಾವಧಿಯ ಈ ಶಾಸನವು ವಿದ್ಯಾ ಶಂಕರಾಯ ನಮಃ ಎಂಬ ಶ್ಲೋಕದಿಂದ ಮುಂದವರಿದಿದೆ. ನಂತರ ಶಾಲಿವಾಹನ ಶಕ ೧೪೭೩ನೆ ವಿರೋಧಿ ಕೃತ ಸವಂತ್ಸರದ ಆಷಾಢ ಶು. ೧೨ರಲು ಶ್ರೀಮದ್ ರಾಜಾಧಿರಾಜ ಪರಮೇಶ್ವರ ಶ್ರೀ ವೀರ ಪ್ರತಾಪ ಶ್ರೀ ಸದಾಶಿವದೇವ ಮಹಾರಾಯರು ವಿದ್ಯಾನಗರದಲ್ಲಿ ರತ್ನ ಸಿಂಹಾಸನಾ ರೂಢರಾಗಿ ಪೃಥ್ವಿ ಸಾಮ್ರಾಜ್ಯ ಆಳುತ್ತಿರುವ ಸಂದರ್ಭದಲ್ಲಿ ಆತನ ಕೈಕೆಳಗೆ ಮಹಾ ಮಂಡಲೇಶ್ವರನಾಗಿದ್ದಂತ ರಾಮರಾಜ ತಿಮ್ಮರಾಜನ ಮಗ ವಿಠಲರಾಜ ದೇವರು ಆವಿನಮಡುವಿನ ಸೀಮೆಗೆ ಸೇರಿದ ಹಿರಿಯ ಅನಂತಾಪುರದ ಮಲ್ಲಿಕಾರ್ಜುನ ದೇವರಿಗೆ ಆವಿನಮಡುವಿನ ಕೆರೆಯ ಕೆಳಗಿನ ಸ್ಥಾವರರೊಳಗಣ ತಿಪ್ಪಯ್ಯ ಮತ್ತು ಬಸವಯ್ಯ ನವರಿಂದ ವಿರುಪಣಗಳು ಕ್ರಯವಾಗಿ ಪಡೆದುಕೊಂಡು ಕೊಟ್ಟ ದಾನ ಹೊಲ. ೧೩ ಮತ್ತರು ಹಾಗೂ ತೋಟ. ೩ ಮತ್ತರು ಎಂದು ಉಲ್ಲೇಖಿಸುತ್ತದೆ.

ಈ ಶಾಸನದಲ್ಲಿ ದಾನಕೊಟ್ಟ ಹೊಲದ ಮೇರೆ ವಿವರವನ್ನು ಈ ರೀತಿ ಉಲ್ಲೇಖಿಸಿದೆ. ಮೂಡಲಿನಲ್ಲಿ ಬೂಳಪನ ವಿರುಪಣನ ಹೊಲದ ಮೇರೆ, ತೆಂಕಲಿನಲ್ಲಿ ವಿರುಪಣನ ಸಿವನಪನ ಹೊಲ ಮೇರೆ, ಪಡುವಲಿನಲ್ಲಿ ಹಿರಿಯ ಕಾಲುವೆ ಮೇರೆ, ಬಡಗಲಿನಲ್ಲಿ ಬೊಳಪನ ಮಗ ಬದ್ರಪನ ಹೊಲಮೇರೆ ಎಂದು ತಿಳಿಸುತ್ತ ಈ ಭೂಮಿ ಮತ್ತು ಸೀಮೆಯ ಒಳಗಿನ ತೆಂಗು, ಹಲಸು, ಮಾವು, ನಿಂಬೆ, ಹೇರಳೆ ಆ ಊರ ಫಲ ಗಳನ್ನು ಅಂತಾಪುರದ ಮಲ್ಲಿಕಾರ್ಜುನ ದೇವರ ಅಮೃತ ಪಡಿಗೆ ಆಚಂದ್ರಾರ್ಕ ಸ್ಥಾಯಿಯಾಗಿರುವಂತೆ ದ್ವಾದಸೆಯ ಪುಣ್ಯಕಾಲದಲ್ಲಿ ಈ ತೋಟದ ವಕಲುಪಾಲು ರಾಜಪಾಲು ಸಹಿತವಾಗಿ ಮಲ್ಲಿಕಾರ್ಜುನ ದೇವರಿಗೆ ವಿಠಲರಾಜ ಅಯ್ಯನವರು ಸರ್ವಮಾನ್ಯವಾಗಿ ಧಾರೆಯೆರೆದು ಕೊಟ್ಟ ವಿಷಯವನ್ನು ಶಾಸನ ಉಲ್ಲೇಖಿಸುತ್ತವೆ.



ಒಟ್ಟಾರೆಯಾಗಿ ಆವಿನಮಡುವಿನ ಶಾಸನದ ಲಿಪಿ ಶ್ಲೋಕದಿಂದ ಶಾಪಾಶಯ ದವರೆಗೂ ಕನ್ನಡ ಭಾಷೆಯಲ್ಲಿದೆ. ಪ್ರಸ್ತುತ ಶಾಸನಕ್ಕೆ ಸು. ೫೦೦ ವರ್ಷದ ಇತಿಹಾಸ ವಿದೆ. ಇದು ಕೆರೆಯ ಒಂದು ದೊಡ್ಡ ಬಂಡೆಯ ಮೇಲೆ ಕಂಡರಿಸಲಾಗಿದ್ದು ಉತ್ತಮ ಸ್ಥಿತಿಯಲ್ಲಿದ್ದರೂ ಕೆಲವು ಅಕ್ಷರಗಳು ಸವೆದಿವೆ. ಮುಂಬರುವ ದಿನಗಳಲ್ಲಿ ಈ ಶಾಸನವಿರುವ ಬಂಡೆಯನ್ನು ಸ್ಥಳೀಯರು ಕಟ್ಟಡಗಳ ನಿರ್ಮಾಣಕ್ಕೆ ಉಪಯೋಗಿಸಿ ಕೊಳ್ಳುವಲ್ಲಿ ಸಂದೇಹವಿಲ್ಲ. ಆದ್ದರಿಂದ ಈ ದೊಡ್ಡದಾದ ಮತ್ತು ಸರಳವಾದ ಭಾಷೆಯಲ್ಲಿ ಸುಂದರವಾಗಿ ಕಂಡರಿಸಲ್ಪಟ್ಟ ಈ ಶಾಸನವನ್ನು ರಕ್ಷಿಸುವ ಹೊಣೆ ಸ್ಥಳೀಯರ ಕರ್ತವ್ಯವಾಗಿದೆ.

ಶಾಸನ ಪಾಠ

1. ವಿದ್ಯಾ ಶಂಕರಾಯ ನಮಃ | ಶ್ರೀ ಗಣಾಧಿಪತಯೆ ನಮಃ| ಶುಭಮಸ್ತು| ವಿರೂಪಾಕ್ಷ ಲಿಂಗಾಯ ನಮಃ||
2. ಶ್ರೀ ಜಯಾಭ್ಯುದಯ ಶಾಲಿವಾಹನ ಶಕ ವರುಷ ೧೪೭೩ ನೆಯ ವಿರೋಧಿ ಕೃತ ಸಂವತ್ಸರದ ಆಷಾಡ ಶುದ್ಧ ೧೨ ರಲು ||
3. ಶ್ರೀಮದ್ ರಾಜಾಧಿರಾಜ ಪರಮೇಶ್ವರ ಶ್ರೀವೀರಪ್ರತಾಪ ಶ್ರೀ ಸದಾಸಿವ ದೇವಮಹಾರಾಯರು | ವಿದ್ಯಾನಗರದಲು ರತ್ನ ಸಿಂ
4. ಹಾಸನಾರೂಢರಾಗಿ ಪೃಥ್ವಿ ಸಾಂಬ್ರಾಜ್ಯಂ ಆಳುತಂಯಿರಲಾಗಿ ಶ್ರೀ ಮಹಾಯಮಂಡಳೆಶ್ವರ ರಾಮರಾಜ ತಿಂಮರಾಜ
5. ಗಳ ಕೊಮಾರ ವಿಠಲ ರಾಜದೇವ ಮಹಾ ಅರಸುಗಳು ಆವಿನಮಡುವಿನ ಸೀಮೆಗೆ ಸಲುವ ಹಿರಿಯ ಅನಂ
6. ತಾಪುರದ ಮಲ್ಲಿಕಾರ್ಜುನ ದೇವರಿಗೆ ಆವಿನಮಡುವಿನ ಕೆರೆಯ ಕೆಳಗಣ ಸ್ಥಾವರ ದೊಳಗಣ ತಿಪ್ಪಯ್ಯ ಬಸವಯ್ಯ ಕೈ
7. ಯ್ಯಲೂ ವಿರುಪಣಗಳು ಕ್ರಮವಾಗಿ ಕೊಂಡು ಕೊಟ್ಟದಾನದ ಹೊಲ .... ತೋಟದ (ಪಾ) (ಲು)
8. ಸೀಮೆಯ ವಿವರ || ಮೂಡಲು ಭೊಳಪನ ವಿರುಣನ ಹೊಲ ಮೇರೆ | ಥೆಂಕಲು ವಿರುಪಣನ ಸಿವನಪನ ಹೊಲ
9. ಮೇರೆ | ಪಡುವಲು ಹಿರೆಯ ಕಾಲುವೆ ಮೇರೆ | ಬಡಗಲು ಭೊಳಪನ ಮಗ ಭದ್ರಪನ ಹೊಲ ಮೇರೆ | ಅಂತು ಯಿೂ ಭೂ
10. ಮಿ ಸೀಮೆಯ ಒಳಗಾದ ತೆಂಗು, ಹಲಸು, ಮಾಉ, ನಿಂಬೆ, ಹೇರಳೆನ್ನು ಆವೂರ ಫಲಗಳನು ಅಂತಾಪುರದ
11. ಮಲ್ಲಿಕಾರ್ಜುನ ದೇವರ ಅಮೃತಪಡಿಗೆ ಆಚಂದ್ರಾರ್ಕಸ್ತಾಯಿಯಾಗಿ ಧಾರೆಯ ದ್ವಾದಸೆಯಾ ಪುಂಣ್ಯ ಕಾವದಲು ಯಿ
12. ತೋಟದ ವಕ್ಕಲಪಾಲು ರಾಜಪಾಲು ಸಹವಾಗಿ ಮಲ್ಲಿಕಾರ್ಜುನ ದೇವರಿಗೆ ವಿಠಲರಾಜ ಅಯ್ಯನವರೂ ಸರ್ವಮಾನ್ಯವಾಗಿ
13. ಧಾರೆಯನೂಯೆರದು ಕೊಟ್ಟರು || ಸ್ವದತ್ತಾಂ ಪರದತ್ತಾಂ ವಾಯೊ ಹರೆತ ವಸುಂದರಾಂ ಸಷ್ಟಿರ್ವರುಷ ಸಹಸ್ರಾ
14. ಣಿ ವಿಷ್ಟಾಯಂ ಜಾಯತೆ ಕ್ರಿಮಿಃ | ದಾನಪಾಲನಯೊರ್ಮದ್ಯೆ ದಾನಚ್ಛ್ರೆಯೋನು ಪಾಲಂ

15. ದಾನತ್ಸ್ವರ್ಗ ಮಹಾಪ್ನೊತಿ ಪಾಲಾನಾದಚ್ಚುತಂ ಪದಂ || ಸ್ವದತ್ತಾಂ ದ್ವಿಗುಣಂ ಪುಣ್ಯಂ | ಪರದಾತ್ತಾ
16. ನು ಪಾಲನಂ ಪರದತ್ತಾಪ ಹಾರೇಣ | ಸ್ವದತ್ತಾಂ ವಿಷ್ಣು ಭವೇತ್ || ಯಿ ಧರ್ಮ್ಮಕೆ ಆವನ
17. ನೊಬನು ಅಳುಪಿದರು | ಕಾಸಿ ಕ್ಷೇತ್ರದಲು ತಮ ತಂದೆ ತಾಯಿ ಗುರು ಉದ್ಯೆಯಿವವನು
18. ಗೋವು ಬ್ರಾಹ್ಮಣರನು ಅಲ್ಲಿಕೊಂದು ಸುರೆಯನು ಕುಡಿದ ಪಾಪಕೆ ಹೋಹರು | ದೇವಲೋಕ
19. ಕೆ ಮರ್ತ್ಯಲೋಕಕೆ ಹೊರಗುಯಿದ ಅಳಿಪಿದವನ ಬಾಯಿಲಿ ಕತೆ ತುಣಿಕಳು ಮೊಗೆ |
20. ಶ್ರೀ ಶ್ರೀ ಶ್ರೀ

ಆವಿನಮಡುವಿನ ಸೀಮೆಯೊಳಗಿನ ಅನಂತಾಪುರ ಗ್ರಾಮ ನಾಮ ಕುರಿತು

ಈ ಆವಿನಮಡುವಿನ ಶಾಸನಕ್ಕೆ ಪೂರಕವಾದ ಮಾಹಿತಿಯನ್ನೊದಗಿಸುವ ಮೂರು ಶಾಸನಗಳು ಈ ತಾಲ್ಲೂಕಿನ ಆವಿನ ಮಡುವು ಗ್ರಾಮದಿಂದ ಸು. ೨ ಕಿ.ಮೀ. ಅಂತರ ದಲ್ಲಿರುವ ಅಂತಾಪುರ ಗ್ರಾಮದಲ್ಲಿ ಕಾಣುತ್ತೇವೆ. ಮೊದಲನೆಯದಾಗಿ ಅಂತಾಪುರ ಗ್ರಾಮದ ಶಿಥಿಲವಾದ ಮಲ್ಲಿಕಾರ್ಜುನ ದೇವಾಲಯದ ಹತ್ತಿರದಲ್ಲಿ ನಿಲ್ಲಿಸಿದ ಕ್ರಿ.ಶ. ೧೫೪೭ರ ಶಾಸನವು ಹರಪಣ್ಣನು ಗೌಡ, ಸೇನಬೋವ ಮತ್ತು ಗ್ರಾಮದ ಜನರ ಒಪ್ಪಿಗೆ ಪಡೆದು ಆವಿನಮಡುವು ಸೀಮೆಯಲ್ಲಿರುವ ಅಂತಾಪುರದಲ್ಲಿ ಶಿಥಲವಾಗಿದ್ದ ಮಲ್ಲಿಕಾರ್ಜುನ ದೇವಸ್ಥಾನವನ್ನು ಜೀರ್ಣೋದ್ಧಾರಗೊಳಿಸಿದ್ದನ್ನು ಉಲ್ಲೇಖಿಸಿದರೆ.[1] ಅದೇ ದೇವಾಲಯದ ಹತ್ತಿರ ಬಿದ್ದಿರುವ ಕ್ರಿ.ಶ. ೧೫೫೧ರ ಶಾಸನವು ಮಹಾ ಮಂಡಲೇಶ್ವರ ರಾಮರಾಜ ತಿರುಮಲರಾಜನ ಮಗ ತಿಮ್ಮರಾಜನು ಹಿರಿಯ ಅಂತಾ ಪುರದ ಮಲ್ಲಿಕಾರ್ಜುನ ದೇವರಿಗೆ ಆವಿನಮಡುವು ಕೆರೆಯ ಕೆಳಗೆ ಒಂದು ತೋಟದಾನ ವನ್ನು ಕೊಟ್ಟ ಬಗ್ಗೆ ಮಾಹಿತಿಯನ್ನು ನೀಡುತ್ತದೆ.[2] ಅದೇ ದೇವಸ್ಥಾನದ ಹತ್ತಿರ ನಿಲ್ಲಿಸಿದ ಕ್ರಿ.ಶ. ೧೫೫೩ರ ಶಾಸನವು ಉಟಗಲ ತಿಮ್ಮರಸನು ಸದಾಶಿವರಾಯ, ರಾಮರಾಜ ಮತ್ತು ತಿರುಮಲರಾಜರಿಗೆ ಪುಣ್ಯವಾಗಲೆಂದು ಅಂತಾಪುರದ ಮಲ್ಲಿಕಾರ್ಜುನ ದೇವರಿಗೆ ನಿರಂತರ ದೀಪ ಉರಿಸಲು ಕೆಲವು ತೆರಿಗೆಗಳನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.[3] ಅದರಂತೆ ಪ್ರಸ್ತುತ ಈ ಆವಿನಮಡುವಿನ ಕ್ರಿ.ಶ. ೧೫೫೧ರ ಶಾಸನವು ಭೂಮಿದಾನ ಹಾಗೂ ತೋಟದಾನವನ್ನು ತಿಳಿಸುವುದರ ಜೊತೆಗೆ ಆ ಭೂಮಿಯ ಮೇರೆಗಳನ್ನು ತಿಳಿಸಿರುವುದು ಈ ಶಾಸನದ ವಿಶೇಷವಾಗಿದೆ.

ಈ ಮೇಲ್ಕಂಡ ನಾಲ್ಕು ಶಾಸನಗಳಲ್ಲಿ ಉಲ್ಲೇಖಗೊಂಡ ಆವಿನಮಡುವಿನ ಸೀಮೆಯೊಳಗಿನ ಅನಂತಾಪುರ ಎಂಬ ಗ್ರಾಮವನ್ನು ಈ ರೀತಿಯಾಗಿ ಕಾಣುತ್ತೇವೆ. ಅದು ಎಂದರೆ -

ಕ್ರಿ.ಶ. ೧೫೪೭ರ ವೇಳೆಯಲ್ಲಿ ಈ ಪ್ರದೇಶವು ಆವಿನಮಡುವಿನ ಸೀಮೆಯ ಅನಂತಾಪುರ ಎಂದು ಹೆಸರು ಪಡೆದಿದ್ದು, ಕ್ರಿ.ಶ. ೧೫೫೧ರ ಅವಧಿಗೆ ಹಿರಿಯ ಅನಂತಾಪುರ ಎಂದು ಪ್ರಸಿದ್ಧವಾಗಿರಬೇಕು. ಮುಂದೆ ಕ್ರಿ.ಶ. ೧೫೫೩ರ ಸಮಯಕ್ಕೆ 'ಹಿರಿಯ + ನ' ಕಾರವನ್ನು ಕಳೆದುಕೊಂಡ ಈ ಗ್ರಾಮವು ಕೇವಲ ಅಂತಾಪುರ ಎಂಬ ಹೆಸರಿನಿಂದ ಕರೆಯಲ್ಪಟ್ಟಿರಬೇಕು. ಒಟ್ಟಿನಲ್ಲಿ ವಿಜಯನಗರದ ಅವಧಿಯಲ್ಲಿ ಈ ಗ್ರಾಮವು ಅನಂತಾಪುರವೆಂದು > ಹಿರಿಯ ಅನಂತಾಪುರವೆಂದು ಹೆಸರು ಪಡೆದಿದ್ದ ಇದು ಮುಂದೆ ಜನರ ಬಾಯಿಯಲ್ಲಿ ಅನಂತಾಪುರ ('ನ' ಕಾರ) ಎಂಬುದು ಸವೆದು ಅಂತಾಪುರವಾಗಿದೆ ಎಂದು ಈ ಮೇಲ್ಕಂಡ ನಾಲ್ಕು ಶಾಸನಗಳ ಆಧಾರದಿಂದ ಸ್ಪಷ್ಟವಾಗುತ್ತದೆ.

1. *ARSIE* - 1992 - 23, ಸಂ. 1922 ರ 733
2. *ARSIE* - 1922 - 23, ಸಂ. 1922, ರ 734
3. *ARSIE* - 1922 - 23, ಸಂ. 1922 ರ 732

೬. ಕುರುಬರಿಗೆ ಸಂಬಂಧಿಸಿದ ವಿಜಯನಗರದ ಅಪ್ರಕಟಿತ ತಾಮ್ರಶಾಸನ

ಡಾ. ಎಫ್.ಟಿ. ಹಳ್ಳಿಕೇರಿ

ಕರ್ನಾಟಕದ ಪ್ರಮುಖ ಜನಸಮುದಾಯಗಳಲ್ಲಿ ಒಂದಾದ ಕುರುಬ ಸಮಾಜದ ಕಲೆ, ಸಾಹಿತ್ಯ, ಸಂಸ್ಕೃತಿ ಕುರಿತಂತೆ ಇತ್ತೀಚೆಗೆ ಅಧ್ಯಯನಗಳು ನಡೆಯುತ್ತಿವೆ. ಅದರಲ್ಲಿಯೂ ವಿಶೇಷವಾಗಿ ಈ ಸಮುದಾಯಕ್ಕೆ ಸಂಬಂಧಿಸಿದ ಶಾಸನ, ಕಾವ್ಯ, ಪುರಾಣ, ದಾಖಲೆ ಮುಂತಾದ ಆಕರಗಳ ಶೋಧ ಮತ್ತು ಅವುಗಳ ಪ್ರಕಟಣೆ ಕುತೂಹಲಕರವಾಗಿವೆ. ತಗರ ಪವಾಡ, ಸಿದ್ಧಮಂಕ ಚರಿತೆ, ಜನಪದ ಹಾಲುಮತ ಪುರಾಣಗಳ ಪ್ರಕಟಣೆಯಿಂದಾಗಿ ಈ ಸಮುದಾಯದ ಚಾರಿತ್ರಿಕ ಹಿನ್ನೆಲೆ, ಧಾರ್ಮಿಕ ನೆಲೆ ಹಾಗೂ ಸಾಂಸ್ಕೃತಿಕ ಅನನ್ಯತೆ ಗುರುತಿಸಲು ಸಾಧ್ಯವಾಗಿದೆ. ಇವುಗಳಿಗೆ ಪೂರಕವಾಗಿ ಶಾಸನ, ಕಾಗದರೂಪದ ದಾಖಲೆಗಳು ಸಹ ಕುರುಬರ ಗುರುಪರಂಪರೆ, ಸಾಮಾಜಿಕ ಪರಂಪರೆಯನ್ನು ತಿಳಿದು ಕೊಳ್ಳುವಲ್ಲಿ ತುಂಬ ಸಹಾಯಕಾರಿಯಾಗುತ್ತ ಲಿವೆ. ಇದಕ್ಕೆ ನಾನು ಶೋಧಿಸಿದ ತುರುವೆಕೆರೆಯಲ್ಲಿ ದೊರೆತ ಮೂರು ತಾಮ್ರ ಶಾಸನಗಳು (ಕುರುಬರ ಗುರು ಪರಂಪರೆಗೆ ಸಂಬಂಧಿಸಿದ ತುರುವೆಕೆರೆ ಶಾಸನ : ಹೊಸ ಶೋಧ, ಶಾಸನ ಅಧ್ಯಯನ ೧-೨,೨೦೦೪) ಹಾಗೂ ಡಾ. ಬಿ. ರಾಜಶೇಖರಪ್ಪ ನವರು ಪ್ರಕಟಿಸಿದ ಎರಡು ಶಾಸನ (1. ಕುರುಬರು ದಾವಣಗೆರೆಯ ಗೌಡಿಕೆಯ ಹಕ್ಕನ್ನು ದಿವ್ಯದ ಮೂಲಕ ಗೆದ್ದು ಕೊಂಡ ಶಾಸನ, ಹಾಲತೊರೆ, ಪು. ೨೮೨. 2. ಇಮ್ಮಡಿ ಮೆದಕೇರಿ ನಾಯಕನ ಕಾಲದ ಒಂದು ತಾಮ್ರಪಟ ಶಾಸನ, ನಿರಂತರ, ಪುಟ. ೨, ೨೧೦೦೧)ಗಳು ಕುರುಬರ ಪ್ರಾಚೀನ ಧಾರ್ಮಿಕ ಮತ್ತು ಸಾಮಾಜಿಕ ಪದ್ಧತಿಯ ಮೇಲೆ ಹೊಸಬೆಳಕನ್ನು ಚೆಲ್ಲಿವೆ.

ಕುರುಬರಿಗೂ ಮತ್ತು ವಿಜಯನಗರ ಅರಸು ಮನೆತನಕ್ಕೂ ಒಂದು ರೀತಿಯ ಅವಿನಾಭಾವ ಸಂಬಂಧ ಬೆಳೆದು ಬಂದಿರುವುದಕ್ಕೆ ಅನೇಕ ಆಧಾರಗಳಿವೆ. ಕುರುಬ ಕುಲದ ಹಕ್ಕ ಬುಕ್ಕರು ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದ್ದು. ಹಂಪಿ ಪರಿಸರದಲ್ಲಿ ಕುರುಬರಿಗೆ ಸಂಬಂಧಿಸಿದ ಅನೇಕ ಕುರುಹುಗಳಿರುವುದು ಇದಕ್ಕೆ ನಿದರ್ಶನವಾಗಿವೆ. ವಿಶೇಷವಾಗಿ ಕುರುಬರಿಗೆ ಸಂಬಂಧಿಸಿದ ಕೆಲವು ಶಾಸನಗಳು ವಿಜಯನಗರದಲ್ಲಿ ನಡೆದ ಘಟನೆಗಳನ್ನು ನಿರೂಪಿಸುತ್ತವೆ. ವಿಜಯನಗರದ ಅರಸರ ಸಮ್ಮುಖದಲ್ಲಿ ಕುರುಬರು ತಮ್ಮ ಗುರುಗಳಾರೆಂಬುದನ್ನು ಪರಿಹರಿಸಿಕೊಂಡಂಥ ಅನೇಕ ನಿದರ್ಶನಗಳನ್ನು ಇಲ್ಲಿ

ಉಲ್ಲೇಖಿಸಬಹುದು. ಇಂಥ ನಿದರ್ಶನಗಳಿಗೆ ಮತ್ತೊಂದು ಅಪ್ರಕಟಿತ ತಾಮ್ರ ಶಾಸನ ಈಗ ಸೇರ್ಪಡೆಯಾಗುತ್ತಿದೆ.

1. ಶಾಸನಪಾಠ

ಶುಭಮಸ್ತು | ಅವಿಘ್ನಮಸ್ತು | ಶ್ರೀ ಬಸವಲಿಂಗಾಯನಮಂ | ಶ್ರೀ ಗುರುವೇನಮಃ ಧರ್ಮಶಾಸ್ತ್ರ ಶಾಸನಂ | ಅಂಗವಂಗ ಕಳಿಂಗ ೧೮೦೦ ಸ್ವಸ್ತಿಶ್ರೀ ವಿಜಯಾಬ್ಧ ಸಂವತ್ಸರ ಶಾಲಿವಾಹನ ಶಕ ಆಗುನಿ ರಕ್ತಾಕ್ಷಿ ನಾಮ ಸಂವತ್ಸರ ಚೈತ್ರ ಶುದ್ಧ ೧ ಗುರುವಾರಂ ಶ್ರೀಮದ್ ಮಹಾರಾಜಾಧಿರಾಜೇಶ್ರೀ ನರಪತಿ ರಾಜವಡೆಯರು ಶ್ರೀ ಮದ್‌ರಾಜ ರಾಜೇಶ್ರೀ ನರಪತಿ ಪಟ್ಟವನ್ನು ಅಪ್ಪಣೆ ಪ್ರಕಾರಕ್ಕೆ ಬಣಜಿಗರಿಗೂ ಕುರುಬರಿಗೂ ವ್ಯಾಜ್ಯ ಮಾಡಿಕೊಂಡದ್ದು ಯೇನು ಅಂದರೆ | ತೋಪುಜಾತ್ರೆ ಕಟ್ಟೆಮನೆಯಂದು ಹಂಪೆಯಲ್ಲಿ ಬಗೆಹರಿಯಬೇಕು | ನಾಲ್ಕುದಿಕ್ಕಿನ ಶೆಟ್ಟಿ ಮಹನಾಡು ಬರುತ್ತೆಯಂದು ವ್ಯಾಜ್ಯೆ ಮಾಡಿಕೊಂಡು ಯಿರಲಿಕ್ಕಾಗಿ | ವ್ಯಾಜ್ಯ ಏನೆಂದರೆ | ಕುರುಬರಿಗೆ | ಕುರುಬರ ದೇವರಿಗೆ | ಸಾಲುಸತ್ತಿಗೆ ಸುರುಟು ಹನುಮನ ಟಕ್ಕೆ ಹಗಲುದೀವಟಿಗೆ ಮೇಳ ಸಿಂಹಲವಾಟ ಜೆಲ್ಲಿಸಾಲೆ ರುಂಡಮಾಲೆ ಹಸುರರಥವು ಸಂದಿಗೆ ಸಾವಿರ ಬಿರುದುಗಳು ನಿಮಗೆ ಸಲ್ಲದುಯಂದ ಬಣಜಿಗರು ಹಿರಿದುಯುದ್ಧರು | ಹಣಜಿಗರು ಈ ಮಾತು ಅಂದರೆ | ಬಣಜಿಗರಿಗೆ ಕುರುಬರು ಅಂದದ್ದು ಏನೆಂದರೆ | ಬಣಜಿಗರಿಗೆ ಅಡ್ಡಪಟ್ಟಡಿ ಹಾಕಿ ಯತ್ತಿನ ಮೇಲೆ ಹೇರು ಹಾಕಲಾಗದು | ಕುರುಬರ ಬಾರಾಕಂಕಣ ಕಟ್ಟಲಾಗದು | ಕಂಬಳಿಗದ್ದಿಗೆ ಹಾಕಲಾಗದು | ಚಿಕ್ಕತಕ್ಕಡಿ ದೊಡ್ಡತಕ್ಕಡಿ ಹಿಡಿಯಲಾಗದು ಕುರುಬರ ಬದುಕು ಮುಟ್ಟಲಾಗದು | ಎಂದು ಕುರುಬರು | ಇದು ವಂದು ನಿಮಗೆ ಇದು ಸಲ್ಲದು ಎಂದು ಕುರುಬರು | ಸರವೂರ ಶಾಂತಮುತ್ತಯ್ಯ ಸ್ವಾಮಿಗಳು | ಹಸುಗೊಂಡೆ ನಾಗಪ್ಪ | ಏಳುಸುತ್ತಿಗೆ ಮಧುವೀರ | ಮುರುಗಾಲು ಮುತ್ತಯ್ಯ | ಸೀರ್ಪಿ ಬುಡ್ಡೆ ವಡೆಯರು | ವುಜ್ಜನಿ ರೇವಂಣ | ಕುಂದುರ್ಪಿ ಸಿದ್ಧಯ್ಯ | ಕಣೇಕಲ್ಲು ಮಲ್ಲಯ್ಯ | ಗುತ್ತಿ ತಿಮ್ಮಯ್ಯ | ವಂದುಹಗಲು ಬೀರಯ್ಯ | ಬಳ್ಳಾರಿ ಪೆನ್ನಯ್ಯ | ವಿಜೇನಗರ ಪಟ್ಟಮದ ಚಿದುಗೊಂಡ ನಾಗಯ್ಯ | ಘನಗಿರಿ ಪೆನುಗೊಂಡೆ ಭಂಡಿವುಜ್ಜನಗೌಡಾರ ಮಂಚಿಶೆಟ್ರು ನಾಗಾರಗೌಡಾ | ತೆಕ್ಕಲಕೋಟೆ ಮಲ್ಲಯ್ಯ | ಚಿತ್ರದುರ್ಗ ಸಂವಸ್ತಾನದ ಹಟ್ಟಿಗೌಡ ಬಡಪ್ಪನವರು | ಚಿತ್ರದುರ್ಗದ ಜೇಡ ಬೀರಯ್ಯ | ಗದ್ವಾಲ್ ರಾಮಯ್ಯ | ಹೊಸಪೇಟೆ ಲಿಂಗಪ್ಪ | ಸೊಂಡೂರು ಕರಿಯಂಣಾ | ಚಿತ್ರದುರ್ಗದ ಸಂಸ್ತಾನದ ಕಟ್ಟೆಮನೆ ತುರುವಯ್ಯನ ಗುಡಿಕಟ್ಟು ಗೌಡ ದೊಡ್ಡ ಮೇಲಪ್ಪ | ಹಿರಿಯೂರು ಮಲ್ಲಣ್ಣ | ಚಿತ್ರಕಲ್ಲು ದೊಡ್ಡಬೀರಯ್ಯ | ವುರುಂಕೊಂಡೆ ದೇವಯ್ಯ | ಮರೂರು ಚಿತ್ತಪೆದ್ದಯ್ಯ | ಇಂತಿಷ್ಟು ಜನಗಳೂ ಕೂಡಿ ಕಣೆಕಲ್ಲುದೇವರು ೧ | ವುಜ್ಜದೇವರು ೧ | ವಿಜಯನಗರ ಪಟ್ಟಣದ ಯಿಟಗಲು ಪಲ್ಯೆಯ ೧ | ಅಣಕನಾಳ ಬಚ್ಚಲಕಲ್ಲಯ್ಯ ೧ | ನಾಗಲಾಪುರದ ಸಿಂಹಾಸನದ

ದೇವರು ೧ | ಅತಕಾಳ ಪಟ್ಟಣದ ದೊಡ್ಡಯ್ಯ ೧ | ಗಾಳಪಲ್ಲಯ್ಯ ೧ | ಪೆನ್ನೊಬಳೇಶ ೧| ದೋಣೆಕಲ್ಲು ದೇವರು ೧ | ಹಗಲೂರು ದೇವರು ೧| ಬತ್ತೇದೇವರು ೧ | ರಾಮೇ ದೇವರು ೧ | ಗುಳಳ್ಳಿ ಬೀರೇದೇವರು ೧ | ಹುಲ್ಲೂರು ದೇವರು ೧ | ಕೊತ್ತನೂರು ದೇವರು ೧ | ಬ್ಯಾಡರಳ್ಳಿ ದೇವರು ೧ | ಚೆಂಗಳೂರು ದೇವರು ೧ | ಸಂಪಕಳ್ಳಿ ದೇವರು ೧ ಸಿದ್ಧಲಿಂಗ ದೇವರು ಯಳೆಸಂದ್ರದ ಬೀರೇದೇವರು ೧ | ಸಿವಾರದ ದೇವರು ೧ | ಮುಗಳೂರು ದೇವರು ೧ | ಗುಳಿಸಂದ್ರದೇವರು ೧| ಲಕ್ಷ್ಮೀದೇವರು ೧ | ಕರಿಯಾಳದೇವರು ೧ | ಮೈಲಾರದೇವರು ೧ | ಹರವಿ ಬೀರದೇವರು ೧ | ಮಲೆಬೆನ್ನೂರು ದೇವರು ೧ | ಆಲಿವೂರ ದೇವರು ೧ | ಕೊಲ್ಲಪಲ್ಲಯ್ಯ ೧ | ಜ್ಯಾಜಕಲ್ಲು ದೇವರು ೧ | ಹಿರಿಯಾಳ ದೇವರು ೧ | ಡುಮ್ಮ ಗುಡಿಕಟ್ಟು ಸಿದ್ದೇದೇವರು ೧ | ಅಂತಾಪುರ ದೇವರು ೧| ಹೊನ್ನುಳಿ ದೇವರು ೧ | ಚಿತ್ರಕಲ್ಲುದುರ್ಗದ ದೇವರು ೧ | ತುರುಬಯ್ಯ (ದೇವರು) ೧ | ತಕ್ಕಲಕ್ಕಾಟಿ ದೇವರು ೧ | ತ್ಯಾವಣಿಗೆ ದೇವರು ೧ | ತಾಳಿಕೋಟೆ ದೇವರು ೧ | ಕುನೆಬೆಳಕೇರಿ ದೇವರು ೧ | ಹಿರಿಯೂರ ದೇವರು ೧ | ಕುಂದೂರ ದೇವರು ೧ | ಬಾನವಳ್ಳಿ ದೇವರು ೧ | ಲಕ್ಕೆಹಳ್ಳಿ ಬೀರೇದೇವರು ೧ | ಯಿಂತಿ ಮೊತ್ತಾರು ದೇವರುಗಳು ಕೂಡಿ | ಹೊಸಪೇಟೆಯಲ್ಲಿ ಬಣ್ಣ ಮಾಡಿಸಿಕೊಂಡು ಹಂಪೆಯೊಳಗೆ ಗಂಗೆಪೂಜೆ ಮಾಡಿಸಿಕೊಂಡು ತೇರಿನ ಬಜಾರಿನಲ್ಲಿ ಸಕಲ ಸಂದಿಗೆ ಸಾವಿರ ಬಿರುದುಗಳು ಹಾಕಿಕೊಂಡು | ಯತ್ತು ಕುದುರೆಗಳ ಮೇಲೆ ಹೇರಿಕೊಂಡು ಚತ್ರಿ ಚಾಮರಗಳ ಹಿಡಿಸಿಕೊಂಡು ಭಜಂತ್ರಿ ವಾಲಗ ಮಾಡಿಸಿಕೊಂಡು ಮೆರವಣಿಗೆ ಮಾಡಿಸಿಕೊಂಡು ಬಜಾರದಲ್ಲಿ ಬರುತ್ತಿರಲು | ಹೊಸಪೇಟೆ ಶೆಟ್ಟಿನಾಗಪ್ಪ | ಸೊಂಡೂರು ವೀರಭದ್ರಶೆಟ್ರು | ಕಮಲಾಪುರದ ನಾಗಶೆಟ್ಟಿ | ಆನೆಗುಂದಿ ರುದ್ರಶೆಟ್ಟಿ | ಗುತ್ತಿತಿಮ್ಮಶೆಟ್ಟಿ | ಬಳ್ಳಾರಿ ರುದ್ರಪ್ಪಶೆಟ್ರು | ಗದ್ವಾಲ ತಿಮ್ಮಶೆಟ್ಟಿ | ತಕ್ಕಲಕ್ಕಾಟಿ ಶೆಟ್ಟಿ ಮಲ್ಲಪ್ಪ | ಮದ್ರಾಸು ಪೆನ್ನಶೆಟ್ಟಿ| ಬಂಬಾಯಿ ವೀರಭದ್ರಶೆಟ್ರು | ವುಜ್ಜನಿ ಮರದಯ್ಯ ಸ್ವಾಮಿಗಳು | ಗುತ್ತಿಚಂದ್ರಶೇಖರ ಸ್ವಾಮಿಗಳು | ರಾಯದುರ್ಗದ ರಾಮಗಿರಿಯಪ್ಪ ಸ್ವಾಮಿಗಳು | ರಾಯಚೂರು ಲಿಂಗಪ್ಪ ಸ್ವಾಮಿಗಳು ಪರವತ ಸ್ವಾಮಿಗಳು | ಬಾಳೆಹಳ್ಳಿ ಸ್ವಾಮಿಗಳು | ಇ ಮೊದಲಾದ ಸ್ವಾಮಿಗಳೂ ಶೆಟ್ರು ಸಹ ಕಲಿತು ಕುರುಬರ ದೇವರುಗಳ ಬಿರುದು ಬಹುಮಾನಗಳ ಸಹ ಕಸಿದುಕೊಂಡು ಸಾವಿರ ಸಾಲುಮಂಟಪದೊಳಗೆ ಹಾಕಿಕೊಂಡು ಪರಬಾರೆ ಮಾಡಿದರು | ಅವರು ಯಿವರು ದೊಂಬಿ ಮಾಡಿಕೊಂಡು ಹೇಮಕೋಟೆಯ ಬಂಡೆಯಮೇಲೆ ಭಾರಿ ಜಗಳವಾಗಿ ಸಾವಿರ ಪ್ರಾಣಿಗಳು ಹತವಾದವು | ತೇರಿನ ಬಜಾರಿನಲ್ಲಿ ಗುಡಾರಗಳನ್ನು ಹೊಡೆಯಲು | ಆಗ ಮಹಾರಾಜ ರಾಜಶ್ರೀ ನರಪತಿ ಪಟ್ಟವು ಶ್ರೀಕೃಷ್ಣ ವಡಿಯವರು ಡಿಳ್ಳಿಗೆ ಸುಲತಾನ್ | ಹರಪನಹಳ್ಳಿ ವೀರಭದ್ರಪ್ಪನವರು | ಚಿತ್ರಕಲ್ಲು ದುರ್ಗದ ಬರಮಣ ನಾಯಕರು | ಶ್ರೀ ಕನಕಗಿರಿ ಬಂಗಾರ ನಾಯಕರು | ಗುಡೇಕೋಟೆ ನಾಯಕರು | ಜರ್ಮಾಲಿ ರಾಮಪ್ಪ

ನಾಯಕರು | ನಿಡಿಗಲ್ಲು ನೀಲಾವತಿ ಪಟ್ಟಣಗಳಿಗೆ ಮೊದಲಯನ ತಿಪ್ಪರಾಜಲ ವಾರ ಸುರಪುರ ದೊರೆಗಳು ಈ ಮೊದಲಾದ ದೊರೆಗಳು ಕುಳಿತು | ಕಣಿಕಲ್ಲು ಲಕ್ಕತಿಮ್ಮನಗೌಡ | ಗದವಲ್ ಪೆದ್ದರೆಡ್ಡಿ | ರಾಮನಮಲೆ ರಾಮನಾಯಕರು | ಕನಕಗಿರಿ ರುದ್ರಪ್ಪ | ಸೊಂಡೂರು ಮಲ್ಲನಗೌಡ | ಗಜೇಂದ್ರಗಡದ ಶೆಟ್ರ ನಾಗನಗೌಡಾ | ಹೊಸಕೋಟಿ ತಮ್ಮ ಗೌಡಲಿಂಗ | ವಂಗಕಳಿಂಗ ಕಾಸಿರ ಕಾಂಭೋಜ ಕೌಮರು ಪಸಾದ್ವಿರಾ ಸೌರಾಟ್ರ ಮಹಾರಾಷ್ಟ್ರ ಮಗದ ಮಾಳವ ದ್ರಾವಿಡ ಕರ್ನಾಟಕ ನಾಟ ಕರಾಟ ಮಾಟ ನೇಪಾಳ ಚೀರಳ ನರಳ ಪಾಂಚಾಳಿ ಗೌಳಾ ಮಳಿಯಾಳ ಸಿಂಹಳ ಅಂದ್ಯಾಣ ದಶಸಭೋಜನರು ರಗಾಕ್ಷಕ ವಿದೇಹ ವಿದರ್ಭ ಬಾಹ್ಲೀಕ ಬರಬರತಂ ತಲ ಸಲಕ ಕೂಡಲಿ ಕಿರಾತ ಕಾಸಿವಿಶ್ವನಾಥ ಸ್ವಾಮಿಯವರಿಂದ ನಿರ್ಮಾಣ ನಂಜೇಸಿ ನಾರುಪಸಿ ಬಿಡ್ದಲು ಕುಪಾಲು ಪೆಟ್ಟಿಂಚಿ ನಾಡು ನೇತ್ರಲು ಸಂಜಲು ಸೋಯಿತಜನಾಂತು ಭೂಲೋಕ ಭುವರಲೋಕ ಸುವರಲೋಕ ಜನರಲೋಕ ಮಹಾಲೋಕ ಸತ್ಯಲೋಕ ಅತಳ ವಿತಳ ಸುತಳ ರಸಾತಳ ತಳಾತಳಾ ಮಹಾತಳ ಪಾತಾಳ ಭೂಲೋಕ ಜವಷ ಶ್ರೀ ತ್ರೈಲಾಸಮಯ ಐವತ್ತಾರು ದೇಶದವರು ಕಲಿತು | ಮಹಾನಾಡು ಸಭೆಯವರನು ಕರೆಯಿಸಿ | ಸಕಲವಾದ ಹಿರಿಯವರು ಸಭೆಯನ್ನು ಸೇರಿಸಿಕೊಂಡು ಪಂಚಾಯಿತಿ ಮಾಡಿ | ಇವರವರ ವಾದವಿವಾದಗಳನ್ನು ವಿಚಾರಣೆ ಮಾಡಿ |ಯಿವರು ಹೆಚ್ಚು ಅಲ್ಲ ಅವರು ಕಡಿಮೆ ಅಲ್ಲ | ಬಣಾಜಿಗರದ ಮೂತಿ ಕುರುಬರದು ಸಾಲು ಪಂಚಾಯಿತಿಯಲ್ಲಿರುವ ಕುರುಬರು ಮುಟ್ಟದ ಬದುಕುಯಿಲ್ಲ | ಶುಭ ಅಂದ ಕುರುಬರು ಮುಂದೇ ಬೇಕು | ಕುರುಬರ ದಾರ ಕಂಕಣಬೇಕು ಕಂಬಳಿ ಗದ್ದಿಗೆ ಬೇಕು | ಈ ಬಗೆ ವಿಚಾರಿಸಿದಕ್ಕೆ ಕುರುಬರನು ತೆಗೆದುಹಾಕುವುದಿಲ್ಲವೆಂದು ಸಾರಿ ಸಭೆಯವರು ಪಂಚಾಯಿತಿ ಹೇಳಿದರು | ಅಷ್ಟು ವಿಚಾರ | ಕುರುಬರಿಗೆ ವಂದು ಸಂದಿಗೆ ಸಾವಿರ ಬಿರುದು ಸಲ್ಲುವುದು ಎಂದು ಪಂಚಾಯಿತಿಯಲ್ಲಿ ಸರ್ವರು ಹೇಳಿದರು | ಆಗ ಸಕಲವಾದ ಜನಗಳು ಕೂಡಿಕೊಂಡು ನರಪತಿ ಪಟ್ಟವು ಅಪ್ಪಣೆ ಮೇರಿ ಸೇರುವುದು | ಶಾಂತಮುತ್ತಯ್ಯನನ್ನು ಎತ್ತಿನ ಮೇಲೆ ಏರಿಸಿ | ಮುರುಗಾಲು ಮುತ್ತಯ್ಯನನ್ನು ಕುದುರೆ ಮೇಲೆ ಏರಿಸಿ | ಅಸಗೂಡು ನಾಗಯ ಹೇಳು ಹತ್ತಿ ಮುದವೀರಣಾಯರು ಹಿಂಡಿನ ಬೀರಯ್ಯನನ್ನು ಶಿವಯ್ಯನನ್ನು ಕುದುರೆಗಳ ಮೇಲೆರಿಸಿಸಲು ಸತ್ತಿಗೇರಿಸಿ ಹನುಮನ [ಟ]ಕ್ಕೆ ಹಗಲು ದೀವಟಿಗೆ ಹಿರಿಸಿ ಛತ್ರ ಚಾಮರಗಳ ಎತ್ತಿ ಸಂಬಜಂತ್ರಿ ಸಿಂಹಲಲಾಟ ರುಂಡಮಾಲೆ ಸಮಲಿಡ್ಡ ಹಂದಲ ಹಸುರರಥ ಪಂಚಕಳಸಾದರಿಸಿ ಮೇಳ ತಾಳ ಕೊಳ್ಳು ಸತ್ತಿಗೆ ಎತ್ತಿಸಿ ಹೊರಿಸಿ ಸುರಟಿ ಬೀಲಿಚೆಡಿ ಹಿಡಿಸಿ ಚತೂರ ಬಜಾರು ಅಂದರೆ ನಾಲ್ಕು ಬಜಾರದಲ್ಲಿಯು ಮೆರವಣಿಗೆ ಮಾಡಿಸಿ ಮಹಾನಾಡು ದೈವದವರು | ಕುರುಬರಿಗೂ ಬಣಾಜಿಗರಿಗೂ ಮುಂದೆ ಏನೂ ವ್ಯಾಜ್ಯಕ್ಕೆ ಕಾರಣ ಇಲ್ಲ ಎಂದು | ವೀರಭದ್ರದೇವರಿಗೂ ಬೀರದೇವರಿಗೂ ವಂದೆ ಸಮೂಹವೆಂದು | ಅವರನ್ನು ಯಿವರನ್ನು ಸಮಾಧಾನ

ಮಾಡಿದರು | ಕುರುಬರಿಗೆ ಸಂದಿಗೆ ಸಾವಿರ ಬಿರುದು ನಿಮಗೆ ಸಲ್ಲುವುದು ಹೇಳಿ ಮೆರವಣಿಗೆ ಮಾಡಿಸಿದರು | ಆದಮೇಲೆ ಅವರ ದೇವರುಗಳು ಅವರು ತೆಗೆದುಕೊಂಡು ಹೋಗಿರಿ ಎಂದು ಅಪ್ಪಣೆ ಕೊಟ್ಟರು | ನರಪತಿ ಪಟ್ಟವು ಶ್ರೀ ಕೃಷ್ಣರಾಜ ಮಹಾನಾಡು ವಗ್ಯೆರೆವರು ಅಪ್ಪಣೆ ಕೊಟ್ಟರು | ವ್ಯಾಜ್ಯ ವಿಜಯನಗರದಲ್ಲಿ ಬಗೆಹರಿಸಿದೆ | ಸುಳ್ಳುಯಂದರೆ ಕಾಶಿಯೊಳಗ ಗೋಹತ್ಯಾ ಸ್ತ್ರೀಹತ್ಯಾ ಶಿಸುವು ಹತ್ಯಾ ಬಹ ಮಾಡಿರುವ ಪಾಪಕ್ಕೆ ಹೋಗುವರು | ಘನಗಿರಿ ಪೆನಗೊಂಡ ರಾಯ ಸಿಂಹಾಸನದ ಯರಮಂಚ ಲಾಳಿ ಕೃಷ್ಮಮ್ಮಾ ಇರುಂತೆ ಟಗರು ಜೋಗಿಗೆ ಕೊಟ್ಟದ್ದು | ಏನು ಎಂದರೆ ಪೊವಾಡ ಗೆದ್ದದಕ್ಕೆ ಮೆಚ್ಚಿ ಮನವೊಂದಕ್ಕೆವೊಂದು ಹೊನ್ನು ಬಕಳದ ಹೊಸಕುರಿ | ಹಳಿದವನು ಒಂದು ಕುರಿ ಟಗರುಜೋಗಿಗೆ ಕೊಟ್ಟು ತೀರಬೇಕು | ಗೌಡ ಪೂಜಾರಿ ಕೋಲಕಾರ ಬಹುಮಾನ ಕೊಟ್ಟು ತೀರಬೇಕು | ವಿಜಯನಗರದಲ್ಲಿ ಪವಾಡ ಗೆದ್ದು ಸಕಲವಾದ ಬಿರುದುಗಳು ಹಾಕಿಕೊಂಡು ಬಂದದ್ದಕ್ಕೆ ಮೆಚ್ಚಿ ಮಾತರು ದೇಶದವರು ಇದಕ್ಕೆ ನೋಡಿ ತಾಚ್ಯಾರ ಮಾಡಕೂಡದು | ಎಂದು ಒಂದು ವೇಳೆ ತಾಚ್ಯಾರ ಮಾಡಿದರೆ ಹಾಲುಮತ ಕುಲದಲ್ಲಿ ಜಾಮೇ ಇಲ್ಲ | ಕಂಚಿ ಪರ್ದರು ಬಂಡಿಗೆ ಶಾಸನವು | ವಿಯಾದ್ರಿ ಗಿರಿ ಪರವತ ಮಿತಬರರ ಸಾಸನ ಹಂಪಿಯಲ್ಲಿ ಬರದಿತ್ತು ಸಾಸನ ||

2. ಶಾಸನದ ಸಾರ

ಪ್ರಸ್ತುತ ಶಾಸನವು ಕುರುಬರಿಗೂ ಬಣಜಿಗರಿಗೂ ನಡೆದ ವಾದ ವಿವಾದಗಳನ್ನು ವಿವರವಾಗಿ ನಿರೂಪಿಸುತ್ತದೆ. ಮೂಲತಃ ಈ ಶಾಸನದ ಮೂಲಪ್ರತಿ ಕೋಲಾರ ಜಿಲ್ಲೆ ಗೌರಿಬಿದನೂರು ತಾಲೂಕಿನ ನಗರಗೇರಿ ಗ್ರಾಮದ ಟಗರು ಜೋಗಿಗಳಾದ ಶಿವಪ್ಪ ತಂದೆ ಬೀರಪ್ಪ ಅವರ ವಶದಲ್ಲಿದೆ. ಚಳ್ಳಕೆರೆಯ ಪ್ರಾಥಮಿಕ ಶಾಲಾ ಶಿಕ್ಷಕರಾದ ಶ್ರೀ ರುದ್ರಮುನಿ ಅವರು ಈ ಶಾಸನವನ್ನು ಪ್ರತಿಮಾಡಿಕೊಂಡಿದ್ದರು. ನಾವು ಚಳ್ಳಕೆರೆ ತಾಲೂಕಿನಲ್ಲಿ ಕ್ಷೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ಶ್ರೀ ರುದ್ರಮುನಿ ಅವರು ಈ ಶಾಸನದ ಪ್ರತಿಯನ್ನು ನನ್ನ ಗಮನಕ್ಕೆ ತಂದರು. ಕುರುಬರಿಗೂ ಮತ್ತು ಬಣಜಿ ಗರಿಗೂ ನಡೆದ ವಾದ ವಿವಾದಗಳನ್ನು ವಿಜಯನಗರ ಅರಸರ ಸಮ್ಮುಖದಲ್ಲಿ ಬಗೆ ಹರಿಸಿದ ಸಂಗತಿಗಳು ಈ ಶಾಸನದಲ್ಲಿ ದಾಖಲಾಗಿವೆ. ಅವುಗಳನ್ನು ಹೀಗೆ ಕ್ರೋಡೀ ಕರಿಸಬಹುದು.

ಕುರುಬರಿಗೆ 'ಹಗಲುದೀವಟಿಗೆ, ಸಿಂಹಲಲಾಟ, ರುಂಡಮಾಲೆ ಮುಂತಾದ ಸಾವಿರ ಬಿರುದುಗಳು ಸಲ್ಲವು'ಯೆಂದು ಬಣಜಿಗರು ವ್ಯಾಜ್ಯ ಹೂಡಿದ್ದರು. ಇದಕ್ಕೆ ಪ್ರತಿಯಾಗಿ ಕುರುಬರು 'ಬಣಜಿಗರ ಕುರುಬರ ದಾರಾಕಂಕಣ ಕಟ್ಟಲಾಗದು. ಕಂಬಳಿ ಗದ್ದಿಗೆ ಹಾಕಲಾಗದು. ಕುರುಬರ ಬದುಕು ಮುಟ್ಟಲಾಗದು. ಇವುಗಳಲ್ಲಿ ಒಂದೂ ನಿಮಗೆ ಸಲ್ಲವು, ಎಂದು ವಾದಹೂಡಿದ್ದರು. ಈ ಜಗಳ ಹಂಪೆಯಲ್ಲಿ ಬಗೆಹರಿಯಬೇಕು ಎಂದು ಎರಡೂ ಸಮುದಾಯದ ಮುಖಂಡರು ತೀರ್ಮಾನಿಸಿದರು. ಈ ತೀರ್ಮಾನದಂತೆ

ಸರವೂರು ಶಾಂತಮುತ್ತಯ್ಯ, ವುಜ್ಜನಿ ರೇವಣ್ಣ, ಚಿತ್ರದುರ್ಗ ಸಂಸ್ಥಾನದ ಹಟ್ಟಿಗೌಡ ಬಡಪ್ಪನವರು, ಹೊಸಪೇಟೆ ಲಿಂಗಪ್ಪ, ಸೊಂಡೂರು ಕರಿಯಣ್ಣ, ಚಿತ್ರಕಲ್ಲು ದೊಡ್ಡಬೀರಯ್ಯ ಮೊದಲಾದ ಜನಗಳು, ಇವರ ಜೊತೆಗೆ ಕಣೆಕಲ್ಲು, ಬ್ಯಾಡರಹಳ್ಳಿ, ಗುಳ್ಳಳ್ಳಿ, ಗುಳಿಸಂದ್ರ, ಲಕ್ಕಿ ಹಳ್ಳಿ ಮುಂತಾದ ಮೂವತ್ತಾರು ಬೀರ ದೇವರು ಕೂಡಿ ಹೊಸಪೇಟೆಯಲ್ಲಿ ಬಣ್ಣ ಮಾಡಿಸಿಕೊಂಡು ಹಂಪಿಯಲ್ಲಿ ಗಂಗೆಪೂಜೆ ಮಾಡಿಸಿಕೊಂಡು, ಎತ್ತು ಕುದುರೆಗಳ ಮೇಲೆ ಸಾವಿರ ಬಿರುದುಗಳನ್ನು ಹೇರಿಕೊಂಡು ತೇರುಬಜಾರಿನಲ್ಲಿ ಕುರುಬರು ಬರುತ್ತಿದ್ದರು. ಈ ಸಂದರ್ಭದಲ್ಲಿ ಹೊಸಪೇಟೆ ಶೆಟ್ಟಿನಾಗಪ್ಪ, ಬಳ್ಳಾರಿ ರುದ್ರಪ್ಪಶೆಟ್ರು, ಗುತ್ತಿಚಂದ್ರಶೇಖರಸ್ವಾಮಿಗಳು, ರಾಯಚೂರು ಲಿಂಗಪ್ಪಸ್ವಾಮಿಗಳು, ಬಾಳೆಹಳ್ಳಿ ಸ್ವಾಮಿಗಳು ಮೊದಲಾದ ಸ್ವಾಮಿಗಳು ಶೆಟ್ಟರು ಕೂಡಿಕೊಂಡು ಕುರುಬ ದೇವರುಗಳ ಬಿರುದು ಬಹುಮಾನಗಳನ್ನು ಕಸಿದುಕೊಂಡು ಅವರನ್ನು ಪರಬಾರೆ ಮಾಡಿದರು. ಇಂಥ ಸಮಯದಲ್ಲಿ ಎರಡೂ ಸಮುದಾಯಗಳ ಮಧ್ಯೆ ಹೇಮಕೋಟೆಯ ಬಂಡೆಯ ಮೇಲೆ ದೊಡ್ಡ ಜಗಳವಾಗಿ ಸಾವಿರ ಪ್ರಾಣಿಗಳು ಹತವಾದವು. ತೇರಿನ ಬಜಾರಿನಲ್ಲಿ ಇಬ್ಬರೂ ಬೀಡಿಬಿಟ್ಟರು. ಇದನ್ನು ಗಮನಿಸಿದ ಮಹಾರಾಜ ರಾಜಶ್ರೀ ನರಪತಿ ಶ್ರೀ ಕೃಷ್ಣರಾಜ ವಡಿಯವರು ಚಿತ್ರಕಲ್ಲು ದುರ್ಗದ ಬರಮಣ್ಣ ನಾಯಕ, ಜರಮಾಲೆ ರಾಮಪ್ಪನಾಯಕ, ಗುಡೆಕೋಟೆ ನಾಯಕ, ಶ್ರೀಕನಕಗಿರಿ ಬಂಗಾರನಾಯಕ ಮೊದಲಾದ ಐವತ್ತಾರು ದೇಶದವರನ್ನು ಕರೆಸಿದರು. ಜೊತೆಗೆ ಸಕಲ ಹಿರಿಯರನ್ನು ಸಭೆ ಸೇರಿಸಿ ಪಂಚಾಯಿತಿ ಮಾಡಿದರು. ಕುರುಬರ ಬಣಜಿಗರ ವಾದ ವಿವಾದಗಳನ್ನು ವಿಚಾರಿಸಿ ಕುರುಬರು ಮುಟ್ಟದ ಬದುಕುಯಿಲ್ಲ. ಶುಭ ಅಂದರೆ ಕುರುಬರು ಮುಂದೆ ಬೇಕು. ಕುರುಬರ ದಾರ ಕಂಕಣಬೇಕು, ಕಂಬಳಿ ಗದ್ದಿಗೆಬೇಕು ಎಂದು ಸಭೆಯವರೆಲ್ಲ ಕುರುಬರನ್ನು ತೆಗೆದುಹಾಕುವುದಿಲ್ಲ, ಅಲ್ಲದೇ ಕುರುಬರಿಗೆ ವಂದು ಸಂದಿಗೆ ಸಾವಿರ ಬಿರುದುಗಳು ಸಲ್ಲುತ್ತವೆ ಎಂದು ಪಂಚಾಯಿತಿಯ ಸರ್ವರು ಹೇಳಿದರು. ಆಗ ರಾಜನ ಅಪ್ಪಣೆಯಂತೆ ಶಾಂತಮುತ್ತಯ್ಯನನ್ನು ಎತ್ತಿನ ಮೇಲೆ, ಮುರುಗಾಲು ಮುತ್ತಯ್ಯನನ್ನು ಕುದುರೆ ಮೇಲೆ ಅಸಗೂಡ ನಾಗಯ್ಯನನ್ನು ಕುದುರೆಗಳ ಮೇಲೆರಿಸಿ ಹಗಲದೀವಟಿಗೆ, ಛತ್ರಿಚಾಮರ, ಪಂಚಕಳಸ, ಸತ್ತಿಗೆ ಮುಂತಾದವುಗಳನ್ನು ಹಾಕಿಕೊಂಡು ನಾಲ್ಕು ಬಜಾರದಲ್ಲಿ ಮೆರವಣಿಗೆ ಮಾಡಿಕೊಂಡು ಮಹಾನಾಡ ದೈವದವರು 'ಕುರುಬರಿಗೂ ಬಣಜಿಗರಿಗೂ ಸ್ವಾಮಿಗಳಿಗೂ ಮುಂದೆ ಏನೂ ವ್ಯಾಜ್ಯಕ್ಕೆ ಕಾರಣವಿಲ್ಲ ಎಂದು ಹೇಳಿ ವೀರಭದ್ರದೇವರಿಗೂ ಬೀರದೇವರಿಗೂ ಒಂದೇ ಸಮೂಹವೆಂದು ಹೇಳಿ, ಕುರುಬರಿಗೆ ಸಂದಿಸಾವಿರ ಬಿರುದು ಸಲ್ಲುವವು' ಎಂದು ಹೇಳಿ ಮೆರವಣಿಗೆ ಮಾಡಿಸಿ ದರು. ನಂತರ ನಿಮ್ಮ ನಿಮ್ಮ ದೇವರುಗಳನ್ನು ತೆಗುದೊಕೊಂಡು ಹೋಗಿರಿ ಎಂದು ರಾಜ ಅಪ್ಪಣೆ ಕೊಟ್ಟನು. ಶಾಸನದ ಕೊನೆಯ ಭಾಗದಲ್ಲಿ 'ಈ ಜಗಳ ವಿಜಯ ನಗರದಲ್ಲಿ ಬಗೆಹರಿದಿದೆ. ಸುಳ್ಳು ಎಂದರೆ ಕಾಸಿಯೊಳಗೆ ಸ್ತ್ರೀಹತ್ಯೆ, ಗೋಹತ್ಯೆ, ಶಿಸುಹತ್ಯೆ ಮಾಡಿದ ಪಾಪಕ್ಕೆ

ಹೋಗುವಿರಿ. ವಿಜಯನಗರದಲ್ಲಿ ಪವಾಡ ಗೆದ್ದು ಸಕಲ ಬಿರುದುಗಳನ್ನು ಹಾಕಿಕೊಂಡು ಬಂದದ್ದಕ್ಕೆ ಮೆಚ್ಚಿ ಮೂವತಾತ್ರೂ ದೇಶದವರು ತಾಚ್ಯಾರ ಮಾಡಕೂಡದು. ಒಂದು ವೇಳೆ ತಾಚ್ಯಾರ ಮಾಡಿದರೆ ಹಾಲುಮತ ಕುಲದಲ್ಲಿ ಜಾಮೆ ಇಲ್ಲ. ಹಂಪಿಯಲ್ಲಿ ಬರದಿತ್ತು ಶಾಸನ' ಎಂದಿದೆ. ಇದು ಈ ಶಾಸನದ ಮುಖ್ಯ ಸಾರಾಂಶವಾಗಿದೆ.

3. ಶಾಸನ ವಿಶ್ಲೇಷಣೆ

ಕುರುಬರು ಮತ್ತು ಬಣಜಿಗರ ಮಧ್ಯ ವ್ಯಾಜ್ಯ ಹುಟ್ಟಿಕೊಂಡಾಗ ಅದನ್ನು ರಾಜ ಪರಿಹಾರ ಮತ್ತು ದೈವದವರ ಸಮ್ಮುಖದಲ್ಲಿ ಪರಿಹರಿಸಿಕೊಂಡ ಘಟನೆಯನ್ನು ಈ ಶಾಸನ ದಾಖಲಿಸಿದೆ. ಈ ವ್ಯಾಜ್ಯ ಹುಟ್ಟಿಕೊಂಡಿರುವುದಕ್ಕೆ ಬಹುಮುಖ್ಯ ಕಾರಣ ವೀರಭದ್ರನಿಗೂ ಮತ್ತು ಬೀರದೇವರಿಗೂ ಬಿರುದುಗಳು ಒಂದೆ. ಆದರೆ ಕುರುಬರು ಬೀರದೇವರ ಉತ್ಸವ ನಡೆಸುವಾಗ ಈ ಬಿರುದುಗಳನ್ನು ಹಾಕಿಕೊಳ್ಳಬಾರದೆಂಬುದು ಬಣಜಿಗರ ವಾದ. ಬೀರದೇವರ ಮುಂದುವರಿದ ರೂಪವೆ ವೀರಭದ್ರ ಎಂಬುದನ್ನು ಡಾ.ಚಿ. ರಂ. ಢೇರೆ, ಡಾ.ಎಂ.ಎಂ. ಕಲಬುರ್ಗಿ ಮುಂತಾದ ಸಂಶೋಧಕರು ಆಧಾರ ಸಹಿತ ಸ್ಪಷ್ಟಪಡಿಸಿದ್ದಾರೆ. ಹೀಗಾಗಿ ಈ ಬಿರುದುಗಳು ಪ್ರಾಚೀನ ಕಾಲದಿಂದಲೂ ಕುರುಬರು ಮಾತ್ರ ಹಾಕಿಕೊಳ್ಳುತ್ತಿದ್ದರು. ಬೀರದೇವ ವೀರಭದ್ರನಾಗಿ ರೂಪಾಂತರ ಗೊಂಡಾಗ ಈ ಬಿರುದುಗಳು ಸಹಜವಾಗಿ ವೀರಭದ್ರನ ಆಚರಣೆಯಲ್ಲಿ ಮುಂದು ವರಿದವು. ಈಗಲೂ ಸಹಿತ ಕುರುಬರಲ್ಲಿ ಈರಗಾರ, ವೀರಗಾರರೆಂಬ ಭಕ್ತವರ್ಗವಿದೆ. ಬೀರದೇವ, ರೇವಣಸಿದ್ದೇಶ್ವರ, ಮಾಳಿಂಗರಾಯ ಮೊದಲಾದ ದೇವರ ಜಾತ್ರ ಉತ್ಸವ ಸಂದರ್ಭದಲ್ಲಿ ವೀರಗಾಸೆ ಧರಿಸಿಕೊಂಡು ಕಬ್ಬಿಣದ ಸಲಾಕೆಗಳಿಂದ ಹೊಕ್ಕುಳ ಹೊಟ್ಟೆ ಬಾಯಿಗೆ ಚುಚ್ಚಿಕೊಂಡು ತಮ್ಮ ಭಕ್ತಿಯನ್ನು ತೋರ್ಪಡಿಸುತ್ತಾರೆ. ಈ ಸಂಪ್ರದಾಯ ವೀರಭದ್ರನ ಉತ್ಸವದಲ್ಲಿಯೂ ಕಂಡು ಬರುತ್ತದೆ. ಇವರನ್ನೂ ಸಹಿತ ವೀರಗಾರರೆಂದು ಕರೆಯಲಾಗುತ್ತಿದೆ. ಇಂಥ ಸಂದರ್ಭದಲ್ಲಿ ಛತ್ರಿ ಚಾಮರ ಕಳಸ ಹಗಲುದೀವಟಿಗೆ ಮುಂತಾದ ಬಿರುದುಗಳನ್ನು ಧರಿಸಿರುವುದು ಎರಡೂ ಪರಂಪರೆಯಲ್ಲಿ ಗುರುತಿಸ ಬಹುದು. ಈ ಕಾರಣಕ್ಕಾಗಿ ಕುರುಬರು ಇಂಥ ಬಿರುದುಗಳನ್ನು ಧರಿಸಿಕೊಳ್ಳ ಬಾರದೆಂದು ಬಣಜಿಗರು ವ್ಯಾಜ್ಯ ತೆಗದಂತಿದೆ. ಈ ವ್ಯಾಜ್ಯವನ್ನು ರಾಜನ ಗಮನಕ್ಕೆ ತಂದು ಹಿರಿಯರ ಸಮ್ಮುಖದಲ್ಲಿ ಪರಿಹರಿಸಿಕೊಂಡ ಬಗ್ಗೆ ಈ ಶಾಸನ ಮಾಹಿತಿ ನೀಡುತ್ತದೆ. ಶುಭ ಕಾರ್ಯಕ್ಕೆ ಕುರುಬರು ಮುಂದೆ ಇರಬೇಕು. ಅವರ ಕಂಬಳಿ ಗದ್ದಿಗೆ ಬೇಕು. ಆದರೆ ಅವರು ಉತ್ಸವಗಳಲ್ಲಿ ಬಿರುದುಗಳನ್ನು ಧರಿಸಿಲಿಕ್ಕೆ ಅವಕಾಶವಿಲ್ಲವೇ ಎಂದು ಪ್ರಶ್ನಿಸುವುದರ ಮೂಲಕ ಅರಸರು ಹಲವು ಗಣ್ಯರ ಸಮ್ಮುಖದಲ್ಲಿ ಈ ವ್ಯಾಜ್ಯವನ್ನು ಬಗೆಹರಿಸಿ ಎರಡೂ ಸಮುದಾಯದವರನ್ನು ಸಮಾಧಾನ ಪಡಿಸಲಾಗಿದೆ. ಈ ಘಟನೆ 'ವಿಜಯಾಬ್ದಿ ಸಂವತ್ಸರದ ಶಾಲಿವಾಹನ ಶಖ ಆಗುನಿರಕ್ಷಾತ್ಕಿ ನಾಮ ಸಂವತ್ಸರ ಚೈತ್ರ

ಶುದ್ಧ ೧ ಗುರುವಾರ' ದಂದು ನಡೆದಿವೆ. ಇಲ್ಲಿ ಉಲ್ಲೇಖಗೊಂಡ ಶೆಟ್ಟರು, ಒಡೆಯರು, ಸ್ವಾಮಿಗಳು ಹಾಗೂ ನಾಯಕ ದೊರೆಗಳ ಹೆಸರುಗಳು ಗಮನಾರ್ಹವಾಗಿವೆ. ಅಂದರೆ ಎರಡು ಸಮುದಾಯಗಳ ನಡುವೆ ಜಗಳಗಳು ಏರ್ಪಟ್ಟಾಗ ಆಯಾ ಸಮುದಾಯದವರ ಪ್ರಮುಖರನ್ನು ಧಾರ್ಮಿಕ ಗುರುಗಳನ್ನು ಕರೆಯಿಸಿ ಬಗೆಹರಿಸುತ್ತಿದ್ದ ರೀತಿ ಅಂದಿನ ಸಾಮಾಜಿಕ ಸಮತೋಲನಕ್ಕೆ ನಿದರ್ಶನವಾಗಿದೆ.

ಈ ಶಾಸನದಲ್ಲಿ ಧರ್ಮಶಾಸ್ತ್ರ ಶಾಸನವೆಂದು ಕರೆದಿರುವುದು, ಇಲ್ಲಿ ಉಲ್ಲೇಖ ಗೊಂಡ ಕೃಷ್ಣರಾಜ ವಡೆಯರು ಯಾರು ಎಂಬಂಥ ಪ್ರಶ್ನೆಗಳು ಸಹಜವಾಗಿ ಏಳುತ್ತವೆ. ವಿಜಯನಗರದ ದೊರೆ ಕೃಷ್ಣ ದೇವರಾಯನೋ ಅಥವಾ ಮೈಸೂರು ದೊರೆ ಕೃಷ್ಣರಾಜ ವಡೆಯರೊ ಎಂಬುದಕ್ಕೆ ಸ್ಪಷ್ಟವಾದ ಉತ್ತರ ಸಿಗುವುದಿಲ್ಲ. ಇದನ್ನು ಇನ್ನೂ ಪರಾಮರ್ಶಿಸಬೇಕಾಗಿದೆ. ಇನ್ನು ಈ ಶಾಸನದ ಭಾಷೆ ಕುರಿತು ಹೇಳುವುದಾದರೆ ಅಲ್ಲಲ್ಲಿ ತೆಲುಗು ಭಾಷೆ ಬಳಕೆಗೊಂಡಿದೆ. ಬಹುಶಃ ಗೌರಿಬಿದನೂರಿನ ಭಾಗದಲ್ಲಿ ಈ ಶಾಸನ ಲಭ್ಯವಾಗಿದ್ದರಿಂದ ತೆಲುಗು ಭಾಷೆ ಸಹಜವಾಗಿ ಕನ್ನಡದೊಡನೆ ಬಳಕೆಗೊಂಡಂತಿದೆ. ಒಟ್ಟಿನಲ್ಲಿ ಕುರುಬರ ಸಾಮಾಜಿಕ ಮತ್ತು ಧಾರ್ಮಿಕ ಪದ್ಧತಿ ಯನ್ನು ಕುರಿತು ಅಧ್ಯಯನ ಮಾಡುವಲ್ಲಿ ಈ ಶಾಸನ ಹೆಚ್ಚು ಸಹಾಯಕಾರಿ ಯಾಗುತ್ತದೆ. ಇನ್ನೂ ಇಂಥ ಅನೇಕ ಶಾಸನ ಪ್ರತಿಗಳು ಅಲ್ಲಲ್ಲಿ ದೊರಕುತ್ತಿದ್ದು ಅವೆಲ್ಲವುಗಳನ್ನು ಸಂಗ್ರಹಿಸಿ ಅಧ್ಯಯನ ಕ್ಕೊಳಪಡಿಸಿದಾಗ ಆಯಾ ಸಮುದಾಯದ ಸಾಂಸ್ಕೃತಿಕ ವಿಶಿಷ್ಟತೆಯನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.

೭. ಬಾರಕೂರು ರಂಗನಕೇರಿ ಶಾಸನ

ಡಾ. ಬಿ. ಜಗದೀಶ ಶೆಟ್ಟಿ

ವಿಜಯನಗರ ಆಡಳಿತ ಕಾಲದಲ್ಲಿ ಪ್ರಾಂತೀಯ ರಾಜಧಾನಿಯಾಗಿದ್ದ ಬಾರಕೂರು ಆಡಳಿತದ ಅನುಕೂಲಕ್ಕಾಗಿ ಹತ್ತು ಕೇರಿಗಳಾಗಿ ವಿಂಗಡಿಸಲ್ಪಟ್ಟಿತ್ತು. ಅವುಗಳಲ್ಲಿ ರಂಗನಕೇರಿ ಒಂದಾಗಿದೆ. ಈ ರಂಗನಕೇರಿಯಲ್ಲಿ ಕೇರಿಯ ಪ್ರಮುಖ ದೇವಾಲಯ ವಾಗಿದ್ದ ವಿನಾಯಕ ದೇವಸ್ಥಾನ, ಜೀರ್ಣಾವಸ್ಥೆಯನ್ನು ತಲುಪಿದಾಗ ಅದರ ಜೀರ್ಣೋದ್ಧಾರದ ಕೆಲಸ ಆರಂಭಗೊಂಡ ಸಂದರ್ಭದಲ್ಲಿ, ನೆಲದ ಅಡಿಯಲ್ಲಿದ್ದ ಒಂದು ಶಾಸನ ನನ್ನ ಗಮನಕ್ಕೆ ಬಂತು. ಈ ಪ್ರಬಂಧದಲ್ಲಿ ಅಲ್ಲಿ ನನಗೆ ದೊರೆತ, ಇದುವರೆಗೆ ಪ್ರಕಟವಾಗದಿರುವ ಶಾಸನವನ್ನು ಆಧರಿಸಿ ಕೆಲವು ವಿಷಯಗಳನ್ನು ಚರ್ಚಿಸುವ ಪ್ರಯತ್ನವನ್ನೂ ಮಾಡಲಾಗಿದೆ.

ಈ ಶಾಸನ ಕನ್ನಡ ಭಾಷೆ ಮತ್ತು ಲಿಪಿಯಲ್ಲಿದೆ. ಇದರ ತೇದಿ ಶಕವರುಷ ೧೪೮೪ ಅಂದರೆ ಕ್ರಿ.ಶ.೧೫೬೨. ಈ ಶಾಸನದಲ್ಲಿ ಒಟ್ಟು ೩೨ ಗೆರೆಗಳಿವೆ. ಈ ಶಾಸನ ವಿಜಯನಗರದ ದೊರೆ ಸದಾಶಿವರಾಯ ಮಹಾರಾಜನದ್ದು. ಅವನನ್ನು ಶ್ರೀಮಂಮ್ಮ ಹಾರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಪ್ರತಾಪ ಎಂದು ಸಂಬೋಧಿಸಲಾಗಿದೆ. ಈ ಸದಾಶಿವ ಮಹಾರಾಯರ ನಿರೂಪದಿಂದ ವೆಂಕಟಾದ್ರಿರಾಯ ಮಹಾಅರಸುಗಳು, ಕೆಳದಿ ಸದಾಶಿವರಾಯ ನಾಯಕ ಅಯ್ಯನವರಿಗೆ ಬಾರಕೂರು ರಾಜ್ಯವನ್ನು ಪಾಲಿಸಿದ ವಿಷಯ ಈ ಶಾಸನದ ಆರಂಭದಲ್ಲಿ ಕಂಡುಬರುತ್ತದೆ. ವೆಂಕಟಾದ್ರಿ ಮಹಾಅರಸುಗಳು ಅಂದಿನ ರಾಜಕಿಯ ಸ್ಥಿತಿಗತಿಯಲ್ಲಿ ಯಾವ ರೀತಿಯ ಸ್ಥಾನವನ್ನೂ ಹೊಂದಿದ್ದರು ಮತ್ತು ಕೆಳದಿಯವರು ಯಾವ ರೀತಿಯಲ್ಲಿ ರಾಜಕೀಯವಾಗಿ ಪ್ರವರ್ಧಮಾನಕ್ಕೆ ಬಂದರು ಎಂಬುದನ್ನು ಈ ಶಾಸನ ವಿವರಿಸುತ್ತದೆ.

ಕ್ರಿ.ಶ. ೧೫೫೧ರ ಕೋಟೇಶ್ವರದ ಶಾಸನ ಸದಾಶಿವರಾಯ ಮಹಾರಾಯರು ವೆಂಕಟಾದ್ರಿ ರಾಜಮಹಾರಾಯ ಅರಸುಗಳಿಗೆ ಬಾರಕೂರನ್ನು ಪಾಲಿಸಿದ ವಿಷಯ ತಿಳಿಸುವದರಿಂದ, ಬಾರಕೂರಿನ ಮೇಲೆ ವೆಂಕಟಾದ್ರಿರಾಯರ ಹಿಡಿತವನ್ನೂ ದೃಢೀಕರಿಸುತ್ತದೆ.[1] ಇನ್ನೂ ವಿಜಯನಗರ ಕೆಳದಿ ಸಂಬಂಧದಬಗ್ಗೆ ಹೇಳುವುದಾದರೆ, ಕ್ರಿ.ಶ. ೧೫೫೪ರಲ್ಲಿ ಪ್ರಾಯಶಃ ಕರಾವಳಿ ಪ್ರದೇಶವನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳುವುದು ಕಷ್ಟ ಸಾಧ್ಯ ಎನ್ನುವುದನ್ನು ಮನಗಂಡು [2] ಹಾಗೂ ಸದಾಶಿವ ನಾಯಕನ

ಸೇವೆಯನ್ನು ಪರಿಗಣಿಸಿ ವಿಜಯನಗರ ದೊರೆ ಸದಾಶಿವರಾಯರು, ಬಾರಕೂರು ರಾಜ್ಯ ಹಾಗೂ ಸುತ್ತಮುತ್ತಲಿನ ಪ್ರದೇಶವನ್ನೂ ಅವನಿಗೆ ಅಮರ ಮಾಗಣೆಯಾಗಿ ನೀಡಿದನು.[3] ಹೀಗೆ ಬಾರಕೂರು ಕೆಳದಿಯವರ ಕೈಕೆಳಗೆ ಬಂತು. ಬಸ್ರೂರಿನ ಕ್ರಿ.ಶ. ೧೫೫೪ರ ಸಣ್ಣ ಕೆರೆಕಟ್ಟೆ ಶಾಸನ ಸದಾಶಿವ ಮಹಾರಾಯರ ನಿರೂಪದಿಂದ, ಸದಾಶಿವ ರಾಯ ನಾಯಕರು ತುಳುರಾಜ್ಯ ಮ[ಮಾ]ಡಿಕೊಂಡು ಎಂದು ಸ್ಪಷ್ಟವಾಗಿ ತಿಳಿಸುವುದರಿಂದ ಕ್ರಿ.ಶ.೧೫೫೪ಕ್ಕೆ ಬಾರಕೂರು ವಿಜಯನಗರದವರಿಂದ ಕೆಳದಿಯವರ ಆಡಳಿತದ ವ್ಯಾಪ್ತಿಗೆ ಒಳಪಟ್ಟಿತ್ತು ಎಂದು ತಿಳಿದು ಬರುತ್ತದೆ.[4] ಕ್ರಿ.ಶ. ೧೫೬೨ರ ಶಂಕರ ನಾರಾಯಣದ ಶಾಸನವು ವಿಜಯಗರ ಕೆಳದಿ ಸಂಬಂಧದ ಬಗ್ಗೆ ಇನ್ನೂ ಹೆಚ್ಚಿನ ವಿವರವನ್ನು ನೀಡುತ್ತದೆ. ಅದು, ಶ್ರೀ ಮಂಮ್ಮಹಾರಾರಾಧಿರಾಜ ರಾಜಪರಮೇಶ್ವರ ಶ್ರೀ ವೀರ ಪ್ರತಾಪ ಉತ್ತರ ದಕ್ಷಿಣ ಪೂರ್ವ ಪಶ್ಚಿಮ ಚತು ಸಮುದ್ರಾಧೀಶ್ವರಾ ಸದಾಶಿವರಾಯ ಮಹಾರಾಯರು ವಿದ್ಯಾನಗರಿಯ ಸಿಂಹ್ಯಾಸನವನು ಸಕಲ ಧರ್ಮವನು ಪ್ರತಿಪಾಲಿಸಿಕೊಂಡು ಸುಖ ಸಂಕಥಾ ವಿನೋದದಿಂದ ರಾಜ್ಯವನು ಪ್ರತಿಪಾಲಿಸಿ ಕೊಂಡಿಹ ಸಮಯದಲಿ ಯೆಡವ ಮುರಾರಿ ಕೋಟೆಕೋಳಾಹಾಳಾ ಪಡುವಣ ಸಮುದ್ರಾಧೀಶ್ವರ ಕೆಳದಿಯ ಚಉಡ ಗೊಂಡರ ಮಕ್ಕಳು ಕೆಳದಿಯ ಸದಾಶಿವ ನಾಯಕರಿಗೆ ಅರಗ ಗುತ್ತಿ ಮುವತ್ತಾಱು ಕಂಪಣ ತುಳುರಾಜ್ಯ ಬಾರಕೂರ ಮಂಗಲೂರ ಅಯಿವತಾಱು ಗಾವುದ ಮುಂತಾದವನು ಅಮರ ಮಾಗಣೆಯಾಗಿ ಪಾಲಿಸಿದ ಸಮಯದಲಿ...' ಎಂದು ತಿಳಿಸುತ್ತದೆ.[5] ಅಂದರೆ ಕ್ರಿ.ಶ. 1554ರ ನಂತರ ಬಾರಕೂರಿನ ಆಡಳಿತದಲ್ಲಿ ಕೆಳದಿ ನಾಯಕರ ಪ್ರಭಾವ ಹೆಚ್ಚಾಯಿತು. ಆದರೆ ಕೆಳದಿ ನಾಯಕರ ತಮ್ಮ ಬಾರಕೂರಿಗೆ ಸಂಬಂಧಿಸಿದ ಶಾಸನಗಳಲ್ಲಿ ವಿಜಯನಗರ ಅರಸರ ಅಧಿಪತ್ಯ ವನ್ನು ಒಪ್ಪಿಕೊಂಡಿದ್ದರು. ಕ್ರಿ.ಶ.೧೫೬೦ರ ಅಂಬಲಪಾಡಿಯ ಶಾಸನದಲ್ಲಿಯೂ[6] ಕ್ರಿ.ಶ. ೧೫೬೬ರ ಬಾರಕೂರು ಹೊಸಾಳ ಶಾಸನದಲ್ಲಿಯೂ[7] ವಿಜಯನಗರದ ದೊರೆ ಸದಾಶಿವರಾಯನ ಆಳ್ವಿಕೆಯನ್ನೂ ಉಲ್ಲೇಖಿಸಿರುವುದನ್ನು ಕಾಣಬಹುದು. ಡಾ. ಸೂರ್ಯನಾಥ ಕಾಮತ್‌ರು ಸಹ ಅದನ್ನು ಸಮರ್ಥಿಸುತ್ತಾರೆ.[8]

ಪ್ರಸ್ತುತ ಶಾಸನದಲ್ಲಿ ಕಲಿಯಯ್ಯ ವೊಡೆಯ ಬಾರಕೂರಿನ ರಾಜ್ಯಪಾಲ ಎಂದು ಹೆಸರಿಸಲಾಗಿದೆ. ಕಲ್ಲೆಯ ಯೆಲ್ಲಪ್ಪ ಒಡೆಯ ಎಂಬುದಾಗಿ ಕೋಟೇಶ್ವರದ ಶಾಸನ ದಲ್ಲಿ[9] (ಕಲ್ಲೆಯ ಯೆಲಪ್ಪ ವೊಡೆಯರೂ ರಾಜ್ಯಾವನು ಪ್ರತಿಪಾಲಿಸುವ ಕಾಲದಲು) ಮತ್ತು ಕುಂಭಕಾಶಿ ಶಾಸನದಲ್ಲಿ[10] ಹೇಳಿರುವವನೇ ಇವನು ಆಗಿರಬೇಕು. ಡಾ.ಬಿ. ವಸಂತ ಶೆಟ್ಟಿಯವರು ಬಾರಕೂರಿನ ರಾಜ್ಯಪಾಲರ ಬಗ್ಗೆ ಬರೆಯುತ್ತಾ ಕಲ್ಲೆಯ ಯೆಲ್ಲಪ್ಪ ಒಡೆಯನ ಆಡಳಿತದ ಅವಧಿಯನ್ನು ೧೫೬೨ ರಿಂದ ಆರಂಭ ಎಂಬುದಾಗಿ ನಿರ್ಧರಿಸಿ ದ್ದಾರೆ. ಅವರೇ ಬರೆಯುತ್ತಾರೆ ನಂತರದ ಯಡ್ತಾಡಿಯ ಕೆಳದಿ ಸದಾಶಿವ ನಾಯಕನ ಕ್ರಿ.ಶ. ೧೫೬೫ರ ಶಾಸನದಲ್ಲಿ ಬಾರಕೂರಿನ ಬೇರೆ ರಾಜ್ಯಪಾಲನ ಉಲ್ಲೇಖ ಇಲ್ಲ.

ಕಲ್ಲೆಯ ಯೆಲ್ಲಪ್ಪ ಒಡೆಯ ಕ್ರಿ.ಶ.೧೫೪೯ರ ವರೆಗೆ ಮುಂದುವರಿದಿರಬೇಕು; ಯಾಕೆಂದರೆ ಅವನ ನಂತರದ ರಾಜ್ಯಪಾಲ ದಳವಾಯಿ ಲಿಂಗರಸ ಒಡೆಯ ಬಾರಕೂರಿನ ರಾಜ್ಯಪಾಲನಾಗಿದ್ದ ಪ್ರಥಮ ಉಲ್ಲೇಖ ಸಿಗುವುದು ಕ್ರಿ.ಶ. ೧೫೪೯ರಲ್ಲಿ[11] ಈ ಶಾಸನದ ಕಾಲವು ೧೫೬೨ ಆಗಿರುವುದರಿಂದ ಕಲಿಯಯ್ಯ ಪೊಡೆಯ ಮತ್ತು ಕಲ್ಲೆಯ ಯೆಲ್ಲಪ್ಪ ಒಡೆಯ ಒಬ್ಬನೇ ಎಂಬುದಾಗಿ ಹೇಳಬಹುದು ಈ ಶಾಸನದ ಉದ್ದೇಶ ಬಾರಕೂರಿನ ಮೂಡುಕೇರಿಯ ಒಳಗಣ ರಂಗಣ್ಣನಕೇರಿಯ ಶ್ರೀಕೇಶವನಾಥ ಮತ್ತು ವಿನಾಯಕ ದೇವರಲ್ಲಿ ಕಟಾಜಿನ ದ್ವಾರವ ಮಾಡಿ ನೀಡಿದ ದಾನವನ್ನು ದಾಖಲಿಸುವುದು. ಬಾರಕೂರಿನ ಹತ್ತು ಕೇರಿಗಳಲ್ಲಿ ಒಂದಾದ ಇಂದಿನ ರಂಗನಕೇರಿ ಹೇಗೆ ಆ ಹೆಸರನ್ನು ಪಡೆಯಿತು ಎಂಬುದಕ್ಕೆ ಈ ಶಾಸನ ಆಧಾರವನ್ನು ಒದಗಿಸುತ್ತದೆ. ಬೇರೆ ಶಾಸನಗಳಲ್ಲೂ ಉಲ್ಲೇಖ ವಿದೆ.[12] ಇಲ್ಲಿ ಹೇಳಲಾಗಿರುವ ರಂಗಣ್ಣ ಸೆಟ್ಟಿ ಎನ್ನುವ ವ್ಯಕ್ತಿಯಿಂದ ಈ ಕೇರಿಗೆ ರಂಗಣನ ಕೇರಿ ಎಂಬ ಹೆಸರು ಬಂದಿದೆ. ಅವನಿಂದ ಕೇರಿಗೆ ಹೆಸರು ಬಂದಿರಬೇಕಾದರೆ ಅವನು ಆಕಾಲದ ಒಬ್ಬ ಬಹಳ ಪ್ರಭಾವಿ ವ್ಯಕ್ತಿಯಾಗಿರಬೇಕು. ಹಿಂದೆ ರಂಗಣ ಸೆಟ್ಟಿ ನೀಡಿದ ದಾನ ಸೆಟಿ ಬಂಠರು ನಾಡವರು ಹೊಯಿದುಬದ್ಧ ಸಂಬಂಧ ಅಂದರೆ ಏನೋ ಘರ್ಷಣೆ ಅಥವಾ ಹೊಯ್ದಾಟವಾಗಿ ಅದಕ್ಕೆ ಸಂಬಂಧಿಸಿದ ಬಾಳನ್ನು ಬಿಡಿಸಿಕೊಟ್ಟದ್ದಕ್ಕೆ ಈ ಶಾಸನ ಬರೆಸಲಾಗಿದೆ. ಇಲ್ಲಿ ಹೇಳಿರುವುದು ಸೆಟಿ ಬಂಠರು ನಾಡವರು, ಒಂದೇ ವರ್ಗ ವನ್ನು ಸೂಚಿಸುವ ಪದಗಳಾದರೂ ಪ್ರತ್ಯೇಕವಾಗಿ ಉಲ್ಲೇಖಿಸಲಾಗಿದೆ. ತುಳುನಾಡಿನ ದಕ್ಷಿಣ ಭಾಗದಲ್ಲಿ ಬಂಟ ಪದದ ಉಪಯೋಗವಿದ್ದರೆ ಉತ್ತರ ಭಾಗದಲ್ಲಿ ನಾಡವ ಪದದ ಬಳಕೆ ಪ್ರಚಲಿತವಿದೆ. ಸೆಟ್ಟಿ ಎಂಬ ಹೆಸರು ಎರಡೂ ಕಡೆ ಇದೆ. ಇಲ್ಲಿ ಮೂರು ಪದಗಳು ಬಳಕೆಯಾಗಿರುವುದು ಘಟನೆಯಲ್ಲಿ ಭಾಗಿಯಾದ ಆ ಕುಟುಂಬದ ವ್ಯಾಪ್ತಿ ಯನ್ನು ಸೂಚಿಸುವಂತಿರಬೇಕು.

ನೀಡಿರುವ ದಾನದ ಭೂಮಿಯ ಗಡಿಯನ್ನು ಉಲ್ಲೇಖಿಸುವಾಗ ಕೆಲವು ಊರುಗಳ ಹೆಸರುಗಳು ಇಲ್ಲಿವೆ. ನಡ ಊರು, ಚಾಪಾಡಿ ಕೂಡಲ. ೪೦೦ ವರ್ಷಗಳ ಹಿಂದಿನ ಶಾಸನದಲ್ಲಿ ಹೇಳಿರುವ ಊರುಗಳು ಇಂದಿಗೂ ಅದೇ ರೂಪದಲ್ಲಿ ಇದ್ದು ಯಾವುದೇ ಹೆಚ್ಚಿನ ಬದಲಾವಣೆ ಕಂಡಿಲ್ಲ. ನಡ ಊರು ನಡೂರು, ಚಾಪಾಡಿ ಚಾಂಪಾಡಿ, ಕೂಡಲ ಕೂಡ್ಲಿ ಆಗಿವೆ. ದಾನ ನೀಡಿದ ಭೂಮಿಯನನು ಹೇಳುವಾಗ ವಿವಿಧ ವರ್ಗದ ಭೂಮಿ ಯನ್ನು ಬಯಲು, ಬೆಟ್ಟು ಮತ್ತು ಹಕ್ಕಲು ಎಂಬುದಾಗಿ ಉಲ್ಲೇಖಿಸಲಾಗಿದೆ. *ಬೆಟ್ಟು* ಸಂಪೂರ್ಣವಾಗಿ ಮಳೆನೀರನ್ನು ಅವಲಂಬಿಸಿರುವ ಭೂಮಿ, *ಬಯಲು* ತಗ್ಗಿನಲ್ಲಿರುವ ಬೇಕಾದಷ್ಟು ಮಳೆನೀರಿನ ಆಶ್ರಯವಿರುವ ಭೂಮಿ.[13] *ಹಕ್ಕಲು* ಯು ಎಸ್. ರಾವ್ ಹೇಳುವಂತೆ ಜಲಾಶಯದ ನೀರಿನ ಅವಲಂಬನೆಯಲ್ಲದ ಕೃಷಿ ಮಾಡುವ ಭೂಮಿ.[14] ಕೆ.ವಿ. ರಮೇಶರವರ ಪ್ರಕಾರ ಎತ್ತರದ ಜಾಗ ಸಣ್ಣ ಸಣ್ಣ ಪೊದೆಗಳಿಂದ ಕೂಡಿರುವ

ಮಳೆನೀರನ್ನು ಅವಲಂಬಿಸಿರುವ ತರಕಾರಿ ಬೆಳೆಯುವ ಜಾಗ.[15] ಕರಾವಳಿ ಪ್ರದೇಶ ದಲ್ಲಿ ಸಾಮಾನ್ಯವಾಗಿ ದನಮೇಯಿಸಲು ಉಪಯೋಗಿಸುವ ಜಾಗವನ್ನು ಹಕ್ಕಲು ಎನ್ನುತ್ತಾರೆ. ಬೇರೆ ಶಾಸನಗಳಂತೆ ಈ ಶಾಸನವೂ ಭೂಮಿಗೆ ಸಂಬಂಧಸಿದ ಎಂಟು ರೀತಿಯ ಹಕ್ಕುಗಳನ್ನು ಸಹ ತಿಳಿಸುತ್ತದೆ. ಗಡಿ ಹೇಳುವಾಗ ಹೆದ್ದಾರಿಯ ಉಲ್ಲೇಖವೂ ಬರುತ್ತದೆ.

ಈ ಶಾಸನ ಧಾರ್ಮಿಕ ಇತಿಹಾಸದ ದೃಷ್ಟಿಯಿಂದ ಬಹಳ ಮುಖ್ಯವಾಗಿದೆ. ಹಲವು ವಿಷಯಗಳ ಮೇಲೆ ಇದು ಬೆಳಕು ಚೆಲ್ಲುತ್ತದೆ. ವಿಜಯನಗರ ಅರಸರ ಪೂರ್ಣ ಬೆಂಬಲವನ್ನು ಪಡೆದಿದ್ದ ವೀರಶೈವ ಧರ್ಮ ಕೆಳದಿ ನಾಯಕರ ಆಡಳಿತ ಕರಾವಳಿ ಕರ್ನಾಟಕ್ಕೆ ವಿಸ್ತರಿಸಲ್ಪಟ್ಟಾಗ, ಇಲ್ಲಿ ವೀರಶೈವ ಧರ್ಮ ಇನ್ನೂ ಪ್ರಬಲವಾಯಿತು. ಇದಕ್ಕೆ ಸ್ಪಷ್ಟ ಉಲ್ಲೇಖ ಈ ಶಾಸನದಲ್ಲಿದೆ. ಇಲ್ಲಿ ಹೇಳಿರುವ ಬಸವಂಣ್ಣೊಡೆಯರ ಮಠ ಅದಕ್ಕೆ ಉತ್ತಮ ಉದಾಹರಣೆ. ಈ ಶಾಸನದಲ್ಲಿ ಕೇಶವನಾಥ ಮತ್ತು ವಿನಾಯಕ ದೇವರೊಂದಿಗೆ ಹತ್ತರ ನಾರಾಯಣ ದೇವರಿಗೆ ದಾನ ನೀಡಿದ ಉಲ್ಲೇಖವಿದೆ. ಈ ಶಾಸನ ಹಾಗೂ ಬಾರಕೂರು ರಾಜ್ಯದ ಇತರ ವಿಜಯನಗರ ಶಾಸನಗಳು ಈ ಹತ್ತರ ನಾರಾಯಣ, ಹತ್ತುಕೇರಿಯ ಪ್ರಮುಖ ದೇವರೆಂಬುದನ್ನು ಪುಷ್ಟೀಕರಿಸುತ್ತದೆ. ಅಲ್ಲದೆ ಪರ್ವತಿಥಿ, ಆಶಾಡಿ ಹಬ್ಬ, ಉಪಾಕರ್ಮ, ಕೃಷ್ಣ ಅಷ್ಟಮಿ, ಹೊಸ್ತು, ಮಹಾನವಮಿ ಹಬ್ಬಗಳನ್ನು ಕ್ರಮವಾಗಿ ಹೇಳುತ್ತಾ ಆ ವಿಶೇಷ ದಿನಗಳಂದು ಊಟದ ವ್ಯವಸ್ಥೆಗೆ ಮಾಡಿದ ದಾನವನ್ನು ಶಾಸನಗಳಲ್ಲಿ ಹೇಳಲಾಗಿದೆ.

ಈ ಶಾಸನ ಇನ್ನೂ ಮುಖ್ಯವಾಗುವುದು ದೇವಸ್ಥಾನಗಳಲ್ಲಿ ಕೆಲಸ ಮಾಡುವ ವಿವಿಧ ವರ್ಗಗಳ ಉಲ್ಲೇಖ ಮತ್ತು ಅವರಿಗೆ ನೀಡುತ್ತಿದ್ದ ಪಾವತಿಯ ದಾಖಲಾತಿ ಗಾಗಿ ದೇವರ ಸುತ್ತಲೂ ಕಸವ ತೆಗೆದು ಭೇರಿ ಜಾಗಟೆಯನ್ನು ವ್ಯವಸ್ಥೆ ಮಾಡು ವವನಿಗೆ, ಹೂವನದ ಜವಾಬ್ದಾರಿ ಹೊತ್ತವನಿಗೆ, ಅಟ್ಟಿಲ ಅಟ್ಟುವವನಿಗೆ (ಅಡಿಗೆ ಮಾಡುವವನಿಗೆ)ಮತ್ತು ದೇವಡಿಗನಿಗೆ (ವಾದ್ಯ ನುಡಿಸುವವನು) ಪಾವತಿ ಮಾಡುವ ವ್ಯವಸ್ಥೆಯನ್ನು ಶಾಸನ ವಿವರಿಸುತ್ತದೆ. ಶಾಸನದ ಪ್ರಕಾರ ಕೇಶವನಾಥ ಮತ್ತು ವಿನಾಯಕ ಎರಡೂ ದೇವಸ್ಥಾನಗಳಲ್ಲಿ, ಪ್ರತ್ಯೇಕ ವ್ಯವಸ್ಥೆ ಇದ್ದುದನ್ನು ಕಾಣಬಹುದು.

ಚೌಡೇಶ್ವರಿಯ ಉಲ್ಲೇಖ ಈ ಶಾಸನದಲ್ಲಿ ಬರುತ್ತದೆ. ಇದರ ಉಲ್ಲೇಖ ಬೇರೆ ಶಾಸನಗಳಲ್ಲಿಯೂ ಬರುವುದರಿಂದ ಇದೊಂದು ಪ್ರಮುಖ ದೇವಾಲಯವಾಗಿರ ಬೇಕು.[16] ಕರಾವಳಿ ಕರ್ನಾಟಕದಲ್ಲಿ ಪ್ರಬಲವಾಗಿರುವ ನಾಗಾರಾಧನೆಯು ಆಗಲೂ ಪ್ರಬಲವಾಗಿ ಇತ್ತೆಂಬುದಕ್ಕೆ ನಾಗನ ಉಲ್ಲೇಖವೇ ಉದಾಹರಣೆ. ಎರಡು ದೇವಸ್ಥಾನಗಳ ಪಾರುಪತ್ಯವನ್ನು ತಿಂಮರಸರ ಮಗ ಗಿರಿಯಯ್ಯನು ಮಾಡಬೇಕೆಂದು ತಿಳಿಸಲಾಗಿದೆ. ಹಾಗೂ ಆ ಬಗ್ಗೆ 18 ಮುಡಿ ಭೂಮಿಯ ವ್ಯವಸ್ಥೆ ಮಾಡಲಾಗಿದ್ದು ಆ ಬಾಳನ್ನು ಸುದ್ರ ಬಿತ್ತ ಸಲ್ಲದು ಬ್ರಾಮಣನೇ ಬಿತ್ತಿ ನಡೆಸುದು ಎಂಬ ಪ್ರಾಸ್ತಾಪವೂ ಶಾಸನದಲ್ಲಿದೆ.

ಒಂದನೆದಾಗಿ ಆ ಕಾಲದ ಸಮಾಜದಲ್ಲಿನ ಜಾತಿ ವ್ಯವಸ್ಥೆಯ ಪ್ರಾಮುಖ್ಯತೆಯನ್ನು ತಿಳಿಯಬಹುದು. ಅಲ್ಲದೆ ಈ ಭೂಮಿಯಿಂದ ಬರತಕ್ಕೆ ಉತ್ಪತ್ತಿ ದೇವರ ಕಾರ್ಯಕ್ಕೆ ವಿನಿಯೋಗ ಆಗುತ್ತಿದ್ದುದರಿಂದ, ಈ ರೀತಿಯ ಕಟ್ಟಳೆಯನ್ನು ಮಾಡಿರಬೇಕು. ಈ ವ್ಯವಸ್ಥೆಯನ್ನು ವಿಚಾರಿಸುವ ಅಧಿಕಾರವನ್ನು ಯಿಕೆಲ ಕೇರಿಯ ಒಬ್ಬ ಸೆಟ್ಟಿಕಾರ, ಅಯಿವತ್ತೆರಡುವೊಕ್ಕಲು ಮತ್ತು ಪಾರುಪತ್ಯಗಾರನಿಗೆ ನೀಡಲಾಗಿದೆ. ಮೇಲೆ ಹೇಳಿದ ವ್ಯವಸ್ಥೆಗೆ ಯಾರಾದರೂ ವೊಕ್ಕಲು ತೊಂದರೆ ಉಂಟು ಮಾಡಿದರೆ, ಅರಸನಿಗೆ ೧೨೦೦ ವರಹವನ್ನೂ ತೆರಬೇಕು ಅಲ್ಲದೆ ಕೇಶವ ದೇವರಿಗೆ ೨ಳಮುಡಿ ಬಾಳನ್ನು ಬಿಡಬೇಕು ಎಂದು ವಿಧಿಸಲಾಗಿದೆ, ಕೊನೆಯಲ್ಲಿ ಶಾಪವಾಕ್ಯವಿದೆ. ಒಟ್ಟಿನಲ್ಲಿ ರಂಗಣನ ಕೇರಿ ಅಥವಾ ರಂಗನಕೇರಿ ಇತಿಹಾಸ ಕಾಲದಿಂದ ಬಹಳ ಚಟುವಟಿಕೆಗಳನ್ನು ಕಂಡ ಪ್ರದೇಶ.

ಈ ಶಾಸನ ಕರಾವಳಿ ಕರ್ನಾಟಕದಲ್ಲಿ ಆರಂಭ ಕಾಲದಿಂದ ಇದ್ದ ವಿಜಯನಗರ ರಾಜವಂಶದ ಹಿಡಿತ ಯಾವ ಮಟ್ಟವನ್ನು ತಲುಪಿತು ಎಂದು ತಿಳಿಯಲು ಸಹಕಾರಿಯಾಗಿದೆ. ಆ ಕಾಲದಲ್ಲಿ ವೈಷ್ಣವ ಧರ್ಮ ಯಾವ ರೀತಿಯಲ್ಲಿ ಪ್ರಬಲ ಧರ್ಮವಾಗಿ ಬಾರಕೂರಿನಲ್ಲಿ ತಳ ಊರಿತ್ತು. ಅಲ್ಲದೆ ಧರ್ಮ ಸಮನ್ವಯ ಹೇಗಿತ್ತು ಎಂದು ತಿಳಿಯಲೂ ಸಹಕಾರಿ. ಆಗಿನ ಕಾಲದ ಭೂಮಿ ಆಧರಿತ ಅರ್ಥ ವ್ಯವಸ್ಥೆಯ ಅಧ್ಯಯನವನ್ನು ಇದರಿಂದ ಮಾಡಬಹುದು. ದೇವಸ್ಥಾನ ಯಾವ ರೀತಿಯಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ ಸ್ಥಾನಮಾನವನ್ನು ಹೊಂದಿತ್ತು ಎಂಬುದಕ್ಕೂ ಆಧಾರವನ್ನು ನೀಡುತ್ತದೆ.

ಟಿಪ್ಪಣಿಗಳು

1. *ದಕ್ಷಿಣ ಭಾರತದ ಶಾಸನಗಳು,* ಸಂಪುಟ IX, ಭಾಗ II. ಶಾಸನ ಸಂಖ್ಯೆ - 621
2. ಲಕ್ಷ್ಮೀನಾರಾಯಣ ರಾವ್ ಎನ್., *ದಿ ನಾಯಕಾಸ್ ಆಫ್ ಕೆಳದಿ.* ವಿಜಯನಗರ ಸೆಕ್ಸ್ ಸೆಂಟಿನರಿ ಕಮೆಮೊರೇಶನ್ ವೊಲ್ಯೂಮ್ [ಧಾರವಾಡ. 1936] ಪು. 258
3. ಚಿಟ್ನಿಸ್ ಕೆ.ನ್. *ಕೆಳದಿ ಪೊಲಿಟಿ.* [ಧಾರವಾಡ 1974] ಪು. 12
4. ದಕ್ಷಿಣ ಭಾರತದ ಶಾಸನಗಳು, ಸಂಪುಟ IX ಭಾಗ II. ಶಾಸನ ಸಂಖ್ಯೆ - 655
5. *ಅದೇ.* ಶಾಸನ ಸಂಖ್ಯೆ 764
6. *ದಕ್ಷಿಣ ಭಾರತದ ಶಾಸನಗಳು,* ಸಂಪುಟ 27 ಶಾಸನ ಸಂಖ್ಯೆ - 200
7. ಅದೇ. ಶಾಸನ ಸಂಖ್ಯೆ 201

8. ಸೂರ್ಯನಾಥ ಕಾಮತ್; *ತುಳುವ ಇನ್ ವಿಜಯನಗರ ಟೈಮ್ಸ್.* [ಬೊಂಬಾಯಿ 1965] ಪು. 16

9. *ದಕ್ಷಿಣ ಭಾರತದ ಶಾಸನಗಳು,* ಸಂಪುಟ IX ಭಾಗ II. ಶಾಸನ ಸಂಖ್ಯೆ - 673

10. *ಅದೇ.* ಶಾಸನ ಸಂಖ್ಯೆ 675

11. ಬಿ. ವಸಂತ ಶೆಟ್ಟಿ. *ಬಾರಕೂರು - ಮೆಟ್ರೊಪೊಲಿಟನ್ ಸಿಟಿ ಆಫ್ ಆಂಟಿಕ್ವಿಟಿ ಇಟ್ಸ್ ಹಿಸ್ಟರಿ ಂಡ್ ಕಲ್ಚರ್,* ಅಪ್ರಕಟಿತ ಪಿ.ಚ್.ಡಿ. ಮಹಾ ಪ್ರಬಂಧ. ಮೈಸೂರು ವಿ.ವಿ. 1984

12. ದಕ್ಷಿಣ ಭಾರತದ ಶಾಸನಗಳು, ಸಂಪುಟ 27. ಶಾಸನ ಸಂಖ್ಯೆ - 108

13. ಬಿ. ಜಗದೀಶ್ ಶೆಟ್ಟಿ. *ದಿ ಆಗ್ರೊ ಇಕಾನಮಿಕ್ ರಿಲೇಶನ್ಸ್ ಆಂಡ್ ಸೋಶಿಯಲ್ ಸ್ಟ್ರಕ್ಚರ್ ಇನ್ ದಕ್ಷಿಣ ಕನ್ನಡ ಕ್ರಿ.ಶ. 1000-1600.* ಅಪ್ರಕಟಿತ ಪಿ ಚ್.ಡಿ. ಪ್ರಬಂಧ. ಮಂಗಳೂರು, ವಿ.ವಿ. 1992-ಪು. 45-46.

14. ಉಳ್ಳಾಲ ನರಸಿಂಗ ರಾವ್ *ಕಿಸಾಮ್‌ವಾರ್ ಗ್ಲೋಸರಿ ಆಫ್ ಕನ್ನಡ ವರ್ಡ್ಸ್* [ದೆಹಲಿ, 1985] ಪು. 18

15. ರಮೇಶ ಕೆ.ವಿ. *ಹಿಸ್ಟರಿ ಆಫ್ ಸೌತ್ ಕೆನರಾ.* [ಧಾರವಾ. 1970] ಪು. 285

16. ದಕ್ಷಿಣ ಭಾರತದ ಶಾಸನಗಳು, ಸಂಪುಟ 27. ಶಾಸನ ಸಂಖ್ಯೆ - 108

ಶಾಸನದ ಪಾಠ

1. 0 ಶ್ರೀ ಗಣದಿ ಪತಯೆ ನಮಃ ನಮಸ್ತುಂಗ ಶಿರಸ್ತುಂಬಿ ಚಂದ್ರ ಚಾಮರ ಚರವೆ

2. 0 ತ್ರೈಲೋಕ್ಯ ನಾಗರಾರಂಭ ಮೂಲ ಸ್ತಂಭಾಯ ಶಂಭವೆ ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ

3. 0 ವರುಶ ೧೪೮೪ ನೆಯ ದುಂದುಭಿ ಸಂವಚರದ ಆಷಾಡಶು ೧೦/ ಶುಲು ಶ್ರೀ ಮಂಮ್ಮಹಾರಾಜದಿರಾಜ

4. 0 ರಾಜಪರಮೇಶ್ವರ ಶ್ರೀ [ವಿರ] ಪ್ರತಾಪ ಶ್ರೀ ವೀರ ಸದಾಶಿವರಾಯ ಮಹಾರಾಯರೂ ವಿಜಯನಗರದ ಸಿಂಹಾಸನ

5. 0 ನದಲು ಸುಖ ಸಕ್ಯಥಾ ವಿನೋದದಿಂದ ದುಷ್ಟ ನಿಗ್ರಹ ಶಿಷ್ಟ ಪ್ರತಿ ಪಾಲನೆಯ ಮಾಡಿ ಸಕಲ ವರ್ನ ಧರ್ಮಾಶ್ರಮಂಗಳನು

6. 0 ಪ್ರತಿಪಾಲಿಸುತ್ತಿದ್ದ ಕಾಲದಲು ಆ ಮಹಾರಾಯರ ನಿರೂಪದಿಂ ವೆಂಕಟಾದ್ರಿ ರಾಯ ಮಹಾ ಅರಸುಗಳು

7. 0 ಕೆಳದಿ ಸದಾಶಿವರಾಯ ನಾಯಕ ಅಯ್ಯನವರಿಗೆ ಬಾರಕೂರ ರಾಜ್ಯವನ್ನು ಪಾಲಿಸಿದಲ್ಲಿ ಆ ಸದಾಶಿ

8. 0ವ ರಾಯನಾಯಕ ಅಯ್ಯನವರ ನಿರೂಪದಿಂದ ಕಲಿಯಮ್ಮ [ವೊಡೆರು] ಬಾರಕೂರ ಸಿಂಹಾಸನದಲ್ಲಿ

9. 0ಕುಳಿತು ರಾಜ್ಯವನಾಳುವ ಕಾಲದಲ್ಲು ಮುರುಕ್ಕೇರಿಯ ವೊಳಗಣ ರಂಗಣನಕ್ಕೇರಿಯ ಶ್ರೀ ಕೇಶವನಾತ್ತ

10. 0 ದೇವರಸ್ತ್ನ ಮತ್ತು ವಿನಾಯಕ ದೇವರಲ್ಲಿ ಕಟಾಜಿನ ದ್ವಾರವ ಮಾಡಿ ಬರಸಿದ ಧಂರ್ಮ್ಮ ಶಾಸನದ ಕ್ರಮವೆಂ

11. ತ್ತೆಂ[ದರೆ] ಪೂರ್ವ್ವದಲು ರಂಗಣ ಸೆಟ್ಟಿ ಮಾಡಿದ ಧರ್ಮದ ಬಾಳನು ದೆವಸ್ವದ ಬಾಳನು ಸೆಟಿ ಬಂಠರು ನಾಡವರು ಹೊಯಿ

12. ದು ಬದ್ದ ಸಂಮಂದ[ಈ] ಬಾಳನು ಬಿಡಿಸಿ ಕೊಟ್ಟಿದ್ದಕ್ಕೆ ಬರಸಿದ ದೇವಸ್ತಕಲು ಕಂಬಿಯ ಊರ ಗಡಿಯ ವಿವರ ಮೂಡಲು ನೆಡಊ

13. ರ ಗಡಿಯ ಕಚನ ಬೆಟ್ಟಿನ ಅರೆಯಕಲು ಪುತಿನೂರೆ[ಕೈ] ಯಾಳ ಬೆಟ್ಟಿನ ಗಡಿಯಿಂದ ಪಡುವಲು ಚಾಪಾಡಿಯೂರ ಗಡಿಯಿಂ

14. ದಂ ಬಡಗಲು ಕೂಡಲ ಅಗಳ ಗಡಿಯಿಂದ ಮೂಡಲು ಬಸವಂ ಣ್ಣೊಡೆಯರ ಮಠದ ಬಾಳಗಡಿ ಬಿದಗೋಳಿ ಹೆದ್ದಾರಿಯಿಂ

15. ದಂ ತೆಂಕಲು ಯಿಂತಿ ನಾಲ್ಕು ಗಡಿಯಿಂದ [ವೊ]ಳಗಣ ಬಯಲು ಮು [೮] ೪ ಬೆಟು ಹಕಲು ಸಹ ನಿದಿ ನಿಕ್ಷೇಪ ಜಲ

16. ಪಾಷಾಣ ಯಕ್ಷಿ ಆಗಾಮಿ ಸಿದ್ಧ ಸಾಧ್ಯಂಗಳೆಂಬ ಅಷ್ಟ ಬೋಗ ತೇಜ ಸಮಯಾವನು ಕೇಶವನಾತ ದೆವರಿಗು ವಿನಾಯಕ

17. ದೆವರಿಗು ಬಿ[ಟ್ಟೆ] ಉ ಅಲಿಯ ಬಾಳಿಗೆ ಕಟ್ಟಿದ ಗೇಣಿ ಅಂಕ್ಕಿ ನಾಗಂಡುಗದಲು ಮೂ ೩೦೦ಕೆ ಹತ್ತರ ನಾರಾಯಣ ದೆವರಿಗೆ ಮೇಲು

18. ಪ್ರತಿ ವರುಷ ವ ೧ ಕೆ ಬಯಲ ಮು ೧ ಕೆ ಭತ್ತ ಮೂ ೧ರಲು ಮು ೮೪ ಭತಕೆ ಅಕ್ಕಿ ಮು ೪೨ [ಭ]. ಡ ಸಾಲಿಗರ ಗೋಪಿನಾತ ದೇ

19. ವರಿಗೆ [ಹ]ತ್ತಿಂದ ಪಡುವಲು ಬಂಚಲಿಂದಂ ಮೂಡಮುಡಿ ಅಗದೆ ಮೆಲೆ ಅಕಿಮ ಮೂರ್ಱ [ಉಭಯಂ] ರೆ ಮೂ ೫೧ಕು ಮು

20. ಡಿ. ೨೪ [೯] ವಿವರ ಕೇಶವನಾತ ದೇವರಿಗೆ ನೈವೆದ್ಯಕೆ ದಿನ ೧ ಕೆ ಹಾ -೨ ಲು ಮೂ ೧೮ ಶಾಂತಿಗೆ ಮೂ ೧೨ ನಾದ ದಿವಿಗೆ ಮು ೬

21. ಗಂದಕ್ಕೆ ಮು [೩] ಅಂನ ಶಾಂತಿಗೆ ಮು ೧ ವೀಳೆ ಕೆ ಮು ೧ ದೇವರ ಸುತಣ ಕಸವ ತೆಗೆದು ಬೇರಿ ಜೆಗಟೆಯನು ಹಾಯಿದು ಹೂ ವನದ

22. ಸುವಿದ ಪಡಿಗನಿಗೆ ಮು ೯ ಪರ್ವತಿತಿಗೆ ಆಶಾಡಿ ಹಬ್ಬ ಉಪಾಕರಮ ಕ್ರುಷ್ಣ ಅಷ್ಟಮಿ ಹೊಸ್ತು ಮಹಾನವಮಿ ದೇವರಿಗೆ ಹಬಸ

23. ಹ ಮು ೫ [ಧರ್ಮ] ಕೆ ದಿನ ೧ ಕೆ ಉಂಬ ಜನ ೧೨ [ಲು] ಜ [ನ] ೧ಕೆ ಅಕ್ಕಿ ವರುಶ ೧ ಕೆ ಮು ೯ ಲು ಮು ೧೦೮ ಅಟಿಲ ಅಟ್ಟುವವನಿಗೆ ಮು

24. ಡಿ ೧೨ ಉಭಯಂ ಧಂರ್ಮಕೆ ಮು ೧೨೦ ಆ ವಿನಾಯಕ ದೇವರಿಗೆ ನೈವೇದ್ಯವ ಮಾಡಿ ಶಾಂತಿಯ ಮಾಡುವವನಿಗೆ ಮು ೧೮ [ನ]

25. ೦ದಾ ದೀಪಕ್ಕೆ ಮು ೬ ಗಂದಕೆ ಮು ೩ ಅಂನ ಶಾಂತಿಗೆ ಮು ೧ ವೀಳೆಯಕ್ಕೆ ಮು ೧ ದೇವರಿಗೆ ಬೇರಿ ಜೆಗಟೆ ಹಾಯಿದು ಕಸವ ತೆಗೆದು

26. ದಾರಿಯ ಕಸವ ತೆಗವಗೆ ದೇವಡಿಗನಿಗೆ ಮು ಪಂಚಪ ರ್ವಕೆ ಮು ೫ ಚ ಉತ್ತಿ ಮಹಾಚಉತ್ತಿ ೨ಕೆ ಮು ೧ ಚ ಉಡೇಶ್ವರಿಗೂ ನಾ

27. ಗರಿಗೂ ಉಂತರಾಯಣ ಸಂಕ್ರಂತಿಯಲಿ ದೆಕ್ಕೆ ಬಲಿ ಹಾಲು ಹಿಂಟು ಅಲೆಯ ವೊಬ್ಬ ಸೆಟ್ಟಿಕಾರ್ರತಿಯೀವಂತ ಯೆರಡು ಮ

28. ದಿ ಹಲರ ಉತ್ತ ವೀಳೆಯಂಕೆ ಮು ೧೨ಯೆರಡು ದೇವಸ್ತನದ ಪಾರುಪತಿವನು ತಿಮ್ಮರಸರ ಮಗ ಗಿರಯ್ಯನು

29. ಮಾಡುವ ಅತಾಗೆ ಕಾಲಕ್ಕೆ ಮು೧೮ಲೂ ಊರ ಬಾಳನು ಸುದ್ರ ಬಿತ್ತ ಸಲ್ಲದು ಬ್ರಾಮಣನೇ ಬಿತ್ತಿ ನಡಸುದು ಆರೊಬ್ಬರು

30. ವಕಲ್ಲಿಗೆ ಬೇಶರ್ದು ಮಾಡಿದರೆ ಯಿದರ ವೊಕ್ಕಲು (-)ಕೂಡಿ ಬಾಳುವರು. ಅಲ್ಲಿ ಮೇಲಾರ ಯಿಕೆಲ ಕೇರಿ ವೊತಿ

31. ಬ್ಬ ಸೆಟ್ಟಿಕಾರನು ಅಯಿವತ್ತಯೆರಡು ವೊಕ್ಕಲು ಈ ಪಾರುಪತ್ಯ ಗಾರನು ವಿಚಾರಿಸಿ ಬಹರುವೊಕಲಲ್ಲಿ ವೊಲೆ

32. ಗೆ ಕಡಿಸಿಕೊಂಡರೆ ಅರಸಿಂಗೆ ಸಾವಿರ ಯಿಂದನುರು ವರಹನ ತೆತ್ತು ಕೇಶವ ದೇವರಿಗೆ ಮು ೨೪ ಅಕ್ಕಿ ಬಾ

33. ಳನು ಬಿಡವರು | ದಾನಪಾಲನಯೋರ್ಮಧ್ಯೇ ದಾನ ಶ್ರೇಯೋನ್ರು ಪಾಲನಂ ದಾನ ಸ್ವರ್ಗಮವಾಪ್ನೋತಿ ಪಾಲನಾದ

34. (ಚ್ಯು) ಪದಂ ಸ್ವದತ್ತಾದ್ವ್ಯಗುಣಂ ಪುಣ್ಯಂ ಪರವದತ್ತಾನು ಪಾಲನಂ ಪರದತ್ತಾಪಹಾರೇಣ ಸ್ವದತ್ತಾಂ ನಿಷ್ಪಲಂ ಭ

35. ವೇತ್ ಯಿದಂರ್ಮಕೆ ಳವನೊಬ್ಬ ಕುಲ ತಪ್ಪಿದಡೆ ವಾರಣಾಸಿಯಲಿ ಸಹಸ್ರ ಕವಿಲೆಯ ಕೊಂ

36. ದ ದೋಶಕೆ ಹೋಹಾರೂ ಯೀ ಬಾಳಿಗೆ.

೮. ರಾಯಚೂರು ಜಿಲ್ಲೆ ಸುಲ್ತಾನಪುರದ ಅಚ್ಯುತದೇವರಾಯನ ಅವಧಿಯ ಶಾಸನ : ಮರುಪರಿಶೀಲನೆ

ಡಾ. ಅಮರೇಶ ಯತಗಲ್

ವಿಜಯನಗರದ ಅರಸರ ಅಚ್ಯುತದೇವರಾಯ (ಕ್ರಿ.ಶ.೧೫೨೯-೧೫೪೨)ನ ಅವಧಿಯ ಶಾಸನವೊಂದು ರಾಯಚೂರು ಜಿಲ್ಲೆ ಲಿಂಗಸೂಗೂರು ತಾಲ್ಲೂಕಿನ ಭಟ್ಟರಹಳ್ಳಿ ಯಲ್ಲಿದೆ. ಈ ಭಟ್ಟರಹಳ್ಳಿ ಇರುವುದು ಮಸ್ಕಿಯಿಂದ ಪಶ್ಚಿಮಕ್ಕಿರುವ ಸುಲ್ತಾನಪುರದ ಪಕ್ಕದಲ್ಲಿ. ಈ ಗ್ರಾಮದ ಹನುಮಂತದೇವರ ದೇವಾಲಯದ ಎದುರಿನಲ್ಲಿ ಈ ಶಾಸನವನ್ನು ನಿಲ್ಲಿಸಲಾಗಿದೆ. ಇದರ ಕಾಲ ಶಾಲಿವಾಹನ ಶಕವರ್ಷ ೧೪೫೯ ಹೇಮ ಳಂಬಿ ಆಷಾಢ ಶುದ್ಧ 10 ಸೋಮವಾರ. ಅಂದರೆ ಇದು ಕ್ರಿ.ಶ. ೧೮.೦೬.೧೫೩೭ಕ್ಕೆ ಸರಿ ಹೊಂದುತ್ತದೆ.


ಈ ಶಾಸನ ಹೇಳುವಂತೆ ಅಚ್ಯುತದೇವರಾಯನ ಸಾಮಂತನಾದ ಗುಜ್ಜಲ ಇಮ್ಮಡಿ ಮೇದಿನಿರಾಯ ಒಡೆಯನು ಮಸ್ಕಿಯ ಭಟ್ಟರ ನಾಗರಾಜನ ಮಗ ಮಲ್ಲಯ್ಯ, ರಾಮರಾಜನ ಮಗ ಚಿಕ್ಕಮಲ್ಲಯ್ಯ ಮತ್ತು ನಾಗರಾಜನ ಮಗ ಅನಂತಯ್ಯರುಗಳಿಗೆ, ಮಸ್ಕಿ ಸೀಮೆಯಲ್ಲಿ ಬರುವ ಉದ್ದಂಡ ಮೇದಿನಿಪುರನ್ನು ಅಮರನಾಥದೇವರಿಗೆ ಪುಣ್ಯವಾಗಬೇಕೆಂದು ಅಗ್ರಹಾರವನ್ನಾಗಿ ಪರಿವರ್ತಿಸಿ ದಾನ ನೀಡಲಾಗಿದೆ. ಉದ್ದಂಡ ಮೇದಿನಿಪುರದ ಪೂರ್ವಕ್ಕೆ ಮಾರ್ಲದಿನ್ನಿ, ಪಶ್ಚಿಮಕ್ಕೆ ಸೀಮೆ ಹಳ್ಳ, ಉತ್ತರಕ್ಕೆ ಆವಿನಮಡುವು, ದಕ್ಷಿಣಕ್ಕೆ ಮೂಡಲದಿನ್ನಿ ಗ್ರಾಮಗಳಿದ್ದವೆಂದು ಇದರಿಂದ ತಿಳಿದು ಬರುತ್ತದೆ. [1]

ಇದೊಂದು ಪ್ರಕಟಿತ ಶಾಸನ. ಈ ಶಾಸನದಲ್ಲಿ ಒಟ್ಟು 21 ಸಾಲುಗಳಿವೆ. ಈ ಶಾಸನವು *Annual Report of Indian Epigraphy* 1958-59 No - B 717ರಲ್ಲಿ ಮೊದಲಿಗೆ ಪ್ರಕಟವಾಯಿತು. ಮೈಸೂರಿನ ಪ್ರಾಚ್ಯವಸ್ತು ಹಾಗೂ ವಸ್ತು ಸಂಗ್ರ ಹಾಲಯ ಇಲಾಖೆಯು, ಚನ್ನಬಸಪ್ಪ ಎಸ್. ಪಾಟೀಲ್ ಹಾಗೂ ವಿನೋದಾ ಸಿ. ಪಾಟೀಲ್ ಇವರ ಸಂಪಾದಕತ್ವದಲ್ಲಿ ೧೯೯೮ರಲ್ಲಿ *Inscriptions of Karnataka* Vol. IV, No. 234 (Inscription of Raichur District) ಹಾಗೂ ೨೦೦೩ ರಲ್ಲಿ ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - ೭ (ರಾಯಚೂರು ಜಿಲ್ಲೆ) ಇದರಲ್ಲಿ ಮರುಮುದ್ರಣಗೊಂಡಿದೆ.

ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟದಲ್ಲಿ ಲಿಂಗಸೂಗೂರು ತಾಲೂಕಿನ ಶಾಸನ ಸಂಖ್ಯೆ ೪೬ ಎಂದು ತೋರಿಸಲಾಗಿದೆ.

ಈ ಎಲ್ಲಾ ಸಂಪುಟಗಳಲ್ಲಿ ಶಾಸನದ ಸ್ಥಳ ಸುಲ್ತಾನಪುರವೆಂದು ಇದೆ. ಆದರೆ ಈ ಶಾಸನದ ಸ್ಥಳ ಭಟ್ಟರಹಳ್ಳಿ ಆಗಿರುವುದರಿಂದ ಇನದ್ನು ಭಟ್ಟರಹಳ್ಳಿಯ ಶಾಸನ ವೆಂದು ಕರೆಯುವುದು ಸೂಕ್ತ.





ಇಲ್ಲಿಯವರೆಗಿನ ಶಾಸನ ಸಂಪುಟಗಳು ಈ ಶಾಸನದಲ್ಲಿಯ ೨೧ ಸಾಲುಗಳನ್ನು ಮಾತ್ರ ಪ್ರಕಟಿಸಿದ್ದು *'ಮುಂದಿನ ಸಾಲುಗಳು ಇಲ್ಲ'* ಎಂದು ಹೇಳಿವೆ. ಆದರೆ ಇದರ ಸಂಪಾದಕರುಗಳು ಈ ಶಾಸನವನ್ನು ಖುದ್ದಾಗಿ ನೋಡಿಲ್ಲದಕ್ಕಾಗಿ ಅದರ ಮುಂದಿನ ಸಾಲುಗಳನ್ನು ಗಮನಿಸಲಾಗಿಲ್ಲವೆನ್ನಬೇಕು. ಇಂತಹ ಅನೇಕ ಅಪೂರ್ಣವಾದ ಶಾಸನಗಳು ಈ ಸಂಪುಟದಲ್ಲಿಬಹುದೆಂಬುದಕ್ಕೆ ಇದೊಂದು ಉದಾಹರಣೆಯಷ್ಟೆ. ನಾನು ಈ ಶಾಸನವನ್ನು ಮರುಪರಿಶೀಲಿಸಿದ್ದು, ಪ್ರಕಟಿತ ಶಾಸನ ಪಾಠದಲ್ಲಿ ಕೈ ಬಿಟ್ಟು ಹೋಗಿರುವ ಹೆಚ್ಚುವರಿ ೯ ಸಾಲುಗಳಿರುವುದನ್ನು ಗಮನಿಸಿದ್ದೇನೆ. ಪ್ರಕಟಿತ ಪಾಠದಲ್ಲಿಯ ೨೦ ಮತ್ತು ೨೧ ಸಾಲುಗಳಲ್ಲಿ ಕೆಲವು ಅಕ್ಷರಗಳನ್ನು ಕೈ ಬಿಡಲಾಗಿದ್ದು ಅದನ್ನು ಈ ಮರುಪರಿಶೀಲನೆಯಲ್ಲಿ ಸರಿಪಡಿಸಲಾಗಿದೆ.

ಅದರಂತೆ ೨೦ನೇ ಸಾಲಿನಲ್ಲಿ ಆಗಾಮಿ | ಸಿದ್ದ ಸಾದ್ಯಂಗಳೆಂಬ ಅಷ್ಟಭೋಗಕೆ ಜಲಕೆ ೨ ಹಾಗೂ ೨೧ನೇ ಸಾಲಿನ ಮೊದಲ ಎರಡಕ್ಷರಗಳು ಸಾಮ್ಯ[3]ವನೂ | ನಿಮ್ಮ ಪುತ್ರಪೌತ್ರ ಪಾರಂಪರೆಯಾಗಿ ಎಂದು ಸರಿಪಡಿಸಲಾಗಿದೆ.

ಈಗ ನಾನು ಗಮನಿಸಿರುವ ಪರಿಷ್ಕೃತ ಪಾಠದಲ್ಲಿ ಬಿಟ್ಟು ಹೋದ ಒಂಭತ್ತು ಸಾಲುಗಳು ಅದೇ ಶಾಸನದ ಬಲಬದಿಗೆ ಇರುವುದನ್ನು ಗಮನಿಸಿದ್ದೇನೆ.

ಈ ಸಾಲುಗಳ ಪಾಠ ಇಂತಿದೆ.

೨೨. ಆ ಚಂದ್ರಾರ್ಕ ಸ್ಥಾಯಿಗ

೨೩. ಳಾಗಿ | ಸುಖದಲೂ | ಅನುಭ

೨೪. ವಿಸಿಕೊಂಡುಯಿಹುದು ಯ೦

೨೫. ದು ಕೊಟ್ಟ ಭೂದಾನ ಶಾಸನ

೨೬. ಉ | ಯಿದಕ್ಕೆ ಯಾರೊಬ್ಬ

೨೭. ರು ತಪ್ಪಿದವರ ಬಾ

೨೮. ಯಿಲಿ ಕತ್ತೆ ತುಂಣ್ಣಿ

೨೯. ಕಲ್ಲುಪ್ಪು || ಮಂಗ

೩೦. ಳ ಮಹಾ ಶ್ರೀ ಶ್ರೀ ಶ್ರೀ || [4]

ಈ ಸಾಲುಗಳು ಈ ಶಾಸನಕ್ಕೆ ಸೇರ್ಪಡೆಯಾದರೆ ಈ ಶಾಸನದ ಪೂರ್ಣ ಪಾಠ ಈ ರೀತಿಯಾಗುತ್ತದೆ

೧. ನಮಃಸ್ತುಂಗ ಸಿರಶ್ಚುಂಬಿ ಚಂದ್ರಚಾಮರ ಚಾ

೨. ರವೇ ತ್ರೈಳೋಕ್ಯ ನಗರಾರಂಭ ಮೂಲಸ್ತಂಭಯ ಸಂಭವೇ ||

೩. ಸ್ವಸ್ತಿ ಶ್ರೀ ವಿಜಯಾದ್ಧುದಯ ಶಾಲಿವಾಹನ ಶಕವರ್ಷ ೧೪೫೫ನೆಯ ಹೇಮ

೪. ಳಂಬಿ ಸಂವಛರದ ಆಷಾಢ ನವಮಿ ಸೋಮವಾರದಲೂ ಶ್ರೀ ಮನ್ಮಹಾ ರಾಜಾ

೫. ಧಿರಾಜ ಪರಮೇಶ್ವರ ಶ್ರೀ ವೀರಪ್ರತಾಪ ಯಳ ಅಚ್ಯುತದೇವ ಮ

೬. ಹಾರಾಯರ ಕಾರ್‍ಯ್ಯಕ್ಕೆ ಕರ್ತರಾದ ಶ್ರೀಮನ್ಮಹಾಗೂಜ್ಜಲ ಯಿಂಮ

೭. ಡಿ ಮೇದಿನಿರಾಯ ವಡೆಯರೂ ಮೊಸಂಗಿಯ ಭಟ್ಟರ ನಾಗರಾ

೮. ಜನ ಮಗ ಮಲ್ಲಯ್ಯ ರಾಮರಾಜನ ಮಗ ಚಿಕ್ಕಮಲ್ಲಯ್ಯ ಆ ನಾ

೯. ಗರಾಜನ ಮಗ ಅನಂತಯಗಳಿಗೆ ಕೊಟ್ಟ ಯೀ ದಾನದ ಶಾಸ

೧೦. ನದ ಕ್ರಮವೆಂತೆಂದರೆ | ನಮಗೆ ಆಮರಕೆ ಸಲುವ ಮೊಸಗಿ ಸೀ

೧೧. ಮೆವಳಗಣ ಉದಂಡ ಮೇದಿನಿಪುರವನು ನಮ್ಮ ಅಮ

೧೨. ರನಾಥದೇವರಿಗೆ ಪುಣ್ಯವಾಗಬೇಕೂ ಯಂದು ನಿಮಗೆ

೧೩. [ದೇ]ವರ ಮಾನ್ಯ ಅಗ್ರಹಾರವನೂ ಪಾಲಿಸಿದೇಉ ಆ ಗ್ರಾಮ

೧೪. ಕ್ಕೆ ಚತುಸ್ಸೀಮೆ ವಿವರ ಮೂಡಲು ಮಾರ್ಲದಿಂನೆ | ಟೆಂಕ್ಕಲು

೧೫. ಮಾಳಲದಿಂನೆ | ಪಡವಲು ಸೀಮೆಹಳ | ಬಡಗಲು ಆವಿ

೧೬. ನಮಡುಉ | ಯೀ ಚತುಸ್ಸೀಮೆ ಮಧ್ಯದಲಿಯ

೧೭. ಹ ಉದಂಡಮೇಧಿನಿಪುರಕೆ ಸಲುವ | ಅಂನು

೧೮. ಬಡ್ಡಿ ಬೇಗಾರ | ನಿಧಿನಿಕ್ಷೇಪ ಜಲಪಾಷಾಣ ಯಕ್ಷಿಣಿ

೧೯. ಆಗಾಮಿ | ಸಿದ್ಧ ಸಾದ್ಯಂಗಳೆಂಬ ಅಷ್ಟಭೋಗಕ್ಕೆ ಜಲಕೆ

೨೦. ಸಾಮ್ಯವನೂ | ನಿಂಮ್ಮ ಪುತ್ರಪೌತ್ರ ಪಾರಂಪರೆಯಾಗಿ ೫

೨೧. ಆ ಚಂದ್ರಾರ್ಕ ಸ್ಥಾಯಿಗ

೨೨. ಳಾಗಿ | ಸುಖದಲೂ | ಅನುಭ

೨೩. ವಿಸಿಕೊಂಡುಯಿಹುದು ಯ (೦)

೨೪. ದುಕೊಟ್ಟ ಭೂದಾನ ಶಾಸನ

೨೫. ಉ | ಯಿದಕ್ಕೆ ಯಾರೊಬ್ಬ

೨೬. ರು ತಪ್ಪಿದವರ ಬಾ

೨೭. ಯಿಲಿ ಕತ್ತೆ ತುಂಣ್ಣಿ

೨೮. ಕಲ್ಲುಪ್ಪು || ಮಂಗ

೨೯. ಳ ಮಹಾ ಶ್ರೀ ಶ್ರೀ ಶ್ರೀ || ೬

ಈಗ ಈ ಶಾಸನ ಪೂರ್ಣವಾದ ಅರ್ಥವನ್ನು ಕೊಡುತ್ತದೆ. ಇನ್ನು ಮುಂದೆ ಯಾದರೂ ಶಾಸನತಜ್ಞರು ಮತ್ತು ಕನ್ನಡ ವಿಶ್ವವಿದ್ಯಾಲಯದಂತಹ ವಿಶ್ವವಿದ್ಯಾಲಯಗಳು ಹಿಂದೆ ಪ್ರಕಟವಾದ ಶಾಸನಗಳನ್ನು, ಅಲ್ಲದೆ ಮುಂದಿನ ಸಾಲುಗಳು ಲಭ್ಯವಿಲ್ಲವೆಂದು ಹೇಳುವ ಪ್ರಕಟಿತ ಶಾಸನಗಳನ್ನೆಲ್ಲಾ ಖುದ್ದಾಗಿ ನೋಡುವ ಹಾಗೂ ಓದಿ ಪುನರ್ ಪರಿಶೀಲಿಸುವ ಅಗತ್ಯವಿದೆ.

ಆಕರಗಳು

1. ಡಾ|| ದೇವರಕೊಂಡಾರೆಡ್ಡಿ ಮತ್ತು ಇತರರು (ಸಂ)., ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ -7 ರಾಯಚೂರು ಜಿಲ್ಲೆ - ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ - 2003, ಪುಟ. 180-181

2. ಕ್ಷೇತ್ರಕಾರ್ಯದಲ್ಲಿ ನಾನೇ ಸಂಶೋಧಿಸಿದ್ದೇನೆ.
3. ಕ್ಷೇತ್ರಕಾರ್ಯದಲ್ಲಿ ನಾನೇ ಸಂಶೋಧಿಸಿದ್ದೇನೆ.
4. ಕ್ಷೇತ್ರ ಕಾರ್ಯದಲ್ಲಿ ನಾನೇ ಸಂಶೋಧಿಸಿದ್ದೇನೆ.
5. ಡಾ. ||ದೇವರಕೊಂಡಾರೆಡ್ಡಿ ಮತ್ತು ಇತರರು (ಸಂ)., ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ - 7 ರಾಯಚೂರು ಜಿಲ್ಲೆ - ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ - 2003 ಪುಟ - 180-181
6. ಕ್ಷೇತ್ರಕಾರ್ಯದಲ್ಲಿ ನಾನೇ ಸಂಶೋಧಿಸಿದ್ದೇನೆ.

ಕನ್ನಡ ವಿಶ್ವವಿದ್ಯಾಲಯ ಶಾಸನಸಂಪುಟ -7, ರಾಯಚೂರು ಜಿಲ್ಲೆ.

ಸಂಪಾದಕರು : ಡಾ| ದೇವರಕೊಂಡಾರೆಡ್ಡಿ,

ಸಹ ಸಂಪಾದಕರು : ಡಾ| ಕೆ.ಜಿ. ಭಟ್‌ಸೂರಿ, ಶ್ರೀ ಕಲವೀರ ಮನ್ವಾಚಾರ್, ಡಾ| ಡಿ.ವಿ. ಪರಶಿವಮೂರ್ತಿ

ಕನ್ನಡ ವಿಶ್ವವಿದ್ಯಾಲಯ ಹಂಪಿ,

ವಿದ್ಯಾರಣ್ಯ ೨೦೦೩

46

ಸುಲ್ತಾನಪುರ Sultanpur

ಹನುಮಂತದೇವರ ಗುಡಿ ಎದುರಲ್ಲಿನ ಶಾಸನ *

On a slab infront of the Temple of Hanumanta

[A.R.No. B 717 of 1958 - 59; I.K.IV. No. 234]

This is dated Salivahana Saka 1459, Hemalambi, Ashadha, su. 10, Somavara corresponding to A.D. 1537, June 18.

It is in the reign of the Vijayanagar king Achyutadevaraya and registers the grant of a village Uddanda Medinipura in Mosangisime to the service of the God Amaranathadeva by the chief Gujjala Immadi Mediniraya. The grant was received by Mallayya, Chikkamallayyya, and Anathanyya of Mosangi (?). It is stated in the record that there was a simehalla (a tank) to the east and a Avinamaduva to the south of Uddanda Medinipura.

ಶಾಸನದ ಕಾಲವು ಶಾಲಿವಾಹನ ಶಕವರ್ಷ ೧೪೫೯ ಹೇಮಳಂಬಿ, ಆಷಾಢ, ಶು.೧೦, ಸೋಮವಾರವೆಂದಿದ್ದು, ಇದು ಕ್ರಿ.ಶ.೧೮.೬.೧೫೩೭ಕ್ಕೆ ಸಮನಾಗುತ್ತದೆ.

ವಿಜಯನಗರದ ಅರಸ ಅಚ್ಯುತದೇವರಾಯನ ಅವಧಿಯಲ್ಲಿ ಅವನ ಸಾಮಂತ ಅರಸನಾದ ಗುಜ್ಜಲ ಇಮ್ಮಡಿ ಮೇದಿನಿರಾಯ ಒಡೆಯನು ಮಸ್ಕಿಯ ಮಲ್ಲಯ್ಯ ಚಿಕ್ಕಮಲ್ಲಯ್ಯ ಮತ್ತು ಅನಂತಯ್ಯನಿಗೆ ಮಸ್ಕಿ ಸೀಮೆಯ ಉದ್ದಂಡ ಮೇದಿನಿಪುರವನ್ನು

ಅಮರನಾಥದೇವರಿಗೆ ದಾನ ಬಿಡಲಾಗಿದೆ. ಉದ್ದಂಡ ಮೇದಿನಿಪುರದ ಪೂರ್ವಕ್ಕೆ ಸೀಮೆ ಹಳ್ಳ, ಉತ್ತರ್ಕಕೆ ಆವಿನಮಡುವು ಇತ್ತೆಂದು ತಿಳಿದು ಬರುತ್ತದೆ.

೧. ನಮಃಸ್ತುಂಗ ಸಿರಶ್ಚುಂಬಿ ಚಂದ್ರಚಾಮರ ಚಾ

೨. ರವೇ ತ್ರೈಳೋಕ್ಯ ನಗರಾರಂಭ ಮೂಲಸ್ತಂಭಾಯ ಸಂಭವೇ ||

೩. ಸ್ವಸ್ತಿ ಶ್ರೀ ಜಯಾದ್ಭುದಯ ಶಾಲಿವಾಹನ ಶಕವರ್ಷ ೧೪೫೫ನೆಯ ಹೇಮ

೪. ಳಂಬಿ ಸಂವಛರದ ಆಷಾಡ ನವಮಿ ಸೋಮವಾರದಲೂ ಶ್ರೀ ಮನ್ಮಹಾರಾಜಾ

೫. ಧಿರಾಜ ಪರಮೇಶ್ವರ ಶ್ರೀ ವೀರಪ್ರತಾಪ ಯಳ ಅಚ್ಯುತದೇವ ಮ

೬. ಹಾರಾಯರ ಕಾರ್ಯ್ಯಕ್ಕೆ ಕರ್ತರಾದ ಶ್ರೀ ಮನ್ಮಹಾಗುಜ್ಜಲ ಯಿಂಮ

೭. ಡಿ ಮೇದಿನಿರಾಯ ವಡೆಯರೂ ಮೊಸಂಗಿಯ ಭಟ್ಟರ ನಾಗರಾ

೮. ಜನ ಮಗ ಮಲ್ಲಯ್ಯ ರಾಮರಾಜನ ಮಗ ಚ್ಕಿಮಲ್ಲಯ್ಯ ಆ ನಾ

೯. ಗರಾಜನ ಮಗ ಅನಂತಯಗಳಿಗೆ ಕೊಟ್ಟ ಯೀ ದಾನದ ಶಾಸ

೧೦. ನದ ಕ್ರಮವೆಂತೆಂದರೆ | ನಮಗೆ ಆಮರಕೆ ಸಲುವ ಮೊಸಗಿ ಸೀ

೧೧. ಮೆವಳಗಣ ಉದಂಡ ಮೇದಿನಿಪುರವನು ನಮ್ಮ ಅಮ

೧೨. ರನಾಥದೇವರಿಗೆ ಪುಂಣ್ಯವಾಗಬೇಕೂ ಯಂದು ನಿಮಗೆ

೧೩. [ದೇ]ವರ ಮಾನ್ಯ ಆಗ್ರಹಾರವನೂ ಪಾಲಿಸಿದೆಲು ಆ ಗ್ರಾಮ

೧೪. ಕ್ಕೆ ಚತುಸ್ಸೀಮೆ ವಿವರ ಮೂಡಲು ಮಾರ್ಲದಿಂನೆ | ಟೆಂಕ್ಕಲ

೧೫. ಮಾಳಲದಿಂನೆ | ಪಡುವಲು ಸೀಮೆಹಳ | ಬಡಗಲು ಆವಿ

೧೬. ನಮಡುಉ | ಯೀ ಚತುಸ್ಸೀಮೆ ಮಧ್ಯದಲಿಯ

೧೭. ಹ ಉದಂಡಮೇಧಿನಿಪುರಕೆ ಸಲುವ | ಅಂನು

೧೮. ಬಡ್ಡಿ ಬೇಗಾರ | ನಿಧಿನಿಕ್ಷೇಪ ಜಲಪಾಷಾಣ ಯಕ್ಷಿಣಿ

೧೯. ಆಗಾಮಿ | ಸಿದ್ಧ ಸಾದ್ಯಂಗಳೆಂಬ ಅಷ್ಟಭೋಗ...

೨೦. ... ವನೂ | ನಿಂಮ್ಮ ಪುತ್ರಪೌತ್ರ ಪಾರಂಪರೆಯಾಗಿ

೯. ಸಂಗಮ ಅರಸರ ಶಾಸನೋಕ್ತ ಪಯಣ (ಕರ್ನಾಟಕದಲ್ಲಿ)

ಡಾ.ಕೂ.ಸ. ಅಪರ್ಣ

ಸಂಗಮ ಅರಸರಿಗೆ ಸಂಬಂಧಿಸಿದಂತೆ ಕ್ರಿ.ಶ. ೧೩೩೬ರಿಂದ ಕ್ರಿ.ಶ. ೧೩೬೮ ರವರೆಗೆ ಕರ್ನಾಟಕದಲ್ಲಿ ಸು. ೩೩೫ ಶಾಸನಗಳು ದೊರೆತಿವೆ. ಇದರಲ್ಲಿ, ಸಂಗಮರನ್ನು ನೇರವಾಗಿ ಉಲ್ಲೇಖಿಸುವ ನೈಜ ಶಾಸನಗಳು ೧೨೨ ರಷ್ಟಿವೆ. ಇವುಗಳ ಆಧಾರದಿಂದ ಕರ್ನಾಟಕದಲ್ಲಿ ಸಂಗಮ ಅರಸರ ಪಯಣವನ್ನು, ಅಂದರೆ, ಅವರು ತಮ್ಮ ಮೂಲ ಸ್ಥಳದಿಂದ ಹೊರಟು ಯಾವ ಮಾರ್ಗವಾಗಿ ವಿಜಯನಗರವನ್ನು ತಲುಪಿದರೆನ್ನುವುದನ್ನು ಗುರುತಿಸಲು ಇಲ್ಲಿ ಯತ್ನಿಸಲಾಗಿದೆ.

ಸಂಗಮ ಅರಸರ ಪ್ರಾಚೀನ ಶಾಸನವು, ಕ್ರಿ.ಶ ೧೩೩೯ರ ಕುಗ್ವೆಯ ಶಾಸನವಾಗಿದೆ.[1] ಕುಗ್ವೆ ಗ್ರಾಮವು ಸಾಗರ ತಾಲ್ಲೂಕಿಗೆ ಸೇರಿದ್ದು, ಇವರು ಮೂಲತಃ ಶಿವಮೊಗ್ಗ ಜಿಲ್ಲೆಯವರೆಂದು ಹೇಳಬಹುದಾಗಿದೆ. ದೇವರಕೊಂಡಾರೆಡ್ಡಿಯವರು ಒಂದೆಡೆ, 'ಶಿವಮೊಗ್ಗ ಜಿಲ್ಲೆಯ ಕೂಡ್ಲಿ ಮತ್ತು ದಾವಣಗೆರೆ ಜಿಲ್ಲೆಯ ಹರಿಹರ - ಈ ಮಧ್ಯದ ಸೀಮೆಯಲ್ಲಿ ಇವರು ಬಾಳಿದವರಾಗಿರಬೇಕು ಎಂದು ಸರಿಯಾಗಿ ಹೇಳಿದ್ದಾರೆ.[2] ಈ ನಂತರದ ಕಾಲದಲ್ಲಿ ಉಲ್ಲೇಖಿಸಲ್ಪಟ್ಟಿರುವ ಶಿವಮೊಗ್ಗ ಜಿಲ್ಲೆಗೆ ಹತ್ತಿರವಾದ ಬಸಪಟ್ಟಣ, ಹರಿಹರಪಟ್ಟಣ ಮುಂತಾದ ಇವರ ಆಳ್ವಿಕೆಯ ಸ್ಥಾನಗಳು, ಶೃಂಗೇರಿ ಮಠದ ನಿಕಟ ಸಂಪರ್ಕ-ಇವೂ ಕೂಡ ಮೇಲಿನ ಹೇಳಿಕೆಯನ್ನು ದೃಢೀಕರಿಸುತ್ತವೆ. ಹೀಗೆ, ಶಿವಮೊಗ್ಗದಿಂದ ಹೊರಟ ಸಂಗಮರು, ಉತ್ತರದ ಭಾಗವನ್ನು ಭದ್ರಪಡಿಸುವಂತೆ ಮೊದಲಿಗೆ, ಅಂದರೆ, ಕ್ರಿ.ಶ. ೧೩೪೦ರಲ್ಲಿ ಬಾದಾಮಿಯ ತಟ್ಟುಕೋಟೆಯಲ್ಲಿ ಕೋಟೆಯನ್ನು ನಿರ್ಮಿಸುತ್ತಾರೆ.[3] ನಂತರದ ಅವಧಿಯ ಶಾಸನಗಳು ಹೇಳುವಂತೆ, ಇವರು, ಪೂರ್ವದ ಬೆಂಗಳೂರು, ಮುಳುವಾಯಿ ರಾಜ್ಯಗಳೆಡೆಗೂ ಸಾಗುತ್ತಾರೆ. ಇವರ ಹೆಚ್ಚಿನ ಶಾಸನಗಳು ಈ ಪ್ರದೇಶಗಳಲ್ಲಿ ದೊರೆತಿದ್ದು, ಈ ಭಾಗದಲ್ಲಿ ನಮ್ಮ ಆಡಳಿತವನ್ನು ಚುರುಕುಗೊಳಿಸಿದ್ದನ್ನು ಸೂಚಿಸುತ್ತಿವೆ. ಸಂಗಮರಿಗೆ ಸಂಬಂಧಿಸಿದಂತೆ 'ಕಂಪಣರ ರಾಜ್ಯ...' ಎಂಬ ಉಲ್ಲೇಖವು ಕ್ರಿ.ಶ. ೧೩೪೩ರಲ್ಲಿ ಇಲ್ಲಿ ದೊರೆತಿದೆ.[4] ಈ ಅವಧಿಯಲ್ಲಿ ಇವರನ್ನು 'ಪೂರ್ವ - ಪಶ್ಚಿಮ ಸಮುದ್ರಾಧಿಪತಿ' ಎಂದೂ ಗುರುತಿಸಲಾಗಿದೆ. ೧೩ ಕ್ರಿ.ಶ. ೧೩೪೬ರಲ್ಲಿ ಇವರು ಶೃಂಗೇರಿಗೆ ಹೋಗಿ ಗುರುಗಳ ದರ್ಶನ ಮಾಡಿ ಬಂದದ್ದು, ಇವರ ಆಡಳಿತಾರಂಭದ ಸೂಚಕವಾಗಿದೆ. ಈ ಕಾರ್ಯಗಳಲ್ಲಿ ಮೊದಲಿಗೆ

ಹರಿಹರನು ಮುಖ್ಯ ಪಾತ್ರವಹಿಸಿದ್ದರೆ, ಕ್ರಿ.ಶ. ೧೩೪೫ರ ನಂತರ ಹರಿಹರನೊಂದಿಗೆ ಬುಕ್ಕನೂ ಆಡಳಿತದ ಚುಕ್ಕಾಣಿ ಹಿಡಿಯುತ್ತಾನೆ. ಕ್ರಿ.ಶ. ೧೩೪೬-೧೩೫೦ರ ಅವಧಿಯ ಬಹುಪಾಲು ಶಾಸನಗಳು ಕೋಲಾರ, ಬೆಂಗಳೂರು, ಶಿವಮೊಗ್ಗ ಜಿಲ್ಲೆಗಳಲ್ಲೇ ದೊರೆತಿವೆ. ಇವುಗಳಲ್ಲಿ 'ಸಮುದ್ರತ್ರಯಾಧಿಪತಿ', 'ಚತುಸ್ಸಮುದ್ರಾಧಿಪತಿ' ಎಂಬ ಉಲ್ಲೇಖಗಳಿದ್ದು ಇವು, ಅವರ ರಾಜ್ಯ ವಿಸ್ತರಣೆಯಾದುದರ /ಆಗುವುದರ ಸೂಚಕ ವೆನಿಸುತ್ತದೆ.

ಕ್ರಿ.ಶ. ೧೩೫೦ರ ನಂತರ ಇವರ ಪಯಣ ಹೊಯ್ಸಳ ದೇಶದ ಹಳೇ ಮೈಸೂರು ರಾಜ್ಯದೆಡೆಗೆ ಸಾಗುತ್ತದೆ. ಕ್ರಿ.ಶ. ೧೩೫೧ರ ಮಲದೇವನಹಳ್ಳಿಯ ಶಾಸನವು[6] ಬುಕ್ಕನನ್ನು 'ಮಹಾರಾಜಾಧಿರಾಜ' ಎಂದು ಮೊದಲ ಬಾರಿಗೆ ಉಲ್ಲೇಖಿಸಿದೆ. ನಂತರ ಹಾಸನ,[7] ಮಂಡ್ಯ[8] - ಈ ಜಿಲ್ಲೆಗಳಿಗೂ ಅವರ ಆಡಳಿತದ ಪ್ರಭಾವ ವ್ಯಾಪಿಸಿದ್ದನ್ನು ಕಾಣಬಹುದು. ಈ ಹೊತ್ತಿಗೆ ಇವರು, ಹೊಯ್ಸಳ ರಾಜ್ಯಕ್ಕೆ ಸೇರಿದ ಬಹುಪಾಲು ಪ್ರದೇಶಗಳಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸಿರುತ್ತಾರೆ. ಕ್ರಿ.ಶ. ೧೩೫೬ರಲ್ಲಿ ಬುಕ್ಕನು ಶೃಂಗೇರಿಗೆ ಭೇಟಿ ನೀಡಿದ್ದು, ಅವನೇ 'ರಾಜ'ಎನಿಸಿಕೊಂಡದ್ದನ್ನು ದೃಢಪಡಿಸುತ್ತದೆ.[9] ಈ ನಂತರ, ಮೇಲೆ ಹೇಳಿದ ಎಲ್ಲ ಪ್ರದೇಶಗಳಲ್ಲಿ ಸಂಗಮರ ಶಾಸನಗಳು ದೊರೆ ಯುತ್ತಲೇ ಇವೆ.

ಕ್ರಿ.ಶ. ೧೩೫೬ರ ಹೊತ್ತಿಗೆ ಹರಿಹರ ಮತ್ತು ಬುಕ್ಕ ಮಾತ್ರವಲ್ಲದೆ, ಅವರ ಮಕ್ಕಳೂ ಆಡಳಿತದಲ್ಲಿ ಪಾತ್ರವಹಿಸುತ್ತಾರೆ. ಕ್ರಿ.ಶ. ೧೩೪೩ರಿಂದಲೇ ಎರಡನೇ ಕಂಪಣನು ಮುಳುವಾಯಿ ರಾಜ್ಯವನ್ನಾಳುತ್ತಿದ್ದರೆ,[10] ಕ್ರಿ.ಶ. ೧೩೪೫ರಲ್ಲಿ ವಿರುಪಣ್ಣನು ಪೆನುಗೊಂಡೆಯನ್ನಾಳುತ್ತಿರುತ್ತಾನೆ;[11] ಬುಕ್ಕನ ಇನ್ನೊಬ್ಬ ಮಗ - ಕುಮಾರ ಕಂಪನು ಮೈಸೂರು ಪ್ರದೇಶದಲ್ಲಿರುತ್ತಾನೆ[12]. ಕ್ರಿ.ಶ. ೧೩೬೨ರ ಶಾಸನದಂತೆ, ವಂದಗಿರಿ ವಿರುಪಣ್ಣನು ಆರಗರಾಜ್ಯ ಆಳ್ವಿಕೆ ನಡೆಸುತ್ತಿರುತ್ತಾನೆ.[13] ಆನೆಗೊಂದಿ, ಧಾರವಾಡ ಪ್ರದೇಶಗಳು ಒಂದನೇ ಹರಿಹರನ ಮಗ ಸಾವಣ್ಣೊಡೆಯನಿಗೆ ಸೇರಿರುತ್ತದೆ.[14] ಈ ಅವಧಿಯ ಶಾಸನಗಳು ವ್ಯಾಪ್ತಿಪಟ್ಟಿ ಮತ್ತು ನಕ್ಷೆಯನ್ನು ಗಮನಿಸಿದರೆ, ಈ ಎಲ್ಲ ಪ್ರದೇಶಗಳ ಪ್ರಾಚೀನ ಶಾಸನಗಳು ಹರಿಹರ ಅಥವಾ ಬುಕ್ಕರನ್ನೇ ಉಲ್ಲೇಖಿಸಿರುವು ದನ್ನು ಗಮನಿಸಬಹುದು. ಹೀಗಾಗಿ, ಒಂದನೇ ಹರಿಹರ ಮತ್ತು ಬುಕ್ಕರು ಬೇರೆ ಬೇರೆ ಪ್ರದೇಶಗಳಿಗೆ ಹೋಗಿ ಸಂಗಮರ ಆಧಿಪತ್ಯಕ್ಕೆ ಬೇಕಾದ ಸಿದ್ಧತೆ ಮಾಡಿಕೊಂಡು, ನಂತರ ತಮ್ಮ ತಮ್ಮಂದಿರನ್ನು ಅಥವಾ ಅವರ ಮಕ್ಕಳನ್ನು ಈ ಪ್ರದೇಶಗಳ ಆಳ್ವಿಕೆಗೆ ನೇಮಿಸಿದರೆನ್ನಬಹುದು. ಆದರೂ, ದಕ್ಷಿಣ ಕನ್ನಡ ಜಿಲ್ಲೆ ಮಾತ್ರ ಬುಕ್ಕನ ಮೇಲಾಳಿಕೆ ಯಲ್ಲೇ ಇರುತ್ತದೆ; ಇಲ್ಲಿನ ಶಾಸನಗಳಲ್ಲಿ, ಹರಿಹರನ ಒಂದು ಉಲ್ಲೇಖ ಬಿಟ್ಟು, ಉಳಿದೆಲ್ಲವೂ ಬುಕ್ಕನನ್ನೇ ಉಲ್ಲೇಖಿಸಿರುವುದು ಗಮನಾರ್ಹವಾಗಿದೆ.

ಕ್ರಿ.ಶ. ೧೩೩೯-೧೩೬೮ರ ಅವಧಿಯ ಶಾಸನಗಳಲ್ಲಿ ಹೆಚ್ಚಿನವು ಬೆಂಗಳೂರು ಜಿಲ್ಲೆ (೨೫), ದಕ್ಷಿಣ ಕನ್ನಡ ಜಿಲ್ಲೆ (೨೩) ಕೋಲಾರ ಜಿಲ್ಲೆ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ

(ತಲಾ ೧ಲ) ದೊರೆತಿವೆ. ಉಳಿದೆಡೆಗಳಲ್ಲಿ ೧ ರಿಂದ ೫ ಶಾಸನಗಳಿವೆ. ಹೀಗೆ, ದಕ್ಷಿಣ ಕನ್ನಡ ಜಿಲ್ಲೆ, ಹಳೇ ಮೈಸೂರು ರಾಜ್ಯಗಳಲ್ಲೇ ತಮ್ಮ ಆಡಳಿತವನ್ನು ಹೆಚ್ಚು ಕೇಂದ್ರೀಕೃತ ಗೊಳಿಸಿದ್ದು, ಕ್ರಿ.ಶ. ೧೩೬೦ರ ನಂತರ 'ಹೊಯ್ಸಳ ದೇಶದೊಳ ಗಣ...' ಎಂಬ ಉಲ್ಲೇಖವು ದೊರೆಯುವುದಿಲ್ಲ. ಬಹುಶಃ ಕ್ರಿ.ಶ. ೧೩೬೦ರ ನಂತರ, ಕ್ರಿ.ಶ. ೧೩೬೬ರ ಆಸುಪಾಸಿನಲ್ಲಿ ಇವರು ಹೊಯ್ಸಳ ರಾಜ್ಯವನ್ನು ಬಿಟ್ಟು ಹಸ್ತಿನಾ ವತಿಯೆಡೆಗೆ ಪಯಣ ಬೆಳೆಸುತ್ತಾರೆ. ಕ್ರಿ.ಶ. ೧೩೬೬ರ ಹಂಪೆಯ ಶಾಸನವು[15] ಈ ಮಾಹಿತಿ ನೀಡುತ್ತಿದೆ. ಸು.ಕ್ರಿ.ಶ. ೧೩೬ಲರವರೆಗೂ ಈ ಆನೆಗೊಂದಿಯಲ್ಲೇ ಇದ್ದು, ನಂತರ ವಿಜಯನಗರಕ್ಕೆ ಬರುತ್ತಾರೆ.

ಸಂಗಮ ಅರಸರ ಆರಂಭಕಾಲದ (೧೩೩೯-೧೩೬ಲ) ಯಾವುದೇ ಶಾಸನಗಳು ನೇರವಾಗಿ ರಾಜ್ಯ, ರಾಜಧಾನಿಯನ್ನು ಸೂಚಿಸುವುದಿಲ್ಲ; ಬದಲಿಗೆ, 'ಪೃಥ್ವೀರಾಜ್ಯ ವನ್ನಾಳುತ್ತಿದ್ದರು' ಎಂದು ಮಾತ್ರ ಉಲ್ಲೇಖಿಸಿವೆ. ಆದರೂ, ಕ್ರಿ.ಶ. ೧೩೪೩ರ ಶಾಸನ ಗಲ್ಲಿ 'ಕಂಪಣರ ರಾಜ್ಯ ಪ್ರತಿಪಾಲಕ' ಎಂದಿದ್ದರೆ[16] ಕ್ರಿ.ಶ. ೧೩೪೬ರ ಶಾಸನದಲ್ಲಿ[17] 'ವೀರಹರಿಯಪ್ಪವೊಡೆಯರ ವಿಜಯರಾಜ್ಯೋದಯದಂದು' ಎಂದೂ, ಕ್ರಿ.ಶ. ೧೩೫೭ರ ಶಾಸನದಲ್ಲಿ[18] 'ಬುಕ್ಕಣ್ಣವೊಡೆಯರ ವಿಜಯರಾಜ್ಯಾಭ್ಯುದಯದಲ್ಲು' ಎಂದೂ ಹೇಳಿದ್ದು ಗಮನಾರ್ಹವಾಗಿದೆ. ವಿಜಯನಗರಕ್ಕೆ ಬರುವ ಮೊದಲು ಇವರು ಎಲ್ಲಿಂದ ಆಡಳಿತ ನಡೆಸುತ್ತಿದ್ದರು ಎಂಬುದನ್ನು ಗಮನಿಸಬೇಕಾಗುತ್ತದೆ.

ಕ್ರಿ.ಶ. ೧೩೫೩ರಲ್ಲಿ ಬುಕ್ಕರಾಯರು ಬಾರಕೂರು ರಾಜ್ಯವಾಳುತ್ತಿದ್ದರೆಂದು ಶಾಸನ ವೊಂದು[19] ಹೇಳಿದೆ. ಇದು ಸಂಗಮರ ಆಡಳಿತದ ಮುಖ್ಯಸ್ಥಾನವಾದ್ದರಿಂದ ಇಲ್ಲಿಂದಲೇ ಆಡಳಿತ ನಡೆಸುತ್ತಿದ್ದಿರಬಹುದು. ಕ್ರಿ.ಶ. ೧೩೫೪ರ ಹುಣಸನಹಳ್ಳಿ[20] ಮತ್ತು ಚಿತ್ರದುರ್ಗದ[21] ಶಾಸನಗಳ ಪ್ರಕಾರ, ಬುಕ್ಕನು ಹೊಸಪಟ್ಟಣದಿಂದ ರಾಜ್ಯವಾಳುತ್ತಿದ್ದನು. ನಂತರ, ಕ್ರಿ.ಶ. ೧೩೫ಲರಲ್ಲಿ ಬುಕ್ಕರಾಯನು 'ವಿಜಯನಗರ ದಲ್ಲಿ ಪೃಥ್ವೀರಾಜ್ಯ ವಾಳುತ್ತಿದ್ದ'ನೆಂದೂ ಹೇಳಲಾಗಿದೆ.[22] ಕ್ರಿ.ಶ. ೧೩೬೬ರ ಚಂದಾ ಪುರದ ಶಾಸನದಂತೆ[23] ಹರಿಹರಪಟ್ಟಣದ[24] ನೆಲೆವೀಡಿನಿಂದಲೂ, ಹುರಳಿ ಚಿಕ್ಕನಹಳ್ಳಿ ಶಾಸನದಂತೆ[25] ಬಸಪಟ್ಟಣ[26]ದಿಂದಲೂ ಆಡಳಿತ ನಡೆಸುತ್ತಿದ್ದನು. ಕ್ರಿ.ಶ. ೭ರ ಹಂಪೆಯ ಶಾಸನ[27] ಮತ್ತು ಕ್ರಿ.ಶ. ೧೩೬೬ರ ಬನವಾಸಿಯ ಶಾಸನಗಳಂತೆ [28] ಅವರು, ಈ ಅವಧಿಯಲ್ಲಿ ಹಸ್ತಿನಾವತಿಯ ನೆಲೆವೀಡಿನಿಂದಲೂ, ಕ್ರಿ.ಶ. ೧೩೬ಲರ ಶಾಸನ ದಂತೆ[29] ಮುಳುಬಾಗಿಲು ನೆಲೆವೀಡಿನಿಂದಲೂ ರಾಜ್ಯವಾಳುತ್ತಿದ್ದರು. ಹೀಗೆ ಬೇರೆ ಬೇರೆ ಪ್ರದೇಶಗಳಿಂದ ಆಡಳಿತ ನಡೆಸಿ ಹಸ್ತಿನಾವತಿಯಲ್ಲಿ ತಂಗುತ್ತಾರೆ.

ಕ್ರಿ.ಶ. ೧೩೬೬ರ ಹೊತ್ತಿಗೆ ಹಸ್ತಿನಾವತಿಗೆ ಬಂದು ನೆಲೆನಿಂತ ಸಂಗಮರು ಅಲ್ಲಿಂದಲೇ ಕೆಲಕಾಲ ಆಡಳಿತ ನಡೆಸುತ್ತಾರೆ. ಈ ಅವಧಿಯಲ್ಲಿ ಬುಕ್ಕನ ಮಗ

ವಿರುಪಣ್ಣನೂ,[30] ಎರಡು ತಿಂಗಳ ನಂತರ ಅವನ ಮಹಾಪ್ರಧಾನ ಬಸವೆಯ ದಂಣಾಯಕನೂ[31] ಹಂಪೆಯ ವಿರೂಪಾಕ್ಷ ದೇವರಿಗೆ ದಾನ ನೀಡುತ್ತಾರೆ. ಬಹುಶಃ 'ವಿಜಯನಗರ ರಾಜಧಾನಿ'ಯ ನಿರ್ಮಾಣವನ್ನು ಕಾರ್ಯರೂಪಕ್ಕೆ ತರುವ ಆರಂಭದಲ್ಲಿ ಈ ದೇವದಾನಗಳನ್ನು ನೀಡಿರಬೇಕು. ಕ್ರ.ಶ. ೧೩೪೬[32] ಕ್ರಿ.ಶ. ೧೩೫೮[33] ಮತ್ತು ಕ್ರಿ.ಶ. ೧೩೬೦ರ [34]ರ ಶಾಸನಗಳಲ್ಲಿ 'ವಿಜಯನಗರ'ದ ಉಲ್ಲೇಖವಿದ್ದರೂ, ರಾಜಧಾನಿಯಾಗಿ ಅದು ಉಲ್ಲೇಖಿತವಾಗಿರಲಿಲ್ಲ. ಆದ್ದರಿಂದ ಕ್ರಿ.ಶ. ೧೩೬೬ರ ಹೊತ್ತಿಗೆ ವಿಜಯನಗರವೇ ರಾಜಧಾನಿ ಎಂದು ನಿರ್ಧಾರವಾಗಿತ್ತೆಂದೂ, ಅದನ್ನು ನಿರ್ಮಿಸುವ ಉದ್ದೇಶದಿಂದಲೂ ಹಸ್ತಿನಾವತಿ (-ಆನೆಗೊಂದಿ)ಗೆ ಬಂದರೆಂದು ಹೇಳಬಹುದು. ಇದೇ ಅವಧಿಯ ಶಾಸನವೊಂದರಲ್ಲಿ[35] 'ವಿಜಯನಗರ ಮುಖ್ಯವಾದ ಸಮಸ್ತ ಪಟ್ಟಣಾ ಧೀಶ್ವರ ಶ್ರೀ ಅಭಿನವ ಬುಕ್ಕರಾಯ ರಾಜ್ಯಂಗೆಯ್ವಲ್ಲಿ' ಎಂದಿರುವುದನ್ನಿಲ್ಲಿ ನೆನೆಯ ಬಹುದು.

ವಿಜಯನಗರ ರಾಜಧಾನಿ ನಿರ್ಮಾಣವಾದ ಕಾಲವನ್ನೂ, ಅಲ್ಲಿಗೆ ಸಂಗಮ ಅರಸರು ಬಂದ ಅವಧಿಯನ್ನೂ ಇಲ್ಲಿ ಪರಿಗಣಿಸಬಹುದಾಗಿದೆ. ಕ್ರಿ.ಶ. ೧೩೬೮ರಲ್ಲಿ ಸಂಗಮ ಅರಸರ ೮ ಶಾಸನಗಳು ಲಭ್ಯವಿದ್ದು, ಅವುಗಳಲ್ಲಿ ೪ ಶಾಸನಗಳು 'ಪೃಥ್ವೀ ರಾಜ್ಯ ವನ್ನಾಳುತ್ತಿದ್ದ'ರೆಂದು ಹೇಳಿವೆ; ಎರಡು ಶಾಸನಗಳು 'ಹಸ್ತಿನಾವತೀಪುರ'- ದಿಂದ ಆಳುತ್ತಿದ್ದರೆಂದು ಹೇಳಿದ್ದು, ಅದರಲ್ಲಿ ಒಂದರ ಕಾಲ - ಕ್ರಿ.ಶ. ೧೩೬೮, ಮೇ ೧೭[36] ಅಂದರೆ, ಅಲ್ಲಿಯವರೆಗೂ ಸಂಗಮರು ಹಸ್ತಿನಾವತಿಯಲ್ಲೇ ಇದ್ದರೆಂದು ಹೇಳ ಬಹುದು.[36ಎ] ಕ್ರಿ.ಶ. ೧೩೬೮ರ ಶ್ರವಣಬೆಳಗೊಳದ ಬುಕ್ಕರಾಯನ ಶಾಸನ ವನ್ನಿಲ್ಲಿ ಗಮನಿಸಬಹುದು. ಇದರಲ್ಲಿ ಹೊಸಪಟ್ಟಣ, ಪೆನುಗೊಂಡೆ, ಕಲ್ಯ, ಆನೆಗೊಂದಿ - ಈ ಎಲ್ಲ ನಾಡುಗಳ ಉಲ್ಲೇಖವಿದೆ. ಈ ಶಾಸನದಲ್ಲಿ 'ರಾಜಾಧಿರಾಜ'ನೆಂಬ ಬಿರುದಾಗಲೀ, 'ವಿಜಯನಗರ'ದ ಉಲ್ಲೇಖವಾಗಲೀ ಇಲ್ಲ. ಆದರೆ, ಈ ಶಾಸನದಂತೆ, ನಾಡಿನ ಜನರು ತಮಗಾದ ಅನ್ಯಾಯಕ್ಕೆ ಪರಿಹಾರವನ್ನು ಬಯಸಿ ಬುಕ್ಕನ ಬಳಿ ಬಂದಿರುವುದರಿಂದ ಅವನು ರಾಜಾಧಿರಾಜನೆಂಬುದೂ ರಾಜ್ಯದ ಆಸ್ಥಾನ ಪ್ರದೇಶವೂ ನಿಶ್ಚಯವಾಗಿ ಎಲ್ಲರಿಗೂ ತಿಳಿದಿತ್ತು ಎಂಬುದೂ ಅರ್ಥವಾಗುತ್ತದೆ. ಈ ಶಾಸನದ ಕಾಲ, ಕ್ರಿ.ಶ. ೧೩೬೮, ಆಗಸ್ಟ್ ೨೪. ಅಂದರೆ, ಈ ಹೊತ್ತಿಗೆ ರಾಜಧಾನಿ ನಿರ್ಮಾಣವಾಗಿತ್ತೆಂದು ಹೇಳಬಹುದು.

'ಬುಕ್ಕರಾಯನ ವಿಜಯನಗರ ಪಟ್ಟಣದ...' ಎಂಬ ಶಾಸನಗಳಿಂದಲೂ ಬುಕ್ಕನ ಕಾಲಕ್ಕೇ ವಿಜಯನಗರ ನಿರ್ಮಾಣವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಈ ಶ್ರವಣಬೆಳಗೊಳ ಶಾಸನ ಕಾಲದ ಎರಡು ತಿಂಗಳ ನಂತರದ ಹಾರೋಮುಚ್ಚಡಿ ಅಗ್ರಹಾರದ ಶಾಸನವು[38] ಇದನ್ನು ದೃಢೀಕರಿಸುತ್ತದೆ. ಈ ಶಾಸನವು 'ಮಹಾರಾಜಾಧಿ ರಾಜ ಪರಮೇಶ್ವರಸ್ಯ ಪೂರ್ವ ದಕ್ಷಿಣ ಪಶ್ಚಿಮ ಸಮುದ್ರಾಧಿಪತೇರ್ವ್ವಸುಂಧರಾ

ವಧೂರಾ ಕಂಠಾಯಿತಾ... ಹೇಮಕೂಟಾದ್ರಿ ಪರಿಸರ ಪರಿಷ್ಕಾರಿತುಂಗಭದ್ರೋದಾರ ಮುಕ್ತಹಾರ ಮಧ್ಯಾನಾಯಕ ರತ್ನಾಯಮಾನಾಭಿನವ ವಿಜಯನಗರ ಸಿಂಹಾಸನ ಶಿಖರಾಧಿರೋಹ ಕೌತೂಹಳ ಶ್ರೀ ವೀರಬುಕ್ಕರಾಜ್ಯಸ ವಿಕ್ರಮ' ಎಂದಿದೆ. 'ವಿಜಯ ನಗರ ಸಿಂಹಾಸನ' ಎಂದಿರುವುದರಿಂದ ಈ ಮೊದಲೇ ಇಲ್ಲಿ ರಾಜಧಾನಿ ನಿರ್ಮಾಣ ವಾಗಿತ್ತೆಂದು ನಿಸ್ಸಂಶಯವಾಗಿ ಹೇಳಬಹುದು. ಅಂದರೆ, ಹಿಂದೆಯೇ ಹೇಳಿದ ಶಾಸನದಂತೆ, ಕ್ರಿ.ಶ. ೧೩೬೮ ಮೇ ೧೭ ಮತ್ತು ಕ್ರಿ.ಶ. ೧೩೬೮, ಆಗಸ್ಟ್ ೨೪- ಈ ನಡುವಿನ ಕಾಲದಲ್ಲಿ ರಾಜಧಾನಿ ನಿರ್ಮಾಣವಾಗಿ[38ಎ] ಸಂಗಮ ಅರಸರು ವಿಜಯ ನಗರಕ್ಕೆ ಬಂದರೆಂದು ಖಚಿತವಾಗಿ ಹೇಳಬಹುದು.[39] ಇದರೊಂದಿಗಿರುವ, ಶಾಸನಗಳ ಕಾಲಾನು ಕ್ರಮ ಪಟ್ಟಿ ಮತ್ತು ನಕ್ಷೆಯನ್ನು ಗಮನಿಸಿದರೆ, ಸಂಗಮ ಅರಸರ ಪಯಣದ ಮಾರ್ಗ ಮತ್ತು ಪಯಣದ ಕಾಲವು ಸ್ಪಷ್ಟವಾಗಿ ತಿಳಿಯುತ್ತದೆ.

ಶಾಸನಗಳಲ್ಲಿ 'ವಿಜಯನಗರ'ವನ್ನು ಪಟ್ಟಣ, ರಾಜಧಾನಿ, ರಾಜ್ಯ, ಸಾಮ್ರಾಜ್ಯ- ಈ ಎಲ್ಲಾ ಅರ್ಥಗಳಲ್ಲಿ ಪ್ರಯೋಗಿಸಲಾಗಿದೆ. ವಿಜಯಗರ ರಾಜಧಾನಿ,[40] ಎಂದು ವಿಜಯನಗರ ಸಿಂಹಾಸನ[41] ಎಂದು ಉಲ್ಲೇಖಗೊಂಡಂತೆ, ವಿಜಯನಗರ ರಾಜ್ಯ[42] ವಿಜಯನಗರ ಸಾಂಬ್ರಾಜ್ಯ,[43] ವಿಜಯ ಸಾಂಬ್ರಾಜ್ಯ[44] ಎಂದೂ ಉಲ್ಲೇಖ ಗೊಂಡಿದೆ. ಇದರೊಂದಿಗೆ ಕರ್ಣಾಟಕ ರಾಜ್ಯ,[45] ಕರ್ನಾಟಕ ಸಿಂಹಾಸನ[46], ಕರ್ನಾಟಕ ಮಂಡಲ, ಕರ್ನಾಟಕ ದೇಶ[47] ಮುಂತಾದ ಉಲ್ಲೇಖಗಳೂ ಇವೆ. ಆದರೆ, ಈ ಸಾಮ್ರಾಜ್ಯದ ಹೆಸರು 'ಕರ್ನಾಟಕ'ವೆಂದು ಕೆಲವು ಶಾಸನಗಳಲ್ಲಿ ಮಾತ್ರ ಉಲ್ಲೇಖ ಗೊಂಡಿದ್ದು, ಹೆಚ್ಚಿನ ಶಾಸನಗಳು 'ವಿಜಯನಗರ ಸಾಮ್ರಾಜ್ಯ'ವೆಂದೇ ದಾಖಲಿಸಿವೆ. ಹೀಗಾಗಿ, 'ವಿಜಯನಗರ' ವೆಂಬುದು ರಾಜಧಾನಿಯ ಹೆಸರು ಮಾತ್ರವಾಗಿರದೆ, ಸಾಮ್ರಾಜ್ಯದ ಹೆಸರೂ ಆಗಿ ಉಳಿಯಿತೆಂಬುದು ಗಮನಾರ್ಹ ಅಂಶವಾಗಿದೆ.

ಸಂಗಮ ಅರಸರ ಪಯಣ - ಶಾಸನಗಳ ಕಾಲಾನುಕ್ರಮ ಪಟ್ಟಿ ಮತ್ತು ನಕ್ಷೆ

ಕ್ರ.ಸಂ.	ಕಾಲ (ಕ್ರಿ.ಶ)	ಸ್ಥಳ	ತಾಲೂಕು	ಉಲ್ಲೇಖಿತರು/ಸ್ಥಳ
1.	೧೩೩೯	ಕುಗ್ವೆ	ಸಾಗರ	ಹರಿಹರ
2.	೧೩೪೦	ದೊಡ್ಡಕನ್ನಲ್ಲೆ	ಬೆಂಗಳೂರು	ಹರಿಹರ
3.	೧೩೪೦	ಬಾಣಸವಾಡಿ	ಬೆಂಗಳೂರು	ಹರಿಹರ
4.	೧೩೪೦	ತಟ್ಟುಕೋಟೆ	ಬೀಳಗಿ	ಹರಿಹರ
5.	೧೩೪೧	ಬೀಚೇನಹಳ್ಳಿ	ಮಂಡ್ಯ	ಬುಕ್ಕ
5ಎ.	೧೩೪೩	ತೇಕಲ್ಲು	ಮುಳಬಾಗಿಲು	ಕಂಪ (ಬುಕ್ಕನ ಎರಡನೇ ಮಗ)

6.	೧೩೪೪	ಕೈವಾರ	ಚಿಂತಾಮಣಿ	ಬುಕ್ಕ
6ಎ.	೧೩೪೪	ಚಪ್ಪರದಹಳ್ಳಿ	ಪಿರಿಯಾಪಟ್ಟಣ	ಹರಿಹರ
7.	೧೩೪೫	ಅತ್ತಾವರ	ಮಂಗಳೂರು	ಬುಕ್ಕ
8.	೧೩೪೬	ಶೃಂಗೇರಿ	ಶೃಂಗೇರಿ	ಹರಿಹರ ಮತ್ತು ಸೋದರರು
9.	೧೩೪೬	ಸಾದರಮಂಗಲ	ಬೆಂಗಳೂರು	ಹರಿಹರ ಮತ್ತು ಬುಕ್ಕ
10.	೧೩೪೬	ಮೈಲಪ್ಪನಹಳ್ಳಿ	ದೊಡ್ಡಬಳ್ಳಾಪುರ	ಹರಿಹರ
11.	೧೩೪೬	ಹಳೇಪಾಳ್ಯ	ಮಾಲೂರು	ಹರಿಹರ ಮತ್ತು ಮುತ್ತಣ (=ಮುದ್ದಪ)
12.	೧೩೪೬	ತೃಣಸಿ	ಮಾಲೂರು	ಹರಿಹರ
13.	೧೩೪೬	ಚಟ್ನಕೊಡಗಿ	ತೀರ್ಥಹಳ್ಳಿ	ಹರಿಹರ
14.	೧೩೪೬	ಕೊಪ್ಪಳ	ಕೊಪ್ಪಳ	ಹರಿಹರ
15.	೧೩೪೭	ದೊಮ್ಮಲೂರು	ಮಾಲೂರು	ಹರಿಹರ
16.	೧೩೪೭	ಕ್ಯಾತಮಾರನಹಳ್ಳಿ	ಬೆಂಗಳೂರು	ಹರಿಹರ ಮತ್ತು ಬುಕ್ಕ
17.	೧೩೪೭	ಹೊಲಿಯನಕೆರೆ	ಬೆಂಗಳೂರು	ಹರಿಹರ
18.	೧೩೪೮	ಕಾಂತಾವರ	ಕಾರ್ಕಳ	ಹರಿಹರ (ಮಂಗಲೂರ ರಾಜ್ಯ)
19.	೧೩೪೮	ಬೊಮ್ಮನಹಳ್ಳಿ	ನೆಲಮಂಗಲ	ಬುಕ್ಕ
20.	೧೩೪೮	ಕಟಿಗೇನಹಳ್ಳಿ	ದೇವನಹಳ್ಳಿ	ಹರಿಹರ ಮತ್ತು ಬುಕ್ಕ
21.	೧೩೪೯	ಕಂಚಿಗಾನ್	ಕುಂದಾಪುರ	ಬುಕ್ಕ
22.	೧೩೪೯	ಆನೆಗೊಂದಿ	ಗಂಗಾವತಿ	ಹರಿಹರನ ಮಗ ಸಾವಣ್ಣೊಡೆಯ

23.	೧೩೫೦	ಕೆಸರೆ	ತೀರ್ಥಹಳ್ಳಿ	ಬುಕ್ಕರಾಯ
24.	೧೩೫೦	ಆರಗ	ತೀರ್ಥಹಳ್ಳಿ	ಹರಿಹರ
25.	೧೩೫೦	ಐಜೂರು	ಚನ್ನಪಟ್ಟಣ	ಬುಕ್ಕ
26.	೧೩೫೧	ಎಡಮಾರನಹಳ್ಳಿ	ಕನಕಪುರ	ಬುಕ್ಕ
27.	೧೩೫೧	ಮುಳಬಾಗಲು	ಮುಳಬಾಗಲು	ಹರಿಹರ
28.	೧೩೫೧	ಎಡಹಳ್ಳಿ	ಕೋಲಾರ	ಕಂಪ (ಬುಕ್ಕನ ಎರಡನೇ ಮಗ)
29.	೧೩೫೧-೨	ಮುಳಬಾಗಲು	ಮುಳಬಾಗಲು	ಹರಿಹರ
30.	೧೩೫೨	ಬಾಗವಾಳು	ಅರಸೀಕೆರೆ	ಕುಮಾರ ಕಂಪಣ್ಣ (-ಕಂಪಣ) (ಬುಕ್ಕನ ಮೊದಲನೇ ಮಗ)
31.	೧೩೫೧-೨	ಮಲದೇವನಹಳ್ಳಿ	ಚಾಮರಾಜನಗರ	ಬುಕ್ಕ
32.	೧೩೫೩	ಕೋಟೇಶ್ವರ	ಕುಂದಾಪುರ	ಬುಕ್ಕ
33.	೧೩೫೩	ಲಕ್ಷ್ಮೇಶ್ವರ	ಶಿರಹಟ್ಟಿ	ಸಾವಣ್ಣೊಡೆಯ (ಹರಿಹರನ ಮಗ)
34.	೧೩೫೩	ನಡೂರು	ಉಡುಪಿ	ಬುಕ್ಕರಾಯ (ಬಾರಕೂರು ರಾಜ್ಯ)
35.	೧೩೫೩	ಹಿರೇಆದಲಿ	ಸೊರಬ	ಹರಿಹರ
36.	೧೩೫೪	ಹುಣಸನಹಳ್ಳಿ	ಗೌರಿಬಿದನೂರು	ಬುಕ್ಕ (ಹೊಸಪಟ್ಟಣ)
37.	೧೩೫೪	ಹಿರೇಆವಲಿ	ಸೊರಬ	ಹರಿಹರ

38.	೧೩೫೪	ಕಾಮಗೆರೆ	ಕೊಳ್ಳೇಗಾಲ	ಕಂಪಣ್ಣ (ಬುಕ್ಕನ ಮೊದಲನೇ ಮಗ)
39.	೧೩೫೪	ಹಿರಿಯೂರು	ತಿ.ನ.ಪುರ	ಬುಕ್ಕ
40.	೧೩೫೫	ಬನ್ನೇರುಘಟ್ಟ	ಆನೇಕಲ್	ಬುಕ್ಕ
40ಎ	೧೩೫೫	ಚಿತ್ರದುರ್ಗ	ಚಿತ್ರದುರ್ಗ	ಬುಕ್ಕ (ಹೊಸಪಟ್ಟಣ)
41.	೧೩೫೫	ಜಾಲಮಂಗಲ	ಚನ್ನಪಟ್ಟಣ	ಬುಕ್ಕ
42.	೧೩೫೬	ದೋಮಸಂದ್ರ	ಕೋಲಾರ	ಕಂಪ (ಬುಕ್ಕನ ಎರಡನೇ ಮಗ)
43.	೧೩೫೬	ಶೃಂಗೇರಿ	ಶೃಂಗೇರಿ	ಬುಕ್ಕ
44.	೧೩೫೬	ಬೈಂದೂರು	ಕುಂದಾಪುರ	-
45.	೧೩೫೬	ಚಿತ್ರದುರ್ಗ	ಚಿತ್ರದುರ್ಗ	ಬುಕ್ಕ
46.	೧೩೫೭	ಕೋಟೇಶ್ವರ	ಕುಂದಾಪುರ	ಬುಕ್ಕ
47.	೧೩೫೭	ಶಂಕರನಾರಾಯಣ	ಕುಂದಾಪುರ	ಬುಕ್ಕ
48.	೧೩೫೭	ರುದ್ರಪಟ್ಟಣ	ಅರಕಲಗೂಡು	ಬುಕ್ಕ
49.	೧೩೫೭	ಹೊಸಾಳ	ಉಡುಪಿ	ಬುಕ್ಕ
50.	೧೩೫೮	ಬುಳ್ಳಹಳ್ಳಿ	ದೇವನಹಳ್ಳಿ	ಬುಕ್ಕ
51.	೧೩೫೮	ಕಣ್ಣಗಾಲ	ಆಲೂರು	ಬುಕ್ಕ
52.	೧೩೫೮	ಕೆಂಜೂರು	ಉಡುಪಿ	ಬುಕ್ಕ
53.	೧೩೫೮	ಕೊಡೇರಿ	ಕುಂದಾಪುರ	ಬುಕ್ಕ
54.	೧೩೫೮	ಅರುವನಹಳ್ಳಿ	ಮದ್ದೂರು	ಬುಕ್ಕ
55.	೧೩೫೯	ದೇವವೃಂದ	ಮೂಡಗೆರೆ	ಬುಕ್ಕ
56.	೧೩೫೯	ಹುರಳಿಚಿಕ್ಕನಹಳ್ಳಿ	ನೆಲಮಂಗಲ	ಬುಕ್ಕ (ಬಸಪಟ್ಟಣ)

57.	೧೩೫೯	ಮಡಿವಾಳ	ಬೌರಿಂಗ್‌ಪೇಟೆ	ಬುಕ್ಕ
58.	೧೩೫೯-೬೦	ಬಾರಕೂರು	ಉಡುಪಿ	ಬುಕ್ಕ
59.	೧೩೫೯	ಚಂದಾಪುರ	ಬೇಲೂರು	ಬುಕ್ಕ (ಹರಿಹರ ಪಟ್ಟಣ)
60.	೧೩೫೯	ಕೋಣಂದೂರು	ತೀರ್ಥಹಳ್ಳಿ	ಬುಕ್ಕ ಮತ್ತು ವಿರುಪಂಣ
61.	೧೩೫೯	ಮಾಂಬಳ್ಳಿ	ಯಳಂದೂರು	ಕಂಪ (ಬುಕ್ಕನಮಗ)
62.	೧೩೫೯-೬೦	ದಾಸನಪುರ (ಬುಕ್ಕನಮಗ)	ಕೊಳ್ಳೇಗಾಲ	ಕಂಪ
63.	೧೩೫೯-೬೧	ಕಟ್ಲೆತಲ	ಪುತ್ತೂರು	ಬುಕ್ಕ
64.	೧೩೬೦	ಸಕ್ಕರೆಪಟ್ಟಣ	ಕಡೂರು	ಬುಕ್ಕ (ಹೊಸಪಟ್ಟಣ)
65.	೧೩೬೦	ರಾಯಪ್ಪಳ್ಳಿ	ಚಿಂತಾಮಣಿ	ಬುಕ್ಕ
66.	೧೩೬೦	ಮುದಕೇರಿ	ಉಡುಪಿ	ಬುಕ್ಕ
67.	೧೩೬೦	ಬಾರಕೂರು	ಉಡುಪಿ	ಬುಕ್ಕ
68.	೧೩೬೦	ಪಾಳ್ಯ	ಆಲೂರು	ಬುಕ್ಕ
69.	೧೩೬೦	ಬೈಂದೂರು	ಕುಂದಾಪುರ	ಬುಕ್ಕ
70.	-	ಪದುವರಿ	ಕುಂದಾಪುರ	ಬುಕ್ಕ
71.	೧೩೬೦	ಹಳ್ಳಿಹಾಳು	ದಾವಣಗೆರೆ	ಬುಕ್ಕ
72.	೧೩೬೧	ಕೋನಪ್ಪನ ಅಗ್ರಹಾರ	ಬೆಂಗಳೂರು	ಹರಿಹರ
73.	೧೩೬೧	ಶೀತಿ	ಕೋಲಾರ	ಕಂಪ (ಬುಕ್ಕನ ಮಗ)
74.	೧೩೬೧	ಚಿಕ್ಕಪುರ	ಕೋಲಾರ	ಕಂಪ (ಮುಳಬಾಗಿಲ ಪಟ್ಟಣ) (ಬುಕ್ಕನ ಮಗ)

75.	೧೩೬೨	ಕೈವಾರ	ಚಿಂತಾಮಣಿ	ಕಂಪ (ಬುಕ್ಕನ ಮಗ)
76.	೧೩೬೨	ಬನ್ನೇರುಘಟ್ಟ	ಆನೇಕಲ್	ಬುಕ್ಕ
77.	೧೩೬೨	ಬೆಟ್ಟಮಕ್ಕೆ	ತೀರ್ಥಹಳ್ಳಿ	ವಿರೂಪಾಕ್ಷ (ಬುಕ್ಕನ ಮಗ)
78.	೧೩೬೨	ಕವಲೇದುರ್ಗ	ತೀರ್ಥಹಳ್ಳಿ	ವಿರುಪಣ್ಣ (ಅರಗರಾಜ್ಯ) (ಬುಕ್ಕನಮಗ)
79.	೧೩೬೨	ಆವನಿ	ಮುಳಬಾಗಿಲು	ಕಂಪ
80.	೧೩೬೨	ಅಗರ	ಬೆಂಗಳೂರು	ಕಂಪ (ಮುಳಬಾಗಿಲ ಪಟ್ಟಣ)
81.	೧೩೬೩-೬೪	ಕಚ್ಚೂರು	ಉಡುಪಿ	ಬುಕ್ಕ
82.	೧೩೬೩	ಬೆಂಕಿಕೆರೆ	ತಿಪಟೂರು	ಬುಕ್ಕ
83.	೧೩೬೩	ಅಗರ	ಬೆಂಗಳೂರು	ಕಂಪ (ಮುಳಬಾಗಿಲ ಪಟ್ಟಣ)
84.	೧೩೬೩	ಕಣದೆ	ತೀರ್ಥಹಳ್ಳಿ	ವಿರುಪಂಣ (ಮಲೆರಾಜ್ಯ) (ಬುಕ್ಕನ ಮಗ)
85.	೧೩೬೩	ಬೊಪ್ಪಸಂದ್ರ	ಮದ್ದೂರು	ಬುಕ್ಕ
86.	೧೩೬೩	ಹರದನಹಳ್ಳಿ	ಚಾಮರಾಜನಗರ	ಬುಕ್ಕ
87.	೧೩೬೪	ಬಂಟ್ವಾಳ್ಕುದ	ಮಂಗಳೂರು	ಬುಕ್ಕ
88.	೧೩೬೪	ಕುಂದಾಪುರ	ಕುಂದಾಪುರ	ಬುಕ್ಕ
89.	೧೩೬೪	ಬನ್ನೇರುಘಟ್ಟ	ಆನೇಕಲ್	ಬುಕ್ಕ
90.	೧೩೬೫	ಬಾರಕೂರು	ಉಡುಪಿ	ಬುಕ್ಕ
91.	೧೩೬೫	ಮಡಿವಾಳ	ಬೆಂಗಳೂರು	ಕಂಪ

92.	೧೩೬೫	ಕೋಟೇಶ್ವರ	ಕುಂದಾಪುರ	ಬುಕ್ಕ
93.	೧೩೬೫	ಕೋಟೇಶ್ವರ	ಕುಂದಾಪುರ	ಬುಕ್ಕ
94.	೧೩೬೬	ಉಡುಪಿ	ಉಡುಪಿ	ಬುಕ್ಕ
95.	೧೩೬೬	ಸಂಡ	ಶಿಕಾರಿಪುರ	ವಿರುಪಂಣ (ಬುಕ್ಕನಮಗ)
96.	೧೩೬೬	ಚಟ್ಟನಹಳ್ಳಿ	ಹಿರೇಕೆರೂರು	"
97.	೧೩೬೬?	ಬುಸ್ಸೇನಹಳ್ಳಿ	ಕೋಲಾರ	ಕಂಪ
98.	೧೩೬೬?	ಹಿರೇಆವಲಿ	ಸೊರಬ	ಬುಕ್ಕ (ವಿಜಯನಗರ)
99.	೧೩೬೬	ಹಂಪೆ	ಹೊಸಪೇಟೆ	ಬುಕ್ಕ (ಹಸ್ತಿನಾವತಿ)
100.	೧೩೬೬	ಮೋಡಳ್ಳಿ	ಕೊಳ್ಳೇಗಾಲ	ಕಂಪ
101.	೧೩೬೬	ಬಾಗಳಿ	ಹ್ಡರಪನಹಳ್ಳಿ	ವಿರುಪಂಣ (ಬುಕ್ಕನಮಗ)
102.	೧೩೬೭	ಕೆಲ್ಲಂಗೆರೆ	ಅರಸೀಕೆರೆ	ಬುಕ್ಕ
103.	೧೩೬೭	ಅಜ್ಜನಹಳ್ಳಿ	ಮಾಗಡಿ	ಬುಕ್ಕ
104.	೧೩೬೭	ಕಿತಗನೂರು	ದೇವನಹಳ್ಳಿ	ಬುಕ್ಕ
105.	೧೩೬೭	ಅರಳುಮಲ್ಲಿಗೆ	ದೊಡ್ಡಬಳ್ಳಾಪುರ	ಬುಕ್ಕ
106.	೧೩೬೭	ಮೂಗೂರು	ತಿ.ನ.ಪುರ	ಬುಕ್ಕ
107.	೧೩೬೭	ಕೋಡೂರು	ನಗರ	ವಿರುಪರಾಯ (ಬುಕ್ಕನಮಗ)
108.	೧೩೬೭	ಕೊಂಡಜ್ಜಿ	ದಾವಣಗೆರೆ	ಬುಕ್ಕ
109.	೧೩೬೭	ಗವಿಮಠ	ಕೋಲಾರ	ವೀರರಾಜೇಂದ್ರ ವೊಡೆಯ (ಬುಕ್ಕನ ಮಗ)
110.	೧೩೬೭	ಕೋಡಿಹಳ್ಳಿ	ಮಾಲೂರು	ಬುಕ್ಕ (ಮುಳುವಾಯಿ)

111.	೧೩೬೮	ಬನವಾಸಿ	ಸಿರ್ಸಿ	ಬುಕ್ಕ (ಹಸ್ತಿನಾವತೀ)
112.	೧೩೬೮	ತಿಂಡ್ಲು	ಬೆಂಗಳೂರು	ಬುಕ್ಕ
113.	೧೩೬೮	ಹರದನಹಳ್ಳಿ	ಚಾಮರಾಜನಗರ	ಬುಕ್ಕ
114.	೧೩೬೮	ಬನವಾಸಿ	ಸಿರ್ಸಿ	ಬುಕ್ಕ (ಹಸ್ತಿನಾವತಿ)
115.	೧೩೬೮	ಮಾಗಡಿ / ಶ್ರವಣಬೆಳಗೊಳ		ಬೆಂಗಳೂರು, ಚ.ರಾ.ಪಟ್ನ ಬುಕ್ಕ
116.	೧೩೬೮	ಹಾರೋಮುಚ್ಚಡಿ	ಅಗ್ರಹಾರ ಶಿಕಾರಿಪುರ	ಬುಕ್ಕ (ವಿಜಯನಗರ ಮಹಾ ಸಿಂಹಾಸನ)
117.	೧೩೬೮	ಮೆಟ್ಲಗೋಡು	ತೀರ್ಥಹಳ್ಳಿ	ವಿರುಪಂಣ (ಬುಕ್ಕನಮಗ)
118.	೧೩೬೮	ಕಲ್ಲಾಲ	ತೀರ್ಥಹಳ್ಳಿ	ಸೋವಣ್ಣಾ ವೊಡೆಯ (ಮಾರಪ್ಪನ ಮಗ)
119.	೧೩೬೮-೬೯	ಅರಸೀಕೆರೆ	ಅರಸೀಕೆರೆ	ಬುಕ್ಕ

ಅಡಿ ಟಿಪ್ಪಣಿಗಳು

1. ಮೈ. ಆ.ರಿ. 1923, ಸಾಗರ 78 (ಕುಗ್ವೆ) ಕ್ರಿ.ಶ. 1339
   ವಿವರಗಳಿಗೆ ನೋಡಿ : "ಕೂ.ಸ. ಅಪರ್ಣ -" ಸಂಗಮ ಅರಸರ ಪ್ರಾಚೀನ ಶಾಸನಗಳು, ಗೋಪಲ್ ಆರ್. ಮತ್ತಿತರರು ಸಂ. ವಿಜಯನಗರ ಅಧ್ಯಯನ.
   ಸಂ. 11, ಮೈಸೂರು, 2006, ಪು 23-35
2. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - III ಪ್ರಸ್ತಾವನೆ, ಪು. XXVIII
3. ಇಂ. ಆ್ಯಂ. X (1881) ಬೀಳಗಿ 87, ಪು. 63 (ತಟ್ಟುಕೋಟೆ) - ಕ್ರಿ.ಶ. 1340
4. ಎ.ಕ. XVII ಮಾಲೂರು 199 (ತೇಕಲ್ಲು) (ತಮಿಳು) - ಕ್ರಿ.ಶ 1343

5. ಇಂ. ಆ್ಯಂ. X (ಪೂರ್ವೋಕ್ತ) ಮತ್ತು ಎ.ಕ. XI (ಪ) ಶೃಂಗೇರಿ - 1, (ಶೃಂಗೇರಿ) ಕ್ರಿ.ಶ. 1346.
6. ಎ.ಕ. IV (ಪ) ಚಾಮರಾಜನಗರ 227 (ಮಲದೇವನಹಳ್ಳಿ) ಕ್ರಿ.ಶ. 1351-52?
7. ಎ.ಕ. X (ಪ) ಅರಸಿಕೆರೆ. 194 (ಬಾಗವಾಳು) - ಕ್ರಿ.ಶ. 1352
8. ಎ.ಕ. VII (ಪ) ಮದ್ದೂರು. 93 (ಅರುವನಹಳ್ಳಿ) - ಕ್ರಿ.ಶ. 1358
9. ಎ.ಕ. XI (ಪ) ಶೃಂಗೇರಿ9 (ಶೃಂಗೇರಿ) - ಕ್ರಿ.ಶ. 1356
10. ಎ.ಕ. XVII ಮಾಲೂರು 199. (ತೇಕಲ್ಲು) (ತಮಿಳು)- ಕ್ರಿ.ಶ. 1343
11. ಮೈ. ಆ.ರಿ. 1925 ಗೌರಿಬಿದನೂರು 84 (ಹುಣಸನಹಳ್ಳಿ)- ಕ್ರಿ.ಶ. 1354
12. ಎ.ಕ. IV (ಪ) ಕೊಳ್ಳೇಗಾಲ 62 (ಮೋಡಳ್ಳಿ) - ಕ್ರಿ.ಶ. 1354
13. ಎ.ಕ. VIII ತೀರ್ಥಹಳ್ಳಿ 37 (ಕವಲೆದುರ್ಗ) - ಕ್ರಿ.ಶ. 1362
14. ಕವಿಶಾಸಂ II. ಗಂಗಾವತಿ 28 (ಪ) (ಆನೆಗೊಂದಿ) - ಕ್ರಿ.ಶ. 1349 ಮತ್ತು ಆ.ರಿ. ಸೌ. ಇಂ.ಎ. 1958 - 59 (ಶಿರಹಟ್ಟಿ) ಬಿ. 613 (ಲಕ್ಷ್ಮೇಶ್ವರ) - ಕ್ರಿ.ಶ. 1352
15. ಕವಿಶಾಸಂ III - (ಹೊಸಪೇಟೆ). 251 (ಹಂಪೆ) - ಕ್ರಿ.ಶ. 1366
16. ಎ.ಕ. XVII ಮಾಲೂರು 16 (ತೇಕಲ್ಲು) (ತಮಿಳು) - ಕ್ರಿ.ಶ. 1343
17. ಎ.ಕ. VII ತೀರ್ಥಹಳ್ಳಿ 154 (ಚಟ್ನಕೊಡಗಿ) - ಕ್ರಿ.ಶ. 1346
18. ಸೌ.ಇಂ.ಇನ್. - IX - ಭಾಗ - 2 (ಕುಂದಾಪುರ) 405 (ಶಂಕರನಾರಾಯಣ) - ಕ್ರಿ.ಶ. 1357
19. ಆ.ರಿ. ಸೌ. - ಇಂ. ಎ. 1931 - 32 (ಉಡುಪಿ) - ಬಿ. 314 (ನಡೂರು) - ಕ್ರಿ.ಶ. 1353
20. ಮೈ. ಆ.ರಿ. 1925 - ಗೌರಿಬಿದನೂರು. 84 (ಹುಣಸನಹಳ್ಳಿ) - ಕ್ರಿ.ಶ. 1354
21. ಎ.ಕ. XI ಚಿತ್ರದುರ್ಗ 2 (ಚಿತ್ರದುರ್ಗ) - ಕ್ರಿ.ಶ. 1358
22. ಎ.ಕ. VIII (ಪ) ಆಲೂರು - 14 (ಕಣ್ಣಗಾಲ) - ಕ್ರಿ.ಶ. 1358
23. ಎ.ಕ. IX (ಪ) ಬೇಲೂರು 519 (ಚಂದಾಪುರ) - ಕ್ರಿ.ಶ. 1359
24. ಈ ಹರಿಹರಪಟ್ಟಣವು ಕೊಪ್ಪ ತಾಲೂಕಿನ ಹರಿಹರಪುರವಾಗಿರಬೇಕು.
25. ಎ.ಕ. IX ನೆಲಮಂಗಲ 23 (ಹುರಳಿಚಿಕ್ಕನಹಳ್ಳಿ) - ಕ್ರಿ.ಶ. 1359
26. ಈ ಬಸಪಟ್ಟಣವು ಶಿವಮೊಗ್ಗ ಮತ್ತು ದಾವಣಗೆರೆ ಮಧ್ಯದ ಈಗಿನ ಬಸವಾಪಟ್ಟಣ ವಿರಬಹುದು.
27. ಕವಿಶಾಸಂ. III (ಹೊಸಪೇಟೆ) 251 (ಹಂಪೆ) - ಕ್ರಿ.ಶ. 1366
28. ಎಂ.ಎ.ಆರ್. 1923 (ಸಿರ್ಸಿ) 116 (ಬನವಾಸಿ) - ಕ್ರಿ.ಶ. 1368
29. ಎ.ಕ. X ಮಾಲೂರು 79 (ಕೋಡಿಹಳ್ಳಿ) (ತಮಿಳು) - ಕ್ರಿ.ಶ. 1367

30. ಎಂ.ಎ.ಆರ್. 1927 (ಶಿಕಾರಿಪುರ) 139 (ಸಂಹ) - ಕ್ರಿ.ಶ. 1366

31. ಕವಿಶಾಸಂ III (ಹೊಸಪೇಟೆ) 251 (ಹಂಪೆ) - ಕ್ರಿ.ಶ. 1366

32. ಎ.ಕ. VIII ತೀರ್ಥಹಳ್ಳಿ 154 (ಚಟ್ನಕೊಡಗಿ)- ಕ್ರಿ.ಶ. 1346

33. ಎ.ಕ. VIII (ಪ) ಆಲೂರು. 14 (ಕಣ್ಣಗಾಲ) - ಕ್ರಿ.ಶ. 1358

34. ಸೌ.ಇಂ.ಎನ್. VII (ಉಡುಪಿ) 322 (ಮುದಕೇರಿ) ಮತ್ತು 329 (ಬಾರಕೂರು)- ಕ್ರಿ.ಶ. 1360

35. ಎ.ಕ. VIII ಸೊರಬ. 102 (ಹಿರೇ ಆವಲಿ) - ಕ್ರಿ.ಶ. 1366

36. ಮೈ. ಆ.ರಿ. 1929 (ಸಿರ್ಸಿ) 116 (ಬನವಾಸಿ) - ಕ್ರಿ.ಶ. 1368

36ಎ. ಕ್ರಿ.ಶ. 1368 ರ ನಂತರವೂ ಕೆಲಕಾಲದವರೆಗೆ ಹಸ್ತಿನಾವತಿಯ ಉಲ್ಲೇಖಗಳು ದೊರೆಯುವುವಾದರೂ, ಅದು, ಈ ಹಿಂದೆ ನೆಲೆವೀಡಾಗಿದ್ದ ಹೆಸರೇ ಕೆಲಕಾಲ ಮುಂದುವರಿದಿದ್ದನ್ನು ಸೂಚಿಸುತ್ತಿದೆ ಎನ್ನಬಹುದು.

37. ಎ.ಕ. IX ಮಾಗಡಿ 18 (ಕಲ್ಯ)- ಕ್ರಿ.ಶ. 1368 ಮತ್ತು ಎ.ಕ II (ಪ) ಶ್ರವಣಬೆಳಗೊಳ 475 - ಕ್ರಿ.ಶ. 1368

37ಎ. ಕವಿಶಾಸಂ III ಹಂಪಿ 328, 333 (ಹಂಪಿ)

38. ಎಕ VII ಶಿಕಾರಿಪುರ, 281 (ಹಾರೋಮುಚ್ಚಡಿ ಅಗ್ರಹಾರ) (ಸಂಸ್ಕೃತ) -ಕ್ರಿ.ಶ. 1368

39. ಕ್ರಿ.ಶ. 1377ರ ಹೆಬಸೂರಿನ ಶಾಸನವು [(ಎ.ಕ. V (ಪ) ಕೃಷ್ಣರಾಜ ನಗರ 77)], 'ಪಂಪಾಪುರಿ ಪರಿಸರೇ ಭವಸಂಗಮಾಖ್ಯ' ಎಂದು ಹೇಳಿದ್ದು, ಇವರು ಪಂಪಾಪುರಿ ಪರಿಸರಿದವರೇ ? ಎಂಬ ಅನುಮಾನ ಬರುತ್ತದೆ. ಆದರೆ, ಈ ಶಾಸನದ ಕಾಲವು ಸಂಗಮರು ಈ ಪರಿಸರದಲ್ಲಿ ಆಡಳಿತವನ್ನು ಆರಂಭಿಸಿದ ನಂತರದ ಕಾಲಕ್ಕೆ ಸೇರುತ್ತದೆ. ಕ್ರಿ.ಶ. 1377ರ ಹೊತ್ತಿಗೆ ಅವರು ವಿಜಯನಗರ ಸ್ಥಿರ ಸಿಂಹಾಸನದಲ್ಲಿದ್ದರು. ಈ ಹಿನ್ನೆಲೆಯಲ್ಲಿ ಅವರ ಹಿಂದಿನ ಚರಿತ್ರೆಯನ್ನು ಬಿಟ್ಟು ಶಾಸನಕಾರನು ಅಭಿಮಾನದಿಂದ ಈ ರೀತಿ ಹೇಳಿರಬೇಕೆನಿಸುತ್ತದೆ. ಈಗಾಗಲೇ ಗಮನಿಸಿರುವಂತೆ, ಸಂಗಮರು ಈ ಪರಿಸರಕ್ಕೆ ಬರುವುದು ತಡವಾಗಿ. ರಾಜಧಾನಿಯ ಬಗ್ಗೆ ಸ್ಪಷ್ಟ ಉಲ್ಲೇಖವು ಮೊದಲಿಗೆ ಶಿವಮೊಗ್ಗ ಜಿಲ್ಲೆಯದಾಗಿರುವುದೂ ಕೂಡಾ, ಅವರ ಮೂಲಸ್ಥಳವು ಶಿವಮೊಗ್ಗ ಜಿಲ್ಲೆಯೇ ಎಂಬುದನ್ನು ಸೂಚ್ಯವಾಗಿ ತಿಳಿಸುತ್ತಿದೆ.

38ಎ. ಒಂದನೇ ಬುಕ್ಕರಾಯನಿಂದ ಕ್ರಿ.ಶ. 1368ರಲ್ಲಿ ವಿಜಯನಗರವು ನಿರ್ಮಾಣವಾಯಿತೆಂದು ಫಾದರ್ ಹೆರಾಸ್ ಅವರು ಅಭಿಪ್ರಾಯಪಟ್ಟಿರುವುದು ಸೂಕ್ತವಾಗಿದೆ (ಉದ್ಧೃತ 'Social and Political Life Under Vijayanagar'- Saletore, B.A) ಕಲ್ಯದ ಧಾರ್ಮಿಕ ಘಟನೆಯ ಕಾಲಕ್ಕೆ ರಾಜಧಾನಿ ನಿರ್ಮಾಣವಾಗಿರಲಿಲ್ಲವೆಂದು ಸಾಲೆತೂರ್ ಅವರು ಅಭಿಪ್ರಾಯಪಟ್ಟಿದ್ದಾರೆ; ಮತ್ತು ಕ್ರಿ.ಶ. 1368ರ ಜುಲೈ - ನವೆಂಬರ್ ನಡುವೆ ರಾಜಧಾನಿ ನಿರ್ಮಾಣವಾಗಿದೆ ಎಂದು ಅವರು ಹೇಳಿದ್ದಾರೆ. ಆದರೂ, ಕಲ್ಯದ ಘಟನೆಯ ಕಾಲಕ್ಕೆ ರಾಜಧಾನಿ ನಿರ್ಮಾಣವಾಗಿತ್ತೆಂದು ಹೇಳಬಹುದು.

40. ಸೌ.ಇಂ.ಇನ್. VII ಉಡುಪಿ 348 (ಚೌಳಿಕೇರಿ) - ಕ್ರಿ.ಶ. 1431
ಕ.ಇನ್. I - ಭಟ್ಕಲ್‌ಪೇಠ 48 (ಕೈಕಿಣಿ) -ಕ್ರಿ.ಶ. 1427

41. ಸೌ.ಇಂ.ಇನ್. VII ಉಡುಪಿ - 309 (ಮುದಕೇರಿ) - ಕ್ರಿ.ಶ. 1431

42. ಸೌ.ಇಂ.ಇನ್. VII - ಉಡುಪಿ 239 (ಬಾರಕೂರು) - ಕ್ರಿ.ಶ. 1360
352 (ಮಣಿಗಾರಕೇರಿ) - ಕ್ರಿ.ಶ. 1379, 365 (ಮಣಿಗಾರಕೇರಿ)- ಕ್ರಿ.ಶ. 1420

43. ಮೈ. ಆ.ರಿ - 1934. ತೀರ್ಥಹಳ್ಳಿ. 148 (ಮೇಗರವಳ್ಳಿ) - ಕ್ರಿ.ಶ. 1417

44. ಕ.ಇನ್. - I ಭಟ್ಕಲ್‌ಪೇಠ 47 (ಕೈಕಿಣಿ) -ಕ್ರಿ.ಶ. 1425
ಕ.ಇನ್. VI (ಅಂಕೋಲ) 67 (ಜುಗ್) -ಕ್ರಿ.ಶ. 1431

45. ಎ.ಕ. VI -ಕೊಪ್ಪ 33 (ಭಾನವಳ್ಳಿ ಅಗ್ರಹಾರ) -ಕ್ರಿ.ಶ. 1408 ಮತ್ತು ಎ.ಕ. IX - ಕಾನಕಾನಹಳ್ಳಿ 65 (ಕಬ್ಬಾಳ) - ಕ್ರಿ.ಶ. 1429

46. ಎ.ಕ. VI ಕೊಪ್ಪ 49 (ಹರಿಹರಪುರ) - ಕ್ರಿ.ಶ. 1392 ಮತ್ತು ಶೃಂಗೇರಿ ಪ್ರಾಚೀನ ಶಾಸನ ಲೇಖನ ಸಂಗ್ರಹ - ಶಿವಮೊಗ್ಗ ಬಿ 6 (ಕೂಡ್ಲಿ)- ಕ್ರಿ.ಶ. 1402

47. ಕವಿಶಾಸಂ II- ಗಂಗಾವತಿ 21 (ಆನೆಗೊಂದಿ)- ಕ್ರಿ.ಶ. 1402

48. ಎ.ಕ. VIII -ಸೊರಬ. 261 (ಕುಪ್ಪಟೂರು)- ಕ್ರಿ.ಶ. 1408

ಗ್ರಂಥ ಋಣ

ಶಾಸನ ಸಂಪುಟಗಳು (ಅಡಿ ಟಿಪ್ಪಣಿಯಲ್ಲಿರುವಂತೆ)

ವಿಜಯನಗರ ಅಧ್ಯಯನ - ಸಂ. 11, ಮೈಸೂರು, 2006

Saletore, B.A.- *Social and Political Life under Vijayanagar,* B.G. Paul & Co Publishers, Madras 1934

* ಈ ಪ್ರಬಂಧಕ್ಕೆ ಹೊಂದುವಂತೆ ನಕ್ಷೆಯನ್ನು ಬರೆದುಕೊಟ್ಟ ಡಾ.ಪಿ.ವಿ. ಕೃಷ್ಣಮೂರ್ತಿ ಯವರಿಗೆ ಅನಂತ ಧನ್ಯವಾದಗಳು

೧೦. ವಿಜಯನಗರದ ಪ್ರಾತಿನಿಧಿಕ ಶಾಸನ ರೂವಾರಿಗಳು

ಡಾ. ಚೆನ್ನಕ್ಕ ಪಾವಟೆ

ವಿಜಯನಗರ ಸಾಮ್ರಾಜ್ಯ ಆಡಳಿತ ಸಾಹಿತ್ಯ ಸಂಸ್ಕೃತಿಗೆ ಹೆಸರುವಾಸಿಯಾದುದು. ಅಂದಿನ ಕಾಲದ ಶಾಸನ ಸಾಹಿತ್ಯ ಮಹತ್ವಪೂರ್ಣವಾಗಿದೆ. ವಿಜಯನಗರದ ಪ್ರತಿಷ್ಠಿತ ದೊರೆಗಳ ಕಾಲದಲ್ಲಿ ಶಾಸನಗಳು ಹಲವಾರು ಪ್ರಕಾರದಲ್ಲಿ ಹುಟ್ಟಿವೆ. ಆದರೆ ಬಹುಸಂಖ್ಯೆಯ ಶಾಸನಗಳಲ್ಲಿ ಶಾಸನ ರೂವಾರಿಗಳ ಹೆಸರಿಲ್ಲ. ಸಿಕ್ಕ ಉಲ್ಲೇಖಗಳನ್ನು ಗಮನಿಸಿಕೊಂಡು ಶಾಸನಕವಿಗಳು ಮತ್ತು ಕಂಡರಣೆಕಾರರು ಎಂಬ ಭಿನ್ನ ಅಂಶವನ್ನು ಗಮನಿಸಿಕೊಂಡು ವಿಷಯ ಸಂಗ್ರಹಿಸಲಾಯಿತು. ವಿಜಯನಗರದ ದೊರೆಗಳಲ್ಲಿ ಪ್ರೌಢಪ್ರತಾಪ ದೇವರಾಯ, ಕೃಷ್ಣದೇವರಾಯ, ಅಚ್ಯುತದೇವರಾಯ ಮತ್ತು ಹರಿಹರರ ಕಾಲದ ಕೆಲ ಶಾಸನಗಳಲ್ಲಿ ಶಾಸನರೂವಾರಿಗಳ ಉಲ್ಲೇಖಗಳಿವೆ. ಅಂದಿನ ಶಾಸನರೂವಾರಿಗಳ ಮಾಲಿಕೆಯಲ್ಲಿ ಧರಣೋಜ (೧೪೨೪), ಸೊನಬೋವ (೧೪೨೭), ವಿಠಣ (೧೪೨೮), ಆಳೋಜ (೧೪೨೯), ಚೆನ್ನಪ್ಪ (೧೪೩೦), ಕಲಿಕೋಜ (೧೪೩೦), ಪ್ರತಾಪರಾಯ (೧೪೩೧), ತಿರುಮಲ (೧೪೩೪) ಸುರೋಜನ ಮಗ ವೀರೋಜ (1432) ಮೊದಲಾದವರ ಉಲ್ಲೇಖಗಳಿದ್ದು ಅವರು ಆಯಾ ಕಾಲದಲ್ಲಿದ್ದು ತಮ್ಮ ರಾಜರ ಆಡಳಿತ ಕೊಟ್ಟ ದಾನದತ್ತಿಗಳ ಬಗ್ಗೆ ಹಲವಾರು ಶಾಸನಗಳನ್ನು ರಚಿಸಿ ಕೊಟ್ಟಿರುವರು. ಧರ್ಮನಾಥ ಪುರಾಣದ ಕರ್ತೃ ಮಧುರಕವಿ ಪ್ರಸಿದ್ಧ ಹಂಪೆಯ ಶಾಸನ ರಚಿಸಿದ್ದು, ಅದರಲ್ಲಿ ಲಕ್ಷ್ಮೀಧರದಂಡನಾಯಕನ ಇತಿಹಾಸವಿದೆ. ಲಕ್ಷ್ಮೀ ಧರನ ತಾಯಿ ಹೇಳಿದ 'ಕೆರೆಯಂ ಕಟ್ಟಿಸು, ಬಾವಿಯಂ ಸವೆಸು' ಎಂಬ ಪದ್ಯ ಕನ್ನಡ ನಾಡಿನ ಸಂಸ್ಕೃತಿ ಮಾತೃತ್ವದ ಮಹತಿ, ನೀತಿಯ ನುಡಿಗಳನ್ನು ಬಿಚ್ಚಿಳಿಸಿದೆ. ವಿಜಯನಗರದ ಒಂದೊಂದು ಶಾಸನಗಳು ಪುಟ್ಟ ಪುಟ್ಟ ಚಂಪೂ ಕಾವ್ಯಗಳಂತಿದ್ದರೆ, ಕೆಲ ಶಾಸನಗಳು ಸಂಘಟನಾಪ್ರಧಾನ ವಿಷಯಗಳನ್ನೊಳಗೊಂಡಿದೆ.

ಗದ್ಯಕ್ಕೆ ದೊರೆತ ಪ್ರಾಶಸ್ತ್ಯ

ವಿಜಯನಗರ ಕಾಲದ ಗದ್ಯಭಾಷೆಯ ಬರವಣಿಗೆ ಮಹತ್ವಪೂರ್ಣವಾಗಿದೆ. ಆ ಕಾಲದಲ್ಲಿ ಕನ್ನಡ ಪಂಡಿತರು ಕಂದ ವೃತ್ತ ವಿವಿಧ ಛಂದೋರೂಪಗಳನ್ನು ಬಳಸಿ ಕೊಂಡು ಪ್ರೌಢವಾದ ರೀತಿಯಲ್ಲಿ ಪಾಂಡಿತ್ಯಪೂರ್ಣ ಶಾಸನಗಳನ್ನು ರಚಿಸಿದ್ದರೆ, ಸಾಮಾನ್ಯ ಜನತೆ ಬರೆದ ಶಾಸನಗಳು ಆಡುಮಾತಿನ ಧಾಟಿಗೆ ಹೆಚ್ಚು ಸ್ಪಂದಿಸುವಂತೆ ರಚಿತವಾಗಿವೆ.

ವರ್ಣನೆಗಳಿಗಿಂತ ಸಹಜವಾಗಿ ನೈಜ ಘಟನೆಗಳನ್ನು ಬರೆಯುತ್ತ ಹೋದುದು ಅಂದಿನ ಸಾಮಾಜಿಕ ಸಾಂಸ್ಕೃತಿಕ ಬದುಕಿಗೆ ಕನ್ನಡಿ ಹಿಡಿದಿವೆ. ಹದಿನೈದನೆಯ ಶತಮಾನದ ಕಾಲಕ್ಕೆ ಸಾರ್ವಜನಿಕ ಸೊತ್ತಾದ ಶಿಲಾಶಾಸನಗಳ ಜೊತೆಗೆ ವೈಯಕ್ತಿಕ ಸೊತ್ತಾದ ತಾಮ್ರ ಶಾಸನಗಳು ಹೆಚ್ಚಾಗಿ ಪ್ರಕಟವಾಗಿವೆ. ಕಾಲಕ್ರಮೇಣ ಶಾಸನ ಬರವಣಿಗೆ ಕಡಿಮೆಯಾಗಿ, ಶೈಲಿ ಶಿಥಿಲಗೊಡು, ಆಡುಮಾತಿನ ಸಹಜತೆ, ವ್ಯಾಕರಣ ಶಿಷ್ಟ ನಿಯಮಗಳ ಉಲ್ಲಂಘನೆ ಹೆಚ್ಚಾಗಿ ನಡೆದುದು ಶಾಸನಗಳಿಂದ ವಿದಿತವಾಗುತ್ತದೆ.

ಶಾಸನ ರೂವಾರಿ

ವಿಜಯನಗರದ ರೂವಾರಿಗಳು ಪದ್ಯಕ್ಕಿಂತ ಗದ್ಯಕ್ಕೆ ಹೆಚ್ಚು ಪ್ರಾತಿನಿಧ್ಯ ನೀಡಿದ್ದಾರೆ. ಅಂದಿನ ಶಾಸನಗಳನ್ನು ಗಮನಿಸಿದರೆ ತತ್ಕಾಲೀನ ರಾಜಕೀಯ, ಧಾರ್ಮಿಕ ಸಾಮಾಜಿಕ ಆರ್ಥಿಕ ಸಾಂಸ್ಕೃತಿಕ ಜೀವನದ ವಿವಿಧೋನ್ಮುಖ ಚಿತ್ರ ದೊರಕುತ್ತದೆ. ಅಂದು ಬಳಕೆಯಲ್ಲಿದ್ದ ಶಿಷ್ಟಭಾಷೆ ಜನಜೀವನ ಆಚಾರ ಸಂಪ್ರದಾಯಗಳ ಆದರ್ಶಗಳು ಕಣ್ಮುಂದೆ ಕಟ್ಟುತ್ತಿವೆ. ಭಾಷೆ ಸಾಂಸ್ಕೃತಿಕ ದೃಷ್ಟಿಯಿಂದ ವಿಜಯನಗರ ರೂವಾರಿಗಳಿಗೆ ವಿಶೇಷ ಮರ್ಯಾದೆ ಇದೆ.

ರೂವಾರಿ ಧರಣೋಜ

ದಾವಣಗೆರೆಯ ೨೯ನೆಯ ಶಾ. ರಚಿಸಿದ ಮಹನೀಯ. ಪುಟ್ಟ ಚಂಪೂ ಕಾವ್ಯದಂತಿರುವ ಶಾಸನ ರಚಿಸಿದ ಈ ಕವಿ ೧೪೨೪ರಲ್ಲಿ ವಿಜಯನಗರದ ಸಂಸ್ಥಾನದಲ್ಲಿ ಶಾಸನರೂವಾರಿಯಾಗಿದ್ದ. ಈತನ ತಂದೆ ಮಾಚಿದೇವ.

ಪ್ರೌಢಪ್ರತಾಪದೇವರಾಯ ಚಾರಿತ್ರಿಕ ದೊರೆಯಾದುದರಿಂದ ಪರಧರ್ಮ ಸಹಿಷ್ಣುತೆ ಆತನ ಮೈಮನಗಳಲ್ಲಿ ಹರಿಯುತ್ತಿರುವುದರಿಂದ ಅವನ ಮಂತ್ರಿಗಳೂ ಸಾಮಂತರೂ ಇದೇ ಮನೋಭಾವನೆಯನ್ನು ಹರಡಿಸಿಕೊಂಡಿದ್ದರು. ಶಾಸನ ಕವಿ ಧರಣೋಜ ಹರಿಹರದ ಹರಿಹರೇಶ್ವರನ ವರಪ್ರಸಾದದಿಂದ ಗದ್ಯಪದ್ಯ ರಚಿಸಲು ಪ್ರೇರಣೆ ಪಡೆದು ಇಂಥ ಶಾಸನ ರಚಿಸಲು ಸಮರ್ಥನಾಗಿರುವೆನೆಂಬುದು ಈತನ ದಿವ್ಯವಾಣಿ.

ವಿಜಯನಗರದ ದೊರೆ ದೇವರಾಯ ಮಹಾರಾಯನ ಓರ್ವ ಮಂತ್ರಿಯ ವಿಷಯ ವನ್ನು ಪ್ರಸ್ತುತ ಶಾಸನ ಒಳಗೊಂಡಿದೆ. ಧರಣೋಜ ಹರಿಹರೇಶ್ವರನನ್ನು ಕೊಂಡಾ ಡುತ್ತ ತನ್ನ ದೊರೆಯ ಆಶ್ರಿತರಾಗಿರಬಹುದಾದ, ರಾಜಕಾರ್ಯ ಧುರಂಧರರೂ ಉದಾರಿಗಳೂ ಎನಿಸಿದಚಾಮನೃಪಾಲ ಮತ್ತು ಬುಳ್ಳನೃಪರನ್ನು ಸ್ತುತಿಸಿದ್ದಾನೆ. 'ಸದ್ಧರ್ಮಮೇ ಮೂರ್ತಿಯನುಕರಿಸಿತ್ತೋ ಸತ್ಕೃತಿಗಳೇ ಪುರುಷಾಕಾರಮಂ ತಾಳ್ದವೋ' 'ಧರಾಕಲ್ಪಭೋಜಂ' ಎಂಬಂತೆ ಚಾಮನೃಪಾಲನನ್ನು ಕವಿ ಹೊಗಳಿದರೆ, 'ಸುಕೃತ ಸಮಾಜಕ; 'ಗಂಡರಗೂಳಿವರಾನ್ವಯಿ' ಎಂದು ಬುಳ್ಳನೃಪರನ್ನು ಹೊಗಳಿದ್ದಾನೆ. ಕವಿಯ

ಪಾಲಿಗೆ ಬುಳ್ಳನೃಪನಂತೂ ಸಾಕ್ಷಾತ್ ದ್ವಿತೀಯ 'ಭಗೀರಥನೇ' ಧರೆಗಳಿದು ಬಂದಂತೆ ಎಂದು ಸೂಚಿಸಿದ್ದಾನೆ.

ವೀರ ಭಗೀರಥಂ ಗಗನಗಂಗೆಯನುರ್ವಿಗೆ ತಂದನೆಂತದೇಂ
ಪೌರುಷಮಲ್ತುಂ ಕೇಳ್ ಗಗನದಿಂ ಕೆಳಗಿರ್ದು ಹರಿದ್ರೆಯೆತ್ತಿಲುಂ
ಬಾರದಿರಲ್ಕೆ ಕಟ್ಟಿ ಪಿಡಿದಟ್ಟಿ ಹರೀಶಪುರಕ್ಕೆ ಕೊಂಡಂಬಂ
ದಿ ರಸೆಯೊಳ್ ಪಸರ್ವಡೆದ ಬುಳ್ಳ ಚಮೂಪನಿದೇಂ ಸೌಭಾಗ್ಯಮೋ||

'ಪರಶಿವ ಗಂಗೆಯನ್ನು ತನ್ನ ಸಿರಿಮುಡಿಯಲ್ಲಿ ಅಡಗಿಸಿಕೊಡು ಭುವಿಗೆ ತಂದಂತೆ' ಎಂಬ ಕವಿಯ ಕಲ್ಪನೆ ಮನೋಜ್ಞವಾಗಿದೆ. ಶಾಸನದಲ್ಲಿ ಕವಿಯ ದಿಟ್ಟ ಪ್ರಸಂಗವೊಂದು ಎಡೆಪಡೆದಿದೆ. 'ಒಂದು ಪ್ರಸಂಗದಲ್ಲಿ ಬುಳ್ಳನೃಪ ಕಟ್ಟಿದ ಈ ಆಣೆಕಟ್ಟು ಒಡೆಯ ಬಲ್ಲರು, ಆದರೆ ಕವಿ ಕಟ್ಟಿದ ಈ ಕಾವ್ಯಕಟ್ಟು ಶಾಶ್ವತವಾದುದು' ಎಂಬುದೇ ಆ ದಿಟ್ಟ ಪ್ರಸಂಗ. ತನ್ನ ನೆಚ್ಚಿನಸಾಮಂತ ಸಚಿವನಾದ ಬುಳ್ಳನೃಪನ ಔದಾರ್ಯ ಸಾಮರ್ಥ್ಯವನ್ನು ಕವಿ ಇಲ್ಲಿ ಚಿರಸ್ಥಾಯಿಗೊಳಿಸಿದ್ದಾನೆ. ಪ್ರೌಢದೇವ ರಾಯನ ಆಳ್ವಿಕೆಯ ಪ್ರಾರಂಭದ ಈ ಶಾಸನ ಅಂದಿನ ಕೃಷಿ ಸಂಪನ್ಮೂಲಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಿದ ಮಹತ್ವವನ್ನು ಪ್ರಕಟಿಸುವಲ್ಲಿ ಯಶಸ್ವಿಯಾಗಿದೆ.

ಕಾವ್ಯದೃಷ್ಟಿ, ಶ್ರೇಷ್ಠ ಕಾವ್ಯಗಳಿಂದ 'ಹಾಡುವಳ್ಳಿ ಶಾಸನ' ಸುಪ್ರಸಿದ್ಧವಿದೆ. ಈ ಶಾಸನ ಬರೆದ ಕವಿಯ ಹೆಸರು ಲುಪ್ತವಾಗಿದೆ. ಕ್ರಿ.ಶ. ೧೪೫೯ರ ಶಾಸನದಲ್ಲಿ ಮಾಣಿಕಸೇನವೆಂಬ ಜೈನಯತಿ ತನ್ನ ಜೀವನದ ನಿಸ್ಸಾರತೆಯನ್ನು ಮನಗಂಡು ಸಲ್ಲೇಖನ ವ್ರತಧಾರಿಯಾಗಿ ಸಮಾಧಿ ಮರಣ ಕೈಕೊಂಡ ಉಲ್ಲೇಖವಿದೆ. ಸುಂದರ ವಾದ ಕಂದ ವೃತ್ತಗಳಿಂದ ಒಡ ಗೂಡಿದ ಸುಂದರಪದ್ಯ ಸಮಾಧಿ ಮರಣ ಸಾಂದರ್ಭಿಕ ಶ್ರೇಷ್ಠ ಕಾವ್ಯಗಳಲ್ಲೊಂದಾಗಿದೆ. ಇಲ್ಲಿರುವ ಮಾಣಿಕ್ಯಸೇನನ ಸಲ್ಲೇಖನೆಯ ವರ್ಣನೆ:

ಅನ್ನ ರಸಂಗಳಿಕ್ಷುರಸಮಂಬರ ಪಾನಶಾರ್ದ್ವವಾರಿಯಂ
ಸನ್ನುತರಂಧ್ರಪಂಚ ದಶಪನ್ನೆರಡಾರುದಿನಗಳಂತರಂ
ಮನ್ನಿಸಿ ಪಾನ್ಯನಾಲ್ಕೆರಡೆ ನಾಲ್ಕೆರಡೊಂದನೆ ಸೇವಿಸುತ್ತಮು
ತನ್ನಸತತ್ವನ ಪ್ರಮದ ಮಾಣಿಕಸೇನ ಮುನೀಂದ್ರನಿರ್ದಪಂ ||

ಜೈನಧರ್ಮದ ಅನಶನ ವ್ರತೋಪವಾಸ, ಸನ್ಯಸನ ಮೇಲ್ಮೆಯನ್ನು ಸಾರಿ 'ಪಂಚಪನ್ನೆರಡಾರು'ದಿನಗಳಲ್ಲಿ ಸಮಾಧಿಮರಣ ಪಡೆದುದನ್ನು ಪಠ್ಯ ವರ್ಣಿಸಿದೆ. ಇದೊಂದು ಸುಂದರವಾದ ನಿಷಿಧಿದಾಖಲೆ.

ವಿಜಯನಗರ ಶಾಸನಕವಿಗಳ ಮಾಲಿಕೆಯಲ್ಲಿ ಕವಿ ಲಿಪಿಕಾರ ರೂವಾರಿಗಳ ನಿರ್ದೇಶನದಲ್ಲಿ ಲಿಖಿತಂ, ಬರೆದಂ, ಬರೆಪಂ ಮೊದಲಾದ ವಿಶಿಷ್ಟ ಪದಗಳು ಬಳಕೆ ಗೊಂಡಿವೆ. ಕವಿಗಳಿಗೆ ಸುಕವಿ, ಒಳ್ಗವಿ ಇತ್ಯಾದಿ ಬಿರುದುಗಳೂ ಲಿಪಿಕಾರರಿಗೆ

ಬರೆವರಾಚಾರ್ಯ, ಬಿರುದಲೇಖಕ, ಮರನಮಹೇಶ್ವರ ಇತ್ಯಾದಿ ಬಿರುದುಗಳೂ, ಸಾಮಾನ್ಯ ನಿಯೋಗ ಪ್ರಭು ಸಂಧಿವಿಗ್ರಹ, ಕುಳಿಕಿರಣ, ಸೇನಬೋವಕ್ಕೀಕರಣ, ಕಾಯಸ್ಥ ಗಣಕರು ಲೇಖನಕಾರ್ಯ ನಿರ್ವಹಿಸಿದ್ದಾರೆ. ರೂವಾರಿಗಳದು ವಂಶ ಪರಂಪರೆಯಾಗಿ ಬಂದ ವೃತ್ತಿ. ಅಕ್ಕಸಾಲಿ, ಕಮ್ಮಾರ ಕಂಚಗಾರ, ಗಾವುಂಡ, ರೂವಾರಿಯೆಂಬ ವಿಶೇಷಣಗಳೂ ಹೆಸರಿನ ಮುಂದೆ ಓಜ ಆಚಾರಿ ಶಿಲ್ಪಿ ಎಂಬ ಉಪಸರ್ಗಗಳೂ, ವಿಶೇಷ ಕ್ರಿಯಾಪದ ಸ್ಥಾನದಲ್ಲಿ ಕಂಡರಿಸು (ಕಂಡಳಿಸು) ಬೆಸಕೆಯ್ ಬೆಸ್, ಹೊಯ್ ಪೊಯ್, ಕಲ್ಪೆಸ, ಕಲ್ಲುಂಗಡಿ ಕಲ್ಲಹೊಯಿ, ಕಲ್ಲಗೆಯಿ, ಶಿಲಾಕರ್ಮಿ, ತಿದ್ದು, ಸಮ, ಲಿಖಿತ, ಕೆಲಸ, ಶಿಲ್ಪ, ಬರೆದ ಮೊದಲಾದ ಪದಗಳು ಬರುತ್ತವೆ.

ಹೀಗೆ ಈ ಪರಭಾಷೆಯಿಂದ ಸಮಕಾಲೀನ ಸಮಾಜದ ಶಿಲ್ಪಿ ರೂವಾರಿಕ್ಷೇತ್ರಗಳ ಪರಿಚಯ ಸಾಧ್ಯವಾಗುತ್ತಿದೆ. ಗ್ರಂಥಸ್ಥ ಭಾಷೆಯ ಮೂಲಕ ಆದರ್ಶ ಬದುಕನ್ನು ರೇಖಿಸುವ ಕಾವ್ಯಸಾಹಿತ್ಯದಲ್ಲಿ ಕಂಡುಬಾರದ ಈ ವಿವರ, ಪ್ರಾಚೀನ ಕರ್ನಾಟಕದ ಅದರಲ್ಲೂ ವಿಜಯನಗರ ಸಾಂಸ್ಕೃತಿಕ ಅಧ್ಯಯನಕ್ಕೆ ವಿಶೇಷ ಸಂಪತ್ತು ಎನಿಸಿದೆ.

ಪಂಡಿತ ಕವಿ

ಮೂಡಬಿದರೆಯ ಕ್ರಿ.ಶ. ೧೪೩೦ನೆಯ ಜೈನ ಶಾಸನದಲ್ಲಿ ಚಂದ್ರಪ್ರಭ ತೀರ್ಥಂಕರನ ಸ್ತುತಿ, ಮೇರುಶೈಲ, ಆರ್ಯಚಂದ್ರ, ತುಳುದೇಶ, ಮಂಗಳೂರು, ವಂಶಿಪುರ ವೇಣುಪುರ ತ್ರಿಭುವನ ಚೂಡಾಮಣಿ ಚೈತ್ಯಾಲಯಗಳ ಮನೋಹರ ವರ್ಣನೆ ಮಡುಗಟ್ಟಿನಿಂತಿದೆ. 'ಬಿನದಕ್ಕೆಡೆಯಾದ ತಾಣದಿಂದೊಪ್ಪುವ' ತುಳು ನಾಡಿನಲ್ಲಿ ..... ವಂಶಪುರವು ಅನುರಾಗಕ್ಕೆಡೆಯಾಗಿ ಸಂಚರಿಸುವ ನಾರಿವೃಂದದಿಂದ ಕಾವ್ಯ ಪ್ರೌಢಿಮೆಯಿಂದ ವಿಕ್ರಮತೆಯಿಂದಲೂ ಪರಿಶೋಭೆಗೊಂಡಿತ್ತು. ಇಲ್ಲಿಯ ಪುರುಷ ಬಾಲರೆಲ್ಲರೂ ಜೈನಧರ್ಮ ಪಾಲಕರೆನಿಸಿದ್ದರೆ, ಸ್ತ್ರೀಯರು ಬಾಲೆಯರು ಆತ್ಮನಾಥಂ ಗನುಕೂಲೆಯರು ಎಂದೊಡಂ ನಾಲಿಗೆಯಾಗಿಗುಂಟು ಪೊಗಳಲೆಂದು' ಕವಿ ಪಂಡಿದ ಉದ್ಗಾರ ತೆಗೆದಿದ್ದಾನೆ. ಇಲ್ಲಿ ಬಂದಿರುವ ಸಾಮಂತ ಭೈರವೇಂದ್ರನ ವರ್ಣನೆ ಪ್ರತಾಪ, ಶಾಸನಸಾಹಿತ್ಯದಲ್ಲಿ ವೀರಶೈಲಿ ಮೆಚ್ಚಿಕೊಳ್ಳುವಂತಿದೆ.

ಕಡಲುರೆ ತುಳ್ಕೆ, ದಿಕ್ಪತಿಗಳಳ್ಕೆ, ದಿಶಾಗಮಜಮುಳ್ಕೆ ಭೂತಳಂ
ಜಡಿಯೆ ಕುಲಾಚಲಂ ಕೆಡೆ ವೈರಿ ನೃಪಾಲಕ ಹೃದಟಂಗಳು
ತೊಡೆಯೆ ಧಡಂ ಧಡಂ ಧಡ ಧಡೆಂದುದು ಭೂರಿಗಂಭೀರ ಭೇಂದೀಂ
ಕಿಡೆ ವಿಜಯಪ್ರಯಾಣದೊಳ್ ಭೈರವ ಭೂವರನೇಂ ಪ್ರತಾಪಿಯೋ ||

ಯುದ್ಧಕ್ಕೆ ಸಿದ್ಧನಾಗಿ ಹೊರಟ ಭೈರವೇಂದ್ರನ ಭೇರಿನಾದ 'ಧಡಂ ಧಡಂ ಧಡಧಡಂ' ಎಂಬ ಶಬ್ದ ಮಾರ್ದನಿಸಿದೆ. ಇಲ್ಲಿಯ ವೀರಾವೇಶದ ಗತ್ತುಗಾರಿಕೆ ಭೈರವಭೂಪನ ಅಟಾಟೋಪಕ್ಕೆ ಕುಂದಣವನ್ನಿಟ್ಟಂತಾಗಿದೆ.

ಈ ಎಲ್ಲ ಶಾಸನಗಳಲ್ಲಿ ಅದ್ವಿತೀಯವೆನಿಸಿದುದು ಹಂಪೆಯ ಶಾಸನ. ಪ್ರೌಢ ಪ್ರತಾಪದೇವರಾಯನ ಮಂತ್ರಿ ಲಕ್ಷ್ಮೀಧರ ದಂಡನಾಯಕ, ಆತ ಚಿಕ್ಕವನಿದ್ದಾಗ, ಆತನ ತಾಯಿ ಮಗನಿಗೆ ಹಾಲು ಕುಡಿಸುವ ಸಂದರ್ಭದಲ್ಲಿ ಹೇಳಿರುವ ನೀತಿ ನುಡಿಗಳು ಕಲ್ಲೊಳು ಬರೆದಿಟ್ಟ ಅಕ್ಕರಂಗಳಂತಿವೆ. ಮುಂದೆ ಲಕ್ಷ್ಮೀಧರ ದೊಡ್ಡವನಾದಾಗ ಅನೇಕ ಮಹತ್ವದ ಸಾಮಾಜಿಕ ಕಾರ್ಯಗೈದಿರುವನು. ಲಕ್ಷ್ಮೀಧರ ದಂಡನಾಯಕನ ಸ್ವಪ್ನದಲ್ಲಿ ವಿಘ್ನೇಶ್ವರನು ಬಂದು, ಮಾಲ್ಯವಂತ ಪರ್ವತದ ದಕ್ಷಿಣ ಭಾಗದಲ್ಲಿ ಅಕೃತ್ರಿಮವಾದ ಒಂದು ಗುಹೆ ಇದೆ. ಅಲ್ಲಿ ನನ್ನನ್ನು ಪ್ರತಿಷ್ಠಿಸು, ಎನ್ನಲು ಮಂತ್ರಿ 'ಹಸಾದ'ವೆಂದು ಅಲ್ಲಿ ಗಣಪತಿ ವಿಗ್ರಹ ಪ್ರತಿಷ್ಠಾಪಿಸಿ ದತ್ತಿಬಿಟ್ಟನೆಂದು ಶಾಸನ ತಿಳಿಸಿದೆ. ಲಕ್ಷ್ಮೀಧರದಂಡನಾಯಕ ರಚಿಸಿದ 'ನೀತಿವಾಕ್ಯಾಮೃತ', 'ಆನಂದ ರಾಮಾಯಣ', 'ಕೃಷ್ಣಲೀಲಾ' ಎಂಬ ಕೃತಿಗಳು ಇದುವರೆಗೂ ದೊರಕಿಲ್ಲ. ಆತ ಚಿಕ್ಕವನಾಗಿದ್ದಾಗ ಆತನ ತಾಯಿ ಕಲಿಸಿದ ನುಡಿಮುತ್ತು.

ಕೆಱೆಯಂ ಕಟ್ಟಿಸು, ಭಾವಿಯಿಂ ಸವೆಸು ದೇವಾ
ಗಾಱಮಂ ಮಾಡಿಸಜ್ಜರೆಯಾಳ್ಸಿಲ್ಕಿದನಾಥರಂ ಬಿಡಿಸು
ಮಿತ್ರರ್ಗಿಂಬುಕೆಯಿ ನಂಬಿದರ್ಗ್ಗೆಱೆವೆಟ್ಟಾಗಿರು ಶಿಷ್ಟರಂ
ಪೊರೆಯೆನುತ್ತಿಂಡೆಲ್ಲವಂ ಪಿಂದೆ ತಾಂಯೊಱೆದ ಳ್ಪಾಲೆಱೆಎಂದು
ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ ||

ಎಂಬ ಅವಳ ನೀತಿವಾಕ್ಯಾಮೃತ ಇಂದಿನ ಮಹಿಳೆಯರಿಗೆ ಮಾರ್ಗದರ್ಶನ ನೀಡುವಂತಿದೆ. ನಾವು ಅವಳ ನೀತಿಯಂತೆ ನಡೆದರೆ ನಮ್ಮ ಮಕ್ಕಳೂ ಮುಂದೆ ಸತ್ಪ್ರಜೆಯಾಗುವರು.

ಸಭಾಪತಿ ಕವಿ

ಕ್ರಿ.ಶ. ೧೫೧೩, ೧೫೧೭ ಮತ್ತು ೧೫೨೧ ನಂಜನಗೂಡು ಮತ್ತು ಗುಂಡ್ಲುಪೇಟೆ ಮೂರು ತಾಮ್ರಶಾಸನಗಳ ಕರ್ತೃ ಸಭಾಪತಿ. ವಿಜಯನಗರದ ಅರಸ ಕೃಷ್ಣದೇವರಾಯನ ಹಲವಾರು ಶಾಸನಗಳ ಕರ್ತೃವಾದ ಈತ ಪರಿಚಿತ ಶಾಸನ ಕವಿಯಾಗಿದ್ದಾನೆ. ಆಸ್ಥಾನ ಕವಿಯಾದ ಈತ ಅಚ್ಯುತ ರಾಯನ ಕಾಲದಲ್ಲಿ ಮುಂದು ವರೆದಂತಿದೆ. ತಿರುಮಲ ಹಾಕಿಸಿದ ನಂಜನಗೂಡು ಶಾಸನದ ಕರ್ತೃವೂ ಸಭಾಪತಿ. ಇವನ ಕಾಲ ೧೫೪೩. ಹೆಸರನ್ನು ಆದರಿಸಿದಂತೆ ಇವನೊಬ್ಬ ಬೇರೆ ಸಭಾಪತಿ ಯಾಗಿರುವ ಸಾಧ್ಯತೆ ಇದೆ. ಮೇಲಿನ ಸಭಾಪತಿಯು ಈತನೆಂದು ಹೇಳಿದರೆ ಈ ಶಾಸನಕವಿ ಮೂರು ದಶಕಗಳಿಗಿಂತಲೂ ಅಧಿಕವಾಗಿ ಅಧಿಕಾರದಲ್ಲಿದ್ದಂತಾಗುತ್ತದೆ. ಇಷ್ಟು ದೀರ್ಘ ಕಾಲ ಒಬ್ಬ ಅಧಿಕಾರದಲ್ಲಿರುವದು ಸಂಭವವೇ?

ಇತರರು

ಈ ಸಭಾಪತಿ ಕುಂಭಕೋಣದ ಕುಂಭಲಿಂಗನ ಮಗ. ನರಸಿಂಹಾಚಾರ್ಯನ ಮಗ ನೃಹರಿ ಎಂಬ ಮತ್ತೊಬ್ಬ ಕವಿ ಬೆಳಕಿಗೆ ಬಂದಿದ್ದಾನೆ. ಕ್ರಿ.ಶ. ೧೫೪೦ರ ಲೊಕ್ಕರೆಯ ಶಾಸನವೊಂದು 'ಅಪ್ಪಾಜಿ ಚೌವೀಸ ಬರೆಪ' ಎಂದ ತಿಳಿಸಿದೆ.

ಅಚ್ಯುತರಾಯನ ಕಾಲದಲ್ಲಿ ಮಂಗಣಾಚಾರ್ಯನ ಮಗ ವೀರಣ್ಣ, ಸೋಮಯ್ಯನ ಮಗ ಈಶ್ವರಯ್ಯ, ಶಿವರೇವ, ಅರಸಿನಕೆರೆಯ ಪದುಮಣ್ಣನ ಮಗ ಇರುಗಣ್ಣ, ಪೆರುಮಾಳೆ ದೇವ, ಮಹಲಿಂಗಯ್ಯ, ಕೀರ್ತಿನಾರಾಯಣ, ಸೋಮನಾಥ ಇವರೆಲ್ಲ ಅಂದಿನ ಶಾಸನಕವಿಗಳು.

ತೀರ್ಥಹಳ್ಳಿಯ ೧೫೩೭ ರ ಕೊರಕೋಡು ಶಾಸನವೊಂದು ವೀರಪ್ರತಾಪದೇವ ರಾಯನ ಕಾಲದಲ್ಲಿ *ಸಾತಳಿಗೆನಾಡ ಕೋಳವಳಿಗೆ* ಪಠಾವಳಿ ಬಂದು ಕಾರಿದಿದೆಲ್ಲಿ ಬೊಮ್ಮರಸಹೆಗ್ಗಡೆಯಮಗ ಪುಟ್ಟ ಪಡೆವಳನೂ ಮುರಿದು ಆರಣದೊಳಗೆ ಕುಮಾರರಾಯನ ಪ್ರತಾತವಾಗಿ ಅಂಬುಗೂಡಾಗಿ ಸ್ವರ್ಗವನು ಸೂರೆಗೊಂಡು ಹೋದಾಗ ಜೋಯಿಸಸಿಂಗಂಗೆ ಐದುಸಲಗೆ ಭೂಮಿಯನ್ನು ದತ್ತಿಯಾಗಿ ಕೊಟ್ಟಂತೆ ತಿಳಿಸಿ ಬರೆದು ಸುರೋಜನ ಮಗ ವೀರೋಜನೆಂಬವ. ಆರಗರ ಕಲ್ಲಿನಾಥ ದೇವರಿಗೆ ಅಮೃತಪಡಿಗೆ ದೇವರ ಉಪಾಹಾರದ ಕಟ್ಟಳೆಯಾಗಿ ಬರೆದ ಶಾಸನ ರೂವಾರಿ ವಿಠಣ್ಣ ಎಂದು ಶಾಸನ ಸೂಚಿಸಿದೆ.

ಒಟ್ಟಿನಲ್ಲಿ ವಿಜಯನಗರ ಅರಸರ ಕಾಲದಲ್ಲಿ ಜರುಗಿದ ಸಾಹಿತ್ಯ ಸಾಧನೆ, ಶಾಸನ ರಚನೆ ಬೋಧನೆ ಅಷ್ಟೇ ಆದರ್ಶಪ್ರಾಯವಾಗಿದ್ದು ಬಾಳಿಗೆ ಬೆಳಕಾಗಿದೆ. ಸಿದ್ಧಾಂತಕ್ಕೆ ನೆಲೆವನೆ ಸಾಹಿತ್ಯಕ್ಕೆ ಹೊಸಮಾರ್ಗ ಕಲ್ಪಿಸಿದೆ. ಅರಮನೆ ಗುರುಮನೆಗಳಿಂದ ಏಕಕಾಲದಲ್ಲಿ ಹೊರಬಂದ ಕನ್ನಡದ ಉಜ್ವಲ ಸಾಹಿತ್ಯಕ ಪರಂಪರೆಗೆ ನಿದರ್ಶನವಾಗಿದೆ. ಸಾಹಿತ್ಯದಲ್ಲಿ ಸೃಷ್ಟಿಕ್ರಿಯೆಯೊಡನೆ ಅನುಸೃಷ್ಟಿಕ್ರಿಯೆಯೂ ಅಷ್ಟೇ ಮಹತ್ವ ಪೂರ್ಣವಾದುದು ಎಂಬ ವಿಚಾರ ವಿಮರ್ಶೆಗೆ ಈ ಕಾಲ ಒಂದು ಮಾದರಿಯೆನಿಸಿದೆ. ಅಂದಿನ ಪ್ರೇರಣೆ ಪ್ರಭಾವಗಳು ಯುಗ ಪರಿವರ್ತನೆಯ ಲಕ್ಷಣಗಳನ್ನು ಪಡೆದಿವೆ. ಕನ್ನಡ ಸಾಹಿತ್ಯವು ಮಾರ್ಗದಿಂದ ದೇಸಿಯತೆಗೆ ತಿರುಗಿದ ಸಂಕ್ರಮಣ ಕಾಲ ಇದಲ್ಲ; ಅದರ ಸಂಕ್ರಮಣಾವಸ್ಥೆ ಮುಗಿದು ಸಮಗ್ರದೃಷ್ಟಿ ಹಾಗೂ ಸ್ವತಂತ್ರ್ಯ ಪ್ರತಿಭೆಗಳ ಮೇಳಿವಿಸಿ ತಚ್ಚಿಂತನದಿಂದ ಹೊರಬಂದ ಸಮೃದ್ಧ ಸಾಹಿತ್ಯ ಕಾಲವು ಇದಾಗಿದೆ. ವೀರಶೈವ ಕೃತಿಗಳ ಆವಿಷ್ಕಾರ ನೂತನ ವಿಚಾರೋಪಾಯದಿಂದ ಇಂದು ಚರಿತ್ರೆಯಲ್ಲಿ ವಸಂತಕಾಲವಾಗಿದೆ. ಇಲ್ಲಿಯ ಮೌಲ್ಯ ಗಳು ಸಾರ್ವಕಾಲಿಕ ಮೌಲ್ಯಪ್ರದವಾಗಿವೆ.

ಅಡಿ ಟಿಪ್ಪಣಿಗಳು

1. EC IX Dg. 29 (1424)
2. EC VI Kp. 27 (1427)
3. EC XV Ka. 18 (1429)
4. EC VIII Sk 40 (1442)
5. EC IV 61 (1430)
6. EC IX Bn 127 (1431)
7. EC X Mr. 2. 1434
8. S II IV ಹಂಪೆ (ಕ್ರಿ.ಶ. 1411)

೧೧. ಹಂಪಿ ಶಾಸನಗಳಲ್ಲಿ ದವಸ – ಧಾನ್ಯಗಳು

ವಿರೇಶ ಉತ್ತಂಗಿ

ಹಂಪಿಯಲ್ಲಿರುವ ಪ್ರತಿಯೊಂದು ಕಲ್ಲು - ಬಂಡೆಗಳಿಗೂ ಜೀವವಿರುವಂತೆ ಭಾಸವಾಗುತ್ತದೆ. ಅವು ಮನುಕುಲದ ಕಥೆ ಹೇಳುತ್ತವೆ. ಅಂದರೆ ಅವುಗಳಲ್ಲಿ ಹುದುಗಿರುವ ಕಲಾತ್ಮಕತೆ, ಬರಹ, ಮೂರ್ತಿಶಿಲ್ಪ ಇತ್ಯಾದಿ ಅಂಶಗಳು ನಮ್ಮ ಬದುಕಿನ ಕ್ರಮವನ್ನು ಪ್ರತಿಬಿಂಬಿಸುತ್ತವೆ. ದೇವಾಲಯ, ಕೋಟೆ, ಶಿಲ್ಪ, ಕೆರೆ, ಬಾವಿ, ಕೊಳ, ಬಜಾರ, ಪರ್ವತ, ಗುಹೆ, ದಾನ-ದತ್ತಿ, ಶಾಸನ ಸ್ವರೂಪ ಇತ್ಯಾದಿಗಳು ಸಂಶೋಧನೆಗೆ ಒಳ ಪಟ್ಟು ಅನೇಕ ರೀತಿಯ ಅಧ್ಯಯನ ನಡೆದಿರುವುದು ನಮ್ಮ ಕಣ್ಣು ಮುಂದೆ ಇದೆ. ಆದರೆ ದವಸ - ಧಾನ್ಯಗಳನ್ನು ಕುರಿತು ಸಂಶೋಧನೆಯಾಗಿಲ್ಲ. ದವಸ - ಧಾನ್ಯಗಳು ಮನುಷ್ಯನ ಜೀವನಾಡಿಯಾಗಿದೆ. ಆದ್ದರಿಂದ ನಾನು ಈ ಲೇಖನದಲ್ಲಿ ಹಂಪಿ ಶಾಸನಗಳಲ್ಲಿ ಉಲ್ಲೇಖಗೊಂಡ ದವಸ - ಧಾನ್ಯಗಳಾವುವು? ಅವುಗಳನ್ನೇಕೆ ದೇವಾಲಯಗಳಿಗೆ ನೀಡುತ್ತಿದ್ದರು? ಇದರ ಹಿನ್ನೆಲೆ ಏನು? ವಿಜಯನಗರ ಕಾಲದಲ್ಲಿ ಯಾವ ಧಾನ್ಯಗಳನ್ನು ಹೆಚ್ಚು ಬಳಸುತ್ತಿದ್ದರು ಎಂಬುದನ್ನು ಕುರಿತು ಅಧ್ಯಯನ ಮಾಡಲು ಪ್ರಸ್ತುತ ಲೇಖನದಲ್ಲಿ ಪ್ರಯತ್ನಿಸುತ್ತಿದ್ದೇನೆ.

ಹಂಪಿಯ ಶಾಸನಗಳಲ್ಲಿ ಅಕ್ಕಿ, ಹೆಸರು, ಮೆಣಸು, ಏಲಕ್ಕಿ, ಅರಿಷಿಣ, ಶುಂಠಿ, ಜೀರಿಗೆ, ಮೆಂಥೆ, ಸಾಸಿವೆ, ನಿಂಬೆಹಣ್ಣು, ತೆಂಗಿನಕಾಯಿ, ಉದ್ದು, ಭತ್ತ, ಅಡಿಕೆ ಮುಂತಾದ ಧಾನ್ಯಗಳ ಬಗ್ಗೆ ಉಲ್ಲೇಖ ಸಿಗುತ್ತವೆ. ಇವುಗಳನ್ನು ದೇವಾಲಯಗಳಿಗೆ ದಾನ ನೀಡಿರುವ ಬಗ್ಗೆ ದಾಖಲಿಸಲಾಗಿದೆ. ಬಹುಶಃ ಈ ಮೇಲಿನ ಧಾನ್ಯಗಳನ್ನು ಅಧಿಕವಾಗಿ ಈ ಭಾಗದಲ್ಲಿ ಬೆಳೆಯುದ್ದಿತ್ತಿರಬಹುದು. ಮತ್ತೆ ಕೆಲವು ಶಾಸನಗಳಲ್ಲಿ ಗದ್ದೆಗಳನ್ನು, ಭೂಮಿಯನ್ನು ದೇವಸ್ಥಾನಗಳಿಗೆ ದಾನ ನೀಡಿರುವುದನ್ನು ಕಾಣುತ್ತೇವೆ. ಈ ಗದ್ದೆಗಳಲ್ಲಿ ಮತ್ತು ಭೂಮಿಯಲ್ಲಿ ಬೆಳೆಯುವ ದವಸ - ಧಾನ್ಯಗಳಿಂದ ದೇವಸ್ಥಾನದ ಅರ್ಚಕರು ದೇವರ ಪೂಜೆಯನ್ನು ವ್ಯವಸ್ಥಿತವಾಗಿ ನಡೆಸಿಕೊಂಡು ಹೋಗುವಂತೆ ಪ್ರೇರೇಪಿಸಲಾಗುತ್ತಿತ್ತು.

ವಿಜಯನಗರ ಕಾಲದಲ್ಲಿ ದವಸ - ಧಾನ್ಯಗಳನ್ನು ಮಾರಾಟ ಮಾಡಲು ಒಂದು ಮಾರುಕಟ್ಟೆಯೇ ಇತ್ತು ಎಂದು ಕ್ರಿ.ಶ. ೧೫೩೨ ರ ಶಾಸನ

....ಶ್ರೀ ಬಾಲಕೃಷ್ಣದೇವರಿಗೆ ಗೋದ್ವಾದಶಿ

ಪು(೦)ಣ್ಯ ಕಾಲದಲೂ ಸಮರ್ಪಿಸಿದು ಕೃಷ್ಣಾಪುರದ ಪೇದೆಯ

ದವಸದಂಗಡಿಗಳ ತೊಡೆಯದ ಬಗೆಯಲ್ಲೂ ಸಲುವ ಘಟಿವರಹ'[1]

ಎಂದು ಉಲ್ಲೇಖಿಸುತ್ತದೆ. ಅಂದರೆ ಇದರಿಂದ[2] ಕೃಷ್ಣಾಪುರ ಪೇಟೆಯು ದವಸ - ಧಾನ್ಯಗಳನ್ನು ಮಾರುವ ಮಾರುಕಟ್ಟೆಯಾಗಿತ್ತೆಂದು ಸ್ಪಷ್ಟಪಡಿಸುತ್ತದೆ. ಅಲ್ಲದೆ ದವಸ ಸಂಗ್ರಹಿಸಿಡುವುದಕ್ಕಾಗಿ ಕೃಷ್ಣದೇವಾಲಯದ ಬಲಭಾಗದಲ್ಲಿ ಉಗ್ರಾಣವನ್ನು ನಿರ್ಮಿಸಿದುದೂ, ಇದನ್ನು ಇನ್ನಷ್ಟು ಸಮರ್ಥಿಸುತ್ತದೆ. [2] ಕೃಷ್ಣ ಬಜಾರು ವಿಜಯನಗರ ಆಳ್ವಿಕೆಯ ಕಾಲದಲ್ಲಿ ಪ್ರಮುಖ ವ್ಯಾಪಾರ ಕೇಂದ್ರ ಆಗಿದ್ದಿತು.

ಕ್ರಿ.ಶ. ೧೨೩೬ ರ ಹೊಯ್ಸಳರ ಬಲ್ಲಾಳನ ಕಾಲದ ಶಾಸನವು

[3] ವರ್ಷ೧ಕ್ಕಂ ಭತ್ತ ೨ ಕ್ಕಂ ಸ ೬೭.....

....

....

ಲೆಕ್ಕದೆ ಗ ೫ ಪ೫ || ಹೆಸಱು ಬ೧ಱ.....

....

ಕಂ ಗೋಧುವೆ ಕೊ೧ಱ ... ಅಡಕೆ.[3]

ಎಂದು ವಿರೂಪಾಕ್ಷದೇವರ ಪೂಜೆಗೆ ಸಲ್ಲಬೇಕಾದ ಭತ್ತ, ಹೆಸರು, ಗೋಧಿ ಮತ್ತು ಅಡಕೆ ಕುರಿತು ಉಲ್ಲೇಖಿಸುತ್ತದೆ. ಹಾಗೆಯೇ ಚಂಡಿಕೇಶ್ವರ ದೇವಾಲಯದಲ್ಲಿ ಮುರಿದು ಬಿದ್ದಿರುವ ಕ್ರಿ.ಶ. ೧೫೪೫ರ ಸದಾಶಿವರಾಯನ ಕಾಲದಲ್ಲಿ ದಳವಾಯಿ ಜಂಗಮಯ್ಯನು ಸದಾಶಿವರಾಯನಿಗೂ ಮತ್ತು ಅವನ ಪರಿವಾರದವರಿಗೂ ಪುಣ್ಯ ವಾಗಲೆಂದು ಹಾಕಿಸಿದ ಶಾಸನದಲ್ಲಿ

[4] ಚತ್ರಕೆ ದವಸವ ಹಾಕುವ ಬೇಹಾರಿಗಳಿಗೂ ದೇವರ

ಅಮೃತಪಡಿಗೆ (ವರ್ತ)ನ(ಃ) ಧ (೦)ರ್ಮ ಮುಂತಾಗಿ

ಬಿಟ್ಟರು ದವಸಗ(ಳ) ಕ್ರಯಗಳ ಬ

ಗೆ.... (ಕೊ)ಡುಉದು.....

ಛ(ತ್ರದಿಂ)ದಲೂ ದಿನ೧ಕ್ಕೆ ಕೊಡುಉದು(ಅಕ್ಕಿ) ಅಕಿಯ ತಲ೧ ಹೆಸ

ರು... ಉಪ್ಪುಪಡಿ೧ ಮೆಣಸು ಸೇ

ರು... ಏಲಕ್ಕಿ ಸೇ ÷ ಅರಿಶಿನ ಸೇ = ಶುಂಠಿ ಸೇ =

ಜೀ.... ಮೆಂಥೆ ಸೇ... ಸಾಸವೆ ಸೆ: ಕಾಯಿ ಮೇಲೋಗರ [4]

ಛತ್ರಕ್ಕೆ ದಿನವೊಂದಕ್ಕೆ ನೀಡಬೇಕಾದ ಅಕ್ಕಿ, ಹೆಸರು ಉಪ್ಪು ಮೆಣಸು ಏಲಕ್ಕಿ, ಅರಿಷಿಣ, ಶುಂಠಿ, ಜೀರಿಗೆ, ಮೆಂಥೆ ಸಾಸಿವೆ ಮುಂತಾದ ಧಾನ್ಯಗಳ ಉಲ್ಲೇಖ ಕಂಡುಬರುತ್ತದೆ. ಈ ಶಾಸನದಲ್ಲಿ (ಬರುವ) ಗಮನಿಸಬೇಕಾದ ಮುಖ್ಯ ಅಂಶವೆಂದರೆ ಛತ್ರ. ಛತ್ರವೆಂದರೆ ಊಟ - ವಸತಿಗಳನ್ನು ಉಚಿತವಾಗಿ ನೀಡುವ ಸ್ಥಳ ಎಂದು ಅರ್ಥೈಸಿಕೊಂಡರೆ ದೇವಾಲಯಗಳು ಇದರ ಪ್ರತಿರೂಪವಾಗಿದ್ದವೆಂದು ಭಾವಿಸಬಹುದಾಗಿದೆ. ಅನೇಕ ರಾಜ ಮಹಾರಾಜರು ದೇವಸ್ಥಾನದಲ್ಲಿ ನಿತ್ಯ ಅಥವಾ ವಾರ ಅಥವಾ ತಿಂಗಳಿಗೊಮ್ಮೆ ಅನ್ನಸಂತರ್ಪಣೆ ಅಥವಾ ದಾಸೋಹ ನಡೆಸಲು ಹೊಲ, ಗದ್ದೆಗಳನ್ನು ದವಸ - ಧಾನ್ಯಗಳನ್ನು ದಾನ ನೀಡುತ್ತಿದ್ದರೆಂದು ಊಹಿಸಲು ಸಾಧ್ಯವಿದೆ.

ಹಾಗೆಯೇ ಇದೇ ಕಾಲದ ಇನ್ನೊಂದು ಶಾಸನದಲ್ಲಿ (ಹಾಕಿಸಿದವನು ದಳವಾಯಿ ಜಂಗಮಯ್ಯ)

[5] ದಿನ೧ಕ್ಕೂ ಅಕಿ(ಸಿಥೆ) ಹೆಸರು...

ಪಪಡಿ೧ ಎಂಣೆ ಪಡಿ೧ ಉ(ಪ್ಪು)...

....

(೨) ೬ ನಿಂಬೆ(ಯ) ಹಣು ೩ ಮೆಣಸು ಶಂಭಾರ

(ಸ)ಹ ಕೃಷ್ಣಾಪುರದ ಪೇಟೆಯು [5]

ಇಲ್ಲಿಯೂ ಸಹ ಛತ್ರಕ್ಕೆ (ಒಂದು ದಿನಕ್ಕೆ) ಅಕ್ಕಿ, ಹೆಸರು, ಉಪ್ಪು ಎಣ್ಣೆ, ನಿಂಬೆಹಣ್ಣು, ಮೆಣಸು ಸಂಬಾರ ಮುಂತಾದ ದವಸಗಳನ್ನು ಕೊಡುವ ಬಗ್ಗೆ ವಿವರಿಸುತ್ತದೆ.

ಕ್ರಿ.ಶ. ೫.೮.೧೫೬೩ ರ ಸದಾಶಿವರಾಯನ ಆಳ್ವಿಕೆಯ ಕಾಲದ ೬ ಶಾಸನವು ವಿಠಲದೇವರಿಗೆ ೧೨ಕೊಳಗ ಗದ್ದೆಗಳನ್ನು ಆ ಸ್ಥಳದಲ್ಲಿನ ವೃಕ್ಷ, ಸಾಂಮ್ಯ ಆಯ, ಬಿರಾಡ ಮೊದಲಾದವನ್ನು ಪುದುವಟ್ಟಾಗಿ ಬಿಟ್ಟಂತೆಯೂ. ದೇವರ ನೈವೇದ್ಯಕ್ಕಾಗಿ ದಿನವೊಂದಕ್ಕೆ ನೀಡಬೇಕಾದ ದವಸವನ್ನು ವಿವರಿಸಿದೆ[6]

[7]ತಿರುಮಾಲೆಯ ಪ್ರಸಾದವನೂ ಸಕಲವಾದ್ಯ ಸಹಿತವಾಗಿ ನಮಗೆ

ಕಳುಹಿಸುವುದಕೆ ಕಟ್ಟಿದ ಪುಲಿವೆಟು ವಿವರಾದಿ ೧ಕೆ ದೋಸೆಯ

ಪಡಿ೧ಕೆ ಯಣಿಕೆಜಿಕೆ ಅಕ್ಕಿಯ ಪ ೭ ಕೆಚ ||| 0 ಉದ್ದು ಪ

೩ಕೆ || 0 ಉಪ್ಪು ಪ/೦ ಜೀರಗೆಯ ಪಕೆ ೨

....

....

ಉಭಯಂ ಕುಳ೨ಕೆ ಗದೆಯ ಬೀಜವರಿ... ಅಕ್ಷರದಲ್ಲೂ

ಹಂನೆರಡು ಕೊಳಗದ ಗದ್ದೆಯ ವೊಳಗಣ ಮಾಉ ಸಹಾ ಸಕಲ

ಉ್ರಕ್ಷ ಸುವರ್ಣಾದಾಯ ಬಿರಾಡ ಆಯ ಸಾಂಯ ಮೊದಲಾದ

ರೊಕ್ಕ ಧಾನ್ಯ ಸಹವಾಗಿ ಸರ್ವಮಾನ್ಯವಾಗಿ ಸಮರ್ಪಿಸಿದೆ[7]

ಎಂದು ಮುಂತಾಗಿ ಧಾನ್ಯಗಳ ವಿವರವನ್ನು ದಾಖಲಿಸುತ್ತದೆ.

ಹಾಗೆಯೇ ಕ್ರಿ.ಶ. ೧೨-೭-೧೫೫೪ರಲ್ಲಿ ಸದಾಶಿವರಾಯನು ಆಳುತ್ತಿದ್ದಾಗ ಶ್ರೀವಿಠಲದೇವರಿಗೆ ನೈವೇದ್ಯಕ್ಕಾಗಿ ನೀಡಿದ ವಿವಿಧ ಧಾನ್ಯಗಳ ವಿವರವನ್ನು ಶಾಸನವೊಂದು ದಾಖಲಿಸುತ್ತದೆ.

[8] ದಿನ ೩ಂಕಂ ನಡೆವ ಪಡಿತರ ವಿವರ ದಿ೧ಕಂ ಹರಿ

೧ಕಂ ಕ್ಕಿಲ ಲೂ ಹರಿಳಂ ಕಂ ಅಕ್ಕಿ ಹೆಸರು ಉಪ್ಪು ಮೆಣಸು

ಸಂಭಾರ ಮೇಲೋಗರ...

ಅಕ್ಕಿ ಬೆಲ್ಲ ತುಪ ದವಸ ಸಂಭಾರ ಸಹ ೧/ಗ ೨ || ೪ || ಪಲ ನಯಿವೇಧ್ಯಕೆ

ಎಳನೀರು ತೆಂಗಿನಕಾಯಿ ಬಾಳೆಹಂಣು ಕಡಲೇ ಬೇಳೆ ಹೆಸರ ಬೇಳೆ

ಕಬು ಮೇದರ ಸ್ವರೂಪ........................

.... ಕೂಲಿ ಹಿಟು ಕುಟ್ಟೋದು ಗೋಧಿ

ಬೀಸುವ ಕೂಲಿ ಹೊಜೆಗೂಲಿ[8]

ಈ ಮೇಲಿನ ಎರಡೂ ಶಾಸನಗಳು ದೇವರ ನೈವೇದ್ಯಕ್ಕೆ, ಧ್ವಜಸ್ತಂಭದ ನೈವೇದ್ಯಕ್ಕೆ ದಾನ ನೀಡಿದ ವಿವರ ನೀಡುತ್ತದೆ. ಇವುಗಳಲ್ಲಿ ಮೇಲಿನ ಶಾಸನದಲ್ಲಿ ಪುಲಿವೆಟು ಎಂಬ ಶಬ್ದ ಪ್ರಯೋಗವಾಗಿರುವುದು ವಿಶೇಷವೆನಿಸಿದೆ. ಅಕ್ಕಿ, ಉದ್ದು, ಹೆಸರು, ಮೆಣಸು, ತೆಂಗಿನಕಾಯಿ, ಬಾಳೆಹಣ್ಣು, ಕಡಲೆ ಬೇಳೆ, ಹೆಸರುಬೇಳೆ, ಕಬ್ಬು ಮತ್ತು ಗೋಧಿ ಇನ್ನು ಮುಂತಾದ ಪದಾರ್ಥಗಳನ್ನು ಉಲ್ಲೇಖಿಸುತ್ತವೆ. ಅಲ್ಲದೆ ಗದ್ದೆ ದಾನ ನೀಡಿದುದನ್ನು ದಾಖಲಿಸುತ್ತದೆ.

ಕ್ರಿ.ಶ. ೧೦-೧೨-೧೫೩೩ರ ಅಚ್ಯುತ ದೇವರಾಯನ ಕಾಲದ ಶಾಸನವು

[9]ಉಗ್ರಾಣದಲೂ ಕೊಡುವ ದವಸ ಕಟಳೆ

ದಿನ ೧ದಕ್ಕೆ ಅಕ್ಕಿ ಪಡಿ ೪ಂ ಮೇಲೋಗರ ಉಪ್ಪು ಮೆಣಸು ಸಂಭಾರ

ಹೆಸಱು ಹರಿವಾಣಕೆ ತುಪ್ಪ ಸಖರೆ ಬಾಳೆ ಹಣ್ಣು [ಹಾಲು]

ಮೊಸರು ವೀಳೆಯ ದೀವಿಗೆ ೨ಌ ಪ್ರಮಾಣಿನ ದವಸವನೂ ಕೊಟ್ಟು
ನಡಸಿ ಬರಲುಳದು ಈ ನೈವೇಧ್ಯ ನಿರ್ಮಲ ವೆಚ್ಚ

ಈ ಶಾಸನದಲ್ಲಿ ದವಸ-ಧಾನ್ಯಗಳನ್ನು ತುಂಬಿಡುವ ಉಗ್ರಾಣದ ಬಗ್ಗೆ ಉಲ್ಲೇಖಿಸಿ, ಇದರಿಂದ ದಿನಕ್ಕೆ ೪೦ ಪಡಿ ಅಕ್ಕಿ, ಜೊತೆಗೆ ಉಪ್ಪು, ಮೆಣಸು, ಸಂಭಾರ, ಹೆಸರು, ತುಪ್ಪ, ಸಕ್ಕರೆ, ಬಾಳೆಹಣ್ಣು, ಹಾಲು, ಮೊಸರು ವೀಳೆಯ ಮುಂತಾದವನ್ನು ನೀಡಬೇಕೆಂದು ತಿಳಿಸಿದೆ. ಈ ದವಸ - ಧಾನ್ಯಾದಿಗಳನ್ನು ದೇವರಿಗೆ ನೈವೇದ್ಯ ಮಾಡುವುದರ ಮೂಲಕ ಅರ್ಚಕ - ಪರಿವಾರದವರೂ, ದೇವಾಲಯಕ್ಕೆ ಬರುವ ಕೆಲವು ಭಕ್ತರು ದಾಸೋಹದ ಮೂಲಕ ಸೇವಿಸುತ್ತಿರಬಹುದು. '೧೦ ಶ್ರೀವಿರೂಪಾಕ್ಷ ದೇವರ ಯೇಕಾಂತದ ಅವಸರಕ್ಕೆ ಕೊಟ್ಟಗದ್ದೆ[10]' ಎಂದು ಶಾಸನವೊಂದು ಉಲ್ಲೇಖಿಸುತ್ತದೆ. ಅಂದರೆ ಇವುಗಳು ದೇವಸ್ಥಾನದಲ್ಲಿ [ನಡೆಯುವ ದಾಸೋಹ] ಅನ್ನಸಂತರ್ಪಣೆ ನಡೆಯುತ್ತಿದ್ದುದನ್ನು ದೃಡೀಕರಿಸುತ್ತವೆ. ಅಂದರೆ ದಾನದಿಂದ ಬಂದ ದವಸಗಳನ್ನು ಮತ್ತು ಗದ್ದೆಗಳಿಂದ ಬಂದ ದವಸಗಳನ್ನು ದಿನನಿತ್ಯ ಬರುವ ಭಕ್ತರಿಗೆ ಅನ್ನದಾಸೋಹ ನಡೆಸುತ್ತಿರಬಹುದು. ಗದ್ದೆ ಭತ್ತ ಬೆಳೆಯುವುದನ್ನು ಪ್ರತಿನಿಧಿಸುತ್ತದೆ. ಹಂಪಿ ಪ್ರದೇಶದಲ್ಲಿ ಭತ್ತ ಬೆಳೆಯುವುದರಿಂದ ಗದ್ದೆಗಳನ್ನು ದಾನವಾಗಿ ನೀಡಿರುವುದನ್ನು ನಾವು ಕಾಣಬಹುದು.

ಈ ಗದ್ದೆ, ಹೊಲಗಳಿಂದ ಬರುವ ಧಾನ್ಯಗಳಿಂದ ದೇವರಿಗೆ ನೈವೇದ್ಯಕ್ಕೆ ಅರ್ಚಕರ (ಪೂಜಾರಿ) ಬದುಕಿನ ನಿರ್ವಹಣೆಗೆ ಬೇಕಾದ ಅಗತ್ಯ ಮೂಲ ಸೌಕರ್ಯಗಳನ್ನೂ ಜೊತೆಗೆ ದೇವಾಲಯಕ್ಕೆ ಬರುವ ಭಕ್ತಾದಿಗಳಿಗೆ ಪ್ರಸಾದ ರೂಪದಲ್ಲಿ (ಊಟ) ಅನ್ನಸಂತರ್ಪಣೆ ಏರ್ಪಡಿಸುವುದರ ಮೂಲಕ ದೇವಾಲಯಗಳನ್ನು ಪ್ರವಾಸಿ ಕೇಂದ್ರಗಳಾಗಿ ಮಾರ್ಪಡಿಸಲು ಈ ದವಸ - ಧಾನ್ಯಗಳು ಸಹಕಾರಿಯಾಗಿರಬಹುದೆಂದು ಊಹಿಸಲು ಅವಕಾಶವಿದೆ. ಅಂದರೆ ದೇವಾಲಯಗಳನ್ನು ಪುಣ್ಯಕ್ಷೇತ್ರ ಮಾಡಲು ಅನ್ನ ಸಂತರ್ಪಣೆಯೂ ಒಂದು ಕಾರಣವಿರಬಹುದು. ಈ ಮೂಲಕ ಅನೇಕ ಪ್ರವಾಸಿಗರನ್ನು ಆಕರ್ಷಿಸಿ ಅವರಿಂದ ದೇವಾಲಯಕ್ಕೆ (ದೇವರಿಗೆ) ಮುಡುಪು ಮತ್ತು ಕಾಣಿಕೆ ರೂಪದಲ್ಲಿ ಬರುವ ದವಸ, ಧನಕನಕಾದಿಗಳಿಂದ ರಾಜ್ಯ ಭಂಡಾರವನ್ನು ತುಂಬಿಸಿಕೊಳ್ಳುವ ಯೋಜನೆ ಅಂದಿನ ರಾಜಪ್ರಭುತ್ವಕ್ಕಿರಬಹುದು.

ಹಂಪಿಯಲ್ಲಿ ಕಂಡುಬರುವ ಶಾಸನಗಳಲ್ಲಿ ಅಕ್ಕಿ, ಹೆಸರು, ಅರಿಷಿಣ, ಶುಂಠಿ ಜೀರಿಗೆ, ಮೆಂಥೆ, ಸಾಸಿವೆ, ತೆಂಗು, ನಿಂಬೆ, ಉದ್ದು ಇತ್ಯಾದಿಗಳು ಇದೇ ಪರಿಸರದಲ್ಲಿ ಬೆಳೆಯುವಂತಹಗಳಾಗಿವೆ. ಆದರೆ ಏಲಕ್ಕಿ ಮತ್ತು ಮೆಣಸು ಈ ನೆಲದಲ್ಲಿ ಬೆಳೆಯದಿದ್ದರೂ ಇವುಗಳ ಉಲ್ಲೇಖ ಕಂಡು ಬರುವುದರಿಂದ ಇಲ್ಲಿನ ದೇವರುಗಳಿಗೆ ದೂರಪ್ರದೇಶದ ಭಕ್ತರಿದ್ದರೆಂದು ಊಹಿಸಬಹುದು. ಆದರೆ ಇದೇ ನೆಲದಲ್ಲಿ ಬೆಳೆಯುವ

ರಾಗಿ, ಜೋಳ, ನವಣೆ, ಶೇಂಗಾ ಇತ್ಯಾದಿಗಳ ಉಲ್ಲೇಖ ಬಾರದಿರುವುದು ಅನುಮಾನ ಹುಟ್ಟಿಸುತ್ತದೆ. ಅಂದರೆ ದಾಸೋಹಕ್ಕೆ ಈ ಧಾನ್ಯಗಳನ್ನು ಬಳಸುತ್ತಿದ್ದರೋ ಇಲ್ಲವೋ, ಎಂಬುದು. ಅಲ್ಲದೆ ದಾಸೋಹ ಎಲ್ಲಾ ವರ್ಗಗಳಿಗೆ ಇತ್ತೋ ಇಲ್ಲವೋ ಎಂಬ ಬಗ್ಗೆ ಸಂದೇಹಾಸ್ಪದವಿದೆ. ರಾಗಿ ಉಲ್ಲೇಖ ಕನಕದಾಸರ ರಾಮಧಾನ್ಯ ಚರಿತೆಯ ವಸ್ತುವಾಗಿದೆ. ಇದರಲ್ಲಿ ರಾಗಿ ಮತ್ತು ಭತ್ತಕ್ಕೆ ಜಗಳವಾಗಿ ಕೊನೆಗೆ ಯಾವುದೇ ನುಸಿ (ಹುಳ)ಹತ್ತದ ರಾಗಿ ಗೆದ್ದು ತನ್ನ ಹಿರಿಮೆಯನ್ನು ಹೆಚ್ಚಿಸಿಕೊಂಡುದುದರ ಬಗ್ಗೆ ಕಾವ್ಯವಿವರಿಸುತ್ತದೆ. ರಾಗಿ ಕೆಳವರ್ಗದ ಪ್ರತಿನಿಧಿ, ಭತ್ತ ಮೇಲ್ವರ್ಗದ ಪ್ರತಿನಿಧಿ ಎಂದಿಟ್ಟುಕೊಂಡರೆ, ಮೇಲ್ವರ್ಗ ಮತ್ತು ಕೆಳವರ್ಗದವರ ನಡುವೆ ಆಹಾರಧಾನ್ಯಗಳ ವಿಚಾರವಾಗಿ ಸಂಘರ್ಷ ನಡೆದು ಕೆಳವರ್ಗದ ಜನ ಗೆಲುವು ಸಾಧಿಸಿರಲು ಸಾಧ್ಯವಿದೆ. ಶಾಸನಗಳನ್ನು ಬರೆಸಿ, ಹಾಕಿಸಿದವರು ಬಹುತೇಕ ಆಡಳಿತ ವರ್ಗದವರು ಮತ್ತು ಶ್ರೀಮಂತರು. ಆದ್ದರಿಂದ ಕೆಳವರ್ಗದ ಪ್ರತಿನಿಧಿಯಾದ ರಾಗಿಯನ್ನು ಇವರು ಶಾಸನಗಳಲ್ಲಿ ಉಲ್ಲೇಖಿಸಿಲ್ಲದಿರ ಬಹುದು.

ಒಟ್ಟಾರೆಯಾಗಿ ಹೇಳುವುದಾದರೆ ನಾವು ತಿನ್ನುವ ಆಹಾರಧಾನ್ಯಗಳನ್ನು ನಾವು ನಂಬಿರುವ ದೇವರುಗಳಿಗೆ ಹಿಂದಿನ ಕಾಲದಿಂದಲೂ ದಾನ ನೀಡುವ ಪದ್ಧತಿ ಬೆಳೆದು ಕೊಂಡು ಬಂದಿರುವುದು ಈ ಶಾಸನಗಳ ಮೂಲಕ ತಿಳಿದುಬರುತ್ತದೆ. ಮಾಂಸಾಹಾರಿ ಜನರು ಮಾಂಸದ ನೈವೇದ್ಯವನ್ನು ದೇವರಿಗೆ ಅರ್ಪಿಸುತ್ತಿರುವುದನ್ನು ಇಂದಿಗೂ ಕಾಣುತ್ತೇವೆ. ಆದ್ದರಿಂದ ಮಧ್ಯಕಾಲೀನ ಸಸ್ಯಾಹಾರಿ ಜನರು ಆಹಾರ ಧಾನ್ಯಗಳನ್ನು ದೇವರನೈವೇದ್ಯಕ್ಕೆ ಅರ್ಪಿಸಿರುವುದನ್ನು ಈ ಶಾಸನಗಳ ಮೂಲಕ ಅರಿಯಬಹುದಾ ಗಿದೆ.

ಟಿಪ್ಪಣಿಗಳು

1. ದೇವರ ಕೊಂಡಾರೆಡ್ಡಿ ಮತ್ತು ಇತರರು - 2000, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - 3 ಹಂಪಿ ಶಾಸನಗಳು ಸಂಖ್ಯೆ 22 ಪುಟ 22
2. ಸೋಮಶೇಖರ ಎಸ್. ವೈ. - 1995 ಹಂಪಿಯ ಬಜಾರಗಳು - ಎಂ.ಫಿಲ್ (ಸಂಪ್ರಬಂಧ) ಕನ್ನಡ ವಿಶ್ವವಿದ್ಯಾಲಯ ಹಂಪಿ.
3. ದೇವರ ಕೊಂಡಾರೆಡ್ಡಿ ಮತ್ತು ಇತರರು - 2000 ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - 3 ಹಂಪಿ ಶಾಸನಗಳು ಸಂಖ್ಯೆ 54, ಪುಟ 41
4. ಅದೇ ಸಂಖ್ಯೆ 83, ಪುಟ 83
5. ಅದೇ ಸಂಖ್ಯೆ 84, ಪುಟ 85
6. ಅದೇ ಸಂಖ್ಯೆ 185, ಪುಟ 137, 138

7. ಅದೇ ಸಂಖ್ಯೆ 185, ಪುಟ 138
8. ಅದೇ ಸಂಖ್ಯೆ 186, ಪುಟ 140
9. ಅದೇ ಸಂಖ್ಯೆ 193, ಪುಟ 149
10. ಅದೇ ಸಂಖ್ಯೆ 4, ಪುಟ 3

೧೨. ಶಾಸನಗಳಲ್ಲಿ ಕಂಡಂತೆ ವಿಜಯನಗರ ಪಟ್ಟಣ

ವಿನೋದಾ ಪಾಟೀಲ

ವಿಜಯನಗರ ಪಟ್ಟಣವು, ಕ್ರಿ.ಶ ೧೪ ರಿಂದ ಕ್ರಿ.ಶ.೧೬ ನೆ ಶತಮಾನದವರೆಗೆ ದಕ್ಷಿಣ ಭಾರತವನ್ನೆಲ್ಲ ಆಕ್ರಮಿಸಿಕೊಂಡ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ವಿಜಯನಗರದಲ್ಲಿ ದೊರೆತ ಕೆಲವು ಶಾಸನಗಳಲ್ಲಿ ಈ ಪಟ್ಟಣವನ್ನು ವಿಜಯನಗರ ವೆಂದು ಪ್ರಸ್ತಾಪಿಸಿದರೆ, ಕೆಲವು ಶಾಸನಗಳು ವಿದ್ಯಾನಗರವೆಂದು ಪ್ರಸ್ತಾಪಿಸುತ್ತವೆ. ವಿಸ್ತಾರವಾದ ಈ ಪಟ್ಟಣದ ಅವಶೇಷಗಳು ಈಗ ಹೊಸಪೇಟೆ ತಾಲ್ಲೂಕಿನಲ್ಲಿ ಕಂಡು ಬರುತ್ತವೆ. ಅನೇಕ ವಿದ್ವಾಂಸರ ಮತ್ತು ಪ್ರಾಚ್ಯವಸ್ತು ಇಲಾಖೆಯವರ ಪರಿಶ್ರಮದಿಂದ ಇಲ್ಲಿ ನೂರಾರು ಶಾಸನಗಳು ದೊರೆತಿದ್ದು ಅವುಗಳ ಸಹಾಯದಿಂದ ಈ ಪಟ್ಟಣದ ವಿವಿಧ ಭಾಗಗಳ ಬಗ್ಗೆ ಮತ್ತು ಇಲ್ಲಿರುವ ದೇವಾಲಯ, ಮಠ, ಆಶ್ರಮ, ಪೇಟೆ ಬೀದಿ ಕೋಟೆ ಕೊತ್ತಳಗಳ ಬಗ್ಗೆ, ಹೀಗೆ ಅನೇಕ ವಿಷಯಗಳ ಬಗ್ಗೆ ತಿಳಿಯಬಹುದಾಗಿದೆ.

ಉಪನಗರಗಳು

ವಿಜಯನಗರ ಪಟ್ಟಣವು ಅನೇಕ ಉಪನಗರಗಳಿಂದ ಸುತ್ತುವರಿದಿತ್ತು. ಪಟ್ಟಣದ ಉತ್ತರ ಭಾಗದಲ್ಲಿರುವ ಮುಖ್ಯವಾದ ನಾಲ್ಕು ದೇವಸ್ಥಾನಗಳ ಸುತ್ತಲೂ ಹರಡಿ ಕೊಂಡಿರುವ ಪ್ರದೇಶವನ್ನು ಆಯಾ ದೇವಸ್ಥಾನಗಳಲ್ಲಿ ಪ್ರತಿಷ್ಠಾಪಿಸಿದ ದೇವರ ಹೆಸರಿನಿಂದ ಕರೆಯುತ್ತಿದ್ದರು. ವಿರೂಪಾಕ್ಷ ದೇವಸ್ಥಾನವು ತುಂಗಭದ್ರ ನದಿಯ ದಕ್ಷಿಣದ ದಂಡೆಯ ಮೇಲಿದ್ದು ಇದನ್ನು ಶಾಸನಗಳಲ್ಲಿ ಪಂಪಾ ಎಂದೂ[1], ವಿರೂಪಾಕ್ಷ ದೇವರನ್ನು ಪಂಪಾಪತಿಯೆಂದೂ[2] ಕರೆಯುತ್ತಿದ್ದರು. ವಿರೂಪಾಕ್ಷ ದೇವಸ್ಥಾನದ ಸುತ್ತಲೂ ಇರುವ ಪ್ರದೇಶವನ್ನು ಹಂಪೆ[3], ಹಂಪಾತೀರ್ಥ[4], ಪಂಪಾ ತೀರ್ಥ[5] ಮತ್ತು ಪಂಪಾಕ್ಷೇತ್ರವೆಂದು[6] ಕರೆಯುತ್ತಿದ್ದರು. ಈ ದೇವಸ್ಥಾನದ ಮುಂದಿರುವ ಬೀದಿಯನ್ನು ತೇರುಬೀದಿಯೆಂದು[7] ಕರೆಯುತ್ತಿದ್ದರು. ವಿರೂಪಾಕ್ಷ ದೇವಸ್ಥಾನದ ದಕ್ಷಿಣಕ್ಕೆ ಕೃಷ್ಣ ದೇವಸ್ಥಾನವಿದೆ. ಈ ದೇವಸ್ಥಾನವನ್ನು ಕೃಷ್ಣದೇವರಾಯನು ಕ್ರಿ.ಶ.೧೫೧೩ರಲ್ಲಿ ಕಟ್ಟಿಸಿ, ಬಾಲ ಕೃಷ್ಣನ ಮೂರ್ತಿಯನ್ನು[8] ಪ್ರತಿಷ್ಠಾಪಿಸಿದ್ದಾನೆ. ಈ ದೇವಸ್ಥಾನದ ಸುತ್ತಲೂ ಇರುವ ಪ್ರದೇಶವನ್ನು ಕೃಷಾಪುರವೆಂದೂ[9], ದೇವಸ್ಥಾನದ ಮುಂದೆ ಇರುವ ಬೀದಿಯನ್ನು ತೇರುವೀಧಿ ಅಂದರೆ ಬಾಲಕೃಷ್ಣನ ಪವಿತ್ರ ಬೀದಿ[10] ಎಂದು ಕರೆಯುತ್ತಿದ್ದರು. ಈ ಬೀದಿಯ ಎರಡೂ ಬದಿಗಳಲ್ಲಿ ಕಲ್ಲಿನ ಮಂಪಟಗಳಿದ್ದು ಈ ಬೀದಿಯನ್ನು ಕೃಷ್ಣಾಪುರದ ಪೇಟೆಯೆಂದಲೂ[11]

ಕರೆಯು ತ್ತಿದ್ದರು. ಈ ಮಂಟಪಗಳಲ್ಲಿ ಒಂದು ಮಂಟಪದಲ್ಲಿ ಲಕುಮರಸ ನಾಯಕನ ಒಂದು ಅಂಗಡಿಯಿತ್ತೆಂದು[12] ಶಾಸನದಿಂದ ತಿಳಿಯುತ್ತದೆ. ವಿರೂಪಾಕ್ಷ ಮತ್ತು ಕೃಷ್ಣ ದೇವಸ್ಥಾನದ ಮುಂದಿರುವ ಎರಡೂ ತೇರುಬೀದಿಗಳು ಮತಂಗ ಪರ್ವತದ ಬುಡದಲ್ಲಿ (foot) ಕೊನೆಗೊಳ್ಳುತ್ತವೆ.[13] ಮತಂಗ ಪರ್ವತದ ಪೂರ್ವಕ್ಕೆ ತಿರುವೆಂಗಳನಾಥ ದೇವಸ್ಥಾನವಿದ್ದು ಇದನ್ನು ಹಿರಿಯ ತಿರುಮಲರಾಜನು, ಅಚ್ಯುತ ದೇವರಾಯನ ಆಡಳಿತ ಕಾಲದಲ್ಲಿ, ಕ್ರಿ.ಶ.೧೫೩೪ರಲ್ಲಿ ಕಟ್ಟಿಸಿದ್ದಾನೆ.[14] ಈಗ ದೇವಸ್ಥಾನವನ್ನು ಅಚ್ಯುತರಾಯ ದೇವಸ್ಥಾನವೆಂದು ಕರೆಯುತ್ತಾರೆ. ಈ ದೇವಸ್ಥಾನದ ಸುತ್ತಲಿರುವ ಪ್ರದೇಶವನ್ನು ಅಚ್ಯುತಾಪುರವೆಂದು[15] ಕರೆಯುತ್ತಿದ್ದರು. ಈ ದೇವಸ್ಥಾನದ ಮುಂದಿರುವ ಬೀದಿಯನ್ನೂ ತೇರು ಬೀದಿ ಎಂದು ಕರೆಯುತ್ತಿದ್ದರು. ಇಲ್ಲಿಯೂ ಸಹ ಬೀದಿಯ ಎರಡೂ ಬದಿಗಳಲ್ಲಿ ಮಂಟಪಗಳಿದ್ದು ಅವು ಅಂಗಡಿ ಗಳಾಗಿದ್ದವು ಮತ್ತು ಈ ಬೀದಿಯಲ್ಲಿ ಅಚ್ಯುತರಾಯ ಪೇಟೆ ಎಂದು ಕರೆಯುತ್ತಿದ್ದರು. ಅಚ್ಯುತಾ ಪುರದ ಈಶಾನ್ಯಕ್ಕೆ ವಿಠ್ಠಲ ದೇವಸ್ಥಾನವಿದೆ. ಈ ದೇವಸ್ಥಾನದ ಸುತ್ತಲೂ ಇರುವ ಪ್ರದೇಶವನ್ನು ವಿಠಲಾಪುರ[16]ವೆಂದು ಕರೆಯುತ್ತಿದ್ದರು. ದೇವಸ್ಥಾನದ ಮುಂದಿರುವ ತೇರು ಬೀದಿಯ ಪೂರ್ವಕ್ಕೆ ಕೊನೆಯಲ್ಲಿ ಪರಾಂಕುಶ ಮಂಟಪವಿದ್ದು[17] ಉತ್ಸವ ದಿನಗಳಂದು ವಿಠಲ ದೇವರನ್ನು ಈ ಮಂಟಪಕ್ಕೆ ಒಯ್ಯುತ್ತಿದ್ದರು. ವಿಠ್ಠಲ ದೇವಸ್ಥಾನದ ಈಶಾನ್ಯಕ್ಕೆ, ನದಿಯ ದಂಡೆಯ ಮೇಲೆ ಉತ್ತರಕ್ಕೆ ಆನೆಗೊಂದಿ ಪಟ್ಟಣವಿದ್ದು ಪ್ರಾರಂಭದ ಕಾಲದಲ್ಲಿ ಇದು ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿದ್ದು ನಂತರ ಕೇವಲ ಉಪಪಟ್ಟಣವಾಗಿ ಉಳಿಯಿತು.[18] ಆನೆ ಗೊಂದಿಯ ದಕ್ಷಿಣ ದಿಕ್ಕಿಗೆ, ತುಂಗಭದ್ರ ನದಿಯ ದಕ್ಷಿಣದ ದಂಡೆಯ ಮೇಲೆ ಒಂದು ಗ್ರಾಮವಿದೆ. ಇಲ್ಲಿ ಕಾಯಪ್ಪಣ್ಣಯ್ಯ ಎಂಬುವನು ಎರಡನೆಯ ದೇವರಾಯನ ಆದೇಶದ ಮೇರೆಗೆ ಒಂದು ದೇವಸ್ಥಾನ ಕಟ್ಟಿಸಿ ಸೌಮ್ಯಸೋಮೇಶ್ವರ ದೇವರನ್ನು ಪ್ರತಿಷ್ಠಾಪಿಸಿದ್ದಾನೆ.[19] ಆದ್ದರಿಂದ ಈ ದೇವಸ್ಥಾನದ ಸುತ್ತಲಿರುವ ಪ್ರದೇಶವನ್ನು ಸೋಮಲಾಪುರವೆಂದು ಕರೆಯುತ್ತಿದ್ದರು.

ವಿಜಯನಗರ ಪಟ್ಟಣದ ದಕ್ಷಿಣಕ್ಕಿರುವ ಕಮಲಾಪುರ ಗ್ರಾಮವನ್ನು ಎರಡನೆಯ ದೇವರಾಯನ ಪತ್ನಿ ಕಮಲಾದೇವಿ[20] ಹೆಸರಿನಲ್ಲಿ ಕಟ್ಟಿಸಿದ್ದಾರೆ. ಕಮಲಾಪುರದ ಹತ್ತಿರದಲ್ಲಿ ಕೊಂಡಮರಸಯ್ಯನಪಾಳ್ಯವಿದೆ.[21]

ಪಟ್ಟಣದ ಹೊರಕೋಟೆಯ ಹತ್ತಿರ ಆಗ್ನೆಯ ದಿಕ್ಕಿನಲ್ಲಿ ವರದಾಜಮ್ಮನ ಪಟ್ಟಣವಿತ್ತು. ಅಚ್ಯುತದೇವರಾಯನ ಪತ್ನಿ ವರದಾಜಮ್ಮನ ಹೆಸರಿನಲ್ಲಿ ಇದನ್ನು ಕಟ್ಟಿದ್ದಾರೆ. ಈ ಪಟ್ಟಣದ ಪೂರ್ವಕ್ಕೆ ರಘುನಾಥ ದೇವಸ್ಥಾನವನ್ನು ಕ್ರಿ.ಶ.೧೫೪೦ಲ್ಲಿ ಕಟ್ಟಿದ್ದಾರೆ.[22]

ಪಟ್ಟಣದ ಪಶ್ಚಿಮಕ್ಕೆ ಕಡಿರಾಮಪುರವೆಂಬ ಗ್ರಾಮವಿದೆ. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಇದನ್ನು ಕಡೆರಾಮಪುರವೆಂದು ಕರೆಯುತ್ತಿದ್ದರು. [23]

ಹೊಸಪೇಟೆ ಹತ್ತಿರವಿರುವ ಈಗಿನ ಅನಂತಶಯನ ಗುಡಿ ಎಂಬ ಗ್ರಾಮವನ್ನು ಮೊದಲು ಸಾಲೆ ತಿರುಮಲ ಮಹಾರಾಯಪುರವೆಂದು [24] ಕರೆಯುತ್ತಿದ್ದರು. ತಿರುಮಲೆ ಮಹಾರಾಯನು ಕೃಷ್ಣದೇವರಾಯನ ಮಗ.

ಅನಂತಶಯನಗುಡಿಯ ಎತ್ತರಕ್ಕೆ ನಾಗೇನಹಳ್ಳಿಯಿದೆ. ಮೊದಲು ಇದನ್ನು ನಾಗಲಾದೇವಿಪುರ ಅಗ್ರಹಾರವೆಂದು ಕರೆಯುತ್ತಿದ್ದರು. ಕೃಷ್ಣದೇವರಾಯನ ತಾಯಿ ನಾಗಲಾದೇವಿಯ ಹೆಸರಿನಿಂದ ಇದನ್ನು ಕರೆಯುತ್ತಿದ್ದರು. ನಾಗಸಮುದ್ರವೆಂಬ ಒಂದು ಕೆರೆ, ನಾಗೇಶ್ವರ ಎಂಬ ಶೈವದೇವಸ್ಥಾನ ಮತ್ತು ನಾಗೇಂದ್ರಶಯನವೆಂಬ ವೈಷ್ಣವ ದೇವಸ್ಥಾನಗಳನ್ನು ಕಟ್ಟಿಸಿದ (ಕ್ರಿ.ಶ.೧೫೧೬) ರಂಗನಾಥ ದೀಕ್ಷಿತರಿಗೆ ಈ ಗ್ರಾಮವನ್ನು ಕೃಷ್ಣದೇವರಾಯನು ದಾನ ನೀಡಿದ್ದಾರೆ. [25]

ಹೊಸಪೇಟೆ ಪಟ್ಟಣದಲ್ಲಿರುವ ಸಣ್ಣಕ್ಕಿ ವೀರಭದ್ರ ದೇವಸ್ಥಾನದ ಸುತ್ತಲಿರುವ ಪ್ರದೇಶವನ್ನು, ಕೃಷ್ಣದೇವರಾಯನ ಪತ್ನಿ ತಿರುಮಲದೇವಿಯವರ ಹೆಸರಿನಲ್ಲಿ, ತಿರುಮಲದೇವಿಯಮ್ಮನವರ ಪಟ್ಟಣವೆಂದು ಕರೆಯುತ್ತಿದ್ದರು. ಈ ದೇವಸ್ಥಾನ ದಲ್ಲಿರುವ ಕ್ರಿ.ಶ. ೧೫೩೧ರ ಒಂದು ಶಾಸನವು ಈ ಪಟ್ಟಣದ ಗೌರೇಶ್ವರ ದೇವರಿಗೆ ದಾನ ನೀಡಿದ ವಿಷಯ ತಿಳಿಸುತ್ತದೆ. [26] ಇಲ್ಲಿಯೇ ಇರುವ ಚಿರವಾಡಿ ಗ್ರಾಮವು ಈ ಚಿಡ್ವಾಡ್ಗಿ ಎಂದು ಕರೆಯಲ್ಪಡುತ್ತಿದೆ.

2. ಹೆಬ್ಬಾಗಿಲುಗಳು ಮತ್ತು ಬುರುಜುಗಳು : ವಿಜಯನಗರ ಪಟ್ಟಣವು ಕೋಟೆಯ ಏಳುಸಾಲು (ಸುತ್ತು)ಗಳಿಂದ ಸುತ್ತುವರಿಯಲ್ಪಟ್ಟಿತ್ತು. ಆದರೆ ಈಗ ಕೇವಲ ನಾಲ್ಕು ಸಾಲುಗಳು ಮಾತ್ರ ಇವೆ. ಈ ನಾಲ್ಕೂ ಸಾಲುಗಳಲ್ಲಿರುವ ಹೆಚ್ಚಿನ ಬಾಗಿಲು ಮತ್ತು ಕೊತ್ತಳಗಳಿಗೆ ಹೆಸರುಗಳಿವೆ. ಇತ್ತೀಚೆಗೆ ದೊರೆತ ಶಾಸನಗಳ ಆಧಾರದಿಂದ ಬಾಗಿಲು ಮತ್ತು ಕೊತ್ತಳಗಳನ್ನು ಗುರುತಿಸಲಾಗಿದೆ. ಶಾಸನಗಳಲ್ಲಿ ಕೋಟಿಶಂಕರ ದೇವರ ಬಾಗಿಲು, ಜಡೆಯಶಂಕರದೇವರ ದಿಡ್ಡಿ, ಹಂಪಾದೇವಿಯ ದಿಡ್ಡಿ, ಹೊಡೆಯ ಬಾಗಿಲು, ಮತಂಗೇಶ್ವರ ದೇವರ ದಿಡ್ಡಿ, ಸಿಂಗಾರದ ಹೆಬ್ಬಾಗಿಲು, ಸೋಮವಾರದ ಬಾಗಿಲು, ಅರೆಶಂಕರಬಾಗಿಲು, ಬೇಟೆಕಾರ ಹೆಬ್ಬಾಗಿಲು, ಸ್ವಾಮಿದೇವರ ಬಾಗಿಲು, ಉಪ್ಪರಿಗೆ ಬಾಗಿಲು, ಉದಯಗಿರಿ ಬಾಗಿಲು, ಕೊಠಾರದ ಬಾಗಿಲು, ಹೂವಿನ ಬಾಗಿಲು ಮತ್ತು ಪೆನುಕೊಂಡೆ ಬಾಗಿಲುಗಳ ಪ್ರಸ್ತಾಪವಿದೆ.[27] ಈ ಎಲ್ಲ ಬಾಗಿಲುಗಳು ಒಂದೇ ಅಳತೆಯಲ್ಲಿಲ್ಲ. ಇವುಗಳ ಅಳತೆ ಮತ್ತು ಶಾಸನಗಳಲ್ಲಿ ದೊರೆತ ಮಾಹಿತಿಯ ಆಧಾರದಿಂದ ಬಾಗಿಲುಗಳನ್ನು ಮೂರು ಗುಂಪುಗಳಲ್ಲಿ ವಿಂಗಡಿಸಲಾಗಿದೆ. ಅವು ಕೆಳಗಿನಂತಿವೆ. *1. ಹೆಬ್ಬಾಗಿಲು* : ಇದು ದೊಡ್ಡ ಅಳತೆಯ ಅಥವಾ ಮುಖ್ಯ ಬಾಗಿಲು. *2. ಬಾಗಿಲು* : ಇದು ಸಾಮಾನ್ಯ ಬಾಗಿಲುಗಳಿರುವ ಅಳತೆಯದು.

3. ದಿಡ್ಡಿ : ಇದು ಚಿಕ್ಕದಾಗಿದ್ದು ಜನರು ತಮ್ಮ ದೈನಂದಿನ ಕೆಲಸ ಮುಗಿಸಿ ಪಟ್ಟಣದ ಒಳಗೆ ಬರುವ ಬಾಗಿಲು. ಒಂದನೆಯ ಬುಕ್ಕರಾಯನ ಕಾಲದ ಒಂದು ಶಾಸನವು, ವಿಜಯನಗರ ಪಟ್ಟಣದ ಪೂರ್ವಕ್ಕೆ ಕೋಟೆಯ ಒಳಗಿನ ಸಾಲಿನಲ್ಲಿರುವ ಒಂದು ಬಾಗಿಲಿನ ಬಗ್ಗೆ ಪ್ರಸ್ತಾಪಿಸುತ್ತದೆ. ಈ ಬಾಗಿಲನ್ನು ಸಿಂಗಾರದ ಹೆಬ್ಬಾಗಿಲು[28] ಎಂದು ಕರೆಯುತ್ತಿದ್ದರೆಂದು ಶಾಸನದಿಂದ ತಿಳಿಯುತ್ತದೆ. ರಾಮಚಂದ್ರ ದೇವಸ್ಥಾನದಿಂದ ಆನೆಗೊಂದಿಗೆ ಹೋಗುವ ಮುಖ್ಯ ರಸ್ತೆಯು ಈ ಹೆಬ್ಬಾಗಿಲಿನ ಮೂಲಕವೇ ಹಾಯ್ದು ಹೋಗಿದೆ. ಈ ಹೆಬ್ಬಾಗಿಲಿನ ಆಗ್ನೇಯ ದಿಕ್ಕಿನಲ್ಲಿ ಇನ್ನೊಂದು ಭಾಗಿಲು ಇದ್ದು ಇದನ್ನು ಸೋಮವಾರದ ಬಾಗಿಲು [29] ಎಂದು ಕರೆಯುತ್ತಾರೆ. ಒಂದನೆಯ ಬುಕ್ಕರಾಯನ ಕಾಲದ ಇನ್ನೊಂದು ಶಾಸನದಲ್ಲಿ ಈ ಬಾಗಿಲು ವಿಜಯನಗರ ಪಟ್ಟಣದ ಪೂರ್ವಕ್ಕೆ ಇದೆ ಎಂದು ತಿಳಿಸಲಾಗಿದೆ. ಗಾಣಗಿತ್ತಿ ಜೈನ, ದೇವಸ್ಥಾನದಲ್ಲಿರುವ ಒಂದು ಶಾಸನವು ಉಪ್ಪರಿಗೆ ಬಾಗಿಲಿನ [30] ಬಗ್ಗೆ ತಿಳಿಸುತ್ತದೆ. ಈ ದೇವಸ್ಥಾನದ ಹತ್ತಿರ ಇನ್ನೆರಡು ಬಾಗಿಲುಗಳಿವೆ. ಒಂದು ಬಾಗಿಲು ದೇವಸ್ಥಾನದ ಉತ್ತರಕ್ಕಿದ್ದರೆ ಇನ್ನೊಂದು ಪೂರ್ವಕ್ಕಿದೆ. ಪೂರ್ವಕ್ಕಿರುವ ಬಾಗಿಲನ್ನು ಈಗ ಭೀಮನ ಬಾಗಿಲು ಎಂದು ಕರೆಯುತ್ತಾರೆ. ಈ ಬಾಗಿಲಿಗೆ ಮೇಲಿನ ಅಂತಸ್ತು ಇಲ್ಲ. ಉತ್ತರ ಕ್ಕಿರುವ ಬಾಗಿಲು ಹಾಳಾಗಿದೆ. ಸಿಂಗಾರದ ಹೆಬ್ಬಾಗಿಲು, ಸೋಮವಾರದ ಬಾಗಿಲು ಮತ್ತು ಉಪ್ಪರಿಗೆ ಬಾಗಿಲುಗಳು ಕೋಟೆಯ ಒಂದೇ ಸಾಲಿನಲ್ಲಿವೆ. ಕೋಟೆಯ ಇನ್ನೊಂದು ಸಾಲಿನಲ್ಲಿರುವ ಒಂದು ಬಾಗಿಲನ್ನು ಕೋಟಿ ಶಂಕರದೇವರ ಬಾಗಿಲು[31] ಎಂದು ಕರೆಯುತ್ತಾರೆಂದು ಹತ್ತಿರದಲ್ಲಿರುವ ಎರಡು ಶಾಸನಗಳಿಂದ ತಿಳಿಯುತ್ತದೆ. ಇದೇ ಬಾಗಿಲಿನ ಹತ್ತಿರ ಉತ್ತರಕ್ಕೆ ಇನ್ನೊಂದು ಚಿಕ್ಕ ಬಾಗಿಲು ಇದ್ದು ಇದನ್ನು ಜಡೆಯಶಂಕರ ದೇವರ ದಿಡ್ಡಿ[32]ಯೆಂದು ಕರೆಯುತ್ತಿದ್ದುದು ಬಾಗಿಲಿನ ಪಕ್ಕದಲ್ಲೇ ಇರುವ ಶಾಸನದಿಂದ ತಿಳಿದುಬರುತ್ತದೆ. ಈ ಬಾಗಿಲಿನ ಉತ್ತರ ದಿಕ್ಕಿನಲ್ಲಿ ಇನ್ನೊಂದು ಚಿಕ್ಕ ಬಾಗಿಲು ಇದೆ. ಬಾಗಿಲಿನ ಒಂದು ಬಂಡೆಯ ಮೇಲಿರುವ ಶಾಸನದಿಂದ ಈ ಬಾಗಿಲನ್ನು ಪಂಪಾದೇವಿಯ ದಿಡ್ಡಿ[33] ಎಂದು ಕರೆಯುತ್ತಿದ್ದರೆಂದು ತಿಳಿಯುತ್ತದೆ. ಮೇಲೆ ತಿಳಿಸಿದ ಬಾಗಿಲುಗಳಲ್ಲದೆ ಇನ್ನೂ ಇಲ್ಲಿ ಹೊಡೆಯ ಬಾಗಿಲು, ರೆಮ್ಮು ದಿಡ್ಡಿ ಎಂಬ ಬಾಗಿಲುಗಳಿವೆ.

ಉದಯಗಿರಿ ಬಾಗಿಲಿನ ಮುಂದಿರುವ (infront) ಅನಂತಾಪುರವೆಂಬ ಗ್ರಾಮವನ್ನು ವಿಠಲದೇವರಿಗೆ ದಾನನೀಡಿದ್ದನ್ನು ವಿಠಲ ದೇವಸ್ತಾನದಲ್ಲಿರುವ ಶಾಸನವು ತಿಳಿಸುತ್ತದೆ.[34] ಕೃಷ್ಣದೇವರಾಯನು ಓರಿಸ್ಸಾ ರಾಜ್ಯದ ಉದಯಗಿರಿಯನ್ನು ಗೆದ್ದ ನೆನಪಿಗಾಗಿ ಈ ಬಾಗಿಲಿಗೆ ಉದಯಗಿರಿ ಬಾಗಿಲು ಎಂದು ನಾಮಕರಣ ಮಾಡಿದ್ದಾನೆ. ರಾಜವಂಶದವರ ವಸತಿ ಸಮುಚ್ಛಯದ ಪೂರ್ವಕ್ಕೆ ಬೆಟ್ಟಗಳ (hillocus) ಮಧ್ಯದಲ್ಲಿ ಒಂದು ದೊಡ್ಡ ಬಾಗಿಲು ಇದ್ದು ಇದನ್ನು ಬೇಟೆಕಾರರ ಹೆಬ್ಬಾಗಿಲು ಎಂದು ಕರೆಯು ತ್ತಾರೆಂದು ಬಾಗಿಲಿನ

ಈಶಾನ್ಯ ದಿಕ್ಕಿನಲ್ಲಿರುವ ಒಂದು ಶಾಸನದಿಂದ ಗೊತ್ತಾಗುತ್ತದೆ. ಈ ಶಾಸನವು ಎರಡನೆಯ ಹರಿಹರನ ಕಾಲದ್ದಾಗಿದ್ದು (ಕ್ರಿ.ಶ.೧೩೮೦) ಮೈಲಾರದೇವರ ದೇವಸ್ಥಾನ ವನ್ನು ಬೇಟೆಕಾರರ ಬಾಗಿಲಿನ ಪೂರ್ವಕ್ಕೆ ಕಟ್ಟಿದ್ದಾರೆಂದು ತಿಳಿಸುತ್ತದೆ.[35] ಮಾಲ್ಯವಂತ ಬೆಟ್ಟದ ವಾಯವ್ಯ ದಿಕ್ಕಿನಲ್ಲಿ, ತಳಾರಿಘಾಟಿಗೆ ಹೋಗುವ ಮಾರ್ಗದಲ್ಲಿ ಒಂದು ಬಾಗಿಲು ಇದ್ದು ಇದನ್ನು ತಳಾರಿಘಾಟ್ ಬಾಗಿಲು ಎಂದು ಕರೆಯುತ್ತಾರೆ. ಈ ಬಾಗಿಲಿಗೆ ಅರೆಶಂಕರ ಬಾಗಿಲು[36] ಎಂಬ ಹೆಸರಿದ್ದುದು ಶಾಸನದಿಂದ ತಿಳಿಯುತ್ತದೆ.

ವರದಾಜಮ್ಮನ ಪಟ್ಟಣವು ವಿಜಯನಗರ ಪಟ್ಟಣದ ಆಗ್ನೇಯ ದಿಕ್ಕಿನಲ್ಲಿದೆ. ಇದರ ಪೂರ್ವಕ್ಕೆ ಕೋಟೆಯ ಹೊರ ಆವರಣ (line) ಇದ್ದು ಈ ಆವರಣದಲ್ಲಿ ಒಂದು ಬಾಗಿಲು ಇದೆ. ಈ ಬಾಗಿಲಿನ ಹತ್ತಿರವಿರುವ ರಘುನಾಥ ದೇವಸ್ಥಾನದ ಮುಂದಿರುವ ಒಂದು ಶಾಸನವು (ಕ್ರಿ.ಶ.೧೫೪೧) ರಘುನಾಥದೇವರ ಪ್ರತಿಷ್ಠಾಪನೆಯ ವಿಷಯ ತಿಳಿಸುತ್ತದೆ.[37] ಈ ದೇವರನ್ನು ವರದಾಜಮ್ಮನ ಪಟ್ಟಣದ ಪೂರ್ವಕ್ಕಿರುವ ಪೆನುಗೊಂಡೆ ಬಾಗಿಲಿನ ಹತ್ತಿರ ಪ್ರತಿಷ್ಠಾಪಿಸಿದೆ ಎಂದು ಶಾಸನದಲ್ಲಿರುವುದರಿಂದ ಈ ದೇವಸ್ಥಾನದ ಹತ್ತಿರವಿರುವ ಬಾಗಿಲು ಪೆನುಗೊಂಡೆ ಬಾಗಿಲು ಎಂದು ಗುರುತಿಸಬಹುದಾಗಿದೆ. ಪಟ್ಟಾಭಿರಾಮ ದೇವಸ್ಥಾನದ ಎದುರಿಗೆ (opposite) ಎರಡು ಬಾಗಿಲುಗಳಿದ್ದು ಅವುಗಳಲ್ಲಿ ಒಂದನ್ನು ಸ್ವಾಮಿದೇವರ ಬಾಗಿಲು ಎಂದು ಕರೆಯುತ್ತಾರೆ.

ಸೋಮಲಾಪುರ ಗ್ರಾಮದ ಸ್ಥಾಪನೆಯ ಬಗ್ಗೆ ತಿಳಿಸುವ ಶಾಸನವು ಈ ಗ್ರಾಮದ ಪಶ್ಚಿಮಕ್ಕೆ ಕೊಠಾರದ ಬಾಗಿಲು[38] ಇದೆ ಎಂದು ತಿಳಿಸುತ್ತದೆ. ಈ ಸ್ಥಳದ (locality) ಪಶ್ಚಿಮಕ್ಕೆ ಕೋಟೆಯ ಒಳಗೆ ಒಂದುಬಾಗಿಲು ಇದೆ. ಇದೇ ಕೊಠಾರದ ಬಾಗಿಲು ಎಂದು ಊಹಿಸಬಹುದಾಗಿದೆ.

ಸಂಡೂರು ತಾಲೂಕಿನ ರಾಮಗಡದಲ್ಲಿರುವ ಒಂದು ಶಾಸನವು ರಾಮಣನೆಂಬ ವ್ಯಕ್ತಿಯು ವಿಜಯನಗರದ ಹೂವಿನ ಬಾಗಿಲಿನ ಹನುಮಾನ ದೇವರ ಪೂಜಾರಿ ಯಾಗಿದ್ದನೆಂದು ತಿಳಿಸುತ್ತದೆ. ರಾಜವಂಶದವರ ವಸತಿ ನಿಲಯದ ಸಮುಚ್ಚಯದ ನೈಋತ್ಯದಿಕ್ಕಿನಲ್ಲಿ ಒಂದು ಬಾಗಿಲು ಇದೆ. ಇದರ ಮುಂದೆ ಒಂದು ದೇವಸ್ಥಾನದಲ್ಲಿ ದೊಡ್ಡ ಹನುಮಾನ ದೇವರ ವಿಗ್ರಹವಿದೆ. ಈ ದೇವಸ್ಥಾನವನ್ನು ಮಲ್ಲಿಕಾರ್ಜುನನು ಕ್ರಿ.ಶ.೧೪೪೭-೧೪೬೫ರಲ್ಲಿ ಕಟ್ಟಿಸಿದ್ದು, ಇದು ಮೊದಲು ಕೃಷ್ಣನ ದೇವಸ್ಥಾನವಾ ಗಿತ್ತು[39] ಈಗಿರುವ ಹನುಮಾನ ವಿಗ್ರಹವನ್ನು ಬಹುಶಃ ವಿಜಯನಗರ ಕಾಲದಲ್ಲಿ ಇಟ್ಟಿರಬಹುದು. ಆದ್ದರಿಂದ ಈ ಬಾಗಿಲನ್ನು ಹೂವಿನ ಬಾಗಿಲು ಎಂದು ಕರೆದಿರ ಬಹುದು.

ಮತಂಗ ಪರ್ವತದ ದಕ್ಷಿಣಕ್ಕೆ, ತುರ್ತು ಕಾಲುವೆಯ ಹತ್ತಿರ ಕೋಟೆಯ ಒಂದು ಸುತ್ತು (line) ಇದೆ. ಇಲ್ಲಿ ಒಂದು ಸಣ್ಣ ಬಾಗಿಲು ಇದ್ದು ಇದನ್ನು ಮತಂಗೇಶ್ವರ ದೇವರ ದಿಡ್ಡಿಯೆಂದು[40] ಕರೆಯುತ್ತಿದ್ದುದು ಹತ್ತಿರದಲ್ಲಿಯೆ ಇರುವ ಚಿಕ್ಕ (label)

ಶಾಸನದಿಂದ ತಿಳಿದುಬರುತ್ತದೆ. ಇದೇ ರೀತಿ ಇಲ್ಲಿ ಪ್ರತಾಪ ಕೊತ್ತಳ, ಸ್ವಾಮಿ ದ್ರೋಹರ ಗಂಡನ ಕೊತ್ತಳ, ಮಳಲ ವಿನಾಯಕ ಕೊತ್ತಳ, ಜಲಸೇನದೇವರ ಕೊತ್ತಳ, ಹಂಪೆಯ ಕೊತ್ತಳ, ಮದನ ಕೊತ್ತಳ ಇನ್ನೂ ಅನೇಕ ಕೊತ್ತಳಗಳಿದ್ದುದು ಬುರುಜಿನ (bastion) ಮೇಲಿರುವ ಚಿಕ್ಕ (label) ಶಾಸನಗಳಿಂದ ತಿಳಿಯುತ್ತದೆ.[41]

ರಸ್ತೆ, ಮಾರುಕಟ್ಟೆ ಮತ್ತು ಅಂಗಡಿಗಳು

ಒಂದು ಮುಖ್ಯರಸ್ತೆಯು ಹಜಾರರಾಮ ದೇವಸ್ಥಾನದಿಂದ ಪ್ರಾರಂಭವಾಗಿ, ಸಿಂಗಾರದ ಹೆಬ್ಬಾಗಿಲು, ಮತ್ತು ಅರೆಶಂಕರ ಬಾಗಿಲುಗಳ ಮೂಲಕ ಹಾಯ್ದು ನದಿದಂಡೆಯ ಮೇಲೆ ದೋಣಿ ನಿಲ್ಲುವ ಸ್ಥಳ (ferry point) ವನ್ನು ತಲುಪುತ್ತದೆ. ಈ ರಸ್ತೆಯು ಹಜಾರರಾಮ ದೇವಸ್ಥಾನ ಮತ್ತು ಆನೆಗೊಂದಿಯನ್ನು ಜೋಡಿಸುವ ಈಶಾನ್ಯ ರಸ್ತೆಯಾಗಿದೆ. ಹಜಾರರಾಮ ದೇವಸ್ಥಾನದಿಂದ ಈ ರಸ್ತೆಯಲ್ಲಿ ಹೋದರೆ ಮಧ್ಯದಲ್ಲಿ ಪಟ್ಟಣದ ಎಲ್ಲಮ್ಮ ದೇವಸ್ಥಾನದ ಹತ್ತಿರ ರಂಗ ದೇವಸ್ಥಾನವಿದೆ. ಈ ದೇವಸ್ಥಾನ ದಲ್ಲಿರುವ ಕ್ರಿ.ಶ.೧೫೪೦ರ ಒಂದು ತೆಲಗು ಶಾಸನವು, ತಿಮ್ಮರಾಜನು ವಿದ್ಯಾನಗರ (ವಿಜಯನಗರ)ದಲ್ಲಿ ಪೆದ್ದ ಅಂಗಡಿ ವೀಧಿಯ ಪಶ್ಚಿಮಕ್ಕಿರುವ ಮಾಧವ ದೇವಸ್ಥಾನದಲ್ಲಿ ರಂಗಮಂಟಪವನ್ನು ಕಟ್ಟಿಸಿದನೆಂದು ತಿಳಿಸುತ್ತದೆ.[42] ಪೆದ್ದ ಅಂಗಡಿ ವೀಧಿ ಎಂದರೆ ದೊಡ್ಡ ಅಂಗಡಿ ರಸ್ತೆ, ಅಂದರೆ ಮುಖ್ಯ ಮಾರುಕಟ್ಟೆ ರಸ್ತೆ, ಈ ದೇವಸ್ಥಾನದ ಈಶಾನ್ಯಕ್ಕಿರುವ ರಸ್ತೆಯನ್ನು ಪೆದ್ದ ಅಂಗಡಿ ವೀಧಿ ಎಂದು ಕರೆಯುತ್ತಿದ್ದರೆಂದು ಶಾಸನದಿಂದ ಗೊತ್ತಾಗುತ್ತದೆ. ಅದೇ ರಸ್ತೆಯಲ್ಲಿ ಮುಂದೆ ಹೋದರೆ ಒಂದು ಜೈನ ದೇವಸ್ಥಾನವಿದೆ. ಈ ದೇವಸ್ಥಾನದಲ್ಲಿ ಎರಡನೆಯ ದೇವರಾಯನ ಕ್ರಿ.ಶ. ೧೪೨೬ರ ಒಂದು ಶಾಸನವಿದೆ. ಈ ಪಾರ್ಶ್ವಜಿನೇಶ್ವರ ಅಥವಾ ಪಾರ್ಶ್ವನಾಥ ದೇವಸ್ಥಾನ ವನ್ನು ಕ್ರಮುಕ ಪರ್ಣಾಪಣ- ವೀಧಿಯಲ್ಲಿ ಕಟ್ಟಿಸಿದ್ದಾರೆಂದು ತಿಳಿಸುತ್ತದೆ. ಈ ರಸ್ತೆಯನ್ನು ಪರ್ಣ-ಪೂಗಿಫಲಾಪಣ- ವೀಧಿ ಅಂದರೆ ಪಾನಂ -ಸುಪಾರಿ ರಸ್ತೆಯೆಂದೂ ಕರೆಯುತ್ತಿದ್ದ ರೆಂದು ಈ ಶಾಸದಿಂದಲೇ ತಿಳಿಯುತ್ತದೆ.[43] ಈ ರಸ್ತೆಯಲ್ಲಿ ಅಡಿಕೆ ಮತ್ತು ಎಲೆ ಮಾರುತ್ತಿದ್ದುದರಿಂದ ಈ ಹೆಸರು ಬಂದಿದೆ. ಇದೇ ರಸ್ತೆ ಮುಂದೆ ಆನೆ ಗೊಂದಿಗೆ ಹೋಗುತ್ತದೆ.

ಏಳು ಅಂಕಣಗಳುಳ್ಳ ಒಂದು ಅಂಗಡಿಯನ್ನು ಕಟ್ಟಿಸಿ, ಅದನ್ನು ಶಾಂತಿನಾಥ ದೇವರಿಗೆ ಕ್ರಿ.ಶ.೧೫೫೭ರಲ್ಲಿ ದಾನ ನೀಡಿದ್ದನ್ನು ಈಗ ಗಾಣಗಿತ್ತಿ ಜೈನ ದೇವಸ್ಥಾನ ದಲ್ಲಿರುವ ಒಂದು ಶಾಸನವು ತಿಳಿಸುತ್ತದೆ.[44] ಈ ಅಂಗಡಿಯು ಗಾಣಗಿತ್ತಿ ದೇವಸ್ಥಾನದ ಹತ್ತಿರವಿರುವ ಅಂಗಡಿಯೇ ಇರಬೇಕೆಂದು ಊಹಿಸಲಾಗಿದೆ. ಈ ಅಂಗಡಿಯ ಸುತ್ತಲೂ ಪೂರ್ವಕ್ಕೆ ಅಡಿಕೆ ತೋಟ, ಉತ್ತರಕ್ಕೆ ರಾಜಬೀದಿ, ಪಶ್ಚಿಮಕ್ಕೆ ಉಪ್ಪರಿಗೆ ಬಾಗಿಲು, ಮತ್ತು ದಕ್ಷಿಣಕ್ಕೆ ದೇವಸ್ಥಾನದ ಆವರಣ (compund) ಗೋಡೆ ಇವೆ ಎಂದು ಈ

ಶಾಸನದಲ್ಲಿ ತಿಳಿಸಿದೆ. ರಾಜಬೀದಿಯು ಬಹುಶಃ ಮುಖ್ಯ ಬೀದಿ ಯಾಗಿರಬೇಕು. ಕಮಲಾಪುರದಲ್ಲಿರುವ ಇನ್ನೊಂದು ಶಾಸನವು, ಕೊಂಡಮರಸಯನ - ಪಾಳ್ಯದಲ್ಲಿರುವ ನರಸಿಂಹದೇವರಿಗೆ ಭೂಮಿದಾನ ನೀಡಿದ ವಿಷಯ ತಿಳಿಸುವುದಲ್ಲದೇ ಈ ರಾಜ ಬೀದಿಯ ಬಗ್ಗೆಯೂ ಪ್ರಸ್ತಾಪಿಸುತ್ತದೆ.[45]

ಕೃಷ್ಣಾಪುರ ಮತ್ತು ಅಚ್ಯುತಾಪುರ ತೇರುಬೀದಿಗಳು ಆಗಿನ ಕಾಲದಲ್ಲಿ ಮಾರುಕಟ್ಟೆಗಳೆಂದೂ ಕರೆಯಲ್ಪಡುತ್ತಿದ್ದವು. ಕೃಷ್ಣಾಪುರ ಮಾರುಕಟ್ಟೆಯಲ್ಲಿರುವ ಪ್ರತಿಯೊಂದು ಅಂಗಡಿಯಿಂದ ಒಂದು ಕಾಸನ್ನು ಸೋಮವಾರದ ದಿನ ಮತ್ತು ಅಚ್ಯುತಾಪುರದ ಮಾರುಕಟ್ಟೆಯಲ್ಲಿರುವ ಪ್ರತಿಯೊಂದು ಅಂಗಡಿಯಿಂದ ಒಂದು ಕಾಸನ್ನು ಮಂಗಳ ವಾರದ ದಿನ ವಸೂಲು ಮಾಡಿ ಅದನ್ನು ಮುದ್ದುವೀರಣ್ಣ (ಉದ್ದಾನ ವೀರಭದ್ರ) ದೇವರಿಗೆ ಪೂಜೆಗೆ ಸಲ್ಲಿಸಲಾಗುತ್ತಿತ್ತು.[46] ಈ ಅಂಗಡಿಗಳು ಮಂಪಟದ ರೂಪದಲ್ಲಿದ್ದವು. ಹೊಡೆಯ ಬಾಗಿಲಿನ ಹತ್ತಿರವಿರುವ ಒಂದು ಮಂಟಪದಲ್ಲಿರುವ ಶಾಸನ ದಿಂದ ಈ ವಿಷಯ ದೃಢಪಡುತ್ತದೆ. ಈ ಮಂಟಪವು ಒಂಬತ್ತು ಅಂಕಣಗಳ ನ್ನೊಳಗೊಂಡಿದೆ. ಈ ಅಂಗಡಿಯನ್ನು ಆದಿನಾರಾಯಣ ದೇವರ ದೇವಸ್ಥಾನಕ್ಕೆ ದಾನ ನೀಡಿದ್ದನ್ನು ಈ ಶಾಸನ ತಿಳಿಸುತ್ತದೆ.[47] ಇದೇ ರೀತಿ ಇನ್ನೊಂದು ಅಂಗಡಿಯನ್ನು ಕೋಟಿಶಂಕರ ದೇವರ ಬಾಗಿಲಿನಲ್ಲಿರುವ ಮಲ್ಲಿಕಾರ್ಜುನ ದೇವರಿಗೆ ದಾನ ನೀಡಿ ದ್ದಾರೆ.[48]

ತುರ್ತು ಕಾಲುವೆಯಿಂದ ಪ್ರಾರಂಭವಾದ ಒಂದು ರಸ್ತೆಯ ಬೆಟ್ಟದ ಮೇಲೆ ಹಾಯ್ದು ಕೋಟೆ ಗೋಡೆಯಲ್ಲಿರುವ ಒಂದು ಸಣ್ಣ ಬಾಗಿಲಿನ ಮೂಲಕ ಹಾಯ್ದು ಇನ್ನೊಂದು ಬದಿಯಲ್ಲಿರುವ ಬೆಟ್ಟದ ಮೇಲಿರುವ ಈಶಾನ್ಯ ದಿಕ್ಕಿಗಿರುವ ರಸ್ತೆಗೆ ಸೇರುತ್ತದೆ. ಈ ರಸ್ತೆಯಲ್ಲಿ ಬಂಡೆಗಲ್ಲಿನಲ್ಲಿಯೇ ಕೊರೆದ ಮೆಟ್ಟಿಲುಗಳಿವೆ. ಈ ಮೆಟ್ಟಿಲುಗಳ ಹತ್ತಿರ ಒಂದು ಶಾಸನವಿದ್ದು, ಹರಿಹರನ ಕೋಶಾಧಿಕಾರಿಯಾಗಿದ್ದ, ನಾಗಪ್ಪನ ಮಗ ತಿರುವಕ್ಕಳ ತಂಮ್ಮಪನು ಕಟ್ಟಿಸಿದ್ದಾನೆಂದು[49] ತಿಳಿಸುತ್ತದೆ. ಇದೇ ರೀತಿಯ ಮೆಟ್ಟಿಲುಗಳನ್ನು ಹೇಮಕೂಟ ಬೆಟ್ಟದ ಮೇಲೆಯೂ ಕಲ್ಲಿನಲ್ಲಿಯೇ ಕೊರೆಯಲಾಗಿದೆ.

ಹಂಪೆಯ ವಿರೂಪಾಕ್ಷ ದೇವಸ್ಥಾನದ ಪಶ್ಚಿಮಕ್ಕೆ ಒಂದು ರಸ್ತೆಯಿದ್ದು ಈಗಲೂ ಅದು ಸುಸ್ಥಿತಿಯಲ್ಲಿದೆ. ಈ ರಸ್ತೆಯ ಪಕ್ಕದಲ್ಲಿ ಒಂದು ಬಂಡೆಯ ಮೇಲಿರುವ ಶಾಸನವು ಈ ರಸ್ತೆಯನ್ನು ಕಾಡಬಸಪ್ಪನು[50] ಕಟ್ಟಿಸಿದ್ದಾನೆಂದು ತಿಳಿಸುತ್ತದೆ.

ಹೊಸಪೇಟೆಯ ಹತ್ತಿರವಿರುವ ಒಂದು ಶಾಸನದಲ್ಲಿ ದೇವೇರಿ ಬೀದಿಯ ಪ್ರಸ್ತಾಪವಿದೆ. ಈ ಬೀದಿಯ ವಿಜಯನಗರದಲ್ಲಿ ಕೋಟಾ ವಿನಾಯಕ ದೇವಸ್ಥಾನದ ಪಶ್ಚಿಮಕ್ಕಿದೆ.[51] ಒಂದು ವೇಳೆ ಈ ದೇವಸ್ಥಾನವನ್ನು ಹೊಡೆಯ ಬಾಗಿನಲ್ಲಿರುವ ಗಣೇಶ ದೇವಸ್ಥಾನದೊಂದಿಗೆ ಹೋಲಿಸಿದರೆ, ದೇವಸ್ಥಾನದ ಪಶ್ಚಿಮಕ್ಕಿರುವ ಬೀದಿಯು ದೇವೇರಿ ಬೀದಿಯೆಂದು ಹೇಳಬಹುದು. ಈ ದೇವಸ್ಥಾನವನ್ನು ಕೋಟಾ ವಿನಾಯಕ ಅಥವಾ

ಕೋಟೆಯ ವಿನಾಯಕ ದೇವಸ್ಥಾನವೆಂದೂ ಕರೆಯುತ್ತಿದ್ದಿರಬಹುದು. ತಿರುಮಲದೇವಿ ಪಟ್ಟಣ ಮತ್ತು ವಿಜಯನಗರವನ್ನು ಜೋಡಿಸುವ ಬೀದಿಯೂ ಸಹ ಈಗ ಬಳಕೆಯಲ್ಲಿದೆ. ಈ ಬೀದಿಯಲ್ಲಿಯೇ (ರಸ್ತೆ) ಮಲಪನ ಗುಡಿಯ ಹತ್ತಿರ ಮಾಳಿಗೆ - ಕೂಪ - ಆರಾಮವಿದೆ.[52] ಬಿಸಿಲಹಳ್ಳಿ ಮತ್ತು ಬಡವಲಿ ಕಣಿವೆಗಳಿಗೆ ಹೋಗುವ ಹೆದ್ದಾರಿಗಳು ಇದೇ ಸ್ಥಳದಲ್ಲಿ ಕೂಡುತ್ತವೆ (ಸೇರುತ್ತವೆ) ಹೆದ್ದಾರಿಗಳನ್ನು ಶಾಸನಗಳಲ್ಲಿ ಮಹಾಪಥಗಳೆಂದು ಕರೆಯಲಾಗಿದೆ.

4. ಮಠಗಳು ಮತ್ತು ಆಶ್ರಮಗಳು

ವಿಜಯನಗರ ಪಟ್ಟಣದಲ್ಲಿ ಅನೇಕ ಮಠಗಳಿದ್ದರೂ ಕೆಲವೇ ಮಠಗಳ ಪ್ರಸ್ತಾಪವಿದೆ. ಬುಕ್ಕ ಸಾಗರದಲ್ಲಿರುವ ಮಠವು ಹಂಪೆ - ಸಿಂಹಾಸನದ ಪಂಚ ಮಠಗಳಲ್ಲಿ ಒಂದು ಮಠವೆಂದು [53] ೧೭ನೇ ಶತಮಾನದ ತಾಮ್ರಶಾಸನದಲ್ಲಿ ತಿಳಿಸಲಾಗಿದೆ. ಆದರೆ ಉಳಿದ ಮಠಗಳ ಪ್ರಸ್ತಾಪ ಈ ಶಾಸನದಲ್ಲಿ ಇಲ್ಲ. ಇನ್ನುಳಿದ ನಾಲ್ಕು ಮಠಗಳು ಬಹುಶಃ ಹಂಪೆಯಲ್ಲಿಯೇ ಇರಬಹುದು. ವಿರೂಪಾಕ್ಷ ತೇರುಬೀದಿಯಲ್ಲಿ, ಉತ್ತರ ದಿಕ್ಕಿನ ಸಾಲು ಮಂಟಪಗಳ ಮುಂದಿರುವ ಒಂದು ಶಾಸನದಲ್ಲಿ ಮಹಾಮಂತಿನ ಮಠದ ಪ್ರಸ್ತಾಪವಿದೆ.[54] ಈ ಮಠವನ್ನು ಈಗ ಮಹಾಂತಸ್ವಾಮಿ ಮಠವೆಂದು ಕರೆಯುತ್ತಾರೆ. ಇದೇ ಬೀದಿಯ ಕೊನೆಯಲ್ಲಿ ದಕ್ಷಿಣಕ್ಕಿರುವ ಶಾಸನವು ಕರಿಯ ಸಿದ್ಧಪ್ಪನ ಮಠಕ್ಕೆ ಸೇರಿದ ಭೂಮಿಯ ಬಗ್ಗೆ ತಿಳಿಸುತ್ತದೆ.[55] ಈ ಶಾಸನದ ದಕ್ಷಿಣಕ್ಕಿರುವ ಮಠವನ್ನು ಕರಿಯಸಿದ್ಧಪ್ಪನ ಮಠವೆಂದು ಗುರುತಿಸಲಾಗಿದೆ. ಇನ್ನೊಂದು ಶಾಸನದಲ್ಲಿ ನಿರಾಸಿ - ಮಠದ ಪ್ರಸ್ತಾಪವಿದೆ.[56] ಆದರೆ ಈ ಮಠದ ಸ್ಥಳವನ್ನು ಗುರುತಿಸಲಾಗಿಲ್ಲ.

ರಾಜವಂಶದವರ ವಸತಿ ಸಮುಚ್ಚಯದ ಉತ್ತರಕ್ಕೆ ಬೆಟ್ಟದ ಮೇಲೆ ಪರಮೇಶ್ವರ ಮಠವಿದೆ. ಅಲ್ಲಿರುವ ಗುಹೆಯನ್ನೇ ಕೊರೆದು ಮಠ ಕಟ್ಟಿದ್ದಾರೆ. ಒಂದೇ ಪೀಠದಲ್ಲಿ ಐದು ಲಿಂಗಗಳನ್ನು ಕೆತ್ತಿ ಮಠದ ಹಿಂಭಾಗದಲ್ಲಿಡಲಾಗಿದೆ. ಮಠದ ಹತ್ತಿರವಿರುವ ಒಂದು ಬಂಡೆಯ ಮೇಲೆ ಈ ಮಠದ ಹೆಸರನ್ನು ಕೆತ್ತಿದ್ದಾರೆ.

ಕಂಪ್ಲಿ - ಹೊಸಪೇಟೆ ರಸ್ತೆಯ ಪೂರ್ವಕ್ಕೆ ಒಂದು ಮಠವಿದೆ. ದೊಡ್ಡ ಬಂಡೆಯಲ್ಲಿ ಮಠವನ್ನು ಕೊರೆದು ಮುಂದೆ ಕಲ್ಲಿನ ತೊಲೆ ಮತ್ತು ಕಂಬಗಳನ್ನು ಕಟ್ಟಿದ್ದಾರೆ. ಅಲ್ಲಿಯೇ ಒಂದು ಬಂಡೆಯ ಮೇಲಿರುವ ಶಾಸನವು ಈ ಮಠವನ್ನು ಒಬ್ಬ ರಾವುತನು (ಕುದುರೆ ಸವಾರ) ಕಟ್ಟಿದ್ದಾನೆಂದು[57] ತಿಳಿಸುತ್ತದೆ.

ಪಂಪಾದೇವಿಯ ದಿಡ್ಡಿಯ ಪೂರ್ವಕ್ಕೆ ಚಿಕ್ಕ ಗುಹೆಯಾಕಾರದಲ್ಲಿರುವ ಗುಹೇಶ್ವರ - ಆಶ್ರಮವಿದೆ. ಜನರು ಈ ಆಶ್ರಮಕ್ಕೆ ಬಂದು ನೆಲೆಸಿ ಧ್ಯಾನದಲ್ಲಿ ನಿರತರಾಗಿ, ಜೀವನದ ನಾಲ್ಕು ಮುಖ್ಯ ಗುರಿ ಅಥವಾ ಉದ್ದೇಶಗಳಾದ ಧರ್ಮ, ಅರ್ಥ, ಕಾಮ ಮತ್ತು

ಮೋಕ್ಷಗಳ ಮಹತ್ವವನ್ನು ತಿಳಿಯುತ್ತಿದ್ದರೆಂದು ಆಶ್ರಮದ ಹತ್ತಿರವಿರುವ ಒಂದು ಬಂಡೆಯ ಮೇಲಿರುವ ಶಾಸನ ತಿಳಿಸುತ್ತದೆ.[58]

ಗಾಣಗಿತ್ತಿ ಜೈನ ದೇವಾಲಯದ ಈಶಾನ್ಯಕ್ಕೆ ಬೆಟ್ಟದ ಮೇಲೆ ಶಿವಯೋಗಿದೇವರ ಗುಹೆ[59] ಮತ್ತು ಕೋಟಿಲಿಂಗ ದೇವಸ್ಥಾನದ ಹತ್ತಿರ ಬೊಮ್ಮದೇವರ ಗುಹೆಗಳಿರುವುದು[60] ಶಾಸನಗಳಿಂದ ತಿಳಿಯುತ್ತದೆ.

ಛತ್ರಗಳು (ಧರ್ಮಶಾಲೆಗಳು) : ವಿರೂಪಾಕ್ಷ ದೇವಸ್ಥಾನಕ್ಕೆ ಹೊಂದಿ ಕೊಂಡಂತೆ ಬಲಗಡೆಗೆ ಒಂದು ಛತ್ರವಿದೆ. ಈ ಛತ್ರವು ವಿಜಯನಗರ ಪೂರ್ವ ಕಾಲದಲ್ಲಿಯೆ ಅಸ್ತಿತ್ವದಲ್ಲಿದ್ದುದು ಶಾಸನಗಳಿಂದ ತಿಳಿಯುತ್ತದೆ.[61] ಆರು ನೂರಕ್ಕಿಂತಲೂ (೬೦೦) ಹೆಚ್ಚು ಕಂಬಗಳುಳ್ಳ ಒಂದು ದೊಡ್ಡ ಛತ್ರವು ಉದ್ದಾನ ವೀರಭದ್ರ ದೇವಸ್ಥಾನದ ಪಶ್ಚಿಮಕ್ಕಿದ್ದು, ಇದನ್ನು ಶಾಸನಗಳಲ್ಲಿ ಹಿರಿಯ ಕಾಲುವೆ ಛತ್ರವೆಂದು[62] ಕರೆಯಲಾಗಿದೆ. ತುರ್ತು ಕಾಲುವೆಗೆ ಹಿರಿಯಕಾಲುವೆಯೆಂದು ಕರೆದಿರುವ ಪ್ರಸ್ತಾಪವೂ ಈ ಶಾಸನದಲ್ಲಿದೆ. ಶ್ರೀ ವೈಷ್ಣವರಿಗೆ ಊಟ ಮತ್ತು ವಸತಿ ಸೌಕರ್ಯಗಳನ್ನೊದಗಿಸುವ ಛತ್ರಗಳಿಗೆ ವಿಜಯನಗರ ಕಾಲದಲ್ಲಿ ರಾಮಾನುಜಕೂಟ ಗಳೆಂದು ಕರೆಯುತ್ತಿದ್ದುದು ಶಾಸನಗಳಿಂದ ತಿಳಿಯುತ್ತದೆ. ಇಂತಹ ಒಂದು ಛತ್ರವು ವಿಜಯನಗರದಲ್ಲಿ ಅಸ್ತಿತ್ವದಲ್ಲಿತ್ತು.[63]

ಮುಸ್ಲಿಮ್ ವಸತಿ ಪ್ರದೇಶದಲ್ಲಿ ಒಂದು ಛತ್ರವಿದೆ. ಇದನ್ನು ಶಾಸನಗಳಲ್ಲಿ ಧರ್ಮಶಾಲೆಯೆಂದು ಕರೆಯಲಾಗಿದೆ. ಎರಡನೆಯ ದೇವರಾಯನ ಶ್ರೇಯಸ್ಸಿ ಗೋಸ್ಕರ, ಅಹ್ಮದ್‌ಖಾನನು ಕ್ರಿ.ಶ. ೧೪೩೯ರಲ್ಲಿ ಈ ಧರ್ಮಶಾಲೆಯನ್ನು ಕಟ್ಟಿಸಿ ದ್ದಾನೆ.[64] ಆಯತಾಕಾರದಲ್ಲಿರುವ ಧರ್ಮಶಾಲೆಯಲ್ಲಿ ೧೫ ಅಂಕಣಗಳಿವೆ. ಮಧ್ಯದ ಅಂಕಣದ ಹಿಂದಿನ ಗೋಡೆಯಲ್ಲಿ ಒಂದು ಗೂಡು ಇದ್ದು ಮೇಲೆ ಕಮಾನು ಇದೆ. ಈ ಧರ್ಮಶಾಲೆಯ ಹತ್ತಿರ ಒಂದು ಬಾವಿಯನ್ನೂ ಅಹ್ಮದ್ ಖಾನನೇ ಕಟ್ಟಿಸಿದ್ದಾನೆ.

ವಿಜಯನಗರಕ್ಕೆ ಬರುವ ಪ್ರವಾಸಿಗರಿಗೆ ಛತ್ರಗಳು ಊಟ, ವಸತಿ ಮತ್ತು ವಿಶ್ರಾಮದ ತಾಣಗಳಾಗಿದ್ದವು. ಇದಕ್ಕೆ ಒಂದು ಒಳ್ಳೆಯ ಉದಾಹರಣೆಯೆಂದರೆ ಮಲ್ಲಪನಗುಡಿಯ ಹತ್ತಿರವಿರುವ ಮಾಳಿಗೆ - ಕೂಪಾ - ಆರಾಮ. ಬಿಸಿಲಹಳ್ಳಿ ಮತ್ತು ಬಡವಲಿ ಕಣಿವೆಗಳಿಗೆ ಹೋಗುವ ಹೆದ್ದಾರಿಗಳು ಕೂಡುವ ಸ್ಥಳದಲ್ಲಿ, ಹೆಗ್ಗಡೆ ಸೋಮಣ್ಣ - ಅಣ್ಣನು ಕ್ರಿ.ಶ.೧೪೧೨ ರಲ್ಲಿ ಇದನ್ನು ಕಟ್ಟಿಸಿದ್ದಲ್ಲದೆ, ಇದರ ದುರಸ್ತಿಗೆ ಸುತ್ತಲೂ ಇರುವ ತೋಟಕ್ಕೆ ನೀರು ಹಾಕುವುದಕ್ಕೆ, ಛತ್ರಕ್ಕೆ ಬೇಕಾಗುವ ಪಾತ್ರೆಗಳನ್ನು ಕೊಳ್ಳುವುದಕ್ಕೆ ಭೂಮಿದಾನ ನೀಡಿದ್ದಾನೆ.[65] ಇಲ್ಲಿರುವ ಮಾಳಿಗೆಯುಳ್ಳ ಬಾವಿಯು ಮೆಟ್ಟಿಲುಗಳುಳ್ಳದ್ದಾಗಿದೆ. ಸುತ್ತಲೂ ಮೊಗಶಾಲೆಯಿದೆ. ಬಾವಿಯು ತಳಭಾಗದಲ್ಲಿ ಚೌಕಾಕಾರದಲ್ಲಿದ್ದು

ಮೇಲಿನ ಭಾಗವು ಅಷ್ಟಾಕೃತಿಯಲ್ಲಿದೆ.[66] ಮಾಳಿಗೆಯ ಭೂಮಿ ಮಟ್ಟದಲ್ಲಿದೆ. ಈಗ ಬಾವಿ ಮಾತ್ರವಿದ್ದು, ತೋಟ ಹಾಳಾಗಿದೆ.

ಕಾಲುವೆ, ಕೆರೆ ಮತ್ತು ಬಾವಿಗಳು : ವಿಜಯನಗರ ಪಟ್ಟಣ ಮತ್ತು ಸುತ್ತಲಿನ ಪ್ರದೇಶಗಳಿಗೆ ನೀರನ್ನು ತುಂಗಭದ್ರಾ ನದಿ ಮತ್ತು ಈ ನದಿಗೆ ಅಡ್ಡವಾಗಿ ಕಟ್ಟಿದ ಅಣೆಕಟ್ಟುಗಳಿಂದ ಹರಿಯುವ ಕಾಲುವೆಗಳಿಂದ ಒದಗಿಸಲಾಗುತ್ತಿತ್ತು. ಅಲ್ಲದೆ ಇಲ್ಲಿರುವ ಕೆರೆಗಳು ಮತ್ತು ಬಾವಿಗಳಿಂದಲೂ ನೀರನ್ನು ಒದಗಿಸುತ್ತಿದ್ದರು. ತುರ್ತು ಕಾಲುವೆಗೆ ಕಟ್ಟಿದ ಅಣೆಕಟ್ಟನ್ನು ಚಿಂತಾಯಕ ದೇವಣ್ಣನು ಕಟ್ಟಿಸಿದ್ದಾನೆ.[67] ಬೊಮ್ಮೋಜನು ಇದರ ವಾಸ್ತು ಶಿಲ್ಪಿ. ಈ ತುರ್ತು ಕಾಲುವೆ ಅಣೆಕಟ್ಟು ಈಗಲೂ ಉಪಯೋಗದಲ್ಲಿದೆ. ಇಲ್ಲಿಂದ ಹರಿಯುವ ಕಾಲುವೆಯು ಉದ್ದಾನ ವೀರಭದ್ರ ದೇವಸ್ಥಾನದ ಹತ್ತಿರ ಹರಿಯುತ್ತದೆ. ಶಾಸನಗಳಲ್ಲಿ ಇದನ್ನು ಹಿರಿಯ ಕಾಲುವೆ[68] ಎಂದು ಕರೆಯಲಾಗಿದೆ. ಇದೇ ಕಾಲುವೆ ಮುಂದೆ ಬೆಟ್ಟದ ಬುಡದಲ್ಲಿ ಹಾಯ್ದು ಮತಂಗ ಪರ್ವತದ ದಕ್ಷಿಣ ಮತ್ತು ಆಗ್ನೇಯ ದಿಕ್ಕಿನೆಡೆಗೆ ಹರಿಯುತ್ತದೆ. ಅಲ್ಲಿಯೇ ಒಂದು ಬಂಡೆಯ ಮೇಲೆ ಇರುವ ಶಾಸನವು ಈ ಕಾಲುವೆಯನ್ನು ವಿಜಯನಗರ ಅರಸ ವಿರೂಪಾಕ್ಷನ ಆಜ್ಞೆಯ ಮೇರೆಗೆ ಹೆಗಡೆ ಹಿತಲಬಾಗಿಲ ಬಸವಣ್ಣ ಅಣ್ಣನು ಕಟ್ಟಿಸಿದ್ದಾನೆಂದು ತಿಳಿಸುತ್ತದೆ.[69]

ಬೊಮ್ಮದೇವರ ಗುಡಿಯ ಮುಂದಿನ ಕಾಲುವೆ, ಅಗಸರ ಕಾಲುವೆ, ಅನತನ ಕಾಲುವೆ, ಇನ್ನೂ ಕೆಲವು ಕಾಲುವೆಗಳ ಪ್ರಸ್ತಾಪವು ಶಾಸನಗಳಲ್ಲಿ ದೊರೆಯುತ್ತದೆ.[70] ಆದರೆ ಈ ಕಾಲುವೆ ಹರಿದಿರುವ ಸ್ಥಳಗಳನ್ನು ಗುರುತಿಸಲಾಗಿಲ್ಲ.

ಕೆಲವು ಕೆರೆಯ ವಿವರಗಳು ಶಾಸನಗಳಲ್ಲಿ ದೊರೆಯುತ್ತವೆ. ಅಚ್ಯುತಾಪುರದ ದಕ್ಷಿಣಕ್ಕೆ ಒಂದು ಕೆರೆಯಿದೆ. ಕಮಲಾಪುರದಲ್ಲಿರುವ ಕೆರೆಯನ್ನು ಶಾಸನದಲ್ಲಿ ಕಮಲಾಪುರ ಕೆರೆಯೆಂದು[71] ಕರೆಯಲಾಗಿದೆ. ನಾಗೇನಹಳ್ಳಿಯ ಹತ್ತಿರ ಒಂದು ಕೆರೆಯಿದೆ. ಇದನ್ನು ಕೃಷ್ಣದೇವರಾಯನ ತಾಯಿ ನಾಗಲಾದೇವಿಯ ಹೆಸರಿನಲ್ಲಿ ಕಟ್ಟಿಸಿದ್ದು, ಈ ಕೆರೆಯನ್ನು ನಾಗಸಮುದ್ರವೆಂದು ಕರೆಯುತ್ತಿದ್ದರು. ಇದನ್ನು ಕ್ರಿ.ಶ. ೧೫೧೬ ರಲ್ಲಿ ಕಟ್ಟಿಸಿದ್ದಾನೆ.[72]

ವಿಜಯನಗರದಲ್ಲಿ ಅನೇಕ ಬಾವಿಗಳಿದ್ದು, ಶಾಸನಗಳಲ್ಲಿ ಕೆಲವು ಬಾವಿಗಳ ಪ್ರಸ್ತಾಪ ಮಾತ್ರವಿದೆ. ಉದಾ : ಅರೆ ಶಂಕರ ಬಾವಿ[73], ಅಗಸರ ಬಾವಿ[74], ಬೆನಕನ ಬಾವಿ [75], ಅಶ್ವತ್ಥ ಬಾವಿ [76] ಮಹಾದೇವಿಯಕ್ಕನ ಬಾವಿ[77], ಒರತೆಯ ಕೊಂಡ, ಲಿಂಗ ಬಾವಿ, ರಂಗನಾಥ ಬಾವಿ ಮುಂತಾದ ಬಾವಿಗಳಿವೆ.

ಟಿಪ್ಪಣಿಗಳು

1. ಸೌಇಇ IX, ii ಸಂ 564
2. ವಿಜಯನಗರ, ಪ್ರೊಗೆಸ್ ಆಫ್ ರಿಸರ್ಚ್ (VPR), 1984-87, ಸಂ. ಡಿ.ವ್ಹಿ. ದೇವರಾಜ ಮತ್ತು ಚನ್ನಬಸಪ್ಪ, ಎಸ್. ಪಾಟೀಲ, ಸಂ. 59
3. ಸೌಇಇ . IV, ಸಂ. 255 ವ್ಹಿಸಿಆರ್, 1979 - 83, ಸಂ. ಎಮ್.ಎಸ್. ನಾಗರಾಜರಾವ್, ಪು. 39
4. ಸೌಇಇ, ಸಂ. 260
5. ಅದೇ, ಸಂ. 260
6. ಅದೇ ಸಂ. 260
7. ಅದೇ ಸಂ. 254
8. ಸೌಇಇ, IV, ಸಂ. 254, 255
9. ಅದೇ, ಸಂ. 254, 255, 256
10. ಅದೇ ಸಂ. 255
11. ಅದೇ ಸಂ. 255, 256
12. ಅದೇ ಸಂ. 245
13. ಸೌಇಇ, IX, ii, ಸಂ. 564, ವಿಪಿಆರ್, 1983-84,ಸಂ. ಎಮ್.ಎಸ್. ನಾಗರಾಜರಾವ್, ಸಂ. 46, 49
14. ಸೌಇಇ IX, ii, ಸಂ. 564
15. ವ್ಹಿಪಿಆರ್, 1983-84, ಸಂ 41
16. ಸೌಇಇ, IV ಸಂ. 280
17. ಅದೇ ಸಂ 668
18. ವ್ಹಿಸಿಆರ್, 1983-84 ಸಂ. 76, 77 ವ್ಹಿಪಿಆರ್, 1984-87.

    ಸಂ. 166, ಪುರಂಧರ ಎಸ್. 11986, ಹಿಸ್ಟರಿ ಮತ್ತು ಆರ್ಕಿಯಾಲಜಿ ಆಫ್ ಆನೆಗೊಂದಿ, Ph. ಪಿಹೆಚ್.ಡಿ ಡಿಸರ್ಟೇಶನ್, ಡಿಪಾರ್ಟ್‌ಮೆಂಟ್ ಆಫ್ ಆರ್ಕಿಯಾಲಜಿ, ಡೆಕ್ಕನ್ ಕಾಲೇಜಿ, ಪುಣೆ.
19. ಸೌಇಇ, IX, ii, ಸಂ. 453
20. ಸೌಇಇ, IV, ಸಂ. 245, IX, ii, ಸಂ. 583
21. ಅದೇ IX, ii, ಸಂ. 533
22. ಅದೇ IV, ಸಂ. 245

23. ವ್ಹಿಪಿಆರ್, 1984 - 87, ಸಂ. 149
24. ಅನ್ಯುವಲ್ ರಿಪೋರ್ಟ್ ಆನ್ ಇಂಡಿಯನ್ ಎಪಿಗ್ರಫಿ (ARIE) 1922, ಸಂ. 683
25. ಸೌಇಇ, IX, ii, 504
26. ಅದೇ. ಸಂ. 539
27. ನಾಗರಾಜರಾವ್ ಎಮ್.ಎಸ್. ಮತ್ತು ಸಿ.ಎಸ್. ಪಾಟೀಲ 1985 'ಎಪಿಗ್ರಾಫಿಕಲ್ ರೆಫರನ್ಸನ್ ಟು ಸಿಟಿ ಗೇಟ್ಸ್ ಆ್ಯಂಡ್ ವಾಚ್ ಟಾವರ್ಸ್ ಆಫ್ ವಿಜಯನಗರ' ಇನ್ ವ್ಹಿಪಿಆರ್ 1984-84,ಸಂ. ಎಮ್.ಎಸ್. ನಾಗರಾಜರಾವ್ ಪು. 96-100, ಪಾಟೀಲ ಚನ್ನಬಸಪ್ಪ ಎಸ್, 1991, 'ಫರ್ದರ್ ಎಪಿಗ್ರಫಿಕಲ್ ರೆಫರನ್ಸಸ್ ಟು ಸಿಟಿ ಗೇಟ್ಸ್ ಆ್ಯಂಡ್ ವಾಚ್ ಟಾವರ್ಸ್ ಆಫ್ ವಿಜಯನಗರ', ಇನ್ ವ್ಹಿಪಿಆರ್, 1984-87, ಸಂ. ದೇವರಾಜ ಮತ್ತು ಚೆನ್ನಬಸಪ್ಪ ಎಸ್. ಪಾಟೀಲ, ಪು. 191-194
28. ವ್ಹಿಪಿಆರ್, 1983-84, ಸಂ. 2
29. ಅದೇ, 1983-84, ಸಂ. 3
30. ಸೌಇಇ, IV, ಸಂ. 247
31. ವ್ಹಿಪಿಆರ್. 1984-87, ಸಂ. 83-84
32. ಅದೇ, 1983-84 ಸಂ, -4
33. ಅದೇ, ಸಂ. 5
34. ಸೌಇಇ, IX, ii, ಸಂ. 654
35. ವ್ಹಿಪಿಆರ್, 1984-87, ಸಂ. 105
36. ಸೌಇಇ, IX, ii, ಸಂ. 668
37. ಸೌಇಇ, IV, ಸಂ. 245
38. ಸೌಇಇ, IX, ii ಸಂ. 453
39. ಮಿಶೆಲ್ ಜಾರ್ಜ್, 1983, 'ಎ ಸ್ಮಾಲ್ ಡೆಟೆಡ್ ಟೆಂಪಲ್ ಎಟ್ ವಿಜಯನಗರ', ಇನ್ ವ್ಹಿಪಿಆರ್, 1979-83, ಪು. 45-49
40. ವ್ಹಿಪಿಆರ್, 1979-83, ಪು. 39-40.
41. ನಾಗರಾಜರಾವ್ ಎಮ್, ಎಸ್ ಮತ್ತು ಸಿ.ಎಸ್. ಪಾಟೀಲ, 1985, ಎಪಿಗ್ರಫಿಕಲ್ ರೆಫರನ್ಸಸ್ ಟು ಸಿಟಿ ಗೇಟ್ಸ್ ಆ್ಯಂಡ್ ವಾಚ್ ಟಾವರ್ಸ್ ಆಫ್ ವಿಜಯನಗರ', ಇನ್ ವ್ಹಿಪಿಆರ್, 1983-84, ಸಂ. ಎಮ್.ಎಸ್. ನಾಗರಾಜರಾವ್, ಪು. 96-100, ಪಾಟೀಲ ಚನ್ನಬಸಪ್ಪ ಎನ್. 1991, 'ಫರ್ದರ್ ಎಪಿಗ್ರಫಿಕಲ್ ರೆಫರನ್ಸಸ್ ಟು ಸಿಟಿ ಗೇಟ್ಸ್ ಆ್ಯಂಡ್ ವಾಚ್ ಟಾವರ್ಸ್ ಆಫ್ ವಿಜಯನಗರ' ಇನ್ ವ್ಹಿಪಿಆರ್, 1984-87, ಸಂ. ಡಿ.ವ್ಹಿ ದೇವರಾಜ ಮತ್ತು ಚನ್ನಬಸಪ್ಪ ಎಸ್. ಪಾಟೀಲ ಪು. 191-194

42. ಸೌಇಇ, IV, ಸಂ. 248
43. ಸೌಇಇ, I, ಸಂ. 153
44. ಸೌಇಇ IV, ಸಂ. 247
45. ಅದೇ, IX, ಸಂ. ii, ಸಂ. 668
46. ಅದೇ, IV, ಸಂ. 266
47. ವ್ಹಿಪಿಆರ್, 1984-87, ಸಂ. 91
48. ಅದೇ, ಸಂ. 82
49. ಅದೇ, 1984-87, ಸಂ. 76
50. ಅದೇ, 1984-87, ಸಂ. 6
51. ಎಇ IV, ಸಂ. 38, ಪು. 266 ಮತ್ತು ಮುಂದೆ
52. ಸೌಇಇ, IX, ii, ಸಂ. 436, ಪಾಟೀಲ ಚನ್ನಬಸಪ್ಪ ಎಸ್. 1991, 'ಮಾಳಿಗೆ - ಕೂಪಾ - ಆರಾಮ ಎಟ್ ಮಲಪನಗುಡಿ' ಇನ್ ವ್ಹಿಪಿಆರ್, 1984-87, ಪು 177-182
53. ಕೊಟ್ರಯ್ಯ ಸಿ.ಟಿ.ಎಮ್, 'ಒಂದು ಅಪ್ರಕಟಿತ ತಾಮ್ರಶಾಸನ', ಇನ್ ಹೇಮಕೂಟ, ಪು. 3-16
54. ವ್ಹಿಪಿಆರ್, 1984-87, ಸಂ. 32
55. ಅದೇ, ಸಂ. 34
56. ಅದೇ, ಸಂ. 98
57. ಅದೇ, 1984-87, ಸಂ. 101
58. ಅದೇ, 1983 - 84, ಸಂ. 31
59. ಅದೇ, ಸಂ. 54
60. ಅದೇ, ಸಂ. 1984-87, ಸಂ. 39
61. ಎಆರ್ಎಸ್ಆಯ್ಇ (ARSCE) 1934-35, ಸಂ. 355; ಸೌ, IV, ಸಂ. 260
62. ಸೌಇಇ IV, ಸಂ. 265, 266
63. ಸೌಇಇ, IV, ಸಂ. 280, IX, ii, ಸಂ. 564
64. ಅದೇ IX, ii, ಸಂ, 447
65. ಸೌಇಇ, IX, ii, ಸಂ. 436
66. ಪಾಟೀಲ ಚನ್ನಬಸಪ್ಪ ಎಸ್. 1991, 'ಮಾಳಿಗೆ - ಕೂಪಾ -ಆರಾಮ ಎಟ್ ಮಲಪನಗುಡಿ' ಇನ್ ವ್ಹಿಪಿಆರ್, 1984-87, ಪುಟ 177-182.
67. ವ್ಹಿಪಿಆರ್, 1984-87, ಸಂ. 1

68. ಸೌಇಇ, IV, ಸಂ. 265, 266
69. ವ್ಹಿಪಿಆರ್, 1984-87, ಸಂ. 73
70. ಸೌಇಇ, IX, ii, ಸಂ. 668
71. ಅದೇ, IV, ಸಂ. 245
72. ಅದೇ, IX, ii, ಸಂ. 504
73. ಅದೇ, ಸಂ. 668
74. ಅದೇ, ಸಂ. 668
75. ವ್ಹಿಪಿಆರ್, 1983-84, ಸಂ. 15
76. ಅದೇ, ಸಂ. 1984-87, ಸಂ. 26, 27
77. ಅದೇ, ಸಂ. 38

೧೩. ವಿಜಯನಗರ ಕಾಲೀನ ಆಡಳಿತದಲ್ಲಿ ನ್ಯೂನತೆ - ಕೋಟೇಶ್ವರ ಶಾಸನದ ಅವಲೋಕನ

ಡಾ.ಪಿ.ಎನ್. ನರಸಿಂಹಮೂರ್ತಿ

ವಿಜಯನಗರ ಸಾಮ್ರಾಜ್ಯದ ಆಡಳಿತವು ಅದರ ಧ್ಯೇಯ, ಧೋರಣೆಗಳಿಂದಾಗಿ ಮುಕ್ತ ಕಂಠದ ಶ್ಲಾಘನೆಗೆವೊಳಗಾಗಿದೆ. ಜನತೆಗೆ ಸುಸ್ಥಿರ ಆಡಳಿತದ ಪ್ರಯೋಜನ ದೊರೆತಿದೆ. ಆದರೆ ಧೀರ್ಘಕಾಲೀನ ಆಡಳಿತಾವಧಿಯಲ್ಲಿ ಅಲ್ಲಲ್ಲೆ ಬಿರುಕುಗಳು ಉಂಟಾಗುವುದು ಸಹಜ. ಇವು ಕೆಲವೊಮ್ಮೆ ಗೋಚರಕ್ಕೆ ಬಂದರೆ ಕೆಲ ಸಂದರ್ಭ ಗಳಲ್ಲಿ ಆಗೋಚರವಾಗೆ ಉಳಿಯುತ್ತದೆ. ರೂಪಕಗಳು ಯಾವುದೇ ರೀತಿಯದಾಗಲಿ ಅವು ಸರ್ಕಾರ ಮತ್ತು ಆಡಳಿತಕ್ಕೆ ಸವಾಲುಗಳಾಗುತ್ತವೆ. ಕೇಂದ್ರದಿಂದ ದೂರವಿರುವ ಸ್ಥಳಗಳಲ್ಲಿ ನಡೆಯುವ ಘಟನೆಗಳು ನಿಧಾನವಾಗಿ ಗೋಚರಕ್ಕೆ ಬಂದಾಗ ಅವಕ್ಕೆ ಪರಿಹಾರ ದೊರೆಯಬಹುದು. ಆದರೆ ಅವುಗಳಿಂದಾಗುವ ಪರಿಣಾಮ ದೀರ್ಘ ಕಾಲೀನ. ಇದು ಆಡಳಿತದಲ್ಲಿನ ನ್ಯೂನತೆಗೆ ಪ್ರತಿಬಿಂಬವಾಗುತ್ತದೆ. ಅಂತಹ ಒಂದು ಘಟನೆ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಕೋಟೇಶ್ವರದಲ್ಲಿ ಜರುಗಿದೆ. ಒಂದು ಪ್ರದೇಶಕ್ಕೆ ಸೀಮಿತ ವಾದರೂ, ವಿಜಯನಗರಕಾಲೀನ ಆಡಳಿತದಲ್ಲಿ ಯಾವ ರೀತಿಯ ಬಿರುಕುಗಳಿದ್ದುವು ಎಂಬುದನ್ನು ಈ ಘಟನೆಯ ಘೋರತೆಯು ಅರಿವು ಮಾಡಿಕೊಡುತ್ತದೆ.

ತಾಲೂಕು ಕೇಂದ್ರ ಕುಂದಾಪುರದ ದಕ್ಷಿಣಕ್ಕೆ ೫ ಕಿ.ಮೀ. ದೂರದಲ್ಲಿರುವ ಒಂದು ಗ್ರಾಮ ಕೋಟೇಶ್ವರ. ಇದು ಪ್ರಾಚೀನ ಕಾಲದ ಧ್ವಜೇಶ್ವರ.[1] ಪರಶುರಾಮ ಸೃಷ್ಟಿಯ ಕರ್ನಾಟಕ ಕರಾವಳಿಯ ಸಪ್ತ ಪುಣ್ಯಧಾಮಗಳಲ್ಲಿ ಕೋಟೇಶ್ವರವೂ ಒಂದು.[2] ಇದರ ಕೇಂದ್ರಬಿಂದು ಕೋಟಿಲಿಂಗೇಶ್ವರ ದೇವಸ್ಥಾನ.[3] ಇಲ್ಲಿ ವಿಜಯನಗರ ಕಾಲಕ್ಕೆ ಸಂಬಂಧಿಸಿದಂತೆ ೧೦ ಶಿಲಾ ಶಾಸನಗಳು ದೊರೆತಿವೆ.[4] ಇವು ಕ್ರಿ.ಶ. ೧೩೫೭[5] ಮತ್ತು ೧೫೬೨[6] ರ ಒಳಗಿನ ಅವಧಿಯವು. ಇದರಲ್ಲಿ ಒಂದು ಶಾಸನ[7] ಎರಡು ಪ್ರತ್ಯೇಕ ಭಾಗಗಳನ್ನು ಹೊಂದಿದ್ದು ಒಂದು ಸಂಕೀರ್ಣ ಶಾಸನದಂತಿವೆ. ಈ ಶಾಸನದ ಉತ್ತರಾರ್ಧವೇ ಪ್ರಸಕ್ತ ಅಧ್ಯಯನದ ಮುಖ್ಯವಸ್ತು.

ಶಾಸನದ ಪೂರ್ವಾರ್ಧವು ಚಕ್ರವರ್ತಿ ಸದಾಶಿವರಾಯನ ಆಳ್ವಿಕೆ ಕಾಲದ್ದು. ಇದರ ತೇದಿ ವಿವರ ಶಕ ವರ್ಷ ೧೪೬೮. ಪರಾಭವ ಸಂವತ್ಸರ, ಕಾರ್ತಿಕ ಶುದ್ಧ ೧೫. ಇದು ಕ್ರಿ.ಶ. ೧೫೪೬. ನವೆಂಬರ್ ೭ (ಭಾನುವಾರ)ಕ್ಕೆ ಸರಿಹೊಂದುತ್ತದೆ. ಚಕ್ರವರ್ತಿಯು

ವೆಂಕಟಾದ್ರಿ ರಾಜ ಮಹಾರಾಜ ಅರಸುವಿಗೆ ಬಾರಕೂರು ರಾಜ್ಯದ ಆಧಿಪತ್ಯವನ್ನು ವಹಿಸಿಕೊಟ್ಟಾಗ ಈತ ಅಚ್ಚಪ್ಪ ವೊಡೆಯ (ಆಚ್ಚಪ್ಪವೊಡೆಯ)ನನ್ನು ರಾಜ್ಯಪಾಲ ನನ್ನಾಗಿ ಆಡಳಿತ ನಿರ್ವಹಿಸಿದ. ರಾಜ್ಯಪಾಲನು ಚಕ್ರವರ್ತಿ ಸದಾಶಿವರಾಯ ಹಾಗು ರಾಮರಾಜ ಮತ್ತು ವೆಂಕಟಾದ್ರಿರಾಜ - ಇವರುಗಳಿಗೆ ಒಳಿತಾಗಲಿ ಎಂದು ಕೋಟೇಶ್ವರ ದೇವರಿಗೆ ೫೦ ಗದ್ಯಾಣಗಳನ್ನು ದಾನ ಮಾಡಿದ. ಈ ಹಣದಿಂದ ಪ್ರತಿವರ್ಷ ಕಾರ್ತಿಕ ಮಾಸದಲ್ಲಿ ದೇವರಿಗೆ ಮಾಸಪೂರ್ತಿ ಪಂಚಾಮೃತ ಅಭಿಷೇಕ, ದೀಪಾರಾಧನೆ, ನೇವೇದ್ಯ, ಫಲಪೂಜೆ ಮತ್ತು ವೃಂದಾವನ ಪೂಜೆಗಳನ್ನು ಸಾಂಗವಾಗಿ ನೆರವೇರಿಸುವಂತೆ ಸೂಚಿಸಿರುವುದನ್ನು ಶಾಸನದ ಈ ಭಾಗ ತಿಳಿಸುತ್ತದೆ.[8]

ಇತರೆ ಶಾಸನಗಳಂತೆ ಶಾಸನದ ಈ ಭಾಗವು ದಾನಶಾಸನವಾಗಿರುವುದನ್ನು ಸೂಚಿಸುತ್ತದೆ. ಹಾಗಾಗಿ ವಿಶೇಷತೆ ಏನೂ ಕಾಣುವುದಿಲ್ಲ. ಆದರೆ ಇದರ ಉತ್ತರಾರ್ಧದ ವಿಚಾರಮಾತ್ರ ಅತ್ಯಂತ ಘೋರವೂ ಮತ್ತು ಹೇಯವೂ ಆದುದು. ಇದು ಒಂದು ನಗ್ನಸತ್ಯ ಮತ್ತು ಸಮಕಾಲೀನ ಸಮಾಜದ ಹೊಯ್ದಾಟವನ್ನು ತಿಳಿಸುತ್ತದೆ.

ಶಾಸನದ ಪೂರ್ವಾರ್ಧದಲ್ಲಿ ತಿಳಿಸಿರುವ ದಾನ ಕೊಟ್ಟದ್ದು ಕಾರ್ತಿಕ ಮಾಸದ ಶುದ್ಧ ೧೫ರಂದು ; ಅಂದರೆ ಹುಣ್ಣಿಮೆಯಂದು[9]. ಅದು ಕೋಟಿಲಿಂಗೇಶ್ವರ ದೇವರ ರಥೋತ್ಸವದ ದಿನ. ಪ್ರತಿವರ್ಷ ಕಾರ್ತಿಕ ಮಾಸ ಮೊದಲರ್ಧಭಾಗವು ಈ ದೇವಸ್ಥಾನ ದಲ್ಲಿ ವೈಭವೋಪೇತವಾಗಿ ನಡೆಯುವ ಜಾತ್ರಾಮಹೋತ್ಸವ ಕಾಲ. ಅಧಿಕಾಧಿಕ ಸಂಖ್ಯೆಯ ಭಕ್ತರು ಆಗ ಅಲ್ಲಿ ನೆರೆಯುವುದು ವಾಡಿಕೆ. ಕ್ರಿ.ಶ. ೧೫೪೭ರ ಕಾರ್ತಿಕದ ಜಾತ್ರೆ ಮಾಮೂಲಿನಂತೆ ನೆರವೇರಿದೆ. ಇದು ನಡೆದು ಸರಿಯಾಗಿ ನಾಲ್ಕನೆಯ ವರ್ಷದ ಅಂದರೆ ಕ್ರಿ.ಶ. ೧೫೫೦ರ ಕಾರ್ತಿಕ ಮಾಸದ ಜಾತ್ರೆಗೆ ಅತ್ಯಧಿಕ ಸಂಖ್ಯೆಯಲ್ಲಿ ಜನ ಸೇರಿದ್ದರು. ಆಗ ಅಲ್ಲಿ ನಡೆದುದು ರಥೋತ್ಸವವಲ್ಲ, ಮಾರಣ ಹೋಮ. ಶಾಸನ ಘಟನೆಯನ್ನು ಹೀಗೆ ವರ್ಣಿಸಿದೆ:

> *'ಕೋಟೇಶ್ವರ ದೇವರ ತುಡಿಯ ಹಬ್ಬದಲು ತುಳುರಾಜ್ಯ ಉ ಕುಡಿದಲ್ಲಿ*
> *ತ(೦)ಮ್ಮೊಳಗೆ ತಾಉ ಕಡಿದಾಡಿ ಬ್ರಾಹ್ಮರು ಶೂದ್ರರು ಹೆಣಗಳು*
> *ದೇವಸ್ಥಾನದೊಳಗೆ ಬಿದು ಗೋ ಹತ್ಯವಾಗಿ'*
>
> (ಶಾಸನ ಪಾಠ, ಸಾಲು-29-32)

ಕಾರ್ತಿಕ ಮಾಸದ ಉತ್ಸವವು ದೀಪದ ಉತ್ಸವ. ಅದನ್ನು ಶಾಸನ 'ತುಡಿಯಹಬ್ಬ' ಎಂದು ಹೆಸರಿಸಿದೆ. ಆಗಲೇ ಇಲ್ಲಿ ರಥೋತ್ಸವ. ಆ ರಥೋತ್ಸವಕ್ಕೆ ಇಡೀ ತುಳುನಾಡಿನ ಜನ ಮೇಳೈಸಿದ್ದರು. ಆಗ ಅಲ್ಲಿ ಆದದ್ದೇನು? ಸೇರಿದ ಜನಸಾಗರ ತಮ್ಮೊಳಗೆ ತಾವು ಕಡಿದಾಡಿಕೊಂಡರು. ಯುದ್ಧವೊಂದರ ಬೀಭತ್ಸದಂತಹ ಘೋರ ದೃಶ್ಯ ಇಲ್ಲಿ ನಿರ್ಮಾಣವಾಯಿತು. ರಕ್ತದ ಮಡುವಿನಲ್ಲಿ ಬ್ರಾಹ್ಮಣರೂ, ಶೂದ್ರರೂ ಹೆಣಗಳಾಗಿ

ಬಿದ್ದರು. ದುರದೃಷ್ಟಕರವಾದುದೆಂದರೆ ದೇವಸ್ಥಾನದವೊಳಗೂ ಈ ಘೋರಕೃತ್ಯ ನಡೆದು ಬ್ರಾಹ್ಮಣರ ಮತ್ತು ಶೂದ್ರರ ಹೆಣಗಳು ಉರುಳಿದವು. ಅಷ್ಟೇ ಅಲ್ಲ ಅಲ್ಲಿ ಗೋಹತ್ಯೆಯೂ ಆಯಿತು. ದೇವಸ್ಥಾನ ಅಪವಿತ್ರವಾಯಿತು. ಇದರಿಂದಾಗಿ -

"ದೇವಸ್ತಾನ ಬಾಗಿಲು ಕಟ್ಟಿ ನಯಿವೇದ್ಯ ನಂದಾ ದೀಪ್ತಿ ಉಳಿದು ಧನ್ಯರು
'ಉಪವಾಸದು ಆಱುತಿಂಗಳು ಪರಿಯಂತರ ಹಾಳಾಗಿ ಯಿರಲಾಗಿ"

(ಶಾಸನ ಪಾಠ - ಸಾಲು 32-34)

ದೇವಸ್ಥಾನದ ಬಾಗಿಲು ಹಾಕಿತು; ಅಲ್ಲಿ ಪೂಜೆ, ದೀಪ, ನೈವೇದ್ಯಾದಿಗಳು ನಿಂತು ಹೋದವು. ಧನ್ಯರು ಉಪವಾಸ ಹೋದರು. ಆರು ತಿಂಗಳುಗಳ ಕಾಲ ಪರಿಸ್ಥಿತಿ ಹೀಗೇ ಇತ್ತು. ಇತ್ತ ಯಾರೂ ತಿರುಗಿ ನೋಡಲಿಲ್ಲ. ಆಶ್ಚರ್ಯವೆಂದರೆ ಆಡಳಿತ ಈ ಬಗ್ಗೆ ಗಮನ ಹರಿಸಿದಂತೆ ಕಾಣುವುದಿಲ್ಲ.

ಸಾಧಾರಣ ಸಂವತ್ಸರದ ಕಾರ್ತಿಕ ಮಾಸದಲ್ಲಾದ ಘಟನೆ ವಿರೋಧಿಕೃತು ಸಂವತ್ಸರದ ವೈಶಾಖ ಮಾಸ - ಅಂದರೆ ಘಟನೆ ನಡೆದು ಆರು ತಿಂಗಳ ನಂತರ ಬಾರಕೂರು ರಾಜ್ಯಪಾಲನಿಗೆ ಸುದ್ದಿ ಮುಟ್ಟಿತು. ಆತ ದೇವಸ್ಥಾನದ ಶುದ್ಧಿಗೆ ಪ್ರಾಯಶ್ಚಿತ್ತಾದಿ ಕಾರ್ಯಗಳನ್ನು ನಡೆಸಿ, ಅಲ್ಲಿ ಪೂಜಾದಿಕಾರ್ಯಗಳು ಎಂದಿನಂತೆ ನಡೆಯುವ ಹಾಗೆ ಮಾಡಿದ. ಚಕ್ರವರ್ತಿ ಸದಾಶಿವರಾಯ ಹಾಗೂ ರಾಮರಾಜ ಮತ್ತು ವೆಂಕಟಾದ್ರಿ ಅರಸುಗಳಿಗೆ ಸನ್ಮಂಗಳವಾಗಬೇಕೆಂದು ಈ ಕಾರ್ಯನಡೆಸಿ ತತ್ಸಂಬಂಧ ವಾಗಿ ೩೫ ವರಹಗದ್ಯಾಣಗಳನ್ನು ವೈಶಾಖ ಶುದ್ಧ ೫ (ಶನಿವಾರ, ಏಪ್ರಿಲ್ 11, ಕ್ರಿ.ಶ. 1551) ರಂದು ದಾನ ಮಾಡಿದ. ಈ ಹಣ ಹುದುರುಹಳ್ಳಿಯ ರಾಜಸ್ವದಿಂದ ದೊರೆಯುವಂತೆ ಮಾಡಿದ. ಇದರ ವಿವರ ಶಾಸನದಲ್ಲಿದೆ.[10] ಆನಂತರ ದೇವಾಲಯ ದಲ್ಲಿ ಎಂದಿನಂತೆ ಪೂಜಾದಿ ಕಾರ್ಯಗಳು ನಡೆಯತೊಡಗಿದವು. ಈ ಕೆಲಸ ಮಾಡಿ ದವ ಯೆಕದಲಖಾನವೊಡೆಯ. ಈತ ಬಾರಕೂರು ರಾಜ್ಯ ವಿಜಯನಗರ ಕಾಲದಲ್ಲಿ ಕಂಡ ಪ್ರಥಮ ಮತ್ತು ಏಕೈಕ ಮುಸ್ಲಿಂ ರಾಜ್ಯಪಾಲ.[11]

ಹಿಂದೆ ವಿಷಮ ಪರಿಸ್ಥಿತಿಗಳುಂಟಾದಾಗ ಕೂಡಲೆ ಕ್ರಮ ಜರುಗಿಸಿದ ಉದಾಹರಣೆ ಇದೆ.[12] ಅಷ್ಟೇ ಅಲ್ಲ ಕೆಲಸಂದರ್ಭಗಳಲ್ಲಿ ಪರಿಸ್ಥಿತಿ ನಿಭಾಯಿಸಲು ಸ್ಥಳೀಯ ಆಡಳಿತ ದೊಂದಿಗೆ ಸಹಕರಿಸಿ ಶಮನ ಕಾರ್ಯಗಳನ್ನು ಕೈಗೊಂಡ ಉದಾಹರಣೆ ಇದೆ.[13] ತಪ್ಪಿತಸ್ತರಿಗೆ ಶಿಕ್ಷೆಯಾದುದೂ ಇದೆ.[14] ಆದರೆ ಕೋಟೇಶ್ವರದ ಈ ಘಟನೆ ನಡೆದು ಆರು ತಿಂಗಳು ಕಳೆಯುವತನಕ ಹಿರಿಯ ಅಧಿಕಾರಿಗಳಾರ ಗಮನಕ್ಕೂ ಬಾರದಿದ್ದುದ ಆಶ್ಚರ್ಯವೇ ಸರಿ. ಪ್ರಭಾವೀ ವ್ಯಕ್ತಿ ಯಾ ವ್ಯಕ್ತಿಗಳ ಶಕ್ತಿ ಪ್ರದರ್ಶನ ಇದಕ್ಕೆ ಕಾರಣವಿರಬಹುದು. ಇದು ಇಲ್ಲಿಗೇ ಮುಕ್ತಾಯಗೊಳಿಸಬಹುದಾದ ಘಟನೆಯಲ್ಲ. ಆಡಳಿತದ ವೈಫಲ್ಯ ಇಲ್ಲಿ ಗುರುತರವಾಗಿ ಕಾಣುತ್ತದೆ.

ಘಟನೆ ನಡೆದ ಸಮಯದಲ್ಲಿ ಬಾರಕೂರು ರಾಜ್ಯದ ರಾಜ್ಯಪಾಲನಾಗಿ ಯಾರಿದ್ದರು ಎಂಬುದು ತಿಳಿಯುವುದಿಲ್ಲ. ಆಚಪ್ಪವೊಡೆಯನಿಗೆ ಸಂಬಂಧಿಸಿದಂತೆ ದೊರೆಯುವ ಕೊನೆಯ ದಾಖಲೆ ಇಲ್ಲಿ ವಿಮರ್ಶೆಗೊಳಗಾಗಿರುವ ಈ ಶಾಸನದ ಪೂರ್ವಾರ್ಧ. ಇದರ ಕಾಲ ಕ್ರಿ.ಶ. ೧೪೪೬. ಆನಂತರ ನಮಗೆ ದೊರೆಯುವ ಹೆಸರು ಯೆಕದಲ ಖಾನನದು. ಪ್ರಸ್ತುತ ಅವಲೋಕನದ ಈ ಶಾಸನದ ಉತ್ತರಾರ್ಧದಲ್ಲಿ ಈತನ ಉಲ್ಲೇಖವಿದೆ. ಇದರ ಕಾಲ ಕ್ರಿ.ಶ. ೧೪೫೧. ಯೆಕದಲಖಾನನ ಬಗ್ಗೆ ಸದ್ಯ ದೊರೆತಿರುವ ಶಾಸನ ಇದೊಂದೆ. ಪ್ರಾಯಶಃ ಈತ ಅಧಿಕಾರ ವಹಿಸಿಕೊಂಡ ಕೂಡಲೇ ಕೋಟೇಶ್ವರದ ಘಟನೆ ಬಗ್ಗೆ ತಿಳಿದು, ವಿಚಾರಣೆ ನಡೆಸಿ ಅಪವಿತ್ರಗೊಂಡಿದ್ದ ಕ್ಷೇತ್ರದಲ್ಲಿ ಪ್ರಾಯಶ್ಚಿತ ಕಾರ್ಯಗಳನ್ನು ನಡೆಸಿ ಅದು ಮತ್ತೆ ಹಿಂದಿನಂತೆ ಬೆಳಗುವಂತೆ ಮಾಡಿದ.[15] ಇದರಿಂದ ಒಂದು ಪುಣ್ಯ ಕ್ಷೇತ್ರ ಪುನರುತ್ಥಾನಗೊಂಡು ಪೂಜಾದಿ ಕಾರ್ಯಗಳು ಎಂದಿನಂತೆ ನಡೆಯುವಂತಾಯಿತು. ಆದರೆ ಘಟನೆಗೆ ಕಾರಣರಾದವರು ಯಾರು? ಅವರ ಕೃತ್ಯಕ್ಕೆ ತಕ್ಕ ಶಿಕ್ಷೆ ಆಯಿತೆ ಎಂಬಿತ್ಯಾದಿ ಪ್ರಶ್ನೆಗಳಿಗೆ ಉತ್ತರ ದೊರೆಯುವುದಿಲ್ಲ.

ದಿಢೀರನೆ ಯಾವುದೇ ಒಂದು ಘಟನೆ ನಡೆಯುವುದಿಲ್ಲ. ಅದಕ್ಕೆ ಬಲವತ್ತರವಾದ ಕಾರಣ ಮತ್ತು ಹಿನ್ನೆಲೆ ಇರುವುದು ಸಹಜ. ಕೋಟೇಶ್ವರದ ಘಟನೆ ಇಂತಹ ಯಾವುದೋ ಹಿನ್ನೆಲೆಯಿಂದ ಹುಟ್ಟಿಕೊಂಡಿರುವುದು. ಶಾಸನದಲ್ಲಿ 'ತಂಮ್ಮೊಳಗೆ ತಾಉ ಕಡಿದಾಡಿ'[16] ಎಂದಿರುವುದು ಈ ಊಹೆಗೆ ಕಾರಣ. ಇಲ್ಲಿ ಕನಿಷ್ಠ ಒಂದು ಗುಂಪಾದರೂ ಸಕಲ ಸಿದ್ಧತೆಯಿಂದ ದೇವಾಲಯದ ಒಳಗೆ ಮತ್ತು ಹೊರಗೆ ಜಮಾಯಿಸಿರಬಹುದು. ಇನ್ನೊಂದು ಗುಂಪು ದೇವಸ್ಥಾನ ಹೊರಗೆ ಸೂಕ್ಷ್ಮಪರಿಸ್ಥಿತಿ ಏರ್ಪಡಬಹುದೆಂದು ಆಲೋಚಿಸಿ ದೇವಾಲಯದ ಒಳಭಾಗದಲ್ಲಿ ದುಷ್ಕೃತ್ಯ ನಡೆಯುವ ಸಾಧ್ಯತೆ ಇಲ್ಲ ಎಂಬ ಭಾವನೆ ಹೊಂದಿದ್ದಿರಬಹುದು. ಅತ್ಯಂತ ಪ್ರಾಚೀನ ಕಾಲದಿಂದಲೂ ಪುರಾಣ ಪ್ರಸಿದ್ಧ ಪುಣ್ಯಕ್ಷೇತ್ರ ಎಂಬ ನಂಬಿಕೆಗೆ ಪಾತ್ರವಾಗಿದ್ದ ಕೋಟೇಶ್ವರನ ಜಾತ್ರೆಗೆ ಸಮಾಜದ ಎಲ್ಲ ವರ್ಗಗಳ ಜನ ಭಾಗವಹಿಸುವುದು ರೂಢಿ. ಭಕ್ತರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಾ ಹೋಗುವುದು ಜನರ ಮೇಲೆ ಕ್ಷೇತ್ರದ ಪ್ರಭಾವವನ್ನು ಪ್ರತಿಬಿಂಬಿಸುತ್ತದೆ. ಹೀಗೆ ಗುಣಾತ್ಮಕ ಭಾವಗಳು ಮೇಳೈಸಿದಾಗ ಅಲ್ಲಿರುವುದು ಸುಖಾಂತ್ಯ. ಆದರೆ ಪ್ರತಿಷ್ಠೆಯ ಪರಾಕಾಷ್ಠೆಯಿಂದ ಹುಟ್ಟಿಕೊಂಡ ದ್ವೇಷ, ಅಸೂಯೆ ಇತ್ಯಾದಿ ಋಣಾತ್ಮಕ ಭಾವಗಳು ತಮ್ಮ ಕಟ್ಟೆಯೊಡೆ ಯಲು ಈ ಸ್ಥಳ ಮತ್ತು ಸಮಯ ವನ್ನು ಆಯ್ಕೆಮಾಡಿಕೊಂಡುದು ಮಾತ್ರ ಅತ್ಯಂತ ಹೇಯವಾದುದು.

ಕಾದಾಟದಲ್ಲಿ ಹೆಣಗಳು ಬೀಳುವುದು ಸಹಜ. ಅದಕ್ಕೆ ಪೂರ್ವಭಾವಿ ಸಿದ್ಧತೆಯಾಗಿತ್ತೆಂದರೆ ಈ ಸಂಖ್ಯೆ ಇನ್ನೂ ಹೆಚ್ಚಾಗುತ್ತದೆ. ಕೋಟೇಶ್ವರದ ಘಟನೆ ಈ ಘೋರತ್ವವನ್ನು ಪ್ರತಿಬಿಂಬಿಸುತ್ತದೆ. ಇಲ್ಲಿ ಅತ್ಯಂತ ಹೇಯವಾದುದೆಂದರೆ ಗೋಹತ್ಯೆ

ಯನ್ನು ದೇವಸ್ಥಾನದಲ್ಲಿ ಮಾಡಿರುವುದು. ಬ್ರಾಹ್ಮಣರ ಮತ್ತು ಶೂದ್ರರ ಹತ್ಯೆಯನ್ನು ಸಾಮಾನ್ಯವೆಂದು ಭಾವಿಸಿದರೂ, ಗೋಹತ್ಯೆಯನ್ನು ಹಾಗೇ ಭಾವಿಸಲಾದೀತೇ?

ಕ್ರಿ.ಶ. ೧೫೪೬ರ ಜಾತ್ರೆ - ಉತ್ಸವಗಳು ಶಾಂತಿಯುತವಾಗಿ ನೆರವೇರಿವೆ. ಅನಂತರ ಮೂರು ವಾರ್ಷಿಕ ಜಾತ್ರೆ - ಉತ್ಸವಗಳೂ ಎಂದಿನಂತೆ ಸಾಗಿವೆ. ನಾಲ್ಕನೆಯದು ಮಾತ್ರ ಭಗ್ನಗೊಂಡಿದೆ. ಅಂದರೆ ೧೫೪೯ರ ಜಾತ್ರೆಯ ಅಥವಾ ಆನಂತರದ ಘಟನೆಗಳು - ವಿದ್ಯಮಾನಗಳೂ, ಅತೃಪ್ತಿ ಇತ್ಯಾದಿ ಕಾರಣಗಳು ಹೊಗೆಯಾಡಲು ಪ್ರಾರಂಭವಾಗಿವೆ. ಇವುಗಳಲ್ಲಿ ಯಾವುದು ಮುಖ್ಯವಾದುದು ಎಂಬಿತ್ಯಾದಿ ಯಾವುದೇ ರೀತಿಯ ಸಂದೇಹಕ್ಕೆ ಉತ್ತರವಿಲ್ಲ.

'ಧನ್ಯರು ಉಪವಾಸದ'[17] ಎಂದು ಶಾಸನ ಹೇಳುವುದನ್ನು ನೋಡಿದರೆ ಸದ್ಗುಣಿಗಳಾದ ಹಿರಿಯರು ಪರಿಸ್ಥಿತಿ ಎಲ್ಲೆ ಮೀರಿರುವುದು ಕಂಡು ಮರುಗಿ ಅಸಹಾಯಕತೆಯಿಂದ ಉಪವಾಸದ ಮೊರೆ ಹೊಕ್ಕರು. ಇದು ಅಂದಿನ ದಯನೀಯ ಸ್ಥಿತಿಯನ್ನು ಚಿತ್ರಿಸುತ್ತದೆ.

ಇದಕ್ಕೆ ಯಾರು ಕಾರಣರು ಎಂಬುದನ್ನು ಶಾಸನ ತಿಳಿಸಿಲ್ಲ. ದೇವಸ್ಥಾನದಲ್ಲಿ ಪ್ರಾಯಶ್ಚಿತ್ತಾದಿ ಕಾರ್ಯಗಳನ್ನು ನಡೆಸಿ ಶುದ್ಧೀಕರಣದಿಂದ ಮತ್ತೆ ಪೂಜಾದಿ ಉತ್ಸವಗಳು ನಡೆಯುವಂತೆ ಮಾಡಿದ ರಾಜ್ಯಪಾಲನಿಗೂ ಸಹ ಘಟನೆಗೆ ಕಾರಣರಾದವರು, ಮೂಲ ಸಮಸ್ಯೆ, ಅನಂತರ ಕೈಗೊಂಡಿರಬಹುದಾದ ಆಡಳಿತಾತ್ಮಕ ತೀರ್ಮಾನ ಶಿಕ್ಷೆ ಇತ್ಯಾದಿಯಾಗಿ ಯಾವುದನ್ನು ಬಹಿರಂಗಪಡಿಸುವುದು ಸೂಕ್ತವಲ್ಲ ಎಂಬ ಭಾವನೆ ಬೆಳೆದಿರಬೇಕು. ಇದು ಪ್ರಭಾವೀ ವಲಯದ ಶಕ್ತಿ ಎಷ್ಟಿದ್ದಿರಬಹುದೆಂಬುದನ್ನು ಪರೋಕ್ಷವಾಗಿ ಸೂಚಿಸುತ್ತದೆ.

ಏನೇ ಆಗಲಿ ಕೋಟೇಶ್ವರದ ಘಟನೆ ವಿಜಯನಗರ ಆಡಳಿತಕ್ಕೆ ಅಂಟಿಕೊಂಡಿರುವ ಒಂದು ಕಳಂಕ. ಚಕ್ರವರ್ತಿ ಕೃಷ್ಣದೇವರಾಯನ ಕಾಲಾನಂತರ ಕರಾವಳಿಯ ಈ ಭಾಗದ ಮೇಲಿನ ಹಿಡಿತ ಶಿಥಿಲಗೊಂಡಿತ್ತು. ಸಮರ್ಥವಾಗಿ ವಿಷಮ ಪರಿಸ್ಥಿತಿಯನ್ನು ಎದುರಿಸಬಲ್ಲ ಶಕ್ತಿ ಕೇಂದ್ರಕ್ಕಿರಲಿಲ್ಲ. 'ಕೃಷ್ಣದೇವರಾಯನು ಇಲ್ಲವಾದ ಮೇಲೆ ತುಳುನಾಡಿನ ತುಂಡರಸರುಗಳು ಎಂದಿನಂತೆಯೆ ತಮ್ಮ ಮೇಲಿನ ಸಾಮ್ರಾಜ್ಯದ ಅಧಿಕಾರವನ್ನು ಕಡೆಗಣಿಸತೊಡಗಿದ್ದರು. ತಮಗೆ ಲಾಭವಾಗಬಹುದಾದ ಸಂದರ್ಭ ಗಳಲ್ಲಿ ಮಾತ್ರ ಅವರು ತಮ್ಮನ್ನು ವಿಜಯನಗರ ಸಾಮ್ರಾಟರ ಸಾಮಂತರೆಂದು ಕರೆದುಕೊಳ್ಳುತ್ತಿದ್ದರೆಂಬುದು ಆ ಕಾಲದ ತುಳುನಾಡಿನ ಶಾಸನಗಳಿಂದ ವಿಶದ ವಾಗುತ್ತದೆ' ಎಂದು ಡಾ. ಕೆ.ವಿ. ರಮೇಶ ಅವರು ಅಭಿಪ್ರಾಯಪಟ್ಟಿದ್ದಾರೆ.[18]

ಪ್ರಬಲವಾಗಿ ಬೆಳೆದಿದ್ದ ಸ್ಥಳೀಯ ಶಕ್ತಿಗಳಿಂದುಂಟಾಗಿದ್ದ ಪರಿಸ್ಥಿತಿಯನ್ನು ಹೇಗಾದರೂ ನಿಭಾಯಿಸಲು ಕೇಂದ್ರ ಆಡಳಿತವು ಕೆಳದಿಯ ಸದಾಶಿವನಾಯಕನಿಗೆ ಈ ಭಾಗವನ್ನು

ಅಮರ ಮಾಗಣೆಯಾಗಿ ಕೊಟ್ಟಿತು.[19] 'ತುಳುವವನ್ನು ಗೆದ್ದು ಬರುವಂತೆ ಸದಾಶಿವ ನಾಯಕನಿಗೆ ಸಾಮ್ರಾಟನೇ ಆಜ್ಞೆ ಮಾಡಿದ' ಎಂದು ಶಿವತತ್ವ ರತ್ನಾಕರ ತಿಳಿಸುತ್ತದೆ.[20]

ಈ ಪರಿಸ್ಥಿತಿ ಇಲ್ಲಿ ಸುಮಾರು ೧೫ನೆಯ ಶತಮಾನದ ಕೊನೆಯ ಭಾಗದಿಂದಲ್ಲೇ ಇತ್ತು ಎಂದು ಹೇಳುವುದಕ್ಕೆ ಇತ್ತೀಚೆಗೆ ನನಗೆ ಹಲವು ಶಾಸನಗಳು ದೊರೆತಿವೆ.[21] ಅಲ್ಲದೆ ಖ್ಯಾತ ಬಂದರು ನಗರ ಮತ್ತು ಪ್ರಾಂತ್ಯದ ರಾಜಧಾನಿಯಾಗಿದ್ದ ಬಾರಕೂರಿನಲ್ಲೂ ಸಹ ಗಲಭೆಗಳಾದ್ದಕ್ಕೆ ಪುರಾವೆ ಇದೆ.[22] ಇವು ಇಲ್ಲಿನ ಸಾಮಂತ ಅರಸರು ತಂಮತಂಮ್ಮೊಳಗೆ ಯುದ್ಧ ಮಾಡಿಕೊಂಡು ಮತ್ತೆ ಈ ಸಂಬಂಧ ಮಾಡಿಕೊಂಡ ಒಪ್ಪಂದಗಳಿಗೆ ಹೊರತಾದವು.[23]

ಪ್ರಾಯಶಃ ಇದಕ್ಕೆಲ್ಲಾ ಮುಖ್ಯಕಾರಣ ರಾಜಧಾನಿ ವಿಜಯನಗರದಲ್ಲಿ ಪದೇ ಪದೇ ಆಗುತ್ತಿದ್ದ ರಾಜಕೀಯ ಪಿತೂರಿ, ಸಂಚು, ಕೊಲೆ-ಅದರಿಂದ ಉಂಟಾಗುತ್ತಿದ್ದ ಅಸ್ಥಿರತೆ, ಭಯದ ವಾತಾವರಣ ಇತ್ಯಾದಿಗಳಿರಬಹುದು. ಈ ನಿಟ್ಟಿನಲ್ಲಿ ದೊರೆತಿರುವ ಹೊಸ ಹೊಸ ಆಧಾರಗಳ ನೆಲೆಯಲ್ಲಿ ವಿಜಯನಗರ ಕಾಲೀನ ಪ್ರಾಂತೀಯ ಆಡಳಿತವನ್ನು ಮತ್ತು ಸಾಮಂತ ಅರಸುಗಳೊಂದಿಗಿನ ಸಂಬಂಧವನ್ನು ಪುನರ್ ಪರಿಶೀಲಿಸುವುದು ಇಂದಿನ ಅವಶ್ಯಕತೆ ಎಂದು ಕಾಣುತ್ತದೆ.

ಶಾಸನ ಪಾಠ

1 ಸ್ವಸ್ತಿ (|| *) ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರಚಾರವೇ ತ್ರಿಯಿಲೋ-

2 ಕ್ಯ ನಗರಾರಂಭ (ಕಂ) ಮೂಲಸ್ತಂಭಾಯ ಶಂಭವೇ (|| *) ಶ್ರೀ ಜಯಾಭ್ಯುದಯ ಶಾ-

3 ಲಿ ವಾಹನ ಶಕವರುಷ ೧೪೬೮ರಂದು ಒಂಭತ್ತನೆಯ ವರ್ತ್ತಮಾ-

4 ನದ ಪರಾಭವ ಸಂವತ್ಸರದ ಕಾರ್ತ್ತಿಕ ಶು ೧೫ ಲು ಶ್ರೀಮನ್ಮಹಾರಾಜಾ-

5 ಧಿರಾಜ ಪರಮೇಶ್ವರ ಶ್ರೀ ವೀರಪ್ರತಾಪ ಶ್ರೀ ವೀರಸದಾಶಿವರಾಯ ಮಹಾ-

6 ರಾಯರೂ ವಿಜಯನಗರಿಯ ಸಿಂಹಾಸನದಲು ಚಿತ್ತಯಿಸಿ ದುಷ್ಟ ನಿಗ್ರಹ-

7 ಶಿಷ್ಟ ಪ್ರತಿಪಾ (ಲ*) ನೆಯಾಗಿ ಸಕಲಧರ್ಮ ವರ್ಣಾಶ್ರಮಮಂಗಳನು ಪ್ರತಿಪಾಲಿಸಿ

8 ಸುಖಸಂಕಥಾ ವಿನೋದದಿಂದ ರಾಜ್ಯವನು ವೆಂ (k *)ಟಾದ್ರಿ ರಾಜ ಮಹಾ-

9 ಸದಾಶಿವ ರಾಯರು ಬಾರಕೂರ ರಾಜ್ಯವನು ವೆಂ (k *) ಟಾದ್ರಿ ರಾಜ ಮಹಾ-

10 ರಾಯ ಅರಸುಗಳಿಂಗೆ ಪಾಲಿಸಿ ಆ ವೆಂಕಟಾದ್ರಿರಾಜರು ಬಾರಕೂರ ರಾಜ್ಯವ-

11 ನು ಅಚಪವೊಡೆಯರಿಗೆ ಪಾಲಿಸಿ ಆ ಅಚ್ಚಪ್ಪ ವೊಡೆಯರು ಶ್ರೀಸದಾಶಿವ-

12 ರಾಯ ಮಹಾರಾಯರಿಗೆ ಶತ್ರು ಕ್ಷಯ ಮಿತ್ರೋರ್ಜಿತ ಆಯುರಾರೋಗ್ಯ
13 ಅಯಿಶ್ಯರಿಯಾಭಿಉಕ್ರದ್ಧಿಯಾಗಬೇಕೆಂದು ರಾಮರಾಜ ವೆಂಕಟಾದ್ರಿ-
14 ರಾಜ ಮಹಾ ಅರಸುಗಳಿಂಗೆ ಪು (೦) ವಾಗಬೇಕೆಂದು ಕುಡುಕೂರ ಕೋಟೀ-
15 ಶ್ವರ ದೇವರಿಗೆ ಕಾರ್ತಿಕ ಮಾಸ ದಿನ 20 ಕಿ ಪಂಚಾಮ್ರುತಾಭಿಶೇಕ ದೀಪಾರಾ-
16 ಧನೆ ನೈವೇದ್ಯ ಫಲಪೂಜೆ ಉರ್‍ರಂದಾವನ ಪೂಜೆಗಳನು ಸಾಂಗವಾಗಿ ನಡಸುವ
17 ಧರ್ಮಕ್ಕೆ ಕೋ (ಟೀ)ಶ್ವರದ ಗ್ರಾಮದ ಹುದುರಹಳ್ಳಿಯ ಉರಲು ಅ (ದಂ)ಣ್ಣ ಹತ್ತಾರರ 18 ಹದಿಯಲು ಗ ೧೦ ಬೆಂಗರ ಭಟರ ಹದಿಯಲು ಗ ೪|| ಠಕ್ಕುರರ
19 ಹದಿಯಲು ಗ ೧೪ ಬಿಳಿಯ ಕೀಕಣ ಹೆಚಾರನಹದಿಯಲು ಅಯಿವತು
20 ಸ್ವರ ಹದಿಯಲು ಗ ೧೧|| ಅಂತುಗ ೫೦ ಅಕ್ಷರದಲು ಅಯಿವತು
21 ವರಹನನೂ ಅಚ್ಚಪ್ಪವೊಡೆಯರೂ ಶ್ರೀ ಕೋಟೀಶ್ವರ ದೇವರಿಗೆ ಬರಸಿಕೋ-
22 ಟ್ಟ ಧರ್ಮಶಸನ ಬಾರಕೂರ ಕರಣಿಕ ತಿ (೦)ಮ್ಮರಸರ ಬರಹ ಅಚ್ಚಪ್ಪ-
23 ವೊಡೆಯರ ಬರಹ ಮತಂ ವಿರೋಧಿ ಕ್ರುತು ಸಂವತ್ಸರದ ವಯಿಶಖ ಶು-
24 ದ೫ಲು ರಾಮ ರಾಜ ವೆಂಕಟಾದ್ರಿರ ಜಗಳ ನಿರುಪದಿಂದ ಬರಕೂ-
25 ರ ರಾಜ್ಯವನಾಳುವ ಯೆರದಳಖನವೊಡೆಯರು ಸದಾಶಿವಮ-
26 ಹಾ ರಾಯರಿಗೆ ಅಯಿಶ್ವರಿಯ ಉಕ್ರದ್ಧಿ ಆಗಬೇಕೆಂದು ಕೋಟೀಸ್ವರ-
27 ದೇವರಿಗೆ ಕೋಟೀಶ್ವರ ದೇವರ ಗ್ರಾಮದೊಳಗಣ ಹುದರುಹಳಿಯ ಗ್ರಾ-
28 ಮೆದಲು ಗ೩೫ ವರಹನು ಕುಲವ ಕಡಿದು ಧಾರೆಯನೆರದು ಬರಸಿ-
29 ಕೊಟ್ಟ ಧರ್ಮಶಾಸನದ ಕ್ರಮವೆಂತೆಂದರೆ ಕೋಟೀಸ್ವರ ದೇವರ ತುಡಿಯ
30 ಹಬ್ಬದಲೂ ತುಲು ರಾಜ್ಯಲು ಕುಡಿದಲ್ಲಿ ತ (೦)ಮ್ಮೊಳಗೆ ತಾಉ ಕಡಿದಾಡಿ
31 ಬ್ರಾಹ್ಮರು ಶೂದ್ರರ ಹೆಣಗಳು ದೇವಸ್ಥಾನದೊಳಗೆ ಬಿದು ಗೋಹತ್ಯ-
32 ವಾಗಿ ದೇವಸ್ಥಾನದ ಬಾಗಿಲು ಕಟ್ಟಿ ನಯಿತೀದ್ಯ ನಂದಾದೀಪ್ತಿ ಉಲಿದು ಧನ್ಯ-
33 ರು ಉಪವಾಸದು ಆಱುತಿಂಗಳು ಪರಿಯಂತರ ಹಾಳಾಗಿಯಿರ-
34 ಲಾಗಿ ಆ ದೇವರ ವಯಿಭೋಗಲು ನಡೆಯದೆ ಪ್ರಾಯಶ್ಚಿತ ಕೆ ನಡಸು
35 ವದಕ್ಕಾಗಿ ರಾಮರಾಜ ವೆಂಕಲಾದ್ರಿ ಅರಸುಗಳಿಗೆ ಧರ್ಮವಾಗ-
36 ಬೇಕೆಂದು ಮೆರದಾಲಖನ ವೊಡೆಯರು ಕೋಟೀಶ್ವರ ದೇವ-

37 ರಿಗೆ ಧಾರೆಯೆಱದು ಕೊಟದು ಹುದುರು ಹಳ್ಳಿಯಲಿ ಗ೩೫ ವರಹ-

38 ಗೆ ವಿವರ ಅಂಣ ಹತ್ತರನ ಹದಿಯಲು ಗ ೧೦ ಬಿಳಿಯ ನಾರಣ ಹೆ-

39 ಬಾರಹದಿ ಗ 2 ಶಂ೦ (ರ*) ಲಿಂಗ ಸೆಟ್ಟಿಯ ಹದಿ ಗ ೫ ಬೆಂಗತಿಭಟ್ಟನ

40 ಹದಿಗಳ ಧನ್ಯರಹದಿ ಗ ೨ ಚಾಮಮ್ಮರ್ದ್ಯಸ್ತನ ಹದಿ ಗ 2
ಅಂತು ಗ ೩೫ ವರಹ-

41 ನನು ಯೆರಧಾರಖಾನ ವೊಡೆಯರು ಆಚಂದ್ರಾರ್ಕ್ಕಸ್ತಾಯಿಯಾಗಿ ನಡೆವತಿ-

42 ಬದು ಬಹಿರಿ ಯೆಂದು ಯೆರದಾರಖಾನ ವೊಡೆಯರೂ ಕೋಟೀಶ್ವರ ದೇವರಿಗೆ

43 ಸಹಿರಂಜ್ಯೋದಕ ದಾನ ಧಾರಾ ಪೂರ್ವಕವಾಗಿ ಧಾರೆಯನೆರದು ಬರ-

44 ಸಿಕೊಟ್ಟ ಶಿಲಾಶಾಸನ ಕೋಟೀಶ್ವರ ಗ್ರಾಮದ ಅಣಿಹತರರ ವೈದ್ಯ/ಪಡು-

45 ಮನೆಹೆಚಾರರು ಪಡುಮನೆಯ ಹತಾರರು ಮೂಡುಮನೆಯ

46 ಹೆಚಾರರ ವೊಪ್ಪ ಬಾರಕೂರ ಕರಣಿಕಕ್ರುಷ್ಣಯ್ಯಗಳ ಬರಹ

47 ಯೆಕಧಾರಖಾನ ವೊಡೆಯರ ವೊಪ್ಪ (|| *) ದಾನ ಪಾಲನಯೋರ್ಮ್ಮ-

48 ಧ್ಯೆ ದಾನಾಶ್ರೇಯೋ ನು ಪಾಲನಂ ದಾನಾತ್ಸ್ವರ್ಗಮವಾಪ್ನೋತಿ

49 ಪಾಲನಾದ ಚ್ಚುದಂ ಪದಂ ||

ಅಡಿಟಿಪ್ಪಣಿಗಳು ಮತ್ತು ಉಲ್ಲೇಖಗಳು

1. P.Gururaja Bhatt : *Studies in Tuluva History and Culture* (1975) - P. 287.
2. Ibid
3. Ibid. p. 288-289
   P.G. Bhatt : *Antiquities of South Kanara* - (1969) p.9
4. S.I.I. Vol IX - ii Nos. 406, 409, 415, 417, 435, 451, 469, 578, 621 and 673.
5. Ibid No. 406
6. Ibid No. 673
7. Ibid No. 621
8. ಅದೆ. ಶಾಸನ ಪಾಠ - ಸಾಲು 1-23
9. ಅದೆ. ಶಾಸನ ಪಾಠ- ಸಾಲು 3-4
10. ಅದೆ ಶಾಸನ ಪಾಠ ಸಾಲು 37-40

11. K.V. Ramesh : *A History of South Kanara* (1970) p. 226 (AHSK)
12. Karnataka Inscriptions Vol. Nos. 35 and 36
    S.I.I. Vol VII Nos. 182, 296, 309, 340 etc.,
    KV.R. - *AHSK* - P. 160-161 etc
13. S.I.I. Vol. IX - II - 450 ; K.V.R. - *AHSK*. P. 183 etc.,
14. AR No. 495 of 1928 - 29 ; Also Nos. 478 and 482 etc
15. K.V.R. - *AHSK* - Pp. 226, 306
    ಕೆ.ವಿ. ರಮೇಶ - ತುಳುನಾಡಿನ ಇತಿಹಾಸ ಪು. 113- 114
16. S.I.I. Vol IX No. 621. ಶಾಸನ ಪಾಠ - ಸಾಲು - 30
17. ಅದೇ. ಸಾಲು 32-33
18. K.V.R. - AHSK. p. 227; ತುಳುನಾಡಿನ ಇತಿಹಾಸ ಪು. 114
19. Ibid.
20. ಕಲ್ಲೋಲ 5 ಪದ್ಯ - 30-31 ; Also, K.V.R. *AHSK* p. 227
21. ಸಿಕ್ಕಿರುವ ಹೊಸ ಶಾಸನಗಳು:
    ಕೊಳಕಿ ಇರ್ವತ್ತೂರಿನ ಶಾಸನ, ಬೋಳದ ಶಾಸನಗಳು - ಕಾರ್ಕಳ ತಾಲ್ಲೂಕು ಕುಂದಾಪುರ ತಾಲೂಕಿನ ಬೆಳೆವ ಶಾಸನ.
    ಉಡುಪಿ ತಾಲೂಕಿನ - ಕಕ್ಕಿ ಹಳ್ಳಿಯ - ಕಲ್ಲಕಂಡಗಡ್ಡೆ ಶಾಸನ - ಇತ್ಯಾದಿ
22. S.I.I. Vol IX - ii - Nos. 450 and 457
23. ಕೆ.ವಿ. ರಮೇಶ - *ತುಳುನಾಡಿನ ಇತಿಹಾಸ* ಪು. 82-142. ವಿಜಯನಗರ ಕಾಲದ ತುಳುನಾಡು.

೧೪. ಹಾಸನ ಜಿಲ್ಲೆಯ ತೆಲುಗು ಶಾಸನಗಳು ಮತ್ತು ತೆಲುಗು ವಲಸಿಗರ ಭಾಷಾಸಂಸ್ಕೃತಿ ಸಂಗೋಪನೆ

ಎನ್. ಆರ್. ಲಲಿತಾಂಬ

ಹಾಸನ ಜಿಲ್ಲೆಯಲ್ಲಿ ಸುಮಾರು ೨೦೦೦ರಕ್ಕಿಂತಲೂ ಹೆಚ್ಚು ಶಾಸನಗಳು ಇದುವರೆವಿಗೂ ದೊರೆಕಿದ್ದು, ಕನ್ನಡ ಶಾಸನಗಳೊಂದಿಗೆ ಸಂಸ್ಕೃತ ತೆಲುಗು ತಮಿಳು ಮರಾಠಿ ಗುಜರಾತಿ ಭಾಷೆಯ ಶಾಸನಗಳೂ ದೊರಕಿವೆ. ಪ್ರಸ್ತುತ ಲೇಖನದಲ್ಲಿ ತೆಲುಗು ಶಾಸನಗಳನ್ನು ಮುಖ್ಯವಾಗಿ ಗಮನಿಸಲಾಗುವುದು.

ಕನ್ನಡ ಆಂಧ್ರ ದೇಶಗಳ ಗಡಿಗೆರೆಗಳು ಕಾಣಿಸಿಕೊಳ್ಳುವುದಕ್ಕೆ ಬಹಳ ಹಿಂದಿನಿಂದಲೂ ಮತ್ತು ನಂತರದಲ್ಲೂ ಕನ್ನಡ ತೆಲುಗು ಭಾಷಾ ಸಂಸ್ಕೃತಿಗಳಲ್ಲಿ ಒಂದು ರೀತಿಯ ಸೌಹಾರ್ದ ಸಂಬಂಧವಿದ್ದೇ ಇದೆ. ಕನ್ನಡದ ಆದಿಕವಿ ಪಂಪ ಹಾಗೂ ಅವನ ತಮ್ಮ ಜಿನವಲ್ಲಭನ ಕಾಲದಲ್ಲೇ ಕಾಣಿಸಿಕೊಂಡಿರುವ ಕನ್ನಡ - ತೆಲುಗು ಕೊಂಡಿಗಳು ವಿಜಯ ನಗರದ ಅರಸರ ಕಾಲದಲ್ಲಿ ವಿಶೇಷವಾಗಿ ಬೆಸೆದುಕೊಂಡಿದ್ದು, ೧೧ನೇ ಶತಮಾನದಿಂದ ಚೋಳರ ; ೧೪ನೇ ಶತಮಾನದಿಂದ ವಿಜಯನಗರ ಅರಸರ ಆಳ್ವಿಕೆಯ ಕಾಲಮಾನದಲ್ಲಿ ತಮಿಳು, ತೆಲುಗು ಭಾಷೆಯ ಶಾಸನಗಳು ಕಾಣಿಸಿಕೊಳ್ಳ ತೊಡಗಿದವು. ಕರ್ನಾಟಕಾಂಧ್ರ ಗಡಿನಾಡಿನ ದ್ವಿಭಾಷಾ ಪರಿಸರದಲ್ಲಿ ತೆಲುಗು ಭಾಷಾ ಶಾಸನಗಳು ಹೆಚ್ಚಾಗಿ ದೊರಕಿವೆ. ಆದರೆ ಹಾಸನ ಜಿಲ್ಲೆಯಲ್ಲಿ ಕೇವಲ ೨೦ ತೆಲುಗು ೧೦ ತಮಿಳು ಶಾಸನಗಳು ಮಾತ್ರ ದೊರಕಿವೆ.

ಈ ರೀತಿ ಒಂದು ಪ್ರದೇಶದಲ್ಲಿ ಬಹುಭಾಷಾ ಶಾಸನಗಳು ಕಾಣಿಸಿಕೊಳ್ಳಲು ಮುಖ್ಯ ಕಾರಣ ವಲಸೆ. ವಲಸೆಗಳಿಗೆ ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಅಂಶಗಳು ಕಾರಣವಾಗುತ್ತವೆ. ಆಳರಸರು ಅನ್ಯ ನೆಲದಲ್ಲಿ ತಮ್ಮ ಆಡಳಿತಕ್ಕೆ ಅಧಿಕೃತತೆಯನ್ನು ತರಲು ತಮ್ಮ ಮಾತೃಭಾಷೆ ಇಲ್ಲವೇ ದೇಶಭಾಷೆಯಲ್ಲಿ ಶಾಸನ ಗಳನ್ನು ಹಾಕಿಸಿರುವುದು, ನಾಣ್ಯಗಳನ್ನು ಟಂಕಿಸಿ ಚಲಾವಣೆಗೆ ತರುವುದು ಸಾಮಾನ್ಯವಾಗಿ ಕಂಡು ಬರುವ ಪ್ರವೃತ್ತಿ. ಆಳರಸರು ಅಧಿಕಾರಿಗಳೊಂದಿಗೆ ಅವರನ್ನು ಆಶ್ರಯಿಸಿದ ಸೇವಕ ವರ್ಗ, ಪಂಡಿತರು, ಕಲಾವಿದರು, ವರ್ತಕರು ಬಹಳ ಮುಖ್ಯವಾಗಿ ಸೈನಿಕರು ಹೊಸ ಆಕ್ರಮಿತ ಪ್ರದೇಶಕ್ಕೆ ವಲಸೆಯಾಗುವುದು ಸಹಜ. ಇಂತಹವರು ತಮ್ಮ ಮೂಲ ನೆಲೆ ಹಾಗೂ ಅನ್ಯ ನೆಲೆಗಳ ಭಾಷೆ, ಸಂಸ್ಕೃತಿಗಳ ಸೇತುವೆಯಾಗುತ್ತಾರೆ. ಈ ಕಾರಣದಿಂದ ಏಕಭಾಷಾ ಪ್ರಾಂತ್ಯಗಳು

ದ್ವಿಭಾಷಾ ಪ್ರಾಂತ್ಯವಾಗಿ ಕೆಲವೊಮ್ಮೆ ಬಹುಭಾಷಾ ಪ್ರದೇಶಗಳಾಗಿ ಪರಿವರ್ತಿತವಾಗುವ ಸಾಧ್ಯತೆಯಿರುತ್ತದೆ. ಗಡಿ ನಾಡುಗಳಲ್ಲಿ ಇದು ತೀರ ಸಾಮಾನ್ಯ ಪ್ರಕ್ರಿಯೆ.

ಗಡಿನಾಡಲ್ಲದ ಹಾಸನಜಿಲ್ಲೆಗೆ ವಿಜಯನಗರದ ಅರಸರ ಕಾಲದಲ್ಲಿ ಈ ಹೊಯ್ಸಳ ನಾಡಿನ ಹೃದಯ ಭಾಗಕ್ಕೆ ತೆಲುಗರ ವಲಸೆಗಳು ನಡೆದಿರುವುದನ್ನು ಶಾಸನಗಳು, ಸಾಹಿತ್ಯ ಕೃತಿಗಳು ತಿಳಿಸುತ್ತವೆ. ಹೊಯ್ಸಳರ ಪತನಾನಂತರ ವಿಜಯ ನಗರದ ಅರಸರು ಹೊಯ್ಸಳರನಾಡನ್ನು ಪ್ರಾಂತೀಯ ಅರಸರು, ಅಮರನಾಯಕರು, ಪಾಳೇಗಾರರು ಆಳ್ವಿಕೆ ಮಾಡಲು ಅವಕಾಶ ಮಾಡಿಕೊಟ್ಟಿದ್ದು ತಿಳಿದ ವಿಚಾರವೇ ಆಗಿದೆ. ಹಾಸನ ಜಿಲ್ಲೆಯಲ್ಲಿ ರಾಜಕೀಯ ಕಾರಣಕ್ಕಾಗಿ ತೆಲುಗು ಭಾಷಾ ಪ್ರಾಂತ್ಯದಿಂದ ಅಧಿಕಾರಿಗಳಾಗಿ ನೇಮಕ ಗೊಂಡು ಆ ಪ್ರದೇಶದ ಆಳ್ವಿಕೆಯನ್ನು ಪಡೆದವರಲ್ಲಿ ಬೇಲೂರು ನಾಯಕರೆಂದು ಹಾಗೂ ಹೊಳೇನರಸಿಪುರದ ಪ್ರಭುಗಳೆಂದು ಕರೆಸಿಕೊಳ್ಳುವ ಎರ್ರಕೃಷ್ಣಪ್ಪನ ವಂಶದವರು, ಹಾಸನ ಸೀಮೆಯನ್ನು ಆಳಿದ ಚೆನ್ನಪ್ಪ ಅವರ ಅಳಿಯ ತಿಪ್ಪಭೂಪನ ಮಗ ಎಲ್ಲಪ್ಪ ಹಾಗೂ ನಂದ್ಯಾಲ ಪ್ರಭುಗಳು, ಹೊನ್ನವಳ್ಳಿ ಸೀಮೆಯ ಅಮರನಾಯಕ ಬಯಕಾರ ರಾಮಪ್ಪಯ್ಯ ಮುಖ್ಯರು.

ಹೊಯ್ಸಳನಾಡನ್ನು ಆಳಿದ ವಿಜಯನಗರದ ಅರಸರ ಶಾಸನಗಳು ಸಂಸ್ಕೃತ, ಕನ್ನಡ, ತೆಲುಗು ಭಾಷೆಗಳಲ್ಲಿ ದೇವನಾಗರಿ, ಕನ್ನಡ, ತೆಲುಗು ಲಿಪಿಗಳಲ್ಲಿ ಕಂಡು ಬಂದಿವೆ. ತೆಲುಗು ಶಾಸನಗಳು ಬೇಲೂರು ಹೊಳೆನರಸೀಪುರ ಆಲೂರುಗಳಲ್ಲಿ ಮಾತ್ರ ಕಾಣಿಸಿಕೊಂಡಿದ್ದು ೨೦ ತೆಲುಗು ಶಾಸನಗಳಲ್ಲಿ ೮ ತಾಮ್ರಪಟಗಳು, ಉಳಿದವು. ಶಿಲಾಶಾಸನಗಳು ಪಟ್ಟಿಕಾಶಾಸನಗಳಾಗಿವೆ.

ಬೇಲೂರಿನ ಪುಷ್ಪಗಿರಿ ಮತ್ತು ತಲುಗರ ಸಂಬಂಧ

ಕ್ರಿ.ಶ. ೧೩೫೨ರಿಂದಲೇ ವಿಜಯನಗರದರಸರ ಶಾಸನಗಳು ಹಾಸನ ಜಿಲ್ಲೆಯಲ್ಲಿ ಕಂಡುಬಂದಿದ್ದರೂ ಕ್ರಿ.ಶ. ೧೪೭೮ರ ಮೇ ೧೭ಕ್ಕೆ ಸರಿಹೊಂದುವ ಬೇಲೂರು ತಾಲ್ಲೂಕಿನ ಪುಷ್ಪಗಿರಿ ಮಲ್ಲಿಕಾರ್ಜುನ ದೇವಾಲಯದ ಉತ್ತರ ಬಾಗಿಲ ಎಡಗಡೆ ಗೋಡೆಯ ಮೇಲಿರುವ ತೆಲುಗು ಶಾಸನವೇ[1] ಇಲ್ಲಿ ದೊರಕಿರುವ ಮೊದಲು ತೆಲುಗು ಶಾಸನವಾಗಿದೆ. ಒಡ್ಡೆವಿದಿ ಲಿಂಗಯ್ಯ ಎಂಬ ಭಕ್ತನು ದೇವಾಲಯಕ್ಕೆ ಭೇಟಿ ನೀಡಿದ್ದು 'ಪುಷ್ಪಗಿರಿ ಮಲ್ಲಿಕಾರ್ಜುನ ದೇವುನಕು ಒಡ್ಡೆವಿದಿ ಲಿಂಗಯ್ಯ ಅನಂತ್ತಕೋಟಿ ದಂಡಾಲು ಸಮರ್ಪಿಂಚನು ಶ್ರೀ' ಎಂದು ಬರೆದಿದೆ. ಅಂದು ಏಕಾದಶಿ ಸೋಮವಾರ. ಈತ ದೇವಾಲಯಕ್ಕೆ ಏನು ದಾನಮಾಡಿದನೆಂಬುದು ತಿಳಿಯುವುದಿಲ್ಲ. ಅದೇ ದೇವಾಲಯ ದಲ್ಲಿ ಆರುವೇಟಿ (ಅರವೀಡು ಕರ್ನೂಲು ಜಿಲ್ಲೆ) ವೆಂಗಣನು ದೀಪಸ್ತಂಬವನ್ನು ಮಾಡಿಸಿಕೊಟ್ಟಿದ್ದಾನೆ.[2] ಹೊಯ್ಸಳ ಕಾಲದ ಜೈನ ಬಸದಿಯು ಮಲ್ಲಿಕಾರ್ಜುನ ದೇವಾಲಯವಾಗಿ ಪರಿವರ್ತಿತವಾಗಿದ್ದು ಈ ಶಾಸನಗಳ ಕಾಲಕ್ಕೆ ಪುಷ್ಪಗಿರಿಬೆಟ್ಟವು

ಶೈವಮಠವನ್ನು ಹೊಂದಿ ಶೈವಕೇಂದ್ರವಾಗಿ ಪ್ರಸಿದ್ಧವಾಗಿದ್ದು ತಿಳಿದುಬರುತ್ತದೆ.[3] ಇಲ್ಲಿನ ಒಂದು ಬೆಟ್ಟದ ಉತ್ತರ ಭಾಗದ ಸೋಪಾನದ ಬಳಿ ಮಂಟಪದ ಕಂಬದ ಮೇಲೆ ಮೂರು ಶಾಸನಗಳಿದ್ದು, ಶ್ರೀ ನಖರೇಶ್ವರ ವೋರುಂ ಗಲ್ಲಿನ ವೀರಭದ್ರ ದೇವರನ್ನು ಹೆಸರಿಸುತ್ತದೆ. ವೀರಭದ್ರನೊಂದಿಗೆ ನಖರೇಶ್ವರ ಹೆಸರು ಕಾಣಿಸಿಕೊಂಡಿರುವುದು. ಬಹುಶಃ ಆ ಮಂಟಪವೂ ಪರಿವರ್ತನೆಗೊಂಡು ವೀರಭದ್ರ ದೇವರ ಗುಡಿ ಆಗಿರುವ ಸಾಧ್ಯತೆಯಿದೆ. ಶೈವರಿಗೆ ವೀರಭದ್ರ ಅನ್ಯ ಧರ್ಮಗಳ ಮೇಲಿನ ವಿಜಯದ ಸಂಕೇತವೇ ಆಗಿದ್ದನೆನ್ನ ಬಹುದು. ವೋರಂಗಲ್ಲು ಎಂಬುದು ವೀರಭದ್ರನೊಂದಿಗೆ ಸೇರಿರುವುದಕ್ಕೆ ಓರುಂಗಲ್ಲಿನ ವೀರಭದ್ರನ ಭಕ್ತರು ಅಧಿಕಾರಿಗಳು ನಿವಾಸಿಗರು ಈ ಪ್ರದೇಶಕ್ಕೆ ವಲಸೆ ಬಂದಿರುವುದು ಕಾರಣವೆನ್ನ ಬಹುದು. ತಾವು ಯಾವುದೇ ಅನ್ಯ ನೆಲದಲ್ಲಿ ನೆಲಸಿದರೂ ತಮ್ಮ ಮೂಲ ನೆಲೆಯ ಸಂಸ್ಕೃತಿಯ ದೈವಗಳನ್ನು ತಮ್ಮೊಂದಿಗೆ ಕೊಂಡೊಯ್ದು ಅವುಗಳಿಗೆ ಗುಡಿ ಕಟ್ಟಿಸು ವುದು ವಲಸಿಗರ ಸಹಜ ಪ್ರವೃತ್ತಿಯಾಗಿರುತ್ತದೆ. (ಈಗಲೂ ಇಂಥ ಪ್ರವೃತ್ತಿಯನ್ನು ಕಾಣಬಹುದು.) ಈ ವೀರಭದ್ರನಿಗೆ ವೀರ ಹರಿಹರ ಮಹಾರಾಯರ ಆಳಿಯ ಪುಲ್ಲಖಂಡಸಿದ್ಧರಾಜರು ಪಂಡಿತನಹಳ್ಳಿಯ ಕೆರೆಯ ಕೆಳಗೆ ನಾಲ್ಕು ಕೊಳಗ ಗದ್ದೆಯನ್ನು ಜಾಜಿಕೆರೆಯ ಕೆಳಗೆ ಹನ್ನೆರಡು ಕೊಳಗ ಗದ್ದೆಯನ್ನು ದಾನ ಮಾಡಿದ್ದಾನೆ.[4] ಈ ಓರುಂಗಲ್ಲಿನ ಪುಲ್ಲಖಂಡ ಸಿದ್ಧರಾಜನಿಗೂ ವಿಜಯನಗರದ ಅರಸ ಹರಿಹರನಿಗೂ ಆತ್ಮೀಯ ಸಂಬಂಧವಿತ್ತು. ಈತ ಹರಿಹರನ ಆಳಿಯ. ಅವನು ಎರಡು ಹಳ್ಳಿಗಳಲ್ಲಿ ಭೂ ದಾನ ನೀಡಿರುವುದರಿಂದ ಬಹುಶಃ ಈ ಭಾಗವನ್ನು ಆತನ ಆಳ್ವಿಕೆಗೆ ಹರಿಹರ ನೀಡಿರುವ ಸಾಧ್ಯತೆಯನ್ನು ತಳ್ಳಿಹಾಕಲಾಗದು.[5]

ಕ್ರಿ.ಶ. ೧೮೨೧ಡಿಸೆಂಬರಿನಲ್ಲಿ ರಚಿತವಾಗಿರುವ ತಾಮ್ರಪಟ ಶಾಸನವೊಂದು ಇಲ್ಲಿನ ಪುಷ್ಪಗಿರಿ ಮಲ್ಲಾಪುರ ಮಠದ ಮಲ್ಲಿಕಾರ್ಜುನ ಒಡೆಯರ ವಶದಲ್ಲಿ ದೊರಕಿದೆ. ಇದು ಸಂಸ್ಕೃತ ಮತ್ತು ತೆಲುಗು ಭಾಷೆಯಲ್ಲಿದ್ದು ಆರಂಭದಲ್ಲಿ ಶ್ರೀಶೈಲದ ಮಲ್ಲಿ ಕಾರ್ಜುನನ ಸ್ತುತಿಯಿದೆ. ಅನಂತರದ ದತ್ತಿಯನ್ನು ಕೊಟ್ಟ ವಿವರ ನೀಡಿದೆ. ದಾನಿ ಚಂದೂಲಾಲ್ ಪ್ರಭು, ಈತ ನಾನಕಗುರುವಿನ ಜ್ಞಾನದೀಪ್ತಿಯಲ್ಲಿ ಬೆಳಕನ್ನು ಪಡೆದ ಕೋವಲ್ಯಗೋತ್ರದ ಮೋಹರಾಖತ್ತರ ವಂಶದ ಲಚ್ಚೀರಾಮನ ಮೊಮ್ಮಗ ನಾರಾಣ ದಾಸವರ್ಮನಿಗೆ ಆತನ ಸತಿ ನಾನೂಭಾಯಿಯಲ್ಲಿ ಜನ್ಮ ಪಡೆದವನು. ಆಪಸ್ತಂಬ ಸೂತ್ರದ ಮಾಧ್ಯಂದಿನ ಅಧ್ಯಾಪಕ ಹೈದರಾಬಾದಿನಲ್ಲಿ ಈತ ನಿಜಾಮ್ ದೊರೆಯ ಬಳಿಯಿದ್ದು ಮಂತ್ರಿ ಎಂಬುದು ತಿಳಿದು ಬಂದಿದೆ. ದತ್ತಿಕೊಟ್ಟಿರುವ ಗ್ರಾಮ ಲಿಂಗಾಲ ತೆಲಂಗಾಣದಲ್ಲಿದೆ.[6]

ಅಂದರೆ ಈ ಶಾಸನ ಸ್ಥಳಾಂತರಗೊಂಡಿರುವ ದಾಖಲೆಯಾಗಿದೆ. ಈ ಕಾಲಕ್ಕೆ ಪುಷ್ಪಗಿರಿ ಸಿದ್ಧಾಪುರಗಳು ವೀರಶೈವ ಕೇಂದ್ರಗಳಾಗಿದ್ದು ಶ್ರೀಶೈಲದಿಂದ ಇಲ್ಲಿಗೆ ವಲಸೆ ಬಂದಿರಬಹುದಾದ ಶೈವ ಯತಿಗಳು ಸ್ಥಾನಿಕರ ಜೊತೆಗೇ ಈ ದಾಖಲೆಯೂ ವಲಸೆ

ಗೊಂಡಿರುವುದೆಂಬುದರಲ್ಲಿ ಅನುಮಾನವಿಲ್ಲ. ಇದೊಂದು ತೆಲುಗು ನಾಡಿನಿಂದ ಬಂದಿರುವ ಧಾರ್ಮಿಕ ವಲಸೆಗೆ ಉದಾಹರಣೆಯಾಗಿದೆ. ಒಂದನೇ ಹರಿಹರನ ಕಾಲದಿಂದ ೧೮೨೧ರ ನಡುವಿನ ಅವಧಿಯಲ್ಲಿ ಈ ಪ್ರದೇಶಕ್ಕೆ ತೆಲುಗರ ವಲಸೆ ನಡೆದಿರುವುದನ್ನು ಇಲ್ಲಿನ ಶಾಸನಗಳಿಂದ ತಿಳಿಯಬಹುದು. ಇಲ್ಲಿನ ದೇವಾಲಯಕ್ಕೆ ದತ್ತಿ ನೀಡಿರುವವರು ಅಧಿಕಾರಿಗಳಾಗಿದ್ದು, ಈ ವಲಸಿಗರ ಧಾರ್ಮಿಕ ಪರಿಸರಕ್ಕೆ ರಾಜಕೀಯದ ನೆರವು ಇದ್ದುದಕ್ಕೆ ಹಾಗೂ ರಾಜಕೀಯ ವಲಸೆಗಳು ಧಾರ್ಮಿಕ ವಲಸೆಗಳಿಗೆ ಹೇಗೆ ಪ್ರೇರಕವಾಗಬಲ್ಲವು ಎಂಬುದಕ್ಕೆ ಈ ಶಾಸನಗಳು ಉದಾಹರಣೆಯಾಗುತ್ತವೆ.

ಹಾಸನ ಸೀಮೆ ಮತ್ತು ತೆಲುಗರ ಸಂಬಂಧ

ಹಾಸನ ಸೀಮೆಯನ್ನು ಅಚ್ಯುತರಾಯನಿಂದ ನಾಯಕತನಕ್ಕೆ ಪಡೆದಿದ್ದ ಚೆನ್ನಪ್ಪನೆಂಬುವವನ ಅಳಿಯ ತಿಪ್ಪಭೂಪನ ಮಗ ಎಲ್ಲಪ್ಪನೆಂಬುವವನು ತನ್ನ ಮಾವನಿಗೆ ಪುಣ್ಯವಾಗಬೇಕೆಂದು ಹಾಸನದ ವಿರೂಪಾಕ್ಷ ದೇವಾಲಯಕ್ಕೆ ಛತ್ರ ನಿರ್ವಹಣೆಗೆ ಊರೊಂದನ್ನು ದಾನ ನೀಡಿದ್ದಾನೆ. [7] ವಿಜಯನಗರದ ಅರಸರ ಆರಾಧ್ಯ ದೈವ ವಿರೂಪಾಕ್ಷನ ದೇವಾಲಯ ಈ ಶಾಸನ ಕಾಲಕ್ಕಿಂತ ಮೊದಲೇ ಇಲ್ಲಿ ನಿರ್ಮಾಣ ವಾಗಿತ್ತು ಎಂಬುದನ್ನು ಗಮನಿಸಬೇಕು. ಈ ಶಾಸನ ಸಂಸ್ಕೃತ ಮತ್ತು ತೆಲುಗು ಭಾಷೆಯಲ್ಲಿದ್ದು ಒಪ್ಪ ತಮಿಳಿನಲ್ಲಿರುವುದು ವಿಶೇಷ. ಅಂದರೆ ಈ ಮಾವ ಅಳಿಯಂದಿರು ಕನ್ನಡದ ಮೂಲದವರಲ್ಲ, ನಾಯಕತನವನ್ನು ಪಡೆದ ಕಾರಣದಿಂದ ಹಾಸನಸೀಮೆಗೆ ವಲಸೆ ಬಂದವರು. ತ್ರಿಭಾಷೆಯಲ್ಲಿರುವ ಈ ಶಾಸನದಲ್ಲಿ ಕನ್ನಡ ದಲ್ಲಿರುವ ಶಾಸನ ಪಠ್ಯದ ಮಧ್ಯೆ ತೆಲುಗಿನಲ್ಲಿ ರಚಿತವಾದ ಕಂದ ಪದ್ಯವೊಂದು ಸೇರಿದೆ. ಈ ಪದ್ಯ ಹಾಗೂ ಇದನ್ನನುಸರಿಸಿ ಬರುವ ಕನ್ನಡ ಕಂದ ಪದ್ಯ ತಿಪ್ಪಭೂಪನ ವಾಕ್ಯಪರಿಪಾಲನಾ ಶ್ರೇಷ್ಠತೆಯನ್ನು, ಅವನ ಮಗ ತಿಪ್ಪೆಯೆಲ್ಲ ಮಹೀನಾಥನ ಕವಿಜನ ಪ್ರೀತಿಯನ್ನು, ದಾನಗುಣವನ್ನು, ಪರಾಕ್ರಮವನ್ನು ಹೊಗಳಿದೆ.

ಪುರಹರ ಶೂಲಮು ವಿರಿಗಿನ
ಪರುವಡಿ ರಘುರಾಮ ಚೇತಿ ಬಾಣವು ವಿರಿಗಿನ
ಸುರಪತಿ ವಜ್ರಮು ವಿರಿಗಿನ
ತಿರುಗದು ನೀ ಮಾಟು ತಿಪ್ಪಧೀಮಣಿಯೆಲ್ಲಾ

ಯೆಲ್ಲದ ರಿಪು ಸಂತಾನಂ
ಸಲ್ಲಿಲಿತ ಕವೀಂದ್ರರಲ್ಲಿ ದಾರಿದ್ರತ್ವಂ
ಇಲ್ಲೆಂಬ ವಚನ ತಿಪ್ಪ
ಯೆಲ್ಲಮಹೀನಾಥನಾಳ್ದ ದೇಶದೊಳಿಲ್ಲಂ

ಈ ಶಾಸನ ರಚಿಸಿದ ಕವಿ ಕನ್ನಡ ತೆಲುಗು ದುಭಾಷಾ ಪಂಡಿತನಾಗಿದ್ದಾನೆ. ಇವನು ಯೆಲ್ಲಪ್ಪ ನಾಯಕನಿಂದ ಪೋಷಿಸಲ್ಪಟ್ಟ ಆಸ್ಥಾನ ಕವಿಯಾಗಿರುವ ಸಾಧ್ಯತೆ ಇದೆ. ಕವಿ ದುಭಾಷಿಕ. ಆಳರಸು ತೆಲುಗುಭಾಷಿಗ, ಆಳ್ವಿಕೆಯ ಸ್ಥಳ ಅಚ್ಚ ಕನ್ನಡ ಪ್ರದೇಶ. ಹಾಗಾಗಿ ಎರಡೂ ಭಾಷೆ ಬಳಕೆಯಾಗಿದೆ. (ಜಿನವಲ್ಲಭನ ಶಾಸನವನ್ನು ನೆನಪಿಸಿ ಕೊಳ್ಳಬಹುದು) ಫಲಶ್ರುತಿಯ ನಂತರ 'ಎಲ್ಲಪ್ಪನ್' ಎಂಬ ಒಪ್ಪವಿದ್ದು ಇದು ತಮಿಳಿ ನಲ್ಲಿರುವುದು ಎಲ್ಲಪ್ಪನ ಮಾತೃಭಾಷೆ ತಮಿಳಿರಬಹುದೇ ಎಂಬ ಅನುಮಾನಕ್ಕೆ ಎಡೆ ಮಾಡಿಕೊಡುತ್ತದೆ. ಆಲೂರಿನ ಮತ್ತೊಂದು ಶಾಸನ ಇವರ ಉಲ್ಲೇಖವನ್ನು ಮಾಡುತ್ತದೆ. [8]

ಇವರ ನಂತರದಲ್ಲಿ ತೆಲುಗು ಮೂಲದ ಕರ್ನೂಲು ಜಿಲ್ಲೆಯ ನಂದ್ಯಾಲ ಪ್ರಭುಗಳು ಹಾಸನ ಸೀಮೆಯನ್ನು ಆಳುತ್ತಿದ್ದರು. [9] ಇವರ ಯಾವುದೇ ಶಾಸನಗಳು ತೆಲುಗು ಭಾಷೆಯಲ್ಲಿಲ್ಲವೆಂಬುದು ಆಶ್ಚರ್ಯ!

ಶ್ರೀರಂಗರಾಯನ ಕಾಲದಲ್ಲಿ೧೬೫೫- ೧೬೬೫ರ ಅವಧಿಯಲ್ಲಿ ನಡೆದಿರುವ ವಲಸೆಗಳು

ವಿಜಯನಗರದ ಅರಸು ಶ್ರೀರಂಗರಾಯನ ಏಳು ತೆಲುಗು ಭಾಷೆಯ ತಾಮ್ರ ಪಟಶಾಸನಗಳು ದೊರಕಿವೆ. ಶ್ರೀರಂಗರಾಯನು ಪೆನುಗೊಂಡದಲ್ಲಿ ಆಳುತ್ತಿದ್ದಾಗ 'ಹರಿತಗೋತ್ರದ ಏಕಾಂಬ್ರ ಸೋಮಯಾಜುಲ ಪೌತ್ರುಡೈನ ರಾಘವ ಸೋಮಯಾಜುಲ ಪುತ್ರಡೈನ ಏಕಾಂಬ್ರ ಸೋಮಯಾಜುಲಕು' ಕಾಚಿಹಳ್ಳಿಯೆಂಬ ಗ್ರಾಮವನ್ನು ದಾನವಾಗಿ ಕೊಟ್ಟಿರುವ ವಿಷಯವನ್ನು ಸಿಂಗಾಪುರದ ಶಾಸನ ಹೇಳುತ್ತದೆ.[10] ಈ ಶಾಸನವು ಒಟ್ಟು ೪೪ ಸಾಲುಗಳನ್ನು ಹೊಂದಿದ್ದು ತೆಲುಗು ಭಾಷೆ ಮತ್ತು ತೆಲುಗು ಲಿಪಿಯಲ್ಲಿದೆ. ಈ ಸೋಮಯಾಜುಲು ವಂಶದವರು ತೆಲುಗು ಬ್ರಾಹ್ಮಣ ಕುಟುಂಬ ದವರಾಗಿದ್ದು ತೆಲುಗು ನಾಡಿನಿಂದ ವಲಸೆ ಬಂದು ಕಾಚಿಹಳ್ಳಿಯನ್ನು ದಾನಪಡೆದು ಇಲ್ಲಿ ನೆಲೆಸಿತೆನ್ನುವುದು ಸ್ಪಷ್ಟವಾಗುತ್ತದೆ.

ಕ್ರಿ.ಶ. ೧೬೬೧ರಲ್ಲಿ ಹುಣಿಸೆಮಂಡೆ ಸೀಮೆಯ ಉದ್ದೂರಿನ ಕೊಂಡಗಲ ವಾಡಿಯನ್ನು ಇದೇ ಶ್ರೀರಂಗರಾಯನ ಶಂಭುಲಿಂಗಭಟ್ಟರ ಮೊಮ್ಮಗ ರಘುನಾಥ ಭಟ್ಟರ ಮಗ ನಾರಾಯಣ ಶಾಸ್ತ್ರಿಗಳಿಗೆ ದಾನ ಮಾಡಿದ ವಿಚಾರವಿದೆ. ಈ ತಾಮ್ರ ಶಾಸನವಿದ್ದ ಯೋಗಂಭಟ್ಟರ ಕುಟುಂಬದವರು ತೆಲುಗು ಬ್ರಾಹ್ಮಣರಾಗಿದ್ದಾರೆ. ಕ್ರಿ.ಶ. ೧೬೬೨ ಮಾರ್ಚ್ ೨೪ರಂದು ಶ್ರೀರಂಗರಾಯದೇವನು ಶ್ರೀವತ್ಸ ಗೋತ್ರದ ವೆಂಕಟಯ್ಯನ ಮೊಮ್ಮಗ ತಿರುವೆಂಗಳಯ್ಯನ ಮಗ ಕುಚ್ಚಯ್ಯನಿಗೆ ಭೂದಾನ ಮಾಡಿದ್ದಾನೆ. ಈ ಶಾಸನ ತೆಲುಗು ಭಾಷೆ, ತೆಲುಗು ಲಿಪಿಯಲ್ಲಿದೆ. ಈ ಕುಚ್ಚಯ್ಯನು ಚೆನ್ನಕೇಶವ ಸ್ವಾಮಿಗೆ ನೂತನ ರಥವನ್ನು ಮಾಡಿಸಿದ್ದು ಅದರ ಬ್ರಹ್ಮಪ್ರತಿಷ್ಠೆಯನ್ನು ಮಾಡುವ ನಿಮಿತ್ತವಾಗಿ ಅಬ್ಬಳಿಗೆ

ನಾಡಿನ ಸಿಂಧುವಳಿಯನ್ನು ಬ್ರಾಹ್ಮಣರಿಗೆ ಹಂಚಿಕೊಡಲು ಕೊಟ್ಟ ಧರ್ಮಶಾಸನ ಇದಾಗಿದೆ.[11]

ಕ್ರಿ.ಶ.೧೬೬೨ರ ಏಪ್ರಿಲ್‌ನಲ್ಲಿ ಶ್ರೀರಂಗರಾಯನು ಗೋಣಿಪಾಡಿನ ಶ್ರೀನಿವಾಸಯ್ಯನ ಮಗ ಜನಾರ್ದನಯ್ಯನ ಮೊಮ್ಮಗನಿಗೆ ಅಬ್ಬಲಿಗೆ ನಾಡಿನ ವಾಸುದೇವನಹಳ್ಳಿಯನ್ನು ವೇಲಾಪುರಿ ಸ್ಥಳದಲ್ಲಿ ವಿಷ್ಣುಸಮುದ್ರದ ತೀರದಲ್ಲಿ ಚೆನ್ನಕೇಶವಸ್ವಾಮಿ ಸನ್ನಿಧಿಯಲ್ಲಿ ವಿಷ್ಣು ವೆಂಕಟಾಚಲಪತಿ ಪ್ರೀತಿಯಾಗಿ ದಾನ ನೀಡಿದ್ದಾನೆ. ಬನ್ನೂರು ಪುರದ ದೊಡ್ಡಮೈಲಾರೀ ಭಟ್ಟರ ಶಾಮಭಟ್ಟರ ವಶದಲ್ಲಿ ಈ ತಾಮ್ರ ಶಾಸನವಿದ್ದು ಇವರು ತೆಲುಗರು. ಈ ಶಾಸನ ತೆಲುಗು ಲಿಪಿ ಕನ್ನಡ ಭಾಷೆಯಲ್ಲಿದೆ.[12]

ಕ್ರಿ.ಶ. ೧೬೬೩ ನವೆಂಬರ್ ೫ರ ತೆಲುಗು ಶಾಸನವೊಂದರಲ್ಲಿ[13] ಶ್ರೀರಂಗ ರಾಯನು ಆತ್ರೇಯಗೋತ್ರದ ತಿಮ್ಮರಸನ ಮೊಮ್ಮಗ ಕನಕಪ್ಪನ ಮಗ ಅಲ್ಲಾಡಿ ವೆಂಕಟೇಶಯ್ಯನಿಗೆ ಅವನು ಗೊರೂರಿನ ಕಟ್ಟುಕಾಲುವೆಯನ್ನು ಕಟ್ಟಿಸಿದ್ದಕ್ಕಾಗಿ ಆ ಕಟ್ಟುಕಾಲುವೆಯ ಕೆಳಗೆ ಭೂಮಿಯನ್ನು ದಾನಮಾಡಿದ್ದಾನೆ.

ಮತ್ತೊಂದು ತೆಲುಗು ಭಾಷೆ ತೆಲುಗು ಲಿಪಿಯ ಶಾಸನದಲ್ಲಿ ೧೬೬೪ರ ಫೆಬ್ರವರಿ ಒಂದರಂದು ಶ್ರೀರಂಗರಾಯರು ತಿರುವೆಂಗಳಯ್ಯನ ಮಗ ವೆಂಕಟಯ್ಯನ ಮೊಮ್ಮಗ ಕುಚ್ಚಯ್ಯನಿಗೆ ಬೇಲೂರಿನ ಪಾಲ್ಯಂಸೀಮೆಯ (ಆಲೂರು ತಾಲ್ಲೂಕಿನ ಪಾಳ್ಯದ ಸುತ್ತಿನ ಪ್ರದೇಶ) ಹೊನ್ನವಳ್ಳಿ ಗ್ರಾಮವನ್ನು ದಾನನೀಡಿದ ವಿಷಯವಿದೆ. ೧೬೬೨ರಲ್ಲಿ ಈ ಕುಚ್ಚಯ್ಯನಿಗೆ ಸಿಂಧುವಳಿಯನ್ನು ನೀಡಿದ್ದು ಅದನ್ನು ಬ್ರಾಹ್ಮಣರಿಗೆ ಹಂಚಿಕೊಟ್ಟದ್ದನ್ನು ನೋಡಿದ್ದೇವೆ. ಈ ಶಾಸನೋಕ್ತ ವಂಶದವರು ಕರ್ನೂಲು ಪ್ರಾಂತ್ಯದಿಂದ ವಲಸೆ ಬಂದ ಮುಲುಕುನಾಡು ಬ್ರಾಹ್ಮಣರಾಗಿದ್ದು, ತಮ್ಮನ್ನು ಶ್ರೀಧರಂ ಕುಟುಂಬದವ ರೆನ್ನುತ್ತಾರೆ.[14]

ಒಟ್ಟಿನಲ್ಲಿ ಕ್ರಿ.ಶ. ೧೬೫೯ರಿಂದ ೧೬೬೫ರ ಕಾಲಾವಧಿಯಲ್ಲಿ ಕೇವಲ ತೆಲುಗು ಶಾಸನಗಳಷ್ಟೇ ಅಲ್ಲ ಕನ್ನಡ ಸಂಸ್ಕೃತ ಶಾಸನಗಳಿಂದಲೂ ಶ್ರೀರಂಗರಾಯನು ಹೆಚ್ಚಿನ ಸಂಖ್ಯೆಯಲ್ಲಿ ವೈಷ್ಣವ ಹಾಗೂ ಮಾಧ್ವ ಬ್ರಾಹ್ಮಣರಿಗೆ ಬೇಲೂರು ಹಾಸನ ಸೀಮೆ ಯಲ್ಲಿ ಗ್ರಾಮ ದಾನ ಮಾಡಿರುವುದು ಕಂಡು ಬರುತ್ತವೆ. ಶಂಬುಗನಹಳ್ಳಿಯ ಒಂದು ಶಾಸನದಲ್ಲಿ[15] ಶ್ರೀ ಪರಿವ್ರಾಜಕಾಚಾರ್ಯ... ಅನೇಕಗುಣಸಂಪನ್ನರಾದ ವ್ಯಾಸ ರಾಯರ... ಸ್ಥಾನಾಧಿಪತಿಗಳಾದ ಲಕ್ಷ್ಮೀ ನಾರಾಯಣ ಶ್ರೀಪಾದಂಗಳ ಕರಕಮಲ ಸಂಜಾತರಾದ ರಘುನಾಥತೀರ್ಥ ಶ್ರೀಪಾದಂಗಳಿಗೆ ಬೇಲೂರಿನ ತಗರೆನಾಡಿನ ನಾಳಿಗೆಯಹಳ್ಳಿ ಸೀಮೆಯ ಶಂಬುಗನಹಳ್ಳಿಯನ್ನು ರಾಮಚಂದ್ರದೇವರಿಗೆ ಕೊಟ್ಟ ದಾಖಲೆಯಿದೆ. ಇನ್ನೊಂದು ಶಾಸನದಲ್ಲಿ[16] ನರಸಿಂಹ ಸಮುದ್ರ ಅಲಿಯಾಸ್ ಕಲ್ಲು ಬ್ಯಾಡರಹಳ್ಳಿಯನ್ನು ಹರಿಪಂಡಿತರಿಗೆ ಧಾರೆ ಎರೆದಿದ್ದಾನೆ.

ಹಾಸನ ಜಿಲ್ಲೆಯ ಇತರ ತೆಲುಗು ಶಾಸನಗಳು ಬೇಲೂರು ನಾಯಕ ಎರ್ರ ಕೃಷ್ಣಪ್ಪನ ವಂಶದವರ ಶಾಸನಗಳು. ಇವರ ಅನೇಕ ಸಂಸ್ಕೃತ ಕನ್ನಡ ಶಾಸನಗಳು ಈ ಪ್ರಾಂತ್ಯದಲ್ಲಿ ಲಭ್ಯವಿದೆ. ಪಾಳ್ಯದ ಶಾಸನವೊಂದು[17] ತೆಪ್ಪಕೊಳದ ಸೇವೆಗೆ ಎರ್ರತಿಂಮಯ್ಯನ ಕೃಷ್ಣಪ್ಪನಾಯಕನು ೧೪೦ವರಹ ಕಾಣಿಕೆ ಪಡೆದು ದಾನಬಿಟ್ಟಿದ್ದಾನೆ. ಬೇಲೂರು ನಾಯಕರು, ಹೊಳೇನರಸೀಪುರ ನಾಯಕರು, ಐಗೂರು ಬಲಂ ನಾಯಕರೆಂದು ಗುರುತಿಸಲ್ಪಡುವ ತೆಲುಗು ಮೂಲದ ನಾಯಕ ವಂಶದ ಮೂಲ ಪುರುಷನಾಗಿ ಬಯ್ಯಪ್ಪ ಪೋತಪ್ಪ ನಾಯಕನು ಗಿರಿಯಪ್ಪನ ಮೊಮ್ಮಗನೂ ಎರ್ರ ತಿಮ್ಮಪ್ಪನ ಮಗನೂ ಆಗಿದ್ದಾನೆ. ಇವರ ವಂಶ ಅನೇಕ ಕವಲುಗಳಲ್ಲಿ ಹೊಯ್ಸಳ ನಾಡಿನ ಬೇರೆ ಬೇರೆ ಸೀಮೆಗಳನ್ನು ಕ್ರಿ.ಶ. ೧೮೬೪ರ ವರೆಗೆ ಆಳಿರುವುದು ತಿಳಿದುಬರುತ್ತದೆ.[18]

೧೬೦೬ ಜನವರಿ ೧೪ರ ಒಂದು ತೆಲುಗು ಶಾಸನ[19]. 'ಶ್ರೀ ವೀರ ವೆಂಕಟಪತಿದೇವ ಮಹಾರಾಯಲು ಪಿನಗೊಂಡಲೋನು ರತ್ನಸಿಂಹಾಸನ.... ಪೃಥ್ವೀಸಾಮ್ರಾಜ್ಯಂ ಚೇಯುಚುನುಂಡುಗಾನು...' ಲಷ್ಮರಸು ಹಳೇನರಸೀಪುರದ ದೇವರ ತೆಪ್ಪೋತ್ಸವಕ್ಕಾಗಿ ಕಟ್ಟೆಕಾಲುವೆ ಕೆಳಗೆ ಭೂಮಿ ದಾನ ಮಾಡಿದ್ದಾನೆ. ಈ ಲಷ್ಮರಸು ಎರ್ರಕೃಕ್ಷ್ಣಪ್ಪನ ವಂಶದವನಾಗಿದ್ದು ಹೊಳೆನರಸೀಪುರದ ಪ್ರಭುವಾಗಿ ಆಳುತ್ತಿದ್ದನು. ಇವನ ಮೊಮ್ಮಗ ನರಸಿಂಹನಾಯಕನ ಶಾಸನಗಳು ಹೊಳೇನರಸೀಪುರದ ದೇವಾಲಯದ ಆವರಣದಲ್ಲಿ ಹೆಚ್ಚಿವೆ. ಇವರು ದೇವಾಲಯದ ಜೀರ್ಣೋದ್ಧಾರ ಕಾರ್ಯ, ದೇವಾಲಯದ ಪ್ರಾಂಗಣದಲ್ಲಿನ ರಾಮಾನುಜಗುಡಿ, ಆಳ್ವಾರರು, ನಾಚಾರಮ್ಮಗುಡಿ ಮಂಟಪಗಳ ನಿರ್ಮಾಣ ಮಾಡಿದ್ದಾರೆ. ಲಕ್ಷ್ಮೀ ನರಸಿಂಹ ದೇವಾಲಯದ ನವರಂಗದಲ್ಲಿ ಪಾಳೆಗಾರ ವೆಂಕಟಪ್ಪನ ವಿಗ್ರಹವಿದೆ. ಅದರ ಬುಡದಲ್ಲಿ 'ವೆಂಕಟಪ್ಪ ಸೇವಮು' ಎಂಬ ೧೬ನೇ ಶತಮಾನಕ್ಕೆ ಸೇರಿದ ತೆಲುಗುಭಾಷೆಯ ಪಟ್ಟಿಕಾ ಶಾಸನವಿದೆ. ಅದೇ ನವರಂಗದ ಮಧ್ಯಾಂಕಣದ ಹಾಸುಗಲ್ಲಿನ ಮೇಲೆ 'ಶ್ರೀ ತಿರುಮಲಯ್ಯ ಸೇವ ವಂಕಿವೆಂಕಟಪ್ಪ ಕೊಮಾರ ತಿರುಮಲಯ್ಯ ತಿಲುಮಯ ಶ್ರೀ ವೆಂಕಟಪ್ಪ ಮೊಕ್ಕು' ಎಂದಿದೆ. ಈತ ಹೊಯ್ಸಳರ ಕಾಲದ ಈ ದೇವಾಲಯದ ನವರಂಗದ ಜೀರ್ಣೋದ್ಧಾರ ಮಾಡಿಸಿರಬೇಕು. (ಸುಮಾರು ೧೬೪೦ ಕಾಲ) ಲಕ್ಷ್ಮಪ್ಪನಾಯಕನ ಮತ್ತೊಂದು ಶಾಸನದಲ್ಲಿ[20] ಕೃಷ್ಣಪ್ಪನಾಯಕನ ಮೊಮ್ಮಗ ವೆಂಕಟಾದ್ರಿ ನಾಯಕನ ಮಗ ಲಕ್ಷ್ಮಪ್ಪನಾಯಕನು ನರಸಿಂಹದೇವರ ಸಂನಿಧಿಯಲ್ಲಿ ತಮ್ಮ ತಂದೆ ಚಿಕ್ಕನಾಯಕರಿಗೂ ತಮ್ಮ ತಾಯಿ ಪದ್ಮಾಜಿ ಅವರಿಗೂ ಪುಣ್ಯವಾಗಬೇಕೆಂದು ಗುಡಿಕಟ್ಟಿಸಿ ರಾಮಾನುಜಾಚಾರ್ಯರ ಪ್ರತಿಷ್ಠೆಯನ್ನು ಮಾಡಿಸಿ ಅಮೃತಪಡಿಗೆ ತನ್ನ ಆಡಳಿತ ಸೀಮೆಯ ಚಾಕನಹಳ್ಳಿ ಗ್ರಾಮವನ್ನು ಬಿಟ್ಟವಿವರವಿದೆ. ಇದೇ ಶಾಸನದಲ್ಲಿ ಅವರಿಗೆ ನರಸಿಂಹಪುರದ ಸೀಮೆಯನ್ನು ಕೃಷ್ಣದೇವರಾಯನು ಪಾಲಿಸಿದ್ದನೆಂದು ಹೇಳಿದೆ.

ಲಕ್ಷ್ಮಪ್ಪನಾಯಕನ ಮೊಮ್ಮಗನೂ ರಂಗಪ್ಪನಾಯಕರ ಮಗನೂ ಆದ ನರಸಿಂಹ ನಾಯಕನು ರಾಮಾನುಜಗುಡಿಯ ಮುಂದಿನ ಕೈಸಾಲೆ ಕಂಬದ ಮೇಲೆ ೧೬೫೮ ಜೂನ್ ೩ರಲ್ಲಿ ಹಾಕಿಸಿರುವ ಶಾಸನದಲ್ಲಿ ಬೈಯಪ್ಪೇಂದ್ರನಿಂದ ಪ್ರಾರಂಭವಾದ ತಮ್ಮ ವಂಶಾವಳಿಯನ್ನು ಹೇಳಿ ಕಾಶ್ಯಪಗೋತ್ರದವರು ದೇವ ಬ್ರಾಹ್ಮಣ ಪ್ರತಿಪಾಲಕರು ಎಂದು ಹೇಳಿಕೊಂಡಿದ್ದಾನೆ. ಮತ್ತು ದೇವಾಲಯದ ಆವರಣದ ಒಳಗೆ ಚಕ್ರಾಳ್ವಾರರು, ಕೂರತಾಳ್ವಾರರು, ವೇದಾಂತಾಚಾರ್ಯರನು ಪೆರಿಯಜೀಯರು, ಮುದಲಿಯಂಡರನ್ನು ಪ್ರತಿಷ್ಠೆ ಮಾಡಿಸಿ ಅಮೃತ ಪಡಿಗೆ ಚಾಕನಹಳ್ಳಿ ಜೋಡಿ ಗದ್ಯಾಣ ೧ ವರಹವನ್ನು, ತೋಟವನ್ನು ಬಿಟ್ಟಿದ್ದಾನೆ. ಆಳ್ವಾರುಗಳ ಗುಡಿಯಲ್ಲಿ ಹತ್ತು ವಿಗ್ರಹಗಳ ಪೀಠಗಳ ಮೇಲೆ ತೆಲುಗಿನಲ್ಲಿ ನಾಮಪಟ್ಟಿಕೆಗಳಿವೆ. ಇವನು ತನಗೆ ಪುತ್ರೋತ್ಸವವಾದಾಗ ನರಸಿಂಹಪುರಸೀಮೆಯ ಅಂಕಬಳ್ಳಿಯನ್ನು ನರಸಿಂಹದೇವರಿಗೆ ದಾನ ಮಾಡಿದ್ದಾನೆ.[21] ಇದೇ ನರಸಿಂಹ ನಾಯಕನು ೧೬೫೯ರಲ್ಲಿ 'ಚಂದ್ರಸರಸ್ಸು' ಎನ್ನುವ ಕೊಳವನ್ನು ಕಟ್ಟಿಸಿದ್ದಾನೆ. ಹೊಳೇನರಸೀಪುರದ ಅರಸರಾದ ಲಕ್ಷ್ಮಪ್ಪನಾಯಕರ, ನರಸಿಂಹ ನಾಯಕರ ದೇವದಾನ, ಬ್ರಹ್ಮದಾನದ ವಿವರಗಳನ್ನು ಅನೇಕ ಇತರ ಕನ್ನಡ ಶಾಸನಗಳು ಹೇಳುತ್ತವೆ.

ಈ ನಾಯಕರ ಬಂಧುಗಳು ಊಳಿಗವದರ ಕೆಲವು ಶಾಸನಗಳು ಈ ಪ್ರದೇಶದಲ್ಲಿ ದೊರಕುತ್ತವೆ. ಈ ಶಾಸನಗಳಿಂದ ಇವರ ಊಳಿಗದಲ್ಲಿದ್ದ ಅನೇಕರು ತೆಲುಗರಾಗಿದ್ದಾರೆಂದು ತಿಳಿದು ಬರುತ್ತದೆ. ಲಕ್ಷ್ಮೀನರಸಿಂಹ ದೇವಾಲಯದ ಮುಖ ಮಂಟಪದ ಬಾಗಿಲ ಬಲಗಡೆ ವಿಗ್ರಹದ ಮೇಲೆ 'ಹೊಳೆನರಸೀಪುರದ ನಾಯಕ ರಂಗಪ್ಪನಾಯಕನ್ಯೆಯ್ಯವಾರಿ ಹಡಪಂ ಕಿಚ್ಚಯ್ಯ ಸೇವ' ಎಂದಿದೆ. ಇದೇ ದೇವಾಲಯದ ಪ್ರಾಕಾರದ ಆಂಡಾಳಮ್ಮ ಕೊಟಾರ ಮಂಟಪದ ದಕ್ಷಿಣ ಕಡೆ ಕಂಬದಲ್ಲಿರುವ ವಿಗ್ರಹದ ಮೇಲೆ 'ಲಕ್ಷ್ಮಪ್ಪನಾಯನಿವಾರು' ಎಂದು ಪಟ್ಟಿಕಾ ಶಾಸನವಿದೆ (೧೬ನೇ ಶತಮಾನ). ಬೇಲೂರಿನ ೧೪೬ನೇ ಶಾಸನದಲ್ಲಿ ಕೃಷ್ಣಪ್ಪನಾಯಕ ವೆಂಕಟಾದ್ರಿ ನಾಯಕರ ಊಳಿಗದ ಮೂರ್ತಿಪ್ಪ ನಾಯಕನು ಪುಟ್ಟಂಣನಾಯಕರು ಅವರ ಅಜ್ಜಯರಮ ನಾಯಕನಿಗೂ ತಂದೆ ಪೆದ್ದಿನಾಯಕನಿಗೂ ತಾಯಿ ಪೆದಂಮನಿಗೂ ಪುಣ್ಯವಾಗಲೆಂದು ಕೈಸಾಲೆ ಕಟ್ಟಿಸಿದ್ದಾನೆ. ಬೇಲೂರಿನ ೪೮ನೇ ಮತ್ತು ೫೮ನೇ ಶಾಸನಗಳು ತೆಲುಗು ಭಾಷೆ, ಲಿಪಿಗಳನ್ನು ಹೊಂದಿರುವ ಪುಟ್ಟ ಶಾಸನಗಳು. ಒಂದು ಶಾಸನ 'ನಾಗಯ ಚೆನಪನಿಕಿ ನಿತ್ಯಮುಲು ಪದಿವೇಲು ವಂದನಲು [22] ಎಂದಿದ್ದರೆ, ಮತ್ತೊಂದು ಶಾಸನ[23]. 'ಚೆಂನರಾಯನಿ ಶ್ರೀಚರಣ ಪಾದಲಕು ಜಂನಮರಾಜ ಭಾವಯ್ಯ ಕೊಮಾರುಡು ರಾಮಯ್ಯ ನಿತ್ಯಕಾಲನಂತಂಗಾನು ಶ್ರೀಚರಣ ಪದ್ಮಲಕು ವಂದನಾಲು ಸಮರ್ಪಣ' ಎಂದಿದೆ. ಇವೆರಡೂ ಶ್ರೀ ಚೆನ್ನಕೇಶವ ದೇವರಿಗೆ ಭಕ್ತರು ಸಮರ್ಪಿಸಿದ ಭಕ್ತಿಯನ್ನು ಸೂಚಿಸುವ ವಂದನಾ ಶಾಸನಗಳಾಗಿವೆ.

ಹೀಗೆ ಅಧಿಕಾರಿಗಳಾಗಿ ಅನ್ಯಸೀಮೆಗಳಿಗೆ ವಲಸೆ ಬಂದವರೆಲ್ಲಾ ಇಲ್ಲೇ ನೆಲಸಿದರೆಂದು ಹೇಳಿದರೆ ತಪ್ಪಾಗುತ್ತದೆ. ಮೂಲ ನೆಲಕ್ಕೆ ಹಿಂದಿರುಗಿರುವ ಸಾಧ್ಯತೆಗಳೂ ಇರುತ್ತವೆ. ಆದರೆ ವಂಶಪಾರಂಪರ್ಯವಾಗಿ ಆಳ್ವಿಕೆ ಮಾಡಿದ ಭೂಮಿ, ಗ್ರಾಮಗಳನ್ನು ಉಂಬಳಿಯಾಗಿ ಪಡೆದ ವಲಸಿಗರು ಖಂಡಿತವಾಗಿ ಇಲ್ಲಿ ನೆಲೆಸಿದರೆನ್ನಬಹುದು.

ಭಾಷಾ ಸ್ಥಿತಿಗತಿ

ರಾಜಕೀಯ ಕಾರಣಕ್ಕಾಗಿ ವಲಸೆ ಬಂದ ತೆಲುಗು ಮಾತೃಭಾಷೆಯ ಅಧಿಕಾರಿಗಳು, ನಾಯಕರು, ಅವರೊಂದಿಗೆ ಬಂದು, ಅವರಿಂದ ಆಶ್ರಯಕ್ಕೆ ಭೂಮಿ ಇತ್ಯಾದಿ ಪಡೆದು ಅನ್ಯ ಭಾಷಿಕ ಪ್ರಾಂತ್ಯದಲ್ಲಿ ನೆಲೆಸಿರಬಹುದಾದ ಪಂಡಿತರು, ಸೇವಕ ವರ್ಗದವರು ಸ್ಥಳೀಯ ಭಾಷಿಕರೊಂದಿಗೆ ನಾನಾತರದ ಒಡಂಬಡಿಕೆಗಳನ್ನು ಮಾಡಿಕೊಳ್ಳಬೇಕಾಗಿ ಬರುವುದರಿಂದ ಅವರ ಸಂಸ್ಕೃತಿ ಭಾಷೆಗಳಲ್ಲಿ ಅನೇಕ ಬದಲಾವಣೆಗಳಾಗುವುದು ಸಹಜ. ಅಂತಹ ಅಲ್ಪಸಂಖ್ಯಾತ ಭಾಷಿಕರು ಸಾಮಾಜಿಕವಾಗಿ ಮೇಲ್ಮುಖಿ ಚಲನೆ, ಆರ್ಥಿಕ ಸಫಲತೆ ಮತ್ತು ರಾಜಕೀಯ ಸ್ಥಾನಮಾನಗಳನ್ನು ಪಡೆಯುವುದಕ್ಕಾಗಿ, ಉಳಿಸಿಕೊಳ್ಳುವುದಕ್ಕಾಗಿ ದಿನನಿತ್ಯದ ಸಂವಹನಕ್ಕೆ ಬಹುಸಂಖ್ಯಾತರ ಭಾಷೆಯನ್ನೆ ಅಂದರೆ ಸ್ಥಳೀಯ ಭಾಷೆಯನ್ನೆ ಬಳಸಲು ತೊಡಗುವುದು ಸಹಜ ಪ್ರಕ್ರಿಯೆ. ಬೇಲೂರು ನಾಯಕರ ಹೆಚ್ಚಿನ ಶಾಸನಗಳು ಕನ್ನಡದಲ್ಲಿ ದೊರಕಿವೆ. ನಂದ್ಯಾಲ ಪ್ರಭುಗಳ ಶಾಸನಗಳು ಕನ್ನಡದಲ್ಲಿಯೇ ಇವೆ. ಬಯಕಾರರಾಮಪ್ಪ ಕನ್ನಡ ಭಾಷೆಯಲ್ಲಿ ಶಾಸನ[24] ಹಾಕಿಸಿದ್ದರೂ ಅದು ನಾಗರಿ ಲಿಪಿಯಲ್ಲಿದೆ. ಮತ್ತೊಂದು ಸಂಸ್ಕೃತ ಭಾಷೆ ನಾಗರಿ ಲಿಪಿಯಲ್ಲಿದೆ [25]

ಮಾತೃಭಾಷಾ ಪರಿಸರದಿಂದ ಅನ್ಯ ಭಾಷಾ ಪರಿಸರಕ್ಕೆ ಒಂದು ಸಾಮಾಜಿಕ ಸಂದರ್ಭದಿಂದ ಮತ್ತೊಂದು ಸಾಮಾಜಿಕ ಸಂದರ್ಭಕ್ಕೆ ಜನ ಪಲ್ಲಟಗೊಂಡಾಗ ಸಹಜವಾಗಿ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಪಲ್ಲಟಗೊಳ್ಳುವುದು ಅನಿವಾರ್ಯವಾಗುತ್ತದೆ. ಈ ರೀತಿಯ ಭಾಷೆಯಲ್ಲಾಗುವ ಬದಲಾವಣೆಯ ಪ್ರಕ್ರಿಯೆಗಳು ದ್ವಿಭಾಷಿಕ ಬಹುಭಾಷಿಕ ಪರಿಸರದಲ್ಲಿ ವಿಶಿಷ್ಟವಾಗಿರುತ್ತದೆ. ಮಾತೃಭಾಷೆಯನ್ನು ಉಳಿಸಿಕೊಳ್ಳುವ ಪ್ರಯತ್ನ ಮತ್ತು ಅನಿವಾರ್ಯವಾಗಿ ಮತ್ತು ಭಾಷಾ ಸಂಚಲನಗಳನ್ನು ಸಾಮಾಜಿಕ ಭಾಷಾಶಾಸ್ತ್ರದ ಪರಿಕಲ್ಪನೆಗಳಾದ ಭಾಷಾಪಲ್ಲಟ ಮತ್ತು ಭಾಷಾ ಸಂಗೋಪನೆಗಳ ಸಹಾಯದಿಂದ ವಲಸಿಗರ ಭಾಷಾ ಸಂಸ್ಕೃತಿಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವನ್ನು ಇಂದು ಭಾಷಾಶಾಸ್ತ್ರಜ್ಞರು ಮಾಡುತ್ತಿದ್ದಾರೆ.

ಭಾಷಾಪಲ್ಲಟವೆಂದರೆ ಮಾತನ್ನು ಎರಡು ಅಥವಾ ಅದಕ್ಕೂ ಹೆಚ್ಚು ಭಾಷೆ ಅಥವಾ ಭಾಷಾ ಪ್ರಭೇದಗಳನ್ನು ಪರ್ಯಾಯವಾಗಿ ಕೆಲವು ನಿರ್ದಿಷ್ಟ ಸಾಮಾಜಿಕ ಸಂದರ್ಭಗಳಲ್ಲಿ ನಿರ್ದಿಷ್ಟ ನಿಯೋಗಗಳಿಗಾಗಿ ಬಳಸುವುದು. ಅಂದರೆ ಈ ಕ್ರಿಯೆ ಭಾಷೆಯೊಂದು ಆಡುಮಾತಿನಲ್ಲಿ ಬಳಸಲ್ಪಟ್ಟಾಗ ಕಂಡು ಬರುತ್ತದೆ. ಇದೇ ಭಾಷಾಪಲ್ಲಟವು ಬರವಣಿಗೆಯಲ್ಲಿ

ಕಾಣಿಸಿಕೊಳ್ಳುವುದು ಜನಸಾಮಾನ್ಯರಿಗೆ ಒಂದು ವಿಚಾರವನ್ನು ತಲುಪಿಸುವ ಅವಶ್ಯಕತೆ ಮೂಡಿದಾಗ. ಶಾಸನಗಳಲ್ಲಿ ಇದೇ ಉದ್ದೇಶಕ್ಕಾಗಿಯೇ ದ್ವಿಭಾಷಿಕ, ತ್ರಿಭಾಷಿಕ ಶಾಸನಗಳ ಹಾಗೂ ಲಿಪ್ಯಂತರಗಳೂ ಕಾಣಿಸಿಕೊಂಡಿವೆ. ನೂರಾರು ತಾಮ್ರಪಟಗಳು ಸಂಸ್ಕೃತ ಕನ್ನಡ ಎರಡೂ ಭಾಷೆಯನ್ನು ಬಳಸಿವೆ. ವಿದ್ವಾಂಸರಿಗೆ ಹೆಚ್ಚಾಗಿ ನೀಡಲ್ಪಡುತ್ತಿದ್ದ ಈ ತಾಮ್ರಪಟಗಳ ಸಂಸ್ಕೃತ ಭಾಷೆ ದೇವನಾಗರಿ ಲಿಪಿಗಳಿಂದ ಅವರಿಗೆ ಸಂವಹನಕ್ಕೇನೂ ತೊಡಕಾಗುತ್ತಿರಲಿಲ್ಲವಾದರೂ ಅವರಿಗೆ ನೀಡಿದ ಭೂಮಿ, ಗ್ರಾಮಗಳ ಎಲ್ಲೆಕಟ್ಟುಗಳ ವಿವರ ಅಲ್ಲಿನ ಸ್ಥಳೀಯ ಸಾಮಾನ್ಯರಿಗೆ ತಿಳಿಯಬೇಕಾದ ಆವಶ್ಯಕತೆಯಿಂದ, ಬಿಟ್ಟ ತೆರಿಗೆ ಮಾನ್ಯ ವಿವರಗಳು ಅಳತೆ, ಗಡಿ ಮೇರೆಗಳನ್ನು ಸ್ಪಷ್ಟವಾಗಿ ಸ್ಥಳೀಯ ಸರಳ ಭಾಷೆಯಲ್ಲಿ ಸಂವಹನವಾಗುವಂತೆ ಹೇಳಿರುವುದನ್ನು ಕಾಣಬಹುದು. ರಾಜಾಶ್ರಯದಲ್ಲೇ ರಚಿತವಾಗುತ್ತಿದ್ದ ಇಂತಹ ತಾಮ್ರಪಟಗಳಲ್ಲಿ ಸೀಮಾಸಂಬಂಧದ ವಿವರಗಳನ್ನು ಸ್ಥಳೀಯ ಅಧಿಕಾರಿಗಳ ಸಹಾಯದಿಂದ ನಿಖರವಾಗಿ ಬರೆಸುತ್ತಿದ್ದರೆಂಬುದಕ್ಕೆ ಒಂದು ಉದಾಹರಣೆ ನೋಡಬಹುದು. ಪ್ರೌಢದೇವರಾಯನು ಹೃದ್ರೋಗಕ್ಕೆ ವಿರುಪಾಕ್ಷನ ಸನ್ನಿಧಿಯಲ್ಲಿ ಚಿಕಿತ್ಸೆ ಮಾಡಿದ ಪಂಡಿತನೊಬ್ಬನಿಗೆ ಹೊಯ್ಸಳ ಸೀಮೆಯ ಬೇಲೂರಿನ ಗೋವಿನ ಹಳ್ಳಿಯನ್ನು ನೀಡಿದ್ದಾನೆ.[26] (ಅದೇ. ಸಂ. ೯ ಬೇಲೂರು ಶಾ.ಸಂ. ೫೭೬ ಕ್ರಿ.ಶ. ೧೪೪೫). ಅರಸು ಆ ಶಾಸನ ಸಂಸ್ಕೃತ ಭಾಷೆ ದೇವನಾಗರಿ ಲಿಪಿಯಲ್ಲಿದ್ದು 'ಸೀಮಾನಾಂಚಗ್ರಹಾರಸ್ಯ ಲಿಖ್ಯತೆ ದೇಶಭಾಷಯಾ' ಎಂದು ಹೇಳಿ ಸ್ವಲ್ಪ ಖಾಲಿ ಜಾಗ ಬಿಡಲಾಗಿದೆ. ನಂತರ ಶಾಪದಭಾಗವನ್ನು ಖಂಡರಿಸಿವೆ. ಆದರೆ ಸ್ಥಳೀಯ ಭಾಷೆಯಲ್ಲಿ ಸೀಮಾ ವಿವರಬರೆಯದೆ ಆ ಜಾಗ ಖಾಲಿಯಾಗಿ ಹಾಗೇ ಉಳಿದುಬಿಟ್ಟಿದೆ. ಇದು ಬಹುಶಃ ತಾಮ್ರಪಟಗಳ ಖಂಡರಣೆಯ ಬಗೆಗೆ ಬೆಳಕು ಚೆಲ್ಲುತ್ತದೆ. (ಕೆಲವು ತಾಮ್ರಪಟಗಳಲ್ಲಿ ಲಿಪಿಯ ಬರವಣಿಗೆಯ ಶೈಲಿಯಲ್ಲಿ ವ್ಯತ್ಯಾಸಗಳು ಕಂಡು ಬರಲು ಇದು ಕಾರಣ ಎಂದು ತಿಳಿಯಬಹುದು).

ಹಾಸನ ಸೀಮೆಯನ್ನು ಆಳುತ್ತಿದ್ದ ಚೆನ್ನಪ್ಪಣ್ಣನ ಅಳಿಯ ಎಲ್ಲಪ್ಪನ ಶಾಸನ[27] (ಅದೇ ಸಂ. ೮, ಹಾಸನ ೧. ಕ್ರಿ.ಶ. ೧೫೩೧) ತ್ರಿಭಾಷೆಯಲ್ಲಿದೆ. ಕನ್ನಡದಲ್ಲಿರುವ ಶಾಸನ ಪಠ್ಯದ ಮಧ್ಯೆ ತೆಲುಗಿನಲ್ಲಿ ರಚಿತವಾದ ಕಂದ ಪದ್ಯವೊಂದು ಸೇರಿರುವುದನ್ನು ಈಗಾಗಲೇ ಗಮನಿಸಿದ್ದೇವೆ. ಇದು ಉದ್ದಿಶ್ಯಪೂರ್ವಕ ಭಾಷಾಪಲ್ಲಟವೆಂದು ಹೇಳಬಹುದು. ಭಾಷಾ ಸಂಗೋಪನೆ ಎಂದರೆ ತನ್ನ ಭಾಷೆಯ ರಕ್ಷಣೆ ಮಾಡಿಕೊಳ್ಳುವುದು, ಉಳಿಸಿಕೊಳ್ಳುವುದು. ಭಾಷೆಯನ್ನು ಉಳಿಸಿಕೊಳ್ಳುವ ಅಗತ್ಯ ಏಳುವುದು ಆ ಭಾಷೆ ನಶಿಸುವ ಆ ಮೂಲಕ ಒಂದು ಸಂಸ್ಕೃತಿ ಜನಾಂಗದ ಅಸ್ಮಿತೆ ನಾಶವಾಗುವ ಭಯದಿಂದ. ಅನ್ಯ ಭಾಷಾ, ದುಭಾಷಾ, ಬಹುಭಾಷಾ ಪರಿಸರದಲ್ಲಿ ಈ ಭಯವು ಅಲ್ಪ ಸಂಖ್ಯಾತ ಭಾಷಿಕರು ಭಾಷಾ ಸಂಗೋಪನೆಗೆ ತೊಡಗುವಂತೆ ಮಾಡುತ್ತದೆ. ಆ ಮೂಲಕ ತನ್ನ ವೈಯಕ್ತಿಕ ಸಂಸ್ಕೃತಿಯನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನಿಸುತ್ತದೆ.

ಭಾಷಾ ಪಲ್ಲಟ ಮತ್ತು ಭಾಷಾ ಸಂಗೋಪನೆ ಸಮುದಾಯದಲ್ಲಿ ವಿವಿಧ ಗುಂಪುಗಳ ನಡುವೆ ಏಕಕಾಲದಲ್ಲಿ ನಡೆಯುವ ಪ್ರಕ್ರಿಯೆ. ಆಡು ಭಾಷೆಯಲ್ಲಿ ಕಂಡು ಬರುವ ಈ ಪ್ರಕ್ರಿಯೆ ಶಾಸನಗಳಲ್ಲೂ ಕಂಡುಬರುತ್ತದೆ. ಹೊಸ ಸಾಮಾಜಿಕ ಭಾಷಿಕ ಸಂದರ್ಭ ಭಾಷಾ ಪಲ್ಲಟಗಳ ಮಧ್ಯದಲ್ಲೂ ಸ್ವಭಾಷೆಯನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ವಲಸಿಗರು ಮಾಡುತ್ತಾರೆ ಎಂಬುದಕ್ಕೆ ಅವರ ಕೆಲವು ಶಾಸನಗಳು ಪೂರ್ಣವಾಗಿ ಸ್ವಂತ ಭಾಷೆಯಲ್ಲಿರುವುದನ್ನು ನೋಡಬಹುದು. ಇಲ್ಲಿನ ತೆಲುಗು ಶಾಸನಗಳ ಭಾಷೆಯನ್ನು ಗಮನಿಸೋಣ.

ಕ್ರಿ.ಶ. ೧೬೦೬ರ ಹೊಳೆನರಸೀಪುರದ ೪೩ನೇ ಶಾಸನವು ಪೂರ್ಣ ತೆಲುಗಿನಲ್ಲಿದೆ. ದಾನ ಪಡೆದ ಕರಣಿಕ ತಿಪ್ಪರಸು ಮತ್ತು ದಾನಿ ವೆಂಕಟಪತಿರಾಯ ಇಬ್ಬರೂ ತೆಲುಗು ಭಾಷಿಕರು. ಈ ಶಾಸನವನ್ನು ಹೊಳೆನರಸೀಪುರದ ಸ್ನಾನ ಘಟ್ಟದ ದಡದಲ್ಲಿ ಬಲಗಡೆ ಅಶ್ವತ್ಥಕಟ್ಟೆಯ ಬಳಿ ಹಾಕಿಸಲಾಗಿದೆ. ಈ ಶಾಸನವನ್ನು ಸಾರ್ವಜನಿಕರ ಅವಗಾಹನೆ ಗಾಗಿ ಹಾಕಿಸಿದ್ದರೂ ಕೂಡ ಸ್ಥಳೀಯ ಭಾಷೆಯಲ್ಲಿರದೆ ತೆಲುಗಿನಲ್ಲಿರುವುದು ಭಾಷಾ ಸಂಗೋಪನೆಗೆ ಒಳ್ಳೆಯ ಉದಾಹರಣೆಯಾಗಿದೆ.

ಆಲೂರು ೪೭ನೇ ಸಂಖ್ಯೆಯ ಹೊನ್ನವಳ್ಳಿಯ ತೆಲುಗು ಭಾಷೆ ತೆಲುಗು ಲಿಪಿಯಲ್ಲಿರುವ ತಾಮ್ರಪತ್ರಶಾಸನ ಮತ್ತು ಸಿಂಧುವಳ್ಳಿಯ ೧೭೭ನೇ ಸಂಖ್ಯೆಯ ತಾಮ್ರ ಶಾಸನ ಎರಡೂ ಕುಚ್ಚಯ್ಯನೆಂಬ ತೆಲುಗು ಮೂಲದ ಬ್ರಾಹ್ಮಣನಿಗೆ ಅವನು ಚೆನ್ನ ಕೇಶವ ದೇವರಿಗೆ ಸಲ್ಲಿಸಿದ ಸೇವೆಗಾಗಿ ಗ್ರಾಮದಾನ ನೀಡಿರುವುದು. ಇವು ಕೂಡ ತೆಲುಗುಭಾಷೆ ತೆಲುಗು ಲಿಪಿಯಲ್ಲಿದೆ. ಇದರಲ್ಲಿ ಸೀಮಾ ವಿವರಗಳನ್ನು ಕೂಡ ತೆಲುಗಿನಲ್ಲೇ ನೀಡಲಾಗಿದೆ. ಇದು ವೈಯಕ್ತಿಕ ಸಂಹವನಕ್ಕಾಗಿ ನೀಡಿದ್ದು, ಇಲ್ಲಿ ದಾನಿ ಮತ್ತು ಪ್ರತಿಗ್ರಹಿ ಇಬ್ಬರ ಮಾತೃಭಾಷೆ ತೆಲುಗು ಆಗಿದ್ದು (ಈ ವಂಶದವರು ತೆಲುಗು ಮುಲಕನಾಡು ಬ್ರಾಹ್ಮಣರು. ಇವತ್ತಿಗೂ ತೆಲುಗು ಇವರ ಮನೆ ಮಾತಾಗಿ ಉಳಿದು ಕೊಂಡಿದೆ) ಭಾಷಾ ಸಂಗೋಪನೆಯ ಹಂಬಲವೆ ಇದಕ್ಕೆ ಕಾರಣ.

ಮತ್ತೊಂದು ಬೇಲೂರಿನ ೧೭೮ನೇ ಶಾಸನ ತೆಲುಗು ವಲಸಿಗ 'ಆತ್ರೇಯಗೋತ್ರ ತಿಮ್ಮರ್‍ಸುಕು ಪೌತ್ರುಡುನ್ನು ಕನಕಪ್ಪಕು ಪುತ್ರುಡುನ್ನಯಿನ ಅಲ್ಲಾಡಿ ವೆಂಕಟೇಶಯಕು ಪಾಲಿಂಚಿನ ಭೂದಾನ ತಾನು ಗೊರೂರಿ ಕಟ್ಟು ಕಾಲುವ ಕಟ್ಟಿಂಚಿನಂದ್ದುನ... ಶ್ರೀರಂಗ ರಾಯದೇವನ ಮಹಾರಾಯಲು... ಕಟ್ಟಿಂಚಿನ ಗೊರೂರಿ ಕಟ್ಟುಕಾಲುವ ಕಿಂದ...' ಹೀಗೆ ಗ್ರಾಂಥಿಕವಾದ ಬಹಳ ಸ್ಪಷ್ಟವಾದ ತಪ್ಪಿಲ್ಲದ ಭಾಷೆಯಿದೆ.

ತೆಲುಗು ಭಾಷೆ ಮತ್ತು ಲಿಪಿಗಳು ಕೆಲವು ತಾಮ್ರಪಟಗಳಲ್ಲಿ ಕಂಡು ಬಂದಿದ್ದು, ಇದು ಶುದ್ಧ ಭಾಷಾಜ್ಞಾನ ಲಿಪಿಜ್ಞಾನವಿರುವ ಲೇಖಕರು, ಖಂಡರಣೆಕಾರರಿದ್ದಾಗ ಮಾತ್ರ ಸಾಧ್ಯ. ಪ್ರಸ್ತುತ ತಾಮ್ರ ಪಟಗಳನ್ನು ಬರೆದಿರುವವರು ತೆಲುಗು ಭಾಷಾಲಿಪಿ ಬಲ್ಲ

ಪಂಡಿತರೇ ಆಗಿದ್ದು ಆ ಶಾಸನಗಳು ಶ್ರೀರಂಗರಾಯನ ರಾಜಧಾನಿ ಪೆನು ಗೊಂಡದ ಅರಮನೆಯಲ್ಲೇ ರಚನೆಗೊಂಡು ದಾನ ಪಡೆದವರೊಂದಿಗೆ ದಾನ ಪಡೆದ ಸ್ಥಳಕ್ಕೆ ವಲಸೆಯಾಗಿವೆ.

ವಲಸೆಗಳು ಏಕಮುಖವಲ್ಲ. ಪೆನುಗೊಂಡೆ ಕೋಟೆಯ ಉತ್ತರ ಬಾಗಿಲಿನಲ್ಲಿರುವ ಆಂಜನೇಯ ದೇವಾಲಯದ ಪಶ್ಚಿಮದ ಗೋಡೆಯ ಮೇಲಿರುವ ಶಾಸನವೊಂದನ್ನು ಹಾಸನ ಜಿಲ್ಲೆಯ ಜಾವಗಲ್ಲಿನ ಪುರಾಣದ ಕೇವಶಭಟ್ಟ ರಚಿಸಿದ್ದಾನೆ. ಇದರಲ್ಲಿ ೮ ಸಂಸ್ಕೃತ ಪದ್ಯಗಳು ಉಳಿದವು ಕನ್ನಡ ಗದ್ಯದಲ್ಲಿವೆ. [26]

ಕೆಲವು ಶಾಸನಗಳು ತೆಲುಗು ಲಿಪಿಯಲ್ಲಿದ್ದು ಕನ್ನಡ ಭಾಷೆಯಲ್ಲಿವೆ. ಇದಕ್ಕೆ ನಿರ್ದಿಷ್ಟವಾದ ಕಾರಣವನ್ನು ಹುಡುಕಲು ಸಾಧ್ಯವಿಲ್ಲ. ಸರಳ ಕನ್ನಡ ಗದ್ಯದಲ್ಲಿರುವ ಆಲೂರು ೨೬ನೇ ಶಾಸನ ಪಾಠವನ್ನು ಬಹುಶಃ ಕನ್ನಡ ಭಾಷೆ ಬಲ್ಲವನು ಹೇಳಿ ಕನ್ನಡ ಲಿಪಿ ಬಾರದ ತೆಲುಗು ಲಿಪಿಕಾರ ಬರೆದಿರುವ ಸಾಧ್ಯತೆಯಿಂದ ಇಲ್ಲಿ ಲಿಪ್ಯಂತರ ವಾಗಿರಬಹುದೆಂದು ಊಹಿಸಬಹುದು.

ಶ್ರೀರಂಗರಾಯನ ೧೬೫೫ರ ಒಂದು ತೆಲುಗು ಭಾಷೆ ತೆಲುಗು ಲಿಪಿಯಿರುವ ಶಾಸನ ೪೪ ಸಾಲುಗಳಿದ್ದು ಹೇರಳವಾದ ಕಾಗುಣಿತದ ತಪ್ಪುಗಳು ಕಂಡು ಬರುತ್ತವೆ. ತೆಲುಗು ಭಾಷೆಯ ಮಧ್ಯೆ ಕನ್ನಡ ಷಷ್ಠಿ ವಿಭಕ್ತಿ ಪ್ರತ್ಯಯದ ಬಳಕೆ ತೆಲುಗು ಭಾಷೆಯ ಉಚ್ಚಾರಣೆ ತಿಳಿಯದೆ ವ್ರಾಯಿಂಚಿನ ಎಂಬುದನ್ನು ತಪ್ಪಿನಿಂದಾಗಿ ವಾಯಿಂಚಿನ ಎಂದು ಬರೆದಿದ್ದು ಪೂರ್ಣ ಅರ್ಥಗ್ರಹಿಕೆಯೇ ತಪ್ಪಾಗುತ್ತದೆ. ಕಾಚಿಹಳ್ಳಿ ಎಂದು ಸ್ಥಳೀಯ ಹೆಸರನ್ನೋ ಅಥವಾ ತೆಲುಗಿನ ಜಾಯಮಾನದಂತೆ ಕಾಚಿಪಲ್ಲಿ ಎಂದೋ ಬರೆಯದೆ 'ಕಾಚಿಹಲ್ಲಿ' ಎಂದು ಬರೆಯಲಾಗಿದೆ. ದೀರ್ಘ, ದ್ವಿತ್ವಗಳ ಪ್ರಜ್ಞೆ ಇಲ್ಲದಿರುವುದಕ್ಕೆ ಬಹುಶಃ ಲಿಪಿಕಾರನಿಗೆ ಖಂಡರಣೆಕಾರನಿಗೆ ತೆಲುಗು ಭಾಷೆ ಲಿಪಿಗಳ ಸರಿಯಾದ ಅರಿವಿಲ್ಲದಿರು ವುದೇ ಕಾರಣ. ಆದರೂ ತೆಲುಗು ಭಾಷೆ ತೆಲುಗು ಲಿಪಿಯಲ್ಲೇ ಬರೆಯಬೇಕೆಂಬ ಒತ್ತಡ ಅಥವಾ ಆಸೆಯಿದೆ.

ಇಂತಹ ಉದಾಹರಣೆಗಳಿಂದ ಅನ್ಯ ಭಾಷಾ ಪರಿಸರದಲ್ಲೂ ಮಾತೃಭಾಷೆಯನ್ನು ಉಳಿಸಿಕೊಳ್ಳುವ ಪ್ರಯತ್ನಗಳು ನಡೆದಿರುವುದು ತಿಳಿದುಬರುತ್ತದೆ. ಯಾವುದೇ ವ್ಯಕ್ತಿ ತನಗೆ ವಂಶಪಾರಂಪರ್ಯವಾಗಿ ಬಂದ ಸಂಸ್ಕೃತಿಯನ್ನು ತನ್ನ ರಾಷ್ಟ್ರ ಜನಾಂಗಗಳಿಗೆ ಸಂಬಂಧಿಸಿದ ತನ್ನ ಚಹರೆಯನ್ನು ಗುರುತಿಸಿಕೊಳ್ಳುವ ಅಸ್ಮಿತೆಯನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಾನೆಂಬುದು ತಿಳಿದ ವಿಚಾರವೆ ಆಗಿದೆ. ಅದರಲ್ಲೂ ಅಧಿಕಾರಸ್ಥ ವಲಸಿಗರು ಆಳರಸರು ಈ ರೀತಿ ಸ್ವಂತ ಭಾಷೆಯನ್ನು ಉಳಿಸಿ ಅನ್ಯ ಪ್ರದೇಶದಲ್ಲಿ ತಮ್ಮ ಆಳ್ವಿಕೆಗೆ ಒಂದು ಅಧಿಕೃತತೆಯನ್ನು ಪಡೆಯ ಬಯಸಿದಂತೆ ತೋರುತ್ತದೆ.

ಹೊರನಾಡಿನಲ್ಲಿ ಕನ್ನಡ ಅರಸರ ಕನ್ನಡ ಶಾಸನಗಳು ಕನ್ನಡ ನಾಡಿನಲ್ಲಿ ಪರಭಾಷೆಯ ಅರಸರ ಶಾಸನಗಳು ಮಾತೃಭಾಷಾ ಪ್ರೇಮವನ್ನೇ ಹೇಳುತ್ತವೆ.

ಆಡಳಿತದಲ್ಲಲ್ಲದೆ ಆತ್ಮೀಯ ಕೌಟುಂಬಿಕ ಆವರಣದೊಳಗೆ ಮಾತೃಭಾಷೆ ಯನ್ನೂ ಸಮುದಾಯದೊಂದಿಗೆ ಸಮುದಾಯದ ಭಾಷೆಯನ್ನೂ ಬಳಸುವ ರೂಢಿ ಸಾಮಾನ್ಯವಾಗಿ ಕಂಡು ಬರುತ್ತದೆ. ಕೇವಲ ಭಾಷೆಯಷ್ಟೇ ಅಲ್ಲ ವಲಸಿಗರು ತಮ್ಮ ಸಂಸ್ಕೃತಿಯ ಕುರುಹುಗಳಾದ ದೇವರು, ಆಚರಣೆ, ಆಹಾರ ಪದ್ಧತಿ, ನಂಬಿಕೆಗಳನ್ನು ಸುಲಭವಾಗಿ ಬಿಟ್ಟುಕೊಡುವುದಿಲ್ಲ. (ತಮಿಳು ಶ್ರೀವೈಷ್ಣವರ ದೇವಾಲಯ ಪೂಜಾ ವಿಧಿವಿಧಾನ ಸಂಸ್ಕೃತಿಯನ್ನು ಗಮನಿಸಬಹುದು.) ತಮ್ಮ ಕುಲದೇವರಿಗಾಗಿ ದೇವಾಲಯ ಗಳನ್ನು ಕಟ್ಟಿಸಿ ಶಕ್ತ್ಯಾನುಸಾರ ದಾನ ದತ್ತಿಗಳನ್ನು ಬಿಡುತ್ತಾರೆ. ಅನೇಕ ರೀತಿಯ ಸೇವಾ ಕಾರ್ಯ ಗಳನ್ನು ಕೈಗೊಂಡು ಪರಸ್ಥಳದವರೊಂದಿಗೆ ಉತ್ತಮ ಸಂಬಂಧವನ್ನು ಸೌಹಾರ್ದವನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಾರೆ. ಹಿಂದೆ ಗಮನಿಸಿರುವ ತೆಲುಗು ವಲಸಿಗರ ಅಧಿಕಾರಿಗಳ, ನಾಯಕರ, ಊಳಿಗದವರ, ಬಂಧುಗಳ ಶಾಸನಗಳು ಇದಕ್ಕೆ ಸಾಕ್ಷಿಯಾಗಿವೆ.

ಶಾಸನಗಳನ್ನು ಹಾಕಿಸುತ್ತಿದ್ದವರು ಶಿಷ್ಟರಾದ್ದರಿಂದ ಶಾಸನಗಳು ಶಿಷ್ಟಭಾಷೆಯನ್ನೆ ಹೆಚ್ಚಾಗಿ ಒಳಗೊಳ್ಳುತ್ತಿದ್ದು ಆಡು ಭಾಷೆಯ ವೈವಿಧ್ಯತೆ ಅಲ್ಲಿ ಕಂಡುಬರುವುದು ಕಡಿಮೆ. ಗಡಿ ಪ್ರದೇಶಗಳಾಗದ ಕಾರಣ ದುಭಾಷಿಕ ಪರಿಸರವಿಲ್ಲದೆ ಅನ್ಯ ಭಾಷಿಕರೊಂದಿಗೆ ವ್ಯಾಪಕವಾದ ಸತತ ಸಂಪರ್ಕಕ್ಕೆ ಅವಕಾಶವಿಲ್ಲದ ಪ್ರದೇಶಗಳಿಗೆ ವಲಸೆ ಬಂದವರು ಹಾಕಿಸಿದ ಶಾಸನಗಳ ಭಾಷೆ ಸಾಂಪ್ರದಾಯಿಕವಾಗಿ ಶಿಷ್ಟವಾಗಿರು ತ್ತದೆ. ದ್ವಿಭಾಷಿಕ ಪ್ರಾಂತ್ಯಗಳಾದ ಕೋಲಾರ, ಬಳ್ಳಾರಿ, ತುಮಕೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ವಲಸಿಗರಲ್ಲಿ ತೆಲುಗು ಸಂವಹನ ಮಾಧ್ಯಮವಾಗಿ ಉಳಿದಿದೆ. ಅಲ್ಲಿ ಹೆಚ್ಚು ನುಡಿಬೆರಕೆ, ವಾಕ್ಯ ಮಿಶ್ರಣಗಳು ಕಂಡು ಬರುತ್ತವೆ. ಆ ಪ್ರದೇಶದ ತೆಲುಗು ಶಾಸನಗಳಲ್ಲೂ ಇಂತಹ ಭಾಷಾ ಪಲ್ಲಟ, ನುಡಿಬೆರಕೆ ವಾಕ್ಯಮಿಶ್ರಣಗಳನ್ನು ಕಾಣಬಹುದು. ಆದರೆ ಹಾಸನ ಜಿಲ್ಲೆಯಲ್ಲಿನ ತೆಲುಗು ಕುಟುಂಬಗಳಿಗೆ ಸತತ ತೆಲುಗಿನ ಸಂಪರ್ಕವಿಲ್ಲದ ಕಾರಣ ಅದು ಸಂವಹನ ಭಾಷೆಯಾಗದೆ ಈ ರೀತಿಯ ನುಡಿಬೆರಕೆ ಮಿಶ್ರಣಕ್ಕೆ ಹೆಚ್ಚು ಅವಕಾಶವಾಗಿಲ್ಲ. ಹಾಸನ ಜಿಲ್ಲೆಯಲ್ಲಿ ನೆಲೆಸಿರುವ ಹಳೆಯ ತೆಲುಗು ವಲಸಿಗ ಕುಟುಂಬದವರಿಗೆ ತೆಲುಗು ಭಾಷೆ ಮರೆತುಹೋಗಿದೆ ಎಂದರೆ ಆಶ್ಚರ್ಯ ಪಡಬೇಕಾಗಿಲ್ಲ. ಆದರೆ ಗಡಿ ಪ್ರದೇಶಗಳು ರಾಜಕೀಯ ಗಡಿಗಳನ್ನು ಮೀರಿ ಸಾಮಾಜಿಕ ಸಂಬಂಧವನ್ನು ಹೊಂದಿದ್ದು ಭಿನ್ನ ಭಾಷಾ ಸಂಸ್ಕೃತಿಗಳ ಸಮನ್ವಯ ಸಂಪರ್ಕ ಸತತವಾಗಿರುವ ಕಾರಣದಿಂದ ಅಲ್ಲಿನ ಶಾಸನಗಳಲ್ಲಿ ಶಿಷ್ಟಭಾಷೆಯೊಂದಿಗೆ ದೇಸೀ ಭಾಷೆ, ನುಡಿಬೆರಕೆ, ನುಡಿಜಿಗಿತ, ಮಿಶ್ರಣ ಇವುಗಳೆಲ್ಲ ಕಾಣಿಸಿಕೊಳ್ಳುತ್ತವೆ. ಈ ನಿಟ್ಟಿನಲ್ಲಿ ವಲಸಿಗರ ಶಾಸನಗಳನ್ನು ಹಾಗೂ ದ್ವಿಭಾಷಿಕ ಬಹುಭಾಷಿಕ ಶಾಸನಗಳನ್ನು ಅಧ್ಯಯನ ಮಾಡುವ ಅಗತ್ಯವಿದೆ.

ಟಿಪ್ಪಣಿಗಳು

1. ಎಪಿಗ್ರಾಫಿಯಾ ಕರ್ನಾಟಿಕ. ಸಂ. 9 (ಪರಿ) ಬೇಲೂರು 445.
2. ಡಾ. ವಸಂತಲಕ್ಷ್ಮಿ . ಹಾಸನ ಜಿಲ್ಲೆಯ ಹೊಯ್ಸಳ ಬಸದಿಗಳು
3. ಅದೇ.. ಶಾ.ಸಂ. 446
4. ಅದೇ. ಶಾ.ಸಂ. 448
5. ವಿಜಯ ನಗರದ ಸ್ಥಾಪಕರ ಮೂಲದ ಬಗ್ಗೆ ಭಿನ್ನಾಭಿಪ್ರಾಯಗಳಿದ್ದು, ಅವರು ಆಂಧ್ರಮೂಲದವರೆಂಬ, ಕನ್ನಡಿಗರೇ ಆಗಿದ್ದಾರೆ ಎಂಬ ವಾದಗಳಿವೆಯಾದರೂ ಅವರಿಗೆ ಓರಂಗಲ್ಲಿನ ತೆಲುಗುವಂಶದೊಂದಿಗೆ ಸಂಬಂಧವಿದ್ದುದು ಖಚಿತ.
6. ಅದೇ. ಎ.ಕ. 9 ಶಾ.ಸ. ಮುನ್ನುಡಿ
7. ಅದೇ. ಸಂ. 8 (ಪರಿ) ಶಾ.ಸಂ. - 1 ಕ್ರಿ.ಶ. 1531
8. ಅದೇ. ಶಾ.ಸಂ. 16 ಕ್ರಿ.ಶ. 1537-38
9. ಅದೇ. ಸಂ. 9 ಶಾ.ಸ. 476 ಕ್ರಿ.ಶ. 1535
10. ಅದೇ. ಸಂ. 9 ಬೇಲೂರು 194 ಕ್ರಿ.ಶ. 1659
11. ಅದೇ. ಸಂ. 9 ಬೇಲೂರು 177. ಸಿಂಧುವಳ್ಳಿಯ ಗುರುರಾಯಾಚಾರ್ಯರ ವಶದಲ್ಲಿದ್ದ 35 ಸಾಲುಗಳ ತಾಮ್ರ ಶಾಸನ.
12. ಅದೇ. ಸಂ. 8 ಆಲೂರು ಶಾ.ಸಂ. 26
13. ಅದೇ. ಸಂ. 9. ಬೇಲೂರು ಶಾ.ಸಂ. 178
14. ವಕ್ತೃ ಶ್ರೀಕಂಠಯ್ಯ ಹೊನ್ನವಳ್ಳಿ 86 ವರ್ಷ.
15. ಅದೇ. ಸಂ. 9 ಶಾ.ಸಂ. 205 ಕ್ರಿ.ಶ. 1659
16. ಅದೇ. ಸಂ. 8 ಹೊಳೇನರಸೀಪುರ. ಶಾ.ಸಂ. 55
17. ಅದೇ. 8. ಆಲೂರು ಶಾ.ಸಂ. 42. 16-17ನೇ ಶ.ಮಾ.
18. ಬೇಲೂರು ನಾಯಕರು, ಕೆಳದಿ ಗುಂಡಾಜೋಯಿಸ್. ಮಲೆಕರ್ನಾಟಕದ ಅರಸು ಮನೆತನಗಳು.
19. ಅದೇ. 8. ಹೊಳೇನರಸೀಪುರ. ಶಾ.ಸಂ. 43.
20. ಅದೇ. ಸಂ. 8 ಹೊ.ನ. ಶಾ.ಸಂ. 12. ಕ್ರಿ.ಶ. 1588 ಏಪ್ರಿಲ್ 3
21. ಅದೇ. ಸಂ.8. ಹೊ.ನ. 16 ಕ್ರಿ.ಶ. 1655 ಮಾರ್ಚ್ 22, ಅದೇ. ಶಾ.ಸಂ. 53 ಮೇ 29 ಅಂಕವಳ್ಳಿ ಶಾಸನ.
22. ಅದೇ. ಸಂ. 9 ಬೇಲೂರು 48
23. ಅದೇ. ಶಾ.ಸಂ. 58

24. ಅದೇ.. 10. ಅರಸಿಕೆರೆ ಶಾ.ಸಂ. 206. ಕ್ರಿ.ಶ. 1535
25. ಅದೇ. ಶಾ.ಸಂ. 240.ಕ್ರಿ.ಶ. 1535
26. ಅದೇ. ಸಂ. 9. ಶಾ.ಸಂ. 576. ಬೇಲೂರು ಕ್ರಿ.ಶ. 1445
27. ಅದೇ. ಸಂ. 8 ಹಾಸನ. ಶಾ.ಸಂ. 1.ಕ್ರಿ.ಶ. 1531
28. ಕೆ.ಆರ್. ಗಣೇಶ್. ಆಂಧ್ರ ಪ್ರದೇಶದ ಕನ್ನಡ ಶಾಸನಗಳು ಒಂದು ಅಧ್ಯಯನ. ಪುಟ 254. (ಕ್ಷೇತ್ರ ಕಾರ್ಯದಲ್ಲಿ ನೆರವಾದ ಹೊನ್ನವಳ್ಳಿ ಪ್ರಾಥಮಿಕ ಶಾಲಾ ಮುಖ್ಯೋ ಪಾಧ್ಯಾಯರಾದ ಶ್ರೀ ಗಜಾನನ ಪಲ್ಲೇದ ಅವರಿಗೆ ಆಭಾರಿಯಾಗಿದ್ದೇನೆ)

೧೫. ವಿಜಯನಗರದ ದೊರೆಗಳ ಪ್ರಸ್ತಾಪ ಬರುವ ಗೊಲ್ಲ ಜನಾಂಗದವರ ಒಂದು ದಾಖಲೆ

ಡಾ.ಬಿ. ರಾಜಶೇಖರಪ್ಪ

ಚಿತ್ರದುರ್ಗ ಜಿಲ್ಲೆಯ ಕಸಬಾ ತಾಲೂಕಿನಲ್ಲಿ, ಚಿತ್ರದುರ್ಗದಿಂದ ವಾಯವ್ಯಕ್ಕೆ ಸುಮಾರು ೮ ಕಿ.ಮೀ.ದೂರದಲ್ಲಿರುವ ಒಂದು ಚಿಕ್ಕಗ್ರಾಮ ಆಯಿತೋಳು. ಈಗ್ಗೆ ಕೆಲವು ವರ್ಷಗಳ ಹಿಂದೆ, ನಾನು ಚಿತ್ರದುರ್ಗದ ನನ್ನ ಮಿತ್ರ ಶ್ರೀ ಟಿ.ಎನ್. ಮಂಜಣ್ಣ ಅವರ ಜೊತೆ, ಹೊಸ ಶಾಸನಗಳ ಅನ್ವೇಷಣೆ ನಡೆಸುತ್ತಾ ಆ ಗ್ರಾಮಕ್ಕೆ ಹೋದಾಗ್ಗೆ, ಆ ಊರಿನ ಗೊಲ್ಲ ಜನಾಂಗದ ಶ್ರೀ ಪಟೇಲ್ ನಾಗಪ್ಪ (ಈಗ ೯೪) ಅವರ ಪರಿಚಯ ವಾಗಿ, ಅವರ ಮನೆಯಲ್ಲಿ ಹಿಂದಿನ ಕಾಲದ ಕೆಲವು ಹಳೆಯ ಕಾಗದಪತ್ರಗಳು, ಅವರ ಜನಾಂಗಕ್ಕೆ ಸಂಬಂಧಿಸಿದ ಕೆಲವು ಹಳೆಯ ದಾಖಲೆಗಳನ್ನು ಬರೆದುಕೊಂಡಿದ್ದ ಒಂದು ಪುಸ್ತಕ, ಇವು ದೊರೆತವು. ಅವುಗಳಲ್ಲಿ ಒಂದು ೧೯ನೇ ಶತಮಾನದ ಕನ್ನಡ ಮೋಡೀಲಿಪಿಯಲ್ಲಿ ಕಪ್ಪು ಶಾಯಿಯಲ್ಲಿ ಬರೆದಿದ್ದ ಫುಲ್‌ಸ್ಕೇಪ್ ಗಾತ್ರದ ಆರು ಪುಟಗಳ ೧೬೫ ಪಂಕ್ತಿಗಳ ಒಂದು ದಾಖಲೆಪತ್ರ, ಗೊಲ್ಲ ಜನಾಂಗಕ್ಕೆ ಸಂಬಂಧಿಸಿದ್ದ ಲ್ಲದೆ, ಈ ಜನಾಂಗದವರನ್ನು ಆನೆಗೊಂದಿ ಅರ್ಥಾತ್ ವಿಜಯನಗರದ ದೊರೆಗಳು ಸಂಪರ್ಕಿಸಿದ ಒಂದು ವಿಲಕ್ಷಣ ಸಂಗತಿಯನ್ನು ಒಳಗೊಂಡಿದ್ದುದಲ್ಲದೆ, ಜರಮಲೆ ಮತ್ತು ಚಿತ್ರದುರ್ಗ ಪಾಳೆಯಗಾರರಿಗೆ ಸಂಬಂಧಿಸಿದ ಕೆಲವು ಅಂಶಗಳನ್ನು ತನ್ನ ಒಡಲಲ್ಲಿರಿಸಿಕೊಂಡಿದ್ದುದು ಗೋಚರಿಸಿತು. ಇದರ ಪ್ರಾರಂಭದಲ್ಲಿ ಬಂದಿರುವ ಕೆಲವು ವಿವರಗಳು ನಂಬಲು ಕಷ್ಟಕರವಾದರೂ, ಚರಿತ್ರೆಯ ದೃಷ್ಟಿಯಿಂದ ಇದರಲ್ಲಿಯ ಕೆಲವು ಅಂಶಗಳು ಮಥನಗೊಳ್ಳಬೇಕಾದ್ದು ವಿಹಿತ ಎನ್ನಿಸಿದ್ದರಿಂದ, ಅದರ ಬಗ್ಗೆ ಈ ಸಂಪ್ರಬಂಧವನ್ನು ಸಾದರಪಡಿಸುತ್ತಿದ್ದೇನೆ. ಅನೇಕ ಕಡೆ ಕಾಗುಣಿತ ಮತ್ತು ವಾಕ್ಯ ರಚನಾ ದೋಷಗಳಿದ್ದರೂ ಇದರ ಅಭಿಪ್ರಾಯವನ್ನು ಗ್ರಹಿಸಬಹುದಾಗಿದೆ.

ಈ ದಾಖಲೆಯ ಪುಟವಾರು ಪಂಕ್ತಿವಾರು ಪಾಠ ಹೀಗಿದೆ

೧ನೆಯ ಪುಟ

1 ಶ್ರೀಮತು ಯಾದವ ಕುಲವಂಶೋದ್ಧಾರಕರಾದ

2 ಗುತ್ತಿ ಮಹರಗುತ್ತಿ ಸಪ್ತಾಂಗ ಹರಣೀರಾದ

3 ಕನೀಕರೇಪಟ್ಟಾ ಸಿಂಹ್ಮಾಸನಾರೂಢರಾದಂತ್ಹಾ

4 ಶ್ರೀ ಗೋಪಾಲ ಕ್ರಿಷ್ಣದೇವರ ಪಾದಪೂಜಿತರಾದಂತ್ಹಾ

5 ಹಂಚಿನ ಸೀರೆ ಪವಳದ ಕಡಗದಿನಾರಕಲ್ಲಿ ಚಿಪ್ಪು

6 ಕೊಡಲಿ ಗೊಲ್ಲತಿಲಕ ಕೊಳಾಹಲ ಗೋಕುಲಕ್ಕೆ

7 ಸಮಂಧಪಟ್ಟ

8 ಹೀರೇದೇವರ ಪೂಜಾರಿ ಗೊಂದಿಹಳ್ಳಿ ಕಾಟಂ ದೇವರ ಪೂಜಾರಿ ದೇವರಮನೆ ಕಾಟ

9 ಯ್ಯ ಅಂದರೆ ಈತನು ಬಹಳ ಸತ್ಯಕ್ಕೆ ನಡೆದು ಇರುತ್ತಾನೆ ಈತನು ಹಿಂದಿನ ಆರು

10 ಮಾಸದ ವಾರ್ತೆಯನ್ನು ಮುಂದಿನ ಆರು ಮಾಸದ ವಾರ್ತೆಯನ್ನು ಹೇಳುತ್ತಿದ್ದನಲ್ಲದೆ

11 ಉಂಡ ಊಟವನ್ನು ಕಂಡ ಕನಸನ್ನು ಹೊಟ್ಟೆಯಲ್ಲಿರುವ ಪಿಂಡದ ಆಕಾರ ಗುಣ

12 ಗಳನ್ನೆಲ್ಲಾ ಹೇಳುತ್ತಿದ್ದನು ಆಗ್ಯೆ ಯೀ ಸತ್ಯಾತ್ಮನು ಹೇಳುತ್ತಿದ್ದ ಆಶ್ಚರ್ಯಕರ

13 ವಾರ್ತೆಯು ಆಗಿನ ಆನೆಗೊಂದಿ ಧೊರೆಗಳ ಸಂನ್ನಿಧಾನಕ್ಕೆ ತಿಳಿಯಬಂದದ್ದರ

14 ಮೇಲೆ ಆ ಧೊರೆಗಳು ಯಿಂತ್ಹಾ ಭೂತಭವಿಷ್ಯದ್ವರ್ತಮಾನವನ್ನು ಹೇಳತಕ್ಕ ಗೊ

15 ಲ್ಲ ಗೌಡನು ಯಂತ್ಹಾವನಿರಬಹುದು ಇದು ನಿಜವೇ ಸುಳ್ಳೆ ತಾವೇ ಖುದ್ದು ಹೋ

16 ಗಿ ಪರೀಕ್ಷೆ ಮಾಡಿ ಬರಬೇಕೆಂದು ಹಿಂದೆ ಮುಂದೆ ನೂರಾರು ಜನಗಳನ್ನು ಕರೆದುಕೊಂ

17 ಡು ಸದ್ರಿ ಕಾಟಯ್ಯನ ಸಮೀಪಕ್ಕೆ ಬರಬೇಕೆಂದು ಬಾಲೇನಹಳ್ಳಿ ಸಂಸ್ಥಾನದ ಕಟ್ಟೆಮ

18 ನೆಗೆ ಬಂದರು ಸದ್ರಿ ಕಟ್ಟೆಮನೆಯಲ್ಲಿದ್ದ ಕಟ್ಟೆಮನೆ ಗೌಡನಾಗಿಯೂ ಅವಲ್‌ದಾರನ ವಂಶಾವಳಿ ಹಿರೇದೇವರ ಗೌಡ

19 ನಾಗಿಯೂ ಇದ್ದ ಕಾಟಪ್ಪನೆಂಬುವನನ್ನು ಕರಿಸಿಕ್ಕೊಂಡು ಇನ್ನೂ ಗುಜ್ಜಲುಗೌಡ ಇನ್ನೂ

20 ಮುಂತಾದ ಸಭಾ ಜನಗಳನ್ನು ಕರಿಸಿಕೊಂಡು ಹಿಂದೆ ಆರು ತಿಂಗಳ ಸುದ್ದಿ ಮುಂದಿನ ಆರು ತಿಂ

21 ಗಳ ಸುದ್ದಿ ಹೇಳತಕ್ಕ ಗೌಡನ್ಯಾರಯ್ಯ ಎಂದು ವಿಚಾರಿಸಲಾಗಿ ಆಗ ಕಟ್ಟೆ ಮೇಲೆ ಕೂ

22 ತಿದ್ದ ಆ ಸತ್ಯವಂತ ಕಾಟಯ್ಯನು ನಾನೇ ಹಿಂದೆ ಮುಂದೆ ನಡೆದ ವರ್ತಮಾನ ಹೇಳತಕ್ಕವನು

23 ಯಂತ ಧೊರೆಗೆ ತಿಳಿಸಿದವನು ಆ ಕೂಡ್ಲೆ ಸದ್ರಿ ಕಾಟಯ್ಯಗೆ ದೇವರ ಆವೇಶ ಬಂದು

24 ಹಿರೇದೇವರ ಮಹತ್ತಿನಿಂದ ಯಲ್ಲಾ ವಾರ್ತೆಯನ್ನು ಹೇಳಬಲ್ಲೆನೆಂದು ದೊರೆಗೆ ಜವಾ

25 ಬು ಕೊಟ್ಟನು ಅದಕ್ಕೆ ಧೊರೆಗಳು ಆಹ ಗೊಲ್ಲಗೌಡ ಹಾಗಾದರೆ ನನ್ನ ಕುದುರೆ ಹೊ

26 ಟ್ಟೆಲಿ ಏನು ಇಧೆ ಹೇಳು ಎಂದು ಕೇಳಿದನು ಆಗ ಆ ಧೊರೆಗೆ ದೇವರಮನೆ ಕಾಟಯ್ಯ ಹೇ

೨ನೆಯ ಪುಟ

27 ಳಿದ್ದೇನೆಂದರೆ ನಿನ್ನ ಕುದುರೆ ಹೊಟ್ಟೆಯಲ್ಲಿ ಪಂಚಕಲ್ಯಾಣಿ ಕುದುರೆಮರಿ ಇಧೆ

28 ಆ ಮರಿಯ ನಾಲ್ಕು ಕಾಲುಗಳು ಬೆಳ್ಳಗೂ ಮತ್ತು ಬಾಲವೂ ಬೆಳ್ಳಗೂ

29 ಹಣೆ ಮೇಲೆ ಬಿಳೇ ಪಟ್ಟೆಯೂ ಇರುತ್ತದೆ ಯಂದು ಹೇಳಿ ನಿಂತುಕೊಂಡನು

30 ತಕ್ಷಣವೆ ಆ ಧೊರೆಯ ಕಡೆ ಕೆಲವು ಸಿಬ್ಬಂದಿ ಜನಗಳು ಸದ್ರಿ ದೊರೆಯ

31 ಕುದುರೆಯನ್ನು ಕೆಡವಿ ಬೆಳಗೇರಿ ಎಂಬ ಆ ಕುದುರೆಯ ಹೊಟ್ಟೆಯನ್ನು ಸೀಳಿದರು ಕೂಡ್ಲೆ

32 ಹೊಟ್ಟೆಯಲ್ಲಿದ್ದ ಮರಿಯು ಕೆಳಗೆ ಬಿದ್ದು ಗದಗದನೇ ನಡುಗುತ್ತಾ ನಿಂತುಕೊಂ

33 ಡಿತು ಆಗ ಆ ಮರಿಯು ಆ ಮಹಾಸತ್ಯಸಂಧನಾದ ದೇವರಮನೆ ಕಾಟಯ್ಯ

34 ನು ಹೇಳಿದಂತೆ ಪಂಚ ಕಲ್ಯಾಣಿ ಮರಿಯನ್ನು ಧೊರೆಯು ಮತ್ತು ಧೊರೆ

35 ಯ ಕಡೆ ಜನಗಳು ಅಲ್ಲಿ ಹಾಜರಾಗಿದ್ದ ಯಲ್ಲಾ ಸಭಾಜನಗಳು ಈ ಆಶ್ಚ

36 ರ್‍ಯವನ್ನು ನೋಡಿ ಆ ಮಹನೀಯನ ಸತ್ಯವನ್ನು ಕೊಂಡಾಡುತ್ತಾ ನಿಂತರು ಆ

37 ಗ ದೇವರ ಮನೆ ಕಾಟಯ್ಯನು ಹೇಳಿದ್ದೆನಂದರೆ ಯೀ ಮರಿಯನ್ನು ಪುನಹಾ ಇದರ

38 ತಾಯಿ ಹೊಟ್ಟೆಯಲ್ಲಿ ತುಂಬಿಬಿಡಿರೆಂದನು ತಕ್ಷಣ ಕೆಲವು ಧೊರೆಯ ಕಡೆ

39 ಜನರು ಸದ್ರಿ ಮರಿಯನ್ನು ಹೊಟ್ಟೆಯಲ್ಲಿ ತುಂಬಿಬಿಟ್ಟರು ನಂತರ ಆ ಸತ್ಯಾ

40 ತ್ಮನಾದ ದೇವರ ಕಾಟಯ್ಯನು ದೇವರ ಬಳಿ ಇರುವ ಬೆತ್ತವನ್ನು ತೆಗೆದುಕ್ಕೊಂ

41 ಡು ಕುದುರೆಯ ಹೊಟ್ಟೆಯ ಮೇಲೆ ಇಳೀತೆಗೆದ ಮಾತ್ರವೇ ಸೀಳಿದ ಹೊ

42 ಟ್ಟೆಯು ಸರಿಯಾಗಿ ಆ ಬೆಳಗೇರಿ ಯಂಬ ಕುದುರೆಯು ಎದ್ದು ನಿಂತುಕೊಂಡಿತು

43 ಆಗ ಯೀ ಯಲ್ಲಾ ಆಶ್ಚರ್‍ಯವನ್ನು ನೋಡಿ ದೊರೆಯು ಅಲ್ಲಿದ್ದ ಅವಲ್‌ದಾರ್‍ರ

44 ಕಾಟಪ್ಪನನ್ನೂ ಮತ್ತು ಅಲ್ಲಿದ್ದ ಸಭಾ ಜನಗಳನ್ನು ಕುರಿತು ಅಯ್ಯಾ ಜ

45 ನಗಳಿರಾ ಸದ್ರಿ ದೇವರ ಮನೆ ಕಾಟಯ್ಯನಿಗೆ ಆರ್ಷಿಯಿಂದ ಪೂಜಾರಿಕೆ

46 ಇರುವದು ನಿಜವೊ ಸುಳ್ಳೊ ಯಂದು ಕೇಳಲಾಗಿ ಸದ್ರಿ ಅವಲ್‌ದಾರ ಕಾ

47 ಟಪ್ಪನು ಮತ್ತು ಯಲ್ಲಾ ಸಭಾಜನರು ಸಹಾ ಸ್ವಾಮಿ ಯೀ ಸತ್ಯಾತ್ಮ ದೇವರ

48 ಕಾಟಯ್ಯನು ಆರ್ಷಿಯಿಂದಲೂ ಪೂಜಾರಿ ನಿಜವು ಯಿವರ ತಂದೆ ತಾತಂದಿರ

49 ಕಾಲದಿಂದಲೂ ಶಾಲಿವಾಹನ ಶಕ ಕಾರ್ನಿಕದ ಮನೆತನವು ಈಗ ತಾವು ದಯ ಮಾ

50 ಡಿರುವ ಕಾರಣ ಯೀ ದೇವರ ಕಾಟಯ್ಯನಿಗೆ ಪಟ್ಟವನ್ನು ಮಾಡಿಸಿ ಮುಂದೆ ಯಾವ

51 ಕಾಲಕ್ಕೂ ಯೀತನ ವಂಶಸ್ಥರೇ ಯೀ ಪೂಜಾರಿಕೆಯನ್ನು ಮಾಡುವಂತೆ ನಿರ್ಮಿ

52 ಸಿಕೊಡಿಸಬೇಕೆಂದು ಯಲ್ಲಾ ಸಬಾಜನರೂ ಅವಲ್‌ದಾರ ಕಾಟಯ್ಯನು ಸಹಾ

53 ಧೊರೆ[ಗೆ] ವಿಜ್ಞಾಪಿಸಿಕೊಂಡರು ಅದಕ್ಕೆ ದೊರೆಯು ಸಮ್ಮತಿಪಟ್ಟು ಅಯ್ಯಾ

54 ಜನಗಳಿರಾ ನಿಮ್ಮ ಕುಲಕ್ಕೆ ಗುರುಗಳು ಯಾರೂ ಯಂದು ವಿಚಾರಿಸಲಾಗಿ

೩ನೆಯ ಪುಟ

55 ಧೊರೆಗಳೇ ನಮ್ಮ ಕುಲಕ್ಕೆ ಗೋಸಿಕೆರೆ ಈಶ್ವರಪ್ಪನವರು ಗುರುಗಳಿರುತ್ತಾರೆ ಎಂದು

56 ತಿಳಿಸಿದರು ತಕ್ಷಣ ಆನೆಗೊಂದಿ ಧೊರೆಗಳು ಆ ಗುರುಗಳಿಗೆ ನಿರೂಪ ಬರೆದು

57 ಕರಿಸಿಕೊಂಡರು ಮೂರು ಕಟ್ಟೆ ಮೊನ್ನೂರು ಸಾವಿರ ದೈವಸ್ಥರು ಆಸ್‌ಪಾಸಿನ

58 ೨೮ಲ ದೇವರುಗಳು ಸಹಾ ಕೂಡಿದವು ಬಾಲೇನಹಳ್ಳಿ ಮುಂದೆ ಮೂಡ

59 ಲ ಹೊಳೆಯಲ್ಲಿ ಯೀಶ್ವರ ದೇವಸ್ಥಾನದ ಮಂಟಪದಲ್ಲಿ ವಿಷ್ಣುದೇವರ ಪಾ

60 ದವೂ ಯೀಗಲೂ ಯಿರುವದಷ್ಟೆ ಆ ಸ್ಥಳದಲ್ಲಿ ಸದ್ರಿ ಮಂಟಪದಲ್ಲಿ ದೇವರ

61 ಮನೆ ಕಾಟಯ್ಯನಿಗೆ ಗೋಸೀಕೆರೆ ಗುರುಗಳ ಮುಖಾಂತ್ರ ಪಟ್ಟಾಭಿಷೇಕ ವಾಯಿತು

62 ಆ ಕೂಡ್ಲೆ ಧೊರೆಯು ದೇವರ ಮನೆ ಕಾಟಯ್ಯನಿಗೆ ಪಟ್ಟವಾಯ್ತು ಎಂದು ಡಂಗೋರೆ

63 ಹೊಯಿಸಿ ಅಲ್ಲಿಂದ ಹೊಳೆಯನ್ನು ಬಿಟ್ಟು ಹೋಗಬೇಕಾದರೆ ಅಯಿವತ್ತು ಜೋಡಿ

64 ಮ್ಯಾಳವೇ ಮೊದಲಾದ ಅನೇಕ ವಿಜೃಂಭಣೆ ಇಂದಾ ಕರೆಕ್ಕೊಂಡು ಬಂದು

65 ಬಾಲೇನಹಳ್ಳಿ ಕಟ್ಟೆಮನೆಯಲ್ಲಿ ದೇವರನ್ನು ನಿರ್ಮಾಣಮಾಡಿದರು ಯಿದೆಲ್ಲಾ

66 ಕೆಲಸವನ್ನು ಪೂರೈಸಿಕ್ಕೊಂಡು ಧೊರೆಯು ಆಗಲೇ ತಾಂಬ್ರದ ತಗಡನ್ನು ಮಾಡ್ಸಿ

67 ನಡೆದ ವಾರ್ತೆಯನ್ನು ಮತ್ತು ಮುಂದಕ್ಕೆ ದೇವರ ಕಾಟಯ್ಯನೇ ಪೂಜಾರಿಯಂ

68 ತಲೂ ಮುಂದಕ್ಕೆ ಯಿವನ ವಂಶಸ್ಥರೇ ಯೀ ಪಟಕ್ಕೆ ಯೀರಬೇಕೆಂತಲೂ ಶಾಸನ

69 ಬರಿಸಿ ಸದರಿ ದೇವರ ಕಾಟಯ್ಯನಿಗೆ ಕೊಟ್ಟು ಆನೆಗೊಂದಿಗೆ ಹೊರಟು ಹೋದರು

70 ತರುವಾಯ ಯರಡು ತಿಂಗಳಿಗೆ ಆನೆಗೊಂದಿ ಧೊರೆಯ ಬೆಳಗೇರಿ ಯಂಬ

71 ಕುದುರೆಯು ಅದೇ ಮರಿಯನ್ನು ಹಾಕಿತು ಧೊರೆಯು ದೇವರ ಕಾಟಯ್ಯನ ಸ

72 ತ್ಯವಾಕ್ಕಿಗೆ ಮೆಚ್ಚಿ [ಬಾ]ಲೇನ ಹಿರೇದೇವರಾದ ಕಾಟಂಲಿಂಗ ದೇವರಿಗೆ ಹಗಲು ದೀವ

73 ಟಿಕೆಯನ್ನು ದೇವರು ಹೊರಟ ಕಾಲದಲ್ಲಿ ದೇವರಿಗೆ ಹಿಡಿಯುವದಕ್ಕೆ ಮುತ್ತಿನ ಗೊಂ

74 ಡೆ ಬಿಗಿಸಿದ ಭೂಚಕ್ರದ ಕೊಡೆಯನ್ನು ಕಳುಹಿಸಿಕೊಟ್ಟಿದ್ದರು

75 ಅದೇ ಕಾಲದಲ್ಲಿ ದೇವರ ಮನೆಯವರಿಗೆ ಪೂಜಾರಿಕೆ ಯಂತಲೂ ಅಲಲ್‌ದಾರ್ರಿಗೆ

76 ಹಿರೇದೇವರ ಗೌಡಿಕೆಯಂತಲೂ ಕುಂಚೂರ ಮಲ್ಲನ ಕೋಲುಕಾರಿಕೆ ಯಂತಲೂ

77 ಶಾಸನದಲ್ಲಿ ನಮೂದು ಮಾಡಿದ್ದರು.

78 ಸತ್ಯಕ್ಕೆ ಸತ್ಯ ನಡೆಯಬೇಕು ಅದ್ರಲ್ಲಿ ಮುತ್ತಿನ ತೆನೆ ಕಂಡೀತು ಪೂಜಾರಿ ತಪ್ಪಿಸಕೂ

79 ಡದು ಯೀ ಸತ್ಯಕ್ಕೆ ಯಾರೂ ತಪ್ಪಕೂಡದೆಂತಲೂ ಶಾಸನದಲ್ಲಿ ನಮೂದು ಮಾಡಿದ್ದರು

80 ಸತ್ಯಕ್ಕೆ ತಪ್ಪಿದರೆ ದರ್ಬಾರದ ಬಾಗಿಲು ಕಟ್ಟೀತು ಯಂತಲೂ ಶಾಸನ ಬರದಿದ್ದರು

81 ಅವಲ್‌ದಾರನ ಮನೆಯಲ್ಲಿ ದೇವರಕಾಟಯ್ಯನ ಮನೆ ಭಾಗವಾದದ್ದು ಯೀ ರೀತಿ ಶಾಸನ

82 ವುಂಟು

೪ನೆಯ ಪುಟ

83 ಯೀಚಿಗೆ ಸದ್ರಿ ದೇವರಮನೆ ಕಾಟಯ್ಯನ ಹೊಟ್ಟೆಯಲ್ಲಿ ಹುಟ್ಟಿದ ದೊಡ್ಡಕಾಟ್ಯೆ

84 ಯ್ಯನಿಗೆ ಪಟ್ಟವಾಯ್ತು ಮತ್ತು ಯೀತನ ಹೊಟ್ಟೆಯಲ್ಲಿ ಹುಟ್ಟಿದ ಸಂಣಜಂ

85 ಪಣ್ಣನಿಗೆ ಪಟ್ಟವಾಯ್ತು ಸದ್ರಿ ಸಂಣ ಜಂಪಂಣನಿಗೆ ಬೊಮ್ಮಂಣ ಹುಟ್ಟಿದ

86 ಇವನಿಗೆ ಪಟ್ಟವಾಯ್ತು ಯಿವನ ಹೊಟ್ಟೆಯಲ್ಲಿ ಕೊಲು ಕಾಟಯ್ಯ ಹುಟ್ಟಿದ

87 ವನಿಗೆ ಪಟ್ಟಾವಾಯ್ತು ಯಿವನ ಹೊಟ್ಟೆಯಲ್ಲಿ ದೇವರಕಾಟಯ್ಯ ಹುಟ್ಟಿದ ಯಿ

88 ವನಿಗೆ ಪಟ್ಟವಾಯ್ತು ಯಿವನ ಕಾಲದಲ್ಲಿ ಕ್ಷಾಮಬಂತು ಯಿಂತ್ಹಾಕಾಲದಲ್ಲಿ ದೇವ

89 ರು ಅನ್ಯಾಯವಾಗಿ ಕೆಟ್ಟು ಹೋಗುತ್ತೆಂತ ದೇವರನ್ನು ತೆಗೆದುಕ್ಕೊಂಡು ಹೋಗಿ ಹಾಸದ

90 ಮರದ ಟೊಳ್ಳಿನೊಳಗೆ ಯಿಟ್ಟಿದ್ದರು ಗೌಡ ಪೂಜಾರಿ ವಗೈಗೇರು ಕ್ಷಾಮದ ನಿರ್ಬಂಧ

91 ತಡಿಯಲಾರದೆ ದಿಕ್ಕು ಪಾಲಾದರೂ ಪುನಹಾ ಕ್ಷಾಮ ನಿವಾರಣೆಯಾದ ಕೂಡ್ಲೆ ಯಲ್ಲರೂ

92 ಕೂಡಿದರು ಆಗ ಮರದಲ್ಲಿಟ್ಟಿದ್ದ ದೇವರನ್ನು ಹುಡು[ಕು]ವದಕ್ಕೆ ಯಲ್ಲರೂ ಹೋದರೂ

93 ಅವರಿಗೆ ದೇವರು ಶಿಕ್ಕಲಿಲ್ಲಾ ಅಲ್ಲಿಗೆ ಹನ್ನೆರಡು ವರುಷವಾಯ್ತು ಆರು ತಿಂಗಳು

94 ದೇವರು ಶಿಕ್ಕಲಿಲ್ಲಾ ಆಗ ದೇವರ ಕಾಟಯ್ಯನಿಗೆ ದೇವರ ತಂದುಕೊಡೆಂದು ಹಿಂಸೆ

95 ಮಾಡಿಲಾಗಿ ಗೌಡನೇ ಮೊದಲಾದವರ ಹಿಂಸೆಗೆ ತಡಿಯಲಾರದೆ ದೇವರಕಾಟಯ್ಯನು

96 ಹಿರೇದೇವರು ಬಂದು ದೇವರು ತೋರಿಸುವದಕ್ಕೆ ಸದ್ರಿ ಹಿರೇದೇವರ ಪೂಜಾರಿ ದೇ

97 ವರ ಕಾಟಯ್ಯನು ಅದೇ ಹಾಸದ ಮರದ ಕೆಳಗೆ ಹೋಗಲಾಗಿ ಆ ಮರದ ಹರೆಯ

98 ಮೇಲೆ ವಬ್ಬ ಹುಡುಗನು ಏಳು ವರುಷದವನು ಅದರಲ್ಲಿದ್ದ ಜೇನು ತಿಂದುಕ್ಕೊಂಡು

99 ಜೀವಿಸುತ್ತಿದ್ದನು ಈ ಮರದಲ್ಲಿದ್ದ ದೇವರನ್ನೂ ಆ ಹುಡುಗನನ್ನೂ ಎಲ್ಲರೂ ತೆಗೆ

100 ದುಕ್ಕೊಂಡು ಬಂದು ಆ ಹುಡುಗನಿಗೆ ಗಾಳಿಗೌಡನೆಂದು ಹೆಸರಿಟ್ಟರು ಮತ್ತು ಯೀ

101 ಹುಡುಗನು ಯೀ ದೇವರನ್ನು ಕಾದುಕೊಂಡು ಯಿದ್ದ ಕಾರಣ ಅವಲ್ ದಾರಗೌಡನು ಗುಜ್ಜಲು

102 ಗೌಡನು ಸಹಾ ಸಂತೋಷಪಟ್ಟು ಮುಂದೆ ನಿನಗೆ ಗಾಳಿಗೌಡನೆಂದು ಹೆಸರು ಪಡದು ನಮ್ಮ

103 ಮಗನಂತೆ ಬಾವಿಸಿದ್ದೇವೆ ಮುಂದೆ ನೀನೂ ಗೌಡಿಕೆ ಮಾಡಬಹುದೆಂತ್ತ ವಪ್ಪಿಕೊಂಡರು

104 ದೇವರಕಾಟಯ್ಯನ ಹೊಟ್ಟೆಯಲ್ಲಿ ಬಾಗೋಜಿ ಹುಟ್ಟಿದನು ಯೀತನಿಗೆ ಪಟ್ಟಕಟ್ಟಿದರು

105 ಯೀತ್ನ ಹೊಟ್ಟೆಯಲ್ಲಿ ಕಾಟಪ್ಪ ಹುಟ್ಟಿದ ಯೀತನಿಗೆ ಪಟ್ಟವಾಯಿತು ಯೀತನ ಹೊಟ್ಟೆ

106 ಯಲ್ಲಿ ಬಾಗೋಜಿ ದೊಗ್ಗೋಜಿ ಯಿವರು ಹುಟ್ಟಿದರು ಯಿವರಿಬ್ಬರ ಪೈಕಿ ದೊಗ್ಗೋಜಿಗೆ

107 ಪಟ್ಟವಾಯ್ತು ಯಿವನ ಕಾಲಧಲ್ಲಿ ದೇವರು ಯೀತನು ಸಹ ನಾಯ್ಕನ ಹಟ್ಟಿಗೆ ಹೋದರು ನಂತ

108 ರ ದೊಗ್ಗೋಜಿ ಹೊಟ್ಟೆಯಲ್ಲಿ ದೇವರ ಕಾಟಪ್ಪ ಹುಟ್ಟಿದ ಯಿವನಿಗೆ ನಾಯ್ಕನಹಟ್ಟಿ ಹಿರೇಕೆರೆಯ

109 ಲ್ಲಿ ಪಟ್ಟವಾಯ್ತು ಈತನ ಹೊಟ್ಟೆಯಲ್ಲಿ ಗೊಂದ್ಯಪ್ಪ ಹುಟ್ಟಿದ ಯೀತನಿಗೆ ಪಟ್ಟವಾಯ್ತು

110 ಯೀತನ ಹೊಟ್ಟೆಯಲ್ಲಿ ಗೆಜ್ಜೆ ಕಾಟಪ್ಪ ಹುಟ್ಟಿ ಯಿವನಿಗೆ ಪಟ್ಟವಾಯ್ತು ಇದೇ ಗೊಂದಿ

111 ಹಳ್ಳಿ ಕಾಟಂದೇವರ ವಿಷಯದಲ್ಲಿ ನಾಯ್ಕನಹಟ್ಟಿ ಮ್ಯಾಸನಾಯ್ಕರಿಗೂ ಅವಲ್‌ದಾರನ

112 ವಂಶಸ್ಥನಾದಗ ಗೌಡ ಚನ್ನಮಲ್ಲಪ್ಪನಿಗೂ ವ್ಯಾಜ್ಯ ಬಂದು ದೇವರು ಗೊಂದಿಹಳ್ಳಿ ಗ್ರಾ

113 ಮಕ್ಕೆ ಹೋಯ್ತು ಗೆಜ್ಜೆ ಕಾಟಪ್ಪನ ಹೊಟ್ಟೇಲಿ ಕೋಲು ಕಾಟಪ್ಪ ಹುಟ್ಟಿದ ಯಿವನಿಗೆ

೫ನೆಯ ಪುಟ

114 ಗೋನೂರು ಹೊಳೆಯಲ್ಲಿ ಪಟ್ಟವಾಯ್ತು ಕೋಲು ಕಾಟಪ್ಪನ ಹೊಟ್ಟೆಯಲ್ಲಿ ಜಂಪಣ

115 ಹುಟ್ಟಿದ ಯಿವನಿಗೆ ಗೊಂದಿಹಳ್ಳಿಯಲ್ಲಿ ಪಟ್ಟವಾಯ್ತು ಇವನ ಹೊಟ್ಟೆಯಲ್ಲಿ ಬಾಗೋಜಿ ಹು

116 ಟ್ಟಿದ ಯಿವನಿಗೆ ಪಟ್ಟವಾಯ್ತು ಯಿವ್ನ ಹೊಟ್ಟೆಯಲ್ಲಿ ದೊಗ್ಗೋಜಿ ಹುಟ್ಟಿದ ಯಿವನಿಗೆ ಪಟ್ಟವಾ

117 ಯ್ಯು ದೊಗ್ಗೋಜಿ ಹೊಟ್ಟೆಯಲ್ಲಿ ಸಂಣಗೊಂದ್ಯಪ್ಪ ಹುಟ್ಟಿದ ಇವನಿಗೆ ಪಟ್ಟವಾಯ್ತು ಯೀತನ ಕಾ

118 ಲದಲ್ಲಿ ಮೆದಕ್ಕೇರಿನಾಯ್ಕನು ಸುತ್ತುಮುತ್ತಿನ ದೇವರುಗಳನ್ನೆಲ್ಲಾ ಕರಿಸಿಕ್ಕೊಂಡು ಪೂಜಾರಿ

119 ಸಹಿತ ದುರ್ಗಕ್ಕೆ ಕರಿಸಿಕ್ಕೊಂಡನು ಅಲ್ಲಿ ಕೆಲವು ಕಾಲ ದೇವರು ಇತ್ತು ಸಂಣಗೊಂದ್ಯಪ್ಪನ ಹೊ

120 ಟ್ಟೇಲಿ ಜಂಪಂಣ ಹುಟ್ಟಿದ ಯಿವನಿಗೆ ಪಟ್ಟವಾಯ್ತು ಇವನ ಹೊಟ್ಟೆಯಲ್ಲಿ ಬೊಮ್ಮಂಣ ಹು

121 ಟ್ಟಿದ ಯಿವನಿಗೆ ಪಟ್ಟವಾಯ್ತು ಯಿವನಿಗೆ ಗೋನೂರು ಹೊಳೆಯಲ್ಲಿ ಪಟ್ಟಮಾಡಿಕ್ಕೊಂಡು

122 ಅತ್ಯಂತ ವಿಜೃಂಭಣೆಯಿಂದಾ ದುರ್ಗದ ಪೇಟೆಯಲ್ಲಿ ದೇವರು ಹೋಗುತ್ತಿರುವಾಗ್ಯೆ ಬಾಜಾರದ

123 ಲ್ಲಿ ಕಸ್ತೂರಿನಾಯ್ಕನೆಂಬ ದೊರೆಯು ಕೈಯ್ಯಲ್ಲಿ ನಿಂಬೇಹಣ್ಣು ಮುಚ್ಚಿಕೊಂಡು ಹಿರೇದೇ

124 ವರ ಪೂಜಾರಿ ಬೊಮ್ಮಂಣನಿಗೆ ತರಬಿಕ್ಕೊಂಡು ತನ್ನ ಕೈಯಲ್ಲಿರುವದೇನು ಹೇಳೆಂತ್ತ ಕೇಳ

125 ಲಾಗಿ ಹಿರೇದೇವರ ಪೂಜಾರಿಯು ಸದ್ರಿ ದೊರೆಗೆ ನಿನ್ನ ಕೈಲಿ ನಿಂಬೇಹಂಣು ಇಧೆ ಯಂತ್ತ

126 ಹೇಳಲಾಗಿ ಯೀ ನಿಂಬೇಹಂಣಿನಲ್ಲಿ ಯಷ್ಟು ಬೀಜವಿಧೆ ಹೇಳುತ್ತ ಕೇಳಲಾಗಿ

127 ವಂದೇ ಬಿಜವಿಧೆಯಂತ್ತ ಪೂಜಾರಿ ಹೇಳಲಾಗಿ ಕೂಡ್ಲೆ ದೊರೆ ಕಸ್ತೂರಿ ನಾಯ್ಕನು

128 ತನ್ನ ಬಾಕಿನಿಂದ ನಿಂಬೇಹಣ್ಣನ್ನು ಕೊಯ್ದು ನೋಡಲಾಗಿ ವಂದೇ ಬಿಜವಿತ್ತು

129 ಅದಕ್ಕೆ ಮೆಚ್ಚಿ ತನ್ನ ರಾಣೇವಾಸದವರಿಂದ ಕೂಡ್ಲೆ ಮುತ್ತಿನ ಆರತಿಗಳನ್ನು ತರಸಿ ಬೆಳಗಿ

130 ಸಿದರು ಬೊಮ್ಮಂಣನ ಹೊಟ್ಟೆಯಲ್ಲಿ ಸಂಣಗೊಂದ್ಯಪ್ಪ ದೊಡ್ಡ ಗೊಂಡ್ಯಪ್ಪ ಯಿಬ್ಬ

131 ರು ಹುಟ್ಟಿದರು ಯಿವರ ಪೈಕಿ ದೊಡ್ಡಗೊಂದ್ಯಪ್ಪಗೆ ಪಟ್ಟವಾಯ್ತು ಯೀತನ ಕಾಲದಲ್ಲಿ

132 ಯಿವರ ಅಂಣತಮ್ಮಗಳು ತಮ್ಮ ಹವಿಕವಿ ಪ್ಯಾಟಿಯಲ್ಲಿ ನಡೆಯುವದಿಲ್ಲವೆಂತ್ತ

133 ಅಯಿನಹಳ್ಳಿ ಗ್ರಾಮಕ್ಕೆ ಹೋಗಿ ಸೋಮವಾರ ಬಾಯಿಭತ್ತನಡಿಸುತ್ತಾ ಇದ್ದರು ಅಲ್ಲಿ ದೇವ

134 ರ ಹಟ್ಟಿ ಯಂತ್ತ ಹೆಸರಿಟ್ಟುಕೊಂಡರು ತರುವಾಯ ನಾಯ್ಕನಹಟ್ಟಿ ವಾಶಿಗೆ ದೇವರು

135 ಹೋಗಬೇಕೆಂತ್ತ ಹಿರೇದೇವರ ಪೂಜಾರಿ ದೊಡ್ಡಗೊಂದ್ಯಪ್ಪನ್ನ ಕೇಳಲಾಗಿ ಆತನು ಯೀ

136 ಗ ಹೋದರೆ ವಳ್ಳೇದಾಗುವದಿಲ್ಲವೆಂತ್ತ ಹೇಳಿದ ಯೀ ರೀತಿ ಮೂರು ವರುಷ ಪೂಜಾರಿ ಬಿಡಿಸಿ

137 ದಾಗ್ಯೂ ಅಂಣತಮ್ಮಗಳು ಮುಷ್ಕರ ಮಾಡಿ ನಾಯ್ಕನಹಟ್ಟಿ ವಾಸಿಗೆ ಹೋಗಬೇಕೆಂತ್ತ

138 ನಿಶ್ಚಯಿಸಿ ದೇವರನ್ನು ಹಿರೇದೇವರ ಪೂಜಾರಿ ದೊಡ್ಡಗೊಂದ್ಯಪ್ಪನು ಸಹಾ ವ್ವಾಸಿಗೆ

139 ಹೋದರು ಆಗ್ಯೆ ದಾಯಾದಿಗಳು ಕೆಲವು ಮ್ಯಾಸನಾಯ್ಕರಿಗೆ ಸಹಾಯ ವಾದರು ಅವರು

140 ನಾಯ್ಕರು ಸಹಾ ಸೇರಿ ಜರಮಲೆ ಪಾಳ್ಯೆಗಾರರಿಗೆ ಸುದ್ದಿಕೊಟ್ಟರು ಜರಮಲೆಯಿಂದ

141 ಕುದುರೆ ಜನಗಳು ಸಹಾ ಬಂದು ದೇವರನ್ನು ಮುತ್ತಿಗೇ ಹಾಕಿದರು ದೇವರು ಸೂರೆಯಾಯ್ತು

142 ಹಿರೇದೇವರ ಪೂಜಾರಿಯು ಹಿರೇರು ಮಾಡಿದ ದೇವರು ಅನ್ಯಾಯವಾಗಿ ಹೋಗು

೬ನೆಯ ಪುಟ

143 ತ್ತೆಂತ್ತ ತಿಳಿದು ಪೆಟ್ಟಿಗೆಯಲ್ಲಿದ್ದ ಲಿಂಗುವನ್ನು ಉಡುದಟ್ಟಿಯಲ್ಲಿ ಸಿಗಿಸಿಕ್ಕೊಂಡು ಘಂಟೆ

144 ದೂಪಾರ್ತಿ ಕೈಲಿ ತೆಗೆದುಕ್ಕೊಂಡು ದುರ್ಗಕ್ಕೆ ಓಡಿ ಹೋಗುವಾಗ್ಯೆ ಯಿವನನ್ನು ಕಡಿಯಬೇ

145 ಕೆಂತ್ತ ಕುದುರೆಗಳನ್ನು ಹಿಂದುಬಿಟ್ಟುಕೊಂಡು ಬರುವಾಗ್ಯೆ ಕುದುರೆಗಳಿಗೆ ದಕ್ಕದೆ ಕತ್ತಿ

146 ಗಳಿಗೆ ಶಿಕ್ಕದಂತೆ ಬಾಯಿ ಮೂಗಿನಲ್ಲಿ ರಕ್ತವನ್ನು ಕಾರುತ್ತಾ ರಂಗೈನ ಬಾಗಿಲಿಗೆ ಬರಲಾಗಿ

147 ಬಾಗಿಲು ಮುಚ್ಚಿತು ವಳಗೆ ಹೋಗಲ್ಲ ಮಾರ್ಗವಿಲ್ಲದೆ ಕೋಟೆಯ ವಳಕ್ಕೆ ದೇವರ ಲಿಂಗುವ

148 ನ್ನು ಘಂಟೆ ದೂಪಾರ್ತಿಯನ್ನು ಎಸೆದುಬಿಟ್ಟನು ಯಿವನಿಗೆ ಅಲ್ಲಿ ಕಡಿದು ಬಿಟ್ಟರು

149 ಯೀ ಮಧ್ಯೆ ಹಿರೇದೇವರ ಪೂಜಾರಿಯ ಮೂರು ಜನ ಅಂಣತಮ್ಮಂದಿರನ್ನು ಮ್ಯಾಸ

150 ರು ಕಡಿದುಬಿಟ್ಟರು ಗುಜ್ಜಲೋಗು ವಂಶದವನನ್ನು ವಬ್ಬನಿಗೆ ಹೊಡೆದರು

151 ಅವಲ್‌ದಾರನ ವಂಶದವನಿಗೆ ವಬ್ಬನಿಗೆ ಕಡಿದುಹಾಕಿದರು ಇನ್ನೂ ಕೆಲವು ಜನ

152 ಗಳನ್ನೂ ಕಡದರು ದೇವರ ಪೂಜಾರಿ ತಲೆಹೋಗಬೇಕಾದರೆ ಕೋಟೆ ವಳಕ್ಕೆ

153 ಎಸದ ಲಿಂಗ ಘಂಟೆ ದೂಪಾರ್ತಿಯು ಅವಲ್‌ದಾರನ ವಂಶಸ್ಥನಿಗೆ ಶಿಕ್ಕಿತು ಆತನು

154 ನಮ್ಮ ದೇವರೆಂತ್ತ ಬಾವಿಸಿ ಸದ್ರಿ ಲಿಂಗುವನ್ನು ತಾನು ಬಚ್ಚಿಟ್ಟುಕೊಂಡನು ಯೀ ರೀತಿ

155 ಮೂವತ್ತುವರುಷ ನಡಿಯಿತು. ಆಗ ಜೋಹಿ ಹಟ್ಟಿಗೆ ಹೋಗಿ ದೇವರ ಪೂಜಾರಿ ಅಂಣತಮ್ಮ

156 ಗಳು ಕಾಟಪ್ಪನಿಗೆ ಪಟ್ಟ ಮಾಡಬೇಕೆಂಬ ದುರುಗಕ್ಕೆ ತಂದರು ಆಯತೋಳಲ್ಲಿ ಅವ

157 ಲ್‌ದಾರ್ನ ವಂಶಸ್ಥ ಕರಿಯಪ್ಪನೆಂಬುವನು ಯಜಮಾನ ಯಿದ್ದಾನೆ ಅವನನ್ನು ಕರತರಬೇ

158 ಕೆಂದು ನಿಶ್ಚಯಿಸಿ ಅವನನ್ನು ಕರತಂದು ಕಾಟಪ್ಪನಿಗೆ ಪಟ್ಟ ಆಗಬಹುದೆ ಬಾರದೇ

159 ಯಂತ್ತ ಪಂಚಾಯ್ತಿ ನಡಿಸಿದ್ದರಲ್ಲಿ ಹಿಂದಿನ ಹಿರೇದೇವರ ಪೂಜಾರಿ ವಂಶಸ್ಥರು

160 ನಾಯ್ಕನಹಟ್ಟಿಯಲ್ಲಿ ನಡೆದ ವ್ಯವಹಾರಕ್ಕೆ ಹೆದರಿ ಬರುವುದಿಲ್ಲ ಯೀತನಿಗೆ ಅವರ ಹೆಸ

161 ರಿನ ಮೇಲೆ ಸದ್ರಿ ಅಯಿನಹಳ್ಳಿ ದೇವರಮನೆಯವರ ದತ್ತು ಮಗ ಅನ್ನಿಸಿ ಗೋ

162 ನೂರು ಹೊಳೆಯಲ್ಲಿ ಪಟ್ಟ ಕಟ್ಟಿದರು ಯೀ ಜೋಗಿಹಟ್ಟಿ ಕಾಟಪ್ಪನಿಗೆ ಸಧ್ಯಕ್ಕೆ

163 ಪಟ್ಟಮಾಡಿರುತ್ತೆ ಮುಂದೆ ಹಿರೇದೇವರ ಪೂಜಾರಿ ವಂಶಸ್ಥರು ಯಾರಾದರೂ ಬಂದರೇ

164 ಅವರಿಗೇ ಪಟ್ಟವಾಗತಕ್ಕದ್ದೇ ಹೊರ್ರು ನಂತರ ಸದ್ರಿ ಜೋಗೀಹಟ್ಟಿ ಕಾಟಪ್ಪಗೆ ಆಗಿ

165 ಯೀತನ ವಂಶಸ್ಥರಿಗೆ ಆಗಲಿ ಸಲ್ಲತಕ್ಕದ್ದಲ್ಲವೆಂತ್ತ ತೀರ್ಪುಮಾಡಿದರು.

ಮೇಲಿನ ದಾಖಲೆಯ ಭಾಷೆ ತುಂಬ ಸರಳವಿದ್ದು ಅದರ ವಿಷಯವೆಲ್ಲ ಸ್ಪಷ್ಟವಾಗೇ ತಿಳಿಯುವಂತಿದೆ. ಆದರೂ ಇದನ್ನು ಸಂಕ್ಷಿಪ್ತಗೊಳಿಸಿ ಹೀಗೆ ಹೇಳಬಹುದು.

ಗೊಂದಿಹಳ್ಳಿ ಎಂಬಲ್ಲಿ ಗೊಲ್ಲ ಜನಾಂಗದ ಕಾಟಂದೇವರು ಎಂಬ ಹಿರೇದೇವರ ಪೂಜಾರಿಯಾಗಿದ್ದ ದೇವರಮನೆ ಕಾಟಯ್ಯ, ಸತ್ಯದ ನಡವಳಿಕೆಗೆ ಹೆಸರಾಗಿದ್ದನು. ಅವನು ಹಿಂದಿನ ಆರು ತಿಂಗಳಲ್ಲಿ ನಡೆದ ಮತ್ತು ಮುಂದಿನ ಆರು ತಿಂಗಳಲ್ಲಿ ನಡೆಯುವ ಸಂಗತಿಗಳನ್ನೂ ಯಾರೇ ಇರಲಿ ಅವರು ಉಂಡ ಊಟವನ್ನೂ ಕಂಡ ಕನಸನ್ನೂ, ಗರ್ಭದಲ್ಲಿರುವ ಪಿಂಡದ ಗುಣ ಲಕ್ಷಣಗಳನ್ನೂ ಹೇಳುತ್ತಿದ್ದನು. ಈತನ ಬಗ್ಗೆ ಕೇಳಿದ ಆನೆಗೊಂದಿ ದೊರೆಗಳು ಇದು ನಿಜವೇ ಎಂದು ಖುದ್ದು ಪರೀಕ್ಷೆ ಮಾಡಬೇಕೆಂದು ಪರಿವಾರ ಸಮೇತ ಕಾಟಯ್ಯನಿದ್ದ ಬಾಲೇನಹಳ್ಳಿ ಕಟ್ಟೆಮನೆಗೆ ಬಂದರು. ಆ ಆಶ್ಚರ್ಯಕರ ಸಂಗತಿಗಳನ್ನು ಹೇಳುವ ಗೌಡ ಯಾರು? ಎಂದು ಕೇಳಿದಾಗ ಕಾಟಯ್ಯ ಆ ವ್ಯಕ್ತಿ ನಾನೇ ಎಂದನು. ಆಗ ದೇವರೆ ಆವೇಶ ಬಂದ ಕಾಜಯ್ಯ ಹಿರೇದೇವರ ಮಹಿಮೆಯಿಂದ ತಾನು ಹಾಗೆ ಎಲ್ಲಾ ಹೇಳಬಲ್ಲವನಾಗಿದ್ದೇನೆ ಎಂದೂ ಹೇಳಿದನು. ಆಗ ದೊರೆ 'ನನ್ನ ಕುದುರೆಯ ಹೊಟ್ಟೆಯಲ್ಲಿ ಏನಿದೆ ಹೇಳು' ಎನ್ನಲು, ಕಾಟಯ್ಯನು 'ಪಂಚಕಲ್ಯಾಣಿ ಕುದುರೆ ಮರಿ ಇದೆ' ಎಂದು ಹೇಳಿ ಅದರ ಬಣ್ಣ ಮುಂತಾದ ಲಕ್ಷಣಗಳನ್ನು ಹೇಳಿದನು. ತಕ್ಷಣವೇ ದೊರೆ ಆ ಕುದುರೆಯ ಹೊಟ್ಟೆ ಯನ್ನು ಸೀಳಿಸಲಾಗಿ, ಎಲ್ಲ ಕಾಟಯ್ಯ ಹೇಳಿದ ರೀತಿಯಲ್ಲೇ ಇದ್ದುದು ಕಂಡು ಬಂತು. ಆ ಮೇಲೆ ಆ ಮರಿಯನ್ನು ತಾಯಿ ಹೊಟ್ಟೆಯಲ್ಲಿ ತುಂಬಿಸಿದ ಕಾಟಯ್ಯ ದೇವರ ಚಿತ್ತದಿಂದ ಅದನ್ನು ಇಳಿದೆಗೆದಾಗ ಅದು ಮೊದಲಿನಂತಾಯಿತು. ದೊರೆ ಮತ್ತು ಅಲ್ಲಿದ್ದ ಎಲ್ಲರೂ ಆಶ್ಚರ್ಯಪಟ್ಟರು.

ಆಮೇಲೆ ದೊರೆ 'ಪೂರ್ವದಿಂದಲೂ ಈ ದೇವರ ಪೂಜಾರಿಕೆ ಇದೇ ಕಾಟಯ್ಯನದೊ ಹೇಗೆ' ಎನ್ನಲು, ಸೇರಿದ ಜನಗಳೆಲ್ಲರೂ 'ದೇವರ ಪೂಜಾರಿಕೆ ಆರ್ಷೇಯ

ಕಾಲದಿಂದಲೂ ಈ ಕಾಟಯ್ಯನ ಮನೆತನದವರದ್ದೇ. ಆದ್ದರಿಂದ ತಾವು ಈ ಕಾಟಯ್ಯ ನಿಗೆ ಪಟ್ಟ ಮಾಡಿಸಿ, ಮುಂದೆ ಯಾವ ಕಾಲಕ್ಕೂ ಈತನ ವಂಶಸ್ಥರೇ ಪೂಜಾರಿಕೆ ನಡೆಸಿಕೊಂಡು ಬರುವಂತೆ ಮಾಡಬೇಕು ಎಂದು ಹೇಳಿದರು. ಅದಕ್ಕೆ ದೊರೆ ಸಮ್ಮತಿಸಿ, ಅವರ ಕುಲಗುರುಗಳಾರೆಂದು ಕೇಳಿ ಗೋಸೀಕೆರೆ ಈಶ್ವರಪ್ಪನವರಿಗೆ ನಿರೂಪ ಬರೆದು ಅವರನ್ನು ಕರೆಸಿಕೊಂಡನು. ಮೂರು ಕಟ್ಟೆ, ಸಾವಿರಾರು ದೈವಸ್ಥರು ಆಸುಪಾಸಿನ ೨೮೮ ದೇವರು ಎಲ್ಲಾ ಬಂದದ್ದಾಯಿತು. ಬಾಲೇನಹಳ್ಳಿ ಬಳಿಯ ಮೂಡಲಹೊಳೆಯಲ್ಲಿ ದೇವರಮನೆ ಕಾಟಯ್ಯನಿಗೆ ಪಟ್ಟವಾಯಿತು. ದೊರೆ ಅವನನ್ನು ವಿಜೃಂಭಣೆಯಿಂದ ಕರೆತಂದು, ಆ ಊರಿನಲ್ಲೆ ದೇವರನ್ನು ಮಾಡಿ, ನಡೆದದ್ದನ್ನೆಲ್ಲ ತಾಮ್ರಶಾಸನ ಮಾಡಿಸಿ, ಅದರಲ್ಲಿ ಮಂದೆ ಯಾವ ಕಾಲಕ್ಕೂ ಇವರ ವಂಶಸ್ಥರೇ ಪೂಜಾರಿಕೆ ಪಟ್ಟಕ್ಕೆ ಅರ್ಹರೆಂದು ತಿಳಿಸಿ, ಆನೆಗೊಂದಿಗೆ ತೆರಳಿದರು. ಮುಂದೆ ಅವರ ಕುದುರೆ ಅದೇ ಮರಿಯನ್ನು ಹಾಕಲು ದೊರೆ ಕಾಟಯ್ಯನ ಸತ್ಯವಾಕ್ಯಕ್ಕೆ ಮೆಚ್ಚಿ ಬಾಲೇನಹಳ್ಳಿಯ ಕಾಟಂಲಿಂಗ ದೇವರಿಗೆ ಹಗಲು ದೀವಟಿಗೆ, ಭೂಚಕ್ರದ ಕೊಡೆ ಇವನ್ನು ಕಳಿಸಿಕೊಟ್ಟನು.

ತರುವಾಯ, ದೇವರಮನೆ ಕಾಟಯ್ಯನ ಮಗ ದೊಡ್ಡಕಾಟಯ್ಯ, ಆಮೇಲೆ ಅವನ ಮಗ ಸಣ್ಣ ಜಂಪಣ್ಣ, ಆಮೇಲೆ ಅವನ ಮಗ ಬೊಮ್ಮಣ್ಣ, ಆಮೇಲೆ ಅವನ ಮಗ ಕೋಲುಕಾಟಯ್ಯ, ಆಮೇಲೆ ಅವರ ಮಗ ದೇವರ ಕಾಟಯ್ಯ, ಹೀಗೆ ಅನುಕ್ರಮವಾಗಿ ಇವರೆಲ್ಲ ಪೂಜಾರಿ ಪಟ್ಟದಲ್ಲಿ ಬಂದರು.

ಇಲ್ಲಿ ಕೊನೆಯಲ್ಲಿ ಬಂದ ದೇವರ ಕಾಟಯ್ಯನ ಕಾಲದಲ್ಲಿ ಕ್ಷಾಮಬಂತು. ಆಗ ದೇವರನ್ನು ಒಂದು ಹಾಸದ ಮರದ ಟೊಳ್ಳಿನೊಳಗೆ ಇಟ್ಟು, ಎಲ್ಲರೂ ದಿಕ್ಕಾಪಾಲು ಹೋದರು. ಕ್ಷಾಮನಿವಾರಣೆಯಾಗಿ ಪುನಃ ಎಲ್ಲರೂ ಕೂಡಿ ದೇವರನ್ನು ಹುಡುಕ ಬಂದಾಗ ಅದು ಅವರಿಗೆ ಸಿಕ್ಕಲಿಲ್ಲ. ಅಲ್ಲಿಗೆ ೧೨ ವರ್ಷ ೬ ತಿಂಗಳಾಗಿತ್ತು. ದೇವರಕಾಟಯ್ಯನಿಗೆ ದೇವರು ತಂದು ಕೊಡಬೇಕೆಂದು ಹಿಂಸೆ ಮಾಡಿದಾಗ, ಅವನ ಮೇಲೆ ಹಿರೇದೇವರು ಬಂದು ದೇವರನ್ನು ಹುಡುಕಲು ಅದೇ ಮರದ ಕೆಳಗೆ ಹೋದಾಗ, ಆ ಮರದ ಕೊಂಬೆಯೊಂದರ ಮೇಲೆ ಜೇನು ತಿಂದುಕೊಂಡು ಬದುಕಿದ್ದ ಏಳು ವರ್ಷದ ಹುಡುಗನೊಬ್ಬ ಕಂಡುಬಂದನು. ಅವನನ್ನು ಎಲ್ಲರೂ ಕರೆದುಕೊಂಡು ಬಂದು ಗಾಳಿಗೌಡ ಎಂದು ಹೆಸರಿಟ್ಟು, ಅವನು ದೇವರುಗಳನ್ನು ಕಾದುಕೊಂಡು ಬಂದಿದ್ದ ಕಾರಣ ಹವಲ್‌ದಾರ ಗುಜ್ಜಲಗೌಡ 'ನಿನ್ನನ್ನು ನಮ್ಮ ಮಗನಂತೆ ಭಾವಿಸಿದ್ದೇನೆ. ನೀನು ಮುಂದೆ ಗೌಡಿಕೆ ಮಾಡಬಹುದು' ಎಂದರು.

ಮುಂದೆ ದೇವರ ಕಾಟಯ್ಯನ ಮಗ ಬಾಗೋಜಿ, ಆಮೇಲೆ ಅವನ ಮಗ ಕಾಟಪ್ಪ, ಆಮೇಲೆ ಅವನ ಎರಡನೆಯ ಮಗ ದೊಗ್ಗೋಜಿ ಪಟ್ಟ ಹೊಂದಿದನು. ದೊಗ್ಗೋಜಿ ಮತ್ತು ದೇವರು ನಾಯ್ಕನಹಟ್ಟಿಗೆ ಹೋಗಿ ಅಲ್ಲಿ ನೆಲೆಸಿದರು. ಆಮೇಲೆ ಅವನ ಮಗ

ದೇವರಕಾಟಪ್ಪ, ಆಮೇಲೆ ಅವನ ಮಗ ಗೊಂದ್ಯಪ್ಪ, ಆಮೇಲೆ ಅವನ ಮಗ ಗೆಜ್ಜೆ ಕಾಟಪ್ಪ ಇವರು ಪಟ್ಟದಲ್ಲಿದ್ದರು. ಗೆಜ್ಜೆಕಾಟಪ್ಪನ ಕಾಲದಲ್ಲಿ ಗೊಂದಿಹಳ್ಳಿ ಕಾಟಂದೇವರ ವಿಷಯದಲ್ಲಿ ನಾಯ್ಕನಹಟ್ಟಿ ಮ್ಯಾಸ ನಾಯ್ಕರಿಗೂ ಹವಲ್‌ದಾರನ ವಂಶದ ಗೌಡ ಚನ್ನಮಲ್ಲಪ್ಪನಿಗೂ ವ್ಯಾಜ್ಯವಾಗಿ, ದೇವರು ಗೊಂದಿಹಳ್ಳಿ ಗ್ರಾಮಕ್ಕೆ ಹೋಯಿತು. ಆಮೇಲೆ ಗೆಜ್ಜೆಕಾಟಪ್ಪನ ಮಗ ಕೋಲುಕಾಟಪ್ಪ, ಆಮೇಲೆ ಅವನ ಮಗ ಜಂಪಣ್ಣ, ಆಮೇಲೆ ಅವನ ಮಗ ಬಾಗೋಜಿ, ಆಮೇಲೆ ಅವನ ಮಗ ದೊಗ್ಗೋಜಿ, ಆಮೇಲೆ ಅವನ ಮಗ ಸಣ್ಣಗೊಂದ್ಯಪ್ಪ ಇವರಿಗೆ ಪಟ್ಟ ನಡೆದು ಬಂತು.

ಈ ಸಣ್ಣಗೊಂದ್ಯಪ್ಪನ ಕಾಲದಲ್ಲಿ ಚಿತ್ರದುರ್ಗದ ದೊರೆ ಮದಕ್ಕೇರಿನಾಯ್ಕನು ಸುತ್ತಲ ದೇವರುಗಳನ್ನೆಲ್ಲ ಪೂಜಾರಿಗಳ ಸಮೇತ ದುರ್ಗಕ್ಕೆ ಕರೆಸಿಕೊಂಡಾಗ, ದೇವರು ಸ್ವಲ್ಪ ಕಾಲ ಅಲ್ಲೇ ಇತ್ತು. ಆಮೇಲೆ ಸಣ್ಣಗೊಂದ್ಯಪ್ಪನ ಮಗ ಜಂಪಣ್ಣ, ಆಮೇಲೆ ಅವನ ಮಗ ಬೊಮ್ಮಣ್ಣ ಇವರು ಪಟ್ಟಪಡೆದರು. ಈ ಬೊಮ್ಮಣ್ಣನಿಗೆ ಗೋನೂರು ಹೊಳೆಯಲ್ಲಿ ಪಟ್ಟವಾಗಿ, ವಿಜೃಂಭಣೆಯಿಂದ ದೇವರು ಸಹಿತ ದುರ್ಗದ ಪೇಟೆಯಲ್ಲಿ ಹೋಗುತ್ತಿರುವಾಗ್ಗೆ, ಬಾಜಾರದಲ್ಲಿ ಕಸೂರಿನಾಯ್ಕ ಎಂಬ ದೊರೆ ತನ್ನ ಕೈಯಲ್ಲಿ ನಿಂಬೆಹಣ್ಣು ಮುಚ್ಚಿಟ್ಟುಕೊಂಡು, ಈ ಪೂಜಾರಿಯನ್ನು ತರುಬಿಕೊಂಡು, 'ನನ್ನ ಕೈಯಲ್ಲೇನಿದೆ ಹೇಳು' ಎಂದಾಗ ಅವನು 'ನಿನ್ನ ಕೈಯಲ್ಲಿ ನಿಂಬೇಹಣ್ಣು ಇದೆ' ಎಂದನು. ಆಗ ದೊರೆ 'ಅದರಲ್ಲಿ ಎಷ್ಟು ಬೀಜವಿಗೆ, ಹೇಳು' ಎಂದು ಕೇಳಿದ್ದಕ್ಕೆ ಪೂಜಾರಿ 'ಒಂದೇ ಬೀಜವಿದೆ' ಎಂದನು. ದೊರೆ ಕೂಡಲೇ ತನ್ನ ಬಾಕಿನಿಂದ ಆ ಹಣ್ಣನ್ನು ಕೊಯ್ದು ನೋಡಲಾಗಿ ಅದರಲ್ಲಿ ಒಂದೇ ಬೀಜವಿತ್ತು. ಅವನು ಮೆಚ್ಚಿ ತನ್ನ ರಾಣೀವಾಸದವರಿಂದ ಅವನಿಗೆ ಮುತ್ತಿನ ಆರತಿ ತರಿಸಿ ಬೆಳಗಿಸಿದನು.

ಮುಂದೆ ಈ ಬೊಮ್ಮಣ್ಣನ ಮಗ ದೊಡ್ಡಗೊಂದ್ಯಪ್ಪನಿಗೆ ಪಟ್ಟವಾಯಿತು. ಅವನ ಅಣ್ಣತಮ್ಮಗಳು ತಮ್ಮ 'ಹವಿಕವಿ' ಪಟ್ಟಣದಲ್ಲಿ ನಡೆಯುವುದಿಲ್ಲವೆಂದು, ಅಯ್ಯನ ಹಳ್ಳಿ ಗ್ರಾಮಕ್ಕೆ ಹೋಗಿ, ಅಲ್ಲಿ ದೇವರಹಟ್ಟಿ ಅಂತ ಹೆಸರಿಟ್ಟುಕೊಂಡು ಒಂದು ವಾಸದ ನೆಲೆ ಮಾಡಿಕೊಂಡನು.

ಹೀಗೇ ಇರುವಾಗ, ನಾಯ್ಕನಹಟ್ಟಿ ವಾಸೆಗೆ ದೇವರು ಹೋಗಬೇಕೆಂದು ಎಲ್ಲರೂ ಪೂಜಾರಿ ದೊಡ್ಡಗೊಂಡಪ್ಪನನ್ನು ಕೇಳಿದಾಗ, ಅವನು 'ಈಗ ಹೋದರೆ ಒಳ್ಳೆಯದಾಗುವುದಿಲ್ಲ' ಎಂದು ಹೇಳಿದನು. ಈ ರೀತಿ ಮೂರು ವರ್ಷ ಅಲ್ಲಿಗೆ ಹೋಗುವುದನ್ನು ತಪ್ಪಿಸಿದಾಗ ಅಣ್ಣತಮ್ಮಗಳು ಮುಷ್ಕರಮಾಡಲು, ದೇವರು ಮತ್ತು ಪೂಜಾರಿ ನಾಯ್ಕನಹಟ್ಟಿಗೆ ವಾಸೆಗೆ ಹೋಗಬೇಕಾಯಿತು. ಆಗ ದಾಯಾದಿಗಳೂ ಕೆಲವರು ಮ್ಯಾಸನಾಯ್ಕರಿಗೆ ಸಹಾಯವಾದರು. ಅವರು ಜರಮಲೆ ಪಾಳೆಯಗಾರರಿಗೆ ಸುದ್ದಿಕೊಡಲು, ಅಲ್ಲಿಂದ ಕುದುರೆ ಜನ ಬಂದು ದೇವರನ್ನು ಮುತ್ತಿದರು, ದೇವರ

ಸೂರೆಯಾಯಿತು. ಪೂಜಾರಿ ಹಿರಿಯರು ಮಾಡಿದ ದೇವರು ಅನ್ಯಾಯವಾಗಿ ಹೋಗುತ್ತಲ್ಲಾ ಎಂದು ಪೆಟ್ಟಿಗೆಯಲ್ಲಿದ್ದ ಲಿಂಗುವನ್ನು ತನ್ನ ಉಡುದಟ್ಟಿಯಲ್ಲಿ ಸಿಕ್ಕಿಸಿಕೊಂಡು ಗಂಟೆ ಧೂಪಾರತಿಯನ್ನು ಕೈಯಲ್ಲಿ ತೆಗೆದುಕೊಂಡು, ದುರ್ಗಕ್ಕೆ ಓಡಿದನು. ಇವರನ್ನು ಕಡಿಯಬೇಕೆಂದು ಕುದುರೆಯವರು ಬೆನ್ನಟ್ಟಿ ಬಂದಾಗ, ಅವರ ಕತ್ತಿಗೆ ಸಿಕ್ಕದಂತೆ ಓಡುತ್ತಾ ಬಾಯಿ ಮೂಗುಗಳಲ್ಲಿ ರಕ್ತಕಾರುತ್ತಾ, ದುರ್ಗದ ಕೋಟೆಯ (ಮೊದಲ ಹೆಬ್ಬಾಗಿಲು) ರಂಗಯ್ಯನ ಬಾಗಿಲಿಗೆ ಬರಲಾಗಿ ಬಾಗಿಲು ಮುಚ್ಚಿತು. ಒಳಗೆ ಹೋಗಲು ಮಾರ್ಗವಿಲ್ಲದೆ ಕೋಟೆಯ ಒಳಕ್ಕೆ ದೇವರ ಲಿಂಗುವನ್ನೂ ಗಂಟೆದೂಪಾರತಿಗಳನ್ನೂ ಎಸೆದನು, ಅಷ್ಟರಲ್ಲಿ ಅವನನ್ನು ಕಡಿದರು. ಈ ಮಧ್ಯೆ ಈ ಪೂಜಾರಿಯ ಮೂರು ಜನ ಅಣ್ಣ ತಮ್ಮಂದಿರನ್ನೂ ಇತರ ಕೆಲವರನ್ನೂ ಕಡಿದರು.

ಪೂಜಾರಿ ದುರ್ಗದ ಕೋಟೆಯೊಳಕ್ಕೆ ಎಸೆದ ಲಿಂಗ ಗಂಟೆ ಧೂಪಾರತಿಗಳು ಹವಲ್‌ದಾರನ ವಂಶದವನೊಬ್ಬನಿಗೆ ಸಿಕ್ಕಿ, ಆತ ಅದು ತಮ್ಮ ದೇವರು ಎಂದು ಗುರುತಿಸಿ ಅದನ್ನು ಬಚ್ಚಿಟ್ಟುಕೊಂಡರು. ಹೀಗೆ ಮೂವತ್ತು ವರ್ಷ ಸಾಗಿತು. ಆಗ ಪೂಜಾರಿ ಮನೆತನದ ಅಣ್ಣತಮ್ಮಗಳು ಪಟ್ಟಮಾಡಬೇಕೆಂದು ಜೋಗಿ ಹಟ್ಟಿಗೆ ಹೋಗಿ ಕಾಟಪ್ಪ ಎಂಬುವನನ್ನು ದುರ್ಗಕ್ಕೆ ಕರೆತಂದರು. ಆಯಿತೋಳು ಗ್ರಾಮದಲ್ಲಿ ಯಜಮಾನನಾಗಿದ್ದ ಹವಲ್‌ದಾರ ವಂಶಸ್ಥ ಕರಿಯಪ್ಪ ಎಂಬುವನನ್ನು ಕರೆತಂದು, ಹಿಂದಿನ ಹಿರೇದೇವರ ಪೂಜಾರಿಯ ವಂಶಸ್ಥರು ಹಿಂದೆ ನಾಯ್ಕನಹಟ್ಟಿಯಲ್ಲಿ ನಡೆದ ಘಟನೆಯಿಂದ ಹೆದರಿ ಯಾರೂ ಬರುತ್ತಿಲ್ಲವಾಗಿ, ಈ ಕಾಟಪ್ಪನನ್ನೇ ಆ ವಂಶದ ದತ್ತು ಮಗನಾಗಿ ಮಾಡಿ ಗೋನೂರು ಹೊಳೆಯಲ್ಲಿ ಪಟ್ಟ ಮಾಡಿದರು. ಮುಂದೆ ಯಾರಾದರೂ ಹಿರೇದೇವರ ಪೂಜಾರಿವಂಶಸ್ಥರು ಬಂದದೆ ಅವರಿಗೆ ಪಟ್ಟ ಮುಂದು ವರಿಯುತ್ತದೆ ಹೊರತು ಈ ಕಾಟಪ್ಪನಿಗಾಗಲಿ ಅವನ ವಂಶದವರಿಗಾಗಲಿ ಅಲ್ಲ ಎಂದೂ ತೀರ್ಪು ಮಾಡಿದರು.

ಈ ಮೇಲಿನ ವಿವರವನ್ನು ಪರಿಶೀಲಿಸಿದರೆ, ಮುಖ್ಯವಾಗಿ ಇದು ಗೊಲ್ಲ ಜನಾಂಗದವರ ಒಂದು ದೇವರ ಪಟ್ಟ, ಕಾಲದ ಸುದೀರ್ಘಾವಧಿಯಲ್ಲಿ ಸಾಗಿ ಬಂದದ್ದರ ಒಂದು ದಾಖಲೆಯಾಗಿರುವುದು ಕಂಡುಬರುತ್ತದೆ. ಇದು ಯಾವ ಕಾಲದಿಂದ ಯಾವ ಕಾಲದವರೆಗಿನ ಘಟನಾವಳಿಗಳನ್ನೊಳಗೊಂಡಿದೆ ಎಂಬುದು ನಿರ್ದಿಷ್ಟವಾಗಿ ಹೇಳಲ್ಪಟ್ಟಿಲ್ಲ. ಇದರಲ್ಲಿ ಪ್ರಾರಂಭಕ್ಕೆ ಬರುವ ಆನೆಗೊಂದಿ ಅಥವಾ ವಿಜಯನಗರದ ದೊರೆ ಯಾರು ಎಂಬ ಬಗ್ಗೆಯೂ ಕೂಡಾ ಸ್ಪಷ್ಟವಾಗುವುದಿಲ್ಲ. ೧೬೫ ಸಾಲುಗಳ ಈ ದಾಖಲೆಯಲ್ಲಿ ೭೪ ಸಾಲುಗಳವರೆಗೆ, ಅಂದರೆ ಸುಮಾರು ಅರ್ಧದಷ್ಟು ಭಾಗದವರೆಗೆ, ವಿಜಯನಗರದ ದೊರೆಯ ಪ್ರಸ್ತಾಪ ಬಂದಿದೆ. ಈ ಮೊದಲೇ ತಿಳಿಸಿದಂತೆ ಇದರಲ್ಲಿ ಪ್ರಾರಂಭದಲ್ಲಿ ಬರುವ ಗಬ್ಬದ ಕುದುರೆಯ ಹೊಟ್ಟೆಸೀಳಿ ಮತ್ತೆ ಮುಚ್ಚಿ ಮೊದಲಿನಂತೆ ಮಾಡುವ ಪ್ರಸಂಗ, ಅರ್ಥಾತ್ ದೇವರ ಮನೆ ಕಾಟಯ್ಯನು ಭೂತ ಭವಿಷ್ಯದ್ವರ್ತಮಾನದ

ವಿದ್ಯಮಾನಗಳ ಬಗ್ಗೆ ಹೇಳುವ ಅಸಾಧಾರಣ ಶಕ್ತಿ ಹೊಂದಿದ್ದನೆಂಬ ಸಂಗತಿಯ ಕಥನ, ಆ ಮನೆತನದವರು ಗೊಲ್ಲ ಜನಾಂಗದಲ್ಲಿ ಅತಿ ನೈಸರ್ಗಿಕ ಶಕ್ತಿಯುಳ್ಳವರಾಗಿದ್ದರೆಂಬ ಚಿತ್ರಣ ಸಾಮಾನ್ಯ ಸ್ಥಿತಿಯಲ್ಲಿ ನಂಬಲು ಕಷ್ಟಕರವಾದ ಅಂಶಗಳಾಗಿವೆ.

ಇಂಥದ್ದೇನಾದರೂ ವಿಶೇಷ ಶಕ್ತಿ ಇರುವವರ ಬಗ್ಗೆ ಕೇಳಿದಾಗ ವಿಜಯನಗರದ ಅರಸರು ಅದಕ್ಕೆ ಹೇಗೆ ಪ್ರತಿಕ್ರಿಯಿಸುತ್ತಿದ್ದರೆಂಬ ಅಂಶವನ್ನು ಮನಸ್ಸಿಗೆ ತರುವಂತಿದೆ, ಪ್ರಾರಂಭದಲ್ಲಿ ಬರುವ ಕುದುರೆಯ ಪ್ರಸಂಗ. ನಾಯಕನಹಟ್ಟಿ ಪಾಳೆಯಗಾರರ ಮೂಲಪುರುಷನೂ ಪಶುಪಾಲಕ ವೃತ್ತಿಯವನೂ ಆದ ಕಾಟಿಮಲ್ಲನಾಯಕನ ಅತಿಶಯದ ಬಗ್ಗೆ ಕೇಳಿದಾಗ, ಆಗ ಇದ್ದ ವಿಜಯನಗರದ ರಾಜನ ಕಡೆಯಿಂದ ಅವನ ವಿಶೇಷ ಸಾಮರ್ಥ್ಯದ ಪರೀಕ್ಷೆ ನಡೆದು, ಅವನು ಅದರಲ್ಲಿ ಯಶಸ್ವಿಯಾಗಿ ದೊರೆಯಿಂದ ಸಮ್ಮಾನಿತನಾದುದನ್ನು 'ನಾಯಕನಹಟ್ಟಿ ದೊರೆಗಳ ವಂಶಾವಳಿ' ಹೇಳುತ್ತದೆ. ಈ ಮೇಲಿನ ದಾಖಲೆ ತಿಳಿಸುವಂಥ ದೇವರಮನೆ ಕಾಟಯ್ಯನಂಥ ವ್ಯಕ್ತಿಯೊಬ್ಬನಿದ್ದು, ವಿಜಯನಗರದ ದೊರೆಗಳು ಅವನ ವಿಶೇಷ ಶಕ್ತಿಯನ್ನು ಪರೀಕ್ಷೆ ಮಾಡಲು ತಾವೇ ಖುದ್ದಾಗಿ ಬಂದಿರಬಹುದೆ? ಗಬ್ಬದ ಕುದುರೆಯ ಹೊಟ್ಟೆಯೊಳಗಿನ ಮರಿಯ ಲಕ್ಷಣವನ್ನು ದೇವರಮನೆ ಕಾಟಯ್ಯನು ನಿಜವಾಗಿಯೂ ಹೇಳಿರಬಹುದೆ? ದೊರೆ ಕುದುರೆಯ ಹೊಟ್ಟೆ ಸೀಳಿಸಿ ಪರೀಕ್ಷೆ ಮಾಡಿದ್ದು ನಡೆದದ್ದು ಎಂದಿಟ್ಟು ಕೊಂಡರೂ, ಕುದುರೆಯ ಹೊಟ್ಟೆ ಸೀಳಿ ಹೊರತೆಗೆದ ಮರಿಯನ್ನು ಮತ್ತೆ ಹೊಟ್ಟೆ ಯೊಳಗೆ ಮುಚ್ಚಿ ಮೊದಲಿನಂತೆ ಮಾಡಿದನೆನ್ನುವ ಪವಾಡದ ಘಟನೆ ನಮ್ಮ ನಂಬಿಕೆಯ ಸೀಮೆಯನ್ನು ಮೀರಿದ್ದಾಗಿದೆ.

ಹಾಗೇ ಏಳು ವರ್ಷಗಳ ಕಾಲ ಜೇನು ಕುಡಿದೇ ಮರದ ಕೊಂಬೆಯ ಮೇಲೆ ವಾಸ ಮಾಡಿದ್ದನೆನ್ನುವ ಬಾಲಕನ ವೃತ್ತಾಂತವೂ ಹಾಗೇ ಕಾಣುತ್ತದೆ. ಅದೇನೇ ಇದ್ದರೂ ವಿಜಯನಗರದ ದೊರೆಗಳು ನಮ್ಮ ಜನಗಳ ಅಥವಾ ಜನಪದರ ಕಣ್ಣಲ್ಲಿ ಹೇಗೆ ಅಭಿಮಾನಾಸ್ಪದವಾಗಿದ್ದರು ಮತ್ತು ಆ ಅರಸರು ಯಾರಾದರೊಬ್ಬರಿಗೆ ಮನ್ನಣೆ ನೀಡಿದರೆಂದರೆ ಹೇಗೆ ಆ ವ್ಯಕ್ತಿಗೆ ಅದು ವರ್ಚಸ್ಸಿನ ಗುರುತಾಗಿ ಅಂಗೀಕೃತವಾಗುತ್ತಿತ್ತು ಎಂಬ ಸೂಕ್ಷ್ಮ ಅಂಶವನ್ನು ಇಲ್ಲಿ ಗಮನಿಸಬಹುದು. ಈ ದಾಖಲೆ ವಿಜಯನಗರದ ಚರಿತ್ರೆಗೆ ಹೆಚ್ಚಿನ ಅಂಶವನ್ನೇನೂ ನೀಡುವುದಿಲ್ಲವಾದರೂ, ಆ ಅರಸರು ನಮ್ಮ ಜನಪದರ ಮನಸ್ಸಲ್ಲಿ ಹೇಗೆ ತೇಜಶ್ಶಾಲಿಗಳಾಗಿ 'ದಂತಕಥೆ'ಯೋಪಾದಿಯಲ್ಲಿ ನಿಂತಿದ್ದರು, ಅವರು ನೀಡುತ್ತಿದ್ದ ಮನ್ನಣೆ ಕೂಡಾ ಹೇಗೆ ಮಹತ್ತ್ವದಾಗಿ ಪರಿಗಣಿತ ವಾಗುತ್ತಿತ್ತು ಎಂಬ ಸಂಗತಿಗಳನ್ನಂತೂ ಇದು ಹೇಳುತ್ತದೆ ಎನ್ನಬಹುದು.

೧೬. ವಿಜಯನಗರದ ಅರಸರು ಕುರುಬ ರಾವುತ ವೀರನೊಬ್ಬನಿಗೆ ನೀಡಿದವೆನ್ನಲಾದ ಮೂರು ನಿರೂಪಗಳು

ಡಾ.ಬಿ. ರಾಜಶೇಖರಪ್ಪ


ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಶ್ರೀರಾಂಪುರದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿದ್ದ (ಒಂದು ಕಾಲದ ನನ್ನ ವಿದ್ಯಾರ್ಥಿ) ಶ್ರೀ ಬಿ. ಈಶ್ವರಪ್ಪನವರು, ಅದೇ ತಾಲ್ಲೂಕಿನ ಕಸಬಾ ಹೋಬಳಿಯ ಕಪ್ಪಗೆರೆ ಗ್ರಾಮದ ಗೌಡರ ಮನೆತನದ ಶ್ರೀ ಪಟೇಲ್ ತಿಪ್ಪಯ್ಯ (ಈಗ ೭೫, ಇವರು ಕುರುಬ ಜನಾಂಗದವರು) ಅವರಲ್ಲಿದ್ದ ಎರಡು ಚಿಕ್ಕ (೧೩ ಸೆಂ.ಮೀ. ಉದ್ದ ಮತ್ತು ೫½ ಸೆಂ.ಮೀ. ಅಗಲ ಇರುವ) ತಾಳೇಗರಿಗಳು ಕಟ್ಟುಗಳನ್ನು ಅವರ ವಿದ್ಯಾರ್ಥಿಯಾಗಿದ್ದ ಶ್ರೀ ರವಿ ಎಂಬುವರ ಮೂಲಕ ಸಂಗ್ರಹಿಸಿ, ಈಗ್ಗೆ ಕೆಲವು ವರ್ಷಗಳ ಹಿಂದೆ, ಅಧ್ಯಯನ ಮಾಡಲು ನನಗೆ ನೀಡಿದ್ದರು. ಅವುಗಳ ಲಿಪಿ ಕ್ರಿ.ಶ. ಸುಮಾರು ೧೮-೧೯ನೆಯ ಶತಮಾನದ್ದೆಂಬಂತೆ ಕಂಡುಬಂದಿತು. ಅವುಗಳಲ್ಲೊಂದರ ಆರಂಭದಲ್ಲಿ 'ತಾಂಬ್ರ ಶಾಸನದ ನಕಲೂ' ಎಂದು ಬರೆದಿದ್ದುದು ತೀವ್ರ ಕುತೂಹಲ ಉಂಟು ಮಾಡಿತು. ವಾಸ್ತವವಾಗಿ ಅವುಗಳಲ್ಲಿದ್ದುದು ಕೆಲವು ನಿರೂಪಗಳ ಪ್ರತಿಗಳು. ಅವುಗಳ ಮೂಲಪ್ರತಿಗಳನ್ನು ತಾಮ್ರದ ಫಲಕಗಳ ಮೇಲೆ ಕೆತ್ತಿರಬೇಕು; ಹಾಗಾಗಿ ಅವನ್ನು 'ತಾಮ್ರಶಾಸನಗಳ ನಕಲು' ಎಂದು ಕರೆದಿರಬೇಕು. ಕನ್ನಡ ಲಿಪಿ ಮತ್ತು ಭಾಷೆಯಲ್ಲಿ ರುವ ಅವುಗಳ ಪಾಠದಲ್ಲಿ ಕಾಗುಣಿತ ದೋಷ ವಾಕ್ಯರಚನಾ ದೋಷಗಳಿದ್ದರೂ ಅವುಗಳ ಒಟ್ಟಾರೆ ಅಭಿಪ್ರಾಯವನ್ನು ಗ್ರಹಿಸ ಬಹುದಾಗಿದೆ. ಇದಲ್ಲದೆ ಇವುಗಳಲ್ಲಿ ಹೇಳಿದಂತೆ ವಿಜಯನಗರದ ದೊರೆಗಳ ವಂಶವಿವರಕ್ಕೆ ಮತ್ತು ಈವರೆಗೆ ತಿಳಿದು ಬಂದಿರುವ ವಂಶವಿವರಕ್ಕೆ ಹಾಗೆಯೇ ಶಕವರ್ಷ ಸಂಖ್ಯೆಗಳಿಗೆ ಮತ್ತು ಸಂವತ್ಸರಗಳಿಗೆ ಪರಸ್ಪರ ಹೊಂದಾಣಿಕೆ ಇಲ್ಲವಾದರೂ, ಇವುಗಳಲ್ಲಿ ಮೊದಲ ಎರಡು ನಿರೂಪಗಳ ಪಾಠ ಪೂರ್ಣವಾಗಿ ದೊರಕಿದ್ದು ಕೊನೆಯದರ ಪಾಠ ಅಪೂರ್ಣವಾಗಿದ್ದರೂ, ಇವುಗಳ ಬಗ್ಗೆ ಸಂದೇಹವುಂಟಾಗುವುದಾದರೂ, ಇವು ವಿಜಯನಗರ ಕಾಲದಲ್ಲಿ ನಡೆದವೆನ್ನ ಲಾದ ಕೌತುಕಕಾರಿ ಘಟನೆಗಳನ್ನು ಹೇಳುವುದರಿಂದ ಇವನ್ನು ಮುಂದಿನ ಪರಾಮರ್ಶೆ ಗಾಗಿ ಸಾದರಪಡಿಸುವುದು ಹೇಗೂ ಸೂಕ್ತವೆನಿಸಿದ್ದರಿಂದ ಇಲ್ಲಿ ಈ ಕೆಲಸವನ್ನು ಮಾಡುತ್ತಿದ್ದೇನೆ.

ಅವುಗಳಲ್ಲಿ ಮೊದಲನೆಯದರ ಪಾಠ ಹೀಗಿದೆ :

ತಾಂಬ್ರ ಶಾಸನದ ನಕಲೂ

1 ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷಂಗಳು ೧೭೨೨ನೇ
2 ಕಾಳಾಯುಕ್ತಿ ಸಂವತ್ಸರದ ಆಶ್ವೀಜ ಶು ೨ ಲ್ಲು ಶ್ರೀಮದ್ರಾಜಾದಿರಾಜ ಪರ
3 ಮೇಶ್ವರ ಪ್ರಭುಡ ಪ್ರತಾಪ ವೀರನರಪತಿ ಭಾರದ್ವಜ ಗೋತ್ರರಾದಂತ್ತಾ |
4 ರುಕುಶಾಖೆಯ ರಾಮರಾಯರ್‍ಯೆಯನವರ ಪೌತ್ರರಾದ | ಅಚ್ಚು
5 ತರಾಯರ್‍ಯೆಯ್ಯನವರ ಪುತ್ರರಾದಂತಾ | ಕೃಷ್ಣರಾಯ
6 ರ್‍ಯೆಯ್ಯನವರು | ವಿಜಯನಗರದ ಪಟ್ಟಣದಲ್ಲು | ರತ್ನ
7 ಶಿಂಹ್ವಾಸನರೂಢರಾಗಿ | ಪೃಥ್ವೀ ಸ್ತಿರ ಸಾಂಬ್ರಾಜ್ಯಂಗೈ ಉ
8 ತಿರಲು | ಶ್ರೀಮತು ಹಂಡೆ ಧನುಗರ ತಿಂಮರಾಉತಗೆ ಬರಸಿ
9 ಕೊಟ್ಟ ನಿರೂಪಾ | ಅದಾಗಿ | ನಾವು ನವರಾತ್ರ ಕಾಲದಲ್ಲಿ ಯೇಳನೇ
10 ದಿವಸದಲ್ಲಿ | ವ್ಯಾಗ್ರನ ತರಿಸಿ ಚೌಕದ ಕೊಣ ನಾಲ್ಕನೇ ಮಾರ್‍ರಿನಲ್ಲು |
11 ಸರ್ಪನ ಹಾಕಿಸಿ | ಯಿೂ ಸರ್ಪನ ಮೆಟ್ಟಿ ಕೊಂದು | ವೆಗ್ರನ ಕೊಂದ
12 ವಗೆ ಬೇಡಿದ ಯಿಷ್ಟಾರ್ಥವ ಕೊಟ್ಟೇವೆಂದು ನಂಮ ಹಂನೆರ
13 ಡು ಸಾವಿರ ವಜ್ಜೀರರ ಬಳಿಯಲ್ಲು ಸಾರ್‍ರಿಸಲು | ನೀನು ಬಂದೂ
14 ಸಂ ಮುಖದಲ್ಲು ನಿಂತು | ಪಟ್ಟಿ ವೀಳ್ಯವ ಹಿಡಿದು | ಸರ್ಪನ ಮೆಟ್ಟಿ
15 ವೆಗ್ರನ ಕೊಂದು | ಸರ್ಪನ ಕೊಂದು | ಸಮುಕಕ್ಕೆ ಬಂದು ಸಲಾ
16 ಯು ಮಾಡಿ ನೀ ನಿಂತು ಕೇಳಿಕೊಂಡ ವಿವರಾ || ನಂಮಲ್ಲಿ | ಹೆಂಣಿ
17 ಗೆ ೧೦೧ ವರಹ ತೆರೆ | ಅರಮನಿಗೆ ಸುಂಕ ಯೇಳು ವರ | ಉಭಯಂ
18 | ೧೦೮ ವರಹ ಆದ ಕಾರಣ | ಹೆಂಣ ತರುವವರು ಯಿಲ್ಲ | ಗಂಡು
19 ಗಳಿಗೆ ಮದುವೆಯಿಲ್ಲ | ಯೀ ನೂರೊಂದು ವ
20 ರಹ ತೆರೆ ಬಿಡಿಸಿ | ನಿಂಮ ಅರಮನೆಗೆ ಸಲುವ ಯೇಳು
21 ವರಹನೆ ತೆರೆ ಮಾಡಿಸಿ | ಪಾಲಿಸಬೇಕೆಂದು ಕೇಳಿಕೊಂಡ ಕಾರಣ ಅ
22 ದೇ ಪ್ರಕಾರಕ್ಕೆ ೧೦೧ ವರಹ ತೆರೆ ಬಿಡಿಸಿ | ನಯ ಅರಮನೆಗೆ ಸಲು
23 ವ ಯೇಳು ವರಹನೆ ತೆರೆ ಮಾಡಿಸಿ | ಸೂರ್‍ಯ್ಯಚೆಂದ್ರಾದಿಗಳುಳ್ಳ ಪ
24 ರ್‍ರಿಯಾಂತ್ರಕ್ಕು | ನಿರ್ವಾರ್ಥವಾಗಿ ನಡಸಿಕೊಂಡು ಬರುವದು ಯಂ

25 ದು ಬರಸಿಕೊಟ್ಟ ನಿರೂಪ | ಯೀ ಧರ್ಮದ ನಿರೂಪಕ್ಕೆ ಆವನೊಬ್ಬನಾದರು
26 ಶಂಕೆ ಮಾಡಿದರೆ ಕಾಸಿಯಲ್ಲಿ ಗೋಹತ್ಯ ಮಾಡಿದ ಪಾಪಕ್ಕೆ ಹೋಹ
27 ನು | ಮಕ್ಕೆದಲ್ಲು ಶೂಕರನ ಕೊಂದ ಪಾಪಕ್ಕೆ ಹೋಹನೂ | ಮಾತಾಪಿ
28 ತ್ರುಗಳಿಗೆ ವಿಷವನಿಕ್ಕಿದ ಪಾಪಕ್ಕೆ ಹೋಹನೂ ಯೆಂದು ಬರಸಿಕೊ
29 ಟ್ಟ ನಿರೂಪಾ | ಗ್ರಂಥಾ || ಸ್ವದತ್ತ ದ್ವಿಗುಣಂ ಪುಣ್ಯಂ ಪರದತ್ತಾನು
30 ಪಾಲನಂ | ಪರದತ್ತಾಪಹಾರೇಣ | ಸ್ವದತ್ತಂ ನಿಷ್ಫಲಂ ಭವೇತ್ ||



ಮೇಲಿನ ನಿರೂಪದ ತಾತ್ಪರ್ಯವನ್ನು ಹೀಗೆ ಸಂಗ್ರಹಿಸಬಹುದು : ಶಾಲಿವಾಹನ ಶಕ ೧೨೭೭ನೇ ಕಾಳಾಯುಕ್ತಿ ಸಂವತ್ಸರದ ಆಶ್ವೀಜ ಶುದ್ಧ ೭ರಲ್ಲಿ ಶ್ರೀ ಮದ್ರಾಜಾ ಧಿರಾಜ ಪ್ರೌಢಪ್ರತಾಪ ವೀರನರಪತಿ ರಾಮರಾಯರ ಪೌತ್ರರಾದ ಅಚ್ಯುತರಾಯರ ಪುತ್ರರಾದ ಕೃಷ್ಣರಾಯರು ವಿಜಯನಗರ ಪಟ್ಟಣದಲ್ಲಿ ರತ್ನಸಿಂಹಾಸನಾರೂಢವಾಗಿ ಸಾಮ್ರಾಜ್ಯವನ್ನು ಆಳುತ್ತಿದ್ದಾಗ, ಹಂಡೆದನುಗರ ತಿಮ್ಮರಾವುತನಿಗೆ ಬರೆಸಿಕೊಟ್ಟ ನಿರೂಪ :

ನವರಾತ್ರಿ ಕಾಲದ ಏಳನೆ ದಿನಸ, ನಾಲ್ಕು ಮಾರು (ಉದ್ದ ಅಗಲ ಮತ್ತು ಆಳ?) ಅಳತೆಯ ಒಂದು ಕೋಣದಲ್ಲಿ ಒಂದು ವ್ಯಾಘ್ರ (=ಹುಲಿ) ಮತ್ತು ಒಂದು ಸರ್ಪವನ್ನು ಹಾಕಿಸಿರುವಾಗ, ಆ ಸರ್ಪವನ್ನು ಮೆಟ್ಟಿ ಕೊಂದು ಆ ವ್ಯಾಘ್ರುವನ್ನೂ ಕೊಂದವನಿಗೆ ಬೇಡಿದ ಇಷ್ಟಾರ್ಥವನ್ನು ನಾವು ಕೊಡುತ್ತೇವೆ ಎಂದು ನಮ್ಮ ಹನ್ನೆರಡು ಸಾವಿರ ವಜೀರರಿಗೆ (=ಯೋಧರಿಗೆ) (ಡಂಗುರ) ಸಾರಿಸಿದಾಗ, ನೀನು ಬಂದು ನಮ್ಮ ಸಮ್ಮುಖದಲ್ಲಿ ನಿಂತು 'ಪಟ್ಟೆ ವೀಳ್ಯವನ್ನು ಹಿಡಿದು' (= ಪಂಥವನ್ನು, ಸವಾಲನ್ನು ಸ್ವೀಕರಿಸಿ) ಸರ್ಪವನ್ನು ಮೆಟ್ಟಿ, ವ್ಯಾಘ್ರುವನ್ನು ಕೊಂದು, ನಮ್ಮ ಸಮ್ಮುಖಕ್ಕೆ ಬಂದು ಸಲಾಮುಮಾಡಿ ಹೀಗೆ ಕೇಳಿಕೊಂಡೆ :

'ನಮ್ಮ (ಜನಾಂಗದ)ಲ್ಲಿ (ಮದುವೆ ಮಾಡಿಕೊಳ್ಳಲು) ಹೆಣ್ಣಿಗೆ ೧೦೧ ವರಹ ತೆರೆ (=ವಧುದಕ್ಷಿಣೆ) ಮತ್ತು ಅರಮನೆಗೆ (=ದಿವಾಣಕ್ಕೆ, ಸರ್ಕಾರಕ್ಕೆ) ೦೭ ವರಹ ಸುಂಕ (=ಮದುವೆ ತೆರಿಗೆ) ಕೊಡಬೇಕಾಗಿದೆ. ಉಭಯವೂ ಸೇರಿ ಒಟ್ಟು ೧೦೮ ವರಹ ಆಗುತ್ತದೆ. (ಇಷ್ಟು ಹಣ ಕೊಡುವ ಶಕ್ತಿ ಇಲ್ಲದೆ) ಹೆಣ್ಣನ್ನು ತರುವವರೂ ಇಲ್ಲ, ಗಂಡುಗಳಿಗೆ ಮದುವೆಯೂ ಇಲ್ಲ (ಎನ್ನುವಂತಾಗಿದೆ). ತಾವು (ಕೃಪೆ ಮಾಡಿ) ಇನ್ನು ಮುಂದೆ ೧೦೧ ವರಹ ತೆರೆ ಬಿಡಿಸಿ (= ರದ್ದು ಪಡಿಸಿ), ಅದರ ಬದಲಿಗೆ, ಅರಮನೆಗೆ ಸಲ್ಲಿಸುವ ೭ ವರಹವನ್ನೇ ತೆರೆ (ಎಂದು ನಿಗದಿ) ಮಾಡಿಸಿ, ಪಾಲಿಸಬೇಕು.'

ನೀನು ಹೀಗೆ ಕೇಳಿಕೊಂಡ ಪ್ರಕಾರವೇ ೧೦೧ ವರಹದ ತೆರೆ ಬಿಡಿಸಿ, ಅರಮನೆಗೆ ಸಲ್ಲಿಸುವ ೭ ವರಹವನ್ನೇ ತೆರೆ ಮಾಡಿಸಿ, ಸೂರ್ಯ ಚಂದ್ರಾದಿಗಳು ಇರುವವರೆಗೆ (ಇದನ್ನು) ತಪ್ಪದೆ ನಡೆಸಿಕೊಂಡು ಬರತಕ್ಕದ್ದು. ಇದಕ್ಕೆ ಯಾರಾದರೂ ಶಂಕೆ ಮಾಡಿದರೆ ಅಂಥವನು (ಹಿಂದುವಾದರೆ) ಕಾಶಿಯಲ್ಲಿ ಗೋಹತ್ಯೆ ಮಾಡಿದ ಪಾಪಕ್ಕೆ, (ಮುಸಲ್ಮಾನ ನಿದ್ದರೆ) ಮಕ್ಕೆಯಲ್ಲಿ ಹಂದಿಯನ್ನು ಕೊಂದ ಪಾಪಕ್ಕೆ ಹೋಗುತ್ತಾನೆ... ಎಂದು ಬರೆಸಿಕೊಟ್ಟ ನಿರೂಪ ಇದು.

ಸರ್ವತ್ರ ಬರುವ ಒಂದು ಶಾಪಾಶಯದ ಸಂಸ್ಕೃತ ಶ್ಲೋಕದೊಂದಿಗೆ ನಿರೂಪದ ಬರಹ ಮುಗಿದಿದೆ. ಈ ಬರಹದ ಕೆಳಗೆ, ಒಂದರೊಳಗೊಂದು ಇರುವ ಎರಡು ವರ್ತುಲಗಳನ್ನು, ಅವುಗಳ ಕೇಂದ್ರಬಿಂದುವಿನಿಂದ ಹಾಯ್ದು ನಾಲ್ಕು ವ್ಯಾಸ ರೇಖೆಗಳಿಂದ ಎಂಟು ಸಮಭಾಗಗಳಾಗಿದ್ದು, ಆ ಭಾಗಗಳೊಳಗೆ ಗಡಿಯಾರದ ಮುಳ್ಳಿನ ಚಲನೆಯಂತೆ, ಒಂದೊಂದು ಭಾಗದಲ್ಲಿ ಒಂದೊಂದು ಅಕ್ಷರದಂತೆ ಏಳು ಭಾಗಗಳಲ್ಲಿ 'ರಾ' 'ಮ' 'ರಾ' 'ಯ' 'ರೈ' 'ಯ' 'ನ' ಎಂದೂ ಎಂಟನೆಯ ಭಾಗದಲ್ಲಿ 'ವರು' ಎಂದೂ ಬರೆಯಲಾಗಿದೆ. (ಇದು ರಾಮರಾಯರೈಯನವರು ಎಂಬುದು ಸ್ಪಷ್ಟ).

ಈ ಮೇಲಿನ ನಿರೂಪ ೧೨೭೭ನೆಯ ಶಾಲಿವಾಹನ ಶಕವರ್ಷ ಮತ್ತು ಕಾಳಾಯುಕ್ತಿ ಸಂವತ್ಸರದ್ದು ಹಾಗೂ ಕೃಷ್ಣದೇವರಾಯನ ಕಾಲದ್ದು ಎಂದೂ ಸೂಚಿತವಾಗಿದೆಯಷ್ಟೆ. ಈ ಅಂಶ ವಿಚಾರಣೀಯ. ಈ ಶಕ ವರ್ಷ ಕ್ರಿ.ಶ. ೧೩೫೫ ಆಗುತ್ತದೆ. ಈಗಾಗಲೇ ಸ್ಪಷ್ಟವಾಗಿರುವಂತೆ ಕೃಷ್ಣದೇವರಾಯನ ಕಾಲ ಕ್ರಿ.ಶ. ೧೫೦೯ ರಿಂದ ೧೫೨೯. ಅಲ್ಲದೆ ಅವನ ಕಾಲದಲ್ಲಿ ಕಾಳಾಯುಕ್ತಿ ಸಂವತ್ಸರ ಬರುವುದಿಲ್ಲ. ಇದರಿಂದ ಇಲ್ಲಿ ಕೊಟ್ಟಿರುವ ಶಕವರ್ಷ ಸಂಖ್ಯೆ ಮತ್ತು ಸಂವತ್ಸರ ಕೃಷ್ಣದೇವರಾಯನ ಕಾಲದವು ಅಲ್ಲ. ಇಷ್ಟೇ ಅಲ್ಲ, ಕೃಷ್ಣದೇವರಾಯನನ್ನು ರಾಮರಾಯನ ಪೌತ್ರ ಮತ್ತು ಅಚ್ಯುತರಾಯನ ಪುತ್ರ ಎಂದು ಹೇಳಿರುವುದು ಕೂಡಾ ಅಸಂಗತವಾಗಿದೆ. ಹೀಗಾಗಿ ಈ ಶಾಸನ ಹಾಕಿಸಿದವನು ಕೃಷ್ಣದೇವರಾಯನೆಂಬ ಬಗ್ಗೆ ಅನುಮಾನ ಉಂಟಾಗುತ್ತದೆ. ಈ ವಿವರಗಳ ಅಸಮ ರ್ಪಕತೆಗೆ ಒಂದು ಸಾಧ್ಯತೆಯನ್ನು ನೋಡೋಣ. ಈ ಘಟನೆ ನಿಜವಾಗಿಯೂ - ಅದೇ

ಕೃಷ್ಣದೇವರಾಯನ ಕಾಲದಲ್ಲೇ - ನಡೆದ್ದಿದ್ದರೆ, ಅಂದೇ ದಾಖಲಿಸಲ್ಪಡಬೇಕಾ ಗಿತ್ತು. ಏನೋ ವ್ಯತ್ಯಯವಾಗಿ, ಮುಂದೆ ರಾಮರಾಯನ ಅಥವಾ ಅವನ ಅನಂತರದ ಕಾಲದಲ್ಲಿ ಇದು, ತಿಮ್ಮರಾವುತನ ವಂಶದವರಿಂದ, ತಕ್ಕ ಮಟ್ಟಿಗೆ ಅಕ್ಷರ ಬಲ್ಲವರ ಸಹಾಯದಿಂದ - ಏಕೆಂದರೆ, ಸಮಾಜದ ಕೆಳಸ್ತರದವರಾದ ಅವರು ಅಕ್ಷರಸ್ಥರಾಗಿರುವ ಸಾಧ್ಯತೆ ಕಡಿಮೆ. ಆದ್ದರಿಂದ - ಈ ಘಟನೆಯ ಬಗ್ಗೆ ಹೀಗೆ ದಾಖಲಿಸಲ್ಪಟ್ಟಿರಬಹುದೆ? ಅಲ್ಲದೆ ಈ ನಿರೂಪದ ಕಾಳಾಯುಕ್ತಿ ಸಂವತ್ಸರ, ಬಹುಶಃ ರಾಮರಾಯನಿದ್ದ ಕಾಲದ ಕ್ರಿ.ಶ. ೧೫೫೮ ಏನಾದರೂ ಇದ್ದಿರಬಹುದೆ? - ಈ ಸಾಧ್ಯತೆಯ ಮಿತಿಗಳೊಂದಿಗೆ ಈ ನಿರೂಪದ ಘಟನೆಗಳನ್ನು ಪರಿಶೀಲಿಸಬೇಕಾಗುತ್ತದೆ.

ಮೇಲೆ ಬಂದಿರುವಂತೆ ಕೃಷ್ಣದೇವರಾಯನು ಈ ನಿರೂಪವನ್ನು ನೀಡಿದಂತೆ ಹೇಳಿರುವುದು ಹಂಡೆ - ದನುಗರ ತಿಮ್ಮರಾವುತನಿಗಷ್ಟೆ. ಈಗಾಗಲೇ ತಿಳಿಸಿರುವಂತೆ ಹಂಡೆದನುಗರು ಕುರುಬ ಜಾತಿಯ ಒಂದು ಪಂಗಡಕ್ಕೆ ಸೇರಿದವರು. ಈಗಾಗಲೇ ಬೇರೊಂದೆಡೆ ನಾನು ಪ್ರಕಟಿಸಿರುವ ತಾಮ್ರಪಟವೊಂದನ್ನು ಕುರಿತ ಒಂದು ಲೇಖನದಲ್ಲಿ ಈ ಜನಾಂಗದವರು ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ರಾವುತರೂ ಕೆಲವೆಡೆ ಗ್ರಾಮದ ಗೌಡಿಕೆಯನ್ನು ಕೂಡಾ ನಡೆಸುತ್ತಿದ್ದವರೂ ಆಗಿದ್ದರೆಂದು ತಿಳಿಸಿ ದ್ದೇನೆ. ವಿಜಯನಗರದ ಇತಿಹಾಸದ ಆಕರಗಳಲ್ಲಿ ಒಂದಾಗಿರುವ 'ಶ್ರೀಕೃಷ್ಣದೇವ ರಾಯನ ದಿನಚರಿ' ಎಂಬ ಕೃತಿಯಲ್ಲಿ ಕೆಲವು ಕಡೆ 'ಕುರುಬರಾವುತರು' ಎಂದು ಕರೆದಿರುವುದು ಇಂಥ ಪಂಗಡದವರನ್ನೇ ಎಂದು ತೋರುತ್ತದೆ. ಇದರಿಂದ ಈ ನಿರೂಪದಲ್ಲಿ ಬರುವ ತಿಮ್ಮರಾವುತ ಕುರುಬರಾವುತರೆಂದೂ ಹಂಡೆದನುಗರೆಂದೂ ಕರೆಯಲಾದ ಕುರುಬ ಜಾತಿಯ (ಒಂದು ಪಂಗಡದ)ವನೆಂದು ಸ್ಪಷ್ಟವಾಗುತ್ತದೆ. ಮಹಾರಾಷ್ಟ್ರದಲ್ಲಿ ಕುರುಬರನ್ನು ಧನಗರರು ಎಂದು ಕರೆಯುವುದರಿಂದ ಇವರು ಆ ಕಡೆಯಿಂದ ಕನ್ನಡ ನಾಡಿಗೆ ವಲಸೆ ಬಂದ ವಂಶದವರಿರಬಹುದೆ ಎಂಬೊಂದು ಪ್ರಶ್ನೆಯೂ ಬರುತ್ತದೆ.

ವಿಜಯನಗರ ದೊರೆಗಳು ನಡೆಸುತ್ತಿದ್ದ ನವರಾತ್ರಿ ಉತ್ಸವ ಇತಿಹಾಸಪ್ರಸಿದ್ಧ ವಾದುದು. ಆ ಸಂದರ್ಭದಲ್ಲಿ ಏನೇನು ವೈವಿಧ್ಯಮಯ ಚಟುವಟಿಕೆಗಳು ಜರುಗು ತ್ತಿದ್ದವು ಎನ್ನುವುದರ ವಿವರ, ಈ ಹಬ್ಬದ ಬಗ್ಗೆ ಬೆರಗನ್ನು ಹುಟ್ಟಿಸುತ್ತದೆ. ಅದರಲ್ಲಿ ಶಕ್ತಿ ಸಾಹಸದ ಪ್ರದರ್ಶನಗಳಿಗೂ ಸ್ಪರ್ಧೆಗಳಿಗೂ ವಿಜಯನಗರದ ದೊರೆಗಳು ಅವಕಾಶ ನೀಡಿದ್ದರು. ಪ್ರಸ್ತುತ ನಿರೂಪ ಅಂಥ ಒಂದು ಶಕ್ತಿ ಸಾಹಸ ಪ್ರದರ್ಶನದ ನಿದರ್ಶನವನ್ನು ನಮ್ಮ ಮುಂದೆ ತೆರೆದಿಡುತ್ತದೆ. ನವರಾತ್ರಿ ಕಾಲದ ಏಳನೆಯ ದಿನ ನಡೆದ ಸಾಹಸ ಪ್ರದರ್ಶನ ಅದು. ಈ ಭಾಗದಲ್ಲಿ ನಿರೂಪ ಕೊಡುವ ವಿವರ, ಪೂರ್ಣ ಸ್ಪಷ್ಟ ಎಂಬಂತೆ ಇಲ್ಲದಿದ್ದರೂ ಅದನ್ನು ಹೀಗೆ ಅರ್ಥೈಸಿಕೊಳ್ಳಬಹುದಾಗಿದೆ. ನಾಲ್ಕು ಮಾರು ಚಚ್ಚೌಕ (ಅಂದರೆ ೪ ಮಾರು ಉದ್ದ ೪ ಮಾರು ಅಗಲ) ಅಳತೆಯ, ಅಷ್ಟೇ ಅಥವಾ ಸಾಕಷ್ಟು

ಆಳವಾದ ನೆಲದಲ್ಲಿ ಮಾಡಿದ ಒಂದು ಗುಂಡಿಯಲ್ಲಿ, ಬಹುಶಃ ಹಲ್ಲು ಕಿತ್ತಿರದ ಒಂದು ನಾಗರ ಸರ್ಪವನ್ನೂ ಒಂದು ಹುಲಿಯನ್ನೂ ಇಳಿಸಿದ್ದು, ಏಕಕಾಲಕ್ಕೇ ಅವೆರಡನ್ನೂ ಕೊಂದವರಿಗೆ ಬೇಡಿದ ಇಷ್ಟಾರ್ಥವನ್ನು ಸಲ್ಲಿಸುವುದಾಗಿ, ಡಂಗುರದ ಮೂಲಕ ೧೨೦೦೦ ವಜೀರರ (ಯೋಧರ?) ಗಮನಕ್ಕೆ ಬರುವಂತೆ ಪ್ರಕಟಿಸಲಾಗಿತ್ತು. ಬೇರೆ ಯಾರೂ ಸ್ವೀಕರಿಸದ ಈ ಪಂಥವನ್ನು ತಿಮ್ಮರಾವುತ ಪಟ್ಟೆ ವೀಳ್ಯವನ್ನು ಹಿಡಿಯುವುದರ ಮೂಲಕ ಸ್ವೀಕರಿಸಿ, ತನ್ನ ಪ್ರಾಣವನ್ನೇ ಪಣಕ್ಕಿಟ್ಟು, ಅದರಲ್ಲಿ ತನ್ನ ಧೈರ್ಯ, ಯುಕ್ತಿ, ಬಲಗಳಿಂದ (ಮತ್ತು ಅದೃಷ್ಟಾನುಕೂಲದಿಂದ) ಗೆಲ್ಲುತ್ತಾನೆ; ದೊರೆಯ ಮನ ಸೂರೆಗೊಳ್ಳುತ್ತಾನೆ. ಅವನು ತನ್ನ ಸ್ವಂತಕ್ಕಾಗಿ ಬೇಕಾದ ಐಶ್ವರ್ಯ ಅಧಿಕಾರ ಹೀಗೆ ಏನನ್ನಾದರೂ ಕೇಳಬಹುದಿತ್ತು. ಒಂದು ಪಾಳೆಯಪಟ್ಟಿನ ಅಧಿಕಾರವನ್ನು ಕೇಳಿದರೂ ದೊರೆ ಅದನ್ನು ಕೊಡುತ್ತಿದ್ದನೇನೋ. ಶಕ್ತಿ ಸಾಹಸಗಳಿಗೆ ಮೆಚ್ಚಿ ಅವರು ಹಾಗೆ ಕೊಟ್ಟ ನಿದರ್ಶನಗಳಿವೆ. ಅಂತೂ ಅವನು ತನಗಾಗಿ ಏನನ್ನೂ ಕೇಳದೆ, ತನ್ನ ಇಡೀ ಜನಾಂಗದ ಹಿತಕ್ಕಾಗಿ ಚಿಂತಿಸಿದ್ದು ಮೆಚ್ಚತಕ್ಕಸಂಗತಿ ; ಹಾಗೇ ಒಂದು ಅಪರೂಪದ ಸಂಗತಿ.

ಹೀಗೆ ದಾಖಲಾಗಿರುವ ಸಂದರ್ಭದಿಂದ, ಮದುವೆಯ ತೆರ ಮತ್ತು ಸುಂಕಗಳಂಥ ಖರ್ಚುಗಳನ್ನು ನಿಭಾಯಿಸಲಾಗದ ಆಗಿನ ಕಾಲದ ಕುರುಬ ಜನಾಂಗದ ಆರ್ಥಿಕ ದುರ್ಬಲತೆ, ಅದು ಅವರ ಸಾಮಾಜಿಕ ಕೌಟುಂಬಿಕ ಜೀವನದ ಮೇಲೆ ತಂದಿದ್ದ ಒತ್ತಡ ಮತ್ತು ಆತಂಕ, ಇದನ್ನು ಶ್ರುತಪಡಿಸುತ್ತದೆ. ಹಾಗೆಯೇ ಬಹುಸಂಖ್ಯೆಯ ಯೋಧರಲ್ಲೇ ಯಾರೂ ಮುಂದಾಗದ ಪ್ರಾಣಾಪಾಯ ಲೆಕ್ಕಿಸದೆ ಜನಾಂಗದ ಹಿತಕ್ಕಾಗಿ ಅಸಾಧಾರಣ ಸಾಹಸ ಮಾಡುವಂಥ ಧೀರ ಸರಳ ತ್ಯಾಗಶೀಲ ಶುದ್ಧ ಕಾಳಜಿಯ ತಿಮ್ಮರಾವುತನಂಥ ವ್ಯಕ್ತಿಗಳು ಆಗ ಇದ್ದುದು ವ್ಯಕ್ತವಾಗುತ್ತದೆ. ತಿಮ್ಮರಾವುತನಿಗೆ ಇಂಥದೊಂದು ಸಾಹಸ ಮಾಡಿ ತಾನೊಬ್ಬ ಮಹಾಸಾಹಸಿ ಎಂಬ ಕೀರ್ತಿ ಪಡೆಯುವ ಆಸೆಯೇನೂ ಇರದೆ, ಇಂಥದೊಂದು ಸಾಹಸದಲ್ಲಿ ಅದೃಷ್ಟವಶಾತ್ ತಾನು ವಿಜಯಿ ಯಾದರೆ, ಆಗ ದೊರೆ ಕೊಡುವುದಾಗಿ ಹೇಳಿರುವ ಜಯದ ಕೊಡುಗೆಯಿಂದ ತನ್ನ ಜನಾಂಗದ ಸಂಕಷ್ಟಕ್ಕೆ ಪರಿಹಾರ ದೊರೆಯುವಂತಾದರೆ ಸಾಕು ಎಂಬ ಯೋಚನೆ ಮಾತ್ರ ಅವನಲ್ಲಿ ಪ್ರಧಾನ ವಾಗಿದ್ದು, ಅದಕ್ಕಾಗಿಯೆ ಅವನು ಅಂತಹ ಪ್ರಾಣಾಂತಿಕ ಸಾಹಸದ ಸವಾಲನ್ನು ಸ್ವೀಕರಿಸಿದಂತೆ ಕಾಣುತ್ತದೆ. ತನ್ನ ಜನಾಂಗ ಹಿತಚಿಂತನೆಯ, ತ್ಯಾಗಶೀಲ ಗುಣದ ಕಾರಣವಾಗಿ ತಿಮ್ಮರಾವುತ ಆ ಜನಾಂಗದ ಒಬ್ಬ ಸಾಂಸ್ಕೃತಿಕ ನಾಯಕನ (Cultural Hero) ವರ್ಚಸ್ಸುಳ್ಳವನಾಗಿ ಕಂಡುಬರುತ್ತಾನೆ.

ನಿರೂಪದ ಅಂತ್ಯದಲ್ಲಿ ಬರುವ ಶಾಪಾಶಯಗಳನ್ನು ನೋಡಿದರೆ, ಹಿಂದುಗಳಂತೆ ಮುಸ್ಲಿಮರನ್ನು ಸಹ ಎಚ್ಚರಿಸಿರುವುದು ಕಂಡುಬರುತ್ತದೆ. ಆ ಹೊತ್ತಿಗೆ ಭಾರತದ ನೆಲದಲ್ಲಿ ಆಗಲೇ ಮುಸ್ಲಿಮರೂ ಸಾಕಷ್ಟು ಸಂಖ್ಯೆಯಲ್ಲಿದ್ದರೆಂದೂ ಆದ್ದರಿಂದಲೇ

ಹಿಂದುಗಳಂತೆ ಅವರೂ ಸಹ, ದೊರೆ ಈ ನಿರೂಪದ ಮೂಲಕ ಮಾಡಿರುವ ಧರ್ಮದ ಕಟ್ಟಳೆಯನ್ನು ನಡೆಸಿಕೊಂಡು ಹೋಗಲು ಸಹಕರಿಸಬೇಕು ಎಂಬ ಧ್ವನಿ ಇರುವುದು ಗಮನಕ್ಕೆ ಬರುತ್ತದೆ.

ಮೇಲೆ ತಿಳಿಸಿದ ಬರಹದ ತರುವಾಯ ತಾಳೇಗರಿಯಲ್ಲಿ ಬರುವ ಇನ್ನೊಂದು ಬರಹದ ಪಾಠ ಹೀಗಿದೆ :

1 ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರುಷಂಗಳು ೧೨೭೮ನೇ

2 ಶಿದ್ಧಾರ್ಥಿ ಸಂವತ್ಸರದ ಪಾಲ್ಗುಣ ಬಉಳ ೭ ಲ್ಲು ಶ್ರೀಮದ್ರಾಜಾಧಿರಾಜ ಪರಮೇ

3 ಶ್ವರ ಪ್ರಉಡ ಪ್ರತಾಪ ವೀರನರಪತಿ ಭಾರಧ್ವಜ ಗೋತ್ರರಾದಂತಾ ರುಕು ಶಾ

4 ಕೆಯ ರಾಮರಾಯರ್ಯೆಯ್ಯನವರ ಪೌತ್ರರಾದ ಅಚ್ಚುತರಾಯರ್ಯೆಯ್ಯ

5 ನವರ ಪುತ್ರರಾದಂತ್ತಾ ಕ್ರುಷ್ಣರಾಯರ್ಯೆಯನವರು ವಿಜಯನಗರದ

6 ಪಟ್ನದಲ್ಲು ರತ್ನಶಿಂಹ್ವಾಸನರೂಢರಾಗಿ ಪ್ರುಥ್ವೀ ಸ್ತಿರ ಸಾಂಬ್ರಾ

7 ಜ್ಯಲ ಗೈ ಉತಿರಲೂ | ಶ್ರೀಮತು ಹಂಡೆ ಧನುಗರ ತಿಂಮರಾ

8 ಉತಗೆ ಬರಸಿಕೊಟ್ಟ ನಿರೂಪ ಅದಾಗಿ | ಕಾಳಾಯುಕ್ತಿ ಸಂವತ್ಸರ

9 ದಲ್ಲು ನೀನು ಸರ್ಪನ ಮೆಟ್ಟಿ ವೆಗ್ರನ ಕೊಂದ ಸಮಾಚಾರಉ ಡಿಳ್ಳಿ ಪಾ

10 ಚ್ಚಾವರ್ರಿಗೆ ಅರ್ರಿಕೆ ಆದಲ್ಲಿ ಪಾಹಚ್ಚವರು ತಂಮಾ ಲಾಯದಲ್ಲಿ ಯ

11 ರಡು ಕಾಲ ಪಾ ಉಟಿಗೆ ತೇಜಿ ಯಿದ್ದಿತು | ಯೀ ತೇಜಿಯಂನು | ಯೇರ್ರಿ ನಾ

12 ದರ್ರಿಸಿದವಗೆ ಮಾಡುವರು ನಿಯೋಗ | ತೇಜಿ ಆಭರಣ ಕಾಣಿಕೆ ಉ

13 ಡುಗೊರೆ ಸಹ ಕಳುಹಿಸಿದರೂ ಕಾರಣ | ನಾಉ ನಂಮ್ಮ ಹಂ

14 ರಡು ಸಾವಿರ ವಜ್ಜೀರ್ರಿಕೆ ಮಾತ್ತು ವೀರಭಂಟ ಸಹಕರಸಿ ಕೇಳಿದಲ್ಲಿ

15 ನೀನು ಬಂದು ಸಂಮುಖದಲ್ಲು ನಿಂತು ಅಪ್ಪಣೆ ಕೇಳಿದಲ್ಲಿ ನೀನು ಹಿಂದ


16 ಕ್ಕೆ ವ್ಯಾಗ್ರನ ಕೊಂದೆ ಸರ್ಪನ ಕೊಂದೆ ಯೀಗಲಾದರು ನೀನೆ ಹೊರತು ಸ

17 ಮರ್ತರು ವಬ್ಬರು ಯಿಲ್ಲವೆಂದು ಕೇಳಿದೆವಾದ ಕಾರಣ ಅವರ ಹಸ್ತ ಪಾ

18 ದವಾಗಿ ನಾನೇ ಯಿಧೇನೆ ಯಂದು ನಿಂತು ಪಟ್ಟಿ ವೀಳ್ಯವ

19 ಹಿಡಿದು ಆ ತೇಜಿಯಂನು ಯೋಜನ ಪರ್ರಿಯಾಂತ್ರ ಯೇರ್ರಿ

20 ಆ ತೇಜಿಯಂನು ದಣಿಸಿ ಪುನಹ ಸಮುಕಕ್ಕೆ ಬಂದು
21 ಸಲಾಂಮು ಮಾಡಿ ನೀ ನಿಂತೆಯಾದ ಕಾರಣ | ನಿಂನ ಪರಾಕ್ರಮ
22 ಕ್ಕೆ ಮೆಚ್ಚಿ ಸದರು ಭಕ್ಷ ಬಿಟ್ಟುಕೊಟ್ಟು ನಿನಗೆ ಯಿಚ್ಚೆ ಬಂದುದ
23 ಕೇಳಿಕೋ ಯೆಂಬುದಾಗಿ | ಕೇಳಿದೆವಾದ ಕಾರಣ | ನೀಉ ಹಿಂದಕ್ಕೆ ತೆರೆ ಬಿ
24 ಡಿಸಿ ಶಾಶ್ವಿತವಾಗಿ ಧರ್ಮಕೀರ್ತಿ ನಿಮಗೆ ನಿಮಗೆ ಬಂತು ಯೀಗ ನನಗೆ
25 ಕುಲಾಚಾರದ ಗೌಡಿಕೆ ಕುಲಾಚಾರದಲ್ಲಿ ಆದ | ಹಾದರ ಅಂನ್ಯಾಯ ಕೈ
26 ಪ್ಪು ಬಾಯ ತಪ್ಪು | ಸಂತಾನವಿಲ್ಲದ ಬದಕು ದಿಕ್ಕಿಲ್ಲದ ಹೆಂಣು |
27 ಸಹ ನನಗೆ ವಿಚಾರಿಸಿಕೊಂಬು ಹಾಗೆ | ಸೀಮೆ ನಾಡ ತಳವಾರಿಕೆ ಚಿ
28 ಗರು ೧ ಕ್ಕೆ ದವಸ ಲಾ ೧ ರೊಕ್ಕ ೨ ೦ | ೦ ಸಹ ನಡದು ಬರುವ ಹಾಗೆ |
ಧ
29 ಯಪಾಲಿಸಬೇಕೆಂದು ಸಕಲರು ಸಾಮಜಿಕರು ಸರದಾರರು ಸಹ
30 ಕೇಳಿಕೊಂಡ ಕಾರಣ | ಅದೇ ಪ್ರಕಾರಕ್ಕೆ ಕುಲಾಚಾರದ ತಪ್ಪುನಪ್ಪುಗ
31 ಳ ವಿಚಾರ್‍ರಿಸಿಕೊಂಡು ಕುಲಾಚಾರದಲ್ಯಾದ ಹಾದರ ಅಂನ್ಯಾಯ ಚರಾ
32 ದಾಯ ಹೊರದಾಯ ಕೈತಪ್ಪು ಬಾಯತಪ್ಪು ಸಂತಾನಗೆಟ್ಟ
33 ಬದಕು ದಿಕ್ಕಿಲ್ಲದ ಹೆಂಣು ಸಹ ವಿಚಾರ್‍ರಿಸಿಕೊಂಡು ಸೀಮೆ
34 ನಾಡವಳವಾರ್‍ರಿಕೆಯಂನು ವಿಚಾರ್‍ರಿಸಿಕೊಂಡು ಚತುಸಮುದ್ರ
35 ದ ಮಧ್ಯದಲ್ಲು ಗ್ರಾಮನುಗ್ರಾಮಕ್ಕು ಚಿಗರು ವಂದ
36 ಕ್ಕೆ ದವಸ .... ರೊಕ್ಕ ೦ | ೦ ಸಹ ಶಾಶ್ವಿತವಾಗಿ ಪುತ್ರ ಪೌಉತ್ರ
37 ಪಾರಂಪರ್‍ಯ್ಯವಾಗಿ ನೀನು ಅನುಭವಿಸಿಕೊಂಡು ಬರುವದೆಂದು
38 ಕಟ್ಟಳೆ ಮಾಡಿಸಿ ಯಿದ್ದೀತು | ಯೀ ಧರ್ಮ ನಿರೂಪಕ್ಕೆ ಆವಾ
39 ನೊಬ್ಬನಾದರು ಸಂಕೆ ಮಾಡಿದರೆ ಕಾಸಿಯಲ್ಲು ಗೋಹತ್ಯೆ ಮಾಡಿ
40 ದ ಪಾಪಕ್ಕೆ ಹೋಹನು | ಮಕ್ಕಾದಲ್ಲು ಶೂಕರನ ಕೊಂದ ಪಾಪಕ್ಕೆ ಹೋ
41 ಹನು ಶಿಶುಹತ್ಯ ಮಾತಾಪಿತ್ರುಗಳಿಗೆ ವಿಷವನಿಕ್ಕಿದ ಪಾಪಕ್ಕೆ ಹೋಹ
42 ನು ಯಂದು ಯೀ ಧರ್ಮ ಆಚೆಂದ್ರಾರ್ಕವಾಗಿ ನಡೆಯಲಿ ಯೆಂದು |
43 ಬರಸಿಕೊಟ್ಟ ನಿರೂಪ || ಗ್ರಂಥಾ || ಸ್ವದತ್ತ ದ್ವಿಗುಣಂ ಪುಣ್ಯಂ ಪರದ
44 ತ್ತಾನುಪಾಲನಂ | ಪರದತ್ತಾಪ ಹಾರೇಣ | ಸ್ವದತ್ತಂ ನಿಷ್ಫಲಂ ಭವೇತ್ ||



ಈ ಮೇಲಿನ ನಿರೂಪದ ತಾತ್ಪರ್ಯವನ್ನು ಈ ಮುಂದಿನಂತೆ ಸಂಗ್ರಹಿಸಬಹುದು: ಶಾಲಿವಾಹನ ಶಕ ವರ್ಷ ೧೨೭೮ನೇ ಸಿದ್ಧಾರ್ಥಿ ಸಂವತ್ಸರದ ಫಾಲ್ಗುಣ ಬಹುಳ ೭ರಲ್ಲಿ, ಶ್ರೀಮದ್ರಾಜಾಧಿರಾಜ ಪ್ರೌಢಪ್ರತಾಪ ವೀರ ನರಪತಿ ರಾಮರಾಯರ ಪೌತ್ರ ರಾದ ಅಚ್ಯುತರಾಯರ ಪುತ್ರರಾದ ಕೃಷ್ಣರಾಯರು ವಿಜಯನಗರ ಪಟ್ಟಣದಲ್ಲಿ ರತ್ನಸಿಂಹಾಸನಾರೂಢರಾಗಿ ಸಾಮ್ರಾಜ್ಯವನ್ನು ಆಳುತ್ತಿದ್ದಾಗ, ಹಂಡೆದನುಗರ ತಿಮ್ಮರಾವುತನಿಗೆ ಬರೆಸಿಕೊಟ್ಟ ನಿರೂಪ :

ಕಾಳಾಯುಕ್ತಿ ಸಂವತ್ಸರದಲ್ಲಿ ನೀನು ಸರ್ಪವನ್ನು ಮೆಟ್ಟಿ ವ್ಯಾಘ್ರವನ್ನು ಕೊಂದ ಸಮಾಚಾರ ಡಿಳ್ಳಿಯ ಬಾದಶಹರಿಗೆ ಅರಿಕೆಯಾಗಿ, ಅವರು ತಮ್ಮ ಲಾಯದಲ್ಲಿ ಎರಡು ಕಾಲ ಪಾವಟಿಗೆ ತೇಜಿ (=ಕುದುರೆ)ಯನ್ನು ಏರಿ ಪಳಗಿಸಬೇಕು ಎಂದು ನಿಯೋಗ ಸಹಿತ ತೇಜಿ ಆಭರಣ ಕಾಣಿಕೆ ಉಡುಗೊರೆ ಮುಂತಾದ್ದನ್ನು ಕಳಿಸಿಕೊಟ್ಟ ಕಾರಣ, ನಾನು ನಮ್ಮ ಹನ್ನೆರಡು ಸಾವಿರ ವಜೀರಿಕೆ ಮಾಡುವ ವೀರಭಂಟರನ್ನು ಕರೆಸಿ ಕೇಳಿದಾಗ, ನೀನು ಬಂದು ನಮ್ಮ ಸಮ್ಮುಖದಲ್ಲಿ ನಿಂತು ಅಪ್ಪಣೆ ಕೇಳಿದಾಗ, 'ನೀನು ಹಿಂದೆ ವ್ಯಾಘ್ರವನ್ನೂ ಕೊಂದೆ, ಸರ್ಪವನ್ನೂ ಕೊಂದೆ. ಈಗಲೂ ನೀನೇ ಹೊರತು ಬೇರೆ ಸಮರ್ಥರು ಯಾರೂ ಇಲ್ಲ' ಎಂದು ಕೇಳಿದೆವಾದ ಕಾರಣ, ನೀನು 'ಈ ಹನ್ನೆರಡು ಸಾವಿರ ವೀರಭಂಟರ ಹಸ್ತಪಾದವಾಗಿ ನಾನು ಇದ್ದೇನೆ' ಎಂದು ನಿಂತು ಪಟ್ಟವೀಳ್ಯವನ್ನು ಹಿಡಿದು ಬಾದಶಾಹರು ಕಳಿಸಿದ್ದ ಈ ತೇಜಿಯನ್ನು ಏರಿ ಒಂದು ಯೋಜನ ಪರ್ಯಾಂತರ ಸವಾರಿ ಮಾಡಿ, ದಣಿಸಿ, (ಜಯಸಾಧಿಸಿ), ಮರಳಿ ನಮ್ಮ ಸಮ್ಮುಖಕ್ಕೆ ಬಂದು ಸಲಾಮು ಮಾಡಿ ನಿಂತೆ. ಆ ಕಾರಣ ನಿನ್ನ ಪರಾಕ್ರಮಕ್ಕೆ ಮೆಚ್ಚಿ ಸದರು ಭಕ್ಷ (=ಭಕ್ಷೀಸು?) ಕೊಟ್ಟು 'ನಿನಗೆ ಇಚ್ಛೆ ಬಂದದ್ದನ್ನು ಕೇಳಿಕೋ' ಎಂಬುದಾಗಿ ಹೇಳಿದೆವು. (ಆಗ ನೀನು) 'ನೀವು ಹಿಂದೆ ಮದುವೆಹೆಣ್ಣಿಗೆ ಕೊಡಬೇಕಿದ್ದ ತೆರೆ ಬಿಡಿಸಿದಿರಿ. ಅದರಿಂದ ಶಾಶ್ವತವಾದ ಧರ್ಮ ಕೀರ್ತಿ ನಿಮಗೆ ಬಂತು. ಈಗ ನಮ್ಮ ಕುಲಾಚಾರದ ಗೌಡಿಕೆ, ಕುಲಾಚಾರದಲ್ಲಿ

ಆದ - ಹಾದರ, ಅನ್ಯಾಯ, ಚರಾದಾಯ, ಹೂರಾದಾಯ, ಕೈ ತಪ್ಪು, ಬಾಯಿತಪ್ಪು, ಸಂತಾನವಿಲ್ಲದ ಬದುಕು, ದಿಕ್ಕಿಲ್ಲದ ಹೆಣ್ಣು ಇವೆಲ್ಲವನ್ನೂ ವಿಚಾರಿಸಿಕೊಳ್ಳುವ ಹಾಗೆ ನನಗೆ ಸೀಮೆ ವಾಡತಳವಾರಿಕೆ, 'ಜಿಗರು ೧ಕ್ಕೆ ದವಸ (ಹಣ?) ೧ ರೊಕ್ಕ ೨೦|೦'- ಹೀಗೆ ನಡೆದುಕೊಂಡು ಬರುವ ಹಾಗೆ ದಯಪಾಲಿಸಬೇಕು' ಎಂದು (ನೀನು ಕೇಳಿದಾಗ) ಸಕಲ ಸಾಮಾಜಿಕರು ಸರದಾರರು (ನಿನಗೆ ಹಾಗೆ ನೀಡಲು ನಮಗೆ) ಕೇಳಿಕೊಂಡರು. ಅದೇ ಪ್ರಕಾರಕ್ಕೆ ನೀನು ಆ ನಿನ್ನ ಕುಲವಿಚಾರಗಳನ್ನು ವಿಚಾರಿಸಿಕೊಂಡು ಸೀಮೆನಾಡತಳವಾರಿಕೆ ಯನ್ನೂ ವಿಚಾರಿಸಿ ಕೊಂಡು ಎಲ್ಲ ಗ್ರಾಮಾನುಗ್ರಾಮದಲ್ಲೂ ನೀನು ತೋರಿದ ಮೊತ್ತವನ್ನು ಸಂಗ್ರಹಿಸಿ ಕೊಂಡು, ಪುತ್ರಪೌತ್ರಪಾರಂಪರ್ಯವಾಗಿ ಅನುಭವಿಸಿಕೊಂಡು ಬರುವುದು ಎಂದು ಕಟ್ಟಳೆ ಮಾಡಿಸಿದ್ದೇನೆ. ಈ ಧರ್ಮನಿರ್ರೂಪಕ್ಕೆ ಯಾವನೊಬ್ಬ ಶಂಕೆ ಮಾಡಿದರೂ ಅವನು ಹಿಂದುವಾದರೆ ಕಾಶಿಯಲ್ಲಿ ಗೋವನ್ನೂ ಮುಸಲ್ಮಾನನಾದರೆ ಮೆಕ್ಕಾದಲ್ಲಿ ಹಂದಿಯನ್ನು ಕೊಂದ ಪಾಪಕ್ಕೆ ಹೋಗುತ್ತಾನೆ; ಮಗುವನ್ನೂಮಾತಾಪಿತೃ ಗಳನ್ನೂ ವಿಷವಿಕ್ಕಿಕೊಂದ ಪಾಪಕ್ಕೆ ಹೋಗುತ್ತಾನೆ. ಈ ಧರ್ಮ ಆಚಂದ್ರಾರ್ಕವಾಗಿರಲಿ ಎಂದು ಬರೆಸಿಕೊಟ್ಟ ನಿರೂಪ. (ಕಡೆಯಲ್ಲಿ ಶಾಪಾಶಯದ ಒಂದು ಸಂಸ್ಕೃತ ಶ್ಲೋಕವೂ ಇದೆ)

ಮೊದಲ ನಿರೂಪದಲ್ಲಿ ಹೇಳಿದ ರೀತಿಯಲ್ಲೇ ಈ ನಿರೂಪದ ಅಂತ್ಯದಲ್ಲೂ ಏಕಕೇಂದ್ರದ ದ್ವಿವರ್ತುಲಗಳೊಳಗೆ 'ರಾ' 'ಮ' 'ರಾ' 'ಯ' 'ರೈ' 'ಯ' 'ನ' 'ವರು' ಎಂಬ ಅಕ್ಷರಗಳಿದ್ದು, ಅವು 'ರಾಮರಾಯರ್ರೈಯನವರು' ಎಂಬ ಹೆಸರನ್ನು ಹೇಳುತ್ತವೆ.

ಮೊದಲ ನಿರೂಪದ ಸಂದರ್ಭದಲ್ಲಿ ಹೇಳಿರುವಂತೆಯೆ ಈ ನಿರೂಪದಲ್ಲಿ ಹೇಳಿದ ಕಾಲದ ಬಗ್ಗೆಯೂ ಹೇಳಬೇಕಾಗುತ್ತದೆ. ಮೊದಲ ನಿರೂಪ ಕಾಳಾಯುಕ್ತಿ ಸಂವತ್ಸರದ್ದಾದರೆ ಇದು ಅದರ ತರುವಾಯವೇ ಬರುವ ಸಿದ್ಧಾರ್ಥಿ ಸಂವತ್ಸರದ್ದಾಗಿದೆ. ಅಲ್ಲದೆ ಮೊದಲ ನಿರೂಪದಲ್ಲಿ ಹೇಳಿರುವಂತೆ ಇದರಲ್ಲೂ ಸಹ ಈ ನಿರೂಪ ಕೊಟ್ಟದ್ದು ಕೃಷ್ಣರಾಯರು ಎಂದು ಅದೇ ವಂಶವಿವರವನ್ನು ಹೇಳಿದೆ. ಹಿಂದಿನ ನಿರೂಪದ ಸಂದರ್ಭದಲ್ಲಿಯ ಅಂಶಗಳ ಚರ್ಚೆಯೇ ಈ ನಿರೂಪದ ಸಂದರ್ಭದಲ್ಲೂ ಅನ್ವ ಯಿಸುತ್ತದೆ. ಹೀಗಾಗಿ ಈ ನಿರೂಪದ ಕಾಲವನ್ನು ಕ್ರಿ.ಶ. ೧೫೫೯ ಎಂದು ಭಾವಿಸ ಬಹುದು.

ಮೇಲೆ ನೋಡಿದಂತೆ ಈ ನಿರೂಪ ಸಹ ಅದೇ ತಿಮ್ಮರಾವುತನಿಗೇ ನೀಡ ಲ್ಪಟ್ಟದ್ದು. ಇದರಲ್ಲಿ ಅವನು ಮಾಡಿದ ಇನ್ನೊಂದು ಸಾಹಸ ಮತ್ತು ಆ ಮೂಲಕ ಪಡೆದ ಇನ್ನೊಂದು ರಾಜಮನ್ನಣೆ ಇವುಗಳ ಪ್ರಸ್ತಾವಿದೆ. ಸರ್ಪ ಹುಲಿಯನ್ನು ಏಕ ಕಾಲಕ್ಕೆ ಕೊಂದ ಅವನ ಸಾಹಸದ ಬಗ್ಗೆ ತಿಳಿದ ಡಿಳ್ಳಿಯ ಬಾದಶಾಹ ಯಾರೂ ಸವಾರಿ ಮಾಡಿ ಮಣಿಸಲಾಗದಿದ್ದ ಎರಡು ಕಾಲ ಪಾವಟಿಗೆಯ ಕುದುರೆಯನ್ನು ಸವಾರಿ ಮಾಡಿ ಮಣಿಸುವ ಸವಾಲಿನೊಂದಿಗೆ

ವಿಜಯನಗರಕ್ಕೆ ಕಳಿಸಿಕೊಡುತ್ತಾನೆ. ಬೇರೆಯ ಕುದುರೆಗಳಿಗೆ ಪಾದ ಇಟ್ಟು ಏರಲು ಒಂದು ರಿಕಾಪು (ಪಾವಟಿಗೆ) ಇದ್ದರೆ, ಈ ಕುದುರೆಗೆ ಎರಡು ರಿಕಾಪುಗಳು ಬೇಕಾಗುವಷ್ಟು ಅದು ಎತ್ತರವಾಗಿತ್ತೆಂದು ಕಾಣುತ್ತದೆ. ಅದು ಯಾರನ್ನೂ ತನ್ನ ಬೆನ್ನ ಮೇಲೇರಿ ಕುಳಿತು ಕೊಳ್ಳಲು ಬಿಡುತ್ತಿರಲಿಲ್ಲವೆಂದೂ, ಒಂದು ವೇಳೆ ಯಾರಾದರೂ ಕುಳಿತರೆ ಅವರನ್ನು ಕೆಲವು ಹೆಜ್ಜೆ ಮುಂದೆ ಹೋಗುತ್ತಲೆ ನೆಲಕ್ಕೆ ಎತ್ತಿ ಹಾಕುತ್ತಿತ್ತೆಂದೂ, ಅಗಡು ಸ್ವಭಾವದ ಅದನ್ನು ಪಳಗಿಸಲು ಬಾದಶಾಹರ ಬಳಿ ಇರುವ ಯಾರಿಂದಲೂ ಆಗಿರಲಿಲ್ಲ ಎಂದೂ, ಇಂಥದನ್ನು ಏರಿ ಪಳಗಿಸುವುದು ಕೂಡಾ ಒಂದು ಪ್ರಾಣಾಪಾಯದ ದುಸ್ಸಾಹಸವೇ ಆಗಿತ್ತೆಂದೂ ಕಾಣುತ್ತದೆ. ಹಾಗೆಂದೇ ಅದನ್ನು ಪಳಗಿಸುವ ತಾಕತ್ತು ತೋರುವವರುಂಟೇ ಎಂಬ ಬಾದಶಾಹನ ಸವಾಲಿಗೆ ಮರ್ಯಾದೆ ಕಾಯ್ದುಕೊಳ್ಳುವ ಸಲುವಾಗಿ ವಿಜಯನಗರದ ದೊರೆ ಯಥಾಪ್ರಕಾರ ತಮ್ಮ ೧೨೦೦೦ ವೀರಭಂಟರಿಗೆ ಈ ಸವಾಲು ಹಿಡಿಯಲು ಪ್ರಕಟಿಸಿದಾಗ ಅವರಲ್ಲಿ ಯಾರೂ ಮುಂದೆ ಬರದೆ ಇದ್ದಾಗ, ಹಿಂದಿನಂತೆಯೇ ತಿಮ್ಮರಾವುತ ಈ ಸವಾಲನ್ನು ಸ್ವೀಕರಿಸಲು ದೊರೆಯ ಅಪ್ಪಣೆಯನ್ನು ಬೇಡುತ್ತಾನೆ. ಆಗ ದೊರೆ ಹಿಂದಿನ ವರ್ಷ ಅವನು ತೋರಿದ ಸಾಹಸಕ್ಕೆ ಮೆಚ್ಚುಗೆಯ ಮಾತುಗಳನ್ನಾಡಿ, ಪ್ರೋತ್ಸಾಹಿಸುತ್ತಾನೆ. ಆಗ ತಿಮ್ಮರಾವುತನು ತಾನು ಈ ೧೨೦೦೦ ವೀರಭಂಟರ ಹಸ್ತಪಾದವಾಗಿ ಇದ್ದೇನೆ ಎಂದು ಹೇಳುವದು ಅವನ ವಿನಯ ಸರಳತೆಗಳನ್ನೂ ಆತ್ಮವಿಶ್ವಾಸವನ್ನೂ ತೋರಿಸುತ್ತದೆ. (ಇದರಲ್ಲಿ ಡಿಳ್ಳಿಯವನೆಂದು ಹೇಳಿರುವ ಬಾದಶಾಹ ಡಿಳ್ಳಿಯವನಿರದೆ, ಬಹಮನಿ ರಾಜ್ಯಗಳಲ್ಲೊಂದರ ಸುಲ್ತಾನನಿದ್ದಿರಬಹುದು).

ಆಮೇಲೆ ಅವನು ಯಶಸ್ವಿಯಾಗಿ ಕುದುರೆಯನ್ನೇರಿದ್ದಲ್ಲದೆ, ಯೋಜನ ಪರಿಯಂತರ ಸವಾರಿ ಮಾಡಿ ದಣಿಸಿ ವಾಪಸು ಬಂದಾಗ, ದೊರೆ ಸಂತೋಷಪಟ್ಟು 'ನಿನ್ನಿಷ್ಟ ಬಂದದ್ದನ್ನು ಕೇಳು' ಎಂದಾಗ, ಹಿಂದೆ ದೊರೆ ಮದುವೆಯ ತೆರೆ ಬಿಡಿಸಿದ್ದರ ಬಗ್ಗೆ ಕೃತಜ್ಞತೆಯ ಮಾತುಗಳನ್ನಾಡುತ್ತಾನೆ. ಆಮೇಲೆ ಹೇಳುತ್ತಾನೆ. 'ನಮ್ಮ ಕುಲಾಚಾರದ ಗೌಡಿಕೆ, ನಮ್ಮ ಕುಲದಲ್ಲಿ ಆದ ಹಾದರ, ಅನ್ಯಾಯ (ಮೋಸ, ಅಕ್ರಮ), ಕೈತಪ್ಪು (ಕಳ್ಳತನ? ಇನ್ನೊಬ್ಬರನ್ನು ಹೊಡೆಯುವುದು?), ಬಾಯಿತಪ್ಪು (ಅನುಚಿತವಾದ ಮಾತು, ದೂಷಣೆ, ಸುಳ್ಳು, ಎಂಜಲಿಸುವುದು?) ಸಂತಾನವಿಲ್ಲದ ಬದುಕು (ಮಕ್ಕಳಿಲ್ಲದವರ ಜೀವನ ನಿರ್ವಹಣೆ), ದಿಕ್ಕಿಲ್ಲದ ಹೆಣ್ಣು (ಅನಾಥ ಸ್ತ್ರೀಗೆ ಆಶ್ರಯ, ರಕ್ಷಣೆ) ಇದಕ್ಕೆ ಸೂಕ್ತ ವಿಚಾರಣೆ ಮತ್ತು ವ್ಯವಸ್ಥೆ ಕೈಕೊಳ್ಳುವ ಹಾಗೆ, ಸೀಮೆ ನಾಡತಳವಾರಿಕೆ (ಒಂದು ನಿರ್ದಿಷ್ಟ ಪ್ರದೇಶದಲ್ಲಿ ನಿರ್ದಿಷ್ಟ ಸುಂಕವಸೂಲಿಯ ಅಧಿಕಾರ, ಹಕ್ಕು) ನೀಡುವುದರ ಜೊತೆಗೆ, 'ಚಿಗರು ೧ಕ್ಕೆ ದವಸ .... ೧ ರೊಕ್ಕ ...೦|೦' ಇಷ್ಟನ್ನು ವಂಶಪಾರಂಪರ್ಯವಾಗಿ ಅನುಭವಿಸಲು ಕಟ್ಟಳೆ ಮಾಡಬೇಕು. ಅವನ ಈ ಮನವಿಗೆ ಎಲ್ಲರೂ ದನಿಗೂಡಿಸುತ್ತಾರೆ, ದೊರೆಯೂ ಸಂತೋಷದಿಂದ ಒಪ್ಪಿ ಅದಕ್ಕೆ ನಿರೂಪ ಹೊರಡಿಸುತ್ತಾನೆ.

ಇಲ್ಲಿಯೂ ಸಹ ತಿಮ್ಮರಾವುತ ತನ್ನ ಸುಖದ ಬಗ್ಗೆ ಯೋಚಿಸದೆ, ತನ್ನ ಬದುಕನ್ನು ಪ್ರಾಣಾಂತಿಕ ಆಗಬಹುದಾದ ಅಪಾಯಕ್ಕೊಡ್ಡಿ ಅಗಡು ಕುದುರೆಯನ್ನೇರುವ ದುಸ್ಸಾಹಸಕ್ಕೆ ಪ್ರೇರಣೆಯಾಗಿರುವುದು ಅವನ ಜನಾಂಗದ ನೀತಿ ನಡಾವಳಿಗಳ ಸುವ್ಯವಸ್ಥೆಯ ಕಾಳಜಿ. ಇಲ್ಲಿಯೂ ಸಹ ಅವನು ತನಗಾಗಿ ಏನೂ ಕೇಳದೆ ತನ್ನ ಜನಾಂಗದ ಹಿತರಕ್ಷಣೆಯ ಸಲುವಾಗಿ ಸೀಮೆನಾಡತಳವಾರಿಕೆಯ ಸಣ್ಣ ಮೊತ್ತ ಸಂಗ್ರಹದ ಅಧಿಕಾರ ಬೇಡಿರುವುದು, ಅವನ ಶುದ್ಧ ನಿಸ್ವಾರ್ಥವನ್ನೂ ಸ್ವಜನಾಂಗ ಕಾಳಜಿಯನ್ನೂ ಎತ್ತಿತೋರಿಸಿ ಅವನನ್ನು ಆ ಜನಾಂಗದ ಸಾಂಸ್ಕೃತಿಕ ನಾಯಕನ ಸ್ಥಾನದಲ್ಲಿ ನಿಲ್ಲಿಸುತ್ತದೆ.

ಮೇಲ್ಕಂಡ ಎರಡು ನಿರೂಪಗಳ ಜೊತೆಗೆ ಮೂರನೆಯ ಇನ್ನೊಂದು ನಿರೂಪವೂ ಪ್ರತಿ ಮಾಡಿಕೊಳ್ಳಲ್ಪಟ್ಟಿತ್ತೆಂದು ಈಗ ಸಿಕ್ಕಿರುವ ಒಂದೇ ಗರಿಯ ಮೇಲಿನ ಬರಹದಿಂದ ವ್ಯಕ್ತವಾಗುತ್ತದೆ. ಈಗ ಉಳಿದಿರುವ ನಿರೂಪದ ಬರಹ ಅದರ ಕೇಂದ್ರ ಭಾಗವನ್ನು ಒಳಗೊಂಡಿದ್ದು, ಅದರ ಆದ್ಯಂತ್ಯ ಭಾಗ ಅನುಪಲಬ್ಧವಾಗಿದೆ. ಇದರ ಒಕ್ಕಣೆಯಿಂದ ಇದು ಕೂಡಾ ಅದೇ ತಿಮ್ಮರಾವುತನಿಗೆ ಪ್ರಾಯಶಃ ಎರಡನೆಯ ನಿರೂಪದ ಸಾಹಸದ ನಂತರ ಅವನು ಮಾಡಿದ ಮತ್ತೊಂದು ಸಾಹಸವನ್ನು ಮೆಚ್ಚಿ ಕೊಟ್ಟ ನಿರೂಪ ಎನ್ನ ಬಹುದು. ಈಗ ದೊರೆತ ಬರಹದಲ್ಲಿ ಕೃಷ್ಣದೇವರಾಯ ಮತ್ತು ಇತರರ ಹೆಸರಾಗಲಿ ತಿಮ್ಮರಾವುತನ ಹೆಸರಾಗಲಿ ಕಾಣುವುದಿಲ್ಲ. ಈಗ ದೊರೆತಿಲ್ಲದಿರುವ ಭಾಗದಲ್ಲಿ ಆ ಹೆಸರುಗಳು ಬಂದಿರಬೇಕು. ಆದರೆ ಹುಲಿಯನ್ನು ಕೊಂದ ಪ್ರಸ್ತಾಪ ಇದರಲ್ಲಿ ಬಂದಿರುವುದರಿಂದ, ಇವರ ಭಾಷೆ ಶೈಲಿ ನಿರೂಪಣೆ ಮೇಲೆ ನೋಡಿದ ನಿರೂಪಗಳ ರೀತಿಯಲ್ಲೇ ಇರುವುದರಿಂದ ಈ ನಿರೂಪ ಅದೇ ತಿಮ್ಮರಾವುತನಿಗೆ ನೀಡಿದ್ದು ಎಂಬುದನ್ನು ಸಂದೇಹಕ್ಕೆ ಎಡೆಇಲ್ಲದಂತೆ ಸೂಚಿತವಾಗಿದೆ.

ಅಪೂರ್ಣವಾಗಿ ದೊರೆತಿರುವ ಮೂರನೆಯ ನಿರೂಪದ ಪಾಠ ಹೀಗಿದೆ :

1 ಕೊಂದು | ಯಿಷ್ಟಾರ್ಥವಂನು ಪಡಕಂಡಂತ್ತಾ ವರ್ತ್ತಮಾನ
2 ಉ |ಡಿಳ್ಳಿಪಾಚ್ಛವರ್‍ರಿಗೇ ಅರ್‍ರಿಕೇ ಆದ್ದರಿಂದ | ಪಾಚ್ಛವ
3 ರು | ತಂಮಲ್ಲಿ | ೧೨ಂತು ಜನ ಜೆಟ್ಟೇರು ಯಿ
4 ದ್ದಾರೇ | ಯಿವರ ಮೇಲೇ ಲಡಾಯ ಮಾಡಿ ವಾ
5 ದರ್‍ರಿಸಿದವಗೇ ಮಾಡುವದು | ನಿವೋಗ |
6 ಜಟ್ಟೇರು | ಆಭರಣ | ಕಾಣಿಕೆ | ಉಡುಗೊರೆ
7 ಸಹ | ಆನೆ ಮೇಲೆ ಹೇರ್‍ರಿಸಿ ಕಳುಹಿಸಿದರಾದ ಕಾರ
8 ಣ | ನಾ ಉ ನಂಮ್ಮ ಹಂನ್ನೆರಡು ಸಾವಿರ ವಜ್ಜೀರರು |
9 ವೀರಭಂಟರ ಸಹ ಕರಸಿ ಕೇಳಿದಲ್ಲಿ | ನೀನು ಬಂದು

10 ಸಂಮುಖದಲ್ಲು ನಿಂತು | ಅಪ್ಪಣೆ ಕೇಳಿದಲ್ಲಿ | ಹಿಂ

11 ದಕ್ಕೆ ನಾಲ್ಕು ವೈಗ್ರನ ಕೊಂದೆ | ಯೀಗಲಾದರು ನೀ

12 ನೆ ಹೊರತು ಸಮರ್ತರು ವಬ್ಬರು ಯಿ

13 ಲ್ಲವೆಂದು | ಕೇಳಿದೆವಾದ ಕಾರಣ | ವೀರಾ

14 ದೀ ವೀರರ ಪಾದದ ಸೇವಾನುಸೇವಕನಾಗಿ ನಾನೆ ಯಿ

15 ಧೇನೆ ಯೆಂದು | ಪಟ್ಟಿ ವೀಳ್ಯವ ಹಿಡಿದು | ಅವರ್ರಿ

16 ಗೆ ಸಂಮುಖವಾಗಿ ನಿಂತು | ಬಾಣಬತ್ತಿ ಕರದ ಖ

ಈ ಮೇಲಿನ ಪಾಠದ ಸಾರವನ್ನು ಹೀಗೆ ಸಂಗ್ರಹಿಸಬಹುದು : (ಶಾಲಿವಾಹನ ಶಕವರ್ಷ ..... ನೇ ..... ಸಂವತ್ಸರದ .... ಮಾಸದ ... ತಿಥಿಯಲ್ಲು ಶ್ರೀ ಮದ್ರಾಜಾಧಿರಾಜ ಪ್ರೌಢ ಪ್ರತಾಪ ರಾಮರಾಯಯ್ಯನವರ ಪೌತ್ರರಾದ ಅಚ್ಯುತರಾಯರ ಪುತ್ರರಾದ ಕೃಷ್ಣರಾಯರು ವಿಜಯನಗರ ಪಟ್ಟಣದಲ್ಲಿ ರತ್ನಸಿಂಹಾಸನಾರೂಢರಾಗಿ ಸಾಮ್ರಾಜ್ಯವನ್ನು ಆಳುತ್ತಿದ್ದಾಗ, ದೊರೆಗಳು ಹಂಡೆದನುಗರ ತಿಮ್ಮರಾವುತನ ಕರೆಸಿಕೊಂಡು ಹೇಳಿದ್ದು ಏನೆಂದರೆ : ನೀನು ಹಿಂದೆ ಸರ್ಪವನ್ನು ಮೆಟ್ಟಿ ವ್ಯಾಘ್ರುವನ್ನು) ಕೊಂದು (ಸಾಹಸ ಮಾಡಿ) ಇಷ್ಟಾರ್ಥವನ್ನು ಪಡೆದುಕೊಂಡು ವರ್ತಮಾನ ಡಿಳ್ಳಿ ಬಾದಶಾಹರಿಗೆ ಅರಿಕೆಯಾದ್ದರಿಂದ, ಅವರು ತಮ್ಮಲ್ಲಿ ೧೨೦ ಜಟ್ಟಿಯರಿದ್ದಾರೆ; ಇವರ ಮೇಲೆ ಲಡಾಯ ಮಾಡಿ ಸೋಲಿಸಿದವರಿಗೆ ನಮ್ಮ ಮರ್ಯಾದೆ ಎಂದು ನಿಯೋಗ ಸಹಿತ ಜಟ್ಟಿಯರು, ಆಭರಣ, ಕಾಣಿಕೆ ಉಡುಗೊರೆ ಮುಂತಾದವನ್ನು ಆನೆಯ ಮೇಲೆ ಹೇರಿಸಿ ಕಳುಹಿಸಿದ ಕಾರಣ, ನಾವು ನಮ್ಮ ೧೨೦೦೦ ವಜೀರರು ವೀರಭಂಟರನ್ನು ಕರೆಸಿಕೇಳಿದಾಗ (ಅವರು ಯಾರೂ ಮುಂದೆ ಬಾರದೆ ಇದ್ದಾಗ?) ನೀನು ಬಂದು ನಮ್ಮ ಸಮ್ಮುಖದಲ್ಲಿ ನಿಂತು ಅಪ್ಪಣೆ ಕೇಳಿದೆ. ಆಗ ನಾವು 'ನೀನು ಹಿಂದೆ ನಾಲ್ಕು ಹುಲಿಗಳನ್ನು ಕೊಂದಿದ್ದೀಯೆ. ಈಗಲಾದರೂ ನೀನೇ ಈ ಸವಾಲನ್ನು ಕೈಕೊಳ್ಳಲು ಸಮರ್ಥ. ಹೀಗೆಂದು ನಾವು ಕೇಳಿದ್ದೇವೆ' ಎಂದು ಹೇಳಿದಾಗ ನೀನು 'ಸ್ವಾಮಿ ನಾನು ವೀರಾಧೀವೀರರ ಪಾದ ಸೇವಕನಾಗಿ ಈ ಸವಾಲನ್ನು ಸ್ವೀಕರಿಸಿದ್ದೇನೆ'- ಎಂದು ಪಟ್ಟಿ ವೀಳ್ಯವನ್ನು ಹಿಡಿದು ಅವರಿಗೆ (ಆ ಜಟ್ಟಿಗಳಿಗೆ?) ಸಮ್ಮುಖವಾಗಿ ನಿಂತು ...

ತಿಮ್ಮರಾವುತನ ೧೨೦ ಜನ ಜಟ್ಟಿಯರೊಂದಿಗೆ ಹೋರಾಡಿ ಗೆದ್ದದ್ದಕ್ಕೇ ಈ ನಿರೂಪ ಕೊಟ್ಟಿರಬೇಕೆನ್ನುವುದು ಸ್ಪಷ್ಟ. ಆದರೆ ಅವರು ಅಷ್ಟೊಂದು ಸಂಖ್ಯೆಯ ಜಟ್ಟಿಯರೊಂದಿಗೆ ಹೇಗೆ ಲಡಾಯ ಮಾಡಿದ ಎಂಬುದಾಗಲಿ, ಲಡಾಯದಲ್ಲಿ ಗೆದ್ದ ಮೇಲೆ ದೊರೆಗಳಿಂದ ಏನೇನು ಇಷ್ಟಾರ್ಥ ಸಲ್ಲಿಸಿಕೊಂಡ ಎಂಬುದಾಗಲಿ, ನಿರೂಪದ ಪೂರ್ಣ ಪಾಠ ಸಿಕ್ಕದಿರುವುದರಿಂದ ತಿಳಿಯದಂತಾಗಿದೆ. ಒಟ್ಟಿನಲ್ಲಿ ಈ ಬರಹ ಅಪೂರ್ಣವಿದ್ದರೂ

ತಿಮ್ಮರಾವುತನು ಕೊಂದದ್ದು ಮೊದಲ ನಿರೂಪದಂತೆ ಒಂದು ಹುಲಿ ಎಂದು ತಿಳಿಯುವುದಾದರೂ ಈ ನಿರೂಪದಂತೆ ಅವನು ಕೊಂದದ್ದು ಒಟ್ಟು ನಾಲ್ಕು ಹುಲಿ ಎಂಬ ವಿಭಿನ್ನ ಸಂಗತಿ ಇಲ್ಲಿ ವ್ಯಕ್ತವಾಗುತ್ತದೆ. ಎರಡನೆಯ ಮತ್ತು ಮೂರನೆಯ ನಿರೂಪಗಳ ಕಾಲದ ನಡುವೆ ಅವನು ಇನ್ನೂ ಮೂರು ಹುಲಿಗಳನ್ನು ಕೊಂದಿರಬಹುದೆ? ಈ ಪ್ರಶ್ನೆ ಬರುತ್ತದೆ. ಹುಲಿಗಳನ್ನು ಹೀಗೆ ಲೀಲಾಜಾಲವಾಗಿ ಕೊಲ್ಲುವ ಸಾಹಸಿಯ ಸಾಹಸದ ವಾರ್ತೆ ಬಹುಬೇಗನೆ ಆಗಿನ ಎಲ್ಲಾ ರಾಜ್ಯಗಳಲ್ಲೂ ಅದರಲ್ಲೂ ಶತ್ರುರಾಜ್ಯಗಳಲ್ಲೂ ಕ್ಷಿಪ್ರದಲ್ಲಿ ಹರಡಿತೆಂದು ತೋರುತ್ತದೆ. ಪ್ರಾಯಶಃ ವಿಜಯನಗರ ಸಾಮ್ರಾಜ್ಯದ ಮಗ್ಗುಲಿಗೇ ಇದ್ದ ಬಹಮನಿ ಸುಲ್ತಾನರುಗಳು ತಿಮ್ಮರಾವುತನ ಈ ಸಾಹಸದ ವಾರ್ತೆಯನ್ನು ಕೇಳಿ ಮೆಚ್ಚಿಕೊಂಡಿರಬೇಕು ಹಾಗೆಯೇ ಇಂಥ ವೀರರೂ ಧೀರರೂ ಇರುವ ವಿಜಯನಗರದ ಬಗ್ಗೆ ಆತಂಕಗೊಂಡಿದ್ದರೂ ಆಶ್ಚರ್ಯವಿಲ್ಲ. ಅಂಥ ಪರಾಕ್ರಮಕ್ಕೆ ಸ್ಪಂದಿಸಿದಂತೆ ಆ ಸುಲ್ತಾನರು ಒಡ್ಡುತ್ತಾ ಬಂದ ಹೊಸ ಹೊಸ ಸವಾಲುಗಳು ಕೆಲಕಾಲ ವಿಜಯನಗರದೊಂದಿಗಿನ ಅವರ ಕಹಿಸಂಬಂಧ ವನ್ನು ಮರೆಸುವಂತೆ ಮಾಡಿರಬಹುದು. ಶತ್ರುವೇ ಇದ್ದರೂ 'ಗುಣಕ್ಕೆ ಮಾತ್ಸರ್ಯವೇ?' ಎನ್ನುವಂತೆ ಪರೋಕ್ಷವಾಗಿ ತಿಮ್ಮರಾವುತನಂಥವರಿಗೆ ಪ್ರೋತ್ಸಾಹದಾಯಕವಾಗಿರಬೇಕು.

ಇಷ್ಟೇ ಅಲ್ಲದೆ, ಈ ನಿರೂಪಗಳಲ್ಲಿ ಅನೇಕ ಸಾಂಸ್ಕೃತಿಕ ಸೂಕ್ಷ್ಮಗಳೂ ಕೂಡಾ ಇರುವುದನ್ನು ಗಮನಿಸಬಹುದು. ಇಷ್ಟೆಲ್ಲ ಇದ್ದರೂ ಈ ನಿರೂಪಗಳ ವಿಶ್ವಾಸಾರ್ಹತೆ ಸೂಕ್ತ ಪ್ರಮಾಣಗಳಿಂದ ಇನ್ನೂ ಸಿದ್ಧವಾಗಬೇಕಾಗಿದೆ ಎಂಬ ಮಾತನ್ನು ಹೇಳಲೇಬೇಕು.

[ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕು ಬೀರೂರಿನಲ್ಲಿರುವ ಶಾಸನ ಸಂಶೋಧನ ಮಿತ್ರ ಶ್ರೀ ಡಿ. ಇಸ್ಮಾಯಿಲ್ (ಕನ್ನಡತನಯ) ಅವರು, ಬೀರೂರಿನ ಸಮೀಪದ ಉಡಿ(ಡು)ಗೆರೆ ಗ್ರಾಮದಲ್ಲಿ ಶ್ರೀ ದುನ್ನೇಗೌಡ (ಇವರೂ ಸಹ ಕುರುಬರಾವುತ ವಂಶಸ್ಥರು) ಎಂಬುವರ ಬಳಿ, ಮೇಲಿನ ಲೇಖನದಲ್ಲಿ ತಿಳಿಸಿದ ಎರಡು ನಿರೂಪಗಳ ಪಾಠ ವಿವರಗಳೇ ಇರುವ ಎರಡು ತಾಮ್ರ ಶಾಸನಗಳ ಪಾಠವನ್ನು ಈಚೆಗೆ ನನಗೆ ಕಳಿಸಿಕೊಟ್ಟಿರುತ್ತಾರೆ. ಅವರು ಕಳಿಸಿಕೊಟ್ಟಿರುವ ಪಾಠಗಳಿಗೂ, ಪ್ರಸ್ತುತ ಲೇಖನದ ತಾಳೇಗರಿಯ ನಕಲಿನ ಪಾಠಗಳಿಗೂ ಹೆಚ್ಚು ಅಂತರವಿಲ್ಲ. ಆ ಶಾಸನಗಳನ್ನು ಖುದ್ದು ನೋಡಿರುವ ಶ್ರೀ ಇಸ್ಮಾಯಿಲ್ ಅವು ಕೃತಕ ಶಾಸನಗಳಾಗಿರಬಹುದೆಂದು ಸಂದೇಹ ವ್ಯಕ್ತಪಡಿಸಿರುತ್ತಾರೆ. ಅವರು ಆ ಶಾಸನಗಳ ಪಾಠಗಳನ್ನು ನನಗೆ ಕಳಿಸಿಕೊಡು ವಲ್ಲಿ ಬೀರೂರಿನ ಕನ್ನಡ ಪ್ರಾಧ್ಯಾಪಕ ಮಿತ್ರ ಪ್ರೊ. ಸಿ.ಎಂ. ವಿಶ್ವನಾಥಯ್ಯ ಅವರು ಸಹಕರಿಸಿರುತ್ತಾರೆ. ಈ ಇಬ್ಬರಿಗೂ ನನ್ನ ಕೃತಜ್ಞತೆಗಳು.]

೧೭. ರೂಕ ನಾಣ್ಯ - ಒಂದು ಪರಿಶೀಲನೆ

ಡಾ.ಸಿ. ಮಹದೇವ

ಇತ್ತೀಚಿನ ದಿನಗಳಲ್ಲಿ ನಾಣ್ಯಶಾಸ್ತ್ರದ ಅಧ್ಯಯನ ಬಹಳ ಮಹತ್ವವನ್ನು ಪಡೆದು ಕೊಂಡಿದೆ. ನಾಣ್ಯಗಳ ಸಂಗ್ರಹ ಹಾಗೂ ಅಧ್ಯಯನಗಳಿಂದಾಗಿ ಅನೇಕ ಚಾರಿತ್ರಿಕ ಸಂಗತಿಗಳು ಪುನರ್‌ವ್ಯಾಖ್ಯಾನಕ್ಕೊಳಗಾಗಿವೆ. ಕರ್ನಾಟಕ ನಾಣ್ಯಶಾಸ್ತ್ರ ಅಧ್ಯಯನ ವಂತೂ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಚರಿತ್ರೆಗಳ ರಚನೆಗೆ ತನ್ನದೇ ಆದ ವಿಶೇಷ ಕೊಡುಗೆಗಳನ್ನು ನೀಡುವಲ್ಲಿ ಸಫಲವಾಗಿದೆ. ಖ್ಯಾತ ನಾಣ್ಯಶಾಸ್ತ್ರಜ್ಞರಾದ ಪ್ರೊ.ಎ.ವಿ. ನರಸಿಂಹಮೂರ್ತಿಯವರ 'ದಿ ಕಾಯಿನ್ಸ್ ಅಂಡ್ ಕರೆನ್ಸಿ ಸಿಸ್ಟಮ್ಸ್ ಇನ್ ಕರ್ನಾಟಕ' ಎಂಬ ಉದ್ಗ್ರಂಥವು ಕರ್ನಾಟಕದ ನಾಣ್ಯಗಳ ಅಧ್ಯಯನಕ್ಕೆ ಗಟ್ಟಿ ಯಾದ ತಳಪಾಯವನ್ನೇ ಹಾಕಿಕೊಟ್ಟಿದೆ. ಅವರು ಕರ್ನಾಟಕದ ವಿವಿಧ ಕಾಲಗಳ, ಪ್ರದೇಶಗಳ ಮತ್ತು ಹೆಸರುಗಳ ನಾಣ್ಯಗಳನ್ನು ಕುರಿತಂತೆ ಚರ್ಚಿಸಿ ವಿಶ್ಲೇಷಿಸಿದ್ದಾರೆ. ಅಲ್ಲದೆ ಇತರ ವಿದ್ವಾಂಸರ ಅಭಿಪ್ರಾಯ ಹಾಗೂ ವಾದವಿವಾದಗಳನ್ನು ಪ್ರಸ್ತಾಪಿಸಿ ಅಧ್ಯಯನವನ್ನು ವ್ಯಾಪಕವಾಗಿ ವಿಸ್ತರಿಸಿದ್ದಾರೆ. ತಮ್ಮ ಅಧ್ಯಯನದ ಸಂದರ್ಭದಲ್ಲಿ ರೂಕ ಎಂಬ ನಾಣ್ಯವನ್ನು ಪ್ರಸ್ತಾಪಿಸಿದ್ದಾರೆ.[1] ಈ ನಾಣ್ಯದ ಚಲಾವಣೆ, ಅರ್ಥ ಮತ್ತು ಮೌಲ್ಯವನ್ನು ಕುರಿತಂತೆ ಅವರು ಕೆಲವು ಪ್ರಶ್ನೆಗಳನ್ನು ಎತ್ತಿರುವ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನವನ್ನು ಸಿದ್ಧಪಡಿಸುವ ಪ್ರಯತ್ನ ಮಾಡಲಾಗಿದೆ.

ಮೊದಲನೆಯದಾಗಿ, ರೂಕ ಎಂಬ ನಾಣ್ಯವು ಕ್ರಿ.ಶ. ೮ನೆಯ ಶತಮಾನದಿಂದಲೂ ಆಂಧ್ರ ಪ್ರದೇಶದಲ್ಲಿ ವಿಶೇಷವಾಗಿ ಚಲಾವಣೆಯಲ್ಲಿತ್ತೆಂದು ತಿಳಿಸುತ್ತಾರೆ.[2] ಇದು ಕರ್ನಾಟಕದಲ್ಲಿ ಚಲಾವಣೆಯಲ್ಲಿ ಇರಲಿಲ್ಲವೆಂದು, ಇದರ ಬಳಿಕ ಆಂಧ್ರದಲ್ಲಿ ವಿಜಯನಗರ ಕಾಲದವರೆಗೂ ಮುಂದುವರೆಯಿತೆಂದು, ನೆಲ್ಲೂರಿನಲ್ಲಿ ದೊರೆತ ಶಾಸನಗಳ ಉಲ್ಲೇಖನಗಳನ್ನು ಆಧಾರವಾಗಿ ನೀಡುತ್ತಾರೆ.[3] ಕ್ರಿ.ಶ. ೧೨೭೬ ರ ಸೇವುಣ ರಾಮಚಂದ್ರನ ಪಂಡರಾಪುರ ಶಾಸನದಲ್ಲಿ ವಿಠಲ ದೇವಾಲಯಕ್ಕೆ ನೀಡಿದ ಉಡುಗೊರೆ ಯಗಳಲ್ಲಿ 'ರೂಕ' ಪದವು ಉಕ್ತವಾಗಿದೆ.[4] ಸ್ಮೃತಿ ಸ್ಥಳ' ಎಂಬ ಮಹಾನುಭಾವ ಪಂಥದ ಕೃತಿಯಲ್ಲೂ 'ರೂಕ' ನಾಣ್ಯದ ಪ್ರಸ್ತಾಪವನ್ನು ಕಾಣಬಹುದು.[5] ಕ್ರಿ.ಶ. ೧೩ ನೆಯ ಶತಮಾನದ ಹಾಗೂ ಅದಕ್ಕೂ ಹಿಂದೆ ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶದ ಬಹುತೇಕ ಪ್ರದೇಶಗಳು ವಾಸ್ತವವಾಗಿ ಕರ್ನಾಟಕದ ಭಾಗಗಳೇ ಆಗಿದ್ದವು. ಹಾಗಾಗಿ ಇಂದಿನ

ರಾಜ್ಯಗಳ ಗಡಿಯನ್ನು ಆಧರಿಸಿ ಮೇಲೆ ತಿಳಿಸಿದಂತೆ, ರೂಕ ನಾಣ್ಯ ಗಳು ಕರ್ನಾಟಕದಲ್ಲಿ ಚಲಾವಣೆಯಲ್ಲಿರಲಿಲ್ಲ ಎಂಬ ಅಭಿಪ್ರಾಯವನ್ನು ಪುನರ್ ಪರಿಶೀಲಿಸುವುದು ಸೂಕ್ತ. ಕನ್ನಡ ನಿಘಂಟಿನಲ್ಲಿ ರೊಕ, ರೋಕ, ರೊಕ್ಕ ಎಂದಿದ್ದು ನಗದು ಹಣವೆಂಬ ಅರ್ಥವನ್ನು ನೀಡುತ್ತದೆ. ಹಿಂದಿಯಲ್ಲಿ ರೋಕ್, ಮರಾಠಿಯಲ್ಲಿ ರೋಖ್, ತಮಿಳು, ಮಲೆಯಾಳ, ತುಳು ಮತ್ತು ತೆಲುಗಿನಲ್ಲಿ ರೊಕ್ಕಂ ಎಂದಿದೆ.

ಎರಡನೆಯದಾಗಿ, ರೂಕ ನಾಣ್ಯದ ಅರ್ಥವನ್ನು ಕುರಿತಂತೆ ಸ್ಪಷ್ಟತೆ ಕಂಡು ಬರುವುದಿಲ್ಲ. ಪ್ರೊ. ಎ.ವಿ. ನರಸಿಂಹಮೂರ್ತಿಯವರು ರೂಕ ಎಂಬುದು ಸೇವುಣರ ಕಾಲದ ಬೆಳ್ಳಿ ನಾಣ್ಯವೆಂದು ತಿಳಿಸುತ್ತಾರೆ.[6] ರೂಕ ಪದವು ಆಂಧ್ರಪ್ರದೇಶದ ಶಾಸನ ಗಳಲ್ಲಿ ಬೆಳ್ಳಿ ನಾಣ್ಯವೆಂಬ ಅರ್ಥದಲ್ಲಿ ಉಲ್ಲೇಖಗೊಂಡಿದೆ ಎನ್ನಲಾಗಿದೆ.[7] ರೂಕ ವನ್ನು ರೂಪ್ಯಕ ಅಥವಾ ರೂಪಾಯಿಯ ಮೌಲ್ಯದ ಬೆಳ್ಳಿ ನಾಣ್ಯವೆಂದು ತಿಳಿಯ ಲಾಗಿದೆ. ಆದರೂ ರೂಕ ಎಂಬುದರ ಖಚಿತವಾದ ಅರ್ಥ ಗೊತ್ತಿಲ್ಲವೆಂದು ಪ್ರೊ. ನರಸಿಂಹ ಮೂರ್ತಿಯವರು ಅಭಿಪ್ರಾಯಪಡುತ್ತಾರೆ.[8] ಮುಂದುವರೆದು ಈ ಸಂಬಂಧವಾಗಿ ಕಲಚೂರಿ ರಾಜನ ಕೃಷ್ಣರಾಜರೂಪಕ ಎಂಬ ನಾಣ್ಯವನ್ನು ಹೆಸರಿಸ ಬಹುದೆಂದು ತಿಳಿಸುತ್ತಾರೆ. ವಿಜಯನಗರ ಕಾಲದಲ್ಲಿ ಗದ್ಯಾಣ, ವರಾಹ, ಪೊನ್, ಪಗೋಡ, ಪ್ರತಾಪ, ಕಾಟಿ, ಪಣ, ಚಿನ್ನ, ಮಾಡ, ಹಾಗ, ವೀಸ, ಬೇಳೆ, ರೂಕ ಮತ್ತು ಕಾಸು ನಾಣ್ಯಗಳು ಚಲಾವಣೆಯಲ್ಲಿದ್ದವು.[9] ಅಂದರೆ ಇತರ ನಾಣ್ಯಗಳೊಂದಿಗೆ ರೂಕವನ್ನು ಸಹ ಹೆಸರಿಸಲಾಗಿದೆ. ವಿಜಯನಗರ ಕಾಲದ ತೆಲುಗು ಶಾಸನವೊಂದರಲ್ಲಿ ಅಪರೂಪಕ್ಕೆ ರೂಕ ಎಂಬುದು ಚಿನ್ನದ ನಾಣ್ಯವೆಂದು ಉಲ್ಲೇಖಿಸಲಾಗಿದ್ದು, ಇದರ ಖಚಿತ ಮೌಲ್ಯ ತಿಳಿದುಬರುವುದಿಲ್ಲ ಎನ್ನುತ್ತಾರೆ.[10] ತೆಲುಗು ಪ್ರಾಧ್ಯಾಪಕರಾದ ಗಾಜಲ ವೀರಯ್ಯ ಎಂಬುವವರು ರೂಕ ಎನ್ನುವುದು ಚಿನ್ನದ ನಾಣ್ಯವಾಗಿತ್ತು ಎಂದು ಮಾಹಿತಿ ನೀಡುತ್ತಾರೆ. ರೂಕ ಬೆಳ್ಳಿ ನಾಣ್ಯವಾಗಿದ್ದು, ವರಹ ಮತ್ತು ಗದ್ಯಾಣಗಳಿಗೆ ಹೋಲಿಸಿದರೆ, ವಿಜಯನಗರ ಕಾಲದಲ್ಲಿ ಇದು ಅಷ್ಟೇನೂ ಜನಪ್ರಿಯ ನಾಣ್ಯವಾಗಿರಲಿಲ್ಲವೆಂದು ಅಭಿಪ್ರಾಯ ಪಡಲಾಗಿದೆ.[11] ಬಹುಶಃ ಗದ್ಯಾಣ, ವರಹಗಳು ಮೇಲ್ವರ್ಗದಲ್ಲಿ ಚಲಾವಣೆಯಲ್ಲಿದ್ದು ಕೆಳವರ್ಗದಲ್ಲಿ ಈ ನಾಣ್ಯಗಳು ಚಲಾವಣೆ ಯಲ್ಲಿದ್ದಿರಬಹುದು. ಹಾಗಾಗಿ ಅವು ಜನಪ್ರಿಯವಾಗಿ ಹಣ ಎಂಬ ಅರ್ಥ ಪಡೆದಿವೆ.

ಈ ಸಂಬಂಧವಾಗಿ ವಿಜಯನಗರ ಕಾಲದ ಕೆಲವು ಕನ್ನಡ ಶಾಸನಾಧಾರಗಳನ್ನು ಪರಿಶೀಲಿಸುವುದು ಸೂಕ್ತ. ಕ್ರಿ.ಶ. ೧೫೧೩ರ ಮುದ್ದಲಾಪುರ ಶಾಸನವು, ಗ್ರಾಮದ ರೊಕ್ಕ ಆದಾಯ ಭತ್ತ ಆದಾಯವನ್ನು ಉಲ್ಲೇಖಿಸುತ್ತದೆ.[12] ಕ್ರಿ.ಶ. ೧೫೩೦ರ ಮೇಲು ಕೋಟೆ ಶಾಸನದ ದಾನದತ್ತಿಗಳ ಪಟ್ಟಿಯಲ್ಲಿ 'ರೂಕ' ಎಂದಿದೆ.[13] ಅಂದರೆ ಹಣ ಎಂಬ ಅರ್ಥದಲ್ಲಿ ಹೇಳಲಾಗಿದೆ. ಕ್ರಿ.ಶ. ೧೫೩೪ರ ಹಂಪೆಯ ವಿಠಲದೇವಾಲಯದ ಶಾಸನದಲ್ಲಿ 'ಶ್ರೀ

ವಿಠಲದೇವರ ಭಂಡಾರಕೆ ಪುಲಿವಟಿ ಆಗಿ ಸಮರ್ಪಿಸಿದ ರೊಕ್ಕ ವರಹಗ ೧೦೦೦' ಎಂದು ಉಲ್ಲೇಖವುಂಟು.[14] ಇದೇ ದೇವಾಲಯದ ಕ್ರಿ.ಶ. ೧೫೩೬ರ ಶಾಸನವೊಂದು 'ದೇವರ ಭಂಡಾರಕ್ಕೆ ಸಮರ್ಪಿಸಿದ ರೊಕ್ಕ ಘಟ್ಟಿ ವರಹ ಯಿನ್ನೂರು' ಎಂದು ತಿಳಿಸುತ್ತದೆ.[15] ಕ್ರಿ.ಶ. ೧೫೪೫ರ ಮತ್ತೊಂದು ಶಾಸನದಲ್ಲಿ, 'ಗ್ರಾಮದ ಪ್ರಜೆ ಗಳು ಕೊಡುವ ಉಡುಗೊರೆಯ ರೊಕ್ಕ ಹಾಗೂ ಪಟಕಾರರು ಕೊಡುವ ರೊಕ ಎಂದಿದೆ.'[16] ಕ್ರಿ.ಶ. ೧೫೪೭ರ ಪುರದ ಶಾಸನದಲ್ಲಿ, "ಗವುಡ ಮಾನ್ಯದ ರೊಕ, ವೋಜರು ತರುವ ರೊಕ ಮತ್ತು ಕುಂಬಾರ ತರುವ ರೊಕ" ಎಂಬ ಉಲ್ಲೇಖ ಗಳುಂಟು.[17] ಕ್ರಿ.ಶ. ೧೫೪೪ರ ರಾವಿಹಾಳು ಶಾಸನದಲ್ಲಿ "ಆಯ ಸಾಂಮ್ಯರೊಕ" ಎಂದಿದೆ.[18] ಕ್ರಿ.ಶ. ೧೫೬೨ರ ನಕ್ಕರಹಾಳು ಶಾಸನವು 'ಶ್ರೀ ತಿರುಮಲ ದೇವರ ಕಾಣಿಕೆ ರೊಕವನು' ಎಂದು ಪ್ರಸ್ತಾಪಿಸಿದೆ.[19] ಕ್ರಿ.ಶ.೧೫೬೩ರ ಹಂಪಿಯ ವಿಠಲ ದೇವಾಲಯದ ಶಾಸನವೊಂದರಲ್ಲಿ 'ಸುವರ್ಣಾದಾಯ ಬಿರಾಡ ಆಯಾ ಸಾಂಮ್ಯ ಮೊದಲಾದ ರೊಕ್ಕ ಧಾನ್ಯ ಸಹವಾಗಿ ಸರ್ವಮಾನ್ಯವಾಗಿ ಸಮರ್ಪಿಸಿದೆ' ಎಂದಿದೆ.[20] ಕೊನೆಯದಾಗಿ, ಕೃಷ್ಣದೇವರಾಯನ ಉದಯಗಿರಿ ಶಾಸನದಲ್ಲಿ ರೊಕ ಮತ್ತು ಧಾನ್ಯಗಳನ್ನು ದೇವರಿಗೆ ನೀಡಿದ ಮಾಹಿತಿ ಯುಂಟು.[21] ಆದರೆ ಕನ್ನಡದ ಶಾಸನಗಳಲ್ಲಿ ರೊಕ್ಕದೊಂದಿಗೆ ದವಸ ಧಾನ್ಯಗಳನ್ನು ಉಲ್ಲೇಖಿಸಲಾಗಿದೆ. ಅಂದರೆ ದೇವಾಲಯ ಗಳಿಗೆ ಹಣ ಮತ್ತು ದವಸ ಧಾನ್ಯಗಳ್ನು ಜೊತೆಯಲ್ಲೇ ನೀಡುತ್ತಿದ್ದರು. ಇಲ್ಲಿ ದವಸಧಾನ್ಯಗಳೆಂದರೆ ಎಲ್ಲ ಬಗೆಯ ಆಹಾರ ಧಾನ್ಯಗಳನ್ನು ಸೂಚಿಸುತ್ತದೆ. ಅದೇ ರೀತಿ ರೊಕ್ಕ ಎಂದರೆ ವಿವಿಧ ಬಗೆಯ ಮತ್ತು ಮೌಲ್ಯದ ನಾಣ್ಯಗಳನ್ನು ಸೂಚಿಸುತ್ತದೆ. ಅಂದರೆ ಅದು ಗದ್ಯಾಣ ವಿರಲಿ ಅಥವಾ ವರಾಹ ನಾಣ್ಯಗಳಿರಲಿ ಅವುಗಳನ್ನು ಹಣ ಎಂಬ ಅರ್ಥದಲ್ಲಿ ಹೇಳಲಾ ಗಿದೆ. ಇಂದಿಗೂ ಸಹ ಉತ್ತರ ಕರ್ನಾಟಕದಲ್ಲಿ ಕಾಗದದ ನೋಟಿರಲಿ ಅಥವಾ ಯಾವುದೇ ಲೋಹದ ನಾಣ್ಯಗಳಿರಲಿ ಅದನ್ನು ರೊಕ್ಕವೆಂದೇ ಕರೆಯುತ್ತಾರೆ. ಅಂದರೆ ದುಡ್ಡು, ಹಣ ಎಂಬ ಅರ್ಥದಲ್ಲೆ ಗ್ರಹಿಸುತ್ತಾರೆ. ಇಲ್ಲಿನ ಜನಪದ ಕಥೆ ಮತ್ತು ಗಾದೆಗಳಲ್ಲಿ ರೊಕ ಮತ್ತು ರೊಕ್ಕ ಪದಗಳು ವ್ಯಾಪಕವಾಗಿ ಬಳಕೆಗೊಂಡಿವೆ. ಕರ್ನಾಟಕ ದಲ್ಲಿ ನೆಲಸಿರುವ ಆರ್ಯ ವೈಶ್ಯಜನಾಂಗದವರಲ್ಲಿ ರೊಕ್ಕಪ್ಪ, ರೊಕ್ಕಪ್ಪಶೆಟ್ಟಿ ಎಂಬ ವ್ಯಕ್ತಿನಾಮಗಳನ್ನು ಕಾಣ ಬಹುದು. ಇವನ ಮನೆಭಾಷೆ ತೆಲುಗು. ಇಂತಹ ವ್ಯಕ್ತಿನಾಮಗಳು ಕನ್ನಡ ಶಾಸನಗಳಲ್ಲೂ ದೊರೆಯುತ್ತವೆ.

ಈ ಮೇಲಿನ ವಿವರಗಳಿಂದ ವಿಜಯನಗರ ಕಾಲದ ಕನ್ನಡ ಶಾಸನಗಳಲ್ಲಿ ರೊಕ, ರೊಕ್ಕ ಎಂಬ ಪದಗಳ ಉಲ್ಲೇಖವನ್ನು ಕಾಣುತ್ತೇವೆ. ಲಿಪಿಕಾರ ರೊಕ ಎಂಬ ಪದಕ್ಕೆ 'ಕ' ಒತ್ತಕ್ಷರವನ್ನು ಕೆಲವೆಡೆ ಕೊರೆದಿಲ್ಲ ಅಂದ ಮಾತ್ರಕ್ಕೆ ರೊಕ ಮತ್ತುರೊಕ್ಕ ಬೇರೆ ಬೇರೆ ಪದಗಳಲ್ಲ. ಕ್ರಿ.ಶ. ೧೫೪೫ರ ಶಾಸನದಲ್ಲಿ ರೊಕ ಮತ್ತು ರೊಕ್ಕ ಎಂಬ ಎರಡೂ

ಪದಗಳನ್ನು ಒಂದೇ ಅರ್ಥದಲ್ಲಿ ಬಳಸಲಾಗಿದೆ.[22] ಹಾಗಾಗಿ ಇವೆರಡೂ ಪದಗಳು ಒಂದೇ ಆಗಿವೆ. ಕೆಲವು ತೆಲುಗು ಶಾಸನಗಳಲ್ಲಿರುವ ರೂಕ ಕುರಿತ ಉಲ್ಲೇಖಗಳನ್ನು ಗಮನಿಸೋಣ. ಅಚ್ಯುತರಾಯನ ಕ್ರಿ.ಶ. ೧೫೩೧ರ ಬೆಂಗಳೂರಿನ ತೆಲುಗು ಶಾಸನದಲ್ಲಿ, ನಾಮಕರಣ ಸಮಾರಂಭದಂದು ಸ್ಥಳೀಯ ದೇವಾಲಯಕ್ಕೆ ಒಂದು ರೂಕವನ್ನು ಕೊಟ್ಟ ವಿಷಯದ ಪ್ರಸ್ತಾಪವಿದೆ [23] ಕ್ರಿ.ಶ. ೧೫೩೧ರ ನೆಲ್ಲೂರಿನ ಶಾಸನದಲ್ಲಿ ೬೦ ರೂಕಗಳ ದತ್ತಿಯನ್ನು ಉಲ್ಲೇಖಿಸಲಾಗಿಗೆ.[24] ಇದೇ ಸ್ಥಳದ ಅಚ್ಯುತರಾಯನ ಕ್ರಿ.ಶ. ೧೫೩೫ರ ಶಾಸನದಲ್ಲಿ ೧೨ ರೂಕಗಳನ್ನು ದಂಡವಾಗಿ ಕೊಟ್ಟ ವಿಷಯವಿದೆ.[25] ಕೃಷ್ಣದೇವರಾಯನ ಉದಯಗಿರಿ ಕನ್ನಡ ಶಾಸನದಲ್ಲಿ ರೊಕ ಎಂದು ಉಲ್ಲೇಖಗೊಂಡಿದೆ.[26] ಇಲ್ಲಿ ಗಮನಿಸ ಬೇಕಾದ ಸಂಗತಿ ಎಂದರೆ ತೆಲುಗು ಶಾಸನದಲ್ಲಿ ರೂಕ ಎಂದು, ಕನ್ನಡ ಶಾಸನಗಳಲ್ಲಿ ರೊಕ ಎಂದು ಉಲ್ಲೇಖಗೊಂಡಿರುವುದು. 'ರೂಕ' ಎಂಬ ಪದವು, ಕನ್ನಡ ಶಾಸನಗಳಲ್ಲಿ ಕಂಡುಬರುವ ರೊಕ ಅಥವಾ ರೊಕ್ಕ ಪದಕ್ಕೆ ವಿಷಯಾರ್ಥದಲ್ಲೂ ಹಾಗೂ ಪದೋಚ್ಚಾರಣೆಯಲ್ಲೂ ತುಂಬಾ ನಿಕಟ ಸಂಬಂಧ ವನ್ನು ಹೊಂದಿದೆ. ಬಹುಶಃ ರೂಕ ಪದವೇ ನಂತರದ ಕಾಲದಲ್ಲಿ ರೋಕ ಅಥವಾ ರೊಕ್ಕ ಎಂಬ ಪದರೂಪಗಳನ್ನು ಪಡೆದಿರಬೇಕು. ಪ್ರಾಚೀನ ಕಾಲದಿಂದಲೂ ಆಂಧ್ರ ಮತ್ತು ಕರ್ನಾಟಕದ ನಡುವೆ ಗೆರೆ ಎಳೆಯುವಷ್ಟು ಸಾಂಸ್ಕೃತಿಕ ವ್ಯತ್ಯಾಸಗಳಿರಲಿಲ್ಲ. ಹಾಗಾಗಿ ಪರಸ್ಪರ ಕೊಡುಕೊಳ್ಳುವಿಕೆ ಗಳು ಸರಾಗವಾಗಿ ನಡೆಯುತ್ತಿದ್ದವು. ಈ ಹಿನ್ನೆಲೆಯಲ್ಲಿ ರೂಕ ಪದವು ರೋಕ ಅಥವಾ ರೊಕ್ಕ ಎಂದು ಪ್ರಾದೇಶಿಕ ರೂಪಗಳನ್ನು ಪಡೆದುಕೊಂಡಿದ್ದಲ್ಲಿ ಆಶ್ಚರ್ಯವಿಲ್ಲ. ರೊಕ್ಕವೆಂದರೆ ನಗದು ಹಣ ಅಥವಾ ದುಡ್ಡು ಎಂಬ ಅರ್ಥವಿದೆ. ಮತ್ತೊಂದು ಪದವಾದ ರೋಕ ಎಂದರೂ ನಗದು ಎಂಬ ಅರ್ಥವುಂಟು. ಮೇಲೆ ಹೇಳಿದ ಅನೇಕ ಶಾಸನಗಳಲ್ಲಿ ರೊಕ್ಕ ಅಥವಾ ರೋಕ ಎಂಬ ಪದಗಳನ್ನು ಸಂಪೂರ್ಣವಾಗಿ ಹಣ ಎಂಬ ಪರಿಭಾಷೆಯಲ್ಲಿ ಪ್ರಸ್ತಾಪಿಸಿರುವುದು ಗಮನಾರ್ಹ. ಅಂದರೆ ರೂಕ ಮೊದಲಿಗೆ ನಾಣ್ಯವೊಂದರ ಹೆಸರಾಗಿದ್ದು, ನಂತರದ ಕಾಲದಲ್ಲಿ ಹಣ ಎಂಬ ಸಾಮಾನ್ಯ ಅರ್ಥವನ್ನು ಪಡೆದು ಕೊಂಡಂತೆ ಕಾಣುತ್ತದೆ. ಇದು ಕಡಿಮೆ ಮೌಲ್ಯದ್ದಾಗಿದ್ದು, ಜನಸಾಮಾನ್ಯರಲ್ಲಿ ಹೆಚ್ಚು ಚಲಾವಣೆ ಯಲ್ಲಿದ್ದಿರಬಹುದು. ರೂಕ ಎಂಬುದು ಶಾಸನಗಳಲ್ಲಿ ಬೆಳ್ಳಿ ನಾಣ್ಯವೆಂದು ಹಾಗೂ ಅಪರೂಪಕ್ಕೆ ಚಿನ್ನದ ನಾಣ್ಯವೆಂದು ಉಲ್ಲೇಖಗೊಂಡಿದೆ[27].

ಹೀಗೆ ಆಂಧ್ರದ ಶಾಸನಗಳಲ್ಲಿ ಕಂಡು ಬರುವ ರೂಕ, ಕನ್ನಡ ಶಾಸನಗಳ ರೊಕ ಅಥವಾ ರೊಕ್ಕ ಪದಗಳು ಒಂದೇ ಆಗಿವೆ. ಹಿಂದೆ ಆಂಧ್ರ ಮತ್ತು ಮಹಾರಾಷ್ಟ್ರದ ಬಹುಭಾಗಗಳು ಕರ್ನಾಟಕದ ಅರಸು ಮನೆತನಗಳು ಅಧೀನದಲ್ಲೇ ಇದ್ದವು. ಹಾಗಾಗಿ ಆ ಭಾಗಗಳಲ್ಲಿ ಚಲಾವಣೆಗೊಂಡ ನಾಣ್ಯಗಳ ಅರ್ಥ ಮತ್ತು ಮೌಲ್ಯ ಒಂದೇ ಆಗಿರುವ ಸಾಧ್ಯತೆಗಳಿವೆ. ಬಹುಶಃ ರೂಕ ಎಂಬುದು ಒಂದು ನಾಣ್ಯದ ಹೆಸರಾಗಿ ಉಳಿಯದೆ

ಹಣ ಎಂಬ ವಿಶಾಲವಾದ ಅರ್ಥ ಪಡೆದುಕೊಂಡು ರೊಕ್ಕ ಎಂಬ ರೂಪಾಂತರವನ್ನು ಹೊಂದಿರಬಹುದು. ಆಂಧ್ರದಲ್ಲಿ ರೂಕ ನಿರ್ದಿಷ್ಟ ಮೌಲ್ಯದ ನಾಣ್ಯವಾಗಿ ಗುರುತಿಸಿಕೊಂಡರೆ, ಕರ್ನಾಟಕದಲ್ಲಿ ರೊಕ, ರೊಕ್ಕ ಎಂಬುದು ಹಣದ ಪರಿಭಾಷೆಯಾಗಿ ಬಳಕೆಗೊಂಡಿವೆ. ಈ ಬಗ್ಗೆ ಇನ್ನಷ್ಟು ಪರಿಶೀಲನೆ ನಡೆಯಬೇಕಿದೆ.

ಆಧಾರ ಮತ್ತು ಟಿಪ್ಪಣೆಗಳು

1. ನರಸಿಂಹಮೂರ್ತಿ ಎ.ವಿ. 1997 : 'ದಿ ಕಾಯಿನ್ಸ್ ಅಂಡ್ ಕರೆನ್ಸಿ ಸಿಸ್ಟಮ್ಸ್ ಇನ್ ಕರ್ನಾಟಕ', ಡೈರೆಕ್ಟೋರೇಟ್ ಆಫ್ ಆರ್ಕಿಯಲಾಜಿ ಅಂಡ್ ಮ್ಯೂಸಿಯಮ್ಸ್, ಮೈಸೂರು, ಪುಟ 162
2. ಅದೇ
3. ವಿಜಯನಗರ ಇನ್‌ಸ್ಕ್ರಿಪ್ಷನ್ಸ್, ಸಂಪುಟ - 1, ನಂ. 35
4. ನರಸಿಂಹಮೂರ್ತಿ ಎ.ವಿ. 1997 : ಪೂರ್ವೋಕ್ತ, ಪುಟ 162; ಪ್ರಮಕೋಲೆ, ನಂ. 34
5. ಅದೇ ; ಸ್ಮೃತಿ ಸ್ಥಳ, ನಂ. 110
6. ನರಸಿಂಹಮೂರ್ತಿ ಎ.ವಿ. 1997: ಪೂರ್ವೋಕ್ತ, ಪು. 162
7. ಅದೇ
8. ಅದೇ
9. ಅದೇ ; ನರಸಿಂಹಮೂರ್ತಿ ಎ.ವಿ. 1996: ವಿಜಯನಗರದ ನಾಣ್ಯ ಸಂಪತ್ತು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಪು. 70
10. ಅದೇ ; ಪು. 229
11. ಅದೇ; ಪು. 245
12. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -1, ಬಳ್ಳಾರಿ ಜಿಲ್ಲೆ, ಹೊಸಪೇಟೆ, ನಂ. 25, 'ಯಿ ಗ್ರಾಮದಲೂ ಹುಟ್ಟಿದ ರೊಕ್ಕ ಆದಾಯ ಭತ್ತ ಆದಾಯ ತಳದಾರಿಕೆ ಸುಂಕ ಸಾಂಮ್ಯ ಜೋಡಿ ಬಿರಾಡ ಏನುಂಟಾದ ಆದಾಯವನೂ ಸರ್ವಮಾನ್ಯವಾಗಿ.'
13. ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ - 6, ಮಂಡ್ಯ ಜಿಲ್ಲೆ, ಪಾಂಡವಪುರ ನಂ. 132
14. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - 3, ಹಂಪಿ ಶಾಸನಗಳು, ನಂ. 189, ಪು. 144
15. ಅದೇ ನಂ. 194, ಪು. ೧೫೦

    'ಶ್ರೀ ವಿಠಲದೇವರಿಗೆವೊಂದು ಅವಸರ ನೈವೇದ್ಯ ನಡೆದ ಕಟ್ಟಳೆಗೆ ದೇವರ ಭಂಡಾರಕ್ಕೆ ಸಮರ್ಪಿಸಿದ ರೊಕ್ಕ ಘಟ್ಟಿ ವರಹ ಯಿನ್ನೂರು ವರಹನೂ ಈ ವರಹಕಂ ಬಡ್ಡಿ ತಿಂಗಳು 1ಕ್ಕೆ ಘಟಿವರಹ 5ಕ್ಕಂ ಸೆಲೆ ಚಕ್ರ ಗ 50'

16. ಅದೆ; ನಂ. 201, ಪು. 156

'ಶ್ರೀ ವಿಠಲದೇವರ ಅಮೃತಪಡಿಗೆ ಸಲುವರ ಉಡೂರ ಗ್ರಾಮದ ಸ್ಥಳ ಸುಂಕ ಗ್ರಾಮದ ಪ್ರಜೆಗಳು ಕೊಡುವ ಉಡುಗೊರೆಯ ರೊಕ್ಕ ಗಾಣ ಮರ ಅಂಗಡಿ ಪಟಕಾರರು ಕೊಡುವ ರೊಕ'

17. ಅದೇ ; ಸಂಪುಟ - 7, ಕೊಪ್ಪಳ ಜಿಲ್ಲೆ, ಕುಷ್ಟಗಿ ನಂ. 17 ಪು. 295

'ನಾಡದಳವಾರಿಕೆ, ಗವುಡಮಾನಯದ ರೊಕ ಅಂಗಡಿ ಗಾಣ ಮಗ್ಗ ಸಿದಾಯ ಕಡಾಯ ವೋಜರು ತರುವ ರೋಕ ಕುಂಬಾರ ತರುವ ರೊಕ'

18. ಅದೇ ; ಸಂಪುಟ -1 ಬಳ್ಳಾರಿ ಜಿಲ್ಲೆ, ಸಿರುಗುಪ್ಪ ನಂ. 25

19. ಅದೇ ; ಹಡಗಲಿ, ನಂ. 111

20. ಅದೇ ; ಸಂಪುಟ - 3 ಹಂಪಿ ಶಾಸನಗಳು, ನಂ. 185, ಪು. 138

21. ಅದೇ ; ಸಂಪುಟ - 5, ಆಂಧ್ರ ಪ್ರದೇಶದ ಕನ್ನಡ ಶಾಸನಗಳು ಭಾಗ -2 ನೆಲ್ಲೂರು ಜಿಲ್ಲೆ, ಉದಯಗಿರಿ ನಂ. 620

22. ಅದೇ ; ಸಂಪುಟ -3, ಹಂಪಿ ಶಾಸನಗಳು, ನಂ. 201, ಪು. -156

23. ನರಸಿಂಹಮೂರ್ತಿ ಎ.ವಿ. 1996: ಪೂರ್ವೋಕ್ತ ಪು. 47-48; ವಿಜಯನಗರ ಶಾಸನಗಳು ಸಂಪುಟ -1, ನಂ. 22

24. ಅದೇ; ಆರಿಎ 1939, ನಂ. 341

25. ಅದೇ ; ಸೌ. ಇಂ.ಇ. XVI, ನಂ. 110

26. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - 5, ಆಂಧ್ರಪ್ರದೇಶದ ಕನ್ನಡಶಾಸನಗಳು ಭಾಗ -2, ನೆಲ್ಲೂರು ಜಿಲ್ಲೆ, ಉದಯಗಿರಿ ನಂ. 620

27. ನರಸಿಂಹಮೂರ್ತಿ ಎ.ವಿ. 1997: ಪೂರ್ವೋಕ್ತ, ಪು, 162, 229

೧೮. ತಿರುಮಲದೇವಿ

ಎಂ.ವಿ.ಶ್ರೀನಿವಾಸ್

ಶ್ರೀಕೃಷ್ಣದೇವರಾಯನ ಪತ್ನಿ ತಿರುಮಲದೇವಿ ವಿಜಯನಗರದ ಇತಿಹಾಸದಲ್ಲಿ ಮಹತ್ವದ ಸ್ಥಾನವನ್ನು ಪಡೆದಿದ್ದಾಳೆ. ತಿರುಮಲದೇವಿಯನ್ನು ಕುರಿತು ಕನ್ನಡ, ತೆಲುಗು, ಇಂಗ್ಲೀಷ್, ಪೋರ್ಚುಗೀಸ್ ದಾಖಲೆಗಳು ವಿವರವಾದ ಚಿತ್ರವನ್ನು ನೀಡು ತ್ತವೆ. ಶಾಸನಗಳು, ಶಿಲ್ಪಗಳು, ಸ್ಮಾರಕಗಳೂ ಆಕೆಯ ಜೀವಿದ ಬಗ್ಗೆ ಬೆಳಕು ಚೆಲ್ಲು ತ್ತವೆ. ಕನ್ನಡಕ್ಕಿಂತಲೂ ಹೆಚ್ಚಾಗಿ ತೆಲುಗು ಸಾಹಿತ್ಯ ಕೃತಿಗಳು ಈ ರೀತಿಯ ಜೀವನ ಸಾಧನೆಯನ್ನು ತಿಳಿಯಲು ವಿಪುಲವಾದ ಆಧಾರಗಳನ್ನು ಒದಗಿಸುತ್ತವೆ.

ತಿರುಮಲಾದೇವಿ ಶ್ರೀರಂಗಪಟ್ಟಣದ ಮಂಡಲಾಧಿಪತಿ ವೀರಯ್ಯನ ಮಗಳೆಂದು ಪೋರ್ಚುಗೀಸ್, ತೆಲುಗು ದಾಖಲೆಗಳು ತಿಳಿಸುತ್ತವೆ. ಪೇಸ್ ಮತ್ತು ನ್ಯೂನಿಜ್, ಹಲವು ಬಾರಿ, ಕುಮಾರ ವೀರಯ್ಯನ ಬಗ್ಗೆ ವಿವರ ನೀಡಿ ತಿರುಮಲಾದೇವಿ ಆತನ ಮಗಳೆಂಬುದನ್ನು ಸ್ಪಷ್ಟಪಡಿಸುತ್ತಾರೆ. ಕೆ.ವಿ. ಲಕ್ಷ್ಮಣರಾವ್, ಶೇಷಯ್ಯ, ಸೂತಲಪಾಟಿ, ಪೇರರಾಜು, ಆರುದ್ರ, ಸಾಧು ಸುಬ್ರಹ್ಮಣ್ಯ ಶಾಸ್ತ್ರಿ ವೈ. ಮೊದಲಾದ ತೆಲುಗು ಲೇಖಕರು, ರಾಣಿ, ಶ್ರೀರಂಗಪಟ್ಟಣದ ಕುಮಾರ ವೀರಯ್ಯನ ಮಗಳೆಂಬ ಅಂಶವನ್ನು ಸಮರ್ಥಿಸುತ್ತಾರೆ. ವೀರಪ್ಪ ಅಥವಾ ವೀರಯ್ಯ ಉಮ್ಮತ್ತೂರಿನ ದೊರೆ ಗಂಗರಾಜನ ತಮ್ಮ. ಕೃಷ್ಣದೇವರಾಯನು ಉಮ್ಮತ್ತೂರನ್ನು ಗೆದ್ದು ಆ ರಾಜ್ಯವನ್ನು ವೀರಪ್ಪ ಮತ್ತು ಕೆಂಪೇಗೌಡ ಇವರಿಗೆ ಹಂಚಿದನು ಎಂದು ಕೊಂಗುದೇಶ ರಾಜರ್ಕಳ ಚರಿತ್ರೆ ತಿಳಿಸುತ್ತದೆ. ತಿರುಮಲಾದೇವಿಯ ಮದುವೆ ೧೫೧೦ ಅಥವಾ ೧೫೧೨ರಲ್ಲಿ ನಡೆದಿರಬೇಕು. ಅಂದರೆ ಕೃಷ್ಣದೇವರಾಯನ ಪಟ್ಟಾಭಿಷೇಕದ ಸಮಯಕ್ಕೆ ಕೃಷ್ಣ ದೇವರಾಯ ತಿರುಮಲದೇವಿ ಮದುವೆಯಾಗಿರಲಿಲ್ಲ. ತಿರುಮಲಾದೇವಿ ಕಟಕಪ್ರಣ ದೀಶ ಪ್ರತಾಪರುದ್ರ ದೇವನ ಮಗಳೆಂದು ಆಂಜನೇಯ ಅವರು ವಿದ್ಯಾನಗರ ಚರಿತ್ರವು ಭಾಗ -2ರಲ್ಲಿ ತಿಳಿಸಿರುವುದು ನಿರಾಧಾರವಾದುದೆಂದು ಇತಿಹಾಸಕಾರರು ನಿರ್ಧರಿಸಿದ್ದಾರೆ. ವೀರಶ್ಯಾಮರಾಮ (ಚಾಮರಾಯ) ಎಂಬ ಹೆಸರೂ ಇದ್ದಿತೆಂದು ಹೇಳಿರುವುದನ್ನು ಚರಿತ್ರಕಾರರು ವಿಧವಿಧವಾಗಿ ಅರ್ಥೈಸಿದ್ದಾರೆ. ಸ್ಲೇಟರ್ ಅವರು ಸ್ಯಿವೆಲ್ ಅವರ ವಾದ ಸರಿಯಲ್ಲವೆಂದು ವಿಪುಲವಾದ ಆಧಾರಗಳನ್ನು ನೀಡಿ ಕುಮಾರ ಚಾಮರಾಜ ಭಿನ್ನವ್ಯಕ್ತಿಗಳೆಂಬ ಅಂಶವನ್ನು ಎತ್ತಿ ಹಿಡಿದಿದ್ದಾರೆ. ಹಯವದನ ರಾಯರೂ ಇದೇ ವಾದವನ್ನು ಒಪ್ಪುತ್ತಾರೆ.

ತುಳುವ ವಂಶಸಂಸ್ಥಾಪಕ ನರಸನಾಯಕ ಶ್ರೀರಂಗಪಟ್ಟಣವನ್ನು ಗೆದ್ದು ಸ್ವಾಧೀನ ಪಡಿಸಿಕೊಂಡಿದ್ದು, ಯುದ್ಧದಲ್ಲಿ ವೀರಯ್ಯನನ್ನು ತೋರಿಸಿದ ಸಹಾಯಕ್ಕಾಗಿ ಅವನನ್ನು ಆ ಪ್ರಾಂತದ ಪಾಲಕನನ್ನಾಗಿ ನೇಮಿಸಿದನು. ಆತನ ಮಗಳಾದ ತಿರುಮಲದೇವಿ ಸರ್ವಾಂಗಸುಂದರಿಯೂ ಸರ್ವಗುಣ ಸಂಪನ್ನೆಯೂ ಆಗಿದ್ದುದನ್ನು ಗಮನಿಸಿ ಆಕೆಯನ್ನು ತನ್ನ ಮಗ ಕೃಷ್ಣರಾಯನಿಗೆ ಕೊಟ್ಟು ವಿವಾಹವನ್ನು ಮಾಡಿಸಿದನು. ಈ ವಿವಾಹ ೧೪೯೨-೯೪ರಲ್ಲಿ ನಡೆದಿರಬಹುದೆಂದು ಇತಿಹಾಸಕಾರ ಕೋದಂಡರಾಮಯ್ಯ ತಿಳಿಸುತ್ತಾರೆ. ವಾಗಟಶಾಸನವು ಇಮ್ಮಡಿ ಸಾಳ್ವನರಸಿಂಹರಾಯರ ಆಳಿಯ ಕೃಷ್ಣರಾಯರಿಗೆ ೧೪೯೬ರಲ್ಲಿ ಮದುವೆಯಾಗಿತ್ತೆಂದು ತಿಳಿಸುತ್ತದೆ. ಹಾಗಾದರೆ ಕೃಷ್ಣದೇವರಾಯನು ಮೊದಲೇ ವಿವಾಹವಾಗಿದ್ದು ಅನಂತರ ಅವನ ರಾಣಿ ೧೫೧೦ರಲ್ಲಿ ಗತಿಸಿರಬೇಕು. ಅನುಪಮ ಸುಂದರಿಯಾದ ತಿರುಮಲದೇವಿಯ ಯೌವನೋದ ಯವನ್ನು ಕೃಷ್ಣದೇವರಾಯ ತನ್ನ ಆಮುಕ್ತ ಮಾಲ್ಯದ ಕೃತಿಯಲ್ಲಿ ಚಿತ್ರಿಸಿದ್ದಾನೆಂದು ಕೆಲವು ವಿದ್ವಾಂಸರು ಭಾವಿಸುತ್ತಾರೆ. ಪೇಸ್ ಹೇಳುವ ಪ್ರಕಾರ ಕೃಷ್ಣದೇವರಾಯ ತಿರುಮಲದೇವಿಯನ್ನು ಮಾತ್ರವಲ್ಲದೆ ಆಕೆಯ ಒಬ್ಬರೋ ಇಬ್ಬರೋ ತಂಗಿಯರನ್ನು ಮದುವೆಯಾದಂತೆ ಕಾಣುತ್ತದೆ. ಈ ವಿವಾಹ ಶ್ರೀರಂಗಪಟ್ಟಣದಲ್ಲಿ ಸಂಪ್ರದಾಯ ಪೂರ್ವಕ ಜರುಗಿತೆಂದು ಕೋದಂಡರಾಮಯ್ಯ ನವರು ಅಭಿಪ್ರಾಯಪಡುತ್ತಾರೆ. ರಾಣಿಯ ಪುತ್ರ ತಿರುಮಲನ ಜನನವು ಶ್ರೀರಂಗಪಟ್ಟಣದಲ್ಲಿ ಜರುಗಿತು. ಸಾಳ್ವ ಗೋವಿಂದರಾಜ ಕೃಷ್ಣರಾಯನ ಪುತ್ರೋತ್ಸವ ಸಂದರ್ಭದಲ್ಲಿ ನೀಡಿದ ದಾನ ಶಾಸನ ಇದನ್ನು ದೃಢಪಡಿಸುತ್ತದೆ. ಅಷ್ಟು ಮಾತ್ರವಲ್ಲ ನರಸನಾಯಕ ಶ್ರೀರಂಗಪಟ್ಟಣದಲ್ಲಿ ಕೆಲವು ವರ್ಷಗಳು ನೆಲಸಿದ್ದು, ಅಲ್ಲಿ ಅವರನ್ನು ವಿದ್ವಾಂಸರನ್ನು ಕವಿಗಳನ್ನು ಕಲಾವಿದರನ್ನು ಕರೆಸಿ ಗೌರವ ಸನ್ಮಾನಿಸುತ್ತಿದ್ದರು ಎಂದೂ ಅವರು ತಿಳಿಸುತ್ತಾರೆ.

ಕೃಷ್ಣದೇವರಾಯನು ಬಹುಪತ್ನಿಯರನ್ನು ಹೊಂದಿದ್ದು ಸರ್ವವಿದಿತವಾಗಿದ್ದರೂ ಹಿರಿಯ ರಾಣಿಯರು ಎಂಬ ಬಗ್ಗೆ ಜಿಜ್ಞಾಸೆಯಿದೆ. ಕ್ರಿ.ಶ. ೧೫೧೭ ರ ಶಾಸನವು ತಿರುಮಲದೇವಿಯೆ ಪಟ್ಟ ಮಹಿಷಿ ಎಂಬ ಅಂಶವನ್ನು ದೃಢಪಡಿಸುತ್ತದೆ. ಕೃಷ್ಣ ದೇವರಾಯನು ಆಕೆಯನ್ನು ಸದಾ ಸಂತೋಷದಲ್ಲಿಡುವಂತೆ ಎಲ್ಲಾ ಪ್ರಯತ್ನಗಳನ್ನು ಮಾಡಿದನು. ಶ್ರೀರಂಗಪಟ್ಟಣದಲ್ಲಿ ಆಕೆಯ ವಿವಾಹವಾದನಂತರ ಆಕೆಯ ಉನ್ನತ ಸಂಸ್ಕಾರ ಮತ್ತು ರಸಿಕತೆಯನ್ನು ಗ್ರಹಿಸಿ ತುಂಗಭದ್ರಾ ತೀರದಲ್ಲಿ ಚಿತ್ರವಾಟಿಕಾ ಎಂಬ ಉದ್ಯಾನವನ್ನು ನಿರ್ಮಿಸಿದನು. ಈ ಚಿತ್ರವಾಟಿಕಾ ನಾಗಲಾಪುರಕ್ಕೆ ಎರಡು ಮೈಲಿ ದೂರದಲ್ಲಿದ್ದಿತು. ಈ ಸುಂದರ ಉದ್ಯಾನವನವನ್ನು ಕುರಿತು ರಾಯಲ್ ಏಷ್ಯಾಟಿಕ್ ಸೊಸೈಟಿ ಪತ್ರಿಕೆಯು ಈ ರೀತಿ ತಿಳಿಸುತ್ತದೆ :

The village Chitra vadiga is a corruption Chitravatica meaning a beautiful garden. It is said that the place was a suburb of Vijayanagara and was founded by Krishnaraya for the recreation of his wife - queen Tirumala Devi.

ಇಷ್ಟೇ ಅಲ್ಲದೆ ಕೃಷ್ಣರಾಯನು ರಾಜಧಾನಿಯ ಒಂದು ಭಾಗವನ್ನು ತಿರುಮಲ ದೇವಿಪುರ ಎಂದು ನಾಮಕರಣ ಮಾಡಿದ್ದನು. ಈ ಚಿತ್ರವಾಟಿಕವನ್ನು ಕುರಿತು ಹರಿಚರಿತ್ರೆಯಲ್ಲಿ ಬರುವ ಕೆಲವು ಪದ್ಯಗಳೂ ವಿವರವನ್ನು ನೀಡುತ್ತದೆ ಎಂದು ಕೆಲವು ಇತಿಹಾಸಕಾರರು ಭಾವಿಸುತ್ತಾರೆ.

ಪಟ್ಟಮಹಿಷಿ ತಿರುಮಲದೇವಿಯ ಅಂತಿಮ ದಿನಗಳು ದುಃಖ ಭರಿತವಾಗಿದ್ದು ದಾಗಿ ತಿಳಿದು ಬರುತ್ತದೆ. ತನ್ನ ಒಬ್ಬನೇ ಮಗ ತಿರುಮಲ ದೇವರಾಯ ೬ ನೆಯ ವಯಸ್ಸಿನಲ್ಲಿ ವಿಷಪ್ರಾಶನದಿಂದ ಮೃತನಾದನು. ಇದರಿಂದ ದಂಪತಿಗಳಿಗೆ ಭರಿಸಲಾರದ ದುಃಖ ಉಂಟಾಯಿತು. ಇದು ಸಾಲದೆಂಬಂತೆ ೧೫೩೦ರಲ್ಲಿ ಆಕೆಯ ಸರ್ವಸ್ವವಾಗಿದ್ದ ಕೃಷ್ಣ ದೇವರಾಯನು ಮೃತನಾದನು. ಇಂತಹ ಘೋರವಾದ ದುಃಖವನ್ನು ಸಹಿಸಿಕೊಂಡು ಆಕೆಯು ಬಾಳಬೇಕಾಯಿತು.

ತಿರುಮಲದೇವಿ ಮತ್ತಿತರ ರಾಣಿಯರು ಹಿಂದಿನ ರಾಣಿಯರಂತೆ ಪತಿಯೊಡನೆ ಸಹಗಮನವನ್ನು ಪಾಲಿಸಲಿಲ್ಲ. ಇದಕ್ಕೆ ಇತಿಹಾಸಕಾರರು ಹಲವಾರು ಕಾರಣಗಳನ್ನು ನೀಡಿದ್ದಾರೆ. ಬಹುಶಾಸ್ತ್ರ ಪರಿಚಯವನ್ನು ಹೊಂದಿದ್ದ ಕೃಷ್ಣರಾಯನೇ ತನ್ನ ರಾಣಿಗೆ ಸಹಗಮನ, ಸ್ಮೃತಿ ಶಾಸ್ತ್ರವಿರೋಧವಾದುದು ಎಂದು ತಿಳಿಸಿದ್ದನು. ಇಷ್ಟಲ್ಲದೆ ಆಕೆಯ ಮಗಳಾದ ತಿರುಮಲಾಂಬ ಅಳಿಯ ರಾಮರಾಯ ಮತ್ತು ಆಪ್ತ ಬಂಧುವರ್ಗ ಆಕೆಯನ್ನು ಪ್ರಾರ್ಥಿಸಿ ಸಹಗಮನಪ್ರಯತ್ನದಿಂದ ತಪ್ಪಿಸಿರಬಹುದೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಎಲ್ಲಕ್ಕೂ ಮಿಗಿಲಾಗಿ ಸಾಮ್ರಾಜ್ಯ ರಕ್ಷಣೆ ತನ್ನ ಕರ್ತವ್ಯವೆಂದು ಭಾವಿಸಿ ತನ್ನ ಕುಟುಂಬವನ್ನು ರಕ್ಷಿಸಿಕೊಡು ಆಕೆ ಜೀವಿಸಿದ್ದಳು ಎಂದು ಹೇಳಬಹುದು. ತಿರುಮಲದೇವಿ ತನ್ನ ಮಗಳು ಆಕೆಯ ಮಕ್ಕಳನ್ನು ನೋಡಿಕೊಂಡು ತನ್ನ ದುಃಖವನ್ನು ಮರೆತು ೧೫೪೨ರವರೆಗೂ ಜೀವಿಸಿದ್ದಳು.

ಹೀಗೆ ಸಾಮಾನ್ಯ ಸಾಮಂತರಾಜ ಕುಟುಂಬದಲ್ಲಿ ಜನಿಸಿ ಮಹಾಸಾರ್ವಭೌಮ ಕೃಷ್ಣರಾಯನ ಪಟ್ಟಮಹಿಷಿಯಾಗಿ ವಿಜಯನಗರ ಸಾಮ್ರಾಜ್ಯದ ವಜ್ರ ಸಿಂಹಾಸನ ವನ್ನು ಅಲಂಕರಿಸಿದ ಮಹಾ ಅದೃಷ್ಟಶಾಲಿ ತಿರುಮಲದೇವಿ ಕೃಷ್ಣ ದೇವರಾಯನಿಗೆ ಎಲ್ಲಾ ವಿಧದಲ್ಲೂ ತಕ್ಕ ಸಹಧರ್ಮಿಣಿಯಾಗಿ ಮಲಯಕೂಟ ಮಣಿಮಂದಿರದಲ್ಲಿ ಶೃಂಗಾರವನದಲ್ಲಿ ವಿಹರಿಸುತ್ತಿದ್ದಂತೆ ಭೀಕರ ರಣರಂಗದಲ್ಲೂ ಪತಿಯೊಡನೆ ಪಾಲ್ಗೊಂಡ ಮಹಾ ಧೈರ್ಯಶಾಲಿ. ಪತಿಯೊಡನೆ ಅನೇಕ ಪುಣ್ಯ ಕ್ಷೇತ್ರಗಳಿಗೆ ಭೇಟಿ ನೀಡಿ ಹಲವಾರು ದೇವಾಲಯಗಳಿಗೆ ಕಾಣಿಕೆ ದಾನ ದತ್ತಿಗಳನ್ನು ನೀಡಿದ ದಯಾ ಮಯಿ. ಮುಕ್ಕತಿಮ್ಮನ

ಮಹಾಕವಿಯ ಕಾವ್ಯ ವಸ್ತುವಾಗಿ ಮೃದುಮಧುರ ಮಹಾಪ್ರಬಂಧ ಕಾವ್ಯಗಳಿಗೆ ಕಾರಣಭೂತಳಾದ ತಿರುಮಲದೇವಿ ಆಂಧ್ರ ಸಾಹಿತ್ಯ ಪ್ರಪಂಚದಲ್ಲಿ ತನ್ನ ಹೆಸರನ್ನು ಶಾಶ್ವತವಾಗಿ ಸ್ಥಾಪಿಸಿದ್ದಾಳೆ.

೧೯. ವಿಜಯನಗರ ಕಾಲದ ವೀರಭದ್ರ ದೇಗುಲಗಳು ಮತ್ತು ಶಿಲ್ಪಗಳು

ಡಾ.ಎಸ್.ಎನ್. ಶಿವರುದ್ರಸ್ವಾಮಿ

ಮದುರೆಯ ಸುಲ್ತಾನರಿಂದ ಹೊಯ್ಸಳ ರಾಜವಂಶ ಕ್ರೂರವಾಗಿ ಅಂತ್ಯವಾದಾಗ ದಕ್ಷಿಣ ಭಾರತದ ಶಾಂತಿಯುತ ರಾಜಕೀಯ ಪರಿಸರಕ್ಕೂ ಧಕ್ಕೆ ಉಂಟಾಯಿತು. ದೆಹಲಿ ಸುಲ್ತಾನರಿಂದ ನಿರಂತರವಾಗಿ ನಡೆದ ದಾಳಿಗಳು ಕಂಗೆಟ್ಟಿದ್ದ ರಾಜಕೀಯ ಸನ್ನಿವೇಶವನ್ನು ಮತ್ತಷ್ಟು ಪ್ರಕ್ಷುಬ್ಧಗೊಳಿಸಿದವು. ಅತೃಪ್ತ ಅರಸರಿಗೆ ಬಂಡಾಯ ವೇಳಲು ಇದು ಪ್ರಚೋದನೆ ನೀಡಿತು. ಇಂತಹ ವಿಷಮ ರಾಜಕೀಯ ಸನ್ನಿವೇಶದಲ್ಲಿ ಹದಿನಾಲ್ಕನೇ ಶತಮಾನದ ಎರಡನೇ ಪಾದದಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಆಯಿತು. ಈ ಹೊಸ ಸಾಮ್ರಾಜ್ಯ ಬದುಕಿನ ಎಲ್ಲ ರಂಗಗಳಲ್ಲೂ ನೂತನ ಯುಗವನ್ನು ಆರಂಭಿಸಿತು. ಇದೇ ಕಾಲದಲ್ಲೇ ಬಹುಮನಿ ರಾಜ್ಯವೂ ಸಹ ಅಸ್ತಿತ್ವಕ್ಕೆ ಬಂದಿತು. ಮೊದಲಿಗೆ, ವಿಜಯನಗರ ಸಾಮ್ರಾಜ್ಯವು ದಖನ್ ಸುಲ್ತಾನರ ದಾಳಿಗಳನ್ನು ತಡೆದು ಹಾಗೂ ಅತೃಪ್ತ ನಾಯಕರನ್ನು ಹತ್ತಿಕ್ಕಿ ರಾಜಕೀಯ ಸ್ಥಿರತೆಯನ್ನು ಕಾಪಾಡಿತು. ಸಾಮ್ರಾಜ್ಯ ರಕ್ಷಣೆಯ ಪ್ರಕ್ರಿಯೆಯಲ್ಲಿ ವಿಜಯನಗರ ಸಾಮ್ರಾಜ್ಯವು ಹೋರಾಟದ ಲಕ್ಷಣಗಳನ್ನು ಉನ್ನತವಾಗಿ ಮೈಗೂಡಿಸಿಕೊಂಡಿತು. ಅದು ಸ್ಥಾಪನೆ ಆದ ಕೆಲ ಕಾಲ ದಲ್ಲಿ ದಕ್ಷಿಣ ಭಾರತವನ್ನು ತನ್ನ ಅಧೀನಕ್ಕೆ ತೆಗೆದುಕೊಂಡು, ಕಳಿಂಗ ದೇಶದ ಗಡಿ ಯವರೆಗೂ ವ್ಯಾಪಿಸಿತು. ವಿಜಯನಗರ ಸಾಮ್ರಾಜ್ಯವು ಮುಂದೆ ಎರಡೂ ಕಾಲು ಶತ ಮಾನಗಳ ಕಾಲ ರಾಜಕೀಯದಲ್ಲಿ ಉನ್ನತವಾಗಿ ಮೆರೆದು, ಬಹಮನಿ ರಾಜ್ಯದ ನಿರಂತರ ದಾಳಿಗಳನ್ನು ಎದುರಿಸಿತು. ಎರಡನೆಯದಾಗಿ, ಈ ಸಾಮ್ರಾಜ್ಯವು ಧರ್ಮ, ಸಾಹಿತ್ಯ, ಕಲೆ ಮತ್ತು ವಾಸ್ತು ಕ್ಷೇತ್ರಗಳಲ್ಲಿ ಮಾಡಿದ ಸಾಧನೆ ಮತ್ತು ಸೇವೆ ಅನನ್ಯ ಮತ್ತು ಅನಂತವಾದುದು. ಸಾಮ್ರಾಜ್ಯದ ಉದ್ದಗಲಕ್ಕೂ ಅತ್ಯಧಿಕ ಸಂಖ್ಯೆಯಲ್ಲಿ ದೇವಾಲಯಗಳು ನಿರ್ಮಾಣ ವಾದವು. ಈ ಕಾಲದಲ್ಲಿ ದೇವಾಲಯಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಚಳುವಳಿಯೇ ಉಂಟಾಯಿತು. ಅರಸರು ತಮ್ಮ ವೈಭವ, ಘನತೆ ಮತ್ತು ಸಾರ್ವ ಭೌಮತೆಯ ಸಂಕೇತವಾಗಿ ದೇವಾಲಯಗಳ ನಿರ್ಮಾಣಕ್ಕೆ ತಮ್ಮನ್ನು ಅರ್ಪಿಸಿಕೊಂಡರು. ಅರಸರನ್ನು ನೋಡಿ, ಅಧಿಕಾರಿಗಳು ಮತ್ತು ಶ್ರೀಮಂತರೂ ಸಹ ಅನುಸರಿಸಿದರು. ಅಂದಿನ ಸಮಾಜದ ಎಲ್ಲ ವರ್ಗಗಳ ಜನರು ದೇವಾಲಯಗಳ ನಿರ್ಮಾಣದಲ್ಲಿ

ಸಕ್ರಿಯವಾಗಿ ಪಾಲ್ಗೊಂಡರು. ವಿಜಯನಗರದ ಕಲೆ ಮತ್ತು ವಾಸ್ತು ರಾಜಧಾನಿಯಿಂದ ದಕ್ಷಿಣ ಭಾರತದ ಎಲ್ಲೆಡೆಗೂ ಪ್ರಸಾರವಾಯಿತು. ವಿಜಯನಗರ ಕಾಲದಲ್ಲಿ ನಿರ್ಮಾಣ ಕಾರ್ಯ ಬೃಹತ್ಪ್ರಮಾಣದಲ್ಲಿ ನಡೆಯಿತು. ಇಷ್ಟೊಂದು ಪ್ರಮಾಣದಲ್ಲಿ ನಡೆದ ನಿರ್ಮಾಣ ಕಾರ್ಯವನ್ನು ಭಾರತದ ಯಾವುದೇ ಭಾಗದಲ್ಲಿ ಅಥವಾ ವಿಜಯನಗರದ ಪೂರ್ವದಲ್ಲಾಗಲಿ ಅಥವಾ ಅನಂತರದ ಕಾಲದಲ್ಲಾಗಲಿ ನಡೆದಿಲ್ಲವೆಂಬುದು ಗಮನಿಸಬೇಕಾದ ಸಂಗತಿ. ಅದ್ಭುತವಾದ ಕ್ರಿಯಾಶೀಲವಾದ ವಾಸ್ತು ನಿರ್ಮಾಣದ ಕಾಲ, ಇದು. ಉನ್ನತವಾದ ವಾಸ್ತು ನಿರ್ಮಾಣದ ಬಗ್ಗೆ ಜನರು ಅಪರಿಮಿತವಾದ ಒಲವನ್ನು ಬೆಳೆಸಿಕೊಂಡಿದ್ದರು. (ಉನ್ನತವಾದ) ದೇವಾಲಯಗಳ ಸೌಂದರ್ಯವನ್ನು ನೂರ್ಮಡಿಗೊಳಿಸಲು ಶಿಲ್ಪಕಲೆಯನ್ನು ಧಾರಾಳವಾಗಿ ಉಪಯೋಗಿಸಿಕೊಂಡರು. ಇದು ಶೌರ್ಯೋತ್ಸಾಹದ ಕಾಲ. ದೇವಾಲಯಗಳು ಶೌರ್ಯಾಭಿವ್ಯಕ್ತಿಯ ಮಾಧ್ಯಮಗಳಾದುದುಂಟು. ದಖನ್ ಸುಲ್ತಾನರ ರಕ್ತಪಾತದಿಂದ ಕೂಡಿದ ದಾಳಿಗಳಿಂದ ಉಂಟಾದ ಸಾಮಾಜಿಕ ಅಭದ್ರತೆ ಮತ್ತು ರಾಜಕೀಯ ಅಸ್ಥಿರತೆಯನ್ನು ಹೋಗಲಾಡಿಸಲು 'ಶೌರ್ಯೋತ್ಸಾಹ' ರಾಷ್ಟ್ರೀಯ ನೀತಿಯೂ ಅಗತ್ಯವೂ ಆಯಿತು. ಇದರಿಂದ ಯುದ್ಧೋತ್ಸಾಹ ಸಾಮ್ರಾಜ್ಯದಾದ್ಯಂತ ರೂಪುಗೊಂಡಿತು. ಆದ್ದರಿಂದ ಈ ಕಾಲವನ್ನು 'ಶೌರ್ಯೋತ್ಸಾಹದ ಕಾಲ' ಎಂದು ಕರೆಯಬಹುದು. ಯೂರೋಪಿನ ಉನ್ನತ ಮಧ್ಯಯುಗವನ್ನೂ ಸಹ ಶೌರ್ಯದ ಕಾಲವೆಂದು ಕರೆಯುತ್ತಾರೆ. ಅಲ್ಲಿ ಶಾರ್ಯೋತ್ಸಾಹ ವೀರನ ಖಾಸಗಿ ಲಕ್ಷಣವಾಗಿತ್ತು. ಆದರೆ ವಿಜಯನಗರದ ಕಾಲದಲ್ಲಿ ಅದು ಸಾಮ್ರಾಜ್ಯದ ಅಭಿವ್ಯಕ್ತಿ ಹಾಗೂ ಅಗತ್ಯವೆನಿಸಿತ್ತು. ಈ ಅಂಶ ಅಂದಿನ ದೇವಾಲಯಗಳ ನಿರ್ಮಾಣದಲ್ಲಿ ಮೂರ್ತ ಸ್ವರೂಪ ಪಡೆದುಕೊಂಡಿತ್ತು. ದೇವಾಲಯಕ್ಕೆ ಸ್ತಂಭಗಳು ಶೌರ್ಯಾಭಿವ್ಯಕ್ತಿಯ ಸಂಕೇತವಾಗಿವೆ. ಇವೆಲ್ಲದರ ಪರಿಣಾಮವಾಗಿ ಯುದ್ಧಾಭಿಲಾಷಿ ದೇವತೆಗಳಾದ ವೀರಭದ್ರ, ಭೈರವ, ನರಸಿಂಹ ಮತ್ತು ಹನುಮಾನರ ಆರಾಧನೆ ಅಗತ್ಯವೂ ಜನಪ್ರಿಯವೂ ಆಯಿತು. ಯುದ್ಧಗಳಲ್ಲಿ ಜಯವನ್ನು ಗಳಿಸಲು ಮತ್ತು ಬದುಕಿನಲ್ಲಿ ಅಭಿವೃದ್ಧಿ ಸಾಧಿಸಲು ಈ ದೇವತೆಗಳ ಅರ್ಚನೆ-ಆರಾಧನೆ ಸಂಪ್ರದಾಯವಾಗಿ ಪರಿಣಮಿಸಿತು. ಈ ಕಾಲದ ನಗರಗಳು ಮತ್ತು ಪಟ್ಟಣಗಳ ಪ್ರಮುಖ ಆಯಕಟ್ಟಿನ ಸ್ಥಳಗಳಲ್ಲಿ ಈ ದೇವತೆಗಳಿಗಾಗಿ ದೇವಾಲಯಗಳನ್ನು ನಿರ್ಮಿಸಲಾಯಿತು.

— 1 —

ವಿಜಯನಗರ ಸಾಮ್ರಾಜ್ಯದ ಪೂರ್ವದ ಕಾಲದಲ್ಲೂ ವೀರಭದ್ರನಿಗೆ ದೇಗುಲಗಳನ್ನು ನಿರ್ಮಿಸಿದರೂ, ಅವುಗಳ ಸಂಖ್ಯೆ ಬಹು ಕಡಿಮೆ. ವಿಜನಯಗರ ಸಾಮ್ರಾಜ್ಯ ಸ್ಥಾಪನೆ ಆದ ಮೇಲೆ, ಈ ದೇವರಿಗೆ ಅಧಿಕ ಸಂಖ್ಯೆಯಲ್ಲಿ ದೇವಾಲಯಗಳು ಸ್ಥಾಪನೆ ಆದವು. ರಾಜಧಾನಿಯಲ್ಲೇ ಎರಡು ದೇವಾಲಯಗಳನ್ನು ವೀರಭದ್ರನ ಹೆಸರಿನಲ್ಲಿ

ನಿರ್ಮಿಸಲಾಗಿದೆ. ಈ ಎರಡು ದೇವಾಲಯಗಳು ಪ್ರಮುಖ ಸ್ಥಳಗಳಲ್ಲಿ ನಿರ್ಮಾಣ ವಾಗಿದೆ. ಮತಂಗ ಪರ್ವತ ರಾಜಧಾನಿಯಲ್ಲೇ ಅತ್ಯಂತ ಎತ್ತರದ ಪ್ರಶಸ್ತವಾದ ಸ್ಥಳ. ಪಾವಿತ್ರದ ಸನ್ನಿಧಾನದಲ್ಲಿ ಮತ್ತು ಆಯಕಟ್ಟಿನ ಸ್ಥಳದಲ್ಲಿ, ವಿಜಯನಗರದ ಅರಸರ ಕುಲದೇವತೆಯಾದ ವಿರೂಪಾಕ್ಷನ ದೇಗುಲವನ್ನು ಬಿಟ್ಟರೆ, ಇದೇ ಅತ್ಯಂತ ಪ್ರಮುಖ ವಾದ ನೆಲೆ. ಮತಂಗ ಪರ್ವತದ ಮೇಲೆ ವೀರಭದ್ರನ ದೇಗುಲವನ್ನು ನಿರ್ಮಿಸಲಾಗಿದೆ. ಇದರಿಂದ ಈ ದೇಗುಲವು ರಾಜಧಾನಿ ವಿಜಯಗರದಲ್ಲಿ ಪ್ರಾಮುಖ್ಯ ವನ್ನು ಪಡೆದಿರುವುದು ಗೊತ್ತಾಗುತ್ತದೆ. ಕಮಲಾಪುರದಿಂದ ಹಂಪಿಗೆ ಹೋಗುವ ಮಹಾಮಾರ್ಗದಲ್ಲಿ ಮತ್ತೊಂದು ವೀರಭದ್ರ ದೇಗುಲವಿದೆ. ಇದರಲ್ಲಿ ಎತ್ತರವಾದ ಪೂಜಾ ಮೂರ್ತಿ ಇದೆ. ಇದನ್ನು ಸ್ಥಳೀಯವಾಗಿ ಉದ್ದಾನ ವೀರಭದ್ರ ಎಂದು ಕರೆಯುತ್ತಾರೆ. ಆದರೆ ಶಾಸನದಲ್ಲಿ ಮುದ್ದು ವೀರಣ್ಣ ಎಂದು ಕರೆಯಲಾಗಿದೆ. ಈ ದೇವಾಲಯವನ್ನು ಅಳಿಯ ರಾಮರಾಯನ ಸಹೋದರ ಎರತಿಮ್ಮರಾಜಯ್ಯನ ದಳವಾಯಿ ಜಂಗಮಯ್ಯನು ೧೫೪೫ರಲ್ಲಿ ಕಟ್ಟಿಸಿದ.[1] ಹಂಪಿಯಲ್ಲಿ ಇನ್ನೂ ಕೆಲ ದೇವಾಲಯಗಳನ್ನು ವೀರಭದ್ರನಿಗೆ ಅರ್ಪಿಸುವ ಸಾಧ್ಯತೆಗಳಿಲ್ಲದೆ ಇಲ್ಲ. ಹಂಪಿಯಲ್ಲಿ ಸುಮಾರು ೧೨೦೦ ದೇವಾಲಯಗಳಿವೆ. ಅವುಗಳ ಗರ್ಭಗುಡಿಯಲ್ಲಿರುವ ಪೂಜಾ ವಿಗ್ರಹಗಳು ನಾಶವಾಗಿರುವುದರಿಂದ, ಅವುಗಳನ್ನು ಯಾವ ದೇವರಿಗೆ ನಿರ್ಮಿಸಲಾಗಿದೆ ಎಂಬುದು ತಿಳಿಯದು. ಈ ದೇವಾಲಯಗಳಷ್ಟೇ ಅಲ್ಲದೆ, ಅಧಿಕ ಸಂಖ್ಯೆ ವೀರಭದ್ರನ ಶಿಲ್ಪಗಳನ್ನು ಹಂಪಿಯಲ್ಲಿ ಕಾಣಬಹುದು.

ಪ್ರಮುಖ ವೀರಭದ್ರ ದೇವಾಲಯವೊಂದನ್ನು ಮಂಡ್ಯ ಜಿಲ್ಲೆಯ ನಾಗ ಮಂಗಲದಲ್ಲಿ ಕಾಣಬಹುದು. ಇದು ಮೂಲತಃ ಅರಮನೆ ಆಗಿರಬಹುದಾದ ಸಾಧ್ಯತೆಯಿ ಇದೆ. ಹದಿನೈದನೇ ಶತಮಾನದಲ್ಲಿ ಅರಮನೆಯನ್ನು ದೇವಾಲಯವಾಗಿ ಮಾರ್ಪಡಿಸಿರ ಬಹುದು. ಹದಿನಾರನೇ ಶತಮಾನದಲ್ಲಿ ಇದಕ್ಕೆ ಮಹಾರಂಗಮಂಟಪ ವನ್ನು ನಿರ್ಮಿಸಲಾಗಿದೆ. ಈ ಭಾಗವನ್ನು ಶಾಸನದಲ್ಲಿ ಗಂದಗೋಡಿ ಮಂಟಪವೆಂದು ಕರೆಯ ಲಾಗಿದೆ.[2] ಇಲ್ಲಿನ ಗರ್ಭಗುಡಿಯು ದೇವಾಲಯದ ನೆಲಮಟ್ಟಕ್ಕಿಂತ ಎರಡು ಅಡಿಗಳಷ್ಟು ತಳಭಾಗದಲ್ಲಿದೆ.

ವಿಜಯನಗರದ ಕಾಲದಲ್ಲಿ ಕರ್ನಾಟಕದ ವಿವಿಧ ಭಾಗಗಳಲ್ಲಿ ನಿರ್ಮಿಸಿದ ಪ್ರಮುಖ ವೀರಭದ್ರ ದೇಗುಲಗಳ ಪಟ್ಟಿಯನ್ನು ಕೊಡಲಾಗಿದೆ.

	ಸ್ಥಳಗಳು	ಜಿಲ್ಲೆ	ನಿರ್ಮಾಣವಾದ ಕಾಲ
1.	ಹಾವಿನಾಳು ವೀರಾಪುರ[3]	ಬಳ್ಳಾರಿ	1532
2.	ಬಾಗಳಿ[4]	ಬಳ್ಳಾರಿ	16ನೇ ಶತಮಾನ

3.	ಹಂಪಿ (ಉದ್ಧಾನ ವೀರಭದ್ರ)[5]	ಬಳ್ಳಾರಿ	1545
4.	ಹಂಪಿ (ಮತಂಗ ಪರ್ವತ)[6]	ಬಳ್ಳಾರಿ	14/15ನೇ ಶತಮಾನ
5.	ಹೊಸಪೇಟೆ[7]	ಬಳ್ಳಾರಿ	1531
6.	ತಿಮ್ಮಲಾಪುರ[8]	ಬಳ್ಳಾರಿ	1540
7.	ಬಾಳೇಹಳ್ಳಿ[9]	ಚಿಕ್ಕಮಗಳೂರು	1368
8.	ಸಕ್ಕರೆ ಪಟ್ಟಣ[10]	ಚಿಕ್ಕಮಗಳೂರು	14ನೇ ಶತ
9.	ಕಾಯಸಮುದ್ರ[11]	ಚಿತ್ರದುರ್ಗ	16ನೇ ಶತ
10.	ದುಮ್ಮಿ[12]	ಚಿತ್ರದುರ್ಗ	1530
11.	ಗುಂಡೇರಿ[13]	ಚಿತ್ರದುರ್ಗ	1530
12.	ಕಡೂರು[14]	ಚಿತ್ರದುರ್ಗ	1540
13.	ಕೊಟ್ಟದೆಗುಡ್ಡ[15]	ಚಿತ್ರದುರ್ಗ	16ನೇ ಶತ
14.	ಜಟಿಂಗ ರಾಮೇಶ್ವರ[16]	ಚಿತ್ರದುರ್ಗ	14ನೇ ಶತ
15.	ಕೇರಳಾಪುರ[17]	ಹಾಸನ	14ನೇ ಶತ
16.	ಆನೆಕೆರೆ[18]	ಹಾಸನ	15ನೇ ಶತ
17.	ಗ್ರಾಮ[19]	ಹಾಸನ	14ನೇ ಶತ
18.	ದುದ್ದ[20]	ಹಾಸನ	16ನೇ ಶತ
19.	ರಾಮಸಾಗರ[21]	ಕೋಲಾರ	16ನೇ ಶತ
20.	ಹರಾಟಿ ಕೊತ್ತನೂರು[22]	ಕೋಲಾರ	1404
21.	ನಂದಿ[23]	ಕೋಲಾರ	1404
22.	ಸಂತೇಬಾಚಹಳ್ಳಿ[24]	ಮಂಡ್ಯ	15ನೇ ಶತ
23.	ಬೆಳೂರು[25]	ಮಂಡ್ಯ	15ನೇ ಶತ
24.	ನಾಗಮಂಗಲ[26]	ಮಂಡ್ಯ	15ನೇ ಶತ
25.	ಪುರ[27]	ಮಂಡ್ಯ	13ನೇ ಶತ
26.	ಹರಳಕೋಟೆ[28]	ಚಾಮರಾಜ	1523
27.	ನಾಗರಹೊಳೆ[29]	ಮೈಸೂರು	15ನೇ ಶತ
28.	ತಲಕಾಡು[30]	ಮೈಸೂರು	16ನೇ ಶತ

29.	ಮಿಟಿಗ್ರೆ[31]	ಶಿವಮೊಗ್ಗ	14ನೇ ಶತ
30.	ಅಗರ[32]	ಶಿವಮೊಗ್ಗ	1377
31.	ಕೆಳದಿ[33]	ಶಿವಮೊಗ್ಗ	1512
32.	ಆವಿನಹಳ್ಳಿ[34]	ಶಿವಮೊಗ್ಗ	16ನೇ ಶತ
33.	ಬಂದಳಿಕೆ[35]	ಶಿವಮೊಗ್ಗ	14ನೇ ಶತ
34.	ಬಸವಾಪುರ[36]	ಶಿವಮೊಗ್ಗ	15ನೇ ಶತ

ಇನ್ನೂ ವ್ಯಾಪಕವಾಗಿ ಕ್ಷೇತ್ರಕಾರ್ಯ ಕೈಗೊಂಡರೆ, ಮತ್ತಷ್ಟು ವೀರಭದ್ರ ದೇಗುಲಗಳು ಬೆಳಕಿಗೆ ಬರಬಹುದು. ಮೇಲಿನ ಸಮೀಕ್ಷೆಯಿಂದ ವೀರಭದ್ರ ಆರಾಧನೆ ಕರ್ನಾಟಕ ದಲ್ಲಿ ಜನಪ್ರಿಯವಾಗಿರುವುದು ತಿಳಿಯುತ್ತದೆ. ಈ ದೇವಾಲಯಗಳು ಬಹುಮಟ್ಟಿಗೆ ಚೌಕಾಕಾರದ ಗರ್ಭಗೃಹ, ಆಯಾತಾಕಾರದ ಅಂತರಾಳ, ಮತ್ತು ಚೌಕಾಕಾರದ ರಂಗಮಂಟಪಗಳನ್ನು ಹೊಂದಿವೆ. ಕೆಲ ದೇವಾಲಯಗಳಿಗೆ ಪ್ರಾಕಾರ, ಮಹಾರಂಗ ಮಂಪಟ ಮತ್ತು ಅಮ್ಮನವರ ಗುಡಿಗಳು ಇರುತ್ತವೆ. ದೇವಾಲಯದ ಮುಂದೆ, ದೇವಾಲಯ ಅಕ್ಷರೇಖೆಯ ಮೇಲೆ ದೀಪ ಮಾಲೆ ಕಂಬ, ಧ್ವಜಸ್ತಂಬ ಮತ್ತು ನಂದಿ ಮಂಟಪ - ಇವು ಇರುತ್ತವೆ. ಈ ದೇವಾಲಯಗಳನ್ನು ಅಧಿಷ್ಠಾನದ ಮೇಲೆ ಕಟ್ಟಲಾಗಿರುತ್ತದೆ. ಕೆಲ ದೇವಾಲಯಗಳಿಗೆ ಅಧಿಷ್ಠಾನದ ಜೊತೆ ಉಪ ಪೀಠವೂ ಇರುವುದುಂಟು. ದೇಗುಲಗಳ ಗೋಡೆಗಳ ಹೊರಭಾಗವು ಸರಳವಾಗಿ ನಯಗೊಳಿಸಲಾಗಿರುತ್ತದೆ. ಅಥವಾ ಅರೆಗಂಬ, ಕುಂಭಪಂಜರ ಮತ್ತು ಕೋಷ್ಠ ಗಳಿಂದ ಅಲಂಕೃತಗೊಳಿಸಿರುವುಂಟು. ಗರ್ಭಗುಡಿಯ ಮೇಲಿರುವ ಗೋಪುರವನ್ನು ದ್ರಾವಿಡ ಮಾದರಿಯಲ್ಲಿ ನಿರ್ಮಿಸಿರುತ್ತಾರೆ.

— 2 —

ಶಿಲ್ಪ ವೈಭವ

ಶಿವನ ಒಂದು ಪ್ರಮುಖ ಅಂಶವೆಂದರೆ ವಿಶ್ವವನ್ನು ಲಯಗೊಳಿಸುತ್ತಾ ಹೋಗು ವುದು. ಇದೊಂದು ವಿಶ್ವ ನಿಯಮ. ಜಗತ್ತಿನ ಪ್ರತಿಯೊಂದು ವಸ್ತುವು ತನಗೆ ತಾನೇ ಲಯಗೊಳ್ಳುತ್ತಾ ಹೋಗುತ್ತದೆ. ಇದರಿಂದ ಅನಂತಶೂನ್ಯ ಆವರಿಸುತ್ತಾ, ಸೃಷ್ಟಿ ಮತ್ತು ಪುನರ್ ಸೃಷ್ಟಿ ಕಾರ್ಯ ನಿರಂತರವಾಗಿ ನಡೆಯುತ್ತದೆ. ಇದರಿಂದ ಬ್ರಹ್ಮ ಮತ್ತು ವಿಷ್ಣು ಎಲ್ಲವೂ ಶಿವನೇ ಆಗಿರುತ್ತಾನೆ. [37] ಶಿವನು ಲಯ ಕಾರ್ಯಕ್ಕಾಗಿ ವೀರಭದ್ರ, ಗಜ ಸಂಹಾರ ಮೂರ್ತಿ, ಭಿಕ್ಷಾಟನ ಮೂರ್ತಿ, ಕಂಕಾಲ ಮೂರ್ತಿ, ಭೈರವ ಮುಂತಾದ ರೂಪಗಳನ್ನೆತ್ತು ತ್ತಾನೆ. ಅಂತಿಮವಾಗಿ ವಿಶ್ವ ಸೃಷ್ಟಿಗೆ ನೆರವಾಗುತ್ತಾನೆ. ಈ ದೇವತೆಗಳ

ಚಿತ್ರಣ ಸಮಾಜದ ಶೌರ್ಯಾಭಿವ್ಯಕ್ತಿಯನ್ನು ಸೂಚಿಸುತ್ತದೆ. ಇವುಗಳ ಆರಾಧನೆ ಅಂದಿನ ದಿನಗಳಲ್ಲಿ ಅಗತ್ಯವಾಗಿತ್ತು.

ಶಿವನ ಕೋಪಾವಿಷ್ಟದ ಪ್ರತಿರೂಪವೇ ವೀರಭದ್ರನ ಅವತಾರ. ವೀರಭದ್ರನನ್ನು ಪೂರ್ಣ ಶಿಲ್ಪದಲ್ಲಿ ಮತ್ತು ಉಬ್ಬುಗೆತ್ತನೆಗಳಲ್ಲಿ ವಿಜಯನಗರದ ಉದ್ದಗಲಕ್ಕೂ ರೂಪಿಸಲಾಗಿದೆ. ಕೂರ್ಮಪುರಾಣ, ವರಾಹಪುರಾಣ ಮತ್ತು ಭಾಗವತ ಪುರಾಣಗಳಲ್ಲಿ ವೀರಭದ್ರನ ಅವತಾರದ ಹಿನ್ನೆಲೆಯನ್ನು ವಿವರಿಸಲಾಗಿದೆ.[38] ಶ್ರೀ ತತ್ವನಿಧಿ ಮತ್ತು ಕಾರಣಾಗಮದಲ್ಲಿ ವೀರಭದ್ರ ಮೂರ್ತಿಯ ವಿವರಣೆಯನ್ನು ಕೊಡಲಾಗಿದೆ.[39] ಶಿಲ್ಪಸಂಗ್ರಹ ಮತ್ತು ಶಿಲ್ಪರತ್ನ ಗ್ರಂಥಗಳು ವಿವಿಧ ಬಗೆಯ ವೀರಭದ್ರನ ಮೂರ್ತಿಗಳನ್ನು ಹೆಸರಿಸುತ್ತವೆ.[40] ಸಾಮಾನ್ಯವಾಗಿ ಈ ದೇವರನ್ನು ದ್ವಿಭಂಗ ಅಥವಾ ಸಮಭಂಗದಲ್ಲಿ ನಿಂತಿರುವಂತೆ ಚಿತ್ರಿಸಲಾಗಿರುತ್ತದೆ. ಮೇಲಣ ಹಸ್ತಗಳಲ್ಲಿ ಬಾಣ ಮತ್ತು ಬಿಲ್ಲನ್ನು ಹಿಡಿದಿದ್ದರೆ, ಕೆಳಗಣ ಹಸ್ತಗಳಲ್ಲಿ ಖಡ್ಗ ಮತ್ತು ಗುರಾಣಿಯನ್ನು ಹಿಡಿದಿರುತ್ತಾರೆ. ಅವನು ಕೀರಿಟಮಕುಟ, ಮಕರಕುಂಡಲ, ಯಜ್ಞೋಪವೀತ, ಮೇಖಲವನ್ನು, ಅದರೊಂದಿಗೆ ಕಿರುಗತ್ತಿಯನ್ನು ಧರಿಸಿರುತ್ತಾನೆ; ಉದ್ದನೆಯ ರುಂಡಮಾಲವನ್ನೂ ಎತ್ತರದ ಪಾದರಕ್ಷೆಗಳನ್ನು ಧರಿಸಿರುತ್ತಾನೆ. ಆಡಿನ ಅಥವಾ ಕುರಿಯ ಶಿರವನ್ನು ಧರಿಸಿದ ದಕ್ಷನು ಅವನ ಬಲಭಾಗದಲ್ಲಿ ಅಂಜಲಿಬದ್ಧನಾಗಿ ಕಿರಿಯಾಕಾರದಲ್ಲಿ ನಿಂತಿರುತ್ತಾನೆ. ಇದು ಎಲ್ಲ ಶೈವ ಮತ್ತು ವೈಷ್ಣವ ದೇವಾಲಯ ಗಳಲ್ಲಿ ಕಾಮಬರುವ ವೀರಭದ್ರನ ಸಾಮಾನ್ಯ ರೂಪ. ಚಾಮರಾಜ ಜಿಲ್ಲೆಯ ಹರಳಕೋಟೆಯ ವೀರಭದ್ರ ದೇಗುಲದ ವೀರಭದ್ರನ ಪೂಜಾ ಮೂರ್ತಿ ೧.೫ ಮೀಟರ್ ಎತ್ತರವಾದ ಸುಂದರ ಶಿಲ್ಪವಾಗಿದೆ. ಇದೊಂದು ಅಪರೂಪದ ಶಿಲ್ಪ. ವೀರನ ನೈಜ ಚಿತ್ರಣವನ್ನು ಇದರಲ್ಲಿ ಕಾಣಬಹುದು. ಅದೇ ತೆರನಾದ ವೀರಭದ್ರನ ಶಿಲ್ಪವನ್ನು ಇರುಗಪ್ಪನ ಹಳ್ಳಿಯ ಬಸವಣ್ಣನ ದೇಗುಲ, ತಿಮ್ಮಲಾಪುರದ ವೀರೇಶನ ದೇಗುಲ ಮತ್ತು ಹಂಪಿಯಲ್ಲಿ ಕಾಣಬಹುದು. ಮಂಡ್ಯ ಜಿಲ್ಲೆಯ ಸಂತೇಬಾಚಹಳ್ಳಿಯ ವೀರಭದ್ರ ದೇಗುಲದ ವೀರಭದ್ರ ಮೂರ್ತಿಯಲ್ಲಿ ಒಂದೆರಡು ಬದಲಾವಣೆಯು ಗೋಚರಿಸುತ್ತದೆ. ಇಲ್ಲಿನ ವೀರಭದ್ರನ ಶಿಲ್ಪದ ಮೇಲಣ ಹಸ್ತಗಳಲ್ಲಿ ತ್ರಿಶೂಲ ಮತ್ತು ಡಮರುಗಳಿದ್ದರೆ, ಕೆಳಗಣ ಹಸ್ತಗಳಲ್ಲಿ ಖಡ್ಗ ಮತ್ತು ಗುರಾಣಿಗಳಿವೆ. ಅವನ ಎಡಭಾಗದಲ್ಲಿ ಅವನ ಪತ್ನಿ ಭದ್ರಕಾಳಿಯ ಪ್ರತಿಮೆ ಇದೆ. ವೀರಭದ್ರನ ಎಡಭಾಗಕ್ಕೆ ಭದ್ರಕಾಳಿಯ ಪ್ರತಿಮೆ ಇರಲೇಬೇಕೆಂದು ಕಾರಣಾಗಮವು ತಿಳಿಸುತ್ತದೆ.[41] ಹೊಸ ಪೇಟೆಯ ಹತ್ತಿರ ಜಂಬುಕೇಶ್ವರ ದೇವಾಲಯದಲ್ಲಿ ವೀರಭದ್ರನನ್ನು ಕುಳಿತಿರು ವಂತೆ ಚಿತ್ರಿಸಲಾಗಿದೆ. ಇದೊಂದು ಅಪರೂಪದ ಶಿಲ್ಪ. ಇಲ್ಲಿ ವೀರಭದ್ರ ಅವೇ ಆಯುಧಗಳನ್ನು ಧರಿಸಿದ್ದಾನೆ. ಅವನು ಲಲಿತಾಸನದಲ್ಲಿ ಭದ್ರಪೀಠದ ಮೇಲೆ ಆಸೀನನಾಗಿದ್ದಾನೆ. ಹಂಪಿಯ ಅರಮನೆಯ ಆವರಣದ ಪ್ರದೇಶದಲ್ಲಿ ವೀರಭದ್ರ

ರೋಷಾವೇಶ ದಿಂದ ಮುನ್ನುಗ್ಗುತ್ತಿರುವಂತೆ ಚಿತ್ರಿಸಲಾಗಿದೆ. ಹಂಪಿಯಲ್ಲೇ ವೀರಭದ್ರನನ್ನು ಅಸಾಮಾನ್ಯ ರೀತಿಯಲ್ಲಿ ಕಂಡರಿಸಲಾಗಿದೆ. ವೀರಭದ್ರ ತನ್ನವೇ ಆಯುಧಗಳನ್ನು ಧರಿಸಿ, ಎಡಭಾಗದ ಮಂಡಿಯೂರಿ ನಿಂತಿದ್ದಾನೆ. ಅವನ ಬಲ ಮಂಡಿ ವೀರಾಸನದಲ್ಲಿ ಭೂಮಿಯನ್ನು ಸ್ಪರ್ಶಿಸಿದೆ. ಗುರಾಣಿಯನ್ನು ಸೊಂಟ ಮಟ್ಟದಲ್ಲಿ ಹಿಡಿದಿದ್ದಾನೆ. ಇದು ಲಿಂಗದ ಬೀರರ ಜಾನಪದ ನೃತ್ಯವನ್ನು ನೆನಪಿಸುತ್ತದೆ. ಜಾನಪದೀಯ ರೂಪ ದಲ್ಲಿ ವೀರಭದ್ರ ದಕ್ಷನನ್ನು ಅವನ ದುರ್ವರ್ತನೆಗಾಗಿ ಶಿಕ್ಷಿಸುವ ಸಂಗತಿಯಿದೆ. ಹಂಪಿಯಲ್ಲಿ ಹಾಗೂ ನಂದಿಯಲ್ಲಿ ವೀರಭದ್ರ ಹೋರಾಡುತ್ತಿರುವ ಶಿಲ್ಪಗಳನ್ನು ಕಾಣಬಹುದು. ಇದರಲ್ಲಿ ವೀರಭದ್ರ ತನ್ನ ಬತ್ತಳಿಕೆಯಿಂದ ಬಾಣವನ್ನು ಹಿರಿದು ಬಿಡುತ್ತಿರುವ ದೃಶ್ಯವಿದೆ.

ವೀರಭದ್ರನ ಅವತಾರವನ್ನು ಮೂರು ಹಂತಗಳಲ್ಲಿ ಅತ್ಯುತ್ತಮವಾಗಿ ಚಿತ್ರಿಸಿರುವುದನ್ನು ಹಂಪಿಯ ಹತ್ತಿರವಿರುವ ತಿಮ್ಮಲಾಪುರದಲ್ಲಿ ಕಾಣಬಹುದು. ದಕ್ಷ ಯಜ್ಞ ಮತ್ತು ಶಿವನೊಂದಿಗೆ ದಕ್ಷ ದುರ್ವರ್ತನೆಯಿಂದ ನಡೆಸಿಕೊಂಡಿದ್ದನ್ನು ಮೂರು ಪಟ್ಟಿಕೆಗಳಲ್ಲಿ ಚಿತ್ರಣವಾಗಿದೆ. ಮೊದಲ ಪಟ್ಟಿಕೆಯಲ್ಲಿ ವೀರಭದ್ರನು, ಉಗ್ರಾತಿ ಉಗ್ರನಾಗಿ ಯಜ್ಞ ಕುಂಡದತ್ತ ನುಗ್ಗುತ್ತಿದ್ದಾನೆ. ಅವನು ಉದ್ದನೆಯ ಕಿರೀಟ, ಕರ್ಣ ಕುಂಡಲ, ಹಾರಗಳನ್ನು ಧರಿಸಿದ್ದಾನೆ. ಮೇಲಣ ಎಡಗೈನಲ್ಲಿ ದನುಸ್ಸನ್ನು ಹಿಡಿದಿದ್ದಾನೆ. ಬಲಗೈನಿಂದ ಬಾಣವನ್ನು ಬತ್ತಳಿಕೆಯಿಂದ ಹಿರಿಯುತ್ತಿದ್ದಾನೆ. ಕೆಳಗಣ ಬಲಗೈಲಿ ಚುಚ್ಚುಗತ್ತಿಯನ್ನು, ಎಡಗೈಲಿ ಗದೆಯನ್ನು ಹಿಡಿದಿದ್ದಾನೆ. ಮುಂದಿನ ಪಟ್ಟಿಕೆಯಲ್ಲಿ ವೀರಭದ್ರ ದಕ್ಷನ ತಲೆಯನ್ನು ಕತ್ತರಿಸಿದ್ದಾನೆ. ಶಿರವಿಲ್ಲದ ಮುಂಡವೊಂದು ಯಜ್ಞ ಕಾಂಡದ ಮುಂದೆ ಕುಳಿತಿದೆ. ಇದು ಯಜ್ಞಕುಂಡಕ್ಕೆ ಚರುದ್ರವ್ಯವನ್ನು ಸ್ರುಕ್‌ನಿಂದ ಸುರಿಯುತ್ತಿದೆ. ಮೂರನೆಯ ಪಟ್ಟಿಕೆಯಲ್ಲಿ ದಕ್ಷನಿಗೆ ಕುರಿಯ ತಲೆ ಯನ್ನು ನೀಡಿ, ಜೀವವನ್ನು ಕರುಣಿಸಲಾಗಿದೆ. ಅವನು ವೀರಭದ್ರನ ಮುಂದೆ ಅಂಜಲಿ ಬದ್ಧನಾಗಿ ನಿಂತಿದ್ದಾನೆ. ವೀರಭದ್ರ ಅವನಿಗೆ ಕ್ಷಮೆಯನ್ನು ನೀಡಿದ್ದಾನೆ. ಈ ಪಟ್ಟಿಕೆಗಳನ್ನು ತಿಮ್ಮಲಾಪುರದ ಶಿವಾಲಯದ ಮಹಾರಂಗಮಂಟಪದ ಕಂಬವೊಂದರ ಮೇಲೆ ಬಿಡಿಸಲಾಗಿದೆ.

ಶಿಲ್ಪರತ್ನವು ಅಷ್ಟಭುಜಗಳನ್ನು ಹೊಂದಿರುವ ವೀರಭದ್ರನು ವೇತಾಳರೂಢನಾಗಿ, ಗಣಗಳಿಂದ ಕೂಡಿರುವುದನ್ನು ತಿಳಿಸುತ್ತದೆ. ಇದು ಅಪರೂಪದ ವೀರಭದ್ರನ ಚಿತ್ರಣ. ಇದನ್ನು ಹೊಸಪೇಟೆಯ ಹತ್ತಿರವಿರುವ ಜಂಬುಕೇಶ್ವರ ದೇವಾಲಯದಲ್ಲಿ ನಿರೂಪಿಸಲಾಗಿದೆ. ಇದರಲ್ಲಿ ವೀರಭದ್ರನು ವೇತಾಳರೂಢನಾಗಿ ಅಷ್ಟಭುಜಗಳಿಂದ ಕೂಡಿದ್ದಾನೆ. ಬಲ ಪಾರ್ಶ್ವದ ಹಸ್ತಗಳಲ್ಲಿ ತ್ರಿಶೂಲ, ಪರಶು, ಬಾಣ ಮತ್ತು ಖಡ್ಗ ವನ್ನು ಧರಿಸಿದ್ದಾನೆ; ಎಡಪಾರ್ಶ್ವದ ಹಸ್ತಗಳಲ್ಲಿ ಡಮರು, ಬಾಣ, ಗುರಾಣಿ ಮತ್ತು ಕತ್ತರಿಸಿದ ಶಿರವೊಂದನ್ನು ಹಿಡಿದಿದ್ದಾನೆ. ವೀಣಾಧರ ವೀರಭದ್ರ ಸಹ ಅಪರೂಪ ಶಿಲ್ಪವೇ.

ಇದನ್ನು ಹೊಸಪೇಟೆಯ ಜಂಬುಕೇಶ್ವರ ದೇಗುಲ, ವಕ್ಕಲೇರಿ (ಕೋಲಾರ ಜಿಲ್ಲೆ) ಮಾರ್ಕಂಡೇಶ್ವರ ದೇಗುಲದಲ್ಲಿ ಕಾಣಬಹುದು. ಇಲ್ಲಿ ವೀರಭದ್ರನು ಸುಖಾಸನದಲ್ಲಿ ಕುಳಿತು ವಸ್ತ್ರಾಭರಣ ಭೂಷಿತನಾಗಿದ್ದಾನೆ. ಇವನು ಮುಂದಿನ ತೋಳುಗಳಲ್ಲಿ ವೀಣೆಯನ್ನು ನುಡಿಸುತ್ತಿದ್ದಾನೆ. ಮೇಲಣ ಹಸ್ತಗಳಲ್ಲಿ ತ್ರಿಶೂಲ ಮತ್ತು ಡಮರಗಳನ್ನು ಹಿಡಿದಿದ್ದಾನೆ. ವಕ್ಕಲೇರಿಯ ವೀರಭದ್ರನ ಶಿಲ್ಪ ಕಲಾಕಾರರ ಅಮೋಘವಾದ ರಚನೆ. ಕೇವಲ ಎರಡು ಹಸ್ತಗಳನ್ನು ಹೊಂದಿ ಕತ್ತಿ - ಗುರಾಣಿಗಳನ್ನು ಹಿಡಿದಿರುವ ವೀರಭದ್ರನ ಶಿಲ್ಪ ವಿಶೇಷವಾದದ್ದು. ಇದನ್ನು ಕಮಲಾಪುರದ ಪುರಾತತ್ವ ಮ್ಯೂಸಿಯಂನಲ್ಲಿ ಇಡಲಾಗಿದೆ. ಇನದ್ನು ಹಂಪಿ ಪಾಳು ದೇವಾಲಯವೊಂದರಿಂದ ತರಲಾಗಿದೆ. ದಿಗಂಬರ ವೀರಭದ್ರ ಅತ್ಯಂತ ವಿರಳವಾದುದು. ದಿಗಂಬರ ವೀರಭದ್ರ ನನ್ನು ಜಂಬುಕೇಶ್ವರ ದೇವಾಲಯದ ಮಹಾರಂಗಮಂಟಪದ ಸ್ತಂಭವೊಂದರ ಮೇಲೆ ಚಿತ್ರಿಸಲಾಗಿದೆ. ಈ ರೂಪದಲ್ಲಿರುವ ವೀರಭದ್ರ ತನ್ನೆಲ್ಲ ಆಯುಧಗಳು ಮತ್ತು ಆಭರಣಗಳನ್ನು ಧರಿಸಿದ್ದಾನೆ. ಆದರೆ ಅವನನ್ನು ನಗ್ನವಾಗಿ ಚಿತ್ರಿಸಲಾಗಿದೆ. ಇದು ಸುಂದರವಾದ ಉಬ್ಬುಗೆತ್ತನೆಯ ಶಿಲ್ಪ. ಮುಖದಲ್ಲಿ ಉಗ್ರತೆ ಎದ್ದು ಕಾಣುತ್ತದೆ. ಮೂರ್ತಿಯ ಮುಖದಲ್ಲಿ ರೌದ್ರತೆಯನ್ನು ಯಥಾವತ್ತಾಗಿ ಶಿಲ್ಪದಲ್ಲಿ ಮೂಡಿಸು ವಲ್ಲಿ ಶಿಲ್ಪಿ ಯಶಸ್ವಿ ಆಗಿದ್ದಾನೆ.

ಸಪ್ತ ಮಾತೃಕೆಯರ ಜೊತೆಯಲ್ಲಿ ವೀರಭದ್ರನನ್ನು ಚಿತ್ರಿಸಿರುವುದು ಸಾಮಾನ್ಯ ಸಂಗತಿ. ಸಪ್ತ ಮಾತೃಕೆಯರ ಬಲ ಅಂಚಿನಲ್ಲಿ ವೀರಭದ್ರ, ಎಡ ಅಂಚಿನಲ್ಲಿ ಗಣೇಶರು ಆಸೀನರಾಗಿರುತ್ತಾರೆ. ಈ ಕಾಲದ ಅನೇಕ ಶೈವ ದೇವಾಲಯಗಳಲ್ಲಿ ಸಪ್ತ ಮಾತೃಕೆ ಯರ ಪಟ್ಟಿಕೆಯನ್ನು ಕಾಣಬಹುದು. ಇಲ್ಲಿ ವೀರಭದ್ರನು ಕುಳಿತು ವೀಣೆಯನ್ನು ನುಡಿಸುತ್ತಿದ್ದಾನೆ. ವರಾಹ ಪುರಾಣ, ಕೂರ್ಮ ಪುರಾಣ ಸುಪ್ರಭೇದಾಗಮ - ಇವು ಸಪ್ತ ಮಾತೃಕೆಯರ ಬಗ್ಗೆ ಮಾಹಿತಿಯನ್ನು ನೀಡುತ್ತವೆ.[42]

ವಿಜಯನಗರ ಕಾಲದ ದೇವಾಲಯಗಳು ಮತ್ತು ಶಿಲ್ಪಗಳ ಸರ್ವೇಕ್ಷಣೆ ಮತ್ತು ವಿಶ್ಲೇಷಣೆಯಿಂದ ವೀರಭದ್ರನ ಆರಾಧನೆ ಆ ಕಾಲದಲ್ಲಿ ಜನಪ್ರಿಯವಾಗಿ ವ್ಯಾಪಕ ವಾಗಿದ್ದುದು ತಿಳಿಯುತ್ತದೆ.

ಟಿಪ್ಪಣಿಗಳು

1. ARIE, 1889, 36 & 37; SII., IV, 266
2. EC.,VII (1979), Ng., 9; IV (I Ed), Ng 4
3. SII., IX, Pt ii, 533
4. ಶಿವರುದ್ರಸ್ವಾಮಿ, ಎಸ್.ಎನ್. *Vijayanagara Temples in Karnataka,* 1996, ಪು. 238
5. SII., IV, 266

6. ಶಿವರುದ್ರಸ್ವಾಮಿ, ಎಸ್.ಎನ್., ಅದೇ ಪು. 239
7. SII., IX, 539
8. ಶಿವರುದ್ರಸ್ವಾಮಿ, ಎಸ್.ಎನ್. *Timmalapura - Agrahara,* 2005, ಪು. 617
9. MAR., 1916, ಪು. 10; 1923, ಪು. 171
10. MAR., 1931, ಪು. 25
11. EC., XI cl., 46
12. EC., XI, Hk, 15
13. EC., XI, Hk, 20
14. EC., XI, Hk, 71
15. ಶಿವರುದ್ರಸ್ವಾಮಿ, ಎಸ್.ಎನ್., *Vijayanagara Temples in Kanataka* ಪು. 242
16. MAR., 1930, ಪು. 28
17. EC., V, Ag., 47, EC., VIII (1984), 96; MAR., 1940, ಪು. 131, 1924, ಪು. ೩
18. MAR., 1939, ಪು. 76-77
19. MAR., 1939, ಪು. 82
20. MAR., 1939, ಪು. 80
21. MAR., 1939, ಪು. 54
22. ಶಿವರುದ್ರಸ್ವಾಮಿ, ಎಸ್.ಎನ್., ಅದೇ ಪು. 244
23. MAR., 1939, ಪು. 64-65; EC., X cb. 38
24. ಶಿವರುದ್ರಸ್ವಾಮಿ, ಎಸ್.ಎನ್. ಅದೇ, ಪು. 251
25. MAR., 1939, ಪು. 35
26. Ec., VII (1979), Ng., 8
27. Ec., VI (1977), pp.,260
28. Ec., IV (1975), Ch., 224
29. MAR., 1918, ಪು. 25; EC III (1974), Nj. 335
30. MAR., 1932, ಪು. 116
31. EC., VIII, ci., 28
32. EC., VIII, Ti, 16
33. MAR., 1932, ಪು. 47-49
34. MAR., 1941, ಪು. 175

35. MAR., 1941, ಪು. 75
36. MAR., 1941, ಪು. 89
37. ಸ್ವಾಮಿ ಹರ್ಷಾನಂದ, *Hindu Gods and Goddesses* 1988, ಪು. 61
38. ರಾಮಚಂದ್ರರಾವ್, ಎಸ್.ಕೆ. *Pratimakosha,* Vol. Vi, ಪು. 150
39. ರಾಮಚಂದ್ರರಾವ್ ಎಸ್.ಕೆ. ಅದೇ
40. ರಾಮಚಂದ್ರಾರವ್, ಎಸ್.ಕೆ. ಅದೇ ಪು. 152
41. ರಾಮಚಂದ್ರರಾವ್, ಎಸ್.ಕೆ. ಅದೇ, ಪು. 150-151
42. ಗೋಪಿನಾಥರಾವ್, ಟಿ.ಎ., *Elements of Hindu Iconography,* 1985, Vol I, Pt. ii, hg. 379-385

೨೦. ಖಾನಾಪುರ ತಾಲೂಕಿನ ವೀರ; ಮಾಸ್ತಿ ಶಿಲ್ಪಗಳು (ವಿಜಯನಗರ ಮತ್ತು ವಿಜಯನಗರೋತ್ತರ)

ಡಾ. ರು.ಮ. ಷಡಕ್ಷರಯ್ಯ

ವಿಜಯನಗರ ಕಾಲದಲ್ಲಿ ಗೋವಾ ಕಡೆಯಿಂದ ವ್ಯಾಪಾರ ವಾಣಿಜ್ಯೋದ್ಯಮಕ್ಕೆ ಹೋಗಿ ಬರಲು ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕ ಪ್ರದೇಶವು ಒಂದು ಸೇತುವೆ ಆಗಿದ್ದಿತೆಂದು ಹೇಳಬಹುದು. ಇದಲ್ಲದೆ ಈ ಕಾಲಪೂರ್ವದಲ್ಲಿ ಈ ಪ್ರದೇಶವೂ ಸೇರಿ ಗೋವ ಕದಂಬರ ಆಳ್ವಿಕೆಯ ವ್ಯಾಪ್ತಿಯಲ್ಲಿ ಒಳಗೊಂಡಿದ್ದಿತು. ಆದರೆ ಖಾನಾಪುರ ತಾಲೂಕಿನ ವಿಜಯನಗರ ಕಾಲದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸ ಅಷ್ಟಾಗಿ ತಿಳಿದಿಲ್ಲ. ಈ ಪ್ರದೇಶದಲ್ಲಿ ಕನ್ನಡ ಸಂಶೋಧನ ಸಂಸ್ಥೆಯ ಸ್ನಾತಕೋತ್ತರ ಡಿಪ್ಲೋಮಾ ಇನ್ ಎಪಿಗ್ರಾಫಿ ತರಗತಿಯ ವಿದ್ಯಾರ್ಥಿಗಳು ೨೦೦೫ ಮತ್ತು ೨೦೦೬ರಲ್ಲಿ ಹಳ್ಳಿಹಳ್ಳಿಯ ಶಾಸನಗಳ ಕ್ಷೇತ್ರಕಾರ್ಯವನ್ನು ನಡೆಸಿದಾಗ ಅನೇಕ ಶಿಲ್ಪಾವಶೇಷಗಳನ್ನು ಪತ್ತೆ ಮಾಡಿದರು. ಅವುಗಳಲ್ಲಿ ಅನೇಕ ವೀರಗಲ್ಲು ಮತ್ತು ಮಹಾಸತಿಕಲ್ಲುಗಳು ಒಳಗೊಂಡಿವೆ. ಈ ಸ್ಮಾರಕ ಶಿಲ್ಪಗಳಲ್ಲಿ ವಿಜಯನಗರ ಮತ್ತು ವಿಜಯನಗರೋತ್ತರ ಶಿಲ್ಪಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಪರಿಚಯಿಸಲಾ ಗಿದೆ. ಈ ಸ್ಮಾರಕ ಶಿಲ್ಪಗಳಲ್ಲಿ ವೀರಗಲ್ಲುಗಳು ಮತ್ತು ಮಹಾಸತಿ ಶಿಲ್ಪಗಳಿವೆ. ಮಹಾಸತಿ ಶಿಲ್ಪಗಳಲ್ಲಿ ಮಹಾಸತಿಯನ್ನು ತನ್ನ ಪತಿ ಸಂಗಡ ಸಮಾನ ಎತ್ತರದಲ್ಲಿ ಇಬ್ಬರನ್ನು ತೋರಿಸುವ ಶಿಲ್ಪಗಳು ಮತ್ತು ಒಂದು ಕೈ ಅಥವಾ ಎರಡು ಕೈಗಳನ್ನು ಕಂಬಕ್ಕೆ ಜೋಡಿಸಿ ತೋರಿಸಿದ ಶಿಲ್ಪಗಳಿವೆ. ಇವಲ್ಲದೆ ಕೆಲವುಗಳು ವೀರ ಮತ್ತು ಮಹಾಸತಿ ಯರನ್ನೊಳಗೊಂಡ ಶಿಲ್ಪಗಳೂ ಸೇರಿವೆ.

ಗುಂಜಿಯಲ್ಲೊಂದು ಈ ಮಾದರಿಯ ಶಿಲ್ಪವಿದೆ. ಅದರಲ್ಲಿ ಐದು ಪಟ್ಟಿಕೆಗಳಲ್ಲಿ ವಿಭಿನ್ನ ಚಿತ್ರಗಳನ್ನು ಚಿತ್ರಿಸಿದ್ದು ಈ ಮಾದರಿ ಈ ಪ್ರದೇಶದಲ್ಲಿಯೇ ಅಪರೂಪ ವೆನಿಸಿದೆ. ಅದರಲ್ಲಿ ಕೆಳಗಿನ ಮೂರು ಪಟ್ಟಿಕೆಗಳಲ್ಲಿ ಯುದ್ಧದ ದೃಶ್ಯಗಳಿವೆ. ಎರಡ ರಲ್ಲಿ ಕೇವಲ ಕಾಲ್ದಳಗಳಿದ್ದರೆ, ಮೂರನೆಯದರಲ್ಲಿ ಕಾಲ್ದಳ ಮತ್ತು ಕುದುರೆಗಳಿವೆ. ಈ ಮೂರರ ಚಿತ್ರಗಳಲ್ಲಿ ಎಡಗಡೆಯ ಕುದುರೆ ಸವಾರನೊಬ್ಬನು ತನ್ನೆರಡೂ ಕೈಗಳನ್ನು ಮೇಲಕ್ಕೆತ್ತಿ ಹಿಡಿದಿರುವುದನ್ನು ಗಮನಿಸಿದರೆ ಆತನು ಯುದ್ಧದಲ್ಲಿ ಸೋಲನ್ನು ಒಪ್ಪಿಕೊಂಡಿರಬೇಕು. ನಾಲ್ಕರ ಪಟ್ಟಿಕೆಯಲ್ಲಿ ಮಡಿದ ವೀರನನ್ನು ನಾಲ್ವರು ಅಪ್ಸರೆಯರು ಹಿಡಿದುಕೊಂಡು ಹಾರುವಂತೆ ನಿಂತಿದ್ದಾರೆ. ಮೇಲಿನ ಐದನೆಯ ಪಟ್ಟಿಕೆಯಲ್ಲಿ ಎರಡು ಜೋಡಿ ದಂಪತಿಗಳ

ನಡುವೆ ಶಿವಲಿಂಗ (?) ಮತ್ತು ಯತಿಯರ ಚಿತ್ರವಿದೆ. ತಲಾ ಒಂದು ಪಟ್ಟಿಕೆಯನ್ನು ಬೇರ್ಪಡಿಸಲು ನಡುವೆ ಕಿರು ಅಗಲವುಳ್ಳ ಪಟ್ಟಿಕೆಯಿದೆ. ಲಿಂಗನಮಠದ ವೀರಗಲ್ಲಿನಲ್ಲಿ ದನಗಳನ್ನು ಓಡಿಸುವ ಕಳ್ಳರನ್ನು ಕೆಳಗಿನ ಪಟ್ಟಿಕೆಯಲ್ಲಿ ಚಿತ್ರಿಸಲಾಗಿದೆ. ಅದರ ಮೇಲೆ ಕುದುರೆ ಸವಾರರಿಬ್ಬರು ವೀರನನ್ನು ಸುತ್ತುವರಿದು ನಿಂತಿದ್ದಾರೆ. ಅದರ ಎಡಕ್ಕೆ ಮಹಿಳೆಯ ಮಾನಭಂಗ (ಕಂಬಕ್ಕೆ ಕಟ್ಟಿರುವುದು) ಮತ್ತು ಬಿಲ್ಲನ್ನು ಹಿಡಿದು ನಿಂತಿರುವುದಿದೆ. ಮೂರರಲ್ಲಿ ಒಬ್ಬರು ವೀರರನ್ನು ಅಪ್ಸರೆಯರಿಬ್ಬರು ಒಯ್ಯಲು ನಿಂತಿದ್ದಾರೆ. ಮೇಲಿನ ಫಲಕದಲ್ಲಿ ಇಬ್ಬರು ವೀರರು ಬಿಲ್ಲುಗಳನ್ನು ಹಿಡಿದು ನಿಂತಿದ್ದಾರೆ. ಇದು ಈ ಭಾಗದ ಅಪರೂಪದ ವೀರಗಲ್ಲಾಗಿದೆ.

ಅವರೊಳ್ಳಿಯ ವೀರಗಲ್ಲು ಶಿಲ್ಪದಲ್ಲಿ ಮೂರು ಸರಳ ಪಟ್ಟಿಕೆಗಳಿದ್ದು ಅವುಗಳಲ್ಲಿ ಕ್ರಮವಾಗಿ ವೀರನು ವೈರಿಗಳ ಸಂಗಡ ಬಿಲ್ಲನ್ನು ಹಿಡಿದು ಹೋರಾಡುವುದು, ಮಡಿದ ವೀರರನ್ನು ವಿಮಾನದಲ್ಲಿ ಕೂಡಿಸಿ ಅಪ್ಸರೆಯರು ಹಾರಲು ನಿಂತಿರುವುದನ್ನು ಮತ್ತು ದೇವರ ಸಾನ್ನಿಧ್ಯದಲ್ಲಿ ಕೈ ಮುಗಿದು ಕುಳಿತಿರುವುದನ್ನು ತೋರಿಸಲಾಗಿದೆ. ಇಲ್ಲಿ ವೀರನನ್ನು ವಿಮಾನದಲ್ಲಿ ಕೂಡಿಸಿರುವುದು ಖಾನಾಪುರದ ಈ ಕಾಲದ ಶಿಲ್ಪಗಳಲ್ಲಿ ವಿರಳವೆನ್ನ ಬಹುದು.

ಸವಟಗಿ (ಬೈಲಹೊಂಗಲ ತಾ.)ಯ ವೀರಗಲ್ಲಿನಲ್ಲಿ ತೋರಿಸಿದ ಚಿತ್ರಗಳು ವಿಶೇಷ ಗಮನವನ್ನು ಸೆಳೆಯುತ್ತದೆ. ಅದರಲ್ಲಿ ಮೂರು ದೃಶ್ಯಗಳಿವೆ. ಕೆಳಗಿನ ಪಟ್ಟಿಕೆಯಲ್ಲಿ ಒಂದಕ್ಕೊಂದು ಮುಖಮಾಡಿ ಎರಡು ನಿಂತ ಆಕಳು ಕರುಗಳ ನಡುವೆ ವೀರನು (?) ನಿಂತ ಕುದುರೆ ಏರಿ ಕುಳಿತಿರುವನು. ತಲಾ ಒಂದರಲ್ಲಿ ಕರು ಹಸುವಿನ ಹಾಲನ್ನು ಕುಡಿಯುತ್ತಿರುವುದನ್ನು ಚಿತ್ರಿಸಲಾಗಿದೆ. ಎರಡನೆಯ ಪಟ್ಟಿಕೆಯಲ್ಲಿ ನಾಲ್ಕು ಹಸು ಕರುಗಳ ನಡುವೆ ಇಬ್ಬರು ಮಹಿಳೆಯರು ನಿಂತಿರುವರು. ತಲಾ ಒಂದರ ಅಂಚಿನಲ್ಲಿ ಒಂದರ ಮೇಲೆ ಒಂದರಂತೆ ಎರಡು ನಿಂತ ಹಸು ಕರುಗಳಿವೆ. ಮಹಿಳೆಯರು ಸೀರೆಯನ್ನು ಲಂಗದಂತೆ ಉಟ್ಟಿರುವರು. ಮೇಲ್ಭಾಗದಲ್ಲಿ ಶಿವಲಿಂಗದ ಎಡಕ್ಕೆ ಯತಿ ಮತ್ತು ಬಲಕ್ಕೆ ಕುಳಿತ ನಂದಿ ಇವೆ. ಇಲ್ಲಿ ಚಿತ್ರಿಸಿದ ಹಸುಕರುಗಳಿಂದ ಈ ಶಿಲ್ಪ ಗೋಗ್ರಹಣದ ಪ್ರಸಂಗವನ್ನು ಪ್ರತಿನಿಧಿಸುವುದು.

ಬೈಲೂರಿನ (ಬೈಲಹೊಂಗಲ ತಾ.) ಸಮಾಧಿಸ್ಥಳದ ಒಂದು ವೀರಗಲ್ಲಿನಲ್ಲಿ ನಾಲ್ಕು ದೃಶ್ಯಗಳಿದ್ದು, ಕೆಳಗಡೆ ಕುದುರೆಯೊಂದನ್ನು ಹಿಡಿದು ಕಂಬಕ್ಕೆ ಕಟ್ಟಿ ಹಾಕಲಾಗಿದೆ. ಅದು ತಪ್ಪಿಸಿಕೊಳ್ಳುವ ರೀತಿಯಲ್ಲಿ ನಿಂತಿದೆ. ಕಂಬವನ್ನು ಹಿಡಿದುಕೊಂಡು ಒಬ್ಬ ನಿಂತಿದ್ದಾನೆ. ಎರಡನೆಯ ಫಲಕಲ್ಲಿ ಮಡಿದ ವೀರನ ಹಾಸಿಗೆ ಇರುವ ಪಲ್ಲಕ್ಕಿಯನ್ನು ಇಬ್ಬರು ಸೇವಕರು ಹೊತ್ತಿರುವುದನ್ನು ಚಿತ್ರಿಸಿರುವುದು ವಿಶೇಷ ಎನಿಸಿದೆ. ಫಲ್ಲಕ್ಕಿಯ ಮೇಲೆ ಛತ್ರಿಯನ್ನು ಹಿಡಿಯಲಾಗಿದೆ. ಮೂರರ ಪಟ್ಟಿಕೆಯಲ್ಲಿ ನಿಂತ ವೀರನನ್ನು ದೊಡ್ಡದಾಗಿ ಚಿತ್ರಿಸಿದ್ದು

ಆತನ ಎದುರಿಗೆ ವೈರಿ ನಿಂತಿದ್ದಾನೆ. ವೀರನು ಎಡಗೈಯಲ್ಲಿ ಬಿಲ್ಲನ್ನು ಹಿಡಿದು ಮೇಲೆತ್ತಿ ಹಿಡಿದಿದ್ದು, ಎಡಗೈಯಲ್ಲಿ ಬಾಣವನ್ನು ಹಿಡಿದು ವೈರಿಗೆ ತೋರಿಸುತ್ತಿರುವನು. ವೈರಿಯನ್ನು ಕಿರಿದಾಗಿ ಚಿತ್ರಿಸಲಾಗಿದೆ. ಮೇಲ್ಗಡೆ ಶಿವಲಿಂಗದ ಮುಂದೆ ಬಲಕ್ಕೆ ಕುಳಿತ ನಂದಿ ಇದೆ. ಲಿಂಗದ ಬದಿಗಳಲ್ಲಿ ಸೂರ್ಯ ಚಂದ್ರರಿದ್ದಾರೆ.

ಎರಡು ವೀರಗಲ್ಲುಗಳಲ್ಲಿ ಹೋರಾಟ, ಮಡಿದ ವೀರನನ್ನು ಸ್ವರ್ಗಲೋಕಕ್ಕೆ ಒಯ್ಯುವುದು ಮತ್ತು ದೇವರ ಸಾನ್ನಿಧ್ಯದಲ್ಲಿರುವ ದೃಶ್ಯಗಳಿವೆ. ಒಂದರಲ್ಲಿ ವೀರನು ತನ್ನ ಪಡೆಯವನೊಬ್ಬನ ಜೊತೆ ವೈರಿ ವಿರುದ್ಧ ಕತ್ತಿ ಗುರಾಣಿಯಿಂದ ಯುದ್ಧ ಮಾಡು ತ್ತಿರುವನು. ಮಡಿದ ವೀರನನ್ನು ನಾಲ್ವರು ಅಪ್ಸರೆಯರು ಒಯ್ಯುತ್ತಿರುವರು. ವೀರನು ದೇವರ ಸಾನ್ನಿಧ್ಯದಲ್ಲಿ ಕುಳಿತಿದ್ದಾನೆ. ಇನ್ನೊಂದರಲ್ಲಿ ಇದೇ ರೀತಿಯಿದ್ದು ಮಡಿದ ವೀರನನ್ನು ವಿಮಾನದಲ್ಲಿ ಕೂಡಿಸಲಾಗಿದೆ.

ವೀರಗಲ್ಲು

ಬಲೋಗದಲ್ಲಿ ಎರಡು ಶಿಲ್ಪಗಳಿದ್ದು ಕೇವಲ ಮೂವರು ವೀರರ ಉಬ್ಬುಶಿಲ್ಪ ಗಳನ್ನು ದೊಡ್ಡದಾಗಿ ಚಿತ್ರಿಸಲಾಗಿದೆ. ನಡುವೆ ನಿಂತ ವೀರನನ್ನು ಕಿರಿದಾಗಿ ಚಿತ್ರಿಸ ಲಾಗಿದೆ. ಮೇಲಿನ ಪಟ್ಟಿಕೆಯಲ್ಲಿ ವೀರರು ದೇವರ ಸಾನ್ನಿಧ್ಯದಲ್ಲಿ ನಿಂತಿದ್ದಾರೆ. ಅಲ್ಲಿ ನಂದಿ, ಆಂಜನೇಯ, ಚತುರ್ಭುಜಧಾರಿ ವಿಷ್ಣು, ಮಡಿದ ವೀರ ಮತ್ತು ನಿಂತ ಯತಿಯರಿದ್ದಾರೆ.

ವೀರಗಲ್ಲು

ನಾಗರಗಾಳಿಯ ಒಂದು ವೀರಗಲ್ಲಿನಲ್ಲಿ ನಾಲ್ಕು ಫಲಕಗಳಿದ್ದು ಒಂದರಲ್ಲಿ ಕೆಳಗಡೆ ಯುದ್ಧದ ದೃಶ್ಯವಿದೆ. ಅದರಲ್ಲಿ ವೀರನು ವೈರಿಯ ವಿರುದ್ಧ ಕುಸ್ತಿ ಆಡುತ್ತಿರು ವನು. ಬದಿಗಳಲ್ಲಿ ಈರ್ವರ ಪರಿವಾರದವರಿದ್ದಾರೆ. ಒಬ್ಬೊಬ್ಬರನ್ನು ಮಾತ್ರ ಸಾಂಕೇತಿಕವಾಗಿ ಚಿತ್ರಿಸಲಾಗಿದೆ. ಎರಡನೇ ಫಲಕದಲ್ಲಿ ಮಡಿದ ವೀರನನ್ನು ಅಪ್ಸರೆಯರಿಬ್ಬರು ಆತನ ಕೈಗಳನ್ನು ಹಿಡಿದು ಹಾರುವ ರೀತಿಯಲ್ಲಿದ್ದಾರೆ. ಮೂರನೆಯ ಫಲಕದಲ್ಲಿ ನಡುವೆ ಮಡಿದ ವೀರ ಕುಳಿತಿದ್ದು ಆತನ ಬದಿಗೆ ಇಬ್ಬರು ಸೇವಕರು ನಿಂತಿರುವರು. ಮೇಲಿನ ಫಲಕದಲ್ಲಿ ಶಿವಲಿಂಗಗಳೆರಡನ್ನು ಯತಿಯೊಬ್ಬ ಪೂಜಿಸುತ್ತ ನಿಂತಿರುವುದನ್ನು ಚಿತ್ರಿಸ ಲಾಗಿದೆ. ಈ ತಾಲೂಕಿನ ಮತ್ತೊಂದು ಹಳ್ಳಿಯ ವೀರಗಲ್ಲಿ ನಲ್ಲಿ ವೀರನು ಬಿಲ್ಲನ್ನು ಮುಂದಿಟ್ಟು ನಿಂತಿರುವುದನ್ನು ಅದರ ಮೇಲಿನ ಫಲಕದಲ್ಲಿ ಚಿತ್ರಿಸಲಾಗಿದೆ.

ಒಕ್ಕೈ ಮಹಾಸತಿಕಲ್ಲು

ಶಿಲ್ಪದಲ್ಲಿ ಸತಿ ಪತಿಯರು ಕುಳಿತಿದ್ದು ಪತ್ನಿಯು ತನ್ನೆರಡು ಕೈಗಳನ್ನು ಮೇಲಕ್ಕೆತ್ತಿ ರುವುದು ಗಮನೀಯ. ಮೇಲ್ಗಡೆ ಫಲಕದಲ್ಲಿ ಅವರು ದೇವರ ಸಾನ್ನಿಧ್ಯದಲ್ಲಿ ಕುಳಿತಿರುವರು.

ಗೋಗ್ರಹಣ

ಸತಿಪತಿಯರನ್ನು ಸಮಾನ ಗಾತ್ರದಲ್ಲಿ ತೋರಿಸಿದ ಸುಂದರ ಶಿಲ್ಪವೊಂದು ಅರವಳ್ಳಿ ಊರಿನ ಕ್ರಾಸ್ ಬಳಿಯಿದೆ. ಇಲ್ಲಿ ಸತಿಯು ಎರಡು ಕೈಗಳನ್ನು ಮೇಲಕ್ಕೆತ್ತಿ ನಿಂತಿದ್ದಾಳೆ. ಪತಿಯು ಎಡಗೈಯಲ್ಲಿ ಬಿಲ್ಲನ್ನು ಹಿಡಿದು ಸತಿಯ ಬದಿಗೆ ನಿಂತಿದ್ದಾನೆ. ದಂಪತಿಗಳಿಬ್ಬರು ವಸ್ತ್ರಾಭರಣಧಾರಿಗಳು. ಪತಿಯ ಬಲಬದಿಗೆ ಕಿರುದಾಗಿ ಎರಡು ಹಸುಗಳನ್ನು ಚಿತ್ರಿಸ ಲಾಗಿದೆ. ಮೇಲಿನ ಭಾಗದಲ್ಲಿ ಆಯತಾಕಾರದ ಪಟ್ಟಿಕೆಯಲ್ಲಿ ಪತಿ ಪತ್ನಿಯರು ಶಿವಲಿಂಗದ ಮುಂದೆ ಕೈ ಮುಗಿದು ಕುಳಿತಿದ್ದಾರೆ. ಇಲ್ಲಿ ತೋರಿಸಿದ ಹಸುಗಳ ಚಿತ್ರದಿಂದ ಈ ವೀರಗಲ್ಲು ಗೋಗ್ರಹಣ ಪ್ರಸಂಗವನ್ನು ಪ್ರತಿನಿಧಿಸುತ್ತದೆ. (ಜೋಗಣ್ಣನವರ ವರದಿ)

ಸತಿ ದೇವಾಲಯ

ಚಿಂಚವಾಡದಲ್ಲಿ ಸತಿಯ ದೇವಾಲಯವನ್ನು ಕಟ್ಟಲಾಗಿದೆ.

ನೇರಸೆಯ ಒಕ್ಕೈ ಮಾಸ್ತಿಗಲ್ಲಿನಲ್ಲಿ ಏಕಕಂಬಕ್ಕೆ ನಡುವೆ ಹೊಂದಿಸಿ ಸತಿಹೋದ ವಳ ನೆನಪಿಗಾಗಿ ಮೇಲಕ್ಕೆ ಎತ್ತಿದ ತೋಳುಳ್ಳ ಬಲಗೈಯನ್ನು ಜೋಡಿಸಲಾಗಿದೆ. ಕೈಯಲ್ಲಿ ನಿಂಬೆಹಣ್ಣಿದೆ. ಅದರ ತೋಳಿನ ಕೆಳಭಾಗದಲ್ಲಿ ಸತಿಯು ಸತಿಸಮೇತ ಕೈ ಮುಗಿದು ಕುಳಿತಿದ್ದಾಳೆ. ಕನಕುಂಬಿಯಲ್ಲೂ ಇದೇ ರೀತಿಯ ಒಕ್ಕೈ ಮಹಾಸತಿ ಕಲ್ಲಿದೆ. (ಚಿತ್ರ ೩)

ಒಕ್ಕೈಮಹಾಸತಿ ಕಲ್ಲೊಂದು ಕಾಕತಿಯ (ಬೆಳಗಾವಿ ತಾ.) ಸಿದ್ದೇಶ್ವರ ಗುಡಿಯ ಮುಂದಿದ್ದು ಅದರಲ್ಲಿ ವಿಭಿನ್ನ ಗಾತ್ರದ ಎರಡು ಫಲಕಗಳಿವೆ. ಕೆಳಪಟ್ಟಿಕೆಯಲ್ಲಿ ತೋಳುಳ್ಳ ಮೇಲೆತ್ತಿದ ಬಲಗೈಯನ್ನು ಎಡ ಅಂಚಿನ ನಡುಭಾಗಕ್ಕೆ ಜೋಡಿಸಲಾಗಿದೆ. ಆ ಭಾಗವನ್ನು ಕಂಬ ರೀತಿಯಲ್ಲಿ ಚಿತ್ರಿಸಲಾಗಿದೆ. ಕೈಯಲ್ಲಿ ನಿಂಬೆಹಣ್ಣಿದೆ. ಈ ಕೈ ತೋಳಿನ ಕೆಳಭಾಗದ ಫಲಕದಲ್ಲಿ ಕುದುರೆಯೊಂದರ ಮೇಲೆ ಇಬ್ಬರು ಕುಳಿತು ಕತ್ತಿಯಿಂದ ಹೊಡೆದಾಡುತ್ತಿರುವರು. ಇಬ್ಬರೂ ತಮ್ಮೆರಡೂ ಕೈಗಳನ್ನು ಮೇಲಕ್ಕೆತ್ತಿ ಹಿಡಿದಿರುವರು. ತೇರಿನ ಮೇಲೆ ಮಡಿದ ವೀರನನ್ನು ಇಬ್ಬರು ಅಪ್ಸರೆಯರು ಹಿಡಿದುಕೊಂಡು ಹಾರುವ ರೀತಿಯಲ್ಲಿ ನಿಂತಿರುವರು. ಮೇಲಿನ ಭಾಗದಲ್ಲಿ ಸತಿ ಪತಿಯರಿಬ್ಬರು ಶಿವಲಿಂಗ (?)ದ ಮುಂದೆ ಕೈ ಮುಗಿದು ಕುಳಿತಿರುವರು. ಇದೇ ಸ್ಥಳದಲ್ಲಿ ಇನ್ನೂ ಮೂರು ಒಕ್ಕೈ ಮಹಾಸತಿ ಶಿಲ್ಪಗಳಿವೆ. ಒಂದರಲ್ಲಿ ಒಕ್ಕೈ ಚಿತ್ರದ ಕೆಳಗಡೆ ಮಡಿದ (?) ವೀರನನ್ನು ಕೂಡಿಸಿಕೊಂಡು ಇಬ್ಬರು ಒಯ್ಯುತ್ತಿರುವುದನ್ನು ಚಿತ್ರಿಸಲಾಗಿದೆ. ತೋಳಿನ ಮೇಲ್ಭಾಗದಲ್ಲಿ ಮಡಿದ ವೀರನನ್ನು ಮೂವರು ಸುಂದರಿ ಯರು ಒಯ್ಯಲು ನಿಂತಿರುವರು. ಅದರ ಮೇಲ್ಭಾಗದಲ್ಲಿ ಸಾಲಾಗಿ ಕೈ ಮುಗಿದು ಕುಳಿತ ದಂಪತಿಗಳು, ಶಿವಲಿಂಗ ಮತ್ತು ಯತಿಯರನ್ನು ಚಿತ್ರಿಸಲಾಗಿದೆ.

ಅಸೋಗದಲ್ಲಿ ಒಕ್ಕೈ ಸತಿಯ ಎರಡು ಶಿಲ್ಪಗಳಿವೆ. ಇಲ್ಲಿಯೂ ಎಡಗಡೆ ಅಂಚಿನಲ್ಲಿರುವ ಕಂಬದ ನಡುವೆ ತೋಳುಳ್ಳ ಎತ್ತಿದ ಬಲಗೈ ಜೋಡಿಸಲಾಗಿದೆ. ಇಲ್ಲಿಯೂ ಕಂಬದ ತುದಿಯಲ್ಲಿ ಕಳಸವಿದೆ ಮತ್ತು ತೋಳಿನ ದಂಪತಿಗಳು ಕೈ ಮುಗಿದು ಕುಳಿತಿರುವರು.

ಎರಡು ಕೈಗಳುಳ್ಳ ಸತಿಕಲ್ಲು

ಹತ್ತರಗಿ ಗ್ರಾಮದಲ್ಲಿ ಸಿಕ್ಕ ಒಂದು ಸತಿ ಕಲ್ಲು ಅಪರೂಪದ್ದೆನಿಸಿದೆ. ಈ ಶಿಲ್ಪವನ್ನು ಬೆಳಕಿಗೆ ತಂದವರು ಶ್ರೀ ಬಿ.ಜಿ. ಅಮ್ಮಣಗಿಯವರು. (ಇತಿಹಾಸ ದರ್ಶನ, ಸಂ. ೧೪, ಪು. ೨೩೦) ಅದರ ಮೂರು ಪಟ್ಟಿಕೆಗಳಲ್ಲಿ ವೈರಿ ಮತ್ತು ವೀರರು ಕುದುರೆ ಗಳನ್ನೇರಿ ಎದುರು ಬದುರು ನಿಂತಿರುವುದನ್ನು ಕೆಳಗಿನ ಫಲಕದಲ್ಲಿ ಚಿತ್ರಿಸ ಲಾಗಿದೆ. ಅದರ ಮೇಲ್ಗಡೆ ಎಡ ಮತ್ತು ಬಲ ಕೈಗಳನ್ನೆರಡನ್ನು ಸಮಾನಾಂತರವಾಗಿ ನಿಲ್ಲಿಸಿ ಅದರ ತೋಳುಗಳನ್ನು ಅಂಚಿನಲ್ಲಿರುವ ಕಂಬಗಳ ನಡುವಿನ ಭಾಗಕ್ಕೆ ಜೋಡಿಸಿರುವುದರಿಂದ ಅಲ್ಲಿ ಕೆಳ ಮತ್ತು ಮೇಲ್ಭಾಗದಲ್ಲಿ ಎರಡು ಪಟ್ಟಿಕೆಗಳನ್ನಾಗಿ ವಿಭಾಗಿಸಲು ಕಾರಣವಾಗಿದೆ. ತೋಳಿನ ಕೆಳಭಾಗದ ಪಟ್ಟಿಕೆಯಲ್ಲಿ ಮೂವರು ಕೈ ಮುಗಿದು ಕಾಲುಗಳನ್ನು ಕೆಳಗಡೆ ಇಳಿಬಿಟ್ಟು ಕುಳಿತಿದ್ದರೆ ಮೇಲಿನ ಪಟ್ಟಿಕೆಯಲ್ಲೆರಡು ನಿಂತ ಕೈಗಳಿರುವುದು ಎದ್ದು ಕಾಣುತ್ತದೆ.

ಮಹಾಸತಿಕಲ್ಲು

ರಾಮಗುರುವಾಡಿಯ ಮಹಾಸತಿ ಕಲ್ಲಿನಲ್ಲಿ ಸತಿಯು ಸೀರೆಯನ್ನು ಲಂಗದ ರೀತಿಯಲ್ಲಿ ಉಟ್ಟುಕೊಂಡು ತಲೆಗೆ ಕೇದಿಗೆ, ಕಿವಿಗಳಲ್ಲಿ ಓಲೆ, ಕೊರಳಲ್ಲಿ ಸರ, ಕುಚಹಾರ, ಬಳೆ, ತೋಳ್ಬಳೆ, ಕಡಗಗಳನ್ನು ಧರಿಸಿ ಸಮಭಂಗ ರೀತಿಯಲ್ಲಿ ತನ್ನೆರಡೂ ಕೈಗಳನ್ನು ಮೇಲಕ್ಕೆತ್ತಿ ನಿಂತಿರುವುದು ವಿಶೇಷವೆನಿಸಿದೆ. ಎಡಗೈಯನ್ನು ಸ್ವಲ್ಪ ಭಿನ್ನರೀತಿಯಲ್ಲಿ ಬಗ್ಗಿಸಿ ಅದರಲ್ಲಿ ಕನ್ನಡಿಯನ್ನು ತನ್ನ ಮುಖದ ಕಡೆಗೆ ಹಿಡಿದು ಕೊಂಡಿದ್ದರೆ, ತೆರೆದ ಎಡಗೈಯಲ್ಲಿ ನಿಂಬೆ ಹಣ್ಣಿದೆ. ಮೇಲಿನ ಪಟ್ಟಿಕೆಯಲ್ಲಿ ತನ್ನ ಗಂಡ ಮತ್ತು ಸವತಿ ಜೊತೆ ಶಿವಲಿಂಗದ ಬಲಗಡೆ ಕೈಮುಗಿದು ಕುಳಿತಿರುವರು. ಶಿವಲಿಂಗದ ಎಡಕ್ಕೆ ಕುಳಿತ ನಂದಿಯಿದೆ.

ಅಸೋಗ ಗ್ರಾಮದ ಶಿವ ದೇವಾಲಯದ ಹೊರಗಡೆ ಒಂದು ಮಹಾಸತಿ ಶಿಲ್ಪ ಇದ್ದು ಅದರಲ್ಲಿ ಬಲಗೈಯನ್ನು ಎತ್ತಿ ನಿಂತ ಸತಿಯ ಚಿತ್ರವನ್ನು ದೊಡ್ಡದಾಗಿ ಚಿತ್ರಿಸ ಲಾಗಿದೆ. ಅದರಲ್ಲಿ ನಿಂಬೆಹಣ್ಣಿದೆ. ಮೇಲ್ಭಾಗ ದಲ್ಲಿ ಎರಡು ಆಯಾತಾಕಾರ ಪಟ್ಟಿಕೆ ಗಳನ್ನು ನಿರ್ಮಿಸಿದ್ದು ಕೆಳಗಡೆ ಮಡಿದ ಸತಿ ತನ್ನ ಸತಿ ಪಂಗಡ ಕೈ ಮುಗಿದು ಕುಳಿತಿರುವರು. ಮೇಲಿನ ಪಟ್ಟಿಕೆಗಳಲ್ಲಿ ದೇವರ ಮುಂದೆ ನಾರಿಯನ್ನು ಇಲ್ಲಿಯೂ ಎಡಕ್ಕೆ ಕುಳಿತಿರುವುದನ್ನು ಚಿತ್ರಿಸಲಾಗಿದೆ.

ಸತಿಪತಿಯರುಳ್ಳ ಶಿಲ್ಪ

ಈ ತಾಲೂಕಿನ ಗುಂಡಪಿ ಮತ್ತು ಚಿಕ್ಕದಿನ ಕೊಪ್ಪಗಳಲ್ಲಿವೆ. ಸತಿ-ಪತಿಯರಿಬ್ಬರ ಏಕ ಗಾತ್ರದ ಎತ್ತರದ ಉಬ್ಬು ಶಿಲ್ಪಗಳಿದ್ದು ಅವರು ನಿಂತ ಭಂಗಿಯಲ್ಲಿರುವರು. ಎಡಗಡೆ ನಿಂತಿರುವ ಸತಿಯು ತನ್ನ ಕೈಗಳನ್ನು ಎತ್ತಿ ಹಿಡಿದಿದ್ದಾಳೆ. ಮೇಲೆ ಕಿರು ಪಟ್ಟಿಯಿದ್ದು ಅದರಲ್ಲಿ ಶಿವಲಿಂಗದ ಬಲಕ್ಕೆ ಸತಿಪತಿಯರು ಕೈ ಮುಗಿದು ಕುಳಿತಿದ್ದರೆ, ಎಡಕ್ಕೆ ಅದನ್ನು ಯತಿಯೊಬ್ಬ ಪೂಜಿಸುತ್ತ ನಿಂತಿದ್ದಾನೆ. ಇದೇ ರೀತಿಯ ಇನ್ನೊಂದು ಸತಿ ಪತಿಯರಿರುವ ಶಿಲ್ಪವಿದ್ದು ಅದರಲ್ಲಿಯೂ ಸತಿಯು ತನ್ನ ಕೈಗಳನ್ನು ಎತ್ತಿ ಹಿಡಿದಿದ್ದಾಳೆ. ಇಲ್ಲಿಯೂ ಆಕೆ ತನ್ನ ಎಡಗೈಯನ್ನು ಬಗ್ಗಿಸಿ ಮೇಲಕ್ಕೆತ್ತಿದ್ದಾಳೆ. ಆದರೆ ಅಲ್ಲಿಯ ಈ ರೀತಿಯ ಮತ್ತೊಂದು ಶಿಲ್ಪದಲ್ಲಿ ಕೆಳಭಾಗದಲ್ಲಿ ವೀರನ ಉಬ್ಬು ಶಿಲ್ಪವನ್ನು ತೋರಿಸಲಾಗಿದೆ. ಇದೇ ರೀತಿಯ ಶಿಲ್ಪಗಳೆರಡು ದೇವಲತ್ತಿ ಗ್ರಾಮದಲ್ಲಿವೆ. ಅಲ್ಲಿ ವೀರನನ್ನು ಪ್ರತ್ಯೇಕವಾಗಿ ತೋರಿಸಿಲ್ಲ. ಬಲೋಗಾ ಗ್ರಾಮದ ಶಿಲ್ಪದಲ್ಲಿ ಕೆಲ ಪಟ್ಟಿಕೆಯಲ್ಲಿ ವೀರನನ್ನು ಎರಡನೇ ಪಟ್ಟಿಕೆಯಲ್ಲಿ ದೊಡ್ಡದಾಗಿ ತೋರಿಸಲಾಗಿದೆ. ನಡುವಿನ ಭಾಗದಲ್ಲಿ ನಿಂತ ಆಕಳುಕರುಗಳಿವೆ. ಕೆಳಗಿನ ಭಾಗ ಮಣ್ಣಲ್ಲಿ ಹೂತಿದೆ. ಈ ತಾಲೂಕಿನ ಕರೀಕಟ್ಟಿಯ ವೀರಗಲ್ಲಿನಲ್ಲಿ ಆರು ಪಟ್ಟಿಕೆಗಳಿರುವದು ಗಮನೀಯ. ತಲಾ ಒಂದರ ಐದು ಪಟ್ಟಿಕೆಗಳಲ್ಲಿ ಇಬ್ಬರು ಕೈಗಳನ್ನು ಹಿಡಿದು ವಿವಿಧ ರೀತಿಯಲ್ಲಿ ನಿಂತಿರುವುದನ್ನು ಚಿತ್ರಿಸಲಾಗಿದೆ. ಅವರು ಸತಿ ಪತಿಯರಿರಬಹುದು. ಆದರೆ ಐದನೆಯ ಫಲಕದಲ್ಲಿ ಸತಿ ಹೋದವಳು ತನ್ನ ಎರಡೂ ಕೈಗಳನ್ನು ಮೇಲಕ್ಕೆತ್ತಿ ಹಿಡಿದು ನಿಂತಿದ್ದರೆ ಆಕೆಯ ಪತಿ ಎಡಗೈಯಲ್ಲಿ ಬಿಲ್ಲನ್ನು ಹಿಡಿದು ನಿಂತಿರುವನು. ಆರನೆಯ (ಮೇಲಿನ) ಪಟ್ಟಿಕೆಯಲ್ಲಿ ಚಿತ್ರಿಸಿದ ಚಿತ್ರಗಳು ಅಸ್ಪಷ್ಟವಿದೆ.

ಸತಿಪತಿಯರುಳ್ಳ ಎರಡು ಶಿಲ್ಪಗಳು ಹಲಸಿಯ ಕಲ್ಲೇಶ್ವರ ದೇವಾಲಯದ ಸಮೀಪ ಇವೆ. ಅದರಲ್ಲಿ ಎರಡು ವಿಭಿನ್ನ ಗಾತ್ರದ ಗೂಡುಗಳನ್ನು ತಯಾರಿಸಿ ನಡುವೆ ಉಬ್ಬು ಚಿತ್ರಗಳನ್ನು ಕಂಡರಿಸಲಾಗಿದೆ. ಕೆಳಗಿನ ಚೌಕಾದ ಗೂಡಿನ / ಪಟ್ಟಿಕೆ ಭಾಗದಲ್ಲಿ ಸತಿಯು ತನ್ನೆರಡು ಕೈಗಳನ್ನು ಮೇಲಕ್ಕೆತ್ತಿಕೊಂಡು ಪತಿಯ ಜೊತೆ ನಿಂತಿದ್ದಾಳೆ. ಇಬ್ಬರ ಚಿತ್ರಗಳು ಏಕಗಾತ್ರದಲ್ಲಿವೆ. ಮೇಲಿನ ಆಯತಾಕಾರದ ಪಟ್ಟಿಕೆಯಲ್ಲಿ ಸತಿ - ಪತಿಯರಿಬ್ಬರು ಶಿವಲಿಂಗದ ಮುಂದೆ ಕೈ ಮುಗಿದು ಕುಳಿತಿರುವರು. ಒದರಲ್ಲಿ ಶಿವ ಲಿಂಗದ ಎಡಕ್ಕೆ ನಂದಿ ಮತ್ತು ಯತಿಯರನ್ನು ತೋರಿಸಲಾಗಿದೆ.

ಸತಿ - ಪತಿಯರು ಸಮಾನ ಎತ್ತರದಲ್ಲಿ ನಿಂತ ಎರಡು ಶಿಲ್ಪಗಳಿವೆ. ಈ ಎರಡರಲ್ಲೂ ಸತಿ ಹೋದವರು ತಮ್ಮೆರಡು ಕೈಗಳನ್ನು ಮೇಲಕ್ಕೆತ್ತಿ ಹಿಡಿದಿದ್ದಾರೆ. ಇಲ್ಲಿಯೂ ಅವರು ಎತ್ತಿ ಹಿಡಿದ ಎಡಗೈ ಸ್ವಲ್ಪ ಮಡಚಿದ್ದು ಅದರಲ್ಲಿ ಕನ್ನಡಿಯನ್ನು ಹಿಡಿದಂತೆ ಕಾಣುತ್ತದೆ. ಮಡಿದ ವೀರನು ಎಡಗೈಯಲ್ಲಿ ಬಿಲ್ಲನ್ನು ಹಿಡಿದಿದ್ದು, ಬಲಗೈ ಯನ್ನು ಮಡಚಿ ದೇಹದ

ಮೇಲೆ ಇಟ್ಟಿದ್ದಾನೆ. ಬಲ ಭುಜದ ಹಿಂದೆ ಬಾಣಗಳನ್ನು ಕಟ್ಟಿದ್ದಾನೆ. ವಸ್ತ್ರಾಭರಣಗಳನ್ನು ಧರಿಸಿರುವನು. ತನ್ನ ತುರುಬನ್ನು ತಲೆಯ ಎಡಕ್ಕೆ ವಾಲಿಸಿ ಕಟ್ಟಿರುವನು. ಸತಿಯರು ಲಂಗದಂತೆ ಸೀರೆಯನ್ನು ಧರಿಸಿದ್ದಾರೆ. ಅವರ ತುರುಬನ್ನು ತಲೆಯ ಎಡಕ್ಕೆ ಕಟ್ಟಲಾಗಿದೆ. ಈ ಎರಡರಲ್ಲೂ ಮೇಲಿನ ಪಟ್ಟಿಕೆಯಲ್ಲಿ ಕೈ ಮುಗಿದು ಕುಳಿತ ಸತಿ-ಪತಿ, ಯತಿ, ಶಿವಲಿಂಗ ಮತ್ತು ಕುಳಿತ ನಂದಿಯರ ಚಿತ್ರ ಗಳಿವೆ.

ಹಲಸಿ ಗ್ರಾಮದ ಸತಿ ಪತಿಯರ ಶಿಲ್ಪದಲ್ಲಿ ಈರ್ವರು ಸಮಾನ ಗಾತ್ರದಲ್ಲಿದ್ದು ಪತಿಯು ಖಡ್ಗ ಹಿಡಿದು ನಿಂತಿದ್ದರೆ ಸತಿಯು ಬಲಗೈಯನ್ನು ಮಾತ್ರ ಮೇಲಕ್ಕೆತ್ತಿ ಎಡಗೈಯನ್ನು ಕೆಳಗಡೆ ಇಳಿಬಿಟ್ಟು ನಿಂತಿದ್ದಾಳೆ. ಬಲಗೈಯಲ್ಲಿ ನಿಂಬೆ ಹಣ್ಣಿದ್ದರೆ ಎಡಗೈಯಲ್ಲಿ ಕನ್ನಡಿಯಿದೆ. ಸೀರೆಯನ್ನು ಲಂಗದಂತೆ ಧರಿಸಿರುವಳು. ಆಕೆಯ ಪತಿಗೆ ಉದ್ದ ಮೀಸೆಗಳಿವೆ. ಆತನು ಸತಿಯ ಕಡೆ ಸ್ವಲ್ಪ ತಿರುಗಿ ನಿಂತಿರುವನು. ಮೇಲ್ಭಾಗದಲ್ಲಿ ದಂಪತಿಗಳು ಶಿವಲಿಂಗದ ಬಲಕ್ಕೆ ಕುಳಿತಿದ್ದಾರೆ. ಅದರ ಎಡಕ್ಕೆ ಯತಿ ಮತ್ತುಕುಳಿತ ನಂದಿ ಇವೆ. ಈ ನಮೂನೆಯ ಶಿಲ್ಪವೊಂದು ಗೂಬಿಹಳ್ಳಿಯಲ್ಲಿದೆ. ಆದರೆ ಅದರ ಮೇಲ್ಭಾಗದಲ್ಲಿ ಎರಡೂ ಫಲಕಗಳಿದ್ದು ಅಲ್ಲಿ ದಂಪತಿಗಳ ಮತ್ತು ಯತಿ ಶಿವಲಿಂಗ ಇತ್ಯಾದಿಗಳ ಚಿತ್ರಗಳಿವೆ.

ಸತಿಪತಿಶಿಲ್ಪ

ಗೋಲಿಹಳ್ಳಿಯಲ್ಲಿ ನಾಲ್ಕು ಮಹಾಸತಿಯರ ಶಿಲ್ಪಗಳಿದ್ದು ತಲಾ ಒಂದರಲ್ಲಿ ಏಕ ಗಾತ್ರದಲ್ಲಿ ನಿಂತ ಸತಿ ಪತಿಯರ ಉಬ್ಬು ಶಿಲ್ಪಗಳಿವೆ. ಇಲ್ಲಿಯೂ ಸತಿ ಹೋದ ವಳು ತನ್ನ ಬಲಗೈಯನ್ನು ಮೇಲಕ್ಕೆತ್ತಿ ಹಿಡಿದಿರುವಳು. ಒಂದರ ಮೇಲಿನ ಭಾಗ ಒಡೆದಿದೆ. ಉಳಿದೆರಡರ ಮೇಲಿನ ಭಾಗದಲ್ಲಿ ದಂಪತಿಗಳನ್ನು ಶಿವಲಿಂಗದ ಸಾನಿಧ್ಯದಲ್ಲಿ ಚಿತ್ರಿಸಲಾಗಿದೆ. ಯತಿಯೊಬ್ಬ ಶಿವಲಿಂಗವನ್ನು ಆರಾಧಿಸುತ್ತಿರುವನು.

ವೀರ ಮಹಾಸತಿಯರ ಸುಂದರ ಶಿಲ್ಪವೊಂದು ಚಾಪಗಾಂ ಊರಿನಲ್ಲಿದೆ. ಅದರಲ್ಲಿ ಮೂರು ಫಲಕಗಳಿದ್ದು ಕೆಳಗಿನ ಫಲಕದಲ್ಲಿ ಕುದುರೆ ಸವಾರಿ ಮಾಡುವ ವೀರನು ವೈರಿಯನ್ನು ಬೆನ್ನು ಹತ್ತಿರುವಂತೆ ಚಿತ್ರಿಸಲಾಗಿದೆ. ವೀರನಿಗೆ ಛತ್ರಿಯನ್ನು ಸೇವಕ ಹಿಡಿದಿದ್ದಾನೆ. ಎರಡನೆಯ ಫಲಕದಲ್ಲಿ ಸೇವಕಿಯರಿಬ್ಬರ ನಡುವೆ ಸತಿ ಪತಿಯರು ನಿಂತಿದ್ದಾರೆ. ಸತಿ ಹೋದವಳು ತನ್ನ ಎರಡೂ ಕೈಗಳನ್ನು ಮೇಲಕ್ಕೆತ್ತಿ ಹಿಡಿದು ನಿಂತಿದ್ದಾಳೆ. ಮೇಲಿನ ಫಲಕದಲ್ಲಿ ಶಿವಲಿಂಗದ ಮುಂದೆ ಸತಿ ಪತಿಯರಿದ್ದಾರೆ.

ವೀರ-ಮಹಾಸತಿ ಶಿಲ್ಪಗಳು

ಖಾನಾಪುರ ತಾಲೂಕಿನಲ್ಲಿ ಅನೇಕ ವೀರ-ಮಹಾಸತಿ ಶಿಲ್ಪಗಳಿವೆ. ನಾಗರ ಹಾಳಿಯ ಶಿಲ್ಪದಲ್ಲಿ ಮೂರು ದೃಶ್ಯಗಳಿವೆ. ಕೆಳಗಿನ ಫಲಕದಲ್ಲಿ ವೀರನು ತನ್ನ ಪರಿವಾರ ದೊಂದಿಗೆ

ವೈರಿ ಪರಿವಾರರ ಜೊತೆ ಯುದ್ಧ ಮಾಡುವ ದೃಶ್ಯವಿದೆ. ವೈರಿ ಕುದುರೆಯ ಮೇಲೆ ಕುಳಿತು ವೀರನ ಜೊತೆ ಕತ್ತಿಯಿಂದ ಯುದ್ಧ ಮಾಡುತ್ತಿರುವರು. ವೈರಿ ಪರಿವಾರ ದವ ಬಿಲ್ಲು-ಬಾಣ ಹಿಡಿದಿರುವ. ಎರಡನೇ ಫಲಕದಲ್ಲಿ ವೀರನು ತನ್ನ ಪತ್ನಿಯರಿ ಬ್ಬರ ನಡುವೆ ಬಿಲ್ಲುಹಿಡಿದು ನಿಂತಿರುವನು. ಪತ್ನಿಯರಿಬ್ಬರು ತಮ್ಮ ಬಲಗೈಯನ್ನು ಮೇಲೆತ್ತಿಕೊಂಡು ನಿಂತಿರುವರು.

ಮೇಲ್ಭಾಗದಲ್ಲಿ ಎಡಗಡೆಗೆ ಮಡಿದ ವೀರ ತನ್ನಿಬ್ಬರು ಪತ್ನಿಯರ ಜೊತೆ ಕೈ ಮುಗಿದು ಕುಳಿತಿದ್ದು ಅವರ ಬಲಗಡೆಗೆ ತಮ್ಮ ಆರಾಧ್ಯ ದೈವವನ್ನು ಚಿತ್ರಿಸಲಾಗಿದೆ. ಈ ದೈವದ ದೇವತೆ ಚಿತ್ರ ಅಸ್ಪಷ್ಟ. ಅದರ ಬಲಕ್ಕೆ ಒಂದು ಪ್ರಾಣಿ ನಿಂತಿದೆ.

ಗುಂಜಿನಲ್ಲಿ ಹನ್ನೆರಡಕ್ಕೂ ಹೆಚ್ಚು ವೀರಗಲ್ಲುಗಳಿದ್ದು ಅವುಗಳಲ್ಲಿ ವೀರ ಮಹಾ ಸತಿ ಶಿಲ್ಪಗಳಿವೆ. ಒಂದರಲ್ಲಿ ಕೆಳಗಡೆ ವೀರನು ವೈರಿಗಳ ವಿರುದ್ಧ ಯುದ್ಧ ಮಾಡುವ ದೃಶ್ಯವಿದೆ. ಎರಡನೇ ಫಲಕದಲ್ಲಿ ಮಡಿದ ವೀರನನ್ನು ಇಬ್ಬರು ಮಹಿಳೆಯರು ಅವನ ಕೈ ಹಿಡಿದು ನಿಂತಿದ್ದಾರೆ. ಒಬ್ಬಳು ತನ್ನ ಬಲಗೈಯನ್ನು ಮೇಲಕ್ಕೆ ಎತ್ತಿಹಿಡಿದಿದ್ದಾಳೆ. ಆಕೆ ಅವನ ಸತಿಯಿರಬೇಕು. ಮೇಲಿನ ಫಲಕದಲ್ಲಿ ದಂಪತಿಸಮೇತ ದೇವರ ಸಾನ್ನಿಧ್ಯದಲ್ಲಿ ಕುಳಿತಿರುವರು. ಇನ್ನೊಂದು ಶಿಲ್ಪದಲ್ಲಿ ವ್ಯಕ್ತಿಯೊಬ್ಬ ಆಕಳನ್ನು (?) ಹಿಡಿದು ನಿಂತಿದ್ದಾನೆ. ಇದನ್ನು ಕಿರಿದಾಗಿ ಚಿತ್ರಿಸಲಾಗಿದೆ. ಅದರ ಉಳಿದ ಎರಡು ಫಲಕಗಳು ದೊಡ್ಡವಿದ್ದು ತಲಾ ಒಂದರಲ್ಲಿ ಮಡಿದ ವೀರನ ಬದಿಗಳಲ್ಲಿಬ್ಬರು ಮಹಿಳೆಯರು ನಿಂತಿರುವರು. ಇಲ್ಲಿಯೂ ಬಲಗಡೆ ನಿಂತ ಸತಿಯು ತನ್ನ ಬಲಗೈಯನ್ನು ಮೇಲಕ್ಕೆತ್ತಿ ಹಿಡಿದಿದ್ದಾಳೆ. ಅದರಲ್ಲಿ ದೇವರ ಸಾನ್ನಿಧ್ಯದಲ್ಲಿ ಸತಿ ಪತಿಯರು ಕುಳಿತಿರು ವುದು ಅಸ್ಪಷ್ಟವಾಗಿದೆ. ಈ ರೀತಿಯಲ್ಲಿ ಇನ್ನು ಮೂರು ವೀರ ಮಹಾಸತಿಯರ ಶಿಲ್ಪಗಳು ಅಲ್ಲಿವೆ. ಅವುಗಳಲ್ಲೂ ಮಡಿದ ವೀರನನ್ನು ಒಯ್ಯುವ ಬಲಗಡೆಯ ಒಬ್ಬ ಅಪ್ಸರೆ ಬಲಗೈಯನ್ನು ಮೇಲಕ್ಕೆತ್ತಿ ಹಿಡಿದಿರುವುದನ್ನು ತೋರಿಸಲಾಗಿದೆ.

೨೧. ಸರ್ವೇ ಆಯಾಮದಿಂದ ವಿಜಯನಗರ ಕಾಲದ ಸ್ಮಾರಕಗಳ ಸಂರಕ್ಷಣೆ ಹಾಗೂ ದಾಖಲೀಕರಣ

ಎಸ್.ವಿ. ಗಣೇಶ್

ವಿಜಯನಗರ ಸಾಮ್ರಾಜ್ಯದ ಸ್ಥಾಪನೆ ಭಾರತೀಯ ಇತಿಹಾಸದಲ್ಲಿ ಒಂದು ವಿಶ್ವ ಪರಂಪರೆಯ ಮೈಲಿಗಲ್ಲು. ಈ ಮನೆತನದ ಅರಸರು ತಮ್ಮ ಕಾಲಾವಧಿಯಲ್ಲಿ ವಿವಿಧ ರಂಗಗಳಿಗೆ ಕೊಟ್ಟಷ್ಟೆ ಪ್ರೋತ್ಸಾಹವನ್ನು ಸ್ಮಾರಕಗಳ ನಿರ್ಮಾಣಕ್ಕೂ ನೀಡಿ ದ್ದರು. ಇದರ ಪರಿಣಾಮವಾಗಿ ಅಸಂಖ್ಯಾತ ಸ್ಮಾರಕಗಳು ರಾಜ್ಯದ ವಿವಿಧ ಕಡೆ ನಿರ್ಮಾಣ ವಾದವು. ಕೇವಲ ರಾಜಮಹಾರಾಜರಲ್ಲದೆ, ರಾಣಿಯರು, ಮಂತ್ರಿಗಳು, ಆಡಳಿತಾಧಿಕಾರಿ ಗಳು ಹಾಗೂ ಪ್ರಮುಖ ಜನರು ಸ್ಮಾರಕಗಳ ನಿರ್ಮಾಣದಲ್ಲಿ ಆಸಕ್ತಿವಹಿಸಿದ್ದರಿಂದಾಗಿ ವಿವಿಧೆಡೆ ಧಾರ್ಮಿಕ, ಲೌಕಿಕ ಹಾಗೂ ಸೈನಿಕ ವಾಸ್ತುಶಿಲ್ಪದ ಸಂಕೇತಗಳಾದ ಹಲವಾರು ದೇವಾಲಯಗಳು, ಅರಮನೆಗಳು, ಆಡಳಿತದ ಕಟ್ಟಡಗಳು, ಪುಷ್ಕರಣಿಗಳು, ಕೋಟೆ - ಕೊತ್ತಲಗಳು ನಿರ್ಮಾಣವಾದವು. ಈ ಎಲ್ಲಾ ಸ್ಮಾರಕಗಳನ್ನು ಸರ್ವೆ ಆಯಾಮದಿಂದ ದಾಖಲೀಕರಿಸಬೇಕಾದ ಅವಶ್ಯಕತೆ ಇದೆ.

ಬಯಲು ವಸ್ತು ಸಂಗ್ರಹಾಲಯ ಎಂದು ಖ್ಯಾತವಾಗಿರುವ ವಿಶ್ವ ವಿಖ್ಯಾತ ಹಂಪಿ ಪ್ರದೇಶವನ್ನು ೧೯೮೬ರಲ್ಲಿ ಯುನೆಸ್ಕೊ ವಿಶ್ವ ಪರಂಪರೆಯ ಪ್ರದೇಶವೆಂದು ಘೋಷಿಸಲಾಗಿದೆ.[1] ಈ ಪ್ರದೇಶದ ವ್ಯಾಪ್ತಿಯಲ್ಲಿ ಪ್ರಸ್ತುತ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ೧೪ ಗ್ರಾಮಗಳು ಮತ್ತು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ೧೫ ಗ್ರಾಮಗಳು ಬರುತ್ತವೆ. ಒಟ್ಟು ೨೩೬ ಚ.ಕೀ. ವಿಸ್ತಾರವನ್ನು ಹೊಂದಿ ರುವ ಈ ಪ್ರದೇಶದ ವ್ಯಾಪ್ತಿಯಲ್ಲಿ ವಿಜಯನಗರ ಕಾಲಕ್ಕೆ ಸೇರಿದ ರಾಜ್ಯ ಪುರಾತತ್ವ ಇಲಾಖೆಯ ಅಧೀನಕ್ಕೊಳಪಟ್ಟ ಸು.೧೬೦೦ ಹಾಗೂ ಕೇಂದ್ರ ಪುರಾತತ್ವ ಇಲಾಖೆಯ ಅಧೀನದಲ್ಲಿ ಬರುವ ಹಾಗೂ ಭಾರತದಲ್ಲೇ ಮುಖ್ಯವೆಂದು ಘೋಷಣೆ ಯಾಗಿರುವ ೫೬ ಪ್ರಮುಖ ಸ್ಮಾರಗಳಿವೆ.[2] ವಿಶ್ವ ಪರಂಪರೆ ಪ್ರಾಂತ್ಯದ ಪ್ರಮುಖ ಜೀವಂತ ಸ್ಮಾರಕಗಳಾಗಿರುವ ಶ್ರೀ ಪಂಪಾ ವಿರೂಪಾಕ್ಷ ದೇವಾಲಯ, ಮನ್ಮಥ ಹೊಂಡ ಮತ್ತು ತೇರು ಬಜಾರ್ ಆವರಣಗಳನ್ನು ಸಹ ಕೇಂದ್ರ ಸರ್ಕಾರದಿಂದ ರಾಷ್ಟ್ರದ ಪ್ರಮುಖ ಸ್ಮಾರಕಗಳೆಂದು ಗೆಜೆಟ್‌ನಲ್ಲಿ ಘೋಷಿಸಲಾಗಿದೆ. ಈ ಸ್ಮಾರಕದ ರಕ್ಷಣೆ ಮತ್ತು ಸಂರಕ್ಷಣೆಯ ನಿರ್ವಹಣೆಯನ್ನು ರಾಜ್ಯ ಪುರಾತತ್ವ ಇಲಾಖೆಯಿಂದ ಕೇಂದ್ರ ಪುರಾತತ್ವ ಇಲಾಖೆಗೆ ಹಸ್ತಾಂತರಿಸುವ ಕಾರ್ಯ ಪ್ರಗತಿಯಲ್ಲಿದೆ.

ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಈ ಎಲ್ಲಾ ಸ್ಮಾರಕಗಳ ಕುರಿತು ಇಲ್ಲಿಯವರೆಗೂ ಸರ್ವೆ ಆಯಾಮದಿಂದ ವ್ಯವಸ್ಥಿತ ವಾದ ದಾಖಲೆ ಮಾಡದೆ ಇರುವುದರಿಂದ ಅವುಗಳ ನಿಜವಾದ ಒಡೆತನ, ಮೂಲ ಸ್ವರೂಪ, ಮುಂತಾದ ವಿಷಯಗಳ ಕುರಿತು ವಿವಾದಗಳು ಉಂಟಾಗಿವೆ. ಭವಿಷ್ಯದಲ್ಲಿ ಉಂಟಾಗಬಹುದಾದ ಸಮಸ್ಯೆ ವ್ಯಾಜ್ಯಗಳ ನಿವಾರಣೆಗಾಗಿ ಹಾಗು ಈ ಮೇಲಿನ ಸ್ಪಷ್ಟ ಮಾಹಿತಿಗಾಗಿ ಸರ್ವೆ ಅಯಾಮದಿಂದ ಸ್ಮಾರಕಗಳನ್ನು ನಿರ್ದಿಷ್ಟವಾಗಿ ಗುರುತಿಸಿ ಅವುಗಳನ್ನು ದಾಖಲಿಸಬೇಕಾಗಿದೆ.[3]

ಪ್ರಪ್ರಥಮವಾಗಿ ಭೂಮಿಯನ್ನು ಅಳತೆಯಿಂದ ನಿರ್ಧರಿಸಿದ ಅವತಾರ ಪುರುಷ ನೆಂದರೆ ಶ್ರೀ ವಿಷ್ಣುವಿನ ಆವತಾರವಾದ ವಾಮನ.[4] ಇದರಿಂದಲೇ ಮಹಾವಿಷ್ಣುವಿಗೆ ವಿಕ್ರಮನೆಂದು ಹೆಸರುಂಟಾಯಿತು. ಹಿಂದಿನ ದಿನಗಳಲ್ಲಿ ಭೂಮಿಯು ಅಪಾರವಾಗಿದ್ದು ಅದರ ಬೇಡಿಕೆ ಮತ್ತು ಉಪಯೋಗದ ಅರಿವು ಯಾರಿಗೂ ಇರಲಿಲ್ಲ. ನೊಬೆಲ್ ಪ್ರಶಸ್ತಿ ವಿಜೇತರಾದ ಶ್ರೀ ರವೀಂದ್ರನಾಥ ಟ್ಯಾಗೋರ್ ಅವರ ಅಮರ ಕೃತಿ ಗೀತಾಂಜಲಿಯಲ್ಲಿ 'Where the world is not divided into narrow domestic walls let my country awake' ಎಂಬ ಮಹತ್ವದ ಉಲ್ಲೇಖವಿದೆ.[5] ಈ ಕನಸನ್ನು ನಾವು ನನಸು ಮಾಡಬೇಕಾದರೆ ಪ್ರತಿಯೊಬ್ಬರು ಸ್ವಯಂಪ್ರೇರಿತರಾಗಿ ಅವರ ಭೂಮಿಯ ಅಳತೆಯನ್ನು ಮತ್ತು ವಿಸ್ತೀರ್ಣವನ್ನು ನಿರ್ಧರಿಸಿಕೊಳ್ಳಬೇಕಾದ ಅವಶ್ಯಕತೆ ಇದೆ. ನಾವು ಇದನ್ನೆ ಲಕ್ಷ್ಮಣ ರೇಖೆಯೆಂದು ಭಾವಿಸಿದಲ್ಲಿ, ನಾವುಗಳೆಲ್ಲರೂ ವ್ಯಾಜ್ಯ ರಹಿತವಾದ ಭೂಪ್ರದೇಶವನ್ನು ನಿರಂತರವಾಗಿ ನಮ್ಮ ಮುಂದಿನ ಪೀಳಿಗೆಗೆ ಉಳಿಸಿ ದಂತೆ ಆಗುತ್ತದೆ.


ನಮ್ಮ ಭಾರತ ದೇಶದಲ್ಲಿ ಅಳತೆಯಿಂದ ಭೂ ಪ್ರದೇಶವನ್ನು ರೇಖಿಸಿ ಅದರ ಮಾಪುಗಳಿಂದ ಯಾವುದೇ ಪ್ರದೇಶದ ವಿಸ್ತೀರ್ಣವನ್ನು ಕಂಡು ಹಿಡಿದಿದ್ದೇವೆ, ಕಂಡು ಹಿಡಿಯುತ್ತಲಿದ್ದೇವೆ. ಈ ಪ್ರಥಮ ಭೂ ಸರ್ವೆ ಕಂದಾಯಕ್ಕಾಗಿ ಮಾಡಲ್ಪಟ್ಟಿತ್ತು. ನಂತರದ ಕಾಲದಲ್ಲಿ ಹೊಸ ಮತ್ತು ವಿವಿಧ ಜಮೀನಿನ ರಕ್ಷಣೆ ಮತ್ತು ವರ್ಗೀಕರಣದ ವಿವಿಧ ಮಾದರಿಗಳು ಜನ್ಮತಾಳಿವೆ. ಒಂದು ಸರ್ವೆ ಮಾಡಿದ ಭೂ ಪ್ರದೇಶವೆಂದರೆ ಆ ಭೂ ಪ್ರದೇಶವನ್ನು ಅಳತೆಯಿಂದ ನಿರ್ಧರಿಸಿ ಅವರ ವಿಸ್ತೀರ್ಣವನ್ನು ನಿಖರವಾಗಿ ಗುರುತಿಸಿದ ಪ್ರದೇಶವೆಂದು ಅರ್ಥ. ನಂತರ ಆ ಭೂಮಿಯ ವರ್ಗೀಕರಣ, ಕಂದಾಯ ನಿರ್ಣಯ, ಸರ್ವೆ ನಂಬರುಗಳನ್ನು ನಿಗದಿಪಡಿಸುವ ಕಾರ್ಯಗಳನ್ನು ಮಾಡಲಾಗು ತ್ತದೆ. ಈ ವಿಧಾನಗಳನ್ನು ಅನುಸರಿಸುವಾಗ ಮಣ್ಣಿನ ಗುಣ ಮತ್ತು ಅದರಲ್ಲಿ ಬೆಳೆಯಬಹು ದಾದ ಫಸಲು ಹಾಗೂ ಬೆಳೆಯಲಾಗದ ಪ್ರದೇಶವನ್ನು ಆಧಾರವಾಗಿಟ್ಟು ಕೊಂಡು ವಿಂಗಡಿಸುತ್ತೇವೆ. ಇಂತಹ ಕೃಷಿಗೆ ಯೋಗ್ಯವಲ್ಲದ ಭೂಮಿಗೆ ಖರಾಬು ಎಂದು ವರ್ಗೀಕರಿಸಲ್ಪಟ್ಟಿದೆ. ಉದಾ : ಬಂಡಿದಾರಿ, ಕಾಲುದಾರಿ, ಕೊರಕಲು, ಬಂಡೆ, ಜೌಗು ಪ್ರದೇಶ ಇತರೆ.[6]

ಭಾರತದಲ್ಲಿ ಕೇಂದ್ರ ಐತಿಹಾಸಿಕ ಕಟ್ಟಡಗಳನ್ನು ಸ್ಮಾರಕವೆಂದು ಘೋಷಿಸಿರುವುದು ತೀರಾ ಇತ್ತೀಚೆಗೆ. ರಾಜ್ಯ ಮತ್ತು ಕೇಂದ್ರ ಪುರಾತತ್ವ ಇಲಾಖೆಗಳು ಅನುಷ್ಠಾನಕ್ಕೆ ತಂದ ವಿವಿಧ ಕಾಯ್ದೆಗಳು ಸ್ಮಾರಕಗಳನ್ನು ಸಂರಕ್ಷಿಸುವಲ್ಲಿ ಸಹಾಯಕವಾಗಿವೆ.[7] ಇವುಗಳ ಪ್ರಕಾರ ಸ್ಮಾರಕವನ್ನು ಸಂರಕ್ಷಿಸಬೇಕಾದಲ್ಲಿ ಪ್ರಥಮವಾಗಿ ಸ್ಮಾರಕದ ನಿಖರವಾದ ದಾಖಲೀಕರಣವಾಗಿರಬೇಕು ಮತ್ತು ಪೂರ್ಣ ಅಳತೆಗಳು ಬೇಕಾಗುತ್ತದೆ. ಕಾರಣ ಪ್ರಾಚ್ಯವಸ್ತು ನಿಯಮಾವಳಿಯಂತೆ ಸ್ಮಾರಕದ ಹೊರ ಆಕಾರದಿಂದಲ ೧೦೦ ಮೀಟರ್ ಪ್ರದೇಶವು ನಿಷೇಧಿತ (Prohibited) ಪ್ರದೇಶವೆಂದು ಮತ್ತು ೨೦೦ ಮೀಟರ್ ಪ್ರದೇಶವು ನಿಯಂತ್ರಿತ (Regulated) ಪ್ರದೇಶವೆಂದು ಘೋಷಿಸಲಾಗಿದೆ.

ಇತರೆ ಶಿಸ್ತುಗಳಿಂದ ಸ್ಮಾರಕಗಳ್ನು ದಾಖಲಿಸಿ, ಸಂರಕ್ಷಿಸಿ ಅಧ್ಯಯನಕ್ಕೆ ಒಳಪಡಿಸುವಂತೆ ಸರ್ವೇ ಆಯಾಮದಿಂದಲೂ ಸಹಾ ಸ್ಮಾರಕಗಳನ್ನು ದಾಖಲಿಸಿ, ಅವುಗಳನ್ನು ಸಂರಕ್ಷಿಸುವದರೊಂದಿಗೆ ಅಧ್ಯಯನ ಕೈಗೊಳ್ಳಲು ಸಾಧ್ಯವಿದೆ. ಯಾವುದೇ ವಸ್ತುವನ್ನು ರಕ್ಷಾಕವಚಕ್ಕೆ ಒಳಪಡಿಸಬೇಕಾದ್ದಲ್ಲಿ ಆ ವಸ್ತುವಿನ ನಿಖರವಾದ ಸ್ಥಳ, ಆಕಾರ ಮತ್ತು ಗುಣಗಳ ಬಗ್ಗೆ ಸವಿಸ್ತಾರವಾದ ಅಳತೆ ಮಾಹಿತಿ ಇದ್ದರೆ ಮಾತ್ರ ಸಾಧ್ಯ.

ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ನಿಯಮಾವಳಿಯಂತೆ ಸ್ಮಾರಕ ಮತ್ತು ಅದರ ಸುತ್ತಲು ೧೦೦ ಮೀ ನಿಷೇಧಿತ ವಲಯ (Prohibited Zone) ಮತ್ತು ೨೦೦ ಮೀ ನಿಯಂತ್ರಿತ ವಲಯ (Regulated Zone). ಈ ರಕ್ಷಾಕವಚ ದೊಂದಿಗೆ ಪ್ರತಿ ಸ್ಮಾರಕಗಳನ್ನು ಹಾಗೂ ಸಂಪೂರ್ಣ ರಕ್ಷೆ ನೀಡಲು ಉದ್ದೇಶಿಸಿದೆ.

ರೇಖಾಚಿತ್ರವನ್ನು ಗಮನಿಸಿರಿ.



ಮೇಲಿನ ರಕ್ಷಾ ವಲಯಗಳನ್ನು ಅನುಷ್ಠಾನ ಮಾಡಬೇಕಾದಲ್ಲಿ ಸ್ಮಾರಕದ ನಿಖರವಾದ ಅಳತೆಗಳು ಲಭ್ಯವಿರಬೇಕು. ಇದರ ನಂತರ ನಿಷೇಧಿತ ವಲಯ, ನಿಯಂತ್ರಿತ ವಲಯಗಳನ್ನು ಗುರುತು ಮಾಡಿದಲ್ಲಿ ಸಂಬಂಧಪಟ್ಟ ನಿಯಮಗಳನ್ನು ಜಾರಿಗೆ ತರಲು ಸಾಧ್ಯವಾಗುತ್ತದೆ.

ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ವಿಜಯನಗರ ಕಾಲದ ಸ್ಮಾರಕಗಳು ಕೇವಲ ಒಂದೆಡೆ ಇರದೆ ವಿವಿಧ ಭೂ ವರ್ಗೀಕರಣದ ಪ್ರದೇಶಗಳಲ್ಲಿ ಇರುವುದನ್ನು ಗುರುತಿಸಬಹುದು. ಅವುಗಳಲ್ಲಿ ಮುಖ್ಯವಾಗಿ

೧. ಸರ್ಕಾರಿ ಪ್ರದೇಶದಲ್ಲಿ ಬರುವ ಸ್ಮಾರಕಗಳು

೨. ಗ್ರಾಮ ಠಾಣದಲ್ಲಿ ಬರುವ ಸ್ಮಾರಕಗಳು

೩. ಬಂಡೆಯ ಮೆಲೆ ಬರುವ ಸ್ಮಾರಕಗಳು

೪. ಅರಣ್ಯ ಪ್ರದೇಶದಲ್ಲಿ ಬರುವ ಸ್ಮಾರಕಗಳು, ಮತ್ತು

೫. ಪಟ್ಟಾ ಜಮೀನಿನಲ್ಲಿ ಬರುವ ಸ್ಮಾರಕಗಳು ಎಂದು ವರ್ಗೀಕರಿಸಬಹುದು.

೧. ಸರ್ಕಾರಿ ಪ್ರದೇಶದಲ್ಲಿ ಬರುವ ಸ್ಮಾರಕಗಳು : ಇಂದಿನ ಸರ್ಕಾರಿ ಸ್ವಾಮ್ಯಕ್ಕೊಳಪಟ್ಟ ಭೂ ಪ್ರದೇಶದಲ್ಲಿ ವಿಜಯನಗರ ಕಾಲಕ್ಕೆ ಸೇರಿದ ಹಲವಾರು ದೇವಾಲಯ, ಮಂಟಪ, ಕೋಟೆ ಮುಂತಾದ ಸ್ಮಾರಕಗಳಿವೆ. ಈ ಪ್ರದೇಶದಲ್ಲಿ ಕಾಣಬರುವ ಸ್ಮಾರಕಗಳನ್ನು ನಿಖರವಾಗಿ ಗುರುತಿಸಲು ಹೊಸದಾಗಿ ಭೂಮಿ ಪ್ರಾಂತ್ಯವನ್ನು ಅಳತೆಯಿಂದ ನಿರ್ಧರಿಸಿ ಅದರಲ್ಲಿ ಸ್ಮಾರಕದ ವಿಸ್ತೀರ್ಣ, ನಿಷೇಧಿತ ವಲಯದ ವಿಸ್ತೀರ್ಣ, ನಿಯಂತ್ರಿತ ವಲಯದ ವಿಸ್ತೀರ್ಣ ಇವುಗಳನ್ನು ನಿರ್ದಿಷ್ಟವಾಗಿ ದಾಖಲಿಸಿ ನಿಶ್ಚಿತ ಎಲ್ಲೆಗಳನ್ನು ಗುರುತಿಸಬೇಕಾಗಿರುತ್ತದೆ. [೮]

೨. ಗ್ರಾಮ ಠಾಣ : ವಿಜಯನಗರ ಕಾಲಕ್ಕೆ ಸೇರಿದ ಹಲವು ರೀತಿಯ ಸ್ಮಾರಕಗಳು ಇಂದಿನ ಗ್ರಾಮ ಠಾಣದ ವ್ಯಾಪ್ತಿಯಲ್ಲಿಯೂ ಬರುತ್ತವೆ. ಗ್ರಾಮ ಠಾಣಗಳಲ್ಲಿಯೂ ಕೂಡ ನಿಖರವಾದ ಅಳತೆ ಇರುವುದಿಲ್ಲ. ಆದ್ದರಿಂದ ಸ್ಮಾರಕಗಳ ವಿಸ್ತೀರ್ಣವನ್ನು ಅಳತೆಯಿಂದ ಅಚ್ಚುಕಟ್ಟಾಗಿ ದಾಖಲಿಸಿ ನಂತರ ನಿಷೇಧಿತ ವಲಯ ಮತ್ತ ನಿಯಂತ್ರಿತ ವಲಯಗಳನ್ನು ಗುರುತಿಸಬಹುದು. [೯]

೪. ಬಂಡೆಯ ಮೇಲೆ ಇರುವ ಸ್ಮಾರಕಗಳು : ವಿಜಯನಗರದ ಕಾಲಕ್ಕೆ ಸೇರಿದ ಹಲವಾರು ಸ್ಮಾರಕಗಳು ಮತ್ತು ಮಂಟಪಗಳು ಬಂಡೆಯ ಮೇಲೆ ರಚಿಸಲ್ಪಟ್ಟಿವೆ. ಇವುಗಳ ಸಂರಕ್ಷಣೆಯನ್ನು ಮೇಲೆ ಹೇಳಿರುವ ವಲಯಗಳ ಜೊತೆಗೆ ಸಂಪೂರ್ಣ ಬಂಡೆಯನ್ನೇ ಸ್ಮಾರಕವಾಗಿ ಪರಿಗಣಿಸಿ ರಕ್ಷಣಾ ಕ್ರಮಗಳನ್ನು ತೆಗೆದುಕೊಳ್ಳ ಬೇಕಾಗಿರುತ್ತದೆ. ನಿಖರತೆಗಾಗಿ ವಿವರವಾದ ಅಳತೆಯನ್ನು ದಾಖಲಿಸಬೇಕಾಗಿರುತ್ತದೆ. ಹಾಗೆ ದಾಖಲಿಸುವಾಗ ಲಂಬಾಂತರ ಮತ್ತು ಸಮಾನಂತರ (ಅಳತೆ) ಮಾಪುಗಳನ್ನು ಸಹ ದಾಖಲಿಸಬೇಕಾಗಿರುತ್ತದೆ.

೪. ಅರಣ್ಯ ಪ್ರದೇಶ : ವಿಜಯನಗರ ಕಾಲದಲ್ಲಿ ನಿರ್ಮಾಣವಾದ ಕೆಲವು ಸ್ಮಾರಕಗಳು ಇಂದಿನ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿಯೂ ಇವೆ. ಅರಣ್ಯ ಪ್ರದೇಶ

ಗಳಲ್ಲಿ ಬರುವ ಸ್ಮಾರಕಗಳು ಆ ಸ್ಮಾರಕಗಳನ್ನು ತಲುಪಲು ಇರುವ ಮಾರ್ಗವನ್ನು ಸಹ ಸಂರಕ್ಷಿತ ಪ್ರದೇಶವೆಂದು ಘೋಷಿಸಬೇಕಾಗುತ್ತದೆ. ಇಲ್ಲಿ ಬರುವ ಸ್ಮಾರಕಗಳು ಅರಣ್ಯ ವಲಯದ ನಿಯಮಾವಳಿಗಳಿಂದಲೂ ಸಹ ರಕ್ಷಿಸಲ್ಪಡುತ್ತವೆ.[10] ಅರಣ್ಯ ಮತ್ತು ಗುಡ್ಡಗಳ ಮೇಲೆ ಬರುವ ಇತಿಹಾಸಪೂರ್ವ ಕಾಲಕ್ಕೆ ಬರುವ ಸ್ಮಾರಕಗಳ, ಗುಹೆ ಚಿತ್ರಣಗಳು ಐತಿಹಾಸಿಕ ಸ್ಮಾರಕಗಳನ್ನು ನಿಖರವಾದ ಅಳತೆ ಮತ್ತು ಛಾಯಾಗ್ರಹಣದ ಮೂಲಕ ದಾಖಲೆಗಳನ್ನು ಸೃಷ್ಟಿಸಿ ರಕ್ಷಿಸಬೇಕಾಗಿರುತ್ತದೆ. ಯಾವುದೇ ಸ್ಮಾರಕ *ಜಲಾವೃತಗೊಂಡಲ್ಲಿ* ಮತ್ತು ಕೊಳ, ಕಟ್ಟೆ, ಕೆರೆ, ನಾಲೆಗಳು ಇವುಗಳನ್ನು ರಕ್ಷಿಸಲು ಪರಿಸರ ನಿಯಂತ್ರಣ ನಿಯಮಾವಳಿಗಳನ್ನು ಸಹ ಅನುಷ್ಠಾನಗೊಳಿಸಲು ಸಾಧ್ಯವಾಗುತ್ತದೆ.

೫. **ಪಟ್ಟಾ ಜಮೀನಿನಲ್ಲಿ ಬರುವ ಸ್ಮಾರಕಗಳು** : ವಿಜಯನಗರ ಕಾಲದಲ್ಲಿ ನಿರ್ಮಾಣವಾದ ಕೆಲವು ಸ್ಮಾರಕಗಳು ಇಂದಿನ ಖಾಸಗಿ ಒಡೆತನದಲ್ಲಿ ಬರುವ ಪಟ್ಟಾ ಜಮೀನುಗಳ ಪ್ರದೇಶದ ವ್ಯಾಪ್ತಿಯಲ್ಲಿಯೂ ಇವೆ. ಈ ಜಮೀನಿನಲ್ಲಿ ಬರುವ ಸ್ಮಾರಕಗಳನ್ನು ನಿಖರವಾದ ಅಳತೆಗಳಿಂದ ನಿರ್ಧರಿಸಿ ರೇಖಿಸತಕ್ಕದ್ದು. ಇದರ ಜೊತೆಗೆ ನಿಷೇಧಿತ ಪ್ರದೇಶ ಮತ್ತು ನಿಯಂತ್ರಿತ ಪ್ರದೇಶವನ್ನು ಸಹ ಸ್ಥಳದಲ್ಲಿ ಗುರುತು ಮಾಡಿ ಸ್ಪಷ್ಟವಾದ ದಾಖಲೆಗಳನ್ನು ದಾಖಲಿಸತಕ್ಕದ್ದು. ಈ ಪಟ್ಟಾ ಜಮೀನು ಈಗಾಗಲೇ ಅಳತೆಯಿಂದ ನಿರ್ಧರಿಸಿ ನಿಖರವಾದ ಸರ್ವೇ ದಾಖಲೆಗಳನ್ನು ಹೊಂದಿರ ತಕ್ಕ ಪ್ರದೇಶವಾಗಿರುತ್ತದೆ. ಈ ಸರ್ವೇ ನಂಬರಿನಲ್ಲಿ ಸ್ಮಾರಕಗಳ ಪ್ರಾಂತವನ್ನು ವಿಭಾಗೀಯ ಫೋಡಿಯಿಂದ ಸಾಧ್ಯವಾಗುತ್ತದೆ. ಮತ್ತು ಈ ಪ್ರದೇಶವನ್ನು ಆ ಸರ್ವೇ ನಂಬರುಗಳಲ್ಲಿ 'ಎ' ಖರಾಬನ್ನು ದಾಖಲಿಸಿ 'ಬಿ' ಖರಾಬವೆಂದು ಕಂದಾಯ ದಾಖಲೆಗಳಲ್ಲಿ ಮತ್ತು ಆಕಾರ ಬಂದಿನಲ್ಲಿ ನಮೂದಿಸಿರುವುದರಿಂದ ಅದು ಎಲ್ಲಾ ಕಾಲಕ್ಕೂ ಸುರಕ್ಷತೆಯಿಂದ, ಸರ್ವೇಯಿಂದ, ಭೂ ಕಾಯ್ದೆಯಿಂದ ರಕ್ಷಿಸಲ್ಪಡುತ್ತದೆ.

ಮೇಲೆ ಹೇಳಿರುವ ಸ್ಮಾರಕ ಅದರ ನಿಖರವಾದ ಅಳತೆ, ನಿಷೇಧಿತ, ನಿಯಂತ್ರಿತ ವಲಯಗಳ ಮತ್ತು ಈ ಎಲ್ಲವುಗಳನ್ನು ಹಕ್ಕು ದಾಖಲೆಗಳಲ್ಲಿ ಸ್ಪಷ್ಟವಾಗಿ ದಾಖಲಿಸಿ ಪಹಣಿ ಪತ್ರಿಕೆಯ ಕಲಂ ನಂ.೯ ಮತ್ತು ೧೦ರಲ್ಲಿ ಸ್ಮಾರಕವೆಂದು ದಾಖಲಿಸಿ ಅದರ ಸಂರಕ್ಷಣೆಯ ಹೊಣೆ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಮತ್ತು ರಾಜ್ಯ ಪುರಾತತ್ವ ಇಲಾಖೆಯ ಖಾತೆಗೆ ಬಂದಾಗ ಯಾವುದೇ ಕಾನೂನಿನ ತೊಡಕು ಇರುವುದಿಲ್ಲ.

ಬಹಳಷ್ಟು ಸ್ಮಾರಕಗಳ ಸ್ಪಷ್ಟ ದಾಖಲೆಗಳಿಲ್ಲದೇ ಅವುಗಳ ರಕ್ಷಣೆ, ನಿಯಂತ್ರಣ ಮಾಡಲು ಕಷ್ಟಸಾಧ್ಯವಾಗಿದೆ. ಯುನೆಸ್ಕೋ, ICCROM, ಮತ್ತು ವಿಶ್ವ ಪರಂಪರೆ ಪ್ರಾಂತ್ಯಗಳಲ್ಲಿ ಬರುವ ಸ್ಮಾರಕಗಳ ಯಶಸ್ವಿ ರಕ್ಷಣೆ, ನಿರ್ವಹಣೆಗೆ ಸವಿವರವಾದ

ಅಚ್ಚುಕಟ್ಟಾದ ನಿಖರ ಸರ್ವೆ ದಾಖಲೆಗಳಿಂದ ಮಾತ್ರ ಸಾಧ್ಯ. ಹಲವಾರು ನ್ಯಾಯಾಲಯ ತೀರ್ಪು ಮತ್ತು ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಕಾರ್ಯದಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳನ್ವಯ ಸರ್ವೆ ಆಯಾಮಗಳಿಂದಲೂ ಸ್ಮಾರಕಗಳ ಮೂಲಭೂತವಾದ ಸಂರಕ್ಷಣೆ ಹಾಗೂ ದಾಖಲೀಕರಣ ಸಾಧ್ಯವೆಂಬುದು ದೃಢಪಟ್ಟಿದೆ.

ಮೇಲೆ ಹೇಳಿರುವ ಸರ್ವೆ ಅಳತೆಯ ಮತ್ತು ಹಕ್ಕು ದಾಖಲೆಯ ಕಾರ್ಯವನ್ನು ಪ್ರಥಮವಾಗಿ ಹಮ್ಮಿಕೊಂಡಲ್ಲಿ ಹಂಪಿ ವಿಶ್ವ ಪರಂಪರೆ ಪ್ರದೇಶದ ಸ್ಮಾರಕಗಳಿಗೆ ವ್ಯಾಜ್ಯರಹಿತ ಲಸಿಕೆ ಕೊಟ್ಟಂತೆ ಆಗುತ್ತದೆ. ಇದೇ ನಿಟ್ಟಿನಲ್ಲಿ ಸ್ಮಾರಕಗಳ ರಕ್ಷಣೆಗಾಗಿ ನಮ್ಮ ಪ್ರಾಧಿಕಾರದ ವತಿಯಿಂದ, ಕಂದಾಯ ಇಲಾಖೆ ಮತ್ತು ರಾಜ್ಯ ಪ್ರಾಚ್ಯವಸ್ತು ಇಲಾಖೆಗಳ ಜಂಟಿ ಕಾರ್ಯಾಚರಣೆಯಿಂದ ಪ್ರಾಧಿಕಾರದ ವ್ಯಾಪ್ತಿಗೆ ಬರುವ ೨೯ ಗ್ರಾಮಗಳಲ್ಲಿನ ಸುಮಾರು ೧೬೦೦ ಸ್ಮಾರಕಗಳನ್ನು ಸರ್ವೆ ನಕ್ಷೆಗಳಲ್ಲಿ ಗುರುತಿಸಿದೆ. ಇದರ ಜೊತೆಗೆ ಇನ್ನಿತರ ಅಂದರೆ ಐತಿಹಾಸಿಕ, ಭೌಗೋಳಿಕ, ಪುರಾತತ್ವ ಪದರಗಳನ್ನು ಒಂದೇ ನಕ್ಷೆಯಲ್ಲಿ ಅಳವಡಿಸಿ ಪ್ರತಿ ಸ್ಮಾರಕಕ್ಕೆ ಒಂದು ದೃಢವಾದ ಮತ್ತು ಅಭೇದ್ಯ ವಾದ ಸಂರಕ್ಷಣಾ ಕವಚವನ್ನು ಸೃಷ್ಟಿಸುವುದಕ್ಕೆ ನಾವೆಲ್ಲರೂ ಪಣ ತೊಡಬೇಕಾಕಿದೆ. ಈ ರೀತಿ ಆದಾಗ ಮಾತ್ರ ಹಂಪಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ವಿಜಯನಗರ ಕಾಲದ ಸ್ಮಾರಕಗಳನ್ನು ಸರ್ವೆ ಆಯಾಮದಿಂದ ಸಂರಕ್ಷಿಸಿ ದಾಖಲಿಸಿದಂತಾಗುತ್ತದೆ.

ಅಡಿ ಟಿಪ್ಪಣಿಗಳು

1. ಪ್ರೊ. ನಳಿನಿ ಠಾಕೂರ್, *ಇಂಟಿಗ್ರೇಟೆಡ್ ಮ್ಯಾನೇಜ್‌ಮೆಂಟ್ ಪ್ಲಾನ್*, ಸಂಪುಟ -1 ರಿಂದ 6
2. ಐಬಿಚ್ ಸಂಪುಟ - 6
3. ಕರ್ನಾಟಕ ಲ್ಯಾಂಡ್ ರೆವಿನ್ಯೂ ಮ್ಯಾನ್ಯೂವೆಲ್, ಸಂಪುಟ -1
4. ಶ್ರೀಮದ್ ಭಾಗವತ ಪುರಾಣ, ಸಂಪುಟ -2
5. ರವೀಂದ್ರನಾಥ ಟ್ಯಾಗೂರ್‌ರ *ಗೀತಾಂಜಲಿ*
6. *ಕರ್ನಾಟಕ ಲ್ಯಾಂಡ್ ರೆವಿನ್ಯೂ ಮ್ಯಾನ್ಯೂವೆಲ್*, ಸಂಪುಟ -1
7. The Ancient Monuments and Archaeological sites and Remains Act 1958, wirh Rules and Ancient Monuments Protection Act 1988 - ASI
8. *ಕರ್ನಾಟಕ ಲ್ಯಾಂಡ್ ರೆವಿನ್ಯೂ ಮ್ಯಾನ್ಯೂವೆಲ್*, ಸಂಪುಟ -1
9. ಅದೇ
10. *ದಿ ಇಂಡಿಯನ್ ಫಾರೆಸ್ಟ್ ಆಕ್ಟ್,* 1927

ಆಧಾರ ಗ್ರಂಥಗಳು

1. ಸತ್‌ಪಾಲ ಪುಲಾನಿ (ಸಂ) -1997 *ದಿ ಕರ್ನಾಟಕ ಲ್ಯಾಂಡ್ ರೆವಿನ್ಯೂ ಮ್ಯಾನ್ಯೂಲ್*, ಸಂ 1 ಮತ್ತು 2. ದಿ ಕರ್ನಾಟಕ ಲಾ ಜನರಲ್ ಪಬ್ಲಿಕೇಷನ್ಸ್, ಬೆಂಗಳೂರು

೨೨. ಹಂಪಿ ಪರಿಸರದ ಪಂಚಲಿಂಗಗಳು

ಡಾ.ಸಿ.ಎಸ್. ವಾಸುದೇವನ್

ವಿಜಯನಗರ ಪಟ್ಟಣದ ವ್ಯಾಪ್ತಿ ಪ್ರದೇಶದಲ್ಲಿ ಶೈವ ಧರ್ಮ ಪ್ರಬಲವಾಗಿತ್ತು. ಇಲ್ಲಿ ಅನೇಕ ಶೈವ ದೇವಾಲಯಗಳು ಕಂಡುಬಂದಿವೆ. ಇದರೊಂದಿಗೆ ಶೈವ ಶಿಲ್ಪಗಳು ದೊರಕಿದ್ದು ಶಿವಪಾರಮ್ಯವನ್ನು ಎತ್ತಿಹಿಡಿಯುತ್ತವೆ. ಈ ಪರಿಸರದಲ್ಲಿ ಕಂಡು ಬಂದಿರುವ ಅನೇಕ ಶಿವಲಿಂಗಗಳು ವೈವಿಧ್ಯಮಯವಾಗಿದೆ. ಅವುಗಳಲ್ಲಿ ಗಮನ ಸೆಳೆಯುವಂತಹ ವೈವಿಧ್ಯಮಯ ಪಂಚಲಿಂಗಗಳತ್ತ ಗಮನಹರಿಸುವುದು ಈ ಲೇಖನದ ಮೂಲ ಉದ್ದೇಶ.

ಶಿವಲಿಂಗಗಳ ಪ್ರಾಚೀನತೆಯನ್ನು ಸಿಂಧೂ ಕಣಿವೆ ಸಂಸ್ಕೃತಿ ಅಥವಾ ಹರಪ್ಪಾ ಸಂಸ್ಕೃತಿಯ ಕಾಲಘಟ್ಟವಾದ ಕ್ರಿ.ಪೂ.೨೫೦೦ರಷ್ಟು ಪೂರ್ವಕ್ಕೆ ಒಯ್ಯಬಹುದಾಗಿದೆ. ಸರ್ವೇಕ್ಷಣ ಮತ್ತು ಉತ್ಖನನಗಳಲ್ಲಿ ಅನೇಕ ವೈವಿಧ್ಯಮಯ ಲಿಂಗಗಳು ದೊರಕಿದ್ದು ಅವುಗಳು ಲಿಂಗ ಮತ್ತು ಶೈವ ಧರ್ಮದ ಪ್ರಾಚೀನತೆಯನ್ನು ತೋರುತ್ತವೆ. [1] ಮುಖ ಲಿಂಗ - ಲಿಂಗಗಳು ಕ್ರಿಸ್ತಶಕೆಯ ಪ್ರಾರಂಭದ ವರ್ಷಗಳಿಗೆ ಸೇರುತ್ತವೆಯೆಂದು ಸಂಶೋಧನೆಗಳಿಂದ ದೃಢಪಟ್ಟಿವೆ. ಶೈವ ಧರ್ಮದ ವಿಕಸನಕ್ಕೆ ಅನುಗುಣವಾಗಿ ಚತುರ್ಮುಖ, ಪಂಚಮುಖ, ಸಹಸ್ರ ಲಿಂಗಗಳು ಮತ್ತು ಇತರೆ ವೈವಿಧ್ಯಮಯ ಲಿಂಗ ಗಳು ಕಾಲಕ್ರಮದಲ್ಲಿ ಬೆಳೆದು ಬಂದಿವೆ. ಚತುರ್ಮುಖ ಮತ್ತು ಪಂಚಮುಖ ಲಿಂಗಗಳು ಕ್ರಿ.ಶ. ೭ ಮತ್ತು ೮ನೇ ಶತಮಾನದಲ್ಲಿ ಅಂದರೆ ಗುಪ್ತರ ತರುವಾಯದ ಕಾಲಘಟ್ಟದಲ್ಲಿ ಪ್ರಚಲಿತಗೊಂಡವು. ಗುಪ್ತರ ಉತ್ತರ ಕಾಲಕ್ಕೆ ಸೇರುವ ಉತ್ತರ ಭಾರತದ ನಚನ - ಕುತಾರದಲ್ಲಿರುವ ಶಿವ ದೇವಾಲಯದ ಪಂಚಮುಖ ಲಿಂಗವು ಉತ್ತಮ ಉದಾಹರಣೆ ಯದ್ದಾಗಿದೆ.

ಪಂಚಲಿಂಗಗಳನ್ನು ಕುರಿತಂತೆ ವಿಷ್ಣುಧರ್ಮೋತ್ತರವು ವಿವರಿಸುತ್ತದೆ. ಇದರಂತೆ ಶಿವನಿಗೆ ಪಂಚಮುಖಗಳಿರುತ್ತವೆ (ಶಂಭೋರ್ - ವದನ - ಪಂಚಕಮ್). ಅವುಗಳ ಈಶಾನ, ತತ್ಪುರುಷ, ಅಘೋರ, ವಾಮದೇವ ಮತ್ತು ಸದ್ಯೋಜಾತ. ಇವು ನಾಲ್ಕು ದಿಕ್ಕುಗಳನ್ನು ನೋಡುತ್ತವೆ ಮತ್ತು ಸಂಪ್ರದಾಯದಂತೆ ಪ್ರಥಮ ಮುಖವು ಎತ್ತರ ವಾಗಿದ್ದು ಅದನ್ನು ಶಿಲ್ಪದಲ್ಲಿ ಕಂಡರಿಸುವುದಿಲ್ಲ. ನಾಲ್ಕು ಮುಖಗಳಿದ್ದರೂ ಇದನ್ನು ಪಂಚಲಿಂಗವೆಂದೇ ಕರೆಯಲಾಗುತ್ತದೆ. ಶಿವನ ಪಾರಮ್ಯ ಅಥವಾ ಪರಮೋಚ್ಚ ರೂಪದಲ್ಲಿಯೇ ಪ್ರಥಮವಾಗಿ ಈಶಾನ ರೂಪವಾಗಿದ್ದು, ನಂತರ ಅನುಕ್ರಮವಾಗಿ

ಅಘೋರ, ವಾಮದೇವರ ಮತ್ತು ಸದ್ಯೋಜಾತರು ಬರುತ್ತಾರೆ. ಹಾಗೂ ಇವುಗಳು ವಿಶ್ವದ ಪ್ರತಿರೂಪಗಳೆಂದು, ಸರ್ವಾಂತರ್ಯಾಮಿ ಮತ್ತು ಅಂತರ್ಗಾಮಿಯಾಗಿ ಪಂಚಭೂತಗಳನ್ನು ಪ್ರತಿನಿಧಿಸುತ್ತವೆ ಎಂದು ಪರಿಗಣಿಸಲಾಗಿದೆ.'[2] ಪಂಚಮುಖ ಲಿಂಗಗಳು ಸಾಮಾನ್ಯವಾಗಿ ನಾಲ್ಕು ಮುಖಗಳಿಂದ ಕೂಡಿದ್ದು ಈ ನಾಲ್ಕು ಮುಖಗಳು ಮಧ್ಯದ ಲಿಂಗದ ಮೂಲ ಕೇಂದ್ರ ಸ್ತಂಭದ ಸುತ್ತಲೂ ಕಂಡರಿಸಲಾಗುತ್ತದೆ.[3]


ಲಿಂಗದ ಸ್ವರೂಪವು ರೂಪಗೊಂಡ ಬಗೆಗೆ ವಿವಿಧ ವ್ಯಾಖ್ಯಾನಗಳಿವೆ. ಅವುಗಳಲ್ಲಿ ಲಿಂಗವು ಮಂತ್ರಗಳಿಂದ ಕೂಡಿದೆ ಎನ್ನುವುದು ಒಂದು. ಐದು ಮುಖಗಳು ಐದು ಮಂತ್ರಗಳನ್ನು ಪ್ರತಿಪಾದಿಸುತ್ತವೆ ಎಂದು ಪರಿಭಾವಿಸಲಾಗಿದೆ. ತೈತ್ತರೀಯ ಅರಣ್ಯಕವು (೪೩-೪೭) ಇದನ್ನು ಉಲ್ಲೇಖಿಸುತ್ತದೆ. ಮಂತ್ರಗಳು ಲಯಬದ್ಧವಾಗಿರುವ ಸೂತ್ರ ಗಳಾಗಿದ್ದು, ಅತಿಮಾನುಷ ಶಕ್ತಿಯ ಇರುವಿಕೆಯನ್ನು ತೋರುತ್ತದೆ. ಲಯಬದ್ಧ ಉಚ್ಚಾರಣೆಯು ಅದರ (ದೇವರ) ದೇಹವಾಗಿದ್ದು, ಶಿವನು ಅಂದರೆ ಪರಮಾತ್ಮನು ಅದರ ಆತ್ಮವಾಗುತ್ತಾನೆ. ಮಂತ್ರವು (ವಿದ್ಯೆ) ದೇಹವಾಗುತ್ತದೆ.[4] ಇದು ಶಿವಲಿಂಗ ರೂಪಿಯಾಗಿ ಕಾಣಿಸಿಕೊಳ್ಳುತ್ತದೆ. ಆದ್ದರಿಂದ ಲಿಂಗವು ಮಂತ್ರಗಳಿಂದ ಕೂಡಿದ್ದು, ಶಿವನ ದೇಹವನ್ನು ಪ್ರತಿನಿಧಿಸುತ್ತದೆ. ಈ ನಾಲ್ಕು ಮಂತ್ರಗಳು ವಿಶ್ವದ ನಾಲ್ಕು ಪ್ರದೇಶಗಳನ್ನು ಪ್ರತಿನಿಧಿಸುತ್ತವೆ ಹಾಗೂ ಐದನೆಯ ಮುಖ ಅಥವಾ ಮಂತ್ರ ಈಶಾನವು ಇವೆಲ್ಲದರ ಕೈಗೆ ನಿಲುಕದಷ್ಟು ದೂರದಲ್ಲಿ ಜ್ಯೋತಿಯಾಗಿ ಬೆಳಗುತ್ತಿರು ತ್ತದೆ. ಈ ಜ್ಯೋತಿಯಿಂದ (ದಿವ್ಯಲಿಂಗ) ಲಯಬದ್ಧ ಕಂಪನಗಳು ಹೊರಟು ಮಂತ್ರಗಳಾಗಿ ಮಾರ್ಪಡುತ್ತದೆ ಎಂದು ನಂಬಲಾಗಿದೆ. ದಿವ್ಯಲಿಂಗವು ತತ್ಪುರುಷನಾಗಿದ್ದು ಕೇಂದ್ರದ ಮೂಲಸ್ತಂಭವಾಗಿ ಜ್ಯೋತಿ ಯನ್ನು ನೀಡುತ್ತದೆ. ವಾಮದೇವಲಿಂಗವು ಸ್ಥಂಬದ ಕೆಳಭಾಗವನ್ನು ಪ್ರತಿನಿಧಿಸುತ್ತದೆ. ಇದನ್ನು ಅಲ್ಲಿ ಪ್ರತಿಷ್ಠಾಪಿಸಿ ಪೂಜಿಸಲಾಗುತ್ತದೆ. ಮೂಲಸ್ತಂಭವೇ ಎಲ್ಲಕ್ಕೂ ಆಧಾರವಾಗಿದ್ದು ಅದರಲ್ಲಿಯೇ ಅಂತ್ಯಗೊಳ್ಳುತ್ತದೆ. ಅರ್ಥಾತ್ ಆದಿ ಮತ್ತು ಅಂತ್ಯವು ಮೂಲಸ್ತಂಭದಲ್ಲಿಯೇ ಇದೆ. ಅದರಿಂದ ಇದನ್ನು ಲಿಂಗ ಎನ್ನಲಾಗುತ್ತದೆ.[5] ಮಂತ್ರಗಳ ಮೂಲಕ ಈ ಶಕ್ತಿ ಯನ್ನು ಜಾಗೃತಗೊಳಿಸಬಹುದು ಮತ್ತು ವಿಶ್ವದ ಶಿವನನ್ನು ಈ ಮೂಲಕ ಅರಿಯ ಬಹುದು; ಶಿವನ ಶರೀರದಲ್ಲಿ ವಿಶ್ವ, ಅವನ ದೇಹವು ಶಕ್ತಿ (ಶಾಕ್ತಿಕ -ಶರೀರ) ಮತ್ತು ವಿಶ್ವದ ಎಲ್ಲಾ ವಸ್ತುಗಳನ್ನು ಅದು ಒಳಗೊಂಡಿರುತ್ತದೆ.

ಇಂತಹ 'ದೇಹ'ವನ್ನು ಹೊಂದಿದ ಶಿವನ ಸ್ವರೂಪದ ಲಿಂಗವು ಎಲ್ಲಾ ದಿಕ್ಕುಗಳನ್ನು ನೋಡಬೇಕಿರುವುದರಿಂದ ಅದಕ್ಕೆ ನಾಲ್ಕು ಮುಖಗಳನ್ನು ನೀಡಲಾಗಿದೆ. ಇವು ನಾಲ್ಕು ಪ್ರಮುಖ ದಿಕ್ಕುಗಳನ್ನು ಸೂಚಿಸುತ್ತವೆ. ಊರ್ಧ್ವಮುಖವಾಗಿಯೂ ಅದು ಪ್ರತಿನಿಧಿಸು ತ್ತದೆ. ಪ್ರತಿಯೊಂದು ಮುಖವು ಶಿವನ ಒಂದು ರೂಪವನ್ನು ಮತ್ತು ಆಕಾರವನ್ನು ಪ್ರತಿನಿಧಿಸುತ್ತದೆ. ಶಿವನ ವಿವಿಧ ರೂಪಗಳನ್ನು ಗುರುತಿಸಲು ಅವನಿಗೆ ಕೆಲವು ಪ್ರತೀಕಗಳು

ಅಥವಾ ಆಯುಧ/ಚಿಹ್ನೆಗಳನ್ನು ನೀಡಿರುವ ಕುರಿತು ಕೆಲವು ಗ್ರಂಥಗಳು ಉಲ್ಲೇಖಿಸುತ್ತವೆ. ತತ್ಪುರುಷನು ಮಾತುಲುಂಗ ಅಥವಾ ಬೀಜಪೂರಕ ವನ್ನು ಒಂದು ಕೈಯಲ್ಲಿ ಹಾಗೂ ಮತ್ತೊಂದರಲ್ಲಿ ಅಕ್ಷಮಾಲೆಯನ್ನು ಹಿಡಿದಿರು ತ್ತಾನೆ.[6] ಬೀಜಪೂರಕದಲ್ಲಿರುವ ಅಣುವು ವಿಶ್ವದ ಅಂಕುರಾರ್ಪಣದ ಬೀಜಗಳನ್ನು ಸೂಚಿಸುತ್ತವೆ. ಅಕ್ಷಮಾಲೆಯು ವಿಶ್ವವನ್ನು ಜೋಡಿಸುವ ಸಮನ್ವಯಿಸುವ ಪ್ರತೀಕವಾಗಿದೆ. ಅವನ ಜಟಾಮುಕುಟದಲ್ಲಿ ಅರ್ಧಚಂದ್ರ ನಿರುತ್ತಾನೆ ಹಾಗೂ ಇದು ಅಮಾ ಕಾಲ (೧/೧೬ ನೇ ಭಾಗ) ಮತ್ತು ಶಿವನ ಐಶ್ವರ್ಯವನ್ನು ಸೂಚಿಸುತ್ತವೆ. ಅಘೋರನು ಭಯಾನಕವಾಗಿದ್ದು ಭೀತಿಯನ್ನು ಹುಟ್ಟಿಸುವ ಕಾಲನಾಗಿದ್ದಾನೆ. ಸರ್ಪ ತಲೆಬುರುಡೆಯನ್ನು ಹೊಂದಿದವನಾಗಿರುತ್ತಾನೆ. ವಾಮದೇವನು ಸುಂದರಾಂಗನಾಗಿದ್ದು, ಸ್ತ್ರೀಯರನ್ನು ಆಕರ್ಷಿಸುವನಾಗಿರುತ್ತಾನೆ.

ವಿಷ್ಣುಧರ್ಮೋತ್ತರವು ಶಿವನ ಐದು ಮುಖಗಳಿಗೆ ಪರ್ಯಾಯವಾದ ಐದು ಹೆಸರುಗಳನ್ನು ಉಲ್ಲೇಖಿಸುತ್ತವೆ. ಶಿವನ ದೇಹವು ರೂಪಗೊಂಡ ಮಂತ್ರವು ಈಶಾನ, ತತ್ಪುರುಷ, ಅಘೋರ, ವಾಮದೇವ ಮತ್ತು ಸದ್ಯೋಜಾತರನ್ನು ಸೂಚಿಸುತ್ತದೆ. ಅವುಗಳ ಪರ್ಯಾಯವಾದ ಎರಡನೆಯ ಹೆಸರುಗಳು ಸದಾಶಿವ, ಮಹಾದೇವ, ಭೈರವ, ಉಮಾ ಮತ್ತು ನಂದಿ. ಇದರಂತೆ ಮಧ್ಯಭಾಗದಲ್ಲಿರುವ ಮುಖವು ತತ್ಪುರುಷ - ಮಹಾದೇವ; ಅಘೋರವು ಭೈರವನನ್ನು, ವಾಮದೇವ ಅಥವಾ ಉಮಾ ಇನ್ನೊಂದು ಬದಿಯಲ್ಲಿರು ತ್ತದೆ. ಉಮಾ ಮುಖವು ಸುಂದರ ವದನದಿಂದ ಕೂಡಿದ್ದು ಪಾರ್ವತಿ ದೇವಿಯ ಅಥವಾ ಶಿವನ ಶಕ್ತಿ ಹಾಗೂ ಪ್ರಕೃತಿಯನ್ನು ಸೂಚಿಸುತ್ತದೆ. ಈ ಹೆಸರುಗಳು ಶಿವನ ಪಾರಮ್ಯವನ್ನು ತೋರುವುದರೊಂದಿಗೆ ಅವನೇ ಸರ್ವಶಕ್ತ ಮತ್ತು ಮಹೇಶ ಎಂದು ಪ್ರತಿಪಾದಿಸುತ್ತವೆ. ಇಂತಹ ತಾತ್ವಿಕ ಹಿನ್ನೆಲೆಯಿಂದ ರೂಪಗೊಂಡ ಶಿವನ ಮಹೇಶ ಮೂರ್ತಿಯ ಸುಂದರ ಶಿಲ್ಪವನ್ನು ಮುಂಬೈ ಸಮೀಪದ ಎಲಿಫೆಂಟಾ ಗುಹೆಗಳಲ್ಲಿ ಕಾಣಬಹುದು. ಕ್ರಿ.ಶ.೭-










ಲನೇ ಶತಮಾನಗಳಿಗೆ ಸೇರಬಹುದಾದ ಈ ಶಿಲ್ಪದಲ್ಲಿ, ಶಿವನ ಮೂರು ಮುಖಗಳನ್ನು ಅತ್ಯಂತ ಸುಂದರ ಮತ್ತು ಕಲಾತ್ಮಕವಾಗಿ ರೂಪಿಸಲಾಗಿದೆ. ತತ್ಪುರುಷ ಅಘೋರ ಮತ್ತು ವಾಮದೇವರ ಉಬ್ಬು ಶಿಲ್ಪಗಳಲ್ಲಿ ಶಿವನ ಗುಣ ಲಕ್ಷಣಗಳನ್ನು ಆಯಾ ಶಿಲ್ಪಗಳಲ್ಲಿ ಮೂಡಿಸಲಾಗಿದೆ. ಈ ಉಬ್ಬು ಶಿಲ್ಪವು ಲಿಂಗ ಮತ್ತು ಮೂರ್ತಿ ಶಿಲ್ಪಗಳ ಪ್ರತೀಕವಾಗಿದೆ ಎಂದು ಸ್ಟೆಲ್ಲಾ ಕ್ರೈಮರಿಚ್ ರವರು ಅಭಿಪ್ರಾಯಪಡುತ್ತಾರೆ.[7] ಈ ಹಿನ್ನೆಲೆಯಲ್ಲಿ ಹಂಪಿ ಪರಿಸರದಲ್ಲಿ ದೊರಕಿರುವ ಪಂಚಲಿಂಗಗಳನ್ನು ಗಮನಿಸಲಾಗಿದೆ.

ಹಂಪಿ ಪರಿಸರದಲ್ಲಿ ಇಲ್ಲಿಯವರೆಗೆ ಮೂರು ಭಿನ್ನ ಶೈಲಿಯ ಪಂಚಲಿಂಗಗಳು ದೊರಕಿವೆ. ಕಮಲಾಪುರದ ಊರಮ್ಮನ ಗುಡಿಯ ಪಕ್ಕದಲ್ಲಿರುವ ಅಶೋಕ್‌ಸಿಂಗ್ ಮನೆಯ ಪಕ್ಕದಲ್ಲಿರುವ ಬೇವಿನ ಮರದ ಕೆಳಗೆ ಒಂದು ಪಂಚಲಿಂಗವನ್ನು ಪ್ರತಿಷ್ಠಾಪಿಸಿ ಪೂಜಿಸಲಾಗುತ್ತಿದೆ.[8] ಈ ಪಂಚಲಿಂಗವು ಕಣಶಿಲೆಯಿಂದ ಮಾಡಲಾಗಿದ್ದು ಚತುರ ಸ್ರಾಕಾರದ ಪಾಣಿಪೀಠದ ಮೇಲೆ ಐದು ಲಂಬಾಕಾರದ ಲಿಂಗಗಳನ್ನು ಕಂಡರಿಸಲಾಗಿದೆ. ಇದಕ್ಕೆ ಪ್ರಣಾಳವಿದೆ. ಐದು ಲಿಂಗಾಕಾರಗಳು ಒಂದಕ್ಕೊಂದು ಅಂಟಿಕೊಂಡಂತೆ ಇದ್ದು ಮಧ್ಯದ ಲಿಂಗಾಕೃತಿಯು ಉಳಿದ ನಾಲ್ಕು ಲಿಂಗಾ ಕೃತಿಗಳಿಗಿಂತ ಎತ್ತರವಾಗಿದೆ. ಲಿಂಗವನ್ನು ಸಿಮೆಂಟ್ ನೆಲದಲ್ಲಿ ಹುದಗಿಸಲಾಗಿದೆ. ಪ್ರಸ್ತುತ ಪಂಚಲಿಂಗದಲ್ಲಿರುವ ಲಿಂಗಗಳನ್ನು ತೋರಿರುವ ಶೈಲಿಯು ವಿಷ್ಣು ಧರ್ಮೋತ್ತರದಲ್ಲಿ ವರ್ಣಿಸಿರುವ ಶಿವನ ಐದು ಮುಖಗಳನ್ನು ನೆನಪಿಸುತ್ತವೆ. ಈಗಾಗಲೇ ಮೇಲೆ ವಿವರಿಸಿದಂತೆ ಶಿವನಿಗೆ ಐದು ಮುಖಗಳಿದ್ದು (ಶಂಭೋರ್-ವದನ-ಪಂಚಕಮ್), ಅವುಗಳು ಕ್ರಮವಾಗಿ ಈಶಾನ, ತತ್ಪುರುಷ, ಅಘೋರ, ವಾಮದೇವ ಮತ್ತು ಸದ್ಯೋ ಜಾತ ಇವುಗಳು ನಾಲ್ಕು










ದಿಕ್ಕುಗಳನ್ನು ನೋಡುತ್ತಿರುತ್ತವೆ ಮತ್ತು ಮೊದಲ ಮುಖವು ಎತ್ತರವಾಗಿರುತ್ತದೆ. ಮನುಷ್ಯ ರೂಪದ ಶಿವನನ್ನು ಲಿಂಗದಲ್ಲಿ ಅಥವಾ ಶಿವನ ಮುಖವನ್ನು ಮಾತ್ರ ತೋರ ಬೇಕಾದಲ್ಲಿ ಈಶಾನನ ಮೂರ್ತಿಯನ್ನು, ಪ್ರಚಲಿತ ರೂಢಿಯಂತೆ ತೋರುವುದಿಲ್ಲ. ಆದರೆ ನಾಲ್ಕು ಮುಖ ಗಳನ್ನು ತೋರದೆಯೇ ಒಂದು, ಎರಡು ಅಥವಾ ಮೂರು ಮುಖಗಳನ್ನು ಮಾತ್ರ ತೋರಿ ಅಂತಹವನ್ನು ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಿದರೆ ಅದಕ್ಕೆ ಅನುಗುಣ ವಾಗಿರುವಂತೆ ಅಷ್ಟೇ ಸಂಖ್ಯೆಯ ಗರ್ಭಗೃಹದ ಬಾಗಿಲುಗಳನ್ನು ತೋರಬೇಕು ಎಂದು ರೂಪಮಂಡನವು ಉಲ್ಲೇಖಿಸುತ್ತದೆ. ಚರ್ಚಿಸ ಲಾಗುತ್ತಿರುವ ಈ ಪಂಚಲಿಂಗವು ವಿಷ್ಣುಧರ್ಮೋತ್ತರಕ್ಕೆ ಅನುಗುಣವಾಗಿ ರೂಪಿಸಿದ ಪಂಚಲಿಂಗವೆನ್ನಬಹುದು. ಪಂಚಲಿಂಗಗಳು ಪಂಚತತ್ವ ಮತ್ತು ಪಂಚಭೂತಗಳಾದ ಅಗ್ನಿ, ವಾಯು, ಜಲ, ಭೂಮಿ ಮತ್ತು ಆಕಾಶವನ್ನು ಪ್ರತಿನಿಧಿಸುತ್ತವೆ. ಪ್ರಥಮ ಲಿಂಗ ಸ್ವರೂಪವು ಭಗವಂತನ (ಶಿವ) ಸರ್ವಾಂತರ್ಯಾಮಿ ಗುಣ ಮತ್ತು ಆಕಾಶವನ್ನು ಸೂಚಿಸುತ್ತದೆ.

ಕಮಲಾಪುರದಲ್ಲಿರುವ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ವಸ್ತು ಸಂಗ್ರಹಾಲಯದಲ್ಲಿರುವ ಪಂಚಲಿಂಗವು ಮೇಲೆ ವಿವರಿಸಿದ ಪಂಚಲಿಂಗಕ್ಕಿಂತ ಭಿನ್ನ ವಾಗಿದೆ. ಇದು ವೃತ್ತಾಕಾರದ ಪಾಣಿಪೀಠವನ್ನು ಹೊಂದಿದ್ದು ಜಲಹರಿ ಅಥವಾ ಪ್ರಣಾಳವನ್ನು ಹೊಂದಿದ್ದು ಸಾಮಾನ್ಯವಾಗಿ ಕಂಡುಬರುವ ಲಿಂಗದ ವಿಷ್ಣುಭಾಗದಂತೆ (ಯೋನಿಭಾಗ) ಇದೆ. ರುದ್ರ ಭಾಗದ ಎಂದರೆ ವಿಷ್ಣುಭಾಗದ ಮೇಲ್ಮೈಯಲ್ಲಿ ಐದು ಕಿರು ಲಿಂಗಗಳನ್ನು ಬಿಡಿಬಿಡಿಯಾಗಿ ಕೆತ್ತಲಾಗಿದೆ. ಇವುಗಳು ಒಂದಕ್ಕೊಂದು










ಅಂಟಿಕೊಂಡಿಲ್ಲ. ಎಲ್ಲಾ ಲಿಂಗಗಳು ಒಂದೇ ಅಳತೆ ಮತ್ತು ಆಕಾರದಲ್ಲಿವೆ. ಲಿಂಗದ ವಿಷ್ಣುಭಾಗದಲ್ಲಿ ಆಂಜನೇಯನ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ. ಲಿಂಗದ ಬ್ರಹ್ಮಭಾಗ ಅಥವಾ ಅಧಿಷ್ಠಾನ ಭಾಗವು ಇಲ್ಲ. ಈ ಪಂಚಲಿಂಗವನ್ನು ಪ್ರಸ್ತುತ ಒಂದು ಪೀಠದ ಮೇಲೆ ಇರಿಸಲಾಗಿದೆ. ಇದನ್ನು ಕಣಶಿಲೆಯಲ್ಲಿ ಮಾಡಲಾಗಿದೆ.

ಇದೇ ವಸ್ತುಸಂಗ್ರಹಾಲಯದಲ್ಲಿ ನಾಲ್ಕು ಪಂಚಲಿಂಗಗಳಿವೆ. ಇವುಗಳು ಮೇಲೆ ವಿವರಿಸಿರುವ ಎರಡು ಶೈಲಿಯ ಪಂಚಲಿಂಗಗಳಿಗಿಂತ ಭಿನ್ನ ಶೈಲಿಯಲ್ಲಿದೆ. ಈ ಪಂಚಲಿಂಗಗಳು ಪಿರಮಿಡ್ ಆಕಾರದಲ್ಲಿದ್ದು ಕೆಳಭಾಗವು ಅಗಲವಾಗಿ ಚೌಕಾಕಾರ ವಾಗಿರುತ್ತದೆ. ಕೆಳಗಿನಿಂದ ಮೇಲೆ ಬಂದಂತೆ ಚೌಕಾಕಾರವು ಕಿರಿದಾಗಿ ಅದರ ಮೇಲಿನ ಸಮತಟ್ಟಾದ ಭಾಗದಲ್ಲಿ ಐದು ಲಿಂಗಗಳನ್ನು ಒಂದಕ್ಕೊಂದು ಅಂಟಿಕೊಂಡಂತೆ ಕೆತ್ತ ಲಾಗಿದೆ. ಮಧ್ಯದ ಭಾಗದಲ್ಲಿರುವ ಲಿಂಗಾಕೃತಿಯು ಉಳಿದ ನಾಲ್ಕು ಲಿಂಗಗಳ ಮೇಲ್ಭಾಗ ದಲ್ಲಿ ಹಾಗೂ ಎತ್ತರದಲ್ಲಿರುವಂತೆ ರೂಪಿಸಲಾಗಿದೆ. ಇದಕ್ಕೆ ಪಾಣಿಪೀಠ ಮತ್ತು ಪ್ರಣಾಳ ಭಾಗಗಳಿಲ್ಲ. ಆದರೆ ಕೆಳಗಿನಿಂದ ಮೇಲೆ ಲಿಂಗದವರೆಗೆ ಇರುವ ಕಲ್ಲಿನ ಚೌಕಾಕಾರ ಭಾಗದಲ್ಲಿ ಮೆಟ್ಟಿಲಿನಂತೆ ತೋರಿಸಲಾಗಿದೆ. ಅದರ ನಡುವೆ ಪಟ್ಟಿಯಂತಹ ಅಲಂಕರಣೆಯು ಕಂಡು ಬರುತ್ತದೆ. ಇದೇ ಶೈಲಿಯ ಪಂಚಲಿಂಗವು ಕಮಲಾಪುರದ ಕಮಲ್‌ಮಹಲ್ ಹತ್ತಿರದ ರಾಜ್ಯ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ



ಉಪನಿರ್ದೇಶಕರ ಕಚೇರಿ ಆವರಣದಲ್ಲಿ ಪ್ರದರ್ಶಿಸಲಾಗಿದೆ. ಇವುಗಳೆಲ್ಲವೂ ಕಣಶಿಲೆಯಿಂದ ಮಾಡಲಾಗಿದೆ. ಈ ಪಂಚಲಿಂಗಗಳು ವಿಷ್ಣುಧರ್ಮೋತ್ತರದ ವರ್ಣನೆಯಂತೆ ಇವೆ.

ಎಲ್ಲಾ ಪಂಚಲಿಂಗಗಳು ಹಂಪಿ ಪರಿಸರದಲ್ಲಿಯೇ ದೊರಕಿದ್ದು ಶೈಲಿಯ ದೃಷ್ಟಿಯಿಂದ ಮೂರು ಪ್ರಕಾರಗಳಿಗೆ ಸೇರುತ್ತವೆ. ಇವುಗಳೆಲ್ಲವೂ ವಿಜಯನಗರ ಕಾಲದ್ದಾಗಿದೆ. ಕಮಲಾಪುರದ ಊರಮ್ಮನ ಗುಡಿಯ ಬಳಿಯಿರುವ ಪಂಚಲಿಂಗವು ಶೈಲಿಯ ದೃಷ್ಟಿಯಿಂದ ಪ್ರಾಚೀನವೆನಿಸುತ್ತದೆ. ಇದು ವಿಜಯನಗರ ಪ್ರಾರಂಭಿಕ ಕಾಲಘಟಕ್ಕೆ ಅಂದರೆ ಕ್ರಿ.ಶ.೧೪-ನೇ ಶತಮಾನಕ್ಕೆ ಸೇರಿರಬಹುದಾಗಿದೆ. ಉಳಿದ ಎರಡು ಪ್ರಕಾರದ ಪಂಚಲಿಂಗಗಳು ೧೫ - ೧೬ನೇ ಶತಮಾನದೆಂದು ಹೇಳಬಹುದು. ಪಿರಮಿಡ್ ಶೈಲಿಯ ಪಂಚಲಿಂಗಗಳು ಮಹಾನವಮಿ ದಿಬ್ಬ, ರಾಜಪ್ರಾಂಗಣ ಹಂಪಿ, ಮುಂತಾದ ಪ್ರದೇಶ ಗಳಲ್ಲಿ ಬಿಡಿಶಿಲ್ಪವಾಗಿ ದೊರಕಿದ್ದು ಅವುಗಳನ್ನು ವಸ್ತುಸಂಗ್ರಹಾಲಯದಲ್ಲಿ ಸಂರಕ್ಷಿಸಿ ಇಡಲಾಗಿದೆ. ಇವುಗಳು ಅಧಿಕ ಸಂಖ್ಯೆಯಲ್ಲಿ ದೊರಕಿರುವುದರಿಂದ ಇವುಗಳನ್ನು ಸಾಂಕೇತಿಕವಾಗಿ ಪೂಜಿಸಲು ಬಳಸಲಾಗಿರುವ ಸಾಧ್ಯತೆಗಳಿವೆ. ಹರಕೆಯನ್ನು ಈಡೇರಿಸಲು ಭಕ್ತರು ಈ ಶಿಲ್ಪಗಳನ್ನು ಮಾಡಿಸಿರಬಹುದು.

ಹಂಪಿಯ ಶ್ರೀ ವಿರೂಪಾಕ್ಷ ದೇವಾಲಯದಲ್ಲಿ ಶಿಷ್ಟಾಚಾರದ ಮಾರ್ಗಸೂಚಿ ಸಂಜ್ಞೆಗಳನ್ನು ಕುರಿತು ವಿವರಿಸುವಾಗ ಚಂದ್ರಶೇಖರ ಡಾವಣಗೇರಿಯವರು ಇಲ್ಲಿನ ಕೆಲವು ಪ್ರಚಲಿತ ನಂಬಿಕೆ ಮತ್ತು ಆಚರಣೆಗಳತ್ತ ಗಮನ ಸೆಳೆಯುತ್ತಾರೆ.[೬] ದೇವಾಲಯದ ಶಿಖರ ದರ್ಶನವು ಬಹಳ ಮುಖ್ಯವಾದುದು ಎಂಬುದನ್ನು ಸೂಚಿಸಿ, ಶ್ರೀ ವಿರೂಪಾಕ್ಷ ದೇವಾಲಯಕ್ಕೆ ಐದು ಕಳಸ ಐದು ಶಿಖರಗಳಿದ್ದು ಈ ಕಳಸ-ಶಿಖರ ದರ್ಶನ ಪಡೆಯುವಲ್ಲಿ ಪಾಲಿಸಲಾಗುವ ಕ್ರಮ ಮತ್ತು ಮಾರ್ಗವನ್ನು ಸೂಚಿಸಿದ್ದಾರೆ. ದೇವಾಲಯದ ರಾಯಗೋಪುರದಿಂದ ಒಳಗೆ ಹೋದಾಗ ಗೋಪುರದ ಪಕ್ಕದಲ್ಲಿ ಸೂರ್ಯ ಗುಡಿಯ ಹತ್ತಿರ 'ಪಂಚಶಿಖರ' ಎಂದು ಹಾಸುಗಲ್ಲಿನ ಮೇಲೆ ಬರೆದಿರುವ ಸ್ಥಳದಿಂದ ದೇವಾಲಯದ ಗೋಪುರ ನೋಡಿದರೆ ಪಂಚ ಕಳಸ ಮತ್ತು ಪಂಚ ಶಿಖರದ ದರ್ಶನದ ದರ್ಶನ ಪಡೆಯಬಹುದು ಹಾಗೂ ಆ ಸ್ಥಳ ಮತ್ತು ವೀಕ್ಷಣೆಯಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಪಂಚಕಳಸ ಮತ್ತು ಪಂಚ ಶಿಖರ ದರ್ಶನವಾಗುವುದಿಲ್ಲ ಎಂಬುದು ಕುತೂಹಲಕಾರಿ ಅಂಶವಾಗಿದೆ. ಇಲ್ಲಿನ ಅಧಿದೇವತೆ ವಿರೂಪಾಕ್ಷನು ಪಂಚಮುಖಗಳಿಂದ ದರ್ಶನ ನೀಡುತ್ತಿದ್ದಾನೆಂಬುದು ಇಲ್ಲಿನ ಸ್ಥಳೀಯರ ಭಾವನೆ. ಇದು ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿದೆ. ಈ ಸ್ಥಳದಿಂದ ಸೋಮನಾಥೇಶ್ವರ, ಮಾತಂಗೇಶ್ವರ, ವಾಣಿಭದ್ರೇಶ್ವರ, ಜಂಬುನಾಥೇ ಶ್ವರ ಮತ್ತು ಕಿನ್ನರೇಶ್ವರ ಎಂಬ ಐದು ಕ್ಷೇತ್ರಗಳ ದರ್ಶನ ಭಾಗ್ಯವು ಈ ಪಂಚ ಕಳಸ ಶಿಖರ ದರ್ಶನದಿಂದ ದೊರಕುತ್ತವೆ

ಎಂಬ ಪ್ರತೀತಿ ಪ್ರಚಲಿತದಲ್ಲಿದೆ ಎಂದು ಗಮನ ಸೆಳೆಯುತ್ತಾರೆ. ಶಿವರಾತ್ರಿಯ ಸಂದರ್ಭದಲ್ಲಿ ಪಂಚಕ್ಷೇತ್ರಗಳ ದರ್ಶನ ಪಡೆದು ಶ್ರೀ ವಿರೂಪಾಕ್ಷನ ದರ್ಶನ ಪಡೆದರೆ ಅಧಿಕ ಪುಣ್ಯ ಪ್ರಾಪ್ತಿಯಾಗುತ್ತದೆ ಎಂದು ಜನರು ನಂಬಿ ಅದರಂತೆ ನಡೆದುಕೊಂಡು ಬರುತ್ತಲಿದ್ದಾರೆ.[10]

ಇದೇ ದೇವಾಲಯದ ಮುಖಮಂಟಪದಲ್ಲಿ ಜರುಗುವ ಡೋಲೋತ್ಸವ ಕಾರ್ಯಕ್ರಮದಲ್ಲಿ ಬೆಳ್ಳಿಯ ಪಂಚಾರತಿಯನ್ನು ಬೆಳಗಿಸುವ ಪದ್ಧತಿಯಿದೆ. ಇದು ಶಿವನ ಪಂಚಮುಖಗಳಾದ ಈಶಾನ, ಸದ್ಯೋಜಾತ, ವಾಮದೇವ, ಅಘೋರ ಮತ್ತು ತತ್ಪುರುಷಗಳಿಗೆ ಗೌರವಸೂಚಿಸುವಂತೆ, ಶ್ರೀ ವಿರೂಪಾಕ್ಷನಿಗೆ ಪಂಚಾರತಿ ಮಾಡುವ ಪದ್ಧತಿ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ದೇವಾಲಯದಲ್ಲಿ 'ಪಂಚಶಿಖರ' ಎಂಬ ಲಿಪಿಲೇಖನ ಇರುವ ಸ್ಥಳದಿಂದ ಮುಂದೆ ಸಾಗಿದರೆ ಅಲ್ಲಿ 'ಏಕಶಿಖರಂ''2ಶಿಖರಂ' ಎಂದಿದ್ದು ಆ ಸ್ಥಳಗಳಿಂದ ಗೋಪುರದ ಒಂದು ಕಳಸ, ಎರಡು ಕಳಸಗಳನ್ನು ಕಾಣಬಹುದು ಎಂದು ಲೇಖಕರು ನಮ್ಮ ಗಮನ ಸೆಳೆದಿರುವರು.[11]

ಹಂಪಿ ಪರಿಸರದಲ್ಲಿ ವಿವಿಧ ಗಾತ್ರ ಮತ್ತು ರೂಪದ ಲಿಂಗಗಳು ದೊರಕಿವೆ[12] ಉದಾಹರಣೆಗೆ ಬಡವಿಲಿಂಗ, ಕೋಟಿಲಿಂಗ, ಯೋಗಾಂಗಲಿಂಗ[13]. ಮುಂತಾದವು ಗಳು. ಕೆಲವು ಲಿಂಗಗಳನ್ನು ದೇವಾಲಯದಲ್ಲಿ ಪ್ರತಿಷ್ಠಾಪಿಸಲಾಗಿರುವುದನ್ನು ಕಾಣ ಬಹುದು. ಆದರೆ ಪಂಚಲಿಂಗಗಳನ್ನು ಯಾವ ದೇವಾಲಯದಲ್ಲಿಯೂ ಪ್ರತಿಷ್ಠಾಪಿ ಸಿಲ್ಲ ಮತ್ತು ಪಂಚಲಿಂಗವಿರುವ ದೇವಾಲಯವು ಹಂಪಿ ಪರಿಸರದಲ್ಲಿ ದೊರಕಿಲ್ಲ[14]. ಆದರೆ ಪಂಚಲಿಂಗಗಳ ಬಿಡಿಶಿಲ್ಪಗಳು ಹೇರಳವಾಗಿ ದೊರಕಿವೆ. ಹಂಪಿಯ ಶಾಸನಗಳು ಪಂಚಲಿಂಗಗಳ ಕುರಿತು ಉಲ್ಲೇಖಿಸುವುದಿಲ್ಲ. ತಲಕಾಡಿನಲ್ಲಿರುವ ಪಂಚಲಿಂಗಗಳು ಪ್ರಸಿದ್ಧವಾಗಿದೆ. ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿನ ಶಾಸನಗಳು ಪಂಚಲಿಂಗಗಳನ್ನು ಉಲ್ಲೇಖಿಸಿವೆ.[15]

ಪಂಚಲಿಂಗಗಳು ಇಷ್ಟು ಪ್ರಮಾಣದಲ್ಲಿ ಹಂಪಿ ಪರಿಸರದಲ್ಲಿ ದೊರಕುವುದರಿಂದ ವಿಜಯನಗರ ಕಾಲದಲ್ಲಿ ಪಂಚಲಿಂಗಗಳನ್ನು ಪೂಜಿಸುವ ಶೈವ ಧರ್ಮದ ಒಂದು ಶಾಖೆಯು ಇಲ್ಲಿತ್ತೆಂದು ಊಹಿಸಬಹುದು. ಈ ಶಾಖೆಯ ಅಥವಾ ಶೈವ ಧಾರ್ಮಿಕ ಉಪಪಂಥದವರು ಪಂಚಲಿಂಗಗಳನ್ನು ಪೂಜಿಸುತ್ತಿದ್ದರು. ಮತ್ತು ಅವುಗಳಿಗಾಗಿ ದೇವಾಲಯವನ್ನು ನಿರ್ಮಿಸಿರಬಹುದು. ಕ್ರಮೇಣ ಈ ಪಂಥದವರು ನೇಪಥ್ಯಕ್ಕೆ ಸೇರಿದಂತೆ ಮೇಲ್ನೋಟಕ್ಕೆ ಕಾಣಬಹುದು. ಮುಂದಿನ ದಿನಗಳಲ್ಲಿ ಹೆಚ್ಚಿನ ಶೋಧ ಗಳು ನಡೆದಾಗ ಪಂಚಲಿಂಗಗಳ ಕುರಿತು ಹೊಸ ಮಾಹಿತಿ ಮತ್ತು ಆಧಾರಗಳು ದೊರಕ ಬಹುದು.

ಅಡಿಟಿಪ್ಪಣಿಗಳು

1. ಸುಂದರ, ಅ. 'ಇಂಡಸ್ - ಸರಸ್ವತಿ ಸಿವಿಲೈಜೇಶನ : ಎರ್ಲಿ ಶೈವ ಕಲ್ಟ್', ಶ್ರೀ ಪುಷ್ಪಾಂಜಲಿ (ಸಂ.) ರಮೇಶ ಕೆ.ವಿ. ಮತ್ತು ಇತರರು. ಸಂ. 1, ಪು. 13-22
2. ವಿಷ್ಣುಧರ್ಮೋತ್ತರ III, xlviii, 1-3
3. ಇಲ್ಲಿ ತೋರುವ ಒಂದು, ಎರಡು, ಮೂರು ಲಿಂಗ ಮುಖಗಳಿಗೆ ಅನುಗುಣವಾಗಿ ಲಿಂಗವನ್ನು ಪ್ರತಿಷ್ಠಾಪಿಸಿರುವ ದೇವಾಲಯದ ಗರ್ಭಗೃಹದಲ್ಲಿ ಅಷ್ಟೇ ಸಂಖ್ಯೆಯ ಬಾಗಿಲುಗಳಿರಬೇಕೆಂಬ ನಿಯಮವಿದೆ. ರೂಪಮಂಡನವು (4-94) ಇದನ್ನು ಪುಷ್ಟೀಕರಿಸುತ್ತದೆ. ಅದರ ಪ್ರಕಾರ ಚತುರ್ಮುಖ ಲಿಂಗ, ಏಕಮುಖಲಿಂಗ ಅಥವಾ ಲಿಂಗವನ್ನು ಒಂದೇ ಬಾಗಿಲಿರುವ ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಬಹುದು. ನೋಡಿ ಗೋಪಿನಾಥರಾವ್ ಟಿ.ಎ, ಎಲಿಮೆಂಟ್ಸ್ ಆಫ್ ಹಿಂದೂ ಐಕನೋಗ್ರಾಫಿ, ಪು. 97
4. ಈಶಾನಶಿವಗುರುದೇವ ಪದ್ಧತಿ III, V, I
5. ಸುಪ್ರಬೇಧಾಗಮ, ಪೂರ್ವೋಕ್ತ, ಪು. 366
6. ಈಶಾನಶಿವಗುರುದೇವ ಪದ್ಧತಿ III, XII, 35; ರೂಪಮಂಡನ IV, 12-13, ವಿವಿಧ ಗುಂಪುಗಳಲ್ಲಿನ ಧ್ಯಾನ ಶ್ಲೋಕಗಳಲ್ಲಿ ಶಿವವನ್ನು ಸ್ತುತಿಸುವಾಗ ಧಾರಣ ಮಾಡಿರುವ ಚಿಹ್ನೆಗಳಲ್ಲಿ ಭಿನ್ನತೆಯನ್ನು ಸೂಚಿಸಿದೆ. ಅಂದರೆ ಅವನು ಕೈಯಲ್ಲಿ ಹಿಡಿದಿರುವ ವಸ್ತುಗಳು ಬೇರೆ ಬೇರೆಯದಾಗಿರುವಂತೆ ವರ್ಣಿಸುತ್ತವೆ. ಅವುಗಳಲ್ಲಿ ಏಕತಾನತೆಯಿಲ್ಲ.
7. ಸ್ಟೆಲ್ಲಾ ಕ್ರೆಮರಿಚ್, 'ದಿ ಇಮೇಜ್ ಆಫ್ ಮಹಾದೇವ ಇನ್ ದಿ ಕೇವ್ ಟೆಂಪಲ್ ಆನ್ ಎಲಿಫೆಂಟಾ ಐಲ್ಯಾಂಡ್, ಏನ್ಷಿಯಂಟ್ ಇಂಡಿಯಾ, ಸಂ. 2, ಪು 408
8. ತಿಪ್ಪೇಸ್ವಾಮಿ ಎಚ್. 'ಕಮಲಾಪುರದಲ್ಲಿನ ವಿಜಯನಗರ ಕಾಲದ ಶಿಲಾಮೂರ್ತಿಗಳು' *ವಿಜಯನಗರ ಅಧ್ಯಯನ*, ಸಂ. 10, ಪು. 229-241. ಈ ಲೇಖನದಲ್ಲಿ ಕಮಲಾಪುರದಲ್ಲಿರುವ ಬಹುತೇಕ ಶಿಲ್ಪಗಳನ್ನು ಲೇಖಕರು ಗಮನಿಸಿದ್ದಾರೆ. ಆದರೆ ಊರಮ್ಮನ ಗುಡಿ ಬಳಿ ಪಂಚಲಿಂಗವನ್ನು ಕುರಿತು ಪ್ರಸ್ತಾಪಿಸಿಲ್ಲ.
9. ಚಂದ್ರಶೇಖರ ದಾವಣಗೇರಿ, 'ಶ್ರೀ ವಿರೂಪಾಕ್ಷೇಶ್ವರ ದೇವಾಲಯದಲ್ಲಿನ ಶಿಷ್ಟಾಚಾರದ ಮಾರ್ಗ ಸೂಚಿಗಳು', *ವಿಜಯನಗರ ಅಧ್ಯಯನ*, ಸಂ. 10, ಪು. 117-126
10. ಅದೇ, ಪು. 122-123
11. ಅದೇ
12. ಹರಿಹರ ಕವಿಯು ತನ್ನ ಪಂಪಾಕ್ಷೇತ್ರದಲ್ಲಿ 'ಗುಂಪುಗುಂಪಾಗಿ ಕಂಡು ಬರುವ ಶಿವಲಿಂಗಗಳಲ್ಲಿ ಲೋಕಕ್ಕೆ ಪಾವನವಾದ ಕೋಟಿ ಶಂಕರಲಿಂಗ ಏಕಾಂತರಾಮೇಶ್ವರ ಲಿಂಗ ಇನ್ನೂ ಎಣಿಸಲು ಸಾಧ್ಯವಾಗದಷ್ಟು ಆತನಿಗೆ ತಿಳಿಯದ ಅನೇಕ ಲಿಂಗಗಳು ಪುರದ ಸುತ್ತಲೂ ಇರುವ ಕಾರಣ ಪಂಪಾಪುರಾಣ (ಹಂಪಿ) ಲಿಂಗಮಯವಾದ ನಿಸ್ಸೀಮೆಯಾಗಿತ್ತು' ಎಂದು ವರ್ಣಿಸುತ್ತಾನೆ. ನೋಡಿ: ರವೀಂದ್ರನಾಥ, ಕೆ, 'ಹಂಪಿಯ ಶಾಸನೋಕ್ತ ಲಿಂಗಗಳು', *ವಿಜಯನಗರ ಅಧ್ಯಯನ*, ಸಂ. 9, ಪು. 164-17-.

ಲೇಖಕರು ಹಂಪಿಯ ಶಾಸನಗಳಲ್ಲಿ ಉಲ್ಲೇಖವಾಗಿರುವ ಶಿವಲಿಂಗಗಳನ್ನು ಕುರಿತು ಚರ್ಚಿಸಿದ್ದಾರೆ. ಅವುಗಳು ಇಂತಿವೆ: ಸರ್ವಾಂಗಲಿಂಗ, ಯೋಗಾಂಗಲಿಂಗ, ನಾಗಭೂಷಣ ಲಿಂಗ, ಶಿವಲಿಂಗ, ಮಹಾಲಿಂಗ, ಕೋಟಿ ಶಂಕರಲಿಂಗ, ಅಷ್ಟೋತ್ತರಲಿಂಗ (ನೂರೆಂಟು ಲಿಂಗಗಳು) ಮತ್ತು ಕಾಳಹಸ್ತಿಲಿಂಗ.

13. ಈ ಲಿಂಗವನ್ನು ಉಬ್ಬುಶಿಲ್ಪದಲ್ಲಿ ಮೂಡಿಸಲಾಗಿದೆ. ಇದು ಉದ್ದಾನ ವೀರಭದ್ರಸ್ವಾಮಿ ದೇವಾಲಯ ಪ್ರಾಕಾರದಲ್ಲಿರುವ ದೀಪಸ್ತಂಭದಲ್ಲಿ ವೀರಭದ್ರಮೂರ್ತಿಗೆ ಅಭಿಮುಖವಾಗಿ ಲಿಂಗಕ್ಕೆ ಲಿಂಗವೇ ಪೀಠವಾಗಿರುವ ಉಬ್ಬುಶಿಲ್ಪವನ್ನು ಯೋಗಲಿಂಗ ಅಥವಾ ಯೋಗಾಂಗಲಿಂಗವೆಂದು ಸಿ.ಟಿ.ಯಂ, ಕೊಟ್ರಯ್ಯನವರು ಗುರುತಿಸಿದ್ದಾರೆ. ನೋಡಿ 'ಲಿಂಗ ಸೂಪರ್ ಇಂಪೋಸ್ಟ್ ಬೈ ಅನದರ್ ಲಿಂಗ ಅಟ್ ಹಂಪಿ', ವಿಜಯನಗರ ಪ್ರೋಗ್ರೆಸ್ ಆಫ್ ರಿಸರ್ಚ್ 1988-91, ಪು. 135-140; ಕೊಟ್ರಯ್ಯ, ಸಿ.ಟಿ.ಯಂ, 'ಹಂಪಿಯಲ್ಲೊಂದು ಸಿದ್ಧರಾಮೇಶ್ವರ ಪ್ರಣೀತ ಲಿಂಗಕ್ಕೆ ಲಿಂಗವೆ ಪೀಠವಾಗಿರ್ಪ ಯೋಗಲಿಂಗ ಶಿಲ್ಪ', *ವಿಜಯನಗರ ಅಧ್ಯಯನ*, ಸಂ.1, ಪು. 20-25

14. ಹಂಪಿ ಪರಿಸರದಲ್ಲಿ ಪಂಚಲಿಂಗವಿರುವ ದೇವಾಲಯವು ದೊರಕಿಲ್ಲವಾದರೂ ಈ ಕ್ಷೇತ್ರದ ಕುರಿತು ಇರುವ ಪುರಾಣಗಳಲ್ಲಿ ಕೆಲವು ಪರೋಕ್ಷ ಉಲ್ಲೇಖಗಳು ಪಂಪಾಕ್ಷೇತ್ರದ ಹಿನ್ನೆಲೆಯನ್ನು ಹರಿಹರನ 'ಗಿರಿಜಾಕಲ್ಯಾಣ ಕುಮಾರ ಲಕ್ಕಣ ದಂಡೇಶನ ಶಿವತತ್ವ ಚಿಂತಾಮಣಿ', ರಾಘವಾಂಕ. ಕುಮಾರ ಪದ್ಮರಸ ಮುಂತಾದವರ ಕೃತಿಗಳು ಮತ್ತು ಸ್ಥಳಪುರಾಣಗಳಲ್ಲಿ ಕಾಣಬಹುದು. ಅದರಂತೆ ಶ್ರೀ ವಿರೂಪಾಕ್ಷನು ಮಾತಂಗೇಶ್ವರ ಎಂಬ ಪಂಚಮುಖಗಳಿಂದ ವಿರಾಜಿಸುತ್ತಾನೆ. ಶಿವನ ವಾಹನನಾದ ನಂದಿಯು ಈ ಕ್ಷೇತ್ರದಲ್ಲಿ ಸವ್ಯ ವೃಷಭ, ಮಹಾಕಾಯ ವೃಷಭ, ಮಹಾಶಯ ವೃಷಭ ಮಹಾಶೃಂಗ ವೃಷಭ ಎಂಬ ನಾಲ್ಕು ರೂಪಗಳಿಂದ ನೆಲೆ ನಿಂತಿರುವನೆಂಬುದು ಪೌರಾಣಿಕ ಹಿನ್ನೆಲೆಯಾಗಿದೆ. ನೋಡಿ ಚಂದ್ರಶೇಖರ ವಿ. ಡಾವಣಗೇರಿ; 'ಹಂಪಿ ಶ್ರೀ ವಿರೂಪಾಕ್ಷ ದೇವಾಲಯ ಪೌರಾಣಿಕ ಹಾಗೂ ಐತಿಹಾಸಿಕ ಹಿನ್ನೆಲೆ', ವಿಜಯನಗರ ಅಧ್ಯಯನ, ಸಂ.9 ಪು 180-195

15. ಎಪಿಗ್ರಾಫಿಯ ಕರ್ನಾಟಕ, ಸಂ. 5, (ತಿನ)ಸಂ. 89, 94, 96 ಮತ್ತು 187, ಪು. 481, 487-488, 493, 496, 580; ಸಂ. 6, (ಕೃ.ರಾ) ಸಂ. 40, ಪು. 31

೨೩. ವಿಜಯನಗರ ಕಾಲದ ದೇವಾಲಯಗಳಲ್ಲಿನ ನೌಕಾ ಶಿಲ್ಪಗಳು

ಡಾ. ಲ.ನ. ಸ್ವಾಮಿ ಉಜಿರೆ - ಡಾ. ಜಗದೀಶ್

ವಿಜಯನಗರ ಸಾಮ್ರಾಜ್ಯವು ದಕ್ಷಿಣದಲ್ಲಿ ಕನ್ಯಾಕುಮಾರಿಯಿಂದ ಉತ್ತರದಲ್ಲಿ ಕೃಷ್ಣಾ ನದಿಯವರೆಗಿನ ದಕ್ಷಿಣ ಭಾರತವನ್ನು ಒಳಗೊಂಡಿತ್ತು. ಈ ಪ್ರದೇಶದಲ್ಲಿ ಕ್ರಿ.ಶ ಹದಿನಾಲ್ಕನೇ ಶತಮಾನದ ಮಧ್ಯಭಾಗದಿಂದ, ೧೬ನೇ ಶತಮಾನದ ಮಧ್ಯಭಾಗದ ವರೆಗೆ ನಿರ್ಮಿತವಾದ ಬಹುತೇಕ ಎಲ್ಲ ದೇವಾಲಯಗಳಲ್ಲಿ ವಿಜಯನಗರದ ದೇವಾಲಯದ ನಿರ್ಮಾಣ ಕಲೆಯ ಛಾಪನ್ನು ಕಾಣುತ್ತೇವೆ. ನೂರಾರು ದೇವಾಲಯ ಗಳನ್ನು ಈ ಪ್ರದೇಶದ ವ್ಯಾಪ್ತಿಯಲ್ಲಿ ವಿಜಯನಗರ ಕಾಲದ್ದವೆಂದು ಗುರುತಿಸಿದರೂ ಅವುಗಳಲ್ಲಿ ಕೆಲವೇ ಕೆಲವು ದೇವಾಲಯಗಳಲ್ಲಿ ಮಾತ್ರ ನೌಕಾ ಶಿಲ್ಪಗಳು ಇದುವರೆಗೆ ವರದಿಯಾಗಿವೆ ಅಥವಾ ಸಂಶೋಧಿಸಲ್ಪಟ್ಟಿವೆ.

ಈ ನೌಕಾಶಿಲ್ಪಗಳು ಕಂಡು ಬಂದ ಪ್ರದೇಶ, ಅವುಗಳನ್ನು ಯಾವ ಸಂದರ್ಭದಲ್ಲಿ ಬಳಸಿದ್ದಾರೆ ಹಾಗೂ ಸ್ತಪತಿಗಳು ಆ ವಿಷಯದ ಬಗ್ಗೆ ಹೊಂದಿದ್ದ ಜ್ಞಾನ, ಈ ಶಿಲ್ಪಗಳ ಅಧ್ಯಯನದಿಂದ ವ್ಯಕ್ತವಾಗುತ್ತದೆ. ಈ ಬಗ್ಗೆ ಒಂದು ಕಿರುಪರಿಚಯವನ್ನು ಇಲ್ಲಿ ಮಂಡಿಸಲಾಗಿದೆ.

ವಿಜಯನಗರ ಸಾಮ್ರಾಜ್ಯದ ದೇವಾಲಯಗಳಲ್ಲಿ ನೌಕಾಶಿಲ್ಪಗಳು ಕಂಡು ಬಂದಿರುವ ದೇವಾಲಯಗಳ ಹೆಸರು ಮತ್ತು ಸ್ಥಳಗಳು ಈ ಕೆಳಗಿನಂತಿವೆ :

1. ಹಜಾರ ರಾಮಸ್ವಾಮಿ ಅಥವಾ ರಾಮಚಂದ್ರದೇವಾಲಯ, ಹಂಪಿ, ಬಳ್ಳಾರಿ ಜಿಲ್ಲೆ, ಕರ್ನಾಟಕ.
2. ಶ್ರೀ ಅಳಗಿಯನಂಬಿಯಾರ್ (ವಿಷ್ಣು) ದೇವಾಲಯ, ತಿರುಕ್ಕುರಾನ್ ಕುಡಿ ಗ್ರಾಮ, ತಿರುನಲ್ವೇಲಿ ಜಿಲ್ಲೆ, ತಮಿಳುನಾಡು.
3. ಶ್ರೀ ನರುಂಬುನದಸ್ವಾಮಿ (ಶಿವ) ದೇವಾಲಯ, ತಿರುಪ್ಪುದೈಮರುದೂರ್, ತಿರುನಲ್ವೇಲಿ ಜಿಲ್ಲೆ, ತಮಿಳುನಾಡು.
4. ಕಮಲಮಹಲ್ ಆವರಣದಲ್ಲಿರುವ ಅಧಿಷ್ಠಾನವೊಂದರಲ್ಲಿ, ಹಂಪೆ, ಬಳ್ಳಾರಿ ಜಿಲ್ಲೆ, ಕರ್ನಾಟಕ.

5. ಮೀನಾಕ್ಷಿ ದೇವಾಲಯದ ಸುವರ್ಣ ಪುಷ್ಕರಣಿಯ ಪ್ರಾಕಾರದ ಗೋಡೆ, ಮಧುರೈ, ತಮಿಳುನಾಡು.

ಮಾದರಿ ೧

ವಿಜಯನಗರದ ರಾಜಧಾನಿಯಾದ ಅಂದಿನ ವಿದ್ಯಾನಗರ ಅಥವಾ ವಿಜಯ ನಗರದ, ಹಜಾರರಾಮಸ್ವಾಮಿ ದೇವಾಲಯದ ಯಜ್ಞಶಾಲೆಯ ಒಳಭಾಗದಲ್ಲಿ ದೇವಾಲಯ ಪ್ರಾಕಾರ ಗೋಡೆಯ ಪೂರ್ವದಲ್ಲಿ ಈ ಶಿಲ್ಪವಿದೆ. ಈ ದೇವಾಲಯದ ಪ್ರಾಕಾರದ ಗೋಡೆಯ ಒಳಭಾಗದಲ್ಲಿ ಮತ್ತು ದೇವಾಲಯದ ಭಿತ್ತಿಯಲ್ಲಿ ರಾಮಾವತಾರದ ಘಟನೆಗಳನ್ನು ಉಬ್ಬು ಶಿಲ್ಪದಲ್ಲಿ ಕೆತ್ತಲಾಗಿದೆ. ಗುಹನು ರಾಮನನ್ನು ಯಮುನೆಯನ್ನು ದಾಟಿಸುವ ಸಂದರ್ಭದಲ್ಲಿ ಈ ನಾವೆಯ ಶಿಲ್ಪವಿದೆ.



ಈ ಶಿಲ್ಪವನ್ನು ಮೊದಲ ಬಾರಿಗೆ ಪ್ರಕಟಿಸಿರುವ ಅನ್ನ ಎಲ್. ದಲಪಿಕೋಲಾ ರವರು, ಸನ್ನಿವೇಶವನ್ನು ಈ ಮೇಲೆ ಹೇಳಿದ್ದಕ್ಕಿಂತ ಬೇರೆ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಈ ಚಿತ್ರವನ್ನು ತಮ್ಮ ಗ್ರಂಥದ ೬೨-೬೩ನೆಯ ಚಿತ್ರವಾಗಿ ಪ್ರಕಟಿಸಿ, ಸಿಂಹಾಸನದ ಮೇಲೆ ಕುಳಿತಿರುವ ರಾಮ ಸೀತೆಯರೆಂಬ ಅಡಿ ಟಿಪ್ಪಣಿ ಒದಗಿಸಿದ್ದಾರೆ. ಮುಂದುವರಿದು ರಾಮಸೀತೆಯರು ಗೌರವಿಸಲ್ಪಡುತ್ತಿದ್ದಾರೆಂದು ಬರೆದಿದ್ದಾರೆ.

ಆದರೆ ಹಜಾರರಾಮಂದಿರದ ಪ್ರಸ್ತುತ ಸನ್ನಿವೇಶ ರಾಮನು ವನವಾಸಕ್ಕೆ ತೆರಳುವ ಹಾದಿಯಲ್ಲಿ ಯಮುನೆಯನ್ನು ದಾಟುತ್ತಿರುವ ಚಿತ್ರವಿದಾಗಿದೆ.



ಜಾನ್ ಡಿಲೋಚರವರು, ತಮ್ಮ ಇತ್ತೀಚಿನ ಪ್ರಕಟಣೆಯಲ್ಲಿ ಇದೇ ಚಿತ್ರವನ್ನು ದೋಣಿಯೆಂದು ಗುರುತಿಸಿ ಪ್ರಕಟಿಸಿರುವರಾದರೂ ಅದರ ಬಗ್ಗೆ ಹೆಚ್ಚಿನ ವಿವರ ಒದಗಿಸುವುದಿಲ್ಲ.

ಚಿತ್ರಶಿಲ್ಪದಲ್ಲಿ ಒಟ್ಟು ನಾಲ್ಕು ವ್ಯಕ್ತಿಗಳು ಚಿತ್ರಿಸಲ್ಪಟ್ಟಿದ್ದಾರೆ. ಅದರಲ್ಲಿ ಇಬ್ಬರು ಪುರುಷರು, ಊರ್ಧ್ವಶಿಖೆಯನ್ನು ಮತ್ತೊಬ್ಬ ವ್ಯಕ್ತಿ ಹಿಂದೆ ಬಾಗಿದ ಶಿಖೆಯನ್ನು ಹೊಂದಿದ್ದಾರೆ. ದಂಪತಿಯರು ಮಧ್ಯದಲ್ಲಿ ಕುಳಿತಿದ್ದಾರೆ. ಅವರ ಹಿಂದೆ ಲಕ್ಷ್ಮಣ ಧನುರ್ಧಾರಿಯಾಗಿ ಕುಳಿತಿದ್ದಾನೆ. ಇವರೆಲ್ಲರಿಗಿಂತ ಮುಂದೆ ಗುಹನು ಹುಟ್ಟು ಹಾಕುತ್ತಿರುವಂತೆ ಚಿತ್ರಿಸಲಾಗಿದೆ. ದೋಣಿಯ ಆಕಾರ ಅಸ್ಪಷ್ಟವಾಗಿದೆ. ಆದರೆ ಅದರಲ್ಲಿ ವ್ಯಕ್ತಿಗಳು ಕುಳಿತಿರುವ ಬಗೆ ಹಾಗೂ ದೋಣಿಯನ್ನು ಚಲಿಸುತ್ತಿರುವಾತನ ಭಂಗಿ, ಬಳಕೆಯಾಗಿರುವ ಒಂದೇ ಹುಟ್ಟು ದೋಣಿಯ ಆಕಾರವನ್ನು ಗುರುತಿಸಲು ಸಹಾಯಕವಾಗಿದೆ. ಇವುಗಳೆಲ್ಲದರ ಆಧಾರದ ಮೇಲೆ ಕಥಾ ಸಂದರ್ಭ ಮತ್ತು ಪರಿಸರದಲ್ಲಿ ಕಂಡು ಬರುವ ನಾವೆಗಳನ್ನು ಅಧ್ಯಯನ ಮಾಡಿದ ಅನಂತರ ಈ ಚಿತ್ರದಲ್ಲಿ ಕಂಡು ಬರುವ ನಾವೆ, ಹರಿಗೋಲಿನ ಮಾದರಿಯದೆಂದು ನಿರ್ಧಾರ ಮಾಡಲಾಗಿದೆ. ಜಾನ್ ಡಿಲೋಚ್ ಕೇವಲ ದೋಣಿಯ ಕೆಳಭಾಗದಲ್ಲಿ ಕಂಡು ಬರುವ ಹೋರಚಾಪನ್ನು ಸರಿಯಾಗಿ ಅರ್ಥೈಸಿಕೊಳ್ಳದೆ ಇದು ಮರದ ದಿಮ್ಮಿಯನ್ನು ತೋಡಿ ತೆಗೆದ ದೋಣಿ ಎಂದೂ ಗುರುತಿಸಿದ್ದಾರೆ. ಆದರೆ, ಅದರ ಚಲನಾ ಕ್ರಮ ಹಾಗೂ ಹುಟ್ಟುಗಳ ಸಂಖ್ಯೆ ಇದಕ್ಕೆ ಪೂರಕವಾಗಿರದ ಹಿನ್ನೆಲೆಯಲ್ಲಿ ಹಾಗೂ ಈ ಪರಿಸರದಲ್ಲಿ ಆ ಬಗೆಯ ದೋಣಿ


ಸ್ತಪತಿಗೆ ಕಂಡು ಬರದ ಕಾರಣ ಆತ ಅಂತಹ ನಾವೆಗಳನ್ನು ಚಿತ್ರಿಸಿರಲು ಸಾಧ್ಯವಿಲ್ಲ. ಅದಕ್ಕೆ ಬದಲಾಗಿ, ಅದೇ ಕಾಲಘಟ್ಟದ ತೋಡಿ ತೆಗೆದ ದೋಣಿಯ ಚಿತ್ರದೊಂದಿಗೆ ಹೋಲಿಸಿದಾಗಲೂ ಅದು ನಮ್ಮ ವಾದವನ್ನೇ ಪುಷ್ಟೀಕರಿಸುವ ಹಿನ್ನೆಲೆಯಲ್ಲಿ ಈ ನಾವೆಯನ್ನು ಹರಿಗೋಲೆಂದು ನಿರ್ಧರಿಸಲಾಗಿದೆ.

ಮಾದರಿ ೨

ವಿಜಯನಗರ ಸಾಮ್ರಾಜ್ಯದ ದಕ್ಷಿಣ ಭಾಗದಿಂದ ಮೂರು ಬಗೆಯ ನೌಕಾ ಮಾದರಿಗಳು ವರದಿಯಾಗಿವೆ. ತಿರುನಲ್ವೇಲಿ ಜಿಲ್ಲೆಯಲ್ಲಿ ಎರಡು ಮತ್ತು ಮಧುರೈ ಜಿಲ್ಲೆಯಲ್ಲಿ ಒಂದು ವಿನ್ಯಾಸ ಕಂಡುಬಂದಿದೆ. ಆದರೆ ನನ್ನ ಕ್ಷೇತ್ರ ಕಾರ್ಯದಲ್ಲಿ ಮಧುರೈನಲ್ಲಿ ಇದೆ ಎಂದು ಹೇಳಲಾದ ವರ್ಣಚಿತ್ರ ಕಂಡು ಬಾರದ ಕಾರಣ ಅದರ ಪ್ರಕಟಿತ ವಿವರಗಳನ್ನು ಮಾತ್ರ ಇಲ್ಲಿ ದಾಖಲಿಸುತ್ತಿದ್ದೇನೆ. ಆರ್.ಕೆ. ಮುಖರ್ಜಿ ಯವರು ಸುವರ್ಣ ಪುಷ್ಕರಣಿಯ ಪ್ರಾಕಾರದ ಗೋಡೆಯಲ್ಲಿ ಸಮುದ್ರಯಾನ ಕೈಗೊಳ್ಳುತ್ತಿರುವ, ಬೊರಬದೂರ್ ಸ್ತೂಪದಲ್ಲಿ ಚಿತ್ರಿತವಾಗಿರುವ ಶಿಲ್ಪಗಳ ಮಾದರಿಯ ಹಡಗು ಹಾಗೂ ಸಮುದ್ರದ ಚಿತ್ರವಿರುವುದಾಗಿ ಧಾಖಲಿಸಿದ್ದಾರೆ. ಆದರೆ ಅದನ್ನು ಹುಡುಕಿಕೊಂಡು ಹೊರಟ ನನಗೆ ಇತ್ತೀಚಿನವರೆಗೆ ಯಾವುದೇ ಬಗೆಯ ಭಿತ್ತಿಚಿತ್ರವಾಗಲೀ ಶಿಲ್ಪವಾಗಲೀ ಆ ದೇವಾಲಯದ ಆವರಣದಲ್ಲಿ ಗೋಚರಿಸಲಿಲ್ಲ.

ಮಾದರಿ ೩

ತಮಿಳುನಾಡಿನ ತಿರುನಲ್ವೇಲಿ ಜಿಲ್ಲೆಯ ನನ್‌ಕುನೇರಿ ತಾಲ್ಲೂಕಿನ ತಿರುಕ್ಕುರಾನ್ ಕುಡಿ ಗ್ರಾಮದ ಶ್ರೀ ಅಳಗಿಯ ನಂಬಿಯಾರ್ (ವಿಷ್ಣು) ಆಲಯದ ರಾಜಗೋಪುರದಲ್ಲಿ ಮತ್ತೊಂದು ದೋಣಿಯ ಉಬ್ಬುಶಿಲ್ಪ ಕಂಡು ಬಂದಿದೆ.



ಹಡಗಿನ ವಿವರಗಳು ಸ್ಪಷ್ಟವಾಗಿ ಕಾಣುವಷ್ಟು ದೊಡ್ಡದಾಗಿ ಚಿತ್ರಿಸಿದ್ದಾರೆ. ಹಡಗಿನ ಜೊತೆಯಲ್ಲಿ ಮರದ ದಿಮ್ಮಿಯನ್ನು ತೋಡಿ ಮಾಡಿದ ದೋಣಿಗಳನ್ನು ಚಿತ್ರಿಸಿದ್ದಾರೆ. ಹಡಗಿನ ಮುಂಭಾಗವನ್ನು (stem) ಗಮನಿಸಿದಾಗ, ಅಂದಿನ ಕಾಲದಲ್ಲಿ ಅರಬ್ಬರು ಬಳಸುತ್ತಿದ್ದ, ಇಂದಿಗೂ ಭಾರತದ ಪಶ್ಚಿಮದ ತೀರದಲ್ಲಿ ಕಂಡು ಬರುವ ಮರದ ಹಲಗೆಗಳನ್ನು ಕಟ್ಟಿ ಮಾಡಿದ (ಹೊಲಿದು) ಹಡಗನ್ನು ಹೋಲುತ್ತವೆ. ಅದೇ ಕಾಲದ ಪ್ರವಾಸ ಕಥನಗಳಲ್ಲಿ ಈ ಬಗೆಯ ಹಡಗಿನ ಉಲ್ಲೇಖ ಹಾಸುಹೊಕ್ಕಾಗಿ ಕಂಡು ಬರುತ್ತದೆ. ಸುಲೇಮಾನ್, ಅಲ್ ಮಸೂದ್, ಇಬನ್ ಬತೂತ, ಜೋರ್ಡನಸ್, ಜಾನ್ ಆಫ್ ಮಾಂಟೆಕಾರ್ವಿನೋ, ಮಾರ್ಕೋಪೋಲೊ ಮತ್ತು ಫ್ರೆಯರ್ ಓಡ್ರಿಚ್‌ರವರ ಪ್ರವಾಸಿ ಕಥನಗಳಲ್ಲಿ ಈ ಬಗೆಯ ಹಡಗುಗಳ ವಿವರಣೆ ಸಾಕಷ್ಟು ಕಂಡುಬರುತ್ತದೆ. ಈ ಬಗೆಯ ಹಡಗುಗಳನ್ನು ಇಂದಿಗೂ ಮಲಬಾರ್ ಮತ್ತು ಕೊಂಕಣದ ತೀರದಲ್ಲಿ ಸರಕು ಸಾಗಾಣಿಕೆಗೆ ತೀರದ, ಒಳನಾಡಿನ ಹಾಗೂ ಬಂದರುಗಳ ನಡುವಿನ ಸಾಗಾಣಿಕೆಯಲ್ಲಿ ಬಳಸುತ್ತಿದ್ದಾರೆ.

ಆಕಾರದಲ್ಲಿ ಪ್ರಸ್ತುತ ಮಾದರಿ, ಕೊಂಕಣದ ಫತೇಮರಿ ಅಥವಾ ಮಲಬಾರಿನ ಸಾಂಬುಕ್ ಮಾದರಿಯ ಹಡಗನ್ನು ಹೋಲುತ್ತದೆ.


ಈ ಹಡಗು ಒಂದೇ ಅಟ್ಟಣಿಗೆಯನ್ನು ಹಾಗೂ ತೆರೆದ ಒಂದೇ ಅಂತಸ್ತಿನ ಅಟ್ಟಣಿಗೆಯನ್ನು ಹೊಂದಿದ ಹಡಗೆನ್ನಬಹುದು. ಹಡಗಿನ ಬಲ ಮತ್ತು ಎಡ ಪಾರ್ಶ್ವದಲ್ಲಿ ಹಡಗಿನ ಗೋಡೆಯ ಅಂಚಿನ ಕೆಳಗೆ ಕಿಟಕಿಯ ಮಾದರಿಯನ್ನು ಅದರ ಕೆಳಗೆ ಗುರಾಣಿ ಆಕಾರವನ್ನು ಚಿತ್ರಿಸಿದ್ದಾರೆ. ಕಿಟಕಿಗಳು ಹಡಗಿನ ಕೆಳಗಿನ ಅಟ್ಟಣಿಗೆರೆ ವಾತಾಯನ ವ್ಯವಸ್ಥೆಯನ್ನು ಹಾಗೂ ನಾವಿಕರಿಗೆ ಸಮುದ್ರದಲ್ಲಿ ನಡೆಯುವ ವಿದ್ಯಮಾನಗಳನ್ನು, ಕಡಲ್ಗಳ್ಳರನ್ನು ದೂರದಿಂದಲೇ ತಿಳಿದುಕೊಳ್ಳಲು ಸಹಾಯಕವಾಗುವಂತೆ ನಿರ್ಮಿಸಿರುವುದು ಕಂಡು ಬರುತ್ತದೆ. ಗುರಾಣಿಯಾಕಾರದ ಹಿಂದೆ ನಿಂತ ನಾವಿಕರು ಮತ್ತುಸೈನಿಕರು, ಅವಶ್ಯಕತೆ ಬಂದಾಗ ಅವುಗಳನ್ನು ಸರಿಸಿ, ಕಡಲ್ಗಳ್ಳರ ಮೇಲೆ ದಾಳಿ ಮಾಡುತ್ತಿದ್ದಂತೆ ಕಂಡುಬರುತ್ತದೆ. ಈ ವಿವರಗಳೂ ಪ್ರವಾಸಿ ಕಥನಗಳಲ್ಲಿ ಉಪಲಬ್ಧವಿದೆ.

ಹಡಗಿನ ಪಾರ್ಶ್ವದಲ್ಲಿ ನಿಂತಿರುವ ಅರಬ್ ನಾವಿಕರ ಸಾಲು ಇದಕ್ಕೆ ಪುಷ್ಟಿ ಕೊಡುತ್ತದೆ. ಹಡಗಿನ ಕಪ್ತಾನನಿಗೆ ಸಮುದ್ರದ ವಿಹಂಗಮ ನೋಟ ದೊರೆಯಲು ಸಹಾಯಕವಾಗುವಂತೆ, ಹಡಗಿನ ಹಿಂಬದಿಯಲ್ಲಿ (stren) ಎತ್ತರದ ಅಟ್ಟಣಿಗೆಯನ್ನು ನಿರ್ಮಿಸಲಾಗಿದೆ. ಚುಕ್ಕಾಣಿ ಹಿಡಿದಿರುವಾತನು ಎತ್ತರವಾದ ಅಟ್ಟಣಿಗೆಯ ಮೇಲೆ ಕುಳಿತಿರುವುದನ್ನು ಸಹ ಚಿತ್ರಿಸಲಾಗಿದೆ. ಹಡಗಿನಲ್ಲಿ ಒಂದೇ ಒಂದು ಹಾಯಿಕಂಬವನ್ನು ಚಿತ್ರಿಸಲಾಗಿದೆ. ಹಾಯಿ ಮರದ ಕೆಳಭಾಗ ಮಾತ್ರ ಶಿಲ್ಪದಲ್ಲಿ ಕಂಡುಬರುತ್ತದೆ. ದೋಣಿಯ ಮಾದರಿಯ ಆಧಾರದ ಮೇಲೆ ಹಡಗು ಆಯತಾಕಾರದ ಒಂದೇ

ಹಾಯಿಯನ್ನು ಹೊಂದಿತ್ತು ಎಂದು ತಿಳಿಯಬಹುದು. ಹಡಗಿನ ಕೆಳಬದಿಯಲ್ಲಿ ಅದರ ಜೊತೆಯಲ್ಲಿ ಕಂಡುಬರುವ ದಿಮ್ಮಿಯನ್ನು ತೋಡಿ ತೆಗೆದ ಮಾದರಿ ದೋಣಿಯಲ್ಲಿ ಅರಬ್ ವರ್ತಕರು ಕುಳಿತು ಚಲಿಸುತ್ತಿರುವಂತೆ ಚಿತ್ರಿಸಿದ್ದಾರೆ. ಪ್ರಾಯಶಃ ಈ ವಿವರಗಳ ಆಧಾರದ ಮೇಲೆ ತೀರ ಸಾಗರದಲ್ಲಿ ಲಂಗರು ಹಾಕಿದ ಅರಬ್ ಹಡಗಿನಲ್ಲಿ ನಡೆಯುತ್ತಿದ್ದ ದೈನಂದಿನ ವ್ಯವಹಾರವನ್ನು ಈ ಶಿಲ್ಪ ಪ್ರತಿನಿಧಿಸುತ್ತದೆ. ಅಲ್ಲದೆ, ಈ ಶಿಲ್ಪ ವಿಜಯನಗರ ಸಾಮ್ರಾಜ್ಯ ಅರಬ್ಬರೊಂದಿಗೆ ನಡೆಸುತ್ತಿದ್ದ ವ್ಯಾಪಾರ ವಹಿವಾಟನ್ನು ಖಚಿತಪಡಿಸುತ್ತದೆ.

ಮಾದರಿ ೪

ತಮಿಳುನಾಡಿನ, ತಿರುನಲ್ವೇಲಿ ಜಿಲ್ಲೆಯ ಅಂಕ ಮುತ್ತಿರಾ ತಾಲ್ಲೂಕಿನ ತಿರುಪ್ಪುತ್ತೈ ಮರುತೂರ್ ಗ್ರಾಮದ ಶ್ರೀ ನರುಂಬುನದ ಸ್ವಾಮಿ (ಶಿವ) ದೇವಾಲಯದ ಗೋಪುರದಲ್ಲಿ ಕಂಡುಬರುವ ವರ್ಣ ಚಿತ್ರವೊಂದರಲ್ಲಿ ಮತ್ತೊಂದು ಬಗೆಯ ಹಡಗು ಕಂಡು ಬರುತ್ತದೆ.



ಈ ಚಿತ್ರದಲ್ಲಿರುವ ಹಡಗು ಸಹ ಒಂದೇ ಹಾಯಿಕಂಬವನ್ನು ಹೊಂದಿದೆ. ಹಾಯಿ ಮರದ ತುದಿಯಲ್ಲಿರುವ ಕಟಾಂಜನದ ಒಳಗೆ ವ್ಯಕ್ತಿಯೊಬ್ಬ ಕುಳಿತಿರುವಂತೆ ಚಿತ್ರಿಸಿದ್ದಾರೆ. ಪ್ರಾಯಶಃ ತೀರವನ್ನು ಕಂಡುಕೊಳ್ಳುವ ಪ್ರಯತ್ನದಲ್ಲಿರುವ ನಾವಿಕನನ್ನು ಈ ಚಿತ್ರ ಪ್ರತಿನಿಧಿಸುತ್ತದೆ. ಹಡಗಿನ ವಿವರಗಳಲ್ಲಿ ಹಿಂದಿನ ಹಡಗಿಗೆ ಹೋಲಿಸಿದರೆ ಹೆಚ್ಚಿನದೇನನ್ನೂ ಇಲ್ಲಿ ಹೇಳಲು ಸಾಧ್ಯವಿಲ್ಲ. ಕೆಲವು ಅರಬ್ ನಾವಿಕರನ್ನು ಹಾಗೂ ಐರೋಪ್ಯ ನಾವಿಕರನ್ನು ಈ ಹಡಗು ಹೊಂದಿದೆ. ಅಲ್ಲದೆ ಈ ಚಿತ್ರವು ೧೬ನೆಯ ಶತಮಾನದ್ದೆಂದು ನಿರ್ಧರಿಸಲಾಗಿದೆ. ಆ ವೇಳೆಗೆ ಅರಬ್ಬರು ತಮ್ಮ ಸ್ವಾಮ್ಯತ್ವನ್ನು ಪೋರ್ಚುಗೀಸರಿಗೆ ಬಿಟ್ಟುಕೊಟ್ಟಿದ್ದ ಹಿನ್ನೆಲೆಯಲ್ಲಿ ಇವರನ್ನು ಪೋರ್ಚುಗೀಸ್ ನಾವಿಕರೆಂದು ಗುರುತಿಸಬಹುದು. ವಿಜಯನಗರದ ಅರಸರು ಪೋರ್ಚುಗೀಸರಿಂದ ಕುದುರೆಗಳನ್ನು ಕೊಂಡುಕೊಳ್ಳುತ್ತಿದ್ದುದನ್ನು ಇತರ ಆಕರಗಳು ಸಿದ್ಧಪಡಿಸಿರುವ ಹಿನ್ನೆಲೆಯಲ್ಲಿ ಈ ವಾದವನ್ನು ಒಪ್ಪಬಹುದಾಗಿದೆ.

ಹಡಗಿನ ಮುಂಭಾಗಕ್ಕಿಂತ ಹಿಂಭಾಗ ಎತ್ತರವಾಗಿರುವಂತೆ ಅಟ್ಟಣಿಗೆಯ ಸಹಾಯದಿಂದ ನಿರ್ಮಿಸಲಾಗಿದೆ. ಇಂತಹ ಅಟ್ಟಣಿಗೆಯಲ್ಲಿ ನಾವಿಕನು ಚುಕ್ಕಾಣಿ ಯನ್ನು ಹಿಡಿದು ಕುಳಿತಿರುವಂತೆ ಸಹ ಚಿತ್ರಿಸಲಾಗಿದೆ. ಹಡಗಿನ ಮೇಲಿನ ತೆರೆದ ಅಟ್ಟಣಿಗೆಯಲ್ಲಿ ಐರೋಪ್ಯ ಹಾಗೂ ಅರಬ್ ನಾವಿಕರು ನಿಂತಿರುವಂತೆ ಚಿತ್ರಿಸಿದ್ದಾರೆ. ಕೆಳಗಿನ ಅಟ್ಟಣಿಗೆಯಲ್ಲಿ ಕುದುರೆಗಳು ನಿಂತಿರುವುದನ್ನು ಅವುಗಳ ಶಿರಗಳನ್ನು ಮೇಲಿನ ಅಟ್ಟಣಿಗೆಯ ಕೆಳಗೆ ಚಿತ್ರಿಸಿ, ನಿರೂಪಿಸಿದ್ದಾರೆ, ಹಡಗು ಹಿಂಬದಿಯಲ್ಲಿ ಎರಡು ಅಟ್ಟಣಿಗೆಯನ್ನು ಹೊಂದಿದೆ.



ಮಾದರಿ ೫


ಇತ್ತೀಚೆಗೆ ಹಂಪಿಯ ಕಮಲಮಹಲ್ ಆವರಣದಲ್ಲಿ, ಕಮಲ ಮಹಲ್‌ನ ಪಶ್ಚಿಮ ದಿಕ್ಕಿನಲ್ಲಿರುವ ಪುರಾತನ ಕಟ್ಟಡವೊಂದರ ಅಧಿಷ್ಠಾನದಲ್ಲಿ ಎರಡು ದೋಣಿಗಳ ಉಬ್ಬು ಶಿಲ್ಪಗಳನ್ನು ಕಂಡು ಹಿಡಿಯಲಾಗಿದೆ.

ಈ ಉಬ್ಬುಶಿಲ್ಪಗಳನ್ನು ಅತ್ಯಂತ ನವಿರಾಗಿ ಕೆತ್ತಲಾಗಿದೆ. ಹಡಗಿನ ಭಾಗವನ್ನು ಶಾಸನವನ್ನು ಕೊರೆಯುವಂತೆ ಗೆರೆಗಳಿಂದ ಕೊರೆದು, ಹಡಗಿನ ಮೇಲು ಭಾಗದಲ್ಲಿ ಕಂಡು ಬರುವ ಮಾನವರನ್ನು ಉಬ್ಬು ಶಿಲ್ಪದಂತೆ ಕೆತ್ತಿದ್ದಾರೆ. ಗೆರೆಗಳಿಗೆ, ನವಿರಾದ ಕೆಂಪು ಬಣ್ಣವನ್ನು ಹಾಕಿರುವಂತೆ ಕಂಡು ಬರುತ್ತದೆ. ಹಡಗಿನ ಶಿಲ್ಪವನ್ನು ಗುರುತಿಸಲು ಸಹಾಯಕವಾಗುವಂತೆ ಬಣ್ಣವನ್ನು ಬಳಸಿದ್ದಾರೆ.

ಹಡಗಿನ ಮುಂಭಾಗದಲ್ಲಿ ಲಂಗರುಗಳನ್ನು ತೆಗೆಯುತ್ತಿರುವಂತೆ ವ್ಯಕ್ತಿಯೋರ್ವ ನನ್ನು ಚಿತ್ರಿಸಲಾಗಿದೆ. ಚಿತ್ರದಲ್ಲಿ ಎರಡು ಲಂಗರುಗಳು ಕಂಡು ಬರುತ್ತವೆ. ಹಡಗಿನ ಹಿಂಭಾಗದಲ್ಲಿ ಸಹ ವ್ಯಕ್ತಿಯೋರ್ವನು ಕಾರ್ಯ ನಿರತವಾಗಿರುವುದು ಕಂಡು ಬರುತ್ತದೆ. ಆತನು ಸನ್ನೆಯ ಸಹಾಯದಿಂದ ಚುಕ್ಕಾಣಿಯನ್ನು ತಿರುಗಿಸುತ್ತಿರುವಂತೆ ಕಂಡು ಬರುತ್ತದೆ.

ದೋಣಿಯಲ್ಲಿ ನಿಂತಿರುವ ವ್ಯಕ್ತಿಗಳ ಸೊಂಟದ ಮೇಲು ಭಾಗ ದೋಣಿಯ ಪಾರ್ಶ್ವದ ಅಂಚಿನ ಮೇಲೆ ಕಂಡುಬರುವುದರಿಂದ ಇದನ್ನು ತೀರಗಳಲ್ಲಿ ಬಳಸುವ ಹಲಗೆಗಳನ್ನು ಕಟ್ಟಿ ಮಾಡಿದ ದೋಣಿಗಳೆಂದು ಗುರುತಿಸಬಹುದು. ಕರ್ನಾಟಕದ ಮಂಗಳೂರು ಪ್ರಾಂತ್ಯದಲ್ಲಿ ಕಂಡು ಬರುವ ಪಾತಿಯನ್ನು ಹೋಲುತ್ತದೆ. ಇದೇ ಮಾದರಿಯ ದೋಣಿಯನ್ನು ಮೇಲಿನ ಮಾದರಿಯ ಹಿಂಬದಿಯಲ್ಲಿ ಸಹ ಕೆತ್ತಿದ್ದಾರೆ. ಹಿಂದಿನ ದೋಣಿಯಲ್ಲಿರುವವರು, ಮುಂದಿನ ದೋಣಿಯಲ್ಲಿರುವವರನ್ನು ಹೆದರಿಸು





ತ್ತಿರುವಂತೆ ಕಂಡುಬರುತ್ತದೆ. ಪ್ರಾಯಶಃ ಇದು ಸಮುದ್ರದಲ್ಲಿ ನಡೆಯುತ್ತಿದ್ದ ಕಡಲ್ಗಳ್ಳ ತನವನ್ನು ಪ್ರತಿಬಿಂಬಿಸುತ್ತದೆ. ಎರಡೂ ದೋಣಿಗಳಲ್ಲಿ ಹಾಯಿಗಂಬ ಚಿತ್ರಿತವಾಗದಿರುವ ಹಿನ್ನೆಲೆಯಲ್ಲಿ ಇವು ಹುಟ್ಟನ್ನು ಬಳಸಿ ನಡೆಸುವ ದೋಣಿಗಳೆಂದು ನಿರ್ಧರಿಸಬಹುದು.

ದೋಣಿಯ ಮಾದರಿಗಳು

ಈ ಎಲ್ಲಾ ಬಗೆಯ ದೋಣಿ ಮತ್ತು ಹಡಗುಗಳ ಚಿತ್ರಣ ಅಂದಿನ ಕಾಲದಲ್ಲಿ ನಿರ್ಮಿಸುತ್ತಿದ್ದ, ಹಾಗೂ ಬಳಸುತ್ತಿದ್ದ ಹಡಗುಗಳನ್ನು ಪರಿಚಯಿಸುವುದಲ್ಲದೇ ಅವುಗಳನ್ನು ಯಾವ ಬಗೆಯ ಯಾನಗಳಿಗೆ ಬಳಸುತ್ತಿದ್ದರೆಂದು ತಿಳಿಸುತ್ತದೆ.

ಪ್ರಥಮವಾಗಿ ಹಜಾರ ರಾಮಮಂದಿರದ ಚಿತ್ರವು ಹರಿಗೋಲು ಮಾದರಿಯದ್ದಾಗಿದೆ. ಇದನ್ನು ತೊಗಲಿನ ದೋಣಿಗಳು ಎಂದೂ ಸಹ ಕರೆಯುತ್ತಾರೆ. ತೊಗಲಿನ ದೋಣಿಗಳಲ್ಲಿ ಎರಡು ವಿಧ. ಪ್ರಾಣಿಯ ತೊಗಲುಗಳನ್ನು ತೆಗೆದು ಅವು ಗಳನ್ನು ಹೊಲಿದು ಅವುಗಳ ಒಳಗೆ ತೇಲುವ ಸಾಧನಗಳನ್ನು ಅಥವಾ ಗಾಳಿ ತುಂಬಿ ಅವುಗಳನ್ನು ಅಟ್ಟಣಿಗೆಯನ್ನು ಅಡಿಯಲ್ಲಿ ಅಥವಾ ತೆಪ್ಪದ ಕೆಳಗೆ, ಕಟ್ಟಿ ಒಳನಾಡಿನ ಸಾಗಣೆಯಲ್ಲಿ ಬಳಸುತ್ತಾರೆ.

ಮತ್ತೊಂದು ಬಗೆಯದೆಂದರೆ, ಅಗಲವಾದ ಬಟ್ಟಲಿನಾಕಾರದ ಬಿದಿರು ಅಥವಾ ಬೆತ್ತದ ಬುಟ್ಟಿಯನ್ನು ಹೆಣೆದು ಅದರ ಹೊರ ಮೈಗೆ ಚರ್ಮವನ್ನು ಹೊಲಿದು ತಯಾರಿಸಿದ ಹರಿಗೋಲುಗಳು. ಇದನ್ನು ಕೆರೆ, ನದಿ, ಸರೋವರಗಳನ್ನು ದಾಟಲು, ಸರಕು ಸಾಗಾಣಿಕೆಗೆ ಒಳನಾಡಿನ ಜಲ ಮಾರ್ಗಗಳಲ್ಲಿ ಬಳಸುತ್ತಾರೆ. ಈ ಬಗೆಯ ಸಾರಿಗೆ ವ್ಯವಸ್ಥೆ ವಿಜಯನಗರ ಮತ್ತು ಆನೆಗುಂದಿಯ ನಡುವೆ ನಡೆಯುತ್ತಿದ್ದುದನ್ನು ಸಿ.ಎಸ್. ವಾಸುದೇವನ್ ಮತ್ತು ವಿರೂಪಾಕ್ಷಿ ಪೂಜಾರಿಹಳ್ಳಿ ತಮ್ಮ ಲೇಖನಗಳಲ್ಲಿ ಉಲ್ಲೇಖಿಸಿ ದ್ದಾರೆ. ಈ ಎರಡೂ ಬಗೆಯ ದೋಣಿಗಳು ಸಮುದ್ರದಲ್ಲಿ ಬಳಸಲು ಯೋಗ್ಯವಾದವು ಗಳಲ್ಲ.

ಎರಡನೆ ಬಗೆಯ ದೋಣಿಯನ್ನು ಕಮಲ ಮಹಲ್‌ನ ಆವರಣದ ಅಧಿಷ್ಠಾನದಲ್ಲಿ ನೋಡುತ್ತೇವೆ. ಮರದ ದಿಮ್ಮಿಯನ್ನು ತೋಡಿ ತೆಗೆದು ಮಾಡಿದ ದೋಣಿಯ ಮೇಲೆ (Dugout) ಹಲಗೆಯನ್ನು ಕಟ್ಟಿ ಮಾಡಿದ್ದಾಗಿದೆ ಅಥವಾ ಕೇವಲ ಮರದ ಹಲಗೆಗಳನ್ನೇ ಹೊಲಿದು ಮಾಡಿದ ಮಂಗಳೂರಿನ ತೀರದಲ್ಲಿ ಕಾಣುವ 'ಪಾತಿ' ದೋಣಿಗಳನ್ನು ಹೋಲುತ್ತವೆ. ಈ ಬಗೆಯ ದೋಣಿಗಳನ್ನು ಕೋರಮಂಡಲ್ ತೀರದಲ್ಲಿ 'ಮಸೂಲ' ದೋಣಿಗಳೆನ್ನುತ್ತಾರೆ. ಇವುಗಳನ್ನು ತೀರದ ಯಾನಗಳಿಗೆ, ಅಳಿವೆಗಳಲ್ಲಿ ಹಿನ್ನೀರಿನಲ್ಲಿ ಬಳಸುತ್ತಾರೆ. ಇವನ್ನು ಹುಟ್ಟಿನಿಂದ ಹಾಗೂ 'ಹಾಯಿ'ಯನ್ನು ಬಳಸಿ ನಡೆಸಬಹು ದಾಗಿದೆ. ಹಾಯಿ ಕಂಬ ಕೆತ್ತದೇ ಇರುವುದರಿಂದ ಹುಟ್ಟನ್ನೇ ದೋಣಿಯ ಚಾಲನೆಗೆ ಬಳಸಿದ್ದಾರೆನ್ನ ಬಹುದು.

ಅಂತಿಮವಾಗಿ ತಮಿಳುನಾಡಿನ ಶಿಲ್ಪ ಮತ್ತು ಚಿತ್ರದಲ್ಲಿನ ಹಡಗಿನ ಮಾದರಿಗಳು ದೊಡ್ಡ ದೊಡ್ಡ ಹಡಗುಗಳಾಗಿದ್ದು, ಹಾಯಿಯ ಸಹಾಯದಿಂದ ನಡೆಸುತ್ತಿದ್ದವುಗಳಾ ಗಿವೆ. ಇವು ಬಹುತೇಕ ಸರಕು ಸಾಗಾಣಿಕೆಗೆ ಬಳಸುತ್ತಿದ್ದ ಹಡಗುಗಳಾಗಿವೆ. ಅಲ್ಲದೆ ಅವುಗಳು ಅರಬ್ಬರು ಮತ್ತು ಪೋರ್ಚುಗೀಸರು ಬಳಸುತ್ತಿದ್ದ ಹಡಗಿನ ಮಾದರಿಯವು.

ದೋಣಿಗಳ ಕಾಲ

ವಸುಂಧರಾ ಫೆಲಿಯೋಜಾರವರು ಹಜಾರ ರಾಮಮಂದಿರನ್ನು ಹೊಯ್ಸಳರ ಕಾಲದ್ದೆಂದು ಗುರುತಿಸುತ್ತಾರೆ. ಆದರೆ ಅದರ ಆವರಣ ಗೋಡೆಯಲ್ಲಿ ಕಂಡು ಬರುವ ಶಿಲ್ಪಗಳ ಆಧಾರದ ಮೇಲೆ ಮತ್ತು ಅದೇ ಬಗೆಯ ಶಿಲ್ಪಗಳು ಮಹಾನವಮಿ ದಿಬ್ಬದ ಮೊದಲ ಹಂತಗಳಲ್ಲಿ ಕಂಡು ಬರುವ ಹಿನ್ನೆಲೆಯಲ್ಲಿ ಈ ಆಲಯದ ನೌಕಾಯಾನದ ಚಿತ್ರಣವನ್ನು ೧೪ನೆಯ ಶತಮಾನದ್ದೆಂದು ಹೇಳಬಹುದು.

ಕಮಲ್ ಮಹಲ್ ಮತ್ತುತಮಿಳುನಾಡಿನ ತಿರುಕ್ಕುರಾನ್‌ಕುಡಿಯ ಮಾದರಿಗಳು ೧೫ನೆಯ ಶತಮಾನಕ್ಕೆ ಸೇರಿದವೆಂದು ಖಚಿತವಾಗಿ ಹೇಳಬಹುದು. ತಿಪ್ಪುತ್ತೈ ಮರುತೂರ್‌ನ ಮಾದರಿಯು ೧೬ನೆ ಶತಮಾನದ್ದೆಂದು ಗುರುತಿಸಲಾಗಿದೆ. ಇದನ್ನು ಆಯಾ ದೇವಾಲಯಗಳ ನಿರ್ಮಾಣ ಕಾಲದ ಮೇಲೆ ಆಧರಿಸಿದ್ದಾರೆ.

ಈ ಶಿಲ್ಪಗಳ ಅಧ್ಯಯನದಿಂದ ವಿಜಯನಗರ ಸಾಮ್ರಾಜ್ಯದ ಲಿಖಿತ ಆಕರಣಗಳು ಹೇಳುವುದನ್ನು ಶಿಲ್ಪಗಳು ದೃಢೀಕರಿಸುತ್ತವೆ. ಅರಬ್ಬರೂ ಮತ್ತು ಪೋರ್ಚುಗೀಸರು ಸಾಮ್ರಾಜ್ಯದೊಡನೆ ನಡೆಸುತ್ತಿದ್ದ ವ್ಯಾಪಾರ ವಹಿವಾಟನ್ನು ಹಡಗಿನಲ್ಲಿ ಕಂಡು ಬಂದ ಚಿತ್ರಣ ಪುಷ್ಟೀಕರಿಸುತ್ತದೆ.

ಆಕರ ಗ್ರಂಥಗಳು

1. ಅನ್ನಾ ಎಲ್. ದಲಪಿಕೋಲಾ (ಸಂ.) - 1991. ದಿ ರಾಮಚಂದ್ರ ಟೆಂಪಲ್ ಅಟ್ ವಿಜಯನಗರ, ನವದೆಹಲಿ.
2. ಹುರೇನಿ ಜಾರ್ಜ್ ಫಿದೆಲೊ - 1975. ಅರಬ್ ಸೀಫೇರಿಂಗ್, ನ್ಯೂಯಾರ್ಕ್
3. ಜಾನ್ ಡಿಲೋಟ್ - 1987 - ಐಕನೋಗ್ರಫಿಕ್ ಎವಿಡೆನ್ಸಸ್ ಆನ್ ಬೋಟ್ಸ್ ಅಂಡ್ ಶಿಪ್ಸ್ ಇನ್ *ಟ್ರೆಡಿಶನ್ ಅಂಡ್ ಆರ್ಕಿಯಾಲಜಿ*, ಎಚ್.ಪಿ.ರೇ.(ಸಂ), ನವದೆಹಲಿ.
4. ಲಲನ್ ಜಿ. ಗೋಪಾಲ್ - 1917- ಇಂಡಿಯನ್ ಶಿಪ್ಪಿಂಗ್ ಇನ್ ಅರ್ಲಿ ಮಿಡಿವಲ್ ಪಿರಿಯಡ್, *ಇನ್ ಇಂಡಿಯಾಸ್ ಕಾಂಟ್ರಿಬ್ಯೂಷನ್ ಟು ವರ್ಲ್ಡ್ ಥಾಟ್ ಅಂಡ್ ಕಲ್ಚರ್,* ಲೋಕೇಶಚಂದ್ರ (ಸಂ.), ಮದ್ರಾಸ್, ಪು. 108-122.
5. ಮುಖರ್ಜಿ, ಆರ್.ಕೆ. -1912, ಇಂಡಿಯನ್ ಶಿಪ್ಪಿಂಗ್, ಕೋಲ್ಕತ್ತಾ.
6. ನೀಲಕಂಠ ಶಾಸ್ತ್ರಿ ಕೆ.ಎ. 1939 - ಫಾರಿನ್ ನೋಟಿಸಸ್ ಆಫ್ ಸೌತ್ ಇಂಡಿಯಾ, ಮದ್ರಾಸ್.
7. ರೊನಾಲ್ಡ್ ಲಾಥಂ - 1978 - ದಿ ಟ್ರಾವೆಲ್ಸ್ ಆಫ್ ಮಾರ್ಕೊಪೋಲೊ, ಪೆಂಗ್ವಿನ್ ಬುಕ್ಸ್ ಲಿ., ಯು.ಕೆ.
8. ಸ್ವಾಮಿ ಎಲ್.ಎನ್. - 1993- ಮ್ಯಾರಿಟೈಮ್ ಕಾಂಟಾಕ್ಟ್ಸ್ ಅಲಾಂಗ್ ದಿ ವೆಸ್ಟ್ ಕೋಸ್ಟ್ ಆಫ್ ಇಂಡಿಯಾ ವಿತ್ ಸ್ಪೆಷಲ್ ರೆಫರೆನ್ಸ್ ಟು ಕರ್ನಾಟಕ - ಅಪ್ರಕಟಿತ ಪಿಎಚ್.ಡಿ. ಸಂಶೋಧನಾ ಪ್ರಬಂಧ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
9. ಸ್ವಾಮಿ ಎಲ್.ಎನ್. 1997- ಬೋಟ್ಸ್ ಅಂಡ್ ಶಿಪ್ಸ್ ಇನ್ ಇಂಡಿಯನ್ ಆರ್ಟ್, ನವದೆಹಲಿ.
10. ಸ್ವಾಮಿ ಎಲ್.ಎನ್. -2000- ಮ್ಯಾರಿಟೈಮ್ ಕಾಂಟಾಕ್ಟ್ಸ್ ಆಫ್ ಏನ್ಶಿಯೆಂಟ್ ಇಂಡಿಯಾ, ನವದೆಹಲಿ.
11. ವಿರೂಪಾಕ್ಷಿ ಪೂಜಾರಿಹಳ್ಳಿ - 2001- 'ವಿಜಯನಗರ ಕಾಲದ ಮೀನುಗಾರಿಕೆ ಮತ್ತು ಅಂಬಿಗತನ' *ವಿಜಯನಗರ ಅಧ್ಯಯನ,* ಸಂ. 6, ಪುಟ 74-83.
12. ಸಿ.ಎಸ್. ವಾಸುದೇವನ್ - 2004- 'ವಿಜಯನಗರ ಪಟ್ಟಣದ ಜಲಸಾರಿಗೆ' *ವಿಜಯನಗರ ಅಧ್ಯಯನ,* ಸಂ. 9. ಪುಟ 291 - 302.


೨೪. ಕುರುಗೋಡು ಪರಿಸರದ ವಿಜಯನಗರ ಕಾಲದ ಮೂರ್ತಿ ಶಿಲ್ಪ

ವೈ. ಹನುಮಂತರೆಡ್ಡಿ

ಕುರುಗೋಡು ಬಳ್ಳಾರಿಯಿಂದ ೩೦ ಕಿ.ಮೀ. ದೂರದಲ್ಲಿ ಬಳ್ಳಾರಿ - ಕಂಪ್ಲಿ ರಸ್ತೆಯಲ್ಲಿದೆ. ಹಂಪಿಯಿಂದ ಸುಮಾರು ೫೦ಕಿ.ಮೀ. ದೂರದಲ್ಲಿ ಪೂರ್ವದಿಕ್ಕಿನಲ್ಲಿದೆ. ಕುರುಗೋಡು ಮತ್ತು ಹಂಪಿ, ಐತಿಹಾಸಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಪರಸ್ಪರ ಸಂಬಂಧ ಹೊಂದಿವೆ. ಕುರುಗೋಡು ಕ್ರಿ.ಶ. ೯೫೦-೧೨೦೦ರವರೆಗೆ 'ಬಲ್ಲಕುಂದೆ ಮೂನ್ನೂರು ನಾಡಿನ' ರಾಜಧಾನಿಯಾಗಿದ್ದು, ಆ ಕಾಲದಲ್ಲಿ 'ಹಂಪೆ ಕುರುಗೋಡು ನಾಡಿಗೆ ಒಳಪಟ್ಟಿತ್ತು'. ಕ್ರಿ.ಶ. ೧೩೩೬ರಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ನಂತರ ಕುರುಗೋಡು ಪ್ರದೇಶ ಈ ಸಾಮ್ರಾಜ್ಯದಲ್ಲಿ ವಿಲೀನಗೊಂಡಿತ್ತು. ಕುರುಗೋಡು ವಿಜಯನಗರ ಸಾಮ್ರಾಜ್ಯಕ್ಕೆ ಒಳಪಟ್ಟಕಾಲದಲ್ಲಿ, ಕುರುಗೋಡಿನಲ್ಲಿ ವಿಜಯನಗರ ಶೈಲಿಯ ಕೆಲವು ದೇವಾಲಯಗಳು ಮತ್ತು ಮೂರ್ತಿ ಶಿಲ್ಪಗಳು ನಿರ್ಮಾಣಗೊಂಡಿವೆ. ಆದ್ದರಿಂದ ಕುರುಗೋಡಿನಲ್ಲಿರುವ ವಿಜಯನಗರ ಕಾಲದ ಬೃಹದಾಕಾರದ ಮೂರ್ತಿ ಶಿಲ್ಪಗಳ ಬಗ್ಗೆ ಇಲ್ಲಿ ಪ್ರಸ್ತುತಪಡಿಸಲಾಗಿದೆ.

1. ಶ್ರೀ ದೊಡ್ಡ ಬಸವೇಶ್ವರ (ನಂದಿ) ವಿಗ್ರಹ

ಕುರುಗೋಡಿನಲ್ಲಿ ಭವ್ಯವೂ, ವಿಶಾಲವೂ ಮತ್ತು ಪಶ್ಚಿಮಾಭಿಮುಖವಾಗಿ ಮಹಾ ದ್ವಾರವುಳ್ಳ ದೊಡ್ಡಬಸವೇಶ್ವರ ದೇವಾಲಯವಿದೆ. ಇದರ ಮಹಾದ್ವಾರದ ಮೇಲೆ ಐದು ತಲದ ಸುಮಾರು ೬೦ ಅಡಿ ಎತ್ತರದ ವಿಜಯನಗರ ಶೈಲಿಯ ಗೋಪುರವಿದೆ. ವಿಶಾಲವಾದ ಪ್ರಾಕಾರದ ಮಧ್ಯೆ ಈ ದೇವಾಲಯ ಎತ್ತರದ ಜಗತಿಯ ಮೇಲೆ ವಿಜಯನಗರ ಶೈಲಿಯಲ್ಲಿ ನಿರ್ಮಾಣಗೊಂಡಿದೆ. ಇದು ವಿಸ್ತಾರವಾದ ಸಭಾಮಂಟಪ ಚಿಕ್ಕದಾದ ಅಂತರಾಳ ಮತ್ತು ೩೫ ಅಡಿ ಉದ್ದ ೨೫ ಅಡಿ ಅಗಲದ ಗರ್ಭಗೃಹವನ್ನು ಹೊಂದಿದೆ. ಗರ್ಭಗೃಹದ ಮಧ್ಯದಲ್ಲಿ ಅಲ್ಲಿಯೇ ಪ್ರಾಕೃತಿಕವಾಗಿ ಇದ್ದ ದೊಡ್ಡ ಅಖಂಡ ಶಿಲೆಯಲ್ಲಿ ೧೪ ಅಡಿ ಎತ್ತರದ ಬೃಹದಾಕಾರದ ನಂದಿ ವಿಗ್ರಹವನ್ನು ಕುಳಿತ ಭಂಗಿಯಲ್ಲಿ ನಿರ್ಮಿಸಲಾಗಿದೆ. ಈ ದೇವಾಲಯದ ಪ್ರಮುಖ ಆಕರ್ಷಣೆ ಎಂದರೆ ಈ ಬೃಹದಾಕಾರದ ನಂದಿ ವಿಗ್ರಹ.



ಶ್ರೀ ದೊಡ್ಡ ಬಸವೇಶ್ವರನ ವಿಗ್ರಹ ಪಾದದಿಂದ ಕೋಡಿನ ವರೆಗೆ ೧೪ ಅಡಿ ಎತ್ತರವಿದೆ. ಕೋಡುಗಳ ಮಧ್ಯದಿಂದ ಬಾಲದ ಕೊನೆಯವರೆಗೆ ೧೯ ಅಡಿ ಉದ್ದವಿದ್ದು, ಒಂದು ಬದಿಯಿಂದ ಇನ್ನೊಂದು ಬದಿಗೆ ಮೈಯ ಅಳತೆ ೨೦ ಅಡಿ ಇದೆ. ಕೊರಳಿನ ಸುತ್ತಳತೆ ೧೮ ಅಡಿ ಇದ್ದು, ಈ ಮೂರ್ತಿಯ ಪೂರಾ ಸುತ್ತಳತೆ ೪೨ ಅಡಿ ಇದೆ. ಈ ಬಸವಣ್ಣನ ಮೂರ್ತಿ ಈ ರೀತಿ ಬೃಹದಾಕಾರವಾಗಿರುವುದರಿಂದ ಆಕಾರಕ್ಕೆ ತಕ್ಕಂತೆ ಇದನ್ನು 'ದೊಡ್ಡಬಸವೇಶ್ವರ'ನೆಂದು ಕರೆಯಲಾಗಿದೆ. ಆದರೆ ಈ ಮೂರ್ತಿಯ ಬೃಹದಾಕಾರದ ಅಳತೆಗೆ ತಕ್ಕಂತೆ ಕೋಡುಗಳು ಉದ್ದವಾಗಿಲ್ಲ. ಕೇವಲ ಒಂದು ಅಡಿ ಉದ್ದ ಇದ್ದು, ಮೊಂಡಾಗಿವೆ. ಈ ಮೂರ್ತಿಯ ಮೂತಿಯು ಕೂಡ ಸರಿಯಾದ ಪ್ರಮಾಣದಲ್ಲಿ ಇಲ್ಲ. ಮೂತಿಯ ಮುಂಭಾಗ ಮೊಂಡಾಗಿದ್ದು, ತುಟಿಗಳು ಇರುವ ಭಾಗ ಚಪ್ಪಟೆಯಾಗಿದೆ. ಈ ಮೂರ್ತಿಯ ಕೊರಳಿನಲ್ಲಿ ಕೊಂಡಿಗಳ ಜೋಡಣೆಯ ಒಂದು ಸರವಿದ್ದು

ಅದರ ಮುಂಭಾಗದಲ್ಲಿ ಒಂದು ದೊಡ್ಡ ಪದಕವಿದೆ. ಇದರ ಕೆಳಗಡೆ ದೊಡ್ಡ ಪದಕಗಳ ಜೋಡಣೆಯ ಸರದ ಅಲಂಕಾರದ ಕೆತ್ತನೆ ಇದೆ. ಆಕಾರಕ್ಕೆ ತಕ್ಕಂತೆ ದೊಡ್ಡ ಭುಜವಿದ್ದು, ಮೈಯ ಸುತ್ತಲೂ ಸರಳವಾದ ಆಭರಣದ ಅಲಂಕಾರ ವಿದೆ.

ಹಂಪೆಯ ಅಧಿದೇವತೆಯಾದ ಶ್ರೀ ಪಂಪಾಪತಿಯು (ಲಿಂಗ) ಪೂರ್ವಾಭಿಮುಖವಾಗಿದ್ದು, ಕುರುಗೋಡು ದೊಡ್ಡ ಬಸವೇಶ್ವರನ ಮೂರ್ತಿಯು ಪಶ್ಚಿಮಕ್ಕೆ ಪಂಪಾಪತಿಗೆ ಅಭಿಮುಖವಾಗಿದ್ದು, ಆತನಿಗೆ 'ಎದುರು ಬಸವಣ್ಣ' ಎಂಬುದಾಗಿ ಪ್ರತೀತಿ ಇದೆ. ದೊಡ್ಡ ಬಸವಣ್ಣನ ಮೂರ್ತಿಗೆ, ಗುಡಿಯ ಮುಂಭಾಗದಲ್ಲಿ ಒಂದು ದೀಪಸ್ತಂಭವಿದ್ದು, ಈ ಗುಡಿಯ ಹಿಂಭಾಗದಲ್ಲಿ ಮತ್ತೊಂದು ದೀಪಸ್ತಂಭವಿದೆ. ಹಿಂದಿರುವ ದೀಪಸ್ತಂಭವು ಪಂಪಾಪತಿ ದೇವರಿಗಾಗಿ ಸ್ಥಾಪಸಲಾಗಿದೆ ಎಂದು ಪರಿಗಣಿಸಲಾಗುತ್ತಿದೆ. ಈ ದೇವಾಲಯದ ಪೌಳಿಯ ಎಡಭಾಗದಲ್ಲಿರುವ ಗುಂಡಿನ ಮೇಲಿರುವ ಕ್ರಿ.ಶ. ೧೫೨೮ರ ಶಾಸನದಲ್ಲಿ, ವಿಜಯನಗರ ಸಾಮ್ರಾಟ ಕೃಷ್ಣ ದೇವರಾಯರಿಗೆ ಪುಣ್ಯವಾಗಬೇಕೆಂದು ದೊಡ್ಡ ಬಸವಣ್ಣದೇವರ ಅಮೃತ ಪಡಿಗೆ ಹೊಲ - ಗದ್ದೆಯನ್ನು ಬಾಗಿಲ ಕೃಷ್ಣಪ್ಪ ನಾಯಕರು ದಾನಕೊಟ್ಟ ವಿಷಯ ತಿಳಿಸುತ್ತದೆ. ಹೀಗೆ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ನಿರ್ಮಿಲ್ಪಟ್ಟು ಆ ಅರಸರಿಂದಲೆ ದಾನದತ್ತಿಯನ್ನು ಪಡೆದಿರುವ ಬೃಹದಾಕಾರದ ಬಸವಣ್ಣನ ಮೂರ್ತಿ ಈ ಪ್ರದೇಶದಲ್ಲಿ ತುಂಬಾ ಪ್ರಸಿದ್ಧವಾಗಿದೆ. ಪ್ರತಿ ವರ್ಷ ಫಾಲ್ಗುಣ ಶುದ್ಧ ಪೌರ್ಣಮಿಯಂದು ಈ ದೇವರ ರಥೋತ್ಸವ ಬಹಳ ವಿಜೃಂಭಣೆಯಿಂದ ಜರುಗುತ್ತದೆ.

2. ಮಹಾಗಣೇಶ ಮೂರ್ತಿ

ಕುರುಗೋಡು ಪಟ್ಟಣದ ಕೆಳಗಿನ ಪೇಟೆಯಲ್ಲಿ ಬೃಹದಾಕಾರದ ಗಣಪತಿ ಮೂರ್ತಿ ಇದೆ. ಅಲ್ಲಿಯೇ ಪ್ರಾಕೃತಿಕವಾಗಿ ಇರುವ, ೨೪ ಅಡಿ ಎತ್ತರದ ಒಂದು ದೊಡ್ಡ ಗುಂಡಿನ ಮುಂಭಾಗದಲ್ಲಿ ಈ ಗಣಪತಿ ಮೂರ್ತಿಯನ್ನು ಕೆತ್ತಲಾಗಿದೆ. ಇದು ಪೂರ್ವಾಭಿಮುಖವಾಗಿ ಇದ್ದು, ಕಾಲುಗಳನ್ನು ಮಡಿಚಿಕೊಂಡು ಕುಳಿತ ಭಂಗಿಯಲ್ಲಿದೆ. ಈ ಮೂರ್ತಿಯು ಪಾದದಿಂದ ತಲೆಯವರೆಗೆ ೨೦ ಅಡಿ ಎತ್ತರವಿದ್ದು, ಇದರ ಗಾತ್ರಕ್ಕೆ ಅನುಗುಣವಾಗಿ ಪ್ರಮಾಣಬದ್ಧವಾಗಿ ಅವಯವಗಳು ಇವೆ. ಮೂರ್ತಿಯನ್ನು ಕಂಡರಿಸಿರುವ ಏಕ ಶಿಲಾ ಗುಂಡಿನ ಸುತ್ತಳತೆ ೬೭ ಅಡಿ ಇದೆ. ತಲೆಯ ಮೇಲೆ ಸರಳ ಆಕಾರದ ಕೀರಿಟವಿದೆ. ಈ ಮೂರ್ತಿಗೆ ೪ ಕೈಗಳಿದ್ದು, ಬಲದ ಮೇಲಿನ ಕೈಯಲ್ಲಿ ಪರಶು (ಕೊಡಲಿ)ವನ್ನು ಹಿಡಿದಿದ್ದು, ಕೆಳಗಿನ ಕೈಯಲ್ಲಿ ಬಲದ ಕೋರೆಯ ಹಲ್ಲನ್ನು ಮುರಿದು ಹಿಡಿದುಕೊಂಡಿದ್ದಾನೆ. ಎಡದ ಮೇಲಿನ ಕೈಯಲ್ಲಿ ಅಂಕುಶವಿದ್ದು, ಕೆಳಗಿನ ಕೈಯಲ್ಲಿ ಲಾಡು ತುಂಬಿದ ತಟ್ಟೆಯನ್ನು ಹಿಡಿದಿದ್ದು, ಅವುಗಳನ್ನು ಸೊಂಡಲಿನಿಂದ ತಿನ್ನುತ್ತಿರುವಂತೆ ರಚಿಸಲಾಗಿದೆ. ಈತನಿಗೆ

ದೊಡ್ಡ ಗಾತ್ರದ ಹೊಟ್ಟೆಇದ್ದು, ಅದಕ್ಕೆ ಸರ್ಪವನ್ನು ಸುತ್ತಲಾಗಿದೆ. ನೋಡಲು ಸುಂದರ ಮತ್ತು ಅದ್ಭುತವಾಗಿದೆ. ಇದು ಕೂಡ ವಿಜಯನಗರ ಕಾಲದ ರಚನೆ. ಹಂಪಿಯಲ್ಲಿರುವ 'ಕಡಲೆಕಾಳು ಗಣಪ'ನನ್ನು ಹೊರತುಪಡಿಸಿ. ಇಂತಹ ಬೃಹತ್ ಗಾತ್ರದ ಏಕಶಿಲಾ ಗಣಪತಿ ಮೂರ್ತಿಯು ಈ ನಾಡಿನಲ್ಲಿ ಬೇರೊಂದಿಲ್ಲ. ಇದು ಬಯಲಿನಲ್ಲಿಯೇ ಇದ್ದು, ಬಿಸಿಲು ಮತ್ತು ಮಳೆ ಯಿಂದ ಹಾಳಾಗುತ್ತಿವೆ.

3. ದೊಡ್ಡಗಣೇಶನ ಮೂರ್ತಿ

ಕುರುಗೋಡಿನಲ್ಲಿ ಇನ್ನೊಂದು ಏಕಶಿಲಾ ಗಣಪತಿಯ ಬೃಹದಾಕಾರದ ಮೂರ್ತಿಯೂ ಇದೆ. ಕುರುಗೋಡು ಪಟ್ಟಣದ ಪಶ್ಚಿಮ ದಿಕ್ಕಿನಲ್ಲಿರುವ ಕೋಳಿಗುಡ್ಡದ ಮುಂಭಾಗದ ಹೊಲದಲ್ಲಿ ಪ್ರಾಕೃತಿಕವಾಗಿರುವ ೧೨ ಅಡಿ ಎತ್ತರದ ಒಂದು ಏಕ ಶಿಲಾ ಗುಂಡಿಗೆ ಹತ್ತು ಅಡಿ ಎತ್ತರದ ದೊಡ್ಡದಾದ ಗಣೇಶನ ಮೂರ್ತಿಯನ್ನು ಕಂಡರಿಸ ಲಾಗಿದೆ. ಈ ಮೂರ್ತಿಯು ಪೂರ್ವಾಭಿಮುಖವಾಗಿದ್ದು, ಕಾಲುಗಳನ್ನು ಮಡಿಚಿ ಕುಳಿತ ಭಂಗಿಯಲ್ಲಿದೆ. ತಲೆಯ ಮೇಲೆ ದುಂಡಾದ ಕಿರೀಟ ಧರಿಸಿದ್ದು, ನಾಲ್ಕು ಹಸ್ತಗಳನ್ನು ಹೊಂದಿದೆ. ಬಲಗಡೆ ಮೇಲಿನ ಹಸ್ತದಲ್ಲಿ ಪರಶು (ಕೊಡಲಿ)ವನ್ನು ಹಿಡಿದಿದ್ದು, ಎಡದ ಮೇಲಿನ ಕೈಯಲ್ಲಿ ಅಂಕುಶವಿದೆ. ಎಡದ ಕೆಳಗಿನ ಕೈಯಲ್ಲಿ ಹಣ್ಣಿನ ಅಥವಾ ಲಾಡಿನ ಪುಟ್ಟಿ ಇದ್ದು, ಸೊಂಡಿಲಿನಿಂದ ತಿನ್ನುತ್ತಿರುವಂತೆ ಕಾಣುತ್ತಿದೆ. ಬಲದ ಮುಂಗೈ ಅಭಯ ಹಸ್ತ ಅಥವಾ ವರದ ಹಸ್ತ ಇರಬಹುದು. ಆದರೆ ಅದು ತುಂಡಾಗಿರುವುದರಿಂದ ಅದನ್ನು ಸರಿಯಾಗಿ ಗುರ್ತಿಸಲು ಆಗುವುದಿಲ್ಲ. ಈ ಮೂರ್ತಿಗೆ ದೊಡ್ಡ ಹೊಟ್ಟೆಯೂ ಇದ್ದು, ದುಷ್ಕರ್ಮಿಗಳು ಅದನ್ನು ಹೊಡೆದು ಹಾಕಿದ್ದಾರೆ. ಈ ಮೂರ್ತಿಯ ಕೊರಳಿನಲ್ಲಿ ಅಗಲವಾದ ಕಂಠಿ ಸರ ಧರಿಸಿದ್ದು, ಭುಜಗಳು ಕೂಡ ಆಭರಣಗಳಿಂದ ಅಲಂಕೃತವಾಗಿವೆ.

ಇದು ಹಂಪೆಯ ಕಡಲೆಕಾಳು ಗಣಪನಿಗಿಂತ ದೊಡ್ಡದಾಗಿದ್ದು, ಕಲಾತ್ಮಕವಾಗಿದೆ. ಆದರೆ ಇದಕ್ಕೆ ಗುಡಿ ಅಥವಾ ಮಂಟಪ ಯಾವುದೂ ಇಲ್ಲದೆ, ನೂರಾರು ವರ್ಷಗಳಿಂದ ಮಳೆ ಬಿಸಿಲಿನಲ್ಲಿ ನಶಿಸುತ್ತಾ ಇದೆ. ಅಲ್ಲದೆ ಕಲೆಯ ಬೆಲೆಯನ್ನು ಅರಿಯದ ದುಷ್ಟರು ಈ ಮೂರ್ತಿಯ ಹೊಟ್ಟೆ ಮತ್ತು ಕೈಯನ್ನು ಒಡೆದು ಹಾಕಿ ವಿರೂಪಗೊಳಿಸಿದ್ದಾರೆ.

ಮೇಲೆ ತಿಳಿಸಿದಂತೆ ಕುರುಗೋಡು ಮತ್ತು ಹಂಪೆ ಕ್ಷೇತ್ರಕ್ಕೆ ಪರಸ್ಪರ ಐತಿಹಾಸಿಕ, ಸಾಂಸ್ಕೃತಿಕ ಸಂಬಂಧವಿದ್ದು, ವಿಜಯನಗರ ಸ್ಥಾಪನೆಗಿಂತ ಮುಂಚಿನಿಂದ ಮತ್ತು ಅದರ ಪತನದ ನಂತರವೂ ಬೆಳೆದು ಬಂದಿದೆ. ವಿಜಯನಗರದ ವಿಸ್ತಾರ, ಘನತೆ, ಗೌರವ ಮತ್ತು ಪ್ರತಿಷ್ಠೆಗಳಿಗನುಗುಣವಾಗಿ ಅಖಂಡವಾದ ಬಂಡೆಗಳಲ್ಲಿ ಸುಂದರ ಶಿಲ್ಪಗಳನ್ನು ಕಂಡರಿಸುವ ಸಂಪ್ರದಾಯ ಹಂಪೆಯಿಂದ ಹತ್ತಿರದ ಕುರುಗೋಡಿಗೂ ವ್ಯಾಪಿಸಿದೆ. ತತ್ಫಲವಾಗಿ ಕುರುಗೋಡಿನಲ್ಲಿ ಬೃಹದಾಕಾರದ ದೊಡ್ಡಬಸವೇಶ್ವರ ಮತ್ತು ಗಣೇಶನ

ಮೂರ್ತಿಗಳು ನಿರ್ಮಾಣವಾದವು. ಕುರುಗೋಡಿನ ಮಹಾಜನರು ಹಂಪೆಯ ವಿರೂಪಾಕ್ಷನಿಗೆ ದಾನದತ್ತಿಗಳನ್ನು ನೀಡಿದ್ದು, ಅದೇ ರೀತಿಯಲ್ಲಿ ವಿಜಯನಗರದ ಅರಸರು, ಅವರ ಸಾಮಂತರು ಕುರುಗೋಡಿನ ಸಂಗಮೇಶ್ವರ ದೊಡ್ಡಬಸವೇಶ್ವರ ದೇವಸ್ಥಾನಗಳಿಗೆ ಗ್ರಾಮ, ಭೂಮಿ, ದಾನದತ್ತಿ ಬಿಟ್ಟಿದ್ದಾರೆ. ಹೀಗೆ ಹಂಪೆಯಿಂದ ಕುರುಗೋಡಿನ ವರೆಗಿನ ಪ್ರದೇಶವು 'ದಕ್ಷಿಣಕಾಶಿ' ಎಂದು ಕರೆಯಲ್ಪಡುತ್ತಿದೆ.

೨೫. ವಿಜಯನಗರ ಕಾಲದ ತಡಿಗುಡಿಯ ವಾಸ್ತುಶಿಲ್ಪ ವಿಶ್ಲೇಷಣೆ

ರಾಕೇಶ. ಬಿ.ಸಿ., ಡಾ.ಸಿ.ಎನ್. ಕೋಳಿಗುಡ್ಡೆ

ತಡಿಗುಡಿಯು ಸದಲಗಾ ಗ್ರಾಮದಲ್ಲಿ ಇದ್ದು, ಈ ಗ್ರಾಮವು ಚಿಕ್ಕೋಡಿ ತಾಲ್ಲೂಕ ಬೆಳಗಾಂವ ಜಿಲ್ಲೆಯಲ್ಲಿ ಕಂಡುಬರುತ್ತದೆ. ಈ ಗುಡಿಯಲ್ಲಿ ಯಾವುದೇ ಮೂರ್ತಿ ಯಿಲ್ಲ ಮತ್ತು ಪೂಜೆಯು ನಡೆಯುತ್ತಿಲ್ಲ. ಈ ಗುಡಿಯು ದಕ್ಷಿಣಾಭಿಮುಖವಾಗಿದ್ದು, ಊರಿನ ಕಡೆಗೆ ಮುಖಮಾಡಿದೆ. ಅಲ್ಲದೆ ಇದು ದೂದ್ ಗಂಗಾ ನದಿ ದಂಡೆಯ ಮೇಲೆ ಪಶ್ಚಿಮಕ್ಕೆ ಕಂಡುಬರುತ್ತದೆ. ಸದಲಗಾ ಗ್ರಾಮವು ಚಿಕ್ಕೋಡಿಯಿಂದ ೨೮ ಕಿ.ಮೀ.ದೂರವಿದ್ದು, ಇದು ಬೋರಗಾಂವಗೆ ಹೋಗುವ ದಾರಿಯಲ್ಲಿ ಕಂಡು ಬರುತ್ತದೆ. ದಾರಿಯ ಬಲಗಡೆಗೆ ಊರು ಇದ್ದು ಎಡಗಡೆಗೆ ಈ ಗುಡಿಯು ಕಂಡು ಬರುತ್ತದೆ. ಇದರ ಶೈಲಿಯನ್ನು ಗಮನಿಸಿದಾಗ ಇದು ವಿಜಯನಗರ ಕಾಲದಲ್ಲಿ ಸ್ಥಾಪಿಸಿದ್ದರಬಹುದು ಎಂದು ಹೇಳಬಹುದು. ಈ ಕಟ್ಟಡ ಸ್ವಲ್ಪ ಭಾಗವು ಬಿದ್ದು ಹೋಗಿದೆ. ಅಲ್ಲದೆ ಈ ಕಟ್ಟಡವು ಗರ್ಭಗೃಹ, ಕಕ್ಷಾಸನ, ಅಧಿಷ್ಠಾನ ಶಿಖರ ಭಾಗಳನ್ನು ಒಳಗೊಂಡಿದೆ. ಈ ಕಟ್ಟಡವು ಜೀರ್ಣೋದ್ಧಾರವಾಗಬೇಕಾಗಿದೆ. ಈ ಊರಿನಲ್ಲಿ ವಿಠ್ಠಲ, ದತ್ತ, ಬನಶಂಕರಿ, ಮಹಾ ದೇವ ಮತ್ತು ಮಾರುತಿ ದೇವಾಲಯಗಳನ್ನು ಕಾಣಬಹುದು.

ದಕ್ಷಿಣ ಭಾರತವನ್ನು ಆಳಿದ ಪ್ರಮುಖ ಸಾಮ್ರಾಜ್ಯವಾದ ವಿಜಯನಗರದ ಅರಸರು ರಾಜ್ಯವನ್ನು ವಿಸ್ತರಿಸಿದ್ದೆ ಅಲ್ಲದೆ, ಆರ್ಥಿಕ, ಸಾಮಾಜಿಕ, ಧಾರ್ಮಿಕ ವಿಷಯಕ್ಕೆ ಸಂಬಂಧಿಸಿದಂತೆ ವಿಶೇಷವಾದ ಗಮನವನ್ನು ನೀಡಿದ್ದಾರೆ. ಅದೇ ರೀತಿಯಾಗಿ ವಿಜಯನಗರ ಅರಸರು ಕಲೆ ಮತ್ತು ವಾಸ್ತುಶಿಲ್ಪಕ್ಕೆ ತಮ್ಮದೆ ಆದ ಕೊಡುಗೆಯನ್ನು ನೀಡಿದ್ದಾರೆ. ದೇವಾಲಯ ಮತ್ತು ಕಟ್ಟಡ ನಿರ್ಮಾಣದಲ್ಲಿ ವಿಜಯನಗರ ಅರಸರು ವಿಶೇಷ ಕಾಳಜಿಯನ್ನು ವಹಿಸಿದ್ದಾರೆ. ಆ ಕಟ್ಟಡಗಳ ಸಾಲಿನಲ್ಲಿ ಈ ಕಟ್ಟಡವು ಒಂದು ಸೇರ್ಪಡೆಯಾಗಿದೆ. ಇದರ ವಾಸ್ತುಶಿಲ್ಪವನ್ನು ಗಮನಿಸಿದಾಗ ಎಲ್ಲಾ ಲಕ್ಷಣಗಳು ವಿಜಯನಗರ ವಾಸ್ತು ಶಿಲ್ಪಕ್ಕೆ ಸಾಮ್ಯತೆಯನ್ನು ಹೊಂದಿದೆ.

ಈ ಗುಡಿಯನ್ನು ಸ್ಥಳೀಯ ನಾಯಕನ ನೆನಪಿಗಾಗಿ ಕಟ್ಟಿರಬಹುದು. ಈ ನಾಯಕನು ವಿಜಯನಗರ ಕಾಲಕ್ಕೆ ಸಂಬಂಧಿಸಿದ ನಾಯಕನಾಗಿರಬೇಕು ಇಲ್ಲವೆ ಸೇನಾ ನಾಯಕ ನಾಗಿರಬೇಕು. ಅವನ ನೆನಪಿಗಾಗಿ ಈ ಗುಡಿಯನ್ನು ನಿರ್ಮಿಸಿರಬಹುದೆಂದು ಹೇಳಬಹುದು.

ಗರ್ಭಗೃಹ

ಗರ್ಭಗೃಹವು ಚೌಕಾಕಾರವಾಗಿದ್ದು ಸುಮಾರು ೧೦ x ೧೦ ಅಡಿ ಅಳತೆಯನ್ನು ಹೊಂದಿದೆ. ಇದರಲ್ಲಿ ಉದ್ದವಾದ ಪೀಠವಿದ್ದು, ಇದರ ಮೇಲೆ ಯಾವುದೆ ಆಕಾರ ವಿರುವುದಿಲ್ಲ. ಇದು ಸಮಾಧಿ ಆಕಾರವನ್ನು ಹೋಲುತ್ತದೆ. ಗರ್ಭಗೃಹದ ಭಿತ್ತಿಯು ಸಾದಾ ಇದ್ದು ಇದರ ಭುವನೇಶ್ವರಿಯಲ್ಲಿ ಅರಳಿದ ಕಮಲದ ಹೂವು ಕಂಡು ಬರುತ್ತದೆ.

ಗರ್ಭಗೃಹದ ದ್ವಾರ

ಗರ್ಭಗೃಹ ದ್ವಾರವು ಮೂರು ಶಾಖೆಗಳನ್ನು ಹೊಂದಿದ್ದು, ಮೊದಲೆರಡು ಶಾಖೆಗಳೂ ಸಾದಾ ಇದ್ದು, ಮೂರನೆಯ ಶಾಖೆಯು ಸ್ಥಂಭಿಕಾ ಅಂದರೆ ಅರ್ಧಭಾಗವು ಗೋಡೆಯಲ್ಲಿದ್ದು ಉಳಿದ ಅರ್ಧ ಭಾಗವು ಗೋಡೆಯ ಹೊರಗಡೆ ಕಂಡು ಬರುತ್ತದೆ. ಲಲಾಟದಲ್ಲಿ ಯಾವುದೇ ಬಿಂಬ ಅಥವಾ ಮೂರ್ತಿಯು ಕಂಡು ಬರುವುದಿಲ್ಲ. ದ್ವಾರದ ಎಡ ಮತ್ತು ಬಲಗಡೆಗೆ ದ್ವಾರಪಾಲಕರನ್ನು ಕೆತ್ತಲಾಗಿದೆ. ಈ ದ್ವಾರಪಾಲಕರು ಉಬ್ಬು ಶಿಲ್ಪಗಳಾಗಿದ್ದು, ನೋಡಲು ಸುಂದರವಾಗಿವೆ. ಗರ್ಭಗೃಹದ ಹೊರ ಗೋಡೆಯು ಸಾದಾ ಇದ್ದು ಯಾವುದೇ ಶಿಲ್ಪವು ಕಂಡು ಬರುವುದಿಲ್ಲ. ಮೂಲೆಯಲ್ಲಿ ನಾಲ್ಕು ಕಂಬಗಳು ಕಂಡು ಬರುತ್ತವೆ.

ಕಕ್ಷಾಸನ

ಇದು ಒಳಗಡೆ ಸಾದಾ ಇದ್ದು ಇದರ ಮೇಲೆ ಕಂಬಗಳನ್ನು ನಿಲ್ಲಿಸಲಾಗಿದೆ. ಕಕ್ಷಾಸನ ಮತ್ತು ಗರ್ಭಗೃಹದ ನಡುವೆ ಅಂತರವಿದ್ದು ಓಡಾಡುವುದಕ್ಕೆ ಜಾಗವನ್ನು ಬಿಡಲಾಗಿದೆ. ಕಕ್ಷಾಸನದ ಒಳಭಾಗದಲ್ಲಿ ಕೂತುಕೊಳ್ಳಲು ವ್ಯವಸ್ಥೆ ಮಾಡಲಾಗಿದೆ. ಕಕ್ಷಾಸನವು ಕಂಬಗಳಿಂದ ಸುತ್ತುವರಿದಿದೆ. ಕಕ್ಷಾಸನಕ್ಕೆ ಹೊಂದಿಕೊಂಡಂತೆ ಮುಖ ಮಂಟಪವನ್ನು ನಿರ್ಮಿಸಲಾಗಿದೆ. ಕಕ್ಷಾಸನ ಹೊರಭಾಗವು ಅಧಿಷ್ಠಾನಕ್ಕೆ ಹೊಂದಿ ಕೊಂಡಂತೆ ನಿರ್ಮಿಸಲಾಗಿದೆ. ಇದರ ಭಿತ್ತಿಯು ಮೇಲೆ ಆಲಂಕಾರಿಕ ಚಿತ್ರಗಳಿಂದ ಕೂಡಿದ್ದು, ನೋಡಲು ಸುಂದರವಾಗಿದೆ. ಈ ಚಿತ್ರಗಳು ಕಲ್ಲಿನ ಮೇಲೆ ಕೆತ್ತಿದ ಉಬ್ಬು ಶಿಲ್ಪಗಳಾಗಿದ್ದು ಒಂದನ್ನೊಂದು ಬೇರ್ಪಡಿಸಲಾಗಿದೆ. ಇವುಗಳಲ್ಲಿ ಆನೆಯ ಸವಾರರು, ಆನೆ ಪಳಗಿಸುವ ದೃಶ್ಯ, ಈಟಿಯನ್ನು ಹಿಡಿದ ಯೋಧ, ಪುರುಷ ಸಿಂಹ, ಕುದುರೆಯ ಮೇಲೆ ಸವಾರಿ ಮಾಡುವ ದೃಶ್ಯ, ಮಂಗಗಳ ಚಿತ್ರಗಳು ಜೋಡಿ ರಾಜಹಂಸಗಳು ಮಧ್ಯದಲ್ಲಿರುವ ಕಮಲದ ಹೂವನ್ನು ಹಿಂದಕ್ಕೆ ತಿರುಗಿ ನೋಡುವ ಹಾಗೇ ಕೆತ್ತಲಾ ಗಿದೆ. ರಾಜಹಂಸವು ನಡೆಯುವ ದೃಶ್ಯ, ಮನುಷ್ಯ ಮುಖ, ಪ್ರಾಣಿ ದೇಹವನ್ನು ಹೊಂದಿದ ಶಿಲ್ಪಗಳು ಮತ್ತು ಸಾಮಾಜಿಕ ಜೀವನಕ್ಕೆ ಸಂಬಂಧಿಸಿದ ಚಿತ್ರಗಳು ಅಂದರೆ ಪಲ್ಲಕ್ಕಿಯಲ್ಲಿ ಹೊತ್ತುಕೊಂಡು ಹೋಗುವ ದೃಶ್ಯ, ದಂಪತಿಗಳ ದೃಶ್ಯ, ಇತ್ಯಾದಿ ಗಳನ್ನು ಒಳಗೊಂಡಿದೆ. ಈ ಚಿತ್ರಗಳ ಮೇಲಿನ ಭಾಗವು ಸ್ವಲ್ಪ ಹೊರಚಾಚಿದ ರೀತಿಯಲ್ಲಿ ಕಂಡು ಬರುತ್ತದೆ.

ಕಂಬಗಳು

ಕಂಬಗಳು ಕಕ್ಷಾಸನಗಳ ಮೇಲೆ ನಿಲ್ಲಲ್ಪಟ್ಟಿದ್ದು, ಮುಂಭಾಗದಲ್ಲಿ ಆರು ಕಂಬಗಳು ಹಿಂಭಾಗದಲ್ಲಿ ಆರು ಕಂಬಗಳು ಎರಡು ಮಗ್ಗುಲಲ್ಲಿ ಎಂಟು ಕಂಬಗಳನ್ನು ಹೊಂದಿದೆ. ಮುಂಭಾಗದ ಎರಡು ಕಂಬಗಳು ಹೆಚ್ಚು ಅಲಂಕೃತವಾಗಿದ್ದು, ಮೊದಲು ಆಯತಾ ಅದರ ಮೇಲೆ ಪಟ್ಟಿಕೆ, ಅಷ್ಟಕೋನ ಇದರಲ್ಲಿ ಅಲಂಕೃತ ಚಿತ್ರಗಳು, ಅದರ ಮೆಲೆ ವೃತ್ತಾಕಾರ, ಅಷ್ಟಕೋನ, ಇದರಲ್ಲಿ ಅಲಂಕೃತ ಚಿತ್ರಗಳು ಅದರ ಮೇಲೆ ವೃತ್ತಾಕಾರದಲ್ಲಿ ತೋರಣದ ಚಿತ್ರಗಳು, ಅದರ ಮೇಲೆ ಘಟ ಅದರ ಮೇಲೆ ಸಾದಾ ಭೋದಿಗೆಯನ್ನು ಹೊಂದಿದೆ. ಹೀಗೆ ಎರಡು ಕಂಬಗಳು ಹೆಚ್ಚು ಅಲಂಕೃತ ವಾಗಿವೆ. ಎರಡನೆ ಪ್ರಕಾರದ ಕಂಬಗಳು ಕಕ್ಷಾಸನದ ಮೇಲೆ ಇದ್ದು ಇವು ಸರಳವಾಗಿದ್ದು ಆಯಾತ, ಅಷ್ಟಕೋನ, ಚಚ್ಚೌಕ, ವೃತ್ತಾಕಾರ, ಘಟ, ಬೋಧಿಗೆಗಳನ್ನು ಹೊಂದಿವೆ. ಮೂರನೆ ಪ್ರಕಾರದ ಕಂಬಗಳು ಹದಿನಾರು ಇದ್ದು, ಇವುಗಳು ಆಯತ, ದುಂಡಾಕೃತಿ, ಚಚ್ಚೌಕ, ವೃತ್ತಾಕಾರ (ಮೇಲೆ ಹೊಂದಂತೆ ಕಿರಿದಾಗುತ್ತಾ) ಘಟಾ, ಭೋಧಿಗೆಯನ್ನು ಹೊಂದಿವೆ.

ಭುವನೇಶ್ವರಿ

ಭುವನೇಶ್ವರಿಯು ಸರಳವಾಗಿದ್ದು ಕಂಬಗಳಿಗೆ ಹೊಂದಿಕೊಂಡಂತೆ ಸ್ವಲ್ಪ ಭಾಗ ಹೊರಚಾಚಿದೆ. ಭುವನೇಶ್ವರಿಯಲ್ಲಿ ಯಾವುದೇ ಚಿತ್ರಗಳು ಕಂಡುಬರುವುದಿಲ್ಲ. ಭುವನೇಶ್ವರಿಯು ಇಳಿಜಾರಾಗಿ ಕಂಡುಬರುತ್ತದೆ. ಇದರ ಹಿಂದಿನ ಭಾಗವು ಸ್ವಲ್ಪ ಬಿದ್ದು ಹೋಗಿದೆ.

ಶಿಖರ

ಶಿಖರವು ಗರ್ಭಗುಡಿಯ ಮೇಲೆ ಕಂಡು ಬರುತ್ತದೆ. ಇದು ಕದಂಬ ನಾಗರ ಶೈಲಿಯಲ್ಲಿದ್ದು, ಐದು ಭೂಮಿಗಳನ್ನು ಹೊಂದಿದೆ. ಇದರ ಮೇಲಿನ ಭಾಗವು ಬಿದ್ದುಹೋಗಿದೆ.

ಅಧಿಷ್ಠಾನ

ಈ ಗುಡಿಯ ಅಧಿಷ್ಠಾನವು ಸರಳವಾಗಿದ್ದು, ಅದು ಮೂರು ಭಾಗಗಳನ್ನು ಹೊಂದಿದೆ. ಉಪಾನ, ಪದ್ಮ, ಕುಮುದಗಳನ್ನು ಇಲ್ಲಿ ನೋಡಬಹುದು.

ಉಪಾನವು ಗುಡಿಯ ಅಧಿಷ್ಠಾನಕ್ಕೆ ಅಧಾರವಾಗಿರುವ ಮೊದಲ ಅಂಗ. ಹೆಚ್ಚು ಎತ್ತರವಿಲ್ಲದ ಈ ಭಾಗವು ಆಯತಾಕಾರವನ್ನು ಹೊಂದಿದೆ. ಇದು ಎಲ್ಲಾ ಭಾಗಗಳಿಗಿಂತ ಹೊರಚಾಚಿದೆ. ಎರಡನೆ ಭಾಗವಾದ ಪದ್ಮವು ಮೇಲಿನ ಭಾವು ಉಬ್ಬಿದಂತೆಯು ಕೆಳಭಾವು ಹೊರಚಾಚಿದಂತೆಯು ಕಂಡುಬರುತ್ತದೆ. ಮೂರನೇ ಭಾಗವಾದ ಕುಮುದವು ಮೂರು ಭಾಗಗಳನ್ನು ಹೊಂದಿದ್ದು ತ್ರಿಪಟ್ಟ ಕುಮುದವಾಗಿದೆ. ಇದು ಸರಳವಾಗಿದ್ದು,

ಇದರ ಮೇಲೆ ಯಾವುದೇ ಅಲಂಕೃತ ಚಿತ್ರಗಳು ಕಂಡುಬರುವುದಿಲ್ಲ. ಇದರ ಮೇಲಿನ ಭಾಗವಾದ ಕಕ್ಷಾಸನದ ಬಿತ್ತಿಯಲ್ಲಿ ಅಲಂಕೃತ ಚಿತ್ರಗಳು ಕಂಡುಬರುತ್ತದೆ.

ಈ ಗುಡಿಯಲ್ಲಿ ಯಾವುದೇ ಶಾಸನಗಳು ಕಂಡುಬರುವುದಿಲ್ಲ. ಇದರ ವಾಸ್ತುಶಿಲ್ಪ ಶೈಲಿಯನ್ನು ಗಮನದಲ್ಲಿಟ್ಟುಕೊಂಡು ವಿಜಯನಗರ ಕಾಲಕ್ಕೆ ಸೇರಿರಬಹುದೆಂದು ಹೇಳಬಹುದು.

ಈ ಗುಡಿಯ ಸ್ಥಿತಿಯು ತುಂಬಾ ಹಾಳಾಗಿದೆ. ಇದರ ಹಿಂದಿನ ಭಾಗವು ಬಿದ್ದು ಹೋಗಿದ್ದು, ಇದರ ಮೇಲೆ ಗಿಡಗಂಟೆಗಳು ಬೆಳೆದಿದ್ದು ಸ್ಥಳೀಯರು ಕಟ್ಟಿಗೆಯನ್ನಿಡಲು ಬಳಸುತ್ತಿದ್ದಾರೆ. ಇದರ ಜೀರ್ಣೋದ್ಧಾರವಾಗದಿದ್ದರೆ ಮುಂದಿನ ದಿನಗಳಲ್ಲಿ ಕಣ್ಮರೆಯಾಗುವ ಸಾಧ್ಯತೆಗಳಿವೆ.

ಗ್ರಂಥ ಋಣ

1. ಸೂರ್ಯನಾಥ ಕಾಮತ್, ಬೆಳಗಾಂ ಡಿಸ್ಟ್ರಿಕ್ಟ್ ಗೆಝೆಟಿಯರ್, 1987, ಬೆಂಗಳೂರು
2. ಮೋಹನ ದೊಡ್ಡಮನಿ, ಚಿಕ್ಕೋಡಿ ತಾಲೂಕಾ ದರ್ಶಿನಿ, 1987, ಬೆಂಗಳೂರು
3. ಸಿ.ಎನ್. ಕೋಳಿಗುಡ್ಡೆ, ಆರ್ಕ್ಯಾಲೋಜಿ ಆಫ್ ಚಿಕ್ಕೋಡಿ ಆಂಡ್ ಗೋಕಾಕ್ ತಾಲೂಕ್ಸ್, ಅಪ್ರಕಟಿತ ಸಂಶೋಧನಾ ಮಹಾಪ್ರಬಂಧ, 2005, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೬. ವಿಜಯನಗರ - ಮುಕ್ತಾವಲೋಕನ

ತಿರುಮಲೈ ಶ್ರೀರಂಗಾಚಾರ್ಯ

ವಿಜಯನಗರ ಸಾಮ್ರಾಜ್ಯ ಕುರಿತು ಯಾವುದೇ ವಿಚಾರವನ್ನು ಕುರಿತು, ಅದು ಸಾಮಾಜಿಕ ಜೀವನ, ಭಾಷೆ, ಸಾಹಿತ್ಯ, ಕಲೆ ಇವನ್ನು ಕುರಿತದ್ದಾಗಿರಲಿ; ವಾಸ್ತು, ಶಿಲ್ಪ, ಚಿತ್ರಕಲೆ, ಇತ್ಯಾದಿ ನಿರ್ಮಾಣ ಚಟುವಟಿಕೆಗಳೇ ಆಗಿರಲಿ, ವ್ಯಾಪಾರ - ವ್ಯವಹಾರಗಳೇ ಆಗಿರಲಿ; ಎಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ಕುತೂಹಲ ಕೆರಳಿಸುವಂತಹ, ಪ್ರಭಾವವನ್ನುಂಟು ಮಾಡುತ್ತವೆ. ಅದರ ಹುಟ್ಟಿನ ಬಗೆಗಿನ ವಿಚಾರವೇ ಬಿಡಿಸಲಾಗದ ಗಂಟು. ಈ ಸಾಮ್ರಾಜ್ಯ ಸಾಹಸಿಗರ ಸಾಧನೆಯೇ, ಸನಾತನಧರ್ಮದ ಸನ್ಯಾಸಿಗಳಿಂದ ಪ್ರೇರಿತವೇ, ಸ್ವಪ್ರೇರಿತವೇ, ಇಲ್ಲವೇ ಪರಿಸ್ಥಿತಿಯ ಪರಿಣಾಮದ ಉಪಯೋಗ ಪಡೆದ ಸಮಯಸಾಧಕರ ಸಾಧನೆಯೇ?- ಈ ಎಲ್ಲ ವಾದಗಳೂ ಇಂದಿಗೂ ಇತಿಹಾಸಕಾರರ ಅಧ್ಯಯನ - ಅನ್ವೇಷಣ-ಚಿಂತನೆಗೆ ವಸ್ತುಗಳಾಗಿವೆ. ಎಂತಾದರಿರಲಿ, 'ವಿಜಯನಗರ ಸಾಮ್ರಾಜ್ಯ' ಇತಿಹಾಸಕಾರರ ದೃಷ್ಟಿಗೆ ಒಂದು ವಿಶಿಷ್ಟತೆಯ ಸಾಮ್ರಾಜ್ಯವೆಂದೇ ಪರಿಗಣಿತವಾಗಿದೆ. ಅದು ಅಸ್ತಿತ್ವಕ್ಕೆ ಬಂದು, ಬಾಳಿ - ಮರೆಯಾದ ಕಾಲ ಒಂದು ವಿಷಮ - ಸಂದಿಗ್ಧ - ಸಂಕೀರ್ಣ ಪ್ರಕ್ಷುಬ್ಧ ಪರಿಸ್ಥಿತಿಯ ಕಾಲ ಭಾರತದ ಇತಿಹಾಸದಲ್ಲಿ.

ಪರಂಪರಾಗತ ಭಾರತೀಯ ಆಧ್ಯಾತ್ಮಿಕ, ಸಾಮಾಜಿಕ ಜೀವನ-ಅದರ ನೆಲೆ - ಬೆಲೆ ಎಲ್ಲ ಎರಡು ಶತಮಾನಗಳ ಇಸ್ಲಾಂ ಧಾಳಿ ದೌರ್ಜನ್ಯಗಳಿಂದ ದಿಕ್ಕೆಟ್ಟು, ದಿಗ್ಭ್ರಾಂತವಾಗಿತ್ತು ಜನತೆ. ಪರಂಪರೆಯ ಧರ್ಮ, ಸಂಸ್ಕೃತಿಗಳನ್ನು ಪುನಶ್ಚೇತನ ಗೊಳಿಸಿ, ಜನತೆಗೆ ಮತ್ತೆ ಉತ್ಸಾಹ ತುಂಬಿ ಧೈರ್ಯ, ಸ್ಥೈರ್ಯಗಳನ್ನು ಪ್ರೇರೇಪಿಸುವ ಮಹತ್ವದ ಕಾರ್ಯ ಆಗ ಅನಿವಾರ್ಯವಾಗಿತ್ತು. ವಿಧ್ವಂಸಗೊಂಡಿದ್ದ ದೇವಾಲಯಗಳ ಪುನರ್ನಿರ್ಮಾಣ - ಜೀರ್ಣೋದ್ಧಾರ ಕಾರ್ಯಗಳಲ್ಲಿ, ಆಗ ಮೂಡಿಸಿರುವ ನಾನಾ ವಿಸ್ತಾರಗಳ ಜೀವನ ಚಿತ್ರ ಶಿಲ್ಪಗಳು - ಕಲಾಕೌಶಲಗಳು ಈ ಮಾತಿಗೆ ಸಾಕ್ಷಿಗಳಾಗುತ್ತವೆ.

ವಿಜಯನಗರ ವಾಸ್ತುಶಿಲ್ಪ ಸೂಕ್ಷ್ಮತೆಗಿಂತ ವ್ಯಾಪಕ - ಸರಳ, ಸಹಜತೆಯ ಕಡೆಗೇ ಹೆಚ್ಚು ಗಮನ ಹರಿಸಿದೆ. ಬೃಹದಾಕಾರ, ಕಣ್ಸೆಳೆಯುವ ಗೋಪುರಗಳು, ವಿಸ್ಮಯ ವಿಸ್ತಾರದ ಮಂಟಪಗಳು - ಇವೇ ಸಾಕು ಇದಕ್ಕೆ ಸಾಕ್ಷಿಯಾಗಿ.

ಇಸ್ಲಾಮೀ ಕೃತಿಕರ್ಮ ರೂಪನೆಯೂ ಹಲವಾರು ನಿರ್ಮಿತಿಗಳಲ್ಲಿ ಕಾಣಬರುತ್ತವೆ ನಿಜ; ಆದರೆ ಪ್ರಾಚೀನ ಭಾರತೀಯ ಸಂಪ್ರದಾಯಗಳ ಬಳಕೆ, ಅವುಗಳ ವ್ಯಾಪಕತೆಯ

ನೆಲೆಯಲ್ಲಿ, ಹೊಸ ಚಿಂತನೆ -ಪ್ರಯೋಗ - ಪ್ರಯತ್ನಗಳ ಹಿನ್ನೆಲೆಯಲ್ಲಿ ಗೌಣವೆಂದೇ ಹೇಳಬಹುದು. ಕಮಲ ಮಹಲ್, ಕಾವಲುಗೋಪುರಗಳು, ಸ್ನಾನಘಟ್ಟಗಳ ಕೋಣೆಗಳ ಗೂಡು - ಇತ್ಯಾದಿಗಳನ್ನು ಬಿಟ್ಟರೆ ಬೇರೆ ಎಲ್ಲೂ ಪ್ರಧಾನವಾಗಿ ಈ ಶೈಲಿ ಇಣುಕಿಲ್ಲ. ಈಗ ನೋಡಸಿಗುವ ಚಂದ್ರಗಿರಿ ಅರಮನೆಯಲ್ಲಿ ಇಸ್ಲಾಮೀ ಶೈಲಿ ಸ್ವಲ್ಪ ಕಾಣ ಬರುತ್ತದೆ.

ಗಚ್ಚುಗಾರೆಯ ರೂಪಕರ್ಮದಲ್ಲಿ ಒಂದು ಹೊಸ ಸಾಧನೆಯನ್ನು ವಿಜಯನಗರ ಸಾಧಿಸಿತೆಂದು ಹೇಳಬಹುದು. ಮೂರ್ತಿ ವಿರೋಧಿಗಳ ವಸ್ತುವಿಧಾನವನ್ನು ಮೂರ್ತಿ ರೂಪನೆಗೆ ಬಳಸಿ, ಅದರಲ್ಲಿ ವೈಶಿಷ್ಟ್ಯತೆಯನ್ನು ಸಾಧಿಸಿ, ಅದು ಮುಂದುವರಿದು ದೇವಾಲಯ ನಿರ್ಮಾಣ -ಅದರಲ್ಲೂ ಗೋಪುರ ನಿರ್ಮಾಣದಲ್ಲಿ ಅನಿವಾರ್ಯ ಸ್ಥಾನ ಪಡೆದದ್ದು ವಿಜಯನಗರದ ಕೊಡುಗೆ ಎಂಬುದು ನಿರ್ವಿವಾದ ಸಂಗತಿ.

ಕರ್ನಾಟಕದ ವಾಸ್ತುಶಿಲ್ಪದ ಬೆಳಸನ್ನು ಗಮನಿಸಿದಾಗ, ಆರಂಭದ ಪಶ್ಚಿಮ ಚಾಳುಕ್ಯರು ಸಾಣೆಗಲ್ಲನ್ನು ಬಳಸಿದರು. ರಾಷ್ಟ್ರಕೂಟರು ಲಭ್ಯವಾದಂತೆ ಮೆದುಗಲ್ಲು-ಗಟ್ಟಿಕಲ್ಲು ಎರಡರಲ್ಲೂ ತಮ್ಮ ಕೃತಿಕರ್ಮಕೌಶಲ ತೋರಿಸಿದರು. ಕಲ್ಯಾಣ ಚಾಲುಕ್ಯರು ಗುಹಾ ನಿರ್ಮಾಣ ಕೈಬಿಟ್ಟು ಕಟ್ಟುನಿರ್ಮಿತಿಗಳಲ್ಲೇ ನಿರತರಾದರು. ಅವರು ಬಳಸಿದ್ದೂ ವೈವಿಧ್ಯದ ಗಟ್ಟಿಕಲ್ಲೇ. ನಿರ್ಮಿತಿಯಲ್ಲದೆ ಮೂರ್ತಿ ಶಿಲ್ಪದಲ್ಲೂ ಅದೇ ವಸ್ತುವನ್ನೇ ಬಳಸಿದರು.

ವಿಜಯನಗರ ತಲೆ ಎತ್ತಿದ ಕಾಲಕ್ಕೆ ನಿಕಟಪೂರ್ವದಲ್ಲಿ ನೆಲೆಗೊಂಡಿದ್ದವರು ಕಾಕತೀಯರು. ಅವರು ಕಲ್ಯಾಣ ಚಾಲುಕ್ಯ ಪರಂಪರೆಯನ್ನು ಮುಂದುವರಿಸಿದವರು. ವಿಜಯನಗರ ಕೃತಿಕರ್ಮಕ್ಕೆ ಮಾದರಿಯಾಗಿ ಲಭ್ಯವಾದದ್ದು ಈ ಕಾಕತೀಯ ನಿರ್ಮಿತಿಗಳೆಂದೇ ಹೇಳಬೇಕು. ವಿಜಯನಗರ ಸ್ಥಾಪನೆಗೊಂಡು ಅವರು ತಮ್ಮ ಚಟುವಟಿಕೆಗಳನ್ನು ಆರಂಭಿಸಿದಾಗ ನಿರ್ಮಾಣ ಕಾರ್ಯಕ್ಕೆ ತೊಡಗಿದಾಗ ದುಡಿಮೆಗೆ ದೊರೆತ ಕಲ್ವೇಶಣಿಗರು -ಕಾಕತೀಯ ಸಂಪ್ರದಾಯದವರೇ ಆಗಿದ್ದರೆಂದು ಹೇಳಬಹುದು. ನಿಕಟಪೂರ್ವ ಪ್ರಭುತ್ವ - ವಿಚಾರ - ಪರಂಪರೆ ಇವೇ ಮೂಲವಾಯಿತು ಎಂದೂ ಹೇಳಬಹುದು. ಇದು ಸಹಜ ಸ್ಥಿತಿ ವಿವೇಚನೆಯ ಮಾತು.

ವಿಜಯನಗರ ವಾಸ್ತುಶಿಲ್ಪ ಕುರಿತ ಮುಕ್ತ ಚಿಂತನೆ ಈ ಪ್ರಯತ್ನ. ವಿಜಯನಗರ ಸ್ಥಾಪನೆಯಾದಾಗ ಮುಂದಾದ ಸಮಸ್ಯೆ ವಿನಾಶಕ್ಕೊಳಗಾಗಿದ್ದ ದೇವಾಲಯಗಳ ಭವಿಷ್ಯ. ಅವುಗಳ ಜೀರ್ಣೋದ್ಧಾರವೇ ಆಗಿನ ಆದ್ಯತೆಯ ಕರ್ತವ್ಯವೆನಿಸಿತು. ಶ್ರೀ ಶೈಲದ ಪುನರ್ನಿರ್ಮಾಣ - ಜೀರ್ಣೋದ್ಧಾರ ಕಾರ್ಯ ೨ನೇ ಹರಿಹರನಿಂದ ಆರಂಭವಾಗಿ ಪ್ರೌಢದೇವರಾಯ - ಕೃಷ್ಣದೇವರಾಯನ ಕಾಲವ್ಯಾಪ್ತಿಯವರೆಗೂ ಸಾಗಿದೆ. ಶ್ರೀ ಮಲ್ಲಿಕಾರ್ಜುನ ಸನ್ನಿಧಿಯ ಪಕ್ಕದಲ್ಲಿರುವ ಬಹುಕಂಬಗಳ ವಿಶಾಲವಾದ ಮಂಟಪ ೨ನೇ ಹರಿಹರನ ನಿರ್ಮಿತಿ. ಜೀರ್ಣೋದ್ಧಾರದ ಜೊತೆ ಜೊತೆಗೆ ನವನಿರ್ಮಾಣವೂ

ನಡೆಯುತ್ತ ಸಾಗಿದೆ. ಶ್ರೀಶೈಲ ದೇವಸ್ಥಾನದ ಪ್ರಾಕಾರದ ಉಬ್ಬು ಶಿಲ್ಪಗಳು ವಿಜಯ ನಗರದ ಅಚ್ಚೊತ್ತಾಗಿ ಸಾಕ್ಷಿಯಾಗಿವೆ. ಇದು ಹಜಾರ ರಾಮ ದೇವಾಲಯದ ಹೊರಗೋಡೆಯನ್ನು ನೆನಪಿಸುತ್ತದೆ.

ಕಾಕತೀಯ ಶೈಲಿಯ ೧೩ನೇ ಶತಮಾನದ ಹನುಮಕೊಂಡದ ದೇವಾಲಯ - ಜಗತಿ, ಎತ್ತರದ ಅಧಿಷ್ಠಾನ - ಭಿತ್ತಿ; ಸಾಂಪ್ರದಾಯಕ ಗರ್ಭಗೃಹ - ಇವೆಲ್ಲಕ್ಕಿಂತ ಅದರ ಸಭಾಮಂಟಪವೇ ಪ್ರಧಾನವಾಗಿದೆ. ವಿಸ್ತಾರವಾದ ಮಂಟಪ ಕಂಬಗಳಿಂದ ತುಂಬಿಹೋಗಿದೆ. ವಿಜಯನಗರ ಇದನ್ನು ಬದಲಾಯಿಸಿ ಸಭಾ ವಿಸ್ತಾರವನ್ನು ವಿಶಾಲವಾಗಿ ಉಳಿಸಿಕೊಳ್ಳುವತ್ತ ದೊಡ್ಡ ಚೌಕಗಳಾಗಿ ವಿಭಾಗಿಸಿ, ಕಂಬಗಳನ್ನು ದೂರ ದೂರಕ್ಕೆ ಸರಿಸಿದೆ. ಕಂಬಗಳ ಎತ್ತರವನ್ನು ಹೆಚ್ಚಿಸಿ ಚಾವಣಿಯು ಮೇಲಕ್ಕೇರುವಂತೆ ಮಾಡಿದೆ. ಇದರಿಂದ ಸಭಾವಿಸ್ತಾರಕ್ಕೆ ಧಾರಾಳವಾಗಿ ಗಾಳಿ - ಬೆಳಕು ಬರುವಂತಾಗಿದೆ. ಈ ಮಂಟಪ ಮುಕ್ತ ನಾಲ್ಕೂ ಕಡೆ - (ಸರ್ವತೋಭದ್ರ) ಒಳಗೆ ಸೇರುವ ಜನಕ್ಕೆ ಗಾಳಿ, ಬೆಳಕಿಗೆ ಕೊರತೆಯೇ ಇಲ್ಲ. ಈ ಕಾರಣದಿಂದಲೇ ಅವರು 'ಜಾಲಂಧ್ರ' ಗಳನ್ನು ಕೈಬಿಟ್ಟರು.

ಮೂರ್ತಿಶಿಲ್ಪದಲ್ಲೂ ವಿಜಯನಗರ ಕಾಕತೀಯ ವೈಖರಿಯನ್ನು ಬಹಳಷ್ಟು ಅಳವಡಿಸಿಕೊಂಡಿದೆ. ಇದನ್ನು 'ಅನುಕರಣೆ' ಎಂದು ಹೇಳಲಾಗದು; 'ಅನುಸರಣೆ' ಎನ್ನುವುದು ಯುಕ್ತ. ಕಾಕತೀಯರು, ತಮ್ಮ ಪೂರ್ವಿಕರು ಕಲ್ಯಾಣಚಾಲುಕ್ಯರ 'ಮದನಕೈಮೂರ್ತಿ'ಗಳನ್ನು ಯಥಾವತ್ತಾಗಿ ಮುಂದುವರಿಸಿದರು. ವಿಜಯನಗರ ಕಾಲಕ್ಕೆ ಅದನ್ನು ಅವರು ಕೈಬಿಟ್ಟರು. ಅವರಿಗದು 'ಅನಗತ್ಯ'ವಾಗಿ ಕಂಡುಬಂದಿರಲು ಸಾಧ್ಯ; ಕಾರಣ, ಎತ್ತರದ ಕಂಬಗಳು ಮತ್ತು ಭಿತ್ತಿನ ಬಳಿ ಶಿಲ್ಪಗಳನ್ನು ನಿಲ್ಲಿಸಿದರೆ, ಅವು ಸ್ಪಷ್ಟವಾಗಿ ಕಾಣುವುದಿಲ್ಲ - ಎಂಬ ಕಾರಣವಿದ್ದೀತು.

ಕಂಬರೂಪನೆಯಲ್ಲಿ ಕಾಕತೀಯ ಮೂಲರೂಪ ಮುಂದುವರಿದಿದೆ. ಕಂಬದ ಎತ್ತರದ ಬೆಳೆದು ಉಬ್ಬು ಶಿಲ್ಪಗಳು ಕಾಲಧರ್ಮಸೂಚಿಯಾಗಿ - ಆಕಾಂಕ್ಷೆ, ಆದರ್ಶ, ಜನಚಿತ್ತವೃತ್ತಿಗಳ ಸಾಕ್ಷಿಯಾಗಿವೆ. ಹೀಗಾಗಿ ವಿಜಯನಗರ ವಾಸ್ತು ನಿರ್ಮಿತಿಯಲ್ಲಿ ಕಾಕತೀಯ ಛಾಯೆ ಪ್ರಧಾನವಾಗಿ ಕಾಣಬರುತ್ತದೆ. ತನ್ನ ವೈಭವದ ದ್ಯೋತಕವಾಗಿ ಹಾಗೂ ವೈದಿಕ ಧರ್ಮದ ಪುನಸ್ಥಾಪನೆ - ಪುನಶ್ಚೇತನದ ತನ್ನ ಧ್ಯೇಯವನ್ನು ಸಾರ್ಥಕ ಗೊಳಿಸಲು ಈ ಬೃಹತ್ ಮಂಟಪಗಳು ನಿರ್ಮಾಣವಾದಂತೆ ಕಂಡುಬರುತ್ತದೆ. ಪರಂಪರೆಯ ದೇವದೇವತೆಗಳು - ಪುರಾಣಗಳ, ಮಹಾಕಾವ್ಯಗಳ ಸನ್ನಿವೇಶಗಳ ಮೂರ್ತಿ ಚಿತ್ರಣಗಳೊಂದಿಗೆ ಸಾಮಾಜಿಕ ಜನಜೀವನ - ಜಾನಪದ ಸನ್ನಿವೇಶಗಳ ಚಿತ್ರಣಗಳೂ ಮೇಳೈಸಿವೆ. ವಿಶಾಲ ಸಾಮ್ರಾಜ್ಯದ ವಿಸ್ತೃತ ಸಮಾಜದ ಸಮೈಕ್ಯ ಸಾಧನೆಯ ಪ್ರಯತ್ನ ಇದೆಂದೇ ಹೇಳಬೇಕು. ಶಿಷ್ಟ ಹಾಗೂ ಜಾನಪದ ಕಲೆಗಳು ಸಮಾನ ಪ್ರತಿಪಾದನೆಯನ್ನು ಇಲ್ಲಿ ಪಡೆದಿವೆ.

ವಿಜಯನಗರ ವಾಸ್ತುಶಿಲ್ಪದ ಅವಲೋಕನದಲ್ಲಿ, ಆರಂಭ ಕಾಲಕ್ಕೆ ಅವರ ಚಟುವಟಿಕೆ ಬಹುಪಾಲು ಜೀರ್ಣೋದ್ಧಾರದ ಕಡೆಗೇ ಕೇಂದ್ರೀಕೃತವಾಗಿದ್ದದ್ದು ಹಲವಾರು ನಿದರ್ಶನಗಳಿಂದ ಸ್ಪಷ್ಟವಾಗುತ್ತದೆ. ಆ ಕಾಲಕ್ಕೆ ಅದು ಅತ್ಯಂತ ಅಗತ್ಯವೂ ಅನಿವಾರ್ಯವೂ ಆಗಿದ್ದಿತೆಂಬುದು ಸತ್ಯ. ಈ ಜೀರ್ಣೋದ್ಧಾರ ಕಾರ್ಯದಲ್ಲೂ ಅವರು ಶ್ಲಾಘ್ಯವಾದ ನೀತಿ ಪಾಲಿಸಿರುವುದು ಗಮನಾರ್ಹವಿಚಾರ. ಪೂರ್ವ ನಿರ್ಮಿತಿಗಳ ಸ್ವಂತಿಕೆ, ಘನತೆ, ಸೌಂದರ್ಯ, ಕಲಾಕೌಶಲಗಳು ಲುಪ್ತವಾಗಬಾರದೆಂಬ ಕಾರಣಕ್ಕೆ ಜೀರ್ಣೋದ್ಧಾರ ಕಾರ್ಯದಲ್ಲಿ ವಿಶೇಷವಾದ ಎಚ್ಚರಿಕೆ ವಹಿಸಿದ್ದಾರೆ. ಆ ನಿರ್ಮಿತಿಗಳು ಮುಂದಿನ ತಲೆಮಾರಿಗೆ ನೋಡಲು ಉಳಿಯುವಂತೆ ಜೀರ್ಣೋದ್ಧಾರ ಕಾರ್ಯ ನಡೆಸಿದ್ದಾರೆ. ಅಂದ - ಚಂದಗಳಾಗಲಿ, ರೂಪ ವೈಖರಿಗಳನ್ನಾಗಲಿ ಅಳಿಸಿ, ಅಂದಗೆಡಿಸುವ ಕೆಲಸ ಮಾಡಿಯೇ ಇಲ್ಲ! ಇದಕ್ಕೆ ಒಂದು ಉದಾಹರಣೆ ಸಾಕು:

ಬೇಲೂರು ಚನ್ನಕೇಶವ ದೇವಾಲಯದ ಹಿಂಬದಿಯ ಮಂಟಪದ ಪಕ್ಕದಲ್ಲಿ ಇರುವ ಲಕ್ಷ್ಮೀ ಮತ್ತು ಆಂಡಾಳ್ ಸನ್ನಿಧಿಗಳನ್ನು ನೋಡಬೇಕು. ಇವು ಸಂಪೂರ್ಣವಾಗಿ ವಿಜಯನಗರ ನಿರ್ಮಿತಿಗಳೇ ಅನ್ನುವುದು ಸ್ಪಷ್ಟ; ಆದರೆ ನಿರ್ಮಾಣ ಕಾರ್ಯಕ್ಕೆ ಹಾಳಾಗಿ ಬಿದ್ದಿದ್ದ ಹೊಯ್ಸಳ ದೇವಾಲಯಗಳ ಭಾಗಗಳನ್ನೇ ಬಳಸಿ, ಅತ್ಯಂತ ಜಾಣತನ - ವಿಚಕ್ಷಣತೆಯಿಂದ ಜೋಡಿಸಿ, ಪುನರ್ನಿರ್ಮಾಣ ಮಾಡಿದ್ದಾರೆ. ಹೊಯ್ಸಳ ಮಾರ್ಗಕ್ಕೆ ಅಪೋಹವಾಗಿ ಅವು ಕಾಣಿಸುವುದೇ ಇಲ್ಲ-ಸಾಮಾನ್ಯ ಜನಕ್ಕೆ ಅದು ಹೊಯ್ಸಳ ನಿರ್ಮಿತಿ ಎಂದೇ ಅನಿಸುತ್ತದೆ. ಈ ಮಾತನ್ನು ಬೇಲೂರು ದೇವಾಲಯದ ಪರಿಚಯದ ಕೈ ಹೊತ್ತಿಗೆಯಲ್ಲಿ ದಿ. ಎಲ್. ನರಸಿಂಹಾಚಾರ್ಯರು ಬರೆದಿದ್ದಾರೆ. (*Guide to Belur Temple*, L. Narasimhachar - Govt. of Mysore, p. 17)

ಹಂಪೆಯ ವ್ಯಾಪ್ತಿಯಲ್ಲಿರುವ ಪಟ್ಟಾಭಿರಾಮ ಮತ್ತು ಮಾಲ್ಯವಂತ ರಘುನಾಥ ದೇವಾಲಯಗಳ ಅಕ್ಕಪಕ್ಕ ನಿರ್ಮಿಸಿರುವ ಬೃಹತ್ ಮಂಟಪಗಳು 'ವಿಜಯ ನಗರ ಛಾಪು' ಎಂದು ಹೇಳಬಹುದಾದವು. ಮೂಲದೇವಸ್ಥಾನದ ಸಭಾಮಂಟಪ ನವರಂಗಗಳ ವಿಸ್ತಾರ-ವೈಭವವನ್ನು ಮೀರಿಸಿದೆ ಇವು. ಮಾಲ್ಯವಂತ ರಘುನಾಥ ದೇವಾಲಯವನ್ನು ನೋಡಬೇಕು; ಪಕ್ಕದ ಉತ್ಸವ ಮಂಟಪ ಯಾರೇ ಉತ್ಸುಕ ಕಲಾಭಿಜ್ಞನನ್ನು ಮೈಮರೆಸುತ್ತದೆ. ವೇದಿಕೆಯ ಮುಂದೆ ಕಂಬಗಳಲ್ಲಿನ ಉದ್ದನೆಯ ವಿಸ್ತಾರ, ಇಕ್ಕಡೆಗಳಲ್ಲಿ ವಿಜಯನಗರ ವಿಶಿಷ್ಟಶೈಲಿಯ ಆಯಾಕಾರದ ಕಂಬಗಳು, ವೇದಿಕೆಯ ಅಂಚಿನಲ್ಲಿ ಎರಡೂಕಡೆ ಸಂಕೀರ್ಣ ಸ್ತಂಭ ಸಂಯೋಜನೆ - ಸಭಾಂಗಣದ ಚೌಕ ಕಂಬಗಳು; ಇಡೀ ಮಂಟಪ ಚಿತ್ತಾಕರ್ಷಕವಾಗಿದೆ. ವೇದಿಕೆಯು ದೇವರ ಉತ್ಸವ - ಪ್ರವಚನ - ಹರಿಕಥೆ -ಗಾಯನ - ನೃತ್ಯ - ನಾಟಕ ಏನೇ ಕಾರ್ಯಕ್ರಮಕ್ಕೆ ಅನುವಾಗುವಂತಿದೆ. ಅದಕ್ಕಾಗಿಯೇ ಮೀಸಲಾದ ಸುಂದರ, ಭವ್ಯ ಸಭಾ ಮಂಟಪವಿದು ಎನ್ನಲು ಅಡ್ಡಿಯೇ ಇಲ್ಲ.

ಜನಸಂದಣಿಗಾಗಿಯೇ - ಅವರ ಸಾಂಸ್ಕೃತಿಕ ಚಿತ್ತವೃತ್ತಿಯ ಬೆಳಸಿಗಾಗಿಯೇ ಇವು ನಿರ್ಮಾಣವಾದದ್ದು ಎಂದೂ ಹೇಳಬಹುದು.

ವಿಜಯನಗರ ದೇವಾಲಯಗಳ ಗೋಪುರಗಳ ಕುರಿತೂ ಕುತೂಹಲ ಅಂಶಗಳು ಎದ್ದು ಕಾಣುತ್ತವೆ. ಬಹುಪಾಲು ಅವರು ಗೋಪುರ ನಿರ್ಮಾಣದಲ್ಲಿ ದಾಕ್ಷಿಣಾತ್ಯ ವೇಸರ ಶೈಲಿಯನ್ನೇ ಬಳಸಿದರು. ಅವರ ಗೋಪುರ ನಿರ್ಮಿತಿಗಳೆಲ್ಲ ಗಚ್ಚುಗಾರೆಯವು. ದೇವಾಲಯ ಗೋಪುರ ಇರುವುದು ಗರ್ಭಗುಡಿಯ ಮೇಲೇ. ಬಹುಪಾಲು ಈ ಪದ್ಧತಿಯೇ ಆರಂಭದಿಂದ ಇದ್ದು ಕೃಷ್ಣದೇವರಾಯನಿಂದ ಆರಂಭಗೊಂಡ ಪ್ರಾಕಾರದ ದ್ವಾರಗೋಪುರ, ಮೂಲಗೋಪುರವನ್ನು ಮೀರಿ ಎತ್ತರದ್ದಾಯಿತು. 'ರಾಜಗೋಪುರ' ಎಂದೇ ಹೆಸರು ಪಡೆಯಿತು. ಇದು ಬಹುಪಾಲು ತಮಿಳು ಪಾಂಡ್ಯರ ನಿರ್ಮಿತಿಗಳಿಂದ ಸ್ಫೂರ್ತಿಪಡೆದದ್ದು ದ್ರಾವಿಡ-ಕರ್ನಾಟಕ ಸಹಬಾಂಧವ್ಯದ ಅನಿವಾರ್ಯತೆಯ ಸೂಚಿ ಇದು-ಎಂದೇ ಅನ್ನಿಸುತ್ತದೆ.

ನಾಗರ ಶೈಲಿ ವಿಜಯನಗರ ನಿರ್ಮಿತಿಗಳಲ್ಲಿ ಬಳಕೆಯಾಗಲಿಲ್ಲ. ಇದಕ್ಕೆ ಕಾರಣ. "ಇದೇ" ಎಂದು ಹೇಳುವುದು ಕಷ್ಟಸಾಧ್ಯ. ಬಹುಶಃ ನಾಗರ ಶೈಲಿಯ ಗೋಪುರ ವೈವಿಧ್ಯತೆಗೆ ಒಗ್ಗದು ಎಂದೂ ಇದ್ದೀತು, ಇಲ್ಲವೆ ಕಣ್ಣಿಗೆ ಹೆಚ್ಚು ಆಕರ್ಷಕವಾಗಿ ಕಾಣದು-ಎಂದು ಕಾರಣವಿದ್ದೀತು. ಔತ್ತರೇಯನಾಗರವಂತೂ ಬಾದಾಮಿ ಚಾಲುಕ್ಯರ ಅನಂತರ ಕರ್ನಾಟಕದಲ್ಲಿ ಪುನರ್ಜನ್ಮ ಕಾಣದ್ದಾಯಿತು.

ಹಂಪೆಯ ಪರಿಸರದಲ್ಲೇ ಎಂಟು ನಾಗರ ಶೈಲಿಯ ಹೊಯ್ಸಳ ನಿರ್ಮಿತಿಗಳಿವೆ. ಅಲ್ಲಿನ ನಿರ್ಮಿತಿಗಳಿಗೂ ಅದನ್ನು ವಿಜಯನಗರ ವಾಸ್ತುವಿದರು ತೆಗೆದುಕೊಳ್ಳಲಿಲ್ಲ. ಇದಕ್ಕೆ ಒಂದು ಸಮಾಧಾನವಾಗಿ ಕಮಲಮಹಲಿನ ಗೋಪುರಗಳಲ್ಲಿ ಈ ಶೈಲಿಯ ಒಂದು ಛಾಯೆಯ ಪ್ರತಿಪಾದನೆಯಲ್ಲಿ ಉಳಿಸಿದ್ದಾರೆ.

ಈ ಎಲ್ಲ ಹಿನ್ನೆಲೆಯಲ್ಲಿ ವಿಜಯನಗರ ವಾಸ್ತುಶಿಲ್ಪ ಚಟುವಟಿಕೆಯನ್ನು ೧೩೩೬ ರಿಂದ ಸಾಳುವ ನರಸಿಂಹನವರೆಗೆ ಪೂರ್ವಾರ್ಧ 'ಜೀರ್ಣೋದ್ಧಾರ ಪ್ರಧಾನ ಕಾಲ' ವೆಂದೂ, ೧೫೧೦ರಿಂದ ಮುಂದಕ್ಕೆ ಉತ್ತರಾರ್ಧದ 'ಪ್ರಬುದ್ಧ, ಸ್ವ - ನಿರ್ಮಾಣ ಶೈಲಿ ವೈಭವದ ಕಾಲ' ಎಂದೂ ಗುರುತಿಸಬಹುದಾಗಿದೆ. ಇದನ್ನೇ ಇನ್ನೊಂದು ರೀತಿಯಲ್ಲಿ 'ಆರಂಭದ ಅನುಸರಣೆಯ ಕಾಲ'ವೆಂದೂ ಕೃಷ್ಣದೇವರಾಯನಿಂದಾ ರಂಭವಾಗಿ 'ಸ್ವತಂತ್ರ ಸೃಷ್ಟಿ ಶೀಲ ವೈಭವೀಕಾಲ'ವೆಂದೂ ಗುರುತಿಸಬಹುದು.

ಕರ್ನಾಟಕದ ಕುರಿತಂತೆ ಹಾಯ್ ನೋಟದಲ್ಲಿ ಮೃದುಗಲ್ಲು ರೂಪನೆಯಿಂದ ಆರಂಭಗೊಂಡು, ಗಟ್ಟಿಕಲ್ಲಿನ ರೂಪನೆಯಲ್ಲಿ ಸಿದ್ಧಿಸಾಧಿಸಿ ಕನ್ನಡ ನಾಡಿನ ಕಲ್ವೇಷಣೆ ಕುತೂಹಲವು ಸಾಗುತ್ತ ಸೂಕ್ಷ್ಮತೆಗೆ ದಾರಿ ಕಂಡುಕೊಂಡು, ವ್ಯಾಪಕತೆಯ ಅಗತ್ಯತೆ ಯಲ್ಲಿ ವಿಪುಲವಾಗಿರುವ ಗಟ್ಟಿ ಕಲ್ಲನ್ನು ಬಳಸಿಕೊಂಡು, ಸೂಕ್ಷ್ಮತೆಗೆ ಬದಲಾಗಿ ಸರಳ

- ಸಹಜತೆಯ ಕಡೆಗೆ ವಾಲಿರುವುದು ಗಮನಕ್ಕೆ ಬರುತ್ತದೆ. ಈ ಸರಳ -ಸಹಜತೆಯಲ್ಲಿಯೂ ಅವರ ಸಾಧನೆ ರೋಮಾಂಚನಕಾರಿಯಾದದ್ದೆಂದು - ಪ್ರತ್ಯೇಕ ಸಿದ್ಧಿ ಸಾಧಿಸಿದ್ದೆಂದೂ ಒಪ್ಪಲೇಬೇಕು.

ಬಿಚ್ಚು ಮಂಟಪಗಳು (ಸರ್ವತೋಭದ್ರ)- ಸೂರಿನಿಂದ ಚಾಚಿಬಾಗಿರುವ ಚಜ್ಜಗಳು ಮಳೆನೀರು ಒಳಕ್ಕೆ ಬೀಳದಂತೆ ತಡೆಗಳಾಗಿವೆ. ಈ ಚಜ್ಜಗಳನ್ನು ಕಡೆದು ಛತ್ತಿನಲ್ಲಿ ಅಳವಡಿಸಿರುವ ತಂತ್ರವೇ ಒಂದು ಶ್ಲಾಘನೀಯ ವಿಚಾರ. ಗಟ್ಟಿಕಲ್ಲಿನಲ್ಲಿ ೪ ಇಂಚು ದಪ್ಪನೆಯ Z ಮಾದರಿಯಲ್ಲಿ ಬಾಗಿರುವ ಕಲ್ಲುಹಲಗೆಯನ್ನು ಕಡೆದು ರೂಪಿಸಲು ಎಷ್ಟು ದಪ್ಪನೆಯ ಚಪ್ಪಡಿ ಬಳಸಿರಬೇಕು! ಬಾಗು ಬಳುಕನ್ನು ಕಾಪಾಡಲು ಒಳಮುಖ ದಲ್ಲಿ ಬಿಡಿಸಿರುವ ಪಟ್ಟಿಕೆಗಳನ್ನು ಬಿಟ್ಟುಕೊಂಡು ಕಲ್ಲನ್ನು ಕೆತ್ತಿ ತೆಗೆದಿದ್ದಾರೆ. ಇದೊಂದು ಸೋಜಿಗದ ಕೈ ಚಳಕದ ಕೆಲಸವಲ್ಲದೆ ಬೇರೆಯಲ್ಲ. ಇದನ್ನು ವಿರುದ್ಧ ಭಾರಹೇರಿಕೆ (Counterweight) ತಂತ್ರ ಬಳಸಿ ಛತ್ತಿನ ಅಂಚಿನಲ್ಲಿ ಅಳವಡಿಸಿದ್ದಾರೆ. ನಿರ್ಮಾಣ ವೆಲ್ಲವೂ ಅಗಾಧವೇ. ಭಾರದ ದೊಡ್ಡ ಕಂಬಗಳು, ಅಡ್ಡ ತೊಲೆಗಳು, ಛತ್ತಿನ ಚಪ್ಪಡಿಗಳು, ಇವನ್ನೆಲ್ಲ ಎತ್ತಿ, ಅವವುಗಳ ಸ್ಥಾನದಲ್ಲಿ ನಿಲ್ಲಿಸಿರುವುದು ಒಂದು ತಾಂತ್ರಿಕ ಸಾಧನೆಯಲ್ಲದೆ ಬೇರೆಯಲ್ಲ.

ಮೂರ್ತಿ ಶಿಲ್ಪಕಲೆಯಲ್ಲಿ ವಿಜಯನಗರದ ಸಾಧನೆ ಸರಳ ಸೌಂದರ್ಯ; ಭಾವ ಭವ್ಯತೆ - ಘನತೆಗಳಿಗೆ ಮೀಸಲಾದ ಕೈ ಚಳಕ ಕಲ್ಪನೆ. ಇದು ಬಾದಾಮಿ ಚಾಲುಕ್ಯರಿಂದ ಮಿಂಚಿ ಪ್ರಸರಿಸಿದ ರೂಪನ ಕಲಾಕೌಶಲದಲ್ಲಿ ಕರ್ನಾಟಕವು ತಲುಪಿದ ಅಂತಿಮ ಘಟ್ಟ. ಮಧ್ಯಂತರಲ್ಲಿ ಅದು ಹಲವಾರು ಮಜಲುಗಳನ್ನು ಕಂಡಿದೆ. ಅಚ್ಚರಿಯ - ಅದ್ಭುತದ ಕೃತಿ ಕರ್ಮಕೌಶಲವು ವ್ಯಾಪಕ ಪರಿಣಾಮ ಸಾಧಿಸುತ್ತ ಕಡೆ ಮುಟ್ಟಿದೆ. ಸಕಲ ಜನಪ್ರಿಯತೆ ಅದರ ಗುರಿಯಾಗಿದೆ.

ವಿಜಯನಗರ ಕಾಲದ ಮೂರ್ತಿ ರೂಪನೆಯ ಸಂದರ್ಭದಲ್ಲಿ ದೇವಮೂರ್ತಿಗಳು -ಪುರಾಣ ವ್ಯಕ್ತಿ ಬಿಂಬಗಳೂ ರೂಪುಗೊಂಡದ್ದು ಸಹಜ ಗತಿ; ಆದರೆ ಆಗ ಪ್ರತ್ಯೇಕವಾಗಿ ರಾಜ - ರಾಣಿಯರ ಪ್ರತಿರೂಪ ನಿರ್ಮಾಣ ಕಾರ್ಯ ಗಮನಾರ್ಹ. ಕೃಷ್ಣದೇವರಾಯ ಮತ್ತು ಅವನ ರಾಣಿಯರ ಭಕ್ತಮೂರ್ತಿಗಳು ತಿರುಪತಿ ದೇವಾಲಯದಲ್ಲಿವೆ. ಇವು ವಿಶ್ವಸನೀಯವಾದ ವ್ಯಕ್ತಿ ಪ್ರತಿರೂಪನೆಗಳೆಂದು ನಂಬಬಹುದಾದವು.

ಪಲ್ಲವ ನಿರ್ಮಿತಿಗಳಲ್ಲಿ (ಮಾಮಲ್ಲಪುರ) ನಾಮನಿರ್ದೇಶಿತವಾದ ಶಿಲ್ಪಗಳಿವೆ. ಅವು ಆ ರಾಜರ ಕಣ್ಣೆದುರಿಗೆ ಶಿಲ್ಪಿ ನೋಡುತ್ತ ಕೆತ್ತಿದವೇ? ಇದು ಸಂದೇಹದ ವಿಷಯ. ವಿಜಯನಗರ ಭಕ್ತಬಿಂಬಗಳು ಲೋಹದ ಎರಕದವು. ಬಹುಪಾಲು ಅರಮನೆಯಲ್ಲಿ ಮೇಣದಲ್ಲಿ ಮೂಲರೂಪವನ್ನು ಕಲಾವಿದ ಸಮುಖದಲ್ಲಿ ಮಾಡಿಕೊಂಡು ಅಂತರ ಎರಕಹುಯ್ದಿರಬೇಕು. ಮುಖಭಾವ, ದೇಹದ ಉದ್ದ - ಗಾತ್ರ ಇವು ಬಹುಮಟ್ಟಿಗೆ

ಶಿಲ್ಪಿ ವ್ಯಕ್ತಿಯನ್ನು ನೋಡಿ ಮಾಡಿದ್ದೆಂದು ನಂಬಬಹುದು. ಬಹುಶಃ ಇವೇ ನಮ್ಮ ನಾಡಿನ ಸ್ವ-ಬಿಂಬಶಿಲ್ಪದ ಪ್ರಾಚೀನ ಸಾಕ್ಷಿಗಳೆನ್ನಬಹುದು. ಇದು ಪಾಶ್ಚಾತ್ಯರಿಂದ ನಮಗೆ ಬಂದ ಕಲ್ಪನೆ ಎಂದು ಯಾರೂ ಭಾವಿಸಬೇಕಾಗಿಲ್ಲ.

ವಿಜಯನಗರದ ಇನ್ನೊಂದು ಸೇರ್ಪಡೆ, ಕೊಡುಗೆ ಎಂದರೆ ವ್ಯಾಪಕವಾಗಿ ಈಗ ನಾಡಿನಲ್ಲಿ ನಾವು ದೇವಾಲಯಗಳ ಮುಂಗಡೆ ನೋಡುವ ದೀಪಸ್ತಂಭಗಳು. ವೈವಿಧ್ಯರೂಪ - ಎತ್ತರಗಳ ದೀಪದ ಕಂಬಗಳಿವೆ. ಹಳ್ಳಿಹಳ್ಳಿಗಳಲ್ಲೂ ಇವೆ. ಈ ದೀಪಸ್ತಂಭ ಸ್ಥಾಪನೆಯನ್ನು ಹುಟ್ಟುಹಾಕಿದ್ದು ವಿಜಯನಗರ. ಇದಕ್ಕೆ ಹಿಂದಿನ ಯಾವ ದೇವಾಲಯದ ಮುಂದೆಯೂ ದೀಪಸ್ತಂಭ ಎಂಬುದು ಇಲ್ಲವೇ ಇಲ್ಲ. ಬಹುಮಟ್ಟಿಗೆ ಜೈನ 'ಮಾನಸ್ತಂಭ' ವಿಜಯನಗರದ ಕಾಲಕ್ಕೆ ಗಮನಕ್ಕೆ ಬಂದು, ವೈದಿಕ ಧರ್ಮ ನೆಲೆಯಲ್ಲಿ ದೇವಸ್ಥಾನ ಗಳಿಗೆ ಒದು ಪ್ರಾಶಸ್ತ್ಯ, ಭಕ್ತಾದಿಗಳಲ್ಲಿ ಕುತೂಹಲ, ನಂಬಿಕೆ, ಆಸ್ಥೆ ಇವನ್ನು ಮೂಡಿಸಲು ದೀಪಸ್ತಂಭದ ಕಲ್ಪನೆ ಸಾಕಾರವಾಗಿ ಬಳಕೆಗೆ ಬಂದಿರ ಬೇಕೆಂದು ಹೇಳಬೇಕಾಗುತ್ತದೆ. ಜಾತ್ರೆ - ರಥೋತ್ಸವ ಕಾಲಕ್ಕೆ, ಹಬ್ಬ - ಹರಿದಿನಗಳಲ್ಲಿ ಈ ದೀಪಸ್ತಂಭದ ಮೇಲೆ ದೀಪ ಹಚ್ಚುವ ಸಂಭ್ರಮ ; ಆ ದೀಪದ ಬೆಳಕಿನಲ್ಲಿ ಭಕ್ತಜನ ಭಾವಪರವಶರಾಗಿದ್ದ ಸಹಜ ಪ್ರತಿಕ್ರಿಯೆ ಅಪೇಕ್ಷಣೀಯ ಫಲವಾಯಿತೆಂದು ಹೇಳಲೇಬೇಕು.

ಚಿತ್ರಕಲೆಗೂ ವಿಜಯನಗರ ಪೋಷಕ ಪ್ರೇರಣವಾಯಿತೆಂದು ಹೇಳಲೇಬೇಕು. ಈಗ ಹೆಸರಾಗಿರುವ ಮೈಸೂರು ಹಾಗೂ ತಂಜಾವೂರು ಶೈಲಿಯ ವರ್ಣಚಿತ್ರಗಳು ವಿಜಯ ನಗರದ ಬಳುವಳಿಗಳೇ. ಅಜಂತೆಯಿಂದ ಹರಿದುಬಂದ ಕೌಶಲದ ರಸಸಿದ್ಧಿ ಈ ಶೈಲಿ. ಅದು ಪಾಳೆಯಗಾರರ ಕಾಲದ್ದಾಗಿರಲಿ - ನಾಯಕರದಾಗಿರಲಿ ; ಅದು ವಿಜಯನಗರ ಉಳಿಸಿ ಬೆಳೆಸಿ ಬಿಟ್ಟುಹೋದ ಕಲಾಕೌಶಲ.

ವಿಜಯನಗರ ವಾಸ್ತು-ಶಿಲ್ಪಕ್ಕೆ ಸತ್ಯಸಾಕ್ಷಿ ಹಾಗೂ ಆ ಕಾಲದ ಶೌರ್ಯ-ಧೈರ್ಯ - ಸಂಕಲ್ಪ ಇತ್ಯಾದಿಗಳಿಗೆ, ಕೃಷ್ಣದೇವರಾಯನ ಕಾಲಕ್ಕೆ ರೂಪು ತಳೆದ ವಿಶಿಷ್ಟ ಆಕಾರದ, ವೈವಿಧ್ಯ ಮೂರ್ತಿಶಿಲ್ಪಗಳ ಸಮುಚ್ಚಯದ ಕಂಬಗಳೂ, "ಸ್ತಂಭಕಸಂಕೀರ್ಣ"ಗಳೆಂದು ಗುರುತಿಸಬಹುದಾದ ಕಂಬಗಳೂ ಅತ್ಯಂತ ರೋಚಕವೂ, ವಿಸ್ಮಯ ಕೃತಿಕರ್ಮಗಳಾ ಗಿವೆ. ಭಾರತೀಯ ಶಿಲ್ಪಲೋಕಕ್ಕೇ ಅವು ಅನನ್ಯ ಕೊಡುಗೆ ಎಂದು ಹೇಳಲೇಬೇಕು.

ಅಶ್ವ, ಗಜಗಳಲ್ಲದೆ ಕಾಲ್ಪನಿಕ ಮೃಗಗಳಾದ ಶರಭ - ಶಾರ್ದೂಲಗಳ ವಿರೋತ್ಸಾಹದ ರೂಪನೆ, ಅವುಗಳನ್ನೇರಿ ವೀರಾವೇಶದಿಂದಿರುವ ಸವಾರರು ನೋಡಿದ ವರಿಗೆ ರೋಮಾಂಚನವಾಗದಿರದು. 'ಸ್ತಂಭಕ ಸಂಕೀರ್ಣ'ಗಳ ಕಲ್ಪನೆಯೇ ರೋಚಕ. ಒಂದು ಕಂಬಕದಿಂದ ಆರಂಭವಾಗಿ, ೩, ೬ ಹೀಗೆ ಈ ಕಂಬಗಳು ಹೆಚ್ಚುತ್ತ ಹೋಗು ತ್ತದೆ. ಇವಕ್ಕೆ ಹಿಂದೆ ಒಂದು ಚೌಕಂಬ ಇರುತ್ತದೆ. ಈ ಕಂಬಕಗಳ ಕಂಬವನ್ನು ಸಂಗೀತ

ಕಂಬಗಳು (Music Pillars) ಎಂದು ಸಾಮಾನ್ಯವಾಗಿ ಕರೆಯುವುದು ವಾಡಿಕೆಯಾಗಿದೆ. ಇದು ನಿಜವೇ, ಸರಿಯೇ ಎಂದು ಯೋಚಿಸಬೇಕಾಗಿದೆ - ಚಿಂತನೆಯ ಅಗತ್ಯವಿದೆ.

ಅನೇಕ ಹೊಯ್ಸಳ, ಕಲ್ಯಾಣ ಚಾಲುಕ್ಯ ಮೂರ್ತಿಶಿಲ್ಪಗಳನ್ನು ತಟ್ಟಿದಾಗ ಲೋಹದಂತೆ ಶಬ್ದ ಕೇಳಿಸುತ್ತದೆ. ಗಟ್ಟಿಮರದ ತುಂಡನ್ನು ಹೊಡೆದಾಗಲೂ ಶಬ್ದ ಹೊಮ್ಮುತ್ತದೆ. 'ಬರ್ಮಿಗಾಂಗ್' ವಾದ್ಯವು ನಮ್ಮಲ್ಲೂ ಇದ್ದ 'ಕಾಷ್ಠತರಂಗ' ದಂತಹುದೇ. ಇದು ಸಹಜವಾದ ಭೌತಗುಣತತ್ವ. ವಿಜಯನಗರ ರೂಪಿಸಿದ ಸಂಕೀರ್ಣ ಕಂಬಗಳು ಸಂಗೀತ ಕಂಬಗಳಲ್ಲ; ಅದು ಶಿಲ್ಪಿಯ ಕಲ್ಪನೆಯ ಕೂಸು. ಆ ಕಲ್ಪನೆಯ ಹಿಂದೆ ಅಧ್ಯಾತ್ಮ ಚಿಂತನೆಯೋ, ಇಲ್ಲವೇ ಪೂರ್ವಕೃತಿಗಳ ವರ್ಣನಾ ಫಲವೋ ಇದ್ದೀತು! ಈ ಭಾವನಾತ್ಮಕ ಚಿಂತನೆಯಲ್ಲಿ, ಶ್ರೀವೈಷ್ಣವ ಪಂಥಕ್ಕೆ ಒಲುವನ್ನು ತೋರಿದ್ದ ಕೃಷ್ಣ ದೇವರಾಯನ ಕಾಲದಲ್ಲಿ ಇವು ರೂಪುತಳೆದದ್ದು ಒಂದು ವಿಚಾರದತ್ತ ಚಿಂತನೆಯನ್ನು ಸೆಳೆಯುತ್ತದೆ. ಶ್ರೀರಾಮಾನುಜರು ತಮ್ಮ 'ವೈಕುಂಠಗದ್ಯ'ದಲ್ಲಿ ಶ್ರೀಮನ್ನಾರಾಯಣನ ಆವಾಸವಾದ ವೈಕುಂಠವನ್ನು ಸಾವಿರ ಸಾವಿರ ಕಂಬಗಳ ಮಹಾನ್ ಮಂಟಪವೆಂದು ವರ್ಣಿಸಿದ್ದಾರೆ. ಬಹುಶಃ ಆ ಸಾವಿರ ಸಾವಿರ ಕಂಬಗಳ ಮಂಟಪ ನಿರ್ಮಾಣದಲ್ಲಿ ಈ ಸ್ತಂಭಕ ಸಂಕೀರ್ಣ ರೂಪ ತಾಳಿರಬೇಕು ಎಂದನ್ನಿಸುತ್ತದೆ. ಹೇಗಾದರೂ ಇರಲಿ ಈ ಸ್ತಂಭಕ ಸಂಕೀರ್ಣ ರೂಪಿಸದ 'ಶಿಲೆ ಮುದ್ದರು'- ಶಿಲ್ಪಿಗಳು ಅನನ್ಯರೆಂದು ಹೇಳಲೇಬೇಕು.

ಈ ಸ್ತಂಭಕ ಸಂಕೀರ್ಣಗಳು ಇನ್ನೊಂದು ಸಮಸ್ಯೆಯನ್ನು ಒಡ್ಡುತ್ತವೆ. ಈ ಒಂದು ಸಂಕೀರ್ಣ, ಮೂರು ಕಂಬಗಳಿರುವುದನ್ನು ನೋಡೋಣ. ಇಡೀ ಈ ಸಂಕೀರ್ಣ ಸ್ತಂಭವನ್ನು ಒಂದೇ ಕಲ್ಲು ದಿಮ್ಮಿಯಿಂದ ಕಡೆದು ರೂಪಿಸಲಾಗಿದೆ. ಒಂದೊಂದು ಕಂಬಕವೂ ದುಂಡಗಿದ್ದು, ಕೆಳಗೆ ಪೀಠ ಮೇಲೆ ಒಂದು ಉಂಗುರವೋ, ಬೋದಿಗೆಯ ರೂಪವೋ ಇರುತ್ತದೆ. ಇವನ್ನು ರೂಪಿಸಿದ್ದು ಹೇಗೆ? ತಿರುಗಣೆಯಿಂದ ರೂಪಿಸಿದರು - ಎನ್ನೋಣವೇ?

ಹೊಯ್ಸಳ - ಕಲ್ಯಾಣ ಚಾಲುಕ್ಯರ ರೋಚಕ ದುಂಡುಕಂಬಗಳ ರೂಪನೆ ತಿರುಗಣೆ ಯಿಂದ (Lathe) ಆದದ್ದು ಎಂದು ಹೇಳುವ ವಾದಕ್ಕೆ ಇಲ್ಲಿದೆ ಉತ್ತರ. ಈ ಸ್ತಂಭಕ ಗಳೊಂದೊಂದನ್ನೂ, ಮೊದಲು ಕಲ್ಲನ್ನು ಚೆಕ್ಕೆ ಬಿಡಿಸಿಕೊಂಡು, ಅನಂತರ ಎಚ್ಚರಿಕೆಯ ಕೆತ್ತನೆಯಿಂದ ಈ ಕಂಬಕ - ಸ್ತಂಭಕ ರೂಪ ತಾಳಿದೆ. ಇದು ರೂವಾರಿಯ ಕೈ ಚಳಕದ - ಜಾಗರೂಕತೆ, ಏಕಾಗ್ರತೆಯ - ಕೌಶಲದ ಪರಮಾವಧಿ ಎನ್ನಲಡ್ಡಿ ಇಲ್ಲ. ಕೆಲವು ಸ್ತಂಭಗಳಲ್ಲಿ ಪಟ್ಟಿಕೆಗಳನ್ನೂ ರೂಪಿಸಲಾಗಿದೆ. ವಿವರಣೆಗೆ ಸಿಕ್ಕು ವಂತಹುದಲ್ಲ ಇದು; ನೋಡಬೇಕು - ಚಿಂತನೆ ಮಾಡಬೇಕು.

ವಿಜಯನಗರ ನಿರ್ಮಿತಿಗಳು ಹಂಪೆಯಲ್ಲಿ ಕೇಂದ್ರೀಕೃತವಾದುದಲ್ಲ; ಅವು ಸಾಮ್ರಾಜ್ಯದ ಎಲ್ಲ ಕಡೆಗೂ ಹರಡಬೇಕಾಗುತ್ತಲ್ಲವೇ ಎಂಬ ವಿಚಾರ ಸಾಧುವಾದದ್ದೇ.

ಪಂಪಾಕ್ಷೇತ್ರದಂತೆ ದಕ್ಷಿಣ ಭಾರತದ ಹೆಜ್ಜೆ ಹೆಜ್ಜೆಗೂ ಪುರಾಣಪ್ರಸಿದ್ಧ ಪುಣ್ಯಕ್ಷೇತ್ರ ಗಳಿವೆ. ವಿಜಯನಗರ ದೊರೆಗಳಿಗೆ ಹಂಪೆಯಲ್ಲೇ ದೇವಾಲಯಗಳನ್ನು ನಿರ್ಮಿಸುವ ಯೋಚನೆ ಬಂತಲ್ಲಾ - ಅವು ನಾಡಲ್ಲೆಲ್ಲ ಹರಡಿದ್ದಿದ್ದರೆ ಪರಿಣಾಮ ಫಲ ಹೆಚ್ಚುತ್ತಿರ ಲಿಲ್ಲವೇ? ಇದು ಪ್ರಶ್ನೆ.

ಕೃಷ್ಣದೇವರಾಯ ತನ್ನ ಈ ಚಟುವಟಿಕೆಯನ್ನು ಕೇವಲ ತಮಿಳುನಾಡಿನತ್ತಲೇ ಬೆಳೆಸಿದನಲ್ಲಾ! ಪೂರ್ವಭಾಗತ್ತ ಒಂದೆರಡು ನಿರ್ಮಿತಿಗಳಿವೆ: ಬಿಕ್ಕವೋಲು - ತಿರುಪತಿ - ಕಾಳಹಸ್ತಿಗಳಲ್ಲಿ. ಪಶ್ಚಿಮದ ಕಡೆಗೆ ಒಂದಾದರೂ ಇಲ್ಲ! ಈ ಕಡೆ ನಡೆದಿರುವುದೆಲ್ಲ ಜೀರ್ಣೋದ್ಧಾರ ಮಾತ್ರ. ಇದಕ್ಕೆಲ್ಲ ಪ್ರತಿಯಾಗಿ ತಮಿಳುನಾಡನ್ನು ತಮ್ಮ ನಿರ್ಮಿತಿ ಗಳಿಂದ ತುಂಬಿಬಿಟ್ಟಿದ್ದಾರೆ. ತಂಜಾವೂರು, ಮದುರೆ, ಚಿದಂಬರಂ, ಕಾಂಚೀಪುರ ಒಂದೇ ಎರಡೇ ರಾಮೇಶ್ವರದವರೆಗೂ ಇವು ಹರಡಿಕೊಂಡಿವೆ. ಅಲ್ಲೆಲ್ಲ ನಡೆದಿರು ವುದು ದೇವಾಲಯ ನಿರ್ಮಾಣವಲ್ಲ, ಇದ್ದ ದೇಗುಲಗಳಿಗೆ ಪೂರಕ ಉತ್ಸವ ಮಂಟಪ ಗಳು ಇತ್ಯಾದಿ. ಸಾವಿರ ಕಂಬಗಳ ಮಂಟಪ, ಕಲ್ಯಾಣ ಮಂಟಪಗಳು ತುಂಬಿಹೋಗಿವೆ. ಇದು ಆ ನಾಡಿನ ಜನರನ್ನು ಒಲಿಸಿಕೊಳ್ಳುವ ಪ್ರಯತ್ನವೇ? ಇಡೀ ದಕ್ಷಿಣ ಭಾರತ ವನ್ನು ಒಂದು ಆಳ್ವಿಕೆಗೆ ತರುವ ಪ್ರಯತ್ನವೇ? ಹಾಗಾದರೆ ಇದು ಕೇರಳದ ಕಡೆಗೇಕೆ ಹರಡಲಿಲ್ಲ! ಅಥವಾ ತಮಿಳುನಾಡಿನ ಪಾಂಡ್ಯ - ಚೋಳ ನಿರ್ಮಿತಿಗಳಿಗೆ ಸವಾಲಾಗಿ ನಿರ್ಮಾಣ ಗೊಂಡಂಥವೇ?- ಪಶ್ಚಿಮ ಪ್ರಾಂತಗಳನ್ನು ವಿಜಯನಗರ ಉಪೇಕ್ಷಿಸಿತೇ ಈ ದೃಷ್ಟಿಯಲ್ಲಿ ಎಂಬುದು ಚಿಂತನಾರ್ಹ ವಿಚಾರವಾಗಿದೆ.

ದೊಡ್ಡ ಆದರ್ಶದ ಹಿನ್ನೆಲೆಯಲ್ಲಿ - ವೈದಿಕ ಧರ್ಮದ ರಕ್ಷಣೆಯ ಹೊಣೆ ಹೊತ್ತು ನಿಂತ ಈ ಸಾಮ್ರಾಜ್ಯ ಈ ದಿಕ್ಕಿನಲ್ಲಿ ಒಂದು ದೊಡ್ಡ ಲೋಪ ಮಾಡಿತೆಂದೇ ಹೇಳಬೇಕಾಗಿದೆ. ದೇವಾಲಯ ನಿರ್ಮಾಣದಿಂದ ಭಕ್ತರು ಬೆಳೆದಾರು! ಆದರೆ ಬುದ್ಧಿವಿಕಾಸ, ಮನೋವಿಕಾಸ, ಜ್ಞಾನವಂತರ ಸೃಷ್ಟಿ ಸಾಮ್ರಾಜ್ಯದ ಹೊಣೆಯಾಗಿರ ಲಿಲ್ಲವೇ? ವಿದ್ಯಾವಂತ - ವಿಚಾರವಂತ- ಸಮರ್ಥಜನ ಅತ್ಯಗತ್ಯವಲ್ಲವೇ? ಎಲ್ಲ ಜೀವನ ವಿಸ್ತಾರಕ್ಕೂ ಈ ಜ್ಞಾನ ವ್ಯವಸಾಯ - ಶಿಕ್ಷಣ - ವಿದ್ಯಾಭ್ಯಾಸ ಅತ್ಯಗತ್ಯ ವೆಂಬುದು ಆ ಆಳರಸರಿಗೆ ತೋರಲಿಲ್ಲವೇ? ಇಡೀ ಹಂಪೆಯಲ್ಲಿ ನೂರಾರು ಹಾಳು ಮಂಟಪಗಳು - ದೇಗುಲಗಳು, ಅರಮನೆ, ಸ್ನಾನಘಟ್ಟಗಳು ಇತ್ಯಾದಿಗಳು ಕಣ್ಣಿಗೆ ಬೀಳುತ್ತವೆ. ಒಂದಾದರೂ ಶಿಕ್ಷಣಕ್ಕೆ ಮೀಸಲಾಗಿದ್ದ 'ವಿದ್ಯಾಲಯ' ಎಂಬುದೇ ಕಾಣಸಿಗದಲ್ಲ!? ಇದಕ್ಕೇನು ಕಾರಣ ?- ಇದರಿಂದ ನಾವು ಊಹಿಸಬಹುದಾದ್ದೇನು?

ಕವಿಗಣಕ್ಕೆ -ಕಲಾಭಿಜ್ಞರಿಗೆ ಆಶ್ರಯಕೊಟ್ಟ ಈ ರಾಜರಿಗೆ ತಮ್ಮ ಪ್ರಜೆಗಳಿಗೆ ವಿದ್ಯೆ ಕಲಿಸುವ ಅಗತ್ಯತೆಯು ಮೂಡಲಿಲ್ಲವೇ? ಈ ಕಾಲಕ್ಕಾಗಲೇ ಬಹಮನಿಗಳು ಮೆರೆದಿದ್ದರು. ಬೀದರಿನ ಮಹಮದ್ ಗವಾನನು ಒಂದು ವಿಶ್ವವಿದ್ಯಾನಿಲಯ ಸ್ಥಾಪಿಸಿದ್ದ.

ಅದು ಪ್ರಸಿದ್ಧಿ ಪಡೆದಿತ್ತು. ಇದಕ್ಕೂ ಪ್ರಾಚೀನ ನಲಂದ - ತಕ್ಷಶಿಲಾಗಳು ಆ ರಾಜರ ಕಿವಿಗೆ ಬಿದ್ದಿರಲಿಲ್ಲವೇ?- ಕರ್ನಾಟಕದ ಘಟಿಕಾಸ್ಥಾನಗಳಾಗಿದ್ದ ಬನವಾಸಿ, ನಾಗಾಯಿ, ಶಾಲಾ ಪಾವಟ್ಟಿಗೆ (ಸಾಲೋಟಗಿ) ಇವುಗಳನ್ನು ಅವರು ಕೇಳಿರಲಿಲ್ಲವೇ? ಇದೊಂದು ಪ್ರಮುಖವಾದ ಪ್ರಶ್ನೆ. ಸಾಮ್ರಾಜ್ಯ ವೈಭವವನ್ನು ಹಾಡಿ ಹೋಗಳಿದ್ದಾರೆ, ಆದರೆ ಅದು ಮಾಡಬೇಕಾಗಿದ್ದ - ಅನಿವಾರ್ಯ, ಅವಶ್ಯಕ ಕರ್ತವ್ಯಕ್ಕೆ ಲೋಪ ತಂದಿ ತೆಂಬುದನ್ನು ಹೇಳದೆಬಿಟ್ಟಿದ್ದಾರೆ. ನೂರು ದೇವಾಲಯಗಳಿಗಿಂತ ಒಂದು ವಿದ್ಯಾಸಂಸ್ಥೆ ಹೆಚ್ಚು ಫಲಕಾರಿ. ಈ ದಿಕ್ಕಿನಲ್ಲಿ ವಿಜಯನಗರ ಮಹಾಪರಾಧ ಮಾಡಿತು ಎಂದೇ ಹೇಳಬೇಕಾಗಿದೆ. ಆ ಕಾಲಕ್ಕಾಗಲೇ ಪಾಶ್ಚಾತ್ಯರ ಪ್ರವೇಶ ಆಗಿತ್ತು. ಪ್ರವಾಸಿಗರು ಬಂದು ಹೋಗುತ್ತಿದ್ದರು. ಇದರಿಂದೆಲ್ಲ ಶಿಕ್ಷಣದ ಅಗತ್ಯದ ಅರಿವು ಸಹಜವಾಗಿಯೇ ಅವರಿಗೆ ಆಗಬೇಕಾಗಿತ್ತಲ್ಲ; ಅವರು ಕೈಕಟ್ಟಿ ಕೂತರಲ್ಲ ಏಕೆ ಎಂದು ಪ್ರಶ್ನೆ ಹಾಕಬೇಕಾಗಿದೆ.

ಮಹಾನ್ ಸಾಮ್ರಾಜ್ಯ ಕಟ್ಟಬೇಕೆಂಬ ಸಂಕಲ್ಪದಲ್ಲಿ ಅಸ್ತಿತ್ವಕ್ಕೆ ಬಂದ ವಿಜಯ ನಗರ ಸಾಮ್ರಾಜ್ಯ, ರಾಜ್ಯದ ರಕ್ಷಣೆಯ ವಿಷಯದಲ್ಲೂ ಎಡವಿತೆಂದೇ ಹೇಳಬೇಕಾಗು ತ್ತದೆ. ತನ್ನ ಸೇನೆಯನ್ನು ಸುಸಜ್ಜಿತವಾಗಿ ಅದು ಇಟ್ಟಿತ್ತೇ? ನಾಡ ಹೊರಗಡಿಗಳ ರಕ್ಷಣೆಗೆ ತಕ್ಕ 'ಬಂದೋಬಸ್ತ್' ಮಾಡಿತ್ತೇ. ಈ ದಿಕ್ಕಿನಲ್ಲಿ ಕೈಗೊಂಡ ಕ್ರಮಗಳೇನು ಎಂಬುದನ್ನು ಬಿಡಿಸಿ ನೋಡಬೇಕಾಗಿದೆ. 'ರಕ್ಕಸತಂಗಡಿ' ದುರಂತದಿಂದಾಗಿ ಇಡೀ ಸಾಮ್ರಾಜ್ಯ ಧೂಳೀಪಟವಾದದ್ದು ಏಕೆ? ರಕ್ಕಸತಂಗಡಿಯಲ್ಲಿ ವಿಜಯನಗರ ಸೈನಿಕರು ಬಹಮನಿಯ ಫಿರಂಗಿಗಳ ಬಾಯಿ ತುತ್ತಾದರಲ್ಲಾ; ಶತ್ರುಗಳ ಈ ಫಿರಂಗಿಗಳಿಗೆ ಸವಾಲಾಗಿ ವಿಜಯನಗರ ಫಿರಂಗಿಗಳನ್ನು ಉಡಾಯಿಸಲಿಲ್ಲ ಏಕೆ?

ಇಂದಿಗೂ ಗೋಲ್ಕೊಂಡ, ಬಿದರ್, ಬಿಜಾಪುರಗಳಲ್ಲಿ ಕೋಟೆಗಳ ಮೇಲೆ ಹತ್ತಾರು ಫಿರಂಗಿಗಳು ಬಿದ್ದಿವೆ. ಗೋಲ್ಕೊಂಡಕ್ಕೆ ಸುಮಾರು ಮೂವತ್ತೈದು ವರ್ಷಗಳ ಹಿಂದೆ ಭೇಟಿ ಕೊಟ್ಟಿದ್ದಾಗ ಅಲ್ಲಿ ಕೋಟೆಯ ಬುರುಜುಗಳ ಅಕ್ಕಪಕ್ಕ ನೂರಾರು ಕೋವಿಗಳು ಬಿದ್ದಿದ್ದನ್ನು ಕಣ್ಣಾರೆ ಕಂಡಿದ್ದೇನೆ.

ಹಂಪೆಯನ್ನು ಸುತ್ತಾಡಿದರೂ ಒಂದಾದರೂ ಫಿರಂಗಿ ಕಣ್ಣಿಗೆ ಕಾಣಲಿಲ್ಲ. ನಮ್ಮ ನಾಡಿನ ಪಾಳೆಗಾರರ ಬಳಿಯೂ ಫಿರಂಗಿಗಳು ಇದ್ದಂತೆ ಕಾಣಬರದು. ಅದು ಬಂದದ್ದು ಹೈದರ್ ಟಿಪ್ಪೂಗಳ ಕಾಲಕ್ಕೆಂದೇ ಹೇಳಬೇಕಾಗುತ್ತದೆ. ಬಿಜಾಪುರದ 'ಮಾಲಿಕ್ - ಎ-ಮೈದಾನ್' ದೊಡ್ಡ ಫಿರಂಗಿಯನ್ನು ನೋಡಿದಾಗ ಅವರ ರಕ್ಷಣಾ ಜಾಗೃತಿ ಹೇಗಿತ್ತೆಂದು ತಿಳಿಯುತ್ತದೆ. ಹಂಪಿಯಲ್ಲಿ ಏನಿತ್ತು?

ವಿಜಯನಗರದ ಸರ್ವನಾಶಕ್ಕೆ ಕಾರಣ, ಅದು ವೈಭವೀಕರಣದಲ್ಲಿ ಮುಳುಗಿತು, ರಕ್ಷಣಾ ಬಲದ ಸದೃಢತೆಗೆ ಕೈಗೊಳ್ಳಬೇಕಾದುದನ್ನು ಮಾಡಲಿಲ್ಲ ಎಂದೇ ಹೇಳ ಬೇಕಾಗುತ್ತದೆ. ಪೋರ್ಚುಗೀಸರು ಆವೇಳೆಗಾಗಲೇ ಬಂದಿದ್ದರು. ಡಚ್ಚರು ಬಂದಿದ್ದರು.

ಇದರಿಂದ ಆಧುನಿಕ ಶಸ್ತ್ರಾಸ್ತ್ರಗಳನ್ನು ವಿಜಯನಗರ ಪಡೆಯಬಹುದಾಗಿತ್ತಲ್ಲ. ಇದ್ದ ಅವಕಾಶವನ್ನೂ ಅದು ಉಪೇಕ್ಷಿಸಿತೇ?

ವಿಜಯನಗರ ವೈಭವದ ಝೇಂಕಾರಕ್ಕಿಂತ ಅದರ ಅವಿವೇಕದ ಆಡಳಿತ ವೈಖರಿಯತ್ತ ರಕ್ಕಸತಂಗಡಿಯ ರೋದನಧ್ವನಿ ಮಾರ್ದನಿಯಾಗಿ ಕೇಳಿಸುತ್ತದೆ.

೨೭. ವಿಜಯನಗರ (ಹಂಪಿ) ಕೋಟೆಯಲ್ಲಿನ ಕೆಲವು ವಿಶಿಷ್ಟ ಶಿಲ್ಪಗಳು

ಡಾ. ಎಚ್. ತಿಪ್ಪೇಸ್ವಾಮಿ

ವಿಜಯನಗರ ಸಾಮ್ರಾಜ್ಯದ ಕಾಲಾವಧಿ ಕರ್ನಾಟಕ ಇತಿಹಾಸದಲ್ಲಿ ಒಂದು **ಕ್ರಾಂತಿ ಕಾರಕ ಕಾಲಘಟ್ಟ** (Revolutionary period)ವಾಗಿದೆ. ಈ ಕಾಲಾವಧಿಯಲ್ಲಿ ಎಲ್ಲಾರಂಗದಲ್ಲೂ ಸಾಕಷ್ಟು ಬದಲಾವಣೆಗಳಾಗಿ ಸಮಾಜ ಈ ಹಿಂದಿಗಿಂತಲೂ ಅಭಿವೃದ್ಧಿಯತ್ತ ಮುಖ ಮಾಡಲು ಕಾರಣವಾಯಿತು. ವಿಜಯನಗರದ ಅರಸರು ಇತರೆ ಅರಸರಂತೆ ತಮ್ಮ ಸಾಮ್ರಾಜ್ಯವನ್ನು, ಅಲ್ಲಿರುವ ಜನರನ್ನು, ಶತ್ರುಗಳಿಂದ ರಕ್ಷಿಸಲು ಶಾಸ್ತ್ರಬದ್ಧವಾಗಿ ತಮ್ಮ ಸಾಮ್ರಾಜ್ಯದ ವಿವಿಧ ಭಾಗಗಳಲ್ಲಿ ಹಲವಾರು ದುರ್ಗಗಳನ್ನು ನೂತನವಾಗಿ ನಿರ್ಮಾಣ ಮಾಡಿದರು. ಇಲ್ಲವೇ ಇದ್ದ ದುರ್ಗಗಳನ್ನು ಬಲಪಡಿಸಿದರು. ಹಾಗೇ ನಿರ್ಮಾಣವಾದ ಬಲಿಷ್ಠವಾದ ದುರ್ಗ/ ಕೋಟೆಗಳಲ್ಲಿ ಅಂದಿನ ರಾಜಧಾನಿಯ ಕೋಟೆ [ವಿಜಯನಗರ (ಹಂಪಿ)] ಅತ್ಯಂತ ಪ್ರಮುಖವಾಗಿದೆ. ಅಂದಿನ ಕೋಟೆಯ ವೈಶಿಷ್ಟ್ಯ ಅರಿಯಲು ನಮಗೆ ಶಾಸನಗಳು, ಸಮಕಾಲೀನ ಸಾಹಿತ್ಯ ಕೃತಿಗಳು ಹಾಗೂ ವಿದೇಶಿಯರ ಬರಣಿಗೆಗಳು ನೆರವಾಗುತ್ತವೆ. ಸ್ಥಳೀಯವಾಗಿ ದೊರೆಯುವ ಶಿಲೆಯನ್ನು ಬಳಸಿದ್ದರಿಂದಾಗಿ ಹೆಚ್ಚು ಸುಭದ್ರವಾದ ದುರ್ಗವನ್ನು ಉದ್ದೇಶಿತ ಸ್ಥಳದಲ್ಲಿ ಅಂದು ನಿರ್ಮಿಸಲಾಯಿತು.

ವಿಜಯನಗರ ಕೋಟೆಯ ಪ್ರಾಚೀನತೆ ಮತ್ತು ವಿಸ್ತಾರ

ವಿಜಯನಗರದ ರಾಜಧಾನಿ ಹಂಪಿಯ ಸ್ಥಳ ಆಯ್ಕೆ ಮಾಡುವಾಗ ಸಹಜ ವಾಗಿಯೇ ಶಾಸ್ತ್ರ ಗ್ರಂಥಗಳ ನಿಯಮಗಳನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ. ಉತ್ತರಕ್ಕೆ ತುಂಗಭದ್ರಾ ಮತ್ತು ಸಾಲು ಬೆಟ್ಟಗಳು ಹಾಗೂ ಪೂರ್ವದಲ್ಲಿನ ಗುಡ್ಡಗಳ ಸಾಲುಗಳು ಸಹಜವಾಗಿಯೇ ನಗರಕ್ಕೆ ರಕ್ಷಣೆ ಒದಗಿಸುತ್ತಿದ್ದರೂ ಸಹ ಬಲಿಷ್ಠ ರಕ್ಷಣಾವ್ಯವಸ್ಥೆಯನ್ನು ಅನುಷ್ಠಾನಕ್ಕೆ ತರುವ ದೃಷ್ಟಿಯಿಂದ ಈ ಗುಡ್ಡಗಳ ಮಧ್ಯದಲ್ಲಿ, ಗುಡ್ಡಗಳ ಮೇಲೆ ಹಾಗೂ ನೆಲದ ಮಟ್ಟದಲ್ಲಿ ಕೋಟೆಯನ್ನು ವ್ಯವಸ್ಥಿತವಾಗಿ ಯುದ್ಧ ತಂತ್ರದ ದೃಷ್ಟಿಯಿಂದ ನಿರ್ಮಿಸ ಲಾಗಿದೆ. ಸು. ೨೫ ಚ.ಕೀ.ಮೀ. ವಿಸ್ತಾರವಿರುವ ವಿಜಯ ನಗರದ ರಾಜಧಾನಿಯ ಸುತ್ತಲೂ ಆಯ್ದ ಭಾಗಗಳಲ್ಲಿ ಏಳು ಹಂತಗಳಲ್ಲಿ ಕೋಟೆ ಯನ್ನು ಕಾಲಾನುಕ್ರಮದಲ್ಲಿ ನಿರ್ಮಿಸಿರುವುದು ಇಲ್ಲಿಯ ವಿಶೇಷವಾಗಿದೆ. ಗಿರಿ ಹಾಗೂ ಜಲ ದುರ್ಗದ ಸಂಮಿಶ್ರಣ

ಲಕ್ಷಣಗಳನ್ನು ಹೊಂದಿರುವ ಇಲ್ಲಿನ ಕೋಟೆಯ ನಿರ್ಮಾಣದ (ಪ್ರಾಚೀನತೆಯ) ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಕ್ರಿ.ಶ. ಏಳನೆಯ ಶತಮಾನದಿಂದ ಹಂಪಿಯ ಅಸ್ತಿತ್ವದ ಬಗ್ಗೆ ಆಕರಗಳು ದೊರೆಯುತ್ತವೆ. ಆದರೂ ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಸಿಂದರ ಆಳ್ವಿಕೆ ಇದ್ದಾಗ ಇಲ್ಲಿ ಕೋಟೆ ಇದ್ದಂತೆ ಕಾಣುವುದಿಲ್ಲ. ಆದರೆ ಹೊಯ್ಸಳ ದೊರೆ ಮೂರನೆಯ ಬಲ್ಲಾಳನು (ಕ್ರಿ.ಶ. ೧೩೩೧ ರಲ್ಲಿ) ವಿರೂಪಾಕ್ಷ ದುರ್ಗದಿಂದ ಆಳ್ವಿಕೆ ಮಾಡುವಾಗ ಪ್ರಾಯಶಃ ಕೋಟೆಯೊಂದನ್ನು ಕಟ್ಟಿಸಿರಬಹುದು.[1] ತರುವಾಯ ಹಂಪಿಯನ್ನು ಆಳಿದ ಸಂಗಮ ದೊರೆ ಮೊದಲನೆಯ ಬುಕ್ಕನು (ಕ್ರಿ.ಶ. ೧೩೫೬-೧೩೭೭) ವಿಜಯನಗರ ಪಟ್ಟಣದಲ್ಲಿ ಕೋಟೆಯನ್ನು ಕಟ್ಟಿಸಿ ರಾಜಧಾನಿ ಯನ್ನು ಆನೆಗೊಂದಿಯಿಂದ ವಿಜಯನಗರಕ್ಕೆ ಸ್ಥಳಾಂತರಿಸಿದನು.[2] ಪ್ರಾರಂಭದಲ್ಲಿ ಚಿಕ್ಕದಾಗಿದ್ದ ಪಟ್ಟಣದ ಸುತ್ತಲು ಕಟ್ಟಿಸಿದ ಕೋಟೆಯು ಈಗ ಒಳಕೋಟೆ ಯಾಗಿದೆ. ಈ ಕೋಟೆಯು ಮಹಾನವಮಿ ದಿಬ್ಬವಿರುವ ಅರಮನೆ ಪ್ರದೇಶ, ರಾಣಿ ಸ್ನಾನಗೃಹ, ಜೈನ ದೇವಾಲಯ, ಪ್ರಸನ್ನ ವಿರೂಪಾಕ್ಷ ದೇವಾಲಯುದ ಪ್ರದೇಶವನ್ನು ಸುತ್ತುವರಿದಿದೆ. ಈ ಕೋಟೆಯಲ್ಲಿರುವ **ಸಿಂಘಾರದ ಬಾಗಿಲನ್ನು** ಬುಕ್ಕರಾಯನ ಶಾಸನವೊಂದು ಹೆಸರಿಸುತ್ತದೆ.[3] ಇದರಿಂದ ಈ ವೇಳೆಗಾಗಲೇ ಈ ಭಾಗದ ಕೋಟೆ ಅಸ್ತಿತ್ವ ದಲ್ಲಿತ್ತೆಂಬುದು ಸ್ಪಷ್ಟವಾಗುತ್ತದೆ. ಮುಂದೆ ಅಧಿಕಾರಕ್ಕೆ ಬಂದ ಹರಿಹರನ ಕಾಲದಲ್ಲಿ (ಕ್ರಿ.ಶ. ೧೩೭೭-೧೪೦೭) ಇನ್ನೊಂದು ಹಂತದಲ್ಲಿ ಮೇಲಿನ ಕೋಟೆಯ ಸುತ್ತಲೂ ಕೋಟೆ ನಿರ್ಮಿಸಿರುವುದು ಹೊದೆಯ ಬಾಗಿಲನ್ನು ಉಲ್ಲೇಖಿಸುವ ಶಾಸನದಿಂದ ಪರೋಕ್ಷವಾಗಿ ವೇದ್ಯವಾಗುತ್ತದೆ. ನಂತರ ಆಳ್ವಿಕೆ ಮಾಡಿದ ಇಮ್ಮಡಿ ದೇವರಾಯ (ಕ್ರಿ.ಶ. ೧೪೨೪-೧೪೪೬) ಮತ್ತು ಕೃಷ್ಣದೇವರಾಯನ (ಕ್ರಿ.ಶ. ೧೫೦೯-೧೫೪೨) ಕಾಲದಲ್ಲಿಯೂ ರಾಜಧಾನಿ ಸಾಕಷ್ಟು ಬೆಳೆಯಿತು. ಅಲ್ಲದೇ ಅನೇಕ ಉಪ ನಗರಗಳು ಈ ವೇಳೆ ನಿರ್ಮಾಣವಾಗಿ ಅವುಗಳ ಸುತ್ತಲೂ ನಿರ್ಮಾಣವಾದ ಕೋಟೆಯ ಕುರಿತು ಸಮಕಾಲೀನ ಸಾಹಿತ್ಯ ಕೃತಿಗಳಿಂದ ಹಾಗೂ ವಿದೇಶಿ ಪ್ರವಾಸಿಗರ ಬರಹಗಳಿಂದ ಸ್ಪಷ್ಟ ವಾಗುತ್ತದೆ. ಇವುಗಳೇ ನಂತರದ ವಿಜಯನಗರದರಸರು ಕೋಟೆಗಳಿಗೆ ಯಾವ ರೀತಿ ಪ್ರಾಮುಖ್ಯತೆ ಕೊಟ್ಟಿದ್ದರೆಂಬ ವಿವರವನ್ನು ಸಹ ನೀಡುತ್ತವೆ. ಅಚ್ಯುತಾರಾಯನ ಕಾಲದ ಕ್ರಿ.ಶ. ೧೫೪೦ರ ಶಾಸನವೊಂದು ಪೆನುಗೊಂಡೆ ಬಾಗಿಲನ್ನು ಉಲ್ಲೇಖಿಸುವುದರಿಂದ ಆ ಕಾಲಕ್ಕಾಗಲೇ ಇಂದಿನ ಪೆನುಗೊಂಡೆ ಬಾಗಿಲವರೆಗೆ ಕೋಟೆ ನಿರ್ಮಾಣವಾಗಿತ್ತೆಂಬುದು ಸ್ಪಷ್ಟವಾಗುತ್ತದೆ.[4] ಹೀಗೆ ಕಾಲಾನುಕ್ರಮದಲ್ಲಿ ವಿಜಯನಗರ ಕೋಟೆ ರಚನೆಯಾಗಿರುವುದನ್ನು ಗುರುತಿಸಬಹುದಾಗಿದೆ.

ಇಲ್ಲಿನ ಕೋಟೆಗೋಡೆಯ ರಚನೆಗಾಗಿ ಒಂದೇ ಅಳತೆಯ ಬೆಣೆ (Wedge-shaped) ಯಾಕಾರದ ಶಿಲೆಗಳನ್ನು ಮಾತ್ರ ಬಳಸಿಕೊಂಡು ಯಾವುದೇ ಸಂದುಗಳಿಲ್ಲ

ದಂತೆ ಪರಸ್ಪರ ಅವುಗಳನ್ನು ಜೋಡಿಸಿ ನಿರ್ಮಿಸಲಾಗಿದೆ. ಹೊರ ಮೈ (ಮುಂಭಾಗ) ಯನ್ನು ಬಹಳ ದಪ್ಪವಾಗಿ ಹಾಗೂ ಒಳ ಮೈಯನ್ನು ಮಣ್ಣಿನ ಇಳಿವೋರೆ (ramp)ಗಳಿಂದ ಕಟ್ಟಲಾಗಿದೆ. ಶತ್ರುಗಳಿಗೆ ಸುಲಭವಾಗಿ ಕೈಗೆಟಕದಂತೆ ಹೆಚ್ಚು ಸುಭದ್ರ ವಾಗಿ ಹಾಗೂ ಬಲಿಷ್ಠವಾಗಿ ಈ ಕೋಟೆಯನ್ನು ಕಟ್ಟಿರುವುದು ಇದರ ಭದ್ರತೆಯ ಮತ್ತೊಂದು ವೈಶಿಷ್ಟ್ಯವಾಗಿದೆ.

ಶಾಸ್ತ್ರ ನಿಯಮಕ್ಕನುಗುಣವಾಗಿ ರಚಿತವಾದ ಈ ಕೋಟೆಯಲ್ಲಿ ಗುಮ್ಮಟದ ಬಾಗಿಲು, ಸೋಮವಾರದ ಬಾಗಿಲು, ಉದಯಗಿರಿ ಬಾಗಿಲು, ಅರೆ ಶಂಕರ ಬಾಗಿಲು, ಒಂದನೇ ಪೆನುಗೊಂಡೆ ಮತ್ತು ಎರಡನೆ ಪೆನುಗೊಂಡೆ ಬಾಗಿಲು, ಮಲ್ಲಿಕಾರ್ಜುನ ಬಾಗಿಲು, ಕೋಟೆ ಶಂಕರ ದೇವರ ಬಾಗಿಲು, ಹೊದೆಯ ಬಾಗಿಲು, ಹೂವಿನ ಬಾಗಿಲು, ಕೊಠಾರದ ಬಾಗಿಲು, ಉಪ್ಪರಿಗೆ ಬಾಗಿಲು, ಸ್ವಾಮಿ ದೇವರ ಬಾಗಿಲು, ಆಂಜನೇಯ ದೇವಾಲಯದ ಸಮೀಪವಿರುವ ಬಾಗಿಲುಗಳಿವೆ. ಅಲ್ಲದೆ ಸಿಂಘಾರದ ಹೆಬ್ಬಾಗಿಲು, ಬೇಟೆಗಾರರ ಹೆಬ್ಬಾಗಿಲು, ಭೀಮನ ಹೆಬ್ಬಾಗಿಲುಗಳೆಂಬ ಬೃಹತ್ ಹೆಬ್ಬಾಗಿಲುಗಳೂ ಸಹಾ ಇಲ್ಲಿದ್ದು, ಸಂಶೋಧಕರ ಕುತೂಹಲವನ್ನು ಕೆರಳಿಸಿವೆ. ಇಲ್ಲಿನ ಕೋಟೆಯಲ್ಲಿ ಬಾಗಿಲು, ಹೆಬ್ಬಾಗಿಲುಗಳಷ್ಟೆ ಅಲ್ಲದೆ ಜನರ ಓಡಾಟಕ್ಕಾಗಿ ಹಲವಾರು ಚಿಕ್ಕ ಚಿಕ್ಕ ಪ್ರವೇಶ ಬಾಗಿಲುಗಳು (ದಿಡ್ಡಿಗಳು) ಇದ್ದ ಬಗ್ಗೆ ಶಾಸನಗಳು ವಿವರಿಸುತ್ತವೆ. ಅವು ಗಳಲ್ಲಿ ಹಂಪಾದೇವರ ದಿಡ್ಡಿ, ರೆಮ್ಮು ದಿಡ್ಡಿ, ಜಡೇಶಂಕರ ದೇವರ ದಿಡ್ಡಿ, ಮಾಂತಗ ದೇವರ ದಿಡ್ಡಿಗಳು ಪ್ರಮುಖವಾಗಿವೆ. ಇವುಗಳೊಂದಿಗೆ ಯುದ್ಧ ತಂತ್ರದ ದೃಷ್ಟಿಯಿಂದ ರಚಿಸಲ್ಪಟ್ಟ ಸ್ವಾಮಿದ್ರೋಹರ ಗಂಡನ ಕೊತ್ತಳ, ಮೀಸರಗೊಂಡನ ಕೊತ್ತಳ, ಆನೆ ಗೊಂದಿ ಕೊತ್ತಳ, ಮತಂಗ ದೇವರ ಕೊತ್ತಳ, ಪ್ರತಾಪ ಕೊತ್ತಳ, ಮಳಲ ವಿನಾಯಕ ಮತ್ತು ಹನುಮನ ಕೊತ್ತಳ, ಹಂಪಿಯ ಕೊತ್ತಳಗಳಲ್ಲದೆ ಇನ್ನು ಹಲವು ಕೊತ್ತಳ ಗಳಿದ್ದು, ಕೊಟೆಗಳ ಕುರಿತು ಅಧ್ಯಯನ ಮಾಡುವವರಿಗ ಆಕರಗಳಾಗಿವೆ.

ಇಲ್ಲಿನ ಕೋಟೆ ಗೋಡೆ ಮತ್ತು ಕೊತ್ತಳಗಳ ಹಾಗೂ ದ್ವಾರಗಳ, ಆಯ್ದ ಭಾಗ ಗಳಲ್ಲಿ ಹಲವಾರು ಶಿಲ್ಪಗಳನ್ನು ವಿವಿಧ ಉದ್ದೇಶಗಳನ್ನಿಟ್ಟುಕೊಂಡು ಕೆತ್ತಲಾಗಿದೆ. ಇವುಗಳನ್ನು ಆಧಾರವಾಗಿಟ್ಟುಕೊಂಡು ಅಂದಿನ ಸಾಂಸ್ಕೃತಿಕ ಮತ್ತು ಸಾಮಾಜಿಕ ಇತಿಹಾಸ ವನ್ನು ರಚಿಸಬಹುದಾಗಿದೆ. ವಿಜಯನಗರ ಕೋಟೆಯ ವಿವಿಧ ಭಾಗಗಳು ಇಂದಿನ ಹಂಪಿ, ಕಮಲಾಪುರಗಳ ಆಯ್ದ ಭಾಗಗಳನ್ನು ಸುತ್ತುವರಿದಿದ್ದು, ಈ ಸೀಮಿತ ಪ್ರದೇಶದ ಕೋಟೆಗಳಲ್ಲಿರುವ ವಿಶಿಷ್ಟ ಶಿಲ್ಪಗಳನ್ನು ಕುರಿತು ವಿಶ್ಲೇಷಿಸುವುದು ಈ ಪ್ರಬಂಧದ ಮುಖ್ಯ ಉದ್ದೇಶವಾಗಿದೆ. ಅದರಲ್ಲೂ ಬಹುಮುಖ್ಯವಾಗಿ ಇಲ್ಲಿನ ಪೆನಗೊಂಡೆ ಬಾಗಿಲಿನ ದ್ವಾರದಲ್ಲಿರುವ ದ್ವಾರಪಾಲಕ ಶಿಲ್ಪಗಳ ಕುರಿತು ಬೆಳಕು ಬೀರುವ ಪ್ರಥಮ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಕೋಟೆಯಲ್ಲಿರುವ ಮುಖ್ಯ ಶಿಲ್ಪಗಳು


ವಿಜಯನಗರದ ಕೋಟೆಯಲ್ಲಿನ ಕೋಟೆ ಗೋಡೆ, ಪ್ರವೇಶದ್ವಾರ, ಕೊತ್ತಳ ಇನ್ನೂ ಮೊದಲಾದೆಡೆ ಹಲವಾರು ಶಿಲ್ಪಗಳನ್ನು ಶಾಸ್ತ್ರ ನಿಯಮಕ್ಕನುಗುಣವಾಗಿ ಕೆತ್ತಿರುವುದನ್ನು ನಾವು ಕಾಣಬಹುದಾಗಿದೆ. ಅವುಗಳನ್ನು ಮುಖ್ಯವಾಗಿ ಈ ಕೆಳಗಿನಂತೆ ವಿಭಾಗಿಸಬಹುದಾಗಿದೆ:

1.	ಪೌರಾಣಿಕ ಶಿಲ್ಪಗಳು	:	ಲಕ್ಷ್ಮೀನರಸಿಂಹ, ವಿಷ್ಣು, ಆಂಜನೇಯ, ಭೈರವ ಮೊದಲಾದ ಶಿಲ್ಪಗಳು
2.	ಪ್ರಾಣಿಪಕ್ಷಿಗಳ ಶಿಲ್ಪಗಳು	:	ನಂದಿ, ನವಿಲು, ಮೊಸಳೆ, ಸಿಂಹ, ನಾಯಿ ಇತರೆ ಶಿಲ್ಪಗಳು
3.	ವ್ಯಕ್ತಿ ಶಿಲ್ಪಗಳು	:	ಮಲ್ಲಯುದ್ಧದಲ್ಲಿ ತೊಡಗಿರುವ, ಆರತಿ ಹಿಡಿದಿರುವ ಸ್ತ್ರೀ, ಕಾವಲುಗಾರರ ಇನ್ನು ಮುಂತಾದ ಶಿಲ್ಪಗಳು.

ಹಂಪಿಯ ಕೋಟೆಯಲ್ಲಿನ ವಿವಿಧ ಭಾಗದಲ್ಲಿ ಅಂದು ಕೆತ್ತಲ್ಪಟ್ಟಿರುವ ಹಲವಾರು ಶಿಲ್ಪಗಳಿದ್ದು, ಅವು ಅಧ್ಯಯನದ ದೃಷ್ಟಿಯಿಂದ ಪ್ರಾಮುಖ್ಯ ಪಡೆದುಕೊಂಡಿವೆ. ಅವುಗಳಲ್ಲಿ ಕೆಲ ಮುಖ್ಯ ಶಿಲ್ಪಗಳನ್ನು ಸ್ಥೂಲವಾಗಿ ಈ ಮುಂದೆ ವಿವರಿಸಲಾಗಿದೆ.

- ಸಿಂಘಾರದ ಹೆಬ್ಬಾಗಿಲಿನಲ್ಲಿ ಸಿಂಗಾರ ಮಾಡಿಕೊಳ್ಳುತ್ತಿರುವ ಸ್ತ್ರೀ, ಹಣ್ಣು ತಿನ್ನುತ್ತಿರುವ ಮಂಗ, ಗಣೇಶ, ನಂದಿ, ದಮ್ಮಡಿ ಹಿಡಿದ ಪುರುಷರು, ಸಿಂಹ, ನಾಯಿಯ ಹಾಗೂ ಚೂಪನೆಯ ಗಡ್ಡವುಳ್ಳ ದ್ವಾರಪಾಲಕನ ಶಿಲ್ಪಗಳಿವೆ.
- ಹೊದೆಯ ಬಾಗಿಲಿನ ಪೂರ್ವದ ಭಿತ್ತಿಗೆ ಆಸೀನ ಲಕ್ಷ್ಮೀನರಸಿಂಹನ ಶಿಲ್ಪವಿದೆ.
- ಸೋಮವಾರದ ಬಾಗಿಲಿನ ಕೋಟೆಯಲ್ಲಿ ಬಿಲ್ಲು ಹಿಡಿದಿರುವ ವೀರ (ಅಭ್ಯಾಸ ನಿರತ) ಆನೆ, ಲಕ್ಷ್ಮಿ, ಹನುಮಂತ, ಹಂಸ, ನಂದಿ, ಯಾಳಿ, ಕತ್ತಿ ವರಸೆಯಲ್ಲಿ ತೊಡಗಿರುವ ಶಿಲ್ಪಗಳಿವೆ.
- ಗುಮ್ಮಟದ ಬಾಗಿಲ ಕೋಟೆಯಲ್ಲಿ ಹಂಸ, ಮೀನು, ನರ್ತನ ಸ್ತ್ರೀ, ಆನೆ, ಗಣೇಶ, ಸರ್ಪ, ಮೊಸಳೆ, ನಂದಿ, ಅದಕ್ಕೆ ಎದುರಾಗಿ ಅಂಜಲಿ ಹಸ್ತನಾಗಿ ನಿಂತಿರುವ ಭಕ್ತನ ಶಿಲ್ಪಗಳಿವೆ.[5]

- ಅದೇ ರೀತಿ ಭೈರವ, ಆಂಜನೇಯ, ಯಕ್ಷ, ನೃತ್ಯ ಶಿಲ್ಪಗಳು ಹೂವಿನ ಬಾಗಿಲ ಕೋಟೆಯಲ್ಲಿದ್ದರೆ, ಅದೇ ದ್ವಾರದ ಅಧಿಷ್ಠಾನದಲ್ಲಿ ಮೃದಂಗ ಬಾರಿಸುವ ಸ್ತ್ರೀ, ನೃತ್ಯ ಶಿಲ್ಪ, ನಂದಿ, ಗುರಾಣಿ ಹಿಡಿದು ಹೋರಾಡುತ್ತಿರುವ ವೀರರು, ಕೈ ಮೇಲಕ್ಕೆತ್ತಿರುವ ಯತಿ ಇನ್ನು ಮೊದಲಾದ ಶಿಲ್ಪಗಳಿವೆ.
- ಭೀಮನ ಬಾಗಿಲ ಕೋಟೆಯ ಮೇಲೆ ದುಶ್ಯಾಸನನನ್ನು ಸಂಹಾರ ಮಾಡುತ್ತಿರುವ ಭೀಮನ ಹಾಗೂ ದ್ರೌಪದಿಯ ಎರಡು ಶಿಲ್ಪಗಳಿದ್ದು, ಆಕರ್ಷಣೀಯವಾಗಿದೆ.[6] ಕೋಟೆ ಶಂಕರ ಬಾಗಿಲ ಕೋಟೆಯ ಭಿತ್ತಿಯಲ್ಲಿ ಮಲ್ಲಯುದ್ಧದಲ್ಲಿ (ಕುಸ್ತಿ) ತೊಡಗಿದ ಶಿಲ್ಪಗಳು ಅಲ್ಲದೆ ಹುಲಿ ಮತ್ತು ಕೆಲ ಸ್ತ್ರೀ ಶಿಲ್ಪಗಳಿವೆ.
- ಕಮಲಾಪುರ - ಕಂಪ್ಲಿ ರಸ್ತೆಯಲ್ಲಿರುವ ಮುಸ್ಲಿಂ ಮುಸಾಫಿರ್ ಖಾನೆಯ ಬಳಿ ಇರುವ ಕೋಟೆಯಲ್ಲಿ ಸಳ ಹುಲಿಯನ್ನು ಕೊಲ್ಲುತ್ತಿರುವ ಶಿಲ್ಪ, ವಿಷ್ಣು, ಮತ್ಸನಾಥ, ಹುಲಿಯ ಮೇಲೆ ಕುಳಿತಿರುವ ನಾಥನ ಶಿಲ್ಪಗಳಿದ್ದು[8], ಅಧ್ಯಯನದ ದೃಷ್ಟಿಯಿಂದ ಮುಖ್ಯವೆನಿಸಿದೆ.
- ಎರಡನೇ ಪೆನುಗೊಂಡೆ ಬಾಗಿಲು ಕೊತ್ತಳದ ಭಿತ್ತಿಯಲ್ಲಿ ನಂದಿ, ಅದರ ಎದುರುಗಡೆ ಅಂಜಲಿಹಸ್ತನಾಗಿರುವ ಭಕ್ತನ ಶಿಲ್ಪಗಳಿವೆ. ಗುಮ್ಮಟ ಬಾಗಿಲಲ್ಲೂ ಇದೇ ರೀತಿಯ ಶಿಲ್ಪವಿದ್ದು, ಅದನ್ನು ಪ್ರೌಢ ದೇವ ರಾಯನಿಗೆ ಸಂಬಂಧಿಸಿದ್ದೆಂದು ವಿದ್ವಾಂಸರು ಊಹಿಸಿದ್ದಾರೆ.[7] ಇದೇ ಕೋಟೆಯ ದ್ವಾರದಲ್ಲಿ ವಿಶಿಷ್ಟವಾಗಿರುವ ದ್ವಾರಪಾಲಕ ಶಿಲ್ಪಗಳಿದ್ದು, ಅಧ್ಯಯನ ಯೋಗ್ಯವೆನಿಸಿದೆ.




ಕೋಟೆ ಶಂಕರ ಬಾಗಿಲ ಕೋಟೆಯ ಮೇಲಿರುವ ಶಿಲ್ಪಗಳು



ಕಮಲಾಪುರ - ಕಂಪ್ಲಿ ರಸ್ತೆಯ ಮುಸ್ಲಿಂ ಮುಸಾಫಿರ್ ಖಾನೆಯ ಬಳಿ ಇರುವ
ಕೋಟೆಯ ಭಿತ್ತಿಯಲ್ಲಿನ ಸಳ ಹುಲಿಯನ್ನು ಕೊಲ್ಲುತ್ತಿರುವ ಶಿಲ್ಪ



ಎರಡನೇ ಪೆನುಗೊಂಡೆ ಬಾಗಿಲಿನ ಹಿಂಭಾಗದ ನೋಟ



ಎರಡನೇ ಪೆನುಗೊಂಡೆ ಬಾಗಿಲಿನಲ್ಲಿರುವ ಶಿಲ್ಪ

ವಿಶಿಷ್ಟ ದ್ವಾರಪಾಲಕ ಶಿಲ್ಪಗಳು

ಕಮಲಾಪುರದ ಆಗ್ನೇಯಕ್ಕೆ ಎರಡು ಕಿ.ಮೀ. ದೂರದಲ್ಲಿ ಎರಡನೇ ಪೆನುಗೊಂಡೆ ಬಾಗಿಲಿದೆ. ವಿಜಯನಗರ ಕಾಲದಲ್ಲಿ ವರದರಾಜಮ್ಮನ ಪಟ್ಟಣದ ದ್ವಾರವೆಂದು ಪರಿಗಣಿಸಲ್ಪಟ್ಟಿದ್ದ ಈ ದ್ವಾರ ಅಂದಿನ ಪ್ರಮುಖ ದ್ವಾರಗಳಲ್ಲಿ ಒಂದಾಗಿದೆ. ಅಂದು ಪೆನುಗೊಂಡೆಯಿಂದ ರಾಜಧಾನಿಗೆ ಆಗಮಿಸುವವರು ಇದೇ ದ್ವಾರದ ಮುಖಾಂತರ ಗುಮ್ಮಟಬಾಗಿಲು ಪ್ರವೇಶಿಸಿ, ನಂತರ ಭೀಮಾದ್ವಾರದ ಮೂಲಕ ಅರಮನೆಗೆ ಪ್ರವೇಶಿಸುತ್ತಿದ್ದರು. ಕ್ರಿ.ಶ. ೧೫೪೦ರ ಶಾಸನದಲ್ಲಿ ಈ ಬಾಗಿಲ ಉಲ್ಲೇಖವಿದೆ.[೨] ಇದರ ದ್ವಾರದ ಎರಡು ಬದಿಯಲ್ಲಿ ವಿಶಿಷ್ಟವಾಗಿರುವ ಕಾವಲುಗಾರರ ಶಿಲ್ಪಗಳನ್ನು ಕೆತ್ತಲಾಗಿದ್ದ, ಅವು ಅಂದಿನ ರಕ್ಷಣಾ ವ್ಯವಸ್ಥೆಯ ದ್ಯೋತಕಗಳಾಗಿವೆ.

1. ಬಲಭಾಗದ ದ್ವಾರಪಾಲ ಶಿಲ್ಪ : ಆಕರ್ಷಣೀಯವಾಗಿರುವ ಹಾಗೂ ಪಾದದವರೆಗೆ ಇಳಿಬಿದ್ದಿರುವ ಪಂಚೆಯನ್ನು ಧರಿಸಿರುವ ಈ ದ್ವಾರಪಾಲಕನು ಕಿರೀಟ ಧರಿಸಿದ್ದು, ಕಿವಿಯಲ್ಲಿ ಕುಂಡಲ, ಕೈ ಮತ್ತು ಕಾಲಿನಲ್ಲಿ ಕಡಗಗಳನ್ನು ಧರಿಸಿದ್ದಾನೆ. ಬಲಗೈನಲ್ಲಿ ದೊಣ್ಣೆಯಾಕಾರದ ದಂಡ (ಕೋಲು)ವನ್ನು ಹಿಡಿದಿದ್ದು, ಅದೇ ರೀತಿ ಎಡಗೈನಲ್ಲಿ ಭುಜದಿಂದ ಇಳಿಬಿದ್ದಿರುವ ಚಾವಟಿಯನ್ನು ಹಿಡಿದಿರುವುದು ನಮ್ಮ ಗಮನ ಸೆಳೆಯುತ್ತದೆ. ಸು. ೪½ ಅಡಿ ಎತ್ತರವಾಗಿರುವ ಇದು ಪೀಠದಲ್ಲಿ ಸ್ಥಾನಿಕ ಭಂಗಿಯಲ್ಲಿದೆ. ಇದರ ಪೀಠದಲ್ಲಿ ಅರಳಿದ ಪುಷ್ಪವನ್ನು ಕೆತ್ತಲಾಗಿದೆ. ಆಕರ್ಷಕ ಮುಖಭಾವ

ಹೊಂದಿರುವ ಈ ದ್ವಾರಪಾಲಕ ಶಿಸ್ತಿನಿಂದ ಕಾರ್ಯೋನ್ಮುಖವಾಗಿರು ವಂತೆ ಕೆತ್ತಿರುವುದು ವಿಶೇಷವಾಗಿದೆ. (ಚಿತ್ರ 5)

2. ಎಡಭಾಗದ ದ್ವಾರಪಾಲ ಶಿಲ್ಪ : ಎಡಗೈನಲ್ಲಿ ದೊಣ್ಣೆಯಕಾರಾದ ಕೋಲು (ದಂಡ) ಮತ್ತು ಬಲಗೈ ಮೇಲೆಕ್ಕೆತ್ತಿ ಹಿಡಿದು ಪೀಠದ ಮೇಲೆ ನಿಂತಿದೆ. ಈ ಶಿಲ್ಪವು ತಲೆಗೆ ಆಕರ್ಷಣೀಯವಾದ ಶಿರಸ್ತ್ರಾಣ ಮಾದರಿಯ ರುಮಾಲನ್ನು ಧರಿಸಿದ್ದು, ಕಿವಿಯಲ್ಲಿ ಕುಂಡಲಗಳನ್ನು ಧರಿಸಿದೆ. ಕೈನಲ್ಲಿ ಮಾತ್ರ ಕಡಗಗಳಿದ್ದು, ಕಾಲುಗಳಲ್ಲಿ ಕಡಗಗಳಿರದೇ ಸರಳವಾಗಿವೆ. ಸೊಂಟದಲ್ಲಿ ಚಿಕ್ಕದಾದ ಒಂದು ಕಠಾರಿಯನ್ನು ಸಿಕ್ಕಿಸಿಕೊಂಡಿರುವ ಇದು ಚೊಲ್ಲಣ ರೀತಿಯ ಚೆಡ್ಡಿಯನ್ನು ಧರಿಸಿದೆ. ಸು. ೪½ ಅಡಿ ಎತ್ತರವಾಗಿರುವ ಈ ದ್ವಾರಪಾಲನು ಆಕರ್ಷಕ ಮುಖ ಭಾವವನ್ನು ಹೊಂದಿದ್ದು, ಕಾರ್ಯೋನ್ಮುಖನಾಗಿರು ವಂತೆ ಕೆತ್ತಲಾಗಿರುವುದು ವಿಶೇಷವಾಗಿದೆ.



ಬಲಭಾಗದ ದ್ವಾರಪಾಲಕ ಶಿಲ್ಪ ಪೆನುಗೊಂಡೆ ಬಾಗಿಲು



ಎಡಭಾಗದ ದ್ವಾರಪಾಲಕ ಶಿಲ್ಪ ಪೆನುಗೊಂಡೆ ಬಾಗಿಲು

ಸಮಕಾಲೀನ ಸಾಹಿತ್ಯ ಮತ್ತು ವಿದೇಶಿಯರ ಬರವಣಿಗೆಗಳು ಹಾಗೂ ಕೆಲ ಮೌಖಿಕ ಪರಂಪರೆ ಮತ್ತು ಸ್ಥಳೀಯ ಐತಿಹ್ಯಗಳನ್ನು ಆಧಾರವಾಗಿಟ್ಟುಕೊಂಡು, 'ಎತ್ನೊ ಆರ್ಕಿಯಾಲಾಜಿ'ಯ ಸಹಾಯದಿಂದ ಈ ದ್ವಾರಪಾಲ ಶಿಲ್ಪಗಳ ಮೇಲೆ ಹೊಸ ಬೆಳಕು ಬೀರಿ ವಿಶ್ಲೇಷಿಸಲು ಸಾಧ್ಯವಿದೆ. ಅಂದರೆ ಬೇರೆಲ್ಲೂ ಕಾಣದ ಈ ಶಿಲ್ಪಗಳನ್ನು ಈ ಭಾಗದಲ್ಲಿಯೇ ಏತಕ್ಕಾಗಿ ಮತ್ತು ಯಾವ ಉದ್ದೇಶದಿಂದ ಇಲ್ಲಿ ಕೆತ್ತಲಾಗಿದೆ, ಅವುಗಳ ಮೂಲ, ಅವು ಯಾರನ್ನು ಪ್ರತಿಬಿಂಬಿಸುತ್ತವೆ ಇನ್ನೂ ಮೊದಲಾದ ವೈಶಿಷ್ಟ್ಯತೆಗಳ ಕುರಿತು ನಮಗೆ ಸಹಜವಾಗಿಯೇ ಕೆಲ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ.

ಕ್ರಿ.ಶ. ೧೪೪೩ರಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ್ದ ಅಬ್ದುಲ್ ರಜಾಕನು ಈ ನಗರವನ್ನು ವರ್ಣಿಸುತ್ತಾ, ಇಲ್ಲಿನ ಕೋಟೆಯ ಕುರಿತು ಮುಂದಿನಂತೆ ಹೇಳುತ್ತಾನೆ: 'ಇಲ್ಲಿನ ಕೋಟೆ ಚಕ್ರಾಕಾರವಾಗಿದೆ. ಇದನ್ನು ಬೆಟ್ಟದ ತುದಿಯ ಮೇಲೆ ಕಲ್ಲು ಮತ್ತು

ಗಾರೆಯಿಂದ ಕಟ್ಟಿದ್ದಾರೆ. ಇದರ ಹೆಬ್ಬಾಗಿಲುಗಳು ಬಹು ಬಲವಾಗಿವೆ. ಇವುಗಳನ್ನು ಒಂದೇ ಸಮನೆ ಕಾಯುತ್ತಾರೆ, ಯಾರನ್ನು ಪರೀಕ್ಷೆ ಮಾಡದೇ ಒಳಗೆ ಬಿಡುವುದಲ್ಲ. ಇವರು ಸುಂಕ ವಸೂಲಿ ಮಾಡುತ್ತಾರೆ'[10] ಎಂದು ಹೇಳಿದ್ದಾನೆ. ಇದರಿಂದ ಅಂದಿನ ಕೋಟೆ ಬಾಗಿಲುಗಳು ಮತ್ತು ಅಲ್ಲಿನ ಕಾವಲಿನ ಭಟರ ಕಾರ್ಯ ವೈಖರಿ ಬಗ್ಗೆ ನಮಗೆ ಸ್ಪಷ್ಟವಾಗುತ್ತದೆ. ಅಲ್ಲದೇ ಸಮಕಾಲೀನ ಹಲವು ಸಾಹಿತ್ಯ ಕೃತಿಗಳು ವಿಜಯ ನಗರ ಕಾಲದ ಕೋಟೆಗಳ ಮಹತ್ವ ಕುರಿತು ಉಲ್ಲೇಖಿಸಿವೆ. ನಂಜುಂಡ ಕವಿ ತನ್ನ 'ಭೈರವೇಶ್ವರ ಕಾವ್ಯ'ದಲ್ಲಿ ಅಂದು ಜರುಗುತ್ತಿದ್ದ ಕೋಟೆ ಕಾಳಗಗಳು ಮತ್ತು ಅವು ಗಳಲ್ಲಿ ಕಾವಲಿನ ಭಟರು ನಿರ್ವಹಿಸುತ್ತಿದ್ದ ಪಾತ್ರ ಕುರಿತು ವಿವರವಾಗಿ ಹೇಳಿದ್ದಾನೆ.[11]

ವಿಜಯನಗರದರಸರು ತಮ್ಮ ರಾಜ್ಯದ ರಕ್ಷಣೆಗಾಗಿ ಉತ್ತಮವಾದ ಸೈನಿಕ ಇಲಾಖೆಯನ್ನು ಹೊಂದಿದ್ದರು. ಅದರಲ್ಲಿ ಸೈನಿಕರೊಂದಿಗೆ ರಾಜ್ಯದ ರಕ್ಷಣೆಗಾಗಿ ಪ್ರತ್ಯೇಕವಾಗಿ ಕಾವಲುಭಟರನ್ನು/ಬೇಡ ಪಡೆಯನ್ನು ನೇಮಿಸಿಕೊಂಡಿದ್ದರ ಬಗ್ಗೆ ಸಾಕಷ್ಟು ಪುರಾವೆಗಳಿವೆ. ಅಂದಿನ ಕೋಟೆ ಬಾಗಿಲುಗಳನ್ನು ಕಾವಲುಗಾರರು ಸಂರಕ್ಷಿಸುತ್ತಿದ್ದರ ಬಗ್ಗೆ ಸಹ ಸಾಕಷ್ಟು ವಿವರಗಳು ಲಭ್ಯವಿದೆ.[12] ಇವುಗಳ ಆಧಾರದಿಂದ ಈ ಉಬ್ಬು ಶಿಲ್ಪಗಳ ವಿಶ್ಲೇಷಣೆಯನ್ನು ಮಾಡಬಹುದಾಗಿದೆ.

1. ಈ ಶಿಲ್ಪಗಳ ವೇಷಭೂಷಣಗಳು ಇಂದಿನ (ಆಧುನಿಕ) ಪಶುಪಾಲನ ವೃತ್ತಿ ಕೈಗೊಂಡಿರುವ ಬೇಡ ಸಮುದಾಯದವರಲ್ಲಿ ಕಾಣಬಹುದಾಗಿದೆ. ಹಂಪಿ, ಕಮಲಾಪುರದ ಸುತ್ತ ವಾಸಿಸುತ್ತಿರುವ ಬೇಡ ಸಮುದಾಯದವರು ಅದರಲ್ಲೂ ಶ್ರೀ. ಕಂಪಳ ದೇವರಿಗೆ ನಡೆದುಕೊಳ್ಳುತ್ತಿರುವ ಪುರುಷರು ವಿಶೇಷವಾಗಿ ಚೊಲ್ಲಣ ರೀತಿಯ ಚಡ್ಡಿಯನ್ನು ಮಾತ್ರ ಇಂದಿಗೂ ಧರಿಸುತ್ತಾರೆ. ಅಲ್ಲದೇ ಕೈ ಮತ್ತು ಕಾಲುಗಳಿಗೆ ಬೆಳ್ಳಿಯ ಕಡಗವನ್ನು ಧರಿಸುತ್ತಾರೆ. ಇದರ ಆಧಾರದ ಮೇಲೆ ಈ ಶಿಲ್ಪಗಳು ಬಹುಶಃ ಬೇಡ ಬುಡಕಟ್ಟನ್ನು ಪ್ರತಿನಿಧಿಸುವ ಜನರ ಸಾಂಕೇತಿಕ ಶಿಲ್ಪಗಳಾಗಿವೆ ಎಂದು ಹೇಳಬಹುದು.

2. ಕಂಪ್ಲಿಯ ಹೆಳವರ ನಿಂಗಪ್ಪನವರ ಬಳಿ ಇರುವ ವಂಶಾವಳಿ ದಾಖಲೆಗಳಲ್ಲಿ ಅಲ್ಲಿನ ಬೇಡ ಸಮುದಾಯದ ಓಬಯ್ಯ ಇ/ತಂ ದಿ|| ಸೊರಯ್ಯನವರಿಗೆ ಸಂಬಂಧಿಸಿದ ವಂಶಾವಳಿಯೊಂದಿದೆ. ಅದರಲ್ಲಿ ಇವರ ಪೂರ್ವಜರು ವಿಜಯನಗರದ ಸೈನ್ಯದಲ್ಲಿ ಕಾವಲುಗಾರರಾಗಿ ಸೇವೆ ಸಲ್ಲಿಸುತ್ತಿದ್ದರೆಂಬ ಮಾಹಿತಿ ಇದೆ. ಇದರ ಮತ್ತು ಈ ಮೇಲಿನ ಸಾಹಿತ್ಯಿಕ ಮತ್ತು ವಿದೇಶಿ ಬರಣಿಗೆಗಳ ಆಧಾರದ ಮೇಲೆ ಅಂದು ಬೇಡರು ವಿಜಯನಗರ ಸೈನ್ಯದಲ್ಲಿ ವಿವಿಧ ಶ್ರೇಣಿಗಳಲ್ಲಿ ಸೇವೆ ಸಲ್ಲಿಸುತ್ತಿದ್ದರೆಂದು ಹೇಳಬಹುದು.

3. ಇಂದಿಗೂ ಬೇಡ ಸಮುದಾಯದ ಕೆಲವರು ಹಿರೇರ ಹಬ್ಬದಂದು (ಪಿತೃ ಪೂಜೆಯಂದು) ಈ ಶಿಲ್ಪಗಳಿಗೆ ಎಡೆ ಇಟ್ಟು ಪೂಜಿಸುವ ಪರಿಪಾಠ ಇಟ್ಟುಕೊಂಡಿದ್ದಾರೆ. ಇದರೊಂದಿಗೆ ಇದೇ ಗೋಡೆಯಲ್ಲಿರುವ ನಂದಿ, ಶಿವಲಿಂಗ ಮತ್ತು ಭಕ್ತನ ಶಿಲ್ಪ ಗಳನ್ನು

ಆಗಾಗ ಪೂಜಿಸುತ್ತಾರೆ.[13] ಇದರಿಂದ ಬೇಡ ಸಮುದಾಯವರು ಅಂದು ಕಾವಲುಗಾರರಾಗಿ/ ಸುಂಕವಸೂಲಿ ಮಾಡುವ ಕೆಲಸ ನಿರ್ವಹಿಸುತ್ತಿದ್ದರೆಂಬುದು ಸ್ಪಷ್ಟ ವಾಗುತ್ತದೆ.

ಈ ಮೇಲಿನ ಅಂಶಗಳನ್ನು ತುಲನಾತ್ಮಕವಾಗಿ ಹೋಲಿಸಿ ನೋಡಿದರೆ, ಖಂಡಿತ ಈ ಶಿಲ್ಪಗಳು ಬೇಡ ಸಮುದಾಯಕ್ಕೆ ಸೇರಿದ ಶಿಲ್ಪಗಳೆಂದು ಹೇಳಬಹುದಾಗಿದೆ. ಅಲ್ಲದೆ ಅಂದು ಸುಂಕ ವಸೂಲಿಮಾಡಲು ತಳಾರಿ ಅಥವಾ ತಳವಾರ ಎಂಬ ಅಧಿಕಾರಿ ಗಳು ನೇಮಕವಾಗಿದ್ದರೆಂದು ಚಾರಿತ್ರಿಕ ಕೃತಿಗಳಿಂದ ತಿಳಿದು ಬರುತ್ತದೆ. ಅಬ್ದುಲ್ ರಜಾಕನ ಮಾತನ್ನು ಆಧಾರವಾಗಿಟ್ಟುಕೊಂಡು ಹೇಳುವುದಾದರೆ, ಪ್ರಾಯಶಃ ಬಲಭಾಗದ ಶಿಲ್ಪವು ತಳವಾರನದಾಗಿರಬಹುದೇ? ಎಂದೆನಿಸುತ್ತದೆ.[14] ಅಲ್ಲದೇ ಎಡಭಾಗದಲ್ಲಿರುವ ಶಿಲ್ಪವು ಪ್ರಾಯಶಃ ಬೇಡ ಕಾವಲುಗಾರನ ಶಿಲ್ಪವಿರಬೇಕೆನಿಸುತ್ತದೆ. ಹೀಗೆ ಅಂದಿನ ಸಾಮಾಜಿಕ - ಸಾಂಸ್ಕೃತಿಕ ಇತಿಹಾಸ ಪುನರ್ ರಚಿಸಲು ಇಲ್ಲಿನ ಕೋಟೆ ಮತ್ತು ಕೊತ್ತಳಗಳ ಮೇಲಿನ ಶಿಲ್ಪಗಳು ಸಹಾಯಕವಾಗಿವೆ. ವಿಜಯನಗರ ಕೋಟೆಯಲ್ಲಿನ ಶಿಲ್ಪಗಳನ್ನು ಕೆಲವರು ಶುಭ ಸಂಕೇತಗಳೆಂದು, ಮಂಗಳಕರ ಚಿಹ್ನೆಗಳೆಂದು, ಇವುಗಳು ಇರುವ ಪ್ರದೇಶದಲ್ಲಿ ನಿಧಿ ಇದೆ ಎಂದೆಲ್ಲಾ ಭಾವಿಸಿದ್ದಾರೆ. ಹಾಗೆಂದು ಅವುಗಳ ಮೂಲ ಸ್ವರೂಪಕ್ಕೆ ಚ್ಯುತಿ ಇರುವ ಪ್ರಯತ್ನಗಳನ್ನು ಇಂದಿಗೂ ಮಾಡುತ್ತಿರುವುದು ವಿಪರ್ಯಾಸ. ಆದರೆ ಇವುಗಳನ್ನು ವಾಸ್ತವಿಕವಾಗಿ ಕೋಟೆ ಗೋಡೆಯ ಅಂದವನ್ನು ಹೆಚ್ಚಿಸಲು, ಶಾಸ್ತ್ರ-ನಿಯಮಗಳಿಗೆ ಅನುಗುಣವಾಗಿ ರಚಿಸಲಾಗಿದೆ. ಇದಕ್ಕಿಂತಲೂ ಇವುಗಳ ರಚನೆಯ ಉದ್ದೇಶವೆಂದರೆ ಅಂದಿನ ಕಾಲದ ಜನರಿಗೆ ಅನೌಪಚಾರಿಕ ಜ್ಞಾನ ಶಿಸ್ತುಗಳನ್ನು ಪರಿಚಯಿಸುವ ಉದ್ದೇಶದಿಂದ? ಇಲ್ಲವೇ ಅಂದಿನ ಪ್ರಯಾಣಿಕರ ಹಾಗೂ ಗೂಢಚಾರರ ರಹದಾರಿಯ ರಹಸ್ಯ ಸಂಕೇತಗಳಾಗಿ (ಮುನ್ಸೂಚಕ ಚಿಹ್ನೆಗಳಾಗಿ) ತೋರಿಸುವ ಪ್ರಯತ್ನವಾಗಿ ಇವುಗಳನ್ನು ರಚಿಸಲಾಗಿದೆ. ವಿಜಯನಗರ ಕೋಟೆಯಲ್ಲಿನ ಇತರೆ ಶಿಲ್ಪಗಳ ಮಹತ್ವ ಕುರಿತು ವ್ಯವಸ್ಥ ಸಮಗ್ರ ಅಧ್ಯಯನ ಹಾಗೂ ವಿಶ್ಲೇಷಣೆ ಮಾಡಲು ಸಾಕಷ್ಟು ಅವಕಾಶಗಳಿವೆ. ಇದು ಮುಂದಿನ ಹಲವು ಸಂಶೋಧನೆಗಳಿಗೆ ದಾರಿ ಮಾಡಿಕೊಡಬಲ್ಲದು.

ಅಡಿಟಿಪ್ಪಣಿಗಳು

1. ಪಾಟೀಲ್ ಸಿ.ಎಸ್. **ಕರ್ನಾಟಕದ ಕೋಟೆಗಳು**. 1999, ಪು. 91
2. ಅದೇ.
3. ಡಾ. ದೇವರ ಕೊಂಡ ರೆಡ್ಡಿ, **ಹಂಪಿಯ ಶಾಸನಗಳು**, 2000, ಪು. 27
4. ಅದೇ.

5. ಈ ಶಿಲ್ಪವನ್ನು ಇಮ್ಮಡಿದೇವರಾಯನದೆಂದು ಊಹಿಸಲಾಗಿದೆ. ನೋಡಿ : ದಿಕ್ಷಿತ್ ಜಿ.ಎಸ್. ಮತ್ತು ವಿಶ್ವೇಶ್ವರಯ್ಯ ಎಂ.ವಿ. **ಸಂಗಮರ ಕಾಲದ ವಿಜಯನಗರ.** 1971. ಪು. 94-95
6. Anila Verghese. *Hampi Monumental Legacy.* 2002. p. 57 ಮತ್ತು ಡಾ. ಸಿ. ಎಸ್. ವಾಸುದೇವನ್‌ರವರು ಹಂಪಿಯಲ್ಲಿ ಮಹಾಭಾರತದ ನಿರೂಪಣಾತ್ಮಕ ಉಬ್ಬು ಶಿಲ್ಪಗಳು ಎಂಬ ತಮ್ಮ ಲೇಖನದಲ್ಲಿ ದುಶ್ಯಾಸನ ಎಂದು ಸರಿಯಾಗಿ ಗುರುತಿಸಿದ್ದಾರೆ. ಈ ಶಿಲ್ಪವನ್ನು ಕೆಲ ಸಂಶೋಧಕರು ಭೀಮ ಕೀಚಕನನ್ನು ಕೊಲ್ಲುತ್ತಿದ್ದಾನೆ ಎಂದು ತಪ್ಪಾಗಿ ಅಭಿಪ್ರಾಯಪಟ್ಟಿದ್ದಾರೆ.
7. ದೀಕ್ಷಿತ್ ಜಿ.ಎಸ್. ಮತ್ತು ವಿಶ್ವೇಶ್ವರಯ್ಯ ಎಂ.ವಿ. ಪೂರ್ವೋಕ್ತ
8. ಇದು ವ್ಯಾಘ್ರನಾಥನ ಶಿಲ್ಪವೇ?
9. ಡಾ. ದೇವರ ಕೊಂಡ ರೆಡ್ಡಿ, ಪೂರ್ವೋಕ್ತ.
10. ಎಚ್.ಎಲ್. ನಾಗೇಗೌಡರ ಪ್ರವಾಸಿ **ಕಂಡ** ಇಂಡಿಯಾ ಸಂಪುಟ 7.
11. ನಂಜುಂಡ ಕವಿಯ (ಕ್ರಿ.ಶ. ೧೫೫೦) ಭೈರವೇಶ್ವರ ಕಾವ್ಯದಲ್ಲಿ ಇದು ಉಲ್ಲೇಖವಾಗಿವೆ. ನೋಡಿ: ಡಾ. ಶ್ರೀಕಂಠಯ್ಯ ಪೂರ್ವೋಕ್ತ.
12. ಪಾಟೀಲ್ ಸಿ.ಎಸ್. ಡೋರ್ ಗಾರ್ಡಿಯನ್ಸ್ ಆಫ್ ವಿಜಯನಗರ. 1977-1983. ಪುಟ. 66-67
13. ಕೊಡ್ಲಿಗಿ ತಾಲೂಕಿನ ಹಳ್ಳಿಯೊಂದರಿಂದ ಇಲ್ಲಿಗೆ ಪೂಜೆಗೋಸ್ಕರ ಜನರು ಬರುತ್ತಾರೆಂದು ಸ್ಥಳೀಯರು ಹೇಳುತ್ತಾರೆ.
14. ತಳವಾರರನ್ನು ತೆಲುಗಿನಲ್ಲಿ ತಳಾರ ರಾಮಲು ಎಂದು ಕರೆಯುತ್ತಾರೆ. ತಳಾರ ರಾಮನೆಂದರೆ ಸುಂಕ ವಸೂಲಿ ಮಾಡುವವನು/ ಕೋಟೆಯ ದ್ವಾರ ಕಾಯುವವನು ಹಾಗೂ ಕೋಟೆಯಲ್ಲಿ ಪ್ರವೇಶ ಪಡೆಯುವವರನ್ನು (ಅವರ ತಲೆಗಳನ್ನು) ಎಣಿಸಿ, ದಾಖಲಿಸುವವನು ಎಂಬ ಅರ್ಥಗಳಿವೆ! ಇದು ಸಹಾ ಈ ಹೇಳಿಕೆಗೆ ಪೂರಕವಾಗಬಲ್ಲದು.

ಆಧಾರ ಗ್ರಂಥಗಳು

1. ಕೊಟ್ರೇಶ್ ಎಂ. - 2001- ವಿಜಯನಗರ ಕಾಲದ ಕೋಟೆಕೊತ್ತಲಗಳು-ಒಂದು ಅಧ್ಯಯನ (ಅಪ್ರಕಟಿತ ಪಿಎಚ್.ಡಿ.ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ)
2. ಡಾ. ದೇವರ ಕೊಂಡರ ರೆಡ್ಡಿ ಮತ್ತು ಇತರರು - 2000- **ಕನ್ನಡ ವಿ.ವಿ. ಶಾಸನ ಸಂಪುಟ 3** (ಹಂಪಿಯ ಶಾಸನಗಳು) ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ
3. ಡಾ. ಶ್ರೀಕಂಠಯ್ಯ - 1983 - **ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ,** ಗೀತಾ ಬುಕ್‌ಹೌಸ್, ಮೈಸೂರು.
4. ಡಾ.ಪಾಟೀಲ್ ಸಿ.ಎಸ್. - 2000- **ಕರ್ನಾಟಕದ ಕೋಟೆಗಳು (ಸಂ - 1)**, ಪ್ರಸಾರಂಗ ಕನ್ನಡ ವಿ.ವಿ., ಹಂಪಿ

5. ಡಾ.ಪಾಟೀಲ್ ಸಿ.ಎಸ್. - 1996- ವಿಜಯನಗರ (ಹಂಪಿಯ) ಶಾಸನಗಳು, ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

6. ನಾಗೇಗೌಡ ಎಚ್.ಎಲ್.- ಪ್ರವಾಸಿ ಕಂಡ ಇಂಡಿಯಾ, ಸಂಪುಟ 7, ಪ್ರಸಾರಾಂಗ, ಮೈಸೂರು ವಿ.ವಿ. ಮೈಸೂರು.

7. ಸೋಮಶೇಖರ ಎಸ್.ವೈ. - 2000- ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧ ನೀತಿ (ಅಪ್ರಕಟಿತ ಪಿಎಚ್.ಡಿ. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ)

ಇಂಗ್ಲಿಷ್ ಕೃತಿಗಳು

1. Anila Verghese - 2002 - *Hampi Monumental Legacy,* Oxford University Press, New Delhi.

2. Diwakar R.R. and Karmarkar D.P. - *Vijayanagara Sexcentenary Commomeration Volume.* Dharwar.

3. Dr. Narasimhaih. B. - 1992- *Vijayanagara - Significance of Remains of Citadel-* Book India Publishers . Co. Delhi.

4. George Michell - 1990 - *Vijayanagara Architectural Inventory of the Urban Core* Vol. 1 & 2. Directorate of Archaeology & Museums, Mysore.

5. Mahalingam. T.V. - 1975 - *Administration and social life under Vijayanagara* Part - I Administration, Part - II Social Life, University of Madras, Madras.

6. Nagaraja Rao. M.S. (Edit) - 1989 - **Vijayanagara : progress of Research 1979 - 1983,** Directorate of Archaeology and Museums, Mysore.

7. Robert Sewell - 1900 - **A Forgetten Empire (Vijayanagara)** Swan Sinnon Shlion and Co. London.

8. Setter .S - 1990 - *Hampi A Medieval Metropolis,* Kalayatra, Bangalore.

೨೮. ವಿಜಯನಗರ ಕಾಲದ ಚಿತ್ರಕಲೆಯ ಸಾಂಸ್ಕೃತಿಕ ಮಹತ್ವ

ಡಾ. ಹೆಚ್.ಈ. ಬಸವರಾಜಪ್ಪ

ವಿಜಯನಗರ ರಾಜರು ದಕ್ಷಿಣ ಭಾರತವನ್ನು ಆಳಿದರು. ಅವರು ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ ಕ್ಷೇತ್ರಕ್ಕೆ ನೀಡಿದ ಕೊಡುಗೆ ಮಹತ್ವದ್ದಾಗಿದೆ. ವಿಜಯನಗರ ದೇವಾಲಯಗಳಿಗೆ ಸಾಮಾನ್ಯವಾಗಿ ಗ್ರಾನೈಟ್ ಶಿಲೆಯನ್ನು ಬಳಸಲಾಗಿದೆ. ಈ ದೇವಾಲಯಗಳಲ್ಲಿ ಮಹಾದ್ವಾರಗಳ ಮೇಲೆ ಗೋಪುರಗಳು, ಉಪಪೀಠ ಅಥವಾ ಎರಡು ಅಧಿಷ್ಠಾನ ಎತ್ತರವಾದ ಮಂಟಪಗಳು ದೇವಿಯ ವಿಗ್ರಹಕ್ಕಾಗಿ ಪ್ರತ್ಯೇಕ ಗರ್ಭಗುಡಿ ನೋಡಬಹುದು. ಈ ಕಾಲಾವಧಿಯ ವಾಸ್ತುಶಿಲ್ಪ ಮತ್ತು ಮೂರ್ತಿ ಶಿಲ್ಪಗಳು ಚಿತ್ರಕಲೆಯ ಮೇಲೂ ಪ್ರಭಾವ ಬೀರಿವೆ. ಈಗ ಉಳಿದಿರುವ ಹಂಪಿಯ ವಿರೂಪಾಕ್ಷ ದೇವಾಲಯದ ಮೇಲ್ಛಾವಣಿಯ ಚಿತ್ರಕಲೆಯ ಮೂಲಕ ಗುರುತಿಸ ಬಹುದಾಗಿದೆ. ಈ ದೇವಾಲಯದ ಮಂಟಪದಲ್ಲಿರುವ ಚಿತ್ರಗಳು ಶೈವ, ವೈಷ್ಣವ ಧರ್ಮದಿಂದ ಪ್ರಭಾವಿತವಾಗಿವೆ. ದೇವಾಲಯಗಳನ್ನು ಭಿತ್ತಿಚಿತ್ರಗಳಿಂದ ಅಲಂಕರಿಸಿ ರುವುದು ಕಂಡು ಬರುತ್ತದೆ. ಕ್ರಿ.ಶ. ೭ನೇ ಶತಮಾನದಲ್ಲಿ ಬಾದಾಮಿ ಚಾಲುಕ್ಯರ ಚಕ್ರವರ್ತಿ ಮಂಗಳೇಶನು ಬಾದಾಮೀ ಮೂರನೇ ಗುಹೆಯ ಮೇಲ್ಛಾವಣಿಗೆ ವರ್ಣಚಿತ್ರ ಗಳಿಂದ ಅಲಂಕರಿಸುವುದು ಕಂಡು ಬರುತ್ತದೆ. ಇದು ಕರ್ನಾಟಕದ ಭಿತ್ತಿಚಿತ್ರ ಸಂಪ್ರದಾಯದ ಪ್ರಾಚೀನ ನಿದರ್ಶನ ವೆನ್ನಬಹುದು. ಹೀಗೆ ಕರ್ನಾಟಕದ ಭಿತ್ತಿ ಚಿತ್ರಕಲೆ ದೀರ್ಘಕಾಲದಿಂದ ಶಾಸನಗಳಲ್ಲಿ ಹಾಗೂ ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಉಲ್ಲೇಖ ವಾಗಿದೆ. ಚಿತ್ರಗಳಿಂದ ಕೂಡಿದ ಪ್ರತ್ಯೇಕ ಚಿತ್ರಕಲೆ ಮತ್ತು ನಾಟ್ಯ ಕಲೆಗಳ ಪ್ರಸ್ತಾಪವು ಕಲ್ಯಾಣಿ ಚಾಲುಕ್ಯ ಚಕ್ರವರ್ತಿ 3ನೇ ಸೋಮೇಶ್ವರನು ರಚಿಸಿದ ಮಾನಸೋಲ್ಲಾಸದಲ್ಲಿ ಬರುತ್ತದೆ. ಮುಂದೆ ಹೊಯ್ಸಳರ ಕಾಲಾವಧಿಯಲ್ಲಿಯೂ ಮೊದಲನೇ ಬಲ್ಲಾಳನ ಹೆಗ್ಗಡೆ ಕಾಳಿಮಯ್ಯನು ಹಾಸನದ ಬಳಿಯ ಜಕ್ಕನಹಳ್ಳಿಯಲ್ಲಿರುವ ಕಾಳೇಶ್ವರ ದೇವಾಲಯದ ಮಾಳಿಗೆ ಗೋಡೆ ಮತ್ತು ಕಂಬಗಳನ್ನು ವರ್ಣಚಿತ್ರಗಳಿಂದ ಅಲಂಕರಿಸಿದನು. ಈ ದೇವಾಲಯವನ್ನು ೧೧೭೦ ರಲ್ಲಿ ನಿರ್ಮಿಸಲಾಗಿತ್ತು. ಇದಲ್ಲದೇ ಶ್ರವಣ ಬೆಳಗೊಳದ ಒಂದು ಬಸದಿ ಭಿತ್ತಿಚಿತ್ರ ಗಳಿಂದ ಅಲಂಕೃತವಾದ ಬಗ್ಗೆ ಉಲ್ಲೇಖವಿದೆ.

1. ಹಂಪಿ

ವಿಜಯನಗರದ ಅರಸರ ಕಾಲಾವಧಿಯಲ್ಲಿ ಭಿತ್ತಿಚಿತ್ರಕಲೆಗೆ ವಿಶೇಷ ಪ್ರೋತ್ಸಾಹ ದೊರೆಯಿತು. ಇದರ ಫಲವಾಗಿ ಚಿತ್ರಕಲೆಯಲ್ಲಿ ಒಂದು ಹೊಸ ಶೈಲಿ ದಕ್ಷಿಣ ಭಾರತದಲ್ಲಿ ಹುಟ್ಟಿತು. ವಿಜಯನಗರ ಶೈಲಿಯಲ್ಲಿ ರಚಿತವಾದ ಚಿತ್ರಗಳನ್ನು ದಕ್ಷಿಣ ಭಾರತದ ತಾಡಪತ್ರಿ, ಲೇಪಾಕ್ಷಿ, ತಿರುಪತಿ, ಕಾಂಚಿಪುರ, ಶ್ರೀರಂಗ ಮುಂತಾದ ಪ್ರದೇಶಗಳಲ್ಲಿ ಕಾಣಬಹುದು. ವಿಜಯನಗರ ಅರಸರ ಕಾಲದ ಭಿತ್ತಿ ಚಿತ್ರಕಲೆಗೆ ಒಳ್ಳೆಯ ಉದಾಹರಣೆ ವಿರೂಪಾಕ್ಷ ದೇವಾಲಯವಾಗಿದೆ.

ವಿರೂಪಾಕ್ಷ ದೇವಾಲಯದ ಮಂಟಪದಲ್ಲಿರುವ ಭಿತ್ತಿಚಿತ್ರಗಳನ್ನು ಹಲವು ವಿದ್ವಾಂಸರು ಗುರುತಿಸುವ ಪ್ರಯತ್ನ ಮಾಡಿದ್ದಾರೆ. ೧೯೩೯ರಲ್ಲಿ ಮೊದಲು ಜನರ ಗಮನ ಸೆಳೆದವರು ಎಸ್. ಪರಮಶಿವನ್. ನಂತರ ೧೯೪೬ ರಲ್ಲಿ ಸಿ.ಟಿ.ಎಂ. ಕೊಟ್ರಯ್ಯನವರು ಈ ಚಿತ್ರಗಳ ವಸ್ತು ವಿಷಯ, ವರ್ಣಗಾರಿಕೆ, ಕಾಲಾವಧಿ, ರಚನಾ ವಿಧಾನಗಳನ್ನು ಕುರಿತು ವಿವರ ನೀಡಿದರು. ಕರ್ನಾಟಕದ ಚಿತ್ರಕಲೆಯ ಬಗ್ಗೆ ವಿವರವಾಗಿ ದಾಖಲಿಸುವ ಪ್ರಯತ್ನ ಮಾಡಿದ ಡಾ. ಶಿವರಾಮ ಕಾರಂತರು ಈ ಚಿತ್ರಗಳ ವಿಷಯ ವಾಗಿ ಬರೆದಿದ್ದಾರೆ. ಪಿ. ಶ್ರೀನಿವಾಸಾಚಾರ್ಯ ಅವರ 'ವಿಜಯನಗರ ಪೇಂಟಿಂಗ್ಸ್' ಎಂಬ ಗ್ರಂಥವು ಬಹುಮುಖ್ಯವಾದದು. ಸಿ. ಶಿವರಾಮಮೂರ್ತಿಯವರ ಲೇಖನ ಗಳನ್ನು ಪ್ರಕಟಿಸಲಾಗಿದೆ. ಡಾ. ಸಿಂಧಗಿ ರಾಜಶೇಖರ ಅವರು ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ ಕೃತಿಯಲ್ಲಿಯೂ ಈ ಚಿತ್ರಗಳ ಬಗ್ಗೆ ವಿವರವಾಗಿ ದಾಖಲಿಸಿದ್ದಾರೆ. ಡಾ.ಎಸ್.ಸಿ. ಪಾಟೀಲ ಅವರು ಜಾಪನದ ಚಿತ್ರಕಲೆಯ ಬಗ್ಗೆ ಅಧ್ಯಯನ ಮಾಡುವಾಗ ಚಿತ್ರಕಲೆಯನ್ನು ಕುರಿತು ವಿವೇಚಿಸಿದ್ದಾರೆ. ಹಾಗೆಯೇ ಆ.ಲ. ನರಸಿಂಹನ್, ಕೆ.ವ್ಹಿ.ಎನ್. ಶಾಸ್ತ್ರಿ, ಡಾ. ಯಾದಪ್ಪ ಪರದೇಶಿ ಅವರು ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ ಕುರಿತು ಪಿಎಚ್.ಡಿ. ಮಹಾಪ್ರಬಂಧದಲ್ಲಿ ಚರ್ಚಿಸಿ ದ್ದಾರೆ. ಇನ್ನೂ ಮುಂತಾದ ವಿದ್ವಾಂಸರು, ವಿಜಯನಗರ ಕಾಲದ ಚಿತ್ರಕಲೆಯನ್ನು ಕುರಿತು ವಿವರವಾದ ಮಾಹಿತಿ ನೀಡುವ ಪ್ರಯತ್ನ ಮಾಡಿದ್ದಾರೆ. ಇಲ್ಲಿನ ಚಿತ್ರಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು. ಮೊದಲನೆಯವು ಮೇಲ್ಛಾವಣಿಯ ಚಿತ್ರಗಳು ಎರಡನೆಯವು ತೊಲೆಗಳ ಮೇಲಿನ ಚಿತ್ರಗಳೆಂದು ಗುರುತಿಸಬಹುದು. ಮೇಲ್ಛಾವಣಿಯ ಚಿತ್ರಗಳಲ್ಲಿ ದೊಡ್ಡ ದೊಡ್ಡ ಪಟ್ಟಿಕೆಗಳನ್ನಾಗಿ ಮಾಡಿಕೊಂಡು ಚಿತ್ರ ರಚನೆ ಮಾಡಲಾಗಿದೆ. ತೊಲೆಗಳ ಮೇಲಿನ ಚಿತ್ರಗಳನ್ನು ಚಿಕ್ಕ ಚಿಕ್ಕ ಪಟ್ಟಿಕೆಗಳ ಮೂಲಕ ಚಿತ್ರಿಸಲಾಗಿದೆ.

ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗಿಂತಲೂ ಮೊದಲೇ ವಿರೂಪಾಕ್ಷ ದೇವಾಲಯ ವಿದ್ದಿತು. ಅದು ಹಲವಾರು ಜೀರ್ಣೋದ್ಧಾರಗಳನ್ನು ಕಂಡಿದೆ. ಮುಖ್ಯ ದೇವಾಲಯದ ಉತ್ತರಕ್ಕಿರುವ ಪಂಪಾದೇವಿ ಮತ್ತು ಭುವನೇಶ್ವರಿ ಆಲಯಗಳಲ್ಲಿ ಸುಮಾರು ೧೧-

ಯಿಂದ ಎಳೆಯಲ್ಪಡುತ್ತಿವೆ. ಈ ರಥಗಳು ಎರಡನೇ ಚೌಕದಲ್ಲಿನ ರಥಗಳ ಹಾಗೆ ಸುಂದರವಾಗಿದ್ದು, ಮೇಲ್ಭಾಗದಲ್ಲಿ ಜೋಡಿ ಕಳಶ ಬಂದಿವೆ. ಈ ರಥಗಳಲ್ಲಿ ಪ್ರತಿಯೊಂದರಲ್ಲಿ ಮೂರು ಜನರಿದ್ದಾರೆ. ಸಾರಥಿ, ರಾಜ ಅಥವಾ ಯುದ್ಧಾಳು, ಇನ್ನೊಬ್ಬ ಸೇವಕನಂತಿರುವ ವ್ಯಕ್ತಿ ಕುಳಿತು ಕೊಂಡಿದ್ದಾನೆ. ಕಳಶಗಳು ವಿಜಯನಗರ ಶೈಲಿಯ ದೇವಾಲಯದ ಗೋಪುರ ಗಳಂತೆಯೇ ಇವೆ. ಈ ರಥಗಳ ಮೇಲ್ಭಾಗದಲ್ಲಿಯೂ ಸೈನಿಕರು, ಆನೆ, ಕುದುರೆಗಳು ಯುದ್ಧನಿರತವಾಗಿವೆ. ದೇವಾಲಯದ ಪ್ರವೇಶದ್ವಾರದ ಕಡೆಯಿಂದ ಏಳನೇ ಪಟ್ಟಿಕೆಯಲ್ಲಿ ಮತ್ತೊಂದು ಮೆರವಣಿಗೆಯ ದೃಶ್ಯವಿದೆ. ಇದರಲ್ಲಿ ಚಿಕ್ಕಪ್ರಮಾಣದ ಚಿತ್ರಗಳಿವೆ. ನಗಾರಿ ಬಾರಿಸುವವರು ಕೊಂಬು, ಕಹಳೆಗಳನ್ನು ಊದುತ್ತಿರುವವರು ಕಂಡುಬರುತ್ತಾರೆ. ಹೀಗೆ ಅನೇಕ ವಾದ್ಯಗಾರರಲ್ಲದೇ, ಕೆಲವು ಸೈನಿಕರು ಇಲ್ಲಿ ಚಿತ್ರಿತಗೊಂಡಿದ್ದಾರೆ. ಹೀಗಾಗಿ, ಇದು ರಣಘೋಷದೊಂದಿಗೆ, ಯುದ್ಧಕ್ಕೆ ಹೊರಟ ದೃಶ್ಯವಾಗಿರಬಹುದು. ಇಲ್ಲವೆ ಯುದ್ಧವನ್ನು ಗೆದ್ದ ವಿಜಯೋತ್ಸವದ ಮೆರವಣಿಗೆ ಯಂತೆ ಕಾಣುತ್ತದೆ.

ಮೇಲ್ಛಾವಣಿಯಲ್ಲಿರುವ ಧಾರ್ಮಿಕ ಚಿತ್ರಗಳಲ್ಲಿ ಕೆಲವನ್ನು ಹೀಗೆ ಗಮನಿಸಬಹುದು. ದ್ರೌಪದಿಯ ಸ್ವಯಂವರದ ಚಿತ್ರವನ್ನು ಮೂರು ಚೌಕಗಳಲ್ಲಿ ವಿಭಾಗಿಸಿ ಚಿತ್ರಿಸಿದ್ದಾರೆ. ಮೊದಲನೆಯ ಚೌಕದಲ್ಲಿ ಅರ್ಜುನನು ಮೀನಿನ ಪ್ರತಿಬಿಂಬವನ್ನು ಎಣ್ಣೆಯಲ್ಲಿ ನೋಡಿ ಬಾಣ ಬಿಡುತ್ತಿರುವನು. ಎರಡನೆಯ ಚೌಕದಲ್ಲಿ ದ್ರೌಪದಿ ಅರ್ಜುನರು, ಜೊತೆಗಿದ್ದು, ಸ್ವಯಂವರ ನಡೆಯುತ್ತಿದೆ. ಮೂರನೆಯ ಚಿತ್ರದಲ್ಲಿ ಆಮಂತ್ರಿತ ಗಣ್ಯರು, ಋಷಿಮುನಿಗಳು ರಾಜಪರಿವಾರದವರು ಮುಂತಾದವರ ಚಿತ್ರಗಳಿವೆ. ಮತ್ಸ್ಯಭೇದನ ಮಾಡುತ್ತಿರುವ ಅರ್ಜುನನು ಕಿರೀಟ ಧರಿಸಿದ್ದು ಅರ್ಧ ಚಂದ್ರಾಕೃತಿ ಪಾತ್ರೆಯಲ್ಲಿ ಮೇಲೆ ಕಟ್ಟಲಾಗಿರುವ ಮೀನಿನ ಪ್ರತಿಬಿಂಬವನ್ನು ನೋಡಿ ಬಾಣ ಬಿಡುತ್ತಿದ್ದಾನೆ. ಆತನ ಮೈ ಬಣ್ಣ ಕೆಂಪಾಗಿದ್ದು, ಕೈಕಾಲು ಮುಖದ ವರ್ಣ ಛಾಯೆಯು ಬದಲಾಗಿದೆ. ದ್ರೌಪದಿಯು ಗಾಢ ವರ್ಣದ ಜರತಾರಿ ಅಂಚುಳ್ಳ ಸೀರೆಯನ್ನು ಕಚ್ಚೆ ಹಾಕಿ ಉಟ್ಟಿದ್ದಾಳೆ. ಬಲಗಡೆಗಿರುವ ವ್ಯಕ್ತಿಯ ಕೈಯಲ್ಲಿ ಗದೆಯಂತಹ ದಂಡವಿದೆ. ಆತನ ಬಲಕ್ಕೆ ಇನ್ನೊಬ್ಬ ವ್ಯಕ್ತಿ ಇದ್ದು ಈ ಇಬ್ಬರು ತೊಡೆ ಮಟ್ಟದ ಪಂಚೆ ಉಟ್ಟಿದ್ದಾರೆ. ಸೊಂಟದಿಂದ ಕೆಳಕ್ಕೆ ಕುಂಚ ಹಾಯ್ದಿದೆ. ಹೆಗಲಿನ ಉತ್ತರೀಯವು ಮೊಣಕಾಲ ಕೆಳಗಿನವರೆಗೆ ಇಳಿಬಿಡಲಾಗಿದೆ. ಇಲ್ಲಿ ಇವೆಲ್ಲವನ್ನು ಅತ್ಯಂತ ಸೂಕ್ಷ್ಮವಾದ ವರ್ಣವಿನ್ಯಾಸದಿಂದ ಸಂಯೋಜಿಸಲಾಗಿದೆ. ತ್ರಿಪುರ ಸಂಹಾರ ಶಿವನ ದೃಶ್ಯವನ್ನು ಮಧ್ಯದ ಚೌಕ ಬಿಟ್ಟು ಮುಂದಿನ ಚೌಕದಲ್ಲಿ ಮನ್ಮಥ ವಿಜಯ ದೃಶ್ಯವನ್ನು ರಚಿಸಲಾಗಿದೆ. ತ್ರಿಪುರ ಸಂಹಾರ ಶಿವನ ಚಿತ್ರವು ಒಂದು ಆಕರ್ಷಕ ಚಿತ್ರವಾಗಿದ್ದು, ಇಲ್ಲಿ ಶಿವನು ರಥದಲ್ಲಿ ಕುಳಿತು, ತ್ರಿಪುರ ಸಂಹಾರಕ್ಕಾಗಿ ಧಾವಿಸುತ್ತಿದ್ದಾನೆ. ಸೂರ್ಯ ಚಂದ್ರರೇ

ಅವನ ರಥದ ಗಾಲಿಗಳಾಗಿದ್ದಾರೆ. ಬ್ರಹ್ಮನು ರಥದ ಸಾರಥಿಯಾಗಿದ್ದಾನೆ. ಶಿವ ಸಂಹರಿಸಲು ಮೂರು ಪುರಗಳು ಮೂರು ವೃತ್ತದಲ್ಲಿ ರಚನೆಯಾಗಿವೆ. ಈ ಮೂರು ವೃತ್ತಗಳನ್ನು ಅವುಗಳ ಒಂದು ಬದಿಗೆ ಕಿಂಡಿ ಮಾಡಿ ಆಧಾರ ಒಂದರಿಂದ ಒಟ್ಟಾಗಿ ಬಂಧಿಸಿದಂತೆ ಇವೆ. ಈ ಪುರಗಳ ವೃತ್ತಗಳಲ್ಲಿ ಒಂದರಲ್ಲಿ ವಿಷ್ಣು ನಗ್ನವಾಗಿ ನಿಂತಿದ್ದು ಆತನ ಎಡಬಲಗಳಲ್ಲಿ ಇಬ್ಬರು ಕನ್ಯೆಯರು ಆತನ ಸೇವೆಯಲ್ಲಿ ತೊಡಗಿದ್ದಾರೆ. ಇನ್ನೊಂದು ರಥದಲ್ಲಿ ಕೆಂಪು, ಹಳದಿ ವರ್ಣದ ಮತ್ತು ಕಪ್ಪು ವರ್ಣದ ರಾಕ್ಷಸರಿಬ್ಬರು ಕತ್ತಿ, ಢಾಲು, ಗುರಾಣಿ ಹಿಡಿದುಕೊಂಡು ಕಾದಾಡುತ್ತಿದ್ದಾರೆ. ತ್ರಿಪುರ ಗಳಲ್ಲಿ ಸೂಚಿಸುವ ಮೂರು ವೃತ್ತಗಳ ಸುತ್ತಲೂ ಪಕ್ಷಿಗಳು, ಪ್ರಾಣಿಗಳು, ಮೀನು ಗಳಂತಹ ವಿವಿಧ ಜೀವಸಂಕುಲಗಳನ್ನು ಚಿತ್ರಿಸಲಾಗಿದೆ. ಮತ್ತೊಂದು ಚಿಕ್ಕ ಪಟ್ಟಿಕೆ ಯಲ್ಲಿ ಅಷ್ಟದಿಕ್ಪಾಲಕರ ಚಿತ್ರಗಳಿವೆ. ಪ್ರತಿಯೊಂದನ್ನು ಒಂದೊಂದು ಚೌಕದಲ್ಲಿ ಪ್ರತ್ಯೇಕವಾಗಿಯೇ ಅವರವರ ವಾಹನಗಳೊಂದಿಗೆ ಚಿತ್ರಿಸಲಾಗಿದೆ. ಎತ್ತು, ಕುದುರೆ, ಟಗರು (ಮೇಷ), ಮನುಷ್ಯ, ಕೋಣ, ಆನೆ, ಶರಭ ಮುಂತಾದವುಗಳು ಇಲ್ಲಿ ವಾಹನ ಗಳನ್ನಾಗಿ ಗುರುತಿಸಲಾಗಿದೆ. ಅದರ ಸಮೀಪದಲ್ಲಿಯೇ ವಿರೂಪಾಕ್ಷ ದೇವರಿಗೆ ಪೂಜೆ ಮಾಡುತ್ತಿರುವ ಚಿತ್ರಣವಿದೆ. ಇದರಲ್ಲಿ ವಿರೂಪಾಕ್ಷ ದೇವರ ಮುಂದೆ ನಂದಿಯ ಮುಖವನ್ನು ಚಿತ್ರಿಸಲಾಗಿದೆ. ಇದರ ಪಕ್ಕದ ಚಿತ್ರ ಪಟ್ಟಿಕೆಯಲ್ಲಿ ಕೃಷ್ಣನು ಗೋಪಿಕಾ ಸ್ತ್ರೀಯರ ವಸ್ತ್ರಗಳನ್ನು ಅಪಹರಿಸಿ ಗಿಡದ ಮೇಲೆ ಕುಳಿತುಕೊಂಡಿದ್ದಾನೆ. ಗೋಪಿಕಾ ಸ್ತ್ರೀಯರೆಲ್ಲ ಮರದ ಸುತ್ತಲೂ ನಿಂತು ತಮ್ಮ ಬಟ್ಟೆಗಳಿಗಾಗಿ ಕೃಷ್ಣನನ್ನು ಕೇಳುವ ಸನ್ನಿವೇಶ ಚಿತ್ರಿತವಾಗಿದೆ. ಅದರ ಮುಂದಿನ ಪಟ್ಟಿಕೆಯಲ್ಲಿಯೇ ರಾಮನು ಶಿವನ ಧನುಸ್ಸನ್ನು ಎದೆಗೆ ಏರಿಸಿಕೊಂಡು ಮುರಿಯುತ್ತಿರುವುದು, ಸೀತಾ ರಾಮರ ಕಲ್ಯಾಣ ಚಿತ್ರಣ, ಸ್ವಯಂವರಕ್ಕೆ ಬಂದ ರಾಜ ಮಹಾರಾಜರು, ಗಣ್ಯರು, ಋಷಿಮುನಿಗಳು, ರಾಜ ಪರಿವಾರದವರು ಮುಂತಾದವರ ಚಿತ್ರಣಗಳಲ್ಲದೇ ಋಷಿಮುನಿಗಳಿಂದ ಆಶೀರ್ವಾದ ಪಡೆಯುತ್ತಿರುವ ಚಿತ್ರಣವೂ ಇದೆ. ಅದರ ಮತ್ತೊಂದು ಪಟ್ಟಿಕೆಯಲ್ಲಿ ವಿಷ್ಣುವಿಗೆ ಸಂಬಂಧಿಸಿದ ದಶಾವತಾರಗಳನ್ನು ಒಂದೇ ಬದಿಯ ನೋಟಗಳನ್ನು ಒಳಗೊಂಡಂತೆ ಚಿತ್ರಿಸಲಾಗಿದೆ. ನರಸಿಂಹ ಅವತಾರದಲ್ಲಿ ಕಟಿಯ ಕೆಳಭಾಗ, ಬದಿಯನೋಟ ತೋರಿಸುತ್ತಿದ್ದರೂ ಮೇಲಿನ ಭಾಗ ಸಂಪೂರ್ಣ ಇದಿರು ನೋಟ ದ್ದಾಗಿ ಚಿತ್ರಿಸಲಾಗಿದೆ. ನರಸಿಂಹನ ಉಗ್ರವಾದ ಸಿಂಹಮುಖವನ್ನು ತೋರಿಸುವುದಕ್ಕಾಗಿ ಮೇಲ್ಭಾಗವನ್ನು ಎದುರಾಗಿ ಚಿತ್ರಿಸಿರಬೇಕು. ಇದರ ಸಮೀಪದಲ್ಲಿಯೇ ಶಿವ ಪಾರ್ವತಿಯರ ಕಲ್ಯಾಣದ ಮತ್ತೊಂದು ಚಿತ್ರವಿದೆ. ಚತುರ್ಭುಜನಾದ ಶಿವನು ಇಲ್ಲಿ ಮಗ್ಗಲು ನೋಟದಲ್ಲಿದ್ದಾನೆ. ಮುಂದಿನ ಆತನ ಎರಡೂ ಕೈಗಳನ್ನು ಎದುರು ನಿಂತು ಪಾರ್ವತಿ ದೇವತೆಯು ಹಿಡಿದುಕೊಂಡಿದ್ದಾಳೆ. ಶಿವನ ಹಿಂದಿನ ಒಂದು ಕೈಯಲ್ಲಿ ಮೃಗ ಸಂಕೇತವಿದೆ. ಶಿವನ ಎದುರಾಗಿ ಪಾರ್ವತಿಯ ಪಕ್ಕದಲ್ಲಿ ಶ್ರೀದೇವಿ, ಭೂದೇವಿ

ಸರ್ವಾಲಂಕೃತರಾಗಿ ಕಿರೀಟ ಧರಿಸಿ ನಿಂತಿದ್ದಾರೆ. ಪಕ್ಕದ ಚೌಕದಲ್ಲಿ ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರ ಚಿತ್ರಗಳಿವೆ. ಇವುಗಳಲ್ಲದೇ, ಪಕ್ಕದ ಚಿಕ್ಕ ಚಿಕ್ಕ ಪಟ್ಟಿಕೆಗಳಲ್ಲಿ ಋಷಿ ಮುನಿಗಳು, ದೇವತೆಗಳು, ಗಂಧರ್ವರು, ಯಕ್ಷ ಯಕ್ಷಿಣಿಯರು, ಕಾಲ್ಪನಿಕ ಪ್ರಾಣಿಗಳು ಪೌರಾಣಿಕ ಪ್ರಾಣಿಗಳು, ಐರಾವತ, ಕಾಮಧೇನು, ಶರಭ ಮುಂತಾದ ಪ್ರಾಣಿಗಳ ಚಿತ್ರಗಳನ್ನು ಚಿತ್ರಿಸಲಾಗಿದೆ. ಇದೇ ಪಟ್ಟಿಕೆಯ ತೊಲೆ ಗಳಲ್ಲಿಯೂ ಚಿಕ್ಕ ಪ್ರಮಾಣದ ಚಿತ್ರಗಳನ್ನು ಚಿತ್ರಿಸಲಾಗಿದೆ. ಪಶ್ಚಿಮ ದಿಕ್ಕಿನ ತೊಲೆ ಯಲ್ಲಿ ವಿರೂಪಾಕ್ಷ ದೇವರ ಗರ್ಭಗೃಹದ ಕಡೆಯಿರುವ ಈ ತೊಲೆಯಲ್ಲಿ ವಿರೂಪಾಕ್ಷ ದೇವರ ಮುಖವಾಡದ ಪ್ರತಿರೂಪದಂತೆ ಇರುವ ಚಿತ್ರ, ಇದರ ಎಡ ಬಲ ಭಾಗಗಳಲ್ಲಿ ನಂದಿ, ಪೂಜಾರಿಗಳ, ಋಷಿಮುನಿಗಳ ಇತರ ದೇವತೆಗಳನ್ನು ಕುರಿತು ಹದಿನೆಂಟು ಚಿತ್ರಗಳಿವೆ. ಉತ್ತರ ದಿಕ್ಕಿನ ತೊಲೆಗಳ ಮೇಲೆ ಸುಮಾರು ೨೪ ಚಿತ್ರಗಳನ್ನು ಸ್ವಲ್ಪ ದೊಡ್ಡ ಪ್ರಮಾಣದಲ್ಲಿ ಚಿತ್ರಿಸಲಾಗಿದೆ. ನಾಲ್ಕು ಮುಖದ ಆಕಳು ಶಿವಲಿಂಗಕ್ಕೆ ಹಾಲು ಕರೆಯುತ್ತಿರುವುದು. ಶರಬ, ಐರಾವತ, ಕಾಮಧೇನು, ವಿಷ್ಣುಮಹಿಮೆ ಸಾರುವ ಚಿತ್ರಗಳು, ಕಾರ್ತಿಕೇಯ, ಶಿವಗಣಗಳು ಮತ್ತು ಇತರ ದೇವತೆಗಳ ಚಿತ್ರಗಳಿವೆ. ದಕ್ಷಿಣ ದಿಕ್ಕಿನ ತೊಲೆಯ ಮೇಲೆ ಆನೆ ಮತ್ತು ಆಕಳು ಸಂಯುಕ್ತಗೊಂಡ ಚಮತ್ಕಾರಿಕ ಚಿತ್ರಗಳಿವೆ. ಇದಲ್ಲದೇ ಶೇಷಶಯನ ವಿಷ್ಣು, ಗಣಪತಿ, ಋಷಿಮುನಿಗಳು, ದೇವತಾ ಪುರುಷರ ಒಟ್ಟು ಇಪ್ಪತ್ನಾಲ್ಕು ಚಿತ್ರಗಳನ್ನು ಈ ತೊಲೆಗಳ ಮೇಲೆ ಚಿತ್ರಿಸಲಾಗಿದೆ.

ವಿಜಯವಿಠ್ಠಲ ದೇವಾಲಯ

ಕೃಷ್ಣದೇವರಾಯನ ಕಾಲಾವಧಿಯಲ್ಲಿ ನಿರ್ಮಿಸಲಾಗಿರುವ ವಿಜಯವಿಠ್ಠಲ ದೇವಾಲಯವು ಭಿತ್ತಿಚಿತ್ರಗಳಿಂದ ಅಲಂಕೃತವಾಗಿದೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಬಹುದು. ವಿಜಯನಗರದ ಅರಸರು ಇದರ ಮಂಟಪವನ್ನು ಸಂಗೀತ, ನೃತ್ಯ ಉತ್ಸವಗಳಿಗಾಗಿ ಬಳಸುತ್ತಿದ್ದು, ಆ ಮಂಟಪದ ಛಾವಣಿಯು ವರ್ಣಚಿತ್ರಗಳಿಂದ ಕೂಡಿದ್ದಕ್ಕೆ ಇಂದಿಗೂ ಛಾವಣಿಯಲ್ಲಿ ಬಣ್ಣದ ಛಾಯೆ ಉಳಿಕೆಗಳು ಅಲ್ಲಲ್ಲಿ ಕಂಡು ಬರುತ್ತವೆ. ಕೆಂಪು, ನೀಲಿ, ಹಸಿರು, ನಸುಗೆಂಪು ಬಣ್ಣದ ಗುರುತುಗಳು ಗೋಚರಿಸುವುದರಿಂದ ಈ ಮಂಟಪವು ಭಿತ್ತಿಚಿತ್ರಗಳಿಂದ ಅಲಂಕೃತವಾಗಿತ್ತು. ಆದರೆ, ಕಾಲ ಕ್ರಮೇಣವಾಗಿ ಎಲ್ಲವೂ ನಾಶವಾಗಿವೆ. ವಿಜಯವಿಠ್ಠಲ ದೇವಾಲಯದ ಮುಂದೆ ಇರುವ ಕಲ್ಲಿನ ರಥವನ್ನು ಚಿತ್ರಗಳಿಂದ ಅಲಂಕರಿಸಲಾಗಿತ್ತು. ಈ ರಥಕ್ಕೆ ಅಳವಡಿಸಿ ರುವ ಕಲ್ಲಿನ ಚಕ್ರಗಳು ತಿರುಗುತ್ತಿದ್ದವು. ಆದರೆ, ವಾತಾವರಣಕ್ಕೆ ಸಿಕ್ಕಿ ಇದರಲ್ಲಿದ್ದ ವರ್ಣ ಚಿತ್ರಗಳು ಸಂಪೂರ್ಣವಾಗಿ ನಾಶವಾಗಿದೆ. ಈ ರಥದ ಮುಂಟಪದ ಹಾಗಿರುವ ಕಮಾನುಗಳಲ್ಲಿ ಉದ್ದವಾದ ಪಟ್ಟಿಕೆಗಳಲ್ಲಿ ಅಲ್ಲಲ್ಲಿ ಹಸಿರು, ಕೆಂಪು, ನೀಲ ಛಾಯೆ ವರ್ಣದ ಗುರುತುಗಳನ್ನು ಪರೀಕ್ಷಿಸಿ ನೋಡಬಹುದು.

2. ಆನೆಗೊಂದಿ

ಆನೆಗೊಂದಿಯು ಐತಿಹಾಸಿಕ ಮಹತ್ವ ಪಡೆದ ಸ್ಥಳ. ಆನೆಗೊಂದಿಯ ಹುಚ್ಚಪ್ಪಯ್ಯನ ಮಠದಲ್ಲಿ ಹಳೆ ಕಾಲದ ಭಿತ್ತಿ ಚಿತ್ರಗಳು ಸಾಕಷ್ಟು ಕಂಡು ಬರುತ್ತವೆ. ಹುಚ್ಚಪ್ಪಯ್ಯನ ಮಠ ಎಂದು ಕರೆಯಲಾಗುವ ಹಳೆಯ ಕಟ್ಟಡವು ಇಂದು ಒಂದು ಗದ್ದೆಯಲ್ಲಿದೆ. ಈ ಗದ್ದೆಯು ಮುಸ್ಲಿಂ ಕುಟುಂಬದ ಒಡೆತನಕ್ಕೆ ಸೇರಿದೆ. ಹುಚ್ಚಪ್ಪಯ್ಯನ ಕ್ರಿ.ಶ. ೧೫೬೫ರ ಮುಂಚೆ ಮಾಡಿರಬೇಕು ಎಂಬುದು ಅವರ ಅಭಿಪ್ರಾಯವಾಗಿದೆ. ಸಿ. ಶಿವರಾಮಮೂರ್ತಿಯವರು ಈ ವರ್ಣಚಿತ್ರಗಳನ್ನು ಲೇಪಾಕ್ಷಿಯ ವರ್ಣಚಿತ್ರಗಳಿಗಿಂತಲೂ ಹಳೆಯವೆಂದು ಅಭಿಪ್ರಾಯ ಪಡುತ್ತಾರೆ. ಹೀಗಾಗಿ ಈ ಇಬ್ಬರು ವಿದ್ವಾಂಸರ ಅಭಿಪ್ರಾಯ ಒಂದೇ ಆಗಿದೆ.

ಹಂಪಿಯ ವರ್ಣಚಿತ್ರಗಳಿಗೂ ಮತ್ತು ಲೇಪಾಕ್ಷಿಯ ವರ್ಣಚಿತ್ರಗಳಿಗೂ ಸಾಕಷ್ಟು ಭೇದವಿದೆ. ಶೈಲಿಯಲ್ಲಿ ಮತ್ತು ಸಂಯೋಜನೆಯಲ್ಲಿ ಭಿನ್ನತೆಯಿದೆ. ಲೇಪಾಕ್ಷಿಯ ವರ್ಣಚಿತ್ರಗಳೂ ಮತ್ತು ಹಂಪಿಯ ವರ್ಣಚಿತ್ರಗಳೂ ಚೌಕದಲ್ಲಿವೆ. ಹಂಪಿಯ ವರ್ಣ ಚಿತ್ರಗಳು ಚೌಕಗಳಲ್ಲಿ ಇದ್ದರೂ, ಇಲ್ಲಿ ಕೆಲವು ಚಿತ್ರಗಳ ಮೇಲ್ಭಾಗದಲ್ಲಿ ತೋರಣ ದಂತಹ ಅಲಂಕಾರವಿದೆ. ಇಂತಹ ತೋರಣದ ಅಲಂಕಾರ ಲೇಪಾಕ್ಷಿಯಲ್ಲಿ ಕಾಣ ಸಿಗುವುದಿಲ್ಲ. ಇಂತಹ ತೋರಣ ೧೭ನೇ ಶತಮಾನದ ವರ್ಣಚಿತ್ರಗಳಲ್ಲಿ ಮೊದಲು ಕಾಣಸಿಗುತ್ತದೆ. ಅಲ್ಲದೇ ಅನೇಕ ವರ್ಣಚಿತ್ರಗಳಲ್ಲಿ ದೇವಾಲಯಗಳ ಚಿತ್ರಗಳು ಮತ್ತು ಈ ದೇವಾಲಯಗಳ ಎರಡೂ ಬದಿಯಲ್ಲಿ ತೆಂಗಿನ ಮರದ ಚಿತ್ರಗಳನ್ನು ಬಿಡಿಸಿದ್ದಾರೆ. ಈ ರೀತಿ ವರ್ಣಚಿತ್ರದ ಅಂಚಿನಲ್ಲಿ ದೇವಾಲಯದ ಶಿಖರಗಳು ಲೇಪಾಕ್ಷಿಯಲ್ಲಿ ಕಾಣಸಿಗುವುದಿಲ್ಲ. ಈ ಸಂಪ್ರದಾಯದ ಚಿತ್ರಗಳಿಗೆ ಬಳ್ಳಾರಿ ಜಿಲ್ಲೆಗೆ ಹೊಂದಿಕೊಂಡಿರುವ ಆಲೂರು ತಾಲ್ಲೂಕಿನ ಹೊಳಲ ಗುಂದ ದಲ್ಲಿರುವ ಸಿದ್ಧೇಶ್ವರ ದೇವಾಲಯದಲ್ಲಿರುವ ವರ್ಣಚಿತ್ರಗಳನ್ನು ಗುರುತಿಸಬಹುದು. ೧೮ನೇ ಶತಮಾನದ ಅಂತ್ಯದ ಭಾಗ ಇಲ್ಲವೆ ೧೯ನೇ ಶತಮಾನದಲ್ಲಿ ಚಿತ್ರಿಸಿದವು. ಇಲ್ಲಿನ ವರ್ಣಚಿತ್ರಗಳಲ್ಲಿ ಸಮುದ್ರ ಮಂಥನ, ಮನ್ಮಥವಿಜಯ, ಗಿರಿಜಾ ಕಲ್ಯಾಣ, ತಾರಕ ಸಂಹಾರ, ಸೀತಾಸ್ವಯಂವರ ಮುಂತಾದ ವರ್ಣಚಿತ್ರಗಳಲ್ಲಿ ತೋರಣಗಳ, ಪಕ್ಷಿಗಳ ಮತ್ತು ದೇವಾಲಯಗಳ ವರ್ಣಚಿತ್ರಗಳ ಬಳಕೆ ಸಾಮಾನ್ಯವಾಗಿದೆ. ಇದು ಹಂಪಿಯ ವರ್ಣಚಿತ್ರಗಳಿಂದ ಪ್ರಭಾವವಾಗಿರುವುದೆಂದು ಸ್ಪಷ್ಟವಾಗಿ ತಿಳಿದುಬರುತ್ತದೆ.

ಭಾರತದ ಇತರೇ ಭಾಗಗಳಲ್ಲಿರುವ ಭಿತ್ತಿಚಿತ್ರಗಳಂತೆಯೇ ಹಂಪಿಯ ಭಿತ್ತಿ ಚಿತ್ರಗಳಲ್ಲಿಯೂ ರೇಖೆಯೇ ಪ್ರಧಾನಾಂಶ ; ಅಂತರಗಳನ್ನು ಆವರಿಸಿ ಕಲ್ಪನೆಗಳಿಗೆ ಖಚಿತರೂಪುಕೊಡುವುದು. ಈ ರೇಖಾಚಿತ್ರಗಳ ವಸ್ತು ಬಹುತೇಕ ರಾಮಾಯಣ, ಮಹಾಭಾರತ, ಭಾಗವತ ಹಾಗೂ ಇತರ ಪುರಾಣಗಳಿಂದ ಆರಿಸಲಾದ ಕಥಾ ಸಂದರ್ಭಗಳ

ಚಿತ್ರಗಳು. ಬಹುಶಃ ಎರಡನೇ ಆಯಾಮ ಉಳ್ಳವು ಘನಾಕೃತಿಯವು. ಪ್ರಾಯಶಃ ಇಲ್ಲಿ ಲೌಕಿಕ ಜೀವನ ಸಂದರ್ಭಗಳನ್ನು ನಿರೂಪಿಸಿದಾಗ ವಿನಾ ರೂಪ ನಿರ್ಮಾಣದಲ್ಲಿ ಅವುಗಳ ಅಲಂಕಾರದಲ್ಲಿ ಭಾವಭಂಗಿಗಳಲ್ಲಿ ಆಗಮ, ಶಿಲ್ಪಶಾಸ್ತ್ರ ಮುಂತಾದ ಗ್ರಂಥಗಳಲ್ಲಿ ಹೇಳಲಾದ ಲಕ್ಷಣಗಳನ್ನೇ ಅನುಸರಿಸುತ್ತವೆ.

ಆಧಾರ ಗ್ರಂಥಗಳು

1. ಶಿವರಾಮಮೂರ್ತಿ ಸಿ., 1985, ವಿಜಯನಗರ ಪೇಯಿಂಟಿಂಗ್ಸ್, ನವದೆಹಲಿ
2. ಗುಪ್ತಾ ಎಸ್.ಪಿ., 1947. ಎಲಿಮೆಂಟ್ಸ್ ಆಫ್ ಇಂಡಿಯನ್ ಆರ್ಟ್, ಡಿ.ಕೆ.ಪ್ರಕಾಶನ, ನವದೆಹಲಿ
3. ಯಾದಪ್ಪ ಪರದೇಶಿ, 2001, ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ ಒಂದು ಅಧ್ಯಯನ (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.
4. ಶೇಕ್ ಅಲಿ. ಬಿ ಪ್ರಧಾನ ಸಂಪಾದಕರು ಶಿವಣ್ಣ ಕೆ, ಎಸ್., ಸಂಪುಟ 2 ಸಂಪಾದಕರು. 1997 ಕರ್ನಾಟಕ ಚರಿತ್ರೆ ಸಂಪುಟ 3 ಲೇಖನ ಚನ್ನಬಸಪ್ಪ ಎಸ್ ಪಾಟೀಲ, ಕಲೆ ಮತ್ತು ವಾಸ್ತು ಶಿಲ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

೨೯. ಕರ್ನಾಟಕದ ಸಾಮಂತ ಅರಸರು ಮತ್ತು ವಿಜಯನಗರದ ಸಂಬಂಧ

ಡಾ.ಕೆ. ರವೀಂದ್ರನಾಥ

ಇಡೀ ದಕ್ಷಿಣಭಾರತದಲ್ಲಿಯೇ ಸುಪ್ರಸಿದ್ಧಿಯನ್ನು ಹೊಂದಿದ್ದ ವಿಜಯನಗರ ಸಾಮ್ರಾಜ್ಯದ ಇತಿಹಾಸ ಪರಿಪೂರ್ಣವಾಗಿ ನಮ್ಮ ಕೈಗೆ ದೊರೆಯಬೇಕಾದರೆ ಪ್ರಮುಖ ಅರಸು ಮನೆತಗಳ ಇತಿಹಾಸದ ಜೊತೆಗೆ ಕರ್ನಾಟಕದ ಸಾಮಂತ ಅರಸುಮನೆತನಗಳ ಚರಿತ್ರೆಯನ್ನು ಅವಲೋಕಿಸುವುದು ಸಾಂಸ್ಕೃತಿಕ ದೃಷ್ಟಿಯಿಂದ ಅನಿವಾರ್ಯ ಹಾಗೂ ಅಗತ್ಯವೆನಿಸುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಆಗಿಹೋದ ಸಾಮಂತ ಅರಸು ಮನೆತನಗಳು ವಿಜಯನಗರದೊಂದಿಗೆ ಹೊಂದಿರುವ ಸಂಬಂಧವನ್ನು ಪ್ರಸ್ತುತ ಪ್ರಬಂಧದಲ್ಲಿ ಹಿಡಿದಿಡುವ ಪ್ರಯತ್ನವನ್ನು ಮಾಡಲಾಗಿದೆ.

ವಿಜಯನಗರದ ಪಕ್ಕದಲ್ಲಿಯೇ ತಲೆಯೆತ್ತಿದ ಕುರುಗೋಡು ಸಿಂದರಲ್ಲಿ ೨ನೆಯ ರಾಚಮಲ್ಲ ಅತ್ಯಂತ ಶ್ರೇಷ್ಠನಾಗಿದ್ದನು. ಈತನನ್ನು ಕುರಿತು ಕುರುಗೋಡಿನ ಕ್ರಿ.ಶ. ೧೧೭೩ - ೧೧೮೧ ರ XIV ೧೯ನೇ ಶಾಸನ.

ಪೊಡವಿಯ ಸಮಸ್ತ ಭಕ್ತರ
ನಡುವೆ ಮೃಡಂ ಮೆಚ್ಚಿ ನಿಚ್ಚವರಂ ಕುಡಲಿ
ರ್ಮಡಿ ರಾಚಮಲ್ಲದೇವಂ
ಪಡೆದಂ ನಿತ್ಯ ಪ್ರಸಾದ ರಾಜ್ಯ ಶ್ರೀಯುಂ ||

ಎಂದು ಬಣ್ಣಿಸಲಾಗಿದೆ. ಈತನು ಲಿಂಗೈಕ್ಯನಾದಾಗ ಹಂಪೆಯಲ್ಲಿ ಹೆಗ್ಗಡೆ ರೇಚಯ್ಯನು ಈತನ ದೇವಾಲಯವನ್ನು ಮಾಡಿಸುತ್ತಾನೆ. (IV ೨೬೦, ಕ್ರಿ.ಶ. ೧೧೯೯ ಹಂಪಿ) ಕ್ರಿ.ಶ. ೧೧೯೯ರ ಶಾಸನವು ವಿರೂಪಾಕ್ಷ ಸೀಮೆಯ ಬಗ್ಗೆ ಅನೇಕ ವಿವರಗಳನ್ನು ನೀಡುತ್ತದೆ. ವಿರೂಪಾಕ್ಷ ಸೀಮೆಯನ್ನು ರಕ್ಷಿಸಲು ಕುರುಗೋಡು ಸಿಂದರು ಮತಂಗ ಪರ್ವತದ ಬಳಿಯ ಬೀಡಿನಲ್ಲಿ ಸೈನ್ಯವನ್ನು ನೆಲೆಗೊಳಿಸಿದ್ದ ವಿವರಗಳು ದೊರೆ ಯುತ್ತವೆ.

ಕ್ರಿ.ಶ.೧೫೪೫ ರಿಂದ ೧೫೭೧ರವರೆಗೆ ಆಳ್ವಿಕೆ ಮಾಡಿದ ಕೆಳದಿ ಅರಸ ಚಿಕ್ಕ ಸಂಕಣ್ಣ ನಾಯಕ ಮೊದಲ ಬಾರಿಗೆ ಬಿಜಾಪುರ, ಗೋಲ್ಕೊಂಡ, ಅಹಮ್ಮದ್ ನಗರದ ಸೈನ್ಯವನ್ನು ಸೋಲಿಸುತ್ತಾನೆ. ವಿಜಯನಗರದರಸರಿಗೂ ಅಸಾಧ್ಯವಾಗಿದ್ದ ಈ ಕಾರ್ಯದಲ್ಲಿ ಜಯಶೀಲನಾಗುತ್ತಾನೆ. ಈತನು ೧೫೬೫ರಲ್ಲಿ ನಡೆದ ತಾಳಿಕೋಟೆ ಯುದ್ಧದಲ್ಲಿ

ವಿಜಯನಗರದ ಪರವಾಗಿ ನಿಂತು ಹೋರಾಟ ಮಾಡಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಕ್ರಿ.ಶ.೧೩ನೆಯ ಶತಮಾನದ ಕೊನೆಯವರೆಗೆ ಆಳ್ವಿಕೆ ಮಾಡಿದ ಮೈಸೂರು - ಕೊಡಗು ಪ್ರದೇಶದಲ್ಲಿದ್ದ ಚೆಂಗಾಳ್ವರು ಗಂಗರ ಮಾಂಡಲೀಕರಾಗಿ, ಆನಂತರ ಚೋಳರ ಆಶ್ರಯ ಪಡೆದು, ಮುಂದೆ ವಿಜಯನಗರದ ಮಾಂಡಳಿಕರಾಗಿ ತಲೆ ಎತ್ತಿದರು. ಕ್ರಿ.ಶ. ೧೪೯೮ ರಿಂದ ೧೬೦೭ರವರೆಗೆ ಆಳಿದ ಚೆಂಗಾಳ್ವರ ರುದ್ರಗಣನಿಂದ ವಿಜಯನಗರದ ಅಧಿಕಾರಿ ತಿರುಮಲರಾಜನು ಮಳಲವಾಡಿ ಸೀಮೆಯನ್ನು ಮಲ್ಲಿಕಾರ್ಜುನ ದೇವರಿಗೆ ದಾನ ಮಾಡಿಸಿದ ವಿಚಾರವನ್ನು ಕ್ರಿ.ಶ. ೧೬೦೭ರ ಬೆಟ್ಟದಾಪುರ ಶಾಸನ ಉಲ್ಲೇಖಿಸುತ್ತದೆ.

ಮುಮ್ಮಡಿ ಪಟ್ಟಣ, ಮಧುಗಿರಿ ಮತ್ತು ಬಿಜ್ಜಾವರಗಳನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ಮಹಾನಾಡ ಪ್ರಭುಗಳ ಇತಿಹಾಸ ಹೆಂಜೇರುವಿನ ನೊಳಂಬ ಪಲ್ಲವ ಮನೆತನದ ಮಾರೇಗೌಡ ಮತ್ತು ಈತನ ಆರು ಮಂದಿ ಸಹೋದರರಿಂದ ಆರಂಭಗೊಳ್ಳುತ್ತದೆ. ಈ ಸಹೋದರರು ಸೊಲ್ಲಾಪುರದ ಸಿದ್ದರಾಮೇಶ್ವರನ ಅನುಗ್ರಹ ಪಡೆದು, ನಾಗಮುರಿಯೆಂಬ ಆಯುಧ ಹಿಡಿದು ದಕ್ಷಿಣಕ್ಕೆ ಪ್ರಯಾಣ ಬೆಳೆಸಿ, ದಾರಿಯಲ್ಲಿ ಶಾನುಭೋಗ ಮಲ್ಲರಸಯ್ಯನ ಹಿರಿಯ ಮಗ ಹರಿನರಸಯ್ಯ ಮತ್ತು ಕಿರಿಯ ಮಗ ತಿಮ್ಮರಸಯ್ಯರ ವಿಶ್ವಾಸದೊಂದಿಗೆ ವಿಜಯನಗರದ ಕಡೆಗೆ ಹೊರಟರು. ಈ ಸಮಯಕ್ಕೆ ಮಹಮ್ಮದೀಯರ ಮುತ್ತಿಗೆಗೆ ಒಳಗಾಗಿದ್ದ ವಿಜಯನಗರವನ್ನು ಸಂರಕ್ಷಿಸಲು ನೊಳಂಬ ಪಲ್ಲವ ಮನೆತನದ ಮಾರೇಗೌಡ ಮೂರು ಲಕ್ಷ ಸೈನ್ಯ ದೊಂದಿಗೆ ಯುದ್ಧಕ್ಕೆ ಹೋಗಿ ಮಹಮ್ಮದೀಯರನ್ನು ಹಿಮ್ಮೆಟ್ಟಿಸಿದನು. ಇದರಿಂದ ಸಂತುಷ್ಟನಾದ ಹರಿಹರ 'ಮಹಾನಾಡ ಪ್ರಭುಗಳೆಂಬ' ಗೌರವದಿಂದ ಈತನನ್ನು ಸತ್ಕರಿಸಿದನು.

ಮುಂದೆ ಕೃಷ್ಣದೇವರಾಯನ ಕಾಲದಲ್ಲಿ ಕ್ರಿ.ಶ. ೧೪೪೬ನೆಯ ಪಾರ್ಥಿವ ನಾಮ ಸಂವತ್ಸರದ ಪಾಲ್ಗುಣ ಶುದ್ಧ ದಶಮಿ ಭಾನುವಾರ ಬಿಜ್ಜಾ ಮಹಾದೇವಿಯ ಆದೇಶದಂತೆ ಮಾರೇಗೌಡನ ವಂಶಸ್ಥನಾದ ಹಿರೇಚಿಕ್ಕಪ್ಪಗೌಡ ಬಿಜ್ಜಾಪುರ ಗ್ರಾಮವನ್ನು ಅಸ್ತಿತ್ವಕ್ಕೆ ತಂದನು. ಈ ಮನೆತನದ ಚರಿತ್ರೆಯನ್ನು ನಿರೂಪಿಸಿರುವ 'ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ' ಹಿರೇಚಿಕ್ಕಪ್ಪಗೌಡನ ಮಗ ಕರಿತಿಮ್ಮ ಚಿಕ್ಕ ಭೂಪಾಲನನ್ನು ಮತ್ತು ಈತನ ಮಗ ಇಮ್ಮಡಿ ಚಿಕ್ಕಭೂಪಾಲನ ಚರಿತ್ರೆಯನ್ನು ನಿರೂಪಿಸುವ ಕೃತಿಯಾಗಿದೆ.

ವಿಜಯನಗರ ಸಾಮ್ರಾಜ್ಯವನ್ನು ಶ್ರೀರಂಗರಾಯನು ಪೆನುಗೊಂಡೆಯಿಂದ ಆಳುತ್ತಿದ್ದುದನ್ನು ತಿಳಿಸುವ ಕೃತಿ ೧೫೭೭ ಮುಸ್ಲಿಮರು ಪೆನುಗೊಂಡೆಯನ್ನು ಮುತ್ತಿದಾಗ ಶ್ರೀರಂಗರಾಯನ ಅಳಿಯ ಚನ್ನಪಟ್ಟಣದ ಜಗದೇಕರಾಯನೊಡನೆ ಸೇರಿ ಚಿಕ್ಕಭೂಪಾಲ ವಿಜಯನಗರದರಸರ ಪರವಾಗಿ ಯುದ್ಧ ಮಾಡಿದ್ದನ್ನು ವರ್ಣಿಸುತ್ತದೆ. ಆನಂತರವಲ್ಲಿ

ಶ್ರೀರಂಗರಾಯರ ತರುವಾಯ ವೆಂಕಟಾಪತಿರಾಯರ ಮೆಚ್ಚುಗೆಗೆ ಪಾತ್ರವಾಗಿದ್ದನ್ನು ಕಾವ್ಯ ಹೀಗೆ ವಿವರಿಸುತ್ತದೆ.

'ಶಂಕೆಯಿಲ್ಲದೆ ಜಗದೇಕ ರಾಯರ ಕೂಡೆ
ತಾ ಕೈಕೊಂಡು ಕಾಳಗವ
ವೆಂಕಟಾಪತಿರಾಯರ ಮೆಚ್ಚಿಸಿದ ನಿ
ಶ್ಯಂಕ ನಿರ್ಮಡಿ ಚಿಕ್ಕೆಂದ್ರ' ||

ಹೀಗೆ ವಿಜಯನಗರದರಸರಿಂದ ಮೆಚ್ಚಿಗೆ ಪಡೆದ ಇಮ್ಮಡಿ ಚಿಕ್ಕ ಭೂಪಾಲ ಶಂಖ, ಚಕ್ರ, ಹರಿದ್ರಾಧ್ವಜ, ಪಚ್ಚನಾಭಿಘಂಟಿ, ಬಿರುದಾವಳಿಗಳಿಂದ ಸತ್ಕಾರಗೊಳ್ಳುತ್ತಾನೆ. ಕ್ರಿ.ಶ. ೧೫೯೩ ಸಿದ್ಧಾಪುರ ಶಾಸನವು 'ಶ್ರೀ ವೀರಪ್ರತಾಪ ಶ್ರೀ ವೀರ ವೆಂಕಟಾಪತಿ ದೇವ ಮಹಾರಾಯರು' ಎಂದು ಉಲ್ಲೇಖಿಸುವುದಲ್ಲದೆ, ಪೆನುಗೊಂಡೆಯಿಂದ ಆಳುತ್ತಿರುವಾಗ ಈತನ ಅನುಮತಿಯಿಲ್ಲದೆ ಇಮ್ಮಡಿ ಚಿಕ್ಕಭೂಪಾಲ ತನ್ನ ರಾಜ್ಯವನ್ನು ಸುಭದ್ರ ಗೊಳಿಸುತ್ತಾನೆ. ಇದರಿಂದ ಸಂದೇಹಗೊಂಡ ವೆಂಕಟಪತಿರಾಯ ಚಿಕ್ಕ ಭೂಪಾಲನ ಮೇಲೆ ಚನ್ನಪಟ್ಟಣದ ಜಗದೇಕರಾಯನನ್ನು ಯುದ್ಧಕ್ಕೆ ಕಳಿಸುತ್ತಾನೆ. ಜಗದೇಕನು ಸೋತಾಗ ಸ್ವತಃ ವೆಂಕಟಪತಿರಾಯನೇ ಯುದ್ಧ ಸನ್ನದ್ಧನಾಗಿ ಸಿದ್ಧಾಪುರದಲ್ಲಿ ಬೀಡು ಬಿಡುತ್ತಾನೆ. ಗಾಢ ನಿದ್ರೆಯಲ್ಲಿದ್ದ ವೆಂಕಟಪತಿರಾಯನನ್ನು ಮಂಚ ಸಮೇತ ಹೊತ್ತುಕೊಂಡು ಹೋಗಿ ಮಧುಗಿರಿಯ ಗೋಪಾಲಕೃಷ್ಣ ದೇವಾಲಯದ ಮಂಟಪದಲ್ಲಿರಿಸಿ ಕಪ್ಪಕಾಣಿಕೆಗಳೊಂದಿಗೆ ಅರಸನ ಮುಂದೆ ನಿಂತಿದ್ದ ಚಿಕ್ಕಪ್ಪಗೌಡನಿಗೆ 'ರಾಜಾ' ಎಂಬ ಬಿರುದನ್ನು ನೀಡಿ ವೆಂಕಟಪತಿ ಸತ್ಕರಿಸಿದನು. ವಿಜಯನಗರದರಸರ ಪರಂಪರೆಯನ್ನು ಚಾಚುತಪ್ಪದೆ ಮುಂದುವರಿಸಿ ಕೊಂಡು ಬಂದ ಮಹಾನಾಡ ಪ್ರಭುಗಳು ಮಧುಗಿರಿಯ ಕೋಟೆಯ ವಿಶಾಲವಾದ ಒಳಾಂಗಣದಲ್ಲಿ ಮಹಾನವಮಿ ದಿಬ್ಬವನ್ನು ನಿರ್ಮಿಸಿ ನವರಾತ್ರಿ ಮಹೋತ್ಸವವನ್ನು ವೈಭವದಿಂದ ಆಚರಿಸಿಕೊಡು ಬರುತ್ತಿದ್ದರು.

ವಿಜಯನಗರದರಸರ ಅತ್ಯಂತ ವಿಧೇಯ ಮನ್ನೆಯರಾಗಿದ್ದ ಸುಗುಟೂರಿನ ಅರಸರ ಮೂಲ ಪುರುಷ ದೇವಯ್ಯಗೌಡ. ಈತನನ್ನು ಕುರಿತು 'ನಾಗಣ್ಣ ಒಡೆಯನ ಮಗ ದೇವಯ್ಯ ಒಡೆಯನೆಂಬುವವನು ವಿಜಯನಗರದ ಅರಸು ಇಮ್ಮಡಿ ಹರಿಹರನ (ಕ್ರಿ.ಶ.೧೩೭೭ - ೧೪೦೪) ಕಾಲದಲ್ಲಿ ಒಬ್ಬ ಸೇನಾಪತಿಯಾಗಿದ್ದ ವಿವರ ಜೋಡಿ ಲಕ್ಕೊಡನಹಳ್ಳಿಯ ಕ್ರಿ.ಶ. ೧೩೭೮ರ ಶಾಸನ ಉಲ್ಲೇಖಿಸುತ್ತದೆ. (ಎ.ಕ. IX ಹೊಸ ಕೋಟೆ ೧೧೩). ೫೦೦ ವರ್ಷಗಳ ಕಾಲ ಜನಾನುರಾಗಿಗಳಾಗಿ ಆಳಿಕೆ ನಡೆಸಿದ ಸುಗುಟೂರು ಅರಸರು ವಿಜಯನಗರದ ಸಂಗಮ ಮನೆತನದಿಂದ, ಅರವೀಡು ವಂಶದವರೆಗೆ ಸ್ಥಳೀಯ ಆಡಳಿತಗಾರರಾಗಿ ಮುಂದುವರಿದಿರುವುದು ತಿಳಿದು ಬರುತ್ತದೆ.

ಹೊಯ್ಸಳರ ನಾಡಿನಲ್ಲಿ ತಲೆಎತ್ತಿದ ಅರಸುಮನೆತನಗಳಲ್ಲಿ ಉಮ್ಮತ್ತೂರಿನ ಅರಸರು ಒಬ್ಬರು. ಈ ಮನೆತನದಲ್ಲಿ ಬರುವ ನಂಜರಾಜ ತುಂಬಾ ಪ್ರಸಿದ್ಧ ಅರಸ. ಶಿವರಾತ್ರೀಯಾರ್ಯರಿಂದ ವೀರಶೈವದೀಕ್ಷೆ ಹೊಂದಿದ ಈತನು ಕ್ರಿ.ಶ. ೧೪೮೫ರಲ್ಲಿ ನೀಲಕಂಠಾಚಾರ್ಯನಿಂದ ರಚಿತವಾದ ಆರಾಧ್ಯಚರಿತೆಯಲ್ಲಿ

ಅರಿರಾಯ ಗರ್ವ ಪರ್ವತದಳನ ಬಿದುರನುರು
ತರ ವಿಪಕ್ಷ ಪ್ರಬಲ ಸೇನಾಬ್ಧಿ ಬಾಡಬಂ
ಪರ ಭೂಮಿಪಾಲ ಜೀವ ಪ್ರಭಂಜನ ಭೋಗಿಯಾಚ್ಚ ಕಾಮರ ಭೂಜನು ||
ಕರವೆಸೆವ ಗಜವೇಂಟಕಾರನೀಶ್ವರ ಪಾದ
ಸರಸಿರುಹ ಸೇವಕಂ ವೀರನಂಜೇಂದ್ರ ನಿಂ
ಪರಿಪೂಜಿತಂ ನೀಲಕಂಠದೇಶಿಕನುಸಿರ್ದನೀ ಕೃತಿಯನಳ್ತಿಯಿಂದಂ ||

ಎನ್ನುವಲ್ಲಿ ವಿಜಯನಗರದ ಗಜವೇಂಟೆಕಾರನೆಂದು ಬಿರುದಾಂಕಿತನಾಗಿದ್ದ ಪ್ರೌಢದೇವರಾಯನ ಪಾದಸೇವಕನಾಗಿ ನಂಜರಾಜ ಆಡಳಿತ ನಡೆಸುತ್ತಿದ್ದೆಂಬುದು ತಿಳಿದು ಬರುತ್ತದೆ.

ಬೂದಿಹಾಳು ಪಾಳೆಗಾರರು ಮತ್ತು ವಿಜಯನಗರ ಅರಸರ ಸಂಬಂಧವನ್ನು ಸೂಚಿಸಲು ಆಕರಗಳಾಗಿ ದೊರೆಯುವ 'ಸಿರುಮನಚರಿತೆಗಳು' ಪ್ರಮುಖ ಕೃತಿಗಳಾಗಿವೆ. ಸಾಳುವ ಗುಂಡರಾಜನಿಗೂ, ಪ್ರೌಢರಾಯನ ಅರಮನೆಯ ಬಾಗಿಲು ಕಾವಲಗಾರ ಗೊಲ್ಲಕಾಚನಾಯಕನಿಗೂ ವಾಗ್ವಾದ ಬೆಳೆದು, ಯುದ್ಧ ನಡೆದು, ಗುಂಡರಾಜನನ್ನು ಸೋಲಿಸಿದ ಗೊಲ್ಲಕಾಚನಾಯಕನು ಸ್ವತಂತ್ರವಾಗಿ ರಾಜ್ಯಭಾರ ಮಾಡುವಂತೆ ಪ್ರೌಢದೇವರಾಯನಿಂದ ಆದೇಶ ಹೊಂದಿರುವುದನ್ನು 'ಗೊಲ್ಲ ಸಿರುಮನ ಚರಿತ್ರೆ' ಉಲ್ಲೇಖಿಸುತ್ತದೆ. ಪ್ರೌಢರಾಯನಿಗೆ ಗಂಡುಸಂತಾನವಿಲ್ಲದಾಗ ಸಾಳುವ ನರಸಿಂಹ ನನ್ನು ಸಾಕಿದ್ದು, ಆತ ಚಂದ್ರಗಿರಿಯ ರಾಜ್ಯಪಾಲನಾಗಿ, ಮುಳುಬಾಗಿಲ ಸೀಮೆಯ ಆಡಳಿತಗಾರನಾಗಿ, ವಿಜಯನಗರದ ಸಾಮ್ರಾಟನಿಗೆ ಆಳ್ವಿಕೆ ನಡೆಸಿ ಕ್ರಿ.ಶ.೧೪೭೫ರ ಸುಮಾರಿಗೆ ಸಿರುಮನ ಹಾಗೂ ನರಸಿಂಹರ ಯುದ್ಧ ನಡೆದಿರುವುದನ್ನು ಗಮನಿಸಿದಾಗ ವಿಜಯನಗರದೊಂದಿಗೆ ಬೂದಿಹಾಳು ಪಾಳೆಗಾರರು ಸಂಬಂಧವನ್ನಿರಿಸಿಕೊಂಡಿರು ವುದು ತಿಳಿದು ಬರುತ್ತದೆ.

ಮತ್ತೋಡು ಪಾಳೆಯಪಟ್ಟನ್ನು ಕಟ್ಟಿದ ಗಿರಿಯಪ್ಪ ನಾಯಕನ ಪರಾಕ್ರಮವನ್ನು ಪೆನುಗೊಂಡೆಯಲ್ಲಿ ಆಳುತ್ತಿದ್ದ, ವೆಂಕಟಾಪತಿ ತಿಳಿದು ಈತನನ್ನು ಸತ್ಕರಿಸುತ್ತಾನೆ. ಮದವೇರಿದ ಆನೆಯನ್ನು ಪಳಗಿಸಿದ ಈತನಿಗೆ ಆನೆ, ಕುದುರೆ, ಪಲ್ಲಕ್ಕಿ, ಛತ್ರಿ, ಚಾಮರ, ೬ ಸಾವಿರ ಪಗೋಡ ಆದಾಯವುಳ್ಳ ಲಕ್ಕವ್ವನಹಳ್ಳಿಯನ್ನು ನೀಡುವುದರ ಮೂಲಕ ಮತ್ತೋಡು ಪಾಳೆಯಗಾರರ ಸೃಷ್ಟಿಗೆ ವೆಂಕಟಾಪತಿ ಕಾರಣನಾದನು.

ಕ್ರಿ.ಶ. ೧೫೬೫ರ ತಾಳೀಕೋಟೆ ಯುದ್ಧದ ನಂತರ ವಿಜಯನಗರ ತನ್ನ ವೈಭವದಿಂದ ಹಿಂದೆ ಸರಿಯುವಾಗಲೂ ಸೋದೆ ಅರಸು ಮನೆತನ ಈ ಸಾಮ್ರಾಜ್ಯದೊಂದಿಗೆ ಗೌರವಯುತ ಸಂಬಂಧವನ್ನು ಬೆಳೆಸಿತ್ತು. ಈ ಸಂಗತಿಯನ್ನು ಕ್ರಿ.ಶ.೧೬೬೬ರ ಕೋಟೆ ಕೊಪ್ಪದ ಶಾಸನ ತಿಳಿಸುತ್ತದೆ. ವಿಜಯನಗರದ ರಂಗ ರಾಜನಿಂದ ಕ್ರಿ.ಶ.೧೫೭೨ರಲ್ಲಿ ವರಡಿಕೊಪ್ಪವನ್ನು ಅಮರ ಮಾಗಾಣಿಯಾಗಿ ಸೋದೆ ಅರಸಪ್ಪ ಪಡೆದುದನ್ನು ಬನವಾಸಿ ಶಾಸನ ತಿಳಿಸುತ್ತದೆ. ವಿಜಯನಗರದ ಸಂಕಷ್ಟ ಕಾಲದಲ್ಲಿ ಸೈನಿಕ ಸಹಾಯ ಮಾಡಿದ ಸೋದೆ ಅರಸರು ವಿಜಯನಗರದೊಂದಿಗೆ ಸೌಹಾರ್ದ ಸಂಬಂಧವಿರಿಸಿಕೊಂಡಿದ್ದನ್ನು ಅನೇಕ ಆಕರಗಳು ಉಲ್ಲೇಖಿಸುತ್ತವೆ.

ಮಲೆನಾಡ ಭಾಗದಲ್ಲಿ ವಿಜಯನಗರದ ಸಂಸ್ಕೃತಿಯನ್ನು ಬಿತ್ತಿದ ಬೀಳಗಿ ಅರಸು ಮನೆತನದ ಇತಿಹಾಸ ದಾಖಲರ್ಹವಾದದ್ದು. ಹಾಗೆಯೇ ಕೊಲ್ಹಾರದ ದೇಶಗತಿಯ ಮೂಲಪುರುಷ ಕವಿ ಅದ್ರೀಶ. ಈತನ ಕಾಲ ಕ್ರಿ.ಶ. ೧೫೨೫. ಈತನಿಂದ ರಚನೆಗೊಂಡ ಪ್ರೌಢರಾಯನ ಕಾವ್ಯ ವಿಜಯನಗರದ ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಜೀವನದ ಬಗ್ಗೆ ಬೆಳಕು ಬೀರುವ ಕೃತಿಯಾಗಿದೆ. ಜಕ್ಕಣ್ಣಾರ್ಯನ ವ್ಯಕ್ತಿತ್ವವನ್ನು ಮೊದಲ ಬಾರಿಗೆ ನಿರೂಪಿಸುವ ಐತಿಹಾಸಿಕ ಕೃತಿ ಇದಾಗಿದೆ. ವಿಜಯನಗರದ ಪ್ರೌಢ ರಾಯನ ಆಳ್ವಿಕೆಗೆ ಕೊಲ್ಹಾರ ಪರಗಣಿ ಒಳಗಾಗಿತ್ತು. ಹಾಗೆಯೇ ಸುರಪುರ ಸಂಸ್ಥಾನದ ಪೂರ್ವಜರು ವಿಜಯನಗರದ ಸಾಮ್ರಾಜ್ಯದಲ್ಲಿ ಅಧಿಕಾರಿಗಳಾಗಿಬಹುದೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

ಒಟ್ಟಿನಲ್ಲಿ

1. ಕರ್ನಾಟಕದ ಸಾಮಂತ ಅರಸು ಮನೆತನಗಳು ವಿಜಯನಗರದೊಂದಿಗೆ ಇರಿಸಿಕೊಂಡಿದ್ದ ಸಂಬಂಧವನ್ನು ಗಮನಿಸಿದಾಗ ವಿಜಯನಗರ ಕೊನೆಗಾಲ ತುಂಬಾ ಅಭದ್ರತೆಯಿಂದ ಕೂಡಿತ್ತು.
2. ತಮ್ಮ ಹತ್ತಿರದ ಸಂಬಂಧಿಗಳನ್ನು ಸ್ಥಳೀಯ ರಾಜ್ಯಗಳ ಮಾಂಡಲಿಕರನ್ನಾಗಿ ನೇಮಿಸಿರುವುದು ತಿಳಿದು ಬರುತ್ತದೆ.
3. ಇಂಥ ಸಾಮಂತರು ನಾಡ ಪ್ರಭುಗಳಾಗಿ ವಿಜಯನಗರ ಸಾಮ್ರಾಟರು ಕೈಗೊಂಡ ರಾಜ್ಯ ವಿಸ್ತರಣಾ ಹಾಗೂ ಆಂತರಿಕ ಕಲಹಗಳನ್ನು ಶಮನ ಗೊಳಿಸುವ ಕಾರ್ಯದಲ್ಲಿ ತೊಡಗಿದ್ದರು.
4. ಸಾಮ್ರಾಟರಿಗೆ ಸಲ್ಲಬೇಕಾದ ತೆರಿಗೆ - ಸುಂಕಗಳನ್ನು ಕಾಲಕಾಲಕ್ಕೆ ಸಂಗ್ರಹಿಸಿ ಕೊಡುವ ಹೊಣೆಗಾರಿಕೆಯನ್ನು ಬಹುತೇಕ ಮಾಂಡಲಿಕರು ಪೂರೈಸಿದರು.
5. ಸಾಂಸ್ಕೃತಿಕ ಚರಿತ್ರೆಯ ದೃಷ್ಟಿಯಿಂದ ಈ ಮಾಂಡಲಿಕರು ವಿಜಯನಗರ

ಶಿಲ್ಪಶೈಲಿಯನ್ನು ಹಾಗೂ ಆಚಾರ, ಉತ್ಸವಗಳನ್ನು ಚಾಚೂ ತಪ್ಪದೆ ಅನುಷ್ಠಾನಗೊಳಿಸುವುದರ ಮೂಲಕ 'ವಿಜಯನಗರ ಸಾಂಸ್ಕೃತಿಕ' ಪರಂಪರೆಯ ವಾರಸುದಾರರಾಗಿದ್ದರು.

6. ವಿಜಯನಗರದರಸರು ತಾವೇ ಸ್ವತಃ ಮುಂದೆ ನಿಂತು ಮಾಂಡಲಿಕ ರಾಜ್ಯಗಳ ಅಸ್ತಿತ್ವಕ್ಕೆ ಅನುವು ಮಾಡಿಕೊಡುವುದರ ಮೂಲಕ ನಾಡ ಪ್ರಭುಗಳ, ಪಾಳೇಗೌರರ ಸಾಮಂತರನ್ನೊಳಗೊಂಡ 'ವಿಜಯನಗರ ಒಕ್ಕೂಟ'ವನ್ನು ಹುಟ್ಟುಹಾಕಿದರು.

7. ಇಂಥ 'ಒಕ್ಕೂಟ' ಅಸ್ತಿತ್ವಕ್ಕೆ ಬರುವ ವೇಳೆಗೆ ವಿಜಯನಗರದರಸರ ಆಡಳಿತ ಹಂಪೆಯಿಂದ ಪೆನುಗೊಂಡೆಗೆ ವರ್ಗಾವಣೆಯಾಗಿರುವುದು ತಿಳಿದು ಬರುತ್ತದೆ.

8. ಸಿರುಮನ ಸಾಂಗತ್ಯ, ಇಮ್ಮಡಿ ಚಿಕ್ಕಭೂಪಾಲ ಸಾಂಗತ್ಯ, ಪ್ರೌಢರಾಯನ ಕಾವ್ಯ, ಚನ್ನಬಸವಪುರಾಣ, ಭೈರವೇಶ್ವರ ಕಾವ್ಯದ ಕಥಾ ಮಣಿಸೂತ್ರರತ್ನಾಕರದಂತಹ ಕೃತಿಗಳು ವಿಜಯನಗರದ ಮಾಂಡಲಿಕರ ಚರಿತ್ರೆಯನ್ನು ನಿರೂಪಿಸುವ ಪ್ರಮುಖ ಆಕರಗಳಾಗಿವೆ. ಕೆಲಜನ ಮಾಂಡಲಿಕರು ಸ್ವತಃ ಕವಿಗಳಾಗಿದ್ದಾರೆ.

೩೦. ವಿಜಯನಗರ ಕಾಲದ ಬೇಡರು ಮತ್ತು ನಾಯಕತನ

ಡಾ. ವಿರೂಪಾಕ್ಷಿ ಪೂಜಾರಹಳ್ಳಿ

ಪ್ರಸ್ತುತ ಸಂಶೋಧನಾ ಪ್ರಬಂಧದಲ್ಲಿ ವಿಜಯನಗರ ಕಾಲದ ಬೇಡ - ನಾಯಕರ ಚರಿತ್ರೆ ಮತ್ತು ಸಂಸ್ಕೃತಿಯ ಸಂಗತಿಗಳನ್ನು ಕುರಿತು ಚರ್ಚಿಸಲಾಗುವುದು. ಮುಖ್ಯವಾಗಿ ಬೇಡ - ನಾಯಕರು ವಿಜಯನಗರವನ್ನು ಕಟ್ಟುವಲ್ಲಿ ನಾಯಕ, ಅಮರನಾಯಕ, ನಾಯಕತನ ಮೀಸಲು ನಾಯಕ ಹೀಗೆ ಅನೇಕ ಜವಾಬ್ದಾರಿಗಳನ್ನು ವಹಿಸಿದ ಪಾತ್ರ, ಸಾಮ್ರಾಜ್ಯದ ಔನ್ನತಿಗೆ ಶ್ರಮಿಸಿದವರನ್ನು ಇಲ್ಲಿ ಸ್ಮರಿಸುವುದು ಉಚಿತ. ಮರೆಯಾದ ಐತಿಹಾಸಿಕ ಸಂಗತಿಗಳನ್ನು ಇಲ್ಲಿ ಚರ್ಚಿಸಲಾಗುವುದು.

ವಿಜಯನಗರ ಸಾಮ್ರಾಜ್ಯವನ್ನು ಆಳಿದ ನಾಲ್ಕು ವಂಶಗಳ ಆಳ್ವಿಕೆಯಲ್ಲಿ (೧೩೩೬-೧೫೬೫) ಬೇಡ- ನಾಯಕರು ರಾಜಪ್ರಭುತ್ವದ ಆಯಕಟ್ಟಿನ ಸ್ಥಾನದಲ್ಲಿದ್ದರು. ಇನ್ನು ಕೆಲವರು ಅಧಿಕಾರೇತರ ಜವಾಬ್ದಾರಿಗಳನ್ನು ಹೊಂದಿದ್ದರು. ಹೀಗಾಗಿ ಈ ಕಾಲಘಟ್ಟದಲ್ಲಿ ಅಧಿಕಾರಾ ರೂಢ ಮತ್ತು ಅಧಿಕಾರ ರಹಿತ ವರ್ಗವನ್ನು ಗುರುತಿಸುವ ಪ್ರಯತ್ನ ಮಾಡಲಾಗುವುದು. ಮತ್ತೊಂದು ವರ್ಗ ಇವೆರಡು ಸ್ಥಿತಿಗಳಿಂದ ದೂರ ವಾಗಿದ್ದರು. ಅಧಿಕಾರಶಾಹಿಯಲ್ಲಿದ್ದ ಬೇಡರು ತಳಮಟ್ಟದಿಂದ ರಾಜನವರೆಗೆ ವಿವಿಧ ಬಗೆಯ ಅನನ್ಯ ಸೇವಾಕಾರ್ಯಗಳನ್ನು ಮಾಡುವುದರ ಮೂಲಕ ರಾಜನಿಗೆ ಋಣಿ ಯಾಗಿದ್ದರು. ಅಧಿಕಾರರಹಿತ ವರ್ಗ ಕುಲಕಸಬಿನೊಂದಿಗೆ ಗುರುತಿಸಿಕೊಂಡಿದ್ದರು. ಮೂರನೆಯ ವರ್ಗವು ವಾಣಿಜ್ಯ ವೃತ್ತಿಗಳಿಂದ ವ್ಯಾಪಾರ ವಹಿವಾಟು ನಡೆಸುತ್ತಿದ್ದವು.

ಕುಲಕಸುಬು	ರಕ್ಷಣೆ	ಅಧಿಕಾರ	ಇತರೆ
ಬೇಟೆಗಾರಿಕೆ	ಯೋಧ	ನಾಯಕತನ	ಪೂಜಾರಿ
ಮೀನುಗಾರಿಕೆ	ಕ್ಷತ್ರಿಯ	ಅಮರನಾಯಕ	ಕಿಲಾರಿ
ಪಶುಪಾಲನೆ	ಸೈನಿಕ	ನಾಯಂಕಾರ ವ್ಯವಸ್ಥೆ	
ಕೃಷಿ	ಸೇನಾಪತಿ	ಪಾಳೆಯಗಾರ	ಪಲ್ಲಕ್ಕಿ
ದಳವಾಯಿ	ದಂಡನಾಯಕ		ಹೊರುವುದು
ಒಲೆಕಾರಿಕೆ	ಖಾಸಪಡೆ		

ಬೇಟೆ ತಿಪ್ಪನಾಯಕ ಬೇಡ ಪಡೆ-ದೇವರ ಪಡೆ

ನೀರಗಂಟಿ ಮೀಸಲುಪಡೆ

ಕಾವಲುಗಾರ

ತಳವಾರ

ನಾಡತಳವಾರ

ಮಹಾನಾಡ ತಳವಾರ

ಮೀಸಲು ತಳವಾರ

ದೊರೆ - ದಳವಾಯಿ

ಸೇನಾಪತಿ

ರಾಜ, ಮಂತ್ರಿ, ಪಾಳೆಯಗಾರ

ಬಿ. ವಾಸದ ನೆಲೆ

ಬೇಟೆಗಾರರ ಹೆಬ್ಬಾಗಿಲು

ತಳವಾರಘಟ್ಟ

ಮ್ಯಾಸರಹಟ್ಟಿ

ನಾಯಕಹಟ್ಟಿ (ಹಳ್ಳಿ)

ಬೇಡರಹಳ್ಳಿ (ಹಟ್ಟಿ)

ಹಂಪೆ - ಆನೆಗೊಂದಿ, ಇತ್ಯಾದಿ.

ಬೇಟೆಗಾರಿಕೆ

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗುವುದಕ್ಕೆ ಬೇಟೆ ಸನ್ನಿವೇಶ ಕಾರಣ. ಯುದ್ಧಕ್ಕೆ ಹೊರಡುವ ಸಂಭ್ರಮದಂತೆ ಬೇಟೆಗೂ ಹೋಗುವ ಪರಿಪಾಠ ಇಟ್ಟು ಕೊಂಡಿದ್ದರು. ಬೇಡಪಡೆ, ಮೀಸಲುಪಡೆ ಹಾಗೂ ಗುರಿಕಾರನ ನೆರವಿನೊಂದಿಗೆ ಅರಸ ಬೇಟೆಗೆ ಹೊರಡುತ್ತಿದ್ದ. ಉದಾ. ಹರಿಹರ, ೨ನೇ ದೇವರಾಯ. ವಿಜಯನಗರ ಕಾಲದ ದೇವಾಲಯಗಳಲ್ಲಿ ಬೇಟೆ ಉಲ್ಲೇಖವಿದೆ. ಶೃಂಗೇರಿ, ಭಾಗಮಂಡಲ, ಲೇಪಾಕ್ಷಿ, ಮೇಲುಕೋಟೆ, ನಂದಿಬೆಟ್ಟ, ಎಡೆಯೂರು, ಕಲ್ಲೂರು, ಹಿರಿಯೂರು, ಶ್ರೀಶೈಲಂ, ಯಗಂಟಿ, ಪುಷ್ಪಗಿರಿ, ಶಂಕರಗಿರಿಗಳ ದೇವಾಲಯಗಳಲ್ಲಿ ಕಿರಾತಾರ್ಜುನೀಯ ಪ್ರಸಂಗವಿದೆ ಎಂದಾಗ ಬೇಟೆ ಲೌಕಿಕ ಮತ್ತು ಅಲೌಕಿಕವಾಗಿ ಪ್ರಚಲಿತದಲ್ಲಿತ್ತು ಎಂಬುದು ಸ್ಪಷ್ಟ. ಈ ಕಾಲದ ಬೇಟೆ ಆಹಾರ ಸಂಪಾದನೆ, ಸ್ವಯಂ ರಕ್ಷಣೆ, ಮನೋರಂಜನೆ,

ಪ್ರಕೃತಿ ಸಮತೋಲನಕ್ಕಾಗಿ ಜನಸಾಮಾನ್ಯರಿಂದ ರಾಜಪ್ರಭುತ್ವ ದವರೆಗೆ ಕ್ರೀಡೆಯಾಗಿ, ವಿಹಾರ ಮಾಧ್ಯಮವಾಗಿ ಪ್ರಸ್ತುತತೆಯನ್ನು ಪಡೆದಿತ್ತು. ವಿದೇಶಿ ಯಾತ್ರಿಕರಾದ ವೇರ್ಥಮ, ಅಬ್ದುಲ್ ರಜಾಕ್, ಬಾರ್ಬೋಸ, ಪೆರ್ನಾಂವ್, ನೂನಿಜ್ ಮೊದಲಾದವರು ವಿಜಯನಗರ ಕಾಲದ ಬೇಟೆ ಬಗ್ಗೆ ತಿಳಿಸಿದ್ದಾರೆ. [1]

ವಿಜಯನಗರ ಕಾಲದಲ್ಲಿ ಪ್ರಾಣಿಬೇಟೆ ಮಾತ್ರವಲ್ಲದೆ, ಮೀನುಗಾರಿಕೆ ಸಹಾ ರೂಢಿಯಲ್ಲಿತ್ತು. ಕೃಷ್ಣಾ, ತುಂಗಭದ್ರಾ, ಕಾವೇರಿ, ಮಲಪ್ರಭಾ ಮೊದಲಾದ ನದಿ ಹಾಗೂ ಅರಬ್ಬಿ ಸಮುದ್ರ, ಬಂಗಾಳಕೊಲ್ಲಿಗಳಲ್ಲಿ ಹಿಂದಿನಿಂದಲೂ ಮೀನುಗಾರಿಕೆ ಇತ್ತು. ಭಟ್ಕಳ, ಹೊನ್ನಾವರ, ಬಾರಕೂರು, ಮಂಗಳೂರು ಬಂದರುಗಳಲ್ಲಿ ಮೀನುಗಾರಿಕೆ ಅವ್ಯಾಹತವಾಗಿ ನಡೆದಿತ್ತು. ಮೀನುಬೇಟೆ ವಿಜಯನಗರ ಕಾಲದಲ್ಲಿ ಯುದ್ಧದಷ್ಟೇ ಸಂಭ್ರಮವನ್ನು ಬಯಸಿತ್ತು. ಇದು ಉಪವೃತ್ತಿ ಯಾಗಿದ್ದರೂ ಕೆಲವೊಂದು ವರ್ಗಗಳಿಗೆ ಜೀವನಾವಶ್ಯಕ ವೃತ್ತಿಯಾಗಿ, ರಾಜ್ಯಕ್ಕೆ ಆದಾಯ ತರುವ ಕಸುಬಾಗಿತ್ತು. ಇದೊಂದು ಲಾಭದಾಯಕ ಉದ್ಯಮವಾಗಿತ್ತು. ಹರಿಹರನ ಗಿರಿಜಾಕಲ್ಯಾಣ, ರಾಘವಾಂಕನ ಹರಿಶ್ಚಂದ್ರ ಕಾವ್ಯ, ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ, ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣದಲ್ಲಿ ಮೀನಿನ ಬೇಟೆ ಪ್ರಸಂಗಗಳಿವೆ. ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿ ಮೀನಿನ ಗೊಂಚಲು ಮತ್ತು ೨೪ ವಿವಿಧ ಬಲೆಗಳನ್ನು ರಾಘವಾಂಕ ತಿಳಿಸಿ ದ್ದಾನೆ. ಕನಕದಾಸರು ಮೋಹನ ತರಂಗಿಣಿಯಲ್ಲಿ ಜಲಗಾರ, ಮೀನುಗಳ ಬಗ್ಗೆ ಪ್ರಸ್ತಾಪಿಸಿ ದ್ದಾರೆ. ವಿಜಯನಗರ ಕಾಲ ದಲ್ಲಿ ಬಹುತೇಕ ಜನರಿಗೆ ಮೀನು ಇಷ್ಟ. ಬ್ರಾಹ್ಮಣರು ಮೀನನ್ನು ತಿನ್ನುತ್ತಿರಲಿಲ್ಲ. ಬಲೆ, ಕೂಳೆ, ಗಾಣ, ಬಾಣ-ಬಿಲ್ಲುಗಳ ಪ್ರಸ್ತಾಪವಿದೆ. ಮೀನುಗಾರಿಕೆ ನಡೆಸುವ ಬೆಸ್ತ ಸಮುದಾಯ ಇಂದು ಅಂಬಿಗತನವನ್ನು ರೂಢಿಸಿ ಕೊಂಡಿದ್ದಾರೆ. ಕಬ್ಬೇರ, ಗಂಗಮತಸ್ಥ, ಬಾರಿಕೇರ ಎಂದು ಇವರನ್ನು ಕರೆಯುತ್ತಾರೆ. [2]

ರಾಜಮನ್ನಣೆಯಾದ ಬೇಟೆ

ಸಂಗಮ ವಂಶದ ಅರಸ ಹರಿಹರ ಬೇಟೆಗೆ ಮತ್ತು ಬೇಟೆಗಾರರಿಗೆ ಮಾನ್ಯತೆ ನೀಡಿ ಪ್ರೋತ್ಸಾಹಿಸಿದ್ದ. ವಿಜಯನಗರದ ಅರಸರು ಬೇಟೆಯಲ್ಲಿ ನಿಪುಣರಾಗಿದ್ದರು. ಎರಡನೇ ದೇವರಾಯ ಬೇಟೆಯಾಡಿದ್ದು ಆತನಿಗೆ ಗಜ ಬೇಟೆಗಾರ ಎಂಬ ಬಿರುದಿತ್ತು. ಬೇಟೆಗಾರರು ರಾಜನ ಪ್ರತಿನಿಧಿಗಳಾಗಿ ಬೇಟೆಯಾಡಿ ಜೀವಿಸುತ್ತಿದ್ದರು. ಕ್ರೂರ ಮೃಗಗಳ ಹಾವಳಿ ಹೆಚ್ಚಿದಾಗ ರಾಜ ಬೇಟೆಗೆ ತಪ್ಪದೆ ಹೋಗಬೇಕಾಗಿತ್ತು. ವರಾಹ ಚಿಹ್ನೆ ಕಾರಣ ಹಂದಿಗೆ ಇಲ್ಲಿ ವಿಶೇಷ ಸ್ಥಾನವಿದೆ.

ವಿಜಯನಗರ ಕಾಲದ ಬೇಡರು ಬೇಟೆಯಲ್ಲಿ ನಿಪುಣರು. ಹಂಪಿ ವಿರೂಪಾಕ್ಷ ದೇವಸ್ಥಾನ, ಬೇಡರ ಕಣ್ಣಪ್ಪನ ಶಿಲ್ಪಗಳಿವೆ. ರಾಜ ಬೇಟೆಗೆ ಹೊರಡುವಾಗ ೧೦,೦೦೦

ಅಶ್ವಾಳು,೫,೦೦,೦೦೦ ಕಾಲಾಳು ಮತ್ತು ೨೦೦ ಗಜಗಳ ಪರಿವಾರವನ್ನು ಒಯ್ಯುತ್ತಿದ್ದರು. ಹುಲಿ ಬೇಟೆ (ವಿಠಲ), ಜಿಂಕೆ ಬೇಟೆ (ಮಹಾನವಮಿ), ಹಂದಿ ಬೇಟೆ ಇತರೆ ಬೇಟೆ ಪ್ರಕಾರಗಳಿದ್ದವು. ಹಂಪೆಯಲ್ಲಿ ಮಹಾನವಮಿ ಹಬ್ಬ ಆಚರಿಸುವ ಮೊದಲು ಬೇಟೆ ಹಬ್ಬವನ್ನು ಆಚರಿಸುತ್ತಿದ್ದರು. ಬೇಟೆ ಹಬ್ಬ ತಿರುಪತಿಯಲ್ಲಿ ನಡೆಯುತ್ತಿತ್ತು.

ಪಶುಪಾಲನೆ

ವಿಜಯನಗರದಲ್ಲಿ ಗೋವುಗಳಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಿದ್ದರು. ೨.೩.೧೪೮೨ ರಂದು ಹರಿಹರ ಮಹರಾಯ ಎತ್ತು, ಎಮ್ಮೆ, ಕರಕುಶಲ ಕರ್ಮಿಗಳಿಗೆ ತೆರಿಗೆ ವಸೂಲಿ ಮಾಡುವ ಹೊಸ ವಿಧಾನವನ್ನು ಜಾರಿಗೆ ತಂದಿದ್ದರು. ಗೋವುಗಳಿಗೆ ತೆರಿಗೆ ವಿಧಿಸುವುದು ಅದನ್ನು ದಾನ ಮಾಡುವುದು ಪ್ರಚಲಿತವಿತ್ತು. ಗೋದಾನದ ಉಲ್ಲೇಖಗಳಿವೆ. ಹೊಳಲ್ಕೆರೆ ತಾಲೂಕು ಲೋಕದೊಳಲು ಗ್ರಾಮದಲ್ಲಿ ಎರಡು ವಿಶಿಷ್ಟವಾದ ಪಶುಪಾಲನಾ ವೀರಗಲ್ಲುಗಳಿವೆ. (ಕನ್ನಡ ವಿಶ್ವವಿದ್ಯಾಲಯ, ಹಂಪಿ ವಸ್ತು ಸಂಗ್ರಹಾಲಯದವರು ತಂದಿದ್ದಾರೆ). ಅಲ್ಲದೆ, ಇದೇ ತಾಲೂಕು ಗಂಜಿಗಟ್ಟೆ ಪಶುಪಾಲಕ ಗಾದರಿಪಾಲನಾಯಕ ಇತರರನ್ನು ಈ ಹಿನ್ನೆಲೆಯಲ್ಲಿ ನೋಡಬಹುದು. ಚಿನ್ನಹಗರಿ ನದಿ, ಮುತ್ತಿಗಾರ ಎತ್ತುಗಳು, ದೇವರ ಎತ್ತುಗಳು, ಮುತ್ತಿಗಾರ ಹಳ್ಳಿ ೩೦೦ ಎಕರೆ ಭೂಮಿ ಉಂಬಳಿ ಕೊಟ್ಟ ಪ್ರಸ್ತಾಪವಿದೆ. ಪಶುಪಾಲಕ ವೀರರು ದಡ್ಡಿ ಸೂರನಾಯಕ, ಯರಗಾಟನಾಯಕ, ಪಾಪನಾಯಕ, ಕೊಡಗಲುಬೊಮ್ಮಯ್ಯ, ಗಾಜನಾಯಕ ಇತರರು ಕಂಡುಬರುತ್ತಾರೆ. ಡೋಮಿಂಗೊ ಪಯಸ್ ವಿಜಯನಗರ ಕಾಲದ ಪಶುಪಾಲನೆ ಬಗ್ಗೆ ತಿಳಿಸಿದ್ದಾನೆ. ಆಕಳು, ಎಮ್ಮೆ ಮತ್ತು ಕುರಿ ಇತರ ಪ್ರಾಣಿಗಳ ಬಗ್ಗೆ ತಿಳಿಸಿದ್ದಾನೆ. ಇಲ್ಲಿ ದೇವರೆತ್ತುಗಳನ್ನು ಕಾಯುವವನಿಗೆ ಕಿಲಾರಿ ಎನ್ನುತ್ತಾರೆ.

ಬೇಡರು, ನಾಯಕರು, ವಾಲ್ಮೀಕಿ ಸಮುದಾಯ : ಸಂಕ್ಷಿಪ್ತ ಪರಿಚಯ

ಪ್ರಾಚೀನ ಭಾರತದ ಚರಿತ್ರೆಯಲ್ಲಿ ಕಿರಾತ, ಶಬರ, ಪುಳಿಂದ, ನಿಷಾಧ, ವಾಲ್ಮೀಕಿ ಎಂದು ಖ್ಯಾತಿಪಡೆದ ಯೋಧ ಬುಡಕಟ್ಟು ಇದಾಗಿದೆ. ಕ್ಷತ್ರಿಯರಾದ ಬೇಡರು ಆರ್ಯರನ್ನು ಹೊರದೂಡಲು ಪ್ರಯತ್ನಿಸಿದ್ದರು. ವೀರ, ಶೌರ್ಯ, ಪರಾಕ್ರಮ ಲಕ್ಷಣಗಳಿಂದ ಇವರು ಪ್ರಸಿದ್ಧಿಯಾಗಿದ್ದಾರೆ. ಸಂಗಮ, ಸಾಳುವ, ತುಳುವ ಮತ್ತು ಅರವೀಡು ವಂಶಗಳ ಕಾಲದಲ್ಲಿ ಬೇಡರು ಬೇಟೆ - ಪಶುಪಾಲನೆ, ತಳವಾರರು, ಸೈನಿಕರು ಮತ್ತು ನಾಯಕರಾಗಿದ್ದು ಸ್ಪಷ್ಟ.

ವಿಜಯನಗರ ಸಾಮ್ರಾಜ್ಯ ಅಂದರೂ ಹಂಪಿ ಪರಿಸರ ಇಲ್ಲಿನ ವ್ಯಾಪ್ತಿ. ಇಂದಿನ ರಾಯಲ ಸೀಮಾದ ಜೊತೆಗೆ ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳನ್ನು ಅನುಲಕ್ಷಿಸಲಾಗಿದೆ.

ಕೃಷ್ಣದೇವರಾಯನ ಆಮುಕ್ತಮಾಲ್ಯದ ಕೃತಿಯಲ್ಲಿ (ಆಮುಕ್ತ - ಅಲಂಕರಿಸಿ ಕೊಂಡು ಮಾಲ್ಯ - ಹೂಮಾಲೆಯನ್ನು ದ-ತಾನು ಕೊಟ್ಟಳು) ವಿಷ್ಣು ಚಿತ್ತೀಯ ಕಥೆ (೫೦) ಕನಸಿನಲ್ಲಿ ಆಂಧ್ರ ವಿಷ್ಣುವಿನ ಪ್ರಸ್ತಾಪವಿದೆ. ಇದರಲ್ಲಿ ಬೋಯಿಗಳು (೮೦), ಜಿಂಕೆ ಮಾಂಸ ಕಾಡು ಪ್ರಾಣಿಗಳ (೧೨೪), ಬೇಟೆಗಾರರ ಕಷ್ಟದ (೧೩೪), ಭಿಲ್ಲರು (೧೩೭), ಮೀನುಗಾರರು (೧೪೩), ದಾಸಯ್ಯ ಬೇಟೆಗಾರ (೧೭೧) ಮೋಸ, ಉಪಾಯದ ಬೇಟೆ (೧೭೬), ಬೇಡರು (೪೪), ತಳವಾರರು (೪೨), ಬೇಟೆಯಾಡುವರೊಂದಿಗೆ (೪೬) ಮೊದಲಾದ ಸಂಗತಿಗಳಿವೆ.

ತಳವಾರಘಟ್ಟ

ಹಂಪಿಯಿಂದ ಪೂರ್ವಕ್ಕೆ ಹೋಗಿ ನಂತರ ಉತ್ತರಕ್ಕೆ ಆನೆಗೊಂದಿಗೆ ಹೋಗುವ ಮಾರ್ಗದಲ್ಲಿ ತಳವಾರಘಟ್ಟವಿದೆ. ತಳವಾರರು ಕಾರ್ಯನಿರ್ವಹಿಸುತ್ತಿದ್ದ ಸ್ಥಳ. ಹಂಪಿ, ಕಮಲಾಪುರ ಗ್ರಾಮಗಳಲ್ಲಿ ತಳವಾರರು ಇದ್ದು, ಅವರು ವಿಜಯನಗರದ ಮೂಲಕ ತಮ್ಮನ್ನು ಗುರುತಿಸಿಕೊಳ್ಳುತ್ತಾರೆ. ತಳಾರಿಘಟ್ಟ, ತಳವಾರನ ಕಟ್ಟೆ ಎಂದೆಲ್ಲಾ ಕರೆಯಲಾಗಿದೆ. ಇದರ ಸುತ್ತಮುತ್ತ ಬೇಡ-ನಾಯಕರು ನೆಲಸಿದ್ದು, ಕಾವಲು ರಕ್ಷಣೆಯ ಕೆಲಸ ಮಾಡುತ್ತಿದ್ದರು. ಇಲ್ಲಿ ತಳವಾರ ಕುಳಿತುಕೊಳ್ಳುವ ಕಟ್ಟೆ, ಚಾವಡಿ, ಮಂಟಪ ಗಳಿವೆ. ವೀರಗಲ್ಲು - ಶಾಸನ, ಆಂಜನೇಯ ಗುಡಿಗಳಿರುವುದು ಗಮನಾರ್ಹ.

ಬೇಟೆಗಾರರ ಹೆಬ್ಬಾಗಿಲು

ಇದು ಮಾಲ್ಯವಂತ ರಘುನಾಥ ದೇವಾಲಯದ ಆಗ್ನೇಯಕ್ಕಿದೆ. ಇಲ್ಲಿ ಬೇಟೆಕಾರರು ವಾಸವಾಗಿದ್ದರು. ವಿಜಯನಗರ ರಾಜಧಾನಿಯಾದ ಹಂಪಿಯಲ್ಲಿ ಇದೇ ೨ನೇ ದೊಡ್ಡ ಬಾಗಿಲು. ೨ನೇ ಹರಿಹರನ ಕಾಲದಲ್ಲಿ ಇದು ನಿರ್ಮಾಣವಾಗಿದೆ. ಚಿಕ್ಕ ಚಿಕ್ಕ ವರ್ತಿಗಳು, ಕೊಂಡಗಳು, ಬಾವಿಗಳು ಇಲ್ಲಿವೆ. ಇದರ ಪೂರ್ವಕ್ಕೆ ಮೈಲಾರ ದೇವಾಲಯವಿದೆ. ಲಿಂಗ ಬಾವಿ ಮತ್ತು ರಂಗನಾಥ ಬಾವಿಗಳನ್ನು ಚಿನ್ನಪನಾಯುಂಡು ನಿರ್ಮಿಸಿದ್ದನು.

ಹಂಪಿ ಪರಿಸರ

ಕಮಲಾಪುರದ ನಾಯಕರ ಏಳು ಕೇರಿಗಳು, ಹೊಸಪೇಟೆಯ ನಾಯಕರ ಏಳು ಕೇರಿಗಳು ಮತ್ತು ಹಂಪಿಯಲ್ಲಿ ನೆಲಸಿರುವ ಬೇಡ - ನಾಯಕ ಕುಟುಂಬಗಳು ಹಾಗೂ ತಳವಾರರನ್ನು ಈ ಕುರಿತು ಸಂದರ್ಶಿಸಲಾಗಿದ್ದು, ಇವರಲ್ಲಿ ವಿಜಯನಗರ ಕಾಲದ ಕುರುಹುಗಳನ್ನು ಗುರುತಿಸಬಹುದಾಗಿದೆ.

ಕಂಪ್ಲಿ : ಇದು ಹೊಸಪೇಟೆ ತಾಲ್ಲೂಕಿನ ಒಂದು ಪಟ್ಟಣ. ತುಂಗಭದ್ರಾ ನದಿ ದಂಡೆಯ ಮೇಲಿದ್ದು, ವಿಜಯನಗರದ ಸ್ಮಾರಕಗಳನ್ನು ಇಲ್ಲಿ ನಿರ್ಮಿಸಲಾಗಿದೆ. ಇಲ್ಲಿ ಬೇಡ-ನಾಯಕರ ಪಾತ್ರವನ್ನು ಕಡೆಗಣಿಸುವಂತಿಲ್ಲ. ಕುಮ್ಮಟನಾಯಕರ ಪ್ರಭಾವದಿಂದ

ಖ್ಯಾತಿ ಪಡೆದ ಕಂಪ್ಲಿ ಪಟ್ಟಣ ವಿಜಯನಗರ ಅರಸರ ಕಾಲದಲ್ಲಿ ಉತ್ತಮ ವ್ಯವಹಾರ ಕೇಂದ್ರವಾಗಿತ್ತು. ಬೇಡ- ನಾಯಕರು ಇಲ್ಲಿ ನೆಲಸಿದ್ದು ವಿಶಿಷ್ಟ ಸಂಸ್ಕೃತಿಯನ್ನು ಹೊಂದಿದ್ದಾರೆ.

ಕಾಮಲಾಪುರ : ಹೊಸಪೇಟೆ -ಕಂಪ್ಲಿ ಮಾರ್ಗ ಮಧ್ಯದಲ್ಲಿ ಕಾಮಲಾಪುರವಿದೆ. ಇದನ್ನು ಪ್ರೌಢದೇವರಾಯ ತನ್ನ ಹೆಂಡತಿ ಕಾಮಲಾದೇವಿ ನೆನಪಿಗಾಗಿ ಕಟ್ಟಿಸಿದ್ದಾನೆ. ಈ ಸ್ಥಳದಲ್ಲಿ ಬೇಡ - ನಾಯಕರ ಏಳು ಕೇರಿಗಳಿದ್ದು, ಸುಮಾರು ೧೦ ಸಾವಿರ ಜನಸಂಖ್ಯೆಯನ್ನು ಹೊಂದಿದ್ದಾರೆ.

ಹಂಪಿ : ವಿಜಯನಗರ ಸಾಮ್ರಾಜ್ಯದ ರಾಜಧಾನಿ. ಬೇಟೆ, ಪಶುಪಾಲನೆ ಯಲ್ಲಿದ್ದ ಬೇಡ-ನಾಯಕರು ಇಲ್ಲಿದ್ದರು. ನಾಡರಕ್ಷಣೆ ಮಾಡುವ ತಳವಾರ, ಮೀಸಲು ತಳವಾರರು ಕಾರ್ಯನಿರ್ವಹಿಸುತ್ತಿದ್ದರು. ಈ ಸಂತತಿಯವರು ಇಂದಿಗೂ ಇದ್ದಾರೆ.

ಆನೆಗೊಂದಿ : ವಿಜಯನಗರ ಸಾಮ್ರಾಜ್ಯದ ಮೊದಲ ರಾಜಧಾನಿ. ಬೇಡ - ನಾಯಕರಿಗೆ ಇದು ಅರಮನೆ - ಗುರುಮನೆಯಾಗಿದ್ದಿತು. ವಿಜಯನಗರ ಸಾಮ್ರಾಜ್ಯಕ್ಕೆ ಮೊದಲು ಮತ್ತು ಆನಂತರ ಇಲ್ಲಿ ನಾಯಕರು ನಡೆಸಿದ ಪ್ರಭುತ್ವವನ್ನು ಕಾಣಬಹುದು.

ಹೊಸಪೇಟೆ : ಕೃಷ್ಣದೇವರಾಯನ ತಾಯಿ ನಾಗಲಾದೇವಿ ಸ್ಮರಣಾರ್ಥ ಇದನ್ನು ನಿರ್ಮಿಸಿದರು. ಇಲ್ಲಿ ನಾಯಕರು, ತಳವಾರರು ಬಂದು ನೆಲಸಿದ್ದರು.

ಬೇಡರ ಪಡೆ

ವಿಜಯನಗರ ಕಾಲದಲ್ಲಿ ಬೇಡ ಪಡೆ (ಸಮೃದ್ಧವಾಗಿದ್ದು) ಹೆಚ್ಚಿನ ಸಂಖ್ಯೆ ಯಲ್ಲಿದ್ದು ಸಾಮ್ರಾಜ್ಯದ ಆಗುಹೋಗುಗಳ ಬಗ್ಗೆ ಸಾಕಷ್ಟು ಶ್ರಮಿಸಿದ್ದರು. ಬೇಡ ಪಡೆ ಹಂಪಿಯಲ್ಲೂ ನೆಲಸಿದ್ದ ಬಗ್ಗೆ ಕುರುಹುಗಳಿವೆ. ರಾಜನು ಬೇಟೆಗೆ ಹೋಗುವಾಗ ಬೇಡ ಪಡೆಯನ್ನು ಸಿದ್ಧಗೊಳಿಸಿ ಬೇಟೆಗೆ ಹೊರಡುತ್ತಿದ್ದರು. ಸುಮಾರು ೪೦,೦೦೦ ಬೇಡರ ಪಡೆ ರಕ್ಕಸಗಿ - ತಂಗಡಗಿ ಯುದ್ಧದಲ್ಲಿ ಪಾಲ್ಗೊಂಡು ಹತವಾಯಿತೆಂದು, ಸ್ಥಳೀಯ ರಲ್ಲದೆ, ವಿದೇಶಿ ಪ್ರವಾಸಿ ಫೆರಿಸ್ತಾ ತಿಳಿಸುತ್ತಾರೆ. ಈ ಪಡೆಯ ಸೈನಿಕರ ಮಡದಿಯರು, ಮಕ್ಕಳು ದಿಕ್ಕಪಾಲಾಗಿ ಛಿದ್ರಗೊಂಡು ತೀರಾ ಹೀನಾಯವಾದ ಬದುಕನ್ನು ಹರಪನಹಳ್ಳಿ, ಮರಿಯಮ್ಮನಹಳ್ಳಿ, ಹಡಗಲಿ, ಕೂಡ್ಲಿಗಿ, ಹೊಸಪೇಟೆ ಇತರೆಡೆಗಳಲ್ಲಿ ನೆಲೆಸಿದ್ದರು. ಕೃಷ್ಣದೇವರಾಯನ ಪ್ರಧಾನ ಅಶ್ವಪತಿಯಾಗಿದ್ದವನು ಮಲಪ್ಪನಾಯಕ. ಕೋಲಾರ ಜಿಲ್ಲೆ ಮೊರಸು ಒಕ್ಕಲು ಪ್ರದೇಶದ ದೊರೆಯಾಗಿದ್ದನು. ಕೃಷ್ಣದೇವರಾಯನ ಕಾಲದಲ್ಲಿ ಪ್ರಧಾನ ದಂಡನಾಯಕ ಪೆರಿಯ ಓಬಳನಾಯಕರ್ ಇದ್ದನು. ಮೀಸಲು ಪಡೆಯಂತೆ 'ಬೇಡರ ಪಡೆ' ಮಹಾಭಾರತದ ಕಾಲದಿಂದಲೂ ಇತ್ತೆಂಬುದು ಗಮನಾರ್ಹ. ಕನ್ನಡ ಕಾವ್ಯ ಗಳಲ್ಲಿಯೂ ಈ ಸಂಗತಿಯಿದೆ. ಪಂಪ ಭಾರತ, ಹರಿಶ್ಚಂದ್ರ ಕಾವ್ಯ, ಗಿರಿಜಾಕಲ್ಯಾಣ

ಕೃತಿಗಳಲ್ಲಿ ಬೇಡರ ದಂಡು, ಶಬರ ಬಲ, ಬೇಡರ ಪಡೆ (ಖಾಸಬೇಡಪಡೆ), ಕಿರಾತಪಡೆಗಳ ಉಲ್ಲೇಖವಿದೆ. ಷಡಕ್ಷರ ದೇವನ ಶಬರಶಂಕರವಿಳಾಸದಲ್ಲಿ ಬೇಡಪಡೆ, ದೇವಪಡೆಗಳ ಪ್ರಸ್ತಾಪವಿದೆ. ಕನಕ ದಾಸರ ಮೋಹನ ತರಂಗಣಿಯಲ್ಲಿ ಬೇಡ, ಪುಳಿಂದ, ಶಬರ ಪಡೆಗಳ ವರ್ಣನೆ, ಪ್ರಸಂಗ ದಟ್ಟವಾಗಿದೆ.

ಮ್ಯಾಸ ಬ್ಯಾಡ್ಡಿನಾಯಕತನ

ಕಮಲಾಪುರದ ಗುರಿಕಾರ ಕಾಟಯ್ಯನ ಬಳಿ ಇರುವ ತಾಮ್ರಶಾಸನದಲ್ಲಿ 'ಶ್ರೀ ರಾಮಾರಣ ಮಂಡ್ಲದ ಮಂದಯ್ಯ ಚಿತ್ತಯ್ಯಗೆ ಮ್ಯಾಸಬ್ಯಾಡ್ಕಿ ನಾಯಕತಾ ಕೊಟ್ಟ ಶಾಸನಾ ಶಕ ೧೬೧೪ ಮಾಘ ಶು.[1] ನಳಸ' ಎಂದಿದೆ. ವಿಜಯನಗರ ಮತ್ತು ಆನೆ ಗೊಂದಿ ಅರಸರಿಗೆ ಮಂದಯ್ಯ - ಚಿತ್ತಯ್ಯನವರು ಯುದ್ಧ, ಬೇಟೆ ಇತರ ಕಾರ್ಯ ಗಳಲ್ಲಿ ಸಹಕರಿಸಿದ್ದಾಗಿ ಅವರಿಗೆ 'ಮ್ಯಾಸ ಬ್ಯಾಡ್ಕಿನಾಯಕ ತನ'ವನ್ನು ಕೊಡಲಾಗಿದೆ. ಇದು ಆನೆಗೊಂದಿ ಅರಸರು ಕೊಟ್ಟ ಪದವಿ. ಮ್ಯಾಸಪಡೆ ಮತ್ತು ಖಾಸ ಬೇಡರ ಪಡೆಗಳಲ್ಲಿ ವೀರಯೋಧರು, ರಾಜ್ಯ ರಕ್ಷಣೆಯಲ್ಲಿ ವಹಿಸಿದ ಪಾತ್ರ ದೊಡ್ಡದು. ಇವರು ಗೆರಿಲ್ಲಾ ಯುದ್ಧ ಮಾದರಿಯನ್ನು ಅನುಸರಿಸಿದ್ದರು. ಬಳ್ಳಾರಿ ಜಿಲ್ಲೆಯ ಕಮಲಾಪುರ, ಸೊಂಡೂರು ಮತ್ತು ಕೂಡ್ಲಿಗಿ ಭಾಗಗಳಲ್ಲಿ ಇವರು ದಟ್ಟವಾಗಿ ನೆಲೆಸಿದ್ದಾರೆ.

ಮೀಸಲು ಪಡೆ

ಬೇಡರು ವಿಜಯನಗರ ಸಾಮ್ರಾಜ್ಯದಲ್ಲಿ ಮೀಸಲು ಪಡೆಯಲ್ಲಿದ್ದರು. ಸೈನಿಕ, ದಂಡನಾಯಕ, ತಳವಾರರಂತೆ ಮೀಸಲು ಪಡೆಯು ವಿಜಯನಗರದಲ್ಲಿತ್ತು. ಒಂದು ರೀತಿಯಲ್ಲಿ ರಿಸರ್ವ್ ಪೊಲೀಸ್ ಪಡೆಯಂತೆ ಇದ್ದಿರಬೇಕು. ಮ್ಯಾಸಪಡೆ ಮತ್ತು ಖಾಸ ಬೇಡರ ಪಡೆಗಳು ಗೆರಿಲ್ಲಾ ಮಾದರಿಯ ಯುದ್ಧವನ್ನು ಮಾಡುತ್ತಿದ್ದರು. ಖಾಸಬೇಡರ ಪಡೆ ಕೈಯಲ್ಲಿ ಚಂದ್ರಾಯುಧವಿದ್ದು ಹೆಗಲ ಮೇಲೆ ಕಂಬಳಿ, ಚಲ್ಲಾಣ ತೊಟ್ಟು ಬರಿ ಮೈಯಲ್ಲಿರುತ್ತಾರೆ. ಚಳ್ಳಕೆರೆ ತಾಲೂಕಿನ ಸೊಂಡೆಕೆರೆಯಲ್ಲಿ ಇವರು ನೆಲಸಿದ್ದಾರೆ.[2] ಮ್ಯಾಸಪಡೆ ಮೂಲಕ ಯುದ್ಧದಲ್ಲಿ ಭಾಗವಹಿಸುವುದು, ರಾಜನಿಗೆ ಪ್ರಿಯನಾಗಿ ಶಾಂತಿ-ಸುವ್ಯವಸ್ಥೆ ಕಾಪಾಡಿಕೊಂಡು ರಾಜ್ಯದ ಸಂಪತ್ತನ್ನು ವೃದ್ಧಿಸುವುದಾಗಿತ್ತು. ಯುದ್ಧ ಕ್ಕಾಗಿಯೇ ಮೀಸಲಾಗಿದ್ದ ಒಂದು ಪಂಗಡಕ್ಕೆ 'ಮೀಸಲು ಪಡೆ'ಎಂದು ಕರೆಯಲಾಯಿತು.[3] ಈ ಮೀಸಲು ಪಡೆಯ ಒಡೆಯ ಅಥವಾ ನಾಯಕನಿಗೆ ಮ್ಯಾಸ ಬ್ಯಾಡ್ಕಿ ನಾಯಕ ಎಂದು ಅಧಿಕಾರ ಕೊಟ್ಟ ಉದಾಹರಣೆಯಿದೆ.

ರಾಜನ ಪಡೆ

ಬೇಡ ಸೈನಿಕರು ರಾಜನ ಪಡೆಯಲ್ಲಿದ್ದರು. ಪೆರಿಯ ಓಬಳ್ಳ ನಾಯಕರು ಉನ್ನತ ಮಟ್ಟದ ಸೈನಿಕ - ರಕ್ಷಣ ಹುದ್ದೆ ಅಲಂಕರಿಸಿದ್ದ. ರಾಜ, ರಾಣಿಯರ ಆಂತರಿಕ ರಕ್ಷಣೆಗಾಗಿ ಶಿಖಂಡಿಗಳನ್ನು, ಧೈರ್ಯಶಾಲಿ ಬೇಡರನ್ನು ನೇಮಿಸಿದ್ದರು.

ನಾಯಕ ನಾಯಕತನ

ವಿಜಯನಗರ ಕಾಲದ ಶಾಸನಗಳಲ್ಲಿ ನಾಯಕ, ನಾಯಕತನ, ಅಮರನಾಯಕ, ಮಹಾನಾಯಕಾಚಾರ್ಯಗಳ ಉಲ್ಲೇಖಗಳಿವೆ. ಈವರೆಗೆ ಅಧ್ಯಯನಕ್ಕೊಳಪಡದ ಸಾಮಾನ್ಯ ನಾಯಕರನ್ನು ಇಲ್ಲಿನ ವ್ಯಾಪ್ತಿಗೊಳಪಡಿಸಲಾಗಿದೆ. ಕ್ರಿ.ಶ. ೭ನೇ ಶತ ಮಾನದ (ಬೇಡರಾಜರ ಉಲ್ಲೇಖ) ಗದ್ದೆಮನೆ ಶಾಸನವನ್ನು ಹೊರತುಪಡಿಸಿದರೆ, ಕ್ರಿ.ಶ. ೯ನೇ ಶತಮಾನದಲ್ಲಿ 'ನಾಯಕ' ಪದ ಬಳಕೆಯಾಗಿರುವುದು ಗಮನಾರ್ಹ. ನಂತರ ಕುಮ್ಮಟದುರ್ಗವೇ ನಾಯಕರು ಪ್ರಭುತ್ವ ನಡೆಸಿದ ಮೊದಲ ಸಂಸ್ಥಾನ. ಮಹಾ ನಾಯಕಾಚಾರ್ಯ ಮುಮ್ಮಡಿ ಸಿಂಗೆಯನಾಯಕ, ಕಂಪಿಲನಾಯ (ಖಂಡೇ ರಾಯ) ಮತ್ತು ಕುಮಾರರಾಮನ ಆಳ್ವಿಕೆಯ ಪ್ರಭಾವವೇ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಅಡಿಗಲ್ಲಾಯಿತು. ಕುಮಾರರಾಮನ ಸಹೋದರಿ ಮಾರಾಂಬಿಕೆಯನ್ನು ಸಂಗಮ ಮದುವೆಯಾಗಿದ್ದ. ಈ ಸಂಗಮನ ಮಕ್ಕಳೇ ಹರಿಹರ, ಬುಕ್ಕರಾಯ, ಮಾದಪ್ಪ, ಮಾರಣ್ಣ ಮತ್ತು ಕಂಪಣ್ಣ. ವಿಜಯನಗರ ಪೂರ್ವದಲ್ಲಿದ್ದ ಇಂಥ ಸಣ್ಣ - ಪುಟ್ಟ ನಾಯಕ ಮನೆತನಗಳ ಚರಿತ್ರೆ, ಸಾಧನೆ ಪರಿಗಣನಾರ್ಹ. ಚದುರಿಹೋದ ನಾಯಕ ಪಾಳೆಯ ಪಟ್ಟುಗಳಿಗೆ ವೇದಿಕೆ ಸಿದ್ಧಪಡಿಸುವ ಕಾರ್ಯ ನಡೆಯಿತು. ವಾರಂಗಲ್ಲಿನ ಕಾಕತೀಯ ಗಣಪತಿದೇವ ನಾಯಕರ ಒಕ್ಕೂಟವನ್ನು ಮಾರ್ಪಡಿಸಿದರು. ಪದ್ಮನಾಯಕ ಸೇರಿದಂತೆ ೭೨ ಗೋತ್ರ,೧೨ ಮನೆಗಳಿಗೆ ಪ್ರೋತ್ಸಾಹ ಕೊಟ್ಟನು. ಅದೇ ರೀತಿ ಪ್ರತಾಪರುದ್ರ ೭೭ ನಾಯಕರನ್ನು ಕರೆಯಿಸಿ ತನ್ನ ಸಾಮ್ರಾಜ್ಯವನ್ನು ಅವರಿಗೆ ವಿಭಾಗಿಸಿಕೊಟ್ಟ ಆಡಳಿತ ಸುಧಾರಣೆಗೆ ಶ್ರಮಿಸಿದನು.[4] ಪ್ರತಾಪರುದ್ರ ಈ ೭೭ ಜನ ನಾಯಕರ ಹೆಸರಿನ ಮೂಲಕ ರಾಜ್ಯಾಳ್ವಿಕೆ ನಡೆಸಿದ್ದು ಸ್ಪಷ್ಟ. ಕಾಕತೀಯ ಅರಸರು ಸ್ಥಾಪಿಸಿದ ಈ ನಾಯಂಕಾರ ವ್ಯವಸ್ಥೆಯನ್ನು ವಿಜಯನಗರದವರು ಅಳವಡಿಸಿ ಕೊಂಡಿದ್ದರು.[5]

ಸಾಮಾನ್ಯ ನಾಯಕರು ಸೇವೆಸಲ್ಲಿಸಿದ ಉಲ್ಲೇಖಗಳನ್ನು ಈ ಕೆಳಗಿನಂತೆ ಅವಲೋಕಿಸಲಾಗಿದೆ. ಆಂಧ್ರ ಪ್ರದೇಶ, ಅನಂತಪುರ ಜಿಲ್ಲೆಯ ಮಡಕಶಿರಾ ತಾಲೂಕಿನ ಕೊಟ್ಟಶಿವರಂ ಗ್ರಾಮದ ಶಿವ ದೇವಾಲಯದ ಶಾಸನವು ೨೪.೧೦.೧೩೬೫ನೇ ಶುಕ್ರವಾರ ಬುಕ್ಕಣ್ಣ ಒಡೆಯರಾಜನದು. 'ಬೆನಕೆಯ ನಾಯಕರ ಕುಮಾರ ಬೂಚೆಯ ನಾಯಕರು ನಿಡಗಲ್ಲು ರಾಜ್ಯಕ್ಕೆ ಗೋಪಸಮುದ್ರವನ್ನು ದಾನ ಮಾಡಿದ, ಮುಖ್ಯ

ವಹಿಸಿವರದ ಪಟ್ಟಣದಲ್ಲು ಸುಖಿಸಂ' ಎಂಬ ಉಲ್ಲೇಖವಿದೆ.[6] ಇದೇ ಜಿಲ್ಲೆ, ಇದೇ ತಾಲ್ಲೂಕು ಹರೇಸಮುದ್ರಂನ ರೇವಣ್ಣ ದೇವಾಲಯದ ೨.೧೧.೧೪೯೭ (ಶುಕ್ರವಾರ) ವೀರ ಹರಿಹರನ ಆಳ್ವಿಕೆಗೆ ಸಂಬಂಧಿಸಿದ್ದಾಗಿದೆ. ಚೆಉಂಡಪ್ಪನ ಮಗ ಧೂಳೆಯ ನಾಯಂಕನು ಮತ್ತು ಬಸವೆನಾಯಕನ ಸ್ಥಾನಮಾನ ಕುರಿತ ವಿವರವಿದೆ.[7]

ವಿಜಯನಗರ ಕಾಲದಲ್ಲಿ ಒಬ್ಬ ಸಾಮಾನ್ಯ ಅಧಿಕಾರಿಯಾಗಿದ್ದ ನಾಯಕನ ಸಮಾಜ ಸೇವೆ ಅಮೋಘವಾದುದು. ಹಂಪಿಪರಿಸರದ ಮಲಪನಗುಡಿಯ ದೇವಾಲಯದ 3.2.1412 (ಬುಧವಾರ)ರ ದೇವರಾಯ ಮಹಾರಾಯಕಾಲದ ಶಾಸನವು 'ಹೆಗ್ಗಡೆ ಸೋಮಣ್ಣ ಅಣ್ಣಮಗ ಬುಲ್ಲೆನಾಯಕ ಬಿಸಿಲಹಳ್ಳಿ ಕಣಿವೆ ಮತ್ತು ಬಡವಿಲಿಯ ಕಣಿವೆ ಹತ್ತಿರ ನೀರಿನ ಉಪ್ಪರಿಗೆ ನಿರ್ಮಿಸುತ್ತಾನೆ'. ಇದು ಇಂದಿನ ಹಂಪಿಯಿಂದ ಹೊಸಪೇಟೆಗೆ ಬರುವಾಗ ಮಲಪನಗುಡಿ ಬಿಟ್ಟಾಗ ಅನಂತಶಯನಗುಡಿ ಮಧ್ಯೆ ಬಲಭಾಗಕ್ಕಿದೆ.[8]

ನಾಯಕ ಮತ್ತು ಆತನ ಪತ್ನಿ ನಾಯಕಿತಿಯರ ಸೇವೆ ವಿಜಯನಗರ ಕಾಲ ದಲ್ಲಿದ್ದದ್ದು ವಿಶೇಷ. ೨೪.೪.೧೪೫೦ರ ಶಾಸನದಲ್ಲಿ (ಶುಕ್ರವಾರ) ವೀರಪ್ರತಾಪ ಮಲ್ಲಿಕಾರ್ಜುನ ಮಹಾರಾಯರು ಆಳ್ವಿಕೆಯಲ್ಲಿ ಬಾರಕೂರು ರಾಜ್ಯವನ್ನು ಲಿಂಗಪ ಒಡೆಯ ಆಳುತ್ತಿದ್ದನು. ಕೋಟೆಯನಾಯಕ ಆತನ ಹೆಂಡತಿ ಕೋಟೆಯ ನಾಯಕಿತ್ತಿ ಮಗ ಭೂದಾನ ಮಾಡಿದ ವಿವರಗಳಿವೆ.[9] ಭುಜಬಲ ನರಸಿಂಹ ಮಹಾರಾಯನ ಆಳ್ವಿಕೆಯಲ್ಲಿ ೧೯.೪.೧೪೮೨ರ ಶಾಸನದಲ್ಲಿ ಮಲ್ಲಪ್ಪನಾಯಕ ಇವನ ಮಗ ಸೋಮಣ್ಣನಾಯಕನ ಉಲ್ಲೇಖವಿದೆ.

ಮಡಕಶಿರಾ ತಾ. ಅಗಳಿ ಗ್ರಾಮದ ೧೮.೩.೧೪೯೭ (ಶನಿವಾರ)ರ ಶಾಸನದಲ್ಲಿ 'ನರಸಣ್ಣ ನಾಯಕನಿಗೆ ರಾಯದುರ್ಗ ಚಾವಡಿಯ ನಾಯಕತನ ಕೊಡಲಾಗಿತ್ತು. ಆದವಾನಿಯ ಇಮ್ಮಡಿ ಕಚ್ಚಪನಾಯಕ ಇತರರ ಹೆಸರುಗಳಿವೆ.[10] ಇದೇ ತಾಲ್ಲೂಕಿನ ಗೂಳ್ಯಾಂನ ೨೬.೭.೧೫೦೯ರ (ಗುರುವಾರ)ಲ್ಲಿ ಕೃಷ್ಣದೇವರಾಯನ ಆಳ್ವಿಕೆಯಲ್ಲಿ 'ಗಂಡಿಕೋಟೆ ಸೀಮೆ ಮಂತ್ರಿ ವೀರಣ್ಣನಾಯಕ, ಸೇನಾಧಿಪತಿ ಸೋಮಣ್ಣ ನಾಯಕ ವಿರೂಪಾಕ್ಷ ದೇವಾಲಯ ನಿರ್ಮಾಣಕ್ಕೆ ಭೂದಾನ ಮಾಡಿದ್ದರು.[11] ಕಲ್ಯಾಣದುರ್ಗ ತಾಲ್ಲೂಕಿನ (ಆಂಧ್ರ ಪ್ರದೇಶ) ಬೆಳಗುಪ್ಪ ಗ್ರಾಮದ ಆಂಜನೇಯ ದೇವಾಲಯದಲ್ಲಿನ ಶಾಸನವು 'ನರಸಿಂಗ ದೇವ ಮಹಾರಾಯ ಹಡಪದ ಗೌರುನಾಯಕ'ನ ಬಗ್ಗೆ ಬೆಳಕು ಚೆಲ್ಲುತ್ತದೆ. ಮತ್ತೊಂದು ಶಾಸನದಲ್ಲಿ ಕಾಮಣ ನಾಯಕರೂ ಮಹಾರಾಯರು ಗ್ರಾಮದಾನ ಮಾಡಿದ ಉಲ್ಲೇಖವಿದೆ.

ಕೃಷ್ಣದೇವರಾಯನ ಕಾಲದ ೧೧.೧.೧೫೧೧ ರ (ಗುರುವಾರ) ಶಾಸನದಲ್ಲಿ ನಿರುವಿಡಿ ಜಕ್ಕೆಯನಾಯಕನ ಬಗ್ಗೆ ತಿಳಿಸಲಾಗಿದೆ. ಹಾಗೆಯೇ ಈತನ ತಂದೆ (ಕೃಷ್ಣದೇವರಾಯ) ನರಸಣ್ಣನಾಯಕ ಒಡೆಯ ತಾಯಿ ನಾಗಾಜಿದೇವಿ ಅಮ್ಮನವರ ಉಲ್ಲೇಖಗಳು ವ್ಯಾಪಕವಾಗಿವೆ.[12]

ಅನಂತಪುರ ಜಿಲ್ಲೆ ಆದೋನಿ ತಾಲ್ಲೂಕಿನ ಒಂದು ಶಾಸನದಲ್ಲಿ ೧೬.೧.೧೫೧೮ (ಶನಿವಾರ) ಕಟಾರಿ ತಿಪ್ಪಣನಾಯಕರ ಮಕ್ಕಳು ರಾಮಣನಾಯಕರು ಆದವಾನಿಯ ಮೇಗೋಟೆಯಲು ಪ್ರಸನ್ನ ರಾಮದೇವರ ಗುಡಿ ಕಟ್ಟಿಸಿ ಪ್ರತಿಷ್ಠೆ ಮಾಡಿಸಿದ್ದರು. ಪ್ರೌಢದೇವರಾಯನಿಗೆ ಇವನು ಅಧಿಕಾರಿಯಾಗಿದ್ದನು.[13] ಅನಂತಪುರ ಜಿಲ್ಲೆ ಆಲೂರು ತಾಲ್ಲೂಕಿನ ಬೆಳಗೊತಿ ಗ್ರಾಮದ ಬಸವೇಶ್ವರ ದೇವಾಲಯದ ಶಾಸನವು 'ಶ್ರೀ ಕೃಷ್ಣದೇವರಾಯನ ಕಾಲದಲ್ಲಿ ಆದವಾನಿಯ ದುರ್ಗವನ್ನೂ ಕಟ್ಟಿಗೆಯ ಕಾಮಣ ನಾಯಕರಿಗೆ ಕೊಟ್ಟಿದ್ದರ' ವಿಷಯವನ್ನು ಹೊಂದಿದೆ.

ಶ್ರೀ ಕೃಷ್ಣದೇವರಾಯನ ಕಾಲದಲ್ಲಿ ೭.೧೧.೧೫೨೪ (ಸೋಮವಾರ)ರ ಶಾಸನವು 'ಉಚ್ಚಂಗಿ ವೇಂಟೆಯ ಕವಿಲಿ ಚೆರವಿರಾ ಚಟನಹಳ್ಳಿಯನ್ನು ನಾಯಕತನಕ್ಕೆ ದೇವರು ಭಟ್ಟರ ಮಗ ನಾರಾಯಣ ಭಟ್ಟರಿಗೆ ಕೊಟ್ಟ' ಸಂಗತಿಯಿದೆ. ಶ್ರೀಕೃಷ್ಣದೇವರಾಯ' 'ನಮಗೆ ನಾಯಕತನಕೆ ಪಾಲಿಸಿದ...' ಎಂಬ ಉಲ್ಲೇಖ ಗಮನಾರ್ಹ, ೬.೬.೧೫೨೭ (ಗುರುವಾರ) ಕೃಷ್ಣದೇವರಾಯ 'ದಾಡಿನಾಯಕನ ಮಗ ಸುಂಕಣ್ಣನಾಯಕನು ಆದವಾನಿ ದುರ್ಗ ಕೆಳಗಿನ ಕೆರೆಬೆಳಗಲ್ಲುನ್ನು ಅಮರವಾಗಿ ಸೇವೆಗೆಂದು ಪಡೆದ' ಉಲ್ಲೇಖವಿದೆ. ಅಚ್ಯುತರಾಯನ ಕಾಲದಲ್ಲಿ ವರದಪ್ಪನಾಯಕ ತಿರುವೆಂಗಳನಾಯಕರ ಬಗ್ಗೆ ತಿಳಿಸ ಲಾಗಿದೆ.

ಅನಂತಪುರ ಜಿಲ್ಲೆ ಗೂಟಿಯ ಕಸಾವಪುರಂ ಗ್ರಾಮದ ಸದಾಶಿವರಾಯನ ಶಾಸನದಲ್ಲಿ (1547) 'ದೇಳವಾಯಿ ಯಲ್ಲಪ್ಪನಾಯಕರಿಗೆ ಉಂಬಳಿಯಾಗಿ ಕೊಟ್ಟ ಕಸವಾಪುರದಲ್ಲಿ ಬೆಸ್ತ, ಬೋವುಗಳಿಗೆ ಪುಲಿಅ... ಕೊಟ್ಟ' ಎಂಬ ವಿಷಯ ಪ್ರಸ್ತಾಪ ವಿದೆ. ಬಳ್ಳಾರಿ ಜಿಲ್ಲೆ ಹರಪನಹಳ್ಳಿ (ದಾವಣಗೆರೆ) ತಾಲ್ಲೂಕಿನ ಹಗರನೂರು ಶಾಸನ ದಲ್ಲಿ 'ಮುದುಗಂಡಲ ತಿಮ್ಮರಸನಾಯಕನ ಮಗ ಬೊಮ್ಮನಾಯಕ ಅಮರಗೆರೆ ಕೊಟ್ಟರು ಸೀಮೆ (ರಂಗಾಪುರ ಸ್ಥಳದ)ಗೆ ಗ್ರಾಮವನ್ನು (ಕೊಟ್ಟೂರು ಸೀಮೆಗೆ) ದಾನ ಮಾಡಿದ್ದು' ಗಮನಾರ್ಹ.

ಹಡಗಲಿ ತಾಲ್ಲೂಕಿನ ನಕ್ಕರಹಾಳು ಶಾಸನ ೨೯.೪.೧೫೪೮ (ಅಥವಾ ಮೇ ೬ ಭಾನುವಾರ) ಶ್ರೀ ಸದಾಶಿವ ಮಹಾರಾಯರು ಆಳ್ವಿಕೆಯಲ್ಲಿ ಕೃಷ್ಣಪ ನಾಯಕರು ತಮ್ಮ ಕೋಗಳೆವಳಿಥದ (ಕುಂಟೆ) ನೂರ ಸೀಮೆ ವಳಗನ ನಗರೆಹುಳಿಗೆ ಪ್ರತಿನಾಮ ವಾದ ನಗರುರನು ಬೊಂಮ(ಪುರ ದಕ ಗ್ರಾಮವನ್ನು ತಿಮಪ್ಪಗೆ ಕೊಡುತ್ತಾರೆ ೧೪ ಗೂಟಿ ತಾಲ್ಲೂ ವೆಲ್ಪು ಮಡುಗು (ಅನಂತಪುರ ಜಿಲ್ಲೆ_ವಿನ ೭.೧೦.೧೫೪೮ರ ಸದಾಶಿವ ಮಹಾರಾಯರು ಮಹಾಮಂಡಲೇಶ್ವರ ಅಯ್ಯಪ್ಪದೇವನಿಗೆ ಉರವಕೊಂಡ ಸೀಮೆಯ ಅಪಲಾಪುರ ಗ್ರಾಮವನ್ನು ಅಮರನಾಯಕಕ್ಕೆ ದಾನ ಕೊಡಲಾಗಿದೆ.[15] ಹಿಂದೂಪುರ ತಾಲೂಕಿನ ಕೊಟ್ಟೂರು ಚೌಡೇಶ್ವರಿ ದೇವಾಲಯ ಶಾಸನವು ೬.೧೨.೧೫೫೦ (ಶನಿವಾರ)

ಸದಾಶಿವ ಮಹಾರಾಯರು ಕೊಟ್ಟೂರು ಗುಂಡಮರಸಯ್ಯನ ನಿಯೋಗಿ (Agent) ಸಿರಿಯಪನಾಯಕ ದಳವಾಯಿ ಕ್ರಿಷ್ಣಪ್ಯ ನಾಯಕ ದೇವಾಲಯದ ಸೇವಕರಿಗೆ ಬಿಟ್ಟು ಬಿರಾಡ ತೆರಿಗೆ ವಿನಾಯ್ತಿ ನೀಡಿದ ವಿವರವಿದೆ.

ಹರಪನಹಳ್ಳಿ ತಾಲೂಕು ಬಾಗಳಿ ಕಲ್ಲೇಶ್ವರ ದೇವಾಲಯದ ಶಾಸನವು ೨೩.೧೨.೧೫೫೦ (ಮಂಗಳವಾರ) ಸದಾಶಿವ ಮಹಾರಾಯ ವಿಜಯನಗರಿ ಹಡಪದ ಬಯ್ಯಪನಾಯಕರ ಮಕ್ಕಳು ಕೃಷ್ಣಪ್ಪನಾಯಕರಿಗೆ ಅಮರ ಮಾಗಣಿಯಾಗಿ ಪಾಲಿಸಿದ ಕೋಗಳಿ ಸಲುವ ಕೊಟ್ಟೂರು ಸೀಮೆ ಎಂದಿದೆ. ಬ್ಯಾಗುಳಿ ಆಳುತ್ತಿದ್ದ ಹಾವಳಿ ನಾಯಕ ಕೊಟ್ಟೂರು ವಲಿಟಲಕ್ಕಿ ಶೆಟ್ಟಿ ಲಿಂಗಮ್ಮ ಆತನ ಹೆಂಡತಿ, ಬಾಗಳಿಯ ಪಟ್ಟಣಸ್ವಾಮಿ ಭತ್ತ, ಬಂಗಾರವನ್ನು ಕಲಿದೇವರಿಗೆ ಕೊಟ್ಟ ಸಂಗತಿಯಿದೆ. ಸದಾಶಿವರಾಯ ಮಹಾ ರಾಯರ ೧೧.೧೨.೧೫೫೦ (ಬುಧವಾರ) ಹಡಪದ ಕೃಷ್ಣಪ್ಪನಾಯಕರಿಗೆ ಕೊಟ್ಟ ಕೊಟ್ಟೂರ ಸೀಮೆಗೆ ಸಲುವ ಬಾಗುಳಿಯ ಚಾಮಿನಾಯಕರ ಮಗ ಹೆಳವಿ ನಾಯಕರೂ ಬಾಗುಳಿಯ ಕುಮಕರ ಬಸವಿಗೌಂಡನ ಮಗ ಲಿಂಗಗೊಂಡ.... ಇತರ ವಿವರಗಳಿವೆ.[16]

ಕೂಡ್ಲಿಗಿ ತಾಲ್ಲೂಕಿನ ಗಜಾಪುರದ ಹತ್ತಿರ ಬೇಚರಾಕು ಗ್ರಾಮವಾದ ದೇವಲಾಪುರ ವಸಂತ ಮಲ್ಲಿಕಾರ್ಜುನ ದೇವಾಲಯದ ಶಾಸನ ೨೫.೧.೧೫೫೨(ಸೋಮವಾರ) ಸದಾಶಿವ ಮಹಾರಾಯರು ಬೈಯಪ್ಪನಾಯಕರ ಕೃಷ್ಣನಾಯಕ ಅಯ್ಯನವರ ಕಾರ್ಯಕ್ಕೆ ಕರ್ತರಾದ ವೇಲೂರು ತಿಂಮಪ್ಪನಾಯಕನ ಕುಮಾರ ರಾಮಪ್ಪ ನಾಯಕರು ನ (೦)ಮ್ಮ ಕೃಷ್ಣಪ್ಪನಾಯಕರ ಅಮರ ಮಾಗಣೆಗೆ (ಳಿ) ಸಲ್ಲುವ ಮೊರಬದ ಸೀಮೆಯೊಳಗಣ ಪಂನುಲ ನುಂಕನಹಳ್ಳಿಯನು ದೇವಲಾಪುರ ವಸಂತ ಮಲ್ಲಿಕಾರ್ಜುನ ದೇವರಿಗೆ ೨ ಡೊಳ್ಳು, ೨ ನಾಗಸ್ವರವನ್ನು ನಡೆಸು ಎಂದು ಬಿಳಿಚೇಡ ಗ್ರಾಮ ಬಿಟ್ಟ ಸಂಗತಿ ಇದೆ.

ಕಲ್ಯಾಣದುರ್ಗ ತಾಲ್ಲೂಕಿನ ಕಂಬದೂರು ಶಾಸನದಲ್ಲಿ ವಿರುಪಣ್ಣನಾಯಕ ೫೦ ವರಹ ಕೊಟ್ಟು ಮಾನ್ಯಗ್ರಸ ತನ್ನ ತಂದೆ ತಿಮ್ಮಪ್ಪ ನಾಯಕರ ಹೆಸರಲ್ಲಿ ಮಲ್ಲಿಕಾರ್ಜುನ ದೇವರಿಗೆ ೫೦ ವರಹ ದಾನ ಮಾಡಿದ ವಿವರವಿದೆ. ಈ ಕಾಲಘಟ್ಟದ ಶಾಸನಗಳಲ್ಲಿ ಮಹಾನಾಯಕಚಾರ್ಯ, ಮಲ್ಲಪ್ಪನಾಯಕ, ಬೇಡರ ಮರಿಯಪ್ಪ, ನಾಯಂಕಾರಚಾರ್ಯ ಎಂಬ ಉಲ್ಲೇಖಗಳಿವೆ.

ನಾಯಕತನ (ಅತ್ಯಂತರ)

ಹರಪನಹಳ್ಳಿ ತಾಲೂಕಿನ ಚಟ್ನಹಳ್ಳಿಯ ಆಂಜನೇಯ ದೇವಸ್ಥಾನದ ಹತ್ತಿರ ನಿಲ್ಲಿಸಿದ ಕಲ್ಲಿನ ಶಾಸನವು ವಿಜಯನಗರದ ಕೃಷ್ಣರಾಯ ಮಹಾರಾಯರಿಗೆ ಸೇರಿದೆ. ೭.೧೧.೧೫೨೪ ಸೋಮವಾರ ಮುರಾರಿ - ರಾವುತ್ತನ ಮಗ ವಿಸಣ ರಾವುತ್ತನು ಅರಸನಿಗೆ ಪುಣ್ಯವಾಗಲೆಂದು ತನ್ನ ನಾಯಕತನದಲ್ಲಿ ಉಚ್ಚಂಗಿ - ವೇಂಠೆಯ ಉಪವಿಭಾಗವಾದ

ಕವಿಳಿ ಚೆರ್ವಿನ ಸೀಮೆಯಲ್ಲಿನ ಚಟ್ನಹಳ್ಳಿಯನ್ನು ತೆರಿಗೆ ರಹಿತವಾಗಿ ದೇವರು ಭಟ್ಟನ ಮಗ ನಾರಾಯಣ ಭಟ್ಟನಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ (ಬಳ್ಳಾರಿ ಜಿಲ್ಲೆಯ ಶಾಸನಗಳು, ಚನ್ನಬಸಪ್ಪ ಪಾಟೀಲ, ೧೯೯೭, ಪು.೧೦೬, ನಂ.೩೯).

ಮಹಾನಾಯಕಚಾರ್ಯ

ಕನ್ನಡ ಶಾಸನಗಳಲ್ಲಿ ಕ್ರಿ.ಶ. ೯-೧೦ ನೇ ಶತಮಾನದಲ್ಲಿ ಮಹಾನಾಯಕಚಾರ್ಯ ಎಂದು ಉಲ್ಲೇಖವಿದೆ. ಕುಮ್ಮಟದುರ್ಗದ ಮುಮ್ಮಡಿ ಸಿಂಗೆಯನಾಯಕರಿಗೆ ಈ ಬಿರುದಿತ್ತು. ಇದನ್ನು ಹೊರತುಪಡಿಸಿದರೆ ವಿಜಯನಗರದ ಉತ್ತರಾರ್ಧದಲ್ಲಿ ಪುನಃ ಇದು ಪ್ರಯೋಗವಾಗಿದೆ. ಸದಾಶಿವರಾಯ ಮಹಾರಾಯರ ಕ್ರಿ.ಶ. 10.12.1556ರ ಪೈಲಬಂಡ (ಮಂಡಕಶಿರಾ ತಾ.) ಶಾಸನವು ಮಹಾನಾಯಕಚಾರ್ಯ ನಿಡಗಲ್ಲು ತಿಮ್ಮಣ್ಣನಾಯಕನು ಸೇನಬೋವ ಇತರರಿಗೆ ಗುತ್ತಿ ತಿರುಮರಾಜಯ್ಯದೇವ ಮತ್ತು ಕೆಂಚಪ್ಪ ನಾಯಕರು ದಾನ ಮಾಡಿದ ಸಂಗತಿಗಳಿವೆ.

ಹರಪನಹಳ್ಳಿ ತಾಲ್ಲೂಕಿನ ಮತ್ತಗೆ ಗ್ರಾಮದ ಆಂಜನೇಯ ದೇವಾಲಯ ೨.೧೧.೧೫೫೭ (ಬುಧವಾರ) ಸದಾಶಿವಮಹಾರಾಯರು ಮಹಾನಾಯಕಚಾರ್ಯ ಕೃಷ್ಣಪ್ಪನಾಯಕ ಮುತ್ತಿಗರಾಮದ ಬೇಸಾಯ(ಕೃಷಿ)ಗಾರರಿಗೆ, ತಳವಾರಿಕೆ, ಸೇನಾಭೋಗರಿಗೆ, ಕುರಿಗಿಗೆ ತೆರಿಗೆ ವಿಧಿಸಿದ ವಿವರಗಳಿವೆ.[17]

ಮಡಕಶಿರಾ ತಾಲ್ಲೂಕು ರತ್ನಗಿರಿಯ ಶಾಸನದಲ್ಲಿ ಶ್ರೀ ರಂಗದೇವ ಮಹಾರಾಯ ಪೆನುಗೊಂಡೆಯಲ್ಲಿ ಆಳುತ್ತಿರುವಾಗ ಮಹಾನಾಯಕಚಾರ್ಯ ರಂಗಪ್ಪನಾಯಕ ಮಗ ಲಕ್ಷ್ಮಿಪತಿನಾಯಕ ಹರತಿ ದುಂಡಪ್ಪನಾಯಕ ಇವರದು ವಾಲ್ಮೀಕಿ ಗೋತ್ರ ಯನುಮಲ ಬೆಡಗು (ಕುಟುಂಬ) ಆಗಿದ್ದು, ರಂಗಾಪುರ ಗ್ರಾಮವನ್ನು ದಾನಬಿಟ್ಟ ವಿಷಯವಿದೆ.[18] ಈ ಹರತಿ ಪಾಳೆಯಪಟ್ಟು ಇಂದಿನ ಹಿರಿಯೂರು ತಾಲ್ಲೂಕು ಹರತಿಕೋಟೆಯಾಗಿದ್ದು, ಇಲ್ಲಿ ನಾಟಕ ಪಾಳೆಯಗಾರರು ಆಳ್ವಿಕೆ ನಡೆಸಿದ ಬಗ್ಗೆ ಸ್ಮಾರಕಗಳು ಸಾಕ್ಷಿಯಾಗಿವೆ. ಹರತಿನಾಯಕರಿಗೂ ಮಹಾನಾಯಕಚಾರ್ಯ ಬಿರುದು ಇತ್ತು ಎಂಬುದು ಇಲ್ಲಿ ಗಮನಾರ್ಹ.

ವೆಂಕಟಪತಿದೇವ ಮಹಾರಾಯರು ಪೆನುಗೊಂಡೆಯಲ್ಲಿರುವಾಗ ಚಳ್ಳಕೆರೆ ತಾಲೂಕು ದೊಡ್ಡೇರಿ ಗ್ರಾಮದಲ್ಲಿ ಶಾಸನ ಹಾಕಿಸಿದ್ದು : ಮಹಾನಾಯಕಚಾರ್ಯ ರಂಗಪ್ಪ ನಾಯಕ ಹರತಿ ಲಕ್ಷ್ಮೀಪತಿನಾಯಕರ ಉಲ್ಲೇಖವಿದೆ. ವಾಲ್ಮೀಕಿ ಗೋತ್ರದ ಲಕ್ಷ್ಮೀ ಪತಿನಾಯಕರ ಕುಮಾರ ರಂಗಪ್ಪನಾಯಕರು ಶ್ರೀ ಮದ್ದೆವದೇವೋಮಾನುರಾದ ಶ್ರೀ ವೆಂಕಟೇಶ್ವರ ದೇವಾಲಯಕ್ಕೆ ರಾಯದುರ್ಗ ಸೀಮೆ (ವೇಂಠೆ) ಅಮರನಾಯಂಕ ತನಕೆ ಸಲುವ ಅಗಳಿ ಸೀಮೆಯೊಳಗೆ ಅರ್ಕೆಯ ಕೋಟೆ ಸೀಮೆ ಎಂದು ತಿಳಿದುಬರುತ್ತದೆ.[19]

ಆರಂಭದಲ್ಲಿ ನಾಯಕ, ನಾಯಕತನ ಇದ್ದು ಸೇವೆ ದೀರ್ಘಾವಧಿಯಲ್ಲಿ ಆ ಮತೆತನದವರಿಗೆ ಅಮರನಾಯಕರಾಗಿ ನೇಮಿಸಿದ್ದು ಶಾಸನಗಳಲ್ಲಿ ಉಲ್ಲೇಖವಾಗಿದ್ದು ಗಮನಾರ್ಹ.

ವೆಂಕಟಪತಿದೇವ ಮಹಾರಾಯರು ಪೆನುಗೊಂಡೆಯಲ್ಲಿ ಆಳುತ್ತಿರುವಾಗ ಅನೇಕ ಬಗೆಯ ಶ್ಲಾಘನೀಯ ಸೇವೆ ಮಾಡಿರುವುದು ಸ್ಮರಣೀಯ. ಮಡಕಶಿರಾ ತಾಲ್ಲೂಕಿನ ರವುಡಿ ಗ್ರಾಮದ ಆಂಜನೇಯ ದೇವಾಲಯವು ಶಾಸನವು (೨೮.೧೨.೧೬೦೪ ಶುಕ್ರವಾರ) ಹರತಿಯ ಲಕ್ಷ್ಮೀಪತಿನಾಯಕ, ರಂಗಪ್ಪನಾಯಕರ ಮಗ ಇಮ್ಮಡಿ ರಂಗಪ್ಪನಾಯಕರು ರಾವಿಡಿ ಗ್ರಾಮವನ್ನು ಅಗಳಿ ಸೇವೆಗೆ ಕೊಟ್ಟ ವಿಚಾರವಿದೆ. ಇಲ್ಲಿ ಅರಸ ಕೊಡದೇ ಒಬ್ಬ ನಾಯಕನೇ ಅಧಿಕಾರ ಚಲಾಯಿಸುವ ಸನ್ನಿವೇಶ ನೋಡಿದರೆ ಅಂದು ನಾಯಕರಿಗೆ ಸ್ವಾತಂತ್ರ್ಯವನ್ನು ನೀಡಲಾಗಿತ್ತು ಎಂದು ತಿಳಿಯಬಹುದಾಗಿದೆ.

ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲ್ಲೂಕು ಕೇಂದ್ರದಲ್ಲಿ ಬೆಟ್ಟದ ಮೇಲೆ ಕೆರೆಯ ಬಳಿ ಇರುವ ಶಾಸನವು 'ಸಿಧಾರ್ತಿ ಸಂವತ್ಸರದ ಮಾಗ ಬ. ೧೦ ಶ್ರೀ ಮನ್ಮಹಾ ನಾಯಕ ಚಾರ್ಯದ ಹಟ್ಟಿ ಕಸ್ತೂರಿ ಮಲ್ಲಪ್ಪನಾಯಕನವರ ತಾಯಿ ಲಕ್ಷ್ಮಮ್ಮ ನಾಗತಿ ಹೆಸರಕೆರೆ...' ಎಂಬ ಉಲ್ಲೇಖವು ನಾಯಕನಟ್ಟಿ ಪಾಳೆಯಗಾರರ ಚರಿತ್ರೆಯನ್ನು ತೋರಿಸುತ್ತದೆ.

ವಿಜಯನಗರ ಕಾಲದ ಕೊಡಗು ಎಂಬ ಲೇಖನದಲ್ಲಿ ಡಾ.ಎಂ.ಜಿ. ನಾಗರಾಜ ಅವರು ವಿಜಯನಗರ ಕಾಲದಲ್ಲಿ ಅಮರನಾಯಕ ವ್ಯವಸ್ಥೆ ಆಂಧ್ರದ ನಾಯಕರ ವ್ಯವಸ್ಥೆಯ (ನಾಯಕರ -ಪಾಳೆಯಗಾರರ ಒಕ್ಕೂಟ), ಕೇವಲ ಅನುಕರಣೆ ಅಲ್ಲ. ಪ್ರಭಾವಿತವಾಗಿದ್ದಿರಬಹುದು ಅಷ್ಟೆ. ಕಾರಣ ವಿಜಯನಗರ ಪೂರ್ವದಲ್ಲಿಯೇ ಗುಮ್ಮನಾಯಕನ ಪಾಳ್ಯ (ಕೋಲಾರಜಿಲ್ಲೆ) ಪಾಳೆಪಟ್ಟು ನಮ್ಮಲ್ಲಿತ್ತು. ಇದು ಹೊಯ್ಸಳರ ಕಾಲದಲ್ಲಿ ಕ್ರಿ.ಶ. ೧೨೪೨ ರಲ್ಲಿ ಉಗಮಗೊಂಡ ಪಾಳೆಯ ಸಂಸ್ಥಾನ ವಾಗಿತ್ತು. ಒಟ್ಟಾರೆ ಅಮರನಾಯಕರು ವಿಜಯನಗರ ಸಾಮ್ರಾಜ್ಯಕ್ಕೆ ಅಧೀನ ಪಾಳೆಯ ಪಟ್ಟಿನ ನಾಯಕರಾಗಿದ್ದರು. ಕೇವಲ ಸೈನ್ಯಾಧಿಕಾರಿಗಳು ಎನ್ನುವಂತಿಲ್ಲ. ಸಾಮಾನ್ಯ ವಾಗಿ ವಾರ್ಷಿಕ ಪೊಗದಿ ಸಲ್ಲಿಕೆ ಹಾಗೂ ಸಾಮ್ರಾಜ್ಯಕ್ಕೆ ಅಗತ್ಯ ಬಿದ್ದಾಗ ಸೈನಿಕ ಸೇವೆ ಒದಗಿಸುವುದು ಎಂದು ಈ ಶಬ್ದಕ್ಕೆ (ಅಮರನಾಯಕತನ) ಅರ್ಥೈಸಲಾಗಿದೆ. ಎಂ.ಎಸ್. ಪುಟ್ಟಣ್ಣನವರು 'ದಂಡಿನೊಡನೆ ಪಾಳೆಯವನ್ನು ಹಾಕಿ ಇಳಿದುಕೊಂಡು ಕದನಕ್ಕೆ ಸಿದ್ಧವಾಗಿರುವವನು' ಎಂದು ಹೇಳಲಾಗಿದೆ.

ಅಮರನಾಯಕರಲ್ಲಿ ಮೂರು ವರ್ಗಗಳಿವೆ. ೧ ನೇ ವರ್ಗ ಅಮರನಾಯಕರಿಗೆ ಪಂಚವಾದ್ಯಗಳ ಹಕ್ಕು, ಸಾಮಂತ ಸಿಂಹಾಸನ, ಚಕ್ರವರ್ತಿಗಳಿಗೆ ತಿಳಿಸದೆಯೇ ಶಾಸನೋಕ್ತವಾದ ದಾನ ನೀಡುವ ಸ್ವಾತಂತ್ರ್ಯ, ಸ್ವಂತ ನಾಣ್ಯ ಚಲಾವಣೆಯ ಸ್ವಾತಂತ್ರ್ಯ

ಮತ್ತು ಡೋಲಿ, ಪಲ್ಲಕ್ಕಿ, ರಾತ್ರಿ ಪಂಜು ನಿರಂತರವಾಗಿ ಉರಿಸುವ ಅವಕಾಶ. ಸೈನ್ಯದ ವರಮಾನ ರಾಜನಿಗೆ ಸಲ್ಲಿಸುವ ಹಣ, ಹೊರಬೇಕಾದ ಹೊಣೆ ಇತ್ತು. ಪಂಚವಾದ್ಯ ಗಳ ಬಳಕೆ, ಅರ್ಹತೆ, ಸಾಮಂತ ಸಿಂಹಾಸನ, ಚಾಮರ ಪಲ್ಲಕ್ಕಿ, ಅಶ್ವಾರೋಹಿಪಡೆ ಆನೆಗಳನ್ನಿಟ್ಟುಕೊಳ್ಳಬಹುದು. ಕೋಟೆ, ಸೇನಾ ನಿರ್ವಹಣೆ, ನಾಣ್ಯ ಚಲಾವಣೆ ಇವರ ಅಧಿಕಾರಗಳಾಗಿದ್ದವು. ೨ ಮತ್ತು ೩ನೇ ವರ್ಗದ ಅಮರನಾಯಕರು ಚಕ್ರವರ್ತಿಯ ಹೆಸರನ್ನು ನಮೂದಿಸಿಯೇ ಶಾಸನಗಳಲ್ಲಿ ದಾನ, ಪರಭಾರೆ ಇತ್ಯಾದಿ ಸಂದರ್ಭಗಳಲ್ಲಿ ಹಾಕಿಸಬೇಕಿತ್ತು. ಅಮರನಾಯಕರಲ್ಲಿ ದಂಡನಾಯಕರೂ ಸೇರಿದ್ದರು. ಅನೇಕ ಅಮರನಾಯಕರು ಮಹಾಮಂಡಲೇಶ್ವರರ ಅಧೀನದಲ್ಲಿದ್ದರು ಎಂದು ತಿಳಿಸಿದ್ದಾರೆ.[20]

ಎಂ.ಜಿ. ನಾಗರಾಜ ಅವರು ಕಾಕತೀಯರ ನಾಯಂಕಾರವ ವ್ಯವಸ್ಥೆ (ಓಬಣ್ಣ ನಾಯಕನಿಗೆ ದುರ್ಗದ ನಾಯಕತನವನ್ನು ನೀಡಲಾಯಿತು) ವಿಜಯನಗರದಲ್ಲಿ ಕಂಡುಬಂದಿತ್ತು. ಕಾಕತೀಯ ಗಣಪತಿ ದೇವನ (೧೧೯೯- ೧೨೬೨) ಮರಿಮೊಮ್ಮಗ (೧೨೮೯- ೧೩೨೩) ಇಮ್ಮಡಿ ಪ್ರತಾಪರುದ್ರ ತನ್ನ ಕಾಲದ ಪ್ರಬಲ ಪದ್ಮನಾಯಕ ಕುಲಕ್ಕೆ ಸೇರಿದ ೭೭ ನಾಯಕ ಸಮೂಹದ ನೆರವಿನಿಂದ ಆಡಳಿತ ನಡೆಸಿದ ಬಗ್ಗೆ ಮೆಕೆಂಜಿ ತಿಳಿಸುತ್ತಾನೆ. ಹಕ್ಕ-ಬುಕ್ಕರು ಕಾಕತೀಯರಲ್ಲಿ ಭಂಡಾರಿಗಳಾಗಿದ್ದರು. ೨ನೇ ವರ್ಗದ ಅಮರನಾಯಕರಿಗೆ ರಾಜನ ಹೆಸರನ್ನು ಬಿಟ್ಟು ಭೂಮಿಯನ್ನು ದಾನ ಮಾಡುವ ಅಧಿಕಾರ ಇರಲಿಲ್ಲ. ೩ನೇ ವರ್ಗದ ಅಮರನಾಯಕರು ಚಕ್ರವರ್ತಿಯ ನೇರ ನಿಯಂತ್ರಣ ಅಥವಾ ಅಧೀನದಲ್ಲಿದ್ದರು. ಭೂದಾನ ಮಾಡಲು ರಾಜನ ಅಪ್ಪಣೆಬೇಕು. ಯುದ್ಧಕ್ಕೆ ಸೈನ್ಯ ಕಳುಹಿಸುತ್ತಿದ್ದರು. ಅನೇಕ ದಂಡನಾಯಕರಿದ್ದರು. ಯುದ್ಧ, ದಂಡಯಾತ್ರೆ, ಸಾಮ್ರಾಜ್ಯ ಸಂಘಟನೆಯಲ್ಲಿದ್ದರು.

ಕ್ರಿ.ಶ. ೧೬೦೩ ಜನವರಿ ೨೧ರ ಶಾಸನ ವಿಜಯನಗರದ ದೊರೆ ವೆಂಕಟಪತಿ ರಾಯನು ಮುತಿನಗಧಿಗೆಯಿಂದ ರಾಜ್ಯಭಾರ ಮಾಡುತ್ತಿದ್ದನೆಂಬುದಾಗಿ ಹೇಳಿದೆ. ಮುದಿಯಣನಾಯಕರ ಸೀಮೆಯೊಳಗಿನ ನಾಗೇನಹಳ್ಳಿಯಲ್ಲಿ ವಾಸಿಸುತ್ತಿದ್ದ ಹೆಂಚೇರಿನ ಬಡಗಿ ದೊಡ್ಡ ಹಲಗಯ್ಯನ ಮಗ ಚಿಕಚಿಕ್ಕಯ್ಯನು ಮುದಿಯಪ ನಾಯಕರಿಗೆ ಸ್ಥಿರ ರಾಜ್ಯವಾಗಲಿಯೆಂದು ಶ್ರೀಶೈಲದ ಮಲ್ಲಿಕಾರ್ಜುನ ದೇವರಿಗೆ ಕಬ್ಬಿಣದ ದೀಪಮಾಲೆ ಯನ್ನು ಮಾಡಿಸುತ್ತಾನೆ.[21]

ಅರಮನಾಯಕರು (ಮೂರು ವರ್ಗಗಳು)

ಪ್ರದೇಶ ವಿಸ್ತಾರ	ದಂಡನಾಯಕರು	ಸಣ್ಣ ಅಮರನಾಯಕರಿದ್ದರು.
ಸಂಪನ್ಮೂಲ ಬಲ		ಯುದ್ಧ ದಂಡೆಯಾತ್ರೆಯಲ್ಲಿ
ಸಾಮಂತರಿಂದ ಯುದ್ಧಕ್ಕೆ ಸೇನೆ		ಸಾಮ್ರಾಜ್ಯದ ಸಂಘಟನೆಯಲ್ಲಿ

ಚಕ್ರವರ್ತಿಯ ಸೈನ್ಯವನ್ನು
ಸೇರಿಕೊಳ್ಳುತ್ತಿದ್ದರು.

ಚಿತ್ರದುರ್ಗ ನಾಯಕ

ಯಲಹಂಕದ ರಾಜ ಇವರನ್ನು

ಅಮರನಾಯಕ ವ್ಯವಸ್ಥೆ ಯುರೋಪಿನ ಫ್ಯೂಡಲಿಸಂಗೆ ಹೋಲಿಸುತ್ತಾರೆ.

ದಂಡನಾಯಕ, ಮಹಾಪ್ರಧಾನ ಇತರ ಅಧಿಕಾರಿಗಳು

ವಿಜಯನಗರ ಸಾಮ್ರಾಜ್ಯ ಆಳ್ವಿಕೆಯಲ್ಲಿ ದಂಡನಾಯಕ, ಪ್ರಧಾನರ ಪಾತ್ರ ಮುಖ್ಯ. ರಾಯದುರ್ಗ ತಾಲ್ಲೂಕು ಕಛೇರಿ ಬಳಿ (ಅನಂತಪುರ ಜಿಲ್ಲೆ) ಶಾಸನದಲ್ಲಿ 'ಅಮರ ಕೀರ್ತಿ' ಬಗ್ಗೆ ಉಲ್ಲೇಖಿಸಿದ್ದಾರೆ. ಬಹುಶಃ ಇದು ಅಮರನಾಯಕರಿಗೆ ಸಲ್ಲುವ ಗೌರವ ಇರಬೇಕು.

ಕುಂದಾಪುರ ತಾಲ್ಲೂಕಿನ ಕೋಟೇಶ್ವರ ದೇವಾಲಯದ ಶಾಸನದಲ್ಲಿ ೭.೭.೧೩೫೭ (ಶುಕ್ರವಾರ) ಮಲೆಯ ದಣ್ಣಾಯಕ ಎಂಬುವನು ರಾವಲದೇವನ ಮಂತ್ರಿ ಇವನ ಮಗ ಸಬುತಿನಾಯಕನ ವಿವರಗಳಿವೆ. ಇಲ್ಲಿನ ಮತ್ತೊಂದು ಶಾಸನದಲ್ಲಿ ೨.೧೦.೧೩೬೫ ರಲ್ಲಿ (ಗುರುವಾರ) ವೀರ ಬುಕ್ಕಣ್ಣರಾಯನ ಕಾಲಕ್ಕೆ ಇಲ್ಲಿ ಮಲ್ಲೆಯ ದಣ್ಣಾಯಕ ಕಾರ್ಯ ನಿರ್ವಹಿಸುತ್ತಿದ್ದ.[22]

ಕೊಯಮತ್ತೂರು ಜಿಲ್ಲೆ ಸಿಂಗನಲ್ಲೂರು ಬಸವೇಶ್ವರ ದೇವಾಲಯದ ಶಾಸನ ೪.೮.೧೪೦೮ ರಂದು ವೀರದೇವರಾಯ ಮಹಾರಾಯರ ಮಹಾಪ್ರಧಾನ ನಾಗಣ್ಣನಾಯಕ ಒಡೆಯನ ವಿವರವಿದೆ.[23] ೨೭.೩.೧೪೨೫ರಂದು ಹರಿಯಪ್ಪ ದಣ್ಣಾಯಕ ಆಳ್ವಿಕೆ ನಡೆಸಿದ್ದು ಗಮನಾರ್ಹ. ಇವನಂತೆ ಮಹಾಪ್ರಧಾನ ಸಿಂಗಾಣ್ಣ ದಣ್ಣಾಯಕನು ೩.೨.೧೪೮೨ರಲ್ಲಿ ವಿರೂಪಾಕ್ಷರಾಯ ಮಹಾರಾಯರ ಕಾಲದಲ್ಲಿ ಕಾರ್ಯನಿರ್ವಹಿಸುತ್ತಿದ್ದನು.[24]

ಕೃಷ್ಣದೇವರಾಯನ ಕಾಲ ೩೦.೧೦.೧೫೧೬ (ಗುರುವಾರ)ರ ಶಾಸನದಲ್ಲಿ ಪಾರ್ವತಿ ಅಮ್ಮ - ಇಮ್ಮಡಿ ಬಸಪ್ಪನಾಯಕ ಒಡೆಯರ ಪುತ್ರ ಅರುಹ ತಿಮ್ಮಣ್ಣನಾಯಕ ಅಧಿಕಾರಿ (ಪ್ರಧಾನಯಾಗಿದ್ದನು. ಸೋಗೆ ಮತ್ತು ದಣ್ಣಾನಾಯಕ ಪುರವನ್ನು ಕೊಟ್ಟೂರು ಸೀಮೆಗೆ ಕೊಡುತ್ತಾನೆ.[25] ಇದೇ ಕಾಲಕ್ಕೆ (೧೬.೧.೧೫೧೮) ಕಠಾರಿ ತಿಪ್ಪಣ್ಣನಾಯಕನ ಮಗ ರಾಮಣ್ಣನಾಯಕ ಅಧಿಕಾರಿಯಾಗಿದ್ದನು.

ಅನಂತಪುರ ಜಿಲ್ಲೆ ಗುತ್ತಿ ತಾಲೂಕಿನ ಚೈಬಲದ ಚನ್ನಕೇಶವ ದೇವಾಲಯದ ಶಾಸನವು ದಳವಾಯಿ ಅಪ್ಪಲ ನಾಯಕರಿಗೆ ಸದಾಶಿವರಾಯರು ಅಮರ ಮಾಗಾಣಿ ನೀಡಿದ

ಬಗ್ಗೆ ಉಲ್ಲೇಖವಿದೆ.[26] ರಕ್ಷಣೆಯಲ್ಲಿ ಸೇವೆಗೈದ ರಾಹುತ ಲಿಂಗಪ ನಾಯಕರು ಆದವಾನಿಯ ಬೆಲದೋಣಿ ಗ್ರಾಮವನ್ನು ಸೇವೆಗೆಂದು ಪಡೆದುಕೊಳ್ಳುತ್ತಾರೆ.

ಕೃಷ್ಣದೇವರಾಯನ ಕಾಲದಲ್ಲಿ ಪೆರಿಯ ಓಬಳ್ಳನಾಯಕರ್ ಎಂಬ ಪ್ರದಾನ ದಂಡನಾಯಕನಿದ್ದನು. ಹೀಗೆ ನಾಯಕರ ಸೇವೆ ವಿಜಯನಗರದಲ್ಲಿ ಹೆಗಲಿಗೆ ಹೆಗಲು ಕೊಟ್ಟು ಶ್ರಮಿಸಿರುವುದನ್ನು ತಿಳಿಯಬಹುದಾಗಿದೆ.

ಅಧಿಕಾರೇತರ ಸೇವೆ

ಅಧಿಕಾರ ಚಲಾಯಿಸುವ ಹುದ್ದೆಗಳಲ್ಲಿರದೆ, ಕೇವಲ ಅಧಿಕಾರಿಗಳು ಹೇಳಿದ ಸೇವೆಯನ್ನು ಮಾಡಿದ ಬೇಡನಾಯಕರ ಚಿತ್ರಣವಿದೆ. ಕೊಳ್ಳೆಗಾಲ ಪಟ್ಟಣದ ಲಕ್ಷ್ಮೀನಾರಾಯಣ ದೇವಾಲಯದ ೧೮.೧೨.೧೫೬೯ರ ಶಾಸನವು ಸದಾಶಿವರಾಯ ಮಹಾರಾಯರಿಗೆ ಸೇರಿದೆ. ಪಲ್ಲಕ್ಕಿ ಹೊರುವ ಸೇವೆಗೆ ರಾಮರಾಜನಾಯಕರಿಗೆ ಹದಿನಾಡು ಸೀಮೆಯನ್ನು ಉಂಬಳಿಯಾಗಿ ಕೊಟ್ಟ ವಿಷಯವಿದೆ.

ನಾಯಕ ಪ್ರಭುತ್ವ ಮತ್ತು ಊಳಿಗಮಾನ್ಯ ಪದ್ಧತಿ : ಅವಲೋಕನ

ಜಪಾನಿನ ವಿದ್ವಾಂಸ ನೊಬುರು ಕರಾಶಿಮ ವಿಜಯನಗರ ಸಾಮ್ರಾಜ್ಯದಲ್ಲಿ 'ನಾಯಕ'ರನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಕರಾಶಿಮ ಆಡಂಬರವಿಲ್ಲದೆ, ಸರಳವಾಗಿ ಬರೆಯುತ್ತಾರೆ. ಅನೇಕ ವ್ಯಾಖ್ಯಾನಗಳಲ್ಲಿ ಅವರು ಬರ್ಟನ್ ಸ್ಟೀನನ ನಿಲುವನ್ನು ಒಪ್ಪುವುದಿಲ್ಲ. ಉದಾಹರಣೆಗೆ ಬರ್ಟನ್ ಸ್ಟೀನನಂತಲ್ಲದೆ ಅವರು ವಿಜಯನಗರದ ಕೇಂದ್ರಾಡಳಿತವು 'ಧಾರ್ಮಿಕ'ವಾಗಿರಲಿಲ್ಲ. ಸಂಪ್ರದಾಯ ಪಾಲನೆಯ ದಾಗಿರಲಿಲ್ಲ. ನಿಜವಾದ ಅಧಿಕಾರ ಅಲ್ಲಿರಲಿಲ್ಲ ಎಂದು ನಂಬುತ್ತಾರೆ. ಅಮರ ನಾಯಕರು ಮತ್ತು ಇತರ ವಿಕೇಂದ್ರೀಕೃತ ಅಂಗಗಳಿದ್ದರೂ ಕೇಂದ್ರ ಪ್ರಭುತ್ವವು ಅಧೀನ ಘಟಕಗಳ ಮೇಲೆ ಸ್ವಲ್ಪ ಮಟ್ಟಿಗೆ ನಿಜವಾದ ಹತೋಟಿಯನ್ನು ಹೊಂದಿದ್ದಿತು.[27] ಬರ್ಟನ್ ಸ್ಟೀನ್ (ಅಮೇರಿಕಾದ ವಿದ್ವಾಂಸ) ತಮ್ಮ ವಿಜಯನಗರ (ಕೆಂಬ್ರಿಡ್ಜ್ ಹಿಸ್ಟರಿ) ಕೃತಿಯಲ್ಲಿ ವಿಜಯನಗರ ಸಾಮ್ರಾಜ್ಯದಲ್ಲಿ ನಾಯಕರು ವಹಿಸಿದ ಪಾತ್ರವನ್ನು ಕುರಿತು ಚರ್ಚಿಸಿದ್ದಾರೆ. ವಿಜಯನಗರ ಸಾಮ್ರಾಜ್ಯ ಏಕಕಾಲದಲ್ಲಿ ಸಾಮಂತ, ಒಕ್ಕೂಟ ಹಾಗೂ ವಿಕೇಂದ್ರೀಕೃತ ಅಂಶಗಳನ್ನು ಒಳಗೊಂಡಿದ್ದಿತು. ಊಳಿಗಮಾನ್ಯ ಪದ್ಧತಿ ಕುರಿತು ಚರ್ಚಿಸಿದ್ದಾರೆ. ದೊಡ್ಡ, ಚಿಕ್ಕರಾಜ್ಯ ಭಾಗಗಳನ್ನು ಅನೇಕ ಸಂದರ್ಭಗಳಲ್ಲಿ ಒಂದೇ ಒಂದು ಹಳ್ಳಿಯನ್ನು ಗಣ್ಯ ಜನರಿಗೆ ವಹಿಸಲಾಗುತ್ತಿತ್ತು. ಅಗತ್ಯ ಬಂದಾಗ ನಿರ್ದಿಷ್ಟ ಪಡಿಸಿರುವ ಸಂಖ್ಯೆಯ ಸೇನೆಯನ್ನು ಅವರು ಒದಗಿಸತಕ್ಕದ್ದು ಎಂಬು ದೊಂದೇ ಷರತ್ತು. ಈ ಭೂಹಿಡುವಳಿ ಗಳನ್ನು ಅಮರಂ ಎಂದು ಕರೆಯುತ್ತಿದ್ದರು. ಅದನ್ನು ಪಡೆದಿದ್ದವರನ್ನು ಅಮರನಾಯಕ ರೆಂದು ಕರೆಯಲಾಗುತ್ತಿತ್ತು. ಒಂದು ರೀತಿಯಲ್ಲಿ ಅವರು ವಿಜಯನಗರ ರಾಜ್ಯಾಡಳಿತದ ಆಧಾರ ಸ್ಥಂಭಗಳಾಗಿ ವರ್ತಿಸುತ್ತಿದ್ದರು ಎಂಬ ಮಾತು ನಿಜ.[28]

ವಿಜಯನಗರ ಸಾಮ್ರಾಜ್ಯದಲ್ಲಿ ಅಮರನಾಯಕರಾಗಿದ್ದು, ಅನಂತರ ಸ್ವತಂತ್ರ ಪಾಳೆಯಗಾರರಾದರು. ಕೆಳದಿ ನಾಯಕರು, ಚಿತ್ರದುರ್ಗ, ಹಾಗಲವಾಡಿ, ತರೀಕೆರೆ, ಯಲಹಂಕ, ಮಾಗಡಿ ಇತರರು ವಿಜಯನಗರ ಕಾಲದ ಅಮರನಾಯಕರಾಗಿದ್ದರು. ಅಮರನಾಯಕ 'ಅಮರಂ'ಗೆ ಒಡೆಯನಾಗಿರಲಿಲ್ಲ. ರೈತ ಅವನ ಊಳಿಗದವನೂ ಆಗಿರಲಿಲ್ಲ. ಅಮರನಾಯಕನಿಗೆ ಕೃಷಿ ಹೆಚ್ಚುವರಿ ಫಸಲಿನ ಮೇಲೆ ಆಸಕ್ತಿಯಿತ್ತೇ ಹೊರತು ನೇರವಾಗಿ ಕೃಷಿಯನ್ನು ಕುರಿತಲ್ಲ, ಅಮರಂ ಹಿಡುವಳಿಗಳಲ್ಲಿ ಅಮರ ನಾಯಕನಿಗೂ ರೈತನಿಗೂ ನಡುವೆ ಘರ್ಷಣೆಯಿರಲಿಲ್ಲ.

ಈ ಚೆರ್ಲಾನಾಯಕರು ಬಹಮನಿಗಳಿಗೆ ಪ್ರೋತ್ಸಾಹ ಕೊಟ್ಟಾಗ, ವಿಜಯನಗರದ ಹರಿಹರ ಆಳ್ವಿಕೆಯಲ್ಲಿ ರಾಮದೇವ ಹಾಗೂ ನಾಯಂಕರಾಚಾರ್ಯ ಕಂಪಣರನ್ನು ೨ನೇ ಬುಕ್ಕನ ನಾಯಕತ್ವದಲ್ಲಿ ಕಳಿಸಿಕೊಟ್ಟನು. ವಿಜಯನಗರ ಕಾಲದ ನಾಯಕರು ನಿಷ್ಠೆ ಪ್ರಾಮಾಣಿಕತೆಯನ್ನು ಬಿಟ್ಟು ಅವಕಾಶ ಬಂದಂತೆ ವರ್ತಿಸುತ್ತಿರಲಿಲ್ಲ.

ತುಳು ವಂಶದ ಈಶ್ವರನಾಯಕ ಸಮರ್ಥ ಅರಸ. ಅವನು ವಿಜಯಗಿರಿ, ನೆಲ್ಲೂರು, ಚೆಂಗಲ್ ಪೇಟೆ, ಶ್ರೀರಂಗಂ, ಭುವನಗಿರಿ ಮತ್ತು ಜಿಂಜಿಗಳನ್ನು ವಶಪಡಿಸಿ ಕೊಳ್ಳುತ್ತಾನೆ. ಇವನ ಮಗ ನರಸನಾಯಕ ರಾಜಪ್ರತಿನಿಧಿ. ದಳಪತಿ ಮತ್ತು ಮಹಾ ಪ್ರಧಾನನೂ ಆಗಿದ್ದನು. ಈ ಕಾಲಘಟ್ಟದಲ್ಲಿ ನಾಯಕತನಕ್ಕೆ ಒಂದು ಹೊಸ ಆಯಾಮ ಸಿಕ್ಕಿತು.

ಕೊನೆ ಟಿಪ್ಪಣಿಗಳು

1. ಇತಿಹಾಸ ದರ್ಶನ ೧೪, ೧೯೯೯, ಪು. ೭೨
2. ವಿಜಯನಗರ ಅಧ್ಯಯನ, ಸಂಪುಟ, ೬, ೨೦೦೧, ಪುಟಗಳು ೭೫ - ೭೬
3. ವಿಜಯನಗರ ಅಧ್ಯಯನ, ಸಂಪುಟ ೫, ೨೦೦೦, ಪುಟ ೯೩
4. ಇತಿಹಾಸ ದರ್ಶನ, ಸಂ. ೨, ೧೯೮೮
5. ಲಕ್ಷ್ಮಣ್ ತೆಲಗಾವಿ, ಎಪ್ಪತ್ತೇಳು ಪಾಳೆಯಗಾರರು, ಪು. ೨೨೭
6. SII part II, ನಂ. ೪೧೦ ಪು. ೪೧೬
7. ಅದೇ, ೪೨೯
8. SII, IX part II, p. 445
9. ಅದೇ, ೪೬೧ (ನಂ. ೪೫೨).
10. ಅದೇ, ೪೮೯ (ನಂ.೪೭೪)
11. ಅದೇ, (ನಂ.೪೭೭), ಪು. ೪೯೧ - ೯೨
12. ಅದೇ, (ನಂ. ೪೯೦, ೪೯೧, ೪೯೩, ೪೯೯), ಪು. ೫೦೪
13. Sli, IX, part II, (No. 508), p. 521

14. ಅದೇ ಪು. ೬೩೨ (ನಂ.೬೩೦)
15. ಅದೇ, ಪು. ೬೩೪ (ನಂ. ೬೩೩)
16. SII, IX part II, p. 637, (No. 639)
17. SII, Vol. IX, p. 659. (No. 666)
18. ಅದೇ ಪು. ೬೮೦ (ನಂ. ೬೮೯)
19. ಅದೇ, ಪು. ೬೮೧, (ನಂ. ೬೯೦)
20. ವಿಜಯನಗರ ಅಧ್ಯಯನ ೭ , ಪು. ೧೮ (ವಿಜಯನಗರ ಕಾಲದ ಕೊಡಗು)
21. ವಿಜಯನಗರ ಅಧ್ಯಯನ ಸಂ. ೧೦, ಪು. ೨೮೪
22. SII, Vol. IX part II, p. 416. (No. ೪೦೯)
23. ಅದೇ, ಪು. ೪೪೧ (ನಂ. ೪೩೩)
24. ಅದೇ, ಪು. ೪೮೩ (ನಂ. ೪೭೯)
25. ಅದೇ, ಪು. ೫೧೬ (ನಂ. ೫೦೩)
26. ಅದೇ, ಪು. ೬೭೩ (ನಂ. ೬೮೧)
27. ಕರ್ನಾಟಕ ಚರಿತ್ರೆ ಸಂಪುಟ ೩, ಪ್ರೊ. ಕೆ.ಎಸ್. ಶಿವಣ್ಣ (ಸಂ), ಪು. ೩
28. ಅದೇ ಪು. ೬

೩೧. ಬಳ್ಳಾರಿ ಹಂಡೆ ಪಾಳೆಗಾರರ ಐತಿಹಾಸಿಕ ಹಿನ್ನೆಲೆ

ಡಾ. ಎಸ್. ಸಿ. ಪಾಟೀಲ

ಒಂದು ದೊಡ್ಡ ಸಾಮ್ರಾಜ್ಯದ ಅಳಿವು ಉಳಿವುಗಳು ಆ ಸಾಮ್ರಾಜ್ಯದಲ್ಲಿನ ಸಾಮಂತ ಮಾಂಡಲಿಕರ ನಿಷ್ಠೆಯನ್ನವಲಂಬಿಸಿರುತ್ತಿತ್ತು. ಯಾವುದೇ ಇಂತಹ ಅರಸರು ಮನೆತನ, ಜನಸಮುದಾಯದ ನೇರಸಂಪರ್ಕವುಳ್ಳದ್ದಾಗಿರುತ್ತಿತ್ತು. ಅಲ್ಲದೇ ಒಟ್ಟು ಜನ ಜೀವನದ ಆಗುಹೋಗುಗಳಲ್ಲಿ ಅವು ಗಣನೀಯ ಪಾತ್ರವನ್ನು ವಹಿಸುತ್ತಿದ್ದವು. ಇಂತಹ ಸಣ್ಣ ಅರಸು ಮನೆತನಗಳ ಇತಿಹಾಸ ಸಾಧ್ಯವಾದಷ್ಟು ಸಮಗ್ರವಾಗಿ ರಚನೆಗೊಳ್ಳದ ಹೊರತು ನಿಜವಾದ ಅರ್ಥದಲ್ಲಿ ನಮ್ಮ ನಾಡಿನ ಸಮಗ್ರ ಇತಿಹಾಸ ವೆಂಬುದರ ರಚನೆ ಎಂದಿಗೂ ವಸ್ತುನಿಷ್ಠವಾಗಲಾರದು ಎಂಬ ಮಾತು ತುಂಬ ಅರ್ಥಪೂರ್ಣವಾದುದಾಗಿದೆ.

ಒಂದು ಕಾಲದಲ್ಲಿ ಸಣ್ಣಪುಟ್ಟ ಪಾಳೆಗಾರರು, ಮಾಂಡಲಿಕರು, ತಮ್ಮ ತಮ್ಮ ಕ್ಷೇತ್ರದಲ್ಲಿ ಮಹಾರಾಜರಂತೆಯೇ ವೈಭವಪೂರ್ಣವಾಗಿ ಆಳ್ವಿಕೆ ಮಾಡಿದ್ದಾರೆ. ಮಹಾರಾಜರು ಮಾಡುತ್ತಿದ್ದ ಪ್ರಜಾಹಿತವಾದ ಎಲ್ಲ ಕಾರ್ಯವನ್ನು ಇವರು ಸಹ ಅಷ್ಟೇ ನಿಷ್ಠೆಯಿಂದ, ಪ್ರಾಮಾಣಿಕವಾಗಿ ಮತ್ತು ಅನುಕರಣೀಯವಾಗುವಂತೆ ಮಾಡಿ ತೋರಿಸಿದ ಹೆಮ್ಮೆಗೂ ಕಾರಣೀಭೂತರಾಗಿದ್ದಾರೆ. ಜನಸಾಮಾನ್ಯರಿಗೆ ತುಂಬ ಅವಶ್ಯವಾಗಿರುವ ಕೆರೆಬಾವಿ, ಅರವಟ್ಟಿಗೆ, ಗುಡಿಗುಂಡಾರ, ಕೋಟೆ ಕೊತ್ತಲುಗಳನ್ನು ನಿರ್ಮಿಸಿದ್ದಾರೆ. ಜನರಲ್ಲಿ ಸ್ವಾಭಿಮಾನ, ಆತ್ಮಪ್ರಜ್ಞೆ, ದೇಶಾಭಿಮಾನ, ಧೈರ್ಯ, ಉತ್ಸಾಹ, ತ್ಯಾಗ, ದಾನ, ಬಲಿದಾನ, ಧರ್ಮ, ಸಾಹಿತ್ಯ, ಕಲೆಗಳೊಂದಿಗೆ ಸಾಹಿತ್ಯಿಕ ಮೌಲ್ಯಗಳನ್ನು ಸಂರಕ್ಷಿಸಿಕೊಂಡು ಬಂದ ಹೆಮ್ಮೆ ಈ ಪಾಳೆಗಾರರಿಗೆ ಸಲ್ಲುತ್ತದೆ. ಹೀಗಾಗಿ ಈ ಪಾಳೆಪಟ್ಟುಗಳ ಅಧ್ಯಯನವೆಂದರೆ ನಮ್ಮ ಸಾಮ್ರಾಜ್ಯಗಳ ಅಡಿಪಾಯ ಅಧ್ಯಯನವೇ ಆಗಿದೆಯೆಂದರೆ ತಪ್ಪಲ್ಲ.

ಇಲ್ಲಿಯವರೆಗೆ ದೊಡ್ಡ ದೊಡ್ಡ ಮಹಾರಾಜರನ್ನೇ ಮುಖ್ಯವಾಗಿ ಗಮನಿಸುತ್ತ, ಸಣ್ಣಪುಟ್ಟ ಅರಸು ಮನೆತನಗಳನ್ನು ಉಪೇಕ್ಷಿಸುತ್ತ ಬಂದಿದ್ದೇವೆ. ಹೀಗೆ ಉಪೇಕ್ಷೆಗೆ ಒಳಗಾದ ಕರ್ನಾಟಕದ ಬಹುದೊಡ್ಡ ಮತ್ತು ಗಮನಾರ್ಹವಾದ ಮನೆತನ ಹಂಡೆ ಅರಸು ಮನೆತನ.

ಕರ್ನಾಟಕದ ಸಂಸ್ಕೃತಿ ಹಿರಿಮೆ ಗರಿಮೆಗಳನ್ನು ನೆರೆಯ ಆಂಧ್ರಪ್ರದೇಶದವರೆಗೂ ವಿಸ್ತರಿಸಿ ವಿಜಯನಗರೋತ್ತರ ಕಾಲದ ಅರಸು ಮನೆತನಗಳಲ್ಲಿ ಸುಮಾರು ಮುನ್ನೂರು

ವರ್ಷಗಳ ದೀರ್ಘ ಕಾಲದ ಆಳ್ವಿಕೆಯನ್ನು ಮಾಡಿದ ದೊಡ್ಡ ಅರಸು ಮನೆತನವೆಂಬ ಅಗ್ಗಳಿಕೆಗೆ 'ಹಂಡೆ ಅರಸು ಮನೆತನ' ಪಾತ್ರವಾಗಿದೆ. ಕ್ರಿ.ಶ. ೧೫೧೩ ರಿಂದ ಕ್ರಿ.ಶ. ೧೮೪೮ರವರೆಗೆ ಆಳ್ವಿಕೆ ಮಾಡಿದ ವಿವರಗಳು ಲಭ್ಯವಾಗಿವೆ. ಇಷ್ಟೊಂದು ದೀರ್ಘ ಕಾಲದ ಅವಧಿಯವರೆಗೆ ಅನೇಕ ಏಳು - ಬೀಳುಗಳನ್ನು ಕಂಡ ಈ ಅರಸು ಮನೆತನದ ಸಮಗ್ರ ಚರಿತ್ರೆ ಇನ್ನು ಸರಿಯಾಗಿ ಬೆಳಕಿಗೆ ಬಂದಿಲ್ಲ. ಈ ಕುರಿತು ಗಂಭೀರವಾದ ಅಧ್ಯಯನಗಳ ಅವಶ್ಯಕತೆ ಇನ್ನೂ ಇದೆ.

ಹಂಡೆ ಅರಸರ ಮೂಲ

ಹಂಡೆ ಅರಸರ ಮೂಲವು ಒಂದು ಮೂಲದ ಪ್ರಕಾರ ಹತ್ತನೆಯ ಶತಮಾನ ದಲ್ಲಿದ್ದ ಪಾಂಡ್ಯ ಅರಸರು ೧೫-೧೬ನೆಯ ಶತಮಾನದಲ್ಲಿದ್ದ ಹಂಡೆ ಅರಸರೆಂದು ಕರೆಸಿಕೊಂಡಿರಬೇಕೆನಿಸುತ್ತದೆ. ಇದಕ್ಕೆ ಕಾರಣ 'ಪ' ಮತ್ತು 'ಹ' ಅಕ್ಷರದಲ್ಲಿದ್ದ ಬದಲಾವಣೆ, 'ಪ' ಕಾರ 'ಹ'ಕಾರವಾಗಿ 'ಪಾಂಡ್ಯ' ಹೋಗಿ 'ಹಂಡೆ' ಶಬ್ದ ಬಂದಿರ ಬಹುದು. ಹತ್ತನೆಯ ಶತಮಾನದ ಪಂಪ ೧೫ನೆಯ ಶತಮಾನದ ಹೊತ್ತಿಗೆ 'ಹಂಪ'ನಾಗಿರುವುದು ಪಂಪಾ ವೀರೂಪಾಕ್ಷೇಶ್ವರ ಹಂಪೆಯ ವಿರೂಪಾಕ್ಷನಾಗಿರುವು ದನ್ನು ಕಾಣುತ್ತೇವೆ. ಹೀಗೆ ಪಾಂಡೆ ಅರಸರು ವಿಜಯನಗರೋತ್ತರದ ಅವಧಿಯಲ್ಲಿ ಬಹುಶಃ ಹಂಡೆ ಅರಸರಾಗಿ, ಪಾಳೆಗಾರರಾಗಿ, ನಾಯಕರಾಗಿ, ದಂಡನಾಯಕ, ಸೇನಾಧಿಪತಿಯಾಗಿ ಸರದಾರರಾಗಿ ಗುರುತಿಸಿಕೊಂಡಿರಬೇಕೆನಿಸುತ್ತದೆ.

ಹಂಡೆ ಅನಂತಪುರ ಕೈಫಿಯತ್ತು, ಬಳ್ಳಾರಿ, ಕುರುಗೋಡ ಕೈಫಿಯತ್ತುಗಳು ಅಲ್ಲದೆ ವಿಶೇಷವಾಗಿ ಶ್ರೀಶೈಲ ಪೀಠದ ನಿಡುಮಾಮಿಡಿ ಮಠದ ದಾಖಲೆಗಳು ಹಂಡೆ ಅರಸರ ಕಾಲದಲ್ಲಿ ರಚನೆಯಾದ ತೆಲುಗು ಕಾವ್ಯಗಳಾದ ಪುಲ್ಲಕವಿ ವಿರಚಿತ ಶ್ರೀಶೈಲ ಪಂಡಿತಾರಾಧ್ಯ ಚರಿತ್ರೆ, ಸಿರಿಪಿ ಅಂಜನೇಯಲು ಬರೆದ 'ಕರಿಬಸವ ಸ್ವಾಮಿ' ಕಾವ್ಯ, ನಾಗಸಂದ್ರಂ ವಾಸುದೇವರಾವ್ ವಿರಚಿತ 'ಅನಂತಪುರ ಮಂಡಲ ಚರಿತ್ರ ಕಥಲು' ಕೃತಿಗಳು, ಕನ್ನಡದ 'ಶ್ರೀಶೈಲ ಪೀಠದರ್ಶನಂ' ಬುಕ್ಕರಾಯ ಚರಿತ್ರೆ, ಸಿ.ಪಿ. ಬ್ರೌನ್‌ರು ಬರೆದ 'ದಿ ವಾರ್ ಆಫ್ ದಿ ರಾಜಾಸ್' ಹಂಡೆ ಅರಸರ ಆಸ್ಥಾನ ಕವಿ ಬರೆದ 'ರಸಿಕ ಮನೋರಂಜ ವಿಲಾಸ' ಮುಂತಾದ ಗ್ರಂಥಗಳು ಹಂಡೆ, ಅರಸರ ಕುರಿತು ಹಲವಾರು ಮಾಹಿತಿಗಳನ್ನು ನೀಡುತ್ತವೆ.

ಈಗಿನ ವಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನ ಮುತ್ತಗಿ, ವಡವಡಗಿ ವೀರಶೈವ ಮನೆತನದ ಗ್ರಾಮಗಳಲ್ಲಿ ಲಕ್ಕಿನಾಯಕನೆಂಬುವವನು ಗೌಡಿಕೆ ಮಾಡಿಕೊಂಡಿದ್ದನು. ಇವನಿಗೆ ಬಾಲದ (ಬಲದ) ಹನುಮಪ್ಪ ನಾಯಕ ಮತ್ತು ಬಳಗ ನಾಯಕ ಎಂಬ ಇಬ್ಬರು ಮಕ್ಕಳು ಇದ್ದರು. ಬಾಲದ ಹನುಮಪ್ಪ ನಾಯಕ

ವಿಜಾಪುರದಲ್ಲಿದ್ದ ಆದಿಲ್‌ಶಾಹನ ಆಸ್ಥಾನದ ಸೇನಾಧಿಕಾರಿಯಾಗಿ ರಾಜಕೀಯ ಕಾರ್ಯದಲ್ಲಿ ವಿಶೇಷವಾಗಿ ನೆರವಾದನು. ಈ ಸಂದರ್ಭದಲ್ಲಿ ಬಾದಶಹನು 'ವಜೀರಪ್ಪ' ಎಂಬ ಬಿರುದು ಕೊಟ್ಟು ಗೌರವಿಸುತ್ತಾನೆ. ಆ ಬಾದಶಹನು ಆಳುವ ದಕ್ಷಿಣದ ಭಾಗ ಅಂದರೆ ಇಂದಿನ ಹಾವೇರಿ ಜಿಲ್ಲೆಯ ಪ್ರದೇಶಗಳು ಆಗ ತುಂಬ ಅರಾಜಕತೆಯಿಂದ ಹಾಳಾಗಿದ್ದವು. ವಿಜಾಪುರದ ಆದಿಲ್‌ಶಾಹಿಗೆ ಆ ಪ್ರದೇಶಗಳನ್ನು ನಿಯಂತ್ರಿಸುವುದು ತುಂಬ ಕಷ್ಟವಾಗಿತ್ತು. ಈ ಸಂದರ್ಭದಲ್ಲಿ ಬಾದಶಹನು ಶೂರನಾದ ಬಾಲದ ಹನುಮಪ್ಪ ನಾಯಕನ ನೇತೃತ್ವದಲ್ಲಿ ಸೈನ್ಯವನ್ನು ಕೊಟ್ಟು ಈ ಪ್ರದೇಶ ಆಡಳಿತವನ್ನು ನಿರ್ವಹಿಸಲು ಕಳುಹಿಸುತ್ತಾನೆ. ಬಳ್ಳಾರಿ, ತೆಕ್ಕಲುಕೋಟೆ, ಕುರುಗೋಡು ಈ ಮೂರು ಪರಗಣೆಗಳಿಗೆ ಬಾದಶಹ ಸನ್ನದು ಬರೆದು ಕೊಟ್ಟು ಸಹ ಕಳುಹಿಸುತ್ತಾನೆ. ಹನುಮಪ್ಪ ನಾಯಕನು ಈ ಪ್ರದೇಶಗಳ ಮೂಲಕ ಶಾಲಿವಾಹನ ಶಕ ೧೫೧೦ ರಲ್ಲಿ ಮೊದಲು ಬಂಕಾಪುರಕ್ಕೆ ಬಂದು ಅಲ್ಲಿ ತಲೆ ಎತ್ತಿದ ಅರಾಜಕತೆಯನ್ನು ಹೋಗಲಾಡಿಸಿ ಅನೇಕ ಸಾಮಾಜಿಕ ಮತ್ತು ಜನಹಿತವಾದ ಕಾರ್ಯಗಳನ್ನು ಮಾಡಿ ಪ್ರಜೆಗಳ ಅಪಾರ ವಿಶ್ವಾಸಗಳಿಸುತ್ತಾನೆ ಬಂಕಾಪುರದಲ್ಲಿ ಕಿಲ್ಲೆ ಕಟ್ಟಿಸಿ ಶಾಂತಿ ನೆಲೆಯೂರುವಂತೆ ಮಾಡುತ್ತಾನೆ. ಈತನ ಸೇವಾನಿಷ್ಠೆಯನ್ನು ಪರಿಗಣಿಸಿ ಬಿಜಾಪುರದ ಸುಲ್ತಾನನು ಅವನನ್ನು ಬಿಜಾಪುರಕ್ಕೆ ಕರೆಯಿಸಿ ಬಹುಮಾನ ಕೊಟ್ಟು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾನೆ. ಮುಂದೆ ತೆಕ್ಕಲುಕೋಟು, ಕಣೆಕಲ್ಲು, ಕುಂದರ್ಪಿ, ಧರ್ಮಾವರ, ಅನಂತಪುರ, ನಂದ್ಯಾಲ, ಶಿರಿವಾಳ, ಶಿರಗುಪ್ಪೆ, ಶಿನ್ನೂರು, ನಾಗಲಾಪುರ, ಒಡ್ಡು ದರೋಜಿ, ಕುರುಗೋಡು ಮುಂತಾದ ಪರಗಣೆಗಳನ್ನು ಠಾಣ್ಯ ಹಾಕಿಕೊಂಡು ಕೆಲವು ಗ್ರಾಮಗಳಲ್ಲಿ ಕಿಲ್ಲೆಗಳನ್ನು ಕಟ್ಟಿಸಿ ರಾಜ್ಯವನ್ನು ಭದ್ರಪಡಿಸುತ್ತಾನೆ. ಈ ಸಮಾಚಾರವು ಬಿಜಾಪುರದ ಬಾದಶಹನಿಗೆ ಗೊತ್ತಾಗಿ ಸಂತೋಷಗೊಂಡು ಹನುಮಪ್ಪ ನಾಯಕನನ್ನು ಬಿಜಾಪುರಕ್ಕೆ ಕರೆಕಳುಹಿಸುತ್ತಾನೆ. ಮೊದಲು ಮೂರು ಪರಗಣಿಗಳಿಗೆ ಒಡೆಯನಾದ ಬಾಲದ ಹನುಮಪ್ಪ ನಾಯಕನು ಕ್ರಮೇಣ ಹನ್ನೊಂದು ಪರಗಣಿಗಳಿಗೆ ಒಡೆಯನಾಗುತ್ತಾನೆ. ಈತನು ಅತ್ಯಂತ ಶೂರ ಮತ್ತು ಚಾಣಾಕ್ಷನಾಗಿರುವುದನ್ನು ಇದು ಸೂಚಿಸುತ್ತದೆ.

ಬಾಲದ ಹನುಮಪ್ಪನಾಯಕನ ಐದು ಜನ ಮಕ್ಕಳು

ಬಾಲದ ಹನುಮಪ್ಪ ನಾಯಕನು ತನ್ನ ಐದು ಜನ ಗಂಡು ಮಕ್ಕಳೊಂದಿಗೆ ಬಾದಶಾಹನ ಕಾಣಲುಹೋಗುತ್ತಾನೆ. ಈ ಸಂದರ್ಭದಲ್ಲಿ ನಡೆದ ಒಂದು ರೋಮಾಂಚಕಾರಿ ಪ್ರಸಂಗವನ್ನು ಬಳ್ಳಾರಿ ಕುರುಗೋಡು ಕೈಫಿಯತ್ತುಗಳು ಹೇಳುತ್ತವೆ.

'ಬಾದುಶಹನು' ಸುಂದರವಾದ ಈ ಐದು ಮಂದಿ ಮಕ್ಕಳನ್ನು ನೋಡಿ ಇದರೊಳಗೆ ಒಬ್ಬ ಮಗನನ್ನು ಕೊಟ್ಟರೆ ಸುಂತಿ ಮಾಡಿ ಇಟ್ಟುಕೊಳ್ಳಬೇಕೆಂದು ಮನಸ್ಸಿನಲ್ಲಿ ಮಾಡಿಕೊಂಡು, ಹಂಡೆ ಬಾಲದ ಹನುಮಪ್ಪ ನಾಯಕನನ್ನು ಕಂಡು 'ನಿನ್ನ ಮಕ್ಕಳೊಳಗೆ

ಒಬ್ಬ ಮಗನನ್ನು ನಮಗೆ ಕೊಡು' ಎಂದು ಕೇಳಿದಲ್ಲಿ ಈತನು ಬಹಳ ಕೋಪವಾಗಿ ಬಾದಶಹರವರಿಗೆ 'ನಿಮ್ಮ ಜನಾನ ಒಳಗೆ ಒಬ್ಬ ಬೀಬಿಯನ್ನು ಕೊಟ್ಟರೆ ಇಂತಹ ಮಗು ವನ್ನು ಹುಟ್ಟಿಸಿ ಕೊಡುತ್ತೇನೆ' ಎಂದು ಹೇಳುತ್ತಾನೆ. ಇದನ್ನು ಕೇಳಿ ಕೆರಳಿದ ಬಾದಷಹನು ಅವನನ್ನು ಹಿಡಿದು ಖಂಡಿಸಲು ಸೈನಿಕರಿಗೆ ಆದೇಶಿಸುತ್ತಾನೆ. ಬಲಾಢ್ಯ ಹಾಗೂ ಶೂರನಾದ ಬಾಲದ ಹನುಮಪ್ಪ ನಾಯಕ ಅಲ್ಲಿಂದ ಪಾರಾಗಿ ಕೃಷ್ಣಾನದಿಯನ್ನು ದಾಟಿ ಆಚೆಯ ದಡವನ್ನು ಸೇರುತ್ತಾನೆ. ಸುಲ್ತಾನನ ಸೈನ್ಯ ನದಿಯನ್ನು ದಾಟಲಾರದೆ ಮರಳಿ ವಿಜಾಪುರಕ್ಕೆ ಹೋಗುತ್ತದೆ. ಮುಂದೆ ಹನುಮಪ್ಪನಾಯಕನು ಮಕ್ಕಳೊಂದಿಗೆ ಬಳ್ಳಾರಿಗೆ ಬಂದು ನೆಲೆಸುತ್ತಾನೆ.

ವಿಜಯನಗರ ಸಾಮ್ರಾಜ್ಯದ ರಕ್ಷಕರು

ಈ ಸಂದರ್ಭದಲ್ಲಿ ಹನುಮಪ್ಪನಾಯಕನು ಈಗಿನ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯವನ್ನು ದೊಡ್ಡದೊಂಡು ಗಂಡಾಂತರದಿಂದ ಪಾರು ಮಾಡಿದ ವೀರನು ವಿಜಯ ನಗರದ ಕೋಶಾಧಿಪತಿಯಾದ ಬೊಕ್ಕಸದ ತಿಮ್ಮಪಯ್ಯನೆಂಬುವನು ಸಾಮ್ರಾಜ್ಯದ ಚತುರಂಗ ಬಲವನ್ನು ತನ್ನ ಸ್ವಾಧೀನಪಡಿಸಿಕೊಂಡು ಆಳಿಯ ರಾಮರಾಯನನ್ನು ಸೆರೆಯಲ್ಲಿಡಬೇಕೆಂದು ಪ್ರಯತ್ನಿಸಿದ್ದನು. ವಿಜಯನಗರ ಸಾಮ್ರಾಜ್ಯವನ್ನು ಆಹುತಿ ಗೊಳಿಸಬೇಕೆಂದು ಹಾತೊರೆಯುತ್ತಿದ್ದ ನಿಜಾಂ ಷಹಾ, ಪರೀದುಷಹಾ, ಅಲಿಆದಿಲ್ ಷಹಾ, ಮುಂತಾದ ಮುಸಲ್ಮಾನ ನವಾಬರಿಗೆ ಇಡೀ ಸಾಮ್ರಾಜ್ಯವನ್ನೇ ವಶಪಡಿಸು ವದರಲ್ಲಿದ್ದನು. ಅವನ ಪಿತೂರಿಯ ಪರಿಣಾಮವಾಗಿ ಆ ನವಾಬರು ವಿಜಯನಗರದ ಮೇಲೆ ದಂಡೆತ್ತಿ ಬಂದರು. ಈ ಸಂದರ್ಭದಲ್ಲಿ ವಿಪನ್ನಾವಸ್ಥೆ ಯಲ್ಲಿದ್ದ ಅಳಿಯ ರಾಮರಾಯನು ವಿಜಾಪುರ ಪ್ರಾಂತ್ಯದಲ್ಲಿದ್ದ ಈ ಹಂಡೆ ಹನುಮಪ್ಪನಾಯಕನ ಕೀರ್ತಿಯನ್ನು ಕೇಳಿದ್ದ. ಅಳಿಯ ರಾಮರಾಯ ಈತನ ಸಹಾಯ ವನ್ನು ಗುಪ್ತಚರರಿಂದ ಪಡೆಯುತ್ತಾನೆ. ಅವನ ಸಹಾಯದಿಂದ ತಿಮ್ಮಯ್ಯನ ಬಂಡಾಯವನ್ನು ಮುರಿದು ವಿಜಯನಗರವನ್ನು ಸ್ವಾಧೀನಪಡಿಸಿಕೊಂಡನು. ತರುವಾಯ ಹನುಮಪ್ಪನಾಯಕನು ನಿಜಾಂ ನವಾಬನನ್ನು ಕೈಸೆರೆ ಮಾಡಿತಂದು ರಾಮರಾಯನಿಗೆ ಕಾಣಿಕೆಯಾಗಿ ಒಪ್ಪಿಸಿದನು. ಅವನ ಧೈರ್ಯ ಸಾಹಸಾದಿಗಳಿಗೆ ಮೆಚ್ಚಿ ರಾಮರಾಯನು ಅವನಿಗೆ ಪೂರ್ವ ಭಾಗದಲ್ಲಿ ನಂದ್ಯಾಲ, ಬುಕ್ಕರಾಯ ಸಮುದ್ರ, ಧರ್ಮಾವರ ಮತ್ತು ಕಣೇಕಲ್ಲು ಗ್ರಾಮಗಳನ್ನು ಮತ್ತು ಪಶ್ಚಿಮ ಭಾಗದಲ್ಲಿ ಬಳ್ಳಾರಿ, ಕುರುಗೋಡು ಗ್ರಾಮಗಳನ್ನು ಉಂಬಳಿ ಹಾಕಿಕೊಟ್ಟನು. *ಹನುಮಪ್ಪನಾಯಕ ಬುಕ್ಕ ರಾಯ ಸಮುದ್ರದಲ್ಲಿ ಬಲವಾದ ಕೋಟೆಯನ್ನು ನಿರ್ಮಾಣ ಮಾಡಿ ತನ್ನ ರಾಜಧಾನಿ ಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿದನು. ಬಾಲದ ಹನುಮಂತಪ್ಪನಾಯಕನಿಗೆ ಐದು ಜನ ಮಕ್ಕಳಿದ್ದರು :

೧. ಅಂಕುಶರಾಯ

೨. ದೇವಪ್ಪನಾಯಕ

೩. ನಿಚ್ಚಮದಲಿಂಗ (ನಿಚ್ಚಮದುವಣಿಗ) ರಾಮಲಿಂಗಪ್ಪ (ರಾಮಪ್ಪ) ನಾಯಕ

೪. ಹಿರಿಯ ಮಲಕಪ್ಪ ನಾಯಕ

೫. ಚಿಕ್ಕ ಮಲಕಪ್ಪ ನಾಯಕ

ಕುರುಗೋಡು ಕೈಫಿಯತ್ತು ಈ ಐದು ಜನರನ್ನು ಹೀಗೆ ವರ್ಣಿಸುತ್ತದೆ

೧. ಅಂಕುಶರಾಯ ಯೀತನು ಬಹು ಧರ್ಮಿಷ್ಟ

೨. ದ್ಯಾವಣ್ಣನಾಯಕನು ಬಹು ಪರಾಕ್ರಮಿ

೩. ನಿಚ್ಚಮದುವಣಿಗ ರಾಮಪ್ಪ ನಾಯಕ ಯೀತನು ಬಹುಭೋಗಿ

೪. ಹಿರೇಮಲಕಪ್ಪ ನಾಯಕ

೫. ಚಿಕ್ಕ ಮಲ್ಲಕಪ್ಪ ನಾಯಕ ಪ್ರಸಿದ್ಧ ಪುರುಷ

ಈ ಹಂಡೆ ಅರಸರನ್ನು ಹೊಗಳುವ 'ಭಟ್ಟಾಂಗಿನಿ ಸಾಹಿತ್ಯ'ದಲ್ಲಿ ಇವರನ್ನು ಪಾಂಡವರಿಗೆ ಹೋಲಿಸಿ ಗುಣಗಾನ ಮಾಡಿದ್ದುದು ಕಂಡು ಬರುತ್ತದೆ.

'ಧರೆಗೆ ಧರ್ಮಜನಂಕುಶ | ಪರಬಲದೊಳ್ ಭೀಮದೇವ |

ಅರ್ಜುನರಾಮ ದುರಧೀರನು ನಕುಲಮಲ್ಲನು |

ನೆರೆಗೆಲೆ ಸಹದೇವ ಚಿಕ್ಕಮಲ್ಕವಜೀರ |'

ಮಹಾಭಾರತದ ಧರ್ಮರಾಜನಿಗೆ ಅಂಕುಶರಾಯನನ್ನು ಹೋಲಿಸಲಾಗಿದೆ. ಭೂಮಂಡಲದಲ್ಲಿ ಧರ್ಮದಿಂದ ಪ್ರಖ್ಯಾತಿ ಹೊಂದಿದ ಧರ್ಮರಾಯನಂತೆ ಅಂಕುಶ ರಾಯನಿದ್ದುದನ್ನು ಶತ್ರುಗಳಿಗೆ ಭೀಮನಂತೆ ಅಪಾರ ಸೈನ್ಯವನ್ನು ಹೊಂದಿದ ದೇವಪ್ಪ ನಾಯಕನ್ನು 'ಪರಬಲದೊಳ್ ಭೀಮದೇವ' ಎಂದು ಹೇಳಿದ ರಾಮಪ್ಪನಾಯಕನನ್ನು ಪರಾಕ್ರಮಿ ಶೂರನಾದ ಅರ್ಜುನನಿಗೆ ಹಾಗೂ ಹಿರೆಮಲಕಪ್ಪ ನಾಯಕ ಮತ್ತು ಚಿಕ್ಕಮಲಕಪ್ಪ ನಾಯಕರು ಮಹಾಭಾರತದ ನಕುಲ ಸಹದೇವರಂತೆ ದೂರದೃಷ್ಟಿ ಯುಳ್ಳವರೆಂದು ಈ ಐದು ಜನ ಅಣ್ಣತಮ್ಮಂದಿರನ್ನು ಪಂಚಪಾಂಡವರಿಗೆ ಹೋಲಿಸಿ ಭಟಾಂಗಿನಿಗಳು ಹೊಗಳುವುದು ವಾಡಿಕೆಯಲ್ಲಿದೆ.

ಹಂಡೆ ರಾಮಪ್ಪನ ಕಾಲದಲ್ಲಿ ಬಳ್ಳಾರಿ ವೈಭವ ಪೂರ್ಣವಾದ ಪಟ್ಟಣವಾಗಿತ್ತು. ಕೋಳೂರು ಶಂಕರಪ್ಪನೆಂಬ ಕವಿ

'ಭಳಿಕೆ ಬಳ್ಳಾರಿಯ ವಿಜಯಲಕ್ಷ್ಮೀ ಇಳೆಯಳು ನಿನ್ನಂಥ ಕಳೆಯ ಕಾಂತೆಯರ ಕಾಣೆ'

ಎಂದು ಹಾಡಿನಲ್ಲಿ ಹೊಗಳಿರುವುದು ಬಳ್ಳಾರಿ ಪ್ರದೇಶ ಹಂಡೆ ರಾಮಪ್ಪನ ಆಳ್ವಿಕೆಯಲ್ಲಿ ಸಂಪತ್‌ಭರಿತ, ಸಮೃದ್ಧವಾದ ಪ್ರದೇಶವಾಗಿತ್ತು ಎಂಬುದಕ್ಕೆ ಶಾಸನ ಆಧಾರಗಳು ಸಿಗುತ್ತವೆ.

ಹಂಡೆ ಮಲಕಪ್ಪನಾಯಕನ ಬಗ್ಗೆ ಗಂಗೆ ಗೌರಿ ಸಂವಾದ ಕೃತಿಯಲ್ಲಿ 'ಹಂಡೆ ಮಲಕನೊಡನೆಯ ಏಕಪತ್ನಿವೃತಸ್ಥ ಕೇಳು ತಂಗಿ!' 'ಆತ ಉಂಡಮನೆಗೆ ಎರಡು ಬಗೆಯ ನೆಲೆ ತಂಗಿ' ಎಂಬ ಉದ್ಗಾರದ ಮಾತುಗಳು ಈತನ ಏಕಪತ್ನಿ ನಿಷ್ಠೆ ಮತ್ತು ಶಿವಭಕ್ತಿಯನ್ನು ತಿಳಿಸುತ್ತದೆ. ಹಂಡೆ ಬಾಲದ ಹನುಮಪ್ಪ ನಾಯಕನ ಐದು ಮಂದಿ ಮಕ್ಕಳು ರಾಜ್ಯವನ್ನು ಹಂಚಿಕೊಂಡ ವಿವರ :

೧. ಅಂಕುಶರಾಯ - ಬಂಕಾಪುರ ಸೀಮೆ, ನಂದ್ಯಾಳ, ಸಿರವಾಳ ಸೀಮೆ
೨. ಹಿರೇಮಲಕಪ್ಪನಾಯಕ - ಅನಂತಪುರ, ಧರ್ಮಾವರ ಸೀಮೆ
೩. ನಿಚ್ಚಮದವಣಿಗ ರಾಮಪ್ಪನಾಯಕ - ರಾಯದುರ್ಗದ ಸೀಮೆ
೪. ದ್ಯಾವಪ್ಪನಾಯಕ - ಕುಂದರ್ಪಿ ಸೀಮೆ
೫. ಚಿಕ್ಕಮಲಕಪ್ಪನಾಯಕ - ಬಳ್ಳಾರಿ, ಕುರುಗೋಡ, ತೆಕ್ಕಲಕೋಟ ಸೀಮೆ

ಈ ಪ್ರದೇಶಗಳನ್ನು ಒಬ್ಬೊಬ್ಬರಿಗೆ ಹಂಚಿಕೊಟ್ಟುದಾಗಿ ಬಳ್ಳಾರಿ, ಕುರುಗೋಡು ಕೈಫಿಯತ್ತಿನಲ್ಲಿ ವಿವರವಿದೆ. ಆದರೆ ಅನಂತಪುರ ಕೈಫಿಯತ್ತಿನಲ್ಲಿ ಹಂಡೆ ಬಾಲದ ಹನುಮಪ್ಪನಾಯಕನಿಗೆ ಇಮ್ಮಡಿ ಹಂಪರಾಯನೆಂಬ ಮಗನಿದ್ದುದು ಮತ್ತು ಅವನ ಮಗ ಮಲಕಪ್ಪನಾಯಕನ ಈತನಿಗೆ ನಾಲ್ಕು ಜನ ಮಕ್ಕಳಿದ್ದುದನ್ನು ತಿಳಿಸುತ್ತದೆ.

೧. ದೇವಪ್ಪನಾಯಕ - ನಂದ್ಯಾಲ ಸೀಮೆ (ತಾಡಪತ್ರಿ ಮೊದ್ದುಜೂರು)
೨. ಚಿಕ್ಕರಾಮಪ್ಪನಾಯಕ - ಬಳ್ಳಾರಿ, ಕುರುಗೋಡು ಮುಂತಾದವು
೩. ನಿಚ್ಚಮದ ಲಿಂಗಪ್ಪನಾಯಕ - ಕುಂದುರ್ಪಿ, ಕಣೇಕಲ್ಲು, ಸೀಮೆ (ರಾಯ ದುರ್ಗ ಧರ್ಮಾವರ ತಾಲೂಕ)
೪. ಇಮ್ಮಡಿ ಹಂಪನಾಯಕ - ಅನಂತಪುರ, ಬುಕ್ಕಪಟ್ಟಣ ಮತ್ತು ಧರ್ಮಾವರ ಸೀಮೆ.

ಹೀಗೆ ಅನಂತಪುರ ಕೈಫಿಯತ್ತಿನ ವಿವರಗಳು ಕುರುಗೋಡು ಬಳ್ಳಾರಿ ಕೈಫಿಯತ್ತಿನ ವಿವರಗಳಿಂದ ಭಿನ್ನವಾಗಿ ಕಂಡುಬರುತ್ತದೆ. ಇಲ್ಲಿ ಬಳ್ಳಾರಿ ಕುರುಗೋಡು ಕೈಫಿಯತ್ತುಗಳಲ್ಲಿ ಬಾಲದ ಹನುಮಪ್ಪನಾಯಕನಿಗೆ ಐದು ಜನ ಮಕ್ಕಳಿದ್ದುದನ್ನು ತಿಳಿಸುತ್ತದೆ. ಅನಂತಪುರ ಪ್ರದೇಶವನ್ನು ಹಿರೇಮಲಕಪ್ಪ ನಾಯಕ ಆಳಿದುದನ್ನು ಇವು ಹೇಳುತ್ತವೆ. ಹಾಗಾಗಿ ಹಿರೇಮಲಕಪ್ಪನಾಯಕ ಬಾಲದ ಹನುಮಪ್ಪ ನಾಯಕ ಐದು

ಮಕ್ಕಳಲ್ಲಿ ಒಬ್ಬನಾಗಿದ್ದನೆಂಬುದು ಸ್ಪಷ್ಟ. ಅನಂತಪುರ ಕೈಫಿಯತ್ತಿನಲ್ಲಿ ಈತ ಮೊಮ್ಮಗನೆಂದು ವಿವರ ಬರುತ್ತದೆ. ಈ ಕುರಿತು ಇನ್ನೂ ಹೆಚ್ಚಿನ ಅಧ್ಯಯನ ನಡೆಯ ಬೇಕಾಗಿದೆ. ಬಾಲದ ಹನುಮಪ್ಪನಾಯಕನಿಂದ ಕ್ರಿ.ಶ.೧೫೧೭ರಿಂದ ಪ್ರಾರಂಭವಾದ ಇತಿಹಾಸ ೧೮೦೦ರವರೆಗೆ ಕೊನೆ ರಾಜ ಸಿದ್ದಪ್ಪನಾಯಕನು ತೀರಿಕೊಂಡನಂತರ ಈ ರಾಜ್ಯದ ಇತಿಹಾಸ ಮುಗಿಯುತ್ತದೆ. ಮುಂದೆ ಆಂಗ್ಲರ ಪ್ರಭುತ್ವ ಪ್ರಾರಂಭವಾಗುತ್ತದೆ.

ಕ್ರಿ.ಶ. ೧೮೦೦ರಲ್ಲಿ ಬಳ್ಳಾರಿ, ಅನಂತಪುರ, ಕಡಪ ಕರ್ನೂಲು ಜಿಲ್ಲೆಗಳು ನಿಜಾಮನಿಂದ ಇಂಗ್ಲಿಷರಿಗೆ ಕೊಡಲ್ಪಟ್ಟವು. ಅಂದಿನಿಂದ ದತ್ತ ಮಂಡಳಗಳೆಂದು ವ್ಯವಹರಿಸಲ್ಪಡುತ್ತಿದ್ದು ಮದ್ರಾಸ್ ಪ್ರಾಂತಕ್ಕೆ ಸೇರಿಸಲ್ಪಟ್ಟವು. ಇಂಗ್ಲೀಷ್ ಸರ್ಕಾರ ದಿಂದ ಪ್ರತಿನಿಧಿಯಾಗಿದ್ದ ಮನ್ರೊ ಅನಂತಪುರವನ್ನು ತನ್ನ ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡು ಈ ಮಂಡಲವನ್ನು ಸುವ್ಯವಸ್ಥೆಗೊಳಿಸಿದನು. ಹಂಡೆ ವಂಶದವರು ೧೮೬೦ರವರೆಗೂ ಇಂಗ್ಲೀಷ್ ಸರ್ಕಾರದಿಂದ ಜೀವನಾಂಶಪಡೆಯುತ್ತಬಂದರು. ಈ ವಂಶದ ಪುರುಷ ಸಂತತಿಯಲ್ಲಿ ಕೊನೆಯವನಾದ ವಸಂತರಾಯ ತೀರಿದ ಮೇಲೆ ಈತನ ಹೆಂಡತಿ ಕಲ್ಯಾಣಮ್ಮ ದತ್ತು ತೆಗೆದುಕೊಳ್ಳುವ ಸಂದರ್ಭದಲ್ಲಿ ಈ ವಂಶದ ವಾರಸುದಾರರು ಎಲ್ಲೆಲ್ಲಿರುವರೆಂಬ ಬಗ್ಗೆ ಮನ್ರೊ ದೊರೆಯಿಂದ ವಿಚಾರಣೆ ನಡೆಸ ಲ್ಪಟ್ಟಿತು. ಈ ವಿಚಾರಣೆಯಲ್ಲಿ ಈ ವಂಶದ ಮೂಲಪುರುಷನು ವಿಜಾಪುರ ತಾಲೂಕಿನ ಬಾಗೇವಾಡಿ ಪರಗಣೆಯ ಮುತ್ತಗಿ ಹಾಗೂ ಬಾಡವಡಗಿ ಗ್ರಾಮಗಳ ನಾಯಕರಾದ ಲಕ್ಕಿರಾಯನೆಂಬುವವನೆಂದೂ ಆತನ ಹಿರೇಮಗನೇ ಈ ಬಾಲದ ಹನುಮಪ್ಪ ನಾಯಕನೆಂದು ಈತನೇ ಬಳ್ಳಾರಿ ಅನಂತಪುರ ಪ್ರದೇಶವನ್ನು ಆಳಿದನೆಂದು ವಿಜಯ ನಗರ ಸಾಮ್ರಾಜ್ಯದ ಅಧೀನವಾಗಿ ನಿಷ್ಠೆಯಿಂದ ಸಾಮ್ರಾಜ್ಯದ ಅಳಿವಿನ ಸಂದರ್ಭದಲ್ಲಿ ಪರಾಕ್ರಮ ತೋರಿ ಮುಸ್ಲಿಮ ಅರಸರ ಕೈವಶವಾಗುವ ವಿಜಯನಗರವನ್ನು ರಕ್ಷಿಸಿದ ಸಾಹಸಿ ಎಂದು ತಿಳಿದುಬರುತ್ತದೆ. ಕಿರಿಯ ಮಗ ಬಳಗನಾಯಕನ ಸಂತತಿಯವರು ವಿಜಾಪುರದ ಪ್ರಾಂತದಲ್ಲಿ ವಾಸಿಸುವುದಾಗಿ ತಿಳಿದುಬಂದುದರಿಂದ ಅವನ ಸಂತತಿ ಯವನಾದ ಸಿದ್ಧರಾಮಪ್ಪನೆಂಬ ಹುಡುಗನನ್ನು ಕಲ್ಯಾಣಮ್ಮ ದತ್ತಕ ಪಡೆದುಕೊಳ್ಳಲಿಕ್ಕೆ ಮನ್ರೊದೊರೆ ಅಪ್ಪಣೆ ಕೊಟ್ಟ ವಿವರಗಳು ಕೈಫಿಯತ್ತಿನಲ್ಲಿ ಸಿಗುತ್ತವೆ.

ಸುಮಾರು ಮುನ್ನೂರು ವರ್ಷದ ಇತಿಹಾಸ ಈ ಪಾಳೆಗಾರರಿಗೆ ಇದೆ.

ಗ್ರಂಥ ಋಣ

1. ಡಾ.ಎಂ.ಕಲಬುರ್ಗಿ(ಸಂ): *ಕರ್ನಾಟಕದ ಕೈಫಿಯತ್ತುಗಳು*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ , 1994

2. ತಲ್ಲೂರು ರಾಯನಗೌಡ (ಸಂ) : ಕರ್ನಾಟಕ ಗಡಿಗೆರೆಗಳು, ಜನತಾ ಸೇವಕ ಸಮಾಜ, ಬೈಲಹೊಂಗಲ, 1949

3. ಡಾ.ಎಸ್. ವಿದ್ಯಾಶಂಕರ (ಸಂ): *ನೂತನ ಚೇತನ*, ನೂತನ ಪಟ್ಟಾಧಿಕಾರಿ ಮಹೋತ್ಸವ ಸಮಿತಿ, ಶ್ರೀ ಶೈಲ ಜಗದ್ಗುರು ನಿಡುಮಾಮಿಡಿ ನಿವಾಸ, ನಂ. 49, ಹ.ಬ. ಸಮಾಜ ಬೀದಿ, ಬಸವನಗುಡಿ, ಬೆಂಗಳೂರು - 4, 1990

4. ಡಾ.ಎಸ್.ಸಿ.ಪಾಟೀಲ (ಸಂ) *ಹಂಡೆ ಅರಸರು ಮನೆತನ ವಂಶಾವಳಿ*, ಸಂಸ್ಕೃತಿ ಅಧ್ಯಯನ ಪೀಠ, ವಿಜಾಪುರ, 2004

೩೨. ವಿಜಯನಗರ ಸಾಮ್ರಾಜ್ಯದ ಕಾಲದ ೧೬ನೇ ಶತಮಾನದ ಕೆಲವು ನಾಯಕ ಮನೆತನಗಳ ಅಧ್ಯಯನ

ಡಾ. ಡಿ.ಎನ್. ಯೋಗೀಶ್ವರಪ್ಪ

ದಕ್ಷಿಣ ಭಾರತದಲ್ಲಿ ಅಮರನಾಯಕರು ವಿಜಯನಗರ ಸಾಮ್ರಾಜ್ಯದಲ್ಲಿ ರಾಜಕೀಯೋ - ಮಿಲಿಟರಿ ವ್ಯವಸ್ಥೆಯಲ್ಲಿ ಬಹಳ ಮುಖ್ಯಸ್ಥಾನವನ್ನು ಪಡೆದುಕೊಂಡಿ ದ್ದಾರೆ. ಇದುವರೆಗೆ ರಚನೆಯಾಗಿರುವ ವಿಜಯನಗರದ ಬಗೆಗಿನ ಬಹುಪಾಲು ಇತಿಹಾಸ ಲೇಖನಗಳು ಅಮರನಾಯಕರನ್ನು ದೊಡ್ಡ ಅಥವಾ ಸಣ್ಣಪ್ರಮಾಣದ ಸ್ಥಳೀಯ ಮತ್ತು ಸ್ವತಂತ್ರವಾದ ಪ್ರಭುಗಳೆಂದು ಒಮ್ಮತದಿಂದ ಹೇಳಿವೆ. ಆದರೆ ಈ ಪ್ರಬಂಧವು ತಮಿಳುಭಾಷಿಕರ ಪ್ರದೇಶದ ಶೆಂಜಿನಾಯಕರನ್ನು ಮತ್ತು ಕನ್ನಡ ಭಾಷಿಕ ಪ್ರದೇಶಗಳಾದ ಬೇಲೂರು ಮತ್ತು ನರಸಿಂಹಪುರದ ನಾಯಕರನ್ನು ವ್ಯಾಪಕ ವಾಗಿ ಅಧ್ಯಯನ ಮಾಡುತ್ತಾ ಅಮರನಾಯಕರ ವೈಲಕ್ಷಣಗಳನ್ನು ಪರಿಶೀಲಿಸುವ ಪ್ರಯತ್ನವನ್ನು ಮಾಡಿದೆ. ಮೊದಲನೆಯದಾಗಿ ಅರವೀಡುಕಾಲದ ವಿಜಯನಗರ ಸಾಮ್ರಾಜ್ಯದಲ್ಲಿ ತಮ್ಮ ವಂಶ ಪರಂಪರಾಗತ ಆಳ್ವಿಕೆ ನಡೆಸಿದ ಬೇಲೂರು, ನರಸಿಂಹಪುರ ಮತ್ತು ಶೆಂಜಿನಾಯಕ ಮನೆತನಗಳ ಸಂಬಂಧವನ್ನು ಸ್ಪಷ್ಟಪಡಿಸುವುದು. ಎರಡನೆಯದಾಗಿ ಈ ಮೂರು ಮನೆತನಗಳು ತಮ್ಮ ಪ್ರದೇಶದ ಮೇಲೆ ವಂಶಪಾರಂಪರ್ಯ ಆಳ್ವಿಕೆ ಆರಂಭಿಸಿದ ಕಾಲವನ್ನು ಸಮಕಾಲೀನ ಶಾಸನಗಳ ಆಧಾರದ ಮೇಲೆ ಪರಿಶೀಲಿಸುವುದಾಗಿದೆ.

ಹಾಸನ ಜಿಲ್ಲೆಯ ಬೇಲೂರು ಇಂದು ತಾಲ್ಲೂಕು ಕೇಂದ್ರವಾಗಿದ್ದು, ಹೊಯ್ಸಳರ ಕಾಲದಲ್ಲಿ ಆ ರಾಜ್ಯದ ರಾಜಧಾನಿಯಾಗಿ ಮೆರೆದ ಭವ್ಯ ಶಿಲ್ಪಕಲೆಯ ತವರೂರು. ೧೬ನೇ ಶತಮಾನದಲ್ಲಿ ಬೇಲೂರಿನ ನಾಯಕರು ಈ ಪ್ರದೇಶದ ಸುತ್ತಮುತ್ತಲಿನ ಪ್ರಾಂತ್ಯಗಳನ್ನು ವಿಜಯನಗರದವರಿಂದ ಅಮರ ಮಾಗಣೆಯಾಗಿ ಪಡೆದುಕೊಂಡು ಕ್ರಿ.ಶ.೧೬೯೭ರವರೆಗೆ ಆಳ್ವಿಕೆ ನಡೆಸಿ ಮೈಸೂರು ಒಡೆಯರಿಗೆ ಶರಣಾದರು. ಇದರ ಇತಿಹಾಸವೆಂದರೆ, ಬೇಲೂರಿನ ಸ್ವಾಮ್ಯವನ್ನು ಪಡೆಯಲು ಕಿತ್ತಾಡಿದ ರಾಜರು ನಡೆಸಿದ ಯುದ್ಧದ ನಿರೂಪಣೆಯೂ ಆಗುತ್ತದೆ. ಬಿಜಾಪುರದ ಆದಿಲ್ ಶಾಹಿಗಳ, ಇಕ್ಕೇರಿ ಅರಸರ, ಮೈಸೂರು ಒಡೆಯರ ದಾಳಿಗೆ ಸಿಕ್ಕಿ ಕ್ರಿ.ಶ.೧೫೦೦ ರಿಂದ ಕ್ರಿ.ಶ. ೧೬೯೭ ರವರೆಗೆ ತನ್ನುಳಿವಿಗಾಗಿ ಹೋರಾಟ ನಡೆಸಿದ ರೋಚಕ ಸಂಗತಿಯೇ ಆಗಿದೆ.

ನರಸಿಂಹಪುರವನ್ನು ಇಂದು ಹೊಳೇನರಸೀಪುರ ಎಂದು ಕರೆಯಲಾಗುತ್ತಿದ್ದು ಇದು ಕೂಡ ಹಾಸನ ಜಿಲ್ಲೆಯ ತಾಲ್ಲೂಕು ಕೇಂದ್ರವಾಗಿದೆ. ಮೈಸೂರಿನ ಕಿರಿಯ ರಾಜವಂಶಗಳ ಪೈಕಿ ಇವರು ಮುಖ್ಯರಾದವರಾಗಿದ್ದಾರೆ. ಕ್ರಿ.ಶ. ೧೫೪೦ ರಿಂದ ಕ್ರಿ.ಶ. ೧೬೬೩ರವರೆಗೆ ಅಸ್ತಿತ್ವದಲ್ಲಿದ್ದ ಈ ಮನೆತನ ಹೊಳೆನರಸೀಪುರ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳ ಮೇಲೆ ಹಿಡಿತ ಸಾಧಿಸಿ ಕ್ರಿ.ಶ. ೧೬೬೩ರಲ್ಲಿ ಮೈಸೂರಿನ ದೊಡ್ಡ ದೇವರಾಜ ಒಡೆಯರೊಂದಿಗೆ ನಡೆದ ಕದನದಲ್ಲಿ ಸೋತು ಮೈಸೂರು ರಾಜ್ಯದಲ್ಲಿ ಲೀನವಾಯಿತು.

ಈ ಎರಡೂ ಮನೆತನಗಳ ಸಂಬಂಧದ ಬಗ್ಗೆ ಇದುವರೆಗಿನ ಕೆಲ ಸಂಶೋಧನೆಗಳು ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿವೆ.

ಎಪಿಗ್ರಾಫಿಯಾ ಕರ್ನಾಟಕ ಸಂಪುಟ ೮ ರಲ್ಲಿ[1]

'ಹೊಳೆನರಸೀಪುರ ಪ್ರಭುಗಳು ಬೇಲೂರಿನ ಸುತ್ತಮುತ್ತ ಆಳುತ್ತಿದ್ದ ಪ್ರಭುಗಳ ವಂಶದ ಬಯ್ಯಪ್ಪನಾಯಕ ಎಂಬಾತನ ಸಂತತಿಗೆ ಸೇರಿದವರೆಂಬುದು ಶಾಸನಗಳ ಸೂಕ್ಷ್ಮಾವಲೋಕನದಿಂದ ತಿಳಿದು ಬರುತ್ತದೆ. ಆದರೆ ಎರಡು ಮೂರು ತಲೆಮಾರಿನ ನಂತರ ಸೋದರರು ಬೇರ್ಪಟ್ಟು ಅವರಲ್ಲೊಬ್ಬ ಹೊಳೆನರಸೀಪುರದಿಂದ ತನ್ನ ಸ್ವತಂತ್ರ ಆಳ್ವಿಕೆಯನ್ನು ಆರಂಭಿಸಿದ' ಎಂದು ಉಲ್ಲೇಖವಾಗಿದೆ.

ಎಪಿಗ್ರಾಫಿಯಾ ಸಂಪುಟ ೯ ರಲ್ಲಿ

ಹೊಳೆನರಸೀಪುರ ಪ್ರಭುಗಳು ಮತ್ತು ಬೇಲೂರು ನಾಯಕರು ಎಂದು ಕರೆಯಿಸಿ ಕೊಳ್ಳುವ ನಾಯಕ ಪ್ರಭುಗಳನ್ನು ಬೇಲೂರು ನಾಯಕರು ಎಂದು ಕರೆದಿದೆ. ಆದುದ ರಿಂದ ಬೇಲೂರು ನಾಯಕರ ವಂಶಾವಳಿಯ ನಿರೂಪಣೆಗೆ ಈ ಮನೆತನಗಳ ಶಾಸನಗಳನ್ನು ನಾವು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಈ ಮನೆತನದ ಚರಿತ್ರೆಯನ್ನು ಬಯಪ್ಪನಾಯಕನ ಪುತ್ರ ಎರ್ರಕೃಷ್ಣಪ್ಪನಾಯಕನಿಂದ ಆರಂಭಿಸುತ್ತವೆ.[2] ಅಲ್ಲದೆ ಸಂಪಾದಕರು ಕೊಟ್ಟಿರುವ ವಂಶಾವಳಿಯಲ್ಲಿ ಎರ್ರಕೃಷ್ಣಪ್ಪನಾಯಕನ ಮಗ ವೆಂಕಟಾದ್ರಿ ನಾಯಕನು ಕೃಷ್ಣಪ್ಪನಾಯಕನಿಗೂ ಮತ್ತು ಲಕ್ಷ್ಮಪ್ಪ ನಾಯಕನಿಗೂ ಕ್ರಮೇಣ ಬೇಲೂರು ಮತ್ತು ನರಸಿಂಹಪುರ ಹಂಚಿಕೊಟ್ಟರೆಂದು ಹೇಳಲಾಗಿದೆ.[3]

ಹಂಪಿ ಕನ್ನಡ ವಿವಿಯ ಕರ್ನಾಟಕ ಚರಿತ್ರೆ ಸಂಪುಟ ೩ ರಲ್ಲಿ[4]

'ಬೇಲೂರು ಕುಟುಂಬವು 16ನೇ ಶತಮಾನದ ಕೊನೆಯಲ್ಲಿ ಹೊಳೇನರಸೀಪುರ ದಿಂದ ಪ್ರತ್ಯೇಕಗೊಂಡು ಸ್ವತಂತ್ರವಾಗಿ ರಾಜ್ಯವಾಳಲು ಪ್ರಾರಂಭಿಸಿದ ಕುಟುಂಬ.'

ಅಂದರೆ ಈ ಮೇಲಿನ ಎಲ್ಲಾ ಅಭಿಪ್ರಾಯಗಳು ಈ ಎರಡೂ ಮನೆತನಗಳು ಮೂಲತಃ ಒಂದಾಗಿದ್ದು ಕ್ರಮೇಣ ಎರಡಾಗಿ ಬೇರ್ಪಟ್ಟವು ಮತ್ತು ಇವೆರಡರ ಮಧ್ಯೆ ನಿಕಟವಾದ ರಕ್ತ ಸಂಬಂಧವಿತ್ತು ಎಂಬುದನ್ನು ಸೂಚಿಸುತ್ತವೆ.

ಆದರೆ ಈ ಎರಡೂ ನಾಯಕ ಮನೆತನದವರು ಹಾಕಿಸಿದ ಶಾಸನಗಳಲ್ಲಿ ಅವರವರ ವಂಶವೃಕ್ಷಗಳನ್ನು ಸೂಕ್ಷ್ಮವಾಗಿ ಕೂಲಂಕುಷವಾಗಿ ಅಧ್ಯಯನ ಮಾಡಿ ನೋಡಿದರೆ ಅವುಗಳಲ್ಲಿ ಹೊಂದಾಣಿಕೆ ಇಲ್ಲದಿರುವುದು ಕಂಡು ಬರುತ್ತದೆ. ಇದುವರೆಗಿನ ಸಂಶೋಧಕರು ೧೬ನೇ ಶತಮಾನದ ಉತ್ತರಾರ್ಧದಲ್ಲಿ ಆಳ್ವಿಕೆ ನಡೆಸುತ್ತಿದ್ದ ವೆಂಕಟಾದ್ರಿ ನಾಯಕ ಒಬ್ಬನೇ ಎಂದು ಖಚಿತವಾಗಿ ನಂಬಿದ್ದಾರೆ. ವೆಂಕಟಾದ್ರಿ ನಾಯಕ ಹಾಕಿಸಿರುವ ಶಾಸನಗಳಲ್ಲಿ ಅವನ ತಂದೆಯ ಹೆಸರು ಎರಡು ರೀತಿ ಇರುವುದನ್ನು ಗುರ್ತಿಸಿದ್ದರೂ ಅವು ಒಬ್ಬ ವ್ಯಕ್ತಿಗೆ ಇರುವ ಎರಡು ಹೆಸರುಗಳೆಂದು ಹೇಳಿ ಆ ವಿಷಯಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟಿಲ್ಲ. ಈಗ ನಾವು ಮೊದಲು ವೆಂಕಟಾದ್ರಿನಾಯಕ ಇಲ್ಲವೆ ಅವನ ಮಕ್ಕಳು ಹಾಕಿಸಿದ ಶಾಸನಗಳಲ್ಲಿನ ವಂಶವೃಕ್ಷಗಳನ್ನು ಸ್ಥೂಲವಾಗಿ ಎರಡು ಗುಂಪುಗಳಾಗಿ ವಿಂಗಡಿಸಿ ಪರಿಶೀಲಿಸೋಣ.

ಮೊದಲನೆಯದಾಗಿ,

I ಹಡಪ ಪೋತ ನಾಯಕರ ಮಗ ಎರಕೃಷ್ಣಪ್ಪನಾಯಕರ ಕೂಮಾರ ವೆಂಕಟಾದ್ರಿ ನಾಯಕರೂ ಸ್ವಾಮಿಯ ವಸಂತೋತ್ಸವದ ಉಯ್ಯಾಲೆ ಮಂಟಪ ಅಂಕಣ ೧೫ ಸಮರ್ಪಿಸಿದೆವು.[5]

ಕಾಶ್ಯಪಗೋತ್ರ ಪೋತನಾಯಕರ ಪೌತ್ರರಾದ ಯರಕೃಷ್ಣಯನಾಯಕರ ಪುತ್ರರಾದ ವೆಂಕಟಾದ್ರಿನಾಯಕ[6]

ಮೇಲೆ ತಿಳಿಸಿದ ಎರಡೂ ದಾಖಲೆಗಳಿಂದ *ಪೋತಪ್ಪ - ಎರಕೃಷ್ಣಪ್ಪ- ವೆಂಕಟಾದ್ರಿ* ಎಂಬ ವಂಶವೃಕ್ಷವನ್ನು ರಚಿಸಬಹುದು (I ಮೊದಲನೆ) ಇಲ್ಲಿ ವೆಂಕಟಾದ್ರಿನಾಯಕನ ತಂದೆಯಾದ ಕೃಷ್ಣಪ್ಪನಾಯಕನಿಗೆ ತನ್ನ ಹೆಸರಿನ ಮೊದಲು 'ಎರ' ಎಂಬ ವಿಶೇಷಣ ಇರುವುದನ್ನು ಗಮನಿಸಬೇಕಾಗಿದೆ.

ಎರಡನೆಯದಾಗಿ

II ಬಯ್ಯಪ್ಪನಾಯಕರ ಕೃಷ್ಣನಾಯಕರ ಕೂಮಾರ ವೆಂಕಟಪ್ಪನಾಯಕಯ್ಯನವರು[7]

ವೆಂಕಟಾದ್ರಿನಾಯಕರ ಕೂಮಾರ ಕೃಷ್ಣಪ್ಪನಾಯಕರು ತಮ್ಮ ಮುತ್ತಯ್ಯರಾದ ಬಯ್ಯಪ್ಪನಾಯಕರ ಕೃಷ್ಣಪ್ಪನಾಯಕರಿಗೆ[8]

ಶ್ರೀಮತು ಕೃಷ್ಣಪ್ಪನಾಯಕರ ವೆಂಕಟಾದ್ರಿನಾಯಕರ ಲಕ್ಷ್ಮಪ್ಪನಾಯಕರು [9]

ಈ ದಾಖಲೆಗಳಿಂದ '*ಬಯ್ಯಪ್ಪ -ಕೃಷ್ಣಪ್ಪ- ವೆಂಕಟಾದ್ರಿ*' ಎಂಬ ವಂಶವೃಕ್ಷವನ್ನು ರಚಿಸಬಹುದು

(II ಎರಡನೆಯ)

ಮೇಲಿನ ಎರಡೂ ವಂಶವೃಕ್ಷಗಳನ್ನು ಗಮನಿಸಿದಾಗ ಮೊದಲನೆ ವಂಶ ವೃಕ್ಷದಲ್ಲಿ ವೆಂಕಟಾದ್ರಿನಾಯಕನ ತಾತನ ಹೆಸರು ಪೋತಪ್ಪ ಎಂಬ ಹೆಸರಿದ್ದರೆ, ಎರಡನೇ ವಂಶ ವೃಕ್ಷದಲ್ಲಿ ವೆಂಕಟಾದ್ರಿ ನಾಯಕನ ತಾತನ ಹೆಸರು ಬಯ್ಯಪ್ಪ ಎಂದು ದಾಖಲಾಗಿದೆ. ಅಲ್ಲದೆ ವೆಂಕಟಾದ್ರಿ ನಾಯಕನ ತಂದೆಯ ಹೆಸರಿನ ಜೊತೆ ಮೊದಲನೇ ವಂಶವೃಕ್ಷದಲ್ಲಿ 'ಎರ' ಎಂಬ ವಿಶೇಷಣವಿದ್ದರೆ, ಎರಡನೆಯದರಲ್ಲಿ ಕೇವಲ ಕೃಷ್ಣಪ್ಪ ಎಂದಿದೆ.

ಇಲ್ಲಿ ಗಮನಿಸಬೇಕಾದ ಮತ್ತೊಂದು ಪ್ರಮುಖ ಅಂಶವೆಂದರ, ಮೊದಲನೇ ವಂಶವೃಕ್ಷವನ್ನು ಒಳಗೊಂಡ ಶಾಸನಗಳು ಬೇಲೂರು ನಾಯಕರ ಆಳ್ವಿಕೆಗೆ ಒಳಪಟ್ಟ ಪ್ರದೇಶದಲ್ಲಿಯೂ ಎರಡನೇ ವಂಶವೃಕ್ಷವನ್ನು ಒಳಗೊಂಡ ಶಾಸನಗಳು ನರಸಿಂಹಪುರ ನಾಯಕರ ಆಳ್ವಿಕೆಗೆ ಸೇರಿದ ಪ್ರದೇಶಗಳಲ್ಲಿಯೂ ದೊರಕಿರುವುದಾಗಿದೆ. ಅಂದರೆ ೧೬ನೇ ಶತಮಾನದ ಉತ್ತರ ಭಾಗದಲ್ಲಿ ಸಮಕಾಲೀನರಾಗಿ ಇಬ್ಬರು ವೆಂಕಟಾದ್ರಿ ನಾಯಕರು ಇದ್ದು ಒಬ್ಬ ನರಸಿಂಹಪುರದಲ್ಲೂ ಇನ್ನೊಬ್ಬ ಬೇಲೂರು ಪಟ್ಟಣದಲ್ಲೂ ನಿಂತು ತಮ್ಮ ತಮ್ಮ ಆಳ್ವಿಕೆಯನ್ನು ಮಾಡುತ್ತಿದ್ದರೆನ್ನಬಹುದು.

ಅಂದರೆ ಮೊದಲನೇ ವಂಶವೃಕ್ಷ ಬೇಲೂರು ನಾಯಕರದ್ದಾದರೆ ಎರಡನೇ ವಂಶವೃಕ್ಷ ನರಸಿಂಹಪುರ ನಾಯಕರದಾಗುತ್ತದೆ. ಒಬ್ಬ ವ್ಯಕ್ತಿಗೆ ಎರಡು ಹೆಸರುಗಳಿದ್ದವೆಂಬ ಆಧಾರರಹಿತವಾದ ಊಹೆಯ ಮೇಲೆ ಎರಡೂ ವಂಶವೃಕ್ಷಗಳು ಒಂದೇ ಎಂದು ಹೇಳುವ ಅಗತ್ಯತೆ ಕಂಡುಬರುವುದಿಲ್ಲ. ಬೇಲೂರು ವೆಂಕಟಾದ್ರಿ ನಾಯಕನ ತಂದೆ 'ಎರ' ಕೃಷ್ಣಪ್ಪ, ನರಸಿಂಹಪುರ ವೆಂಕಟಾದ್ರಿ ನಾಯಕನ ತಂದೆ ಕೃಷ್ಣಪ್ಪನಾಯಕ ಇಬ್ಬರೂ ಬೇರೆ ಬೇರೆಯಾಗಿದ್ದರು. ಹಾಗೆಯೇ ಪೋತಪ್ಪನಾಯಕ ಬೇರೆ ಬಯ್ಯಪ್ಪ ನಾಯಕ ಬೇರೆ, ಬಯ್ಯಪ್ಪ ಎಂಬುದು ಪೋತಪ್ಪನ ಪರ್ಯಾಯ ಹೆಸರಾಗಲು ಸಾಧ್ಯವಿಲ್ಲ.

ಈ ಎರಡೂ ಮನೆತನಗಳಿಗೆ ಸಂಬಂಧಪಟ್ಟ ೧೭ನೇ ಶತಮಾನದ ಶಾಸನಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಎರಡೂ ನಾಯಕ ಮನೆತನಗಳ ವಂಶವೃಕ್ಷಗಳು ಕೂಡ ಸಹಜವಾಗಿಯೂ ಬೇರೆ ಬೇರೆಯಾಗಿದೆ. ನರಸಿಂಹಪುರ ನಾಯಕರು ಹಾಕಿಸಿದ ಕೆಲವು ಶಾಸನಗಳಲ್ಲಿ ಅವರ ವಂಶವೃಕ್ಷವು ಬಯ್ಯಪ್ಪನಾಯಕರ ಕೃಷ್ಣಪ್ಪ ನಾಯಕನಿಂದ ಆರಂಭವಾಗುತ್ತದೆ.

ಉದಾ :

ಬೈಯಪ್ಪನಾಯಕರ ಕೃಷ್ಣಪ್ಪನಾಯಕರವರ ಪ್ರಪೌತ್ರರಾದ ವೆಂಕಟಾದ್ರಿನಾಯಕರವರ ಪೌತ್ರರಾದ ಲಕ್ಷ್ಮಪ್ಪನಾಯಕರ ಪುತ್ರರಾದ ದೇವ ಬ್ರಾಹ್ಮಣ ಪ್ರತಿಪಾಲಕರಾದ ನಾರಸಿಂಹನಾಯಕಯ್ಯನವರು (ಎಕ ೮ ಹೊಳೆನರಸೀಪುರ ಕ್ರಿ.ಶ. ೧೧, ಕ್ರಿ.ಶ.೧೬೫೮)

ಶ್ರೀ ಮತ್ಕಾಶ್ಯಪಗೋತ್ರದ ಬಯಪ್ಪನಾಯಕರವರ ಕೃಷ್ಣಪ್ಪನಾಯಕನವರ ವೆಂಕಟಾದ್ರಿ ನಾಯಕರವರ ಪೌತ್ರರಾದ ಲಕ್ಷ್ಮಪ್ಪನಾಯಕರವರ ಪುತ್ರರಾದ ನಾರಸಿಂಹನಾಯಕಯ್ಯ (ಎಕ ೮ ಹೊಳೆನರಸೀಪುರ ನಂ. ೩೮ ಕ್ರಿ.ಶ.೧೬೫೫)

ಕಾಶ್ಯಪಗೋತ್ರದ ಬಯ್ಯಪ್ಪನಾಯಕರವರ ಕ್ರಿಷ್ಣಪನಾಯಕರವರ ಪ್ರಪೌತ್ರ ವೆಂಕಟಾದ್ರಿನಾಯಕರವರ ಸುಪಾವುತ್ರ... (ಎಕ ೭೮ ಹೊಳೆನರಸೀಪುರ ೫೫ ಕ್ರಿ.ಶ.೧೬೫೫)

ಶ್ರೀಮತ್ಕಾಶ್ಯಪ ಗೋತ್ರದ ಬಯಪ್ಪನಾಯಕರವರ ಕೃಷ್ಣಪ್ಪನಾಯಕರವರ ಪ್ರಪೌತ್ರರಾದ ವೆಂಕಟಾದ್ರಿ ನಾಯಕರವರ ಪೌತ್ರರಾದ ಲಕ್ಷ್ಮಪ್ಪನಾಯಕರವರ ಪುತ್ರರಾದ ಮಣಿ ನಾಗಪುರವರಾಧೀಶ್ವರ ಸಿಂಧುಗೋವಿಂದ ಧವಳಾಂಕಭೀಮ, ಹಿಮಕರಗಂಡ, ಬಿರಿಯಿದ ಸಪ್ತಾಂಗ ಹರಣ, ಸಂಗ್ರಾಮಧನಂಜಯ, ಸಾಹಸ ವಿಕ್ರಮಾರ್ಕ ದಾನ ರಾಧೇಯತ್ಯಾದಿ ಬಿರುದ ರಾಜಿ ವಿರಾಜಮಾನರಾದ ಸಕಲಧರ್ಮ ಪ್ರತಿಪಾಲಕರಾದ ದೇವ ಬ್ರಾಹ್ಮಣ ಪ್ರತಿಪಾಲಕರಾದ ನಾರಸಿಂಹನಾಯಕರ (ಎಕ ೮ ಹೊಳೆನರಸೀಪುರ ನಂ. ೧೧೪ ಕ್ರಿ.ಶ.೧೬೫೫)

ಕಾಶ್ಯಪಗೋತ್ರದ ಬಯ್ಯಪ್ಪನಾಯಕರ ಕೃಷ್ಣಪ್ಪನಾಯಕರ ಪ್ರಪೌತ್ರರಾದ ವೆಂಕಟಾದ್ರಿ ನಾಯಕರ ಪೌತ್ರರಾದ ಲಕ್ಷ್ಮಪ್ಪನಾಯಕರ ಪುತ್ರರಾದ ನಾರಸಿಂಹ ನಾಯಕ ರವರು (ಎಕ 8 ಹೊಳೆನರಸೀಪುರ ನಂ. ೧೧೭, ಕ್ರಿ.ಶ. ೧೭ನೇ ಶತಮಾನ)

ಇಲ್ಲಿ ವೆಂಕಟಾದ್ರಿಯ ತಂದೆಯಾದ ಕೃಷ್ಣಪ್ಪನ ಹೆಸರಿನ ಜೊತೆಯಲ್ಲಿ 'ಎರ' ಎಂಬ ವಿಶೇಷಣ ಇಲ್ಲದಿರುವುದನ್ನು ಗಮನಿಸಬೇಕು. ಕ್ರಿ.ಶ. 1665ರಲ್ಲಿ ಅವರು ಕೊಟ್ಟ ಎರಡು ತಾಮ್ರಪಟಗಳಲ್ಲಿ ಬಯ್ಯಪ್ಪನ ತಾತನಾದ ಶ್ರೀಗಿರಿಯನ್ನು ಮತ್ತು ಅವನ ತಂದೆಯಾದ ತಿಮ್ಮಪ್ಪನನ್ನು ಕೂಡ ಉಲ್ಲೇಖಿಸಲಾಗಿದೆ[10] ಬೇಲೂರು ನಾಯಕರು ೧೭ನೇ ಶತಮಾನದಲ್ಲಿ ಹಾಕಿಸಿದ ಅನೇಕ ಶಾಸನಗಳಲ್ಲಿ.

'ಕೃಷ್ಣದೇವರಾಯ ರೈಯನವರು ನಮ್ಮ ವೃದ್ಧ ಪ್ರಪಿತಾಮಹರಾದ ಸಿಂಧು ಗೋವಿಂದ ಹಿಮಕರಗಂಡ ಧವಳಾಂಕ ಭೀಮ ಮಣಿನಾಗಪುರ ವರಾಧೀಶ್ವರ ಬಿರುದ ಸಪ್ತಾಂಗ ಹರಣರಾದ ಯೆರ ಕೃಷ್ಣಪ್ಪ ನಾಯಕರಿಗೆ ಪಾಲಿಸ್ತ ಬೇಲೂರು ಸೀಮೆ ಎಂದು ದಾಖಲಿಸಲಾಗಿದೆ'[11]

ಈ ಉಲ್ಲೇಖ ವಾಸ್ತವಿಕ ಇತಿಹಾಸಕ್ಕೆ ಭಿನ್ನವಾದ ಕಲ್ಪನೆಯೆಂದು ಹೇಳಬೇಕಾಗು ತ್ತದೆ. ಆದರೆ ಆ ಕಲ್ಪನೆಯ ಮೂಲಕ ಬೇಲೂರು ನಾಯಕರು ಎರಕೃಷ್ಣಪ್ಪ ನಾಯಕ ನನ್ನು ತಮ್ಮ ಮನೆತನದ ಮೂಲ ಪುರುಷನನ್ನಾಗಿ ಪರಿಗಣಿಸುತ್ತಿದ್ದುದು ನಮಗೆ ಗೊತ್ತಾಗುತ್ತದೆ.

ಮೇಲಿನ ವಿವರಗಳಿಂದ ಬೇಲೂರು ನಾಯಕರು ಮತ್ತು ನರಸಿಂಹಪುರ ನಾಯಕ

ರಲ್ಲಿ ನೇರವಾದ ರಕ್ತಸಂಬಂಧ ಇರಲಿಲ್ಲವೆಂದು ಹೇಳಬಹುದು. ಆದರೆ ಅವರ ಸಾಮಾಜಿಕ ಹಿನ್ನೆಲೆಯಲ್ಲಿ ಏಕತೆ ಇದ್ದ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಏಕೆಂದರೆ ಅವರು ವಿಜಯನಗರ ಸಾಮ್ರಾಜ್ಯದಲ್ಲಿ ಹೊಂದಿದ್ದ ಸ್ಥಾನ ಅವರ ಗೋತ್ರ ಹಾಗೂ ಬಿರುದಾವಳಿಗಳಲ್ಲಿ ಸಮಾನ ಅಂಶವನ್ನು ಗುರ್ತಿಸಬಹುದು.

೧೬ನೇ ಶತಮಾನದಲ್ಲಿ ಎರಡೂ ಮನೆತನಗಳ ನಾಯಕರು ಹಡಪ[12] ಎಂಬ ಸ್ಥಾನದಲ್ಲಿದ್ದರು. ಬೇಲೂರು ಮನೆತನದ ವೆಂಕಟಾದ್ರಿನಾಯಕನು ಮತ್ತು ನರಸಿಂಹ ಪುರ ಮನೆತನದ ಕೃಷ್ಣಪ್ಪನಾಯಕನು ಸದಾಶಿವರಾಯನ ಹಡಪರಾಗಿದ್ದರೆ[13] ನರಸಿಂಹಪುರದ ಬಯ್ಯಪ್ಪ ನಾಯಕನು ಕೃಷ್ಣರಾಯನ ಹಡಪನಾಗಿದ್ದನು.[14]

ಬೇಲೂರು ಮತ್ತು ನರಸಿಂಹಪುರನಾಯಕರು ಇಬ್ಬರೂ ತಮ್ಮನ್ನು ಕಾಶ್ಯಪಗೋತ್ರ ಅಪ್ತಸ್ತಂಭ ಸೂತ್ರ ಯಜುಶ್ಯಾಖೆಗೆ ಸೇರಿದವರೆಂದು ಶಾಸನಗಳಲ್ಲಿ ಉಲ್ಲೇಖಿಸಿಕೊಡಿ ದ್ದಾರೆ.[15] ಕಾಶ್ಯಪಗೋತ್ರ ಬ್ರಾಹ್ಮಣ ಜನಾಂಗದ ಗೋತ್ರಗಳಲ್ಲಿ ಒಂದಾಗಿದೆ. ಅವರು ನಿಜವಾಗಿಯೂ ಬ್ರಾಹ್ಮಣ ಜನಾಂಗಕ್ಕೆ ಸೇರಿದವರೋ ಇಲ್ಲವೋ ಎಂಬ ಪ್ರಶ್ನೆಗೆ ಖಚಿತವಾದ ಉತ್ತರ ಹೇಳಲು ಸದ್ಯಕ್ಕೆ ಆಕರಗಳು ಸಾಲದು. ನರಸಿಂಹಪುರ ನಾಯಕರು ಕ್ರಿ.ಶ. ೧೬೬೫ರಲ್ಲಿ ಕೊಟ್ಟ ತಾಮ್ರ ಪಟಗಳಲ್ಲಿ ಅವರ ಮನೆತನದ ಮೂಲ ಪುರುಷ, ಸೂರ್ಯ ವಂಶದಲ್ಲಿ ಹುಟ್ಟಿದನು 'ಕಾಶ್ಯಪಾನ್ವಯಜ ರಾಮದಾಸತೋ ಹ್ಯೇಕ ಚಿದ್ರವಿಕುಲೇಜನಿಕ್ಷತಾ'[16] (ರವಿ ಕುಲೇಜನಿ) ತಾವು ಸೂರ್ಯವಂಶೀಯರೆಂಬ ಹೆಮ್ಮೆಗೆ ತಕ್ಕಂತೆ ಅವರು ತಮ್ಮನ್ನು ಕುರಿತು ಕಾಶ್ಯಪಗೋತ್ರ ಎಂದು ಹೇಳಿಕೊಂಡಿರಬೇಕು. ಇಲ್ಲಿಕಾಶ್ಯಪಗೋತ್ರದ ಮೂಲ ಪುರುಷನೆಂದು ಪರಿಗಣಿಸಲಾಗಿರುವ ಕಶ್ಯಪ ಋಷಿಯು ಸೂರ್ಯನಿಗೆ ತಂದೆ ಎಂಬುದನ್ನು ಸ್ಮರಿಸಿಕೊಳ್ಳಬೇಕು. ಅವರಿಗೆ ಸಮಕಾಲೀನರಾದ ತಾವು ಚಂದ್ರವಂಶೀಯರೆಂಬ ಹೆಮ್ಮೆಯುಳ್ಳ ಅರವೀಡು ಮನೆತನದವರು ತಮ್ಮನ್ನು ಕುರಿತು ಆತ್ರೇಯಗೋತ್ರ ಎಂದು ಹೇಳಿಕೊಂಡಿರುವುದನ್ನು ಸಹಾ ನಾವು ಇದೇ ರೀತಿ ಅರ್ಥೈಸಬಹುದು. (ಅತ್ರಿ ಋಷಿಯ ಚಂದ್ರನಿಗೆ ತಂದೆ).

ಬೇಲೂರು ಮತ್ತು ನರಸಿಂಹಪುರ ನಾಯಕರು ತಮ್ಮ ಶಾಸನಗಳಲ್ಲಿರುವ ಪ್ರಶಸ್ತಿಯಲ್ಲಿಯೂ ಪರಸ್ಪರ ಹೊಂದಾಣಿಕೆಯಾಗುತ್ತಾರೆ. ಈಗ ಅವರ ಪ್ರಶಸ್ತಿಯನ್ನು ಪರಿಶೀಲಿಸೋಣ.

'ಶ್ರೀಮತು ಸಿಂಧು ಗೋವಿಂದ, ಸಿತಕರಗಂಡ, ಧವಳಾಂಕ, ಭೀಮ, ಮಣಿನಾಗಪುರ ವರಾಧೀಶ್ವರ ಬಿರಿದ ಸಪ್ತಾಂಗ ಹರಣ, ತುರುಕದಳವಿಭಾಡ' ಎಂದು ಕ್ರಿ.ಶ. 1577ರಲ್ಲಿ ನರಸಿಂಹಪುರದ ವೆಂಕಟಾದ್ರಿ ನಾಯಕನ ಶಾಸನದಲ್ಲಿ ಉಲ್ಲೇಖವಾಗಿದೆ.[17]

ಬೇಲೂರು ನಾಯಕರ ಶಾಸನಗಳಲ್ಲಿಯೂ ಇದೇ ರೀತಿಯ ಬಿರುದುಗಳನ್ನು ದಾಖಲಿಸಲಾಗಿದೆ.[18]

ಎಪಿಗ್ರಾಫಿಯಾ ಕರ್ನಾಟಿಕದ ಸಂಪಾದಕರು ಗುರುತಿಸಿರುವಂತೆ ಈ ಪ್ರಶಸ್ತಿಗಳು ೧೧ನೇ ಶತಮಾನದಿಂದ ೧೩ನೇ ಶತಮಾನದವರೆಗೆ ತಮ್ಮ ಆಳ್ವಿಕೆ ನಡೆಸಿದ ಸಿಂಧರ ಪ್ರಶಸ್ತಿಗೆ ಸರಿಸಮವಾಗಿದೆ. ಅವರ ಪ್ರಕಾರ ಸಿಂಧಗೋವಿಂದ, ಸಿತಕರಗಂಡ ಎಂಬ ಬಿರುದುಗಳು ಸಿಂಧರಾಚಮಲ್ಲದೊರೆಗೆ ಇದ್ದವು. ಇದರಿಂದ ಇವರು ಒಂದೇ ವಂಶಕ್ಕೆ ಸಂಬಂಧಪಟ್ಟವರೆಂದು ಹೇಳಿದರೆ ತಪ್ಪಾಗುವುದಿಲ್ಲ. ೧೯ ಸಿಂಧರ ಪ್ರಶಸ್ತಿಯಲ್ಲಿ ಬೋಗಾವತಿ ಪುರವರಾಧೀಶ್ವರ ಎಂದಿದೆ. ಅದಕ್ಕೆ ಬದಲಾಗಿ ಇಲ್ಲಿ ಮಣಿನಾಗಪುರ ವರಾಧೀಶ್ವರ ಎಂದಿದೆ. ಬೋಗಾವತಿ ಎಂದರೆ ಪಾತಾಳ ಲೋಕದ (ನಾಗಲೋಕ) ಹೆಸರಾಗಿರುವುದರಿಂದ ಮಣಿನಾಗಪುರ ಇದರ ಪರ್ಯಾಯವೆಂದು ಹೇಳಬಹುದು. ಕೆಲವರು ಹೇಳುವಂತೆ ಇದು ಅವರ ವಾಸ್ತವವಾದ ಮೂಲ ಸೂಚಿಸುತ್ತದೆಯೇ ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಒಟ್ಟಿನಲ್ಲಿ ಬೇಲೂರು ಮತ್ತು ನರಸಿಂಹಪುರ ನಾಯಕರು ತಮ್ಮ ಸ್ಥಾನ ದಲ್ಲಿಯೂ, ಗೋತ್ರದಲ್ಲಿಯೂ, ಪ್ರಶಸ್ತಿಯಲ್ಲಿಯೂ ಸಾಮ್ಯತೆಯನ್ನು ಹೊಂದಿದ್ದರು. ಆದರೆ ಈ ವಿಷಯವನ್ನು ಆಧಾರವಾಗಿಟ್ಟುಕೊಂಡು ಈ ಎರಡೂ ಮನೆತನಗಳು ಮೂಲತಃ ಒಂದಾಗಿದ್ದವೆಂದು ಹೇಳಲು ಬರುವುದಿಲ್ಲ. ಆರಂಭದಲ್ಲಿ ಚರ್ಚಿಸಿದಂತೆ ಅವರ ವಂಶವೃಕ್ಷಗಳು ಪರಸ್ಪರ ಭಿನ್ನವಾಗಿರುವುದರಿಂದ ಎರಡೂ ಮನೆತನಗಳ ನಡುವೆ ನೇರವಾದ ರಕ್ತ ಸಂಬಂಧವಿರುವುದಿಲ್ಲ ಮತ್ತು ೧೬ನೇ ಶತಮಾನದ ಕೊನೆಯ ಭಾಗದಲ್ಲಿ ಬೇಲೂರು ಮತ್ತು ನರಸಿಂಹಪುರದಲ್ಲಿ ನಿಂತು ಆಳ್ವಿಕೆ ಮಾಡುತ್ತಿದ್ದ ವೆಂಕಟಾದ್ರಿ ನಾಯಕ ಒಬ್ಬನೆ ಅಲ್ಲ. ಅವರಿಬ್ಬರೂ ಬೇರೆ ಬೇರೆ. ಇಬ್ಬರೂ ಬೇರೆ ಬೇರೆ ವಂಶಕ್ಕೆ ಸೇರಿರುವುದರಿಂದ ಈ ಎರಡೂ ಮನೆತನಗಳ ವಂಶವೃಕ್ಷವನ್ನು ಪುನರ್ ರಚಿಸಬೇಕಾಗಿದೆ.

ಬೇಲೂರು ನರಸಿಂಹಪುರ ಮತ್ತು ಶೆಂಜಿ ನಾಯಕ ಮನೆತನಗಳ ಸಂಬಂಧ

ಹಡಪದ ಸ್ಥಾನ, ಕಾಶ್ಯಪಗೋತ್ರ ಮತ್ತು ಮಣಿನಾಗಪುರವರಾಧೀಶ್ವರ ಬಿರುದನ್ನು ಒಳಗೊಂಡ ಪ್ರಶಸ್ತಿಗಳು ನಮ್ಮ ಗಮನವನ್ನು ಬೇರೆ ಮನೆತನದ ಕಡೆಗೆ ಕೊಂಡೊಯ್ಯುತ್ತವೆ. ಇದೇ ರೀತಿಯ ಲಕ್ಷಣವನ್ನು ತಮಿಳುನಾಡಿನ ಅಮರನಾಯಕ ಮನೆತನಗಳಲ್ಲಿ ಬಲಶಾಲಿಯಾದ ಶೆಂಜಿ ನಾಯಕರೂ ಹೊಂದಿದ್ದರು. ಈಗ ಬೇಲೂರು ಮತ್ತು ನರಸಿಂಹ ನಾಯಕರು ಶೆಂಜಿ ನಾಯಕರೊಂದಿಗೆ ಯಾವ ರೀತಿಯ ಸಂಬಂಧವನ್ನು ಹೊಂದಿದ್ದರೆಂದು ಪರಿಶೀಲಿಸೋಣ.

ಶೆಂಜಿ ಸುತ್ತಮುತ್ತಲ ಪ್ರದೇಶದಲ್ಲಿ ದೊರೆತ ೧೬ ನೇ ಶತಮಾನದ ಶಾಸನಗಳ ಆಧಾರದ ಮೇಲೆ ಶೆಂಜಿನಾಯಕ ಮನೆತನದ ವಂಶ ವೃಕ್ಷವನ್ನು ಈ ಕೆಳಕಂಡಂತೆ ರಚಿಸಲಾಗಿದೆ.[20]

ಪೊತ್ತಪ್ಪ
├── ವೈಯಪ್ಪ
│ └── ಕೃಷ್ಣಪ್ಪ
│ └── ಕೊಂಡಮ
└── ಸೂರಪ್ಪ

ಆದರೆ ೧೭ನೇ ಶತಮಾನದಲ್ಲಿ ಶೆಂಜಿನಾಯಕರು ಕೊಟ್ಟ ತಾಮ್ರಶಾಸನಗಳಲ್ಲಿ ಅವರ ವಂಶವೃಕ್ಷವನ್ನು ಭಿನ್ನವಾಗಿ ರಚಿಸಲಾಗಿದೆ. ಮೂಲಪುರುಷನಾದ ಶ್ರೀಗಿರಿ ನಾಯುಡುವಿನಿಂದ ಆರಂಭವಾಗುವ ಇದೇ ವಂಶವೃಕ್ಷದಲ್ಲಿ ಕೃಷ್ಣಪ್ಪನಾಯಕನ ತಾತನ ಹೆಸರು ಪೊತ್ತಪ್ಪನಿಗೆ ಬದಲಾಗಿ ತಿಮ್ಮಪ್ಪನೆಂದು ಉಲ್ಲೇಖವಾಗಿದೆ.[21] ಕನ್ನಡ ಪ್ರದೇಶದ ಹಾಸನ ಜಿಲ್ಲೆಯ ನರಸಿಂಹಪುರ ನಾಯಕರ ವಂಶ ವೃಕ್ಷವೂ ಸಹಾ ಶ್ರೀ ಗಿರಿಯಿಂದ ಆರಂಭವಾಗಿ ವೆಂಕಟಾದ್ರಿನಾಯಕನ ತಂದೆಯಾದ ಕೃಷ್ಣಪ್ಪನಾಯಕನ ತಾತನ ಹೆಸರನ್ನು ತಿಮ್ಮಪ್ಪನೆಂದು ದಾಖಲಿಸಿರುವುದನ್ನು ನಾವು ಗಮನಿಸಬೇಕಾಗಿದೆ.[22]

ಕಾಶ್ಯಪ ವಂಶದ ರಾಮದಾಸ
|
ಶ್ರೀ ಗಿರೀಶ
|
ಯರ್ರ ಭೂ ಭೃದಥ
|
ತಿಮ್ಮಭೂಪ
|
ಬಯ್ಯನಾಯಕ
|
ಕೃಷ್ಣಪ್ಪನಾಯಕ
|
ವೆಂಕಟಾದ್ರಿ ನಾಯಕ

ಶ್ರೀ ವೀರ ಪ್ರತಾಪ ಕೃಷ್ಣರಾಯ ಮಹಾರಾಯರ ಹಡಪದ ಬಯ್ಯಪ್ಪನಾಯಕರ ತಂದೆ ತಿಮ್ಮಣ್ಣನಾಯಕರಿಗೆ ಪುಂಣ್ಯಯಾಗಬೇಕೆಂದು [23]

ಕಾಶ್ಯಪಗೋತ್ರದ ಗಿರಿಯಪ್ಪನಾಯಕರವರ ಪ್ರಪೌತ್ರರಾದ ತಿಮ್ಮಪ್ಪನಾಯಕರ ಪೌತ್ರರಾದ ಬೈಯಪ್ಪನಾಯಕರವರ ಪುತ್ರರಾದ ಕೃಷ್ಣಪ್ಪನಾಯಕರೈಯ್ಯನವರು[24]

ಹಡಪದಸ್ಥಾನ, ಕಾವ್ಯಪಗೋತ್ರ, ಮಣೆನಾಗಪುರವರಾಧೀಶ್ವರದ ಬಿರುದು ಇವುಗಳೇ ಅಲ್ಲದೆ ಅವರ ವಂಶವೃಕ್ಷಗಳಲ್ಲಿ ಕಂಡುಬರುವಂತಹ ಸಾಮ್ಯತೆಯನ್ನು ಗಮನಿಸಿದರೆ ಶೆಂಜಿನಾಯಕರು ಮತ್ತು ನರಸಿಂಹಪುರ ನಾಯಕರು ಮೂಲತಃ ಒಂದೇ ವಂಶಕ್ಕೆ

ಸೇರಿದವರೆಂದು ತೀರ್ಮಾನಿಸುವುದು ಉಚಿತವಾಗಿದೆ. ಕೃಷ್ಣಪ್ಪನಾಯಕನ ಒಬ್ಬ ಮಗನಾದ ವೆಂಕಟಾದ್ರಿನಾಯಕನೂ ಮತ್ತು ಅವನ ಸಂತತಿಯವರು ನರಸಿಂಹ ಪುರದಲ್ಲಿ ನಿಂತು ಆಳ್ವಿಕೆ ಮಾಡಿದರೆ ಇನ್ನೊಬ್ಬ ಮಗನಾದ ಕೊಂಡನಾಯಕನು ಮತ್ತು ಅವನ ಸಂತತಿಯವರು ಶೆಂಜಿಯಲ್ಲಿ ನಿಂತು ತಮ್ಮ ಆಳ್ವಿಕೆ ನಡೆಸಿದರು ಎಂದು ದೃಢವಾಗಿ ಹೇಳಬಹುದು.

ಕೃಷ್ಣದೇವರಾಯ ಮತ್ತು ಅಚ್ಯುತ ದೇವರಾಯನ ಕಾಲಕ್ಕೆ ಸೇರಿದ ಶೆಂಜಿ ಸುತ್ತಮುತ್ತಲಿನ ಪ್ರದೇಶದ ಶಾಸನಗಳು ಉಲ್ಲೇಖಿಸುವ ವೈಯಪ್ಪ (ಪೊತ್ತಪ್ಪನ ಮಗ) ಕೃಷ್ಣಪ್ಪನಾಯಕನ ತಂದೆ ಅಲ್ಲ ಎಂಬುದು ಈಗ ಸ್ಪಷ್ಟವಾಗಿದೆ. ಪ್ರಾಯಶಃ ಈ ವೈಯಪ್ಪನಾಯಕನ ತಂದೆಯಾದ ಪೊತ್ತಪ್ಪನೇ ಬೇಲೂರು ವೆಂಕಟಾದ್ರಿ ನಾಯಕನ ತಾತನಾದ (ಅಂದರೆ ಎರಕೃಷ್ಣಪ್ಪನಾಯಕನ ತಂದೆಯಾದ) ಪೋತಪ್ಪನೇ ಆಗಿರ ಬಹುದು. ಪೊತ್ತಪ್ಪ ಮತ್ತು ಪೋತ್ತಪ್ಪ ತಮಿಳು ಮತ್ತು ಕನ್ನಡ ಭಾಷೆಗಳಲ್ಲಿನ ಪರ್ಯಾಯ ಬರಹ ಎನ್ನಬಹುದು. ವೈಯಪ್ಪ ಮತ್ತು ಸೂರಪ್ಪ ಇಬ್ಬರೂ ಸಹೋದರರು ಅಚ್ಯುತರಾಯನ ಕಾಲದಲ್ಲಿ ಶೆಂಜಿ ಸುತ್ತಮುತ್ತ ಆಳ್ವಿಕೆ ನಡೆಸಿದರೆ, ಎರಕೃಷ್ಣಪ್ಪನ ಚಟುವಟಿಕೆಗಳನ್ನು ದಾಖಲಿಸಿರುವ ಶಾಸನಗಳೆಲ್ಲಾ ಸದಾಶಿವರಾಯನ ಕಾಲಕ್ಕೆ ಸೇರುತ್ತವೆ. ಶಾಸನಗಳಲ್ಲಿ ಕಂಡು ಬರುವಂತಹ ವೈಯಪ್ಪ, ಸೂರಪ್ಪ ಎರಕೃಷ್ಣಪ್ಪ ಎಂಬ ಪೋತಪ್ಪನ ಮೂವರು ಮಕ್ಕಳಲ್ಲಿ ಪ್ರಾಯಶಃ ಎರಕೃಷ್ಣಪ್ಪನೇ ಚಿಕ್ಕವನಿರ ಬಹುದೆನಿಸುತ್ತದೆ.

ಇದುವರೆಗೆ ಮೇಲೆ ವಿವರಿಸಿದ ವಿಷಯಗಳ ಆಧಾರದ ಮೇಲೆ ಶೆಂಜಿ, ನರಸಿಂಹಪುರ ಮತ್ತು ಬೇಲೂರು ನಾಯಕರ ವಂಶವೃಕ್ಷಗಳನ್ನು ಈ ರೀತಿ ಪುನರ್ ರಚಿಸ ಬೇಕಾಗುತ್ತದೆ:

ಶ್ರೀ ಗಿರಿ / ಗಿರಿಯಪ್ಪ

ತಿಮ್ಮಪ್ಪ

ಬಯ್ಯಪ್ಪ (ಬೈಯಪ್ಪ) (ಪತ್ನಿ ಕೊಂಡಮ್ಮ)

ಕೃಷ್ಣಪ್ಪ (ಪತ್ನಿ ಪದ್ಮಾಂಭ)

ಕೊಂಡಮ	ವೆಂಕಟಾದ್ರಿ (ತಾಯಿ ರಾಮಮ್ಮ)
ಶೆಂಜಿಯಲ್ಲಿ (ಜಿಂಜಿ)	(ನರಸಿಂಹಪುರದಲ್ಲಿ)
ಮುತ್ತುಕೃಷ್ಮಪ್ಪ	ಲಕ್ಷ್ಮಪ್ಪ

ಪೊತ್ತಪ್ಪ

ವೈಯಪ್ಪ ಸೂರಪ್ಪ ಎರಕೃಷ್ಣಪ್ಪ

ವೆಂಕಟಾದ್ರಿ

(ಬೇಲೂರಿನಲ್ಲಿ)

ಕೃಷ್ಣಪ್ಪ

ಶೆಂಜಿ ನಾಯಕರ ಉಗಮ (ಜಿಂಜಿ ನಾಯಕರು)

ಬೇಲೂರು, ನರಸಿಂಹಪುರ ಮತ್ತು ಜಿಂಜಿ ನಾಯಕ ಮನೆತನಕ್ಕೆ ಸಂಬಂಧಿಸಿದ ವಂಶವೃಕ್ಷಗಳ ಪುನರ್ರಚನೆಯು ಕೇವಲ ಆ ಮನೆತನಗಳ ಇತಿಹಾಸಕ್ಕೆ ಅಲ್ಲದೆ ವಿಜಯ ನಗರ ಸಾಮ್ರಾಜ್ಯದ ಇಡೀ ರಾಜಕೀಯ ಚೌಕಟ್ಟನ್ನು ಕುರಿತು ನಮ್ಮ ಭಾವನೆಗೂ ಸಂಬಂಧಿಸಿದಂತೆ ಮುಖ್ಯವಾದ ಪರಿಣಾಮವನ್ನು ಬೀರುತ್ತದೆ. ಕ್ರಿ.ಶ.೧೫೬೫ ತಾಳಿಕೋಟೆ ಕದನದ ನಂತರ ಅರವೀಡು ಮನೆತನದವರ ಕಾಲದಲ್ಲಿ ನಾಯಕ ಮನೆತನ ಗಳು ತಮ್ಮ ಆಳ್ವಿಕೆಯನ್ನು ವಂಶ ಪಾರಂಪರ್ಯವಾಗಿ ನಡೆಸಿದ ವಿಚಾರ ಎಲ್ಲರಿಗೂ ಗೊತ್ತಿರುವ ಸಂಗತಿಯಾಗಿದೆ. ಆದರೆ ಕೆಲವು ಸಂಶೋಧಕರು ಅರವೀಡು ಮನೆತನದ ಕಾಲಕ್ಕಿಂತಲೂ ಮೊದಲು ಅಂದರೆ ತುಳುವ ಮನೆತನದ ಕಾಲದಲ್ಲಿಯೂ ಕೆಲವು ನಾಯಕ ಮನೆತನಗಳು ಒಂದು ರೀತಿಯಲ್ಲಿ ವಿಜಯನಗರ ಚಕ್ರವರ್ತಿಗಳಿಂದ ಸ್ವತಂತ್ರ ವಾಗಿ ವಂಶ ಪಾರಂಪರ್ಯವಾಗಿ ತಮ್ಮ ಪ್ರದೇಶವನ್ನು ಆಳುತ್ತಿದ್ದರೆಂದು ತಿಳಿಸುತ್ತಾರೆ. ಅವರಲ್ಲಿ ನಾಯಕರನ್ನು Feudal Lord ಗೆ ಹೋಲಿಸಿ ನೋಡುವ ನೊಬುರು ಕರಷಿಮ ಕೂಡಾ ಒಬ್ಬರಾಗಿದ್ದಾರೆ. ಅವರು ನಾಯಕರನ್ನು ಕುರಿತು ಅಧ್ಯಯನದ ಪ್ರಭಾವದಿಂದ ಜಿಂಜಿ ನಾಯಕರ ವಂಶವೃಕ್ಷದಲ್ಲಿ ಸಂಶಯಾಸ್ಪದ ಅಂಶಗಳನ್ನು ಗುರುತಿಸಿದ್ದರೂ, ತುಳುವ ವಂಶದ ಕಾಲದಲ್ಲಿ ಜಿಂಜಿ ಪ್ರದೇಶದಲ್ಲಿದ್ದ ವೈಯಪ್ಪ ಮತ್ತು ಸೂರಪ್ಪ ಇಬ್ಬರೂ ಜಿಂಜಿ ಕೃಷ್ಣಪ್ಪ ನಾಯಕನ ಹಿರಿಯರೆಂದು ತೀರ್ಮಾನಿಸಿ ಜಿಂಜಿ ನಾಯಕರ ವಂಶಪಾರಂಪರ್ಯ ಆಳ್ವಿಕೆಯ ಹದಿನೈದನೇ ಶತಮಾನದ ಕೊನೆಯ ಭಾಗದಲ್ಲಿ ಆರಂಭವಾಯಿತು ಎಂದು ಹೇಳಿದ್ದಾರೆ. [25] ಆದರೆ ನಾನು ಮೇಲೆ ವಿವರಿಸಿದ ರೀತಿ ವೈಯಪ್ಪ ಮತ್ತು ಬಯ್ಯಪ್ಪ ಪ್ರತ್ಯೇಕ. ಬಯ್ಯಪ್ಪ ನಾಯಕನು ಕೃಷ್ಣಪ್ಪನಾಯಕನ ತಂದೆಯಾಗಿದ್ದಾನೆ. ಆದುದರಿಂದ ಕರಶಿಮ ಅವರ ಅಭಿಪ್ರಾಯವು ಆಧಾರರಹಿತ ಎಂದು ಹೇಳಬೇಕಾಗಿದೆ. ಇದುವರೆಗೆ ದೊರಕಿರುವ ದಾಖಲೆಗಳಲ್ಲಿ ಜಿಂಜಿ ಪ್ರದೇಶದ ಮೇಲೆ ಕೃಷ್ಣಪ್ಪ ನಾಯಕನ ಆಳ್ವಿಕೆಯನ್ನು ಸೂಚಿಸುವ ಮೊದಲ ಶಾಸನವು ಕ್ರಿ.ಶ. ೧೫೬೬ ರ ತಾಮ್ರ ಶಾಸನವಾಗಿದೆ [26]

Krishnappa Nayaka granted the village named Yasnur called also Krishnapur together with the village sittilapakke (situated on the world jayamakonda cholamandala) and paduvar kotaka amtastham pirimdimili nadugam kalavep pattuke (vantravasi Divison to the east of the village Kumuduru and Kilappaka to the south of Perunkama nallur and Kashirandi (palar) to the west of the village Valavanur and to the north of Siruputtar and Arumpaka as sarvamanya to be enjoyed by one with the boundaries noted.

ಬಯ್ಯಪ್ಪ ನಾಯಕರ ಕೃಷ್ಣಪ್ಪನಾಯಕರು ಮತ್ತು ರಾಮರಾಯನ ಸೋದರ ತಿರುಮಲರಾಯನ ಮನವಿಯ ಮೇರೆಗೆ ವಿಜಯನಗರ ಚಕ್ರವರ್ತಿ ಸದಾಶಿವರಾಯನು ಶ್ರೀವತ್ಸಗೋತ್ರದ ಶ್ರೀ ವೈಷ್ಣವ ಶೇಷಾದ್ರಿಯಾಚಾರ್ಯನಿಗೆ ಪಡವೀಡುರಾಜ್ಯದ ಚೋಳ ಮಂಡಲದ (ಪಡುವರ್ ಕೋಟಕ ಅಂಥಸ್ತಾಮ್ ಪಿರಿಮ್‌ದಿಮಿಲಿ ನಾಡುಗಾರಿ ಕಳವೀಪ್ ಪಟ್ಟಕೆ) ಜಯಮಕೊಂಡದ ಯಸಣೂರ್ ಗ್ರಾಮವನ್ನು ದಾನವಾಗಿ ನೀಡಿದನು: ಈ ಭೂಭಾಗವು ಶೆಂಜಿ ಪ್ರದೇಶದ ವ್ಯಾಪ್ತಿಗೆ ಬರುತ್ತದೆ. ಅಂದರೆ ಕೃಷ್ಣಪ್ಪನಾಯಕನು ತಾಳೀಕೋಟೆ ಕದನದ ನಂತರವೇ ಜಿಂಜಿ ಪ್ರದೇಶದ ಆಳ್ವಿಕೆಯನ್ನು ಆರಂಭಿಸಿದನೆಂದು ಹೇಳಬಹುದು. ಅದಕ್ಕಿಂತ ಮೊದಲು ಅವನು ಕನ್ನಡ ನಾಡಿನ ವಿವಿಧ ಪ್ರದೇಶಗಳಲ್ಲಿ ಕ್ರಿ.ಶ. ೧೫೪೭ ರಿಂದ ಕ್ರಿ.ಶ.೧೫೬೩ರ ವರೆಗೆ ವಿಜಯನಗರ ಸಾಮ್ರಾಜ್ಯದ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದನ್ನು ಶಾಸನಗಳು ದಾಖಲಿಸಿವೆ. ಉದಾಹರಣೆಗೆ ಅವನು ಕ್ರಿ.ಶ. ೧೫೪೭ರಲ್ಲಿ ಕೊಟ್ಟೂರ ಸೀಮೆಯಲ್ಲೂ[27] ಕ್ರಿ.ಶ. ೧೫೫೦ ರಲ್ಲಿ ಕೋಗಳಿಯಲ್ಲೂ[28] ಕ್ರಿ.ಶ. ೧೫೫೧ಲ್ಲಿ ಬಾಗಳಿಯಲ್ಲೂ[29] ಕ್ರಿ.ಶ. ೧೫೫೨ ರಲ್ಲಿ ಮೊರಬರ ಸೀಮೆಯಲ್ಲೂ[30] ಕ್ರಿ.ಶ. ೧೫೫೭ ರಲ್ಲಿ ಮುತ್ತಿಗೆಯಲ್ಲೂ[31] ಕ್ರಿ.ಶ. ೧೫೪೮ರಲ್ಲಿ ಹಾಸನದಲ್ಲಿ[32] ಕ್ರಿ.ಶ. ೧೫೬೨ ರಲ್ಲಿ ಹಾಸನ ಸೀಮೆ[33] ಕ್ರಿ.ಶ. ೧೫೬೩ ರಲ್ಲಿ ನರಸಿಂಹಪುರ ವಳಿತದಲ್ಲಿ[34] ಸೇವೆ ಸಲ್ಲಿಸಿದ್ದುದು ಶಾಸನಗಳಿಂದ ಗೊತ್ತಾಗುತ್ತದೆ. ಇಲ್ಲಿಂದ ಅವನು ತಮಿಳುನಾಡಿನ ಜಿಂಜಿ ಪ್ರದೇಶಕ್ಕೆ ಹೋಗಿ ಆಳ್ವಿಕೆ ಆರಂಭಿಸಿದನು. ನಂತರ ಅವನ ಮಗ ಕೊಂಡಮನು ಉತ್ತರಾಧಿಕಾರಿಯಾಗಿ ನಿಂತು ಅವನ ಸಂತತಿಯವರು ಸುಮಾರು ೧೦೦ ವರ್ಷಗಳ ಕಾಲ ಜಿಂಜಿಯಲ್ಲಿ ವಂಶಪಾರಂಪರಾಗತ ಆಳಿದರು ಎಂದು ನಿರ್ಧರಿಸಬಹುದು.


ನರಸಿಂಹಪುರ ನಾಯಕರ ಉಗಮ

ವಿಜಯನಗರ ಚಕ್ರವರ್ತಿಗಳು ನಾಯಕರಿಗೆ ನಾಯಕತನಕ್ಕೆ ಅಥವಾ ಅಮರಮಾಗಣಿಗೆ ಪಾಲಿಸುವ ಸೀಮೆಗಳನ್ನು ಅಲ್ಪಾವಧಿಯಲ್ಲಿ ಬದಲಾಯಿಸುತ್ತಿದ್ದರು. ಅಂದರೆ ಒಬ್ಬ ನಾಯಕನು ಒಂದು ಸೀಮಿತ ಸೀಮೆಯನ್ನು ದೀರ್ಘಕಾಲಕ್ಕೆ ಆಳುವ ಸಂಗತಿ ಇರಲಿಲ್ಲ. ಹೀಗೆ ಸ್ಥಳಾಂತರಕ್ಕೆ ಒಳಗಾಗಿದ್ದ ನಾಯಕರನ್ನು ಸ್ಥಳೀಯ ಪ್ರಭು

ಎಂದು ಪರಿಗಣಿಸಲಾಗದು. ಎರಡನೆಯದಾಗಿ, ಕೆಲವು ನಾಯಕರು ಒಂದು ಸಮಯದಲ್ಲಿ ವಿಜಯನಗರ ರಾಜ್ಯದೊಳಗಣ ಬೇರೆ ಬೇರೆ ಪ್ರದೇಶಗಳಲ್ಲಿ ಒಂದಕ್ಕಿಂತ ಹೆಚ್ಚಿನ ಸೀಮೆಗಳನ್ನು ತಮ್ಮ ನಾಯಕತನಕ್ಕೆ ಪಡೆದಿರುವುದೂ ಉಂಟು. ಉದಾಹರಣೆಗೆ, ಕೃಷ್ಣಪ್ಪನಾಯಕನೂ ಸಹಾ ತುಳುವ ಸದಾಶಿವ ರಾಯನ ಕಾಲದಲ್ಲಿ ಒಂದಕ್ಕಿಂತ ಹೆಚ್ಚಿನ ಸೀಮೆಗಳನ್ನು ತನ್ನ ನಾಯಕತನಕ್ಕೆ ಪಡೆದು ಕೊಂಡಿದ್ದನು.

ಕ್ರಿ.ಶ ೧೫೬೨ ಮತ್ತು ೧೫೬೩ರ ಮೂರು ಶಾಸನಗಳಿಂದ ಹಾಸನ ಸೀಮೆಯು ಆತನ ನಾಯಕತನಕ್ಕೂ ಕ್ರಿ.ಶ. ೧೫೬೩ರ ಶಾಸನದಿಂದ ಅವನಿಗೆ ನರಸಿಂಹಪುರ ರಾಯದತ್ತವಾಗಿ ಬಂದುದು ದಾಖಲಾದ ಸಂಗತಿಗಳಾಗಿವೆ. ಅವುಗಳನ್ನು ಈ ಪಟ್ಟಿ ಯಿಂದ ಕಾಣಬಹುದು.

೧೬ನೇ ಶತಮಾನದ ದಕ್ಷಿಣ ಭಾರತದ ಕೆಲವು ರಾಜಕೀಯ ನೆಲೆಗಳು



ಕಾಲ	ಹೆಸರು	ವಿಷಯ	ಶಾಸನ
ಕ್ರಿ.ಶ. ೧೫೬೨	ವೀರಸದಾಶಿವರಾಯ	ಬಯಪ್ಪನಾಯಕರ ಮಕ್ಕಳು ಕೃಷ್ಮಪ್ಪನಾಯಕರಿಗೆ ನಾಯಕತನಕ್ಕೆ ಪಾಲಿಸಿದ ಹಾಸನದ ಸೀಮೆ	ಎಕೆ. ೮ ಹಾಸನ ೧೨೨
ಕ್ರಿ.ಶ. ೧೫೬೨	ವೀರಸದಾಶಿವರಾಯ	ಬಯಪ್ಪನಾಯಕರ ಮಕ್ಕಳು ಕೃಷ್ಣಪ್ಪನಾಯಕರಿಗೆ ನಾಯಕರಿಗೆ ಅಮರ ಮಾಗಣೆಯಾಗಿ ಪಾಲಿಸಿದ ಹಾಸನದ ಸೀಮೆ	ಎಕೆ. ೮ ಹಾಸನ ೧೭೯
ಕ್ರಿ.ಶ. ೧೫೬೩	ವೀರಸದಾಶಿವರಾಯ	ರಾಮರಾಜಯ್ಯನವರಿಗೆ ಪಾಲಿಸಿದಂತಾ ಸೀಮೆಯಲ್ಲಿ ಬಯ್ಯಪ್ಪನಾಯಕರ ಮಕ್ಕಳು ಕೃಷ್ಣಪ್ಪನಾಯಕರಿಗೆ ಅಮರನಾಯ್ಕತನಕ್ಕೆ ಪಾಲಿಸಿದ ಹಾಸನದ ಸೀಮೆ ವೊಳಗಣ ಸೆಟ್ಟಿಹಳ್ಳಿ	ಹಾಸನ೨ ಎಕೆ. ೮
ಕ್ರಿ.ಶ. ೧೫೬೩	ವೀರಸದಾಶಿವರಾಯ	ಕೃಷ್ಣಪ್ಪನಾಯಕ ತಮ್ಮ ಮಾತಾಪಿತೃಗಳಿಗೆ ಶಾಶ್ವತ ಸ್ವರ್ಗ ಲೋಕ ಪ್ರಾಪ್ತಿಯಾಗಬೇಕೆಂದು ನಮಗೆ ರಾಯದತ್ತವಾಗಿ ಬಂದ ನರಸಿಂಹಪುರ ವಳಿಥವಾದ ಆಲಗೊಂಡನಹಳ್ಳಿ	ಎಕ ೮ ಹೊಳೆನರಸಿಪುರ ೪೭

ಇವುಗಳಲ್ಲದೆ ಇನ್ನೂ ಹೆಚ್ಚಿನ ಸೀಮೆಗಳು ಅವನ ವಶಕ್ಕೆ ಸೇರಿದ್ದವೆಂಬುದನ್ನು ಪರೋಕ್ಷವಾಗಿ ಸೂಚಿಸುವ ಅನೇಕ ಶಾಸನಗಳು ದೊರಕಿವೆ.

ಕಾಲ	ಹೆಸರು	ವಿಷಯ	ಶಾಸನ
ಕ್ರಿ.ಶ. ೧೫೫೧	ಕೊಟ್ಟೂರು	ಆ ಸದಾಶಿವರಾಯರು ಹಡಪದ ಕೃಷ್ಣಪ್ಪ ನಾಯಕರಿಗೆ ಕೊಟ್ಟ ಕೊಟ್ಟೂರ ಸೀಮೆಗೆ ಸಲುವ ಬಾಗುಳಿಯ	ಎಸ್.ಐ.ಐ. ೯ ಸಂ - ೬೪೧

ಕ್ರಿ.ಶ. ೧೫೫೪	ಹರಿಹರ ಸೀಮೆ	ಸದಾಶಿವ ಮಹಾರಾಯರ ಹಡಪದ ಬಯಪ್ಪನಾಯಕರ ಮಕ್ಕಳು ಕೃಷ್ಣಪ್ಪನಾಯಕರು ಶ್ರೀ ನಾರಸಿಂಹ ಜಯಂತಿ ಪುಣ್ಯಕಾಲದಲ್ಲಿ ತಮ್ಮ ತಂದೆ ಬಯ್ಯಪ್ಪನಾಯಕರಿಗೂ ತಮ್ಮ ತಾಯಿ ಕೊಂಡಮಮ್ಮನವರಿಗೆ ಪುಣ್ಯವ ಆಗಬೇಕೆಂದು ಬೆಳುವಡಿಯ ಗ್ರಾಮವನು ಹರಿಹರೇಶ್ವರ	ಎಕ ೧೧ (ಹಳೆ) ದಾವಣಗೆರೆ ೨೨
ಕ್ರಿ.ಶ. ೧೫೬೦	ಹರಿಹರ ಸೀಮೆ	ಸದಾಶಿವರಾಯರ ಹಡಪದ ಬಯಪ್ಪನಾಯಕರ ಮಕ್ಕಳ ಕೃಷ್ಣಪ್ಪ ನಾಯಕರ ಕಾರ್ಯಕರ್ತರಾದ ವೇಲೂರ ಕಾಳಪ್ಪ ನಾಯಕರ ಮಕ್ಕಳು ಕೃಷ್ಣಪ್ಪ ನಾಯಕರಿಗೆ ಪುಣ್ಯವಾಗಬೇಕೆಂದು ಹರಿಹರ - ದೇವರ ಹೆಂಡಿರು ಮಹಾಲಕ್ಷ್ಮಿದೇವರಿಗೆ ಹರಿಹರಸೀಮೆ	ಎಕ ೧೧ (ಹಳೆ) ದಾವಣಗೆರೆ ೩೦
ಕ್ರಿ.ಶ. ೧೫೬೧	ಹರಿಹರ ಸೀಮೆ	ಸದಾಶಿವರಾಯರ ಹಡೆಪದ ಬಯಪ್ಪನಾಯಕರ ಮಕ್ಕಳು ಕೃಷ್ಣಪ್ಪ ನಾಯಕರ ಕಾರ್ಯಕರ್ತರಾದ ವೇಲೂರ ಕಾಳಪ್ಪ ನಾಯಕರ ಮಕ್ಕಳು ಶ್ರೀ ಹರಿಹರ ದೇವರ ಲಕ್ಷ್ಮೀದೇವರ	ಎಕ ೧೧ (ಹಳೆ) ದಾವಣಗೆರೆ ೮೩
ಕ್ರಿ.ಶ. ೧೫೬೬	ಗೋಣಿಬೀಡುಸೀಮೆ	ಬಯಪ್ಪನಾಯಕ ಕೃಷ್ಣಪ್ಪನಾಯಕರಿಗೆ ಪುಣ್ಯವಾಗಲಿ ಎಂದು ಗೋಣಿಬೀಡು ಸೀಮೆಯ ೧೮ ಆಘ್ರುದ	ಎಕ ೮೨ ಆಲೂರು ೪೪
?	ಗೋಣಿಬೀಡುಸೀಮೆ	ಕೃಷ್ಣಪ್ಪನಾಯಕ ಕಾರ್ಯಕರ್ತರಾದ ಬುಕ್ಕಪ್ಪನಾಯಕರ ಬಿನ್ನಹದ.... ಬೀಡುಸೀಮೆಗೆ ಬಂದ	ಎಕ ೮ ಆಲೂರು ೪೮

ಇವುಗಳಲ್ಲಿ ಅರವೀಡು ಕಾಲದಲ್ಲಿಯೂ ಅವನ ಹತ್ತಿರ ಉಳಿದ ಸೀಮೆಗಳೆಂದರೆ ನರಸಿಂಹಪುರ ಮಾತ್ರ. ಅರವೀಡುರಾಯನಿಂದ ನೂತನವಾಗಿ ಪಾಲಿಸಲು ಪಟ್ಟ ಜಿಂಜಿಯಲ್ಲಿ ನೆಲೆಸಿದ ಕೃಷ್ಣಪ್ಪನಾಯಕನ ಪರವಾಗಿ ಅಥವಾ ಬದಲಿಗೆ ಅವನ ಮಗನಾದ ವೆಂಕಟಾದ್ರಿನಾಯಕನು ನರಸಿಂಹಪುರದಲ್ಲಿ ನಿಂತು ಸ್ವತಂತ್ರವಾಗಿ ಆಳ್ವಿಕೆ ಮಾಡತೊಡಗಿದನು. ಇದರಿಂದ ಮುಂದೆ ಮೈಸೂರು ಒಡೆಯರ ಕೈಯಿಂದ ಪತನ ವಾಗುವ ತನಕ ಸುಮಾರು ಒಂದು ಶತಮಾನ ಕಾಲ ವೆಂಕಟಾದ್ರಿನಾಯಕನ ಸಂತತಿಯವರೇ ನರಸಿಂಹಪುರದಲ್ಲಿ ವಂಶಪರಂಪರಾಗತ ಆಳ್ವಿಕೆ ನಡೆಸಿದರು.

ಬೇಲೂರು ನಾಯಕರ ಉಗಮ

ಬೇರೂರು ನಾಯಕರ ಕ್ರಿ.ಶ. ೧೭ ಮತ್ತು ೧೮ನೇ ಶತಮಾನದ ತಮ್ಮ ಅನೇಕ ಶಾಸನಗಳಲ್ಲಿ ಅವರ ಪೂರ್ವಿಕನಾದ ಎರಕೃಷ್ಣಪ್ಪನಾಯಕನಿಗೆ ಕೃಷ್ಣದೇವರಾಯನು ಬೇಲೂರನ್ನು ಪಾಲಿಸಿದನೆಂದು ದಾಖಲಿಸಲಾಗಿದೆ. ಆದರೆ ಈ ರೀತಿಯ ಮೊದಲ ಉಲ್ಲೇಖವನ್ನು ಕ್ರಿ.ಶ. ೧೬೫೦ ರ ಶಾಸನವೊಂದರಲ್ಲಿ ಕಾಣಬಹುದು. [35]

'ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರುಷ ೧೫೭೨ನೇ ವರ್ತಮಾನದ ವಿಕ್ರುತ್ತೀ ಸಂವತ್ಸರದ ವಯಿಶಾಕಶು ೧೫ಲು ಸೋಮೋಪರಾಗ ಪುಣ್ಯಕಾಲದಲು... ಕಾಶ್ಯಪಗೋತ್ರದ ಕ್ರಿಷ್ಣಪ್ಪನಾಯಕರ ಪಉತ್ರರಾದ ವೆಂಕಟಾದ್ರಿನಾಯಕರ ಪುತ್ರರಾದ ಕೃಷ್ಣಪ್ಪನಾಯಕರೂ ಕೊಟ್ಟ ಭೂದಾನದ ಸಿಲಾಶಾಸನ ಕ್ರಮವೆಂತೆಂದರೆ | ನಂಮವ್ರಿದ್ಧ ಪಿತಾಮಹರಾದ ... ಬಿರುದ ಸಪ್ತಾಂಗಹರಣರಾದ ಕೃಷ್ಣಪ್ಪನಾಯಕರಿಗೆ | ಕೃಷ್ಣಪ್ಪರಾಯಯರವರು ಅಮರಮಾಗಣೆಯಾಗಿ ಬಂದ ಬೇಲೂರು ಸ್ಥಳಕೆ'

ನಂತರ ಇದೇ ರೀತಿಯ ಉಲ್ಲೇಖ ಅನೇಕ ಶಾಸನಗಳಲ್ಲಿ ದಾಖಲಾಗಿರುವುದನ್ನು ಕಾಣುತ್ತೇವೆ.[36] ಆದರೆ ಎರಕೃಷ್ಣಪ್ಪನಾಯಕನಿಗೆ ಕೃಷ್ಣದೇವರಾಯನು ಬೇಲೂರನ್ನು ನೀಡಿರುವುದು ಸತ್ಯಸಂಗತಿ ಅಲ್ಲ ಎಂದು ಕೆಲವು ದಾಖಲೆಗಳಿಂದ ಹೇಳಬಹುದು. ಅರವೀಡು ಮನೆತನದವರ ಕಾಲದಲ್ಲಿ ಬೇಲೂರು ನಾಯಕರ ಆಳ್ವಿಕೆಗೆ ಒಳಗಾಗಿದ್ದ ಪ್ರದೇಶ ತುಳುವ ಮನೆಯತನದವರ ಕಾಲದಲ್ಲಿ ಕನಿಷ್ಟ ವಸ್ತಾರಿ, ಗೋಣಿಬೀಡು ಮತ್ತು ಹಾಸನ ಇವೇ ಮೂರು ಸೀಮೆಗಳನ್ನಾಗಿ ಮಾಡಲಾಗಿದ್ದುದು ಶಾಸನಗಳಿಂದ ತಿಳಿದು ಬರುತ್ತದೆ.

ವಸ್ತಾರಿ ಸೀಮೆ

ಕಾಲ	ಹೆಸರು	ವಿಷಯ	ಶಾಸನ
ಕ್ರಿ.ಶ. ೧೫೨೫	ಬಸವಪ್ಪನಾಯಕ	ಕೃಷ್ಣದೇವರಾಯ ಮಹಾರಾಯರ ಊಳಿಗದ ಜಕ್ಕಣ್ಣನಾಯಕರ ಮಕ್ಕಳು ಬಸಪ್ಪನಾಯಕರು... ನಮಗೆ ಕೃಷ್ಣದೇವ ಮಹಾರಾಯರು ನಾಯಕ ತನಕೆ ಪಾಲಿಸಿದ ವಸ್ತಾರಿ ಸೀಮೆ	ಎಕ ೯ ಬೇಲೂರು ೧೮೨
ಕ್ರಿ.ಶ. ೧೫೨೪	ಬಸವಪ್ಪನಾಯಕ	ಕೃಷ್ಣದೇವಮಹಾರಾಯರ ಊಳಿಗದ ಜಕಣನಾಯಕರ ಮಕ್ಕಳು ಬಸಪ್ಪನಾಯಕರು .. ನಮಗೆ ಕೃಷ್ಣದೇವಮಹಾರಾಯರು ನಾಯಕತನಕ್ಕೆ ಪಾಲಿಸಿದ ವಸ್ತಾರಿಸೀಮೆಗೆ	ಎಕ ೯ ಬೇಲೂರು ೧೫೯
ಕ್ರಿ.ಶ. ೧೫೩೯	ರಘುಪತಿರಾಜ ಒಡೆಯ	ಅಚ್ಯುತಮಹಾದೇವರಾಯರು ರಾಜ್ಯಂಗೆಯುತಿರ್ಪ... ಮಲ್ಲರಾಜವೊಡೆಯರ ಮಕ್ಕಳು ರಘುಪತಿರಾಜ ಒಡೆಯನಿಗೆ ಅಮರಮಾಗಣೆಗೆ ಪಾಲಿಸಿದ ವಸುಧಾರೆ ಸೀಮ.	ಎಕ ೧೧ ಚಿಕ್ಕಮಗಳೂರು ೧೮೪

ಗೋಣಿಬೀಡುಸೀಮೆ

ಕ್ರಿ.ಶ. ೧೫೨೨	ಸಿಂಗಪ್ಪನಾಯಕ	ಕೃಷ್ಣದೇವರಾಯಮಹಾರಾಯರ ಕೊಮಾರ ಮಂಚಪ್ಪನಾಯಕರ ಮಗ ಸಿಂಗಪ್ಪನಾಯಕನೂ ... ನಂಮ ನಾಯಕತನಕೆ ಸಲುವ ಗೋಣಿಬೀಡು ಸೀಮೆ	ಎಕ ೯ ಬೇಲೂರು ೧೧

ಹಾಸನ ಸೀಮೆ

ಕ್ರಿ.ಶ. ೧೫೧೬	ಧನಂಜಯರಾಯ	ರಾಯವೊಡೆಯರ ಕೊಮಾರ ಧನಂಜಯವೊಡೆಯರು ಕೊಟ್ಟ ಅಘ್ಪಾರದ ಕ್ರಮವೆಂತೆಂದರೆ ತಾವು ನಂಮ ಅಮರದ ಪಡೆಯನಾಯಕತನಕೆ ಸಲುವ ಹಾಸನ ಸ್ಥಳದ	ಎಕ - ೮ ಹಾಸನ ೨೧೯
ಕ್ರಿ.ಶ. ೧೫೩೧	ಚೆಂನಪ್ಪಣ್ಣ	ಶ್ರೀ ಅಚ್ಯುತರಾಯರೂ ಚೆಂನ್ನಪಂಗಣಗಳಿಗೆ ಅಮರದ ನಾಯಕತನಕೆ ಪಾಲಿಸಿದ ಹಾಸನದ ಸೀಮೆವೊಳಗಣ	ಎಕ - ೮ ಹಾಸನ - ೧
ಕ್ರಿ.ಶ. ೧೫೩೫	ಮಾನಂದಿ ರಘುಪತಿರಾಯ	ಶ್ರೀವೀರಪ್ರತಾಪ ಅಚ್ಯುತರಾಯ... ತಿರುಮಲಯ್ಯ ಮಹಾಅರಸುಗಳ ಅಳಿಯ ಮಾನಂದಿ (ಯ ರಘು) ಪತಿರಾಜ ಮಹಾಅರಸುಗಳು... ನಂಮ ನಾಯಕತನಕೆ ಸಲುವ ಹಾಸನದ ಸೀಮೆಯ ಸ್ಥಳವೊಳಗಣ	ಎಕ - ೮ ಬೇಲೂರು ೪೭೬

ಶಾಂತಿಗ್ರಾಮದ ಸೀಮೆ

ಕ್ರಿ.ಶ. ೧೫೩೨	ಕೆರೆಯತಿಂಮರಸಯ	ಶ್ರೀ ಅಚ್ಯುತದೇವರಮಹಾರಾಯರು ಕೆರೆಯ ತಿಂಮರಸಯನವರಿಗೆ ಅಮರನಾಯಕತನಕೆ ಪಾಲಿಸಿದ ಶಾಂತಿಗ್ರಾಮದ ಸೀಮೆವೊಳಗಣ ಸ್ಥಳದ	ಎಕೆ - ೮ ಹಾಸನ ೧೬೬
ಕ್ರಿ.ಶ. ೧೫೩೦	ಲಿಂಗಣೊಡೆಯ	ಶ್ರೀ ಅಚ್ಯುತರಾಯ.. ಆಲಿಂಗಣೊಡೆಯರು ಆ ಸಾತಿಗ್ರಾಮದ ಸೀಮೆಯ	ಎಕೆ- ೮

		ಮಣಿಹವ ಮಾಡಿಕೊಂಡು ಸಾತಿಗ್ರಾಮವಳನಾಳುವ ಕಾಲದಲ್ಲಿ	ಚನ್ನರಾಯ ಪಟ್ಟಣ ೪೫
ನರಸೀಪುರ ಸೀಮೆ			
ಕ್ರಿ.ಶ. ೧೫೧೬	ಮಲ್ಲರಸಯ್ಯ	ಶ್ರೀ ಕೃಷ್ಣವರ್ಮಮಹಾರಾಯಂ ಸಮಸ್ತ ಪೃಥ್ವೀ ರಾಜ್ಯಂ.. ಮಹಾಮಂತ್ರಿ ಬಾಗೂರಮಲ್ಲರಸಯ್ಯವರು ಹೊಯಿಸಳನಾಡ ನರಸಿಯಪುರದ ಸೀಮೆಯನ್ನಾಳುತಿರಲು	ಎಕ ೮ ಹೊಳೆನರಸೀಪುರ ೧೨೪

ಮೇಲಿನ ಪಟ್ಟಿಯಲ್ಲಿ ಸೂಚಿಸಿರುವಂತೆ ಬೇಲೂರು ಸುತ್ತಮುತ್ತಲಿರುವ ಅನೇಕ ಸೀಮಗಳು ಕೃಷ್ಣದೇವರಾಯ ಮತ್ತುಅಚ್ಯುತರಾಯರ ಕಾಲದಲ್ಲಿ ಇತರ ನಾಯಕರ ನಾಯಕತನಕ್ಕೆ ಪಾಲಿಸಲಾಗಿದ್ದ ಕೃಷ್ಣದೇವರಾಯರು ಎರಕೃಷ್ಣಪ್ಪ ನಾಯಕನಿಗೆ ಬೇಲೂರನ್ನು ನಾಯಕತನಕ್ಕೆ ನೀಡಿರುವುದು ಕೃಷ್ಣ ಅಸಾಧ್ಯ ಎಂದು ಹೇಳಬೇಕಾಗುತ್ತದೆ. ಇದಕ್ಕೆ ಮುಖ್ಯವಾಗಿ ಎರಕೃಷ್ಣಪ್ಪನಾಯಕನು ದೇವರಾಯನ ಸಮಕಾಲೀನದವನಲ್ಲ ಎಂದು ತೋರುತ್ತದೆ. ಏಕೆಂದರೆ ಇದುವರೆಗೆ ದೊರಕಿರುವ ಶಾಸನಗಳಲ್ಲಿ ಸೂಕ್ಷ್ಮವಾಗಿ ಅಧ್ಯಯನ ಮಾಡಿ ನೋಡಿದಾಗ ಎರಕೃಷ್ಣಪ್ಪ ನಾಯಕರನ್ನು ಉಲ್ಲೇಖಿಸುವ ಮೊಟ್ಟ ಮೊದಲನೆಯ ಶಾಸನವೆಂದರೆ ಕ್ರಿ.ಶ. ೧೫೪೩ ರ ಎರಡು ಶಾಸನಗಳಾಗಿವೆ.[37]

ಉದಾ : ಶ್ರೀ ವೀರ ಪ್ರತಾಪ ಸದಾಶಿವದೇವ ಮಹಾರಾಯರು ಪೃಥ್ವೀರಾಜ್ಯಂಗೆಉತಂ ವಿರಲಾಗಿ ಅವರ ಸಂಧಾನದ ಪೊನ್ನಪ್ಪನಾಯಕರ ಮಕ್ಕಳು ಕೃಷ್ಣಪ್ಪನಾಯಕರು ತಂಮಮರ ಮಾಗಣೆಗೆ ಸಲುವ ಬಾಗೂರ ಸೀಮೆಯ ಚಂನಸಮುದ್ರವನು.

ಈ ವಿಷಯಗಳನ್ನು ಅವಲೋಕನ ಮಾಡಿ ನೋಡಿದಾಗ ಕೃಷ್ಣ ದೇವರಾಯನು ಎರಕೃಷ್ಣಪ್ಪ ನಾಯಕನಿಗೆ ಬೇಲೂರನ್ನು ಪಾಲಿಸಿದ ನೆಂಬುದು ೧೭ನೇ ಶತಮಾನದಲ್ಲಿ ಬೇಲೂರು ನಿರ್ಮಿಸಿದ ಕಲ್ಪನೆಯೇ ಹೊರತು ವಾಸ್ತವ ಸಂಗತಿ ಅಲ್ಲ ಎಂದು ತೀರ್ಮಾನಿಸಬಹುದು.

ಕ್ರಿ.ಶ. ೧೫೪೩ ಶಾಸನದ ಪ್ರಕಾರ ಬಾಗೂರ ಸೀಮೆಯು ಎರಕೃಷ್ಣಪ್ಪ ನಾಯಕನ ಅವರ ಮಾಗಣೆಯಾಗಿತ್ತು.[38] ಈಗ ಎರಕೃಷ್ಣಪ್ಪನಾಯಕನ ಕಾರ್ಯ ಚಟುವಟಿಕೆ ಯನ್ನು ದಾಖಲಿಸುವ ಶಾಸನಗಳನ್ನು ಪರಿಶೀಲಿಸೋಣ.

ಕಾಲ	ವಿಷಯ	ಶಾಸನ ಸಂಖ್ಯೆ
ಕ್ರಿ.ಶ. ೧೫೪೬	ಶ್ರೀ ವೀರ ಪ್ರತಾಪ ಸದಾಶಿವರಾಯ ಮಹಾರಾಯರು... ಯರಕೃಷ್ಣಪ್ಪ ನಾಯಕರಿಗೆ ನಿನ್ನ ಬಾಗೂರ ಸೀಮೆಯ ನಾಯಿಂದರಿಗೆ ತೆರಿಗೆ ಸಿದ್ದಾಯ...	ಎಕ ೧೧ ಹೊಳಲ್ಕೆರೆ ೧೧೦
ಕ್ರಿ.ಶ. ೧೫೫೨	ಶ್ರೀ ವೀರಪ್ರತಾಪ ಸದಾಶಿವರಾಯ ಮಹಾರಾಯರು ... ಚಿ... ಪ್ರತಿ ನಾಮವಾದ ಕೃಷ್ಣಸಮುದ್ರಗ್ರಾಮವನ್ನು ಎರಕೃಷ್ಣಪ್ಪನಾಯಕ ಸದಾಶಿವರಾಯರಿಗೆ ಪುಣ್ಯವಾಗಲಿ ಎಂದು	ಎಕ ೧೧ ಹೊಳಲ್ಕೆರೆ ೧೧೪
ಕ್ರಿ.ಶ. ೧೫೫೪	ಶ್ರೀ ವೀರಪ್ರತಾಪ ಸದಾಶಿವರಾಯ ಮಹಾರಾಯರು ಸುಖೀ ರಾಜ್ಯ ಪೊತ್ತಪ್ಪನಾಯಕಯ್ಯನವರ ಕೃಷ್ಣಪ್ಪನಾಯಕರ ಕಾರ್ಯಕೆಕರ್ತರಾದ ವಿಠಣನಾಯಕರು ಬಾಗೂರ ಸೀಮೆಯ ಪಾರುಪತ್ಯವ ಮಾಡುವಾಗ	ಎಕ ೧೧ ಹೊಳಲ್ಕೆರೆ ೧೧೨
ಕ್ರಿ.ಶ. ೧೫೫೫	ಶ್ರೀ ವೀರಸದಾಶಿವರಾಯ ... ಕೃಷ್ಣಪ್ಪನಾಯಕ ಕಾರ್ಯಕೆ ಕರ್ತರಾದ ವಿಠಣನಾಯಕರು ಬಾಗೂರ ಸೀಮೆಯ ಪಾರುಪತ್ಯ ಮಾಡುವಾಗ	ಎಕ ೧೧ ಹೊಳಲ್ಕೆರೆ
೧೧೩ ಕ್ರಿ.ಶ. ೧೫೫೬	ಶ್ರೀ ವೀರಸದಾಶಿವರಾಯರು ಪೃಥ್ವೀರಾಜ್ಯಂಗೆ ಉತಿರಲು... ನೀರುಗುಂದ... ನಾಯಕರ ಮಕ್ಕಳು ಕೃಷ್ಣಪ್ಪನಾಯಕರ ಅಂತರಗಟ್ಟೆ ಅಮ್ಮನ	ಎಕ ೧೧ ಹೊಳಲ್ಕೆರೆ ೧೧೮

ಎರಕೃಷ್ಣಪ್ಪನಾಯಕನ ಕಾರ್ಯವನ್ನು ದಾಖಲಿಸುವ ಕೊನೆ ಶಾಸನ ಕ್ರಿ.ಶ. ೧೫೫೬ ರಂದು. ಅಂದರೆ ಕ್ರಿ.ಶ. ೧೫೫೬ ರ ನಂತರದ ಸ್ವಲ್ಪಕಾಲದಲ್ಲಿ ಅವನು ಮರಣ ಹೊಂದಿದಂತೆ ಕಾಣುತ್ತದೆ. ಏಕೆಂದರೆ ಕ್ರಿ.ಶ. ೧೫೫೯ ಶಾಸನವೊಂದರಲ್ಲಿ ಅವನ ಮಗನಾದ ವೆಂಕಟಾದ್ರಿ ನಾಯಕನು ಬಾಗೂರು ಸೀಮೆಯನ್ನು ತನ್ನ ತಂದೆಯ ಹಾಗೆ ಅಮರಮಾಗಣೆಯಾಗಿ ಪಾಲಿಸುತ್ತಿದ್ದನು.

ಶ್ರೀ ವೀರಪ್ರತಾಪ ಸದಾಶಿವಮಹಾರಾಯರು ಪೃಥ್ವಿರಾಜ್ಯಂಗೆಉತಿರಲು ಅವರ ಹಡಪದ ಎರಕೃಷ್ಣಪ್ಪನಾಯಕರ ಮಕ್ಕಳು ವೆಂಕಟಾದ್ರಿನಾಯಕರು ಭಕ್ತವತ್ಸಲ ಗುಂಡೆರ ಚಂನಕೇಶವದೇವರಿಗೆ ಅರ್ಚನ ವೃತ್ತಿಗೆ ಕೊಟ್ಟ ಗ್ರಾಮ ಶಾಸನ ಸದಾಶಿವರಾಯರು ನಮಗೆ ಅಮರಮಾಗಣೆಗೆ ಪಾಲಿಸಿದ ಬಾಗೂರ ಸೀಮೆಗೆ ಸಲುವ ಗುಂಡೇರ ಕಾಲುವಳಿ ನರಸಾಪುರ ಗ್ರಾಮವನು.[39]

ಕ್ರಿ.ಶ. ೧೫೫೮ ರ ಒಂದು ಶಾಸನ ವಸ್ತಾರಿ ಸೀಮೆಯೂ ವೆಂಕಟಾದ್ರಿನಾಯಕನ ಅಧೀನದಲ್ಲಿದ್ದುದ್ದನ್ನು ಪರೋಕ್ಷವಾಗಿ ಸೂಚಿಸುತ್ತದೆ.

ಶ್ರೀಮತು ವೆಂಕಟಪದ್ರಿನಾಯಕರ ಕಾರ್ಯಕರ್ತರಾದ ತಿಂಮ ನಾಯಕರು ಕಲಾರೆ ರಾಮಪ್ಪ ಗವುಡಗೆ ಕೊಟ್ಟ ಹುಲ್ಲುಕೊಡಗಿ.[40]

ಈ ವಸ್ತಾರಿ ಸೀಮೆಯು ಬೇಲೂರು ನಾಯಕರ ಆಳ್ವಿಕೆ ಪ್ರದೇಶದ ಒಂದು ಭಾಗವಾಗಿ ಅರವೀಡು ಮನೆತನದವರ ಕಾಲದಲ್ಲಿಯೂ ಮುಂದುವರಿಯಿತು. ಗೋಣಿಬೀಡು ಮತ್ತು ಹಾಸನ ಸೀಮೆಗಳು ಸದಾಶಿವರಾಯನ ಕಾಲದಲ್ಲಿ ಇನ್ನೂ ವೆಂಕಟಾದ್ರಿನಾಯಕನ ವಶಕ್ಕೆ ಬಂದಿರಲಿಲ್ಲ. ಹಾಸನ ಸೀಮೆ ಹಿಂದಿನ ಪುಟಗಳಲ್ಲಿ ತಿಳಿಸಿರುವಂತೆ ಕೃಷ್ಣಪ್ಪ ನಾಯಕನ ನಾಯಕತನದಲ್ಲಿತ್ತು. ಗೋಣಿಬೀಡುಸೀಮೆ ಸಹ ಅವನ ವಶದಲ್ಲಿದ್ದುದನ್ನು ಪರೋಕ್ಷವಾಗಿ ಸೂಚಿಸುವ ಶಾಸನಗಳು ದೊರಕಿವೆ. ಅರವೀಡು ರಾಜವಂಶ ಆರಂಭವಾದ ಮೇಲೆ ಹಾಸನ ಮತ್ತು ಗೋಣಿಬೀಡು ಸೀಮೆಗಳೆರಡೂ ಬೇಲೂರು ವೆಂಕಟಾದ್ರಿನಾಯಕನ ಆಳ್ವಿಕೆಗೆ ಸೇರಿದವು. ಆಗ ಬಾಗೂರ ಸೀಮೆ ಅವನ ಅಧೀನದಿಂದ ತಪ್ಪಿಹೋಗಿ ಇತರ ನಾಯಕರ (ಪ್ರಾಯಶಃ ಸಂತೆಬೆನ್ನೂರು) ಆಳ್ವಿಕೆಗೆ ಸೇರಿತ್ತು.

ಒಟ್ಟಿನಲ್ಲಿ ಹೇಳುವುದಾದರೆ.

1. ೧೬ನೇ ಶತಮಾನದ ಉತ್ತರಾರ್ಧದಲ್ಲಿ ವಿಜಯನಗರದಲ್ಲಿ ಅರವೀಡು ಸಂತತಿ ಆರಂಭವಾದ ನಂತರ ಅಥವಾ ಅದಕ್ಕಿಂತ ಸ್ವಲ್ಪ ಕಾಲ ಮೊದಲು ಈ ಮೂರು ನಾಯಕ ಮನೆತನಗಳು ಸ್ಥಳೀಯವಾಗಿ ತಮ್ಮ ಆಡಳಿತವನ್ನು ವಂಶಪಾರಂಪರ್ಯವಾಗಿ ಆರಂಭಿಸಿದವು.

2. ೧೬ನೇ ಶತಮಾನದ ಪೂರ್ವಾರ್ಧದ ತುಳುವ ಸಂತತಿಯ ಆಳ್ವಿಕೆಯ ಕಾಲದಲ್ಲಿ ಈ ನಾಯಕ ಮನೆತನಗಳ ಆರಂಭಿಕ ನಾಯಕರಿಗೆ ಈ ಬೃಹತ್ ಸಾಮ್ರಾಜ್ಯದ ವಿವಿಧ ಕಡೆ ನಾಯಕತನವನ್ನು ನೀಡಲಾಗಿತ್ತು. ಅವರಿಗೆ ಸೀಮಿತವಾದ ಕಾಲಾವಧಿಗೆ ಭೂಭಾಗಗಳನ್ನು ನೀಡಲಾಗುತ್ತಿತ್ತು. ಆದುದರಿಂದ ಅವರು ತಾವು ಪಡೆದ ಸೀಮೆಯ ಮೇಲೆ ನಿಯಂತ್ರಣ ಪಡೆಯುವುದರೊಳಗಾಗಿ ಅವರನ್ನು ಬೇರೆ ಕಡೆಗೆ ವರ್ಗಾಯಿಸ ಲಾಗುತ್ತಿತ್ತು.

3. ಅರವೀಡು ಮನೆತನದವರು ರಾಜಕೀಯ ವ್ಯವಸ್ಥೆಯನ್ನು ಪುನರ್‌ರಚಿಸುವ ಪ್ರಯತ್ನಕ್ಕಿಂತ ಹೆಚ್ಚಾಗಿ ಅವರಿಗೆ ತಾಳೀಕೋಟೆ ಕದನದ ಸೋಲು ಅನಿವಾರ್ಯವಾದ ವಾತಾರಣವನ್ನು ಸೃಷ್ಟಿಸಿತು. ಮತ್ತು ಕೇಂದ್ರ ರಾಜತ್ವದ ಪತನ ಅವರಲ್ಲಿ ಆತ್ಮವಿಶ್ವಾಸ ವನ್ನು ಕುಂದಿಸಿ ವಂಶ ಬದಲಾವಣೆಗೆ ದಾರಿಮಾಡಿಕೊಟ್ಟುದರಿಂದ ಒಂದೇ ಸ್ಥಳದಲ್ಲಿ ನಾಯಕರಿಗೆ ವಂಶಪಾರಂಪರ್ಯವಾಗಿ ಆಡಳಿತ ನಡೆಸುವ ಹೊಸನೀತಿ ಯನ್ನು ಅರವೀಡು ಮನೆತನದವರು ಅನುಸರಿಸಿದ್ದುದರಿಂದ ಈ ಮೇಲಿನ ಮೂರು ಮನೆತನಗಳು ತಮಗೆ ನಿರ್ದಿಷ್ಟಪಡಿಸಿದ ಸ್ಥಳಗಳಲ್ಲಿ ಬಲವಾಗಿ ತಳವೂರಿದವು. ಹೀಗೆ ತಾಳೀಕೋಟೆ ಕದನದ ನಂತರವೇ ಅಮರ ನಾಯಕರು ತಮ್ಮ ವಂಶಪಾರಂಪರ್ಯ ಆಳ್ವಿಕೆಯನ್ನು ಆರಂಭಿಸಿದ ರೆಂದು ವೆಂಕಟರಮಣಯ್ಯ ಮತ್ತು ನೀಲಕಂಠಶಾಸ್ತ್ರಿ ವಾದಿಸಿರುವುದು[41] ಈ ಪ್ರಬಂಧ ದಿಂದ ದೃಢಪಟ್ಟಂತಾಯಿತು.

ಆದರೆ ಇವರಿಬ್ಬರ ನಂತರದ ಸಂಶೋಧಕರಲ್ಲಿ ನಾಯಕರೆಂದರೆ, ವಿಜಯ ನಗರರಾಯರಿಂದ ಸ್ವತಂತ್ರವಾದ ತಮ್ಮದೇ ಆದ ರಾಜಕೀಯ ತಳಹದಿಯುಳ್ಳ ಸ್ಥಳೀಯ ಪ್ರಭುಗಳೆಂಬ ಭಾವನೆ ಪ್ರಬಲವಾಗಿದೆ. ಬರ್ಟನ್‌ಸ್ಟೈನ್ ಮತ್ತು ನೊಬುರು ಕರಾಷಿಮಾ ಇಬ್ಬರೂ ನಾಯಕರನ್ನು ಸ್ಥಳೀಯ ಪ್ರಭುಗಳೆನ್ನುವ ಗುಣಲಕ್ಷಣ ಹೇಳುವುದರಲ್ಲಿ ಒಮ್ಮತ ವ್ಯಕ್ತಪಡಿಸುತ್ತಾರೆ. ಹಾಗಾಗಿ ಕೆಲವು ನಾಯಕರು ತುಳುವ ಕಾಲದಲ್ಲಿ ತಮ್ಮ ವಂಶಪಾರಂಪರ್ಯ ಆಳ್ವಿಕೆಯನ್ನು ಆರಂಭಿಸಿದರೆಂದು ಅವರು ವಾದಿಸುತ್ತಾರೆ. ಆದರೆ ಮಧುರೆ ನಾಯಕರನ್ನು ಕುರಿತು ಪುಷ್ಟೀಕರಿಸುವಂತಹ ಉಲ್ಲೇಖಗಳು ಸಿಗುವುದು ನಿಜ. ಆದರೆ ಮಧುರೆ ನಾಯಕರನ್ನು ಕುರಿತು ವೆಂಕಟರಮಣಯ್ಯ ಅವರು ಗುರ್ತಿಸಿದಂತೆ ಇಂತಹ ದಾಖಲೆಗಳಲ್ಲಿ ಐತಿಹಾಸಿಕ ವಾಸ್ತವವಲ್ಲದ ಕಲ್ಪನೆಗಳು ಸೇರುತ್ತವೆ ಎಂದು ಹೇಳಿದ್ದಾರೆ.[42] ಜಿಂಜಿ ನಾಯಕರನ್ನು ಕುರಿತೂ ಅವರ ವಂಶಪಾರಂಪರ್ಯ ಆಳ್ವಿಕೆಯ ಆರಂಭಕಾಲವನ್ನು ತುಳುವ ಕಾಲದಲ್ಲಿ ಇಟ್ಟುಕೊಳ್ಳುವ ದಾಖಲೆ ಇದೆ.[43] ಬೇಲೂರು ನಾಯಕರ ೧೭ನೇ ಶತ ಮಾನದ ಶಾಸನಗಳಲ್ಲಿ ಅವರು ಬೇಲೂರು ಪ್ರದೇಶದ ಮೇಲಿನ ವಂಶಪಾರಂಪರ್ಯ ಆಳ್ವಿಕೆಯು ಕೃಷ್ಣದೇವರಾಯನ ಕಾಲದಲ್ಲಿ ಆರಂಭವಾದಂತೆ ದಾಖಲಿಸಲಾಗಿದೆ. ಆದರೆ ಮೇಲೆ ಪರಿಶೀಲಿಸಿದಂತೆ ಈ ಉಲ್ಲೇಖಗಳು ಐತಿಹಾಸಿಕ

ಸತ್ಯ ಎಂದು ಪರಿಗಣಿಸಲು ಆಗದು. ನಾವು ನಾಯಕರನ್ನು ವಿಶೇಷವಾಗಿ ಅವರ ವಂಶಪಾರಂಪರ್ಯ ಆಳ್ವಿಕೆಯ ಆರಂಭಿಕ ಕಾಲವನ್ನು ಅಧ್ಯಯನ ಮಾಡುವಾಗ ನಂತರದ ಕಾಲದಲ್ಲಿ ರಚಿತವಾದ ದಾಖಲೆಗಳಿಗೆ ಪ್ರಾಮುಖ್ಯತೆ ಕೊಡದೆ ಸಮಕಾಲೀನ ದಾಖಲೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕಾಗಿದೆ.

ಟಿಪ್ಪಣಿಗಳು

1. Epigraphia Carnatica - Vol - 8 ಪೀಠಿಕೆ ixxi (New)
2. Epigraphia Carnatica - Vol - 9 ಪೀಠಿಕೆ ixxiii (New)
3. Epigraphia Carnatica - Vol - 9 ಪೀಠಿಕೆ ixxv (New)
4. ಸತ್ಯನಾರಾಯಣ - ಮೈಸೂರಿನ ಕಿರಿಯ ರಾಜವಂಶಗಳು ಕರ್ನಾಟಕ ಚರಿತ್ರೆ ನಂ. 3 (ಸಂ)ಕೆ.ಎಸ್. ಶಿವಣ್ಣ ಹಂಪಿ - ಪ್ರಸಾರಾಂಗ, ಕನ್ನಡ ವಿವಿ, 1997 ಪು 446 ಮತ್ತು 450
5. ಎಪಿಗ್ರಾಫಿಯಾ ಕರ್ನಾಟಕ 9 ಬೇಲೂರು 66 (ಹೊಸ) ಕ್ರಿ.ಶ. 1580
6. ಎಪಿಗ್ರಾಫಿಯಾ ಕರ್ನಾಟಕ 9 ಬೇಲೂರು 219 (ಹೊಸ) ಕ್ರಿ.ಶ. 1583
7. ಎಪಿಗ್ರಾಫಿಯಾ ಕರ್ನಾಟಕ 5 ಕೃಷ್ಣರಾಯನಗರ 104 (ಹೊಸ) ಕ್ರಿ.ಶ. 1577
8. ಎಪಿಗ್ರಾಫಿಯಾ ಕರ್ನಾಟಕ 9 ಸಕಲೇಶಪುರ 62 (ಹೊಸ) ಕ್ರಿ.ಶ. 1654
9. ಎಪಿಗ್ರಾಫಿಯಾ ಕರ್ನಾಟಕ 8 ಹೊಳೆನರಸೀಪುರ 12 (ಹೊಸ) ಕ್ರಿ.ಶ. 1588
10. ಎಪಿಗ್ರಾಫಿಯಾ ಕರ್ನಾಟಕ 8 ಅರಕಲಗೂಡು 16 ಮತ್ತು 20 (ಹೊಸ)
11. ಎಪಿಗ್ರಾಫಿಯಾ ಕರ್ನಾಟಕ 8 ಹೊಳೆನರಸೀಪುರ 40 ಕ್ರಿ.ಶ 692 (ಹೊಸ)

    ಎಪಿಗ್ರಾಫಿಯಾ ಕರ್ನಾಟಕ 9 ಸಕಲೇಶಪುರ 02ಕ್ರಿ.ಶ. 1711, ಸಕಲೇಶಪುರ, 51 ಕ್ರಿ.ಶ. 1751

    ಸಕಲೇಶಪುರ 52ಮತ್ತು 53 ಕ್ರಿ.ಶ. 1773

    ಬೇಲೂರು 180 ಕ್ರಿ.ಶ. 1675
12. ಹಡಪ ಎಂದರೆ ಎಲೆ ಅಡಕೆ ಇಟ್ಟುಕೊಳ್ಳುವ ಚೀಲ,. ವಿಜಯನಗರದಲ್ಲಿ ರಾಜನ ಓಲಗದ ಸಂದರ್ಭದಲ್ಲಿ ದೊರೆಯ ಬಳಿ ಇದ್ದು ಎಲೆ ಅಡಕೆಯನ್ನು ನೀಡುವ ಸ್ಥಾನದ ವ್ಯಕ್ತಿ
13. ಎಪಿಗ್ರಾಫಿಯಾ ಕರ್ನಾಟಕ 8 ಹಾಸನ 9 ಕ್ರಿ.ಶ. 1561 (ಹೊಸ)

    ಎಪಿಗ್ರಾಫಿಯಾ ಕರ್ನಾಟಕ 9 ಬೇಲೂರು 37 ಕ್ರಿ.ಶ. 1548 ಬೇಲೂರು 151 ಕ್ರಿ.ಶ. 1561 ಎಸ್.ಐ.ಐ. - 9 640 ಮತ್ತು 641
14. ಎಪಿಗ್ರಾಫಿಯಾ ಕರ್ನಾಟಕ 6 (ಹಳೇಶ್ರೇಣಿ) ಕಡೂರು-20

15. ಎಪಿಗ್ರಾಫಿಯಾ ಕರ್ನಾಟಕ 9 ಬೇಲೂರು 151, 219
16. ಎಪಿಗ್ರಾಫಿಯಾ ಕರ್ನಾಟಕ 8 ಹೊಳೆನರಸೀಪುರ 53, 16, 75, 39, 38, 114, 117 ಅರಕಲಗೂಡು 16 ಮತ್ತು 20
17. ಎಪಿಗ್ರಾಫಿಯಾ ಕರ್ನಾಟಕ 5 ಕೃಷ್ಣರಾಜನಗರ 104 ಕ್ರಿ.ಶ. 1577
18. ಎಪಿಗ್ರಾಫಿಯಾ ಕರ್ನಾಟಕ 9 ಸಕಲೇಶಪುರ 10, 3, 2, 51, 52, 53

    ಎಪಿಗ್ರಾಫಿಯಾ ಕರ್ನಾಟಕ 8 ಹೊಳೆನರಸೀಪುರ 40
19. ಎಪಿಗ್ರಾಫಿಯಾ ಕರ್ನಾಟಕ 9 ಪೀಠಿಕೆ ixxiii
20. A Krishnaswamy - *The Tamil country Under Vijayanagar* Annamalainagar, Annalmalai University 1964, P.p 246- 56

    Karashima Noboru - *Towards new formation South Indian Society under Vijayanagar* rule, Delhi - Oxford University press 1992 Ch 1
21. A.R. 1917 -C 860 - 861
22. ಎಫಿಗ್ರಾಫಿಯಾ ಕರ್ನಾಟಕ 8 ಹೊಳೆನರಸೀಪುರ 20 ಕ್ರಿ.ಶ. 1665 ಮತ್ತು 14
23. ಎಫಿಗ್ರಾಫಿಯಾ ಕರ್ನಾಟಕ 12 ಕಡೂರು 123 ಕ್ರಿ.ಶ. 1526, 190 ಕ್ರಿ.ಶ. 1527, 189 ಕ್ರಿ.ಶ. 1528
24. ಎಫಿಗ್ರಾಫಿಯಾ ಕರ್ನಾಟಕ 8 ಹೊಳೆನರಸೀಪುರ 47 ಕ್ರಿ.ಶ. 1563
25. Karashima Noboru - *Towards a new formation* - p.no. 19
26. M.A.R. - 1932 No. 2
27. S.I.I. Vol 9 No. 626
28. S.I.I. Vol 9 No. 640
29. S.I.I. Vol 9 No. 641
30. S.I.I. Vol 9 No. 647
31. S.I.I. Vol 9 No. 666
32. ಎ.ಕ. 9 ಬೇಲೂರು 37
33. ಎ.ಕ. 8 ಹಾಸನ 122
34. ಎ.ಕ. 8 ಹಾಸನ 2
35. ಎ.ಕ. 9ಸಕಲೇಶಪುರ 10
36. Ec - 05 Ag 9 Ec8 - Ag8, Ec9BL - 180, Ec 8 - Ag 23, Ec ag 23, Ec 8 - HN 40, Ec9 Sl - 2, 40, 3, 51, 52, 53, 14 Ec (old) 14 - TN 255, 256, MAR 1938 No 17
37. MAR 1941 - 3 SII 20- 237
38. MAR 1941 - 3 SII 20- 237
39. ಎಕ (ಹಳೆ) 11ಹೊಳಲ್‌ಕೆರೆ 21

40. ಎಕ 9 ಬೇಲೂರು 526
41. N. Venkataramanaiah - *studies in the History of the Third Dynasty of Vijayanagar* Reprint Delhi Gian Publishing House 1986. Pp 172 - 4 (K.A. Nilakanta Sastri and N. Venkataramaiah - Further sources of Vijayanagar Histroy, Vol I) Madras Uni. Madras 1946, Pp - 299
42. N. Venkdataramanaiah - Studies in the Histroy of the third Dynasty of Vijayanagar; Reprint Delhi Gian publishing house 1986. P.P. 453 - 461
43. Karashima - *Towards a new formation* Pp - 19 and
Krishnaswamy - *The Tamil country* Pp 246 - 8

೩೩. ವಿಜಯನಗರ ಮತ್ತು ಡಚ್ಚರು

ಕೆಳದಿ ಗುಂಡಾಜೋಯಿಸ್

ವಿಜಯನಗರ ಸಾಮ್ರಾಜ್ಯದಲ್ಲಿ ಡಚ್ ವಾಣಿಜ್ಯೋದ್ಯಮ ಇತಿಹಾಸ ಕುರಿತು ರಾಬರ್ಟ್ ಸೀವೆಲ್‌ರವರು -

In 1633 The Portuguese encouraged by the Vijayanagar King, still at Chandragiri, attempted to eject the *Dutch* from 'Paleacate', or Pulicat. An arrangement was made by which the Portuguese were to attack by sea and the Rajah by land ; but while the Viceroy sent his twelve ships as agreed on the the Rajah failed to attack, alleging in explanation that he was compelled to use his army toput down internal disturbances in the kingdom. A second expedition met with no better success, the plans of the Portuguese being again upset by the nonfulfilment of the King's part of the bargain. On the departure of the fleet the King did attack the *Dutch* settlement, but was bought off by a large payment, and the Hollanders remained subsequently undisturbed.

Senhor Lopes tells me that he has found in the National Arhives in the Torre do Tombo, amongst the 'Livros das Moncoes' a number papers bearing on this subject. The most interesting are those contained in volume XXXIV (fol 91-99). These were written by the captain General of Meliapor (St. Thome), by Padre Pero Mexia of the Company of Jesus, and by the Bishop; and amongst the other documents are to be seen translations of two plam - leaf letters written by the King of Vijayanagar, then at Vellore. It appears from these that the King was devoid of energy, and that one Thimma Raya had revolted against him.[1]

ಈ ರೀತಿ ಪ್ರಸ್ತಾಪಿಸಿದ್ದಾರೆ. ಇದರಿಂದ ವಿಜಯನಗರ ಸಾಮ್ರಾಜ್ಯದಲ್ಲಿ ಡಚ್ಚರ ಪ್ರವೇಶ ಕುರಿತು ಅಧ್ಯಯನ ಕೈಗೊಳ್ಳುವಲ್ಲಿ ಈ ಕೆಳಕಂಡ ಆಕರಗಳು ಸಂಶೋಧಕರಿಗೆ ಸಹಕಾರ ನೀಡುತ್ತವೆ. ಕ್ರಿ.ಶ.೧೩೭೨ ರಿಂದ ೧೪೭೨ರವರೆಗೆ ಗೋವೆ ರಾಜ್ಯವೂ ಸೇರಿದಂತೆ ಸಮಗ್ರ ಕರಾವಳಿ ತೀರಪ್ರದೇಶಗಳ ಒಡೆತನವು ವಿಜಯನಗರಕ್ಕೆ ಸೇರಿದ್ದು, ಪೋರ್ಚುಗೀಸ್, ಡಚ್ ಮತ್ತು ಇಂಗ್ಲಿಷರ ಪ್ರವೇಶಗಳಿಂದ ವಾಣಿಜ್ಯೋದ್ದಿಮೆ ಇತಿಹಾಸದಲ್ಲಿ ಕ್ರಾಂತಿಕಾರಕ ಬದಲಾವಣೆಗೆ ಇಂಬುಗೊಟ್ಟಿತೆನ್ನಬಹುದು. ಇವುಗಳು ಬೃಹತ್ಸಂ ಪುಟಗಳಷ್ಟು ವೈವಿಧ್ಯ ಪೂರ್ಣ ಚರಿತ್ರೆಗಳನ್ನೊಳಗೊಂಡಿರುವುದರಿಂದ ಕೇವಲ ವಿಜಯನಗರ ಅಧೀನದಲ್ಲಿ ಡಚ್ಚರ ಚಟುವಟಿಕೆಗಳ ಸಂಗತಿಗಳನ್ನೊಳಗೊಂಡ ಆಕರಗಳ ಮಾದರಿಗಳನ್ನು ಮಾತ್ರ ಅಧ್ಯಯನಾಸಕ್ತಿಗಳ ಗಮನಕ್ಕೆ ಸಾದರಪಡಿಸಲಾಗಿದೆ.

ವಿಜಯನಗರ ಕೆಳದಿಗೆ ಸೇರಿದ ಕರಾವಳಿ ತೀರದ ವಾಣಿಜ್ಯೋದ್ದಿಮೆ ಇತಿಹಾಸದಲ್ಲಿ ದೇಶ ವಿದೇಶಗಳಲ್ಲಿ ಉಪಲಬ್ಧವಿರುವ ಡಚ್ ಮಾಹಿತಿ ಆಕರಗಳನ್ನೂ ಗೋವಾದ ದಿ. ಡಾ. ಬಿ.ಎಸ್.ಶಾಸ್ತ್ರಿ, ಹೆನ್ರಿ ಹೆರಾಸ್, ಡಾ. ವಸಂತಮಾಧವರು ಬೆಳಕಿಗೆ ತಂದಿದ್ದು ಗಮನಾರ್ಹವಾದುದು.

ಡಚ್‌ನ ಲಿಂಸ್ಕೋಟೆನ್ ಪ್ರವಾಸಿ ಕಥನ

1583ರಲ್ಲಿ ಭಾರತದ ಕರಾವಳಿ ತೀರದಲ್ಲಿ ಸಂಚರಿಸಿ ಪ್ರವಾಸಿ ಕಥನವನ್ನು ನಿರೂಪಿಸಿದ ಲಿಂಸ್ಕೋಟೆನ್ (Van Linschoten) ಡಚ್ ಪ್ರವಾಸಿ ವರದಿಯು ಸಮಕಾಲೀನ ಇತಿಹಾಸದಲ್ಲಿ ಈ ರೀತಿ ಆತನ ಪದಗಳಲ್ಲಿಯೇ ದಾಖಲಿಸಿವೆ.[2]

'Every three years there is a new Viceroy sent into India, and sometime they stay longer, as it pleaseth the King, but varie few of them, he continuet in Goa In the Hall of his Palace stand the Guard, and inthe great Hall, where his council sit, are painted all the Viceroyes, that have governed in India, since the first Discoverie, and conquest there of, and as they new come, their pictures are likewise placed there. These Viceroyes have great revenues, they may spend, give and keepe the Kings treasure, which is verie much, and doe with it what pleaseth them, for it is in their choise, having full and absolute power from the king, in such sort, that they gather and hoord up a mightie quantitie of Treasure ; for that besides their great allowance from the King, they have great presents and gifts, bestowed upon them. For it is the custome in those countries, when any Viceroy commeth newly over, that all kings bordering about Goa, and that have peace and frienship with the Portugals, doe then send their Ambassadours unto him, to confirme their Leagues with great and rich presents, therewith likewise to bid the Viceroy welcome, which amounteth to a great masse of Treasure. They say, and it is found to bee most true, that the first yeere of the Viceroyes time, he hath enough to doe to repaire and furnish his House, and to know the manners and customes of the countries, without any further troubling of himself. The secone yeere, to gather Treasure and to looke unto his particular profits, for the which cause he came into India. The third and last yeere to prepare himselfe and set all things in order, that he bee not overtaken or suprised by the new Viceroy when hee commeth, but that he many returne into Protugall with the goods which he has scraped together. The same is to bee understood of all captaines in the Fortes, and of all other Officers in India.'[3]

Batavia Dagh Register

ವಿಜಯನಗರ ಚಕ್ರವರ್ತಿ ಹಾಗೂ ಡಚ್ಚರ ವಿಪುಲ ಮಾಹಿತಿಗಳು ಬಟವಿಯ ಡಾಗ್ ರಿಜಿಷ್ಟರಿನಲ್ಲಿ ಕಂಡುಬಂದಿದ್ದು ಗಮನಾರ್ಹವಾಗಿದೆ. ಲೇಖನ ವಿಸ್ತಾರ ಭಯದಿಂದ ಮಾದರಿಯೊಂದನ್ನು ನೀಡಲಾಗಿದೆ :

270. The Portuguese papist as agent with the King of Carnatica in Velour is still trying to induce His Majesty to conquer our fortress at Paleacatta, and tells him that the new govermor will soon arrive in St. Thome with a strong armada and the promised presents, cash etc., The English has written to the said papist in reply to his letter that they would grant the assistance asked for (which they had to do and to which they had bound themselves) if only they could induce the King to it. His Majesty had only given the papist and his allies promises (just as they had given him), and he informed our governor at Palleacatta verbally that he could be assured of him and could trust him, that this would never happen, because he knew us to well, He had only done it just to see what would become of the Portuguese present which they had promised for years and of their boasting. He said that we would do our business freely and need not be afraid of anybody.

ಬಟಾವಿಯಾ ಡಾಗ್ ರಿಜಿಷ್ಟರಿನ ಮಾನೋಮೆಂಟಾ ಹಿಸ್ಟಾರಿಯಾ ಇಂಡಿಯಾ (Monumenta Historiae Indiae) ಸಂಪುಟಗಳಲ್ಲಿರುವ ವಿಜಯನಗರ - ಡಚ್ಚರ ಆಕರಗಳು ಈ ಇತಿಹಾಸಕ್ಕೆ ಆಕರಗಳನ್ನು ನೀಡುತ್ತವೆ. [4]

ದಿ ಹೇಗ್ ನೆದರ್‌ಲ್ಯಾಂಡ್ ಪತ್ರಾಗಾರದ ಆಕರಗಳು

ಈಚೆಗೆ ನನ್ನ ಅಧ್ಯಯನಾಂಗದಲ್ಲಿ ಲಭಿಸಿದ ೧೬೦೦ ರಿಂದ ೧೮೨೫ರವರೆಗಿನ ದಕ್ಷಿಣ ಏಷ್ಯಾದ ಕುರಿತು ಡಚ್ ಆಕರಗಳ ಪ್ರಥಮ ಸಂಪಟದಲ್ಲಿರುವ ಆಕರಗಳು ಕುತೂಹಲಾಸಕ್ತಿಯುಂಟು ಮಾಡಿವೆ. ನೆದರ್‌ಲ್ಯಾಂಡ್‌ನಲ್ಲಿರುವ ರಾಷ್ಟ್ರೀಯ ಪತ್ರಾಗಾರ ದಲ್ಲಿ ಭಾರತದ ಕರಾವಳಿ ತೀರದ ಇತಿಹಾಸ ರಚನೆಯಲ್ಲಿ ವಿಜಯನಗರ ಮತ್ತು ಡಚ್ಚರ ಮಾಹಿತಿಗಳು ಕಂಡುಬಂದಿವೆ. ಜೋಸ್ ಗೋಮ್ಮನ್ಸ್ (Jos Gommans) ಲೆನ್ನಾರ್ಟ್ ಬೆಸ್ (Lennart Bes) ಮತ್ತು ಗಿಜ್ಸ್ ಕ್ರೂಜ್‌ಟ್‌ಜರ್ (Gijs Kruijtzer) ರವರು ಪತ್ರಾಗಾರದ ದಾಖಲೆಗಳನ್ನು ಶಾಸ್ತ್ರೀಯವಾಗಿ ಅಧ್ಯಯನಾದಿ ಗಳೊಂದಿಗೆ ಜೋಡಿಸಿ, ಕ್ಯಾಟಲಾಗನ್ನು ಸಿದ್ಧಪಡಿಸಿ ಸಂಶೋಧನೆಗೆ ಉಪಕರಿಸಿ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಇದರಲ್ಲಿ ಕೆಳದಿ - ಡಚ್ಚರ ಇತಿಹಾಸಗಳೂ ಸಮ್ಮಿಳಿತವಾಗಿದ್ದು, ಇದರ ಸರ್ವೇಕ್ಷಣೆಗೆ ಹಾಲೆಂಡಿನ ಲೆನ್ನಾರ್ಟ್ ಬೇಸ್‌ರವರು ಕೆಳದಿ ಸಂಶೋಧ ನಾಲಯಕ್ಕೂ ಭೇಟಿ ನೀಡಿದ್ದರಿಂದ, ಈ ದಿಸೆಯಲ್ಲಿನ ಅಧ್ಯಯನಕ್ಕೆ ನನಗೆ ಆಸಕ್ತಿ ಯುಂಟು ಮಾಡಿತು. ಕ್ಯಾಟಲಾಗಿನಲ್ಲಿ ಕಂಡು ಬರುವ ವಿಜಯನಗರದ ಆಕರಗಳನ್ನು ಮಾತ್ರ ಇಲ್ಲಿ ನೀಡಲು ಪ್ರಯತ್ನಿಸಲಾಗಿದೆ. ಈ ಸಂಗ್ರಹಗಳಲ್ಲಿ ಶ್ರೀಲಂಕಾ, ಬಾಂಗ್ಲಾ ದೇಶ, ಪಾಕಿಸ್ತಾನ, ಮಾಲ್ಡೀವ್ಸ್, ಮಲಬಾರ್, ಕೇರಳ (ಸಿ ಲೋನ್‌ಗೆ ಶ್ರೀಲಂಕಾ ಮಲಬಾರ್‌ಗೆ ಕೇರಳ ಎಂದಾಗಿದ್ದು, ಒಂದು ಬಾರಿ ಕೇರಳವು ಸಿಲೋನ್‌ಗೆ ಸೇರಿತ್ತೇನೋ ಎಂಬ ಸಂದೇಹಕ್ಕೆ ಅವಕಾಶವಿತ್ತಿದೆ) ವೆಂಗುರ್ಲಾ, ಕಡಲ ತೀರ ಪ್ರದೇಶಗಳ ಪ್ರಾಂತೀಯ ರಾಜಕೀಯ

ಆರ್ಥಿಕ, ಸಾಮಾಜಿಕ ಇತಿಹಾಸವನ್ನು ರೂಪಿಸಲು ಬಟಾವಿಯಾ ರಿಜಿಷ್ಟರು ಹಾಗೂ ಈ ಕ್ಯಾಟಲಾಗ್ ಉಪಯುಕ್ತ ಮಾಹಿತಿ ಗಳನ್ನು ನೀಡುತ್ತದೆ.

ವಿಜಯನಗರ -ಡಚ್ ದಾಖಲೆಗಳು (ಹೇಗ್)

I Voc 1611, ff 201-347- Correspondence with kings, nobles and merchants at Malabar, 1697 - p. 198

Voc 1611, ff 521-680- Instructions by Commissioner Hendrick Zwaerdecroon to Mahgnus Wichelman at Cochin 1698- Ibid

Voc 1634 ff 401- 86 - Notes of Correspondences with kings and nobles of Malabar, September - Novermber - 1700 - Ibid.

Voc 1634 ff 509 - 857 Correspondecne with kings and nobles of Malabar 1699-1700- Ibid.

Voc 1646 ff 507 - 816, Correspondence with and other documents concerning Malabar kings 1700-1 - Ibid

Voc 1694 ff 60-84- Report concerning trade in Ikkeri and on the Kanara Coast 1703. - Ibid

Voc - 1812 ff 228 - 49 - Report concerning the 'bandit' kanoji Angria, 1711- Ibid

Voc - 1885 ff 257-438 - Documents concerning the Malabar War 1715-16- Ibid.

Voc - 1963 - 149-54- Documents concerning weights, measures and currencies in Malabar - Ibid.

Voc - 1982 ff 287-395 Documents concerning conflicts between Hindus and Muslims at Cannan ur 1722 - Ibid

Voc - 2281 ff 1810 - 72 - Correspondence concerning the war between Ikkeri and the Ali Raja at Cannanore 1733 - Ibid.

Voc -2320 ff 298-312 - Documents concerning the 'pirate' Kanoji Angria c 1734 - Ibid

Voc - 2414 ff 1740- 2156 Mission to the Kolathiri of Cannanore and to Ikkeri - C 1737 (report) P. 196

Voc - 1593 - ff 76-167 V - correspondnce with rulers, nobles and merchants at Malabar and on the Kanara coast - 1697 - P. 197

II Model of Descriptive Catalogue of Amsterdam Chamber

3.1 OVERGEKOMEN BRIEVEN EN PAPIEREN (OBP)

Letters and Papers received

Sec 1.1.7

Access No. 1.4.402

Inv. Nos : Voc 1053- 3987

Letters and papers concerning Malabar are mostly to be found under headings such as 'Mallabaer', 'cust van Mallabar' (Coast of Malabar). 'Couchin' 'Chochijn', 'Calicut', Cananor, Inicially, letters and papers concerning Vegurla and the Konkan are regularly listed under heading like 'hingurla', 'Goa', Goas Bhare (Goa's Billows, 'Visiapour' and 'Cust van India', but untill 1676 they may also be found under Surat.

All these headings occur in the Volumes containing documents some directly from South Asia to the Gentlemen XVII and the Amsterdam Chamber, as well as the volumes that consist of copies of documents sent from South Asia to Batavia in the *Batavia's ingdomen brievenboek* (Batavia letterbook of incoming doucments). In a few cases, letters and papers relating to Malabar, Kanara and Konkan may also be found under the heading "Batavia". In the section on dagregisters (see 3-1-3) many of these are labelled inlandse (indigenous). These documents are extensive *dagregisters* of contacts with the local rulers of Malabar. (pp. 181 Malabar)

ನೌಕಾಯಾನ ಹಾಗೂ ವಾಣಿಜ್ಯೋತ್ತರ ಇತಿಹಾಸಗಳು (Acc No. - 4 MCAL) ಕರಾವಳಿ ತೀರದ ನಕ್ಷೆಗಳು (೪೨೯೭), ಕಾರ್ಖಾನೆಯ ನಕ್ಷೆಗಳು (೮೭೦), ತಾಮ್ರಶಾಸನ ಗಳ ಪಡಿಯಚ್ಚುಗಳು (೪೨೨೩) ಡಚ್, ಬ್ರಿಟಿಷ್, ಫ್ರೆಂಚರು ಭಾರತದ ಕರಾವಳಿ ಪ್ರದೇಶದ ಹಾಗೂ ನಿರ್ಗಮನ ಕುರಿತ ದಾಖಲೆಗಳು (Voc - 2474 ff 1049-53) ವಿಜಯನಗರ ಮೂರನೇ ವೆಂಕಟಪತಿಯಲ್ಲಿಗೆ ಆಗಮಿಸಿದ ಡಚ್ ನಿಯೋಗಗಳ ಸಂಗತಿ (Voc 1100 ff 77-84), ಶಿವಾಜಿ ಕುರಿತ ಮಾಹಿತಿ (Voc 1328 ff 617 - 22) ತಾಮ್ರಶಾಸನದಲ್ಲಿ 1782 ರ ಹಿಂದೂಸ್ತಾನದ ನಕ್ಷೆ (322) ಸ್ಥಳ ನಾಮಗಳು - ಉದಾ:

Karnatika > Carnatica, Karnatika, see alsot Arcot (Under Coromandel) Barcelore, Bedrur, Coondapoor, Ikkeri, Kanara, Madurani (lender Ceylon), Mysore, Vijayanagara, under Coromandal.

Note : It generally refers to the territory of the old Kingdom of Vijayanagara. More specifically it refers to its main successor state of Chandragiri / Vellore and occasionally, to Ikkeri or, in the 18th century to Arcot and its dependencies.

Keladi > See Bedrur, Ikkeri, Kanara, Karnatika.

Mysore > Maijsour, Massour

ವ್ಯಕ್ತಿನಾಮಗಳಲ್ಲಿ ವಿಜಯನಗರ ಚಕ್ರವರ್ತಿಗಳು, ಡಚ್, ಫ್ರೆಂಚ್, ಇಂಗ್ಲೀಷ್ ರಾಜ್ಯಪಾಲರುಗಳು, ಕರಾವಳಿ ತೀರದ ಪ್ರಾಂತೀಯ ಅರಸರು ಹಾಗೂ ಅಧೀನ ಪಾಳೆಯ ಗಾರರ ಹೆಸರುಗಳನ್ನು ಸಂಪಾದಕರು ಸಂಶೋಧಕರ ಉಪಯೋಗಕ್ಕಾಗಿ ಡಚ್ ಭಾಷೆ ಯೊಂದಿಗೆ ಇಂಗ್ಲೀಷಿನ ಅರ್ಥ ವಿವರಣೆಯನ್ನು ನೀಡಿರುವುದು ಮಹೋ ಪಕರಾವಾಗಿದೆ. ಅಪೆಂಡಿಕ್ಸ್‌ನಲ್ಲಿ Indo Dutch Spelling Listನ್ನು ಸೇರಿಸಿರುವುದೂ ಸಮಂಜಸವಾಗಿದೆ. ಹಲವಾರು ತೆಲುಗು - ಕನ್ನಡ ದಾಖಲೆಗಳು ಡಚ್ ಭಾಷೆಗೂ ಭಾಷಾಂತರವೂ

ಆಗಿರುವುದು ವ್ಯಕ್ತಪಡುತ್ತದೆ. ಈ ಕೆಳಕಂಡಂತೆ ಪ್ರಾಚೀನ ಓಲೆಗರಿ ಹಸ್ತಪ್ರತಿ ಸಂಗ್ರಹವೂ ಗಮನಾರ್ಹವಾದುದು.

C.Cants (South Indian Stayle orders or rants)

41. (No number) part of an *ola* (inscribed palm leaf) in Telugu received according tothe Dutch text onthe envelope in the same folder, from Mustafa Quli Khan, *Sar - laskar* of Srikakulam on AD 8 August 1691 (folder kept seperately), p. 374 (Appendix).


ಉಪ ಸಂಹಾರ

ವಿಜಯನಗರ ಸಾಮ್ರಾಜ್ಯದ ಅಧೀನದಲ್ಲಿದ್ದ ಪಶ್ಚಿಮ ಕರಾವಳಿಯು ವೈವಿಧ್ಯಮಯ ಸಂಪದ್ಭರಿತ ತಾಣವಾಗಿರುವುದನ್ನು ಅರಿತಿದ್ದ ವಿದೇಶೀಯರು ಇದನ್ನು ತಮ್ಮದನ್ನಾಗಿಸಿ ಕೊಳ್ಳಲು ವಿಪುಲ ಹೋರಾಟ ನಡೆಸಿದ್ದಾರೆ. ೧೪೯೮ರಲ್ಲಿ ಪೋರ್ಚುಗೀಸರು ಕಾರವಾರದ ಸಮೀಪ ಅಂಜಡೀವಕ್ಕೆ ಪ್ರವೇಶಿಸಿ, ಕ್ರಾಂತಿಯನ್ನುಂಟು ಮಾಡಿದರು. ೧೬೦೨- ೦೩ ರಲ್ಲಿ ಡಚ್ ಈಸ್ಟ್ ಇಂಡಿಯಾ ಕಂಪೆನಿಯು ಉತ್ತರ ಕನ್ನಡದ ಸ್ವಾದಿಯ ಮುಖಾಂತರ ಭಾರತದ ಕರಾವಳಿ ಪ್ರದೇಶಕ್ಕೆ ಕಾಲಿರಿಸಿತು. ಇಲ್ಲಿಯ ಪ್ರಾಂತಿಯ ಆಳರಸರನ್ನು ಲಿಂಕೋಟನ್ ಪ್ರವಾಸಿ ಕಥನದಲ್ಲಿ ಉಲ್ಲೇಖಿಸಿದಂತೆ ವಿಶ್ವಾಸದಿಂದ ಮನವೊಲಿಸಿ ಕೊಂಡು ವೆಂಗುರ್ಲದಲ್ಲಿ ಕಾರ್ಖಾನೆಯನ್ನು ಸ್ಥಾಪಿಸಿದರು. ೧೬೬೨ರಲ್ಲಿ ಕೆಳದಿ ಅರಸರನ್ನು ಡಚ್ ವೈಸ್‌ರಾಯ್ ಗೌರವಿಸಿ ಉಚಿತ ಉನ್ನತ ಉಡುಗೊರೆಯೊಂದಿಗೆ ಭೇಟಿ ಮಾಡಿ, ಅನುಮತಿಯನ್ನು ಪಡೆದು ಬಸ್ರೂರಿ ನಲ್ಲಿ ಅಕ್ಕಿ ವ್ಯಾಪಾ ರೋದ್ಯಮವನ್ನು ಕೈಗೊಂಡನು ಹಾಗೂ ಪೊರ್ಚಗೀಸರನ್ನು ಹಿಂದಕ್ಕಟ್ಟಿ ಮೆಣಸಿನ ವ್ಯಾಪಾರೋದ್ಯಮವನ್ನು ನಿರ್ಮಿಸಿದನು. ಇಂಗ್ಲೀಷ್ ಫ್ಯಾಕ್ಟರಿ ದಾಖಲೆಯೊಂದು -

'by every means fair and foul, the *Dutch* tried to win over the Bednur Nayakas to their side and in this they were successfuol'.

ಈ ರೀತಿ ವರದಿ ಮಾಡಿದೆ.[6] ಇದೇ ರೀತಿಯಲ್ಲಿ ಪೋರ್ಚುಗೀಸರಂತೆ ಇಂಗ್ಲೀಷರನ್ನು ಹಿಂದಕ್ಕಟ್ಟಿ ವಾಣಿಜ್ಯೋದ್ಯಮದಲ್ಲಿ ಡಚ್ಚರು ಸ್ಥಾನವನ್ನು ಭದ್ರತೆ ಮಾಡಿಕೊಂಡರು. ಡಚ್ಚರ ಉದ್ದೇಶವು ಕೇವಲ ವಾಣಿಜ್ಯ ವ್ಯವಹಾರದ ಉದ್ಯಮವಾಗಿತ್ತೇ ಹೊರತು, ಕ್ರೈಸ್ತ ಧರ್ಮ ಪ್ರಸಾರ ವಾಗಿರಲಿಲ್ಲವೆಂಬುದು ಗಮನಾರ್ಹವಾದುದು. *ಈ ಕಾರಣದಿಂದಲೇ ವಿಜಯ ನಗರದ ಪರಮಾಪ್ತ ಕೆಳದಿಯ ಅರಸರು ಡಚ್ಚರಿಗೆ ಅವಕಾಶ ನೀಡಿರುವುದೂ ಅಷ್ಟೇ ಮಹತ್ವಪೂರ್ಣವಾದುದು.*

ವಿಜಯನಗರ - ಕೆಳದಿ - ಡಚ್ಚರ ಇತಿಹಾಸವು ಒಂದಕ್ಕೊಂದು ಪೂರಕವಾಗಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಮೊಟ್ಟಮೊದಲು ಗೋವೆಯ ಡಾ.ಬಿ.ಎಸ್. ಶಾಸ್ತ್ರಿ ಹಾಗೂ ಡಾ.ವಸಂತಮಾಧವರವರು ಇದನ್ನು ಇತಿಹಾಸ ವಿದ್ವಾಂಸರ ಗಮನಕ್ಕೆ ತಂದರೂ,



Map 1: The VOC in South Asia

ಈ ದಿಸೆಯಲ್ಲಿ ಯಾರೂ ಮುಂದುವರಿಯದೇ ಹೋದುದು ದುರ್ದೈವ. ಪೋರ್ಚುಗೀಸ್ ಅಸ್ಸೆಂಟೋ (Asento), ಡಚ್ಚರ ಬಟಾವಿಯಾ ಡಾಗ್ ರಿಜಿಷ್ಟರು (ಇದೂ ೧೯೨೮-೩೨ರಲ್ಲಿ ಜರ್ನಲ್ ಆಫ್ ದಿ ಬಾಂಬೆ ಹಿಸ್ಟಾರಿಕಲ್ ಸೊಸೈಟಿಯಲ್ಲಿ ಲೇಖನ ಪ್ರಕಟವಾಯಿತು) ಮುಂತಾದ ಆಕರಗಳಿದ್ದರೂ ಇತಿಹಾಸ ವಿದ್ವತ್ ಪ್ರಪಂಚದಲ್ಲಿ ಹಾಗೂ ವಿಶ್ವವಿದ್ಯಾಲಯದಲ್ಲಿ ಇವುಗಳ ಪ್ರಯತ್ನದಲ್ಲಿ ಕೊರತೆಯು ಎದ್ದು ಕಾಣುತ್ತದೆ. ಭಾರತ ಸರಕಾರದ ಪತ್ರಾಗಾರ ಇಲಾಖೆಯು ನೆದರ್‌ಲ್ಯಾಂಡ್ಸ್ ನಲ್ಲಿರುವ ೧,೫೦,೦೦೦ ಹಸ್ತಪ್ರತಿ ದಾಖಲೆಗಳನ್ನು ಮೈಕ್ರೋಫಿಲ್ಮ್ ಮುಖಾಂತರ ಪಡೆದುಕೊಂಡು ಶೇಖರಿಸಿರುವುದೂ ಯಾರ ಗಮನಕ್ಕೂ ಬಂದಂತೆ ಕಂಡು ಬರುವು ದಿಲ್ಲ.[7] ಇದರ ಲೇಖಕರಾದ ಪತ್ರಾಗಾರದ ಡಾ. ನಾರಾಯಣ ಕುಲಕರ್ಣಿಯವರು 'East India Company has probably the best historical material in the world' ಎಂದು ಉದ್ಗರಿಸಿದ್ದಾರೆ. ೧೮೫೩ರಲ್ಲಿ

ಅಪ್ರಕಟಿತ ಎಂ.ಎ. ಮಹಾಪ್ರಬಂಧ ವೊಂದು Menezes, W.J. Canara and the Portuguese - ಶೀರ್ಷಿಕೆಯಲ್ಲಿ ಬೊಂಬಾಯಿ ವಿಶ್ವವಿದ್ಯಾಲಯದಲ್ಲಿರುವುದು ಕಂಡುಬರುತ್ತದೆ. ಇವುಗಳನ್ನೆಲ್ಲಾ ಗಮನದಲ್ಲಿರಿಸಿಕೊಂಡಲ್ಲಿ ಜೋಸ್ ಗೋಮ್ಮ್ಯಾನ್ (Jos Gommans) ಸಂಪಾದಕ ಮಂಡಳಿಯವರು 'Dutch Sources on South Asia' ಕೃತಿಯನ್ನು ಪ್ರಕಟಿಸಿ ವಿದ್ವತ್ ಪ್ರಪಂಚಕ್ಕೆ ಮಹೋಪಕಾರವೆಸಗಿದುದು ಒತ್ತಿ ಹೇಳಬೇಕಾಗಿಲ್ಲವಷ್ಟೆ?[8] ವಿಜಯನಗರ -ಡಚ್ ಕುರಿತು ಮಹಾಪ್ರಬಂಧ ಸಿದ್ಧಪಡಿಸುವಷ್ಟು ಆಕರಗಳು ಇರುವಾಗ ಸಾಹಸೀ ಉತ್ಸಾಹದ ತರುಣ ಸಂಶೋಧಕರು ವಿಶ್ವವಿದ್ಯಾಲಯ ಮುಖಾಂತರ ಇದಕ್ಕೆ ಗಮನ ಹರಿಸುವುದು ಅಗತ್ಯ. ಅದರಲ್ಲೂ ಹಾಲೆಂಡ್‌ನ ವಿದ್ವಾಂಸರು ಕೆಳದಿಗೇ ಭೇಟಿಯಿತ್ತು ನನಗೆ ಎಚ್ಚರಿಕೆ ನೀಡಿ ಪ್ರೋತ್ಸಾಹಿಸಿದ್ದು, ಕುವೆಂಪು ವಿಶ್ವವಿದ್ಯಾಲಯಕ್ಕೆ ಸೇರಿದ ಕೆಳದಿ ಸಂಶೋಧನಾಲಯದ ಮುಖಾಂತರ ಯೋಜನೆಯನ್ನು ಹಮ್ಮಿ ಕೊಂಡಲ್ಲಿ ನನ್ನ ಈ ಪ್ರಬಂಧಕ್ಕೆ ಸಾರ್ಥಕದ ಧನ್ಯತೆಯುಂಟಾದೀತು !

ಅಡಿಟಿಪ್ಪಣಿ

1. A Forgotten Empire : Robert Sewel 1980- PP. 232-233.
2. The voyage of Huyghen Van Linschoten to East Endies (ED). A.C. Burnell A.C. and Tiles London, 1885, Vo. II pp 261-62
3. Purchas, His Pilgrimes X p. 255 - 05.
4. Journal of Bombay Historical Society Vol - March 1928 - H Heras.
5. ಕೆಳದಿ ಸಂಸ್ಥಾನದ ರಾಜಧಾನಿಯೇ ಇಕ್ಕೇರಿ;ಚ ವಿಜಯನಗರ -ಕೆಳದಿ ಬಾಂಧವ್ಯ ಇತಿಹಾಸದಲ್ಲಿ ಪ್ರಮುಖವಾದುದು.
6. Foster; EFI- 1661-64 P. 349-50
7. Archives in India; Narayana H. Kulkarni, Deputy Director, National Archives of India, 'Giridhara Shri' p. 284 - 85
8. Dutch sources on South Asia C 1600-1825, Bibliography and Archival Guide to the National Archives at the Hague (The Netherlands), Jos Gommans Lennart Bes, GIIS KRUIJTZER,

ವಿ.ಸೂ. : ಹಲವು ಕ್ಲಿಷ್ಟ ಪದಗಳನ್ನು ಕನ್ನಡಿಸಲು ಅಸಾಧ್ಯವಿರುವ ಕಾರಣ ಯಥಾವತ್ತಾಗಿ ನೀಡಿರುವುದಕ್ಕೆ ವಿದ್ವಾಂಸರ ಕ್ಷಮೆ ಯಾಚಿಸುವೆನು.

ಆಕರ ಗ್ರಂಥಗಳು

1. A Forgotten Empire : Robert Sewell Asian Educational Services : 1980, NewDelhi - 110016
2. The History of the Vijayanagar Empire. M.H. Rama Sharma; Edited by M.H. Gopal, 1980, Bombay Popular Prakashana, Vol II

3. 'Giridhara Shri' Dr. Dixit Felicitation Volume ; Ed. A. V. Narasimha Murthy Agam Kala Prakashan, Delhi, 1987
4. Trends in Karnataka ; Historical Research: Dr. K.G. Vasantha Madhava : 1996
5. Dutch Sources on Suoth Asia C 1600- 1825, Bibliography and Archival Guide to the National Archives at the Hague (The Netherlands) Jos Gommans, Lennart Bes, GIIS KRUIJTZER : Manohar Publishers and Distributors, NewDelhi - 110002
6. Journal of Bombay Historical Society Vol - March 1928, and QJMS : Vol LXXIII - July - Dec 1982 No. 3 & 4 mythic society Bangalore.

೩೪. ವಿಜಯನಗರ ಸಾಮ್ರಾಜ್ಯದ ಆರ್ಥಿಕ ಪರಿಸ್ಥಿತಿಯ ಮೇಲೆ ಗಣಿಗಾರಿಕೆಯ ಪ್ರಭಾವ - ಒಂದು ನೋಟ

ಡಾ. ಪಾಂಡುಕುಮಾರ್

ಮಧ್ಯಕಾಲೀನ ಭಾರತದ ಇತಿಹಾಸವು ಬಹುರೋಚಕವಾದುದು. ಕಾರಣವೇನೆಂದರೆ ಉತ್ತರ ಭಾರತದಲ್ಲಿ ದೆಹಲಿ ಸುಲ್ತಾನರು ಹಿಂದೂ ರಾಜ್ಯಗಳನ್ನು ಮಣಿಸಲು ಸತತವಾಗಿ ಹೋರಾಟಮಾಡುತ್ತಾ ರಕ್ತಪಾತಕ್ಕೆ ಶರಣಾಗಿದ್ದರು. ಇದರಿಂದಾಗಿ ಹಿಂದುಗಳು, ಹಿಂದೂ ದೇವಾಲಯಗಳು ನೆಲಸಮವಾಗತೊಡಗಿದವು. ಶಾಂತಿ ನೆಮ್ಮದಿ ದೂರವಾಯಿತು. ಆನಂತರ ಮೊಘಲರು ದೆಹಲಿ ಸುಲ್ತಾನರನ್ನು ಮಣಿಸಿ ಅಧಿಕಾರಕ್ಕೆ ಬಂದರೂ ಅವರೂ ಕೂಡ ಸುಲ್ತಾನರ ದಾರಿಯನ್ನೇ ಹಿಡಿದರು. ಎಲ್ಲೆಡೆ ಅಶಾಂತಿ, ಅರಾಜಕತೆ ತಲೆದೋರಿತು. ಹಿಂದುಗಳ ಸ್ಥಿತಿ ಶೋಚನೀಯವಾಯಿತು. ಆದರೆ ದಕ್ಷಿಣ ಭಾರತದಲ್ಲಿ ವಿಜಯನಗರ ಸಾಮ್ರಾಜ್ಯ ತಲೆ ಎತ್ತಲಾಗಿ ಸುಖ, ಸಮೃದ್ಧಿ, ನೆಮ್ಮದಿಯು ನೆಲೆಸುವಂತೆ ಮಾಡಿದರು. ಇದರಂದಾಗಿ ವಿಜಯನಗರದ ಕೀರ್ತಿ ದಶದಿಕ್ಕುಗಳಲ್ಲಿ ಹರಡಿತು. ವಿದೇಶೀಯರು ವಿಜಯನಗರಕ್ಕೆ ತಂಡೋಪತಂಡ ವಾಗಿ ಬರತೊಡಗಿದರು. ತಾವು ಕಣ್ಣಾರೆ ಕಂಡು ಕೇಳಿದ್ದನ್ನು ತಮ್ಮ ಪ್ರವಾಸಕಥನದಲ್ಲಿ ಬರೆದಿದ್ದಾರೆ. ವಿಜಯನಗರದ ರಸ್ತೆಯ ಇಕ್ಕೆಲಗಳಲ್ಲಿ ಮುತ್ತು, ರತ್ನ, ವಜ್ರ, ವೈಡೂರ್ಯಗಳನ್ನು ಮಾರುತ್ತಿದ್ದರೆಂದು ಚಿತ್ರಿಸಿ ದ್ದಾರೆ.[1] ಆದರೆ ಇದು ಅತಿಶಯೋಕ್ತಿಯಲ್ಲವೆಂದು ತಿಳಿಸುವುದು ಈ ಪ್ರಬಂಧದ ಉದ್ದೇಶ.

ವಿಜಯನಗರದ ಆಡಳಿತದಲ್ಲಿ ಭೂಕಂದಾಯ, ಕರ, ಸುಂಕ, ತೆರಿಗೆ, ವಾಣಿಜ್ಯ ತೆರಿಗೆ ಮತ್ತು ವೃತ್ತಿ ತೆರಿಗೆ (Professional Tax) ಇವೇ ಮುಂತಾದ ತೆರಿಗೆಗಳನ್ನು ಹಾಕುತ್ತಿದ್ದರು.[2] ಸಾಮಾನ್ಯ ವ್ಯಕ್ತಿಗಳಿಂದ ಹಿಡಿದು ಆಗರ್ಭ ಶ್ರೀಮಂತರವರೆಗೆ ಯಾರೂ ತೆರಿಗೆಯಿಂದ ತಪ್ಪಿಸಿಕೊಳ್ಳುವಂತಿರಲಿಲ್ಲ. ಇಷ್ಟೇ ಅಲ್ಲದೆ ಉದ್ಯಮಗಳಲ್ಲಿ ಕೈಗೋರಿಕೋದ್ಯಮ, ಗಣಿ ಉದ್ಯಮ ಇವೇ ಮುಂತಾದವುಗಳಿದ್ದವು. ಕೈಗಾರಿಕೆಗಳಲ್ಲಿ ಎರಡು ವಿಧ : (1) ಗೃಹ ಕೈಗಾರಿಕೆಗಳು, (2) ದೊಡ್ಡಗಾತ್ರದ ಕೈಗಾರಿಕೆಗಳು (ಇಂದಿನ ಮಧ್ಯಮ ಗಾತ್ರ), ನಂತರಗಣಿಗಾರಿಕೆಗಳು. ಈ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ನೌಕರರ ಮೇಲೆ ನೇರವಾಗಿ ತೆರಿಗೆಯನ್ನು ವಿಧಿಸುವ ಬದಲು ನೇರವಾಗಿ ಕೈಗಾರಿಕೆಗಳ ಮೇಲೆ ತೆರಿಗೆಯನ್ನು ಹೇರುತ್ತಿದ್ದರು. ಗೃಹ ಕೈಗಾರಿಕೆಗಳ ಮೇಲೆ ತೆರಿಗೆಯನ್ನು ಹೇರುತ್ತಿದ್ದರು. ಗೃಹ

ಕೈಗಾರಿಕೆಗಳು, ದೊಡ್ಡ ಪ್ರಮಾಣದ ಕೈಗಾರಿಕೆಗಳು ಎಂಬ ತಾರತಮ್ಯವಿಲ್ಲದೆ ನೇರ ತೆರಿಗೆಗೆ ಒಳಪಟ್ಟಿದ್ದವು. ವರ್ತಕರು ವಿದೇಶಗಳಿಂದ ತಂದ ಕೆಲವು ಅಮೂಲ್ಯ ವಸ್ತುಗಳು, ಒಳ್ಳೆಯ ತಳಿಯ ಅಶ್ವಗಳನ್ನು ಇಲ್ಲಿ ತಂದು ಮಾರಾಟ ಮಾಡಿ ಇಲ್ಲಿನ ಬೆಲೆಬಾಳುವ ಮುತ್ತು, ರತ್ನ, ವಜ್ರ, ವೈಢೂರ್ಯಗಳನ್ನು ಕೊಂಡು ಕೊಳ್ಳುತ್ತಿದ್ದರು. ಅಂತಹವರ ಮೇಲೆ ಸುಂಕ ಹೇರುತ್ತಿದ್ದರು. ವಿದೇಶಿ ಪ್ರವಾಸಿ ನುನೀಸನ ಪ್ರಕಾರ ಪ್ರಜೆಗಳೇ ಆಗಲಿ ಅಥವಾ ನಾಯಕ / ಪ್ರತಿನಧಿಯಾಗಲಿ ರಾಜನಿಗೆ ತೆರಿಗೆ ಇಲ್ಲವೆ ಸುಂಕ ನೀಡಿದರೆ ಅದಕ್ಕೆ ರಶೀತಿ ನೀಡುತ್ತಿರಲಿಲ್ಲ. ಆದರೆ ತನಗೆ ಸಲ್ಲಬೇಕಾದ ಕಂದಾಯ, ತೆರಿಗೆ, ಸುಂಕ ಕೊಡದಿದ್ದರೆ ಅಂತಹವರನ್ನು ಉಗ್ರವಾಗಿ ಶಿಕ್ಷಿಸುತ್ತಿದ್ದರು.[3] ಆದುದರಿಂದ ತಾವು ಕೊಡಬೇಕಾದ ಕಂದಾಯ, ಸುಂಕವನ್ನು ತಪ್ಪದೇ ನೀಡುತ್ತಿದ್ದರು. ಕುದುರೆ ಮುಂತಾದ ವ್ಯಾಪಾರಕ್ಕಾಗಿ ಬಂದ ವರ್ತಕರು ರಾಜನನ್ನು ನೋಡಬೇಕಾದರೆ ತಾವು ತಂದಿರುವ ಬೆಲೆಬಾಳುವ ವಸ್ತುವನ್ನು ರಾಜನಿಗೆ ಅರ್ಪಿಸಬೇಕಾಗಿತ್ತು. ರಾಜನಷ್ಟೇ ಅಲ್ಲದೆ ಆತನ ಅಧಿಕಾರಿಗಳಿಗೆ, ದ್ವಾರಪಾಲಕರಿಗೆ ಲಂಚ ನೀಡಬೇಕಾಗಿತ್ತು. ಲಂಚವಿಲ್ಲದಿದ್ದರೆ ಯಾರೂ ಮಿಸುಗಾಡುತ್ತಿರಲಿಲ್ಲ ಎಂಬುದಾಗಿ ನೂನಿಸನು ತನ್ನ ಅಭಿಪ್ರಾಯವನ್ನು ಮಂಡಿಸಿದ್ದಾರೆ.[4]

ಮುತ್ತು, ರತ್ನ, ವಜ್ರ, ವೈಢೂರ್ಯದ ಬಗ್ಗೆ ಭಾರತೀಯ ಸಾಹಿತ್ಯ, ಶಾಸನಗಳು, ಕವಿಗಳಿಗಿಂತಲೂ ಹೆಚ್ಚಾಗಿ ಆಕರ್ಷಿಸಿದುದು ವಿದೇಶಿಯರನ್ನ. ಈಗಾಗಲೇ ತಿಳಿಸಿರುವಂತೆ ನ್ಯೂನಿಸ್, ಪಾಯಿಸ್, ಬಾರ್ಬೊಸ, ಬರ್‍ರಾಡಾಸ್, ಅಬ್ದುಲ್ ರಜಾಕ್ ಸೇರಿದಂತೆ ಹಲವಾರು ಜನ ವಿಜಯನಗರದ ವೈಭವವನ್ನು ಕಂಡು ಕೇಳಿ ಮನಸಾರೆ ಹೊಗಳಿ ಬರೆದಿದ್ದಾರೆ. ದೇಶಿ ಸಾಹಿತಿಗಳು, ಕವಿಗಳು ಕೊಟ್ಟಿರುವ ಮಾಹಿತಿಗಿಂತಲೂ ವಿದೇಶಿ ಬರಹಗಾರರು, ವಿದೇಶಿ ಯಾತ್ರಿಕರು ಸಾಕಷ್ಟು ಮಾಹಿತಿ ನೀಡಿದ್ದಾರೆ. ಅವರ ಪ್ರಕಾರ ಮುತ್ತು, ರತ್ನ, ವಜ್ರ ಇನ್ನೂ ಮುಂತಾದ ಅಮೂಲ್ಯ ಕಲ್ಲುಗಳನ್ನು ವಜ್ರ ಕರೂರು, ಗೋಲ್ಕೊಂಡ ಸೇರಿದಂತೆ ದಕ್ಷಿಣ ಭಾರತದ ನಾನಾ ಕಡೆ ಇವುಗಳನ್ನು ಪಡೆದು ಖಾನ್ ಮಹಾಶಯ ಸೇರಿದಂತೆ ವಿದೇಶಿ ಗಣ್ಯರಿಗೆ ಸಾಗುತ್ತಿತ್ತು ಎಂಬ ಅಭಿಪ್ರಾಯ ಪಡುತ್ತಾರೆ.[5] (ಬಹುಶಃ ಆಫ್ಘಾನಿಸ್ತಾನ್ ಇಲ್ಲವೆ ಮಧ್ಯಪ್ರಾಚ್ಯದೇಶ.)

ವಜ್ರದ ಗಣಿಯ ಮೇಲೂ ತೆರಿಗೆಯನ್ನು ವಿಧಿಸುತ್ತಿದ್ದರು. ಈ ವಜ್ರದ ಗಣಿ ರಾಜನ ಬೊಕ್ಕಸವನ್ನು ತುಂಬಿಸುವ ಬಹುಮುಖ್ಯವಾದ ಹಣಕಾಸಿನ ಮೂಲವಾಗಿ ದ್ದಿತು. ನುನೀಸನು ವಿಜಯನಗರದ ಗೇಟ್ ಎಂದಿದ್ದಾನೆ. ಇದು ಬಹುಶಃ ಘಟ್ಟ ಇಲ್ಲವೆ ಬೆಟ್ಟ ಪ್ರದೇಶವೆನ್ನಬಹುದು. ಕಾರಣವೇನೆಂದರೆ ವಜ್ರದ ಗಣಿಯು ಇಂತಹ ಪ್ರದೇಶದಲ್ಲಿ ಇತ್ತೆಂದು ಕಾಣುತ್ತದೆ. ಈ ಘಟ್ಟ ಪ್ರದೇಶದ ಅಡಪನಾಯಕ ಎಂಬು ವವನು ಒಂದು ವಜ್ರದ ಗಣಿಯ ಮಾಲೀಕ ಇಲ್ಲವೆ ಮುಖ್ಯಸ್ಥನಿರಬಹುದು. ಈತ ಪ್ರತಿ ವರ್ಷ ರಾಜನಿಗೆ ೪೦ ಸಾವಿರ ಪಾರಡೌಸ್ (Paradaos) ಹಣವನ್ನು ೨೦ ಮಂಗಲಿಯನ್ ತೂಕದ

ವಜ್ರವನ್ನು ನೀಡುತ್ತಿದ್ದನು.[6] ಇಷ್ಟೇ ಅಲ್ಲದೆ ಅಮೂಲ್ಯ ವಾದ ಹಾಗೂ ಬೆಲೆಬಾಳುವ ವಜ್ರಗಳನ್ನು ನೀಡುತ್ತಿದ್ದನು. ಇವುಗಳು ನೇರವಾಗಿ ರಾಜನ ಖಜಾನೆಗೆ ಸೇರುತ್ತಿತ್ತು.

ಕೋರಮಂಡಲ ತೀರ ಪ್ರದೇಶದ ಮೇಲೆ ವಿಜಯನಗರ ದೊರೆಗಳಿಗೆ ನೇರವಾದ ಅಧಿಕಾರವಾಗಲಿ ಅಲ್ಲಿಂದ ಆದಾಯವಾಗಲೀ ಬರುತ್ತಿರಲಿಲ್ಲ. ಕ್ರಿ.ಶ. ೧೬ ನೇ ಶತಮಾನದಲ್ಲಿ ಮುಸ್ಲಿಂ ವ್ಯಾಪಾರಸ್ಥರ ಇಲ್ಲವೆ ನಾಯಕರ ನಿಯಂತ್ರಣದಲ್ಲಿತ್ತು.[7] ಈ ವಿಷಯದಲ್ಲಿ ಈ ದೊರೆಗಳು ಅಷ್ಟಾಗಿ ತಲೆ ಕೆಡಿಸಿಕೊಂಡಿರಲಿಲ್ಲ. ಆದರೂ ವಿಜಯನಗರಕ್ಕೆ ವಿಧೇಯರಾಗಿದ್ದರು. ಕಾಲಕಾಲಕ್ಕೆ ಕಪ್ಪಕಾಣಿಕೆ ತಂದೊಪ್ಪಿಸುತ್ತಿದ್ದರು. ಇದು ನೇರವಾಗಿ ರಾಜನ ಖಜಾನೆಗೆ ಸೇರುತ್ತಿತ್ತು.

ಈಗಾಗಲೇ ತಿಳಿಸಿರುವಂತೆ ಕೈಗಾರಿಕೆ, ಗಣಿಗಾರಿಕೆ, ಟಂಕಸಾಲೆ, ಸೈನ್ಯಾಚರಣೆ, ವಿದೇಶಾಂಗ ವ್ಯವಹಾರ ಸೇರಿದಂತೆ ನಮ್ಮ ಆಚಾರ, ವಿಚಾರ, ಸಂಪ್ರದಾಯಗಳ ಬಗ್ಗೆ ದೇಶಿ ಕವಿಗಳಿಗಿಂತಲೂ ವಿದೇಶಿ ಪ್ರವಾಸಿಗರು ತೀರ ಗಂಭೀರವಾಗಿ ಹಾಗೂ ಸೂಕ್ಷ್ಮವಾಗಿ ಅವಲೋಕಿಸಿ ತಮ್ಮ ಪ್ರವಾಸ ಕಥನದಲ್ಲಿ ದಾಖಲಿಸಿದ್ದಾರೆ. ಪಾಯಿಸ್, ನೂನೀಸರು ಸಾವಿರಾರು ಮೈಲಿ ದೂರದಿಂದ ಬಂದು ಇಲ್ಲಿನ ಭಾಷೆ, ಸ್ಥಳನಾಮಗಳ ಉಚ್ಚಾರಣೆ ಇವೇ ಮುಂತಾದ ತೊಡಕುಗಳ ನಡುವೆಯೂ ಕೈಗಾರಿಕೆ, ಗಣಿಗಾರಿಕೆಯ ಬಗ್ಗೆ ಸಾಕಷ್ಟ ಮಾಹಿತಿ ನೀಡಿದ್ದಾರೆ. ಚಿನ್ನ, ಮುತ್ತು, ರತ್ನ, ವಜ್ರದ ಬಳಕೆ ಭಾರತದಲ್ಲಿ ಇತ್ತೆಂದರೆ ಗಣಿ ಉದ್ಯಮವೂ ಇದ್ದಿರಲೇಬೇಕು. ಚಿನ್ನದ ಗಣಿಯ ಬಗ್ಗೆ ವಿದೇಶಿ ಪ್ರವಾಸಿಗರಿಗೆ ಅಷ್ಟೇನು ಮಾಹಿತಿ ಸಿಗಲಿಲ್ಲದ ಕಾರಣವೋ ಏನೋ ವಜ್ರದ ಗಣಿಯ ಬಗ್ಗೆ ಕೆಲವಾರು ಮಾಹಿತಿಯನ್ನು ನೀಡಿದ್ದಾರೆ.

ನೂನೀಸನು ವಜ್ರದ ಗಣಿಯು ಬೀಜ್‌ನಗರದ ಉತ್ತರದ ಬಹುದೂರದಲ್ಲಿ, ಗುತ್ತಿ (Gooty) ಎಂಬ ಪ್ರದೇಶದಲ್ಲಿ, ವಜ್ರಕರೂರ್ ಎಂಬ ಪ್ರದೇಶಗಳಲ್ಲಿ ವಜ್ರದ ಗಣಿಗಳಿದ್ದವೆಂದು ಹೇಳುತ್ತಾನೆ.[8] ಕೆಲವು ಗಣಿಗಳು ಬಿಜಾಪುರದ ಆದಿಲ್ ಷಾಹಿಗಳಿಗೆ, ಕುತುಬ್‌ಷಾಹಿ ಸುಲ್ತಾನರಿಗೆ ಗೋಲ್ಕಂಡದಲ್ಲಿದ್ದ ವಜ್ರದ ಗಣಿ ಸೇರಿತ್ತು. ಅದೇ ರೀತಿ ಕೊಂಡಪಲ್ಲಿ ವಜ್ರದ ಗಣಿಯು ವಿಜಯನಗರಕ್ಕೆ ಸೇರಿತ್ತೆಂದು ಹೇಳಿದ್ದಾರೆ.

ವಜ್ರದ ಗಣಿಯಲ್ಲಿ ಕೆಲಸ ಮಾಡಲು ನುರಿತ ಕೆಲವಾರು ಜನರನ್ನು ನೇಮಿಸ ಲಾಗಿತ್ತು. ವಜ್ರ ತೆಗೆಯುವ, ಅದನ್ನು ಕತ್ತರಿಸಿ ಹೊಳಪು ನೀಡುವ ಇದೇ ಮುಂತಾದ ಕೆಲಸಕ್ಕೆ ಕುಶಲಕರ್ಮಿಗಳು ಹಗಲಿರುಳು ದುಡಿಯುತ್ತಿದ್ದರು. ಗಣಿಯಲ್ಲಿ ಕೆಲಸ ಮಾಡುವ ಕಾರ್ಮಿಕರು ಕಳ್ಳತನ ಮಾಡದಂತೆ ಎಚ್ಚರಿಕೆ ವಹಿಸಿದ್ದರು. ಕಾರ್ಮಿಕರು ಗಣಿಯ ಒಳಭಾಗಕ್ಕೆ ಹೋಗುವಾಗ ಅದರಲ್ಲೂ ವಾಪಸ್ಸು ಹೊರಕ್ಕೆ ಬರುವಾಗ ತೀವ್ರ ತಪಾಸಣೆ ಮಾಡುತ್ತಿದ್ದರು.[9] ಇತ್ಯಾದಿ.

ವಜ್ರವನ್ನು ಕತ್ತರಿಸುವ, ಸಾಣೆ ಹಿಡಿಯುವ, ಹೊಳಪು ನೀಡುವ ಕೆಲಸಕ್ಕೆ ಕುಶಲಕರ್ಮಿಗಳನ್ನು ಮಾತ್ರ ನೇಮಿಸಿಕೊಂಡಿದ್ದರು. ಇವರು ಸಾಮಾನ್ಯವಾಗಿ ಮರದ ತುಂಡಿಗೆ ಗಟ್ಟಿಯಾದ ಕಲ್ಲನ್ನು ಸಿಕ್ಕಿಸಿ (ನಾವು ಸುತ್ತಿಗೆ ಎನ್ನುತ್ತೇವೆ) ಅದರ ಸಹಾಯದಿಂದ ದಪ್ಪವಜ್ರದ ಕಲ್ಲನ್ನು ತಮಗೆ ಬೇಕಾದ ಆಕಾರಕ್ಕೆ ತಕ್ಕಂತೆ ಕತ್ತರಿಸುತ್ತಿದ್ದರು. ಚಕ್ರಗಳನ್ನು ಬಳಸಿ ವಜ್ರವನ್ನು ಸಾಣೆ ಹಿಡಿಯುತ್ತಿದ್ದರು. [10] ಇತ್ಯಾದಿ.

ಹೀಗೆ ಮುಂದುವರೆದ ನೂನಿಸನು ಅಂದಿನ ಕಾಲದಲ್ಲಿ ವಜ್ರದ ಗಣಿ ಎಂದರೆ ಸಾಮಾನ್ಯವಲ್ಲ. ವಿಶ್ವದಲ್ಲೇ ಅತೀ ಬೆಲೆ ಬಾಳುವ ಪ್ರದೇಶ ಅಥವಾ ರಾಜ್ಯ ಅಥವಾ ದೇಶವಾಗಿತ್ತೆಂದು ಬಣ್ಣಿಸಿದ್ದಾನೆ. ಸಾಮಾನ್ಯವಾಗಿ ಎಲ್ಲಾ ವಜ್ರಗಳ ೨೦ ಮಂಗಲಿನ್ಸ್ (Mangellins) ಇರುತ್ತಿತ್ತು. ಎಂದರೆ ಇಂದಿನ ೨೫ ಕ್ಯಾರೆಟ್.[11] ಎಲ್ಲಾ ವಜ್ರಗಳನ್ನು ರಾಜನಿಗೆ ಕಳುಹಿಸಲಾಗುತ್ತಿತ್ತು.

ವಿಜಯನಗರದ ಸಾಮ್ರಾಜ್ಯದ ಆರ್ಥಿಕ ಪರಿಸ್ಥಿತಿಯ ಮೇಲೆ ಗಣಿಗಾರಿಕೆಯು ಮಹತ್ವದ ಪಾತ್ರ ವಹಿಸಿತ್ತು. ಹೀಗೆ ನೈಸರ್ಗಿಕವಾಗಿ ದೊರೆತ ವಜ್ರ ಸೇರಿದಂತೆ ಬೆಲೆ ಬಾಳುವ ಕಲ್ಲುಗಳು ವಿದೇಶಿಯರ ಕಣ್ಣುಕುಕ್ಕಿದವು. ಇಂತಹ ಗಣಿಗಳ ಮುಂದೆ ಭೂಕಂದಾಯ, ಕರ, ಸುಂಕಗಳು ಬಹಳ ಕ್ಷುಲ್ಲಕವಾದವು. ಆದರೂ ದೊರೆಗಳು ಯಾವ ಮೂಲದಿಂದಲೂ ಆದಾಯ ಬರುವುದನ್ನು ಬಿಡುತ್ತಿರಲಿಲ್ಲ. ಆ ಅಧಿಕ ಹಣ, ಐಶ್ವರ್ಯದಿಂದಾಗಿ ಆಡಳಿತ, ಸೈನ್ಯವನ್ನು ಸಾಕಲು ಬಹಳಷ್ಟು ಮಟ್ಟಿಗೆ ನೆರವಾಗುತ್ತಿತ್ತು. ಇವೇ ಮುಂತಾದ ಕಾರಣಗಳಿಂದ ಆರ್ಥಿಕವಾಗಿ ಬಲಶಾಲಿಗಳಾದ ದೊರೆಗಳು ದುರ್ಬಲರಾದ ದೊರೆಗಳನ್ನು ಸೋಲಿಸುವುದು ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿಕೊಳ್ಳುವುದು ಕಷ್ಟವಾಗಿರಲಿಲ್ಲ.

ಸಂದರ್ಭಸೂಚಿ

1. *Administration and Social Life under Vijayanagar* - T.V. Mahalingam - p. 64.
2. *All the kings mana papers on medieval south India,* Buton Stein, Madras, 1984.
3. Administration and Social Life under Vijayanagar - pp 66-67.
4. ಪ್ರವಾಸಿ ಕಂಡ ಇಂಡಿಯ -ಸಂಪುಟ - 2/ಪು - 419 - ಹೆಚ್.ಎಲ್.ನಾಗೇಗೌಡ
5. *Economic Conditions in South India (1000-1500)* - ಪು - 542, Vol - II, A. Appadovai.
6. *Administration and Social Life under Vijayanagar Part* - I, pp 66-67, T.V. Mahalingam.
7. *Vijayanagara - Cambridge History of India* - p.75, Burton Stein
8. *A Forgotten Empire,* New Delhi, 1924 - P389

9. *India in the fifteenth century* - R.H. Major - New Delhi - 1974
10. *A Forgotten Empire,* - R. Sewell, - 1924, - London - p. 399

೩೫. ವಿಜಯನಗರ ಕಾಲದಲ್ಲಿ ಸಿಡಿಮದ್ದಿನ ಬಳಕೆ

ಡಾ.ಎಸ್.ವೈ. ಸೋಮಶೇಖರ್

ಸಿಡಿಮದ್ದಿನ ಬಳಕೆ ಕುರಿತು ನಡೆದಷ್ಟು ಚರ್ಚೆ ಸೈನಿಕ ವ್ಯವಸ್ಥೆ ಯಾವುದೇ ವಿಷಯದ ಮೇಲೆ ಬಹುಶಃ ನಡೆದಿಲ್ಲವೆನ್ನಬಹುದು. ಇದರ ಬಗೆಗೆ ವಿದ್ವಾಂಸರು ಹಲವು ರೀತಿಯಲ್ಲಿ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಗಿಬ್ಬನ್ ಎಂಬ ವಿದ್ವಾಂಸ ಕ್ರಿ.ಶ. ೮೩ರ ಹೊತ್ತಿಗೆ ಫಿರಂಗಿಗಳನ್ನು ಚೀನಾದವರು ಬಳಕೆಗೆ ತಂದಿದ್ದರೆಂದಿದ್ದಾರೆ. ಕೊಲ್ ಫೇವ್ (Col. Fave) ಎಂಬುವನು ಅರಬ್ಬರು ಸಿಡಿಮದ್ದನ್ನು ಹಿಂದೆಯೇ ತಿಳಿದಿದ್ದರು ಎಂದಿದ್ದು, ಇದಕ್ಕೆ ಆಕರವಾಗಿ ಕ್ರಿ.ಶ. ೧೨೦೦ರಲ್ಲಿ ಅರೇಬಿಯಾದ ಅಬ್ದುಲ್ಲಾ ಕವಿಯು ಪೆಟ್ಲುಪ್ಪನ್ನು ಉಲ್ಲೇಖಿಸಿರುವುದಾಗಿ ಸಮರ್ಥಿಸುತ್ತಾರೆ. ಸಾಮಾನ್ಯವಾಗಿ ಸಿಡಿಮದ್ದನ್ನು ತಯಾರಿಸಲು ಬಳಸುತ್ತಿದ್ದ ವಸ್ತುಗಳಿವು: ಗಂಧಕ, ಇದ್ದಿಲು ಮತ್ತು ಪೆಟ್ಲುಪ್ಪುಗಳನ್ನು ಅನುಪಾತ ೧೧.೯ : ೧೩.೫ : ೭೪.೬ರ ಪ್ರಮಾಣದಲ್ಲಿ ಸಂಯೋಜಿಸಿ ತಯಾರಿಸ ಲಾಗುತ್ತಿತ್ತು. ಈ ಪದ್ಧತಿಯನ್ನು ಚೀನಾ, ಭಾರತ, ಗ್ರೀಕ್, ಅರಬ್, ಮಂಗೋಲ್, ಬ್ರಿಟನ ಮತ್ತು ಜರ್ಮನ್ನರೂ ಅನುಸರಿಸಿದ್ದರು . ಹೆಚ್.ಜಿ. ವೇಲ್ಸ್ ಮಂಗೋಲರ ದಿಗ್ವಿಜಯಗಳಿಗೆ ಅವರು ಬಳಸಿದ ಬಂದೂಕು ಮತ್ತು ಸಿಡಿಮದ್ದುಗಳು ಕಾರಣ ವಾಗಿದ್ದವು, ಇದನ್ನು ಅವರು ಚೀನಿಯರಿಂದ ತಿಳಿದುಕೊಂಡಿದ್ದರೆಂದು ಹೇಳುತ್ತಾರೆ. ಇಂಗ್ಲಿಷರು ಸಿಡಿಮದ್ದಿನ ಪುಡಿಯನ್ನು ಕಂಡುಹಿಡಿದುದು ಆಂಗ್ಲನಾದ ಪ್ರೈಯರ್ ರೋಗರ್ ಬೇಕನ್ (ಕ್ರಿ.ಶ. ೧೨೨೦-೯೨) ಎಂದು ಆರೋಪಿಸಿದರೆ, ಯೂರೋಪಿಯನ್ನರು ಬೆರ್ತ್‌ಹೋಲ್ಡ್ ಸ್ಕವಾರ್ಟ್ಸ್ (Berthold Schwarts) ಎಂಬ ಜರ್ಮನಿಯುವನು ೧೪ನೆಯ ಶತಮಾನದಲ್ಲಿ ಕಂಡು ಹಿಡಿದನೆಂದೂ ಹೇಳುತ್ತಾರೆ. ಇದು ಸಿಡಿಮದ್ದಿನ ಪ್ರಾಪಂಚಿಕ ಅಭಿಪ್ರಾಯಗಳಾದರೆ ಭಾರತೀಯ ಮೂಲವನ್ನೂ ಮಂಡಿಸುವ ವಾದ ಮತ್ತೊಂದು ಬಗೆಯದು :

ಭಾರತೀಯರು ಪ್ರಾಚೀನ ಕಾಲದಲ್ಲೇ ಸಿಡಿಮದ್ದನ್ನು ಬಳಸಿದ್ದರು; ಅದನ್ನು ಮಹಾಭಾರತ, ಮುದ್ರಾರಾಕ್ಷಸ ಹಾಗೂ ಅಗ್ನಿಪುರಾಣ ಮೊದಲಾದ ಸಂಸ್ಕೃತ ಕಾವ್ಯಗಳಲ್ಲಿ ಕಾಣಬಹುದೆಂದು ಅಭಿಪ್ರಾಯಗಳೂ ಇವೆ. ಈ ವಾದವನ್ನು ಮುಂದಿಡುವ ವಿದ್ವಾಂಸರೆಂದರೆ ಒಪೆರ್ಟ್ (Oppert), ವಿಲ್ಸನ್, ರಾಮದಾಸ್ ಸೇನ್ ಮತ್ತು ವಿ.ಆರ್.ಆರ್. ದೀಕ್ಷಿತರ್. ಸಂಸ್ಕೃತ ಕಾವ್ಯಗಳಲ್ಲಿ ಉಲ್ಲೇಖಗೊಂಡಿರುವ ಶತಘ್ನಿ, ಕನಪ,

ಆಯುರ್ವಘ್ನಿ, ನರಚ, ಲೋಹಯಂತ್ರ, ಕಾಲಚಕ್ರ, ಸರ್ವಘಾಟಿ, ದೀಧಿತಿ, ಸ್ಫುಲಿಂಗ, ಕದಿನಿ ಹಾಗೂ ಕೌಟಿಲ್ಯನು ಹೇಳುವ 'ಅಗ್ನಿಬಾಣ', ಕಾಮಂದಕನ ನೀತಿಸಾರ ಮತ್ತು ಶುಕ್ರನೀತಿಯಲ್ಲಿ ಬರುವ 'ನಲಿಕ'ಗಳನ್ನು ಸಿಡಿಮದ್ದಿನ ಆಯುಧ ಗಳೆಂದೂ ಹೇಳಲಾಗಿದೆ.[1] ಕನ್ನಡ ಕಾವ್ಯಗಳಲ್ಲೂ ಇಂತಹ ಆಯುಧಗಳ ಉಲ್ಲೇಖ ಗಳಿವೆ. ಅವುಗಳೆಲ್ಲವೂ ೧೫ನೇ ಶತಮಾನದ ನಂತರದು. ಈ ಕಾವ್ಯಗಳು ವ್ಯಕ್ತಪಡಿಸುವ ಫಿರಂಗಿ, ಗುಂಡುಗೋವಿ, ಮದ್ದಿನಪಟ್ಟಣ, ಶತಘ್ನಿ, ಉಪ್ಪಿನತಿತ್ತಿ, ಪೆಟಲು, ಕೈ ಗೋವಿ, ಭೂರಿಶತಗ್ನಿ, ತೋಪು ಇನ್ನು ಮುಂತಾದವುಗಳು ಸಿಡಿಮದ್ದಿನ ಸಮರ್ಥ ಬಳಕೆಯನ್ನು ಎತ್ತಿಹಿಡಿದಿವೆ. [2]

ಕರ್ನಾಟಕದಲ್ಲಿ ಸಿಡಿಮದ್ದಿನ ಬಳಕೆ ಕುರಿತು ಹೇಳುವ ಮುನ್ನ ಚರಿತ್ರೆಯ ಆಕರ ಗಳಾದ ಸಾಹಿತ್ಯ, ಶಾಸನ, ಸ್ಮಾರಕ, ವೀರಗಲ್ಲು, ಪ್ರವಾಸಿಗರ ವರದಿ ಮೊದಲಾದವು ಗಳನ್ನು ಸಮೀಕ್ಷಿಸಿದಾಗ ಕ್ರಿ.ಶ. ೧೪ನೆಯ ಶತಮಾನದ ಪೂರ್ವದಲ್ಲಿ ಸಿಡಿಮದ್ದು ಬಳಕೆಯಾದ ಉಲ್ಲೇಖಗಳಿಲ್ಲ. ಚಿದಾನಂದಮೂರ್ತಿ ಅವರು ಕೂಡ ಸಿಡಿಮದ್ದಿನ ಬಳಕೆ ಪ್ರಾಚೀನ ಕರ್ನಾಟಕದಲ್ಲಿ ಇರಲಿಲ್ಲವೆಂಬುದನ್ನು ಒಪ್ಪುತ್ತಾರೆ. ಸಾಹಿತ್ಯದಲ್ಲಿ ಶಸ್ತ್ರಗಳ ಉಲ್ಲೇಖವಿದ್ದರೂ. ಅವು ವಿಷಪೂರಿತ ಆಯುಧಗಳೆ ಹೊರತು ಸಿಡಿಮದ್ದು ಆಗಿರಲಿಲ್ಲ. ಶಾಸನ ಮತ್ತು ಪ್ರವಾಸಿ ವರದಿಗಳು ೧೪ನೆಯ ಶತಮಾನದಲ್ಲಿ ಸಿಡಿಮದ್ದು ಬಳಕೆಯಾಗಿರುವುದನ್ನು ಎತ್ತಿ ಹಿಡಿದಿದೆ. ಇವುಗಳಲ್ಲದೆ ಕರ್ನಾಟಕವು ವೀರಗಲ್ಲುಗಳ ತಾಣವೇ ಹೌದು. ಕ್ರಿ.ಶ. ೧೫ನೆಯ ಶತಮಾನದ ಪೂರ್ವ ವೀರಗಲ್ಲುಗಳು ಸಾಮಾನ್ಯವಾಗಿ ಕಾಣಬರುವ ಶಸ್ತ್ರಾಸ್ತ್ರಗಳೆಂದರೆ ಬಿಲ್ಲು -ಬಾಣ, ಕತ್ತಿ - ಗುರಾಣಿ, ಈಟಿ-ಭರ್ಚಿಗಳೇ ಆಗಿವೆ. ಇವುಗಳಲ್ಲಿ ಬಂದೂಕುಗಳಿರುವುದಿಲ್ಲ.

ವಿಜಯನಗರ ಮತ್ತು ನಂತರ ಕಾಲದ ವೀರಗಲ್ಲುಗಳಲ್ಲಿ ವೀರರು ತಮ್ಮ ಕೈ ಗಳಲ್ಲಿ ಕತ್ತಿಯ ಜೊತೆಗೆ ಬಂದೂಕುಗಳನ್ನು ಹಿಡಿದಿರುವರು. ಇಲ್ಲಿ ಬಂದೂಕಿನ ಉಪಯೋಗ ಕಂಡುಕೊಂಡಿದ್ದರು. ವೀರರ ಬಳಿ ಕತ್ತಿ ಅಥವಾ ಬಾಕು ಇರುವುದು ಇಂದಿನ ಆಯುಧಗಳ ಪ್ರಭಾವವೇ ಇರಬೇಕು. ವಿಜಯನಗರ ಕಾಲಾವಧಿಯ ವೀರ ಗಲ್ಲುಗಳಲ್ಲಿ ಕಾಣಬರುವ ವಿಶೇಷ ಹಾಗೂ ವಿನೂತನ ಆಯುಧವಾದ ಬಂದೂಕು ಕಂಡು ಬರುವುದರಿಂದ ಕರ್ನಾಟಕದಲ್ಲಿ ಸಿಡಿಮದ್ದಿನ ಬಳಕೆ ಕ್ರಿ.ಶ.೧೪ ನೆಯ ಶತಮಾನ ಅಂದರೆ ವಿಜಯನಗರ ಕಾಲದಲ್ಲಿ ಬಳಕೆಗೊಂಡಿತ್ತೆಂಬುದು ಸ್ಪಷ್ಟ. ಅಂತೆಯೇ ವಿಜಯ ನಗರ ಕಾಲದ ಸಿಡಿಮದ್ದಿನ ಬಳಕೆ ಹಾಗೂ ಫಿರಂಗಿ ಪಡೆಗೆ ಸಂಬಂಧಿಸಿದಂತೆ ಹಲವು ಆಕರಗಳು ದೊರೆತಿವೆ.

ವಿಜಯನಗರ ಆರಂಭ ಕಾಲದ ಸಿಡಿಮದ್ದಿನ ಬಳಕೆ ಕುರಿತ ಆಕರವೆಂದರೆ ಫೆರಿಸ್ತಾನ ಹೇಳಿಕೆ. ಫೆರಿಸ್ತಾನು ದಾವೂದ್ ಬಿದುರಿಯ 'ತಹಪುತ್ - ಉಸ್ - ಸಲಾತಿನ್' ಕೃತಿಯಲ್ಲಿ ಉಲೇಖಿಸಲಾದ ಬಹಮನಿಯ ಮಹಮದ್ ಷಹ ವಿಜಯನಗರದೊಂದಿಗೆ ಕೈಗೊಂಡ

ಯುದ್ಧದ ವಿವರಣೆಯನ್ನು ನೀಡುತ್ತಾನೆ.ಕ್ರಿ.ಶ. ೧೩೬೬-೬೮ರ ಸಮಯದಲ್ಲಿ ಮಹಮದ್ ಷಹನು ವಿಜಯನಗರದ ಬುಕ್ಕರಾಯನನ್ನು ಸೋಲಿಸಿ ೨೦೦೦ ಆನೆಗಳು, ೩೦೦ ಬಂದೂಕು ಮತ್ತು ಫಿರಂಗಿ ಗಾಡಿಗಳು, ೭೦೦ ಅರೇಬಿಯಾದ ಕುದುರೆಗಳು ಹಾಗೂ ಬೆಲೆಬಾಳುವ ಆಭರಣಗಳನ್ನು ಲೂಟಿ ಮಾಡಿದನೆಂದು ಹೇಳಲಾಗಿದೆ.[3] ಕ್ರಿ.ಶ.೧೬೬೮ರ ಜುಲೈ ತಿಂಗಳಲ್ಲಿ ಮಹಮದ್ ಶಹ ಮತ್ತು ಬುಕ್ಕರಾಯನಿಗೆ ನಡೆದ ಕದನದಲ್ಲಿ ಬಹಮನಿಯ ಫಿರಂಗಿ ಪಡೆಯ ಚಾಕ ಚಕ್ಯತೆಯನ್ನು ಫೆರಿಸ್ತಾ ಹೀಗೆ ಹೇಳುತ್ತಾನೆ : 'ಫಿರಂಗಿಯೊಂದಿಗೆ ಮುಂದುವರಿಯುತ್ತಿದ್ದ ಮುಕ್ರಿಬ್‌ಖಾನ ನಿರ್ವಹಣೆಯಲ್ಲಿ ಹಿಂದೆ ಬೀಳದೆ ಶತ್ರುಗಳ ಅಶ್ವದಳ ಮತ್ತು ಕಾಲ್ದಳುಗಳನ್ನು ಚೆಲ್ಲಾಪಿಲ್ಲಿಗೊಳಿಸಿದ... ಅವನು ಎಷ್ಟು ಶೀಘ್ರವಾಗಿ ಮುನ್ನಡೆದನೆಂದರೆ ಕಾಫಿರ (ವಿಜಯನಗರ)ರಿಗೆ ಸಿಡಿಮದ್ದ (ಫಿರಂಗಿ)ನ್ನು ಬಳಸಲು ಸಮಯವೆ ಸಿಗದಂತಾಗಿ ಕತ್ತಿ-ಕಠಾರಿಗಳಂತಹ ಗಿಡ್ಡ ಆಯುಧ ಬಳಸಬೇಕಾಯಿತು.'[4] ಇದರಿಂದ ಬಹಮನಿ ಮತ್ತು ವಿಜಯನಗರ ಎರಡೂ ಸೇನೆಗಳು ಸಿಡಿಮದ್ದಿನ ಉಪಕರಣಗಳನ್ನು ಹೊಂದಿದ್ದುದು ದೃಢಪಡುತ್ತದೆ. ಫೆರಿಸ್ತಾನ ಈ ಮೇಲಿನ ಎರಡೂ ಉಲ್ಲೇಖಗಳು ಒಂದೇ ಯುದ್ಧದವುಗಳಾಗಿದ್ದುದನ್ನು ದಿನಾಂಕಗಳಲ್ಲಿ ಕಾಣಬಹುದು.

ಬ್ರಿಗ್ಸ್‌ರು ಸಿಡಿಮದ್ದಿನ ಬಳಕೆಗೆ ಸಂಬಂಧಿಸಿದ ಚರ್ಚೆಯಲ್ಲಿ ಕ್ರಿ.ಶ.೧೩೬೮ರ ಹೊತ್ತಿಗೆ ಬಂದೂಕುಗಳನ್ನು ಪಶ್ಚಿಮ ದೇಶಗಳಿಂದ ದೊರಕಿಸಿಕೊಂಡಿದ್ದುದಾಗಿ ಹೇಳಿದ್ದಾರೆ. ಕ್ರಿ.ಶ.೧೩೬೮ಕ್ಕೆ ೧೮ ವರ್ಷಗಳಷ್ಟು ಹಿಂದೆಯೇ ಮೂರನೇ ಎಡ್ವರ್ಡ್‌ನು ಕ್ರೆಸ್ಸಿ ಕದನದಲ್ಲಿ ಫಿರಂಗಿ ಬಳಸಿದ್ದುದನ್ನು ಸಮರ್ಥಿಸುತ್ತಾರೆ.[5] ತೋಪುಗಳನ್ನು ಬಳಸುವಲ್ಲಿ ಪರಿಣತರಾದ ಟರ್ಕರು ಮತ್ತು ಯೂರೋಪಿಯನ್ನರು ಮಹಮ್ಮದೀಯ ಸೈನ್ಯ ಫಿರಂಗಿ ಪಡೆಯಲ್ಲಿದ್ದರೆನ್ನುವ ಫೆರಿಸ್ತಾನ ಹೇಳಿಕೆಗೆ ಬ್ರಿಗ್ಸ್‌ರ ಅಭಿಪ್ರಾಯ ಸಮ್ಮತವಾಗಿದೆ.

ಕ್ರಿ.ಶ ೧೩೮೮ ರ ಶಾಸನದಲ್ಲಿ ಚಿಕ್ಕಗೊಂಡನ ಮಗ ಕೋವಿಕಾರ ಧೇವಯ್ಯ ನಾಯಕನು ಹಾವು ಕಚ್ಚಿ ಸತ್ತನೆಂದು ಹೇಳಲಾಗಿದೆ.[6] ಇಲ್ಲಿ ಬಳಕೆಗೊಂಡ ಕೋವಿಯು ಬಂದೂಕೆಂಬುದರಲ್ಲಿ ಸಂಶಯವಿಲ್ಲ. ಅಂತೆಯೇ ೧೪೪೧ರ ಇನ್ನೊಂದು ಶಾಸನದಲ್ಲಿ ಮಹಾಪ್ರಭು ಬಯಿಚಗವುಡನು 'ನಾಡಂಗಿರಿನಾಡ ರಾಜನ ಮದ್ದಿನ ಸೇವೆಯಂ ನಡೆಸಿತ್ತುದ...' ಎಂದಿದೆ. ಇಲ್ಲಿ ಹೇಳಲಾದ ಮದ್ದಿನ ಸೇವೆಯನ್ನು ಸಿಡಿಮದ್ದೆಂದು ಕೆಲವರು ಹೇಳಿದ್ದಾರೆ. ಮತ್ತೆ ಕೆಲವರು ಇದು ಔಷಧಿಯ ಸೇವೆಯಿರಬೇಕೆಂದೂ ಹೇಳುತ್ತಾರೆ.[7] ಈ ಮೇಲಿನ ಎಲ್ಲ ಆಕರಗಳ ಹಿನ್ನೆಲೆಯಲ್ಲಿ ವಿಜಯನಗರ ಕಾಲ ಅಂದರೆ ೧೪ನೆಯ ಶತಮಾನದ ಹೊತ್ತಿಗೆ ಸಿಡಿಮದ್ದು ಯಥೇಚ್ಛವಾಗಿ ಬಳಕೆಯಲ್ಲಿತ್ತೆಂದು ಹೇಳಬಹುದು.

೧೪೨೦ರಲ್ಲಿ ಭಾರತಕ್ಕೆ ಬಂದಿದ್ದ ಕೊಂತಿಯು 'ಮಧ್ಯ ಇಂಡಿಯಾದ ಜನರು ಗುಂಡುಗಳನ್ನು ಸಿಡಿಸುವ ಯಂತ್ರವನ್ನೂ, ಸಿಡಿಗುಂಡುಗಳನ್ನೂ ಉಪಯೋಗಿಸುತ್ತಾರೆ'[8] ಎಂದಿದ್ದಾನೆ. ಇಲ್ಲಿ ಹೇಳಲಾದ ಯಂತ್ರಗಳನ್ನು ರಾಮರಾಜನ ಬಖೈರಿನಲ್ಲಿ ಉಲ್ಲೇಖಗೊಂಡಿರುವ ಸುತಳನಾಲಿ ಮತ್ತು ಹತರನಾಲಿಗಳೆಂದೂ ವಿದ್ವಾಂಸರು ಗುರುತಿಸಿದ್ದಾರೆ. [9] ಕ್ರಿ.ಶ. ೧೫೧೦ರಲ್ಲಿ ಆಳ್ವಿಕೆಗೆ ಬಂದ ಕೃಷ್ಣದೇವರಾಯನ ಕಾಲದಲ್ಲಂತೂ ಫಿರಂಗಿಗಳನ್ನು ಸಮರ್ಥವಾಗಿ ಬಳಸಿದ ಉಲ್ಲೇಖಗಳಿವೆ. ನ್ಯೂನಿಜ್, ಪಾಯೇಸ್, ಬಾರ್ಬೋಸಾ ಮತ್ತಿತರರು ಫಿರಂಗಿ ಪಡೆಯ ಬಳಕೆ ಹಾಗೂ ನಿರ್ವಹಣೆಗಳನ್ನು ವಿಸ್ತಾರವಾಗಿ ಚಿತ್ರಿಸಿದ್ದಾರೆ.

ಡೊಮಿಂಗೋ ಪಾಯೇಸ್, ವಿಜಯದಶಮಿಯ ದಿನ ರಾಜನು ಸೇನಾ ವೀಕ್ಷಣೆಯಲ್ಲಿ ತೊಡಗಿರುವಾಗ, ಮೈದಾನ ಪ್ರದೇಶಗಳಲ್ಲಿ ಸಿಡಿಮದ್ದು, ಬಾಣ - ಬಿರುಸುಗಳ ಪ್ರದರ್ಶನ ಅದ್ಭುತವಾಗಿತ್ತು[10] ಎನ್ನುತ್ತಾನೆ. ನ್ಯೂನಿಜ್ ನೀಡುವ ವಿವರವಂತೂ ಅಪಾರ. ಕೃಷ್ಣದೇವರಾಯನು ಕೈಗೊಂಡ ರಾಯಚೂರು ದಂಡೆಯಾತ್ರೆಯಲ್ಲಿ ತನ್ನ ಬೃಹತ್ ಮೊತ್ತದ ಸೈನ್ಯದ ಜೊತೆಗೆ ಫಿರಂಗಿಗಳಿದ್ದುವೆಂದು ಹೇಳಿದ್ದಾನೆ. ಅಲ್ಲದೆ ಬಹಮನಿಯವರು ರಾಯಚೂರು ಕೋಟೆಯಲ್ಲಿ ೨೦೦ ಫಿರಂಗಿಗಳನ್ನು ಅಳವಡಿಸಿದ್ದರೆಂದೂ, ಬಹಮನಿಯ ಯೋಧರು ಫಿರಂಗಿಗಳಿಂದ ಗುಂಡುಗಳನ್ನು ಹಾರಿಸಿ ಹಾಗೂ ಕೋವಿಗಳಿಂದ ಮದ್ದು ಹೊಡೆದು ಕೃಷ್ಣದೇವರಾಯನ ಅನೇಕ ಸೈನಿಕರನ್ನು ಆಹುತಿ ತೆಗೆದುಕೊಂಡ ವಿಚಾರವನ್ನು ಪ್ರಸ್ತಾಪಿಸುತ್ತಾನೆ. ಈ ಕೋಟೆಯ ಮುತ್ತಿಗೆಯಲ್ಲಿ ಪೋರ್ಚುಗೀಸರ ಪಾತ್ರ ಮಹತ್ವದ್ದು. ನ್ಯೂನಿಜ್ 'ವಿಜಯನಗರ ದಲ್ಲಿದ್ದ ಪೋರ್ಚುಗೀಸರ ಕ್ರಿಸ್ಟಾಂವ್-ದ-ಪಿಗೈರೆಡೋ ಇಪ್ಪತ್ತು ಗೋಲಂದಾಜರೊಡಗೂಡಿ ರಾಯಚೂರನ್ನೂ ತಲುಪಿದನು... ಫಿಗೈರೆಡೋ ತನ್ನವ ರೊಡನೆ ಹೊರಟು ರಾಯಚೂರು ಕೋಟೆಗೆ ಬಹು ಸಮೀಪಕ್ಕೆ ಹೋಗಿ ಕೋವಿಗಳಿಂದ ಗುಂಡು ಹೊಡೆದನು. ಕೋಟೆಯಲ್ಲಿದ್ದವರಿಗೆ ಈ ತರಹ ಕೋವಿಯ ಗುಂಡುಗಳೂ ಅನುಭವವಿರಲಿಲ್ಲ'[11] ಎಂದಿದ್ದಾನೆ. ಇದರಿಂದ ಕೃಷ್ಣದೇವರಾಯನ ಕಾಲದಲ್ಲಿ ಇದುವರೆಗೆ ಬಳಕೆಯಿದ್ದ ಮದ್ದುಗುಂಡುಗಳು, ಫಿರಂಗಿಗಳಿಗೆ ಬದಲಾಗಿ ಪೋರ್ಚುಗೀಸರ ನವೀನ ಮಾದರಿಯ ಅಸ್ತ್ರಗಳು ಬಳಕೆಗೊಂಡುದನ್ನು ಇಲ್ಲಿ ಕಾಣಬಹುದು. ವಾಸ್ಕೋಡಿಗಾಮ ಭಾರತಕ್ಕೆ ಪೋರ್ಚುಗಲ್‌ನಿಂದ ಹದಿನೈದು ದೊಡ್ಡ ಹಡಗು ಗಳೊಂದಿಗೆ ಬಂದಿದ್ದನು. ಇವುಗಳಲ್ಲಿ ಐದು ಫಿರಂಗಿ ಹೊತ್ತ ಹಡಗುಗಳಿದ್ದುವೆನ್ನಲಾಗಿದೆ. ಇಲ್ಲಿ ಗಮನಿಸಬಹುದಾದ ಅಂಶವೆಂದರೆ ಪೋರ್ಚುಗೀಸರು ಭಾರತಕ್ಕೆ ಕಾಲಿಡುವ ಮುನ್ನ ಇದ್ದ ಸಿಡಿಮದ್ದು ಉಪಕರಣಗಳ ತಂತ್ರಜ್ಞಾನಕ್ಕೂ, ಪೋರ್ಚುಗೀಸರು ಅನುಸರಿಸಿದ್ದ ತಂತ್ರಜ್ಞಾನದಲ್ಲೂ ವ್ಯತ್ಯಾಸವನ್ನು ಕಾಣಬಹುದು. ಪೋರ್ಚುಗೀಸರು ಪ್ರಯೋಗಿಸಿದ ಕೋವಿಯ ಗುಂಡುಗಳ

ಅನುಭವವೇ ಬಹುಮನಿ ಯವರಿಗೆ ಇರಲಿಲ್ಲವೆನ್ನುವ ನ್ಯೂನಿಜನ ಮಾತಿನಿಂದ ಪೋರ್ಚು ಗೀಸರು ಫಿರಂಗಿ ಹಾಗೂ ಬಂದೂಕುಗಳ ತಂತ್ರಜ್ಞಾನದಲ್ಲಿ ಸಾಕಷ್ಟು ನಿಪುಣತೆ ಹೊಂದಿದ್ದರೆನ್ನಬಹುದು.

ಪೋರ್ಚುಗೀಸ್ ಯೋಧರ ನೆರವಿನಿಂದ ಕೃಷ್ಣದೇವರಾಯನು ರಾಯಚೂರು ಕೋಟೆಯನ್ನು ವಶಪಡಿಸಿಕೊಂಡ ಮೇಲೆ ಅವನ ಸೈನಿಕರು ಕೊಳ್ಳೆ ಹೊಡೆಯ ಲಾರಂಭಿಸಿದರು. ಈ ಯುದ್ಧಕೊಳ್ಳೆಯಲ್ಲಿ ದೊರೆತ ವಸ್ತುಗಳಲ್ಲಿ ನಾನೂರು ಭಾರಿ ಫಿರಂಗಿಗಳೂ ಸೇರಿದ್ದವೆಂದು ನ್ಯೂನಿಜ್ ಹೇಳುತ್ತಾನೆ. [12] ಇದು ಕೃಷ್ಣದೇವರಾಯನ ಕಾಲದ ಫಿರಂಗಿದಳದ ಕಾರ್ಯವೈಖರಿಗಳಾದರೆ ರಕ್ಕಸಗಿ - ತಂಗಡಗಿ ಯುದ್ಧದಲ್ಲಿದ್ದ ಫಿರಂಗಿಗಳು, ಬಂದೂಕು ಕೋವಿಗಳ ಸಂಖ್ಯೆಯಂತೂ ಅಪರಿಮಿತವಾದುದು. ಬಿಜಾ ಪುರದ ಮಲ್ಲಿಕ್-ಇ-ಮೈದಾನ್ ತೋಪು ಪಂಚಲೋಹಗಳಿಂದ ತಯಾರಿಸಲಾಗಿದ್ದು ಇದನ್ನು ಕ್ರಿ.ಶ.೧೫೪೯ರಲ್ಲಿ ಹಸನ್ ರೂಮಿಯ ಮಗ ಮುಹಮ್ಮದ್‌ನು ಅಹಮದ್ ನಗರದಲ್ಲಿ ತಯಾರಿಸಿದ್ದನೆಂದು ತಿಳಿದು ಬರುತ್ತದೆ. ಈ ಫಿರಂಗಿಯನ್ನು ವಿಜಯನಗರ ಪತನಕ್ಕೆ ಕಾರಣವಾದ ರಕ್ಕಸಗಿ - ತಂಡಗಡಿ ಯುದ್ಧದಲ್ಲಿ ಬಳಸಲಾಗಿದ್ದಿತು. ನಂತರ ಬಿಜಾಪುರದ ಸುಲ್ತಾನನು ಕ್ರಿ.ಶ ೧೬೩೨ರಲ್ಲಿ ಇದನ್ನು ಬಿಜಾಪುರಕ್ಕೆ ತಂದನೆನ್ನಲಾಗಿದೆ. ಇದರಿಂದ ೧೬-೧೭ ನೆಯ ಶತಮಾನದಲ್ಲಿ ಸಿಡಿಮದ್ದನ್ನು ಬಳಸಿ ಗುಂಡುಗಳನ್ನು ಸಿಡಿಸುತ್ತಿದ್ದ ಫಿರಂಗಿಗಳ ಬಳಕೆ ಯಥೇಚ್ಛವಾಗಿದ್ದು ದೃಢಪಡುತ್ತದೆ. ವಿಜಯನಗರದ ಸಾಮಂತ ಮನೆತನವಾದ ಕೆಳದಿಯ ಸೈನ್ಯದಲ್ಲಿ 'ತೋಪುಖಾನಿ ಸನ್ನಾಹ ತಂತ್ರಪ್ರಯೋಗ'ವನ್ನು ವಿಶೇಷವಾಗಿ ಉಲ್ಲೇಖಿಸಿರುವುದು ಅಂದಿನ ಫಿರಂಗಿ ಪಡೆಯ ಪ್ರಭಾವವನ್ನು ಎತ್ತಿತೋರುತ್ತದೆ. [13]

ಒಟ್ಟಿನಲ್ಲಿ ವಿಜಯನಗರದ ಅವಧಿಯ ಪರಿಣಾಮಕಾರಿ ಬೆಳವಣಿಗೆಯೆಂದರೆ ವಿನೂತನ ಶಸ್ತ್ರಾಸ್ತ್ರಗಳ ಬಳಕೆ. ಕ್ರಿಸ್ತಪೂರ್ವ ಕಾಲದಿಂದ ಕ್ರಿ.ಶ.೧೪ನೆಯ ಶತಮಾನ ದವರೆಗಿನ ಅವಧಿಯು ಸಾಂಪ್ರದಾಯಿಕತೆ ರೂಢಿಸಿಕೊಂಡಿದ್ದುದನ್ನು ಕಾಣಬಹುದು. ಇದಕ್ಕೆ ಅಂದು ಬಳಸಿದ ಕತ್ತಿ - ಗುರಾಣಿ, ಬಿಲ್ಲು - ಬಾಣ, ಈಟಿ - ಕಠಾರಿಗಳಂತಹ ಆಯುಧಗಳನ್ನು ಹೆಸರಿಸಬಹುದು. ಈ ಮೇಲಿನ ಅವಧಿಯನ್ನು ಆಯುಧಗಳಲ್ಲಿ ಬದಲಾವಣೆ ಕಾಣದ ತಟಸ್ಥ ಕಾಲವೆಂದು ಗುರುತಿಸಬಹುದು. ಆದರೆ ವಿಜಯನಗರವು ಮಹಮ್ಮದೀಯರಿಂದ ಅರಿತು, ಪಾಶ್ಚಾತ್ಯರಿಂದ ನವೀಕರಣಗೊಳಿಸಿದ ಸಿಡಿಮದ್ದಿನ ಉಪಕರಣಗಳನ್ನು ಕಂಡುಕೊಂಡಿದ್ದಿತು. ಸಿಡಿಮದ್ದಿನ ಉಪಕರಣಗಳಾದ ಬಂದೂಕು ಮತ್ತು ಫಿರಂಗಿಗಳ ಬಳಕೆಯು ಸೈನ್ಯ ಮತ್ತು ಯುದ್ಧಗಳಲ್ಲಿ ಪರಿಣಾಮಕಾರಿ ಬದಲಾವಣೆಗಳನ್ನು ಉಂಟು ಮಾಡಿದವು. ಇವು ಪರಂಪರಾಗತವಾಗಿ ಬಂದಿದ್ದ ಆನೆಗೆ ಆನೆ, ಕುದುರೆಗೆ ಕುದುರೆ, ಕಾಲಾಳಿಗೆ ಕಾಲಾಳುಗಳೆಂಬ ನ್ಯಾಯಯುತ ಹೋರಾಟವನ್ನು

ಹಿಂದೆ ಸರಿಯುವಂತೆ ಮಾಡಿದವು. ವಿಜಯನಗರಪೂರ್ವ ಕಾಲದಲ್ಲಿ ಕತ್ತಿ-ಗುರಾಣಿ, ಈಟಿ, ಕಠಾರಿಗಳಂತಹ ಆಯುಧಗಳು ಪರಸ್ಪರ ಎರಡು ಸೈನ್ಯಗಳು ಎದುರಾಗಿ ನಿಂತು ಹೋರಾಡುವ ಮುಖಾಮುಖಿ ಯುದ್ಧಗಳಿಗೆ ಮಾತ್ರ ಸೀಮಿತವಾಗಿದ್ದವು. ಆದರೆ ಫಿರಂಗಿ, ಬಂದೂಕುಗಳು ಒಂದೆರಡು ಫರ್ಲಾಂಗುಗಳ ದೂರವನ್ನು ಕ್ರಮಿಸಿ ಇಡೀ ಶತ್ರು ಸೇನೆಯನ್ನು ಧ್ವಂಸ ಮಾಡುವ ಸಾಮರ್ಥ್ಯ ಹೊಂದಿದ್ದುದರಿಂದ ಹಿಂದಿನ ಮುಖಾಮುಖಿ, ನ್ಯಾಯಯುತ ಅಥವಾ ಧರ್ಮಯುದ್ಧಗಳು ಕಣ್ಮರೆಯಾಗಲು ಕಾರಣ ವಾದವು. ಇವುಗಳಿಂದ ಮುಖಾಮುಖಿ ಯುದ್ಧದ ಬದಲಿಗೆ ಅಂತರ ಯುದ್ಧಗಳು ಚಾಲನೆಗೆ ಬಂದುದು ಈ ಅವಧಿಯ ವಿನೂತನ ಯುದ್ಧ ವಿಶೇಷವಾಗಿದೆ.

ವಿಜಯನಗರದಲ್ಲಿ ಸಿಡಿಮದ್ದು ಬಳಕೆಗೊಂಡ ಬಳಿ ಸೈನ್ಯದಲ್ಲಿ ಫಿರಂಗಿದಳಕ್ಕೆ ಮಹತ್ತರ ಸ್ಥಾನ ದೊರೆಯಿತು. ಪ್ರಾಚೀನ ಕಾಲದಲ್ಲಿ ಚತುರಂಗಬಲದ ಅಂಗವಾದ ರಥದಳವು ಎಂದೋ ಕಣ್ಮರೆಯಾಗಿದ್ದುದು ಆಕರಗಳಿಂದ ದೃಢಗೊಳ್ಳುತ್ತದೆ. ಸಿಡಿಮದ್ದು ಬಳಕೆಗೊಂಡ ಮೇಲೆ ರಥದಳದ ಸ್ಥಾನವನ್ನು ಫಿರಂಗಿದಳವು ಅಲಂಕರಿ ಸಿತು. ಮೂಲದಲ್ಲಿದ್ದ ಚತುರಂಗ ಬಲವು ಫಿರಂಗಿ ಪಡೆಯಿಂದ ಪುನಃ ಅಸ್ತಿತ್ವಕ್ಕೆ ಬಂದುದನ್ನು ವಿಜಯನಗರ ಅವಧಿಯಲ್ಲಿ ಕಾಣಬಹುದು.

ವಿಜಯನಗರ ಅರಸರು ಕೈಗೊಂಡ ಯುದ್ಧಗಳಲ್ಲಿ ಬಯಲು ಯುದ್ಧಗಳಿಗಿಂತ ಹೆಚ್ಚಾಗಿ ಕೋಟೆ ಕಾಳಗಗಳು ನಡೆದಿವೆ. ಇದು ಕಾವ್ಯಗಳಿಂದ ದೃಢಗೊಳ್ಳುವ ಸಂಗತಿ. ಕೋಟೆಯನ್ನು ನಿರ್ಮಿಸುವುದು ಹಿಂದಿನಿಂದಲೂ ಬಂದ ಪದ್ಧತಿಯಾಗಿದ್ದರೂ, ವಿಜಯನಗರ ಅವಧಿಯಲ್ಲಿ ಅವುಗಳ ನಿರ್ಮಾಣ ಕಾಲಕ್ರಮೇಣ ಹೆಚ್ಚಾದುದನ್ನು ಕಾಣುತ್ತೇವೆ. ಇದು ವಿಜಯನಗರೋತ್ತರ ಕಾಲದಲ್ಲಿ ರಾಜ್ಯರಕ್ಷಣೆಗೆ ಅನಿವಾರ್ಯ ಅಂಗವಾಗಿ ಪರಿಣಿಸಿತು. ಇದಕ್ಕೆ ಫಿರಂಗಿಗಳ ಬಳಕೆಯೂ ಕಾರಣವೆನ್ನಬಹುದು. ಫಿರಂಗಿಗಳಿಂದ ರಾಜ್ಯ ರಕ್ಷಣೆ ಮಾಡಬೇಕಾದ ಅನಿವಾರ್ಯತೆಯು ಕೋಟೆಗಳನ್ನು ಹೆಚ್ಚು ಹೆಚ್ಚಾಗಿ ನಿರ್ಮಿಸುವಂತೆ ಮಾಡಿತು. ಆದುದರಿಂದ ವಿಜಯನಗರ ಅರಸರು ಮತ್ತು ಅವರ ಮಾಂಡಲಿಕರು, ಸಾಮಂತರು ಫಿರಂಗಿ ಗುಂಡುಗಳ ಹೊಡೆತಕ್ಕೆ ಜಗ್ಗ ದಂತಹ ಭದ್ರಕೋಟೆಗಳನ್ನು ಕಟ್ಟಿರುವುದು ಕರ್ನಾಟಕ ಮತ್ತು ನೆರೆಯ ರಾಜ್ಯಗಳಲ್ಲಿ ಕಾಣಬರುತ್ತದೆ.

ಅಡಿ ಟಿಪ್ಪಣಿಗಳು

1. The Art of war in Medieval India p. 128; ಪಾಳೆಯಗಾರರ ಕಾಲದ ಫಿರಂಗಿಗಳು, ಲಕ್ಷ್ಮಣ್ ತೆಲಗಾವಿ, ಬ್ರಹ್ಮಗಿರಿ 1986
2. ಕನ್ನಡ ಕಾವ್ಯಗಳಲ್ಲಿ ಸಮರ ಚಿತ್ರಗಳು, ಪು. 107, ಕರ್ನಾಟಕ ಜನಜೀವನ, ಪು. 28

3. Briggs - II, p. 312; Social and Political life in Vijayanagar Empire, p. 430 ; The Art of War in Medieval India p. 132
4. ಮರೆತು ಹೋಗಿರುವ ಮಹಾಸಾಮ್ರಾಜ್ಯ ವಿಜಯನಗರ, ಪು. 36
5. Social and Political life in Vijayanagar Empire, P. 430
6. Epigraphia Carnatica, Vol - VIII, Sb. 433, p. 81
7. Social and Political life in Vijayanagar Empire, p. 432
8. ಪ್ರವಾಸಿ ಕಂಡ ಇಂಡಿಯಾ, ಸಂ. - 2 ಪು. 142
9. The Art of war in Medieval India, p. 133
10. ಪ್ರವಾಸಿ ಕಂಡ ಇಂಡಿಯಾ, ಸಂ. - 2, ಪಾಯೇಸ್, ಪು. 380
11. ಅದೇ, ನ್ಯೂನಿಜ್, ಪು. 398-402
12. ಅದೇ, ಪು. 401
13. ಕೆಳದಿ ನೃಪವಿಜಯಂ, ಪು. 107, ಅಷ್ಟಮಾಶ್ವಾಸಂ

೩೬. ವಿಜಯನಗರದ ಅರಸರ ಕಾಲದ ಮಳೆಕೊಯ್ಲು ತಂತ್ರಜ್ಞಾನದ ಅಪೂರ್ವ ನಿದರ್ಶನ

ಡಾ. ಎಂ.ಜಿ. ಮಂಜುನಾಥ

ಮಳೆಕೊಯ್ಲು ಅಥವಾ ರೈನ್ ಹಾರ್ವೆಸ್ಟಿಂಗ್ ಎಂಬ ಪರಿಕಲ್ಪನೆ ವಿಜಯನಗರ ಅರಸರ ಕಾಲದಲ್ಲಿಯೇ ಇಂತಹ ತಂತ್ರಜ್ಞಾನವನ್ನು ಅಳವಡಿಸಿ ನೀರಾವರಿಗೆ ಅನುಕೂಲತೆ ಕಲ್ಪಿಸಿಕೊಂಡಿದ್ದರ ಬಗ್ಗೆ ಪ್ರಸ್ತುತ ಸಂಪ್ರಬಂಧ ರಚಿಸಲಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ಶಿವಗಂಗೆಯು ನೆಲಮಂಗಲದಿಂದ ವಾಯುವ್ಯದಿಕ್ಕಿನಲ್ಲಿ ಮೂವತ್ತೊಂದು ಕಿ.ಮೀ. ದೂರದಲ್ಲಿದೆ. ಶಿವಗಂಗೆ ಬೆಟ್ಟವು ೧೩೮೦ ಮೀಟರ್ ಅಂದರೆ ೧೫೫೯ ಅಡಿ ಎತ್ತರವಾಗಿದ್ದು[1] ಪೂರ್ವದಿಂದ ವೃಷಭ, ಪಶ್ಚಿಮದಿಂದ ಗಣೇಶ, ಉತ್ತರದಿಂದ ಸರ್ಪ, ದಕ್ಷಿಣದಿಂದ ಶಿವಲಿಂಗದಂತೆ ಕಾಣುವ ಈ ಬೆಟ್ಟವು ಅಲ್ಲಿನ ಗವಿಗಂಗಾಧರೇಶ್ವರ ಹಾಗೂ ಹೊನ್ನಾದೇವಿಯ ದೇವಾಲಯದಿಂದ ಸುಪ್ರಸಿದ್ಧ ಯಾತ್ರಾಸ್ಥಳವಾಗಿದೆ. ದಕ್ಷಿಣದ ಕಾಶಿ ಎಂದೇ ಶಿವಗಂಗೆಯನ್ನು ಪರಿಗಣಿಸಲಾಗುತ್ತದೆ.

ವಿಜಯನಗರದ ಅರಸರ ಸಾಮಂತರಾಗಿದ್ದ ಯಲಹಂಕನಾಡಪ್ರಭುಗಳಲ್ಲಿ ಪ್ರಮುಖ ಅರಸನಾದ ಒಂದನೆಯ ಕೆಂಪೇಗೌಡನು ಈ ಬೆಟ್ಟದ ಮೇಲೆ ಬೀಳುವ ಮಳೆಯನ್ನು ಕಾಲುವೆಗಳ ಮೂಲಕ ಸಂಗ್ರಹಿಸಿ ಕೆರೆಕಟ್ಟೆಗಳನ್ನು ನಿರ್ಮಿಸಿ ವ್ಯವಸಾಯ ಮತ್ತಿತರ ಉದ್ದೇಶಗಳಿಗೆ ಬಳಸಿಕೊಂಡಿರುವುದು ಗಮನಾರ್ಹ.

ಸುಮಾರು ನಾಲ್ಕು ಸಾವಿರದ ಐದುನೂರು ಐವತ್ತೊಂಬತ್ತು ಅಡಿ ಎತ್ತರವಾದ ಶಿವಗಂಗೆ ಬೆಟ್ಟವು ಸುಮಾರು ಹತ್ತು ಕಿ.ಮೀ. ಸುತ್ತಳತೆಯನ್ನು ಹೊಂದಿದೆ. ಇಂತಹ ಬೃಹದಾಕಾರದ ಬೆಟ್ಟದ ಮೇಲೆ ಬೀಳುವ ಮಳೆ ನೀರನ್ನು ವ್ಯರ್ಥವಾಗಲು ಬಿಡದೆ ವ್ಯವಸ್ಥಿತವಾದ ಕಾಲುವೆಗಳ ಮೂಲಕ ಬೆಟ್ಟದಿಂದ ಕೆಳಭಾಗಕ್ಕೆ ಬರುವಂತೆ ವ್ಯವಸ್ಥೆ ಮಾಡಲಾಗಿದೆ. ಬೆಟ್ಟದ ಮೇಲೆಯೇ ಒಂದು ಭೂಗರ್ಭಕಾಲುವೆಯನ್ನೂ ನಿರ್ಮಿಸ ಲಾಗಿದೆ. ಇಡೀ ಬೆಟ್ಟದ ಸುತ್ತಲೂ ಕಾಲುವೆಗಳನ್ನು ಮಾಡಿ ಆ ಕಾಲುವೆಗಳ ಮೂಲಕ ಮಳೆ ನೀರು ಮೊದಲಿಗೆ ತಾವರೆಕಟ್ಟೆ ಎಂಬ ಕೆರೆಗೆ ಸೇರುವಂತೆ ಮಾಡಲಾಗಿದೆ. ಅದು ತುಂಬಿದ ನಂತರ ಜೋಗಿಕಟ್ಟೆಗೆ ನೀರು ಹೋಗಿ ಸೇರುತ್ತದೆ. ನಂತರ ಅಲ್ಲಿಂದ ಸುಮಾರು ಒಂದು ಕಿ.ಮೀ. ದೂರದಲ್ಲಿರುವ ಎಣ್ಣೆ ಹೊಳೆ ಕೆರೆಗೆ ಹೋಗಿ ಸೇರುತ್ತದೆ. ಅಲ್ಲಿಂದ

ಸುಮಾರು ಮೂರು ಕಿ.ಮೀ. ದೂರದಲ್ಲಿರುವ ದೇವರಕೆರೆ ಎಂಬ ದೊಡ್ಡಕೆರೆಗೆ ಹೋಗಿ ಸೇರುತ್ತದೆ. ದೇವರ ಕೆರೆ ತುಂಬಿದ ನಂತರ ದೊಡ್ಡ ಮಸ್ಕಲ್ ಕೆರೆಗೆ ಹೋಗುತ್ತದೆ. ಆ ಕೆರೆಯೂ ತುಂಬಿದ ನಂತರ ಹೆಚ್ಚುವರಿ ನೀರು ಹೆಬ್ಬೂರು ಕೆರೆಗೆ ಹೋಗಿ ಸೇರುತ್ತದೆ. ಅದು ತುಂಬಿದ ನಂತರ ಕುಣಿಗಲ್ ಕೆರೆಗೆ ಹೋಗಿ ಸೇರುತ್ತದೆ.[2]

ಈ ಕೆರೆಗಳೇ ಅಲ್ಲದೆ ಬೆಟ್ಟದ ಬುಡದಲ್ಲಿಯೇ ಎರಡು ದೊಡ್ಡ ಕಲ್ಯಾಣಿಗಳಾದ ಕಮಲತೀರ್ಥ, ಅಗಸ್ತ್ಯತೀರ್ಥ ಎಂಬ ಕಲ್ಯಾಣಿಗಳಿವೆ. ಬೆಟ್ಟದ ಮೇಲ್ಭಾಗದಲ್ಲಿ ಕುಂಭತೀರ್ಥ, ಕಣ್ವತೀರ್ಥ, ಒಳಕಲ್ಲುತೀರ್ಥ, ಚಕ್ರತೀರ್ಥ, ಶಂಕರಾಚಾರ್ಯ ತೀರ್ಥ, ಮೌದ್ಗಲ ತೀರ್ಥ, ಗಂಗಾತೀರ್ಥ ಎಂಬ ತೀರ್ಥಗಳಿವೆ. ಹೀಗೆ ಶಿವಗಂಗೆ ಯಲ್ಲಿ ಒಟ್ಟು ಒಂಬತ್ತು ತೀರ್ಥಗಳಿವೆ.[3]

ಈ ಎಲ್ಲಾ ತೀರ್ಥಗಳಿಗೆ ಬೆಟ್ಟದ ಮೇಲಿನ ಮಳೆಯ ನೀರೇ ಆಧಾರ. ಬೆಟ್ಟದ ಮೇಲೆ ಬೀಳುವ ಎಲ್ಲಾ ಮಳೆ ನೀರನ್ನು ಒಂದು ಹನಿಯೂ ವ್ಯರ್ಥವಾಗದಂತೆ ಮರು ಬಳಕೆಗೆ ಅನುಕೂಲವಾಗುವಂತೆ ಕಾಲುವೆಗಳ ಮೂಲಕ ವ್ಯವಸ್ಥಿತವಾಗಿ ಹರಿಸಿ ಕೆರೆಕಟ್ಟೆಗಳನ್ನು ಸೇರುವಂತೆ ಮಾಡಿರುವುದು ಗಮನಾರ್ಹ.

ನೆಲಮಂಗಲ ತಾಲ್ಲೂಕಿನಲ್ಲಿ ವಾರ್ಷಿಕ ಸುಮಾರು ೭೯೩ ಮಿ.ಮೀ. ಮಳೆಯಾಗುತ್ತದೆ.[4] ಇಷ್ಟು ಸಮೃದ್ಧವಾಗಿ ಬೀಳುವ ಮಳೆಯ ನೀರನ್ನು ಸಂಪೂರ್ಣವಾಗಿ ಮರು ಬಳಕೆಗೆ ಸಾಧ್ಯವಾಗುವಂತೆ ಶಿವಗಂಗೆ ಬೆಟ್ಟ ಹಾಗೂ ಬೆಟ್ಟದ ತಪ್ಪಲು ಪ್ರದೇಶವನ್ನು ರೂಪಿಸಿದವನು ಧರ್ಮಪ್ರಭು ಎಂದು ಕರೆಯಲ್ಪಡುವ ಯಲಹಂಕ ನಾಡಪ್ರಭು ಒಂದನೇ ಕೆಂಪೇಗೌಡ.

ಶಿವಗಂಗೆ ಗಂಗಾಧರೇಶ್ವರನ ಪರಮಭಕ್ತನಾಗಿದ್ದ ಒಂದನೇ ಕೆಂಪೇಗೌಡನು ಶಿವಗಂಗೆಯ ಅಭಿವೃದ್ಧಿಗೋಸ್ಕರ ಹಲವಾರು ಕೆಲಸ ಕಾರ್ಯಗಳನ್ನು ಮಾಡಿರು ವುದನ್ನು ಗಮನಿಸಬಹುದು. ಶಿವಗಂಗೆ ಗಂಗಾಧರೇಶ್ವರ ದೇವಾಲಯದ ಒಳಭಾಗ ದಲ್ಲಿರುವ ಮುಖ್ಯ ಪ್ರವೇಶದ್ವಾರ, ದೇವಾಲಯದ ಎರಡು ದಿಕ್ಕಿನಲ್ಲಿರುವ ಮುಖ್ಯದ್ವಾರಗಳ ಮೇಲ್ಭಾಗದ ರಾಯಗೋಪುರಗಳು ಮುಂತಾದವುಗಳ ನಿರ್ಮಾತೃ ಒಂದನೇ ಕೆಂಪೇಗೌಡನೇ ಆಗಿದ್ದಾನೆ. ಗಂಗಾಧರೇಶ್ವರನ ದೇವಾಲಯದಲ್ಲಿ ಭಕ್ತಾದಿಗಳ ಬಳಕೆಗೋಸ್ಕರ ಬೃಹದಾಕಾರದ ಪಂಚಲೋಹದ ಘಂಟೆಯೊಂದನ್ನು ಕೆಂಪೇಗೌಡ ಮಾಡಿಸಿಕೊಟ್ಟಿದ್ದಾನೆ. ಈ ವಿವರಗಳನ್ನು ದಾಖಲಿಸಿರುವ ಒಂದು ಶಾಸನವೂ ಆ ಘಂಟೆಯ ಮೇಲಿದೆ.[5]

ಶಿವಗಂಗೆಯ ಗಂಗಾಧರೇಶ್ವರ ದೇವಾಲಯವು ಮೂಲತಃ ಒಂದು ಗುಹಾಂತರ ದೇವಾಲಯ. ಶಿವಗಂಗೆ ಬೆಟ್ಟದ ಮೆಲೆ ಬೀಳುವ ಮಳೆನೀರು ಗಂಗಾಧರೇಶ್ವರ ದೇವಾಲಯದ ಒಳಭಾಗಕ್ಕೆ ನುಗ್ಗಬಹುದಾದ ಸಾಧ್ಯತೆ ಇದ್ದುದರಿಂದ ಅದನ್ನು ತಪ್ಪಿಸು

ವುದಕ್ಕಾಗಿ ಕೆಂಪೇಗೌಡನು ಶಿವಗಂಗೆ ಬೆಟ್ಟದ ಮೇಲೆ ಕಾಲುವೆಗಳನ್ನು ನಿರ್ಮಿಸಿ ದೇವಾಲಯ ಕಡೆಗೆ ಬರುತ್ತಿದ್ದ ಮಳೆಯ ನೀರನ್ನು ಬೇರೆಯ ಕಡೆಗೆ ಹರಿದು ಹೋಗು ವಂತೆ ಮೊದಲು ಮಾಡಿಸಿರಬಹುದೆಂದು ತೋರುತ್ತದೆ.

ಅನಂತರ ಈ ಕಾಲುವೆಯಲ್ಲಿ ಹರಿಯುವ ನೀರಿನ ಪ್ರಮಾಣವನ್ನು ಗಮನಿಸಿ ಈ ಬೆಟ್ಟದ ಮೇಲೆ ಬೀಳುವ ಎಲ್ಲಾ ಮಳೆಯ ನೀರನ್ನು ಕಾಲುವೆಗಳನ್ನು ನಿರ್ಮಿಸಿ ವ್ಯವಸ್ಥಿತವಾಗಿ ಕೆರೆಕಟ್ಟೆಗಳಿಗೆ ಹರಿಸಿದರೆ ಶಿವಗಂಗೆ ಸುತ್ತಮುತ್ತಲಿನ ಹತ್ತಾರು ಗ್ರಾಮಗಳ ಸಾವಿರಾರು ಎಕರೆ ಜಮೀನಿಗೆ ನೀರಾವರಿಯ ಸೌಲಭ್ಯ ಕಲ್ಪಿಸಲು ಸಾಧ್ಯ ವಾಗುತ್ತದೆಂದು ತಿಳಿದು ಕೆಂಪೇಗೌಡನು ಶಿವಗಂಗೆ ಬೆಟ್ಟದ ಮೇಲೆ ಹಾಗೂ ಬೆಟ್ಟದ ಸುತ್ತಲೂ ಕಾಲುವೆಗಳನ್ನು ಹಾಗೂ ಕೆರೆಕಟ್ಟೆಗಳನ್ನು ಕಟ್ಟಿಸಿ ಹಲವಾರು ಗ್ರಾಮಗಳ ಜನಗಳು ಹಾಗೂ ಜಾನುವಾರುಗಳಿಗೆ ಕುಡಿಯುವ ನೀರು ಮತ್ತು ವ್ಯವಸಾಯಕ್ಕೆ ನೀರಿನ ಅನುಕೂಲವನ್ನು ಕಲ್ಪಿಸಿಕೊಟ್ಟಿದ್ದಾನೆ. ಇವುಗಳನ್ನೆಲ್ಲಾ ಕೆಂಪೇಗೌಡನೆ ನಿರ್ಮಿಸಿದನೆಂದು ಹೇಳಲು ಯಾವ ಶಾಸನಾಧಾರಗಳೂ ಇಲ್ಲ. ಆದರೆ ಈ ಕೆರೆ ಕಟ್ಟೆಗಳ ಕಾಲುವೆಗಳ ನಿರ್ಮಾಣದ ಬಗ್ಗೆ ಇಲ್ಲಿನ ಜನಪದರ ಬಾಯಿಯಲ್ಲಿ ಸ್ಥಳಪುರಾಣ, ಐತಿಹ್ಯ ಹಾಗೂ ಜನಪದ ಕತೆಗಳಲ್ಲಿ ಅಪಾರ ಮಾಹಿತಿ ದೊರೆಯುತ್ತದೆ.

ಶಿವಗಂಗೆ ಪರಿಸರದ ಕಾಲುವೆಗಳನ್ನು ಕೆಂಪೇಗೌಡನ ಕಾಲುವೇ ಎಂದೇ ಈಗಲೂ ಕರೆಯಲಾಗುತ್ತಿದೆ. ಇಲ್ಲಿಯ ಎಲ್ಲಾ ಕೆರೆ ಕಟ್ಟೆಗಳು ಮಳೆಗಾಲದಲ್ಲಿ ಮೊದಲ ಸಾರಿ ತುಂಬಿ ಕೋಡಿಹರಿದಾಗ ಕೆಂಪೇಗೌಡನ ಹೆಸರಿನಲ್ಲಿ ತೆಪ್ಪೋತ್ಸವ ಮಾಡಿ ಕೆಂಪೇಗೌಡನನ್ನು ಕೃತಜ್ಞತೆಯಿಂದ ಸ್ಮರಿಸುತ್ತಾರೆ. ಕೆಂಪೇಗೌಡನ ಹೆಸರಿನಲ್ಲಿಯೇ ಗಂಗೆಪೂಜೆ ಮಾಡಿ ಬಾಗಿನ ಅರ್ಪಿಸುತ್ತಾರೆ.[8] ಈ ಎಲ್ಲಾ ಆಧಾರಗಳಿಂದ ಶಿವಗಂಗೆ ಬೆಟ್ಟದ ಮೇಲೆ ಹಾಗೂ ಬೆಟ್ಟದ ಕೆಳಗಿನ ಕಾಲುವೆಗಳನ್ನು ಕೆರೆ ಕಟ್ಟೆಗಳನ್ನು ಇವುಗಳನ್ನೆಲ್ಲಾ ನಿರ್ಮಿಸಿದವನು ಕೆಂಪೇಗೌಡನೆಂಬುದು ಖಚಿತವಾಗುತ್ತದೆ. ಬೆಟ್ಟದ ಮೇಲೆ ಬೀಳುವ ಮಳೆಯ ನೀರನ್ನು ತನ್ನ ಬುದ್ಧಿ ಶಕ್ತಿಯಿಂದಾಗಿ ಸಂಗ್ರಹಿಸಿ ಜನರ ಉಪಯೋಗಕ್ಕಾಗಿ ಬಳಕೆಗೆ ಬರುವಂತೆ ಮಾಡಿದ ಕೆಂಪೇಗೌಡನನ್ನು ಜನರು ಮಳೆಯ ಕೆಂಪರಾಯನೆಂದೇ ಕರೆಯಲಾರಂಭಿಸಿ ದರೆಂಬುದಾಗಿ ಜನಪದ ಕತೆಯೊಂದು ದಾಖಲಿಸಿದೆ.[7]

ಶಿವಗಂಗೆ ಬೆಟ್ಟದ ಮೇಲೆ ಬೀಳುವ ಮಳೆನೀರಿನಿಂದಲೇ ರೂಪುಗೊಂಡ ಎಣ್ಣೆ ಹೊಳೆ ಎಂಬ ಸಣ್ಣ ನದಿಯು ಕ್ರಮೇಣ ಹಲವಾರು ಸಣ್ಣ ಪುಟ್ಟ ತೊರೆಗಳಿಂದ ಕೂಡಿಕೊಂಡು ದೊಡ್ಡದಾಗಿ ಹರಿಯುತ್ತದೆ. ಆದ್ದರಿಂದ ಎಣ್ಣೆಹೊಳೆ ನದಿಯ ಉಗಮಸ್ಥಾನವೇ ಶಿವಗಂಗೆ ಬೆಟ್ಟವೆಂದು ಗುರ್ತಿಸಬಹುದು.

ಒಟ್ಟಾರೆ ಎಣ್ಣೆ ಹೊಳೆ ಎಂಬ ನದಿಯು ಉಗಮವಾಗಲು ಕೆಂಪೇಗೌಡನು ವ್ಯವಸ್ಥಿತವಾಗಿ ರೂಪಿಸಿದ ಕಾಲುವೆಗಳೇ ಮೂಲಕಾರಣವೆಂಬುದು ಗಮನಾರ್ಹ.

ಎಣ್ಣೆಹೊಳೆ ನದಿ ಸೃಷ್ಟಿಯಾಗಲು ಪ್ರಕೃತಿಯೊಡನೆ ಕೆಂಪೇಗೌಡನು ರೂಪಿಸಿದ ಮಳೆಕೊಯ್ಲು ತಂತ್ರಜ್ಞಾನವೂ ಕಾರಣವೆಂಬುದನ್ನು ಗಮನಿಸಿದರೆ ಆತನನ್ನು ಮಳೆಯ ಕೆಂಪರಾಯನೆಂದು ಜನಕರೆಯುವುದು ಅಕ್ಷರಃ ಸರಿಯೆಂದು ಹೇಳಬಹುದು.

ಇಂದಿನ ಈ ವೈಜ್ಞಾನಿಕ ಯುಗದಲ್ಲಿ ಮಳೆಕೊಯ್ಲು ತಂತ್ರಜ್ಞಾನವನ್ನು ಬಳಕೆಗೆ ತಂದ ವಿಜ್ಞಾನಿಗಳ ಆಧುನಿಕ ತಂತ್ರಜ್ಞಾನವನ್ನು ಮೀರಿಸುವಂತಹ ಅದ್ಭುತ ತಂತ್ರಜ್ಞಾನವನ್ನು ರೂಪಿಸಿ ಸುಮಾರು ೪೫೦ ವರ್ಷಗಳ ಹಿಂದೆಯೇ (ಕ್ರಿ.ಶ. ಸು. ೧೫೫೦ ರಲ್ಲಿ) ಶಿವಗಂಗೆ ಬೆಟ್ಟದ ಮೇಲೆ ಪ್ರಯೋಗಿಸಿ ಅದ್ಭುತ ಫಲಿತಾಂಶವನ್ನು ಪಡೆದ ಒಂದನೇ ಕೆಂಪೇಗೌಡನು ಮಳೆಯ ಕೆಂಪರಾಯನೆಂಬ ಹೆಸರಿಗೆ ಹಾಗೂ ಧರ್ಮಪ್ರಭುವೆಂಬ ಬಿರುದಿಗೆ ನಿಜವಾಗಿಯೂ ಅರ್ಹನಾದ ವ್ಯಕ್ತಿ ಎಂದು ಹೇಳಬಹುದು.[8]

ಅಡಿ ಟಿಪ್ಪಣಿಗಳು

1. (ಸಂ) ಡಾ. ಸೂರ್ಯನಾಥ ಕಾಮತ್ : ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಪುಟ.
2. ಕ್ಷೇತ್ರ ಪರಿವೀಕ್ಷಣೆಯಿಂದ ತಿಳಿದುಕೊಂಡ ವಿಚಾರ.
3. ಅದೇ.
4. (ಸಂ) ಡಾ. ಸೂರ್ಯನಾಥ ಕಾಮತ್ : ಕರ್ನಾಟಕ ರಾಜ್ಯಗ್ಯಾಸೆಟಿಯರ್, ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಪುಟ.
5. E.C. IX. ಬೆಂಗಳೂರು ಸಪ್ಲಿಮೆಂಟ್ ನೆಲಮಂಗಲ ೧೦೯. ಶಿವಗಂಗೆ ಕ್ರಿ.ಶ. ಪುಟ 119
6. ಕ್ಷೇತ್ರ ಪರಿವೀಕ್ಷಣೆಯಿಂದ ತಿಳಿದುಕೊಂಡ ವಿಚಾರ.
7. ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಜನಪದಕತೆಯೊಂದರಲ್ಲಿ ದೊರೆತ ಮಾಹಿತಿ.
8. ಕ್ಷೇತ್ರಕಾರ್ಯದ ವೇಳೆಯಲ್ಲಿ ನೆರವು ನೀಡಿದ ವಿದ್ಯಾರ್ಥಿ ಮಿತ್ರ ವಿ. ಜಯರಾಂ ಹಾಗೂ ಶಿವಗಂಗೆಯ ರಾಮೇಗೌಡ, ರಮೇಶ್ ಮುಂತಾದವರಿಗೆ ಧನ್ಯವಾದಗಳು.

೩೭. ವಿಜಯನಗರ ಮತ್ತು ಸಿಲೋನ್

ಡಾ. ಕೆಳದಿ ವೆಂಕಟೇಶ್ ಜೋಯಿಸ್

ಉತ್ತರದಲ್ಲಿ ಗುಲ್ಬರ್ಗದೊಂದಿಗೆ ದಕ್ಷಿಣದಲ್ಲಿ ಸಿಲೋನ್ ಕೂಡ ವಿಜಯನಗರ ಸಾಮ್ರಾಜ್ಯದಲ್ಲಿ ಸ್ವಾಧೀನತೆ ಪಡೆದಿರುವ ಕುರಿತು ಸಾಧಾರಪೂರ್ವಕವಾಗಿ ವಿಮರ್ಶಾತ್ಮಕ ಲೇಖನ ಪ್ರಕಟವಾಗಿದೆ. [1] ಇದನ್ನು ಕೆಲ ವಿದ್ವಾಂಸರೂ ಅನುಮೋದನೆ ಯೊಡನೆ ಆಕರಗಳನ್ನು ಅನುಮೋದಿಸಿದ್ದಾರೆ.[2] ರಾಬರ್ಟ್ ಸೀವೆಲ್‌ರವರು [2]

..."The seaport of Gova, the fortress of Malgaon (Probably Belgamm) belonged to the ray of Beejanuggur, and many districts of Tulghant were in his possession. His country was well peopled, and his subjects submissive his authority.The roies of Malabar, Ceylon, and other islands and other countries kept ambassadors at his court, and went annually rich presents...

-- Senhor Lopes tells me that he rescently found in the archives of the torre do Tombo in Lisbon (Corpo Chronologico, Part iii packet ii No. 107) a copy of a copper plate grant which was executed by the chief of Goa in A.D. 1391 in the name of 'Virahariar', king of Vijayanagar, the suzerain. This was Vira Harihara II. It was copied in Ad 1532 and translated into portuguese - ಈ ರೀತಿ ಅಭಿಪ್ರಾಯ ಪಡುತ್ತಾರೆ.

ಇದರಲ್ಲಿ ಉಲ್ಲೇಖಿಸಿರುವ ಶಾಸನವು ಕ್ರಿ.ಶ. ೧೩೯೧ರ ವಿಜಯನಗರದ ಇಮ್ಮಡಿ ವೀರ ಹರಿಹರನ ಕಾಲಕ್ಕೆ ಸೇರುವುದಾಗಿದೆ. ಈ ಶಾಸನವು ಪೋರ್ಚುಗೀಸ್ ಭಾಷೆ ಯಲ್ಲಿದ್ದು ವಿಜಯನಗರ ಶಾಸನ ಸಂಪುಟ ಸೇರ್ಪಡೆಗೆ ಅರ್ಹ ಆಕರವಾಗಿದೆ. ವಿಜಯ ನಗರ ಆಕರಗಳ ಶೋಧನೆಯಲ್ಲಿ ಡಾ. ಬಿ.ಎಸ್. ಶಾಸ್ತ್ರಿಯವರು ಲಿಸ್ಬನ್‌ನಲ್ಲಿ ಪರಿಶೋಧಿಸಿದ್ದ *Chronica dos Reis de Bisnaga* ಕೃತಿಯು [4] ವಿಜಯನಗರ ಸಿಲೋನ್ ಕುರಿತಂತೆ

Compare the passage in the Chronicle of Nuniz p. 302 below where writing of a period a few years later, he says, 'The king of Coullao (Quilon) and Ceylon and paleacate (Pulicat), and Pegu and Tanacary (Tenasserim) and many other lands, pay tribute to him' the Raya.

ಐತಿಹಾಸಿಕ ದಾಖಲೆಗಳನ್ನು ಗಮನಿಸಿದಾಗ ಕೇರಳವು ಸಿಲೋನ್ ವ್ಯಾಪ್ತಿಗೆ ಸೇರಿದ್ದ ಸಂಗತಿಯು ಕಂಡುಬರುತ್ತದೆ. ವಾಸ್ಕೋಡಿಗಾಮನ ನಂತರ ಪೋರ್ಚುಗೀಸ್ ಮೊದಲನೇ

ವೈಸರಾಯ್ ಫ್ರಾನ್ಸಿಸ್ಕೋ ಡಿ ಆಲ್ಮಿಡಾನು ಭಾರತದಲ್ಲಿರುವ ಕರಾವಳಿ ತನ್ನ ಅಧೀನ ಅಧಿಕಾರಿಗೆ ವಿಜಯನಗರ ಚಕ್ರವರ್ತಿಯ ಸಹಾನುಭೂತಿಯ ಅನುಮತಿಯನ್ನು ಗಳಿಸಿಕೊಂಡು ಅಂಜೆಡೀವ ಮತ್ತು ಕಣ್ಣಾನೂರಿನಲ್ಲಿ ಕೋಟೆ ನಿರ್ಮಿಸಲು ಸೂಚಿಸಿರುವುದನ್ನು ಐತಿಹಾಸಿಕ ದಾಖಲೆಗಳು ತಿಳಿಸುತ್ತವೆ.

ಸಿಲೋನ್‌ನ ಅಧೀನತೆಯ, ತನ್ನನ್ನು ತಾನು ಬುಕ್ಕರಾಯ ಎಂದು ಕರೆದುಕೊಂಡಿದ್ದ ದೇವರಾಯ ಅಥವಾ ಪ್ರತಾಪ ದೇವರಾಯನ ಕಾಲದಲ್ಲಿದ್ದ ವಿರೂಪಾಕ್ಷನ ಕಾಲದಲ್ಲಿಯೇ ಉಂಟಾಗಿದ್ದಿತೆಂದು ಬಿ. ಸೂರ್ಯನಾರಾಯಣರಾಯರು ಅಭಿಪ್ರಾಯ ಪಡುತ್ತಾರೆ. [5] ನ್ಯೂನಿಜ್‌ನು ಉಲ್ಲೇಖಿಸಿದ ಕಲೋಲೊ ಎಂಬುದು ಸಿಲೋನ್ ಎಂಬುದಾಗಿ ವಿದ್ವಾಂಸರು ತರ್ಕಿಸಿದ್ದಾರೆ.

ವಿಜಯನಗರ ಅರಸರ ಕಾಲದಲ್ಲಿಸೈನ್ಯದ ಮುಖ್ಯಸ್ಥನನ್ನು ದಂಣಾಯಕ ಎಂದು ಕರೆಯಲಾಗುತ್ತಿತ್ತು. ಮಹಾ ಪ್ರಧಾನ ಲಕ್ಕಣ್ಣ ದಂಣಾಯಕನು ತೀರ್ಥಮಲಾಯಲ್ಲಿ ಲಕ್ಕಣ್ಣ ದಂಡನಾಯಕನೆಂಬುದಾಗಿ ಶಾಸನ ಹಾಕಿಸಿರುವುದನ್ನು ಶ್ರೀ ವೆಂಕಯ್ಯನವರು ತಮ್ಮ ಕೃತಿಯಲ್ಲಿ ಉಲ್ಲೇಖಿಸುತ್ತಾರೆ. ಮತ್ತು ಅಲ್ಲಿಯೇ ದಕ್ಷಿಣ ಮಹಾಸಾಗರದ ಒಡೆಯನೆಂದು ಅವನನ್ನು ಗುರುತಿಸಿರುವುದಾಗಿ ತಿಳಿಸುತ್ತಾರೆ. ಈತನು ವಿಜಯನಗರದ ದೇವರಾಯನ ಕಾಲದಲ್ಲಿ ಮುಖ್ಯಮಂತ್ರಿಯಾಗಿದ್ದುದಾಗಿ ತಿಳಿಸುತ್ತಾರೆ. ಎ.ಆರ್. ಕೃಷ್ಣಶಾಸ್ತ್ರಿರವರು ಈತನು ದೇವರಾಯನ ಕಾಲದಲ್ಲಿದ್ದ ಮಂತ್ರಿಗಳಲ್ಲಿ ಒಬ್ಬನೆಂದು ಅವನ ಹೆಸರು ದಂಡನಾಯಕ ಲಕ್ಕಣ್ಣನೆಂದೂ ಅವನು ಸಿಂಹಳ ದ್ವೀಪದ ಗಡಿ ಯವರೆಗೆ ಪ್ರವಾಸ ಹೋಗಿದ್ದನೆಂದೂ ಬರೆಯುತ್ತಾರೆ. [6] ಇದನ್ನು ಡಾ. ಕೃಷ್ಣಸ್ವಾಮಿ ಅಯ್ಯಂಗಾರರೂ ಉಲ್ಲೇಖಿಸುತ್ತಾರೆ. ಇವರು ಸತ್ಯನಾಥ ಅಯ್ಯರ್‌ರವರ ಮಧುರಾ ನಾಯಕರ ಇತಿಹಾಸ ಕುರಿತ ಪುಸ್ತಕವನ್ನು ಉಲ್ಲೇಖಿಸುತ್ತ ಎರಡನೇ ದೇವರಾಯನ ಆಳ್ವಿಕೆಯಲ್ಲಿ ಮಧುರಾ ಪ್ರದೇಶವು ಅಭಿವೃದ್ಧಿ ಹೊಂದಲು ಕ್ರಿ.ಶ. ೧೪೪೦ರಲ್ಲಿ ದಕ್ಷಿಣ ಮಹಾಸಾಗರದ ಒಡೆಯರೆಂದು ಕರೆಯಲ್ಪಡುತ್ತಿದ್ದ ಇಬ್ಬರು ಸಹೋದರರು ಕಾರಣರಾಗುತ್ತಾರೆಂದೂ, ದಕ್ಷಿಣದ ಮುಸಲ್ಮಾನ ಅರಸರಿಂದ ಸೋಲು ಖಚಿತ ವೆನ್ನುವ ಸಂದರ್ಭದಲ್ಲಿ ಸೈನ್ಯದಲ್ಲಿ ಸುಧಾರಣೆ ತರುವ ಸಲುವಾಗಿ ಇವನನ್ನು ವಿಜಯ ನಗರಕ್ಕೆ ಕರೆಸಲಾಯಿತೆಂದೂ ತಿಳಿಸಲಾಗಿದೆ. [7] ಇದೇ ವಿಚಾರವನ್ನು ಕ್ರಿ.ಶ. ೧೪೪೨- ೧೪೪೩ರಲ್ಲಿ ವಿದೇಶಿ ಪ್ರವಾಸಿ ಅಬ್ದುಲ್ ರಝಾಕ್ ತನ್ನ ವರದಿಯಲ್ಲಿ ಉಲ್ಲೇಖಿಸು ತ್ತಾನೆ [8] ಈ ಲಕ್ಕಣ್ಣ ದಂಡನಾಯಕನು ತನ್ನ ದೊರೆ ದೇವರಾಯನ ಸಂಪತ್ತನ್ನು ಹೆಚ್ಚಿಸಿದನೆಂಬುದಾಗಿ ಶ್ರೀಕಂಠಶಾಸ್ತ್ರಿಗಳು ತಿಳಿಸುತ್ತಾರೆ. ಅವನಿಗೆ 'ಸಪ್ತಾಂಗ ರಾಜ್ಯ ವರ್ಧನ' ಕಲಾಧರ ಉನ್ನತ ಕೆಳೆಯ ಎಂಬ ಬಿರುದುಗಳು ಇತ್ತೆಂದು ತಿಳಿದು ಬರುತ್ತದೆ. [9] ಇವನ ಕಾಲದಲ್ಲಿ ಸಿಲೋನ್ ಮತ್ತು ಗುಲಬರ್ಗ ಗೆದ್ದುದು ಕಂಡು ಬರುತ್ತದೆ. ಈ ಕಾಲದ ಶಾಸನವೊಂದು

ಸಹೋದರರಾದ ಲಕ್ಕಣ್ಣ ಮತ್ತು ಮಾದಣ್ಣ ತಮಿಳುನಾಡಿನಲ್ಲಿ ಕ್ರಿ.ಶ. ೧೪೧೬ರಲ್ಲಿ ಗವರ್ನರ್ ಆಗಿದ್ದನ್ನು ಮತ್ತು ಲಕ್ಕಣ್ಣ ಮಹಾಮಂತ್ರಿಯ ಸ್ಥಾನಕ್ಕೆ ಬರುವ ಕುರಿತು ಅವನು ಮುಳಬಾಗಿಲ ರಾಜ್ಯದಲ್ಲಿ ಇದ್ದಾಗ ತಿಳಿದು ಬಂದಿತೆಂದೂ ತಿಳಿಸುತ್ತದೆ. ಈ ಶಾಸನ ಇವರು ಸಿಂಗರಸನ ಮಗ ಅನ್ನದಾತನಿಗೆ ದಾನ ನೀಡಿರು ವುದನ್ನು ತಿಳಿಸುತ್ತದೆ. ಕ್ರಿ.ಶ. ೧೪೩೦ರವರೆಗೂ ಈತನು ಮುಳಬಾಗಿಲು ಗವರ್ನರ್ ಆಗಿದ್ದನೆಂದು ಶಾಸನದಿಂದ ತಿಳಿದು ಬರುತ್ತದೆ [10] ಅವನು ವಿಷ್ಣುವರ್ಧನ ಗೋತ್ರದವರೆಂದೂ ಇವರು ಮೊಮ್ಮಾಯಮ್ಮನ ಮಕ್ಕಳೆಂದೂ ಹೆಸರು ಲಕ್ಕಣ್ಣ, ಮಾದಣ್ಣರೆಂದು ಗೊತ್ತಾಗುತ್ತದೆ. ಇನ್ನೊಂದು ಶಾಸನವು ಮಾದಣ್ಣನಿಗೆ ದಂಡನಾಯಕನ ಸ್ಥಾನ ಸಿಕ್ಕ ಬಗ್ಗೆ ತಿಳಿಸುತ್ತದೆ. ಕ್ರಿ.ಶ. ೧೪೪೩ ರಲ್ಲಿ ವಿಜಯನಗರದ ಅರಸರು ಅವನನ್ನು ಬೇಕಲ ರಾಜ್ಯದ ಮುಖ್ಯಸ್ಥನನ್ನಾಗಿ ಮಾಡಿ ಸಾಳುವ ಗೋಪರಾಯ ಎಂದು ಕರೆದರು. ಆದರೆ ಲಕ್ಕಣ್ಣ ದಂಡನಾಯಕನು ಕ್ರಿ.ಶ. ೧೪೩೮ರ ನಂತರ ದಕ್ಷಿಣ ಮಹಾ ಸಾಗರದ ಒಡೆಯ ಅನ್ನುವ ಅಂಶ ತಿಳಿದು ಬರುತ್ತದೆ. ೧೪೪೨-೪೩ರಲ್ಲಿ ಈತನು ವಿಜಯನಗರ ಮಹಾರಾಜರಿಂದ ಕರೆಸಲ್ಪಟ್ಟನೆಂಬ ಬಗ್ಗೆ ಸರಿಯಾದ ಆಧಾರ ದೊರೆಯುವುದಿಲ್ಲ. ಪರ್ಶಿಯಾದಿಂದ ಬಂದ ರಾಜ ಪ್ರತಿನಿಧಿಯೂ ಕೂಡ ಸಹ ವಿಜಯನಗರದ ಮಹಾರಾಜ ಮತ್ತು ಈ ದಂಡನಾಯಕ ಮಂತ್ರಿಯ ಮಧ್ಯೆ ಇದ್ದ ಗೆಳೆತನದ ಬಗ್ಗೆ ಯಾವುದೇ ಮಾಹಿತಿ ನೀಡುವುದಿಲ್ಲ. ಇಲ್ಲಿ ವಿಜಯನಗರದ ಅರಸನು ಮಂತ್ರಿಯನ್ನು ಕರೆಸಿರಬಹುದು. ಆದರೆ ಈ ಲಕ್ಕಣ್ಣನು ಮಹಾರಾಜನನ್ನು ರಕ್ಷಿಸಲೇ ಬಂದಿದ್ದನ್ನುವುದಕ್ಕೆ ಇನ್ನೂ ಹೆಚ್ಚಿನ ಆಧಾರಗಳು ಬೇಕಾಗುತ್ತದೆ. ಕ್ರಿ.ಶ.೧೪೪೩-೪೪ರಲ್ಲಿ ಯುದ್ಧವಾಗುತ್ತೆ ಯಾದರೂ, ವಿಜಯನಗರದ ಎರಡನೇ ದೇವರಾಯನ ಅಸ್ಥಾನದಲ್ಲಿದ್ದ ಒಬ್ಬರಿಗಿಂತ ಹೆಚ್ಚು ದಂಡನಾಯಕರು ಇಲ್ಲಿ ಭಾಗವಹಿಸಿರ ಬಹುದಾಗಿದೆ. ಇಲ್ಲಿ ದಂಡನಾಯಕನೆಂದರೆ ಲಕ್ಕಣ್ಣ ಮಾತ್ರ ಎಂದು ಹೇಳುವುದಕ್ಕೆ ಆಗುವುದಿಲ್ಲ. ಬಹುಶಃ ಅಬ್ದುಲ್ ರಜಾಕನು ಸೂಚಿಸುವ ದಂಡನಾಯಕ ಈರಣ್ಣ ನಾಗಿರಬೇಕು. ಇವನ ಕಾಲ ಕ್ರಿ.ಶ.೧೪೧೫. ಇವನು ದಕ್ಷಿಣ ಮಹಾಸಾಗರದ ದಂಡನಾಯಕನೂ ಆಗಿದ್ದಂತೆ ಕಂಡುಬರುತ್ತದೆ. ಈರಣ್ಣ ದಂಡನಾಯಕ ವಿಜಯ ನಗರದ ದೊರೆಯ ರಾಜ ಕುಮಾರನು ತಪ್ಪು ಮಾಡಿದ್ದರಿಂದ ಅವನನ್ನು ಕೊಲೆ ಮಾಡಿದ ಸಂದರ್ಭದಲ್ಲಿ ರಾಜಧಾನಿಯ ನ್ಯಾಯಾಲಯಕ್ಕೆ ಭೇಟಿ ಕೊಟ್ಟಿರಬೇಕು. ಪರ್ಶಿಯಾದಿಂದ ಬಂದ ರಾಜತಾಂತ್ರಿಕ ಈ ಈರಣ್ಣನನ್ನು ಮುಖ್ಯಮಂತ್ರಿ ಎಂದು ಗುರುತಿಸುವದಾದರೆ ಅವನು ವೀರ ವಿಜಯ ದೊರೆಯ ಕಾಲದವನೇ ಆಗಿರಬೇಕೆನಿಸುತ್ತದೆ. ಇವನು ದಕ್ಷಿಣ ಭಾರತದ ಮುಖ್ಯಸ್ಥನಾದುದರಿಂದ ಅಬ್ದುಲ್ ರಜಾಕ್ ಇವನನ್ನು ದಂಣಾಯಕ ಎಂದು ಗುರುತಿಸಿರಬಹುದಾಗಿದೆ. [11]

ಈ ಈರಣ್ಣ ದಂಡನಾಯಕನು ಸಿಂಹಳಕ್ಕೆ ಹೋದುದು ದಕ್ಷಿಣ ಭಾಗದೊಂದಿಗೆ ಮುತ್ತು ವ್ಯಾಪಾರ ಮುಂದುವರೆಸುವುದಾಗಿತ್ತು. ಅಲ್ಲದೆ ವಿಜಯನಗರದ ಅರಸರು ಸಿಂಹಳವನ್ನು ಗೆಲ್ಲುವುದರಿಂದ ಮುಂದೆ ಆಗಬಹುದಾದ ಪರಿಣಾಮಗಳನ್ನು ತಿಳಿಯುವುದಾಗಿತ್ತು.[12] ವಿಜಯನಗರದ ವಿರೂಪಾಕ್ಷ ದೊರೆಯ ಕಾಲದಲಿ ಸಿಂಹಳ ವನ್ನು ಗೆಲ್ಲಲಾಯಿತು ಎಂಬುದನ್ನು ಆ ಕಾಲದ ಶಾಸನಗಳು ಮತ್ತು ಸಾಹಿತ್ಯಕ ಆಧಾರಗಳಿಂದ ಹೇಳಬಹುದು. ಆ ಕಾಲದಲ್ಲಿ ಸಿಂಹಳದ ಸ್ಥಿತಿಯು ಉತ್ತಮ ವಾಗೇನೂ ಇರಲಿಲ್ಲ. ಅಲ್ಲಿಯ ಉತ್ತರ ಭಾಗದಲ್ಲಿ ಇದ್ದ ಪುಟಾಲಂ ಬಂದರು ಜಾಫ್ನಾ ದೊರೆ ಅಧೀನದಲ್ಲಿತ್ತು. ಅಲ್ಲಿ ಒಬ್ಬ ಮುಸ್ಲಿಂ ಕೊಲಂಬೋದ ಮೇಲೆ ಅಧಿಕಾರ ಹೊಂದಿದ್ದ. ಹಾಗಾಗಿ ನಾಗರೀಕ ಸೌಲಭ್ಯದಿಂದ ಸಿಲೋನ್ ದೂರವಿತ್ತು. ಅಲ್ಲಿ ಮಂತ್ರಿಗಳಾದ ಅಲಗಕೋನಾರ ಮತ್ತು ಆರ್ಯ ಚಕ್ರವರ್ತಿಗಳಲ್ಲಿಯೂ ವೈಷಮ್ಯವಿತ್ತು. ಆಳ್ವಿಕೆಯನ್ನು ಅತಿ ಚಿಕ್ಕವರೂ, ಅನನುಭವಿಗಳೂ ನಡೆಸುತ್ತಿದ್ದರು. ಮಂತ್ರಿಯಾಗಿದ್ದ ವಿಕ್ರಮ ಬಾಹುವೂ ವೈರತ್ವವನ್ನು ಸಾಧಿಸುತ್ತಿದ್ದ. ಮೊದಲನೆ ವೀರಬಾಹು ಮತ್ತು ಎರಡನೆ ವೀರಬಾಹು ಇವರಲ್ಲಿ ಅಸಗತ್ಯ ವೈಷಮ್ಯವಿತ್ತು. ಇದರಿಂದ ವೀರ ಅಲಕೇಶ್ವರನು ಭಾರತಕ್ಕೆ ಬಂದು ವಿಜಯನಗರ ಅರಸರ ನೆರವು ಪಡೆಯುವಂತಾಯಿತು. ತನ್ನ ರಕ್ಷಣೆಗೆ ಹಿಂದೂ ದೊರೆ ವಿಜಯನಗರ ಅರಸರ ನೆರವು ಪಡೆಯಲು ಪ್ರಯತ್ನಿಸಿದ ಬಗೆಗೆ ಶಾಸನಗಳು ಉಲ್ಲೇಖಿಸುತ್ತವೆ.[13] ಈ ವೇಳೆಯಲ್ಲಿ ವಿಜಯನಗರ ಸೈನ್ಯ ಸಿಂಹಳದಲ್ಲಿ ಇದ್ದರೂ ಸಹ ಏನೂ ಪರಿಣಾಮ ಕಾಣಲಾಗಿರಲಿಲ್ಲ. ಈ ಕುರಿತಂತೆ ಇನ್ನೂ ಹೆಚ್ಚಿನ ಸಂಶೋಧನೆ ಆಗಬೇಕಿದೆ. ವಿಜಯನಗರದ ವಿರೂಪಾಕ್ಷನ ಕಾಲದ ಶಾಸನಗಳಲ್ಲಿ ಈ ಕುರಿತಂತೆ ಸ್ವಲ್ಪ ಮಾಹಿತಿ ದೊರೆಯುತ್ತದೆ. ಇವನು ಸಿಂಹಳದಲ್ಲಿ ಪ್ರಭುತ್ವ ಪಡೆದ ಮೇಲೆ ತೆರಿಗೆಗಳನ್ನು ಹಾಕಲು ಪ್ರಾರಂಭಿಸುತ್ತಾನೆ. ಆ ಕಾಲದ ಶಾಸನಗಳಾದ ಭಾವ, ಪಂಗುಣಿಗಳಲ್ಲಿ ಹರಿಹರನ ಮಗನಾದ ವಿರೂಪಾಕ್ಷನು ತೆರಿಗೆ ಜಾರಿಗೊಳಿಸಿದ ವಿವರ ದೊರೆಯುತ್ತದೆ. ವಿಜಯನಗರದ ಅರಸನಿಂದ ರಚಿತವಾದ ನಾರಾಯಣ ವಿಲಾಸದಲ್ಲಿ ಅವನು ಸಿಂಹಳದಲ್ಲಿ ವಿಜಯ ಸ್ತಂಭ ಸ್ಥಾಪಿಸಿದ ಮಾಹಿತಿ ದೊರೆಯುತ್ತದೆ. ಇದಕ್ಕೆ ಸಂಬಂಧಿಸಿದಂತೆ ಕ್ರಿ.ಶ. ೧೩೮೫ರ ಅಲಂಪುಡಿ, ಅರಿಯೂರು ಶಾಸನಗಳು ಇದಕ್ಕೆ ಪುರಾವೆ ಒದಗಿಸುತ್ತದೆ. ಮೊದಲ ಶಾಸನವು ತುಂಡಿರ ಪಾಂಡ್ಯ, ಚೋಳ, ಸಿಂಹಳ ಗೆದ್ದುದಕ್ಕೆ ಹೊಳೆಯುವ ರತ್ನಗಳನ್ನು ತಂದೆಗೆ ಕಾಣಿಕೆಯಾಗಿ ಕೊಟ್ಟದ್ದನ್ನು ತಿಳಿಸುತ್ತದೆ. ಕ್ರಿ.ಶ.೧೩೮೩ರ ಅರಿಯೂರು ಶಾಸನವು ಸಿಂಹಳ ದ್ವೀಪ ಗೆದ್ದ ವಿವರ ಕೊಡುತ್ತದೆ. ಈ ಶಾಸನ ಕ್ರಿ.ಶ.೧೪೫೦ಕ್ಕೆ ಅನ್ವಯವಾಗುತ್ತದೆ. ಸಿಂಹಳವನ್ನು ಗೆದ್ದುಕೊಂಡ ವಿವರವನ್ನು ನಾರಾಯಣ ವಿಲಾಸ ನಾಟಕ ನೀಡುತ್ತದೆ. ಇದಕ್ಕೆ ಶಾಸನ ಪುರಾವೆ ಒದಗಿಸುತ್ತದೆ. ಇದೇ ಅರಸರ ಶಾ.ಶ.೧೩೦೮ ರ ಕ್ರಿ.ಶ.೧೩೮೬-೧೩೮೭ರ ಶಾಸನದಲ್ಲಿ ವಿಜಯನಗರದ ಅರಸರು ಗೆದ್ದ ವಿವರ ಕಂಡು ಬರುವುದಿಲ್ಲ. ಹಾಗಾಗಿ ಇದು ತೀರ

ಸ್ಪಷ್ಟ ಮತ್ತು ನಿಜ ಎಂದು ಒಪ್ಪಿಕೊಳ್ಳುವುದು ಕಷ್ಟವಾಗುತ್ತದೆ. ವಿರೂಪಾಕ್ಷನು ಬರೆದ ನಾಟಕದಲ್ಲಿಯೂ ಸ್ಪಷ್ಟ ಮಾಹಿತಿ ದೊರೆಯುವುದಿಲ್ಲ. ಇವನ ಕಾಲದಲ್ಲಿ ಸಿಂಹಳ ದ್ವೀಪವನ್ನು ಗೆಲ್ಲುವುದು ವಿಜಯನಗರ ದೊರೆಗಳ ಮುಖ್ಯ ಉದ್ದೇಶವಾಗಿತ್ತು. ಸಿಂಹಳದವರ ಸಹಕಾರದಿಂದ ಇದು ಸಾಧ್ಯವಾದಂತಾಯಿತು. ಅವರು ಸಿಂಹಳಕ್ಕೆ ಕಂದಾಯ ಹಾಕಿದ ದೊರೆ ಎಂದು ಗೌರವಿಸಲ್ಪಟ್ಟರು [14]

ಉಪಸಂಹಾರ

ಡಾ. ಬಿ.ಎಸ್. ಶಾಸ್ತ್ರಿಗಳು ಪರಿಶೋಧಿಸಿ ಅಭಿಪ್ರಾಯಪಟ್ಟಂತೆ ಇಂತಹ ಅಪೂರ್ವ ಆಕರ ಸಂಗ್ರಹಗಳನ್ನೊಳಗೊಂಡ ಸಂಪುಟಗಳ ಮುಂದಿನ ಸಂಶೋಧನೆಗೆ ಅಧ್ಯಯನಯೋಗ್ಯವಾದುದು. ಈ ಕಾರಣದಿಂದ ಪೋರ್ಚುಗೀಸ್ ಭಾಷೆಯಲ್ಲಿ ದ್ವಂತೆಯೆ ಪಿಸುರ್ಲೆಂಕರ್‌ರವರ ಮಾದರಿಯೊಂದನ್ನು ಇದ್ದದಿದ್ದ ಹಾಗೆ ಇಲ್ಲಿ ನೀಡಲಾಗಿದೆ.

ಮಾದರಿ :

Cart do Vice - Rei ao Bispo de Meliapor

1634 Dezembro 22

A carta de V.S. de. Novembro Receby..... No particular de Palleacate, e pratica do Rey de *Bisnaga* me Remeteo ao que Ja tenho apontado se me dispidisee nomesmo ponto e com a majior breuidade avizo disso para as poder dispidir em tpo a armada a que tenho prometido... (Idem. fl. 1159)

No. 6 - Date 16.09.1634
No. 7 - Date 24.07.1634
No. 23 - Date 17.03.1635
No. 15 - Date 22.12.1634
No. 12 - Date 11.10.1634
No. 1 - Date 28.01.1634
No. 2 - Date 23.01.1634
No. 4 - Date 13.01.1634
No. 3 - Date 23.01.1634
No. 4 - Date 31.01.1634
No. 18 - Date 11.02.1634
No. 1 - Date 28.01.1634
No. 22 - Date 17.03.1635
No. 23 - Date 17.03.1635

ಅಡಿ ಟಿಪ್ಪಣಿಗಳು

1. Dr. Saletore, *Indian Antiquary* : Dec, 1932 p. 223
2. Ibid : Dr. Srikantha Shastry LVII p. 178
3. ರಾಬರ್ಟ್ ಸೀವೆಲ್‌ರವರ ಸ್ವಹಸ್ತಾಕ್ಷರ ಹಸ್ತಪ್ರತಿಯು ತನ್ನ ತಂದೆಯ ಸರ್ವೇಕ್ಷಣೆಯನ್ನು ಕಂಡು ಬಂದಿದ್ದು ವಿಜಯನಗರ ಅರಸು ವಂಶದ ಶ್ರೀ ಅಚ್ಯುತ ದೇವರಾಯರು ಇದನ್ನು ಪತ್ರಾಗಾರಕ್ಕೆ ನೀಡಿದ್ದಾರೆಂದು ತಿಳಿಸಿದ್ದಾರೆ.
4. *The Chronicle of the Kings of Vijayanagara*- Edited by David Lolpes Society of Geography of Lisbon 1897
5. ಮರೆಯಲಾಗದ ಮಹಾಸಾಮ್ರಾಜ್ಯ ಪು. ೬೧
6. *Madras Ep. Report* 1906. p. 64
7. *Madras Ep. Report* 1916 p.139
8. Dr. S.K. Aiyangar in his introduction to Iyer's *Histroy of the Nayakas of Madura* p. 6
9. Srikantha Shastri, Indian Antiquary LVII p. 78
10. Heras, *Aravidu Dynasty* p. 107 - 8, Ec X M6-7. p. 72 and *Ec* IV HS 46 p. 88EC V Cn. 175 p. 201 Mys. Arch Report 1911 - 02 p. 47
11. *EC.* X Kl. 104. p. 31
12. *EC.* Mb. 96 p. 100., No. 666 of Madras *Epi. R.* for 1905
13. Swamikannu, V p.88, Ferishta confirms the persian traveller about this Expedition, Ferishta. Trans Briggs II p. 430-434
14. Sewell. op. cit. p. 404. *Rice Mysore and Coorg* p. 112. Here we may guess that the Ajarao of Nuniz may have been a corruption of Vijaya Raja.

ಆಕರಗಳು

1. *The History of Vijayanagara Empire*, Vol II M.H. Rama Sharma, Bombay Popular Prakashan 1980
2. *Studies in Indies Portunguese History* Dr. B.S. Shastry, I.B.H. Prakashana, Bangalore - 1981
3. A Forgotten Empire, Robert Sewell, Asian Education Service, New Delhi. 1980
4. *ಮರೆಯಲಾಗದ ಮಹಾ ಸಾಮ್ರಾಜ್ಯ*. ಬಿ. ಸೂರ್ಯ ನಾರಾಯಣರಾವ್, ಬಾಲ ಸುಬ್ರಹ್ಮಣ್ಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000.
5. *Assentos do conselho do Estado Volumes* - Panduranga S.S. Pissurlencar - 1975, Typographia Rangel, Bastora, Goa.

The Relations of a famous Vijayanagar viceroy Viswantha; S.K. Aiyengar; The sources of Vijayanagara History p.53. With Ceylon together matters relating to that island, will be dealt with in a subsequent paper on the foreign policy of the Vijayanagara kings with the neighboring states.

೩೮. ವಿಜಯನಗರ ಸಾಮ್ರಾಜ್ಯ ಮತ್ತು ಕಾವೇರಿ ಕಪಿಲಾ ನದಿ ಕಣಿವೆ ಪ್ರದೇಶಗಳ ನಡುವಣ ಸಂಬಂಧ

ಡಾ. ನಿರ್ಮಲ್ ರಾಜು

ಲಭ್ಯವಿರುವ ಶಾಸನಾಧಾರಗಳು, ಸಾಹಿತ್ಯಾಧಾರಗಳು ಮತ್ತು ವಿದೇಶಿ ಪ್ರವಾಸಿಗರ ಬರಹಗಳು ವಿಜಯನಗರ ಸಾಮ್ರಾಜ್ಯ ಹಾಗೂ ದಕ್ಷಿಣ ಕರ್ನಾಟಕದ ಫಲವತ್ತಾದ ಮತ್ತು ಆಯಕಟ್ಟಿನ ಕಾವೇರಿ ಕಪಿಲಾ ನದಿಗಳ ಬಯಲು ಪ್ರದೇಶಗಳ ನಡುವಣ ರಾಜಕೀಯ ಮತ್ತು ಸಾಂಸ್ಕೃತಿಕ ಸಂಬಂಧಗಳಿದ್ದುದರ ಬಗೆಗೆ ಮಾಹಿತಿಗಳನ್ನೊದಗಿಸುತ್ತವೆ. ಪ್ರಮುಖ ಇತಿಹಾಸತಜ್ಞರಾದ ಡಾ. ಎ.ವಿ. ವೆಂಕಟರತ್ನಂರವರು ತಮ್ಮ 'ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ ' ಎಂಬ ಕೃತಿಯಲ್ಲಿ ದಕ್ಷಿಣ ಕರ್ನಾಟಕದಲ್ಲಿದ್ದ ಹೊಯ್ಸಣ ರಾಜ್ಯ ಅಥವಾ ಹೊಯ್ಸಣನಾಡು ಅಥವಾ ಹೊಸಣ ದೇಶದೊಂದಿಗೆ ವಿಜಯನಗರ ಸಾಮ್ರಾಜ್ಯದ ಆರಂಭಿಕ ರಾಜರು ಸಂಬಂಧ ಹೊಂದಿದ್ದರೆಂಬುದನ್ನು ಗುರುತಿಸಿದ್ದಾರೆ. ಈ ಪ್ರಾಂತ್ಯವು ವಿಜಯನಗರ ಸ್ಥಾಪನೆಗೆ ಮೊದಲು ಹೊಯ್ಸಳರ ಆಳ್ವಿಕೆಯಲ್ಲಿದ್ದ ಕರ್ನಾಟಕ ಹಾಗೂ ತಮಿಳುನಾಡು ರಾಜ್ಯಗಳ ಭಾಗಗಳು ಕೋಟೆಸೀಮೆ : ಮೈಸೂರು ಪ್ರಾಂತ್ಯದ ಹುಣಸೂರು ಮತ್ತು ಹೆಗ್ಗಡ ದೇವನಕೋಟೆ ಪ್ರದೇಶಗಳು. ತೆರಕಣಾಂಬಿ ರಾಜ್ಯ : ಮೈಸೂರು ಪ್ರಾಂತ್ಯದ ಗುಂಡ್ಲುಪೇಟೆ ಪ್ರದೇಶಗಳು[1] ಎಂಬುದಾಗಿ ತಿಳಿದು ಬರುತ್ತದೆ. ಅಂದರೆ ಹೊಯ್ಸಳರ ಅಧಿಕೃತ ಉತ್ತರಾಧಿಕಾರಿಗಳಾದ ವಿಜಯನಗರದರಸರು ಸಹಜವಾಗಿ ಅವರು ಅಧಿಕಾರ ಹೊಂದಿದ್ದ ಪ್ರದೇಶಗಳ ಮೇಲೆಲ್ಲಾ ತಮ್ಮ ಪ್ರಭುತ್ವವನ್ನು ಸ್ಥಾಪಿಸಲು ಪ್ರಯತ್ನಿಸಿದರೆಂಬುದನ್ನು ಇದರಿಂದ ಕಂಡುಕೊಳ್ಳ ಬಹುದು. ಇದಕ್ಕೆ ಪೂರಕವಾಗಿ ಒಂದನೇ ಬುಕ್ಕರಾಯನ ಮಗ ವೀರಕಂಪಣರಾಯನು ಕೈಗೊಂಡ ದಕ್ಷಿಣ ಭಾರತದ ಮಧುರೆಯವರೆಗಿನ ಸೈನಿಕ ಕಾರ್ಯಾಚರಣೆಯು ಆಧಾರವಾಗಿ ನಿಲ್ಲುತ್ತದೆ. ಕ್ರಿ.ಶ. ೧೩೪೧ರ ಬೀಚೇನಹಳ್ಳಿಯ ಶಾಸನವೊಂದರ ಪ್ರಕಾರ ಒಂದನೆಯ ಹರಿಹರ(ಹಕ್ಕ)ನ ಕಾಲದಲ್ಲಿ ವೀರಬುಕ್ಕಣ್ಣವೊಡೆಯನು ಈ ಭಾಗದ ಆಡಳಿತಾಧಿಕಾರಿ ಯಾಗಿದ್ದು ಕೊಂಡು ತನ್ನ ಅಣ್ಣನಿಗೆ ಆಡಳಿತದಲ್ಲಿ ನೆರವಾಗುತ್ತಿದ್ದನು.[2] ಅರುವನ ಹಳ್ಳಿಯ ಶಾಸನದಲ್ಲಿ ಬಾಚಿಯಪ್ಪನು ಬುಕ್ಕರಾಯನ ಸಮುದ್ರವೆಂಬ ಕೆರೆಯನ್ನು ಕಟ್ಟಿಸಿದ ಬಗೆಗೆ ಮಾಹಿತಿ ಇದೆ [3]. ಅದೇ ರೀತಿ ಇಮ್ಮಡಿ ಹರಿಹರ, ಇಮ್ಮಡಿ ಬುಕ್ಕ, ಒಂದನೆಯ ದೇವರಾಯ,

ಎರಡನೆಯ ದೇವರಾಯ ಮೊದಲಾದವರ ಆಳ್ವಿಕೆಯ ಬಗೆಗೂ ಸಾಕಷ್ಟು ಶಾಸನಾಧಾರಗಳು ದೊರಕುತ್ತವೆ.[4] ಮುಂದೆ ಆಡಳಿತ ನಡೆಸಿದ ಸಾಳ್ವ ನರಸಿಂಗರಾಜ ಹಾಗೂ ವೀರನರಸಿಂಹ ಇವರ ಕಾಲದ ಶಾಸನಗಳು ಸಹ ಈ ಭಾಗದಲ್ಲಿ ಕಂಡುಬರುತ್ತವೆ.[5] ಆದರೆ ಕೃಷ್ಣದೇವರಾಯನ ಮಲಸಹೋದರ ವೀರ ನರಸಿಂಹನ ಕ್ರಿ.ಶ.೧೫೦೬ರ ಶಾಸನದಲ್ಲಿ ಅವನ ಮಾಂಡಳೀಕನೂ ಉಮ್ಮತ್ತೂರಿನ ಪ್ರಭುವೂ ಆದ ದೇಪಣ್ಣನ ಮಗ ಕುಮಾರ ಚಿಕ್ಕರಾಯ ಅಥವಾ ಮಲ್ಲರಾಜನ ಹೆಸರು ಕೂಡ ಕಂಡುಬರುತ್ತದೆ. [6] ಈ ಶಾಸನದ ಪ್ರಕಾರ ನಾಗಮಂಗಲ ಪ್ರದೇಶವು ಸಹ ಮಂಡ್ಯ, ಮಳವಳ್ಳಿ, ಮದ್ದೂರುಗಳಂತೆ ಉಮ್ಮತ್ತೂರು ಪ್ರಭುಗಳ ಆಳ್ವಿಕೆಗೆ ಒಳಪಟ್ಟಿತ್ತೆಂಬುದಾಗಿ ಗೊತ್ತಾಗುತ್ತದೆ ಮತ್ತು ಈ ಕಾಲದವರೆಗೆ ಅಂದರೆ ಮಲ್ಲರಾಜ ವೊಡೆಯನ ಆಡಳಿತದ ಕಾಲದವರೆಗೆ ಉಮ್ಮತ್ತೂರು ಪ್ರಭುಗಳು ವಿಜಯನಗರದ ಅರಸರಿಗೆ ವಿಧೇಯರಾಗಿದ್ದು ಮುಂದೆ ಮಲ್ಲರಾಜನ ಉತ್ತರಾಧಿಕಾರಿಯಾದ ಗಂಗರಾಜನ ಕಾಲದಲ್ಲಿ ಬಂಡಾಯವೆದ್ದಿರಬಹುದೆಂದು ಅಭಿಪ್ರಾಯಪಡಬಹುದು.

ವಿಜಯನಗರದರಸರಲ್ಲೆಲ್ಲಾ ಅತ್ಯಂತ ಪ್ರಸಿದ್ಧನಾದ ಕೃಷ್ಣದೇವರಾಯನ ಶಾಸನಗಳು ಸಹ ಈ ಪ್ರದೇಶದಲ್ಲಿ ಕಂಡುಬರುತ್ತವೆ. ಅದರಲ್ಲೂ ಮುಖ್ಯವಾಗಿ ಕೃಷ್ಣದೇವರಾಯನು ಸಾಮ್ರಾಜ್ಯದ ವಿರುದ್ಧ ಬಹಿರಂಗವಾಗಿ ಬಂಡಾಯವೆದ್ದಿದ್ದ ಉಮ್ಮತ್ತೂರಿನ ಪ್ರಭು ಗಂಗರಾಜನನ್ನು ಅಡಗಿಸಲು ಕ್ರಿ.ಶ. ೧೫೧೦ರಲ್ಲಿ ಸೈನ್ಯಸಮೇತನಾಗಿ ನಾಗಮಂಗಲ ಮಾರ್ಗವಾಗಿ ಹೊರಟು ಶ್ರೀರಂಗಪಟ್ಟಣವನ್ನು ತಲುಪಿ ಅಲ್ಲಿ ವಿಶ್ರಾಂತಿ ಪಡೆದು ನಂತರ ಮುಂದಿನ ಪ್ರಯಾಣವನ್ನು ಕೈಗೊಳ್ಳಲಾಯಿತೆಂಬುದು ಇಲ್ಲಿ ಉಲ್ಲೇಖಾರ್ಹ. ಸುಮಾರು ಒಂದು ವರ್ಷದಷ್ಟು ಸುದೀರ್ಘ ಕಾಲ ಸೈನಿಕ ಕಾರ್ಯಾಚರಣೆಯ ನಂತರ ಉಮ್ಮತ್ತೂರು ದಂಗೆಯನ್ನು ಅಡಗಿಸಿದ ಕೃಷ್ಣದೇವರಾಯನು ಆಕ್ರಮಿತ ಪ್ರದೇಶವನ್ನು ಗಂಗರಾಜನ ಮಗನಾದ ವೀರಪ್ಪ ಒಡೆಯನಿಗೆ ಬಿಟ್ಟುಕೊಟ್ಟನೆಂದು ತಿಳಿದುಬರುತ್ತದೆ.[7] ಆದರೆ ಹಲವು ಶಾಸನಾಧಾರಗಳ ಪ್ರಕಾರ ಸಾಳ್ವ ತಿಮ್ಮನ ಮಗ ಗೋವಿಂದ ರಾಜನನ್ನು ಈ ಪ್ರಾಂತ್ಯದ ಹೊಸ ಆಡಳಿತಾಧಿಕಾರಿಯಾಗಿ ನೇಮಿಸಲಾಯಿತೆಂಬುದಾಗಿ ಗೊತ್ತಾಗುತ್ತದೆ.[8] ಈ ಸಂದರ್ಭದಲ್ಲಿಯೇ ಕೃಷ್ಣದೇವರಾಯನು ಶ್ರೀರಂಗಪಟ್ಟಣದ ಪ್ರಮುಖ ವ್ಯಕ್ತಿಯಾದ ವೀರಪ್ಪ ಒಡೆಯರನ ಮಗಳಾದ ಚಿನ್ನದೇವಿಯನ್ನು ಮದುವೆಯಾಗಿ ಈ ಭಾಗದ ಅನೇಕ ದೇವಾಲಯ ತೀರ್ಥಕ್ಷೇತ್ರ ಮೊದಲಾದವುಗಳಿಗೆ ದಾನದತ್ತಿಗಳನ್ನು ನೀಡಿ, ರಾಯನ ಹೆಸರಿನಲ್ಲಿ ಅಗ್ರಹಾರಗಳನ್ನು ಸಹ ಸ್ಥಾಪಿಸಿದನು.

ಕೃಷ್ಣದೇವರಾಯನ ನಂತರ ಅಚ್ಯುತರಾಯ, ಸದಾಶಿವರಾಯ ಅಳಿಯ ರಾಮರಾಯ ಮೊದಲಾದ ಅರಸರುಗಳ ಕಾಲದಲ್ಲಿಯೂ ಸಹ ದಕ್ಷಿಣ ಕರ್ನಾಟಕ ಕಾವೇರಿ, ಕಪಿಲಾ

ನದಿಗಳ ಕಣಿವೆ ಪ್ರದೇಶವು ವಿಜಯನಗರ ಸಾಮ್ರಾಜ್ಯದ ನಿಯಂತ್ರಣ ದಲ್ಲಿತ್ತೆಂಬುದಕ್ಕೆ ಶಾಸನಾಧಾರಗಳಿವೆ.[9] ಆದರೆ ಕ್ರಿ.ಶ.೧೫೬೫ರ ತಾಳಿಕೋಟೆ ಯುದ್ಧದ ಪರಿಣಾಮವಾಗಿ, ಪ್ರಬಲ ಚಕ್ರವರ್ತಿಯ ಅನುಪಸ್ಥಿತಿಯಲ್ಲಿ, ಪ್ರಾಂತ್ಯಾಧಿ ಕಾರಿಗಳ ದೌರ್ಬಲ್ಯ ಮೊದಲಾದ ಕಾರಣಗಳಿಂದಾಗಿ ಅನೇಕ ಪ್ರದೇಶಗಳು ಸಾಮ್ರಾಜ್ಯದ ವಿರುದ್ಧ ಸಿಡಿದೆದ್ದು ಸ್ವತಂತ್ರ ಆಳ್ವಿಕೆಯನ್ನು ಸ್ಥಾಪಿಸಿಕೊಂಡವು. ಅಂತಿಮವಾಗಿ ಕ್ರಿ.ಶ.೧೬೧೦ರಲ್ಲಿ ಶ್ರೀರಂಗಪಟ್ಟಣ ದಲ್ಲಿದ್ದ ವಿಜಯನಗರದ ಪ್ರತಿನಿಧಿ ತಿರುಮಲರಾಯ ಅಥವಾ ರಂಗರಾಯನನ್ನು ಸೋಲಿಸಿ ಶ್ರೀರಂಗಪಟ್ಟಣವನ್ನು ವಶ ಪಡಿಸಿಕೊಂಡ ಮೈಸೂರಿನ ರಾಜ ಒಡೆಯರು ಈ ಭಾಗದಲ್ಲಿ ಪ್ರಬಲರಾಗಿ ವಿಜಯ ನಗರದ ಸಂಬಂಧವನ್ನು ಕೊನೆಗಾಣಿಸಿದರು.

ಒಟ್ಟಾರೆ ಕಾವೇರಿ ಕಪಿಲಾ ನದಿ ಕಣಿವೆ ಪ್ರದೇಶಗಳಲ್ಲಿ ವಿಜಯನಗರ ಸಾಮ್ರಾಜ್ಯದ ಆರಂಭದ ಅರಸರಿಂದ ಹಿಡಿದು ಕೊನೆಯ ಅರಸರವರೆಗಿನ ಶಾಸನಗಳು ಲಭ್ಯವಾಗಿವೆ. ಆದುದರಿಂದ ಹೊಯ್ಸಳರಂತೆ, ವಿಜಯನಗರದರಸರೂ ಸಹ ನಿಕಟವಾದ ಮತ್ತು ನೇರವಾದ ರಾಜಕೀಯ ಸಂಬಂಧ ಹೊಂದಿದ್ದರೆಂಬುದನ್ನು ನಾವಿಲ್ಲಿ ಒತ್ತಿ ಹೇಳಬೇಕಾಗಿದೆ. ಶಾಸನಾಧಾರಗಳಲ್ಲದೆ ಇತ್ತೀಚೆಗೆ ತಲಕಾಡು ಹಾಗೂ ಸುತ್ತಮುತ್ತಲಿನ ಸ್ಥಳಗಳಲ್ಲಿ ನಡೆದ ಉತ್ಖನನದಿಂದ ತಿಳಿದುಬಂದಿರುವ ಸಂಗತಿ ಯೇನೆಂದರೆ, ಗಂಗರ ನಂತರ ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ ಚೋಳ, ಹೊಯ್ಸಳ ಮತ್ತು ವಿಜಯನಗರ ಕಾಲದ ಅನೇಕ ಮಣ್ಣಿನ ಪಾತ್ರೆಗಳು, ಮಡಕೆಗಳು ಇತರೆ ಜನಬಳಕೆಯ ವಸ್ತುಗಳು, ಕಟ್ಟಡಗಳು ಇವೇ ಮೊದಲಾದವು ಕಂಡುಬಂದಿವೆ. ಸುಟ್ಟಮಣ್ಣಿನ ಉಂಗುರಗಳನ್ನು ಕೂಡಿಸಿ ಮಾಡಿದ ವಿಜಯನಗರಕಾಲಕ್ಕೆ ಸೇರಿಸ ಬಹುದಾದ ಎರಡು ಬಾವಿಗಳು ಪತ್ತೆಯಾಗಿವೆ. ಇದರಿಂದ ಈ ಭಾಗದ ಪ್ರದೇಶಗಳು ಅಂದರೆ ತಿರುಮಕೂಡಲು ನರಸೀಪುರ, ಸೋಮನಾಥಪುರ, ತಲಕಾಡು, ಮದ್ದೂರು, ಶ್ರೀರಂಗಪಟ್ಟಣ, ನಾಗಮಂಗಲ ಹಾಗೂ ಸುತ್ತಮುತ್ತಲಿನ ಪ್ರದೇಶಗಳು ಚೋಳ, ಹೊಯ್ಸಳ ಹಾಗೂ ವಿಜಯನಗರದ ಅಧಿಪತ್ಯವನ್ನು ಹೊಂದಿದ್ದವೆಂಬುದಕ್ಕೆ ಇದುವರೆವಿಗೂ ದೊರೆತಿದ್ದ ಸಾಹಿತ್ಯ ಮತ್ತು ಶಾಸನಧಾರಗಳಲ್ಲದೆ ಪ್ರಾಕ್ತನ ಆಧಾರಗಳು ಮತ್ತು ಅವಶೇಷಗಳು ಸಹ ಸಾಕ್ಷಿಯಾಗಿವೆ. ಹೀಗೆ ವಿಜಯನಗರ ಸಾಮ್ರಾಜ್ಯದ ರಾಜಕೀಯ ಹಾಗೂ ಸಾಂಸ್ಕೃತಿಕ ಸಂಪರ್ಕದಿಂದ ಕಾವೇರಿ ಕಪಿಲಾ ನದಿಗಳ ಕಣಿವೆ ಪ್ರದೇಶದಲ್ಲಿ ಮತ್ತಷ್ಟು ಬದಲಾವಣೆ ಗಳುಂಟಾದವು. ಮೊದಲನೆಯದಾಗಿ, ವಿಜಯನಗರ ಕಾಲವು ಕರ್ನಾಟಕ ಇತಿಹಾಸ ದಲ್ಲಿಯೇ ಅತ್ಯಂತ ಮಹತ್ವ ಪೂರ್ಣವಾದ ಕಾಲವಾಗಿತ್ತು. ಈ ಕಾಲವು ಎರಡು ದೃಷ್ಟಿಗಳಿಂದ ಬಹಳ ಪ್ರಮುಖವಾದುದು. ಒಂದನೆಯದಾಗಿ ಈ ಕಾಲದಲ್ಲಿ ದೇಶೀಯ ಧರ್ಮ, ದೇಶೀಯ ಸಂಸ್ಕೃತಿ, ಪರಂಪರೆ ಹಾಗೂ ಸಂಪ್ರದಾಯಗಳ ಸಂರಕ್ಷಣೆಗೆ ರಾಜಕೀಯ ಶಕ್ತಿಯ ಬೆಂಬಲ ದೊರಕಿತು. ಎರಡನೆಯದಾಗಿ, ಧರ್ಮ ಮತ್ತು

ಸಂಸ್ಕೃತಿಗಳ ಘಟಕಗಳಾಗಿದ್ದ ದೇವಾಲಯ, ಅಗ್ರಹಾರ, ಘಟಿಕಾಸ್ಥಾನ, ಮಠ ಮೊದಲಾದ ಸಾಂಪ್ರದಾಯಿಕ ಸಂಸ್ಥೆ ಗಳು ಗಣನೀಯವಾಗಿ ಹೆಚ್ಚಿದವು ಮತ್ತು ಜೀರ್ಣೋದ್ಧಾರಗೊಂಡವು. ಪ್ರಾಯಶಃ ಇದು ಅಂದಿನ ಆವಶ್ಯಕತೆಗೆ ಅನುಗುಣವಾಗಿಯೇ ಇದ್ದಿತ್ತೆಂದು ಅಭಿಪ್ರಾಯ ಪಡಬಹುದು. ಈ ವಿಶಿಷ್ಟವಾದ ಅಂಶವನ್ನು ಕಾವೇರಿ ಕಪಿಲಾ ನದಿ ಕಣಿವೆ ಪ್ರದೇಶಗಳಲ್ಲಿ ದೊರೆಯುವ ಶಾಸನಗಳು ಮತ್ತು ಸ್ಮಾರಕಗಳ ಆಧಾರದಿಂದ ಸ್ಪಷ್ಟೀಕರಿಸಲಾಗಿದೆ. ಉದಾಹರಣೆಗೆ ವಿಜಯನಗರದರಸರನ್ನು ಈ ವಲಯದ ಶಾಸನಗಳಲ್ಲಿ 'ಧರ್ಮ ರಕ್ಷಕ' ಹಾಗೂ 'ಧರ್ಮೋದ್ಧಾರಕ' ಎಂದು ಕರೆಯಲಾಗಿದೆ. ಅಂದರೆ ಧರ್ಮವನ್ನು ಉದ್ಧರಿಸಿದವನು, ಕಾಪಾಡಿದವನು ಎಂದರ್ಥ. ಅಂದಿನ ಹಿನ್ನೆಲೆಯಲ್ಲಿ ಈ ಬಿರುದು ಬಹಳ ಅರ್ಥಪೂರ್ಣವಾಗಿ ಗೋಚರಿಸುತ್ತದೆ. ಇದಕ್ಕೆ ಪೂರಕವೆಂಬಂತೆ ಮೇಲುಕೋಟೆ, ತೊಣ್ಣೂರು, ನಾಗಮಂಗಲ, ಶ್ರೀರಂಗಪಟ್ಟಣ, ತಿರುಮಕೂಡಲು ನರಸೀಪುರ, ತೆರಕಣಾಂಬಿ, ಗುಂಡ್ಲುಪೇಟೆ, ನಂಜನಗೂಡು, ಚಾಮರಾಜನಗರ, ಹೆಗ್ಗಡದೇವನ ಕೋಟೆ, ಮೈಸೂರು ಮೊದಲಾದ ವೈಷ್ಣವ ಕೇಂದ್ರಗಳು ಅವರ ಆರಾಧನಾ ಕ್ಷೇತ್ರಗಳಾಗಿದ್ದವೆಂಬುದು ಗಮನಾರ್ಹ.

ಮೂರನೆಯದಾಗಿ, ಈ ಕಾಲದಲ್ಲಿ ಅನೇಕ ಅಗ್ರಹಾರಗಳು ಸ್ಥಾಪಿಸಲ್ಪಟ್ಟವು. ಇವು ಅಂದಿನ ಧಾರ್ಮಿಕ ಪುನರುತ್ಥಾನದ ಆಶಯಕ್ಕೆ ಉದಾಹರಣೆಯಾಗಿವೆ. ವಿಜಯ ನಗರದೊಡನೆ ಈ ಪ್ರದೇಶ ಸಂಪರ್ಕಹೊಂದಿದ್ದ ಕಾಲದಲ್ಲಿ ಆಂಧ್ರಪ್ರದೇಶದಿಂದ ತೆಲುಗುಬ್ರಾಹ್ಮಣರು ಈ ಪ್ರದೇಶಕ್ಕೆ ವಲಸೆ ಬಂದರು. ಅವರಲ್ಲಿ ಹೆಚ್ಚಿನ ಜನರು ನಾಗಮಂಗಲ, ಬೆಳ್ಳೂರು, ಬಸರಾಳು, ಮದ್ದೂರು, ತಿ. ನರಸೀಪುರ ಮುಂತಾದಕಡೆ ನೆಲೆಸಿದರೆ, ತಮಿಳು ಬ್ರಾಹ್ಮಣ ಪಂಡಿತರು ಮತ್ತು ಪುರೋಹಿತರು ಮೇಲುಕೋಟೆ, ತೊಣ್ಣೂರು, ಶ್ರೀರಂಗಪಟ್ಟಣ, ಮೈಸೂರು ಮೊದಲಾದ ಕಡೆ ನೆಲೆಗೊಂಡರು. ಇದರಿಂದ ತೆಲುಗು ಮತ್ತು ತಮಿಳು ಭಾಷೆಗಳು ಕನ್ನಡ ಭಾಷೆಯೊಂದಿಗೆ ಬೆರೆತು, ಬೆಳವಣಿಗೆ ಹೊಂದಿದವು. ಇದಕ್ಕೆ ಈ ಪ್ರದೇಶದಲ್ಲಿ ದೊರಕಿರುವ ತಮಿಳು ಹಾಗೂ ತೆಲುಗು ಭಾಷೆಗಳಲ್ಲಿರುವ ಶಾಸನಗಳೆ ಆಧಾರವಾಗಿವೆ.

ನಾಲ್ಕನೆಯದಾಗಿ, ಕಾವೇರಿ ಕಪಿಲಾ ನದಿ ಕಣಿವೆ ಪ್ರದೇಶಗಳಲ್ಲಿನ ದೇವಾಲಯ ಗಳಿಗೆ ಅರಸರು ಮತ್ತು ಅವರ ಅಧಿಕಾರವರ್ಗದವರು ಭೂದಾನವನ್ನು ಯಥೇಚ್ಛವಾಗಿ ನೀಡಿದರು. ದೇವಾಲಯಗಳಿಗೆ ಬಿಟ್ಟ ದತ್ತಿಗಳನ್ನು ದೇವದಾಯಗಳೆಂದೂ, ಬ್ರಾಹ್ಮಣ ಪಂಡಿತರಿಗೆ ನೀಡಿದ ದತ್ತಿಗಳನ್ನು ಬ್ರಹ್ಮದೇಯಗಳೆಂದೂ ಶಾಸನಗಳಲ್ಲಿ ಉಲ್ಲೇಖಿಸ ಲಾಗಿದೆ. ಇದು ಸಹ ಮೇಲಿನ ತೀರ್ಮಾನಕ್ಕೆ ಪೂರಕವಾಗಿದೆ. ಕಾವೇರಿ ಕಪಿಲಾ ನದಿ ಪ್ರದೇಶಗಳಲ್ಲಿ ದೊರೆತಿರುವ ವಿಜಯನಗರದರಸರ ಶಾಸನಗಳಲ್ಲಿ ಹೆಚ್ಚಾಗಿ ಭೂದಾನ ನೀಡಿರುವುದನ್ನು ವಿಶೇಷವಾಗಿ ಕಾಣಬಹುದು.

ಐದನೆಯದಾಗಿ, ಈ ಪ್ರದೇಶದಲ್ಲಿ ಕೃಷ್ಣದೇವರಾಯನ ಶಾಸನಗಳೇ ಅಧಿಕವಾಗಿವೆ. ಇದು ಗಮನಾರ್ಹವಾದ ಸಂಗತಿ. ಕೃಷ್ಣದೇವರಾಯನ ಕಾಲವು ಎಲ್ಲಾ ದೃಷ್ಟಿಕೋನ ಗಳಿಂದಲೂ ಕರ್ನಾಟಕದ ಇತಿಹಾಸದಲ್ಲೇ ಅತ್ಯಂತ ವೈಭವದ ಕಾಲವಾಗಿತ್ತೆಂಬುದು ಗಮನಾರ್ಹ. ಆದುದರಿಂದ ರಾಯನ ಶಾಸನಗಳು ಕಾವೇರಿ ಕಪಿಲಾ ನದಿ ಕಣಿವೆ ಪ್ರದೇಶ ಗಳಲ್ಲಿ ಅಧಿಕವಾಗಿ ದೊರಕಿವೆ.

ಕೊನೆಯದಾಗಿ, ವಿಜಯನಗರ ಕಾಲದಲ್ಲಿ ಕಾವೇರಿ ಕಪಿಲಾ ನದಿ ಕಣಿವೆ ಪ್ರದೇಶ ಗಳಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಪುನರುಜ್ಜೀವನ ಉಂಟಾಯಿತು. ಮತ್ತು ಇದೇ ಸತ್ಸಂಪ್ರದಾಯವನ್ನು ವಿಜಯನಗರ ಸಾಮ್ರಾಜ್ಯದ ಪತನಾನಂತರ ಈ ಪ್ರದೇಶಗಳಲ್ಲಿ ರಾಜಕೀಯವಾಗಿ ಪ್ರವರ್ಧಮಾನಕ್ಕೆ ಬಂದ ಮೈಸೂರು ಒಡೆಯರು ಮತ್ತು ಇತರೆ ಸಣ್ಣಪುಟ್ಟ ಸ್ಥಳೀಯ ಪ್ರಭುಗಳು ಮುಂದುವರಿಸಿಕೊಂಡು ಹೋದರು.

ಟಿಪ್ಪಣಿಗಳು

1. ಎ.ವಿ. ವೆಂಕಟರತ್ನಂ, ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ, ಮೈಸೂರು 1974, ಪು. 10.
2. ಎ.ಕ. ಸಂ. 7 - ಮಂ - 19 ಎ.ಕ.ಸಂ 4, ಕೊಗಾ - 23, 57 ಮತ್ತು 62, ಯಳಂ - 155
3. ಅದೇ, ಮಂ - 93
4. ಎ.ಕ. ಸಂ 4, ಚಾನ - 260, 264, ಎ.ಕ. ಸಂ. 5, ಕೃ.ನ. 77, ಮಂ - 19
5. ಎ.ಕ.ಸಂ 4 ಚಾನ - 221
6. ಎ.ಕ. ಸಂ. 3, ಗುಪೇ - 26 ಮತ್ತು 176 ಮತ್ತು ಎಂ.ಎಲ್. ಶಂಕರ್ (ಸಂ)., ವಿಜಯನಗರ ಅಧ್ಯಯನ ಸಂ. -2, ಮೈಸೂರು, 1997, ಪು. 124
7. ಎ.ಕ.ಸಂ. 4, ಚಾ.ನ. 162, 224, 387,ಕೊಗಾ - 82, 83, ಎ.ಕ. ಸಂ 7, ನಾಮಂ - 1
8. ಎಂ.ಎಲ್. ಶಿವಶಂಕರ್ (ಸಂ.), ವಿಜಯನಗರ ಅಧ್ಯಯನ ಸಂ. - 2, ಮೈಸೂರು 1997, ಪು. 124
9. ಎ.ಕ.ಸಂ. 4, ಚಾ.ನ. 177 ಮತ್ತು 254, ಕೊಗಾ - 1

೩೯. ಗುರುವಂಶ ಕಾವ್ಯದಲ್ಲಿ ವಿಜಯನಗರ ಉಲ್ಲೇಖಗಳು - ಒಂದು ಅಧ್ಯಯನ

ಜಯದೇವಪ್ಪ ಜೈನಕೇರಿ

ಕನ್ನಡ ಬಾಷೆಯಲ್ಲಿ ಚರಿತ್ರ ಕಾವ್ಯಗಳು ವಿರಳ. ಸಂಸ್ಕೃತ ಭಾಷೆಯಲ್ಲಿ ಬಾಣನ ಹರ್ಷ ಚರಿತ್ರೆ, ಪದ್ಮಗುಪ್ತ ಪರಿಮಳನ ನವಸಾಹಸಾಂಕಚರಿತೆ, ಬಿಲ್ಹಣನ ವಿಕ್ರಮಾಂಕ ಚರಿತೆ, ಕಲ್ಹಣನ ರಾಜ ತರಂಗಿಣಿ, ಗಂಗಾದೇವಿಯ ಮಧುರಾ ವಿಜಯಂ, ಹೇಮ ಚಂದ್ರನ ಕುಮಾರಪಾಲಚರಿತೆ ಮುಂತಾದವು ಗಮನಾರ್ಹ ಚರಿತ್ರ ಕಾವ್ಯಗಳು. ಆಶ್ರಯದಾತ ದೊರೆಯನ್ನು ಆತನ ವಂಶವನ್ನು ಚರಿತ್ರೆಯ ಚೌಕಟ್ಟಿನಲ್ಲಿ ಕವಿಗಳೂ ದಾಖಲಿಸಿದ್ದಾರೆ. ಇವುಗಳಲ್ಲಿ ಚಾರಿತ್ರಿಕ ಅಂಶಗಳು ಗೌಣವಾಗಿಯೂ, ಪ್ರಶಂಸೆ, ವರ್ಣನೆಗಳು, ಪ್ರಧಾನವಾಗಿ ಚಿತ್ರಿತವಾಗಿದೆ. ಈ ಮಠದಲ್ಲಿ ದೊರಕಿರುವ ಪ್ರಾಚೀನ ಹಸ್ತಪ್ರತಿ ರೂಪದ ಗುರುವಂಶಕಾವ್ಯ (ಸಂಸ್ಕೃತ ಭಾಷೆ) ಕಾಶೀ ಲಕ್ಷ್ಮಣ ಶಾಸ್ತ್ರಿ ವಿರಚಿತ ಕಾವ್ಯ ವನ್ನು ಪರಿಶೀಲಿಸುವ ಪ್ರಯತ್ನ ಮಾಡಲಾಗಿದೆ. ಕ್ರಿ.ಶ. ೧೭೩೫ರಲ್ಲಿ ರಚನೆ ಯಾಗಿರುವ ಸಂಸ್ಕೃತ ಗುರುವಂಶಕಾವ್ಯವನ್ನು ಶೃಂಗೇರಿ ಮಠವು ೧೯೬೬ರಲ್ಲಿ ಮುದ್ರಿಸಿದೆ. ಈ ಗ್ರಂಥದಲ್ಲಿ ೧೯ ಸರ್ಗಗಳಿವೆ. ಮೊದಲ ೮ ಸರ್ಗಗಳಲ್ಲಿ ವಿಜಯ ನಗರ ಅರಸರಿಗೆ ಸಂಬಂಧಿಸಿದ ಚಾರಿತ್ರಿಕ ಅಂಶಗಳಿವೆ. ಈ ಕೃತಿಯಲ್ಲಿ ಪ್ರತಿ ಅಧ್ಯಾಯನದ ಕೊನೆಯಲ್ಲಿರುವ ಇಂಗ್ಲಿಷ್ ಟಿಪ್ಪಣಿಗಳನ್ನು ಆಧರಿಸಿ ಈ ಪ್ರಬಂಧ ವನ್ನು ಮಂಡಿಸುತ್ತೇನೆ.

ಕ್ರಿ.ಶ. ೧೭೦೬ರಿಂದ ೧೭೪೧ರವರೆಗೆ ಶೃಂಗೇರಿ ಮಠದ ಪೀಠಾಧಿಪತಿಗಳಾಗಿದ್ದ ಶ್ರೀ ಸಚ್ಚಿದಾಂದ ಭಾರತೀ ಸ್ವಾಮಿಗಳವರ ಆಸ್ಥಾನ ವಿದ್ವಾಂಸರಾಗಿದ್ದ ಶ್ರೀ ಕಾಶಿ ಲಕ್ಷ್ಮಣಶಾಸ್ತ್ರಿಗಳಿಂದ ಸು. ಕ್ರಿ.ಶ. ೧೭೩೫ರಲ್ಲಿ ರಚಿತವಾಗಿರುವ ಗುರುವಂಶ ಮಹಾಕಾವ್ಯದಲ್ಲಿ, ಪ್ರಕೃತಿ ಸೌಂದರ್ಯ, ಗುಡ್ಡ,ಕಾಡು,ನದಿ, ಬೆಟ್ಟಗಳ ವರ್ಣನೆ ಯೊಂದಿಗೆ ಅಂದಿನ ನಗರಗಳು, ದೇವಾಲಯಗಳು ಮತ್ತು ಉದ್ಯಾನಗಳ ಸುಂದರ ವರ್ಣನೆಯೂ ಇದೆ. ಈ ಕೃತಿಯನ್ನು ಕಾವ್ಯವೆಂದು ಕರೆದಿದ್ದರೂ, ಇದೊಂದು ಚಾರಿತ್ರಿಕ ಕಾವ್ಯ. ಶ್ರೀ ಭಾರತಿ ತೀರ್ಥರು, ಶ್ರೀ ವಿದ್ಯಾರಣ್ಯರು, ಶ್ರೀ ರೇಣುಕಾ ಚಾರ್ಯರು ವಿಜಯ ನಗರ ರಾಜ್ಯ ಸ್ಥಾಪಕರಾದ ಹಕ್ಕ ಬುಕ್ಕರ ಚಾರಿತ್ರಿಕ ಸಂಗತಿಗಳು ಈ ಗ್ರಂಥದಲ್ಲಿ ಉಲ್ಲೇಖವಾಗಿವೆ. ಕರ್ನಾಟಕ ರಾಜ್ಯದ ಅನೇಕ ಚಾರಿತ್ರಿಕ ಅಂಶಗಳು ಈ ಕಾವ್ಯದಲ್ಲಿ ದಾಖಲಾಗಿವೆ.

ಗುರುವಂಶ ಕಾವ್ಯದಲ್ಲಿ ಉಲ್ಲೇಖವಾಗಿರುವಂತೆ, ಸಾಯಣ ಮತ್ತು ಮಾಧವರು ಶ್ರೀ ವಿದ್ಯಾರಣ್ಯಲ್ಲಿ ಸಂತಾನ ಪ್ರಾಪ್ತಿಗಾಗಿ ಪ್ರಾರ್ಥಿಸುತ್ತಾರೆ. ವಾರಂಗಲ್‌ಲ್ಲಿ ಆಳುತ್ತಿದ್ದವರು ವೀರರುದ್ರ ಅಥವಾ ಕಾಕತೀಯ ಪ್ರತಾಪರುದ್ರ II ಎಂಬ ಅರಸು. ಈತನಲ್ಲಿ ಹರಿಹರ ಮತ್ತು ಬುಕ್ಕರು ಸೇವೆ ಸಲ್ಲಿಸುತ್ತಿರುತ್ತಾರೆ. ಕ್ರಿ.ಶ. ೧೩೨೩ರಲ್ಲಿ ಮುಸ್ಲಿಂರೊಂದಿಗಿನ ಯುದ್ಧದಲ್ಲಿ ವೀರರುದ್ರ ಸೋಲುತ್ತಾನೆ. ಹರಿಹರ ಮತ್ತು ಬುಕ್ಕರು ಮುಸ್ಲಿಂ ಸೈನಿಕರ ಯುದ್ಧ ಕೈದಿಗಳಾಗುತ್ತಾರ. ಈ ಕಾವ್ಯದಲ್ಲಿ ಉಲ್ಲೇಖವಾಗಿರುವ ರಾಮನಾಥನೇ, ಕಂಪಲಿಯ ರಾಮನಾಥ. ಈ ಕಂಪಿಲನೂ ೧೩೨೭ರ ಯುದ್ಧದಲ್ಲಿ ಸೋಲುತ್ತಾನೆ. ನಂತರ ನಡೆದ ಹೊಯ್ಸಳ ಬಲ್ಲಾಳ IIIನೊಂದಿಗೆ ನಡೆದ ಮೊದಲ ಯುದ್ಧದಲ್ಲಿ ಹರಿಹರ ಸೋಲುತ್ತಾನೆ. ನಂತರ ನಡೆದ ಎರಡನೇ ಯುದ್ಧ ದಲ್ಲಿ ಬಲ್ಲಾಳ IIIನ ಮೇಲೆ ವಿಜಯ ಸಾಧಿಸುತ್ತಾನೆ.

ಪ್ರಾಚೀನವಾಗಿ ವಾರಂಗಲ್‌ಗೆ ಏಕಶಿಲಾನಗರವೆಂಬ ಹೆಸರಿತ್ತು. ವಾರಂಗಲ್‌ನ ಇಬ್ಬರು ಬ್ರಾಹ್ಮಣ ಯುವಕರು ಶ್ರೀ ವಿದ್ಯಾತೀರ್ಥರಿಂದ ಸನ್ಯಾಸ ದೀಕ್ಷೆ ಸ್ವೀಕರಿಸುತ್ತಾರೆ. ಇವರೇ ಶ್ರೀ ಭಾರತೀ ತೀರ್ಥ ಮತ್ತು ವಿದ್ಯಾರಣ್ಯರು. ವಿದ್ಯಾರಣ್ಯರ ಗುರುಗಳು ಬಾದರಾಯಣರು. ಮಕ್ಕಳಿಲ್ಲದಿದ್ದ ಸಾಯಣ ಮತ್ತು ಮಾಧವರಿಗೆ ವಿದ್ಯಾರಣ್ಯರು ಅನೇಕ ವಿದ್ಯೆಗಳನ್ನು ಕಲಿಸುತ್ತಾರೆ. ವೇದ ಭಾಷ್ಯ, ಧಾತುವೃದ್ಧಿ, ನ್ಯಾಯಮಾಲ ಮುಂತಾದ ವಿದ್ಯೆಗಳಲ್ಲಿ ಪಾರಂಗತರನ್ನಾಗಿಸಿದರು. ಇವರ ರಚನೆಗಳು ಸಾಯಣೀ ಯಮ್ ಮತ್ತು ಮಾಧವೀಯಮ್ ಎಂದು ಪ್ರಸಿದ್ಧವಾಗಿವೆ.

ಗುರುವಂಶ ಕಾವ್ಯದ ಪುಟ ೪೧ರಲ್ಲಿ ಉಲ್ಲೇಖವಾಗಿರುವಂತೆ, ವೀರಶೈವರ ಐದು ಆಚಾರ್ಯರಲ್ಲಿ ಒಬ್ಬರಾದ ರೇವಣಸಿದ್ಧರು ಅಥವಾ ರೇಣುಕಾಚಾರ್ಯರ ಉಲ್ಲೇಖವಿದೆ. ಇವರು ಬಸವಣ್ಣನವರ (೧೧೨೫-೬೫) ಸಮಕಾಲೀನರಲ್ಲ. ಆತನಿಗಿಂತ ಸ್ವಲ್ಪ ಮೊದಲು ಅಥವಾ ನಂತರದವರು ಎಂಬುದೂ ಸರಿಯಲ್ಲ. ಶ್ರೀ ರೇವಣಸಿದ್ಧರು, ಹರಿಹರನೂ ಚಕ್ರವರ್ತಿಯಾಗಿ ರಾಜ್ಯವಾಳುತ್ತಾನೆಂಬ ಭವಿಷ್ಯ ನುಡಿಯುತ್ತಾರೆ, ಮತ್ತು ವಿದ್ಯಾರಣ್ಯರ ಆಶೀರ್ವಾದ ಪಡೆದು ಚಂದ್ರಮೌಳೀಶ್ವರ ಲಿಂಗ ಪೂಜಿಸುವಂತೆ ಹರಿಹರನಿಗೆ ಬೋಧಿಸುತ್ತಾರೆ. ಇದು ಬಹುಶಃ ಉತ್ಪ್ರೇಕ್ಷೆ ಇರಬಹುದು. ಶೃಂಗೇರಿ ಮಠದಲ್ಲಿರುವ ಲಿಂಗವನ್ನು ಪೂಜಿಸುವಂತೆಯೂ ಹರಿಹರ ನಂತರ ೩೩ ರಾಜರು, ರಾಜ್ಯವಾಳುತ್ತಾರೆಂದೂ ರೇವಣಸಿದ್ಧರು ತಿಳಿಸುತ್ತಾರೆಂಬ ಉಲ್ಲೇಖವಿದೆ. ಹರಿಹರ ತನ್ನ ಎಲ್ಲ ರಾಜತ್ವದ ವೈಭವವನ್ನು ಶ್ರೀ ವಿದ್ಯಾರಣ್ಯರಿಗೆ ಅರ್ಪಿಸುತ್ತಾರೆ. ಅಂದಿನಿಂದ ಶೃಂಗೇರಿ ಜಗದ್ಗುರುಗಳಿಗೆ ಕರ್ನಾಟಕ ಸಿಂಹಾಸನ ಸ್ಥಾಪಕಾಚಾರ್ಯ ಎಂದು ಕರೆಯುವ ವಾಡಿಕೆ ಬಂದಿದೆ ಎಂಬ ಉಲ್ಲೇಖಗಳಿವೆ.

ಹರಿಹರನಿಗೆ ಪಟ್ಟಕಟ್ಟಿದ ನಂತರ ಆತನಿಗೆ ಆಶೀರ್ವದಿಸಿ, ವಿದ್ಯಾರಣ್ಯರು ವಿಜಯ ನಗರ ತೊರೆದು ಕೇದಾರ, ವಾರಣಾಸಿ ಮುಂತಾದ ಸ್ಥಳಗಳಿಗೆ ಯಾತ್ರೆ ಹೊರಡುತ್ತಾರೆಂಬ ಉಲ್ಲೇಖವಿದೆ. ಇದರಿಂದಾಗಿ ಶ್ರೀ ವಿದ್ಯಾರಣ್ಯರು ರಾಜಾಸ್ಥಾನದಲ್ಲಿ ಮಂತ್ರಿಗಳಾಗಿ ಹರಿಹರನಿಗೆ ಮಾರ್ಗದರ್ಶನ ಮಾಡುತ್ತಿದ್ದರು ಎಂಬ ನಂಬಿಕೆಗೆ ವಿರುದ್ಧವಾಗಿದೆ ಎನ್ನಬಹುದು. ಶ್ರೀ ವಿದ್ಯಾರಣ್ಯರ ಕುರಿತು ಹರಿಹರನಿಗಿದ್ದ ಪೂಜ್ಯಭಾವದಿಂದಾಗಿ ತನ್ನ ಆಸ್ಥಾನದ ಮಂತ್ರಿಯನ್ನಾಗಿ ಮಾಡಿ ಕೊಂಡಿರಲಾರ ಎಂಬ ಉಲ್ಲೇಖವಿದೆ. ಈಗ ವಾರಣಾಸಿಯಲ್ಲಿರುವ ಎರಡು ಶೃಂಗೇರಿ ಮಠಗಳು ಶ್ರೀ ವಿದ್ಯಾರಣ್ಯರಿಂದ ಸ್ಥಾಪಿತ ವಾಗಿವೆ ಎಂದು ತಿಳಿದುಬರುತ್ತದೆ. ಬುಕ್ಕನ ಮಂತ್ರಿಯಾಗಿದ್ದ ಮಾಧವಾಮಾತ್ಯನು, ಪಶ್ಚಿಮ ಪ್ರಾಂತ್ಯಗಳ ರಾಜ್ಯಪಾಲನಾಗಿದ್ದ ಚಾವುಂಡ ಮತ್ತು ಮಾಚಾಂಬಿಕೆಯ ಪುತ್ರ. ಸಾಯಣನ ಸಹೋದರ ಮಾಧವನೇ ಬೇರೆ. ಮಾಧವ, ಸಾಯಣ ಭೋಗನಾಥರು, ಮಾಯಣ ಮತ್ತು ಶ್ರೀಮತಿ ಅವರ ಪುತ್ರರು ಎಂಬ ಉಲ್ಲೇಖ ೬ನೇ ಸರ್ಗದಲ್ಲಿದೆ.

ಶ್ರೀ ಭಾರತೀ ತೀರ್ಥರು ೧೩-೮-೧೩೯೦ರಲ್ಲಿ ವಿದೇಹ ಮುಕ್ತಿ ಹೊಂದಿದರೆಂದೂ ಬುಕ್ಕನೂ ಸ್ವಲ್ಪ ದಿನಗಳಲ್ಲೆ (೧೩೮೦) ನಿಧನನಾದನೆಂಬ ಉಲ್ಲೇಖವಿದೆ. ಕೆಲವು ಚರಿತ್ರಕಾರರು ಬುಕ್ಕನು ೧೩೭೭ರಲ್ಲಿ ರಾಜ್ಯಾಧಿಕಾರವನ್ನು ಹರಿಹರ II ವಹಿಸಿದನೆಂದೂ ಇಲ್ಲಿ ಕೆಲವು ಸಂಗತಿಗಳು ಪ್ರಚಲಿತ ವಿದ್ವಾಂಸರ ಅಭಿಪ್ರಾಯಗಳಿಗೆ ವಿರುದ್ಧವಾಗಿವೆ, ಎಂಬುದು ಗಮನಾರ್ಹ ಸಂಗತಿ. ೧೩೮೦ರಲ್ಲಿ ಶ್ರೀ ವಿದ್ಯಾರಣ್ಯರು ಹರಿಹರ IIನಿಗೆ ಕಿರೀಟಧಾರಣೆ ಮಾಡಿದರೆಂಬ ಉಲ್ಲೇಖವಿದೆ.

ಹರಿಹರ (೧೩೩೬-೫೭), ಬುಕ್ಕ (೧೩೪೪-೧೩೭೭), ಹರಿಹರ II (೧೩೭೭-೧೪೦೭) ಎಂದೂ, ಇವರು ಜಂಟಿಯಾಗಿ ಆಳಿರಬಹುದೆಂದು ಕಾವ್ಯಕರ್ತೃ ಹೇಳಿದ್ದಾರೆ. ಹರಿಹರ II ಶೃಂಗೇರಿ ಮಠಕ್ಕೆ ದಾನದತ್ತಿ ನೀಡಿದ ಉಲ್ಲೇಖಗಳಿವೆ. ಶೃಂಗೇರಿ ಗುರುಗಳ ಕಾಲಮಾನ ತಿಳಿಸುವ ಪಟ್ಟಿಯೂ ಇದೆ. ಕ್ರಿ.ಶ. ೧೩೪೬ರಲ್ಲಿ ಒಂದನೇ ಹರಿಹರ, ಒಂದನೇ ಬುಕ್ಕ ಮತ್ತು ಆತನ ಮೂವರು ಸಹೋದರರು ಶೃಂಗೇರಿಗೆ ಆಗಮಿಸಿ ಶ್ರೀ ವಿದ್ಯಾಶಂಕರ ದೇವಾಲಯದಲ್ಲಿ ವಿಜಯೋತ್ಸವ ಆಚರಿಸಿದರೆಂಬ ಉಲ್ಲೇಖವಿದೆ. ಶೃಂಗೇರಿಯಲ್ಲಿ ಶ್ರೀ ವಿದ್ಯಾರಣ್ಯರು ಭೈರವ, ದುರ್ಗಾ, ಹನುಮಾನ್ ಮತ್ತು ಕಾಳಿಕಾ ಪರಿವಾರ ದೇವತೆಗಳನ್ನು ಸ್ಥಾಪಿಸಿದರೆಂದು ತಿಳಿದು ಬರುತ್ತದೆ. ಶ್ರೀ ವಿದ್ಯಾರಣ್ಯರು ಹರಿಹರನಿಗೆ ಆಧ್ಯಾತ್ಮಿಕ ವಿದ್ಯೆಯನ್ನು ಬೋಧಿಸಿದರೆಂದೂ, ಕ್ರಿ.ಶ. ೧೩೮೬ರಲ್ಲಿ ಶ್ರೀ ವಿದ್ಯಾರಣ್ಯರು ವಿದೇಹ ಮುಕ್ತಿಯನ್ನು ಪಡೆದರೆಂದು ಗುರುವಂಶ ಕಾವ್ಯದಲ್ಲಿ ಉಲ್ಲೇಖವಾಗಿದೆ. ಕ್ರಿ.ಶ. ೧೩೫೬ರಲ್ಲಿ ೧ನೇ ಬುಕ್ಕನೂ, ಕ್ರಿ.ಶ. ೧೩೮೦ರಲ್ಲಿ ಎರಡನೇ ಹರಿಹರನೂ ಅನೇಕ ದಾನದತ್ತಿಗಳನ್ನು ನೀಡಿದ್ದಾರೆ. ಹಿಂದಿನ ಕೊಡುಗೆಗಳನ್ನು ನವೀಕರಿಸಿದ್ದಾರೆ. ೧೩೮೭ರಲ್ಲಿ ಎರಡನೇ ಹರಿಹರನು ದತ್ತಿ ನೀಡಿ ಅವುಗಳಿಗೆ ವಿದ್ಯಾರಣ್ಯಪುರದತ್ತಿ ಎಂದು ಹೆಸರಿಸಿರುವುದು ಗಮನಾರ್ಹ ಸಂಗತಿ.

ಶ್ರೀ ವಿದ್ಯಾರಣ್ಯರ ಸಮಾಧಿ ಪಂಪಾಪುರದಲ್ಲಿದೆ ಎಂದೂ, ಅಲ್ಲಿರುವ ವಿದ್ಯಾರಣ್ಯರ ಮೂರ್ತಿ ಇಂದಿಗೂ ಪೂಜೆಗೊಳ್ಳುತ್ತಿದೆ ಎಂದು ಕವಿ ದಾಖಲಿಸಿದ್ದಾನೆ. ಶೃಂಗೇರಿಯಲ್ಲಿರುವ ವಿದ್ಯಾರಣ್ಯ ದೇವಾಲಯ ಅವರ ನೆನಪಿಗಾಗಿ ನಿರ್ಮಿಸಿರಬಹು ದೆಂದು ಗುರುವಂಶ ಕಾವ್ಯದಲ್ಲಿ ಉಲ್ಲೇಖವಾಗಿದೆ.

ಗುರುವಂಶ ಕಾವ್ಯ ಕ್ರಿ.ಶ. ೧೭೩೫ರಲ್ಲಿ ರಚಿತವಾಗಿದ್ದರೂ, ಶೃಂಗೇರಿ ಮತ್ತು ವಿಜಯನಗರ ಸಂಬಂಧಗಳು ೧೩೮೬-೮೭ರವರೆಗೆ ಮಾತ್ರ ಈ ಕಾವ್ಯದಲ್ಲಿ ದಾಖಲಾಗಿರುವುದು ೮ನೇ ಸರ್ಗದವರೆಗೆ ಕಂಡುಬರುತ್ತದೆ. ನಂತರದ ಅನೇಕ ವಿಜಯನಗರ ಅರಸರು ಶೃಂಗೇರಿ ಜಗದ್ಗುರುಗಳೊಂದಿಗೆ ಇಟ್ಟುಕೊಂಡ ಸಂಬಂಧ, ದಾನದತ್ತಿಗಳ ವಿವರಗಳು ಇಲ್ಲಿ ದಾಖಲಿಸಿಲ್ಲವೆಂಬುದು ವಿಸ್ಮಯವನ್ನುಂಟುಮಾಡುತ್ತದೆ.

೯ನೇ ಸರ್ಗದಿಂದ ಕೆಳದಿ ರಾಜ್ಯ ಸ್ಥಾಪನೆ, ಕೆಳದಿ ಅರಸರು ಮತ್ತು ಶೃಂಗೇರಿ ಮಠದ ಸಂಬಂಧಗಳನ್ನು ಕುರಿತು ಉಲ್ಲೇಖಗಳಿವೆ. ಕ್ರಿ.ಶ. ೧೫೦೦-೧೭೩೫ರವರೆಗಿನ ಶೃಂಗೇರಿ ಮಠದ ಯತಿಗಳ ಪಟ್ಟಿ, ಕೆಳದಿ ರಾಜ್ಯದ ಅನೇಕ ಸಂಗತಿಗಳು, ಶ್ರೀರಂಗಪಟ್ಟಣದ ಶ್ರೀ ಕೃಷ್ಣ ರಾಜ ಒಡೆಯರ (೧೭೩೪-೧೭೩೫) ಉಲ್ಲೇಖಗಳು ೧೯ ನೇ ಸರ್ಗ ದವರೆಗೆ ಕಂಡು ಬರುತ್ತವೆ. ವಿಜಯನಗರ ಸಾಮ್ರಾಜ್ಯದ ಉದಯ ಮತ್ತು ಆರಂಭದ ೫೦ ವರ್ಷಗಳ ಸಂಗತಿಗಳನ್ನು ಮಾತ್ರ ತಿಳಿಸುವ ಗುರುವಂಶ ಕಾವ್ಯದಲ್ಲಿ ಉಲ್ಲೇಖವಾಗಿರುವ ಅನೇಕ ಸಂಗತಿಗಳು, ಪ್ರಚಲಿತ ದಿನಗಳಲ್ಲಿ ಒಪ್ಪಿತವಾಗಿರುವ ಕೆಲವು ಸಂಗತಿಗಳಿಗೆ, ಅಭಿಪ್ರಾಯಗಳಿಗೆ ಭಿನ್ನವಾಗಿದ್ದು ಈ ಕುರಿತು ಗುರುವಂಶ ಕಾವ್ಯದ ಪೂರ್ಣ ಅಧ್ಯಯನ ನಡೆಯಬೇಕಾಗಿದೆ.

ವೀರಶೈವ ಪಂಚ ಆಚಾರ್ಯದಲ್ಲಿ ಒಬ್ಬರಾದ ರೇವಣಸಿದ್ಧರು ಅಥವಾ ರೇಣುಕಾಚಾರ್ಯರ ಕಾಲಮಾನ ಕುರಿತು ಚರ್ಚಿತವಾಗುತ್ತಿರುವ ಸಂದರ್ಭದಲ್ಲಿ ಕ್ರಿ.ಶ. ೧೩೩೬ರಲ್ಲಿ ಒಂದನೇ ಹರಿಹರನಿಗೆ, ಶ್ರೀ ವಿದ್ಯಾರಣ್ಯರ ಆಶೀರ್ವಾದದಿಂದ ಚಂದ್ರಮೌಳೀಶ್ವರ ಲಿಂಗವನ್ನು ಪೂಜಿಸಿ ಸಾಮ್ರಾಜ್ಯವನ್ನು ಸ್ಥಾಪಿಸಲು ಬೋಧಿಸಿದರೆಂಬ ಸಂಗತಿ ಪಂಚಾಚಾರ್ಯರ ಪ್ರಾಚೀನತೆ ಕುರಿತ ಅಧಿಕೃತ ದಾಖಲೆಯಾಗಬಹುದು. ಈ ಕುರಿತು ಇನ್ನೂ ಹೆಚ್ಚಿನ ಅಧ್ಯಯನ ನಡೆಯಬೇಕಾಗಿದೆ. ಈ ಹಿನ್ನೆಲೆಯಲ್ಲಿ ಶ್ರೀ ಕಾಶಿ ಲಕ್ಷ್ಮಣಶಾಸ್ತ್ರಿ ವಿರಚಿತ ಗುರುವಂಶ ಕಾವ್ಯದ (೧೭೩೫) ಸಮಗ್ರ ಅಧ್ಯಯನ ನಡೆಯಬೇಕಾಗಿದೆ ಮತ್ತು ವಿಜಯನಗರ ಸಾಮ್ರಾಜ್ಯ ಉದಯ ಕುರಿತು ಹೆಚ್ಚಿನ ಬೆಳಕು ಚೆಲ್ಲಬೇಕಾಗಿದೆ.

ಆಕರಗಳು

1. ಕಾಶಿ ಲಕ್ಷ್ಮಣಶಾಸ್ತ್ರಿ - ಗುರುವಂಶಕಾವ್ಯ (ಸಂಸ್ಕೃತ) 1735. ಮುದ್ರಣ 1966 ಪ್ರ.ಶೃಂಗೇರಿ ಮಠ ಶ್ರೀರಂಗಮ್
2. ಎ.ಕೆ. ಶಾಸ್ತ್ರಿ ಡಾ.: ಶೃಂಗೇರಿ ಧರ್ಮ ಸಂಸ್ಥಾನ 1983 ಪ್ರ. ಶೃಂಗೇರಿ ಮಠ, ಶೃಂಗೇರಿ
3. ನಾಯಕ, ಹಾ.ಮಾ.ಡಾ. -ಸಂ. ವಿಷಯ ವಿಶ್ವಕೋಶ, 1979, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವ ವಿದ್ಯಾನಿಲಯ

೪೦. ವಿಜಯನಗರ ಸಾಮ್ರಾಜ್ಯದ ಧರ್ಮಸಮನ್ವಯ ನೀತಿಯ ದ್ಯೋತಕ ಗ್ರಂಥ ಮಾಧವಾರ್ಯರ ಸರ್ವದರ್ಶನ ಸಂಗ್ರಹ

ಡಾ.ಬೆಂ. ಶಾ. ಶ್ಯಾಮಲಾ ರತ್ನ ಕುಮಾರಿ

ಕರ್ನಾಟಕ ಧಾರ್ಮಿಕ ವೈವಿಧ್ಯತೆಯುಳ್ಳ ನಾಡು ಧರ್ಮೈಕ್ಯತೆಯ ಭಾವೈಕ್ಯತೆಯ ಬೀಡು. ಇಲ್ಲಿ ಆಳ್ವಿಕೆ ನಡೆಸಿದ ರಾಜರುಗಳು ಧರ್ಮಸಮನ್ವಯ ನೀತಿಯನ್ನು ಅನುಗಾಲವೂ ಅನುಸರಿಸುತ್ತಾ ಬಂದಿದ್ದಾರೆ. ಆದರೂ ಆಗಾಗ್ಗೆ ಧರ್ಮಸಂಘರ್ಷಗಳೂ ಮತೀಯ ಗಲಭೆಗಳೂ ತಲೆದೋರಿವೆ. ಜನಜೀವನದ ನೆಮ್ಮದಿಯನ್ನೂ ಸ್ವಾಸ್ಥ್ಯವನ್ನೂ ಕಲಕಿವೆ. ಅಂತಹ ಸಂದರ್ಭಗಳಲ್ಲಿ ಧರ್ಮಜಾಗೃತಿಯನ್ನೂ ಜನರಲ್ಲಿ ನೈತಿಕ ಆತ್ಮವಿಶ್ವಾಸ ವನ್ನೂ ಮತೀಯ ಮತ್ತು ದಾರ್ಶನಿಕ ಸೌಹಾರ್ದ ವಾತಾವಣವನ್ನು ಪುನರ್ ಸ್ಥಾಪಿಸಲೋಸುಗ ಪ್ರಯತ್ನಗಳೂ ನಡೆದಿವೆ. ಅಂತಹ ಒಂದು ಧಾರ್ಮಿಕ ಪರ್ವಕಾಲ ವಾಗಿತ್ತು ವಿಜಯನಗರದ ಸ್ಥಾಪನೆಯಾದ ೧೪ನೆಯ ಶತಮಾನತದ ಕಾಲಘಟ್ಟ. ದಕ್ಷಿಣ ಭಾರತವು, ವಿಧರ್ಮಿ ಮುಸ್ಲಿಮರ ಆಕ್ರಣಕ್ಕೆ ತುತ್ತಾಗಿತ್ತು. ವಿಜಯನಗರ ಸ್ವರಾಜ್ಯ, ಸ್ವಧರ್ಮ, ಸ್ವಜನರ ರಕ್ಷಣೆಗಾಗಿಯೇ ಸ್ಥಾಪನೆಗೊಂಡು, ಬೆಳೆದು ವಿನಾಶ ಗೊಂಡ ಸಾಮ್ರಾಜ್ಯ ವಾಗಿದೆ. ಸಾಮ್ರಾಜ್ಯ ಪತನಗೊಂಡು ಅರಸೊತ್ತಿಗೆ ಅಳಿದು ಪ್ರಜಾಪ್ರಭುತ್ವವು ಇಂದು ದೇಶದಲ್ಲಿ ನೆಲೆಗೊಂಡಿದ್ದರೂ ಅಂದಿನ ಸರ್ವಧರ್ಮ, ದರ್ಶನ ಸಮನ್ವಯ ರಾಜ ನೀತಿಯು ಇನ್ನಷ್ಟು ಹೆಚ್ಚಾಗಿ ಪ್ರಸ್ತುತತೆಯನ್ನು ನಡೆದಿದೆ ಎಂದು ಹೇಳಬಹುದಾಗಿದೆ. ವರ್ತಮಾನಿಕ ಜ್ಞಾನಯುಗದಲ್ಲಿ ವೈಚಾರಿಕತೆಯ ಹಾಗೂ ಬೌದ್ಧಿಕ ಪ್ರಖರತೆಯ ನಿಜವಾದ ಆಳವನ್ನು ತಿಳಿಯಬೇಕಾದರೆ ನಾವು ದಾರ್ಶನಿಕ ಗ್ರಂಥಗಳನ್ನೇ ಅಧ್ಯಯನಕ್ಕೆ ಅಳವಡಿಸಬೇಕಾಗುತ್ತದೆ. ಹೀಗಾಗಿ ಪ್ರತಿಯೊಂದು ದರ್ಶನದಲ್ಲೂ, ತತ್ವಜ್ಞಾನದ ಸಮಸ್ಯೆ ಗಳನ್ನು ಮಥನಮಾಡಿರುವ ನೂರಾರು ಗ್ರಂಥಗಳು ಹುಟ್ಟಿಕೊಂಡಿವೆ. ಅವೆಲ್ಲವನ್ನೂ ಬಿಡಿಬಿಡಿಯಾಗಿಯಾಗಲೀ ಆಮೂಲಾಗ್ರವಾಗಿಯಾಗಲೀ ಅಭ್ಯಸಿಸುವುದು ದುಸ್ತರವೇ ಸರಿ. ಆದ್ದರಿಂದ ಎಲ್ಲ ದರ್ಶನಗಳಿಗೂ ಸಮಾನವಾದ ಮೂಲಭೂತ ಅಂಶಗಳನ್ನು ಹಾಗೂ ಪರಸ್ಪರ ಅವುಗಳಿಗಿರುವ ಸಾಮ್ಯ - ವೈಷಮ್ಯಗಳನ್ನು ಸಂಗ್ರಹವಾಗಿ ತಿಳಿಸುವ ದಾರ್ಶನಿಕ ಗ್ರಂಥಗಳಲ್ಲಿ ಸರ್ವದರ್ಶನ ಸಂಗ್ರಹದ ಸ್ಥಾನ ಬೃಹತ್ತು - ಮಹತ್ತು ಈ ಎಲ್ಲ ದೃಷ್ಟಿಗಳಿಂದ ಹಿರಿದಾದುದು. ಭಾರತೀಯ ತತ್ತ್ವಶಾಸ್ತ್ರದ ವಿವಿಧ ಮುಖಗಳನ್ನು ಚಿತ್ರಿಸಿರುವ ಮೌಲಿಕ ಕೃತಿ ಇದಾಗಿದೆ. ತತ್ತ್ವಜಿಜ್ಞಾಸುಗಳಿಗೆ ಅತ್ಯುಪಯುಕ್ತವಾದ ಸಂಸ್ಕೃತ

ದಾರ್ಶನಿಕ ಸಾಹಿತ್ಯದ ಏಕೈಕ ಕೃತಿ ಮಾಧವಾರ್ಯನ ಸರ್ವದರ್ಶನ ಸಂಗ್ರಹ. ಸರ್ವ ದರ್ಶನ ಸಂಗ್ರಹ ಗ್ರಂಥದ ಕರ್ತೃವಿನ ಬಗ್ಗೆದೀರ್ಘ ಚರ್ಚೆಯು ನಡೆದಿದೆ. ಗ್ರಂಥ ಕರ್ತೃವಿನ ಹೆಸರು ಮಾಧವ. ಈ ಮಾಧವನು ವಿದ್ಯಾರಣ್ಯರೆಂದು ಪ್ರಸಿದ್ಧರಾದ ಶೃಂಗೇರಿ ಶಾರದಾ ಪೀಠಾಧೀಶ ರಾಗಿದ್ದವರೋ? ಅಥವಾ ಬುಕ್ಕನ ಮಂತ್ರಿಯಾಗಿದ್ದ ಮಾಧವನೋ ಅಥವಾ ಸಾಯಣರ ಮಗ ಮಾಧವನೋ ಎಂಬುದು ಚರ್ಚೆಯ ಗ್ರಾಸವಾದ ವಿಷಯ. ವಿದ್ಯಾರಣ್ಯರ ಪೂರ್ವಾಶ್ರಮದ ಹೆಸರು ಮಾಧವಾಚಾರ್ಯ ಎಂದು. ಸಾಯಣನ ಮಗ ಮಾಧವಾರ್ಯ. ಗ್ರಂಥದ ಪ್ರಾರಂಭದಲ್ಲಿನ ಶ್ಲೋಕ 'ಶ್ರೀಮತ್ಸಾಯಣದುಗ್ಧಾಬ್ಧಿಕೌಸ್ತುಭೇನ ಮಹೌಜಸಾ | ಕ್ರಿಯತೇ ಮಾದವಾರ್ಯೇಣ ಸರ್ವದರ್ಶನ ಸಂಗ್ರಹಃ ||೨||

ಸರ್ವದರ್ಶನ ಸಂಗ್ರಹಗ್ರಂಥ ಕರ್ತೃ ಸಾಯಣಾಚಾರ್ಯರ ವಂಶಜ (ಮಗ) ಮಾಧವಾರ್ಯನೇ ಎಂಬುದನ್ನು ಖಚಿತವಾಗಿ ಪ್ರತಿಪಾದಿಸುತ್ತದೆ. ಈ ಅಭಿಪ್ರಾಯ ವನ್ನೇ ಆರ್. ನರಸಿಂಹಾಚಾರ್ಯರು ದೃಢವಾಗಿ ಹೇಳಿದ್ದಾರೆ.

ವಿಜಯನಗರ ಸಾಮ್ರಾಜ್ಯದ ಉದಯದ ಕಾಲದ ಮೊದಲ ಮೂವರು ಅರಸ ರಾದ ಹರಿಹರ I, ಬುಕ್ಕ I ಮತ್ತು ಹರಿಹರ III ಧರ್ಮಜಾಗೃತಿ, ಧರ್ಮರಕ್ಷಣೆಗಾಗಿ ಟೊಂಕಕಟ್ಟಿ ನಿಂತು ಅಂದಿನ ಪ್ರಸಿದ್ಧ ವಿದ್ವಾಂಸರೆನಿಸಿದ್ದ, ಹಂಪೆಯ ಪರಿಸರದಲ್ಲಿದ್ದ ಸೋದರತ್ರಯರಾದ ಮಾಧವಾಚಾರ್ಯ, ಸಾಯಣಾಚಾರ್ಯ ಮತ್ತು ಭೋಗ ನಾಥರನ್ನು ಸನಾತನ ಭಾರತೀಯ ಧಾರ್ಮಿಕ ಗ್ರಂಥಗಳಾದ ವೇದೋಪನಿಷತ್ತು ಸ್ಮೃತಿ ಶಾಸ್ತ್ರ ಗ್ರಂಥಗಳನ್ನು ಸರಳ ಸಂಸ್ಕೃತದಲ್ಲಿ ವಿವರಿಸಿ ತಿಳಿಸುವ ಭಾಷ್ಯ ಗ್ರಂಥಗಳನ್ನು ವಿವರಣಾ ಗ್ರಂಥಗಳನ್ನು ರಚಿಸಲು ನಿಯೋಜಿಸಿ ತಾವು 'ವೇದಮಾರ್ಗ ಪ್ರತಿಷ್ಠಾಪಕ', 'ವೈದಿಕ ಮಾರ್ಗಪ್ರತಿಷ್ಠಾಪನಾಚಾರ್ಯ' ಎಂಬ ಬಿರುದಿಗೆ ಪಾತ್ರರಾದರು. ವಿಜಯನಗರದ ಪ್ರಾರಂಭದ ಕಾಲದಲ್ಲಿ ಜೀವಿಸಿದ್ದ ವಿವಿಧ ದರ್ಶನಗಳ ಆಚಾರ್ಯರುಗಳಾದ ಅದ್ವೈತ ದರ್ಶನದ ಶೃಂಗೇರಿ ಪೀಠಾಧೀಶರಾಗಿದ್ದ ಭಾರತೀತೀರ್ಥರು, ದ್ವೈತದರ್ಶನದ ಪದ್ಮನಾಭ ತೀರ್ಥರು, ನರಹರಿತೀರ್ಥರು, ವಿಶಿಷ್ಟಾದ್ವೈತ ದರ್ಶನದ ವೇದಾಂತ ದೇಶಿಕರು, ತಿರುಮಲೆ ತಾತಾಚಾರ್ಯ, ಕಾಳಾಮುಖ ಶೈವ ಪಂಥದ ಕ್ರಿಯಾಶಕ್ತಿವಿಲಾಸ ಆಚಾರ್ಯರು, ಶೈವ ಆಚಾರ್ಯರಾಗಿದ್ದವರು ಹಾಗೂ ಮಾಧವಾರ್ಯರ ಗುರುಗಳಾಗಿದ್ದ ಸರ್ವ ವಿಷ್ಣು; ಕ್ರಾಂತಿಕಾರಿ ಶೈವ ಕವಿ ಹರಿಹರ, ರಾಘವಾಂಕ ಇವರೆಲ್ಲರ ಪ್ರಭಾವವೂ ಮಾಧವಾರ್ಯನ ಮೇಲೆ ಗಾಢವಾಗಿದ್ದುದರ ಪರಿಣಾಮ ರೂಪವೇ ಅಂದು ಪ್ರಚಲಿತವಿದ್ದ ಆದರೆ ಗೊಂದಲಕ್ಕೂ ಘರ್ಷಣೆಗೂ ಅವಕಾಶವಿತ್ತಿದ್ದ ವಿಭಿನ್ನ ದರ್ಶನಗಳ ತತ್ತ್ವಗಳನ್ನು ಸಂಗ್ರಹಿಸಿ ಪರಸ್ಪರ ಸಂಬಂಧವನ್ನು ಸಾಮ್ಯತೆ ವ್ಯತ್ಯಾಸಗಳೊಂದಿಗೆ ವಿವರಿಸಿ ಸತ್ಯ ಸಾಕ್ಷಾತ್ಕಾರವನ್ನು ಸಮನ್ವಯತೆಯ ದೃಷ್ಟಿಯಿಂದ ನೀಡುವಂಥ ಗ್ರಂಥ 'ಸರ್ವದರ್ಶನ ಸಂಗ್ರಹ.' ಹೊಯ್ಸಳ ಬಿಟ್ಟಿದೇವನು ಜೈನಮತದಿಂದ ಶ್ರೀ ವೈಷ್ಣವ ಮತಾನುಯಾಗಿ

ಪರಿವರ್ತಿತನಾಗಿ ವಿಷ್ಣುವರ್ಧನನಾದನು. ಆದರೆ ಅವನ ಪಟ್ಟಮಹಾದೇವಿ ಶಾಂತಲೆ ಜಿನಧರ್ಮದಲ್ಲೇ ಉಳಿದು ನಂತರ ಶ್ರೀವೈಷ್ಣವ ಕನ್ಯೆ ಲಕ್ಷ್ಮಿಯನ್ನು ವಿಷ್ಣುವರ್ಧನನು ವಿವಾಹವಾದನು. ಆ ಲಕ್ಷ್ಮಿಯ ಪುತ್ರನಾದ ನರಸಿಂಹನೇ ವಿಷ್ಣುವರ್ಧನನ ನಂತರ ಸಿಂಹಾಸನವನ್ನೇರಿದನು. ಇದರ ಪರಿಣಾಮ ಮತೀಯ ಸಂಘರ್ಷ ಜೈನ ಮತ್ತು ಶ್ರೀ ವೈಷ್ಣವ ಮತೀಯರ ನಡುವೇ ಉಂಟಾದದ್ದು, ರಾಜಪರಿವಾರದಲ್ಲೇ ಅದರ ಸೂಚನೆ ಕಂಡು ಬಂದಿತಾದ್ದರಿಂದಲೇ ಪ್ರಾಯಶಃ ಬೇಲೂರಿನ ವಿಜಯನಾರಾಯಣ ಅಥವಾ ಚನ್ನಕೇಶ್ವರ ದೇವಾಲಯದಲ್ಲಿ 'ಯಂ ಶೈವಾಸ್ಸಮುಪಾಸತೆ ಶಿವ ಇತಿ ಬ್ರಹ್ಮೇತಿ ವೇದಾಂತಿನೋ | ಬೌದ್ಧಾಃ ಬುದ್ಧ ಇತಿ ಪ್ರಮಾಣ ಪಟವಃ ಕರ್ತೇತಿ ನೈಯ್ಯಾಯಿಕಾಃ || ಅರ್ಹನ್ ಇತ್ಯಥ ಜೈನ ಶಾಸಣ ರತಾಃಕರ್ಮೇತಿ ಮೀಮಾಂಸಕಾಃ | ಸೋಽಯಂ ವೋ ವಿಧಧಾತು ವಾಂಛಿತ ಫಲಂ| ತ್ರೈಲೋಕ್ಯನಾಥೋ ಕೇಶವಃ || ಎಂಬ ಧರ್ಮಸಮನ್ವಯದ ಶ್ಲೋಕವನ್ನು ಶಾಸನದಲ್ಲಿ ಬರೆಸಲಾಯಿತು. ಪುನಃ ಮೊದಲನೇ ಬುಕ್ಕನ ಆಳ್ವಿಕೆಯಲ್ಲಿ ಬಸದಿಗಳಿಗೆ ಸಲ್ಲುತ್ತಿದ್ದ ಪರಂಪರಾಗತ ಪಂಚಮಹಾವಾದ್ಯಮರ್ಯಾದೆ ಮತ್ತು ರಾಜಗೌರವಾಧಿಕಾರಗಳಿಗೆ ಶ್ರೀವೈಷ್ಣವರು ಧಕ್ಕೆ ತಂದದ್ದರಿಂದ ವಿವಾದ ವುಂಟಾಗಿ ನ್ಯಾಯಪಡೆಯುವ ಸಲುವಾಗಿ ಬುಕ್ಕನ ಸಮಕ್ಷಮಕ್ಕೆ ದೂರನ್ನು ಒಯ್ಯ ಲಾಯಿತು. ಬುಕ್ಕನು ನ್ಯಾಯತೀರ್ಮಾನ ನೀಡುತ್ತಾ ತಿರುಮಲೆ ತಾತಯ್ಯನ ನೇತೃತ್ವದಲ್ಲಿ ಶ್ರೀ ವೈಷ್ಣವರನ್ನೂ ಕಲ್ಯದಿಂದ ಬಂದಿದ್ದ, ಶ್ರೀ ವೈಷ್ಣವ ಮಠಾಧೀಶರನ್ನು ಕರೆಸಿ ಹಂಪೆ, ಪೆನುಗೊಂಡೆ, ಹೊಸಪಟ್ಟಣ, ಕಲ್ಯ ಊರುಗಳು ಜೈನ ಮುಖಂಡರು ಮತ್ತು ಜೈನ ನಿಯೋಗದ ಮುಖಂಡರಾದ ಬುಸುವಿಶೆಟ್ಟಿಯೊಂದಿಗೆ ಪರಸ್ಪರ ಕೈ ಹಿಡಿದು ಜೈನಧರ್ಮ ವೈಷ್ಣವಧರ್ಮಗಳಿಗೆ ಮೂಲಭೂತ ವ್ಯತ್ಯಾಸಗಳಿಲ್ಲವೆಂದೂ ತನ್ನ ರಾಜ್ಯದ ಜೈನ ಪೂಜಾಮಂದಿರಗಳನ್ನು ರಕ್ಷಿಸುವ ಹೊಣೆ ಶ್ರೀವೈಷ್ಣವರದಾಗಿದೆಯೆಂದೂ, ಜೈನ ದರ್ಶನಕೆ ಪೂರ್ವ ಮರ್ಯಾದೆಗಳು ಪಂಚಮಹಾವಾದ್ಯ, ಕಳಸ, ಸಲುವುದೆಂದೂ ಜೈನ ದರ್ಶನಕೆ ಭಕ್ತರ (ಶ್ರೀವೈಷ್ಣವರ) ದೆಸೆಯಿಂದ ಹಾನಿವೃದ್ಧಿ ಯಾದರೂ ವೈಷ್ಣವ ಹಾನಿ ವೃದ್ಧಿಯಾಗಿ ಪಾಲಿಸುವರು ಎಂದು ಮೊದಲು ಕಲ್ಯದಲ್ಲಿ ಶಾಸನ ಹಾಕಿಸಿದನು. ಆನಂತರ ಜೈನ ಕೇಂದ್ರವಾದ ಶ್ರವಣ ಬೆಳಗೊಳದಲ್ಲಿಯೂ ಇದೇ ಶಾಸನವನ್ನು ಕೆಲವು ಪರಿಷ್ಕಾರ ಗಳೊಂದಿಗೆ ವಿಸ್ತೃತಗೊಳಿಸಿ ಹಾಕಿಸಿದನು. ಅಲ್ಲದೆ ಬುಕ್ಕನು ಮುಸಲ್ಮಾನರು ವಶಪಡಿಸಿ ಕೊಂಡು ಆಳುತ್ತಿದ್ದ ಮಧುರೆಯ ಮೇಲೆ ತನ್ನ ಮಗ ಕಂಪಣನ ನೇತೃತ್ವದಲ್ಲಿ ಸೇನೆ ಕಳಿಸಿ ಯುದ್ಧ ಹೂಡಿ ಸುಲ್ತಾನನನ್ನು ಯುದ್ಧದಲ್ಲಿ ಕೊಂದು ಅಲ್ಲಿ ಮುಸಲ್ಮಾನರ ಆಳ್ವಿಕೆಯನ್ನು ಕೊನೆಗಾಣಿಸಿ ತನ್ನ ಸೇನಾನಾಯಕನನ್ನೇ ಅಲ್ಲಿ ಪ್ರಾಂತ್ಯಾಧಿಕಾರಿಯಾಗಿ ನೇಮಿಸಿದನು. ಈ ಮೂಲಕ ಹಿಂದೂ ರಾಜ್ಯ ಪರಂಪರೆಯನ್ನು ಅಲ್ಲಿ ಊರ್ಜಿತಗೊಳಿಸಿ ದನು. ಈ ಎರಡು ಕ್ರಮಗಳ ಅಲ್ಲದೆ ಧರ್ಮರಕ್ಷಣೆ, ಧರ್ಮಸಮಾನತೆ, ಸಮನ್ವಯದ

ಬಗ್ಗೆ ಜನಜಾಗೃತಿ ಮೂಡಿಸಲು ಸನಾತನ ಹಿಂದೂ ವೈದಿಕ ಗ್ರಂಥಗಳ ರಚನೆಗೂ ಪೋಷಣೆ ಪ್ರೋತ್ಸಾಹ ನೀಡಿದನು. ಇಂತಹ ಸಂದರ್ಭದಲ್ಲೇ ಜನ್ಮತಾಳಿದ ಗ್ರಂಥ ಮಾಧವಾರ್ಯ ವಿರಚಿತ 'ಸರ್ವದರ್ಶನ ಸಂಗ್ರಹ' ಕೃತಿ.

ಈ ಕೃತಿಯಲ್ಲಿ ಹೆಸರೇ ತಿಳಿಸುವಂತೆ ಭಾರತದ ಎಲ್ಲ ಪ್ರಮುಖ ಆಸ್ತಿಕ, ನಾಸ್ತಿಕ ಮುಂತಾದ ಎಲ್ಲ ದರ್ಶನಗಳ ತತ್ತ್ವಗಳನ್ನೂ ಗ್ರಂಥಕರ್ತನು ವಿವೇಚಿಸಿದ್ದಾನೆ. ಇದರಲ್ಲಿ ನಿರೂಪಿತವಾಗಿರುವ ದರ್ಶನಗಳು ಒಟ್ಟು ಹದಿನಾರು. ಅವು : ಚಾರ್ವಾಕ, ಬೌದ್ಧ, ಆರ್ಹತ (ಜೈನ), ರಾಮಾನುಜ (ವಿಶಿಷ್ಟಾದ್ವೈತ), ಪೂರ್ಣಪ್ರಜ್ಞ (ದ್ವೈತ), ಲಕುಲೀಶ ಪಾಶುಪತ, ಶೈವ, ಪಾಣಿನಿ (ವ್ಯಾಕರಣ), ಪ್ರತ್ಯಭಿಜ್ಞಾ (ಶೈವ), ರಸೇಶ್ವರ (ಸಿದ್ಧ), ಔಲುಕ್ಯ, ಅಕ್ಷಪಾದ (ವೈಶೇಷಿಕ), ಜೈಮಿನಿ (ನ್ಯಾಯ), ಸಾಂಖ್ಯ, ಪಾತಂಜಲ (ಯೋಗ), ಮತ್ತು ಶಾಂಕರ (ಅದ್ವೈತ). ಮಾಧವನು ದರ್ಶನಸಿದ್ಧಾಂತಗಳ ಬಗ್ಗೆ ವಿವೇಚಿಸುವಾಗ ಜನರ ಅಗತ್ಯತೆ ಮತ್ತು ಪ್ರಚುರತೆಯನ್ನನುಸರಿಸಿ ಪ್ರಾಪಂಚಿಕ ಮತ್ತು ವಾಸ್ತವವಾದ ಚಾರ್ವಾಕ ಅಥವಾ ಲೋಕಾಯತ ದರ್ಶನವನ್ನೆ ಮೊದಲು ವಿವರಿಸಿದ್ದಾನೆ, ಕಾರಣ ಮನುಷ್ಯ ಬಯಸುವ ಇಂದ್ರಿಯ ಸುಖವನ್ನೇ ಮೋಕ್ಷವೆಂದು ಚಾರ್ವಾಕ ಸಿದ್ಧಾಂತ ಪರಿಗಣಿಸುವುದರಿಂದ. ನಂತರ ಪ್ರಜಾಧರ್ಮ(ಡೆಮೊಕ್ರಾಟಿಕ್) ವೆನಿಸುವ ಬೌದ್ಧ ಮತ್ತು ಜೈನ ಹಾಗೂ ವಿಶಿಷ್ಟಾದ್ವೈತ ದರ್ಶನಗಳನ್ನು ಪರಿಶೀಲಿಸಿದ್ದಾನೆ. ಅಂತ್ಯದಲ್ಲಿ ಶಂಕರರ ಅದ್ವೈತ ದರ್ಶನವನ್ನು ವಿವರಿಸುತ್ತಾ ವೇದಾಂತ ಪರಿಶೀಲಿಸಿ ವೇದಾಂತದ ಅಂತಿಮ ತತ್ತ್ವವಾದ ನಾನೇ ಬ್ರಹ್ಮ ಎಂದು ಜ್ಞಾನದಿಂದ ಮಾನವನ ಮೋಕ್ಷವೆಂದು ಸ್ವೀಕರಿಸುತ್ತಾ ತಾನು ಅದ್ವೈತ ದರ್ಶನಾನುಯಾಯಿ ಎಂದು ಸೂಚಿಸುತ್ತಾನೆ.

ದಾರ್ಶನಿಕ ಚರ್ಚೆಯ ವಿಷಯ ಪ್ರಧಾನವಾಗಿ ಪ್ರಮಾಣ, ಪ್ರಮೇಯ ಎಂದು ಎರಡು ರೀತಿಯಲ್ಲಿ ವರ್ಗೀಕರಿಸಲಾಗಿದೆ.

ಜ್ಞಾನವನ್ನು ಪಡೆಯಲು ಮುಖ್ಯ ಸಾಧನ ಪ್ರಮಾಣ. ಪ್ರಮಾಣದಿಂದ ಯಾವುದನ್ನು ಅರಿಯುತ್ತೇವೆಯೋ ಅದು ಪ್ರಮೇಯ. ಪ್ರಘೇಯದ ವಿಷಯಗಳು - ಜಗತ್ತು ಜೀವಾತ್ಮ, ಪರಮಾತ್ಮ ಅಥವಾ ಈಶ್ವರ, ಬಂಧ, ಸಾಧನಮಾರ್ಗ ಮತ್ತು ಮುಕ್ತಿ. ಚಾರ್ವಾಕಮತದಲ್ಲಿ ಯಥಾರ್ಥಜ್ಞಾನದ ಏಕೈಕ ಪ್ರಮಾಣ ಪ್ರತ್ಯಕ್ಷ ಇಂದ್ರಿಯಗಳಿಂದ ಉತ್ಪನ್ನವಾಗುವ ಜ್ಞಾನವೇ ಯಥಾರ್ಥಜ್ಞಾನ.

ಬೌದ್ಧದರ್ಶನದಲ್ಲಿ ಪ್ರತ್ಯಕ್ಷದೊಂದಿಗೆ ಅನುಮಾನ(ಕಾರ್ಯಕಾರಣ ಭಾವ)ವೂ ಪ್ರಮಾಣವಾಗುತ್ತದೆ.

ಜೈನ ಅಥವಾ ಅರ್ಹತ್ ದರ್ಶನದಲ್ಲಿ ಪ್ರತ್ಯಕ್ಷ, ಅನುಮಾನ ಅಲ್ಲದೆ ಶಬ್ದ ಎಂಬ ಮೂರು ಪ್ರಮಾಣವಿದೆ.

ವಿಶಿಷ್ಟಾದ್ವೈತ ದರ್ಶನವೂ ಪ್ರತ್ಯಕ್ಷ, ಅನುಮಾನ, ಶಬ್ದವೆಂಬ ಮೂರು ಪ್ರಮಾಣ ಗಳನ್ನು ಒಪ್ಪುವುದಾದರೂ ಶಬ್ದವು ಅನುಮಾನವನ್ನವಲಂಬಿಸಿಲ್ಲ, ಅಂತೆಯೇ ಅನುಮಾನವು ಶಬ್ದ ಪ್ರಮಾಣವನ್ನವಲಂಬಿಸಿಲ್ಲ. ಈ ಎರಡೂ ಸ್ವತಂತ್ರ ಪ್ರಮಾಣ ಗಳಾಗಿವೆ. ದ್ವೈತಿಗಳು ಪ್ರತ್ಯಕ್ಷ ಮತ್ತು ಶಬ್ದ ಎರಡನ್ನೇ ಪ್ರಮಾಣ ಎನ್ನುತ್ತಾರೆ. ಇವರಿಗೆ ಅನುಮಾನವು ಸ್ವತಂತ್ರ ಪ್ರಮಾಣವಲ್ಲ.

ಶೈವ ದರ್ಶನದಲ್ಲಿ (ಕಾಳಾಮುಖ, ಪಾಶುಪತ, ಪ್ರತ್ಯಭಿಜ್ಞ, ಕಾಶ್ಮೀರೀಶೈವ) ಪ್ರತ್ಯಕ್ಷ, ಅನುಮಾನ ಮತ್ತು ಶಬ್ದ ಮೂರೂ ಸ್ವತಂತ್ರ ಪ್ರಮಾಣಗಳೇ. ವೈಶೇಷಿಕ ಮತದಲ್ಲಿ ಪ್ರತ್ಯಕ್ಷ, ಅನುಮಾನವೆರಡೇ ಪ್ರಮಾಣ. ಹಾಗೆಯೇ ಸಾಂಖ್ಯ ದರ್ಶನ ದಲ್ಲಿಯೂ ಪ್ರತ್ಯಕ್ಷ, ಅನುಮಾನ ಶಬ್ದಗಳೇ ಪ್ರಮಾಣ. ನೈಯ್ಯಾಯಿಕ ದರ್ಶನದಲ್ಲಿ ಪ್ರತ್ಯಕ್ಷ, ಅನುಮಾನ, ಶಬ್ದದ ಜೊತೆಗೆ ಉಪಮಾನವೂ ಸೇರಿ ನಾಲ್ಕು ಪ್ರಮಾಣ ಗಳಿವೆ.

ಪ್ರಾಭಾಕರ ಮೀಮಾಂಸಕರು ಈ ನಾಲ್ಕರ ಜೊತೆಗೇ ಅರ್ಥಾಪತ್ತಿಯನ್ನೂ ಪ್ರಮಾಣವೆಂದು ಪರಿಗಣಿಸುವುದರಿಂದ ಪ್ರಮಾಣಗಳ ಸಂಖ್ಯೆ ಐದಾಗುತ್ತದೆ. ಭಾಟ್ಟ ಮೀಮಾಂಸಕರು ಈ ಐದರ ಜೊತೆಗೆ ಅನುಪಲಬ್ಧಿಯನ್ನೂ ಸೇರಿಸಿ ಪ್ರಮಾಣಗಳು ಆರೆಂದು ಹೇಳುತ್ತಾರೆ. ಅದ್ವೈತ ದರ್ಶವೂ ಈ ಮೇಲಿನ ಆರನ್ನೇ ಪ್ರಮಾಣಗಳೆಂದು ಅಂಗೀಕರಿಸಿದೆ.

ಹೀಗೆ ಪ್ರಮಾಣದ ಸಂಖ್ಯೆಯಲ್ಲಿ ದರ್ಶನಗಳ ಮಧ್ಯೆ ವ್ಯತ್ಯಾಸ ಕಂಡುಬಂದರೂ ಪ್ರಮಾಣವು ಪ್ರಮೇಯದ ಸಾಧನವೆಂಬುದು ಎಲ್ಲ ದರ್ಶನಗಳಿಗೂ ಸಮಾನ ವಾಗಿರುವ ಸತ್ಯವಾಗಿದೆ.

ಇನ್ನು ಪ್ರಮೇಯಗಳ ಬಗ್ಗೆ ದರ್ಶನಗಳಲ್ಲಿರುವ ಸಾಮ್ಯ - ವೈಷಮ್ಯಗಳ ಬಗ್ಗೆ ಹೇಳಬೇಕಾದರೆ ಪೃಥಿವೀ, ಜಲ, ತೇಜಸ್ಸು, ವಾಯುಗಳ ಸಮಷ್ಠಿ ರೂಪವೇ ಜಗತ್ತು, ಜಗತ್ತಿನ ಉತ್ಪತ್ತಿ ಮತ್ತು ವಿನಾಶ ಚಾರ್ವಾಕರ ಮತದಲ್ಲಿ ಆಕಸ್ಮಿಕ. ಆದರೆ ಬೌದ್ಧ ಮತದಲ್ಲಿ ಮಾಧ್ಯಮಿಕ, ಯೋಗಾಚಾರ, ಸೌತ್ರಾಂತಿಕ ಮತ್ತು ವೈಭಾಷಿಕ ಎಂದು ನಾಲ್ಕು ವಿಧ. ಶೂನ್ಯವಾದಿಗಳಾದ ಮಾಧ್ಯಮಿಕರ ದೃಷ್ಟಿಯಲ್ಲಿ ಜಗತ್ತು ಕೇವಲ ತೋರಿಕೆ ಮಾತ್ರ. ವಾಸ್ತವವಾಗಿ ಅಸ್ತಿತ್ವದಲ್ಲಿಲ್ಲ. ಯೋಗಾಚಾರ ಮತದಲ್ಲಿ ಎಲ್ಲವೂ ಜ್ಞಾನವೇ, ಜ್ಞಾನಕ್ಕಿಂತ ವಸ್ತುವಿಗೆ ಪ್ರತ್ಯೇಕ ಅಸ್ತಿತ್ವ ಇಲ್ಲ. ವಸ್ತುವು ಜ್ಞಾನದಲ್ಲಿ ಕಲ್ಪಿತವಾಗಿದೆ ಎನ್ನುವುದರಿಂದ ಇವರಿಗೆ ವಿಜ್ಞಾನ ವರ್ತವಾದಿಗಳೆಂಬ ಹೆಸರಿದೆ. ಇವರ ದೃಷ್ಟಿಯಲ್ಲಿ ರೂಪ, ರಸ, ಗಂಧ ಸ್ಪರ್ಶಾತ್ಮಕ ನಾಲ್ಕು ಪದಾರ್ಥಗಳ ಸಂಘಾತವೇ ಈ ಜಗತ್ತು. ಆದುದರಿಂದ ಇವರನ್ನು ಸಂಘಾತವಾದಿಗಳೆನ್ನುವರು.

ಜೈನ ದರ್ಶನದಲ್ಲಿ ಜಗತ್ತಿನಲ್ಲಿರುವ ಪ್ರತಿಯೊಂದು ವಸ್ತುವೂ ಪುದ್ಗಲದಿಂದಲೇ ವಿಕಾಸಗೊಂಡಿದೆ. ಪುದ್ಗಲವೆಂದರೆ ಸೂಕ್ಷ್ಮವಾದ ಮೂಲಧಾತುಗಳು. (ಭೂಮಿ, ಜಲ, ಅಗ್ನಿ, ವಾಯು), ಕಾರ್ಯಕಾರಣ ವಿಷಯದಲ್ಲಿ ಅನೇಕಾಂತ ವಾದಿಗಳು.

ರಾಮಾನುಜರ ವಿಶಿಷ್ಟಾದ್ವೈತ ದರ್ಶನದಲ್ಲಿ ಜಗತ್ತು, ಚೇತನ ಹಾಗೂ ಅಚೇತ ನಾತ್ಮಕವಾದುದು. ಇದರ ಸೃಷ್ಟಿ, ಸ್ಥಿತಿ, ವಿನಾಶಗಳು ಈಶ್ವರನಿಂದಲೇ ಆಗುತ್ತವೆ. ಜಗತ್ತು ಪರಮಾತ್ಮನ ಶರೀರ. ಜಗತ್ತು ಪ್ರತ್ಯೇಕ ವಸ್ತುವಾದರೂ ಪರಮಾತ್ಮನಿಗಿಂತ ಸ್ವತಂತ್ರವಾದ ಅಸ್ತಿತ್ವವಿಲ್ಲ. ಜಗತ್ತಿನಲ್ಲಿ ಕಾರ್ಯಕಾರಣಭಾವದ ಸ್ಥಾನದಲ್ಲಿ ಪರಿಣಾಮವಾದವನ್ನೊಪ್ಪಿದ್ದಾರೆ.

ದ್ವೈತ ಸಿದ್ಧಾಂತದಲ್ಲಿ ಸತ್ವರಜಸ್ತಮೋಗುಣಗಳುಳ್ಳ ಪ್ರಕೃತಿಯ ಪರಿಣಾಮವೇ ಜಗತ್ತು. ನೈಯ್ಯಾಯಿಕರಂತೆ ಈ ಮತದಲ್ಲಿ ಈಶ್ವರನು ಜಗತ್ತಿಗೆ ನಿಮಿತ್ತಕಾರಣ. ಶೈವ ಸಿದ್ಧಾಂತಗಳಲ್ಲಿ ಜಗತ್ತಿನ ಉತ್ಪತ್ತಿ ಮತ್ತು ವಿನಾಶಕ್ಕೆ ಶಿವನು ನಿಮಿತ್ತಕಾರಣ ಮತ್ತು ಶಕ್ತಿ ಉಪಾದಾನ ಕಾರಣ. ಕಾರ್ಯಕಾರಣಭಾವ ವಿಷಯದಲ್ಲಿ ನೈಯ್ಯಾಯಿಕರಂತೆ ಇವರು ಆರಂಭವಾದಿಗಳು. ಜಗತ್ತು ಜೀವಾತ್ಮನಿಗೆ ಬಂಧಕವಾಗಿರುವುದರಿಂದ ಇದನ್ನು 'ಪಾಶ' ಎಂದೆನ್ನುವರು. ಪಾಶುಪತ ಶೈವದಲ್ಲಿ ಕರ್ಮನಿರಪೇಕ್ಷನಾದ ಈಶ್ವರನ ಇಚ್ಛಾಶಕ್ತಿಯೇ ಕಾರಣ. ಔಲುಕ್ಯ ಅಥವಾ ವೈಶೇಷಿಕ ಸಿದ್ಧಾಂತದಲ್ಲಿ ಪ್ರಳಯ ಕಾಲದಲ್ಲಿ ಪ್ರತ್ಯೇಕ ಇದ್ದ ಪರಮಾಣುಗಳಲ್ಲಿ ಈಶ್ವರನ ಸಂಕಲ್ಪದಿಂದ ಚಲನೆ ಯುಂಟಾಗಿ ದ್ವ್ಯಣುಕ ತ್ರ್ಯಣುಕ ಕ್ರಮದಿಂದ ಒಂದಾಗಿ ಈ ಜಗತ್ತು ಉಂಟಾಗುತ್ತದೆ. ಆದ್ದರಿಂದ ಈಶ್ವರನು ಜಗತ್ಸೃಷ್ಟಿಗೆ ನಿಮಿತ್ತಕಾರಣನು, ಪರಮಾಣುಗಳೇ ಉಪಾದಾನ ಕಾರಣ. ಕಾರ್ಯಕಾರಣ ಭಾವದಲ್ಲಿ ವೈಶೇಷಿಕರು ಅಸತ್ಕಾರ್ಯವಾದಿಗಳು ಎಂದರೆ ಕಾರ್ಯದಲ್ಲಿ ಕಾರಣವಿರುವುದಿಲ್ಲ ಎಂಬುದು ಇವರ ಅಭಿಪ್ರಾಯ.

ಅಕ್ಷಪಾದ ಅಥವಾ ನೈಯ್ಯಾಯಿಕ ಮತದಲ್ಲಿ ಜಗತ್ತಿನ ಉತ್ಪತ್ತಿಯು ವೈಶೇಷಿಕ ಸಿದ್ಧಾಂತವನ್ನೇ ಅನುಸರಿಸುವುದರಿಂದ ಇವರನ್ನು ವೈಶೇಷಿಕರ ಸಮಾನವಾದಿಗಳು ಎಂದೆನ್ನುತ್ತಾರೆ.

ಜೈಮಿನಿ ಅಥವಾ ಪೂರ್ವ ಮೀಮಾಂಸಾದಲ್ಲಿ ಜಗತ್ತಿನ ಸೃಷ್ಟಿ ಸ್ಥಿತಿಲಯ ವನ್ನೊಪ್ಪದೆ ಅದು ಅನಾದಿ ಎನ್ನುತ್ತಾರೆ. ಜಗತ್ತಿನ ಕಾರ್ಯವೆಲ್ಲವೂ ಸ್ವಭಾವದಿಂದಲೇ ನಡೆಯುತ್ತಿ ರುತ್ತದೆ.

ಪಾಣಿನಿ ಅಥವಾ ವ್ಯಾಕರಣ ಸಿದ್ಧಾಂತದಲ್ಲಿ ಜಗತ್ತು ತೋರಿಕೆ ಮಾತ್ರ. ವೈಯ್ಯಾಕರಣಿಗಳು ಶಬ್ದ ವಿವರ್ತವಾದಿಗಳು. ಶಬ್ದಸ್ಫೋಟವೇ ಎಲ್ಲಕ್ಕೂ ಮೂಲ. ಇದನ್ನೇ ಶಬ್ದಬ್ರಹ್ಮವೆನ್ನುವರು.

ಸಾಂಖ್ಯದರ್ಶನದಂತೆ ಸತ್ವ ರಜ ತಮ ಎಂಬ ತ್ರಿಗುಣಾತ್ಮಕವಾದ ಪ್ರಕೃತಿಯೇ ಜನಗತ್ಸೃಷ್ಟಿಗೆ ಮೂಲ ಕಾರಣ. ಇದು ನಿತ್ಯ ಮತ್ತು ಅವ್ಯಕ್ತ. ಪುರುಷನ ಸಂಪರ್ಕದಿಂದ ಪ್ರಕೃತಿಗೆ ಜಗತ್ತಿನ ಕರ್ತೃತ್ವವು ಸಿದ್ಧಿಸುತ್ತದೆ. ಯೋಗದರ್ಶನವೂ ಸಾಂಖ್ಯವನ್ನೇ ಅನುಸರಿಸುತ್ತದೆ. ಪ್ರಕೃತಿಯ ಪರಿಣಾಮಕ್ಕೆ ಈಶ್ವರನು ನಿಮಿತ್ತಕಾರಣನಾಗುತ್ತಾನೆ. ಇದರಿಂದಲೇ ಇವರನ್ನು ನೇಶ್ವರ ಸಂಖ್ಯಾವಾದಿಗಳೆನ್ನುವರು.

ಶಾಂಕರ ಮತ ಅಥವಾ ಅದ್ವೈತ ದರ್ಶನದಂತೆ ಜಗತ್ತು ಮಿಥ್ಯ, ಕೇವಲ ವ್ಯಾವಹಾರಿಕ ಸತ್ಯ.

ಮಾಧವಾರ್ಯ ಪ್ರತಿಯೊಂದು ದರ್ಶನದ ಸಿದ್ಧಾಂತವನ್ನೂ ಆಯಾದರ್ಶನದ ನೆಲೆಗಟ್ಟಿನಲ್ಲಿನ ಮೇಲೆ ನಿಂತು ಯುಕ್ತಿಮುಕ್ತವಾಗಿ ಸಮರ್ಥಿಸಿರುವುದನ್ನು ನೋಡಿದಾಗ ಆ ದರ್ಶನವೇ ಶ್ರೇಷ್ಠವಾದುದು ಎಂದೆನಿಸುತ್ತದೆ. ಆದರೆ ಮುಂದಿನ ದರ್ಶನದಲ್ಲಿ ಹಿಂದಿನ ದರ್ಶನದ ನ್ಯೂನತೆಯನ್ನೆತ್ತಿ ತೋರಿಸಿ ಸಯುಕ್ತಿಕವಾಗಿ ಅದನ್ನು ಖಂಡಿಸುತ್ತಾನೆ. ಉದಾಹರಣೆಗೆ ಚಾರ್ವಾಕ ದರ್ಶನದಲ್ಲಿ ಹೇಳಿದ ಪ್ರತ್ಯಕ್ಷ ಒಂದೇ ಪ್ರಮಾಣ ಎಂಬ ಅಂಶವನ್ನು ಬೌದ್ಧಮತದಲ್ಲಿ ಖಂಡಿಸಿ ಅನುಮಾನವೂ ಪ್ರಮಾಣವೇ ಎಂದು ಸಮರ್ಥಿಸಿದೆ. ಮುಂದಿನ ಜೈನದರ್ಶನದಲ್ಲಿ ಬೌದ್ಧ ದರ್ಶನದ ಕ್ಷಣಿಕವಾದವನ್ನು ನಿರಾಕರಿಸಿ ವಸ್ತುವಿನ ಅನೇಕಾಂತ ಸ್ವಭಾವದ ವಾದವನ್ನು ಪುಷ್ಟೀಕರಿಸಿದೆ. ಮುಂದಿನ ವಿಶಿಷ್ಟಾದ್ವೈತ ದರ್ಶನದಲ್ಲಿ ಜೈನ ಅನೇಕಾಂತವನ್ನು ಖಂಡಿಸಿ ವಸ್ತುವು ಸ್ಥಿರ ಎಂದು ಸ್ಥಾಪಿಸಿದೆ. ಪ್ರಾಚೀನ ದಾರ್ಶನಿಕ ಗ್ರಂಥಗಳ ವಿವೇಚನಾಕ್ರಮ ದಲ್ಲಿರುವಂತೆ ಪರಪಕ್ಷಗಳ ಸಿದ್ಧಾಂತಗಳು ನಿರಾಕರಣ ಅಥವಾ ಖಂಡನೀಯವಾದ ಪೂರ್ವಪಕ್ಷವೆನಿಸುತ್ತದೆ. ಆ ಪೂರ್ವಪಕ್ಷವನ್ನು ಖಂಡಿಸಿ ದೋಷ ಪರಿಹಾರ ಮತ್ತು ಸಮರ್ಥನೀಯ ಸ್ವವಾದವನ್ನು ಉತ್ತರಪಕ್ಷವಾಗಿ ಮಂಡಿಸಲಾಗುತ್ತದೆ. ಎಲ್ಲೆಲ್ಲಿ ಪೂರ್ವಪಕ್ಷ ಉತ್ತರಪಕ್ಷಗಳು ತಲೆದೋರಿವೆಯೋ ಅಲ್ಲಲ್ಲಿ ಟಿಪ್ಪಣಿ ನೀಡಿ ಅದರಲ್ಲಿ ವಿಸ್ತೃತವಾದ ವಿವರಣೆ ನೀಡಲಾಗಿದೆ. ಗಹನವಾದ ವಿಷಯಗಳನ್ನು ಸೂಕ್ಷ್ಮವಾಗಿ ವಿವೇಚಿಸುವಾಗ ಪ್ರಚಲಿತ ಕೆಲವು ನ್ಯಾಯಗಳನ್ನು ಬಳಸಿ ಬುದ್ಧಿಯನ್ನು ಹಗುರಗೊಳಿಸಲಾಗಿದೆ, ಸಾಹಿತ್ಯದ ಮೂಲಕ ತತ್ತ್ವಗಳನ್ನು ಪ್ರತಿಪಾದಿಸ ಲಾಗಿದೆ ಮತ್ತು ಪ್ರತಿಯೊಂದು ದರ್ಶನದ ಸಮಸ್ಯೆ ಅಥವಾ ವಿವಾದಗಳ ವಿವೇಚನೆ ಮತ್ತು ವಿವರಣೆ ನೀಡುವಾಗ ಆಯಾಯಾ ದರ್ಶನಕ್ಕೆ ಸಂಬಂಧಿಸಿದ, ಪ್ರಾಮಾಣಿಕವಾದ ಆಕರ ಗ್ರಂಥಗಳಿಂದಲೇ ಪುಷ್ಟೀಕರಿಸಿದ್ದಾನೆ.

ಐರೋಪ್ಯ ವಿದ್ವಾಂಸ ವಿಲ್ಸನ್ನನು ಏಷಿಯಾಟಿಕ್ ರಿಸರ್ಚಸ್‌ನ ೧೬ನೆಯ ಸಂಪುಟ 'ಸ್ಕೆಚಸ್ ಆಫ್ ದಿ ರಿಲಿಜಿಯಸ್ ಸೆಕ್ಟ್ಸ್ ಆಫ್ ದಿ ಹಿಂದೂಸ್' ಅನ್ನು ೧೮೨೮ರಲ್ಲಿ ಪ್ರಕಟಿಸುವ ಸಂದರ್ಭದಲ್ಲಿ ಸರ್ವದರ್ಶನ ಸಂಗ್ರಹ ಕೃತಿಯನ್ನು ಬಳಸಿಕೊಂಡಿದ್ದಾನೆ. ಅಂತೆಯೇ ಸಿ.ಎ. ಮೂರ್ ಮತ್ತು ಡಾ. ಎಸ್. ರಾಧಾಕೃಷ್ಣನ್‌ರವರು 'ಎ ಸೋರ್ಸ್

ಬುಕ್ ಇನ್ ಇಂಡಿಯನ್ ಫಿಲಾಸಫಿ' ಎಂಬ ತಮ್ಮ ಗ್ರಂಥರಚನೆಯ ಸಂದರ್ಭದಲ್ಲಿ ಈ ಕೃತಿಯ ಮಹತ್ವವನ್ನು ಕುರಿತು ಹೇಳಿದ್ದಾರೆ. ಅಂತೆಯೇ ಇ.ಬಿ. ಕೋವೆಲ್ಲನು ಈ ಗ್ರಂಥವನ್ನು ಆಂಗ್ಲ ಭಾಷೆಗೆ ತರ್ಜುಮೆ ಮಾಡಿದ್ದಾನೆ. ಅವನ ಅಭಿಪ್ರಾಯದಲ್ಲಿ ಈ ಗ್ರಂಥವು ಹಿಂದೂಗಳ ವಿಮರ್ಶನಾ ಸಾಮರ್ಥ್ಯಕ್ಕೆ ಆಸಕ್ತಿ ಹುಟ್ಟಿಸುವ ನಿದರ್ಶನವಾಗಿದೆ. ಭಾರತೀಯ ತತ್ವಜ್ಞಾನ ದರ್ಶನಗಳಿಗೆ ಸಂಬಂಧಿಸಿದಂತೆ ಸಮನ್ವಯ ವಿವೇಚನಾದೃಷ್ಟಿಯಿಂದ ಬರೆಯಲ್ಪಟ್ಟಂತೆ ಇಲ್ಲಿಯವರೆಗೆ ಇಂತಹ ಇನ್ನೊಂದು ಗ್ರಂಥವು ಬರೆಯಲ್ಪಟ್ಟಿಲ್ಲವೆಂಬುದು ಗಮನಾರ್ಹ ಅಂಶವಾಗಿದೆ. ಆದುದರಿಂದಲೇ ಈ ಗ್ರಂಥವು ಇಂದಿಗೂ ತತ್ತ್ವಜಿಜ್ಞಾಸುಗಳಿಗೆ ಧರ್ಮಸಮನ್ವಯಕಾರರಿಗೆ ಸ್ಫೂರ್ತಿ ಮತ್ತು ಮಾರ್ಗದರ್ಶನ ನೀಡುವ ಏಕೈಕ ಮಹತ್ಕೃತಿ ಎಂದೆನಿಸಿದೆ.

೪೧. ಹಂಪಿಯ ಹರಿದಾಸರು ಹಾಗೂ ವೈಷ್ಣವ ಆಚಾರ್ಯರು - ಒಂದು ಚಿಂತನೆ

ಡಾ.ಎಸ್.ಕೆ. ಜೋಶಿ

'ಡೆಕ್ಕನ್ನಿ'ನ ಬಯಲು ನಾಡಿನಲ್ಲಿ, ಶತಮಾನಗಳ ಹಿಂದೆ ನೋಡಿದಂತೆ, ವಿಶೇಷವಾಗಿ ರಾಯಚೂರು ಬಳ್ಳಾರಿ ಗುಲಬರ್ಗಾ ಬಿಜಾಪುರ ಹಾಗೂ ಬೀದರ ಜಿಲ್ಲೆಗಳು ಋಕ್ಷ ಪ್ರದೇಶಗಳೇ ಆಗಿವೆ. ಈ ವಣ ಪ್ರಖರ ಪರಿಸರದಲ್ಲಿ ಸಾಮಾನ್ಯರ ಬದುಕೂ ಬದುಕಲಾರದ ಬವಣೆ ಹೊತ್ತಿವೆ. 'Geography is sin' ಎಂದು ಒಂದು ಸಾಮಾಜಿಕ ಹಾಗೂ ವ್ಯಕ್ತಿ ಬದುಕಿನ ಸಿದ್ಧಾಂತ ಸಾರುವಂತೆ, (ರಾಮ ಜಾಧವ ಕನ್ನಡ ಚಳುವಳಿಗಾರ ಧಾರವಾಡ), ಈ ಮೇಲಣ ಬಯಲು ಬಹಳಷ್ಟು ಬಡತನ ತಂದಿದೆ; ಬಡತನ ಹಾಸಲುಂಟು ಹೊದಿಯಲುಂಟು.

ಈ ಇಂಥ 'ಹಾಸಲುಂಟು ಹೊದಿಯಲುಂಟು' ಎಂಬ ಬಡತನದ ಬಡ ಗುಡಿಸಲುಗಳಿಂದ, ಅದರಲ್ಲೂ ಬಡಬ್ರಾಹ್ಮಣರ ಸೂರುಗಳಿಂದ, ವೈಷ್ಣವ ಸಂಕೀರ್ತನೆಗಳು, ವೈಷ್ಣವ ಚಿಂತನದ ಪರಂಪರೆಗಳು, ಹಾಡುಗಳು -ವಿಷ್ಣು ಸ್ತುತಿಗಳು; ಹುಟ್ಟಿವೆ. ಅವುಗಳು ಘನ ದರಿದ್ರತೆಗೆ ಸ್ಪಂದಿಸಿ, ಬದುಕು ಕಷ್ಟಕರವಾಗಿ ದೈವತ್ವದೆಡೆ ಹರಡಿರುವುದರಿಂದ, ಹರಿದಾಸರ ಹಾಗೂ ವೈಷ್ಣವಾಚಾರ್ಯರ ದರ್ಶನ, ಚಿಂತನ, ದರ್ಶನ - ಸಾಹಿತ್ಯ ಹೊರಬಂದಿವೆ. ಬಡತನವು ಆಧ್ಯಾತ್ಮದ ಕಡೆಗೆ ಕರೆದೊಯ್ಯುತ್ತದೆ. ಬದುಕು ಸಾಕಾಗಿ, ಸಾಕಾಗಿ, ಬದುಕು ನಶ್ವರದ ಬದುಕನ್ನು ತೂರಿ, ತದ-ನಂತರ ಶಾಶ್ವತ ತತ್ವ ಚಿಂತನ, ಶಾಶ್ವತ ದೈವ ಚಿಂತನಗಳು ಸತ್ - ಚಿತ್- ಆನಂದಗಳ ಹುಡುಕುವಿಕೆಯಲ್ಲಿ, ವೈಷ್ಣವ ಸಂತರನ್ನು ದಾಸರನ್ನು ಆಚಾರ್ಯರನ್ನು ಕರೆದುಕೊಂಡು ಹೋಗಿವೆ ಎಲ್ಲೆಡೆಯಲ್ಲಿ, ಈ ಡೆಕ್ಕನ್‌ನಲ್ಲಿ

ಹಾಗೆ, ಸಮೀಕ್ಷಿಸಿದಂತೆ, ಯಾವ ವೈಷ್ಣವ ಸಂತನೂ, ಆಚಾರ್ಯನೂ ಸುಖದ ಸುಪ್ಪತ್ತಿಗೆಯಲ್ಲಿ ಬೆಳೆಯಲಿಲ್ಲ, ಹೊರತಾದವರು ಪುರಂದರಾಸರು. ಶ್ರೀ ವಾದಿರಾಜ ತೀರ್ಥರು, ಶ್ರೀ ವ್ಯಾಸರಾಯರು, ಶ್ರೀಕನಕದಾಸರು, ಶ್ರೀರಾಘವೇಂದ್ರ ತೀರ್ಥರು, ಶ್ರೀ ಮಹಿಪತಿದಾಸರು, ಶ್ರೀ ಪ್ರಸನ್ನ ವೆಂಕಟದಾಸರು, ಶ್ರೀ ವಿಜಯದಾಸರು, ಶ್ರೀಗೋಪಾಲದಾಸರು, ಶ್ರೀ ಜಗನ್ನಾಥ ದಾಸರು, ಶ್ರೀ ವೇಣುಗೋಪಾಲದಾಸರು, ಇವರೆಲ್ಲರೂ ಆಧ್ಯಾತ್ಮಿಕವಾಗಿ, ದಾರ್ಶನಿಕವಾಗಿ ಪರಿವರ್ತನಗೊಳ್ಳಬೇಕಾದರೆ,

ಆಂತರ್ಯದ ದೃಷ್ಟಿ ಪಡೆಯಬೇಕಾದರೆ (introvert) ಒಳಗಿನ ಆತ್ಮ ನಿರೀಕ್ಷಣೆ ಗೈಯಬೇಕಾದರೆ ಬಡತನದ ಬೇಗುದಿಯು ಕಾರಣ, 'Geography is sin, ಎಂದು ಸಿದ್ಧಾಂತಿಸಬಹುದು. ಮಹಾರಾಷ್ಟ್ರದ ಸಂತವಾಣಿಯ ಸಂತರೂ ಕೂಡ ಈ ಇಂಥ ಬಯಲ ನಾಡಿನ ಬಡತನದ ಬವಣೆಯಿಂದಲೇ, ಸಂಸಾರ ತೊರೆದು, ದೈವಿಕರಾಗಿದ್ದಾರೆ, 'ಸಂತತನ'ಕ್ಕೆ ಸೆರೆ ಹೋಗಿದ್ದಾರೆ.ಸುಖದ ಸುಪ್ಪತ್ತಿಗೆಯಿಂದ ದೈವಾರಾಧನೆ ಹೊರಡದು.

ದಾಸರ ಪದಗಳು ಹಾಗಾಗಿ ನಡೆ ನುಡಿಗಳು ನಿತ್ಯದ 'ಆನ್ಹಿಕದಂತೆ', ಪಠಣ ಗಳಾದವು. ದಾಸರು ಭವ ಬಂಧನವನ್ನು ಮುಕ್ತಗೊಳಿಸುವ ಮಾಧ್ಯಮರಾದರು, ಮಹಾನುಭಾವ ರಾದರು. ಮರ್ತ್ಯಲೋಕದ ಜೀವರು ಪರಮಪದ ವೈಕುಂಠ ಪದವಿ ಯನ್ನು ಪಡೆಯಲು ಶ್ರೀಹರಿನಾಮವೇ ಸೋಪಾನ ಎಂದು ಸಾರಿ, ಗ್ರಹಸ್ಥಾಶ್ರಮಿಯೂ ಈ ಆಧ್ಯಾತ್ಮ ಸಾಧನೆಯಿಂದ ಮುಕ್ತಿ ಪಡೆಯಬಲ್ಲನೆಂಬುದನ್ನು, ತಮ್ಮೆಲ್ಲರ ಬದುಕಿನಲ್ಲಿ ತೋರಿಸಿಕೊಟ್ಟವರಿವರು.

ಹಂಪಿ ಇಂದು ಹಾಳು ಹಂಪಿಯಾಗಿ ಕಂಡರೂ, ಅದು ಮಧ್ಯಯುಗದಲ್ಲಿ ಮುತ್ತು ರತ್ನಗಳ ರಾಶಿಗಳ ವೈಭವಕಂಡ ವಿಜಯನಗರದ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ಅದೇ ನೆಲದಲ್ಲಿ ನಡೆದಾಡುವ ದೈವಗಳಾಗಿದ್ದ ಶ್ರೀ ವ್ಯಾಸರಾಯರು, ಶ್ರೀಪುರಂದರ ದಾಸರು, ಶ್ರೀ ಕನಕದಾಸರು ಹಾಗೂ ನವವೃಂದಾವನದ ಆನೆಗೊಂದಿಯ ಒಂಬತ್ತು ಶ್ರೀಮದಾಚಾರ್ಯರುಗಳು, ಸಮಾಜವನ್ನು ತಿದ್ದುವ ದಿಶೆಯಲ್ಲಿ ಅಮೃತವಾಣಿಯಂಥ ಕೀರ್ತನೆಗಳನ್ನು, ಸುಳಾದಿ ಉಗಾಭೋಗಗಳನ್ನು ರಚಿಸಿ, ಹಾಡಿ, ಶ್ರೀ ಭಗವತ್ ಚಿಂತನೆ ಯನ್ನು ಸಮಾಜದಲ್ಲಿ, ಮನ-ಮನಗಳಲ್ಲಿ ಮನೆ-ಮನೆಗಳಲ್ಲಿ ಹರಡಲು ಹಾಗೂ ತಮ್ಮ ಜೀವನವನ್ನು ತಾವೂ ಸಾರ್ಥಕಗೊಳಿಸುವುದಷ್ಟೇ ಅಲ್ಲ. ಜನಸಾಮಾನ್ಯರ ಬದುಕನ್ನೂ ಭಗವತ್ ಚಿಂತನೆಯಲ್ಲಿ ಶ್ರೀಮಂತಗೊಳಿಸಿದರು.

ಹಾಗೆ, ನೋಡಿದಲ್ಲಿ ೧೪-೧೬ ಶತಮಾನಗಳು, ದಾಸರ, ಸಂತರ, ಚಿಂತಕರ ಶತಮಾನಗಳೆಂದೇ ಹೇಳಬೇಕು. ಈ ಶತಮಾನಗಳಲ್ಲಿ ಇವರೆಲ್ಲ, ಊರಿಂದೂರಿಗೆ, ತಾಣಗಳಿಂದ ತಾಣಗಳಿಗೆ, ಗುಡ್ಡ-ಗಿರಿ, ನದಿತೊರೆ, ಗಹ್ವರಗಳಿಂದ ಅಲೆದಾಡಿ, 'ಜನ ಹಾಗೂ ನಿಸರ್ಗ'ಗಳ ಜೋಡಣೆಯೊಂದಿಗೆ ಭಗವತ್ ಲೀಲೆಗಳನ್ನು ರಚಿಸಿದ್ದಾರೆ. ಹಾಡಿದ್ದಾರೆ ಹಾಗೂ ಪ್ರಚಾರಗೊಳಿಸಿದ್ದಾರೆ. ಈ ಮೇಲಣ ಶತಮಾನಗಳ, ದಾಸ ಸಾಹಿತ್ಯದ ಪರ್ವಕಾಲ. ಇದಕ್ಕೆ ಐತಿಹಾಸಿಕ ಕಾರಣಗಳನ್ನೂ, ಸಾಮಾಜಿಕ ಕಾರಣ ಗಳನ್ನೂ ಕೊಡಬಹುದು.

ಬಾಹ್ಯವೈಚಾರದ, ಆಚರಣೆಯಲ್ಲಿ ನುಡಿ ನಡೆಯಲ್ಲಿ ತೀರ ವೈರುಧ್ಯವಾದ, ಇಸ್ಲಾಮ್ ಈ ಸಮಯದಲ್ಲಿ ತೂರಿಬಂದು, ತನ್ನ- ತನವನ್ನು ಪಸರಿಸುವಲ್ಲಿ ಪ್ರಚಂಡ ವಾಗುತ್ತ ನಡೆದ ಕಾಲವದು. ಅದಕ್ಕೆ, ಎದಿರೇಟು ಕೊಡುವ ಧಾರ್ಷ್ಟ್ಯ ಈ ಸಂತರ

ಹಾಗೂ ದಾಸರ ಮತ್ತು ಶರಣರ ಸಾಹಿತ್ಯಗಳಲ್ಲಿ ಮೂಡಿ ಬಂದಿತು. ಒತ್ತಡದಿಂದ ಪರಿವರ್ತನೆಗೊಳ್ಳುತ್ತಿರುವ ಪರಂಪರೆಯ ಸಮಾಜವನ್ನು, ಪರಿತರ್ವನದ ಸೀಳಾಗದಂತೆ ತಡೆಹಿಡಿದವರು ಈ ಸಂತರು, ಹಾಗೂ ದಾಸರು ಎಂದ ಹೇಳಬಹುದು. ಸಾಮಾಜಿಕ ಕ್ರಾಂತಿ, ಭಾವಸ್ಪಂದನದವದು, ಅವರದು.

ಹಾಗೆ ನೋಡಿದಲ್ಲಿ, ಕರ್ನಾಟಕ ಮತ್ತು ಮಹಾರಾಷ್ಟ್ರಗಳು ಒಂದೇ ಸಾಂಸ್ಕೃತಿಕ ನೆಲದ ಎರಡು ತುಣುಕುಗಳು. ಜಲವೊಂದೇ ನೆಲವೊಂದೇ ಗಾಳಿಯೊಂದೇ; ಅಲ್ಲಿ, ಮಹಾರಾಷ್ಟ್ರದ ಸಹ್ಯಾದ್ರಿಯಿಂದ ಹರಿದ ನದಿಗಳು ಕರ್ನಾಟಕದ ಈ ಬಯಲು ನೆಲ ದಲ್ಲೂ ನೀರು ಹನಿಸಿವೆ; ಮಹಾರಾಷ್ಟ್ರದ ಅಂಚೆಯಲ್ಲಿ ಭರತಖಂಡದ ತಾಯ ಕಾಲ್ ತೊಳೆವ ಪಶ್ಚಿಮ ನೀಲ-ಕಡಲ ಕರ್ನಾಟಕದ ಕರಾವಳಿಯಲ್ಲಿಯೂ ಹಬ್ಬಿದೆ. ಪ್ರತಿಷ್ಠಾನದ (ಪೈಠಣ ಈಗ ಅಹಮ್ಮದ ನಗರ ಜಿಲ್ಲೆ) ಶಾತವಾಹನರು ಆರ್ಯಪುರ (ಐಹೊಳೆ), ವೇಣುಗ್ರಾಮ (ಬೆಳಗಾವಿ), ಸುಗಂಧವರ್ತಿ (ಸೌಂದತ್ತಿ), ವಡಗಾಂವ್ - ಮಾಧವಪುರ (ಬೆಳಗಾವಿಯ ದಕ್ಷಿಣಭಾಗ), ಪಲಾಶಿಕಾ (ಹಲಸಿ), ವೈಜಯಂತಿಪುರ (ಬನವಾಸಿ ಉ.ಕ. ಜಿಲ್ಲೆ), ಚಂದ್ರಪುರ (ಚಾಂದೋರ್ - ಗೋವೆ), ಹಾನುಂಗಲ್ಲು (ಹಾನಗಲ್) ಇತ್ಯಾದಿ ಪ್ರಾಚೀನ ಕರ್ನಾಟಕದ ಓರೆ ಕೋರೆಗಳಲ್ಲೂ ತಮ್ಮ ಬೌದ್ಧ ವಚನದ ಸತ್ಯ, ಅಹಿಂಸೆ, ಅಚಾರ್ಯ, ಅಪರಿಗ್ರಹ, ಜೀವದಯೆಗಳ ಆದರ್ಶ ಬದುಕನ್ನು ಬಾಳಿದ್ದಾರೆ. ಹೀಗಾಗಿ ಈ ಎರಡೂ ನಾಡುಗಳು ಕರ್ನಾಟಕ ಹಾಗೂ ಮಹಾರಾಷ್ಟ್ರಗಳು ಒಂದಾಗಿ ಬಾಳಿ ಇತಿಹಾಸ ಕಟ್ಟಿವೆ. ಹಾಗೇನೇ, ಮಾನ್ಯಖೇಟದ (ಮಳಖೇಡ ಈಗಿನ ಗುಲಬರ್ಗಾ ಜಿಲ್ಲೆ) ರಾಷ್ಟ್ರಕೂಟ ಚಕ್ರವರ್ತಿಗಳು 'ಕೃಷ್ಣ ಹಾಗೂ ಧೃವ' ವೇರೂಳಿನಲ್ಲಿ (ಎಲ್ಲೋರಾ ಈಗಿನ ಔರಂಗಬಾದ ಜಿಲ್ಲೆ) 'ಏಳೂರಿ'ನಲ್ಲಿ ಕೈಲಾಸನಾಥ ಗುಹಾಂತರ್ದೇವಾಲಯ (Rock - cut - temple)ವನ್ನೂ ಎಲೆಫಂಟ (ಮುಂಬಯಿಂದ ಪಶ್ಚಿಮ ಸಾಗರದ ದ್ವೀಪ, ೨೦ ಕಿ.ಮೀ. ದೂರ) ದಲ್ಲಿ 'ತ್ರಿಮೂರ್ತಿ' ಶೈಲಿ ಲಯಣ ಕಟ್ಟಿಸಿ ಸ್ವತಃ ತಾವೇ ಭವ್ಯರಾಗಿದ್ದಾರೆ.

ಅದರಂತೆ, ಈ ಎರಡು ಅಕ್ಕಪಕ್ಕದ ಪ್ರಾದೇಶಿಕ ವಲಯಗಳಲ್ಲಿ ಕರ್ನಾಟಕದ ಹರಿದಾಸರು ಹಾಗೂ ಮಹಾರಾಷ್ಟ್ರದ ಸಂತರು ಬದುಕಿದ್ದರೂ ಅವರೀರ್ವರು ದೈವಿಕ ಚಂತನ ಆರಾಧನೆ, ದೈವಿಕ ಚಿತ್ರಣಗಳು ಆರಾಧ್ಯದೈವವಾದ ವಿಷ್ಣುವಿನ ಸುತ್ತ ಹೆಣೆಯ ಲ್ಪಟ್ಟವು. ವಿಷ್ಣು, ವಿಹ್ನು, ವಿಠು, ವಿಠಲ ಹಾಗೂ ವಿಠಲಾ ಹೀಗೆ ಈ ನಾಮವು ಬೇರೆ ಬೇರೆ ಪ್ರತ್ಯಯಗಳಲ್ಲಿ ಪ್ರಬುದ್ಧವಾದ ಕನ್ನಡದ ಹರಿದಾಸ ಸಾಹಿತ್ಯದಲ್ಲಿ ಹಾಗೂ ಮರಾಠಿಯ ನಂತರ, ಅಭಂಗ ಸಾಹಿತ್ಯದಲ್ಲಿ ಬಂಧಿತವಾಯಿತು. ಭಜಿಪ ಭಕ್ತಿ ನಾಮವಾಯಿತು, ಜಪವಾಯಿತು. ಪುರಂದರ ವಿಠಲಾ, ಆದಿಕೇಶವ, ವಿಜಯವಿಠ್ಠಲ, ಶ್ರೀಶವಿಠ್ಠಲ, ಜಗನ್ನಾಥ ವಿಠ್ಠಲ ಎಂಬಾಗಿ ವಿಷ್ಣು ರೂಪದ ನಾಮಗಳು ಕರ್ನಾಟಕದಲ್ಲಿ ತಮ್ಮ ಕೀರ್ತನೆ, ಉಪಭೋಗಗಳು, ಸೂಳಾದಿಗಳಲ್ಲಿ ಬಳಸಿದರೆ, ಪಾಂಡುರಂಗ ,

ಪಂಡರಿರಾಯ, ಪಂಢರೀಯ, ಪಾಂಡುರಂಗ ವಿಠಲಾ, ವಿಷ್ಣು ಸಂಬಂಧಿಸಿದ ಹೆಸರುಗಳನ್ನು (ಪಂಡರಪುರದ ವಿಠ್ಠಲ) ತಮ್ಮ ಅಭಂಗಗಳಲ್ಲಿ ಮಹಾರಾಷ್ಟ್ರದ ಸಂತರು ಬಳಸಿ, ಜನ ಅಂತಃಕರಣದಲ್ಲಿ ಸಂಸ್ಥಾಪಿಸಿದರು. 'ವಿಷ್ಣುಮಯ ಮಹಾರಾಷ್ಟ್ರ' ಎಂದು ಪರ್ಯಾಯ ಹೆಸರು ತಂದರು. 'ವೈಷ್ಣವ ಗಜರೀ ಗರ್ಜತಿ' ಎಂದಾಯ್ತು ಆ ನೆಲದಲ್ಲಿ.

ಹರಿದಾಸರ ಬದುಕು ದೈವಾರಾಧನೆಯ ಪರಿಯಲ್ಲಿ 'ವ್ಯಷ್ಟಿಗೆ' ಅಂದರೆ ವ್ಯಕ್ತಿಯ ಎತ್ತರವನ್ನು ಬಯಸಿತು. ಆದರೆ 'ಸಮಷ್ಟಿ'ಯ ಸಮುದಾಯದ ಎತ್ತರಕ್ಕೆ ಪ್ರಯತ್ನ ಗೌಣವಾಗಿರಿಸಿತು. ಪ್ರತಿಯೊಬ್ಬ ಕನ್ನಡ ಹರಿದಾಸನಾಗಲಿ ಅಥವಾ ಮಹಾರಾಷ್ಟ್ರದ ಸಂತನಾಗಲಿ, ತನ್ನ ಆತ್ಮೋದ್ಧಾರಕ್ಕೆ ತಪಗೈದನು. ದೈವಚಿಂತನೆ ಮಾಡಿದನು. ಇದೊಂದು ಈ ಈರ್ವರನ್ನು ಅಭ್ಯಸಿಸಿದಾಗ, ಹೊರಟ ಒಂದು ಸಿದ್ಧಾಂತ ಮಾತ್ರ. ಕಾಲ ಕಳೆದಂತೆ, ಆಯಾ ವ್ಯಷ್ಟಿಯ ನಡೆ ನುಡಿಗಳು ಜನ ಸಮೂಹದಲ್ಲಿ ಬೆರೆತು, 'ಸಮಷ್ಟಿಗೆ' ಸುತ್ತುವರಿದವು.

ಪಾರಮಾರ್ಥಿಕ ಉದ್ದೇಶದಿಂದ, ಹತ್ತಾರು ನೂರಾರು ಜನ ಸೇರಿಕೊಂಡು, ಧ್ಯಾನ, ಭಜನೆ, ಚಿಂತನೆ, ಮನನ, ಮಂಥನ ನಡೆಸಿದರೆ ನಿಜಕ್ಕೂ ಆ ಸ್ಥಳ ವೈಕುಂಠ.

'ನಾಹಂ ವಸಾಮಿ ವೈಕುಂಠೇ,
ಯೋಗಿನಾಂ ಹೃದಯೇ ಚ,
ಮದ್ ಭಕ್ತಾಃ ಯತ್ರ ಗಾಯಂತೆ
ತತ್ರ ತಿಷ್ಠಾಮಿ ನಾರದ'

ಎಂದು ಪರಮತ್ಮನು ನಾರದನಿಗೆ ಹೇಳಿದ ಈ ವಚನವು ಸಾಮೂಹಿಕ ಸತ್ಸಂಗಕ್ಕೆ ಸಮೂಹದ ರೂಪನೀಡಿದ್ದು ತೋರಿಸುತ್ತದೆ. ಇದನ್ನೇ ಹರಿದಾಸರು, ಸಂತರು, ವಾರಕರಿಗಳು ಆಧ್ಯಾತ್ಮಿಕ ಬದುಕನ್ನು ಜೀವಂತವಾಗಿಸಿದ್ದಾರೆ; ಸಮಾಜದಲ್ಲಿ ಶಾಂತಿಯನ್ನು ಹರಡಿದ್ದಾರೆ; ಅದಕ್ಕೆ ದೈವಭಕ್ತಿ ಎಂದು ಕರೆಯುವುದು.

ಭಕ್ತಿಯಲ್ಲಿ ಎರಡು ವಿಧ. ಒಂದು '*ದೈವಭಕ್ತಿ*', ಎರಡನೆಯದು '*ದೇಶಭಕ್ತಿ*', ಭಾರತದ ಇತಿಹಾಸದುದ್ದಕ್ಕೂ ನಾವು ದೈವಭಕ್ತಿಯನ್ನೆ ಬರಹವಾಗಿ ಬಳಸಿದೆವು. ಈ ದೈವ ಭಕ್ತಿಯು ವ್ಯಕ್ತಿಯನ್ನೇ ಸಬಲವನ್ನಾಗಿ ಮಾಡಿತೇ ಹೊರತು ಸಮಾಜವನ್ನು ರಾಷ್ಟ್ರವನ್ನು ಸಬಲವನ್ನಾಗಿ ಮಾಡಲಿಲ್ಲ. ವ್ಯಕ್ತಿ ವ್ಯಕ್ತಿ ಸಬಲನಾದ; ಸಮಾಜ ದುರ್ಬಲ ವಾಯಿತು. ತತ್ವ, ಮತ, ಪಂಥ ನಂಬುಗೆ ಧರ್ಮಗಳು ಜಾತಿ ಜಾತಿ ವಿಜಾತಿ ಪಕ್ಷ ಪಂಗಡಗಳನ್ನು ನಿರ್ಮಿಸುವ ಗರಡಿ ಮನೆಗಳಾದವು - ಹಾಗಾಗಿ, ಸಮಾಜವು ಶಕ್ತಿ ಹೀನವಾಗಿ ಈ ದೇಶ ಬಹಳಷ್ಟು ಸಲ ಆಕ್ರಮಣಕ್ಕೆ ಒಳಗಾಯಿತು. ಶಕರು, ಹೂಣರು, ಗ್ರೀಕರು, ಕುಶಾನರು, ಮುಸ್ಲಿಮರು, ಮೊಘಲರು, ಇಂಗ್ಲೀಷರು, ಡಚ್‌ರು, ಫ್ರೆಂಚರು ಎಲ್ಲರೂ ಈ ದೇಶಕ್ಕೆ ವಸಾಹಕತೀರಣಕ್ಕಾಗಿ ಧಾವಿಸಿದರು. ಇದಕ್ಕೆ ದೇಶಭಕ್ತಿಯ ನ್ಯೂನತೆ ಕಾರಣ.

ವ್ಯಾವಹಾರಿಕವಾಗಿ ದೇಶದ ಉನ್ನತಿಗೆ, ದೃಢತೆಗೆ 'ದೇಶಭಕ್ತಿ'ಯೇ ಕಾರಣ. ಕೆಲ ಸಮಯದಲ್ಲಿ ದೈವ ಭಕ್ತಿಯನ್ನು ತೊರೆದು ದೇಶಭಕ್ತಿಯನ್ನು ನಾವು ಅಳವಡಿಸಲೇ ಬೇಕು. ದೇಶಭಕ್ತಿಯು ದೈವ-ಭಕ್ತಿಗಿಂತ ಮಿಗಿಲು. ದೇಶವಿದ್ದರೆ ಜನ, ಇಲ್ಲದಿದ್ದರೆ ಮರಣ. ಹಾಗಾಗಿ ದೇಶಭಕ್ತಿ ಸದಾ ಶ್ರೇಷ್ಠ, ಅದನ್ನು ನಾವು ಅಳವಡಿಸಿದರೆ ದೇಶ ಸುರಕ್ಷ. ವಿಜಯನಗರದ ಸಾಮ್ರಾಜ್ಯದಲ್ಲಿ, ಅದರ ಸ್ಥಾಪನಾದಿನಗಳಲ್ಲಿ ಶ್ರೀ ವಿದ್ಯಾರಣ್ಯರು 'ದೇಶಭಕ್ತಿ'ಗೇ ಹೆಚ್ಚು ಮಹತ್ವ ನೀಡಿದರು. ದೈವಭಕ್ತಿಯನ್ನು ಬದಿಗಿರಿಸಿ, ದೇಶಭಕ್ತಿಯ ಕಹಳೆ ಕೂಗಿದರು - ಹಾಗಾಗಿ ಏಳು ಸಾಯಣ ಕಟ್ಟು ಗ್ರಂಥವ, ಹಾಳು ಗ್ರಂಥಗಳೋದಿದೇವತಕೆ! ಏಳು ಈ ಕ್ಷಣ ಮಾತ್ರಕೆ ಎಂದು ದೇಶ ಸಿಲುಕಿದ ಗಂಡಾಂತರದಲ್ಲಿ, ದೇಶಭಕ್ತಿಯ ಶಕ್ತಿಯನ್ನು ನೀಡಿ, ವಿಜಯನಗರದ ಹಿಂದೂ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಇಲ್ಲಿ ವಿದ್ಯಾರಣ್ಯರಂಥ ರಾಜನೀತಿಜ್ಞನ ದೈವಭಕ್ತಿಯ ಜೊತೆಗೆ, ದೇಶಭಕ್ತಿಯು ಬಹಳಷ್ಟು ದೇಶರಕ್ಷಣೆಗೆ ಪ್ರಭಾವ ಬೀರಿತು. ದೈವ ಭಕ್ತಿಗಿಂತ ದೇಶಭಕ್ತಿ ಶ್ರೇಷ್ಠ .

ದಾಸ ಸಾಹಿತ್ಯ ಯಾವ ರಾಜಾಶ್ರಯವನ್ನೂ ಬಯಸಲಿಲ್ಲ, ಭಗವಂತನೇ ಆಶ್ರಯ, ದಾಸರೇ ಆಶ್ರಿತರು, ಬದುಕಿಗಾಗಿ ಅವರು ಕೈಯೊಡ್ಡಲಿಲ್ಲ. ವಿಶ್ವಚಾಲಕನ ಚೇತನದಲ್ಲಿ ಕಾರಂಜಿಯಂತೆ ಪುಟಿಪುಟಿದು, ಸುಂದರ ವರ್ಣಗಳ ಚೆಲುವ ಹೊತ್ತು ಅವರ ಬದುಕು ಮೆರೆಯಿತು. ಭಗವಂತನ ಪ್ರೇರಣೆಯಿಂದ, ಭಕ್ತಿ ಹೃದಯದ ಚಿಲುಮೆಯಿಂದ ಹೊರಹೊಮ್ಮಿದ ಈ ಸಾಹಿತ್ಯ ಬಹಳಷ್ಟು ಜನಸಮುದಾಯವನ್ನು ಅಪ್ಪಿತು. ಹಾಗಾಗಿ ದಾಸರು ಜನ ಸಾಮಾನ್ಯರಂತೆ ಬದುಕಿ, ಸಂಪದ್ಭರಿತ ಭಕ್ತಿ ಸಾಹಿತ್ಯವನ್ನು ರಚಿಸಿ, ಕನ್ನಡಿಗರಿಗೆ ಮಹದುಪಕಾರ ಮಾಡಿದ್ದಾರೆ.

ಪ್ರೌಢ ಕವಿಗಳ ಸಾಹಿತ್ಯವನ್ನು ಓದಿ, ತಿಳಿಯುವಷ್ಟು ಜ್ಞಾನವಿಲ್ಲದ ಜನ ಸಾಮಾನ್ಯರು ದಾಸರ ಕೀರ್ತನೆಗಳನ್ನು ಸೂಳಾದಿ (ಸೂಳ್ನುಡಿ) ಸವಿಯನ್ನು ಅನಾಯಾಸವಾಗಿ ಗ್ರಹಿಸಿಕೊಂಡರು. ಇದಕ್ಕೆ ಮೂಲಕಾರಣ ಭಾಷೆಯಲ್ಲಿ ಸರಳತೆ, ಸೌಂದರ್ಯ ಹಾಗೂ ಗೇಯತೆ. ಮಧ್ವಸಿದ್ಧಾಂತಕ್ಕೆ, ವೈಷ್ಣವ ಚಿಂತನೆಗೆ ಹಾಗೂ ಭಾಗವತ ಸಂಪ್ರದಾಯಕ್ಕೆ ಮನ್ನಣೆ ದೊರಕಲು ದಾಸರ ಸಂಖ್ಯೆಯೂ ಬೆಳೆಯಿತು. ಅದಾಗಿ ದಾಸವಾದಿಗಳು ತಾಳ ಲಯ ಬದ್ಧವಾಗಿ, ಶೃಂಗಾರ ಶಾಂತ ಕರುಣಾ, ಹಾಸ್ಯ, ದೈನ್ಯ, ಸಮರ್ಪಣ ಭಾವಗಳಿಂದ ತುಂಬಿ ಜನರ ಮನದಾಳಕ್ಕೆ ಮುಟ್ಟಿ ಜನಸ್ತೋಮವನ್ನು ಆಕರ್ಷಿಸಿದವು.

ಶ್ರೀಪಾದರಾಯರ ದಾಸ ಸಾಹಿತ್ಯವನ್ನು ಎತ್ತಿ ಹಿಡಿದ ವ್ಯಾಸರಾಯರು, ಅದಕ್ಕೆ ಜೀವಕಳೆಯನ್ನು ತುಂಬಿದರು. ತದನಂತರ ಪುರಂದರದಾಸರು, ಕನಕದಾಸರು, ವಿಜಯದಾಸರು, ಜಗನ್ನಾಥದಾಸರು ದಾಸ ಸಾಹಿತ್ಯದ ಸೊಗಡನ್ನು ಸುತ್ತಲೂ ಹರಿಸಿದರು.

೧೬ನೆಯ ಶತಮಾನದ ಉತ್ತರಾರ್ಧದಲ್ಲಿ ರಾಜ್ಯವಿಸ್ತಾರಗಳ ರಾಜಕೀಯ ಗೊಂದಲವು ದಕ್ಷಿಣದಲ್ಲಿ (ಡೆಕ್ಕನ್), ಅದರಲ್ಲೂ ಕನ್ನಡನಾಡಿನಲ್ಲಿ ಎದ್ದವು. ಹಿಂದು ರಾಜರುಗಳ ಮುಸ್ಲಿಮ್ ಸುಲ್ತಾನರ ಮಾನಸಿಕ ಆವೇಶ ಆಕ್ರಮಣಗಳು ಅತಿರೇಕವಾದವು. ಶಿಲ್ಪಗಳಲ್ಲಿ ಕೆತ್ತಿದ ಹಿಂದೂ ದೈವಗಳು ವಿರೂಪ ಹೊಂದಿದವು Iconoclasts ರಿಂದ (ಮೂರ್ತಿ ಭಂಜಕರಿಂದ). ಇಂಥ ಅಹಸನೀಯತೆಯಲ್ಲಿ ದಾಸಸಾಹಿತ್ಯ ಮುಂದುವರಿಯುವಲ್ಲಿ ಸ್ವಲ್ಪ ತಡೆಯುಂಟಾಯಿತು. ಇದು ವಿಜಯ ನಗರದ ಪತನದ ಕಾಲ (ಕ್ರಿ.ಶ. 1565) ಹಾಗೂ ತದನಂತರದ ಗೋಲ್ಕೊಂಡ ನವಾಬರ, ಸವಣೂರ, ಆದವಾನಿಗಳಂಥ ಸಣ್ಣ ಪಾಳ್ಳೆ ಗಾರರು ನಡೆಸಿದ ಗದ್ದಲ, ಬ್ರಿಟಿಷರ ವಸಾಹತೀಕರಣ, ಇತ್ಯಾದಿಗಳು ದಾಸಸಾಹಿತ್ಯದ ಚಲನೆಗೆ ಅಲ್ಲಲ್ಲಿ ತಡೆಯೊಡ್ಡಿದವು.




ಈ ಅಡೆತಡೆಗಳ ಮಧ್ಯದಲ್ಲಿ, ಕೆಲ ದಾಸವರೇಣ್ಯರು, ವೈಷ್ಣವಾ ಚಾರ್ಯರು, ಜರ್ಜರಿತ ವಿಜಯ ನಗರದ ಸಾಮ್ರಾಜ್ಯದ ವಿಸ್ತಾರದ ನೆಲದಿಂದ ಮತ್ತೆ ಮೇಲೆದ್ದರು. ಅವರಲ್ಲಿ ಶ್ರೀ ರಾಘವೇಂದ್ರ ಯತಿ ಗಳು, ಶ್ರೀ ವಿಜಯದಾಸರು, ಶ್ರೀ ಜಗನ್ನಾಥ ದಾಸರು, ಶ್ರೀ ಗೋಪಾಲ ದಾಸರು, ಶ್ರೀ ವಿಠ್ಠಲದಾಸರು, ಶ್ರೀ ಅಭಿನವ ಜನಾರ್ದನ ವಿಠ್ಠಲದಾಸರು, ಶ್ರೀ ಮಹಿಪತಿ ದಾಸರು, ಶ್ರೀ ಕಮಲೇಶದಾಸರು, ಶ್ರೀ ಶ್ರೀಶ ವಿಠ್ಠಲದಾಸರು, ಶ್ರೀ ಅಭಿನವ ಜನಕ ವಿಠಲರು ಇತ್ಯಾದಿಯವರು ಉದ್ದನೆಯ ಸಾಲಲ್ಲಿ ನಿಂತರು. ಇವರಿಗೆಲ್ಲ ಶ್ರೀ ರಾಘವೇಂದ್ರರೇ ಕೇಂದ್ರುಶಕ್ತಿ.

ವಿಷ್ಣುವಿನ ಸುತ್ತ ತಮ್ಮ ಭಕುತಿಯ ಹರಿವನ್ನು ಹರಿಸಿ, ವಿಷ್ಣು ಸ್ತೋತ್ರ, ವಿಷ್ಣು ಚಿಂತನ, ವಿಷ್ಣು ಆರಾಧನೆಗಳ ಮೂಲಕ 'ವಿಷ್ಣುಸರ್ವೋತ್ತಮ'ನೆಂದು ದೃಢ ನಂಬುಗೆಯೊಂದಿಗೆ, ಕನ್ನಡದ ಭಕ್ತಿ ಸಾಹಿತ್ಯದ ಸಿರಿಯನ್ನು ಬೆಳೆಸಿದ ಮಹನೀಯರು ಹರಿದಾಸರು ಹಾಗೂ ವೈಷ್ಣವಾಚಾರ್ಯರು.

ಕರ್ನಾಟಕದ ನೆಲದಲ್ಲಿ, ಭೀಮ,ಕೃಷ್ಣೆ, ತುಂಗಭದ್ರೆ, ಕಪಿಲಾ ಹಾಗೂ ಕಾವೇರಿಯರು ಪಾವನಗೊಳಿಸಿದ ಮೃದ್ -ಗಂಧದಲ್ಲಿ, 'ಫಲವೆನ್ನದ ಹಿರಿಮೆಯಿಂದ, ಕುಲವೆನ್ನದ ಗರಿಮೆಯಿಂದ' ಹರಿದಾಸರು ಹಾಗೂ ವೈಷ್ಣವಾಚಾರ್ಯರು ವ್ಯಷ್ಟಿ ದ್ವೀಪವಾಗಿ ಬೆಳೆದಿದ್ದಾರೆ. ಹತ್ತು ಹಲವಾರು ವೈಷ್ಣವ ಭಕುತರಲ್ಲಿ, ಅದರಲ್ಲೂ ಹಂಪಿಯ ಪರಿಸರದಲ್ಲಿ ಹಾಗೂ ಅದರ ಅನತಿದೂರದ ತಾಣಗಳಲ್ಲಿ, ವೈಷ್ಣವ ಕೀರ್ತನಗಳನ್ನು, ಸಂಕೀರ್ತಿಸಿದ ದಾಸವರೇಣ್ಯ ಪುರಂದರದಾಸರು, ಕನಕದಾಸರು, ವಿಜಯದಾಸರು, ಜಗನ್ನಾಥದಾಸರು ಭಕ್ತಿ ನಡೆ ನಡೆಸಿದ್ದಾರೆ.

ಇವರ ಜೊತೆಗೆ, ಕೃಷ್ಣದೇವರಾಯನ ರಾಜಗುರುಗಳಾದ ಶ್ರೀ ವ್ಯಾಸರಾಯರು, ಹಾಗೂ ಆನೆಗೊಂದಿಯ ತುಂಗಭದ್ರಾ ನದಿಯ ನವವೃಂದಾವನ ದ್ವೀಪದಲ್ಲಿ ಬೃಂದಾವನಸ್ಥರಾದ ವೈಷ್ಣವ ನವ ವೈಷ್ಣವ ಮುನಿಗಳು ಆಚಾರ್ಯರು ಹಾಗೂ ಶ್ರೀ ವೈಷ್ಣವ ಮತದ ರಾಮಾನುಜಾಚಾರ್ಯರ ಕೆಲವು ಅನುಯಾಯಿ 'ಆಳ್ವಾರರು' ಹಂಪಿಯ ನೆಲದಿಂದಲೇ ಹರಿನಾಮ ಸಂಕೀರ್ತನೆಯನ್ನು ಹಾಡಿದ್ದಾರೆ.



ಇವರೆಲ್ಲರು ವೈಷ್ಣವ ವೈಚಾರಿಕ ಶಕ್ತಿಗಳಾಗಿ ಹಂಪಿಯ ಪರಿಸರದಲ್ಲಿ ಬೆಳೆದಿದ್ದಾರೆ. ಈ ಮಹನೀಯರ ಆಧ್ಯಾತ್ಮದ ಪಾರ್ಶ್ವದಲ್ಲಿ ಬೆಳೆದ ಕನ್ನಡ ಸಾಹಿತ್ಯ- ದಾಸ ಸಾಹಿತ್ಯವೆಂಬುದು - ತನ್ನದೇ ಆದ ಮಹತ್ವದ ಮೈಲುಗಲ್ಲಾಗಿದೆ. ಇವರಲ್ಲಿ ಶ್ರೀ ವ್ಯಾಸರಾಯರೇ ಹೇಳುವಂತೆ, 'ದಾಸರಲ್ಲಿ ಶ್ರೇಷ್ಠರಯ್ಯ ಪುರಂದರದಾಸರು', ಅವರನ್ನು ಹಂಪಿಯ ನೆಲದಿಂದಲೇ ಸ್ಮರಿಸಬೇಕು. ಪುರಂದರರ ಸಾವಿರಾರು ಕೀರ್ತನಗಳು 'ಸಾವಿರದ' ನುಡಿಮುತ್ತುಗಳು. 'ಮನ್ಮನೋಭೀಷ್ಟಂ ಪುರಂದರಂ, ಸರ್ವಾಭೀಷ್ಟ ಫಲಪ್ರದಂ, ಪುರಂದರ ಗುರುಂ ವಂದೇ, ದಾಸಶ್ರೇಷ್ಠ ದಯಾನಿಧಿಮ್' ದಕ್ಷಿಣ ಭಾರತದ, ಅದರಲ್ಲೂ ಕರ್ನಾಟಕದಲ್ಲಿ, ಮಧ್ಯಯುಗೀನ ಇತಿಹಾಸದಲ್ಲಿ, ಈ ಜನಮನ ಸಂಸ್ಕೃತಿಗೆ ತೀರ ಅಪರಿಚಿತವಾದ 'ಇಸ್ಲಾಮ್' ನಡವಳಿಕೆಯು ತೂರಿ ಬಂದುದರಿಂದ, ಅದರಿಂದ ಉದ್ಭವಿಸಿದ ಕುಳಿರ್ಗಾಳಿ (sweeping wind)ಯು 'ಸಮಷ್ಟಿ'ಯ ನೆಮ್ಮದಿಯ ಬದುಕಿಗೆ ಒಂದು ರೀತಿಯಲ್ಲಿ

ಅಡೆತಡೆಗಳನ್ನು ಒಡ್ಡಿತು. ಆಗ, ವೃಷ್ಟಿ ಬದುಕಿಗೆ, ಸಮಾಜದ ತೆರೆದ ಮರೆಯಲ್ಲಿ ನಿಂತ ಚಿಂತನಪರ ವ್ಯಕ್ತಿಗಳೇ ಆಧ್ಯಾತ್ಮಿಕ ಶಕ್ತಿಗಳಾಗಿ ಬೆಳೆದರು. ಅವರೇ ವೈಯಕ್ತಿಕ ಶಿಖರಗಳಾಗಿ ಮೇಲೆದ್ದರು. ತಮ್ಮ ವೈಯಕ್ತಿಕ ಬದುಕಿಗೆ ಸಾತ್ವಿಕ ಎತ್ತರವನ್ನೂ, ಸಮಾಜಕ್ಕೆ ಸಾಮೂಹಿಕವಾಗಿ ಆಧ್ಯಾತ್ಮಿಕ ಎತ್ತರವನ್ನೂ, ತಮ್ಮ ದಾಸ ಸಾಹಿತ್ಯದ ಮೂಲಕ ಹೆಚ್ಚಿಸಿದರು.

ತುಂಗಭದ್ರೆಯ ತರಂಗಗಳಲ್ಲಿ ಹಂಪಿಯ ಹರಿದಾಸರ ಭಕ್ತಿ ಹರಿದಿದೆ. ವಿಷ್ಣು ಭಕುತರಾದ ವೈಷ್ಣವಾಚಾರ್ಯರ ನುಡಿ, ಈ ಪರಿಸರದಿಂದ ಪಸರಿಸಿವೆ, ಇಲ್ಲಿಯ ನವವೃಂದಾವನದಲ್ಲಿ ಬೃಂದಾವನಸ್ಥರಾದ ಒಂಬತ್ತು ವೈಷ್ಣವ ಋಷಿಗಳ ತಪದ 'ಫಲ' ಇಲ್ಲಿಂದ ನಾಡಿನೆಲ್ಲೆಡೆ ಹರಡಿದೆ; ಅಲ್ಲದೆ ಶ್ರೀವೈಷ್ಣವ ಚಿಂತನದಲ್ಲಿ ತಮ್ಮನ್ನೇ ತೊಯ್ದು ತೆಪ್ಪಟೆಯಾಗಿರಿಸಿದ ಹತ್ತು ಹಲವಾರು ಶ್ರೀ ಆಳ್ವಾರರು ನಡೆದ ಈ ನೆಲ ಪಾವನವಾಗಿದೆ. ಇಲ್ಲಿ ಅವರೆಲ್ಲರನ್ನು ಒಬ್ಬೊಬ್ಬರನ್ನಾಗಿ ದರ್ಶಿಸೋಣ.

ಶ್ರೀ ಪುರಂದರದಾಸರು (ಕ್ರಿ.ಶ. ೧೪೮೦ - ೧೫೬೪)

ಪುರಂದರದಾಸರು 'ದಾಸವರೇಣ್ಯ'ರೆಂದು ಶ್ರೀ ವ್ಯಾಸರಾಯರೇ ವರ್ಣಿಸಿದ್ದಾರೆ. ಪುರಂದರದಾಸರು ಜನಿಸಿದ ಊರಿನ ಬಗ್ಗೆ ಇನ್ನೂ ಐತಿಹಾಸಿಕ ದಾಖಲೆಗಳು ಅತ್ತಿಂದಿತ್ತ ಇತ್ತಿಂದತ್ತ ತೂಂಡುತ್ತಿವೆ. ಅವರು ಜನಿಸಿದ್ದು ಪುಣೆಯ ೧೮ ಮೈಲಿ ಅಂತರದಲ್ಲಿರುವ ಆಗಿನ ಕರ್ನಾಟಕದ ಭಾಗವಾಗಿದ್ದ 'ಪುರಂದರಗಡ' ಎಂತಾಗಿ, ತರುವಾಯ ಹಂಪಿಗೆ ಬಂದು ಬೆಳ್ಳಿ ಬಂಗಾರ ರತ್ನ ಮಾರಾಟದ ಚಿನಿವಾಲನಾಗಿ, ಅತ್ಯಂತ ಶ್ರೀಮಂತನಾಗಿ, 'ನವಕೋಟಿ ನಾರಾಯಣ' ನೆಂದು ಅವರ ಸಮ ಕಾಲೀನ ಬಲಾಢ್ಯ ಚಕ್ರವರ್ತಿಯಾದ ಶ್ರೀಕೃಷ್ಣದೇವರಾಯನಿಂದ ಬಿರುದನ್ನು ಪಡೆದರು. ಕೊನೆಗೆ ಬದುಕಿ ನಲ್ಲಿ 'ನೈಜಅರ್ಥ'ದ ಬೆಳಕನ್ನು ಕಂಡು, ಸರ್ವಸ್ವವನ್ನೂ ತ್ಯಾಗ ಮಾಡಿ ಹರಿದಾಸ ದಾಸರು ಎಂದು ಒಂದು ಐತಿಹ್ಯ ಹೇಳುತ್ತಿದ್ದರೆ, ಅವರು ಹಂಪಿಯ ಪರಿಸರದ ಕಮಲಾಪುರದವರೇ ಆಗಿದ್ದು, ಪ್ರಸಿದ್ಧ ಚಿನಿವಾಲ ವ್ಯಾಪಾರಿಯಾಗಿದ್ದಾರೆಂದು ಮತ್ತೊಂದು ದಾಖಲೆ ಹೇಳುತ್ತಿದೆ. ಇನ್ನೊಂದು ಕಥನ ಅವರನ್ನು ಶಿವಮೊಗ್ಗ ಜಿಲ್ಲೆಯ ಪುರಂದರಪುರಕ್ಕೆ ಜೋಡಿಸಿ, ಅಲ್ಲಿಂದ ಹಂಪಿಗೆ




ಬಂದು ಒಬ್ಬ ಶ್ರೇಷ್ಠ ಬಂಗಾರದ ವ್ಯಾಪಾರಿ ಆದರೆಂದು ಹೇಳುತ್ತದೆ.

ಸ್ವಲ್ಪದರಲ್ಲಿ ಹೇಳುವುದೆಂದರೆ, ಅವರು ರಚಿಸಿದ ಕೀರ್ತನಗಳು ಉಗಾಭೋಗಗಳು, ಸುಳಾದಿಗಳು ಒಟ್ಟು ೪,೭೫,೦೦೦ ಕೃತಿಗಳು. ಅವು ಪುರಂದರೋಪ ನಿಷತ್ತುಗಳೆಂದು ಕರೆಯಲ್ಪಟ್ಟಿವೆ.

ಸಾಹಿತ್ಯ ಸಂಗೀತ ಹಾಗೂ ಆಧ್ಯಾತ್ಮಗಳ ತ್ರಿವೇಣಿ ಸಂಗಮಗಳಾಗಿವೆ ಅವರ ಕೃತಿಗಳು. 'ಕರ್ನಾಟಕ ಸಂಗೀತ ಪಿತಾಮಹ' ಎಂಬ ಗೌರವ ಇವರಿಗೆ. 'ಪುರಂದರ ವಿಠಲ' ಎಂಬ ಕಾವ್ಯನಾಮ ಇವರದು. ಅನೇಕ ತೀರ್ಥಕ್ಷೇತ್ರಗಳನ್ನು ನಾಡಿದುದ್ದಕ್ಕೂ ಸಂದರ್ಶಿಸಿ, ಆಯಾ ಕ್ಷೇತ್ರಗಳ ಮೂರ್ತಿಗಳ ಮೇಲೆ, ತೀರ್ಥಗಳ ಮೇಲೆ, ಸ್ಥಳ ಪುರಾಣಗಳ ಮೇಲೆ, ಜನತೆಯ ಧರ್ಮಾಚರಣೆಗಳ ಮೇಲೆ, ಹಬ್ಬ ಹರಿದಿನಗಳ ಮೇಲೆ, ಮಾನವ ಜನ್ಮದ ಮೇಲೆ, ಅಗಣಿತ ದೇವರ ನಾಮಗಳನ್ನು ರಚಿಸಿ, ಕೀರ್ತನ ಪದ್ಧತಿ ಹಾಗೂ ಸಂಗೀತ ಶಾಸ್ತ್ರವನ್ನು ಉದ್ಧರಿಸಿದ ಮಹಾತ್ಮರಿವರು.



'ಸ್ತ್ರೀಯರಂತೂ ಈ ದಾಸರಪದಗಳನ್ನು ನಿತ್ಯದ ಆನ್ಹಿಕದಂತೆ' ಪಠಣೆ ಈಗಲೂ ಮಾಡುತ್ತಾರೆ. ದಾಸರನ್ನು ಜಗದುದ್ಧಾರಕ್ಕಾಗಿಬಂದ ಮಹಾನು ಭಾವರೆಂದು ತಿಳಿಸಿದ್ದಾರೆ. ಮೃತ್ಯು ಲೋಕ ಜೀವರು ಪರಮಪದ ವೈಕುಂಠ ಪದವಿಯನ್ನು ಪಡೆಯಲು ಈ ಹರಿನಾಮವೇ ಸೋಪಾನವೆಂದು ಸಾರಿ, ಗೃಹಸ್ಥಾಶ್ರಮಿಯೂ ಈ ಸಾಧನೆಯಿಂದ ಮುಕ್ತಿ ಪಡೆಯಬಲ್ಲನೆಂದು ತಮ್ಮ ಅವತಾರದಲ್ಲಿ ತೋರಿಸಿಕೊಟ್ಟವರು ಈ ದಾಸರು. ಮುತ್ತು ರತ್ನ ರಾಶಿಗಳ ಬಳ್ಳದಿಂದ ಅಳೆವ ವೈಭವ ಕಂಡ ವಿಜಯನಗರದ ಸ್ರಾಮಾಜ್ಯದ ಈ ಹಂಪಿಯ ಪರಿಸರದಲ್ಲಿ, ತುಂಗಭದ್ರೆಯ ದಡದಲ್ಲಿ ಪುರಂದರ ಮಂಟಪವಿದೆ ಹಾಗೂ ಅವರು ಆರಾಧಿಸಿದ 'ವಿಜಯವಿಠ್ಠಲನ' ಭವ್ಯ ದೇವಾಲಯವೂ ಅಲ್ಲಿವೆ. ಇವು ಕೇಂದ್ರ ಸರಕಾರದಿಂದ ಸಂರಕ್ಷಿತ ರಾಷ್ಟ್ರೀಯ ಕಟ್ಟಡಗಳಾಗಿವೆ (Protected National Monuments). ಪುರಂದರ ದಾಸ ಶ್ರೇಷ್ಠ, ದಾರ್ಶನಿಕ, ಕರ್ನಾಟಕದ ದಾಸಸಾಹಿತ್ಯದ ಸಂಪತ್ತು, ಅವರೊಬ್ಬ ದೈವಜ್ಞಾನಿ, ಸಾಮಾಜಿಕ ವಿಜ್ಞಾನಿ ಹಾಗೂ 'ತತ್ವಜ್ಞಾನಿ', ಕರ್ನಾಟಕ ಸೊತ್ತು.



ಪುರಂದರನುಡಿಗಳಲ್ಲಿ ವಿಷ್ಣುನಾಮಸ್ಮರಣೆಯಲ್ಲದೆ ಈಶ್ವರ ನಾಮಸ್ಮರಣೆಯೂ ಕೂಡ ಹೆಣೆದುಕೊಂಡಿದೆ. ಒಂದು ಉದಾಹರಣೆ:

'ಕೈಲಾಸವಾಸ ಗೌರೀಶ ಈಶ
ತೈಲಧಾರೆಯಂತೆ ಮನಸುಕೊಡು ಹರಿಯಲ್ಲಿ..'

ಕನಕದಾಸರು (ಕ್ರಿ.ಶ ೧೫೦೮ - ೧೬೦೬)

ಪುರಂದರದಾಸರು ಕನಕದಾಸರು ಇಬ್ಬರೂ ಈ ವ್ಯಾಸರಾಯರ ಶಿಷ್ಯರು. ಶ್ರೀ ಪುರಂದರ ಸಂಪರ್ಕದಲ್ಲಿ ಬಂದ ಕನಕದಾಸರು ಧಾರವಾಡ ಜಿಲ್ಲೆಯ 'ಬಾಡ'ದವ ರಾದರೂ, ತಂದೆಯಂತೆಯೇ 'ಆನೆಗುಂದಿ' ಕ್ಷೇತ್ರದಲ್ಲಿ (ಹಂಪಿಯ ತುಂಗಭದ್ರೆಯ ಉತ್ತರ ಭಾಗದಲ್ಲಿಯ ನೆಲೆ) ಕೆಲವು ಕಾಲ ದಂಡನಾಯಕರಾಗಿ ದಿಟ್ಟತನದಿಂದ ಕೆಲ ಕಾಲ ಅಧಿಕಾರ ನಿರ್ವಹಿಸಿದರು. ಮುಂದೆ ತಮಗೆ ದೊರೆತ ಧನದಿಂದ ಕಾಗಿನೆಲೆಯಲ್ಲಿ 'ನರಸಿಂಹ' ದೇವಾಲಯವನ್ನು ಜೀರ್ಣೋದ್ಧಾರ ಮಾಡಿ, ಬಾಡಗ್ರಾಮದಲ್ಲಿದ್ದ ಆದಿಕೇಶವನ ಮೂರ್ತಿಯನ್ನು ತಂದು ಕಾಗಿನೆಲೆಯಲ್ಲಿ ಪ್ರತಿಷ್ಠಾಪಿಸಿ, ಶ್ರೀ ಕೇಶವನ ಇಚ್ಛೆಯಂತೆ, ಹರಿದಾಸರಾದರು.


'ಕಾಗಿನೆಲೆಯಾದಿಕೇಶವ' ಎಂಬ ಅಂಕಿತದಿಂದ ಇವರ ಕೀರ್ತನೆಗಳು ರಚಿತ ವಾಗಿವೆ. ಶ್ರೀ ಹರಿಯ ಆಜ್ಞೆಯಂತೆ, ಶ್ರೀ ವ್ಯಾಸರಾಯರ ಪರಮಶಿಷ್ಯರಾಗಿ, ಸ್ತ್ರೀ ಶೋಷಣೆ, ಪ್ರಾಣಿಬಲಿ, ಜಾತಿ, ಭೇದಗಳು ಇತ್ಯಾದಿಗಳನ್ನು ಖಂಡಿಸಿ, ಜನರನ್ನು ಸನ್ಮಾರ್ಗಕ್ಕೆ ತರಲು ಸಮಾಜಸುಧಾರಕರಾದರು. ಉಡುಪಿಯ ಶ್ರೀಕೃಷ್ಣನು, ಕನಕದಾಸರು ಭಕ್ತಿಗೆ ಮೆಚ್ಚಿ, ಅವರಿಗಾಗಿಯೇ ವಿಶೇಷ ದರ್ಶನ ನೀಡಿದ 'ಕನಕನ ಖಿಂಡಿ'ಯು ಇಂದಿಗೂ ಅವರ

ಭಕ್ತಿಯು ನಿದರ್ಶನವಾಗಿದೆ. ಕನಕದಾಸರು ಕೀರ್ತನೆ ಗಳಲ್ಲದೆ, ಮೋಹನ ತರಂಗಿಣಿ, ಹರಿಭಕ್ತಿಸಾರ, ನಳಚರಿತ್ರೆ, ರಾಮಧಾನ್ಯ ಚರಿತೆ ಮೊದಲಾದ ಕಾವ್ಯಗಳನ್ನು ರಚಿಸಿದ್ದಾರೆ. ಇವರ 'ಮುಂಡಿಗೆ'ಗಳು ಹರಿದಾಸ ಸಾಹಿತ್ಯಕ್ಕೆ ವಿಶೇಷ ಕೊಡುಗೆಗಳಾಗಿವೆ'

ಏರುಪೇರುಗಳ ಸಾಮಾಜಿಕ ವ್ಯವಸ್ಥೆ ಕಂಡು, ಕನಕದಾಸರು:
'ಕುಲಕುಲವೆಂದು ಎನ್ನುತಿಹರು
ಕುಲ ಯಾವುದು ಸತ್ಯ ಸುಖವುಳ ಜನರಿಗೆ...
ಆತ್ಮಯಾವ ಕುಲ ಜೀವ ಯಾವ ಕುಲ,
ತತ್ವೇಂದ್ರಿಯಗಳ ಕುಲಪೇಳಿರಯ್ಯ
ಅಂತಾತ್ಮರಾತ್ಮ ನೆಲೆಯಾದಿ ಕೇಶವ
ಆತನೊಲಿದ ಮೇಲೆ ಯಾತರ ಕುಲವಯ್ಯ..'

ಶ್ರೀ ರಾಘವೇಂದ್ರ ತೀರ್ಥರು (ಕ್ರಿ.ಶ.೧೫೯೫ - ೧೬೭೧)

ಪ್ರಹ್ಲಾದಾಂಶರಾದ ಶ್ರೀ ವ್ಯಾಸರಾಜರ ಅವತಾರಿಗಳಾದ ಇವರು ಕಾಂಚೀಪುರ ಬಳಿಯ ಭುವನಗಿರಿ ಕ್ಷೇತ್ರದಲ್ಲಿ ಜನಿಸಿದವರು. ತಮ್ಮ ೨೪ನೆಯ ವಯಸ್ಸಿನಲ್ಲಿ ಈ ಸುಧೀಂದ್ರ ತೀರ್ಥರಿಂದ ಸನ್ಯಾಸ ಸ್ವೀಕರಿಸಿ, ೫೦ ವರ್ಷಗಳ ಕಾಲ ಸತತವಾಗಿ ರಾಷ್ಟ್ರದಾದ್ಯಂತ ಸಾತ್ವಿಕ ಸಮಾಜಕ್ಕಾಗಿ ಶ್ರಮಿಸಿದ ಯತಿಗಳವರು.




ವಿಜಯನಗರದ ಪತನಾನಂತರ ಮಹಮ್ಮದೀಯರಿಂದ ಆಕ್ರಾಂತವಾಗಿದ್ದ ನೆಲ ದಲ್ಲಿ ಪುನಃ ವೈದಿಕಧ್ವಜವನ್ನು ಹಾರಿಸಿದ ಧವಳಕೀರ್ತಿ ಇವರದು. ಇವರು ವೇಣು ಗೋಪಾಲ ಎಂಬ ಅಂಕಿತದಲ್ಲಿ ಗೋವಿಂದನ ದಯೆ ಕೋರಿ ಕೀರ್ತನೆಗಳನ್ನು ರಚಿಸಿದರು. ಇವರ ಪ್ರೇರಣೆಯಿಂದ ಹರಿದಾಸ ಸಾಹಿತ್ಯ ಪುನರ್ಜೀವನಗೊಂಡಿತು. ಶ್ರೀ ವಿಜಯದಾಸರು ಶ್ರೀಗೋಪಾಲದಾಸರು, ಶ್ರೀ ಜಗನ್ನಾಥದಾಸರಂಥ ಮಹಿಮರು ಪ್ರಭಾವಗೊಂಡರು. ಶ್ರೀರಾಘವೇಂದ್ರರು ಮಂತ್ರಾಲಯದಲ್ಲಿ ಕ್ರಿ.ಶ. ೧೬೭೧ರಲ್ಲಿ ಸಶರೀರವಾಗಿ ಬೃಂದಾವನ ಪ್ರವೇಶಿಸಿದರು.

ಭೌತಿಕ ಸೃಷ್ಟಿಗೆ ಅಗೋಚರವಾಗಿದ್ದರೂ ಭಕ್ತರಿಗೆ ಕಾಮಧೇನು ನಮಿಪರಿಗೆ ಕಲ್ಪವೃಕ್ಷವೆಂದು ಕೀರ್ತಿತರಾಗಿ, ಈ ಕಲಿಯುಗದಲ್ಲಿ ತಮ್ಮ ಮಹಿಮೆ ತೋರುತ್ತಿರುವರು. ಇವರು ರಾಯಚೂರು ಜಿಲ್ಲೆ, ಬಳ್ಳಾರಿ ಜಿಲ್ಲೆ, ಕರ್ನೂಲ ಜಿಲ್ಲೆ (ಆಂಧ್ರ)ಗಳಲ್ಲಿ, ಅಂದರೆ ವಿಜಯನಗರ ಸಾಮ್ರಾಜ್ಯದ ಭಾಗಗಳಲ್ಲಿ, ತಮ್ಮ ಧರ್ಮಪಥ ಚಲಿಸಿದವರು.

ಅವರ ಕೃತಿ : 'ಧಾರುಣಿಯೊಳು ಭೂಭಾರ ಜೀವನನಾಗಿ
ಮೇರೆದಪ್ಪಿನಡೆದೆ ಸೇರಿದೆ ಕುಜನರ,
ಆರುಕಾಯುವರಿಲ್ಲ ಸೇರಿದೆ ನಿನಗಯ್ಯ
ವೇಣುಗೋಪಾಲ ಪಾರುಗಾಣಿಸು ಹರಿಯೇ'

ಶ್ರೀ ವಿಜಯದಾಸರು (ಕ್ರಿ.ಶ.೧೬೮೬ - ೧೭೭೫)

ತುಂಗಭದ್ರೆಯ ತೀರದಲ್ಲಿ 'ಮಾನ್ವಿ' ತಾಲ್ಲೂಕಿನ 'ಚೀಕಲಪರವಿ' ಎಂಬ ಗ್ರಾಮದಲ್ಲಿ ಜನ್ಮವೆತ್ತಿದ ಶ್ರೀ ವಿಜಯದಾಸರು ಭೃಗುಋಷಿಗಳ ಅಂಶ ಸಂಭೂತರು.



ಸಾಮಾಜಿಕ ದೃಷ್ಟಿಯಿಂದ ಇವರು ನಿರಕ್ಷರ ಕುಕ್ಷಿಗಳು. ಪಡಬಾರದ ದಾರಿದ್ರ್ಯ ಇವರದಾಗಿ, ಬಹಳ ಕಷ್ಟಪಟ್ಟರು. 'ಇವನೇ ಕೋಸಿಮಗ ದಾಸ' ಎಂದು ಜನ ಅವಮಾನ ಗೊಳಿಸುತ್ತಿದ್ದರು. ಇಂಥವರಿಗೆ ಗುರು ಕಟಾಕ್ಷವಾಯಿತು. ಪರಮಾತ್ಮನ ಪ್ರಸಾದ ವಾಯಿತು.

'ವಿಜಯದಾಸರಂಥ ಮಾಯಾಮಯರು ಮತ್ತೊಬ್ಬರಿಲ್ಲ.
ಸಾಲ ಮಾಡಬೇಡ. ಸಾಲದೆನಬೇಡ
ನಾಳೆಗೆನಬೇಡ ಇವು ಪುರಂದರದಾಸೋಕ್ತಿಯಂತೆ,
ಇವರಲ್ಲಿ ಮೂರ್ತಿ ಮತ್ತಾಗಿ ಕಂಡು ಬಂದವು'

ಶ್ರೀ ವ್ಯಾಸಮಹಿಮರು ಇವರು. ಇವರ ಅಂಕಿತನಾಮ 'ವಿಜಯವಿಠಲ'. ಅನೇಕ ಕೀರ್ತನೆಗಳನ್ನು ನೂರಾರು ಸುಳಾದಿಗಳನ್ನು ಅರ್ಥವತ್ತಾಗಿ ರಚಿಸಿದ್ದಾರೆ. ಇವರು ಸುಳಾದಿಗಳದಾಸರೆಂದೇ ಪ್ರಸಿದ್ಧರಾಗಿದ್ದಾರೆ. ಶ್ರೀ ಗೋಪಾಲದಾಸ ಶ್ರೀ ಜಗನ್ನಾಥದಾಸರಿಗೆ ಗುರುಸ್ಥಾನ ನೀಡಿದ್ದಾರೆ. ವಿಜಯನಗರದ ವೈಭವದ ನಂತರ ಸ್ಥಗಿತವಾಗಿದ್ದ ಹಂತದಲ್ಲಿದ್ದ ಹರಿದಾಸ ಸಾಹಿತ್ಯವನ್ನು, ಅದರ ಸಂಪ್ರದಾಯವನ್ನು ಮುಂದುವರಿಸಿದ ಹಿರಿಮೆ ಇವರದು. ಇವರು ಹಂಪಿಯನ್ನು ಹತ್ತಾರು ಸಲ ಭೇಟ್ಟಿ ನೀಡಿ, ಅಲ್ಲಿ ಬೃಂದಾವನದ ಯತಿಗಳ 'ನವವೃಂದಾವನ' ನಮಿಸಿ ಪುನೀತರಾಗಿದ್ದಾರೆ. ಶ್ರೀಹರಿಯ ಪಾರಮ್ಯವನ್ನು ಸಾರಿದ ಮಹಿಮರು. ಇವರ ಶಿಷ್ಯಂದಿರಾದ ಗೋಪಾಲ ದಾಸರು, ಮೋಹನದಾಸರು, ಜಗನ್ನಾಥದಾಸರು, ವ್ಯಾಸವಿಠಲರು ಕನ್ನಡ ನಾಡು ನುಡಿಗೆ ನೀಡಿದ ಕೊಡುಗೆ ಮರೆಯುವಂತಿಲ್ಲ.

ಶ್ರೀ ಜಗನ್ನಾಥ ದಾಸರು (ಕ್ರಿ.ಶ.೧೭೨೮-೧೮೦೯)

ಶ್ರೀ ಜಗನ್ನಾಥದಾಸರು, ಪುರಂದರಾಸರಿಂದ ಪ್ರಚಲಿತವಾದ ಭಾಗವತ ಧರ್ಮಕ್ಕೆ ನವ ಚೈತನ್ಯ ಉಂಟು ಮಾಡಿದ ಮಹಾಪುರುಷರು. ಶ್ರೀ ಪ್ರಹ್ಲಾದ ರಾಜರ ಸಹೋದರ ರಾದ 'ಪ್ರಹ್ಲಾದ'ರ ಅಂಶ ಸಂಭೂತರರು. ಇವರ ಪೂರ್ವನಾಮ ಶ್ರೀನಿವಾಸಾಚಾರ್ಯರು. ಇವರ ಜನ್ಮಸ್ಥಳ 'ಮಾನವಿ' ತಾಲ್ಲೂಕಿನಲ್ಲಿರುವ 'ಭಾಗ್ಯವಟ್ಟ', ಇವರ ಕಾರ್ಯಕ್ಷೇತ್ರ ಮಾನವಿ, ಇಂದಿಗೂ ಅದು ಪವಿತ್ರ ಕ್ಷೇತ್ರ, ವಿಜಯನಗರ ಗತ ಕಾಲದ ಕುರುಹಿನ ಸ್ಥಳ.

ಮೊದಮೊದಲು ಇವರೇ ದಾಸರೆಲ್ಲರನ್ನೂ ಜರಿಯುತ್ತಿದ್ದ ಇವರೇ ಮುಂದೆ ಹರಿದಾಸರಾದರು. ವಿಜಯದಾಸರನ್ನು ಜರಿದು ಅಸಾಧ್ಯವಾದ ಉದರ ಶೂಲೆಗೆ ಒಳಗಾದ ಇವರು, ಮುಂದೆ ಶ್ರೀ ವಿಜಯದಾಸರನ್ನು ಮೊರೆ ಹೊಕ್ಕಾಗ ಅವರ ಮಾರ್ಗದರ್ಶನ ದಂತೆ, ಇವರಿಗೆ ಸರಿಯಾಗುತ್ತದೆ. ಇವರಿಗೆ, ಶ್ರೀ ವಿಜಯದಾಸರ ತಮ್ಮನಾದ ಶ್ರೀ

ಗೋಪಾಲದಾಸರು, ಆರೋಗ್ಯ ನೀಡಿ ಇವರಿಗೆ ತಮ್ಮ ಆಯುಷ್ಯದಲ್ಲಿ ೪೦ ವರ್ಷಗಳನ್ನು 'ಆಯುರ್ದಾನ' ಮಾಡಿ ಉದ್ಧಾರ ಮಾಡಿದರು.

ಶ್ರೀ ಜಗನ್ನಾಥರ ಕಾವ್ಯನಾಮ ಜಗನಾಥ ವಿಠಲ, ಇವರು ತಮ್ಮ ಇನ್ನುಳಿದ ಆಯುವಿನ ೪೦ ವರ್ಷಗಳನ್ನು ದಾಸಾರ್ಯರ ಆಜ್ಞೆಯಂತೆ ಗ್ರಂಥ ರಚನೆ, ದೇಶಸಂಚಾರ, ಧರ್ಮಪ್ರಚಾರಗಳಲಿ ಸದ್ವಿನಿಯೋಗಿಸಿಕೊಂಡರು. ಶ್ರೀ ಜಗನ್ನಾಥ ದಾಸರು ರಚಿಸಿದ ಮೇರುಕೃತಿ ಶ್ರೀ ಹರಿಕಥಾಮೃತಸಾರವು, ಸಂಸ್ಕೃತದಷ್ಟೇ ಭೂಯಿಷ್ಠವಾಗಿದೆ. 'ತತ್ವಸುವ್ವಾಲಿ' ಹಾಗೂ ಕೀರ್ತನೆಗಳು ಪ್ರಸಿದ್ಧಿ. ಇವರು ತಮ್ಮ ದೇಶ ಸಂಚಾರದಲ್ಲಿ ಹಂಪಿಯನ್ನು ಸಾಕಷ್ಟು ಸಾರಿ ಸಂದರ್ಶಿಸಿದ್ದಾರೆ.


ಶ್ರೀ ವೇಣುಗೋಪಾಲದಾಸರು (ಕ್ರಿ.ಶ.೧೭೨೨-೧೭೬೫)

ಇವರು ಶ್ರೀ ವಿಜಯದಾಸರಿಂದ ದೀಕ್ಷೆ ಪಡೆದರು. ಪಂಗನಾಮದ ತಿಮ್ಮಣ್ಣ ದಾಸರೆಂದು ಕರೆಯಲ್ಪಟ್ಟ ಶ್ರೀ ವೇಣುಗೋಪಾಲದಾಸರು ಅಂದಿನ ಆದವಾನಿ ಸಭೆಯ 'ದೀವಾಣ'ರಾಗಿ ಉನ್ನತ ಅಧಿಕಾರದಲ್ಲಿದ್ದರೂ, ಹರಿಭಕ್ತಿಪ್ರೇರಿತರಾಗಿ ಹರಿದಾಸ ದೀಕ್ಷೆ ಪಡೆದು, ವೇಣುಗೋಪಾಲ ವಿಠ್ಠಲ ಎಂಬ ಹೆಸರಿನಿಂದ ಕೃತಿಗಳನ್ನು ರಚಿಸಿದ್ದಾರೆ. ಇವರೂ ಕೂಡ ವಿಜಯನಗರದ ಯಂತ್ರೋದ್ಧಾರ ಹನುಮ, ನವವೃಂದಾವನಗಳಿಗೆ ಭೇಟ್ಟಿ ನೀಡಿ, ಭಾಗವತ ಸಂತರ ಆಚಾರ್ಯರ ಪ್ರಭಾವ ಪಡೆದಿದ್ದಾರೆ.

ಈ ಮೇಲಣ ದಾಸರೆಲ್ಲ ಒಂದಿಲ್ಲೊಂದು ಸಂದರ್ಭದಲ್ಲಿ ಹಂಪಿಯೊಂದಿಗೆ ಸಂಪರ್ಕವಿಟ್ಟುಕೊಂಡಿದ್ದರು. ಕ್ರಿ.ಶ.೧೫೬೫ರ ರಕ್ಕಸಗಿ -ತಂಗಡಗಿ ಯುದ್ಧವು ವಿಜಯನಗರ ಸಾಮ್ರಾಜ್ಯ ಹಾಗೂ ಡೆಕ್ಕನ್ನಿನ ಐದು ಸುಲ್ತಾನರ ಜೊತೆಗೆ ಘನಘೋರ ಕಾಳಗವಾಯಿತು. ಜಗತ್ತಿನ ಯಾವುದೇ ರಾಜಧಾನಿಯ ಮೇಲೆ ವಿಜಯನಗರದ ಮೇಲೆ ಆದಷ್ಟು ಆಕ್ರಮಣ ಮತ್ತೆಲ್ಲಿಯೂ ಆಗಿಲ್ಲ. ಅಲ್ಲಿ ನಡೆದ ಕೊಲೆ, ಕೊಳ್ಳೆ ಸುಲಿಗೆಗಳು ಆರು ತಿಂಗಳುಗಳಷ್ಟು ನಡೆದಿತ್ತು. ಆ ಸುಲಿಗೆಯಲ್ಲಿ ಅಂಧ ಧಾರ್ಮಿಕ ರೊಚ್ಚಿನಲ್ಲಿ ಹಂಪಿಯ ಪ್ರಮುಖ ದೇವಾಲಯಗಳು ನಾಶವಾದವು. ಹಜಾರರಾಮ ದೇವಾಲಯ, ಕೃಷ್ಣದೇವಾಲಯ, ವಿಜಯ ವಿಠ್ಠಲ ದೇವಸ್ಥಾನ ಇತ್ಯಾದಿ ಆಹುತಿ ಆದವು. ಈ ದೇವಾಲಯಗಳಲ್ಲಿಯ ಗರ್ಭಗುಡಿಯಲ್ಲಿಯ ಮೂರ್ತಿಗಳೂ ಮಾಯವಾದವು. ಹಾಗಾಗಿ, ೧೭, ೧೮ ಶತಮಾನಗಳು ಉರುಳಿದವು. ಹಂಪಿಯ ವೈಷ್ಣವ ಸಂಪ್ರದಾಯ ಕರಗುತ್ತ ಹೋಯಿತು.

'ನವ ವೃಂದಾವನ' ದ್ವೀಪದ ವೈಷ್ಣವಾಚಾರ್ಯರು

ಇನ್ನು, ತುಂಗಭದ್ರೆಯ ದ್ವೀಪದಲ್ಲಿ, ಆನೆಗುಂದಿಯ ಸಮೀಪ, ನವವೃಂದಾವನದ ವೈಷ್ಣವಾಚಾರ್ಯರ ಬಗ್ಗೆ ಹೇಳಲೇಬೇಕು. ಇದೊಂದು ಆನೆಗುಂದಿಯ ಪೂರ್ವಕ್ಕೆ ಇರುವ


4
8
7
9
1
1
5
3
2
6



ನಡುಗಡ್ಡೆ. ತುಂಗಭದ್ರೆ ಇದನ್ನು ಸುತ್ತಬಳಸಿ, ಮುಂದೆ ಮತ್ತೆ ಒಂದಾಗಿ ಹರಿಯುತ್ತಾಳೆ. ಈ ದ್ವೀಪವು ಪೂ.ಪ ಹಾಗೂ ದ.ಉ. ಸುಮಾರು ಒಂದು ಕಿ.ಮೀ. ವ್ಯಾಪಿಸಿದೆ. ಪೂರ್ತಿಯಾಗಿ ಅರಣ್ಯ, ಯಾವ ಜನರವಾಸವಿಲ್ಲ.

ಇಲ್ಲಿ, ನವವೃಂದಾವನವೆಂದು ಕರೆಯಲ್ಪಡುವ, ೯ ವೈಷ್ಣವ ಯತಿಗಳ ಸಮಾಧಿಗಳಿವೆ. ಅವುಗಳೆಲ್ಲ ಒಂದು ಆಯತಾಕಾರದ ಕಂಪೌಂಡ್‌ನಲ್ಲಿ ಚಿಕ್ಕ ಪುಟ್ಟ ತುಳಸಿ ಕಟ್ಟೆಗಳಂತೆ ಕಟ್ಟಲ್ಪಟ್ಟಿವೆ. ದೊಡ್ಡವು ಒಂದೇ ಗರ್ಭಗುಡಿಯುಳ್ಳ, ಎರಡು ಮಾತ್ರ ಇವೆ. ಇಲ್ಲಿ ಶ್ರೀ ಉತ್ತರಾದಿ ಮಠದ ಹಾಗೂ ಶ್ರೀರಾಘವೇಂದ್ರಮಠದ ಯತಿಗಳ ವೃಂದಾವನಗಳಿವೆ. ಒಂದು ಪೂರ್ವದ ಕಡೆಯದ್ದು ಶ್ರೀ ವ್ಯಾಸರಾಯರದ್ದು, ಪಶ್ಚಿಮ ಕಡೆಯದ್ದು ಶ್ರೀ ಶ್ರೀನಿವಾಸತೀರ್ಥರದ್ದು.

ಇನ್ನೂ ಸ್ವಲ್ಪ ನವವೃಂದಾವನದ ಬಗ್ಗೆ ಚಿಂತನೆ ಮಾಡೋಣ.ಇಲ್ಲಿ ಒಂಬತ್ತು ವೈಷ್ಣವಾಚಾರ್ಯರ ವೃಂದಾವನಗಳಿವೆ, ಅವು ಶ್ರೀಉತ್ತರಾದಿಮಠ ಶ್ರೀ ವ್ಯಾಸರಾಯರ ಮಠ ಹಾಗೂ ಶ್ರೀ ರಾಘವೇಂದ್ರಸ್ವಾಮಿ ಮಠದ ಯತಿಗಳವು.

ಶ್ರೀ ಉತ್ತರಾದಿಮಠದ ಯತಿಗಳು

೧. ಶ್ರೀ ಪದ್ಮನಾಭ ತೀರ್ಥರು

೨. ಶ್ರೀ ರವೀಂದ್ರ ತೀರ್ಥರು.

೩. ಶ್ರೀ ವಾಗೀಶ ತೀರ್ಥರು

೪. ಶ್ರೀ ರಘುವರ್ಯ ತೀರ್ಥರು.

ಶ್ರೀ ವ್ಯಾಸರಾಜ ಮಠದ ಯತಿಗಳು

೫. ಶ್ರೀ ವ್ಯಾಸರಾಜರು

೬. ಶ್ರೀ ಶ್ರೀನಿವಾಸ ತೀರ್ಥರು

೭. ಶ್ರೀ ರಾಮತೀರ್ಥರು

ಶ್ರೀ ರಾಘವೇಂದ್ರ ಸ್ವಾಮಿ ಮಠದ ಯತಿಗಳು

೮. ಶ್ರೀಸುಧೀಂದ್ರ ತೀರ್ಥರು

೯. ಶ್ರೀ ಗೋವಿಂದ ತೀರ್ಥ ಒಡೆಯರು (ಇವರು ಯಾವ ಮಠಕ್ಕೂ ಸೇರದ, ಬಿಡಿ ಸನ್ಯಾಸಿಗಳು)

- ಶ್ರೀ ಜಯತೀರ್ಥರ (ಟೀಕಾಚಾರ್ಯರು) ಮೂಲ ವೃಂದಾವನವು ಗುಲಬರ್ಗಾ ಜಿಲ್ಲೆಯ ಕಾಗಿನಾ ನದಿಯ ದಡದಲ್ಲಿರುವ 'ಮಳಖೇಡ'ದಲ್ಲಿಯೇ ಇದೆ. (ಈ ಲೇಖಕ ಸ್ವತಃ ಕ್ಷೇತ್ರ ಕಾರ್ಯ ಮಾಡಿ ಆ ವೃಂದಾವನಕ್ಕೆ ಭೇಟ್ಟಿ ಇತ್ತಿದ್ದಾನೆ.)

- ಶ್ರೀ ನರಹರಿ ತೀರ್ಥರ ಮೂಲವೃಂದಾವನದ ಸ್ಥಳ ಉತ್ತರಾದಿ ಮಠದ ಒಡೆತನಕ್ಕೆ ಸೇರಿದ್ದು, ಎಂದು ಬಳ್ಳಾರಿ ಡಿ.ಸಿ. ಆದೇಶ. (ಶ್ರೀ ಸುಧಾ ಸತ್ಯಪ್ರಮೋದನಿಧಿಯ ಮುಖಪತ್ರಿಕೆ, ಏಪ್ರಿಲ್ ೨೦೦೬, ಪುಟ ೨೧) ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕು, ವೆಂಕಟಾಪುರ ಗ್ರಾಮಕ್ಕೆ ಸೇರಿದ ತುಂಗಭದ್ರಾ ನದಿಯ ನಡುಗಡ್ಡೆಯಲ್ಲಿರುವ ಶ್ರೀ ಉತ್ತರಾದಿಮಠದ ಪೀಠಾಧಿಪತಿಗಳಾದ ಶ್ರೀ ನರಹರಿ ತೀರ್ಥರ ಮೂಲವೃಂದಾವನ ಇರುವ ಸರಕಾರಿ ಜಮೀನನ್ನು ಕಾನೂನುಬದ್ಧವಾಗಿ ಶ್ರೀ ಉತ್ತರಾದಿ ಮಠಕ್ಕೆ ೧೯೭೧ರಲ್ಲಿ ಆಗಿನ ಬಳ್ಳಾರಿ ಜಿಲ್ಲಾಧಿಕಾರಿಗಳು ಅನುದಾನ ನೀಡಿದ ಆದೇಶವನ್ನು ಪ್ರಸ್ತುಕ ಜಿಲ್ಲಾಧಿಕಾರಿಗಳು ದೃಢೀಕರಿಸಿದ್ದಾರೆ. ..೧೯೭೧ರ ಆದೇಶದ ಪ್ರಕಾರ ಸದರೀ ಸ್ಥಳವೂ ಶ್ರೀ ಉತ್ತರಾದಿ ಮಠದ ಒಡೆತನಕ್ಕೆ ಸೇರಿರುವುದು ಸರಿ ಎಂದು ಅಭಿಪ್ರಾಯ ಪಟ್ಟು, ೨೦೦೬ ಮಾರ್ಚ್ ೨೮, ರಂದು ಆದೇಶ ಹೊರಡಿಸಿದ್ದಾರೆ.

'ಶ್ರೀ ವೈಷ್ಣವ' ಆಳ್ವಾರರ ಭಕ್ತಿಪಥ ಆನೆಗುಂದಿ

ವೈಷ್ಣವ ವಿಚಾರಗಳು ಇಲ್ಲಿ ಸಾಕಷ್ಟು ಹರಡಿವೆ. ಹರಿದಾಸರ ಕೊಡುಗೆಯಂತೆ, ನವವೃಂದಾವನದ ವೈಷ್ಣವಾಚಾರ್ಯರ ಹರಿಪ್ರಿಯತೆಯಂತೆ 'ಶ್ರೀವೈಷ್ಣವ' ಸಂಪ್ರದಾಯದ ಆಳ್ವಾರರ ಚಿಂತನೆಯೂ ಇಲ್ಲಿ ಆಗಿದೆ. ಆನೆಗುಂದಿಯ ಶ್ರೀ ನಾರಾಯಣ ದೇವಸ್ಥಾನ ಹಾಗೂ ಅಲ್ಲಿ ದೊರೆತ ಹಾಗೂ ಈಗಲೂ ಆರಾಧನೆ ಗೊಳ್ಳುತ್ತಿರುವ, ಆಳ್ವಾರ, ಯತಿಗಳ ಶಿಲಾಮೂರ್ತಿಗಳು ಈ ಮೇಲಣ ವ್ಯಾಖ್ಯೆಗೆ ಪುಷ್ಟಿ ನೀಡುತ್ತವೆ.


ತುಂಗಭದ್ರಾ ನದಿಯ ದಂಡೆಗುಂಟ, ಪಶ್ಚಿಮಕ್ಕೆ ಹೋದಂತೆ (Upstream) ಈ 'ಆಳ್ವಾರ' ಯತಿಗಳ ಕುರುಹುಗಳು, ಭಗ್ನ ಮೂರ್ತಿಗಳು, ಆಳ್ವಾರ ಅಶ್ವತ್ಥನಾರಾಯಣ-ಕಟ್ಟೆಗಳು ನೋಡಸಿಗುತ್ತವೆ. ಇನ್ನೂ ಪಶ್ಚಿಮಕ್ಕೆ ಹೋದಂತೆ 'ಪಂಪಾಸರೋವರ'ವೆಂದು ಹೆಸರಾದ, ನಿರ್ಜನ ಪ್ರದೇಶಲ್ಲಿ, ಒಂದು ತೆರೆ. ಅದರ ಸುತ್ತ ಕೆಲವು ಶಿಲಾ ಸ್ವಾಭಾವಿಕ ಗವಿಗಳು (Natural caverns), ಅಲ್ಲಿ ಆಳ್ವಾರ ಯತಿಗಳು ತಪಗೈಯುತ್ತಿದ್ದ ಕಥಾ ಕಥಿತ ಪರಂಪರೆ.

ಹೀಗೆ ಅಂತತಃ ಹರಿದಾಸರು, ವೈಷ್ಣವಾಚಾರ್ಯರು ಹಾಗೂ ಶ್ರೀವೈಷ್ಣವರು ಹಂಪಿಯ ನೆಲದಲ್ಲಿ ನಡೆದಾಡಿದ್ದಾರೆ. ಅವರ ವಿಷ್ಣುನಾಮಗಳು ಕೀರ್ತನೆಗಳು, ಸುಳಾದಿಗಳು, ಉಗಾಭೋಗಗಳು, ಚಿಂತನಗಳು, ಟೀಕೆಗಳು, ತಾತ್ಪರ್ಯಗಳು ವಿಷ್ಣು ಸಂಪ್ರದಾಯಸ್ಥರಿಗೆ ಆಧ್ಯಾತ್ಮಿಕ ಚೇತನ ನೀಡಿವೆ.

ಪುರಂದರದಾಸರಂಥ ದಾಸರು, ಭೌತಿಕವಾದ ಸಂಪತ್ತಿನಲ್ಲಿ ಉತ್ಕಟವಾದ ಆಸೆಯಿಟ್ಟುಕೊಂಡು, ಒಬ್ಬ ಸಂಸಾರ ಲೋಭಿಯು ಅದನ್ನೆಲ್ಲ ತ್ಯಾಗ ಮಾಡಿ, ಹರಿ ಭಕ್ತಿಯೇ ಜೀವನದ ತಾರಕವೆಂಬ ತಿಳಿವು ಸ್ಥಿರಗೊಳ್ಳುವವರೆಗೆ, ಆ ಲೋಭಿಯ ಮನಸ್ಸು

ಹಾಗೂ ಹೃದಯಗಳು ಎಷ್ಟೊಂದು ಉಯ್ಯಾಲೆಯಾಟ ಆಡಿರಬಹುದು ? ಶ್ರೀ ಪುರಂದರದಾಸರಂಥ ಹಾಗೂ ಇನ್ನುಳಿದ ಹರಿದಾಸರಂಥಹರ ಪ್ರಾಚೀನ ಉದಾತ್ತ ಸಾಹಿತ್ಯದಲ್ಲಿ ಆ ಉಯ್ಯಾಲೆಯಾಟದ ವಾಸ್ತವಿಕ ಚಿತ್ರಗಳು ನಮಗೆ ಕಾಣದೇ ಹೋದರೂ, ಅವುಗಳ ಸಂಕೇತ ಸೂಚನೆಗಳು ನಮಗೆ ಕಂಡು ಬಾರದೆ ಹೋಗವು.

'ಆದದ್ದೆಲ್ಲಾ ಒಳಿತೇ ಆಯಿತು.
ನಮ್ಮ ಶ್ರೀಧರನ ಸೇವೆಗೆ ಸಾಧನ ಸಂಪತ್ತಾಯ್ತು.
ತುಳಸೀ ಮಾಲೆಯ ಹಾಕುವುದಕ್ಕೆ
ಅರಸನಾಗಿ ನಾಚುತಲಿದ್ದೆ
ಸರಸಿಜಾಕ್ಷ ಪುರಂದರ ವಿಠಲನು
ತುಳಸೀ ಮಾಲೆಯ ಹಾಕಿಸಿದನು.
ಆದದ್ದೆಲ್ಲಾ ಒಳಿತೇ....'



ಆಧಾರ ಗ್ರಂಥಗಳು

1. ಬೆಟಗೇರಿ ಕೃಷ್ಣಶರ್ಮ : *ಪುರಂದರ ದಾಸ ಸಾಹಿತ್ಯ*, ಭಾಗ 2, ಆರ್ತಭಾವ, ಧಾರವಾಡ
2. ಸ್ವರೂಪರಾಣಿ ಮಹಿಷಿ : 'ಹರಿದಾಸ ಪರಂಪರೆಯ ಹಿನ್ನೆಲೆ ಹಾಗೂ ಅರ್ಪಣ - ಒಂದು ಪಕ್ಷಿನೋಟ' *ಶಾರದ ಹೆಮ್ಮಿಗೆ: ಬದುಕು -ಬರೆಹ* - ಡಾ. ಕಮಲಾ ಹೆಮ್ಮಿಗೆ (ಸಂ) ಬೆಂಗಳೂರು
3. ಡಾ.ಎಸ್.ಕೆ. ಜೋಶಿ : 'ಪುರಾತತ್ವವ ದೃಷ್ಟಿಯಲ್ಲಿ ಪುರಂದರದಾಸರು, *ಸಂ.ಕ. ಸಾಪ್ತಾಹಿಕ,* 1980, ಹುಬ್ಬಳ್ಳಿ
4. ಶ್ರೀ ಹ ರಾ ನಗರಾಜ (ಸಂ) : ಶ್ರೀ ಹರಿದಾಸ ವಾಣಿ, ಜ್ಞಾನಸಾಗರ ಪ್ರಿಂಟರ್ಸ್, ಆರ್.ಕೆ. ಪುರಮ್, ಬೆಂಗಳೂರು
5. Dr. R.D. Ranade : *Path way to God in Kannada, Marathi & Hindi Literature* - Karnataka University Dharwad, (Dr. Ranade's Lecture)
6. ಡಾ. ಎಸ್.ಕೆ. ಜೋಶಿ : 'ಕರ್ನಾಟಕದ ಹರಿದಾಸರು ಹಾಗೂ ಮಹಾರಾಷ್ಟ್ರದ ಸಂತರು ಹಾಗೂ ಇಸ್ಲಾಂ ಸೂಫಿಗಳು'

   ಕರ್ನಾಟಕ ಇತಿಹಾಸ ಅಕಾಡೆಮಿ, ೨೦ನೆಯ ವಾರ್ಷಿಕ ಅಧಿವೇಶನ, ನಂಜನಗೂಡಿನಲ್ಲಿ ಮಂಡಿಸಿದ ಪ್ರಬಂಧ
7. ಡಾ. ರಾವ್ ಎಸ್.ಆರ್. : 'ಹಂಪಿ ಉತ್ಖನನ - ಪುರಂದರದಾಸರಮೂರ್ತಿ, ಪ್ರಜಾಮತ 1976
8. Dr. T.A. Gopinath Rao : *Elements of Hindu Iconography,* Vol. - I, Part - I
9. ಗೌ. ಸಂಪಾದಕರು ಪಂ. ಜಯತೀರ್ಥ ಆಚಾರ್ಯರು ಮಳಗಿ, ಹಾಗೂ (ಸಂ)ಪಂ. ವಿದ್ಯಾಧೀಶಾಚಾರ್ಯರು ಗುತ್ತಲ

   ಶ್ರೀ ಸುಧಾ ಶ್ರೀ ಉತ್ತರಾದಿಮಠ, ಬೆಂಗಳೂರು, 2006 ಮಾರ್ಚ್ -'ನವವೃಂದಾವನ ಗಡ್ಡೆ' (ಚಿತ್ರಗಳು)

೪೨. ಚಿತ್ರದುರ್ಗ ನಾಯಕ ಅರಸರು ಮತ್ತು ಹಂಪಿಯ ಶ್ರೀವೈಷ್ಣವ ಆಚಾರ್ಯರು

ಪ್ರೊ. ಲಕ್ಷ್ಮಣ್ ತೆಲಗಾವಿ

ಧಾರ್ಮಿಕವಾಗಿ, ಚಿತ್ರದುರ್ಗ ನಾಯಕ ಅರಸರು ವೈಷ್ಣವ, ಶ್ರೀವೈಷ್ಣವ ಹಾಗೂ ಶೈವಧರ್ಮಗಳನ್ನು ಸಮಾನವಾಗಿ ಅನುಸರಿಸಿದವರು ಹಾಗೂ ಗೌರವಿಸಿದವರು. ಕಾನುಗೇತಿ ಅರಸರೆಂತಲೂ ಗುರುತಿಸಿಕೊಂಡಿರುವ ಈ ವಂಶಜರ ಮೂಲ ಮನೆದೇವರು ಅಹೋಬಿಲ ನರಸಿಂಹ. ಎಷ್ಟೋ ಸಮಕಾಲೀನ ಬೇಡ ಸಮುದಾಯಗಳಂತೆಯೇ ಈ ಅರಸರು ಸಹಾ ಶ್ರೀವೈಷ್ಣವಪಂಥದ ನೇರ ಅನುಯಾಯಿಗಳಾಗಿದ್ದರು. ಅಹೋ ಬಿಲವು ಶ್ರೀ ವೈಷ್ಣವರ ಮುಖ್ಯ ಕ್ಷೇತ್ರ. ಇಲ್ಲಿಯ ಮಠವನ್ನು ಸ್ಥಾಪಿಸಿದವರು ಶ್ರೀ ವೈಷ್ಣವ ಆಚಾರ್ಯ ರಾಮಾನುಜರ ಶಿಷ್ಯ ಪರಂಪರೆಯಲ್ಲಿ ಸಮಾಶ್ರಯಣ ಪರಂಪರೆಗೆ ಸೇರಿದ ಮಂಡ್ಯ ಜಿಲ್ಲೆ, ಮೇಲ್ಕೋಟೆಯ ಆದಿವಣ್ ಶಠಕೋಪಜೀಯರ್ (ಶ್ರೀನಿವಾಸಾಚಾರ್ಯ); ೧೪೪೫ ರಿಂದ ೧೫೦೪ರ ವರೆಗೆ ಆಳ್ವಿಕೆ ನಡೆಸಿದ ವಿಜಯನಗರದ ಸಾಳುವ ನರಸಿಂಹನ ಕಾಲದಲ್ಲಿದ್ದವರು. ಅಹೋಬಿಲ ಮತ್ತು ತಿರುಪತಿಗಳು ಒಂದೇ ಬೆಟ್ಟಸಾಲಿನಲ್ಲಿ ನೆಲೆಸಿದ್ದು, ಪರಸ್ಪರ ಸಂಬಂಧ ಹೊಂದಿರುವ ಕ್ಷೇತ್ರಗಳು; ಹಾಗೂ ಈ ಎರಡೂ ಕ್ಷೇತ್ರಗಳ ಬಗೆಗೂ ಚಿತ್ರದುರ್ಗ ನಾಯಕ ಅರಸರು ಸಮಾನ ಭಕ್ತಿಯನ್ನಿರಿಸಿಕೊಂಡಿದ್ದರೆಂಬುದನ್ನು ಇವರಿಗೆ ಸಂಬಂಧಿಸಿದ ಶಾಸನಗಳು, ದಾಖಲೆಗಳು ಸಮರ್ಥಿಸುತ್ತವೆ.

ಚಿತ್ರದುರ್ಗ ನಾಯಕ ಅರಸರು ತಮ್ಮ ಆಡಳಿತಾವಧಿಯಲ್ಲಿ ತಾವು ಅನುಸರಿಸಿದ ಶ್ರೀವೈಷ್ಣವಪಂಥದ ಆಚಾರ್ಯರನ್ನು ಗೌರವಿಸಿದರು; ಹಾಗೂ ಅವರ ಮಠಸ್ಥಾನಗಳಿಗೆ ದತ್ತಿ - ದಾನಗಳನ್ನು ನೀಡಿ ಪೋಷಿಸಿದರು. ಚಿತ್ರದುರ್ಗ ನಾಯಕ ಸಂಸ್ಥಾನಕ್ಕೆ ಅಡಿಗಲ್ಲನ್ನಿಟ್ಟ ಮೊದಲ ಅರಸ ಮತ್ತಿ ತಿಮ್ಮಣ್ಣ ನಾಯಕ (೧೫೬೮-೧೫೮೯)ನು ನೀಡಿದ ದತ್ತಿಯು ಈ ಸಂಬಂಧದಲ್ಲಿ ದೊರೆಯುವ ಮೊದಲನೇ ಉದಾಹರಣೆ. ಈತನ ತರುವಾಯ ಆಳ್ವಿಕೆ ನಡೆಸಿದವರಲ್ಲಿ ಆರನೇ ಅರಸ ಕಸ್ತೂರಿ ಚಿಕ್ಕಣ್ಣನಾಯಕ (೧೬೭೫-೧೬೮೦) ಮತ್ತು ಎಂಟನೇ ಅರಸ ಬಿಚ್ಚುಗತ್ತಿ ಭರಮಣ್ಣನಾಯಕ (೧೬೮೯-೧೭೨೧)ರೂ ಶ್ರೀ ವೈಷ್ಣವ ಗುರುಗಳಿಗೆ ದತ್ತಿಗಳನ್ನು ನೀಡಿ ಸತ್ಕರಿಸಿದರು. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ, ಈ ಮೂವರು ಅರಸರಿಂದ ದತ್ತಿಗಳನ್ನು ಪಡೆದುಕೊಂಡ ಶ್ರೀವೈಷ್ಣವ ಆಚಾರ್ಯರ ನೆಲೆಗಳು ಯಾವುವು ಎಂಬುದು.

ಮೊದಲನೇ ಅರಸ ಮತ್ತಿ ತಿಮ್ಮಣ್ಣನಾಯಕನ ೧೫೮೩ರ ದತ್ತಿಶಾಸನವು (ಎಕ., ೧೧, ಹಿರಿಯೂರು ೭೫, ರಂಗಸಮುದ್ರ) ಧಾರ್ಮಿಕವಾಗಿ ಚಿತ್ರದುರ್ಗ ಮತ್ತು ಹಂಪಿಗಳ ನಡುವಣ ಸಂಬಂಧದ ಮೇಲೆ ಬೆಳಕು ಹಾಯಿಸುತ್ತದೆ; ಈ ನಾಯಕ ಅರಸರು ಅನುಸರಿಸಿದ ಪಂಥ ಹಾಗೂ ಆಚಾರ್ಯರ ಬಗೆಗೂ ಅಧಿಕೃತ ಮಾಹಿತಿ ಒದಗಿಸುತ್ತದೆ. ಈ ಶಾಸನವು ತೆಲುಗು ಭಾಷೆಯಲ್ಲಿದ್ದು, ಈ ಶಾಸನದ ಮಧ್ಯೆ 'ಶ್ರೀಮತೇ ರಾಮಾನುಜಾಯನಮಃ' ಎಂಬ ಸ್ತುತಿಯನ್ನು ಕಂಡರಿಸಲಾಗಿದೆ. ಇದರಲ್ಲಿ ವಿಜಯ ನಗರದ ರಾಮರಾಜಯ್ಯ ಮತ್ತು ತಿರುಮಲರಾಜಯ್ಯರಿಗೆ ಪುಣ್ಯವಾಗಲೆಂದು ಮತ್ತಿ ತಿಮ್ಮಣ್ಣನಾಯಕನು ತುಂಗಭದ್ರಾತೀರದ ಹಂಪಿಯ ವಿರೂಪಾಕ್ಷದೇವರ ಸನ್ನಿಧಿಯಲ್ಲಿ ಶ್ರೀಮಾಲ್ಯವಂತಂ ರಾಮಾನುಜಜೀಯರ್ ಅವರಿಗೆ ಗ್ರಾಮದಾನ ಮಾಡಿದುದನ್ನು ದಾಖಲಿಸಲಾಗಿದೆ; ಹಾಗೂ ಇದೇ ಶಾಸನಕಲ್ಲಿನ ಎಡಭಾಗದಲ್ಲಿರುವ ಪಾಠದಲ್ಲಿ (*ಅದೇ*, ಹಿರಿಯೂರು ೭೬, ರಂಗಸಮುದ್ರ), ತನ್ನ ತಂದೆ ಹನುಮಿ ನಾಯಕನಿಗೆ ಪುಣ್ಯವಾಗಲೆಂದು ಇದೇ ರಾಮಾನುಜಜೀಯರ್ ಅವರಿಗೆ ಅರಕೆರೆ ಗ್ರಾಮವನ್ನು ಧಾರಾಪೂರ್ವಕ ನೀಡಿದುದನ್ನು ಹೇಳುತ್ತದೆ.

ಈ ಶಾಸನದಲ್ಲಿ ಪ್ರಸ್ತಾಪಗೊಂಡಿರುವ ವಿಜಯನಗರದ ಅರಸರೆಂದರೆ ರಾಮರಾಜಯ್ಯ, ಅಂದರೆ ಅಳಿಯ ರಾಮರಾಯ ಮತ್ತು ತಿರುಮಲರಾಯ. ೧೫೪೨ ರಿಂದ ೧೫೬೫ರ ವರೆಗೆ ವಿಜಯನಗರ ಸಿಂಹಾಸನದಲ್ಲಿದ್ದ ಸದಾಶಿವರಾಯನ ಪರವಾಗಿ ಕಾರ್ಯತಃ ಸಾರ್ವಭೌಮನಾಗಿ ಆಳ್ವಿಕೆ ನಡೆಸಿದವನು ಅಳಿಯ ರಾಮರಾಯ. ಈತನ ಸಹೋದರನೇ (ಒಂದನೇ) ತಿರುಮಲರಾಯ; ತನ್ನ ಅಣ್ಣನಂತೆ ೧೫೬೫ ರಿಂದ ೧೫೬೭ ರವರೆಗೆ ಕಾರ್ಯತಃ ಸಾರ್ವಭೌಮನಾಗಿದ್ದವನು. ಈ ಈರ್ವರಿಗೂ ಶಾಸನದ ಮೂಲಕ ತನ್ನ ರಾಜನಿಷ್ಠೆಯನ್ನು ವ್ಯಕ್ತಪಡಿಸಿದ್ದಾನೆ ಮತ್ತಿ ತಿಮ್ಮಣ್ಣನಾಯಕ. ಈತ ತನ್ನ ಶಾಸನದಲ್ಲಿ ಪ್ರಸ್ತಾಪಿಸಿರುವ ಹಂಪಿಯ ಶ್ರೀವೈಷ್ಣವ ಆಚಾರ್ಯ ಶ್ರೀ ಮಾಲ್ಯವಂತಂ ರಾಮಾನುಜಜೀಯರ್ ಮತ್ತು ಹಂಪಿಯಲ್ಲಿದ್ದ ಅವರ ಸಂಪ್ರದಾಯದ ನೆಲೆಗಳನ್ನು ಇಲ್ಲಿ ಪರಿಶೀಲಿಸಬೇಕಾಗುತ್ತದೆ.

* * *

ರಾಮಾನುಜಾಚಾರ್ಯ (೧೦೧೭-೧೧೩೭)ರ ಅನುಯಾಯಿಗಳಾದ ಶ್ರೀವೈಷ್ಣವರು 12ನೇ ಶತಮಾನದಿಂದಲೇ ಕರ್ನಾಟಕದಲ್ಲಿ ಕಾಣಿಸಿಕೊಳ್ಳುತ್ತಾರೆ. ಹೊಯ್ಸಳ ನಾಡಿನಲ್ಲಿ ನೆಲೆಯೂರಿದ ಶ್ರೀವೈಷ್ಣವಪಂಥವು ವಿಜಯನಗರ ಅವಧಿಯಲ್ಲೂ ತನ್ನ ಪ್ರಭಾವ ಬೀರಿದ್ದಿತು. 14ನೇ ಶತಮಾನದ ವೇಳೆಗೆ ಈ ಪಂಥವು ಕರ್ನಾಟಕದಲ್ಲಿ ಸಾಕಷ್ಟು ಪ್ರಚಾರದಲ್ಲಿದ್ದಿತು. ವಿಜಯನಗರ ಕಾಲದಲ್ಲಿ ದಕ್ಷಿಣಭಾರತದಲ್ಲಿ ಶ್ರೀ ವೈಷ್ಣವಪಂಥದ ವಿಸ್ತರಣೆಗೆ ಅನುಕೂಲಕರ ವಾತಾವರಣವಿದ್ದಿತು. ಕೃಷ್ಣದೇವರಾಯ, ಅಚ್ಯುತರಾಯ,

ಸದಾಶಿವರಾಯ ಮತ್ತು ರಾಮರಾಯರ ಕಾಲದಲ್ಲಿ ಶ್ರೀವೈಷ್ಣವರ ಪ್ರಾಬಲ್ಯ ಹೆಚ್ಚಿದ್ದಿತು. ಈ ಅವಧಿಯಲ್ಲಿ ವೇದಾಂತದೇಶಿಕರು, ತಾತಾಚಾರ್ಯರ ಮನೆತನದವರು ಶ್ರೀವೈಷ್ಣವಪಂಥವನ್ನು ಪ್ರಚುರ ಪಡಿಸಿದರು. ಆ ನಂತರವೂ ಒಂದನೇ ವೆಂಕಟಪತಿರಾಯ (೧೫೮೬-೧೬೧೪) ಮತ್ತು ಎರಡನೇ ವೆಂಕಟಪತಿರಾಯ (೧೬೩೦-೧೬೪೨)ರ ಕಾಲದಲ್ಲೂ ಈ ಪಂಥ ರಾಜಾಶ್ರಯದೊಡನೆ ಮುಂದುವರೆಯಿತು. ಇವರೀರ್ವರಿಗೂ ಗುರುಗಳಾಗಿ ರಾಜ್ಯನಿರ್ವಾಹದಲ್ಲೂ ಒತ್ತಾಸೆ ಮಾಡುತ್ತಿದ್ದವರು ಲಕ್ಷ್ಮೀಕುಮಾರ ತಾತಾಚಾರ್ಯರು (೧೫೭೨-೧೬೩೨). ಈ ತಾತಾಚಾರ್ಯರು ವಿಜಯ ನಗರ ಅರಸರಿಂದ ತಮಗೆ ಲಭಿಸಿದ ದಾನ, ಕಾಣಿಕೆ ಇತ್ಯಾದಿಯನ್ನೆಲ್ಲಾ ವ್ಯಯಿಸಿ ಕಾಂಚೀಪುರ ಮತ್ತು ತಿರುಪತಿ ದೇವಸ್ಥಾನಗಳ ಗೋಪುರಗಳಿಗೆ ಚಿನ್ನದ ರೇಕು ಹಾಕಿಸಿದರಂತೆ. ಇತರೆಡೆಗಳಲ್ಲೂ ಇವರಿಂದ ಅಗ್ರಹಾರ, ಕೆರೆ, ಗೋಪುರ ಮೊದಲಾದವು ನಿರ್ಮಾಣಗೊಂಡವು.

ಹಂಪಿಯಲ್ಲಿ ಶ್ರೀವೈಷ್ಣವ ಪಂಥದ ಅಭಿವ್ಯಕ್ತಿಯ ಪ್ರತೀಕವೆಂದರೆ ಶಿಲ್ಪಗಳು. ಇವುಗಳಲ್ಲಿ ಮುಖ್ಯವಾದುವೆಂದರೆ, ವಿವಿಧ ಭಂಗಿಗಳಲ್ಲಿ ಮೂಡಿಸಲಾಗಿರುವ ನರಸಿಂಹನ ಶಿಲ್ಪಗಳು. ಇಂಥಾ ಶಿಲ್ಪಗಳು ಮೂಡಿಬರಲು ಕಾರಣಕರ್ತರಾದವರೂ ವಿಜಯನಗರದ ಅರಸರೇ.೬.೭ಮೀಟರ್, ಅಂದರೆ ೨೨ ಅಡಿ ಎತ್ತರವಿರುವ ಬೃಹತ್ತಾದ ಉಗ್ರನರಸಿಂಹ ಅಥವಾ ಲಕ್ಷ್ಮೀನರಸಿಂಹ ಶಿಲ್ಪವೇ ಇದಕ್ಕೊಂದು ಉದಾಹರಣೆ. ಇನ್ನೊಂದು ಶಿಲ್ಪವೆಂದರೆ ವಿಠ್ಠಲ ದೇವಾಲಯದಲ್ಲಿರುವ ಉಗ್ರ ನರಸಿಂಹ ಶಿಲ್ಪ. ಇನ್ನಿತರ ಮುಖ್ಯ ದೇವಾಲಯಗಳೆಂದರೆ, ಕೃಷ್ಣದೇವಾಲಯ, ತಿರುವೆಂಗಡನಾಥನ ಗುಹೆ ಮತ್ತು ಕಮಲಾಪುರ ಬಳಿಯಿರುವ ಮಾಲ್ಯವಂತ ರಘುನಾಥ ದೇವಾಲಯ. ಕಮಲಾಪುರದಲ್ಲಿ ಈಗ ಇನ್‌ಸ್ಪೆಕ್ಷನ್ ಬಂಗಲೆ (ಪ್ರವಾಸಿಮಂದಿರ) ಯಾಗಿ ಪರಿವರ್ತಿತವಾಗಿರುವ ರಚನೆಯು ಹಿಂದೆ ಹಾಳುಬಿದ್ದಿದ್ದ ವಿಷ್ಣುದೇವಾಲಯ ವೆಂದು ತಿಳಿಯಲಾಗಿದ್ದರೂ ಸಂಶೋಧಕರು ಭಾವಿಸುವಂತೆ, ಇದು ನರಸಿಂಹದೇವರಿಗೆ ನಿರ್ಮಿಸಲಾಗಿದ್ದ ದೇವಾಲಯವೇ ಇದ್ದಿರಬೇಕು. ಇಲ್ಲಿಯ ಸ್ತಂಭಗಳ ಮೇಲೆ ಬಿಡಿಸ ಲಾಗಿರುವ ನರಸಿಂಹಶಿಲ್ಪಗಳನ್ನು ಇದಕ್ಕೆ ಆಧಾರವಾಗಿ ತೋರಿಸಲಾಗುತ್ತದೆ.

ದೇವಾಲಯಗಳಲ್ಲದೆ, ಹಂಪಿಯಲ್ಲಿ ಶ್ರೀವೈಷ್ಣವರಿಗಾಗಿ ಏರ್ಪಡಿಸಲಾಗಿದ್ದ ರಾಮಾನುಜಕೂಟಗಳೂ ಇದನ್ನು ಸಮರ್ಥಿಸುತ್ತವೆ. ರಾಮಾನುಜಕೂಟಗಳೆಂದರೆ, ಶ್ರೀವೈಷ್ಣವ ದೇವಾಲಯಗಳಿಗೆ ಹೊಂದಿಕೊಂಡಂತೆ ಕಂಡುಬರುವ ಪ್ರಸಾದ (ಊಟದ) ನಿಲಯಗಳು (Feeding Houses). ಈ ಕೂಟಗಳಲ್ಲಿ ಪರಸ್ಥಳದ ಮತ್ತು ಸ್ಥಳೀಯ ಶ್ರೀವೈಷ್ಣವಪಂಥಾನುಯಾಯಿಗಳಿಗೆ ಉಚಿತ ಭೋಜನ ವ್ಯವಸ್ಥೆ ಮಾಡಲಾಗುತ್ತಿ ದ್ದಿತು. ಕೆಲವೊಮ್ಮೆ ಇಂಥಾ ಕೂಟಗಳು ಶ್ರೀವೈಷ್ಣವಪಂಥೀಯರು ಧಾರ್ಮಿಕ ಚರ್ಚಾಗೋಷ್ಠಿ ಗಳನ್ನು ಏರ್ಪಡಿಸಲು ಅವಕಾಶ ಕಲ್ಪಿಸುತ್ತಿದ್ದವು. ಆ ಕಾಲದ ಪ್ರಸಿದ್ಧ ವೈಷ್ಣವ

ಕ್ಷೇತ್ರಗಳಾದ ತಿರುಮಲ, ತಿರುಪತಿ, ಕಂಚಿ, ಶ್ರೀರಂಗಂ, ಅಹೋಬಿಲಂ, ಶ್ರೀಪೆರಂಬದೂರ್ ಮೊದಲಾದೆಡೆಗಳಲ್ಲಿ ಇಂಥಾ ರಾಮಾನುಜಕೂಟಗಳು ಅಸ್ತಿತ್ವದಲ್ಲಿದ್ದು, ರಾಜರು ಮತ್ತು ಅವರ ಪರಿವಾರದವರು, ಅಧಿಕಾರಿಗಳು, ಶ್ರೀಮಂತರು ಮೊದಲಾದವರು ಇಂಥಾ ಕೂಟಗಳಿಗೆ ದಾನ-ದತ್ತಿಗಳನ್ನು ಬಿಟ್ಟುಕೊಟ್ಟು ಪೋಷಿಸುತ್ತಿದ್ದರು. ಸಾಮಾನ್ಯಜನರು ಸಹಾ ಇಂಥಾ ಕೂಟಗಳನ್ನು ನಡೆಸಲು ನೆರವಾಗುತ್ತಿದ್ದರು.

ಹಂಪಿಯಲ್ಲಿದ್ದ ರಾಮಾನುಜಕೂಟಗಳ ಪ್ರಸ್ತಾಪ ಇಲ್ಲಿಯ ಶಾಸನದಲ್ಲಿ ದೊರೆಯುತ್ತದೆ. ವಿಠ್ಠಲ ದೇವಾಲಯ ಸನಿಹದ ಮೊದಲಿ ಆಳ್ವಾರರ ದೇವಾಲಯದಲ್ಲಿ ರಾಮಾನುಜಕೂಟವಿದ್ದು, ಇದಕ್ಕೆ ವಿಠ್ಠಲ ದೇವಾಲಯದಿಂದ ನಿತ್ಯವೂ ಎರಡು ಹರಿವಾಣದಷ್ಟು ಪ್ರಸಾದ ಹೋಗುತ್ತಿದ್ದಿತು (*ಹಂಪಿ ಶಾಸನಗಳು*, ಸಂಖ್ಯೆ ೧೯೬, ಕ್ರಿ.ಶ.೧೫೪೩). ಶ್ರೀ ವೈಷ್ಣವಪಂಥದ ತಿರುಮಲ ಅವುಕು ತಾತಾಚಾರ್ಯರ ಮಗ ತಿರುವೆಂಗಳಾಚಾರ್ಯರು ತಮಗೆ ಸದಾಶಿವರಾಯನಿಂದ ದಾನವಾಗಿ ಬಂದ ಭೂದತ್ತಿ - ದಾನಗಳನ್ನು ಇದೇ ರಾಮಾನುಜಕೂಟಕ್ಕೆ ಅರ್ಪಿಸಿದ್ದಾರೆ (*ಅದೇ*). ವಿಠ್ಠಲ ದೇವಾಲಯದ ಗೋಡೆಯ ಮೇಲಿರುವ ತೆಲುಗುಭಾಷೆಯ ಶಾಸನವೊಂದರಲ್ಲಿ (*ಅದೇ*, ಸಂಖ್ಯೆ ೨೮೯, ಕ್ರಿ.ಶ. ೧೫೫೬), ಅವುಬಳ ಮಹಾರಾಜನೆಂಬವನು ಶ್ರೀ ವೈಷ್ಣವರಿಗಾಗಿ ರಾಮಾನುಜಕೂಟವನ್ನು ಮಾಡಿಸಿಕೊಟ್ಟನೆಂಬ ವಿವರ ದೊರೆಯುತ್ತದೆ. ಅಚ್ಯುತ ರಾಯನ ಆಳ್ವಿಕೆಯಲ್ಲಿ ಹಂಪಿಯಲ್ಲಿ ತಿರುವೆಂಗಳನಾಥದೇವರ ಪ್ರತಿಷ್ಠಾಪನೆಯೊಡನೆ ಈ ಅರಸನ ಹೆಸರಿನಲ್ಲಿ ಅಚ್ಯುತರಾಯಪೇಟೆ ನಿರ್ಮಾಣಗೊಂಡಿತು. ಇಲ್ಲಿ ಸಹಾ ರಾಮಾನುಜ ಕೂಟವಿದ್ದಿತು.

* * *

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ, ಕಮಲಾಪುರದ ಮಾಲ್ಯವಂತ ರಘುನಾಥ ದೇವಾಲಯ ಸಹಾ ಶ್ರೀವೈಷ್ಣವ ಸ್ಥಾನವಾಗಿದ್ದಿತೆಂಬುದು ಮತ್ತಿ ತಿಮ್ಮಣ್ಣನಾಯಕನ ಶಾಸನದಿಂದ ವ್ಯಕ್ತಪಡುತ್ತದೆ. ಮೇಲೆಯೇ ಗಮನಿಸಿದಂತೆ, ಈ ಶಾಸನದಲ್ಲಿ ತುಂಗಭದ್ರಾತೀರದ ಹಂಪಿ ವಿರೂಪಾಕ್ಷದೇವರ ಸನ್ನಿಧಿಯಲ್ಲಿ ಶ್ರೀಮಾಲ್ಯವಂತೆ ರಾಮಾನುಜಜೀಯರ್ ಅವರಿಗೆ ಅರಕೆರೆ ಗ್ರಾಮವನ್ನು ಧಾರಾ ಪೂರ್ವಕ ನೀಡಿದ ವಿವರವಿದೆ. ಇಲ್ಲಿ ರಾಮಾನುಜಜೀಯರ್ ಅವರ ಹೆಸರಿನೊಡನೆ ಸಂಪರ್ಕ ಹೊಂದಿರುವ 'ಮಾಲ್ಯವಂತಂ' ಎಂಬುದು ರಘುನಾಥ ದೇವಾಲಯ ನೆಲೆಸಿರುವ ಮಾಲ್ಯವಂತ ಬೆಟ್ಟದ ಕಾರಣವಾಗಿ ಬಂದಿರಬಹುದು. ಇಲ್ಲಿಯ ರಘುನಾಥ ದೇವಾಲಯದಲ್ಲಿ ಶ್ರೀ ವೈಷ್ಣವ ಆಚಾರ್ಯರೂ ಇರುತ್ತಿದ್ದಿರಬಹುದು. ರಘುನಾಥ ದೇವಾಲಯವನ್ನು ಮಾಲ್ಯವಂತ ಬೆಟ್ಟದ ಪ್ರಪಾತದಂಥಾ ಎಡೆಯಲ್ಲಿ ನಿರ್ಮಿಸಲಾಗಿದೆ. ಶಾಸನದ ಪ್ರಕಾರ, ಮತ್ತಿ ತಿಮ್ಮಣ್ಣನಾಯಕನು ಮಾಲ್ಯವಂತಂ ರಾಮಾನುಜಜೀಯರ್ ಅವರಿಗೆ ಅರಕೆರೆ

ಗ್ರಾಮದತ್ತಿಯನ್ನು ಕೊಟ್ಟುದು ಹಂಪಿಯ ಶ್ರೀವಿರೂಪಾಕ್ಷನ ಸನ್ನಿಧಿಯಲ್ಲಿ. ಇದು ವಿಜಯನಗರ ಅರಸರ ಕಾಲದವರೆಗೂ ಮುಂದುವರೆದುಕೊಂಡು ಬಂದಿದ್ದ ಪದ್ಧತಿ. ಸಾಕ್ಷಾತ್ ವಿರೂಪಾಕ್ಷದೇವರ ಸನ್ನಿಧಿಯಲ್ಲಿ ದಾನ ಕೊಡುವಂತೆಯೇ ಕೆಲವೊಮ್ಮೆ ಈ ದೈವವನ್ನು ಸಾಕ್ಷಿಯಾಗಿರಿಸಿಕೊಂಡು ದಾನ-ದತ್ತಿ ನೀಡುತ್ತಿದ್ದಿರಬಹುದು.

ಮತ್ತಿ ತಿಮ್ಮಣ್ಣನಾಯಕನಿಂದ ದತ್ತಿ ಪಡೆದುಕೊಂಡ ಶಾಸನೋಕ್ತ ರಾಮಾನುಜ ಜೀಯರ್ ಯಾರು? ಜೀಯರ್ ಎಂದರೆ ಗುರು, ಆಚಾರ್ಯ ಎಂದರ್ಥ. ಅಹೋಬಿಲ ಮಠ ಪರಂಪರೆಯ ಗುರುಗಳನ್ನು 'ಜೀಯರ್' ಎಂದು ಕರೆಯಲಾಗುತ್ತದೆ. ಈ ರಾಮಾನುಜಜೀಯರ್ ಅವರು ಮಾಲ್ಯವಂತ ರಘುನಾಥ ದೇವಾಲಯದಲ್ಲಿದ್ದವರೇ? ಅಥವಾ ರಾಮಾನುಜರೇ ಸ್ಥಾಪಿಸಿದ ಮೇಲ್ಕೋಟೆಯ ಯತಿರಾಜಮಠ (ಜೀಯರ್‌ಮಠ) ದಲ್ಲಿದ್ದವರೇ ? ವೇದಾಂತ ರಾಮಾನುಜಜೀಯರ್ ಎಂಬುವರು ಈ ಸಮಯದಲ್ಲಿ ಮೇಲ್ಕೋಟೆಮಠದಲ್ಲಿ ಅಧ್ಯಕ್ಷರಾಗಿದ್ದವರು. ಈ ಆಚಾರ್ಯರು ಮೇಲ್ಕೋಟೆ ನಾರಾಯಣದೇವರ ಗುಡಿಯ ೧೫೪೪ರ ಶಾಸನದಲ್ಲಿಯೂ ಉಲ್ಲೇಖಗೊಂಡಿದ್ದಾರೆ. ಇವರು ೧೬೭೭ ರಿಂದ ೧೭೩೭ರ ಕಾಲಾವಧಿಯಲ್ಲಿದ್ದ ಪೆರಿಯ ಪರಕಾಲಸ್ವಾಮಿಗಳ ಸಹಪಾಠಿಗಳಾಗಿದ್ದವರು. ವಿಜಯನಗರ ಅರಸರಾದ ಅಚ್ಯುತರಾಯ ಮತ್ತು ಸದಾಶಿವ ರಾಯರಿಂದ ಹೇರಳ ದತ್ತಿ - ದಾನ ಪಡೆದುಕೊಂಡುದು ಮೇಲ್ಕೋಟೆಯ ಯತಿರಾಜ ಮಠ.

ಮತ್ತಿ ತಿಮ್ಮಣ್ಣನಾಯಕನು ತನ್ನ ಶಾಸನದಲ್ಲಿ ಮಾಲ್ಯವಂತಂ ರಾಮಾನುಜ ಜೀಯರ್ ಅವರನ್ನು 'ಶ್ರೀ ಮದ್ವೇದಮಾರ್ಗ ಪ್ರತಿಷ್ಠಾಪನಾಚಾರ್ಯ್ಯ ಪರಮಹಂಸ ಪರಿವ್ರಾಜಕಾಚಾರ್ಯ್ಯ ವೇದಾಂತ್ತಾಚಾರ್ಯ್ಯಲೈನ ಶ್ರೀಮಾಲ್ಯವಂತಮು ರಾಮಾನುಜ ಜೀಯ್ಯಲು ಅಯ್ಯವಾರು' ಎಂದು ಸಂಬೋಧಿಸಿದ್ದಾನೆ. ಮೇಲ್ಕೋಟೆಯ ಶಾಸನ ದಲ್ಲೂ ವೇದಾಂತ ರಾಮಾನುಜಜೀಯರ್ ಅವರನ್ನು 'ವೇದಮಾರ್ಗ ಪ್ರತಿಷ್ಠಾಪನಾ ಚಾರ್ಯ, ಪರಮಹಂಸ ಪರಿವ್ರಾಜಕಾಚಾರ್ಯ, ಉಭಯವೇದಾಂತಾಚಾರ್ಯ' ರೆಂತಲೇ ವರ್ಣಿಸಲಾಗಿದೆ. ಆದ್ದರಿಂದ ಮಾಲ್ಯವಂತಂ ರಾಮಾನುಜಜೀಯರ್ ಮತ್ತು ವೇದಾಂತ ರಾಮಾನುಜಜೀಯರ್ - ಈ ಈರ್ವರೂ ಒಬ್ಬರೇ ಆಗಿರಬಹುದೇ? ಈ ಕುರಿತು ಇನ್ನೂ ಸ್ಪಷ್ಟಪಡಿಸಬೇಕಿದೆ. ಮತ್ತಿ ತಿಮ್ಮಣ್ಣನಾಯಕನು ಅರಕೆರೆ ಗ್ರಾಮವನ್ನು ಮಾಲ್ಯವಂತಂ ಅಥವಾ ವೇದಾಂತ ರಾಮಾನುಜಜೀಯರ್ ಅವರಿಗೆ ದಾನಪೂರ್ವಕ ಕೊಡುವ ವೇಳೆಗೆ ಈ ಆಚಾರ್ಯರು ಇನ್ನೂ ಯುವಕರಾಗಿದ್ದರೆಂದು ತೋರುತ್ತದೆ. ಇಲ್ಲಿ ಪ್ರಸ್ತಾಪಿಸ ಬೇಕಾದ ಮುಖ್ಯ ಅಂಶವೆಂದರೆ, ಹಂಪಿಯ ಶಾಸನಗಳಾಗಲಿ, ಶ್ರೀವೈಷ್ಣವಸಂಬಂಧಿ ಸ್ಥಳೀಯ ದಾಖಲೆಗಳಾಗಲಿ ಮಾಲ್ಯವಂತಂ ರಾಮಾನುಜ ಜೀಯರ್ ಅವರನ್ನು ಎಲ್ಲಿಯೂ ಪ್ರಸ್ತಾಪಿಸುವುದಿಲ್ಲ. ಇದು ಸಹಾ ಪರಿಶೀಲನಾರ್ಹ.

ಮತ್ತಿ ತಿಮ್ಮಣ್ಣನಾಯಕನು ಮಾಲ್ಯವಂತಂ ರಾಮಾನುಜಜೀಯರ್ ಅವರಿಗೆ ನೀಡಿದ ಅರಕೆರೆ ಗ್ರಾಮ ಯಾವುದು? ಈ ಹೆಸರಿನ ಗ್ರಾಮವು ಚಿತ್ರದುರ್ಗ ಜಿಲ್ಲೆಯ ಗ್ರಾಮವಾರು ಸೂಚಿಯಲ್ಲಿ ಕಂಡಬರುವುದಿಲ್ಲ. ಶಾಸನ ದೊರೆತ (ರಂಗಸಮುದ್ರ) ಹಿರಿಯೂರು ತಾಲ್ಲೂಕಿನಲ್ಲಿ ಈ ಹೆಸರನಲ್ಲಿ ಗ್ರಾಮವಿಲ್ಲ. ಶಾಸನದಲ್ಲಿ 'ಕುಂತಣದೇಶಮೂಲೋನ ಪರಿಶೀಮಲೋನಿ ನಂದನ. ಸೋಮಸ್ತಲಮುಲೋನಿ ಅರಕೆರೇಗ್ರಾಮಮು' ಎಂದು ನಿರ್ದೇಶಿಸಿದೆ. ಅಂದರೆ ಕುಂತಳದೇಶದೊಳಗಣ ಪರಿಸೀಮೆಗೆ ಸೇರಿದ ನಂದನ. ಸೋಮಸ್ಥಳದೊಳಗೆ ಸಮಾವೇಶಗೊಂಡ ಅರಕೆರೆ ಗ್ರಾಮ ಎಂದಾಗುತ್ತದೆ. ಇಲ್ಲಿ ಕುಂತಳವೆಂದರೆ ಕರ್ನಾಟಕವೇ. ಈ ಎರಡು ಶಬ್ದಗಳೂ ಅಭಿನ್ನವೆಂದು ಭಾವಿಸುತ್ತಾರೆ ವಿದ್ವಾಂಸರು. ಶಾಸನದಲ್ಲಿ ಸ್ಥಳ ಅಥವಾ ಸಮ್ಮತಿಗೆ ಸಂಬಂಧಿಸಿರುವ ಶಬ್ದವನ್ನು '*ನಂದನ. ಸೋಮ*' ಎಂದು ಓದಲಾಗಿದ್ದು, ಇಲ್ಲಿಯ ಮಧ್ಯದ ಅಕ್ಷರವೊಂದು ತ್ರುಟಿತವಾಗಿರುವಂತೆ ತೋರಿಸಲಾಗಿದೆ. ಆದರೆ ಇಲ್ಲಿ ಸ್ಪಷ್ಟಪಡಿಸಬೇಕಾದ ಸಂಗತಿಯೆಂದರೆ, ಈ ಶಾಸನಪಾಠ ವನ್ನು ದಾಖಲಿಸಿಕೊಂಡವರು ಇದನ್ನು ತಪ್ಪಾಗಿ ಓದಿದ್ದಾರೆ. ಇದರಿಂದಾಗಿ ಪರಿಣಾಮ ವೆಂದರೆ, ಪ್ರಮುಖ ಸ್ಥಳವೊಂದು ಈವರೆಗೆ ಸರಿಯಾಗಿ ದಾಖಲಾಗದೆ ಹೋದುದು; ಹಾಗೂ ಸಂಶೋಧಕರು ಗೊಂದಲಕ್ಕೆ ಒಳಗಾದುದು. ವಾಸ್ತವದಲ್ಲಿ, ಇದರ ಸರಿಯಾದ ರೂಪ 'ನಂದನಹೊಸೂರು' ಎಂದು. ಇದು ಹೊಳಲ್ಕೆರೆ ತಾಲ್ಲೂಕಿನಲ್ಲಿರುವ ಪ್ರಸಿದ್ಧ ಗ್ರಾಮ. 'ನಂದನಹೊಸೂರು ಸ್ಥಳ'ವೆಂಬುದು ಆಗಿನ ಆಡಳಿತ ವಿಭಾಗಗಲ್ಲೊಂದು. ಹಾಗೆಯೇ, ಶಾಸನವು ಪ್ರಸ್ತಾಪಿಸುವ ಅರಕೆರೆ ಎಂಬುದು ಈಗ ಅಸ್ತಿತ್ವದಲ್ಲಿಲ್ಲ. ಹಿಂದೆ ಇದು ಇದೇ ಪರಿಸರದಲ್ಲಿದ್ದುದನ್ನು ಚಿತ್ರದುರ್ಗ ಚರಿತ್ರೆಗೆ ಸಂಬಂಧಿಸಿದ ದಾಖಲೆಗಳು ಸಮರ್ಥಿಸುತ್ತವೆ. ಮತ್ತಿ ತಿಮ್ಮಣ್ಣನಾಯಕನ ಕಾಲದಲ್ಲಿ ಜೀವಂತವಾಗಿದ್ದ ಈ ಗ್ರಾಮ, ಆಗ ನಂದನಹೊಸೂರು ಸ್ಥಳದಲ್ಲಿ ಅಂತರ್ಗತವಾಗಿದ್ದಿತು. ಈ ಹಳೇ ಗ್ರಾಮದ ನಿವೇಶನವನ್ನು ಈಗ ಸರಿಯಾಗಿ ಗುರುತಿಸಬೇಕಿದೆ. ಮತ್ತಿ ತಿಮ್ಮಣ್ಣನಾಯಕನು ಮಾಲ್ಯವಂತಂ ರಾಮನುಜಜೀಯರ್ ಅವರಿಗೆ ದಾನವಾಗಿ ಕೊಟ್ಟ ಅರಕೆರೆಯು ಹಿಂದೆ ನಂದನಹೊಸೂರು ಸ್ಥಳಕ್ಕೆ ಸೇರಿದ ಹಾಗೂ ಈಗ ಬೇಚರಾಕ್ ಸ್ಥಿತಿಯಲ್ಲಿರುವ ಅದೇ ಹೆಸರಿನ ಗ್ರಾಮವೆಂಬುದು ಈಗ ಸ್ಪಷ್ಟಗೊಂಡಿದೆ.

ಶಾಸನೋಕ್ತ ನಂದನಹೊಸೂರು ಗ್ರಾಮವಿರುವುದು ಚಿತ್ರದುರ್ಗ ಜಿಲ್ಲೆಯ ಪ್ರಸಿದ್ಧ ಶ್ರೀವೈಷ್ಣವಕ್ಷೇತ್ರವಾದ ಹೊರಕೆರೆದೇವರಪುರದ ಪಕ್ಕದಲ್ಲಿ. ಚಿತ್ರದುರ್ಗದಿಂದ ೨೮ಕಿ.ಮೀ. ಅಂತರದಲ್ಲಿರುವ ಹೊರಕೆರೆದೇವರಪುರ ನೆಲೆಸಿರುವುದು ಚಿತ್ರದುರ್ಗ ಮತ್ತು ಹೊಸದುರ್ಗಗಳ ಮಧ್ಯೆ. ಇದು ಗುಡ್ಡಗಾಡುಗಳಿಂದ ಆವೃತವಾದ ಸುಂದರ ಪ್ರಾಕೃತಿಕ ತಾಣ. ಇಲ್ಲಿರುವುದೇ ಪ್ರಾಚೀನವಾದ ಹಾಗೂ ವಿಶಾಲವಾದ ಲಕ್ಷ್ಮೀನರಸಿಂಹಸ್ವಾಮಿಯ ದೇವಾಲಯ. ಇದು ಉದ್ಭವ ನರಸಿಂಹಕ್ಷೇತ್ರ. ಇದನ್ನು ಲಕ್ಷ್ಮೀ ನರಸಿಂಹನೆಂದು

ಕರೆದಿದ್ದರೆ, ಉತ್ಸವಮೂರ್ತಿಯನ್ನು ಲಕ್ಷ್ಮೀರಂಗ ನಾಥಸ್ವಾಮಿಯೆಂದು ಕರೆಯಲಾಗುತ್ತದೆ. ವಿಜಯನಗರ ಅರಸರು ಹಾಗೂ ದುಮ್ಮಿ, ತರೀಕೆರೆ ಮತ್ತು ಚಿತ್ರದುರ್ಗ ನಾಯಕ ಅರಸರು ಈ ದೇವಾಲಯದ ಅಭಿವೃದ್ಧಿಗೆ ಕಾರಣರಾಗಿದ್ದಾರೆ. ನಂದನಹೊಸೂರಿನಲ್ಲಿಯೂ ಹೊರಕೆರೆದೇವರಪುರದಲ್ಲಿಯೂ ವಿಜಯನಗರದ ಅರಸರು ಮತ್ತು ನಾಯಕ ಪಾಳೆಯಗಾರರ ಹಲವಾರು ಶಾಸನಗಳಿವೆ. ಮತ್ತಿ ತಿಮ್ಮಣ್ಣನಾಯಕನು ಹಂಪಿಯ ಮಾಲ್ಯವಂತಂ ರಾಮಾನುಜಜೀಯರ್ ಅವರಿಗೆ ಅರ್ಪಿಸಿದುದು ಇದೇ ಪರಿಸರದ, ಅಂದರೆ ಹೊಳಲ್ಕೆರೆ ತಾಲ್ಲೂಕು ನಂದನಹೊಸೂರಿಗೆ ಸೇರಿದ ಅರಕೆರೆ ಗ್ರಾಮವನ್ನು ಎಂಬುದನ್ನು ಇಲ್ಲಿ ದೃಢೀಕರಿಸಬಹುದು. ಹಾಗೆಯೇ, ಹೊರಕೆರೆದೇವರಪುರದ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯದಲ್ಲಿ ಹಿಂದೆ ನಡೆಯುತ್ತಿದ್ದಿರಬಹುದಾದ ರಾಮಾನುಜಕೂಟವನ್ನು ನೆನಪಿಸುವಂತೆ, ಈಗಲೂ ಹನ್ನೆರಡು ವರ್ಷಗಳಿಗೊಮ್ಮೆ 'ಅನ್ನದಕೋಟೆ' ಸೇವೆ ಈ ದೇವರಿಗೆ ಸಲ್ಲುತ್ತಿರುವುದು ಗಮನಾರ್ಹ.

* * *

ಮತ್ತಿ ತಿಮ್ಮಣ್ಣನಾಯಕನಂತೆಯೇ, ಇದೇ ಪೀಳಿಗೆಯಲ್ಲಿ ಬರುವ ಆರನೇ ದೊರೆ ಚಿಕ್ಕಣ್ಣನಾಯಕನೂ ಶ್ರೀವೈಷ್ಣವ ಆಚಾರ್ಯರನ್ನು ಗೌರವಿಸಿದ ಸಂಗತಿ, ಈ ಮೇಲೆ ಪ್ರಸ್ತಾಪಿಸಿದ ಈತನ ಎರಡು ಶಾಸನಗಳಿಂದ ತಿಳಿದು ಬರುತ್ತದೆ. ಮೊದಲನೇ ಶಾಸನದ (ಎಕ.,೧೧, ಹಿರಿಯೂರು ೫೯, ಕ್ರಿ.ಶ. ೧೬೭೮) ಪ್ರಕಾರ, ತನ್ನ ತಂದೆಗಳಿಗೆ ಪುಣ್ಯವಾಗಲೆಂದು ಈ ನಾಯಕನು ಹಿರಿಯೂರು ತಾಲ್ಲೂಕಿನ ತೊರೆ (ಸಾಲು) ನಾಗೇನಹಳ್ಳಿಯನ್ನು 'ರಾಮಾನುಜಕೂಟ'ಕ್ಕೆ ಧಾರಾದತ್ತವಾಗಿ ಅರ್ಪಿಸಿದ್ದಾನೆ. ಈತ ಈ ಗ್ರಾಮವನ್ನು ಸಮರ್ಪಿಸಿರುವುದು ತಿರುಪತಿ ಪೆದಜೀಯರೈಯ್ಯನವರಿಗೆ. ಹಾಗೆಯೇ, ತ್ರುಟಿತ ವಾಗಿರುವ ಎರನಡೇ ಶಾಸನದ (ಅದೇ, ದಾವಣಗೆರೆ ೧೬೦, ಕ್ರಿ.ಶ.೧೬೭೮) ಪ್ರಕಾರ, ತಿರುವೆಂಗಳಾಚಾರ್ಯರಿಗೆ ಹಾಲುವರ್ತಿ ಗ್ರಾಮವನ್ನು ದಾನಮಾಡಿದ್ದಾನೆ ಈ ನಾಯಕ. ದಾನ ಮಾಡಿದ ಉದ್ದೇಶವು ಶಾಸನದಲ್ಲಿ ಪ್ರಸ್ತಾಪಗೊಂಡಿಲ್ಲವಾದರೂ ಈ ಶಾಸನದ ಆರಂಭದಲ್ಲಿ 'ಶ್ರೀಮತೇರಾಮಾನುಜಾಯನಮಃ' ಎಂಬ ಸ್ತುತಿಯಿದೆ.

ಇಲ್ಲಿಯ ಪ್ರಶ್ನೆಗಳೆಂದರೆ, ಚಿಕ್ಕಣ್ಣನಾಯಕನು ಗ್ರಾಮದಾನ ಮಾಡುವುದ ರೊಂದಿಗೆ ಪೋಷಿಸಿದ 'ರಾಮಾನುಜಕೂಟ' ಯಾವುದು? ಈತನಿಂದ ಗ್ರಾಮದಾನ ಸ್ವೀಕರಿಸಿದ ಪೆದಜೀಯರೈಯ್ಯನವರು ತಿರುಪತಿಯವರೇ ಅಥವಾ ಹಂಪಿಯವರೇ? ಹಾಗೆಯೇ, ಇದೇ ಚಿಕ್ಕಣ್ಣನಾಯಕನಿಂದ ಹಾಲುವರ್ತಿ ಗ್ರಾಮವನ್ನು ದಾನವಾಗಿ ಸ್ವೀಕರಿಸಿದ ತಿರುವೆಂಗಳಾಚಾರ್ಯರು ಯಾವ ಮೂಲದವರು? ಇಂಥಾ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಕಂಡುಕೊಳ್ಳುವುದು ಸ್ವಲ್ಪ ಕಷ್ಟ. ಆದರೆ ಶ್ರೀವೈಷ್ಣವಪಂಥದವರಿಗೆ ಅಹೋಬಿಲಂನಂತೆಯೇ ತಿರುಮಲ(ವೆಂಕಟೇಶ್ವರ)ವೂ ಇನ್ನೊಂದು ಮುಖ್ಯ ಆರಾಧನಾಕ್ಷೇತ್ರ.

ಚಿತ್ರದುರ್ಗ ನಾಯಕ ಅರಸರು ಒಂದೇ ಬೆಟ್ಟಸಾಲಿನಲ್ಲಿ ನೆಲೆರೆಸಿರುವ ಮತ್ತು ಪರಸ್ಪರ ಧಾರ್ಮಿಕ ಸಂಬಂಧ ಹೊಂದಿರುವ ಅಹೋಬಿಲ ಮತ್ತು ತಿರುಪತಿ - ಈ ಎರಡೂ ಕ್ಷೇತ್ರಗಳ ಬಗೆಗೆ ಸಮಾನ ಭಕ್ತಿ ವ್ಯಕ್ತಪಡಿಸಿದಂಥವರು. ಹಂಪಿಯಲ್ಲಿ ದ್ದಂತೆಯೇ ತಿರುಮಲ ಮತ್ತು ತಿರುಪತಿಗಳಲ್ಲೂ ಶ್ರೀವೈಷ್ಣವ ಅನುಯಾಯಿಗಳಿಗೆ ಪ್ರತ್ಯೇಕ ಪ್ರಸಾದನಿಲಯ (ರಾಮಾನುಜಕೂಟ)ಗಳಿದ್ದವು. ಚಿಕ್ಕಣ್ಣನಾಯಕನು ತಿರುಪತಿಯ ಪೆದಜೀಯರ್ ಅವರಿಗೇ ಅಲ್ಲಿಯ ರಾಮಾನುಜಕೂಟ ನಿರಂತರವಾಗಿ ನಡೆಯುವಂತೆ ಗ್ರಾಮದತ್ತಿ ನೀಡಿದನೇ? ಹಾಗಾದರೆ, ತಿರುವೆಂಗಳಾಚಾರ್ಯ ಹೆಸರಿನ ಇನ್ನೋರ್ವ ಶ್ರೀವೈಷ್ಣವ ಆಚಾರ್ಯರು ಯಾರು? ಹಂಪಿಯ ವಿಠ್ಠಲ ದೇವಾಲಯದ ಶಾಸನಗಳು ತಿರುಮಲ ಆವುಕು ತಾತಾಚಾರ್ಯರ ಮಗ ತಿರುವೆಂಗಳಾಚಾರ್ಯರನ್ನು ಪ್ರಸ್ತಾಪಿಸುತ್ತವೆ. ಆದರೆ ಕಾಲಮಾನ ವ್ಯತ್ಯಾಸದ ಕಾರಣವಾಗಿ ಚಿಕ್ಕಣ್ಣನಾಯಕನ ಕಾಲದ ತಿರುವೆಂಗಳಾ ಚಾರ್ಯರೇ ಇವರೆಂದು ಭಾವಿಸಲಾಗದು. ಆದರೆ ಇದೇ ಹೆಸರಿನ ಶ್ರೀವೈಷ್ಣವ ಆಚಾರ್ಯರು ಚಿಕ್ಕಣ್ಣನಾಯಕನ ಕಾಲದಲ್ಲೂ ಮುಂದುವರೆದಿರಬಹುದಲ್ಲವೇ? ಇವೆಲ್ಲವೂ ಇನ್ನೂ ಬಗೆಹರಿಯಬೇಕಾದ ಸಂಗತಿಗಳು.

ಹೊರಕೆರೆದೇವರಪುರದ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯದ ಶ್ರೀತಿರು ವೆಂಗಳನಾಥನ ರಂಗಮಂಟಪವನ್ನು ಸುಮಾರು ೧೪೬೪ ರಲ್ಲಿ ಕಟ್ಟಿಸಿಕೊಟ್ಟವನು ಮಹಾನಾಯಕಾಚಾರ್ಯ ದುಮ್ಮಿ ವೀರಪ್ಪನಾಯಕ. ಚಿತ್ರದುರ್ಗ ನಾಯಕ ಅಸರು ಸಹಾ ಹೊರಕೆರೆ ರಂಗನಾಥನ ದೀಪದ ಸೇವೆಗೆ ಮಾನ್ಯ ನೀಡಿದ್ದಾರೆ. ಹಾಗೆಯೇ, ಹೊಳಲ್ಕೆರೆ ತಾಲ್ಲೂಕು ರಾಮೇನಹಳ್ಳಿಯಲ್ಲಿ ದೊರೆತ ೧೭೦೯ರ ಶಾಸನದಂತೆ, ಚಿತ್ರದುರ್ಗದ ದೊರೆ ಬಿಚ್ಚುಗತ್ತಿ ಭರಮಣ್ಣನಾಯಕನು ಶ್ರೀವೈಷ್ಣವಪಂಥದ ಅಪ್ಪಳಾ ಚಾರ್ಯರಿಗೆ ಆ ಗ್ರಾಮವನ್ನು ಧಾರೆಯೆರೆದ ವಿಚಾರ ತಿಳಿಯುತ್ತದೆ. ಮತ್ತಿ ತಿಮ್ಮಣ್ಣ ನಾಯಕ ಮತ್ತು ಚಿಕ್ಕಣ್ಣನಾಯಕರಂತೆಯೇ ಭರಮಣ್ಣನಾಯಕನೂ ಶ್ರೀ ವೈಷ್ಣವ ಪಂಥದ ಆಚಾರ್ಯ ರನ್ನು ಪೂಜಿಸಿದ.

ಏನೇ ಇದ್ದರೂ ತಮ್ಮ ಹಿರಿಯರಂತೆಯೇ ಚಿತ್ರದುರ್ಗ ನಾಯಕ ಅರಸರು ಹಂಪಿಯ ಶ್ರೀ ವೈಷ್ಣವ ಆಚಾರ್ಯರಿಗೆ ತಮ್ಮ ಭಕ್ತಿ - ಗೌರವಗಳನ್ನು ತೋರದಿದ್ದು ದುಂಟೇ?

ಆಕರ ಸಾಹಿತ್ಯ

1. ಎಸ್.ರಂಗಾಚಾರ್, 1953, *ಶ್ರೀ ಅಹೋಬಿಲಮಠವೈಭವ*, ಶ್ರೀಅಹೋಬಿಲಸ್ವಾಮಿ ಗಳ ಸ್ವಾಗತ ಸಮಿತಿ, ಬೆಂಗಳೂರು
2. ಹೆಚ್.ಜೆ. ರಾಮಯ್ಯಂಗಾರ್, 1992, *ಶ್ರೀವೈಷ್ಣವ ಆಚಾರ್ಯ ಪರಂಪರೆ*, ಲೇಖಕರಿಂದ ಪ್ರಕಾಶಿತ, ಬೆಂಗಳೂರು

3. ಮೈ.ಹ. ರಘೋತ್ತಮತೀರ್ಥ, 2001, *ಶ್ರೀನೃಸಿಂಹಕ್ಷೇತ್ರ ವೈಭವ*, ಶ್ರೀಮತಿ ಭಾರತೀಬಾಯಿ ಸ್ಮಾರಕ ಗ್ರಂಥಮಾಲೆ, ಮೈಸೂರು
4. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -1, ಬಳ್ಳಾರಿ ಜಿಲ್ಲೆ*, 1998, ಕನ್ನಡ ವಿಶ್ವವಿದ್ಯಾಲಯ, ಹಂಪಿ
5. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -3, ಹಂಪಿ ಶಾಸನಗಳು*, 2000 - ಕನ್ನಡ ವಿಶ್ವವಿದ್ಯಾಲಯ, ಹಂಪಿ
6. ಬಿ. ರಾಜಶೇಖರಪ್ಪ, 2001, *ದುರ್ಗಶೋಧನ*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
7. ಡಿ.ಟಿ. ರಂಗಸ್ವಾಮಿ, 2002, *ಶ್ರೀಲಕ್ಷ್ಮೀನರಸಿಂಹಸ್ವಾಮಿ ಲೀಲಾಮೃತಂ (ಹೊರಕೆರೆದೇವರಪುರ ಕ್ಷೇತ್ರ ಮಹಾತ್ಮೆ)*, ಚಿನ್ಮೂಲಾದ್ರಿ ಪ್ರಕಾಶನ, ಚಿತ್ರದುರ್ಗ.
8. ಬಿ. ಜಯರಾಮ ಸರಜೋಶಿ ರಾಜಪುರೋಹಿತ, 2004, *ಶ್ರೀಮತ್ ಕನಕಾಚಲ* ಶ್ರೀ ಲಕ್ಷ್ಮೀನರಸಿಂಹಮಹಾತ್ಮ್ಯೆ, ಶ್ರೀಸುಂಕದಕಟ್ಟೆ ಪ್ರಾಣೇಶಮಂದಿರ, ಗಂಗಾವತಿ
9. *Epigraphia Carnatica XI - Chitradurga District,* 1903, Bangalore
10. T.V. Mahalingam, 1975, *Administration and Social Life under Vijayanagar, Part II : Social Life*, University of Madras, Madras
11. D.Devakunjari, 1983, Hampi, Archaeological Survey of India, New Delhi
12. Konduri Sarojini Devei, 1990, *Religion in Vijayanagar Empire,* Sterling Publishers Private Limited, New Delhi.
13. Vasundhara Filliozat (Ed.,) 1999, *Vijayanagar as seen by Domingos Paes and Fernao Nuniz,* National Book Trust of India, New Delhi.

೪೩. ಪುರಂದರದಾಸರ ರಚನೆಗಳ ಸಂಸಾರ ಕಲ್ಪನೆ

ಡಾ. ಶ್ರೀಧರ ಪಿಸ್ಸೆ

ವೇದಶಾಸ್ತ್ರಗ್ರಂಥಗಳಲ್ಲಿ ನಿರೂಪಿತವಾದ ಪುರುಷಾರ್ಥ ಸಾಧನೆಗಳು ಧರ್ಮ ಅರ್ಥ ಮೋಕ್ಷಗಳೆಂದು ತಿಳಿದು ಬರುತ್ತದೆ. ವೇದಶಾಸ್ತ್ರ ಗ್ರಂಥಗಳನ್ನು ಆಧಾರವಾಗಿಸಿ ಕೊಂಡಿರುವ ಕಾಮಸೂತ್ರದ ಒಕ್ಕಣೆ ವರ್ಣಾಶ್ರಮ ಧರ್ಮದ 'ನಾಲ್ಕು ವರ್ಗದ ಜನರಲ್ಲಿ ಮೋಕ್ಷದ ಅಪೇಕ್ಷೆ ಸಾಮಾನ್ಯವಾಗಿ ಇರುವುದಿಲ್ಲವಾದ್ದರಿಂದ ಧರ್ಮ, ಅರ್ಥ, ಕಾಮ ಈ ಮೂರೇ ಪುರುಷಾರ್ಥಗಳೆಂದು ತಿಳಿಯಲಾಗಿದೆ. 'ಕಾಮ'ವೆಂಬ ಪುರುಷಾರ್ಥಕ್ಕೆ ಧರ್ಮ, ಅರ್ಥ ಇವು ಕಾರಣಗಳಿರುವುದರಿಂದ ಫಲಭೂತವಾದ ಮುಖ್ಯ ಪುರುಷಾರ್ಥ ವೆಂದರೆ ಕಾಮವೆಂದೇ ಕಾಮವಾದಿಗಳ ಮತವೆಂದು ವಾತ್ಸ್ಯಾಯನ ಕಾಮಸೂತ್ರ ನಿರೂಪಿಸಿ ಕಾಮ ಪುರುಷಾರ್ಥ ಸಾಧನೆಯ ಕ್ರಮವನ್ನು ವಿವರಿಸುತ್ತದೆ. ಅನುಲೋಮ ವಿವಾಹ ಪದ್ಧತಿಯನ್ನು ವಿವರಿಸಿರುವ ಮನುಸ್ಮೃತಿ ಪುರುಷನಿಗೆ ಸ್ವಜಾತಿಯ ಸತಿಯೊಂದಿಗೆ ಕೆಳಜಾತಿಯ ಸ್ತ್ರೀಯರನ್ನು ಪತ್ನಿಯರನ್ನಾಗಿ ಪಡೆಯುವ ಅಧಿಕಾರ ನೀಡಿದೆ (ಮ.ಸ್ಮೃ. ೩.೧೨) ಮೊದಲ ಮದುವೆಗೆ ಸ್ವಜಾತೀಯ ಕನ್ಯೆಯಾಗಿರ ಬೇಕೆಂದು ನಿಯಮ ವಿಧಿಸುವ ಮನುಸ್ಮೃತಿ ಕಾಮದ ಉದ್ದೇಶಕ್ಕಾಗಿ ಜರುಗುವ ಮದುವೆಗಳಿಗೆ ಜಾತಿ ನಿಯಮವಿಲ್ಲ ವೆಂದು ನಿರೂಪಿಸಿದೆ. ಮನುಸ್ಮೃತಿಯ ಈ ನಿಯಮವನ್ನು ಕಾಮಸೂತ್ರ ಅನುಸರಿಸಿದೆ. ಪುರುಷ ಕಾಮ-ಪುರುಷಾರ್ಥ ಸಾಧಿಸುವ ಬಗೆಯನ್ನು ವಿವರಿಸುತ್ತದೆ. ಅದು ಕನ್ಯೆ, ಪತ್ನಿ, ಪರಸ್ತ್ರೀ, ವಿಧವೆ ಮತ್ತು ವೈಶ್ಯಾ ಸ್ತ್ರೀಯರನ್ನು ವಶೀಕರಿಸಿಕೊಳ್ಳುವ ಮತ್ತು ಉಪಭೋಗಿಸುವ ಉಪಾಯಕ್ರಮ ನಿರೂಪಿಸಿದೆ. ಈ ಉದ್ದೇಶಸಾಧನೆಗಾಗಿ ಭಿನ್ನ ಭಿನ್ನ ಬಗೆಯ ಸ್ತ್ರೀಯರ ಮನಸ್ಸು ಗೆಲ್ಲುವ ಕ್ರಮ ಮತ್ತು ದೇಹವನ್ನು ಉದ್ದೀಪಿಸಿ ವಶೀಕರಿಸಿಕೊಳ್ಳುವ ಬಗೆಯೊಂದು ಶಾಸ್ತ್ರ ವೆಂಬಂತೆ, ಕಲೆಯೆಂಬಂತೆ, ವಿದ್ಯೆ ಎಂಬಂತೆ ನಿರೂಪಿಸಿದೆ. ಅಂದು ಪುರುಷರು ಕುಟುಂಬದ ಹೊರಗೂ ಕಾಮಜೀವನ ನಡೆಸಲು ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಅವಕಾಶವಿತ್ತು. ವಿಜಯನಗರದ ಕಾಲದ ರಾಜಸಭೆಗಳಲ್ಲಿ ಗಣಿಕೆಯರು, ವಾರಾಂಗನೆಯರು, ನೃತ್ಯಕಲಾವಿದೆಯರು, ದೇವಾಲಯ ಗಳಲ್ಲಿ ದೇವರ ಬಸವಿಯರು, ದೇವದಾಸಿ ಯರು, ಸಾನಿಯರು, ಪತ್ರಿಯರು ಮತ್ತು ಸೂಳೆಗೇರಿಗಳಲ್ಲಿ ಸೂಳೆಯರು, ದಾಸಿಯರು, ಸ್ವರಿಣಿಯರು ಇರುತ್ತಿದ್ದರು. ವಿಜಯ ನಗರದ ಆಡಳಿದ ವ್ಯವಸ್ಥೆಯಲ್ಲಿ ವೇಶ್ಯಾವೃತ್ತಿಯನ್ನು ಮಾನ್ಯ ಮಾಡಲಾಗಿತ್ತು.

ವೇಶ್ಯೆಯರು ತಮ್ಮ ಮನೆಗಳಲ್ಲಿ ಕನ್ನಡಿ ಇಟ್ಟುಕೊಳ್ಳಲು 'ಸೊಳೆದೆರೆ' ಎಂಬ ಕರ ಕಟ್ಟಬೇಕಿತ್ತು ಎಂಬ ವಿವರಗಳು ದೊರಕುತ್ತವೆ.

ಈ ಅಂಶ ಪುರಂದರದಾಸರ ಕಾಲದಲ್ಲಿ ಕಾಮೋಪಭೋಗದ ಜೀವನಕ್ಕೆ ಅತಿ ಪ್ರಾಶಸ್ತ್ಯ ದೊರೆತಿತ್ತು ಎಬುದನ್ನು ನಿರೂಪಿಸುತ್ತದೆ. ಪುರಂದರದಾಸರ ಸಮಕಾಲೀನ ಸಮಾಜದಲ್ಲಿ ಕಾಮಜೀವನ ವೇದಶಾಸ್ತ್ರಗಳಲ್ಲಿ ನಿರೂಪಿತ ಕಾಮ ಪುರುಷಾರ್ಥಗಳ ಭಾಗವಾಗಿದ್ದುದು ವಿದಿತವಾಗುತ್ತದೆ. ಆದರೆ ಪುರಂದರದಾಸರ ರಚನೆಗಳಲ್ಲಿ ಕಾಮೋಪಭೋಗ ಜೀವನದ ಲೋಲುಪತೆಯನ್ನು ನಿರಾಕರಿಸಲಾಗಿದೆ. ಅದರ ವಿರುದ್ಧ ತಮ್ಮ ಭಕ್ತಿಯ ದನಿಯನ್ನು ಎತ್ತಲಾಗಿದೆ.

ಮನುಜ ಶರೀರವಿದೇನು ಸುಖ, ಇದು
ನೆನೆದರೆ ಘೋರ ಇದೇನು ಸುಖ ||

ಜನನ ಮರಣ ಮಲದ ಕೂಪದಲ್ಲಿದ್ದು
ಅನುಭವಿಸುವುದು ಇದೇನು ಸುಖ
ತನುವಿದ್ದಾಗಲೇ ಹೃದಯದ ಶೌಚದ
ಸ್ತನಗಳನುಂಬುದು ಏನು ಸುಖ ||

ದಿನ ದಿನ ಹಸಿವೆ ತೃಷೆ ಘನಘನ ರೋಗ ದೊ
ಳನುಭವಿಸುವುದು ಅದೇನು ಸುಖ
ನೆನೆಯಲನಿತ್ಯ ನೀರ್ಗುಳ್ಳೆಯೆನುತಿಪ್ಪ
ತನುಮಲಭಾಂಡ ಇದೇನು ಸುಖ ||

ಪರಿ ಪರಿ ವಿಧದಲಿ ಪಾಪವ ಗಳಿಸುತ್ತ
ನರಕಕೆ ಬೀಳುವುದು ಏನು ಸುಖ
ಪುರಂದರವಿಠಲನ ಮನದಿ ನೆನೆದು
ಸದ್ಧರ್ಮದೊಳು ನಡೆದರೆ ಆಗ ಸುಖ ||

ಮಿತಿಮೀರಿದ ಲೈಂಗಿಕ ಜೀವನದ ವಿವರ ಈ ರಚನೆಯಲ್ಲಿ ಅಡಕಿರಿದಿವೆ. ಹಾಗೆಯೆ ಅದನ್ನು ಮನರಂಜನೆಯ ಭಾಗವಾಗಿಸದೆ ಒಂದು ಅಂತರದಲ್ಲಿಟ್ಟು ನೋಡುವ ಕ್ರಮವನ್ನೂ ಅಳವಡಿಸಿಕೊಳ್ಳಲಾಗಿದೆ. ವೇದಶಾಸ್ತ್ರನಿರೂಪಿತ ಕಾಮ - ಪುರುಷಾರ್ಥ ಸಾಧನೆಯ ಜೀವನವನ್ನು ನಿರಾಕರಿಸಿ ಭಕ್ತಿ ಮಾರ್ಗವನ್ನು ಒಪ್ಪಿ ಅನುಸರಿಸುವಂತೆ ಉಪದೇಶಿಸುವ ದೃಷ್ಟಿಕೋನದಿಂದ ಈ ಬಗೆಯ ಕಾಮೋಪಭೋಗ ಜೀವನವನ್ನು ಕಾಣಲಾಗಿದೆ. ಹಾಗಾಗಿಯೆ ಈ ರಚನೆಯ ಕೊನೆಯಲ್ಲಿ ಸದ್ಧರ್ಮದ ಹಾದಿಯಲ್ಲಿ ನಡೆಯಲು

ಪ್ರಸ್ತಾಪಿಸಿದೆ. ಸದ್ಧರ್ಮವೆಂದರೆ ಯಾವುದು? ಮುಕ್ತಿಯೇ? ವಿರಕ್ತಿಯೇ? ವೈರಾಗ್ಯವೇ? ಭಕ್ತಿಯ ಅಂತಿಮ ಹಂತ ಮುಕ್ತಿ ಸಾಧನೆ ಎಂಬುದು ಸಾಮಾನ್ಯ ಕಲ್ಪನೆ. ಇದು ಪುರುಷಾರ್ಥ ಸಾಧನೆಯ ಕೊನೆಯ ಹಂತವಾದ ಮೋಕ್ಷ ಸಾಧನೆಗೆ ಸರಿಸಮವಾಗಿ ಕಲ್ಪಿಸಿಕೊಂಡ ಕಲ್ಪನೆಯಾಗಿರುವಂತೆ ಕಾಣುವುದಿಲ್ಲ. ಅಥವಾ ಅದರಿಂದ ಪ್ರಭಾವಿತವಾದ ನಿವೃತ್ತ ಜೀವನವನ್ನು ಬೋಧಿಸುವ ಕಲ್ಪನೆ ಆಗಿರು ವಂತೆಯೂ ಕಂಡು ಬರುವುದಿಲ್ಲ.

ಹಿಗ್ಗುವೆ ಯಾಕೊ ಈ ದೇಹಕ್ಕೆ ಹಿಗ್ಗುವೆ ಯಾಕೊ
ಹಿಗ್ಗುವೆ ಕುಗ್ಗುವೆ ತಗ್ಗುವೆ ಮಗ್ಗುವೆ
ಅಗ್ನಿಯೊಳಗೆ ಭಗ್ನವಾಗುವ ದೇಹಕ್ಕೆ

ಸತಿಪುರುಷರು ತಮ್ಮ
ರತಿಕ್ರೀಡೆಯೊಳಗೆ
ಪತನದ ಇಂದ್ರಿಯದ
ಪ್ರತುಮೆಯ ದೇಹಕ್ಕೆ

ಮೂತ್ರದ ಪಾತ್ರದ
ಸೂತ್ರದ ಮುಸುಕಿಂದ
ಗಾತ್ರದ ಹೊಲಸಿನ
ಪಾತ್ರದ ದೇಹಕ್ಕೆ

ತೋರುವ ಒಂಬತ್ತು
ದ್ವಾರದ ಮಲವಾದ
ನೀರಿನ ಹೊಸಲಿನ
ನಿಸ್ಸಾರದ ದೇಹಕ್ಕೆ

ಆಗ ಭೋಗವಲ್ಲ
ಆಗು ಮಾಡುತಲಿ
ರೋಗ ಬಂದರೆ ತಾ
ಹೋಗುವ ದೇಹಕ್ಕೆ

ಹೇಳುತ್ತ ಕೇಳುತ್ತ
ಬಾಳುತ ಬದುಕುತ್ತ
ಹೇಳದೆ ಹೋಗುವ ಈ
ಹಾಳಾದ ದೇಹಕ್ಕೆ

ನರರ ಸೇವೆಯ ಮಾಡಿ
ನರಕ ಭಾಜನನಾಗಿ
ಉರುಳುತುರುಳಿ ಬಿದ್ದು
ನರಳುವ ದೇಹಕ್ಕೆ

ಪುರಂದರ ವಿಠ್ಠಲನ
ಚರಣ ಕಮಲವನ್ನು
ಎರಗದೆ ಇರುವಂಥ
ಗರುವಿನ ದೇಹಕ್ಕೆ

ಈ ರಚನೆ ಕೂಡ ಸ್ತ್ರೀ ಪುರುಷರ ಲೈಂಗಿಕ ಜೀವನ ಕುರಿತೇ ಕೇಂದ್ರೀಕರಿಸಿದೆ. ಈ ಮೊದಲಿನ ರಚನೆಯಲ್ಲಿ ಯಾವುದೆ ಸಾಮಾಜಿಕ ಸಂಸ್ಥೆಗಳ ಚೌಕಟ್ಟಿಗೆ ಒಳಪಡದ ಲೈಂಗಿಕ ಸಂಬಂಧವನ್ನು ಕುರಿತಿತ್ತು. ಇಲ್ಲಿ ಕೌಟುಂಬಿಕ ಮಟ್ಟದ ಕಾಮಜೀವನ ಹೇಳಿರುವಂತಿದೆ. ಮೊದಲನೆಯದರಲ್ಲಿ ಹುಟ್ಟು - ಸಾವುಗಳಿಗೆ ಈ ಬಗೆಯ ಜೀವನವೇ ಕಾರಣವಾಗಿರುವುದನ್ನು ಕಾಣಿಸಿದ್ದರೆ ಇಲ್ಲಿ ರೋಗ ಮೂಲಕ್ಕೆ ಕಾರಣವಾಗುವ ಕಾಮ ಜೀವನವನ್ನು ವಿವರಿಸಿದಂತಿದೆ. ಭಕ್ತಿ ಪರಂಪರೆಯ ಜೀವನ ಕುರಿತ ಕ್ಷಣಭಂಗುರ ಕಲ್ಪನೆಯನ್ನು ಇಲ್ಲಿ ದೇಹಕ್ಕೆ ಅನ್ವಯಿಸಿರುವುದನ್ನು ಕಾಣಬಹುದು. ಆಧುನಿಕ ಕಾಲದಲ್ಲಿ ಪತ್ತೆ ಹಚ್ಚಲಾಗಿರುವ ಏಡ್ಸ್‌ನಂಥ ಮಾರಣಾಂತಿಕ ರೋಗಗಳು ಅಂದಿನ ಕಾಲದಲ್ಲೂ ಇದ್ದಿರಬಹುದಾಗಿದ್ದು, ಅವುಗಳ ರೋಗಪತ್ತೆ ವಿಧಾನ ಸಮರ್ಪಕವಾಗಿ ನಡೆದಿಲ್ಲದೆ ಇರಬಹುದು ಎಂದು ಲೈಂಗಿಕ ರೋಗ ಕುರಿತ ಈ ರಚನೆಯ ವಿವರದಿಂದ ಊಹಿಸಬಹುದು. ಈ ಬಗೆಯ ಭೋಗಜೀವನದಿಂದ ಯಾತನಾಮಯವಾದ ನರಕ ಸದೃಶ್ಯ ಜೀವನ ಮೈತಳೆದರೂ ಅದರಿಂದ ಹೊರಬರಲಾಗದೆ ಅದರಲ್ಲೆ ಮುಳುಗಿದ ದೇಹದ ದೌರ್ಬಲ್ಯವನ್ನು 'ಗರುವಿನ ದೇಹ'ವೆಂದು ಹಳಿಯಲಾಗಿದೆ. ಇದರಲ್ಲಿ ವಿವರಿಸಲಾಗಿರುವ ಅತಿಕಾಮುಕ ಜೀವನ ಜೀವಪರವಾದುದಲ್ಲವೆಂಬ ನಿಲುವನ್ನು ಪ್ರತಿಪಾದಿಸಿದೆ. ಆದರೆ ಲೈಂಗಿಕ ಜೀವನವನ್ನೇ ನಿರಾಕರಿಸಿಲ್ಲ.

ನಗೆಯು ಬರುತಿದೆ ಎನಗೆ ನಗೆಯು ಬರುತಿದೆ
ಜಗದೊಳಿರುವ ಮನಜರೆಲ್ಲ ಹಗರಣದ ಮಾಡುವದ ಕಂಡು

ಪರರ ವನಿತೆ ಒಲುಮೆಗೊಲಿದು
ಹರುಷದಿಂದ ಅವಳ ನೆರೆದು
ಹರಿವ ನೀರಿನೊಳಗೆ ಮುಳುಗಿ
ಬೆರಳ ಎಣಿಸುವುದನು ಕಂಡು

ಪತಿಯು ಸೇವೆ ಮಾಡದೆ ಪರ
ಪತಿಯು ಕೂಡೆ ಸರಸವಾಡಿ
ಸತತ ಮೈಯ ತೊಳೆದು ಹಲವು
ವ್ರತವ ಮಾಡುವವರ ಕಂಡು

ಕಾಮಕೋಪ ಮನದಲಿಟ್ಟು
ತಾಮಸದೊಳ್ ಮಗ್ನನಾಗಿ
ಸ್ವಾಮಿ ಪುರಂದರವಿಠ್ಠಲ,
ನಾಮ ನೆನೆಯದವರ ಕಂಡು

ಸಮಾಜದ ಮೇಲುಜಾತಿ ಜನತೆಯ, ಅಧಿಕಾರದ ಸ್ಥಾನಮಾನಗಳಿಂದ ಮಾನ್ಯರಾದ ಜನತೆಯ ಲೈಂಗಿಕ ಹಗರಣವನ್ನು ಕುರಿತಿದೆ. ಮನುಸ್ಮೃತಿಯಲ್ಲಿ ನಿರೂಪಿತವಾದಂತೆ ಮೇಲುಜಾತಿ ಪುರುಷರು ತಮ್ಮ ಕಾಮ ತೀಟೆಗಾಗಿ ಪರಸ್ತ್ರೀಯರೊಂದಿಗೆ ಲೈಂಗಿಕ ಸಂಪರ್ಕ ಮಾಡಿ ಅದರ ಕಳಂಕ ಅಥವಾ ಮೈಲಿಗೆಯನ್ನು ನೀರಿನಲ್ಲಿ ಮುಳುಗೇಳುವುದರಿಂದ ಕಳೆದುಕೊಳ್ಳುತ್ತಿದ್ದ ಚಿತ್ರವೊಂದು ಇಲ್ಲಿದೆ. ಇಂಥ ಭ್ರಷ್ಟ ಮನಸು ಪುರುಷರಿಗೆ ಮಾತ್ರ ಸೀಮಿತಗೊಂಡಿರದೆ ಸ್ತ್ರೀಯರಲ್ಲೂ ಕಂಡು ಬರುವುದನ್ನು ಎತ್ತಿ ಹೇಳಲಾಗಿದೆ. ಕುಟುಂಬದಲ್ಲಿನ ಕಪಟ ಸ್ವಭಾವ ವಿವಾಹೇತರ ಸಂಬಂಧಗಳನ್ನು ಸಹಜವಾಗಿ ನಿರ್ವಹಿಸುವ ಕ್ರಮ. ಈ ರಚನೆ ಅದನ್ನು ಪರಂಪರಾಗತ ದೃಷ್ಟಿಕೋನದಿಂದಲೆ ಕಂಡಿರುವುದೂ ಕೂಡ ಅದರ ಮಿತಿಯನ್ನು ಸೂಚಿಸುತ್ತದೆ. ಈ ಬಗೆಯ ಭಿನ್ನಲಿಂಗಿಗಳು ಅತಿಮೋಹಕ್ಕೆ ಒಳಗಾಗಿ ತಮ್ಮ ಜೀವನ ಗದ್ದಲವನ್ನಾಗಿಸಿಕೊಂಡಿರುವುದನ್ನು ಪರಿಹಾಸ್ಯ ಮಾಡಲಾಗಿದೆ. ಕಾಮಜೀವನವಿಲ್ಲದೆ ಯಾವ ಜೀವಿಯ ಜೀವನವೂ ಪರಿಪೂರ್ಣವಲ್ಲ. ವ್ಯಕ್ತಿಯ ವ್ಯಕ್ತಿಗತ ಜೀವನದ ಒಂದು ಭಾಗವಾದ ರತಿಜೀವನ ಸಾರ್ವಜನಿಕ ಜೀವನದ ಭಾಗವಾದಾಗ ಹಗರಣವಾಗುತ್ತದೆ; ಪರರ ಕಣ್ಣಲ್ಲಿ ಮನರಂಜನೆಯ ವಸ್ತುವಾಗುತ್ತದೆ. ಪರರ ಮನಸ್ಸಿನಲ್ಲಿ ಕಾಮಭಾವ ಪ್ರಚೋದನೆಗೆ ಕಾರಣವಾಗುತ್ತದೆ. ವ್ಯಭಿಚಾರ ಭಾವ ಅಭಿವ್ಯಕ್ತಗೊಳ್ಳಲು ಪ್ರೇರೇಪಿಸು ತ್ತದೆ. ಆಗ ಸಾಮಾಜಿಕ ಜೀವನದಲ್ಲಿ ಸ್ತ್ರೀ - ಪುರುಷ ಸಂಬಂಧ ಜುಗುಪ್ಸೆ ಹುಟ್ಟಿಸುವ ಸಂಬಂಧವಾಗಿ ಕಾಣತೊಡಗುತ್ತದೆ. ಭಿನ್ನಲಿಂಗಿಗಳ ಅತಿಮೋಹದ ಪರಿಣಾಮದಿಂದ ಹಗರಣಗಳುಂಟಾಗುತ್ತವೆ, ಆದರೂ ಕಾಮಜೀವನವನ್ನು ಅದರ ಇತಿಮಿತಿಗಳಲ್ಲೆ ನಡೆಸಬೇಕೆಂದು ಸೂಚಿಸುವ ಮೂಲಕ ಎಚ್ಚರ ವಹಿಸಲು ಹೇಳುತ್ತಿದೆ. ಇದು ವೇದ ಶಾಸ್ತ್ರ ಆಧಾರಿತ ನಿಯಮಗಳು ಪುರುಷನಿಗೆ ನೀಡಿದ್ದ ಲೈಂಗಿಕ ಸ್ವಾತಂತ್ರ್ಯವನ್ನು ಮೊಟಕು ಮಾಡುವ ಕ್ರಮ. ಪುರುಷ ಸಮಾಜ ನಿರೂಪಿಸಿದ ವಿವಾಹ, ಕುಟುಂಬ ಮೊದಲಾದ ಸಾಮಾಜಿಕ ಸಂಸ್ಥೆಗಳ ಮಿತಿ ಮುರಿತು ಸ್ವೇಚ್ಛೆಯಾಗಿ ಲೈಂಗಿಕ ಜೀವನ ನಡೆಸುವ ಅಪೇಕ್ಷೆಯುಳ್ಳ

ಪುರುಷ ಪ್ರವೃತ್ತಿಯನ್ನು ಪುರಂದರರ ರಚನೆಗಳು ಸೂಚಿಸುವ ಲೈಂಗಿಕ ಜೀವನದ ಇತಿಮಿತಿಯನ್ನೆ 'ವೈರಾಗ್ಯ ಬೋಧನೆ' ಎಂದು ಸ್ವೀಕರಿಸಿದಂತೆ ಹಾಗೂ ಅದನ್ನು ನಿರಾಕರಣೆ ಮಾಡಿದಂತೆ ತೋರುತ್ತದೆ. ಪುರಂದರದಾಸರ ಈ ನಿಲುವು ವೈರಾಗ್ಯ ಬೋಧಿಸುತ್ತಿರುವ ನಿಲುವಾಗಿ ಕಾಣುತ್ತಿಲ್ಲ. ಆದರೆ ಕಾಮ - ಪುರುಷಾರ್ಥ ಸಾಧನೆಯ ಹೆಸರಿನಲ್ಲಿ ಜೀವನವನ್ನು ಕೆಸರಸನ್ನಾಗಿಸಿಕೊಂಡ ಕ್ರಮ ಸಮಂಜಸ ವಲ್ಲವೆಂದು ಸೂಚಿಸುತ್ತಿರುವ ಕ್ರಮವಾಗಿದೆ.

ಅನ್ಯ ಸತಿಯರೊಲುಮೆಗೊಲಿದು ಅಧಮಗತಿಗೆ ಬೀಳಲೇಕೆ
ತನ್ನ ಸತಿಯರೊಲುಮೆಗೊಲಿದು ತಾನು ಸುಖಿಸಬಾರದೆ

ಮಿಂದು ಮಲವನ್ನ ಬಿಡಿಸಿ ಮೇಲು ವಸ್ತ್ರವ ತೊಡಿಸಿ
ಅಂದವಾದ ಆಭರಣವಿಟ್ಟು ಅರ್ತಿಯಿಂದ ನೋಡುವ
ಗಂಧ ಕಸ್ತೂರಿ ಪುನುಗು ಪೂಸಿ ಹೂವ ಮುಡಿಸಿ
ಸಂಕ್ಷಮದಿ ಸಂತೋಷ ಪಡುವ ಸುಖವು ತನಗೆ ಸಾಲದೆ

ಪೊಂಬಣ್ಣ ಎಸೆವ ಮೈಯದುರೊಳು ಒಲಿವ ಕುಚಕ್ಕೆ ಕೈಯನಿಟ್ಟು
ಕಂಬು ಕಂದರವ ನೋಡಿ ಕಸ್ತೂರಿಯನ್ನಿಟ್ಟು ಮುಟ್ಟಿಸುತ
ಹಂಬಲಿಸಿ ಸತಿಯ ನೋಡಿ ಹಲವು ಬಂಧದಿಂದ ಕೂಡಿ
ಸಂಕ್ಷಮದಿ ಸಂತೋಷ ಪಡುವ ಸುಖವು ತನಗೆ ಸಾಲದೆ

ಸತಿಪತಿಯು ಏಕವಾಗಿ ಸರ್ವಜನರ ಹಿತವ ಚಿಂತಿಸಿ
ಅತಿಥಿಯನು ಪೂಜೆ ಮಾಡಿ ಒಂದೆನಿಸಿಕೊಳ್ಳುತ
ಕ್ಷಿತಿಯೊಳಧಿಕ ಗುರು ಪುರಂದರವಿಠಲನ್ನ ಪಾದವನು ಸ್ಮರಿಸಿ
ಸತಿಸುತರು ಹಿತರು ನೀವು ಸುಖದಿಂದ ಆಳಿರೊ

ಲೈಂಗಿಕ ಜೀವನವನ್ನು ಕೌಟುಂಬಿಕಜೀವನದ ಒಂದು ಭಾಗವಾಗಿಸಿಕೊಳ್ಳಲು ಒತ್ತಾಯಿಸುತ್ತಿರುವ ಕ್ರಮವನ್ನಿಲ್ಲಿ ಕಾಣಬಹುದು. ಆದರೂ ಏಕಪತ್ನಿ ಅಥವಾ ಬಹುಪತ್ನಿ ವ್ಯವಸ್ಥೆಯ ಬಗೆಗೆ ಯಾವ ಸೂಚನೆಗಳು ಇಲ್ಲ. ಇದು ಕುಟುಂಬದ ಆಚೆಗೆ ಲೈಂಗಿಕ ಜೀವನ ನಡೆಸುವುದರ ವಿರುದ್ಧ ಮಾತಾಡತೊಡಗಿದ್ದು, ಮನೆಯ ಮಡದಿಯೊಂದಿಗೆ ಲೈಂಗಿಕ ಜೀವನ ನಡೆಸಬಹುದಾದ ಬಗೆಗೆ ವಿವರ ನೀಡಿದೆ. ಅಂದಿನ ಕಾಲದಲ್ಲಿ ಕುಟುಂಬ ಜೀವನ ಮೇಲುತೋರಿಕೆಗೆ ಲೈಂಗಿಕ ಜೀವನ ನಡೆಸಬಹುದಾದ ಬಗೆಗೆ ವಿವರ ನೀಡಿದೆ. ಅಂದಿನ ಕಾಲದಲ್ಲಿ ಕುಟುಂಬ ಜೀವನ ಮೇಲುತೋರಿಕೆಗೆ ಮಾತ್ರ ಅಸ್ತಿತ್ವ ಪಡೆದಿದ್ದ ವ್ಯವಸ್ಥೆ ಯಾಗಿದ್ದು, ಸ್ತ್ರೀ - ಪುರುಷರೆಲ್ಲರೂ ಕುಟುಂಬದಾಚೆಗೆ ಕಾಮಜೀವನ

ಅರಸುತ್ತಿದುದು ಅಂದಿನ ಸಾಮಾನ್ಯ ಪ್ರವೃತ್ತಿಯಾಗಿತ್ತೆಂದು ಕಾಣಿಸುತ್ತದೆ. ಅಂದು ಸಮಾಜದಲ್ಲಿ ವಾಸ್ತವವಾಗಿ ನೆಲೆಸಿರದಿದ್ದ ಏಕಪತ್ನಿ ಕುಟುಂಬದ ಸೊಗಸನ್ನು ಸೌಂದರ್ಯವನ್ನು ಇಲ್ಲಿನ ಲೈಂಗಿಕಜೀವನದ ಚಿತ್ರಗಳು ಆದರ್ಶೀಕರಿಸುತ್ತಿದೆ. ಪುರುಷಪ್ರಧಾನ ಮೌಲ್ಯ ವ್ಯವಸ್ಥೆಯೇ ಈ ಬಗೆಯ ಅತಿರೇಕ ಲೈಂಗಿಕ ಪ್ರವೃತ್ತಿಗೆ ಕಾರಣ ವಾಗಿದೆ. ಮಾನವ ಜೀವನದಲ್ಲಿ ಕಾಮಸಾಧನೆಯ ಅತಿರೇಕದ ಕಲ್ಪನೆಯ ಸ್ಥಾನದಲ್ಲಿ ಸಮಚಿತ್ತತೆಯ ಪ್ರವೃತ್ತಿಯನ್ನು ಉಪದೇಶಿಸಿದೆ. ಅದಕ್ಕಾಗಿ ಸಾರ್ವಜನಿಕ ಜೀವನದ ಭಾಗವಾಗಿದ್ದ ಲೈಂಗಿಕ ಜೀವನ ಕ್ರಮವನ್ನು ಕೌಟುಂಬಿಕ ಜೀವನದ ಭಾಗವನ್ನಾಗಿಸುವ ಪ್ರಯತ್ನ ಮಾಡಿದೆ. ಪುರುಷನನ್ನೇ (ಸ್ತ್ರೀಯರ ಪಾತ್ರ ಒಪ್ಪಿಕೊಳ್ಳುವಂಥ ಮುಕ್ತಮನಸು ವ್ಯಕ್ತವಾಗಿಲ್ಲ. ಬಹುಶಃ ಸ್ತ್ರೀ ಪ್ರಧಾನತೆಗೆ ಕಾರಣವಾಗಬಹುದೆಂಬ ದೃಷ್ಟಿಯಿರ ಬಹುದು). ತಿದ್ದುವ ಪ್ರಯತ್ನ ಮಾಡಿದೆ. ಕಾಮಜೀವನದ ಇತಿಮಿತಿಗಳನ್ನು ಮನವರಿಕೆ ಮಾಡಿಕೊಡುವ ಪ್ರಯತ್ನವಾಗಿ ಸಂಸಾರದಲ್ಲಿ ಇದ್ದು ಇಲ್ಲದಂತೆ ಇರುವ ಕಲ್ಪನೆ ಚಾಲ್ತಿಗೊಳಿಸಿದೆ. ಅತಿಕಾಮುಕ ಜೀವನ ಅಂದು ಸರ್ವವ್ಯಾಪಕವಾಗಿ ಸಮಸ್ತ ಸಮಾಜ ವನ್ನೆ ಆವರಿಸಿಕೊಂಡಿದ್ದು ಅದರ ಗತಿಯನ್ನು ಬದಲಿಸುವುದು ಆರೋಗ್ಯಕರ ಸಮಾಜದ ಅಸ್ತಿತ್ವಕ್ಕೆ ಅಗತ್ಯವೆಂದು ಭಾವಿಸಿದೆ. ಅಂದಿನ ಕಾಲದಲ್ಲಿ ಈ ಪ್ರವೃತ್ತಿ ಯಾವ ಬಗೆಯಲ್ಲಿತ್ತು ಎಂಬುದನ್ನು ಕೆಳಗಿನ ಸಾಲುಗಳು ವಿವರಿಸುತ್ತವೆ :

ಜನರ ನಡತೆ ಕೇಳಿರಯ್ಯ

ಉತ್ತಮ ಸ್ತ್ರೀಯಳ ಬಿಟ್ಟು ತನ್ನ
ವೃತ್ತಿಗಳೆಲ್ಲವ ಸೂಳೆಗೆ ಕೊಟ್ಟು
ಮತ್ತರೊಡನೆ ಕೂಡಿ ಕೆಟ್ಟು ಇಹ
ರುತ್ತಮರೆಂಬರೀ ಜಗದೊಳು ಮಟ್ಟು

ಗಂಡನ್ನ ತಾ ಬಿಡುತಿಹಳು ಪರ
ಮಿಂಡನ್ನ ಕೂಡಿ ಲೋಲಾಡುತಿಹಳು
ಭಂಡೆಯರು ಹೆಚ್ಚಿ ಜಗದೊಳು ಭೂ
ಮಂಡಲದೊಳಗಿಂಥ ನಡತೆಯು ಬಹಳ.

ಕಾಮೋಪಭೋಗ ಜೀವನಕ್ಕೆ ವಿಜಯನಗರದ ಕಾಲದಲ್ಲಿ ನೀಡಿದ್ದ ಮಹತ್ವ ಎಂತಹದು ಎಂಬುದು ಇದರಿಂದ ತಿಳಿಯಬಹುದು. ರಾಜರು, ಭೂಸುರರು, ಅಧಿಕಾರಿ ವರ್ಗ, ಜನಸಾಮಾನ್ಯರು - ಹೀಗೆ ಜನಜೀವನದ ಸಮಸ್ತ ಸಮಾಜವೇ ಇಂದ್ರಿಯ ಸುಖವನ್ನು 'ಪರಮ ಮೌಲ್ಯ'ವಾಗಿ ಸ್ವೀಕರಿಸಿದ್ದ ಚಿತ್ರವನ್ನು ಕಟ್ಟಿಕೊಟ್ಟಿದೆ. ಈ ಬಗೆಯ ಕಾಮ ಲೋಲುಪತೆ ತಂದೊಡ್ಡಬಹುದಾದ ಅಪಾಯಗಳ ಹಿನ್ನೆಲೆಯಲ್ಲಿ ಇದರ ವಿರುದ್ಧ

ದನಿ ಎತ್ತಲಾಗಿದೆ. ಈ ಮೂಲಕ ಎಚ್ಚರದ ಮಾತುಗಳನ್ನಾಡಲಾಗಿದೆ, ವಿವೇಕವನ್ನು ಬೋಧಿಸಿದೆ. ಆದರೆ ಇದು ಲೈಂಗಿಕ ಜೀವನವನ್ನು ನಿರಾಕರಣೆ ಮಾಡಿರುವ ಧೋರಣೆಯಾಗಿ ಕಂಡುಬರುವುದಿಲ್ಲ. ಮೇಲಿಂದ ಮೇಲೆ ಪುರಂದರದಾಸರ ರಚನೆಗಳಲ್ಲಿ ಕಂಡು ಬರುವ ಈ ಬಗೆಯ ಚಿತ್ರಗಳು ಕಾಮಜೀವನದ ಗಡಿರೇಖೆ ಮೀರಿದ ಉದಾಹರಣೆಗಳ ಮುಂದುವರೆದ ರೂಪ. ಕಾಮೋಪಭೋಗ ಜೀವನ ಉಂಟು ಮಾಡಿದ ಸಮಸ್ಯೆಗಳನ್ನು ಪರಿಹರಿಸಲು ಅದಕ್ಕೆ ವಿರುದ್ಧವಾದ ಹಾಗೂ ಮತ್ತೊಂದು ಅತಿರೇಕದ ಕ್ರಮವಾದ ತುಳಸಿಮಾಲೆ ಧರಿಸಲು ಉಪದೇಶ, ಸನ್ಯಾಸಿ ಜೀವನದ ಆದರ್ಶೀಕರಿಸುವ ಕ್ರಮಗಳ ಪ್ರತಿಪಾದನೆ ಕಂಡು ಬರುವುದಿಲ್ಲ. ಹಾಗಾಗಿ ವರ್ಣಾಶ್ರಮದ ಭಾಗವಾದ ಸನ್ಯಾಸ ಆಶ್ರಮ ಜೀವನ ಕುರಿತ ಕಲ್ಪನೆಗೆ ವಿರುದ್ಧದ ನೆಲೆಯಲ್ಲಿ ಪುರಂದರದಾಸರ ರಚನೆಗಳು ದನಿಯೆತ್ತಿದೆ. ಅವರ ರಚನೆಗಳಲ್ಲಿ ತಂದೆ ತಾಯಿ ಹೆಂಡತಿ ಮಕ್ಕಳೊಂದಿಗೆ ಸಂಸಾರ ನಡೆಸಬೇಕೆಂದು ಉಪದೇಶಿಸುವ ನಿಲುವು ಕಾಣುತ್ತದೆ. ಇದು ಭಕ್ತಿ ಪರಂಪರೆಯ ವೈರಾಗ್ಯ/ ಮುಕ್ತಿ/ ಮೋಕ್ಷ ಮೊದಲಾದ ವೈದಿಕ ಕಲ್ಪನೆಗೆ ಎಟುಕದ ಅಂಶವಾಗಿದ್ದು ಸಂಸಾರವನ್ನು ಜೀವನದ ಒಂದು ಭಾಗವಾಗಿ ಕಂಡಿದೆ. ಸಂಸಾರ ತ್ಯಜಿಸ ಬೇಕಾದುದಲ್ಲ ಅನುಭವಿಸಬೇಕಾದುದು, ಜೀವಿಸಬೇಕಾದುದು ಎಂದು ಸಮರ್ಥಿಸಿದೆ.

ಸತಿಸುತರನ್ನು ಬಿಟ್ಟು ಯತಿಗಳಾಶ್ರಮವೇಕೆ?

ಪಿತಮಾತೆ ಸತಿಸುತರಗಲಿರಬೇಡ
ಯತಿಯಾಗಿ ಅರಣ್ಯ ಚರಿಸಲುಬೇಡ
ವ್ರತನೇಮವ ಮಾಡಿ ದಣಿಯಲುಬೇಡ
ಸತಿಯಿಲ್ಲದವಗೆ ಗತಿಯಿಲ್ಲೊ ಮೂಢ!

ತನ್ನ ಸತಿಸುತರು ಬಂಧುಗಳ ನೋಯಿಸಿ
ಚಿನ್ನ ದಾನವ ಮಾಡಿ ಫಲವೇನು?
ತಾಪತ್ರಯದಿ ಸಂಸಾರ ಕೆಡಿಸುವಂಥ
ಪಾಪಿ ಮಗನು ಇದ್ದು ಫಲವೇನು?

ಸಂಸಾರದ ಪರವಾದ ಈ ಮಾತು ಸಂತತನ, ತಾಯಿತನದ ಪೋಷಣೆ ಮಾಡುವ ಗುಣ, ಮಾನವೀಯ ಮಿಡಿತದ ಮಾತುಗಳಾಗಿ ಅಭಿವ್ಯಕ್ತಗೊಂಡಿದೆ. ಪುರುಷನು ತನ್ನ ಪುರುಷಾರ್ಥ ಸಾಧನೆಗಾಗಿ ಸಂಸಾರ ತೊರೆದುಹೋಗುವುದರಿಂದ ಆತನನ್ನು ಅವಲಂಬಿಸಿರುವ ಹಲವು ಜೀವಿಗಳು ಅನುಭವಿಸುವ ಸಂಕಷ್ಟಗಳನ್ನು ತಪ್ಪಿಸುವುದು

ಮುಖ್ಯವಾಗಿರಿಸಿಕೊಂಡಿದೆ. ಹಾಗಾಗಿಯೆ ಪುರುಷ ಜೀವನದ ಸಾರ್ಥಕತೆಗೆ ಹೆಣ್ಣಿನೊಂದಿಗಿನ ಜೀವನ ಪೂರಕವೆಂದು ಸಾರುವ ಪ್ರಯತ್ನವಿದೆ. ಸ್ತ್ರೀಯರ ಮಹತ್ವವನ್ನು ಅಪ್ರಧಾನವಾಗಿಯಾದರೂ ಪುರುಷರು ಮಾನ್ಯಮಾಡಬೇಕೆಂಬ ವಿಚಾರಬೋಧೆ ಮಾಡಿದೆ. ಪುರುಷರ ಸ್ವೇಚ್ಛಾಪ್ರವೃತ್ತಿಯಿಂದಾಗುವ ಅನ್ಯಾಯಗಳನ್ನು ಅಪರಾಧ ವೆಂದು, ದಾರಿ ತಪ್ಪುತ್ತಿರುವ ಕ್ರಮವೆಂದು ಒಪ್ಪಿಸಿದೆ. ಪುರುಷರು ಮಾಡುವುದೆಲ್ಲ ಸರಿಯಾದುದು ಎಂಬ ಪುರುಷಪರ ಧೋರಣೆಯನ್ನು ಬಿಟ್ಟುಕೊಡಬೇಕು ಎಂಬ ಆಗ್ರಹ ಇಲ್ಲಿದೆ. ಹಾಗಾಗಿಯೆ ಪುರುಷಾರ್ಥ ಸಾಧನೆಯನ್ನು ಕೂಡ ಕೈ ಬಿಡುವಂತೆ ಸೂಚನೆ ನೀಡಿದೆ. ಪುರುಷಾರ್ಥ ಸಾಧನೆಗಿಂತ ಸತಿ - ಸುತರು ಸಂಕಷ್ಕಕ್ಕೀಡಾಗುವುದನ್ನು ಪ್ರಮುಖ ಪ್ರಶ್ನೆಯಾಗಿರಿಸಿ ಕೊಂಡಿರುವುದು ಈ ರಚನೆಗಳ ಜೀವನಪ್ರೀತಿಯ ದ್ಯೋತಕವಾಗಿದೆ.

'ಸಂಸಾರವೆಂಬಂಥ ಭಾಗ್ಯವಿರಲಿ' ಎಂಬ ಪಲ್ಲವಿಯೊಂದಿಗೆ ಆರಂಭವಾಗುವ ರಚನೆಯೊಂದು ಸಂಸಾರದ ಪಾವಿತ್ರ್ಯವನ್ನು ನಿರೂಪಿಸುತ್ತದೆ. ಇದು ದೈವಗಳ ಸಂಸಾರವನ್ನು ಕುರಿತ ರಚನೆಯಾದರೂ ಈ ಬಗೆಯ ರಚನೆಗಳಿಗೆ ಸಾಮಾಜಿಕ ದೃಷ್ಟಿಕೋನವನ್ನು ಅನ್ವಯಿಸುವುದು ಸಾಧುವಲ್ಲ. ದೈವಗಳನ್ನು ಸಮಾಜದ ಹಿರಿಯರೆಂದು ಸ್ವೀಕರಿಸಿದ ಮೇಲೆ ಪುರಾಣ ಲೋಕವನ್ನು ಪ್ರತ್ಯೇಕ ಜಗತ್ತೆಂದು ನೋಡುವುದು, ಪ್ರತಿಪಾದಿಸುವುದು ಸರಿಯಾದ ಕ್ರಮವಾಗಿರಲಾರದು. ಹಾಗೆ ಆದರೆ ಸ್ವಮತದ ವಿಚಾರಗಳನ್ನು ಮೂಲಭೂತ ದೃಷ್ಟಿಕೋನದಿಂದಲೆ ನೋಡಬೇಕೆನ್ನುವ ಹಟ ಸಾಧಿಸಲೊಂದು ಪ್ರಾಮಾಣ್ಯವನ್ನು ದಕ್ಕಿಸಿಕೊಂಡಂತಾಗುತ್ತದೆ ಅಷ್ಟೆ. ಆದರೆ ಅದನ್ನು ಸಾಮಾಜಿಕ ತತ್ವಕ್ಕೆ ಅನ್ವಯ ಮಾಡಿಕೊಂಡಾಗ ಮಾತ್ರ ಅದಕ್ಕೊಂದು ಉಪಯುಕ್ತತೆ ಪ್ರಾಪ್ತವಾಗುತ್ತದೆ. ದೈವಗಳ ಸಂಸಾರ ಮಾನವ ಸಮಾಜದ ಹಿರಿಯರ ಸಂಸಾರವೆಂಬ ಗ್ರಹಿಕೆಗೆ ಅರ್ಥ ದಕ್ಕುತ್ತದೆ. ಸಂಸಾರವೆಂಬುದು ದೈವಗಳಿದ್ದಿರಲಿ, ಮಾನವರದಿರಲಿ ಸಂಸಾರವೆಂಬಂಥ ಸೌಭಾಗ್ಯವಿರಲಿ ಎಂಬ ಉದ್ಗಾರ ಸಂಸಾರದ ಮಹತ್ವವನ್ನು ನಿರೂಪಿಸುತ್ತದೆ. ಸಂಸಾರವನ್ನು ಈ ಬಗೆಯಲ್ಲಿ ಸ್ವಾಗತಿಸಿರುವ ಕ್ರಮ ಈ ಮೇಲಿನ ಆಶಯದ ಹಾದಿ ಹಿಡಿದಿರುವುದರ ಸೂಚಕವಾಗಿದೆ. ಇದು ಅದರ ಮೂಲ ಅಂಶವೂ ಆಗಿರುವ ಸಾಧ್ಯತೆಯನ್ನು ಸೂಚಿಸುತ್ತದೆ.

ವಿಜಯನಗರ ಕಾಲದ ಸಮಾಜದಲ್ಲಿ ಕಾಮ - ಪುರುಷಾರ್ಥ ಸಾಧನೆಯ ಪರಿಕಲ್ಪನೆ ಹುಟ್ಟುಹಾಕಿದ ಕುರುಡು ಕಾಮೋತ್ತೇಜಕ ಮನಸ್ಥಿತಿಯ ವಿರುದ್ಧ ಪುರಂದರರ ರಚನೆಗಳು ಭಕ್ತಿಯ ಮಿತಿಯಲ್ಲೇ ದನಿಯೆತ್ತಿವೆ. ಇಂಥ ಪರ್ಯಾಯ ನಿಲುವು ಗಳು, ಧೋರಣೆಗಳು, ಚಿಂತನೆಗಳು ಹಲವು ಮೂಲದಿಂದ ಮೈ ಪಡೆದು ಮಂಡಿತ ವಾಗಿವೆ. ವೇದಶಾಸ್ತ್ರ ಪುರಸ್ಕೃತ ಹಾಗೂ ಅವೈದಿಕ ನಾಸ್ತಿಕ ಷಣ್ಮತಗಳಲ್ಲೊಂದಾದ ಸಾಂಖ್ಯದರ್ಶನದ ಕಲ್ಪನೆ ಈ ಪರ್ಯಾಯರೂಪ ತಳೆದಿದೆ.

೪೪. ತಲಕಾಡು ಪಂಚಲಿಂಗದರ್ಶನ ಮತ್ತು ವಿಜಯನಗರ ಅರಸರು

ಡಾ. ಎನ್. ಚಿನ್ನಸ್ವಾಮಿ ಸೋಸಲೆ

ಗಂಗರಸರ ರಾಜಧಾನಿಯಾಗಿದ್ದ ತಲಕಾಡು ಕ್ಷೇತ್ರವು ಪುರಾಣ, ಇತಿಹಾಸ ಮತ್ತು ನೈಸರ್ಗಿಕ ಸೌಂದರ್ಯಗಳ ಅಪೂರ್ವ ಸಂಗಮ. ಅನೇಕ ರಾಜವಂಶದವರು ಆಳಿ ಬಹು ವಿಧದ ಶಿಲ್ಪ ಕಲಾಸೌಂದರ್ಯದ ದೇವಾಲಯಗಳ ಕೇಂದ್ರವಾಗಿ ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸದ ಪರಂಪರೆಯನ್ನು ಜಗತ್ತಿಗೆ ಸಾರುತ್ತಿವೆ.

ನಾಲ್ಕು ದಿಕ್ಕಿನಲ್ಲಿಯೂ ಹರಿಯುವ ಕಾವೇರಿ ನದಿ, ಅಲ್ಲಲ್ಲಿ ಉದ್ಭವಿಸಿರುವ ಮರಳು ದಿಣ್ಣೆಗಳು, ಸೊಂಪಾಗಿ ಬೆಳೆದು ಕಂಗೊಳಿಸುವ ತೋಪುಗಳು ಮತ್ತು ಪೈರು ಪಚ್ಚೆಯಿಂದ ಆವೃತವಾದ ವಿಶಾಲ ಹಸಿರು ಪ್ರದೇಶಗಳ ನಿಸರ್ಗ ರಮಣೀಯತೆಯ ನಯನ ಮನೋಹರ ದೃಶ್ಯಗಳಿಂದ ಕೂಡಿರುತ್ತದೆ. ಇಂತಹ ವಿಶೇಷ ಆಕರ್ಷಣೆಯುಳ್ಳ ಸ್ಥಳಕ್ಕೆ ವಿಜಯನಗರದ ಅರಸರು ಅಪಾರಕೊಡುಗೆ ನೀಡಿರುವುದು ಸಾಹಿತ್ಯ ಹಾಗೂ ಶಾಸನಾಧಾರಗಳಿಂದ ತಿಳಿದುಬರುತ್ತದೆ. ಕರ್ನಾಟಕದ ಇತಿಹಾಸ ದಲ್ಲಿ ತಲಕಾಡಿನ ಚರಿತ್ರೆಯು ಮಹತ್ವಪೂರ್ಣವಾದ ಗಣನೀಯ ಭಾಗವಾಗಿದೆ ಎಂಬುದನ್ನು ವಿದ್ವಾಂಸರು ಹಾಗೂ ಇತಿಹಾಸಜ್ಞರು ಒಪ್ಪಿಕೊಂಡಿದ್ದಾರೆ. ಇಂದು ಕರ್ನಾಟಕದ ಮೂಲೆಯೊಂದರಲ್ಲಿ ಸಣ್ಣ ಊರಾಗಿ ಉಳಿದಿರುವ ಈ ಸ್ಥಳ ಹಿಂದೆ ಇಲ್ಲಿ ರಾಜ್ಯವಾಳಿದ ಗಂಗರಸರಿಗೆ ಸುಮಾರು ಏಳು ಶತಮಾನಗಳ ಕಾಲ ಹೆಮ್ಮೆಯ ರಾಜಧಾನಿ ಯಾಗಿ ಮೆರೆಯಿತಲ್ಲದೆ, ಆನಂತರದ ಶತಮಾನಗಳಲ್ಲೂ ಅನೇಕ ರಾಜರ ಹಾಗೂ ರಾಜವಂಶಗಳ, ಸಂಗ್ರಾಮಗಳ, ವಿಜಯಗಳ ರಂಗಸ್ಥಳವಾಗಿದ್ದು, ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಚೋಳರು, ಹೊಯ್ಸಳರು, ವಿಜಯನಗರದರಸರುಗಳ ಮತ್ತು ಮೈಸೂರು ಒಡೆಯರ ಏಳುಬೀಳುಗಳೊಡನೆ ನಿಕಟವಾದ ಸಂಬಂಧ ಸಂಪರ್ಕಗಳನ್ನು ಹೊಂದಿದ್ದಿತೆಂಬ ಅಂಶ ಗಮನೀಯವಾದದ್ದು.

ಇಂದಿನ ತಲಕಾಡು ಪ್ರಧಾನವಾಗಿ ವ್ಯವಸಾಯವನ್ನವಲಂಬಿಸಿದ, ಸುಮಾರು ಹತ್ತು ಸಾವಿರ ಜನಸಂಖ್ಯೆಯನ್ನುಳ್ಳ ಊರು. ಕಾವೇರಿ ನದಿಯ ಎಡದಂಡೆಯಲ್ಲಿ ನದಿಯಿಂದ ಮೂರುಕಡೆ ಸುತ್ತುವರಿಯಲ್ಪಟ್ಟು ೧೨° ೧೧° ಉತ್ತರ ಅಕ್ಷಾಂಶದಲ್ಲಿ ಹಾಗೂ ೭೭° ೨° ಪೂರ್ವ ರೇಖಾಂಶದಲ್ಲಿ ನೆಲೆಗೊಂಡಿದೆ. ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರ ತಾಲ್ಲೂಕಿನಲ್ಲಿರುವ ಈ ಊರು ಅದೇ ಹೆಸರಿನ ಹೋಬಳಿ ಕೇಂದ್ರವಾಗಿದ್ದು,

ಟಿ. ನರಸೀಪುರದಿಂದ ನೇರ ಪೂರ್ವಕ್ಕೆ ಸುಮಾರು ೧೨ ಕಿ.ಮೀ. (ರಸ್ತೆ ಮಾರ್ಗ ೩೦ಕಿ.ಮೀ) ದೂರದಲ್ಲೂ, ಮೈಸೂರಿನಿಂದ ಪೂರ್ವಕ್ಕೆ ರಸ್ತೆಮಾರ್ಗ ೬೦ ಕಿ.ಮೀ. ದೂರದಲ್ಲಿಯೂ ಇದೆ.

ತಲಕಾಡಿನ ಗತವೈಭವದ ಕುರುಹಾಗಿ ಈ ಊರಿನಲ್ಲೂ ಮತ್ತು ಅಕ್ಕಪಕ್ಕದ ಗ್ರಾಮಗಳಲ್ಲಿ ಅನೇಕ ದೇವಾಲಯ ಹಾಗೂ ಸ್ಮಾರಕಗಳನ್ನು ಕಾಣಬಹುದು. ಅವುಗಳಲ್ಲಿ ಕೆಲವು ಮಾತ್ರ ವೀಕ್ಷಣೆಗೆ ಲಭ್ಯವಾಗಿದ್ದು, ಇನ್ನೂ ಕೆಲವು ಮರಳಿನಲ್ಲಿ ಭಾಗಶಃ ಮುಚ್ಚಲ್ಪಟ್ಟಿವೆ. ತಲಕಾಡಿನಿಂದ ಪೂರ್ವಕ್ಕೆ ೫ ಕಿ.ಮೀ. ದೂರದ ವಿಜಯಾಪುರದಲ್ಲಿರುವ, ಗಂಗರ ಕಾಲದ್ದೆಂದು ತಿಳಿದುಬರುವ, ಅರ್ಕೇಶ್ವರ ದೇವಾಲಯದ ಬಳಿ ಇರುವ ಹಳೆಯ ಕೋಟೆಯ ಅವಶೇಷಗಳೂ ಸಹ ಪುರಾತತ್ವ ಶೋಧನೆಗೆ ಫಲದಾಯಕ ತಾಣವಾಗಬಹುದಾಗಿದೆ. ತಲಕಾಡಿನಿಂದ ದಕ್ಷಿಣಕ್ಕೆ ಕಾವೇರಿನದಿಯ ಬಲದಂಡೆಯಲ್ಲಿರುವ ಮಾಲಂಗಿ ಎಂಬ ಸಣ್ಣಗ್ರಾಮದಲ್ಲಿ (ಹಿಂದೆ ಜನನಾಥಪುರ, ಮಹಾಲಿಂಗಪುರ ಎಂದು ಕರೆಯಲಾಗುತ್ತಿದ್ದೆಂದು ತಿಳಿದು ಬರುತ್ತದೆ) ಅನೇಕ ವಿದ್ವಾಂಸರುಗಳಿಂದ ಕೂಡಿದ ವಿದ್ಯಾಕೇಂದ್ರವಿತ್ತೆಂದು ಐತಿಹ್ಯಗಳು ತಿಳಿಸುತ್ತವೆ. ಈ ಗ್ರಾಮದಲ್ಲಿರುವ ಚೋಳರ ಕಾಲದ ದೇವಾಲಯಗಳಲ್ಲೂ ಇತರ ಕಡೆಯಲ್ಲೂ ದೊರೆತ ಶಿಲಾಶಾಸನಗಳೂ ತಾಮ್ರಶಾಸನಗಳು ತಜ್ಞರಿಂದ ಪರಿಶೀಲಿಸಲ್ಪಟ್ಟು ಐತಿಹಾಸಿಕ ದಾಖಲೆಗಳಾಗಿವೆ. ತಲಕಾಡಿನ ಪಶ್ಚಿಮಕ್ಕೆ ಕಾವೇರಿ ನದಿಯ ಬಲದಂಡೆಯಲ್ಲಿರುವ ಹೆಮ್ಮಿಗೆಯಲ್ಲಿ ಹಲವು ದಶಕಗಳ ಹಿಂದೆಯೇ ನಡೆಸಲ್ಪಟ್ಟ ಉತ್ಖನನದಲ್ಲಿ ದೊರೆತ ಅವಶೇಷಗಳು ನವಶಿಲಾಯುಗದಷ್ಟು ಹಿಂದಿನವು. ತಲಕಾಡಿನಲ್ಲೂ ಇದೀಗ ನಡೆಯುತ್ತಿರುವ ಉತ್ಖನನ ಕಾರ್ಯದಲ್ಲಿ ಈಗಾಗಲೇ ಹೊರಬಂದಿರುವ ಅವಶೇಷಗಳು ನವಶಿಲಾಯುಗ, ಬೃಹತ್ ಶಿಲಾಯುಗಗಳ ಸಂಸ್ಕೃತಿ ಸೂಚಕ ಮಾತ್ರವಲ್ಲದೆ, ನಂತರದ ಗಂಗ, ಚೋಳ, ಹೊಯ್ಸಳ ಮತ್ತು ವಿಜಯನಗರ ಕಾಲದವೂ ಆಗಿದ್ದು, ಈ ಸಂಶೋಧನಾ ಕಾರ್ಯ ಪೂರ್ಣಗೊಳ್ಳುವ ವೇಳೆಗೆ ತಲಕಾಡಿನ ರಾಜಕೀಯ ಸಾಮಾಜಿಕ ಹಾಗೂ ಸಾಂಸ್ಕೃತಿಕ ಇತಿಹಾಸದ ಬಗ್ಗೆ ಹೆಚ್ಚಿನ ಮಾಹಿತಿಗಳು ದೊರಕುವ ನಿರೀಕ್ಷೆಯಿದೆ.

— ೨ —

ಧಾರ್ಮಿಕ ದೃಷ್ಟಿಯಿಂದ ನೋಡುವುದಾದರೆ ಈ ಊರು ದಕ್ಷಿಣ ಕಾಶಿ, ಗಜಾರಣ್ಯ ಕ್ಷೇತ್ರ, ತಾಳಕಟ, ತಲವನಪುರ, ರಾಜರಾಜಪುರ ಮುಂತಾದ ಹೆಸರುಗಳಿಂದ ಕರೆಯಲ್ಪಟ್ಟಿದ್ದು ಕರ್ನಾಟಕದ ಪ್ರಮುಖ ಶೈವ ವೈಷ್ಣವ ಯಾತ್ರಾಸ್ಥಳಗಳ ಲ್ಲೊಂದಾಗಿದೆ. ಪುರಾಣ ಪ್ರಸಿದ್ಧವಾದ ತಲಕಾಡಿನ 'ಪಂಚಲಿಂಗ'ಗಳ ದರ್ಶನ ಮಹತ್ವಪೂರ್ಣತೆಯನ್ನು ಪಡೆದಿದೆ.

ತಲಕಾಡಿನಲ್ಲಿರುವ ಪ್ರಮುಖ ಪಂಚಲಿಂಗಗಳೆಂದರೆ

1. ವೈದ್ಯನಾಥೇಶ್ವರ ದೇವಾಲಯ

ಪಂಚಲಿಂಗಗಳಲ್ಲಿ ಮೊದಲವನಾದ ವೈದ್ಯೇಶ್ವರ ಚೋಳರ ಕಾಲದ್ದಾದರೂ ದೇವಾಲಯದ ಕಟ್ಟಡ ಮತ್ತು ಗೋಪುರವನ್ನು ತಲಕಾಡಿನವರೇ ಆದ ವಿಜನಯಗರ ಅರಸರ ಮಂತ್ರಿಯಾಗಿದ್ದ ಮಾಧವ ಮಂತ್ರಿ ಕಟ್ಟಿಸಿದ್ದು. ಶಿಲ್ಪಕಲೆಯಲ್ಲಿ ಸುಂದರ ವಾಗಿರುವ ಈ ದೇವಾಲಯದ ಸುತ್ತಣ ಗೋಡೆಗಳ ಮೇಲೆ ಆಗಿನ ಕಾಲದ ಕಲಾ ಕೌಶಲ್ಯ ಶಿಲ್ಪಗಳನ್ನು ಸುಂದರವಾಗಿ ಬಿಡಿಸಲಾಗಿದೆ. ದೇವಾಲಯದ ಸುತ್ತಲೂ ಮರಳ ರಾಶಿ ಬೆಟ್ಟದೋಪಾದಿಯಲ್ಲಿ ಬಿದ್ದಿರುವುದರಿಂದ ದೇವಸ್ಥಾನ ನೋಡುವುದಕ್ಕೆ ಸುಂದರವಾಗಿ ಕಾಣುತ್ತದೆ. ವೈದ್ಯೇಶ್ವರ ದೇವಾಲಯದ ಎಡ-ಬಲಗಳಲ್ಲಿ ನಿಂತಿರುವ ವಿಗ್ರಹಗಳು ೧೦ ಅಡಿ ಎತ್ತರವಾದ ಸುಂದರ ಕೆತ್ತನೆಯಿಂದ ಕೂಡಿದ ದ್ವಾರಪಾಲಕರ ವಿಗ್ರಹಗಳು ಎಲ್ಲೂ ಸಿಗದ ವಿಸ್ಮಯಕರವಾದವುಗಳಾಗಿವೆ.

ಪಂಚಲಿಂಗಗಳು ಪರಮೇಶ್ವರನ ಪಂಚಮುಖಗಳೆಂದು ಪ್ರತೀತಿ.

2. ಶ್ರೀ ಪಾತಾಳೇಶ್ವರ ದೇವಾಲಯ

ಈ ದೇವಾಲಯ ಗಂಗರ ನಾಲ್ಕನೇ ರಾಚಮಲ್ಲನ ಕಾಲದಲ್ಲಿ ನಿರ್ಮಾಣವಾಗಿ ಚೋಳರ ಕಾಲದಲ್ಲಿ ಜೀರ್ಣೋದ್ಧಾರ ಮಾಡಲಾಗಿದೆ.

3. ಶ್ರೀ ಮರಳೇಶ್ವರ ದೇವಾಲಯ

ಈ ದೇವಾಲಯ ಗಂಗರ ಕಾಲದ್ದು. ಇದೂ, ಸಹ ಚೋಳರ ಕಾಲದಲ್ಲಿ ಜೀರ್ಣೋದ್ಧಾರವಾಗಿರುವ ಕಟ್ಟಡವಾಗಿದೆ.


4. ಶ್ರೀ ಮಲ್ಲಿಕಾರ್ಜುನೇಶ್ವರ ದೇವಾಲಯ (ಮುಡುಕುತೊರೆ)

ಇದು ಮೂಲದಲ್ಲಿ ಗಂಗರ ಕಾಲದ ದೇವಾಲಯ. ಆದರೆ ವಿಜಯನಗರ ವಾಸ್ತು ಶಿಲ್ಪದಲ್ಲಿ ನಂತರ ಜೀರ್ಣೋದ್ಧಾರಗೊಳಿಸಲಾಗಿದೆ. ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರು ದೇವಾಲಯದ ಗೋಪುರ ಹಾಗೂ ಇಕ್ಕೆಲಗಳ ಬಸವಗಳ ನಿರ್ಮಾಣವನ್ನು ಸುಂದರವಾಗಿ ನಿರ್ಮಿಸಿದ್ದರೆಂದು ಆಧಾರಗಳು ತಿಳಿಸುತ್ತವೆ.


5. ಶ್ರೀ ಅರ್ಕೇಶ್ವರ ದೇವಾಲಯ


ತಲಕಾಡಿನಿಂದ 5 ಕಿ.ಮೀ. ದೂರದಲ್ಲಿರುವ ಜಯಪುರದಲ್ಲಿರುವ ಈ ದೇವಾಲಯವು ಸಹ ಗಂಗರ ಕಾಲದ್ದಾಗಿದೆ. ಇದು ಸಹ ಅತ್ಯಂತ ಪ್ರಾಚೀನವಾದ ದೇವಾಲಯವಾಗಿದೆ.

ತಲಕಾಡಿನಲ್ಲಿ ಅನೇಕ ವರ್ಷಗಳಿಗೊಮ್ಮೆ ಸಂಭವಿಸುವ ಪಂಚಲಿಂಗ ದರ್ಶನವು ನಮ್ಮ ನಾಡಿನ ಒಂದು ಅಪೂರ್ವ ಪರ್ವಕಾಲವಾಗಿದೆ. ಹೀಗೆ ಲಭ್ಯವಾಗುವ ಈ ವಿಶೇಷ
















ದಿವಸಗಳಲ್ಲಿ ಮೇಲ್ಕಂಡ ಪಂಚಲಿಂಗಗಳನ್ನು ಒಂದೇ ದಿವಸದಲ್ಲಿ ದರ್ಶನ ಮಾಡಿ ಪೂಜಿಸಲು ಲಭ್ಯವಾಗುವ ಅಪೂರ್ವ ಅವಕಾಶಕ್ಕೆ ಪಂಚಲಿಂಗ ದರ್ಶನವೆಂದು ಹೆಸರು.

ಸಾಮಾನ್ಯವಾಗಿ ಯಾವ ಸಂವತ್ಸರದಲ್ಲಿ ಕಾರ್ತಿಕಮಾಸ, ವೃಶ್ಚಿಕಮಾಸ, ಅಮಾವಾಸ್ಯೆ, ಸೋಮವಾರ, ಪ್ರಾತಃಕಾಲ ಕುಹೂ ಮತ್ತು ವಿಶಾಲ ನಕ್ಷತ್ರ ಯೋಗಗಳು ಕೂಡುವುದೋ, ಆ ವಿಶೇಷ ದಿವಸದಲ್ಲಿ ಮುಕ್ತಿಪ್ರದವಾದ ತಲಕಾಡು ಕ್ಷೇತ್ರದಲ್ಲಿ ಪಂಚಲಿಂಗ ದರ್ಶನವು ಸಂಭವಿಸುವುದು.

ಇದುವರೆಗೂ ದಾಖಲಾಗಿರುವ ಪಂಚಲಿಂಗ ದರ್ಶನದ ಕಾಲದ ವಿವರ :

೧೯೦೮ ನೆಯ ಕೀಲಕ ಸಂವತ್ಸರದಲ್ಲಿ

೧೯೧೫ನೆಯ ರಾಕ್ಷಸ ಸಂವತ್ಸರದಲ್ಲಿ

೧೯೨೫ನೆಯ ಕ್ರೋಧನ ಸಂವತ್ಸರದಲ್ಲಿ

೧೯೩೮ನೆಯ ಬಹುಧಾನ್ಯ ಸಂವತ್ಸರದಲ್ಲಿ

೧೯೫೨ನೆಯ ನಂದನ ಸಂವತ್ಸರದಲ್ಲಿ

೧೯೬೦ನೆಯ ಶಾರ್ವರಿ ಸಂವತ್ಸರದಲ್ಲಿ

೧೯೬೬ನೆಯ ಪರಾಭವ ಸಂವತ್ಸರದಲ್ಲಿ

೧೯೧೧ ಹಾಗೂ ೧೯೭೯ ನೆಯ ಸಿದ್ಧಾರ್ಥಿನಾಮ ಸಂವತ್ಸರದಲ್ಲಿ

೧.೧೨.೧೯೪೬ ಅಕ್ಷಯ ಸಂವತ್ಸರದಲ್ಲಿ

೧೩.೧೨.೧೯೯೩ ನೆಯ ಶ್ರೀಮುಖ ಸಂವತ್ಸರದಲ್ಲಿ

ಈಗ ಸರಿಯಾಗಿ ೧೩ ವರ್ಷಗಳ ನಂತರ ಇದೇ ಶ್ರೀ ವ್ಯಯ ಸಂವತ್ಸರದಲ್ಲಿ ಕಡೇ ಕಾರ್ತಿಕ ಮಾಸ ಅಮಾವಾಸ್ಯೆ ಸೋಮವಾರ ದಿನಾಂಕ ೨೦.೧೧.೨೦೦೬ರಂದು ಪಂಚಲಿಂಗ ದರ್ಶನ ನಡೆಯಲಿದೆ.

ಶ್ರೀ ವೈದ್ಯೇಶ್ವರ, ಅರ್ಕೇಶ್ವರ, ಪಾತಾಳೇಶ್ವರ (ವಾಸುಕೀಶ್ವರ), ಮರಳೇಶ್ವರ ಮತ್ತು ಮಲ್ಲಿಕಾರ್ಜುನೇಶ್ವರ ಎಂಬ ಪಂಚಮೂರ್ತಿಗಳು ಅನುಕ್ರಮವಾಗಿ ಪರಮೇಶ್ವರನ ಪ್ರಸಿದ್ಧವೆನಿಸಿಕೊಂಡಿರುವ ಈಶಾನ, ತತ್ಪುರುಷ, ಅಘೋರ, ಸದ್ಯೋಜಾತ, ವಾಮದೇವಗಳೆಂಬ ಪಂಚಮುಖಗಳ ರೂಪಗಳಾಗಿದೆ ಎಂದು ಜನಪದರ ನಂಬಿಕೆ. ಈ ಪಂಚಲಿಂಗಗಳನ್ನು ಒಂದೇ ದಿನದಲ್ಲಿ ದರ್ಶಿಸಿದವರು ಶಿವಸಾಯುಜ್ಯವನ್ನು ಹೊಂದುತ್ತಾರೆಂಬ ಪ್ರತೀತಿ ಇದೆ.

— ೩ —

ತಲಕಾಡಿನ ಪಂಚಲಿಂಗದರ್ಶನದ ಚರಿತ್ರೆಯನ್ನು ಆರೇಳು ಮುಖ್ಯ ಘಟ್ಟಗಳಲ್ಲಿ ವಿಂಗಡಿಸುವುದು.

1. ಗಂಗಪೂರ್ವ ಕಾಲ	ಕ್ರಿ.ಶ. ೩೨೫ ಕ್ಕೆ ಮುಂಚೆ
2. ತಲಕಾಡು ಗಂಗ ಕಾಲ	ಕ್ರಿ.ಶ.೩೨೫(?)ರಿಂದ ಕ್ರಿ.ಶ. ೧೦೦೪ವರೆಗೆ
3. ಚೋಳರ ಕಾಲ	ಕ್ರಿ.ಶ. ೧೦೦೪ರಿಂದ ಕ್ರಿ.ಶ. ೧೧೧೬ರವರೆಗೆ
4. ಹೊಯ್ಸಳರ ಕಾಲ	ಕ್ರಿ.ಶ. ೧೧೧೬ರಿಂದ ೧೩೪೬ರವರೆಗೆ
5. ವಿಜಯನಗರ ಅರಸರ ಕಾಲ	ಕ್ರಿ.ಶ. ೧೩೪೬ ರಿಂದ ಕ್ರಿ.ಶ. ೧೬೧೦ರವರೆಗೆ
6. ಮೈಸೂರು ಒಡೆಯರ ಕಾಲ	ಕ್ರಿ.ಶ. ೧೬೧೯ ರಿಂದ ೧೯೫೦ರವರೆಗೆ
7. ವರ್ತಮಾನ ಕಾಲ	ಕ್ರಿ.ಶ. ೧೯೫೦ರಿಂದೀಚೆಗೆ

ಹರಿಹರ ಮತ್ತು ಬುಕ್ಕರಾಯ (೧೩೪೪-೭೭) ರಿಂದ ಸ್ಥಾಪಿಸಲ್ಪಟ್ಟ ವಿಜಯನಗರ ರಾಜ್ಯವು ದೊಡ್ಡ ಹಿಂದೂ ಸಾಮ್ರಾಜ್ಯವಾಗಿ ಬೆಳೆದು, ಕೃಷ್ಣದೇವರಾಯನ ಕಾಲದಲ್ಲಿ (೧೫೦೯-೧೫೩೦)ತನ್ನ ಸರ್ವೋತ್ತಮ ಸಾರ್ವಭೌಮವನ್ನು ಕಂಡಿತು. ೧೪ನೇ ಶತಮಾನದ ಸುಮಾರು ಮಧ್ಯಭಾಗದಲ್ಲಿ, ಅಂದರೆ ಹೊಯ್ಸಳರ ಪತನವಾದಾಗ, ತಲಕಾಡು ವಿಜಯನಗರದ ಅಧೀನಕ್ಕೆ ಬಂದಿತು.

ತಲಕಾಡಿನವರೇ ಆದ ಮಾಧವರಾಯ ಅಥವಾ ಮಾಧವ ಮಂತ್ರಿಯು ತಲಕಾಡಿನಲ್ಲಿ ವಿಜಯನಗರದ ಅಧಿಕಾರಿಯಾಗಿದ್ದ ಮೊದಲಿಗರಲ್ಲಿ ಒಬ್ಬರು. ಕ್ರಿ.ಶ. ೧೩೪೬ರಲ್ಲಿ

ತಲಕಾಡಿನಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಕಟ್ಟಲ್ಪಟ್ಟ ಮಾಧವ ಮಂತ್ರಿ ಅಣೆಕಟ್ಟೆಗೆ ಇವರೇ ಕಾರಣಕರ್ತರು. ತಲಕಾಡಿನ ವೈದ್ಯೇಶ್ವರ ದೇವಾಲಯದ ಇಂದಿನ ಬೃಹತ್ ಕಟ್ಟಡವೂ ಸಹ ಇವರ ಕೊಡುಗೆ ಎಂದು ಹೇಳಲಾಗುತ್ತದೆ. ಕ್ರಿ.ಶ. ೧೩೪೬ರಲ್ಲಿ ಪ್ರಥಮ ಪಂಚಲಿಂಗದರ್ಶನ ನಡೆದಿರುವುದಕ್ಕೆ ಆಧಾರಗಳು ದೊರಕುತ್ತವೆ. ಕ್ರಿ.ಶ. ೧೩೬೪ರಲ್ಲಿ ರಾಮದೇವನೆಂಬುವನು ತಲಕಾಡಿನಲ್ಲಿ ವಿಜಯನಗರದ ಅಧಿಕಾರಿಯಾಗಿದ್ದುದಾಗಿ ತಿಳಿದುಬರುತ್ತದೆ.

ಹೀಗೆ ಕ್ರಿ.ಶ. ೧೬೧೦ರವರೆಗೂ ತಲಕಾಡು ವಿಜಯನಗರದ ರಾಜಪ್ರತಿನಿಧಿಗಳ ಮೂಲಕ ಮುಂದುವರೆಯಿತು. ಒಂದನೆಯ ತಿರುಮಲರಾಯನ ಕಾಲದಲ್ಲಿ (೧೫೬೫-೧೫೭೨) ಆತನ ಮಗ ರಾಮರಾಯನು ವಿಜಯನಗರ ರಾಜ್ಯದ ಕನ್ನಡ ಪ್ರದೇಶಗಳಿಗೆಲ್ಲವೂ ಮಾಂಡಲಿಕವಾಗಿ ನೇಮಿಸಲ್ಪಟ್ಟು, ಶ್ರೀರಂಗಪಟ್ಟಣವನ್ನು ತನ್ನ ಆಡಳಿತ ಕೇಂದ್ರವಾಗಿಸಿಕೊಂಡಿದ್ದನು. ತಿರುಮಲರಾಯನ ಬಳಿಕ ಆತನ ಸಹೋದರ ಶ್ರೀರಂಗರಾಯ (೧೫೭೨-೧೫೮೫) ವಿಜಯನಗರದ ಅರವೀಡು ಸಂತತಿಯಲ್ಲಿ ಕೊನೆಯ ಪ್ರಮುಖವಾದ ೨ನೇ ವೆಂಕಟಪತಿಯ ಅಥವಾ ವೆಂಕಟಾದ್ರಿ (೧೫೮೫-೧೬೧೪) ವಿಜಯನಗರದ ಅರಸರಾಗಿದ್ದಾಗ ಪಂಚಲಿಂಗದರ್ಶನ ನಡೆದಿರುವುದಕ್ಕೆ ಆಧಾರಗಳು ಲಭ್ಯವಾಗಿವೆ.

ನಂತರ ೧೫೬೫ರಲ್ಲಿ ಸಂಭವಿಸಿದ ರಕ್ಕಸತಂಗಡಿ ಯುದ್ಧದಲ್ಲಿ ಸಂಪೂರ್ಣವಾಗಿ ಸೋತ ವಿಜಯನಗರ ನಾಶದ ಹಾದಿಯಿಡಿಯಿತು. ತದನಂತರ ಎಲ್ಲಾ ಸಾಂಸ್ಕೃತಿಕ ಕಾರ್ಯವನ್ನು ಮೈಸೂರಿನ ಒಡೆಯರು ಮುಂದುವರೆಸಿಕೊಂಡು ಬರಲಾರಂಭಿಸಿದರು. ಇಂದಿಗೂ ಕರ್ನಾಟಕ ಸರ್ಕಾರ ಈ ಉತ್ಸವವನ್ನು ಕರ್ನಾಟಕದ ಧಾರ್ಮಿಕ ಸಾಂಸ್ಕೃತಿಕ ಉತ್ಸವವನ್ನಾಗಿ ಬಿಂಬಿಸಿ ಈ ವರ್ಷ ನವೆಂಬರ್ 20ರಂದು ಪಂಚಲಿಂಗ ದರ್ಶನ ನಡೆಸಿತು.

— ೪ —

ಅಂದಿನಿಂದ ಇಂದಿನವರೆಗೂ ತಲಕಾಡು ಪ್ರಧಾನವಾಗಿ ವ್ಯವಸಾಯವನ್ನವಲಂಬಿಸಿದ ಗ್ರಾಮ. ಇಂದು ಇದು ಟಿ. ನರಸೀಪುರ ತಾಲ್ಲೂಕಿನಲ್ಲಿರುವ ಒಂದು ಹೋಬಳಿ ಕೇಂದ್ರ. ಕ್ರಿ.ಶ. ೧೩೪೬ರಲ್ಲಿ ತಲಕಾಡಿನ ಪ್ರಥಮ ಪಂಚಲಿಂಗ ದರ್ಶನ ನಡೆಯಲು ಪ್ರಮುಖಕಾರಣವೆಂದರೆ, ಮಾಧವ ಮಂತ್ರಿಯವರು ಕಟ್ಟಿಸಿದ ಅಣೆಕಟ್ಟು. ತಲಕಾಡಿನಲ್ಲಿ ಕಾವೇರಿ ನದಿಯ ಉತ್ತರಾಭಿಮುಖವಾಗಿ ಹರಿಯುವಾಗ ಎಡಭಾಗದಲ್ಲಿ ದೊಡ್ಡ ಕಂದಕವನ್ನುಂಟು ಮಾಡಿದೆ. ಈ ವಿಶಾಲವಾದ ಮರಳುರಾಶಿಯ ನಡುವೆ ವಿಸ್ತಾರವಾದ ಪ್ರದೇಶದಲ್ಲಿ ಅಂದು ಕೃಷಿಗಾಗಿ ತಲಕಾಡಿನವರೇ ಆದಂತಹ, ವಿಜಯನಗರದರಸ ಇಮ್ಮಡಿ ದೇವರಾಯನ ಆಸ್ಥಾನದ ಮಂತ್ರಿ ಮಾಧವ ಮಂತ್ರಿಗಳು ಅಣೆಕಟ್ಟನ್ನು

ಕಟ್ಟಿಸಿದ್ದರು. ಆ ಆಧುನಿಕ ಕಾಲದಲ್ಲಿ ಈ ಅಣೆಕಟ್ಟೆಯು ತಳದಲ್ಲಿ ವಿದ್ಯುತ್ ಉತ್ಪಾದಿಸಿ ಕರ್ನಾಟಕದ ಜನತೆಗೆ ಬೆಳಕು ಚೆಲ್ಲುತ್ತಿದೆ. ಇದು ತಲಕಾಡಿನ ಪಂಚಲಿಂಗ ದರ್ಶನಕ್ಕೆ ಬುನಾದಿಯಾಗಿದೆ. (ಆಧಾರ : ತಲಕಾಡಿನಲ್ಲಿ ದೊರಕಿರುವ ಶಾಸನ ಮೈಸೂರು ಗೃಜೇಟಿಯರ್, ಪುಟ 380). ಈ ಕೃಷಿಯು ತಲಕಾಡಿನ ಹಾಗೂ ಅದರ ಸುತ್ತಮುತ್ತಲಿನ ಗ್ರಾಮಗಳಾದ ಮುಕುಡುತೊರೆ ವಿಜಯಪುರ - ಕೂಕ್ಕುರು ಮುಂತಾದ ಗ್ರಾಮದ ಜನರಲ್ಲಿ ಅಪಾರ ಹರ್ಷವನ್ನುಂಟು ಮಾಡಿತು. ಇದರ ಫಲವಾಗಿ ಈ ಗ್ರಾಮಗಳಲ್ಲಿ ನೆಲೆಸಿರುವ ಶಿವಲಿಂಗಗಳಿಗೆ ವಿಶೇಷ ಪೂಜೆಯನ್ನು ಮಾಡಲು ಜನರು ತೀರ್ಮಾನಿಸಿದರು. ತಲಕಾಡಿನಲ್ಲಿ ಹಾಗೂ ಅದರ ಸುತ್ತಮುತ್ತ ಇದ್ದಂತಹ ಗಂಗರ ಹಾಗೂ ಚೋಳರ ಕಾಲದ ದೇವಾಲಯಗಳು ಹಾಗೂ ವಿಜಯನಗರದರಸರ ಆಳ್ವಿಕೆಯಲ್ಲಿ ಜೀರ್ಣೋದ್ಧಾರಗೊಂಡ ದೇವಾಲಯಗಳಾದ

1. ತುತ್ಪುರುಷ ಮುಖ : ಅರ್ಕೇಶ್ವರ, (ಕಾವೇರಿಯ ಉತ್ತರ ವಾಹಿನಿ ಬಳಿ ವಿಜಯಪುರ)
2. ಅಘೋರ ಮುಖ : ಪಾತಾಳೇಶ್ವರ ಪೂರ್ವವಾಹಿನಿ ಬಳಿ (ತಲಕಾಡು)
3. ಸದ್ಯೋಜಾತ ಮುಖ : ಮರಳೇಶ್ವರ, ದಕ್ಷಿಣ ವಾಹಿನಿ ಬಳಿ (ತಲಕಾಡು)
4. ವಾಮದೇವ ಮುಖ : ಮಲ್ಲಿಕಾರ್ಜುನೇಶ್ವರ, ಪಶ್ಚಿಮವಾಹಿನಿ (ಮುಡುಕುತೊರೆ)
5. ಈಶಾನ್ಯ ಮುಖ : ವೈದ್ಯನಾಥೇಶ್ವರ (ತಲಕಾಡು)

ದೇವಾಲಯಗಳಲ್ಲಿ ಏಕಕಾಲದಲ್ಲಿ ಪೂಜೆ ಸಲ್ಲಿಸುವ ಕಾರ್ಯವನ್ನು ಕೃಷಿಕರು ಕೈಗೊಂಡರು. ಈ ಕಾರ್ಯದ ನಂತರದ ರೂಪವೆ 'ಪಂಚಲಿಂಗಗಳ ದರ್ಶನ'.

ತದನಂತರದ ಕಾಲದಲ್ಲಿ ಈ ದರ್ಶನಕ್ಕೆ ಪುರಾಣದ ಹಾಗೂ ಶಾಸ್ತ್ರದ ಸಂಬಂಧ ಕಲ್ಪಿಸಿ 'ಕಾರ್ತಿಕ ಬಹುಳ ಅಮಾವಾಸ್ಯೆಯು ಸೋಮವಾರವಾಗಿದ್ದು, ಸೂರ್ಯ ಚಂದ್ರರಿಬ್ಬರೂ ವೃಶ್ಚಿಕರಾಶಿಯಲ್ಲಿ ಸೇರಿದಾಗ ಅಂದಿನ ಉಷಃ ಕಾಲದಲ್ಲಿ ಬರುವ ಕುಹುಯೋಗವು ಪಂಚಲಿಂಗಗಳ ದರ್ಶನಕ್ಕೆ ಯೋಗ್ಯ'ವೆಂದು ತಿಳಿಸಿದರು. ಈ ಮೇಲಿನ ಸನ್ನಿವೇಶವು ಸುಮಾರು ಹನ್ನೆರಡು ಅಥವಾ ಹದಿಮೂರು ವರ್ಷಗಳಲ್ಲಿ ಸಂಧಿಸುವುದರಿಂದ ಇಷ್ಟು ವರ್ಷಗಳ ಅಂತರದಲ್ಲಿ 'ಪಂಚಲಿಂಗ ದರ್ಶನ' ನಡೆಯಲಿರುವ ಸಂಪ್ರದಾಯವಿದೆ.

ಮೈಸೂರು ಒಡೆಯರ ಪ್ರಸಿದ್ಧ ದೊರೆಯಾಗಿದ್ದಂತಹ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಆಳ್ವಿಕೆಯ ಅವಧಿಯಲ್ಲಿ (1894 ರಿಂದ 1940) ನಾಲ್ಕು ಬಾರಿ ತಲಕಾಡಿನಲ್ಲಿ ಪಂಚಲಿಂಗ ದರ್ಶನ ನಡೆದಿರುವುದಕ್ಕೆ ಆಧಾರಗಳಿವೆ. ಈ ನಾಲ್ಕು (೧೯೦೮ ಕೀಲಕ ಸಂವತ್ಸರದಲ್ಲಿ, ೧೯೧೫, ರಾಕ್ಷಸ ಸಂವತ್ಸರದಲ್ಲಿ, ೧೯೨೫ ಕ್ರೋಧನ ಸಂವತ್ಸರದಲ್ಲಿ, ೧೯೩೮ಬಹುಧಾನ್ಯ ಸಂವತ್ಸರದಲ್ಲಿ) ಪಂಚಲಿಂಗ ದರ್ಶನಗಳಿಗೂ ಸ್ವತಃ ನಾಲ್ವಡಿ ಕೃಷ್ಣರಾಜರು ರಾಜಪರಿವಾರದ ಸಮೇತ ಆಗಮಿಸಿ ಧಾರ್ಮಿಕ ಕಾರ್ಯಗಳನ್ನು ನೇರವೇರಿಸುತ್ತಿದ್ದರೆಂದು ಸಿ.ಕೆ. ವೆಂಕಟರಾಮಯ್ಯನವರು ತಮ್ಮ 'ಆಳಿದ ಮಹಾ ಸ್ವಾಮಿಗಳು' ಎಂಬ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ.

ಆಧಾರ ಗ್ರಂಥಗಳು

1. ಆಳಿದ ಮಹಾಸ್ವಾಮಿಗಳು. ಸಿ.ಕೆ. ವೆಂಕಟರಾಮಯ್ಯ, ಗೀತಾ ಬುಕ್‌ಹೌಸ್, ಮೈಸೂರು 1940
2. ಮೈಸೂರು ಶಾಸನ ಸಂಪುಟ ಸಂ. 1.2
3. ಸಂದರ್ಶನ ಸಮಯದಲ್ಲಿ ಗ್ರಾಮದ ಹಿರಿಯರು ನೀಡಿದ ಮಾಹಿತಿ (ಮೌಖಿಕ ಆಧಾರವನ್ನು ಬಳಸಲಾಗಿದೆ)
4. ದಕ್ಷಿಣ ಭಾರತದ ಯಾತ್ರಸ್ಥಳಗಳು. ಡಾ. ಮುನಿಯಪ್ಪ, ಸಿ.ವಿ.ಜಿ. ಪಬ್ಲಿಕೇಷನ್ ಬೆಂಗಳೂರು
5. ಪವಿತ್ರ ಕ್ಷೇತ್ರಗಳು. ಪಿ.ಎಂ. ಜಯಸೆಂದಿಲ್‌ನಾಥನ್. ತಿರುಮಲೈ ತಲಂಗಳಂ ಪ್ರಕಟಣಾ ಸಮಿತಿ, ಬೆಂಗಳೂರು.
6. ಸಾಮ್ರಾಜ್ಯ ಮತ್ತು ಸಂಸ್ಥಾನ. (ವಿಜಯನಗರ, ಇಕ್ಕೇರಿ ಹಾಗೂ ಮೈಸೂರು ಅರಸರ ಸಂಸ್ಕೃತಿ ಚರಿತ್ರೆ), ಡಾ.ಎನ್. ಚಿನ್ನಸ್ವಾಮಿ ಸೋಸಲೆ, ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ.
7. ನಾಲ್ವಡಿ ಕೃಷ್ಣನ ಮೈಸೂರು. (ಸಾಮಾಜಿಕ ಶೈಕ್ಷಣಿಕ ಹಾಗೂ ಅಭಿವೃದ್ಧಿ ನೆಲೆಯ ಅಧ್ಯಯನ) ಡಾ.ಎನ್. ಚಿನ್ನಸ್ವಾಮಿ ಸೋಸಲೆ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
8. ಮೈಸೂರು ಜಿಲ್ಲಾ ಧಾರ್ಮಿಕ ಕ್ಷೇತ್ರಗಳ ಪರಿಚಯ. ಶ್ರೀ ರಾಜೇಶ್ ಕುಮಾರ್, ಮೈಸೂರು.
9. ಪಂಚಲಿಂಗದರ್ಶನ ಮಹೋತ್ಸವ. ಪ್ರಕಾಶಕರು, ಕನ್ವೀನರ್ ಮತ್ತು ಧರ್ಮದರ್ಶಿಗಳು, ಶ್ರೀ ವೈದ್ಯೇಶ್ವರ ಸ್ವಾಮಿ ದೇವಸ್ಥಾನ, ತಲಕಾಡು.

೪೫. ತುಲಾಪುರುಷ ಮಹಾದಾನ

ಡಾ. ಎಚ್.ಎಸ್. ಗೋಪಾಲರಾವ್

ಕೆಲವು ತೀರ್ಥ ಕ್ಷೇತ್ರಗಳಲ್ಲಿ 'ತುಲಾಭಾರ' ಸೇವೆಗೆ ಅವಕಾಶವಿದೆ. ಎಲ್ಲ ದೇವಸ್ಥಾನಗಳಲ್ಲೂ ಈ ಸೇವೆಗೆ ಅವಕಾಶ ಇರುವುದಿಲ್ಲ. ದೇವಸ್ಥಾನದಲ್ಲಿ ತುಲಾಭಾರ ಸೇವೆಗೆ ಅವಕಾಶ ಇದೆ ಎಂದರೆ, ಅದು ದೊಡ್ಡ ದೇವಸ್ಥಾನ ಆಗಿರುತ್ತದೆ ಮತ್ತು ತೀರ್ಥ ಕ್ಷೇತ್ರವೂ ಆಗಿರುತ್ತದೆ. ತಿರುಪತಿ, ಹಂಪಿ, ಸುಬ್ರಹ್ಮಣ್ಯ, ಧರ್ಮಸ್ಥಳ, ಕೊಲ್ಲೂರು ಇತ್ಯಾದಿ ಸ್ಥಳಗಳಲ್ಲಿರುವ ಪ್ರಸಿದ್ಧ ದೇವಸ್ಥಾನಗಳಲ್ಲಿ ತುಲಾಭಾರ ಸೇವೆಗೆ ಅವಕಾಶ ಇದೆ. ಸದ್ಯದ ಸ್ಥಿತಿಯಲ್ಲಿ ತುಲಾಭಾರವನ್ನು ಸೇವೆ ಎನ್ನುವುದಕ್ಕಿಂತ, ಹರಕೆ ಎನ್ನುವುದು ಸೂಕ್ತ. ಸಾಮಾನ್ಯವಾಗಿ ಮಕ್ಕಳಿಗೆ ಯಾವುದೇ ತೊಂದರೆ ಆದಾಗ, ತಾಯಂದಿರು ಆ ತೊಂದರೆಯ ನಿವಾರಣೆಯ ಸಲುವಾಗಿ ತುಲಾಭಾರದ ಹರಕೆ ಹೊರುತ್ತಾರೆ. ಅದನ್ನು ತೀರಿಸಲು ತಂದೆ, ತಾಯಿಯರು ಮಗುವಿನ ಸಮೇತ ಆಯಾ ತೀರ್ಥಕ್ಷೇತ್ರಗಳಿಗೆ ಹೋಗಿ, ಹರಕೆ ಹೊತ್ತಿರುವ ಪ್ರಕಾರ ಮಗುವಿನ ತೂಕದ ಬೆಲ್ಲ, ಅಕ್ಕಿ, ತೆಂಗಿನ ಕಾಯಿ ಇತ್ಯಾದಿ ಯಾವುದೋ ವಸ್ತುವನ್ನು ದೇವರಿಗೆ ದಾನವಾಗಿ ನೀಡುತ್ತಾರೆ. ವಿಶೇಷ ಸಂದರ್ಭಗಳಲ್ಲಿ ದೊಡ್ಡವರೂ ತಮಗಾಗಿ ಹರಕೆ ಹೊರುತ್ತಾರೆ. ಇದು ಕಳೆದ ಕೆಲವು ದಶಕಗಳಿಂದ ಹೆಚ್ಚಾಗಿ ಕಂಡು ಬರುತ್ತಿರುವ ಸೇವೆ. ಈ ಸೇವೆಯ ಹಿನ್ನೆಲೆಯಲ್ಲಿ ದಾನ ಇದೆ ಎಂಬುದು ಗಮನಿಸಲೇ ಬೇಕಾದ ವಿಚಾರ. ದಾನದ ಮೂಲಕ ಸಮಾಜಕ್ಕೆ ಸಲ್ಲಿಸುವ ಸೇವೆಯೇ ತುಲಾಭಾರದ ಹಿಂದಿನ ಪ್ರಮುಖ ಆಶಯ. ತುಲಾಭಾರವು ದೇವರ ಮೂಲಕ ಸಮಾಜಕ್ಕೆ ಸಂದ ಸೇವೆ. ವರ್ತಮಾನದಲ್ಲಿ ಇದು ವ್ಯಕ್ತಿಯ ತೂಕಕ್ಕೆ ಸಮಾನವಾದ ವಸ್ತುವಿನ ದಾನ. ಹಿಂದಿನ ದಿನಗಳಲ್ಲಿ ತುಲಾಪುರುಷವು ಪುರುಷನ ತೂಕದ ಚಿನ್ನದ ದಾನ.

ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ರತ್ನಕೋಶದ ಪ್ರಕಾರ ತುಲಾಭಾರವು ವಿಶೇಷ ಸಂದರ್ಭಗಳಲ್ಲಿ ವ್ಯಕ್ತಿಯ ತೂಕದಷ್ಟು ವಸ್ತು, ಒಡವೆ ಮುಂತಾದುವುಗಳನ್ನು ದಾನ ಮಾಡುವುದು. [1] ಕನ್ನಡ ಸಾಹಿತ್ಯ ಪರಿಷತ್ತಿನ ಸಂಕ್ಷಿಪ್ತ ಕನ್ನಡ ನಿಘಂಟಿನ ಪ್ರಕಾರ, 'ತುಲಾಪುರುಷ'ವು ಷೋಡಶ ಮಹಾದನಗಳಲ್ಲಿ ಒಂದು; ತುಲಾಪುರುಷ ಎಂದರೆ ತನ್ನ ದೇಹವು ತೂಗುವಷ್ಟು ಚಿನ್ನ ಮೊದಲಾದುದನ್ನು ದಾನ ಮಾಡುವುದು ಮತ್ತು ಹಾಗೆ ದಾನ ಮಾಡಿದ ವ್ಯಕ್ತಿ.[2]

ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟುವಿನ ಪ್ರಕಾರ, ತುಲಾಪುರುಷ, ತುಳಾಪುರುಷವು ೧. ಷೋಡಶ ಮಹಾದಾನಗಳಲ್ಲಿ ಒಂದು; ತನ್ನ ದೇಹವು ತೂಗುವಷ್ಟು ಚಿನ್ನ ಮೊದಲಾದುವನ್ನು ದಾನ ಮಾಡುವುದು. ೨. ತುಲಾಪುರುಷನ ದಾನವನ್ನು ಮಾಡಿದವನು ೩. ತನ್ನ ತೂಕದ ಚಿನ್ನವನ್ನು ದಾನ ಮಾಡುವ ವ್ರತ[3]

ಷೋಡಶ ಮಹಾದಾನಗಳಲ್ಲಿ ತುಲಾಭಾರವೂ ಸೇರಿದೆ. ಪುರಾಣನಾಮ ಚೂಡಾಮಣಿಯ ಪ್ರಕಾರ, ತುಲಾಭಾರ, ಹಿರಣ್ಯಗರ್ಭ, ತಿಲಪರ್ವತ, ಸುವರ್ಣ ಮೇದಿನೀ, ಕಲ್ಪಪಾದಪ, ಗಣೇಶೇಷ, ಸುವರ್ಣಧೇನು, ಲಕ್ಷ್ಮೀ, ತಿಲಧೇನು, ಗೋಸಹಸ್ರ, ಹಿರಣ್ಯಾಶ್ವ, ಕನ್ಯಾ, ಹಿರಣ್ಯವೃಷಭ, ಗಜ, ಲೋಕಪಾಲಾಷ್ಟಕ, ತ್ರಿಮೂರ್ತಿ ಪ್ರತಿಮಾದಾನಗಳು ಷೋಡಶ ಮಹಾದಾನಗಳು. [4] ಷೋಡಶ ದಾನ ವೆಂದರೆ, ಹಸು, ಭೂಮಿ, ಚಿನ್ನ, ವಸ್ತ್ರ, ಆಭರಣ, ಛತ್ರ, ಚಾಮರ, ಶಯ್ಯೆ, ಬೀಸಣಿಗೆ, ಸಾಲಗ್ರಾಮ, ಧನ, ಧಾನ್ಯ, ದೀಪ, ಪಾದುಕೆ, ತುಪ್ಪ ಮತ್ತು ಕನ್ಯೆಯನ್ನು ಉಪಾಯನವಾಗಿ ನೀಡುವ ಹದಿನಾರು ಬಗೆಯ ದಾನ ಎಂದೂ ತಿಳಿಯಲಾಗಿದೆ. [5] ವೆಟ್ಟಂ ಮಣಿಯವರು ತಮ್ಮ ಪುರಾಣಿಕ್ ಎನ್ಸೈಕ್ಲೊಪೇಡಿಯಾದಲ್ಲಿ ಷೋಡಶದಾನಗಳನ್ನು ಮೇರುದಾನಕ್ಕೆ ಸಮಾನಾರ್ಥಕವಾಗಿ ಸ್ವೀಕರಿಸಿದ್ದಾರೆ.[6] ಅವರ ಪ್ರಕಾರ ಮೇರುದಾನವು ೧.ಧಾನ್ಯಮೇರು ೨. ಲವಣಮೇರು ೩. ಗುಡಮೇರು ೪. ಸ್ವರ್ಣಮೇರು ೫.ತಿಲಮೇರು ೬. ಕಾರ್ಪಾಸಮೇರು ೭. ಘೃತಮೇರು ೮.ರಜತಮೇರು ಮತ್ತು ೯. ಶರ್ಕರಮೇರುವನ್ನು ಒಳಗೊಂಡಿದೆ.

ಇಂಡಿಯನ್ ಎಪಿಗ್ರಫಿಕಲ್ ಗ್ಲಾಸರಿಯ ಪ್ರಕಾರ ತುಲಾಭಾರವು, ತುಲಾಪುರುಷ ದಂತೆಯೇ ಒಂದು ಮಹಾದಾನ. ರಾಜ ಅಥವಾ ಯಾವುದೇ ಗಣ್ಯ ವ್ಯಕ್ತಿಯನ್ನು ಚಿನ್ನ ಅಥವಾ ಮತ್ತಾವುದೋ ಅಮೂಲ್ಯ ಲೋಹ ಅಥವಾ ಶಿಲೆಯಿಂದ ತೂಗಿ, ಅವನ ತೂಕಕ್ಕೆ ಸಮಾನವಾಗಿ ಒಂದು ವಸ್ತುವನ್ನು ದೇವಾಲಯಗಳಿಗೆ ನೀಡುವ ದಾನ[7]

ಕನ್ನಡದ ಆದಿಕವಿ ಪಂಪನೂ ಸಹ ತನ್ನ ವಿಕ್ರಮಾರ್ಜುನ ವಿಜಯದಲ್ಲೇ ತುಲಾಪುರುಷ ಶಬ್ದದ ಬಳಕೆ ಮಾಡಿದ್ದಾನೆ. 'ಪುರುಷೋತ್ತಮನ ತಂಗೆಯುಂ ತಾನುಂ ತುಳಾಪುರುಷಮನಿರ್ದು ಲೋಕಕ್ಕೆಲ್ಲಂ ಬಿಯಮಂ ಮೆಱೆದು'ದನ್ನು ಪಂಪ ತಿಳಿಸಿ ದ್ದಾನೆ[8]. ಡಾ. ಡಿ.ಎಲ್. ನರಸಿಂಹಾಚಾರ್ ತಮ್ಮ ಪಂಪ ಭಾರತ ದೀಪಿಕೆಯಲ್ಲಿ 'ತುಳಾಪುರುಷಮನಿರ್ದು' ಎಂಬ ಪದಕ್ಕೆ, ತುಳಾಪುರುಷವೆಂಬ ದಾನವನ್ನು ಮಾಡಿ; ತನ್ನ ತೂಕದಷ್ಟು ಚಿನ್ನವನ್ನು ದಾನ ಮಾಡುವುದು ಎಂದು ಅರ್ಥ ನೀಡಿದ್ದಾರೆ. [9] ಯಾರೇ ಆಗಲಿ ತನ್ನ ತೂಕದಷ್ಟು ಚಿನ್ನವನ್ನು ಕೊಡಲು ಅನುಕೂಲ ಇಲ್ಲದ ಸಂದರ್ಭದಲ್ಲಿ, ಚಿನ್ನದ ಬದಲಿಗೆ ಬೇರೆ ಯಾವುದೇ ವಸ್ತುವನ್ನು ಕೊಡಬಹುದು ಎಂದು ತಿಳಿಯುತ್ತದೆ. ಶ್ರೀಮಂತರಾದವರಿಗೆ ಚಿನ್ನವನ್ನು ನೀಡುವ ಸಾಧ್ಯತೆಗಳು ಹೆಚ್ಚು, ಅದೇ ಬಡವನಿಗೆ

ಏನನ್ನೂ ಕೊಡಲು ಸಾಧ್ಯವಾಗದಿರಬಹುದು. ಮಧ್ಯಮ ವರ್ಗದವರು ಚಿನ್ನದ ಬದಲು ಬೇರೆ ಯಾವುದೇ ವಸ್ತುವನ್ನು ಕೊಡುವ ಸಾಧ್ಯತೆಗಳು ಹೆಚ್ಚು. ಅಂತೂ ದೇವರಿಗೆ ಹರಕೆ ಹೊರುವುದು ತಪ್ಪುವುದಿಲ್ಲ. ಹೊತ್ತ ಹರಕೆಯನ್ನು ತೀರಿಸಲು ಸುಲಭ ಮಾರ್ಗೋಪಾಯಗಳನ್ನು ಹುಡುಕಬೇಕಾದ್ದು ಅನಿವಾರ್ಯ. ಈ ಹಿನ್ನೆಲೆಯಲ್ಲಿ, ತುಲಾ ಪುರುಷ / ತುಲಾಭಾರವು ವ್ಯಕ್ತಿಯ ತೂಕದ ಚಿನ್ನದ ದಾನವಾದರೂ, ತಿದ್ದುಪಡಿಯೊಂದಿಗೆ ಚಿನ್ನದ ತೂಕದ ಬದಲಿಗೆ ಅದೇ ತೂಕದ ಬೇರೆ ಯಾವುದೇ ವಸ್ತು ಆಗಬಹುದು. ಚಿನ್ನದ ಬೆಲೆಯಷ್ಟು ವಸ್ತು ಎಂದು ಪರಿಗಣಿಸಲು ಸಾಧ್ಯವೇ ಇಲ್ಲ. ಹರಕೆಯ ಮೂಲಕವೋ ಅಥವಾ ಷೋಡಶ ದಾನ/ ಮಹಾದಾನದ ನೆಪದಲ್ಲೋ, ಹಣ ಉಳ್ಳವರು ದೇವಾಲಯಗಳ ಮೂಲಕ ಸಾರ್ವಜನಿಕರಿಗೆ ಮಾಡುತ್ತಿದ್ದ ಸೇವೆಯೇ ತುಲಾಪುರುಷ ದಾನ ಎಂದು ತಿಳಿಯಬಹುದಾಗಿದೆ. ಹಿಂದಿನ ತುಲಾಪುರುಷ, ಎಂದರೆ ಪುರುಷನನ್ನು ತೂಗಿ ಮಾಡುತ್ತಿದ್ದ ದಾನವೇ ಈಗ ತುಲಾಭಾರ ಎಂಬ ಹೆಸರಿನಲ್ಲಿ ಮುಂದುವರಿದಿದೆ. ತುಲಾಪುರುಷನು ಶಿಷ್ಟ ಎನಿಸಿಕೊಂಡರೆ, ತುಲಾಭಾರವು ಜನ ಸಾಮಾನ್ಯರ ಬಳಕೆಯಲ್ಲಿದೆ.

ಈ ಸಂಪ್ರಬಂಧದ ಸಿದ್ಧತೆಗಾಗಿ ನಾನು ಗಮನಿಸಿದ ಸುಮಾರು ಐವತ್ತು ಶಾಸನಗಳಲ್ಲಿ, ಅತ್ಯಂತ ಪ್ರಾಚೀನ ಎಂದು ಪರಿಗಣಿಸಬಹುದಾದದ್ದು. ಕ್ರಿ.ಶ. ೮೯೧ರ ಶಾಸನ. ವಿಚಿತ್ರ ಎನ್ನುವಂತೆ ಅದು ಕರ್ನಾಟಕದ ಶಾಸನವಲ್ಲ. ತಮಿಳುನಾಡಿನ ತಂಜಾವೂರು ಜಿಲ್ಲೆಯ ಕುಂಭಕೋಣಂ ತಾಲ್ಲೂಕಿನ ತಿರುಕ್ಕೋಡಿಕಾವಲ್‌ನ ತಿರುಕ್ಕೋಡೀಶ್ವರ ದೇವಾಲಯದ ಈ ಶಾಸನದಲ್ಲಿ ನೃಪತುಂಗ ಮಹಾರಾಜರ ರಾಣಿ ವೀರ ಮಹಾ ದೇವಿಯು 'ಹಿರಣ್ಯಗರ್ಭವ ತುಲಾಭಾರಮುಂ ಪುಕ್ಕ ಪೊನ್ನಿಲ್' ಐವತ್ತು ಕಟಂಜು ಚಿನ್ನವನ್ನು ಮಹಾದೇವ ದೇವಾಲಯಕ್ಕೆ ದಾನ ನೀಡಿದ್ದಾಳೆ.[10] ಈ ಪ್ರಾಚೀನ ಶಾಸನದಲ್ಲಿ ಸ್ಪಷ್ಟವಾಗಿ ತುಲಾಭಾರ ಎಂದೇ ದಾಖಲೆಯಾಗಿದೆ.

ಡಾ. ಎಂ. ಚಿದಾನಂದಮೂರ್ತಿ ಅವರು ತಮ್ಮ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಕೃತಿಯಲ್ಲಿ, 'ಪುಣ್ಯಾರ್ಜನೆಗಾಗಿ ರಾಜರೂ ಶ್ರೀಮಂತರೂ ಉದಾರವಾಗಿ ದತ್ತಿಗಳನ್ನು ಬಿಟ್ಟುಕೊಟ್ಟಿದ್ದಾರೆ. ತುಲಾಪುರುಷ, ಹಿರಣ್ಯಗರ್ಭ, ಕಲ್ಪವೃಕ್ಷ ಗೋಸಹಸ್ರ - ಮುಂತಾದ ಮಹಾದಾನಗಳನ್ನು ಮಾಡಿದ್ದಾರೆ. ಅವು ವೈಯಕ್ತಿಕ ಪುಣ್ಯಕಾರ್ಯಗಳು' ಎಂದು ತಿಳಿಸಿದ್ದಾರೆ.[11] ಅವರು ಆ ಮಹಾದಾನಗಳ ಬಗೆಗಿನ ವಿವರವಾದ ಚರ್ಚೆ ಮಾಡಿಲ್ಲ. ಮೇಲಿನ ಹೇಳಿಕೆಗೆ ಅವರು ಕ್ರಿ.ಶ ೯೨೫ರ ಮತ್ತು ಕ್ರಿ.ಶ. ೧೦೭೭ರ ಎರಡು ಶಾಸನಗಳನ್ನು ಆಕರವಾಗಿ ಬಳಸಿಕೊಂಡಿದ್ದಾರೆ. ಅಂದರೆ, ಕ್ರಿ.ಶ. ೯೨೫ರ ಹೊತ್ತಿಗೆ ಕರ್ನಾಟಕದಲ್ಲಿ ತುಲಾಭಾರ ಆಗುತ್ತಿತ್ತು ಎಂದು ಸ್ಪಷ್ಟವಾಗುತ್ತದೆ. ಆದರೆ, ಲಭ್ಯ ದಾಖಲೆಗಳಿಂದ ಕ್ರಿ.ಶ. ೧೧ನೆಯ ಶತಮಾನದ ಕೊನೆಯವರೆಗೂ, ತುಲಾಭಾರ / ತುಲಾಪುರುಷ ದಾನ/ ಮಹಾದಾನವು ಹೆಚ್ಚು ಪ್ರಚಲಿತದಲ್ಲಿ ಇರಲಿಲ್ಲ ಎಂಬುದು

ಖಚಿತವಾಗುತ್ತದೆ. ಕ್ರಿ.ಶ.೧೨ನೆಯ ಶತಮಾನದ ನಂತರ ಹೆಚ್ಚಿನ ತುಲಾಪುರುಷ ದಾನದ ಉಲ್ಲೇಖಗಳು ವಿಜಯನಗರ ಕಾಲಕ್ಕೆ ಗಮನಾರ್ಹವಾಗಿ ವೃದ್ಧಿಯಾಗಿವೆ. ನಮ್ಮ ಈ ಸಂಪ್ರಬಂಧಕ್ಕೆ ಗಮನಿಸಲಾಗಿರುವ ಸುಮಾರು ಐವತ್ತು ಶಾಸನಗಳ ಪೈಕಿ ವಿಜಯನಗರದ ಶ್ರೀ ಕೃಷ್ಣದೇವರಾಯನ ಕಾಲಕ್ಕೇ ಸೇರುವ ಹನ್ನೆರಡು ಶಾಸನಗಳಿವೆ. ಅಂದರೆ, ಆ ಹೊತ್ತಿಗೆ ತುಲಾಪುರುಷ ದಾನವು ಹೆಚ್ಚಿನ ಮನ್ನಣೆ ಪಡೆದಿತ್ತು ಎನ್ನುವುದಕ್ಕಿಂತ ಹೆಚ್ಚಾಗಿ, ರಾಜ್ಯದಲ್ಲಿ ತುಲಾಪುರುಷ ದಾನವನ್ನು ಮಾಡಬಲ್ಲ ಆರ್ಥಿಕ ಬಲ ಹೆಚ್ಚಿತ್ತು ಎಂದು ಸ್ಪಷ್ಟವಾಗುತ್ತದೆ.

ತುಲಾಪುರುಷ ದಾನದಲ್ಲಿ ಕ್ರತುವಿಗೆ ಆದ್ಯತೆ. ಯಾಗ - ಯಜ್ಞಗಳ ಆಚರಣೆ ಹೊಸರೂಪವನ್ನು ೧೫ನೆಯ ಶತಮಾನದಲ್ಲಿ ಕಾಣಬಹುದು. ಅದಕ್ಕೆ ಮೊದಲು ಯಾಗ - ಯಜ್ಞಗಳ ಆಚರಣೆ ಅಷ್ಟು ಪ್ರಬಲವಾಗಿ ಕಾಣುವುದಿಲ್ಲ. ಕರ್ನಾಟಕದಲ್ಲಿ ಮಾತ್ರವಲ್ಲದೆ, ಇಡಿಯಾಗಿ ದಕ್ಷಿಣ ಭಾರತದಲ್ಲಿ ೧೨ನೆಯ ಶತಮಾನವು ಅತ್ಯಂತ ಪ್ರಮುಖವಾದುದು. ಈಗಿನ ಉತ್ತರ ಕರ್ನಾಟಕ ಮತ್ತು ಆಂಧ್ರಪ್ರದೇಶದ ಪಶ್ಚಿಮ ಭಾಗಗಳಲ್ಲಿ ಬಸವೇಶ್ವರರು ಮತ್ತು ಈಗಿನ ಕರ್ನಾಟಕ ದಕ್ಷಿಣ ಭಾಗಗಳು ಮತ್ತು ತಮಿಳುನಾಡಿನ ಅನೇಕ ಭಾಗಗಳಲ್ಲಿ ರಾಮಾನುಜರು ಕೈಗೊಂಡ ಜನಪರ ಕಾರ್ಯಕ್ರಮಗಳು ಜನತೆಯನ್ನು ಆಕರ್ಷಿಸಿದವು. ಬಸವೇಶ್ವರರು ದೇವಾಲಯಗಳು ಮತ್ತು ವೈದಿಕ ನಿಷ್ಠ ಸಂಸ್ಕೃತಿಯನ್ನು ನಿರಾಕರಿಸಿ, ಯಾಗ, ಯಜ್ಞಗಳನ್ನು ತಿರಸ್ಕರಿಸಿದರು. ರಾಮಾನುಜಾಚಾರ್ಯರು ವೈದಿಕ ಸಂಸ್ಕೃತಿಯನ್ನು ಬಲಪಡಿಸುವ, ದೇವಾಲಯಗಳನ್ನು ಜನರತ್ತ ಕೊಂಡೊಯ್ಯುವ ಮತ್ತು ಯಾಗ, ಯಜ್ಞಗಳಿಗೆ ಮಹತ್ವ ನೀಡುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಈ ಎರಡೂ ಆಂದೋಲನಗಳು ಸಾಮಾನ್ಯ ಜನರನ್ನು ತಮ್ಮತ್ತ ಸೆಳೆಯುವ ಪ್ರಯತ್ನದಲ್ಲಿ ಸಫಲವಾದವು. ಈ ಕಾರಣದಿಂದಲೇ ಕರ್ನಾಟಕದ ಉತ್ತರ ಭಾಗದಲ್ಲಿ ತುಲಾಪುರುಷ ದಾನದ ಉಲ್ಲೇಖ ಕಡಿಮೆ. ಕರ್ನಾಟಕದ ದಕ್ಷಿಣದಲ್ಲಿ ಇವು ಹೆಚ್ಚು ಆಚರಣೆಯಲ್ಲಿದ್ದುದು ಕಂಡು ಬರುತ್ತದೆ. ಕಲ್ಯಾಣ ಚಾಲುಕ್ಯರ ಹೆಚ್ಚು ಶಾಸನಗಳ ತುಲಾಪುರುಷ ದಾನದ ಬಗ್ಗೆ ಹೆಚ್ಚಾಗಿ ಪ್ರಸ್ತಾಪ ಮಾಡಿರುವುದು ಅಧ್ಯಯನದ ಸಂದರ್ಭದಲ್ಲಿ ನನ್ನ ಗಮನಕ್ಕೆ ಬಂದಿಲ್ಲ. ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಜಾಲೀಹಾಳು ಗ್ರಾಮದ ಈಶ್ವರ ದೇವರ ಗುಡಿಯಲ್ಲಿರುವ ಶಾಸನವು ಕಲ್ಯಾಣ ಚಾಲುಕ್ಯ ವಂಶದ ಪ್ರಸಿದ್ಧ ದೊರೆ ತ್ರಿಭುವನಮಲ್ಲನ ಆಳ್ವಿಕೆಯ ಸಂದರ್ಭದಲ್ಲಿ ಬಲ್ಲವರಸ ಎಂಬ ಅಧಿಕಾರಿಯು 'ಸಂಕ್ರಾನ್ತಿ ನಿಮಿತ್ತದಿಂ ದಕ್ಷಿಣಗಂಗೆ ತುಂಗಭದ್ರಾ ನದೀ ತೀರದ ಪಂಪಾದೇವಿ ಸ್ಥಾನದಲು ಶ್ರೀ ಬಲ್ಲವರಸರು ತುಳಾಪುರುಷವೇಟಿ ಕಾಲದಿಂ' ಎಂದು ದಾಖಲಿಸಿವೆ.[12] ಇಲ್ಲಿ ತುಳಾಪುರುಷ ದಾನ ವೈದಿಕ ನಿಷ್ಠವಾಗಿತ್ತೆ ಅಥವಾ ಇರಲಿಲ್ಲವೆ ಎಂಬ ಪ್ರಶ್ನೆಗೆ ನೇರ ಉತ್ತರ ದೊರೆಯುವುದಿಲ್ಲ.

ಇದೂ ಸಹ ತುಂಗಭದ್ರಾ ನದಿಯ ಆಸುಪಾಸಿನ ಉಲ್ಲೇಖ. ಹೊಯ್ಸಳರ ಶಾಸನಗಳಲ್ಲಿ ತುಳಾಪುರುಷಕ್ಕೆ ಸಂಬಂಧಿಸಿದ ಉಲ್ಲೇಖಗಳು ಕಡಿಮೆ ಪ್ರಮಾಣದಲ್ಲಿಯಾದರೂ ಇವೆ. ಇವು ವೈದಿಕ ನಿಷ್ಠವಾಗಿವೆ. ಹಳೇಬೀಡಿನ ಒಂದು ಶಾಸನವು ವಿಷ್ಣುವರ್ಧನನ ಕಾಲಕ್ಕೆ ಸೇರಿದ್ದು, ಅದು ತುಳಾಪುರುಷ ಮಹಾಕ್ರತುವನ್ನು ಉಲ್ಲೇಖಿಸಿದೆ. [13] ತುಳಾಪುರುಷ ದಾನವೇ ತುಳಾ ಪುರುಷ ಕ್ರತುವಾಗಿ ಉಲ್ಲೇಖಗೊಂಡಿದೆ. ದಾನವೂ ಕ್ರತುವಿನ ಒಂದು ಭಾಗವೇ ಆಗಿದೆ. ಕ್ರತುವಿನ ಮುಖ್ಯ ಭಾಗ ಇರುವುದೇ ದಾನದಲ್ಲಿ. ಸಾಮಾನ್ಯವಾಗಿ ತುಲಾ ಪುರುಷ ದಾನಗಳು ನದಿಯ ತೀರಪ್ರದೇಶಗಳಲ್ಲಿಯೇ ಹೆಚ್ಚಾಗಿ ಆಗಿರುವುದನ್ನು ಕಾಣಬಹುದು. ಈಗ ಉಲ್ಲೇಖಿಸಲಾದ ಶಾಸನದಲ್ಲಿಯೂ ತುಳಾಪುರುಷ ಮಹಾಕ್ರತು ನಡೆದದ್ದು ಬನವಾಸೆ ನಾಡ ವರದಾ ಸಂಗಮದ ಹುಲ್ಲುಣಿಯ ತೀರ್ಥದಲ್ಲಿ. ಇಲ್ಲಿ ದಾನ ನೀಡಿದವನು ಬೇಂಟೆಯ ತಿಪ್ಪೆಯ ನಾಯಕ ಎಂಬ ಅಧಿಕಾರಿ. ದೊರೆಯ ತುಳಾಪುರುಷ ದಾನ ಕಾಲದಲ್ಲಿ ಬೇರೆಯವರೂ ಜೊತೆಗೂಡಬಹುದಾಗಿತ್ತು. 'ಶ್ರೀಮದ್ವಿಷ್ಣುವರ್ಧನ ದೇವನ ತೊಲಾಪುರುಷ ಮಹಾದಾನದಲು ಭಂಡಾರಿ ಚವುಂಡಮಯ್ಯಂ ಪಾದ ಪೂಜೆಯಾಂತು ಕರಿಗುಂದವಂ ಸ್ವಭೂಮಿಯಾಗೆ ಧಾರೆ ಪಡೆದು' ದಾನ ನೀಡಿದ್ದಾನೆ[14] ತುಲಾಪುರುಷ ದಾನ/ ಮಹಾದಾನದಲ್ಲಿ ಸ್ವಯಾರ್ಜಿತ ಆಸ್ತಿ ಅಥವಾ ವಸ್ತುವನ್ನು ದಾನ ಮಾಡಬೇಕೆಂಬ ನಿಯಮ ಇದ್ದಂತೆ ಕಾಣುತ್ತದೆ. ಆದ್ದರಿಂದಲೇ ಚವುಂಡಮಯ್ಯ ಕರಿಗುಂದವನ್ನು ಸ್ವಭೂಮಿಯಾಗಿ ಪಡೆದಿರಬೇಕು. ತುಲಾಪುರುಷ ನಡೆದದ್ದು ವಿಷ್ಣುವರ್ಧನನಿಗೆ ಎನ್ನುವುದು ಸ್ಪಷ್ಟ. ಆದರೆ, ದಾನ ನೀಡಿಕೆಯಲ್ಲಿ ಭಂಡಾರಿ ಚವುಂಡಮಯ್ಯನ ಪಾತ್ರವೂ ಇದೆ ಎನ್ನುವುದನ್ನು ಗಮನಿಸಿದಾಗ, ತುಲಾಪುರುಷ ದಾನವು ಯಾವುದೇ ಒಬ್ಬ ಪ್ರಮುಖ ವ್ಯಕ್ತಿಯ ಹೆಸರಿನಲ್ಲಿ ನಡೆದಾಗ, ಅದರಲ್ಲಿ ಆಸಕ್ತರ ಪಾಲೂ ಇರುತ್ತಿತ್ತು ಎಂಬುದು ನಿಶ್ಚಿತ.

ನಮ್ಮ ಅಧ್ಯಯನಕ್ಕೆ ದೊರೆತಿರುವ ಶಾಸನಗಳ ಪೈಕಿ ವೀರಬಲ್ಲಾಳನ ಆಳ್ವಿಕೆಯ ಕಾಲದ ಮೂರು ಶಾಸನಗಳಲ್ಲಿ ತುಲಾಪುರುಷದ ಪ್ರಸ್ತಾಪ ಇದೆ. ಕವಿ ಜನ್ನಯ್ಯ ಬರೆದಿರುವ ಅಮೃತಾಪುರದ ಶಾಸನವು ತುಳಾಪುರುಷ, ಹಿರಣ್ಯಗರ್ಭ ಇತ್ಯಾದಿ ದಾನಗಳನ್ನು ಮಾಡಲೆಂದೇ ರಾಜ ದಿಗ್ವಿಜಯ ಯಾತ್ರೆಯನ್ನು ಕೈಗೊಳ್ಳುತ್ತಿದ್ದ ಎಂದು ತಿಳಿಸಿದೆ. ಇದು ಅಮೃತಾಪುರದಲ್ಲಿ ಅಮೃತೇಶ್ವರ ದೇವರ ಪ್ರತಿಷ್ಠಾಪನೆಯ ಸ್ಥಾಪನೆಯ ಸಂದರ್ಭದ ಶಾಸನ.[15] ಇದು ಯಾವುದೇ ತುಲಾಪುರುಷ ನಡೆದ ಬಗ್ಗೆ ತಿಳಿಸುವುದಿಲ್ಲವಾದರೂ, ಅಂತಹ ಆಚರಣೆ ಅಸ್ತಿತ್ವದಲ್ಲಿತ್ತು ಮತ್ತು ಅದಕ್ಕಾಗಿ ರಾಜನೂ ಕ್ರಮ ತೆಗೆದುಕೊಳ್ಳುತ್ತಿದ್ದ ಎಂದು ತಿಳಿಸುತ್ತದೆ. ವೀರಬಲ್ಲಾಳನ ಪಟ್ಟ ಬಂಧೋತ್ಸವ ಸಮಯದಲ್ಲೂ ತುಳಾಪುರುಷ ದಾನ ನಡೆದ ಶಾಸನ ದಾಖಲೆ ಇದೆ.[16] ಇಂದಾವಾರದ ಒಂದು ಶಾಸನವು ಚಿಕ್ಕಬಮ್ಮಲದೇವಿಯ ಶಾಂತಿಗಾಗಿ ಮಾಡಿದ ದಾನವನ್ನು

ಉಲ್ಲೇಖಿಸುತ್ತಾ, 'ಯಜ್ಞಮೇಧಾದಿ ಸಕಿ ಯಜ್ಞಗಳುಮಂ ಮಾಡಿ ಹಿರಣ್ಯಗರ್ಭ ತುಳಾಪುರ್ಷಾದಿ ಮಹಾವ್ರತಂಗಳುಮಂ ಮಾಡಿ' ಎಂದು ತಿಳಿಸುತ್ತದೆ.[17] ಅಶ್ವಮೇಧವು ಯಜ್ಞವಾದರೆ, ತುಳಾಪುರುಷವು ಮಹಾವ್ರತ ಎಂದು ಶಾಸನ ಸೂಚಿಸುತ್ತದೆ. ತುಳಾಪುರುಷವು ಯಜ್ಞಕ್ಕೆ ಸಂಬಂಧಿಸಿದ ಒಂದು ದಾನ ಮತ್ತು ಆ ದಾನವು ಮಹಾ ವ್ರತದ ಸ್ಥಾನವನ್ನು ಹೊಂದಿದೆ ಎಂದು ಭಾವಿಸಲು ಅವಕಾಶಗಳಿವೆ. ತುಳಾಪುರುಷವು ಸಂಕ್ರಾನ್ತಿಯ ಸಂದರ್ಭದಲ್ಲಿ ನೀಡಲಾಗುವ ಮಹಾದಾನ.[18]

ಕ್ರಿ.ಶ.೧೪೪೭ರ ಒಂದು ಶಾಸನವು 'ವಿಶ್ವಂ ಸ ವಿಶ್ವ ಚಕ್ರೇಣ ಕರುವನ್ನೃಣಾಂ ಮುದಾನಯನ್ ಶಾಸ್ತ್ರ ಸಂಶೋಧ ಸಂಪ್ರಾಪ್ತ ತುಲಾಪುರುಷಕಾರಣಾತ್' ಎಂದು ತಿಳಿಸಿದೆ.[19] ಶಾಸ್ತ್ರಗಳ ಪ್ರಕಾರ ತುಲಾಪುರುಷ ದಾನವನ್ನು ಮಾಡಲಾಗುತ್ತಿತ್ತು ಎಂದು ಶಾಸನ ತಿಳಿಸಿದೆ. ತುಲಾಪುರುಷ ದಾನ ನೀಡಲು ಒಂದು ಕ್ರಮ ಇತ್ತು. ಶಾಸ್ತ್ರಗಳಲ್ಲಿ ಉಲ್ಲೇಖಗೊಂಡಿದ್ದ ಆ ಕ್ರಮವನ್ನು ದಾನ ನೀಡುವ ಸಂದರ್ಭದಲ್ಲಿ ಅನುಸರಿಸ ಲಾಗುತ್ತಿತ್ತು. ಈ ಅಭಿಪ್ರಾಯವನ್ನು ಸಮರ್ಥಿಸಲು ಮೇಲುಕೋಟೆಯ ಎರಡು ಶಿಲಾ ಶಾಸನಗಳು ನೆರವಾಗುತ್ತವೆ. ಇವೆರಡೂ ಶಾಸನಗಳು ವಿಜಯನಗರದ ಸಂಗಮರ ಕಾಲಕ್ಕೆ ಸೇರಿದ್ದು, ಆ ಕಾಲವು ಸಾಂಸ್ಕೃತಿಕವಾಗಿ ಹಲವು ಬದಲಾವಣೆಗಳನ್ನು ಕಂಡ ಕಾಲ. ಪ್ರಸ್ತಾಪಿಸಲಾದ ಎರಡೂ ಶಾಸನಗಳಲ್ಲಿ ತುಲಾಪುರುಷಾದಿ ಮಹಾದಾನ ವ್ರತ ದೀಕ್ಷಿತರ ಉಲ್ಲೇಖವಿದೆ.[20] ಆ ಹೊತ್ತಿಗೆ ತುಲಾಪುರುಷ, ಹಿರಣ್ಯಗರ್ಭ, ಗೋಸಹಸ್ರ ಇತ್ಯಾದಿ ಮಹಾದಾನಗಳ ನೀಡಿಕೆಯಲ್ಲಿ ಒಂದು ನಿಶ್ಚಿತ ಕ್ರಮ ರೂಪುಗೊಂಡಿತ್ತು ಎಂದು ತಿಳಿಯಬಹುದಾಗಿದೆ.

ಹೊಯ್ಸಳ ವೀರನರಸಿಂಹನ ಕಾಲಕ್ಕೆ ತುಲಾಪುರುಷ, ಗೋಸಹಸ್ರ, ಹೇಮಾಶ್ವ, ಹೇಮಗರ್ಭ ಇತ್ಯಾದಿ ಮಹಾದಾನಗಳು ಪಡಿಯಚ್ಚಿನಂತೆ ಮುಂದುವರಿದಿರುವಂತೆ ಕಾಣುತ್ತದೆ. ಶಾಸನಗಳಲ್ಲಿ ದಾಖಲಿತವಾಗುವವಂತೂ ಅವು ಪಡಿಯಚ್ಚೇ ಎನಿಸುತ್ತದೆ. ಕ್ರಿ.ಶ. ೧೪೯೩ರ ಕೈಗೋನಹಳ್ಳಿಯ ತಾಮ್ರಶಾಸನವೊಂದರ ಪ್ರಕಾರ 'ಬ್ರಹ್ಮಾಂಡಂ ವಿಶ್ವಚಕ್ರಂ ಘಟಮುದಿತಮಹಾಭೂತಕಂ ರತ್ನದೇನುಂ ಸಪ್ತಾಂಬೋಧಿಂ ಚ ಕಲ್ಪಕ್ಷಿತಿರುಹಲತಿಕೇ ಕಾಂಚನೀಂ ಕಾಮಧೇನುಂ| ಸ್ವರ್ಣಕ್ಷ್ಮಾಂ ಯೋ ಹಿರಣ್ಯಾಶ್ವ ರಥಮಪಿ ತುಲಾಪೂರುಷಂ ಗೋಸಹಸ್ರಂ ಹೇಮ್ಮಾಶ್ವಂ ಹೇಮಗರ್ಭಂ ಕನಕಕರಿರಥಂ ಪಂಚಲಾಂಗಲ್ಯತಾನೀತ್ |' ಎಂಬ ಉಲೇಖವು [21] ಮುಂದುವರಿದುಕೊಂಡೇ ಬಂದಿದೆ. ಕೇವಲ ತಾಮ್ರಶಾಸನಗಳಲ್ಲಿ ಮಾತ್ರವಲ್ಲದೆ ಶಿಲಾಶಾಸನಗಳಲ್ಲೂ ಈ ಏಕತಾನದ ಉಲ್ಲೇಖ ಪುನರುಕ್ತಿಯಾಗುತ್ತದೆ.

ವಿಜಯನಗರದಲ್ಲಿ ತುಳುವ ವಂಶದ ಆಳ್ವಿಕೆಯ ಕಾಲದಲ್ಲಿ ಪ್ರತಿಯೊಂದು ಆಚರಣೆಗೂ ಒಂದು ಸಂಪ್ರದಾಯದ ಚೌಕಟ್ಟು ಲಭಿಸಿರುವಂತೆ ಕಾಣುತ್ತದೆ. ಹಂಪಿಯ

ವಿರೂಪಾಕ್ಷ ದೇವಾಲಯದ ಆವರಣದೊಳಗಿರುವ ಶಾಸನದಲ್ಲೂ ಈ ಮೇಲೆ ಉಲ್ಲೇಖಿತವಾದ ಪದ್ಯವೇ ಇದ್ದು, ಅದು ಕೃಷ್ಣದೇವರಾಯನ ಆಳ್ವಿಕೆಯ ಕಾಲಕ್ಕೆ ಸೇರುತ್ತದೆ. [22] ಶ್ರೀಕೃಷ್ಣದೇವರಾಯನ ಮತ್ತು ಅವನ ತಂದೆ ನರಸನಾಯಕ ಇಬ್ಬರ ಉಲ್ಲೇಖವೂ ಇರುವ ನಂಜನಗೂಡಿನ ತಾಮ್ರಶಾಸನದಲ್ಲಿ ಕ್ರಮವಾಗಿ ಕ್ರಿ.ಶ.೧೪೯೮ ಮತ್ತು ಕ್ರಿ.ಶ.೧೫೧೩ ಎರಡೂ ಕಾಲಗಳು ದಾಖಲಾಗಿವೆ. ಇಲ್ಲಿಯೂ ಈ ಮೇಲೆ ಪ್ರಸ್ತಾಪಿಸಲಾದ ಪದ್ಯವಲ್ಲದೆ, ಆರಂಭದಲ್ಲಿ 'ನಾನಾದಾನಾನ್ಯಕಾರ್ಷೀತ್ಕನಕ ಸದಸಿಯಃ ಶ್ರೀ ವಿರೂಪಾಕ್ಷ ದೇವಸ್ಥಾನೇ ಶ್ರೀ ಕಾಳಹಸ್ತೀ ಶಿತುರಪಿ ನಗರೇ ವೆಂಕಟಾದ್ರೌ ಚ ಕಾಂಚ್ಯಾಂ ಶ್ರೀ ಶೈಲೇ ಶೋಣಸ್ಥಲೇ ಮಹತಿ ಹರಿಹರಹೋಬಲೇ ಸಂಗಮೇ ಚ ಶ್ರೀರಂಗೇ ಕುಂಭಕೋಣೆ ಹತ ತಮಸಿ ಮಹಾನಂದಿ ತೀರ್ಥೇ ನಿವೃತ್ತೈ|' ಎಂಬ ಪದ್ಯ ಸೇರಿದೆ. [23] ಮಹಾದಾನಗಳನ್ನು ಪವಿತ್ರ ತೀರ್ಥ ಕ್ಷೇತ್ರಗಳಲ್ಲಿ ನೀಡುವ ಪದ್ಧತಿ ಆ ಹೊತ್ತಿಗೆ ಪ್ರಚಲಿತಗೊಂಡಿರುವ ಸಾಧ್ಯತೆಗಳಿವೆ. ಪವಿತ್ರ ತೀರ್ಥಕ್ಷೇತ್ರಗಳಲ್ಲಿ ಸತ್ಪಾತ್ರರು ಅಧಿಕ ಸಂಖ್ಯೆಯಲ್ಲಿ ದೊರೆಯಬಹುದು ಎಂಬ ನಿರೀಕ್ಷೆಯಿಂದ ಈ ಕ್ರಮ ಜಾರಿಗೆ ಬಂದಿರುವ ಸಾಧ್ಯತೆಗಳಿವೆ. ತನ್ನ ತೊಂದರೆಗಳು ನಿವಾರಣೆಯಾಗಿ, ಎಲ್ಲ ಶುಭಗಳು ಲಭಿಸಲಿ ಎಂದು ದಾನಿಯು, ಶಾಸ್ತ್ರಗಳಲ್ಲಿ ನಿರೂಪಿತವಾಗಿರುವಂತೆ, ಸಂಬಂಧಿಸಿದ ಎಲ್ಲ ನೆರವಿನ ಸಹಿತ ಕಾಂಚಿ, ಶ್ರೀ ಶೈಲ, ಶೋಣಾಚಲ, ಕನಕಸಭಾ, ವೇಂಕಟಾದ್ರಿ, ಮತ್ತು ಇತರ ಪವಿತ್ರ ಕ್ಷೇತ್ರಗಳಲ್ಲಿ ದೇವಾಲಯಗಳಿಗೆ ಕನಕ ತುಲಾ ಪುರುಷ ಇತ್ಯಾದಿ ದಾನಗಳನ್ನು ನೀಡುತ್ತಿದ್ದನು ಎಂದು 'ತುಲಾಪುರುಷ'ಕ್ಕೆ ಸಂಬಂಧಿಸಿದ ವಿಜಯನಗರದ ಅರಸರ ಬಹುತೇಕ ಎಲ್ಲ ಶಾಸನಗಳಲ್ಲೂ ಕಾಣಬಹುದಾಗಿದೆ. ಈ ವಿಷಯವನ್ನು ಇನ್ನೂ ಕೆಲವು ಶಾಸನಗಳು ದೃಢಪಡಿಸಿವೆ. ಶ್ರೀಕೃಷ್ಣದೇವರಾಯನ ಮಂಡ್ಯದ [24] ಮತ್ತು ಶ್ರೀರಂಗಪಟ್ಟಣದ ತಾಮ್ರ ಶಾಸನಗಳು [25] 'ದೇವಸ್ಥಾನೇಷು ತೀರ್ಥೇಷ್ವಪಿ ಕನಕತುಲಾಪೂರಾಷಾದೀನಿದಾನಾನ್ಯೇವೋಪದಾನ್ಯೈರಪಿಸಮಮಖಿಲೈ ರಾಗಮೋಕ್ತಾನಿ ತಾನಿ' ಎಂದು ಸ್ಪಷ್ಟಪಡಿಸಿದೆ.

ತಮಿಳುನಾಡಿನ ಕಾಂಜೀವರಂ ಜಿಲ್ಲೆ ಕಾಂಜೀವರಂನ ಅರುಳಾಳ್ ಪೆರುಮಾಳ್ ದೇವಾಲಯ, ಕ್ರಿ.ಶ. ೧೫೩೨ರ ಒಂದು ಶಾಸನವು, ಅಚ್ಯುತರಾಯನ ಆಳ್ವಿಕೆಯ ಕಾಲಕ್ಕೆ ಸೇರಿದ್ದು, ಅದರಲ್ಲಿ 'ತುಲಾಪುರುಷ ಮಹಾದಾನಕ್ಕೆ ಹದಿವಾಸವನೂ ಮಾಡ ಚಿತ್ರೇಸಿ ೧೨ ಆದಲೂ ಮುತ್ತಿನ ತುಲಾಪುರುಷ (ವನೂ) ವರದಾದೇವಿ ಅಂಮನವರು ಕೊಮಾರ ವೆಂಕಟಾದ್ರಿ ಚಿಕ್ಕವೊಡೆಯರೂ ತೊಲಾಪುರುಷ ಮಹಾಭೂತ ಘಟದಾನ ಸಹಸ್ರ ಗೋದಾನ ನಿತ್ಯದಾನ ಮುಂತಾದ ದಾನಗಳನೂ ಮಾಡಿ'ದ್ದನ್ನು ದಾಖಲಿಸಲಾಗಿದೆ.[26] ಮಹಾದಾನಕ್ಕೆ ಮೊದಲ ಹದಿವಾಸ ಮಾಡಬೇಕಾಗಿತ್ತು. ಈ ಹದಿವಾಸವು ಬಹುಶಃ ಪ್ರತ್ಯೇಕ ವಾಸವನ್ನು ಸೂಚಿಸುತ್ತಿದೆ ಎಂದು ಭಾವಿಸಲಾಗಿದೆ.

ಮೈಸೂರು ಒಡೆಯರ ಆಳ್ವಿಕೆಯ ಕಾಲದಲ್ಲೂ ತುಲಾಪುರುಷ ದಾನವು ಕಿಂಚಿತ್ತಾದರೂ ಮುಂದುವರಿದಿರುವ ಸೂಚನೆಗಳಿವೆ. ಮೈಸೂರಿನ ಒಂದು ತಾಮ್ರಶಾಸನವು ದೇವರಾಜ ಒಡೆಯರ ಆಳ್ವಿಕೆಯ ಕಾಲಕ್ಕೆ ಸೇರಿದ್ದು. ಅದು '... ತೇನ ಸ್ವರ್ಣತುಲಾದಾನ ಕಾಲೇ ಜ್ಯೋತಿರ್ವಿದೇ ಮುದಾ ಲಖಪ್ಪ ಶರ್ಮಣೇ ದತ್ತ ಲಕ್ಕೂರ ಗ್ರಾಮ' ಎಂಬ ವಿಷಯವನ್ನು ತಿಳಿಸಿವೆ. ಪ್ರಸ್ತಾಪಿತವಾಗಿರುವುದು ಸ್ವರ್ಣತುಲಾದಾನ. ಇಲ್ಲಿ ದಾನವಾಗಿ ನೀಡಿರುವುದು ಲಕ್ಕೂರು ಎಂಬ ಗ್ರಾಮವನ್ನು. [27] ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲೂ ತುಲಾಪುರುಷ, ಹಿರಣ್ಯಗರ್ಭ, ಗೋಸಹಸ್ರ, ವಸುಂಧರಾ, ಅಗ್ರಹಾರ ಇತ್ಯಾದಿಗಳನ್ನು ಮಹಾದಾನವಾಗಿ ನೀಡಲಾಗುತ್ತಿತ್ತು. [28] ಆಳುವವರಲ್ಲದೆ ಇತರರೂ ತುಲಾಪುರುಷ ಇತ್ಯಾದಿ ಮಹಾದಾನಗಳನ್ನು ನೀಡುತ್ತಿದ್ದರು. ಈ ಮಾತಿಗೆ ಉದಾಹರಣೆಯಾಗಿ ಸೋಸಲೆಯ ಒಂದು ತಾಮ್ರಶಾಸನವನ್ನು ಗಮನಿಸಬಹುದು. ವಿಜಯ ರಘುನಾಥ ಸೇತುಪತಿ ಕಾಟ್ಟದೇವರ್ ಎನ್ನುವ ವ್ಯಕ್ತಿಯು 'ತುಲಾಪುರುಷಾದಿ ಶೋಡಶ ಮಗಾದಾನ ದೀಕ್ಷಾ ದುರಂಧರ' ಎಂದು ಶಾಸನವು ದಾಖಲಿಸಿವೆ.

ತುಲಾಪುರುಷ ದಾನ ಎಂದರೆ ಪುರುಷನ ತೂಕದ ಚಿನ್ನದ ದಾನ. ಇದು ಒಪ್ಪಿತವಾದ ಅರ್ಥ. ಪ್ರತಿ ತುಲಾಭಾರ/ ತುಲಾಪುರುಷ ದಾನದ ಸಂದರ್ಭದಲ್ಲೂ ದಾನ ನೀಡುತ್ತಿರುವ ಪುರುಷನ ತೂಕದಷ್ಟು ಚಿನ್ನವನ್ನು ದಾನವಾಗಿ ನೀಡುವುದು ಸಾಧ್ಯವೆ? ಹಾಗಾದರೆ, ದೇವಾಲಯಗಳಿಗೆ ಸೇರ್ಪಡೆಯಾದ ಚಿನ್ನ ಮುಂದೆ ಹೇಗೆ ವಿನಿಯೋಗ ಆಗುತ್ತಿತ್ತು. ತುಲಾಪುರುಷನ ಸಂದರ್ಭದಲ್ಲಿ ದೇವಾಲಯಗಳಿಗೆ ಸೇರಿದ ಚಿನ್ನವು ಅಲ್ಲೇ ಶೇಖರಗೊಂಡಿರುತ್ತದೆ ಎಂಬ ಕಾರಣದಿಂದ ದೇವಾಲಯಗಳನ್ನು ನಿಧಿಯ ಆಸೆಗೆ ಹಾಳು ಮಾಡಲಾಗುತ್ತದೆಯೇ? ಪುರುಷನ ತೂಕದಷ್ಟು ಚಿನ್ನವನ್ನು ದಾನವಾಗಿ ಕೊಡುವಷ್ಟು ಚಿನ್ನದ ಸಂಗ್ರಹ ಯಾವುದೇ ರಾಜ್ಯದಲ್ಲಿ ಆಗ ಇತ್ತೆ? ಇತ್ಯಾದಿ ಅನೇಕ ಪ್ರಶ್ನೆಗಳು ಎದುರಾಗುವುದು ಸಹಜ. ಹೀಗೆ ಹಲವು ಪ್ರಶ್ನೆಗಳು ಯಾರನ್ನಾದರೂ ಕಾಡಬಹುದು. ಇದಕ್ಕೆ ಸೂಕ್ತ ಉತ್ತರವನ್ನು ಕಡೂರಿನ ಒಂದು ಶಾಸನದ ಮೂಲಕವೇ ತಿಳಿಯಬಹುದು. ಎರಡು ದಿನಾಂಕಗಳನ್ನೊಳಗೊಂಡ ಆ ಶಾಸನದಲ್ಲಿ ವಿಜಯನಗರದ ದೇವರಾಯನ ಕಾಲಲ್ಲಿ ಪಂಪಾ ಕ್ಷೇತ್ರದ ವಿರೂಪಾಕ್ಷನ ಸನ್ನಿಧಿಯಲ್ಲಿ ಸಾವಯನ ಹೋಬಳಿಯ ಹಿರಿಯ ಬಾಸೂರು ಮತ್ತು ಚಿಕ್ಕ ಬಾಸೂರುಗಳನ್ನು ಅಭಿನವ ಪ್ರತಾಪ ದೇವರಾಯಪುರ ಎಂದು ಪುನರ್ನಾಮಕರಣ ಮಾಡಿ, ತುಲಾಭಾರ ಮತ್ತು ಬ್ರಹ್ಮಾಂಡ ದಾನಗಳನ್ನು ನೀಡಿದ ಉಲ್ಲೇಖ ಇದೆ. 'ಪ್ರಾದಿತ ದೇವರಾಯ ನೃಪತಿಃ ಶ್ಲಾಘ್ಯಂ ತುಲಾಪುರುಷಂ' ಎಂಬ ಮಾತುಗಳಿಂದ ದೇವರಾಯನ ಬಗ್ಗೆ ತಿಳಿಸುವ ಶಾಸನವು ಮುಂದುವರಿದು, 'ತೊಲಾಭಾರ ಮಹಾದಾನ ಬ್ರಹ್ಮಾಂಡ ಮಹಾದಾನದ ಅಗ್ರಹಾರದ ಮಹಾಜನಂಗಳಿಗೆ... ತೊಲಾಭಾರ ಮಹಾದಾನದಲು' ಎಂದು ಉಲ್ಲೇಖಿಸಿ, 'ತೊಲಾಬಾರ ಮಹಾದಾನ ಬ್ರಹ್ಮಾಂಡ

ಮಹಾದಾನ ತದಂಗ ಭೂದಾನವಾಗಿ...' ಎಂದು ತೊಲಾಭಾರ ಮತ್ತು ಬ್ರಹ್ಮಾಂಡ ದಾನಗಳನ್ನು ಭೂದಾನದ ರೂಪದಲ್ಲಿ ನೀಡಬಹುದು ಎಂದು ಸ್ಪಷ್ಟಪಡಿಸಿದೆ[29].

ಈಗಾಗಲೇ ಉಲ್ಲೇಖಿಸಲಾಗಿರುವ ವೆಟ್ಟಂ ಮಣಿಯವರ ಕೃತಿಯಲ್ಲಿ ಮೇರು ದಾನದ ಮಿತಿಗಳನ್ನು ಸೂಚಿಸಲಾಗಿದೆ. ಆ ಮಿತಿಗಳು ಈ ಕೆಳಗಿನಂತಿವೆ.

ಕ್ರ.ಸಂ. ದಾನ	ಅತ್ಯುತ್ತಮ	ಉತ್ತಮ	ಕೀಳು
೧. ಧಾನ್ಯಮೇರು	೧೦೦೦ ದ್ರೋಣಗಳು	೫೦೦ ದ್ರೋಣಗಳು	೨೫೦ ದ್ರೋಣಗಳು
೨. ಲವಣಮೇರು	೧೬ ದ್ರೋಣಗಳು	೮ ದ್ರೋಣಗಳು	೪ ದ್ರೋಣಗಳು
೩. ಗುಡಮೇರು	೧೦ ಭಾರಗಳು	೫ ಭಾರಗಳು	೨.೫ ಭಾರಗಳು
೪. ಸ್ವರ್ಣಮೇರು	೧೦೦೦ ಪಲಗಳು	೫೦೦ ಪಲಗಳು	೨೫೦ ಪಲಗಳು
೫. ತಿಲಮೇರು	೧೦ ದ್ರೋಣಗಳು	೫ ದ್ರೋಣಗಳು	೨.೫ ದ್ರೋಣಗಳು
೬. ಕಾರ್ಪಸಮೇರು	೨೦ ಭಾರಗಳು	೧೦ ಭಾರಗಳು	೫ ಬಾರಗಳು
೭. ಘೃತಮೇರು	೨೦ ಹೂಜಿಗಳು	೧೦ ಹೂಜಿಗಳು	೫ ಹೂಜಿಗಳು
೮. ರಜತಮೇರು	೧೦೦೦ ಪಲಗಳು	೫೦೦ ಪಲಗಳು	೨೫೦ ಪಲಗಳು
೯. ಶರ್ಕರಮೇರು	೮ ಭಾರಗಳು	೪ ಭಾರಗಳು	೨ ಭಾರಗಳು

ಮೇರುದಾನಗಳಲ್ಲಿ ದಾನದ ಗರಿಷ್ಠ ಮತ್ತು ಕನಿಷ್ಠ ಪ್ರಮಾಣವನ್ನು ಆಧರಿಸಿ, ಅದರ ಮಟ್ಟವನ್ನು ಅಳೆಯಲಾಗುತ್ತದೆ. ಹಾಗೆಯೇ ಮಹಾದಾನಗಳನ್ನೂ ದಾನದ ಪ್ರಮಾಣವನ್ನು ಪರಿಗಣಿಸಿ ವರ್ಗೀಕರಿಸುವ ಸಾಧ್ಯತೆಗಳಿವೆ.

ತುಲಾಭಾರ / ತುಲಾಪುರುಷ ಮಹಾದಾನವು ಪುರುಷನ ತೂಕಕ್ಕೆ ಸಮನಾದ ಚಿನ್ನದ ಬೆಲೆಯನ್ನು ನಿರ್ಧರಿಸಿ, ಚಿನ್ನದ ಬದಲಿಗೆ ವಸ್ತು ರೂಪದಲ್ಲೋ, ನಗದು ರೂಪದಲ್ಲೋ ಕೊಡುವ ದಾನ ಎಂದು ಸ್ವೀಕರಿಸಬಹುದು. ಇದಕ್ಕೆ ಮೇರು ಸ್ವರೂಪದ ಮಿತಿಗಳೂ ಇವೆ.

ಬ್ರಹ್ಮಾಂಡ, ವಿಶ್ವಚಕ್ರ, ರತ್ನಧೇನು, ರತ್ನಗರ್ಭಾ, ಕಲ್ಪವೃಕ್ಷಿ, ಕಾಂಚನೀಂ ಕಾಮಧೇನುಮಂ, ಸ್ವರ್ಣಕ್ಷ್ಮಾಪೋ, ಹಿರಣ್ಯಾಶ್ವರಥ, ತುಲಾಪುರುಷ, ಗೋಸಹಸ್ರ, ಹೇಮಾಶ್ವ, ಹೇಮಗರ್ಭ, ಕನಕಕರಿರಥಾ, ಪಂಚಲಾಂಗಲ್ಯ - ಇವು ಕ್ರಮವಾಗಿ ಚಿನ್ನದ ಮೊಟ್ಟೆ, ಚಿನ್ನದ ಚಕ್ರ, ಚಿನ್ನದ ಬಿಂದಿಗೆ, ಆಭರಣ ಸಹಿತ ಹಸು, ಚಿನ್ನದ ಏಳು ಸಮುದ್ರಗಳು, ಚಿನ್ನದ ಕಲ್ಪವೃಕ್ಷ, ಹೆಚ್ಚಿನ ಸಂಖ್ಯೆಯಲ್ಲಿ ಚಿನ್ನದ ಹಸುಗಳು, ಚಿನ್ನದ ಗೋಳ (ಭೂಮಿ), ಚಿನ್ನದಿಂದ ಮಾಡಿದ ಕುದುರೆ ಮತ್ತು ಸವಾರ, ಪುರುಷನ ತೂಕದ ಚಿನ್ನ ಒಂದು ಸಾವಿರ ಹಸುಗಳು, ಚಿನ್ನದ ಬ್ರಹ್ಮ, ಚಿನ್ನದ ಆನೆ ಮತ್ತು ರಥ ಮತ್ತು ಐದು ನೇಗಿಲುಗಳು - ಎಂದು ತಿಳಿಸಲಾಗಿದೆ. ಪ್ರಸ್ತಾಪಿಸಲಾದ ಎಲ್ಲ ವಸ್ತುಗಳೂ ಚಿನ್ನದಿಂದ ಮಾಡಲಾದವು. ಹೆಚ್ಚು ಸಂಖ್ಯೆಯ ದಾನಗಳಿರುವುದರಿಂದ ಮಾತ್ರ ಈ

ದಾನ ನೀಡಿಕೆಯ ಪ್ರಕ್ರಿಯೆಯಲ್ಲಿ ವಿಶೇಷವಾದ ಕ್ರಮ ಇರುವುದರಿಂದ ಈ ದಾನವನ್ನು ಮಹಾದಾನ ಎಂದು ಕರೆಯುವುದರಲ್ಲಿ ಅರ್ಥವಿದೆ. ಸಾಂಕೇತಿಕವಾಗಿ ಈ ಎಲ್ಲ ದಾನಗಳೂ ಚಿನ್ನದ ರೂಪದಲ್ಲಿ ಇರಬೇಕಾದರೂ., ಆಯಾ ಕಾಲದ ಚಿನ್ನದ ಬೆಲೆಗೆ ಆಯಾತೂಕವನ್ನು ಪರಿವರ್ತಿಸಿ ಭೂಮಿ / ಹಣದ ರೂಪದಲ್ಲಿ ದೇವಸ್ಥಾನಕ್ಕೆ ನೀಡಲಾಗುತ್ತಿತ್ತು. ಗಮನಿಸಬೇಕಾದ ಮುಖ್ಯ ಅಂಶವೆಂದರೆ ಇದನ್ನು ಯಾವುದೇ ಒಬ್ಬ ವ್ಯಕ್ತಿಗೆ ನೀಡಿದ ಉದಾಹರಣೆಗಳಿಲ್ಲ. ತುಲಾಪುರುಷ, ಬ್ರಹ್ಮಾಂಡ ಇತ್ಯಾದಿ ಮಹಾದಾನಗಳ ಕ್ರಮಗಳನ್ನು ಅರಿತವರು ದಾನ ಸಂದರ್ಭದ ದೀಕ್ಷಿತರಾಗಿರುತ್ತಿದ್ದರು. ಪಾಂಡವಪುರದ ಎರಡು ಶಾಸನಗಳು ಈ ಬಗ್ಗೆ ಸುಳಿವು ನೀಡುತ್ತವೆ.

ಈಗಿನ ತುಲಾಭಾರ ಒಂದು ಹರಕೆ. ಶ್ರೀಮಂತರಿಗೆ ಸಂಬಂಧಿಸಿದ ತುಲಾಭಾರವಾದರೆ ಲೋಹದ ನಾಣ್ಯಗಳಲ್ಲಿ ತೂಗಿ ಬಂದ ಹಣವನ್ನು ದೇವಸ್ಥಾನಕ್ಕೆ ನೀಡಲಾಗುವುದು. ಮುಂದೆ ದೇವಸ್ಥಾನವು ತನ್ನ ನಿಬಂಧನೆಗಳಿಗೆ ತಕ್ಕಂತೆ ಅದರ ವಿನಿಯೋಗ ಮಾಡಬಹುದು. ಸಾಮಾನ್ಯವಾಗಿ ಚಿಕ್ಕ ಮಕ್ಕಳಿಗೆ ಹೆಚ್ಚಾಗಿ ತುಲಾಭಾರ ಮಾಡಲಾಗುತ್ತದೆ.

ಆಧಾರ ಗ್ರಂಥಗಳು

1. ಕನ್ನಡ ರತ್ನಕೋಶ, ಕ.ಸಾ.ಪು. ಬೆಂಗಳೂರು, 2001, ಪು. 25
2. ಸಂಕ್ಷಿಪ್ತ ಕನ್ನಡ ನಿಘಂಟು, ಕ.ಸಾ.ಪ., ಬೆಂಗಳೂರು, 2001, ಪು. 556
3. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು, ಕ.ಸಾ.ಪ, ಬೆಂಗಳೂರು, 1979, ಪು. 3559
4. ಬೆನಗಲ್ ರಾಮರಾವ್, ಪಾನ್ಯಂ ಸುಂದರ ಶಾಸ್ತ್ರಿ, ಪುರಾಣನಾಮ ಚೂಡಾಮಣಿ, ಮೈಸೂರು, 1977, ಪು. 582
5. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು, ಕ.ಸಾ.ಪ., ಬೆಂಗಳೂರು 1995, ಪು. 8192
6. ವೆಟ್ಟಂ ಮಣಿ, ಪುರಾಣಿಕ್, ಎನ್ಸೈಕ್ಲೊಪೇಡಿಯಾ, ದೆಹಲಿ, 1993
7. D.C. Sircar, Indian Epigraphical Glossary, Varanasi, 1966, p. 345
8. ಪಂಪ, ಪಂಪ ಭಾರತಂ ಎಂಬ ವಿಕ್ರಮಾರ್ಜುನ ವಿಜಯಂ, ಮೈಸೂರು, 1977, ಪು. 396
9. ಡಾ. ಡಿ.ಎಲ್. ನರಸಿಂಹಾಚಾರ್, ಪಂಪ ಭಾರತ ದೀಪಿಕೆ, ಮೈಸೂರು 1976, ಪು. 561
10. T.V. Mahalingam, Inscriptions of the Pallavas 188, New Delhi , 1988, p 501

11. ಡಾ. ಎಂ. ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು. 1979, ಪು. 443
12. ಕ.ವಿ.ಶಾ.ಸಂ. 7 ಸಿಂಧನೂರು 23, ಕ್ರಿ.ಶ. 1105 ಮತ್ತು 1106
13. ಎ.ಕ. 9 ಬೇಲೂರು 340, ಕ್ರಿ.ಶ. 1140
14. ಎ.ಕ. 10 ಅರಸೀಕೆರೆ 244, ಕ್ರಿ.ಶ. 1136-37
15. ಎ.ಕ. 12 ತರೀಕೆರೆ 12, ಕ್ರಿ.ಶ. 1198
16. ಎ.ಕ. 10 ಅರಸೀಕೆರೆ 23, ಕ್ರಿ.ಶ. 1173
17. ಎ.ಕ. 12 ತರೀಕೆರೆ 18, ಕ್ರಿ.ಶ. 1184
18. ಎ.ಕ. 11 ಚಿಕ್ಕಮ 211, ಕ್ರಿ.ಶ. 1137
19. ಎ.ಕ. 5 ಮೈಸೂರು 225, ಕ್ರಿ.ಶ. 1497
20. ಎ.ಕೆ. 5 ಪಾಂಡವಪುರ 163 ಮತ್ತು 179, ಕ್ರಿ.ಶ. 1469 ಮತ್ತು 1458
21. ಎ.ಕ. 6 ಕೃರಾಪೇಟೆ 71, ಕ್ರಿ.ಶ 1463
22. ಕ.ವಿ.ಶಾ.ಸಂ. ಹಂಪಿ 34 ಮತ್ತು 51 ಕ್ರಿ.ಶ. 1510
23. ಎ.ಕ. 3 ನಂಜನಗೂಡು, 398 ಕ್ರಿ.ಶ. 1498 ಮತ್ತು 1513
24. ಎ.ಕ. ಮಂಡ್ಯ 7, ಕ್ರಿ.ಶ. 1516
25. ಎ.ಕ. 6 ಶ್ರೀರಂಗಪಟ್ಟಣ, 26, ಕ್ರಿ.ಶ. 1516
26. ಕ.ವಿ.ಶಾ.ಸಂ. 4 ಕಾಂಜೀವರಂ 16, ಕ್ರಿ.ಶ. 1532
27. ಎ.ಕ. 5 ಮೈಸೂರು 98, ಕ್ರಿ.ಶ. 1674
28. ಎ.ಕ. 5 ಮೈಸೂರು 26, ಕ್ರಿ.ಶ. 1860
29. ಎ.ಕ. 12 ಕಡೂರು 175, ಕ್ರಿ.ಶ. 1408 ಮತ್ತು 1409

೪೬. ಅನ್ನಮಾಚಾರ್ಯರು ಕಂಡ ವಿಜಯನಗರ

ಪ್ರೊ. ಆರ್. ಶೇಷಶಾಸ್ತ್ರಿ

ತೆಲುಗು ಸಂಕೀರ್ತನಾ ಸಾಹಿತ್ಯದಲ್ಲಿ ಅನ್ನಮಾಚಾರ್ಯರದು ಒಂದು ವಿಶೇಷವಾದ ಸ್ಥಾನ. ಅನ್ನಮಾಚಾರ್ಯರು ಸುಮಾರು ಮೂವತ್ತೆರಡು ಸಾವಿರಕ್ಕೂ ಮಿಗಿಲಾದ ಸಂಕೀರ್ತನ ಗಳನ್ನು ರಚಿಸಿದ್ದಾರೆ. ಅವರು ಅದಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಸಂಕೀರ್ತನ ಗಳನ್ನೂ ಬರೆದಿರಲೂಬಹುದು. ಇಂದು ನಮಗೆ ಉಪಲಬ್ಧವಿರುವ ತಾಮಪತ್ರಗಳಲ್ಲಿ ಸುಮಾರು ಮೂವತ್ತುಸಾವಿರ ಸಂಕೀರ್ತನಗಳಿವೆ. ಇವುಗಳನ್ನು ತಿರುಪತಿ ತಿರುಮಲ ದೇವಸ್ಥಾನ ದವರು ಪ್ರಕಟಿಸಿದ್ದಾರೆ. ಇಡೀ ಪ್ರಪಂಚದಲ್ಲಿಯೇ ಈ ರೀತಿ ಒಂದು ಕವಿಯ ಕೃತಿಗಳನ್ನು ತಾಮ್ರಪತ್ರಗಳ ಮೇಲೆ ಬರೆದಿರುವ ನಿದರ್ಶನ ಇದೊಂದೇ ಆಗಿದೆ. ಈ ಎಲ್ಲಾ ಸಂಕೀರ್ತನಗಳನ್ನೂ ಬಹುಶಃ ಅನ್ನಮಾಚಾರ್ಯರ ಕಾಲ ದಲ್ಲಿಯೇ ಅವರ ಮತ್ತು ಅವರ ಮಕ್ಕಳ ಸಮಕ್ಷಮದಲ್ಲಿಯೇ ತಯಾರು ಮಾಡಿ ರುವುದರಿಂದ, ಈ ಸಂಕೀರ್ತನ ಗಳಲ್ಲಿ ಪ್ರಕ್ಷಿಪ್ತಗಳು ಇಲ್ಲ. ಹಾಗೆಯೇ ಅಂದಿನ ರೀತಿಯ ಬರವಣಿಗೆಯ ಸಂಪ್ರದಾಯಕ್ಕೆ ಅನುಗುಣವಾದ ಸ್ಖಾಲಿತ್ಯಗಳಿವೆಯೇ ಹೊರತು ಇತರ ಸ್ಖಾಲಿತ್ಯಗಳು ತೀರಾ ಕಡಿಮೆಯೇ. ಹೀಗಾಗಿ ಅವರು ಬಹುಪಾಲು ಸಂಕೀರ್ತನ ವಾಙ್ಮಯ ಕವಿಯ ಪ್ರತಿಯೆಂದು ಭಾವಿಸಬಹುದಾಷ್ಟು ಅಧಿಕೃತವಾಗಿದೆ. ಈ ತಾಮ್ರಪತ್ರಗಳಲ್ಲಿ ಅನ್ನಮಾಚಾರ್ಯದ್ದಲ್ಲದೆ ಆತನ ಮಗ ಮತ್ತು ಆತನ ಮೊಮ್ಮಗನ ಸಂಕೀರ್ತನಗಳು ಸಹ ಇವೆ. ಅನ್ನಮಾಚಾರ್ಯರ ಸಂಕೀರ್ತನಗಳಲ್ಲಿ ಶ್ರೀವೇಂಕಟ, ಶ್ರೀ ವೆಂಕಟೇಶ, ತಿರುವೇಂಕಟಾದ್ರಿ ಎಂಬ ಮುದ್ರಿಕೆಗಳಿವೆ.

ಈ ಸಂದರ್ಭದಲ್ಲಿ ಅನ್ನಮಾಚಾರ್ಯರ ಕೀರ್ತನೆಗಳ ಬಗೆಗೆ ನನ್ನನ್ನು ಅಧ್ಯಯನ ದತ್ತ ಪ್ರೇರೇಪಿಸಿ, ಅನ್ನಮಾಚಾರ್ಯರು ಕಂಡ ವಿಜಯನಗರ ದೇವಾಲಯಗಳನ್ನು ಕುರಿತು ಅಧ್ಯಯನಕ್ಕೆ ತೊಡಗಿಸಿದ ಡಾ.ಎಸ್.ಎಸ್. ಶೆಟ್ಟರ್ ಅವರನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ನನ್ನ ಈ ಅಧ್ಯಯನಕ್ಕೆ ಅನ್ನಮಾಚಾರ್ಯರ ಕೃತಿಗಳಷ್ಟೇ ಮೂಲಸಾಮಗ್ರಿ. ಇದು ವರೆಗೆ ಅನ್ನಮಯ್ಯನ ಬಗ್ಗೆ ಬರೆದ ಕೃತಿಗಳಾವುವು ಅಲ್ಲ ಎಂದು ಸ್ಪಷ್ಟಪಡಿಸಿ ಮುಂದು ವರೆಯುತ್ತೇನೆ.

ಅನ್ನಮಯ್ಯನವರ ಸಂಕೀರ್ತನಗಳನ್ನು ನಾವು ಪರಿಶೀಲಿಸಿದಾಗ ಅವರು ಕೇವಲ ತಿರುಪತಿಯ ವೇಂಕಟೇಶ್ವರನನ್ನು ಮಾತ್ರವಲ್ಲದೆ ಕದರಿ ನೃಸಿಂಹ, ಅಹೋಬಲ ನೃಸಿಂಹ ಮುಂತಾದ ಹತ್ತು ಹಲವಾರು ಪುಣ್ಯಸ್ಥಳಗಳಲ್ಲಿನ ದೈವಗಳನ್ನು ಕುರಿತು ಸ್ತುತಿಸಿದ್ದಾರೆ ಎಂಬುದಕ್ಕೆ ನಾನು ಆಶ್ರಯಿಸಿರುವ ಅಂಶಗಳೆಂದರೆ, ಸಂಕೀರ್ತನೆಯಲ್ಲಿ 'ವಿಜಯನಗರ' ತುಂಗಭದ್ರಾನದಿ, ಮಾಲ್ಯವಂತ, ಮತಂಗ, ಭೂಪತಿ ಚೆರುವು ಮುಂತಾದ ಸೂಚನೆಗಳನ್ನು ಹಿಡಿದು ಅನ್ವೇಷಿಸಿದಾಗ ಹಲವಾರು ಅಂದರೆ ಅರವತ್ತಕ್ಕು ಮಿಗಿಲಾದ ಸಂಕೀರ್ತನೆಗಳು ದೊರೆತವು.

ಅನ್ನಮಾಚಾರ್ಯರು ಸ್ತುತಿಸಿರುವ ವಿಜಯನಗರದ ದೇವರುಗಳು

1. ವಿಠಲೇಶ್ವರದೇವಾಲಯ - ಇದನ್ನು ಈಗಾಗಲೆ ಹಲವಾರು ವಿದ್ವಾಂಸರು ಗುರುತಿಸಿದ್ದಾರೆ.

2. ಭೂಪತಿ ಚೆರುವು ಶ್ರೀವೇಂಕಟೇಶ್ವರ - ಭೂಪತಿ ಕೆರೆಯ ಮೇಲ್ಭಾಗದಲ್ಲಿ ನಿರ್ಮಿಸಲಾಗಿರುವ ಈಗ ಅಚ್ಯುತದೇವರಾಯ ದೇವಾಲಯವೆಂದು ಕರೆಯಲ್ಪಡುತ್ತಿರುವ ದೇವಾಲಯ.

3. ವುದ್ದಗಿರಿ ಕೃಷ್ಣ - ಶ್ರೀಕೃಷ್ಣದೇವರಾಯರು ಉದಯಗಿರಿಯನ್ನು ಜಯಿಸಿದ ಮೇಲೆ ನಿರ್ಮಿಸಿದ ಬಾಲಕೃಷ್ಣದೇವಾಲಯ

4. ಸುಗ್ರೀವ ನರಸಿಂಹ - ಇಂದು ನಾವು ಯಾವುದನ್ನು ಉಗ್ರನರಸಿಂಹನೆಂದು ಕರೆಯುತ್ತಿರುವೆವೊ ಅದು ಉಗ್ರನರಸಿಂಹನಲ್ಲ. ಸುಗ್ರೀವ ನರಸಿಂಹ. ಲಕ್ಷ್ಮೀ ಸಮೇತವಾದ ಲಕ್ಷ್ಮೀನರಸಿಂಹ. ಶಾಸನಗಳಲ್ಲಿ ಉಕ್ತವಾಗಿರುವ ನೃಸಿಂಹದೇವರ ಹೂವಿನ ತೋಟದ ಪ್ರಸ್ತಾಪವು ಅನ್ನಮಯ್ಯನ ಕೀರ್ತನ ಗಳಲ್ಲಿದೆ. ಸುಗ್ರೀವ - ಎಂದರೆ ಒಳ್ಳೆಯಕಂಠ ಎಂದು ಅರ್ಥ. ಸುಗ್ರೀವ > ಗ್ರೀವ > ಉಗ್ರ ಎಂದು ಅದು ಭಗ್ನಗೊಂಡ ನಂತರ ಆಗಿರಬೇಕು. ಹಂಪಿಯ ಈ ಸುಗ್ರೀವ ನರಸಿಂಹ ಯೋಗಪಟ್ಟಿಕೆ ಮತ್ತು ಲಕ್ಷ್ಮಿಯೊಂದಿಗೆ ಇರುವ ನರಸಿಂಹನ ಶಿಲ್ಪವನ್ನು ಹೋಲುವ ಹಲವಾರು ಪಂಚಲೋಹದ ವಿಗ್ರಹಗಳು ದೊರೆಯುತ್ತವೆ. ವಿದ್ವಾಂಸರು ಭಾವಿಸಿರುವಂತೆ ಅದು ಯೋಗ ಪಟ್ಟಿಕೆ ಅಲ್ಲ. ಶಿಲ್ಪ ವಿಗ್ರಹದ ಭದ್ರತೆಗಾಗಿ ಬಳಸಿರಬಹುದಾದ ಒಂದು ತಂತ್ರ.

5. ಪೆದ್ದ ಹನುಮಂತ ದೊಡ್ಡಹನುಮಂತ. - ಅಂದಿನಪೆದ್ದ ಅಂಗಡಿ ಬೀದಿ ಯಲ್ಲಿದ್ದ ಹನುಮಂತನೇ ಪೆದ್ದ ಹನುಮಂತ

   ಕಳಸಾಪುರದ ಹನುಮಂತ - ಇಂದಿನ ಬೇಚಿರಾಕ್ ಗ್ರಾಮವಾದ ಕಳಸಾ ಪುರದ ಅಂದರೆ ಉದ್ದಗಿರಿ ಹೆಬ್ಬಾಗಿಲಿನ ಬಳಿಯಿದ್ದು, ಉತ್ತರ ಭಾರತ ದವರ ಕೈಗೆ ಸಿಕ್ಕಿ ಬಿದ್ದು ಕೇಸರಿ ಬಣ್ಣ ಬಳೆದು ಕೊಂಡಿರುವ, ನಿಚ್ಚಣಿಕೆ ಹನುಮಂತ.

ಮೇಲಿನ ದೇವಾಲಯಗಳಲ್ಲದೆ ಪಟ್ಟಾಭಿರಾಮ, ಹಜಾರರಾಮ ದೇವಾಲಯ ಗಳನ್ನು ಪ್ರಸ್ತಾಪಮಾಡಿದಂತೆ ತೋರುವುದಾಗಲಿ ಖಚಿತವಾಗಿ ಅವು ಅವೇ ದೇವಾಲಯಗಳೆಂದು ಸದ್ಯಕ್ಕೆ ಹೇಳಲು ಸಾಧ್ಯವಿಲ್ಲ.

ಇನ್ನೊಂದು ವಿಷಯವನ್ನು ಹೇಳಬಯಸುತ್ತೇನೆ -ಅನ್ನಮಾಚಾರ್ಯರ ಒಂದು ಸಂಕೀರ್ತನೆಯಲ್ಲಿ, ಅದೂ ವಿಟ್ಟಲನನ್ನು ಕುರಿತ ಸಂಕೀರ್ತನೆಯಲ್ಲಿ.

'ಭಕ್ತಿತೋಡ ತನಮೀದ ಪಾಟಲುಪಾಡಿತೇನು
ಯಿತ್ತಲಮೋಮೈತಿರಿಗೆ ವಿಟ್ಟಲುಡು'

-ಅಂದರೆ ಭಕ್ತಿಯಿಂದಲಿ ತನ್ನನ್ನು (ಪ್ರೀತಿಯಿಂದ) ಸ್ತುತಿಸಲು ಹಿಮ್ಮೊಗನಾಗಿ ತಿರುಗಿನಿಂತ ವಿಟ್ಟಲನೇ ಎಂದು ಅರ್ಥ. ಇದು ಬಹುಶಃ ಕನಕನ ಕಿಂಡಿಯ ಪ್ರಸ್ತಾಪನೆಯೇ ಇರಬೇಕು. ಈ ರೀತಿ ದೈವ ಹಿಮ್ಮೊಗವಾಗಿನಿಂತ ಪ್ರಸಂಗ ಭಾರತೀಯ ಭಕ್ತಿ ಸಾಹಿತ್ಯ ದಲ್ಲಿ ಇನ್ನೊಂದಿಲ್ಲ.

ಇಲ್ಲಿ ನಮಗೆ ಎದುರಾಗುವ ಸಮಸ್ಯೆಯೆಂದರೆ, ತೆಲುಗು ವಿದ್ವಾಂಸರು ಅನ್ನಮಾ ಚಾರ್ಯರ ಕಾಲವನ್ನು ಕ್ರಿ.ಶ.೧೪೦೮ ರಿಂದ ೧೫೦೩ ಎಂಬುದಾಗಿ ತೀರ್ಮಾನಿಸಿದ್ದಾರೆ. ಅವರು ಕಾಲವನ್ನು ನಿರ್ದೇಶಿಸಲು ಆಧರಿಸಿರುವ ದಾಖಲೆಗಳು ಕಟ್ಟುಕಥೆಗಳೆ. ವಿಶೇಷವಾಗಿ ಚಿನ್ನನ್ನನು ಬರೆದ ಅನ್ನಮಾಚಾರ್ಯ ಚರಿತ್ರೆಯೆ ಆಗಿದೆ. ಆದರೆ ಮೇಲಿನ ಆಧಾರಗಳಿಂದ ಮತ್ತು ತಿರುಪತಿಯ ದೇವಾಲಯದ ಶಾಸನದ ಆಧಾರದಿಂದ ಅನ್ನಮಯ್ಯ ೧೫ನೇ ಶತಮಾನದ ಉತ್ತರಾರ್ಧದಲ್ಲಿ ಹುಟ್ಟಿ ಬಹುಶಃ ವಿಜಯನಗರ ಪತನವಾಗುವವರೆಗೆ ಜೀವಿಸಿದ್ದಿರಬೇಕೆಂದು ಹೇಳಬಹುದು. ಆತನ ಒಂದು ಸಂಕೀರ್ತನೆಯಲ್ಲಿ ಆರಾಜಕತೆಯ, ವಿಧ್ವಂಸದ ವರ್ಣನೆ ಇದೆ. ಅದು ಬಹುಶಃ ವಿಜಯನಗರದ ಪತನವನ್ನು ತಿಳಿಸು ತ್ತದೆಯೇನೋ.

ಒಟ್ಟಿನ ಮೇಲೆ ಅನ್ನಮಾಚಾರ್ಯರು ವಿಜಯನಗರದಲ್ಲಿ ತಮ್ಮ ಜೀವನದ ಬಹು ಭಾಗವನ್ನು ಕಳೆದಿರಬೇಕು. ಇದಕ್ಕೆ ಪೋಷಕವಾಗಿ ಅನ್ನಮಯ್ಯನ ಮಗ ತಮಗೆ ನೀಡಿದ ಕೆಲವು ಹಳ್ಳಿಗಳನ್ನು ವಿಟ್ಟಲನ ದೇವಾಲಯಕ್ಕೆ ದತ್ತಿಬಿಟ್ಟಿರುವ ಅಂಶವೇ ಹೇಳುತ್ತದೆ. ಅನ್ನಮಯ್ಯ ವಿಜಯನಗರದಲ್ಲಿದ್ದ ಎಂಬ ಅಂಶವನ್ನು ಸಾಬೀತು ಪಡಿಸುತ್ತದೆ.

೪೭. ಮುಮ್ಮಡಿ ವೆಂಕಟಪತಿದೇವರಾಯನ ಕಾಲದ ಸ್ಥಳೀಯ ಪ್ರಭುಗಳ ಪ್ರಭಾವ -'ಕೆಂಪರಾಯನ ಪದಗಳು' ಕೃತಿಯ ಹಿನ್ನೆಲೆಯಲ್ಲಿ ಒಂದು ವಿವೇಚನೆ

ಡಾ. ಪಿ.ವಿ.ಕೃಷ್ಣಮೂರ್ತಿ

'ಇಮ್ಮಡಿ ಕೆಂಪರಾಯನ ಪದಗಳು', 'ಇಮ್ಮಡಿ ತಮ್ಮರಾಯ ಕೆಂಪರಾಯನ ಪದಗಳು', 'ಕೆಂಪರಾಯನ ಜಯಸ್ತುತಿ'- ಇತ್ಯಾದಿ ಹೆಸರಿನ ಹಲವಾರು ಹಸ್ತಪ್ರತಿಗಳು, ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯ ಸಂಶೋಧನಾಲಯ ಹಾಗೂ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮತ್ತು ಮದ್ರಾಸಿನ ಪ್ರಾಚ್ಯ ವಿದ್ಯಾ ಹಸ್ತಪ್ರತಿ ಗ್ರಂಥಾಲಯ ಅವರು ಪ್ರಕಟಿಸಿರುವ ವರ್ಣನಾತ್ಮಕ ಹಸ್ತಪ್ರತಿ ಸೂಚಿಗಳಲ್ಲಿ ದಾಖಲಾಗಿವೆ.

ಇವುಗಳಲ್ಲಿ; ಮೈಸೂರು ವಿಶ್ವವಿದ್ಯಾನಿಲಯದ ಕೆ.ಬಿ. ೨೮೧ ಎಂಬ ಸಂಖ್ಯೆಯ ಹಸ್ತಪ್ರತಿಯ ಆಧಾರದ ಮೇಲೆ ಮಾನ್ಯ ಕರ್ಲಮಂಗಲಂ ಶ್ರೀಕಂಠಯ್ಯ ಅವರು 'ಗೌಡಕುಲ ವಿಭೂಷಣ ಕೆಂಪೇಗೌಡನ ಜಯಪ್ರಶಸ್ತಿ' (ಬೆಂಗಳೂರು 1961) ಎಂಬ ಹೆಸರಿನಲ್ಲಿ ಆ ಪದಗಳನ್ನು ಸಂಪಾದಿಸಿ ಪ್ರಕಟಿಸಿರುತ್ತಾರೆ. ೧೯ ಪದ್ಯಗಳಿಂದ ಕೂಡಿದ ಮೊದಲ ಭಾಗ ಹಾಗೂ ೩೯ ಪದ್ಯಗಳಿಂದ ಕೂಡಿದ ಎರಡನೆಯ ಭಾಗವು ಸೇರಿದರೆ ಮುದ್ರಣದ ಸು. ೧೯ ಪುಟಗಳ ವ್ಯಾಪ್ತಿಯನ್ನು ಮಾತ್ರ ಈ ಕೃತಿ ಪಡೆದಿದೆ. ಈ ಕೃತಿಗೆ ಶ್ರೀ ಕರ್ಲ ಮಂಗಲಂ ಅವರು ಸು. ೮೦ ಪುಟಗಳಷ್ಟು ದೀರ್ಘ ಮುನ್ನುಡಿಯನ್ನು ಬರೆದು ಅದರಲ್ಲಿ ಬೆಂಗಳೂರಿನ ಕೆಂಪೇಗೌಡನ ಇತಿಹಾಸವನ್ನು ಆ ಕಾಲಕ್ಕೆ ಲಭ್ಯವಾದ ಶಾಸನ, ಇತ್ಯಾದಿ ಆಕರಗಳಿಂದ ರಚಿಸಿ ಕೊಟ್ಟಿದ್ದಾರೆ. ಆದರೆ ಈ ಜಯಪ್ರಶಸ್ತಿ ಕೃತಿಯಲ್ಲಿ ಉಕ್ತವಾಗಿರುವ ವಿವರಗಳನ್ನು ಶ್ರೀಯುತರು ಸರಿಯಾಗಿ ಗ್ರಹಿಸಲು ಸಾಧ್ಯವಾಗದೆ ಹೋಗಿರುವ ಕಾರಣ ಆ ವಿವರಗಳು ಅವರ ಸುದೀರ್ಘ ಮುನ್ನುಡಿಯಲ್ಲಿ ಪ್ರಸ್ತಾಪ ವಾಗದೆ ಹೋಗಿದೆ ಎಂದು ಅನಿವಾರ್ಯವಾಗಿ ಹೇಳಬೇಕಾಗಿದೆ. ವಾಸ್ತವವಾಗಿ ಈ ಕೃತಿ ಕರ್ತೃ ಯಾರೆಂಬುದು ಖಚಿತವಿಲ್ಲ. ಆ ಬಗ್ಗೆ ಆರ್. ನರಸಿಂಹಚಾರ್ಯರು ತಮ್ಮ 'ಕವಿಚರಿತೆ' ಸಂಪುಟ -2 ರಲ್ಲಿ "ಕವಿಗಳು ಗೊತ್ತಿಲ್ಲದ ಕೆಲವು ಗ್ರಂಥಗಳು" ಎಂಬ ಶೀರ್ಷಿಕೆಯಡಿಯಲ್ಲಿ 'ಇಮ್ಮಡಿ ತಮ್ಮರಾಯ ಕೆಂಪರಾಯ ಪದಗಳು' ಎಂತಲೇ ಗುರುತಿಸಿರುತ್ತಾರೆ. ಆದರೆ ಈ ಕೃತಿಯಲ್ಲಿ 'ಗುರುನಂಜೇಶ'ನೆಂದು ಕೀರ್ತಿತನಾಗಿರುವ ಕೆಂಪೇಗೌಡನ ಗುರುವಾದ 'ಗುರುನಂಜೇಶ ನನ್ನೇ, ಕರ್ಲಮಂಗಲಂ ಅವರು ಕೃತಿಯ ಕವಿ 'ಸದ್ಗುರು ನಂಜೇಶ್ವರ'

ನೆಂದು ಪ್ರತಿಪಾದಿಸಿದ್ದಾರೆ. (ಆದರೆ ಆತ ಕೆಂಪೇಗೌಡನಿಗೆ ಗುರುವಿನ ಸ್ಥಾನದಲ್ಲಿದ್ದ ಬಗ್ಗೆ ಗುಮ್ಮಳಾಪುರದ ಶಾಸನ ತಿಳಿಸುತ್ತದೆ). ಅದನ್ನು ಅನುಸರಿಸಿ, ಮುಂದೆ ಪ್ರಕಟಿತವಾಗಿರುವ ಕೆಂಪೇಗೌಡನಿಗೆ ಸಂಬಂಧಿಸಿದ ಅನೇಕ ಲೇಖನ ಮತ್ತು ಕೃತಿಗಳಲ್ಲಿ 'ಗುರು ನಂಜೇಶ'ನನ್ನು ಕವಿಯೆಂದು ದಾಖಲಿಸುತ್ತಾ ಬಂದಿರುವುದು ಕಂಡು ಬರುತ್ತದೆ.* ಆಶ್ಚರ್ಯವೆಂದರೆ, ಆ ಕೃತಿಯ ಪದ್ಯಗಳಲ್ಲಿ ಅಡಕವಾಗಿರುವ ಚಾರಿತ್ರಿಕ ಘಟನೆಗಳ ಬಗ್ಗೆ ಎಲ್ಲರೂ ಮೌನವಹಿಸಿರುವುದು. ಈ ಕೃತಿಯ ಮೊದಲ ೧೯ ಪದ್ಯ ಗಳಲ್ಲಿ ಬಂದಿರುವ ವಿವರಗಳನ್ನು ಕುರಿತು - ಈ ಹಿಂದೆ, ನಾನು ಕರ್ನಾಟಕ ಇತಿಹಾಸ ಅಕಾಡೆಮಿಯ ಸಮ್ಮೇಳನವೊಂದರಲ್ಲಿ ಪ್ರಬಂಧವನ್ನು ಮಂಡಿಸಿದ್ದೆ. ಈ ಪ್ರಬಂಧ 'ಇತಿಹಾಸ ದರ್ಶನ' - ಸಂಪುಟ - ೪ (೧೯೮೯) ಪು. ೧೧೭ ರಲ್ಲಿಪ್ರಕಟವಾಗಿದೆ. ಪ್ರಸ್ತುತ ಇಲ್ಲಿ ಆ ಕೃತಿಯ ಎರಡನೇ ಭಾಗದ ೩೯ ಪದ್ಯಗಳಲ್ಲಿ ಪ್ರಸ್ತಾಪಿತವಾಗಿರುವ ಅರವೀಡು ವಂಶದ ಮುಮ್ಮಡಿ ವೆಂಕಟಪತಿದೇವರಾಜು ಮತ್ತು ಅವನ ಕಾಲದ ಸ್ಥಳೀಯ ಪ್ರಭುಗಳ ನೆಲೆ ಹಿನ್ನೆಲೆಗಳ ಸ್ಥೂಲ ಸ್ವರೂಪವನ್ನು ಅರಿಯುವ ಪ್ರಯತ್ನ ಇಲ್ಲಿ ಮಾಡಲಾಗಿದೆ. ಈ ಕೃತಿಯ ಮೊದಲ ಭಾಗದ ವಿವರಗಳು ಇಮ್ಮಡಿ ವೆಂಕಟಪತಿ ರಾಯನ ಕಾಲಕ್ಕೆ, ಅಂದರೆ ಕ್ರಿ.ಶ. ೧೬೧೨ಕ್ಕೆ ಸೇರಿದ್ದರೆ, ಎರಡನೇ ಭಾಗದ ವಿವರಗಳು ಕ್ರಿ.ಶ. ೧೬೩೫ಕ್ಕೆ ಸೇರಿದ್ದು ಮುಮ್ಮಡಿ ವೆಂಕಟಪತಿ ದೇವರಾಯನಿಗೆ ಸಾಮ್ರಾಜ್ಯದ ದೃಢ ಸಿಂಹಾಸನವನ್ನು ದೊರಕಿಸಿಕೊಡುವಲ್ಲಿ ಸ್ಥಳೀಯ ಪ್ರಭುಗಳು ವಹಿಸಿದ ಪಾತ್ರವನ್ನು ನಿರೂಪಿಸುವಂತಹದ್ದಾಗಿದೆ. ಈ ಎರಡೂ ಘಟನೆಗಳ ಮಧ್ಯೆ ೨೩ ವರ್ಷಗಳ ಅಂತರವಿರುವುದು ಗಮನಾರ್ಹ.

ಕರ್ನಾಟಕಾಧೀಶರಾದ ವಿಜಯನಗರ ಸಾಮ್ರಾಟರ ಚರಿತ್ರೆಯಲ್ಲಿ, ರಕ್ಕಸಗಿ ತಂಗಡಗಿ ಯುದ್ಧದ ಅಂತರದ ಘಟನೆಗಳಲ್ಲಿ, ಅರವೀಡು ವಂಶೀಯರ ಆಡಳಿತವು ಅನೇಕ ಏಳು - ಬೀಳುಗಳಿಂದ ಕೂಡಿರುವುದು ಸರಿಯಷ್ಟೆ. ಆಗ್ಗೆ ಪರಕೀಯರ ಆಕ್ರಮಣಶೀಲ ಚಟುವಟಿಕೆಗಳು ಆರಂಭಗೊಂಡದ್ದು - ಒಂದು ಕಡೆಯಾದರೆ, ಸಾಮ್ರಾಜ್ಯದ ಸಿಂಹಾಸನಕ್ಕಾಗಿ ಅಳಿಯ ರಾಮರಾಯನ ಸೋದರ ಸಂಬಂಧಿಗಳ ನಡುವೆ ತಲೆದೋರಿದ ಹೋರಾಟಗಳೂ ಪಿತೂರಿಗಳ ಪರಿಣಾಮವಾಗಿ ಆ ಸಾಮ್ರಾಜ್ಯ ದಲ್ಲೆಲ್ಲಾ ಅರಾಜಕತೆ ತಾಂಡವವಾಡುತ್ತಿತ್ತು. ಆ ಸಂದರ್ಭದ ಲಾಭವನ್ನು ಪಡೆದು ಕೊಂಡ ಮಾಂಡಲಿಕ, ಸಾಮಂತ ಹಾಗೂ ಅಮರನಾಯಕರೇ ಮೊದಲಾದ ಸ್ಥಳೀಯ ಪ್ರಭುಗಳು ಪ್ರಬಲರಾಗಿ ತಾವೇ ಸ್ವತಂತ್ರ ರಾಜರಂತೆ ವರ್ತಿಸತೊಡಗಿದರು. ಹೇಗೋ ಕ್ರಿ.ಶ. ೧೫೮೫ರಲ್ಲಿ ಪಟ್ಟಕ್ಕೆ ಬಂದ ಇಮ್ಮಡಿ ವೆಂಕಟಪತಿರಾಯನ ಆಳ್ವಿಕೆ ಕ್ರಿ.ಶ. ೧೬೧೪ ರವರೆಗೂ ನಡೆದು ಹಿಂದಿನ ವಿಜಯನಗರ ಸಾಮ್ರಾಜ್ಯದ ಗೌರವವನ್ನು ಮತ್ತೆ ನೆಲೆಗೊಳಿಸುವಲ್ಲಿ ಸ್ವಲ್ಪಮಟ್ಟಿಗೆ ಸಫಲವಾಗಿತ್ತು. ಆದರೆ ಆತನಿಗೆ ಆರು ಜನ ಮಡದಿಯರಿದ್ದರೂ ಸಂತಾನ

ಹೀನನಾಗಿದ್ದನು. ವೆಂಕಟಪತಿದೇವರಾಯನು ತನ್ನ ಅಂತಿನ ದಿನಗಳಲ್ಲಿ ತನ್ನ ಅಣ್ಣನ ಮಕ್ಕಳಲ್ಲಿ ಒಬ್ಬನಾದ ಶ್ರೀರಂಗರಾಯ ಎಂಬುವನಿಗೆ ಸಾಮ್ರಾಜ್ಯದ ಅಧಿಕಾರವನ್ನು ವಹಿಸಿದರು. ರಾಯನ ಮಡದಿಯರಲ್ಲಿ ಪ್ರಧಾನಳಾದ ಓಬಮಾಂಬೆ ಎಂಬುವಳು ಗೊಬ್ಬೂರಿ ಓಬಲರಾಯನ ಮಗಳು. ಆಕೆಯ ಸೋದರನೇ ಓಬಲರಾಯ ಅಥವಾ ಜಗರಾಯ. ಆತನು ರಾಜಕಾರ್ಯದಲ್ಲಿ ಬಹು ಪ್ರಭಾವಶಾಲಿ ಯಾಗಿ ನೆಲೆಗೊಂಡಿದ್ದನು. ಶ್ರೀರಂಗರಾಯನು ವಿಜಯನಗರ ಸಿಂಹಾಸನಕ್ಕೆ ಅಧಿಪತಿ ಯಾಗಿದ್ದು ಜಗದೇವರಾಯನಿಗೆ ಸಹ್ಯವಾಗಿರಲಿಲ್ಲ. ಹಾಗಾಗಿ ಆತ ತನ್ನ ತಮ್ಮನಾದ ಚಿನ್ನ ಓಬಲನ ಮೂಲಕ ಸಿಂಹಾಸನಸ್ಥನಾಗಿದ್ದ ಸಾಮ್ರಾಟ ಶ್ರೀರಂಗರಾಯನ ಇಡೀ ಕುಟುಂಬದ ಕೊಲೆಯನ್ನು ಮಾಡಿಸಿಬಿಟ್ಟನು. ಈ ಪೈಶಾಚಿಕ ಕೃತ್ಯದಿಂದ ಸಾಮ್ರಾಜ್ಯದ ಜನಮನಗಳು ತಲ್ಲಣಗೊಂಡವು. ಸಾಮ್ರಾಜ್ಯದ ಆಧಾರ ಸ್ತಂಭಗಳಾಗಿದ್ದ ಸ್ಥಳೀಯ ಪ್ರಭುಗಳು ಜಿಗುಪ್ಸೆಗೆ ಒಳಗಾದರು. ಆಗ ನೆಲ್ಲೂರು ಜಿಲ್ಲೆಯ ವೆಂಕಟಗಿರಿ ಸಂಸ್ಥಾನದ ನಾಯಕನಾದ ಏಚಮನಾಯಕ ಎಂಬ ನಿಷ್ಠಾವಂತ ವಿಜಯನಗರ ಸಾಮ್ರಾಜ್ಯದ ಸ್ಥಳೀಯ ಪ್ರಭುವಿನ ನೇತೃತ್ವದಲ್ಲಿ ಕ್ರಾಂತಿಯಾಗಿ ಜಗರಾಯನ ದವಡೆಯಿಂದ ಬಿಡಿಸ ತಂದಿದ್ದ ಶ್ರೀರಂಗರಾಯನ ನಡುವಿನ ಮಗನಾದ ರಾಮದೇವರಾಯನಿಗೆ ಕ್ರಿ.ಶ. ೧೬೧೭ರಲ್ಲಿ ವಿಜಯನಗರ ಸಾಮ್ರಾಜ್ಯದ ಪಟ್ಟಾಭಿಷೇಕವಾಯಿತು. ಮುಂದೆ ಏಚಮನಾಯಕನಂತಹ ನಿಷ್ಠಾವಂತರಾದ ಸ್ಥಳೀಯ ಪ್ರಭುಗಳ ನೆರವಿನೊಂದಿಗೆ ರಾಮದೇವರಾಯನ ಆಡಳಿತ ಸುಮಾರು ಕ್ರಿ.ಶ. ಸು. ೧೬೩೦ರ ವರೆಗೂ ನಿರಾತಂಕವಾಗಿ ನಡೆದಿರುವಂತೆ ತೋರುತ್ತದೆ. ಆದರೆ ಈ ರಾಮದೇವರಾಯನಿಗೂ ಮಕ್ಕಳಿರಲಿಲ್ಲ. ಮತ್ತೆ ವಿಜಯನಗರ ಸಾಮ್ರಾಜ್ಯದ ಸಿಂಹಾಸನಕ್ಕಾಗಿ ಸೋದರ ಸಂಬಂಧಿಗಳಲ್ಲಿ ಹಾಗೂ ಅವರಿವರ ಬೆಂಬಲಿಗರ ನಡುವೆ - ಹೋರಾಟಗಳು, ಪಿತೂರಿಗಳು ತಲೆಯೆತ್ತಿದ್ದವು. ಈ ಮಧ್ಯೆ ಸಾಮ್ರಾಟ ರಾಮದೇವರಾಯ, ತನ್ನ ವಂಶದ ರಾಜಬಂಧು ಗಳಲ್ಲಿ ಹಿರಿಯನಾದ ಹಾಗೂ ಅಳಿಯ ರಾಮರಾಯನ ಮೊಮ್ಮಗನೂ ಆಗಿದ್ದಂತಹ 'ವೆಂಕಟಪತಿದೇವರಾಯ' ಎಂಬುವವನ್ನು ತನ್ನ ಉತ್ತರಾಧಿಕಾರಿಯನ್ನಾಗಿ ಸಿಂಹಾಸನಕ್ಕೆ ಆಯ್ಕೆ ಮಾಡಿದನು. ಆ ವೇಳೆಗಾಗಲೇ ರಾಜಧಾನಿ 'ಪೆನುಗೊಂಡೆ'ಯ ಜೊತೆಗೆ ತಿರುಪತಿ ಸಮೀಪದ 'ಚಂದ್ರಗಿರಿ' ಮತ್ತು ಅದರ ದಕ್ಷಿಣದಲ್ಲಿರುವ 'ವೆಲ್ಲೂರು' ಎಂಬುವು ಕೂಡ ಸಾಮ್ರಾಜ್ಯದ ಉಪರಾಜಧಾನಿ ಗಳಾಗಿ ರೂಪುಗೊಂಡಿದ್ದವು. ಸಾಮ್ರಾಟರ ವಾಸ್ತವ್ಯ ಈ ಮೂರೂ ಸ್ಥಳಗಳಲ್ಲಿ ಹಂಚಿಹೋಗು ತ್ತಿತ್ತು. ಅಲ್ಲದೆ ಕ್ರಿ.ಶ. ೧೬೩೦ಕ್ಕೆ ಹಿಂದೆ ಮೂರು ವರ್ಷಗಳ ಕಾಲ ಭೀಕರವಾದ ಬರಗಾಲ ಬಂದು ಊರೂರುಗಳಲ್ಲೂ ಹೆಣಗಳು ಬಿದ್ದು ಹೋಗಿದ್ದವು. ಆ ಸಂದರ್ಭದ ದುರ್ಲಾಭ ವನ್ನು ಸಾಮ್ರಾಟನ ಆಂತರಿಕ ವಿರೋಧಿಗಳ ಹಾಗೂ ನೆರೆಹೊರೆಯ ಪ್ರಭುಗಳೂ ಪಡೆದುಕೊಂಡು ಪ್ರಬಲವಾಗ ತೊಡಗಿದರು. ಅಲ್ಲದೆ ಸಾಮ್ರಾಟನ ಒಂದಲ್ಲ ಒಂದು

ರಾಜಧಾನಿಗಳ ಮೇಲೆ ಆಕ್ರಮಣಗಳು ನಡೆಯ ತೊಡಗಿದವು. ಒಟ್ಟಾರೆ ಆರಾಜಕತೆ ತಾಂಡವವಾಡ ತೊಡಗಿತ್ತು.

ಕ್ರಿ.ಶ. ೧೬೩೦ರಿಂದ ೧೬೩೩ರ ಅವಧಿಯಲ್ಲಿ ಶ್ರೀ ರಂಗರಾಯ ಹಾಗೂ ವೆಂಕಟಪತಿದೇವರಾಯ ಎಂಬುವರ ದ್ವಂದ್ವ ಆಡಳಿತ ನಡೆದಿರುವುದು ಶಾಸನಗಳಿಂದ ಸುವ್ಯಕ್ತವಾಗುತ್ತದೆ. ಈ ಈರ್ವರಲ್ಲಿ ಯಾರು ನೈಜ ಸಾಮ್ರಾಟನೆಂಬುದನ್ನು ಖಚಿತ ವಾಗಿ ಯಾರೂ ಹೇಳಲು ಸಾಧ್ಯವಾಗದಂತಹ ಪರಿಸ್ಥಿತಿ ಉಂಟಾಗಿದ್ದಿತು. ಅಂತೆಯೇ ಈ ಸಂದರ್ಭವನ್ನು 'ಕೆಂಪರಾಯನ ಪದಗಳು'- "ನರಪತಿಯ ಸಿಂಹಾಸನಕ್ಕೆ ದಿಕ್ಕಿಲ್ಲ ದಿರಲು" ಎಂದು ವರ್ಣಿಸಿರುವುದು ಸರಿಯೆನಿಸುತ್ತದೆ. ಆಗ ವಿಜಯನಗರ ಸಾಮ್ರಾಜ್ಯದ ಸ್ಥಳೀಯ ಪ್ರಭುಗಳು ತಮ್ಮ ತಮ್ಮ ನೆರೆಹೊರೆಯ ಪ್ರದೇಶಗಳ ಮೇಲೆ ಆಕ್ರಮಣ ಗಳನ್ನು ನಡೆಯಿಸಿ ತಮ್ಮ ತಮ್ಮ ರಾಜ್ಯಗಳನ್ನು ವಿಸ್ತಾರ ಮಾಡಿಕೊಳ್ಳಲಾರಂಭಿಸಿದರು.

ತಂಜಾವೂರಿನವರು, ಮೈಸೂರಿನವರು ಹಾಗೂ ಕೆಳದಿ ಅರಸರು ತಾವು ಸ್ವತಂತ್ರ ರೆಂಬಂತೆ ನಡೆದುಕೊಂಡರು, ಅಲ್ಲದೆ ಮೈಸೂರಿನವರು ಚನ್ನಪಟ್ಟಣ, ಪಿರಿಯಾಪಟ್ಟಣ ಮೊದಲಾದವರ ಮೇಲೆ ಆಕ್ರಮಣ ನಡೆಸಿದರು. ಚಿಕ್ಕನಾಯಕನಹಳ್ಳಿಯ ಇಮ್ಮಡಿ ಭೈರಪ್ಪನಾಯಕರು ಕೂಡ ತನ್ನ ನೆರೆಹೊರೆಯ ಬೇಡ ಮತ್ತು ಮೊರಸು ಪ್ರಭುಗಳ ಮೇಲೆ ಆಕ್ರಮಣ ನಡೆಸಿದರು. ಹಾಗೇ ಸಾಮ್ರಾಜ್ಯದ ಸ್ಥಳೀಯ ಪ್ರಭುಗಳ ಮಧ್ಯೆ ಪರಸ್ಪರ ಆಕ್ರಮಣಗಳು ಮುಂದುವರೆದು ರಾಜಧಾನಿ ಪೆನುಗೊಂಡೆಯೂ ಆಕ್ರಮಣ ಕ್ಕೊಳಗಾಗತೊಡಗಿತ್ತು. ಆವೊಂದು ಸಂದರ್ಭದಲ್ಲಿ ಮುಮ್ಮಡಿ ವೆಂಕಟ ಪತಿ ದೇವರಾಯನನ್ನು ವಿಜಯನಗರ ಸಾಮ್ರಾಜ್ಯದ ಅಧಿಪತಿಯನ್ನಾಗಿ ದೃಢಪಡಿಸುವ ಕಾರ್ಯದಲ್ಲಿ ಪಾಲುಗೊಂಡ ಸ್ಥಳೀಯ ಪ್ರಭುಗಳ ಹಾಗೂ ಸಾಮ್ರಾಜ್ಯವನ್ನು ಧಿಕ್ಕರಿಸಿ ಮೆರೆಯುತ್ತಿದ್ದವರ ನಿಗ್ರಹ - ಇವುಗಳ ವರ್ಣನೆ 'ಕೆಂಪರಾಯನ ಪದಗಳು' ಅಥವಾ ಕೆಂಪೇಗೌಡ ಜಯ ಪ್ರಶಸ್ತಿ ಕೃತಿಯ ಎರಡನೇ ಭಾಗದಲ್ಲಿ ಬಂದಿದೆ. ಈ ವರ್ಣನೆ ಯನ್ನು ಹೀಗೆ ಸಂಗ್ರಹಿಸಬಹುದು:

ನರಪತಿಯ ಸಿಂಹಾಸನಕ್ಕೆ ದಿಕ್ಕಿಲ್ಲವಾಗಿತ್ತು. ನೆರೆಹೊರೆಯ ದೊರೆಗಳು ಗರ್ವ ದಿಂದ ಭೂಮಿಗಳನ್ನೆಲ್ಲಾ ಸೂರೆಮಾಡಿದರು. ರಾಜ್ಯಗಳನ್ನು ಕಟ್ಟಿಕೊಂಡರು, ಅಲ್ಲದೆ ರಾಜಧಾನಿಯಾದ ಪೆನುಗೊಂಡೆಯ ದುರ್ಗಕ್ಕೆ ಮುತ್ತಿಗೆಯನ್ನು ಹಾಕಿದ್ದರು. ಆಗ ನರೇಶನಾದ ವೆಂಕಟಪತಿದೇವರಾಯನಿಗೆ ರಾಜ್ಯಾಧಿಕಾರವನ್ನು ದೃಢಪಡಿಸಲು ತಿಮ್ಮ ರಾಜ, ರಂಗಪತಿರಾಜ, ಮೂಕರಾಜ, ಸಂದ್ಯಾಲರಾಜ, ದಾರ್ಮೆಲ ವೆಂಕಪ್ಪ ನಾಯಕ, ರಾವಿಳ್ಲ ವೆಂಕಟಕನಾಯಕ, ರಾಮಭದ್ರರಾಜ ಮುಂತಾದ ಬಲಶಾಲಿಗಳು, ದಳವಾಯಿ ಪಾಪಯ್ಯ, ಪವಡದ ಕೃಷ್ಣಪ್ಪ, ಚವರದ ನಾರಾಣೇಂದ್ರ ಇವರೇ ಮೊದಲಾದ ಗಂಡುಗಲಿಗಳೂ, ಬಗೆ ಬಗೆಯ ಪಾಳೆಯಗಾರರು, ಮಂತ್ರಿಗಳು ಇವರೆಲ್ಲರೂ ಕೂಡಿ

ರಾಯರಿಗೆ ಓಲಗವನ್ನೇರ್ಪಡಿಸಿ ಮನ್ನಣೆಯನ್ನು ಸಲ್ಲಿಸಿದರು. ಕದಲಿ ನೆಲ್ಲಿಪಟ್ನ ಕಣಿವೆಗಳ ಎದುರಿಗೆ ರಾಯರ ದಂಡು ಇಳಿಯಿತು. ನಂತರ ಕೋಗಿಲೇರಿಯಲ್ಲಿ ಇಳಿಯಿತು. ಮುಂದೆ ಹೇಗೆ ಮುಂದುವರೆಯಬೇಕೆಂದು ಯೋಚನೆಗಿಟ್ಟು ಕೊಂಡಿತು. ಆಗ ರಾಯನು ಮಂತ್ರಿಗಳನ್ನು ಕರೆಯಿಸಿ ಸಮಾಲೋಚಿಸಿ, ಮೊರಸು ಮನ್ನೆಯರನ್ನು ಕೂಡಿಕೊಳ್ಳದಿದ್ದರೆ ಮುಂದೆ ಹೋಗುವುದು ಹೇಗೆ? ಎಂದು ತೀರ್ಮಾನಿಸಿ ರಾಯನ ದಂಡು ಬೇತಮಂಗಲದಲ್ಲಿ ಇಳಿಯಿತು. ಆಗ ನರೇಶನಾದ ವೆಂಕಟಪತಿರಾಯನು ತನಗೆ ರಾಜ್ಯಾಧಿಕಾರವನ್ನು ಉಳಿಸಿಕೊಡಬೇಕೆಂದು ಮಂತ್ರಿ ಜನಗಳ ಮುಖಾಂತರ ಬೆಂಗಳೂರಿನ ಇಮ್ಮಡಿ ಕೆಂಪೇಗೌಡರಿಗೆ ಹೇಳಿಕಳುಹಿಸಿದನು. ಆಗ ಕೆಂಪೇಗೌಡನು ಅಧಿರಾಜನಿಗೆ ರಾಯಸವನ್ನು ಬರೆಯಿಸಿ ಬುದ್ಧಿವಂತಿಕೆಯಿಂದ ಆತನು ತನ್ನ ಸುತ್ತ ಮುತ್ತಲ ದೊರೆಮನ್ನೆಯರನ್ನು ಕೂಡಿ, ಯುದ್ಧಕ್ಕೆ ಬೇಕಾಗುವ ಸರ್ವಸಾಧನಗಳನ್ನು ಜೋಡಿಸಿಕೊಂಡನು. ಆಗ ಕೆರೆಯೂರ ತಿಮ್ಮನಾಯಕ ಮತ್ತು ಸುತ್ತಮುತ್ತಣ ರಾಜರು ಹೊಸಕೋಟೆಯ ತಮ್ಮಧೀರ ದೇವಂಡಹಳ್ಳಿಯ ಜೇನಭೈರ, ಚಿಕ್ಕಬಳ್ಳಾಪುರದ ಭೈರೇಂದ್ರ, ಮೈಸೂರಿನವನು, ಮಾಸ್ತಿಯ ಕರಿಯೇಂದ್ರ, ಹೊಸೂರು ಚಂದ್ರಶೇಖರ, ಬಾಗಲೂರ ಎರ್ರೇಂದ್ರ ಎಲ್ಲರನ್ನೂ ಕೂಡಿಕೊಂಡು ಕೆಂಪೇಗೌಡನು ರಾಯರನ್ನು ಬೇತಮಂಗಲದಲ್ಲಿ ಎದಿರುಗೊಂಡು ಮುಂದೆ ಮೂಡಿಗೆರೆಯಲ್ಲಿ ಪಾಳ್ಯವಿರಸಿ, ನಂತರ ದಂಡು, ವೇಗದಿಂದ ತೆರಳಿ ಕಡಗತ್ತೂರ ಕೆರೆಯ ಏರಿಯ ಬಳಿಯಲ್ಲಿ ಇಳಿಸಿ, ಸಿರಿಯಾದ ಅರಸುರಂಗಪ್ಪ ನನ್ನು ಕರೆಯಿಸಲಾಯಿತು. ಈ ರೀತಿ ಹೆಸರಾದ ಮನ್ನೆಯರು, ಮಂತ್ರಿಗಳು ಮೊದಲಾಗಿ ಹಲವು ರಾಜರನ್ನು ಕೂಡಿಕೊಂಡು ಹೋಗಿ ಪೆನುಗೊಂಡೆಯನ್ನು ಮುತ್ತಿ ರಾಯನಿಗೆ ಪಟ್ಟವನ್ನು ಒಪ್ಪಿಸಿ ಭಾವ ಸಂವತ್ಸರ ಮಾಘ ಶುದ್ಧ ಪಂಚಮಿ ಸುಮುಹೂರ್ತ ಶುಭಲಗ್ನದಲ್ಲಿ ವೆಂಕಟಪತಿದೇವರಾಯನಿಗೆ ಪಟ್ಟವನ್ನು ಕಟ್ಟಿದರು.

ರಾಯರ ಓಲಗದಲ್ಲಿ ಬಂದಿದ್ದ ರಾಜರಿಗೆ, ಮರ್ಯಾದೆಗೆ ತಕ್ಕಂತೆ ರಾಯರ ದರ್ಶನವನ್ನುಂಟು ಮಾಡಿ ಪಗುದಿಗಳನ್ನು ಕೊಡಿಸಿದ. ನಂತರ ಮಂಡಳೇಶ್ವರನಾದ ವೆಂಕಟಪತಿದೇವರಾಯನು ಹಲವು ಸೀಮೆಗಳನ್ನು ಗೆದ್ದುಕೊಡಬೇಕೆಂದು ಕೆಂಪೇಗೌಡನನ್ನು ಕೋರಿದನು. ಈಗ ಕೆಂಪೇಗೌಡನು ತಡಮಾಡದೆ ಅನೇಕ ರಾಜರನ್ನು ಕೂಡಿಕೊಂಡು ವಸಂತನಸೀಮೆ, ಮಲೆಯ ಹಂಪನಸೀಮೆ, ಹಂಡೆಯ ಹಂಪರಾಜರನ್ನೂ ಆ ಬಳಿಕ ವೂಟಕೂರ ಪಾಳೆಯ, ಬಿಜ್ಜಾವರದ ಸೀಮೆ, ರಣಭೈರವನ ಸೀಮೆ, ಹೊಸವೂರು, ಕುಂದರಿಪೆ ತಿಮ್ಮೇಂದ್ರ ಮುಂತಾದವರ ಪುಂಡಾಟವನ್ನು ಬಗ್ಗು ಬಡಿದು ಅವರಿಂದ ಕಪ್ಪವನ್ನು ತೆರಿಸಿದನು ಮತ್ತು ರಾಜ್ಯವನ್ನು ಬಿಡಿಸಿದನು. ಅಹುದೆಂದು ರಾಯನ ಸಿಂಹಾಸನವನ್ನು ನಿಲ್ಲಿಸಿದ್ದಕ್ಕೆ ರಾಯನು ಮೆಚ್ಚಿ ಸಂತೈಸಿದ. ಅಲ್ಲದೆ 'ಸ್ವಾಮಿ ದ್ರೋಹರ ಗಂಡ' ಎಂಬ ಬಿರುದಿನ ಕಾಲ್ಪೆಂಡೆಯನ್ನು, ತಾಳಿ ಚೌಕಳಿ, ಕಂಠಮಾಲೆ, ನವರತ್ನ ಭೂಷಣಾಭರಣಗಳನ್ನು ಕೊಟ್ಟು ಮನ್ನಣೆಯನ್ನು ನೀಡಿದನು.

ಈ ರೀತಿ ಮನ್ನಣೆ ಪಡೆದ ಕೆಂಪೇಗೌಡನಿಂದ ದೊಡ್ಡಬಳ್ಳಾಪುರದ ದಳವಾಯಿ ತಮ್ಮೇಂದ್ರ ಅಭಯವನ್ನು ಪಡೆದನು. ನಂತರ ಕಾಕೊಳಲ ಕೆರೆಯ ಅಂಗಳದಲ್ಲಿ ಪಾಳೆಯವಿಳಿದು ಅನೇಕ ರಾಜರಿಗೆ ಉಡುಗೊರೆಗಳನ್ನು ಕೊಟ್ಟು ಕಳುಹಿಸಿದನು. ಅನಂತರ ಬೆಂಗಳೂರು ಪಟ್ಟಣಕ್ಕೆ ಐರಾವತವೇರಿ ಬರುವ ದೇವೇಂದ್ರನಂತೆ ದಿಗ್ವಿಜಯ ಮಾಡಿ ಸೇರಿದನು.

ಈ ಎರಡನೇ ಭಾಗದಲ್ಲಿ ಬಂದಿರುವ ಮುಮ್ಮಡಿ ವೆಂಕಟಪತಿ ದೇವರಾಯನ ಕಾಲದ ಆರಂಭಿಕ ಘಟನೆಗಳ ಒಂದು ನೈಜ ಚಿತ್ರವನ್ನು ಕಾಣಬಹುದಾಗಿದೆ. ಇಲ್ಲಿ ಉಕ್ತನಾಗಿರುವ ವೆಂಕಟಪತಿ ದೇವರಾಯನಾದರೂ ಯಾರು? ಈತನನ್ನು ಶಾಸನದಲ್ಲಿ 'ಆನೆಗೊಂದಿ ವೆಂಕಪತಿ' ಅಥವಾ 'ಆನೆಗುಂದಿ ವೆಂಕಟದೇವರಾಯ'ನೆಂದು ಉಲ್ಲೇಖಿಸ ಲಾಗಿದೆ. ಹಾಗೇ ಈತನನ್ನು 'ಪೆದ್ದವೆಂಕಟ' ಎಂದೂ ಕರೆಯಲಾಗಿದೆ. ಏಕೆಂದರೆ ಈತನಿಗೆ ಚಿನ್ನವೆಂಕಟನೆಂಬ ಸೋದರನಿದ್ದನು. ಈತ ಪ್ರಸಿದ್ಧ ಅಳಿಯ ರಾಮರಾಯನ ನೇರ ಸಂಬಂಧಿಯಾಗಿದ್ದುದರಿಂದ 'ರಾಮರಾಜ ವೆಂಕಟ' ಎಂದೂ ಕರೆದಿರುವುದುಂಟು. ಈತ ಕ್ರಿ.ಶ. ೧೬೩೦ಕ್ಕೆ ಮೊದಲೇ ಯುವರಾಜನಾಗಿ ಆಯ್ಕೆಯಾಗಿ ರಾಜ್ಯಭಾರವನ್ನು ಆರಂಭಿಸಿದ್ದನು. ಈ ಮಧ್ಯೆ, ಶ್ರೀರಂಗರಾಯನೆಂಬುವ ದಾಯಾದಿಯೋರ್ವನು, ತಾನೇ ರಾಜನೆಂಬಂತೆ ಅಧಿಕಾರವನ್ನು ಚಲಾಯಿಸತೊಡಗಿದ್ದ. ಆತನಿಗೆ ಅನೇಕ ಸ್ಥಳೀಯ ಪ್ರಭುಗಳ ಬೆಂಬಲವಿದ್ದಿತು. ಆ ಸಂದರ್ಭದಲ್ಲಿ ಕೆಲವರು ವೆಂಕಟಪತಿ ದೇವರಾಯನನ್ನು ಓಲೈಸಿದರೆ, ಹಲವರು ಶ್ರೀರಂಗರಾಯನ ಪಕ್ಷವಹಿಸಿದ್ದರು. ಇತರ ಕೆಲವರು ಇವರಿಬ್ಬರನ್ನೂ ಲೆಕ್ಕಿಸದೆ ತಮ್ಮ ನೆರೆ ಹೊರೆಯ ಸ್ಥಳೀಯ ಪ್ರಭುಗಳ ಮೇಲೆ ಆಕ್ರಮಣ ನಡೆಯಿಸಿ ಪ್ರಬಲರಾಗತೊಡಗಿದ್ದರು. ಆವೊಂದು ಸಂದರ್ಭದಲ್ಲಿ ಮುಮ್ಮಡಿ ವೆಂಕಟಪತಿದೇವರಾಯನಿಗೆ ಬೆಂಬಲವನ್ನು ವ್ಯಕ್ತಪಡಿಸಿ ನೆರವಿಗೆ ಬಂದ ಅನೇಕ ಸ್ಥಳೀಯ ಪ್ರಭುಗಳಲ್ಲಿ ತಿಮ್ಮರಾಜ, ವೆಂಕಟರಾಜ, ನಂದ್ಯಾಲದ ಅಳಿಯ ಓಬರಾಜ, ಮೇಲು ಗೋಟಿ ತಿಮ್ಮನಾಯಕ, ವೆಂಕಟಪ್ಪನಾಯಕ, ರಾವಿಳ್ಳ ವೆಂಕಟಪ್ಪ ನಾಯಕ, ರಾಜಕುಮಾರ ಭದ್ರ, ದಳವಾಯಿ ಪಾಪಯ್ಯ, ಪಾವಡದ ಕೃಷ್ಣಯ್ಯ ಮತ್ತು ಜಗದೇವರಾಯ ಎಂಬುವರು ಮುಖ್ಯರಾಗಿದ್ದಾರೆ. ಇವರೆಲ್ಲರೂ ಬಹುಮಟ್ಟಿಗೆ ವೆಂಕಟಪತಿರಾಯನ ಬಂಧುವರ್ಗಕ್ಕೆ ಸೇರಿದ್ದವರು ಅಲ್ಲದೆ ರಾಯಲಸೀಮಾ ಪ್ರದೇಶ ದಲ್ಲಿ ಸ್ಥಳೀಯ ಪ್ರಭುಗಳಾಗಿದ್ದವರು. ಇವರ ನೆರವಿನೊಂದಿಗೆ ಈ ಮುಮ್ಮಡಿ ವೆಂಕಟಪತಿದೇವರಾಯನು ವಿಜಯನಗರ ಸಿಂಹಾಸನದಲ್ಲಿ ಸ್ಥಿರವಾಗಿ ನಿಲ್ಲಲು ದಂಡಯಾತ್ರೆಯನ್ನು ಕೈಗೊಂಡ. ಆಗ್ಗೆ ಕನ್ನಡ ಪ್ರದೇಶದ ಬಹುತೇಕ ಸ್ಥಳೀಯ ಪ್ರಭುಗಳು ವೆಂಕಟಪತಿದೇವರಾಯನನ್ನು ಗಣನೆಗೆ ತೆಗೆದುಕೊಂಡಿರಲಿಲ್ಲ. ಅವರಲ್ಲಿ ಮುಖ್ಯರಾದವರು ಸೀರ್ಯದ ರಂಗಪ್ಪನಾಯಕ, ಹೊಸೂರಿನ ಚಂದ್ರಶೇಖರ, ದೊಡ್ಡ ಬಳ್ಳಾಪುರದ ದಳವಾಯಿ ತಮ್ಮ, ಗುಮ್ಮನಾಯಕನ

ಪಾಳ್ಯದ ವಸಂತನಾಯಕ, ಬೆಳ್ಳೂರ ಹಂಪ, ಅನಂತಪುರದ ಹಂಡೆಯ ಹಂಪ, ಬಿಜ್ಜಾವರದ ಇಮ್ಮಡಿ ಚಿಕ್ಕಭೂಪಾಲ, ಹೊಸಕೋಟೆಯ ತಮ್ಮೇಗೌಡ, ಕೊರಟಗೆರೆಯ ರಾಮಭೈರೇಗೌಡ, ಕುಂದರ್ಪಿಯ ತಿಮ್ಮ ಮತ್ತು ತುಮಕೂರು ಕೋಲಾರ ಜಿಲ್ಲೆಯ ಮೊರಸು ಮನ್ನೆಯರು - ಮುಖ್ಯರಾಗಿದ್ದರೆಂದರೆ ತಪ್ಪಾಗಲಾರದು.

ಮುಮ್ಮಡಿ ವೆಂಕಟಪತಿದೇವರಾಯನು ಬೆಂಗಳೂರು ಕೆಂಪೇಗೌಡನ ನೆರವನ್ನು ಕೇಳಿದಾಗ ಅವನೊಂದಿಗೆ ಬಂದು ನೆರವಾದ ಮೊರಸುಮನ್ನೆಯರು ಅಂದರೆ - ಮೊರಸುನಾಡು ಪ್ರದೇಶವನ್ನು ಆಳುತ್ತಿದ್ದ ಸ್ಥಳೀಯ ಪ್ರಭುಗಳ ವಿವರ ಗಮನ ಸೆಳೆಯುತ್ತದೆ. ಅವರೆಲ್ಲರೂ ಆಗ್ಗೆ ಹೆಚ್ಚು ಪ್ರಭಾವಿಯಾಗಿದ್ದ ಬೆಂಗಳೂರು ಕೆಂಪೇ ಗೌಡನ ಪ್ರಭಾವಕ್ಕೆ ಒಳಗಾಗಿದ್ದವರು ಎಂಬುದರಲ್ಲಿ ಸಂದೇಹವಿಲ್ಲ. ಅವರಲ್ಲಿ ಹೊಸಕೋಟೆಯ ತಮ್ಮೆಯಗೌಡ, ದೇವೆಂಡಹಳ್ಳಿಯ ಚೆನ್ನಭೈರ, ಚಿಕ್ಕಬಳ್ಳಾಪುರದ ಭೈರ, ಮಾಸ್ತಿಯ ಕರಿಯ, ಹೊಸೂರಿನ ಚಂದ್ರಶೇಖರ, ಬಾಗಲೂರಿನ ಎರ್ರ ಹಾಗೂ ಕೆರೆಯೂರಿನ ತಿಮ್ಮನಾಯಕರು ಮುಖ್ಯರಾಗುತ್ತಾರೆ. ಇವರೆಲ್ಲರೂ ಬೆಂಗಳೂರಿನ ನೆರೆಹೊರೆಯ ಅಂದರೆ ಮೊರಸುನಾಡು ಪ್ರದೇಶಗಳಿಗೆ ಸೇರಿದವರಾಗಿದ್ದಾರೆ. ಪ್ರಾಚೀನ ಮೊರಸು ನಾಡಿನ ಭಾಗವಾಗಿದ್ದ ಹೊಸೂರು ಮತ್ತು ಬಾಗಲೂರುಗಳು ಈಗ ತಮಿಳುನಾಡಿನ ಭಾಗಗಳಾಗಿವೆ.

ವಿಜಯನಗರದ ಸಾಮ್ರಾಟ ಕೃಷ್ಣದೇವರಾಯನ ಕಾಲಕ್ಕಾಗಲೇ ವ್ಯಾಪಕವಾಗಿ ಅಸ್ತಿತ್ವಕ್ಕೆ ಬಂದಿದ್ದ ಅಮರನಾಯಕ ಅಂದರೆ ಸಾಮಂತ, ಮಾಂಡಲಿಕ ಮುಂತಾದ ಸ್ಥಳೀಯ ಪ್ರಭು ಮನ್ನೆಯರ ಮೂಲಕ ನಡೆಸುತ್ತಿದ್ದ ವಿಕೇಂದ್ರೀಕರಣಗೊಂಡ ಸದೃಢ ಸ್ಥಳೀಯ ಆಡಳಿತ ಕ್ರಮವು ಅರವೀಡು ಅರಸರ ಆಳ್ವಿಕೆಯ ಕಾಲದಲ್ಲಿ ಛಿದ್ರ ಗೊಳ್ಳತೊಡಗಿತ್ತು. ಇದಕ್ಕೆ ಮುಖ್ಯ ಕಾರಣ ಅರವೀಡು ಅರಸರಲ್ಲಿ ಪ್ರಬಲವಾಗಿದ್ದ ಅಧಿಕಾರದಾಹ ಎಂಬುದನ್ನು ಮೇಲಿನ ವಿವರಣೆಯಿಂದ ಮನಗಾಣಬಹುದಾಗಿದೆ. ಅಧಿರಾಜಕತ್ವದಿಂದ ಕೂಡಿದ ಅಧಿರಾಜತ್ವವು ಸ್ಥಳೀಯ ಪ್ರಭುಗಳ ಮೇಲಿನ ಹಿಡಿತ ಶಿಥಿಲವಾಗಲು ಮುಖ್ಯ ಕಾರಣವಾಯಿತೆಂದರೆ ತಪ್ಪಾಗಲಾರದು. ಹಾಗಾಗಿ ಸ್ಥಳೀಯ ಪ್ರಭುಗಳು ಸ್ವತಂತ್ರವಾಗಿ, ತುಂಡರಸರಾಗಿ, ಅಧಿರಾಜರಿಗೇ ನುಂಗಲಾರದ ತುತ್ತಾಗಿ ಪರಿಣಮಿಸಿದ್ದರು. ಅಷ್ಟೇ ಅಲ್ಲ ಅಧಿರಾಜನಿನಿಸಿಕೊಳ್ಳಬೇಕಾದವರು ತಮ್ಮ ಸಿಂಹಾಸನದ ಮೇಲೆ ತಮ್ಮ ಅಧಿಕಾರವನ್ನು ದೃಢಪಡಿಸಿಕೊಳ್ಳಲು ಸ್ಥಳೀಯ ಪ್ರಭುಗಳ ನೆರವನ್ನು ಕೋರಬೇಕಾದ ದೈನ್ಯ ಸ್ಥಿತಿಯೂ ಉಂಟಾಗಿದ್ದಿತೆಂಬುದನ್ನು ಈ 'ಕೆಂಪೇಗೌಡನ ಪದಗಳು' ಸುವ್ಯಕ್ತಗೊಳಿಸಿದೆ.

ಮುಖ್ಯವಾಗಿ ರಕ್ಕಸಗಿ-ತಂಗಡಗಿ ಯುದ್ಧದ ನಂತರ, ಅಧಿಕಾರಕ್ಕೆ ಬಂದ ಅರವೀಡು ವಂಶೀಯ ಅರಸರು ಅಧಿಕಾರಕ್ಕಾಗಿ ಅನುಸರಿಸಿದ ಅನೈತಿಕ ಮಾರ್ಗಗಳು, ಪಿತೂರಿ

ಹಾಗೂ ಗುಂಪುಗಾರಿಕೆ ಇತ್ಯಾದಿ ಸಂಗತಿಗಳು ಸ್ಥಳೀಯ ಪ್ರಭುಗಳು ಹೆಚ್ಚು ಪ್ರಬಲರಾಗಲು ಕಾರಣವಾಯಿತೆಂದರೆ ತಪ್ಪಾಗಲಾರದು. ಒಟ್ಟಾರೆ ಈ ಅಧಿರಾಜ ಮತ್ತು ಸ್ಥಳೀಯ ಪ್ರಭುಗಳ ನಡುವಿನ ಸಂಬಂಧಗಳಲ್ಲಿ ಉಂಟಾಗಿದ್ದ ಶಿಥಿಲತೆ; ಅವರೀರ್ವರ ಶಕ್ತಿಯನ್ನು ಗಣನೀಯವಾಗಿ ಕುಗ್ಗಿಸಿತ್ತು. ಇದರ ಜೊತೆಗೆ ಪ್ರಬಲರಾದ ಸ್ಥಳೀಯ ಪ್ರಭುಗಳಲ್ಲಿನ ಆಂತರಿಕ ಆಕ್ರಮಣ ಮತ್ತು ಒಳಜಗಳಗಳೂ ಸೇರಿ ಮುಂದೆ ಪರಕೀಯರ ಪ್ರದೇಶಕ್ಕೆ ನಾಂದಿಯಾಯಿತು.

ಆಧಾರಗ್ರಂಥ ಸೂಚಿ

1. ಕನ್ನಡ ಹಸ್ತ ಪ್ರತಿಗಳ ವರ್ಣನಾತ್ಮಕ ಸೂಚಿ, ಸಂಪುಟ ೧, ಕೆ.ಬಿ. 281
2. ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ, ಸಂಪುಟ - ೫, ಕೆ. 374/2, ಕೆ. 514/4, ಕೆ. 845/3, ಕೆ. 845/2, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. A Descriptive Catalogue of the Kannada Manuscripts, Vol VIII, No. 1264, 1265 & 1266, Madras Oriental Manuscripts Library, Madras.
4. ಕರ್ಲಮಂಗಲಂ ಶ್ರೀಕಂಠಯ್ಯ, (ಸಂ) ಗೌಡಕುಲ ವಿಭೂಷಣ ಕೆಂಪೇಗೌಡನ ಜಯಪ್ರಶಸ್ತಿ, ಬೆಂಗಳೂರು 1961.

೪೮. ವಿಜಯನಗರ ಎಂಬ ಭಾಸ್ಕರ ಕ್ಷೇತ್ರ ಮತ್ತು ಹೊಯ್ಸಳ - ಹಂಪೆ

- ಕ.ವೆಂ. ರಾಜಗೋಪಾಲ

ಭಾಸ್ಕರ ಕ್ಷೇತ್ರ– ಎಂದರೆ ಸೂರ್ಯಾರಾಧನೆಯ ಕ್ಷೇತ್ರ ಎಂದಾಗುತ್ತದೆ. ಆದುದರಿಂದ ಅಂತಹ ಸ್ಥಳಗಳಲ್ಲಿ ಸೂರ್ಯನ ಆರಾಧನೆಯು ನಡೆಯುವಂತೆ ಒಂದು ಸೂರ್ಯ(ನ) ದೇಗುಲವಿರುತ್ತದೆ. ಇದಕ್ಕೆ ಉದಾಹರಣೆಯಾಗಿ ಸಾಮಾನ್ಯವಾಗಿ ಉಜ್ಜಯನಿಯಿದೆ. ಇದರ ವಾಸ್ತವ ಪ್ರಯೋಜನವೆಂದರೆ ಕಾಲಗಣನೆ-ಸೂರ್ಯೋದಯದಿಂದ ಹಿಡಿದು ಸೂರ್ಯಾಸ್ತದವರೆಗೂ ಕ್ಷಣಗಳನ್ನು ಗುರುತಿಸಿದಂತೆ ಘಳಿಗೆ-ವಿಘಳಿಗೆ-ದಿನ; ಹಗಲು -ರಾತ್ರಿ, ಮಾಸ, ಋತುಮಾನ, ವರ್ಷ (ಶತಮಾನ)-ಯುಗ ಇತ್ಯಾದಿಗಳನ್ನು ಒಳ ಗೊಂಡಂತೆ ಕಾಲಮಾನವನ್ನು ಶಕವರ್ಷಗಳಲ್ಲಿ ಲೆಕ್ಕಿಸಬೇಕಾಗುತ್ತದೆ. ಇದರ ಭಾರತೀಯಜನಕನೆಂದು ವರಾಹಮಿಹಿರನನ್ನು ಗುರುತಿಸಲಾಗಿದೆ. ಇವನ ನಂತರ (ಶಿಷ್ಯನೂ ಇರಬಹುದು) ಭಾಸ್ಕರಾಚಾರ್ಯನು ಸೂರ್ಯ ಸಿದ್ಧಾಂತದ ಮುಂದುವರಿಕೆ ಯನ್ನು ಮಾಡಿದ್ದಲ್ಲದೆ ಅದರ ಗಣಿತ ಪದ್ಧತಿಗೆ ಸೇರಿದಂತೆ ಒಂದು ಅಥವಾ ಹಲವು 'ಯಂತ್ರ'ಗಳನ್ನು ಗೊತ್ತುಮಾಡಿದಂತಿದೆ. ನಮ್ಮಲ್ಲಿ ಘಟಿಕಾಸ್ಥಾನಗಳು-ಹೀಗೆ ಕಾಲಮಾನದ ಯಂತ್ರಗಳನ್ನು ಬಳಸುತ್ತಿದ್ದಿರಬಹುದು-ಅವುಗಳೆಲ್ಲಾ ನಾಶವಾಗಿ ರುವುದರಿಂದ-ಅದರ ಸಾಕಾರವಾದಂತೆ 'ಪಂಚಾಂಗ' ರಚನೆಯು ಇಂದಿಗೂ ಬಳಕೆ ಯಲ್ಲಿದೆ. ಇದಕ್ಕೆ ಒಂದು ಉದಾಹರಣೆಯಾಗಿ ಶೃಂಗೇರಿ ಪಂಚಾಂಗವಿದೆ. ಇದರ ನೇರ ಪ್ರಯೋಜನವೂ ಶೃಂಗೇರಿ ಮಠಕ್ಕೆ-ಆ ಮೂಲದ ದರ ಅನುಯಾಯಿಗಳಿಗೆ ಹಾಗೂ ಅದನ್ನು ಎಲ್ಲ ಆಚರಣೆಗಳಿಗೂ ನಂಬಿಕೊಂಡಿರುವವರಿಗೆ ಆಗುತ್ತಿದೆ. ತಿಥಿ, ವಾರ, ನಕ್ಷತ್ರ, ಮಾಸ, ಮತ್ತು ಸಂವತ್ಸರವಲ್ಲದೆ ಶಕೆಯೂ ಗಣನೆಗೆ ಬರುತ್ತದೆ. ಇದನ್ನು ಬ್ರಾಹ್ಮಣರಲ್ಲದೆ ನಂಬಿಕೆಯುಳ್ಳ ಎಲ್ಲರೂ ಬಳಸುತ್ತಾರೆ. ಜಾತಕರ್ಮದ ಮೊದಲಿಂದ ಉಪನಯನ-ಲಗ್ನ ಮೊದಲಾದ (ಲಗ್ನ ಕೂಡಿ ಬರಬೇಕು, ಎಂಬುದು ಒಂದು ಖಚಿತ ವಾದ ವಿಷಯವಷ್ಟೆ) ಅಂತ್ಯಕ್ರಿಯೆಯನ್ನು ಈ ಗಣಿತವನ್ನು ಅನುಸರಿಸಿ ಮಾಡಲಾಗು ತ್ತದೆ. ನಮ್ಮ ಹಂಪೆಯನ್ನು ಒಂದು ಭಾಸ್ಕರಕ್ಷೇತ್ರವೆಂದು ಶಾಸನಗಳೂ ಕರೆದಿವೆ. ಇದರ ಕಾಲಮಾನವನ್ನು ಸ್ಥೂಲವಾಗಿ ಗುರುತಿಸಲು ಸಾಧ್ಯವಿದೆ. ಶಕಪುರುಷ ನೊಬ್ಬನ (ಉದಾ: ಶಾಲಿವಾಹನ ಅಥವಾ ವಿಕ್ರಮ) ಹೆಸರಿನಲ್ಲಿ ಈ ಕಾಲಮಾನವು ಪಂಚಾಂಗವಾಗಿ ಬಳಕೆಗೆ

ಬಂದಿದೆ. ಇದನ್ನು ದೃಗ್ಗಣಿತವೆಂದೂ ಕರೆದಿರುವುದುಂಟು -ಅಂದರೆ ಗೋಚರವಾಗುವಂತೆ ಕಾಲಮಾನವನ್ನು ಮೇಲೆ ಹೇಳಿರುವ ಅಂಶಗಳಿಂದ ಗುರುತುಮಾಡುವುದೇ ಆಗಿದೆ. ಪ್ರತಿದಿನದ ಪ್ರತಿಕ್ಷಣವನ್ನು ಗಮನಿಸಿದಲ್ಲದೆ ಒಂದು ದಿನವನ್ನಾಗಲಿ, ಮಾಸವನ್ನಾಗಲಿ-ಸಂವತ್ಸರವನ್ನಾಗಲಿ ಗುರುತಿಸದಿದ್ದಲ್ಲಿ ಒಂದು ಪಂಚಾಂಗ-ಪರಂಪರೆಯು ಉಳಿಯಲಾರದು. ಇಂತಹ ಪ್ರಯೋಗದ ಆಧಾರ ದಿಂದಷ್ಟೇ-(ಈಗಿನ ಗಡಿಯಾರದಂತೆ) ಪಂಚಾಂಗವೂ, ಕಾಲಮಾನವೂ ಸಾಧ್ಯವಾಗ ಲಾರದು. ಸ್ಥೂಲವಾಗಿ ಹೇಳುವುದಾದರೆ ಇದರಿಂದ ನಮ್ಮ ಜನನ-ಮರಣದ ಗುಣಾಕಾರವಾಗುತ್ತದೆ. ಇಷ್ಟು ನಿಷ್ಠುರವಾಗಿ ಹಂಪೆಯು ಒಂದು ಕಾಲಮಾನದ ಕೇಂದ್ರ ವಾಗಿದ್ದಿತೆ ಎಂಬುದು ಪ್ರಶ್ನೆ. ವರಾಹಮಿಹಿರ ಮತ್ತು ಭಾಸ್ಕರಾಚಾರ್ಯರನ್ನು ಕ್ರಿ.ಶ ೨-೩ನೇ ಶತಮಾನಕ್ಕೆ ಸೇರಿಸುತ್ತಾರೆ. ಅಷ್ಟು ಹಿಂದಕ್ಕೆ 'ಹಂಪೆ' ಎಂಬ ಕ್ಷೇತ್ರವನ್ನು ಒಯ್ಯಲು ಆಧಾರಗಳು ಸಾಲದು (ರಾಮಾಯಣದ ನೆಲೆಯನ್ನು ಇಲ್ಲಿ ಗುರುತಿಸ ಬಹುದಾಗಿದೆಯಾದರೂ ಅದು ಖಚಿತವಾಗಿಲಾರದು)-ಅದುದರಿಂದ ಇಲ್ಲಿಯ ಭಾಸ್ಕರಾಚಾರ್ಯನನ್ನು ಹೆಸರಿಸಿದ ಮಾತ್ರಕ್ಕೆ ಇತಿಹಾಸಕ್ಕೆ ಅಷ್ಟು ಸಾಲದು-ಆದರೆ ಸೂರ್ಯನ ಆರಾಧನೆಯ ಜೊತೆಗೆ ಸಿದ್ಧಾಂತದ ಬಳಕೆಯು ಇಲ್ಲಿದ್ದಿರಬಹುದೆಂದರೆ ತಪ್ಪಾಗಲಾರದು. ಇದಕ್ಕೆ ಸೂರ್ಯದೇಗುಲವನ್ನೂ (ಆರಾಧನಾ ಪೂರ್ವಕ) ಈ ಕ್ಷೇತ್ರದ ವಿಚಾರವನ್ನು ಹೇಳುವ ಯಾವುದೇ ಇತರೆ ಗ್ರಂಥವನ್ನೂ ಹೇಳಬಹುದು.

ಕ್ರಿ.ಶ. ಹದಿಮೂರನೆ ಶತಮಾನದ (ಮೊದಲ) ಕಾಲು ಭಾಗದಲ್ಲಿ ಇಲ್ಲಿ (ಹಂಪೆ) ಹರಿಹರನೆಂಬ ಮಹಾ(ರಗಳೆ!) ಕವಿಯು ತನ್ನ ಗಿರಿಜಾಕಲ್ಯಾಣ ಮೊದಲಾಗಿ ಎರಡು ಶತಕಗಳನ್ನೂ ರಗಳೆಗಳನ್ನೂ (ಸು. ಒಂದುನೂರೆಂಟು ರಗಳೆಗಳೂ) ರಚಿಸಿದ್ದಾನೆ. ಇವನಿದ್ದಿರಬಹುದಾದ ಸ್ಥಳವನ್ನು ಗುರುತಿಸಲು ವಿದ್ವಾಂಸರು ಪ್ರಯತ್ನಿಸಿದ್ದಾರೆ. ಅವನಿದ್ದುದು ಸತ್ಯವಾಗಿಯೂ ಲೆಕ್ಕಾಚಾರವು ಮುಂದುವರಿದಿದೆಯಷ್ಟೆ? ಈತನ 'ಪಂಪಾಶತಕ'ದಲ್ಲಿ ಕ್ಷೆತ್ರ ಮಹಿಮೆಯನ್ನು ಹೇಳುವಲ್ಲಿ ಸೂರ್ಯತೀರ್ಥ ಹಾಗೂ ಪಂಪಾ ತೀರ್ಥಗಳು ಕಂಡು ಬಂದಿವೆ. ಇವೆರಡೂ ಆರಾಧನೆಗೆ ಸೇರಿದ ಸ್ಥಳೀಯತೆಗಳು - ಆದುದರಿಂದ (ಹರಿಹರನು ಭಾಸ್ಕರಕ್ಷೇತ್ರವೆಂದು ಹೇಳಿದಂತಿಲ್ಲ -ಕವೆಂ.) ಸೂರ್ಯಾ ರಾಧನೆಯನ್ನು ಗುರುತಿಸಲು ಪ್ರಯತ್ನಿಸಲಾಗಿದೆ-ತೀರ್ಥವೆಂದರೆ ಮುಕ್ತಿಯನ್ನು ಕೊಡುವ ಸ್ಥಳ. ಭವದಿಂದ ಮುಕ್ತಗೊಳಿಸುವ, ದಾಟಿಸುವ-ಸ್ನಾನಮಾಡಿ ಸೂರ್ಯ ನಲ್ಲಿ ಪ್ರಾರ್ಥಿಸಿ ತೀರ್ಥಪ್ರಸಾದಗಳನ್ನು ಪಡೆಯುವ ಆರಾಧನಾ ವಿಧಿಯ ಕೇಂದ್ರ ವೆಂಬುದು ನಾವು ಅರ್ಥೈಸುವ ಒಂದು ಸಂಪ್ರದಾಯವೂ ಇದೆ. ಆದುದರಿಂದ ಸೂರ್ಯನ ದೇಗುಲವು ಇಲ್ಲದ್ದಿರಬೇಕು. ಹಾಗೆಯೇ ಪಂಪಾಪತಿಯ ದೇಗುಲವೂ ಇದ್ದಿರಲೇಬೇಕು. ಈ ಭಾಸ್ಕರ ಕ್ಷೇತ್ರದಲ್ಲಿ ಬರಿಯ ಸೂರ್ಯಾರಾಧನೆಯಲ್ಲದೆ ಕಾಲಮಾನದ ಗಣನೆಯ ಕೇಂದ್ರವಾಗಿ

ಒಂದು ಘಟಿಕಾ ಸ್ಥಾನವಾದರೂ ಇದ್ದಿರ ಬಹುದು. ಸದ್ಯಕ್ಕೆ ಈ ಪಂಚಾಂಗ ವಿಷಯವನ್ನು ಶೃಂಗೇರಿ ಪಂಚಾಂಗ ಎಂಬುದರಿಂದ ಊಹಿಸಬಹುದು. ಇಲ್ಲೊಂದು ವಿದ್ಯಾಪೀಠವಿದ್ದುದಕ್ಕೆ ವಿದ್ಯಾರಣ್ಯರ ಸ್ಥಾನಮಾನ ಗಳನ್ನು ಇಲ್ಲಿ ಇಂದಿಗೂ ಗುರುತಿಸಲು ಸಾಧ್ಯವಿದೆ. ಇದು ಹೇಮಕೂಟದ ಕೆಳಗೆ ಮತ್ತು ಪಂಪಾವಿರೂಪಾಕ್ಷನ ಆವರಣದಲ್ಲಿಯೇ ಗುರುತಿಸಬಹುದಾಗಿದೆ. ವಿದ್ಯಾರಣ್ಯರೆಂದ ಮೇಲೆ ವಿಜಯನಗರದ ಸಂಸ್ಥಾಪಕರ ಗುರುವೆಂಬುದಕ್ಕೆ ಒಂದು ಸಾಮ್ರಾಜ್ಯದ ಇತಿಹಾಸವೇ ಇದೆಯಷ್ಟೆ-ಇವರು ಹೆಸರಿಟ್ಟ ರೆನ್ನಬೇಕಾದ 'ವಿಜಯನಗರ'ದ ಅವಶೇಷ ಗಳು ಇತಿಹಾಸಜ್ಞರನ್ನೆಲ್ಲಾ ಎಚ್ಚರಿಸುತ್ತಿದೆ! ಕ್ರಿ.ಶ. ಸುಮಾರು ೧೪ನೇ ಶತಮಾನದ ಮೊದಲ ಅರ್ಧಭಾಗದ ಕಾಲದಿಂದ ಅದೇ ಹದಿನೇಳನೆಯ ಶತಮಾನದವರೆಗೂ ಮೆರೆದ ವೈಭವದಿಂದ ಕೂಡಿದ ಸಾಮ್ರಾಜ್ಯವೊಂದು ಜಗತ್ತಿನ ಇತಿಹಾಸದಲ್ಲಿ ಸ್ಥಾನ ಪಡೆದುದಲ್ಲದೆ ಇಂದಿಗೆ ಜಗತ್ತಿನ ಪರಂಪರೆ (World Inheritence) ಆಗಿರುತ್ತಿದೆ.

ಈ ವಿಜಯನಗರ ಸಾಮ್ರಾಜ್ಯದ ಪ್ರಾರಂಭಕ್ಕೂ ಮುಂಚೆಯೇ ಹಂಪೆಯು ಭಾಸ್ಕರ ಕ್ಷೇತ್ರವಾಗಿದ್ದಿರಬೇಕೆಂಬುದಕ್ಕೆ ವಿರೂಪಾಕ್ಷನ 'ಪ್ರಾಣಪ್ರತಿಷ್ಠೆ'ಯ ದೇಗುಲ - ಪರಿಸರ, ತೀರ್ಥದ ನದಿಯಾದ ತುಂಗಭದ್ರೆಯ ತೀರಪ್ರದೇಶ ಎಲ್ಲವೂ ಗಮನ ಸೆಳೆಯುತ್ತವೆ. ಆದುದರಿಂದ 'ವಿರೂಪಾಕ್ಷ'ನ ಸ್ಥಾಪನೆಯ ಹಿನ್ನೆಲೆಯನ್ನು ಮಾಧವಾಚಾರ್ಯನ ಪ್ರೇರಣೆಯಿಂದ ಹಕ್ಕ-ಬುಕ್ಕರು ಇಲ್ಲಿ ತಮ್ಮ ರಾಜ್ಯದ ಆಳ್ವಿಕೆಯ- ಸಂಸ್ಥಾಪನೆಯನ್ನು ಆರಾಧನೆಯ ಮೂಲಕ ಕೈಗೊಂಡು ಯಶಸ್ವಿಗಳಾದರೆಂಬುದು ಮುಖ್ಯವಾಗಿಯೂ ಇತಿಹಾಸದ ಖಚಿತವಾದ 'ಹೆಜ್ಜೆ'ಯಾಗಿಯೂ ಕಂಡುಬರುತ್ತದೆ.

ಆದುದರಿಂದ ಈ ವಿರೂಪಾಕ್ಷನ ಆರಾಧನೆಯ ಕೇಂದ್ರವಾಗಿರುವ (ನಮ್ಮ) ವಿಜಯನಗರದ ಭೂಪ್ರದೇಶವನ್ನು ಪರಿಶೀಲಿಸಬೇಕಾಗುತ್ತದೆ. 'ವಿಜಯನಗರ'ದ ಪೂರ್ವದ ಪರಿಸರ -

1. ವಿಜಯನಗರದ ರಾಜಧಾನಿಯನ್ನು ಕೋಟೆ (ಗಳು) ಸಂರಕ್ಷಣೆಯ ಪ್ರದೇಶ ವನ್ನು ಗುರುತಿಸಿದರೆ.
2. ಅದಕ್ಕೆ ಅಂಟಿಕೊಂಡಂತೆ ಇರುವ ತುಂಗಭದ್ರಾನದಿಯ ದಕ್ಷಿಣತೀರ ವಾಗಿರುವ 'ಹಂಪೆ'-ಎಂದರೆ
3. -ಮತಂಗ ಪರ್ವತ (ಬೆಟ್ಟ)ದ ಮೇಲಿಂದ ನೋಡಿದರೆ ಗೋಚರವಾಗುವ ಹೇಮಕೂಟ - ವಿರೂಪಾಕ್ಷದೇಗುಲ - ನದಿಯಕಡೆಗೆ ತೀರ್ಥಗಳ ವಲಯ-
4. ಇಂಥ ಪ್ರಾದೇಶಿಕ ಪರಿಸರ ಇದೆ.

ಇದರಿಂದ ಹೇಮಕೂಟಕ್ಕೂ ತುಂಗಭದ್ರೆಯ ದಕ್ಷಿಣತೀರಕ್ಕೂ ನಡುವೆ ಗುರುತಿಸಿದಂತೆ ಇರುವ ಪಂಪಾಪತಿಯ ದೇಗುಲ ಮತ್ತು ಮಹಾಪ್ರಾಂಗಣ - ಮುಖ್ಯ - ಅಧ್ಯಯನಕ್ಕೆ ಇದು ಕೇಂದ್ರ. ಈ ಬಗೆಯ ಪರಿಸರದ ತುಂಗಭದ್ರಾತೀರದಲ್ಲಿರುವ ಕ್ರಿ.ಶ.ಹನ್ನೆರಡನೆಯ ಶತಮಾನಕ್ಕೂ ಹಿಂದಿನಿಂದ ಜನಜೀವನದಿಂದ ಕೂಡಿರುವ (!) ಐತಿಹಾಸಿಕ ಸ್ಥಳ. ವಿರೂಪಾಕ್ಷ ದೇಗುಲಕ್ಕೆ ಎಡಕ್ಕೆ ನದಿಯ ಕಡೆಗೆ ಉತ್ತರ ಮುಖ ವಾದ ಒಂದು ಮಹಾದ್ವಾರವನ್ನು ಒಳಗೊಂಡಂತೆ - ಇದು ಕೃಷ್ಣದೇವರಾಯನ ದ್ವಾರಕ್ಕಿಂತಲೂ ದೊಡ್ಡದು-ಕೋಟೆಯ ಬಾಗಿಲನ್ನು ನೆನಪಿಸುವ ದ್ವಾರ - ನದಿಯ ಕಡೆಗೆ ಸುಮಾರು ಐದು ನಿಮಿಷಕ್ಕೆ ಕಡಿಮೆಯಿಲ್ಲದಷ್ಟು ಕ್ರಮಣವನ್ನು ಕೇಳುವಂತೆ ಕಲ್ಲುಚಪ್ಪಡಿ ಗಳಿಂದ ಇಂದಿಗೂ ಗಟ್ಟಿಮುಟ್ಟಾಗಿರುವ ಹಾದಿ- ಈ ದ್ವಾರಕ್ಕೆ ಸೇರಿದಂತೆ ಭುವನೇಶ್ವರಿಯ ದೇಗುಲ. ಇದರ ದ್ವಾರವೂ ಮುಖಮಂಟಪವೂ ಕರಿಯ (ನಯ ವಾದ) ಕಲ್ಲಿನಿಂದ ಅಚ್ಚುಕಟ್ಟಾಗಿ ಅಂದವಾಗಿ ಕೆತ್ತನೆಯಿಂದ ಕೂಡಿದ ಗರ್ಭಗುಡಿಯ ಬಾಗಿಲು - ಇದರ ಕೆಳಗೆನ್ನುವಂತೆ ಮಾಧವ - ವಿದ್ಯಾರಣ್ಯರ ನಿವಾಸವೆಂದು ತೋರಿಸುವ ಒಂದು ನೆಲಮಾಳಿಗೆ. ಇದಕ್ಕೆ ಸೂರ್ಯ ಕಿರಣವು ಬಿಸಿಲುಕೋಲಿನಂತೆ ಬೀಳುವ 'ಕುಹರ'ವಿದೆ-

ಇದಕ್ಕೆ ಮೇಲು ಭಾಗದಲ್ಲಿ ಕನಕಗಿರಿ - ಗೋಪುರದ ನೆರಳು ಚಿತ್ರವು ಒಂದು ಕಂಡಿಯಿಂದ (ಪೂರ್ವದಿಂದ ಬರುವ!) ತೂರಿಗೋಡೆಯಮೆಲೆ ತಲೆಕೆಳಗಾಗಿ ಸ್ಪಷ್ಟವಾಗಿ ಮೂಡುವ ನೆರಳುಚಿತ್ರವನ್ನು ಗಮನಿಸಿದಲ್ಲಿ (ಇಂದು ಇದನ್ನು ಒಂದು ಮ್ಯಾಜಿಕ್ ಎನ್ನುವಂತೆ ತೋರಲಾಗಿದೆ)- ಇದು ಒಂದು ಕಾಲದಲ್ಲಿ ನೆರಳಿನ ಆಧಾರದಿಂದ ದಿನದ ಮುಂಜಾನೆ, ಅಪರಾಹ್ನ ಮತ್ತು ಸಂಜೆಗಳನ್ನು ಗುರುತಿಸುವ ಸಾಧನವಿದ್ದಿರಬಹುದು; ದಿನದ ಕಾಲಗತಿಯನ್ನು ಆಗಿನ ದಿನಗಳಲ್ಲಿ ಗುರುತಿಸಲು ಬಳಸುತ್ತಿದ್ದ ಸಾಧನವನ್ನು ನೋಡಬಹುದು. ಇದನ್ನೇ 'ಸೂರ್ಯ ಸಿದ್ಧಾಂತದಕಾಲ'ಮಾನವನ್ನು ಅಂದು ಗುರುತಿಸಿದ್ದ 'ಸಾಧನ' ಬಗೆಯೆಂದು ತೋರುತ್ತದೆ.

ಈ ಮಹಾದ್ವಾರವು ಬಹಳ ಹಳೆಯದು. ಇದರಾಚೆಗೆ ನದಿಯ ಕಡೆಗೆ ಇರುವ ಭಾಗದಲ್ಲಿ ಹತ್ತು - ಹನ್ನೆರಡನೆ ಶತಮಾನಗಳಿಗೆ ಸೇರಿಸಬಹುದಾದ ಕಟ್ಟಡಗಳಿವೆ. ಇದರಲ್ಲಿ ಮುಖ್ಯವಾಗಿ

1. ಹೊಯ್ಸಳ ಸಂಕೇತದ ಶಿಲ್ಪವಿದೆ ಅಲ್ಲದೆ. 2. ದುರ್ಗೆಯ ಗರ್ಭಗುಡಿಯೊಂದೇ ಇರುವ ರಚನೆಯಿದೆ. 3. ಇದರ ಎದುರಿಗೆ ವಿದ್ವಾಂಸರು ಕರೆಯುತ್ತಿರುವ ಮನ್ಮಥ ಸರೋವರ - ಒಂದು ದೊಡ್ಡ ಕಲ್ಯಾಣಿಯಿದೆ. ಈ ಕಲ್ಯಾಣಿಯ ಪಕ್ಕ ದಲ್ಲಿ ನದಿಯ ಕಡೆಗೆ ಹೋದರೆ ಅದರ ದಂಡೆಯಲ್ಲಿ ಹೊಯ್ಸಳರ ಕಾಲದ ಗಾರೆಯಿಲ್ಲದ ಚೌಕಕಲ್ಲುಗಳಿಂದ ನಿರ್ಮಿಸಿದ ಬುರುಜು ಮುಂತಾದುವಿಲ್ಲದ ಕೋಟೆಯ ಗೋಡೆಯ ಅವಶೇಷವಿದೆ - ಅಂದರೆ ಹರಿಹರನಿದ್ದಿರಬಹುದಾದ ಕಾಲದ

ಹೊಯ್ಸಳ ಸಂಸ್ಕೃತಿಗೆ ಸೇರುವ ಸುರಕ್ಷಿತ 'ತಾಣ'ವಿದೆ. ಇದನ್ನೇ ನಾವು ಹಂಪೆಯ ಪಂಪಾಕ್ಷೇತ್ರವೆಂದು ಗುರುತಿಸಬೇಕಾಗುತ್ತದೆ. ಏಕೆಂದರೆ ಈ ನದಿಯ ತೀರದಲ್ಲಿ ಪಂಪಾತೀರ್ಥವಿದ್ದು ಇಂದಿಗೂ ನದಿಯನ್ನು ದಾಟಲು ಹರಿಗೋಲಿನ ಬಳಕೆಯಿದೆ.

- ಹೀಗೇ 1. ಹೇಮಕೂಟ (ಉತ್ತರಕ್ಕೆ) 2. ದಕ್ಷಿಣಕ್ಕೆ ತುಂಗ ಭದ್ರೆಯ ತೀರ 3. ಪಶ್ಚಿಮಕ್ಕೆ ಮಾವಿನತೋಪು, ಮತ್ತು 4. ಪೂರ್ವಕ್ಕೆ ಎರಡುದ್ವಾರಗಳು - ಒಂದು ಕೃಷ್ಣ ದೇವರಾಯನ ದ್ವಾರ ಮತ್ತು ಎರಡು ಬಿಷ್ಟಪ್ಪಯ್ಯನ ಮಹಾದ್ವಾರ: ಇವುಗಳ ಎದುರಿಗೆ ಮಾತಂಗ ಪರ್ವತಕ್ಕೆ ಸೇರಿದಂತೆ ಕಾಣುವ ದೇಗುಲಕ್ಕೆ ಅಭಿಮುಖವಾದ ದೊಡ್ಡಬಸಪ್ಪನ ಮಂಟಪ - ಹೀಗೆ ವಿರೂಪಾಕ್ಷ ದೇಗುಲದ ಸಾಕಷ್ಟು ವಿಶಾಲವಾದ ಪ್ರಾಂಗಣದಿಂದ ಕೂಡಿದ ರಾಷ್ಟ್ರಕೂಟರ ಕಾಲದ ಗುಡಿಯ ರಚನೆಯಿಂದ ಮೊದಲಾಗಿ (ಗರ್ಭ ಗುಡಿ) ಒಂದು ರಂಗ ಮಂಟಪ- ಇದು ನೃತ್ಯ ಮಂಟಪ- ಇಂದಿಗೂ ಉಳಿದಿದ್ದು- ಅದನ್ನು ರಕ್ಷಿಸುವಂತೆ ಮುಖಮಂಟಪ ನಂತರ ಕಲ್ಯಾಣಮಂಪಟಕ್ಕೆ ದ್ವಾರವಿರು ವಂತೆ ಪೂರ್ವಾಭಿ ಮುಖವಾಗಿದ್ದು ಈ ಮುಖ ಮಂಟಪಕ್ಕೆ ದಕ್ಷಿಣ-ಉತ್ತರ ಕಡೆಗಳಿಗೆ ಪ್ರವೇಶ ದ್ವಾರಗಳೂ ಇವೆ.

ಇಲ್ಲಿಯ ಮುಖ್ಯ ಸಮಸ್ಯೆಯೆಂದರೆ 1. ಗರ್ಭಗುಡಿಯ ರಚನೆಯು ರಾಷ್ಟ್ರಕೂಟರ ಜೈನ ಬಸದಿಯಂತೆ ಇದೆ.

2. ರಂಗಮಂಟಪವು ಅಂತರಾಳದಿಂದ ಈಚೆಗೆ ಇದ್ದು ಬೇರೆಯ ವಿರೂಪಾಕ್ಷ ದೇಗುಲಗಳಲ್ಲಿನಂತೆ ಇಲ್ಲಿ ಬಸವಣ್ಣನ ಪ್ರತಿಷ್ಠೆಯಿಲ್ಲ.
3. ಈಚಿನದೆಂದೂ ಈ ರಂಗಮಂಟಪಕ್ಕೆ ಸೇರದೇ ಇರುವಂಥದೆಂದು ಗುರುತಿಸಲು ಆಗುವಂತೆ ಒಂದು ಬಸವಣ್ಣನನ್ನು ಇರಿಸಿರುವುದು.
4. ಇದರಿಂದಾಗಿ ಈ ಗರ್ಭಗುಡಿಯು ಹಳೆಯದು ಅಲ್ಲದೆ- ಅಂದರೆ ವಿರೂಪಾಕ್ಷನ ದೇಗುಲವಾಗಿರಲಿಲ್ಲವೆಂಬುದೂ ಅಲ್ಲದೆ,
5. ಹಳೆಯ ಗರ್ಭಗುಡಿಯಲ್ಲಿ 'ಶಿವಲಿಂಗ'ವನ್ನು ಸ್ಥಾಪಿಸಿರುವುದೂ ವಿಶೇಷವಾಗಿದೆ.
6. ಈ ಮುಖಮಂಟಪದಲ್ಲಿರುವ ಶಾಸನಗಳು ಗೋಡೆಗಳಿಗೆ ಸೇರಿದಂತೆ ಮುಖ ಮಂಟಪದ ನೂತನ ರಚನೆಯನ್ನು ಸೂಚಿಸುತ್ತವೆ. ಇವುಗಳ ಲಿಪಿಯಂತೂ ೧೪-೧೫ನೇ ಶತಮಾನಗಳಿಗೆ ಸೇರಿದೆಯೆಂದು ವಿದ್ವಾಂಸರು ಗುರುತಿಸಿದ್ದಾರೆ.

ಆದುದರಿಂದ ವಿರೂಪಾಕ್ಷನನ್ನು ಹಳೆಯ ಗರ್ಭಗುಡಿಯಲ್ಲಿ ಸ್ಥಾಪಿಸಲಾಗಿದೆ - ಎಂಬುದು ನಿರ್ವಿವಾದವಾದರೂ ಮತೀಯವಾದಿಗಳು ಅಭಿಮಾನಪೂರ್ವಕವಾಗಿ ಒಪ್ಪಲಾರದು. (ಈ ಬಗೆಯ ಪ್ರತಿಷ್ಠಾಪನೆಗೆ ಹೊಯ್ಸಳ ಇತಿಹಾಸದಲ್ಲಿ ಆಧಾರವನ್ನು ಕಾಣಬಹುದು - ಮುಂದೆ ವಿವರಿಸಲಾಗುತ್ತಿದೆ, ನೋಡಿ)

ಹಾಗಾದಲ್ಲಿ ಈ ಮೂಲ ಸ್ಥಾನವು ಏನಾಗಿದ್ದಿತು ? ಎಂಬುದು ಮುಖ್ಯ ಪ್ರಶ್ನೆ.

1. ಪೂರ್ವಾಭಿಮುಖವಾದ ಈ ದೇಗುಲವು ಬಿಷ್ಟಪ್ಪಯ್ಯನ ದ್ವಾರದಿಂದ -ಅದರಾಚೆಗೂ - ನೋಡಿದರೆ ಕೂಡ ಗರ್ಭಗುಡಿಯ ದೇವರಪೀಠವು ಗೋಚರವಾಗುತ್ತದೆ.

2. ಹರಿಹರನು ಹೇಳುವ 'ಸೂರ್ಯತೀರ್ಥ'ದ ದೇಗುಲವು ಇದೇ ಗರ್ಭಗುಡಿಯಾಗಿರಬೇಕೆಂಬುದಕ್ಕೆ ಅದಕ್ಕೆ ಅಭಿಮುಖವಾಗಿರುವ ಅಂತರಾಳದಿಂದ ಈಚೆಗೆ ಇರುವ ನೃತ್ಯಮಂಟಪ. ಇದರ ಕಲ್ಲಕೂಡ, ಕಂಬಗಳು ಮತ್ತು ಮೇಲುಮುಖ (-ಭುವನೇಶ್ವರಿಯಂಥದು) ರಾಷ್ಟ್ರಕೂಟ ಕಲ್ಯಾಣಿ ಚಾಲುಕ್ಯರ ಕಾಲದ ಮತ್ತು ವಲಯಗಳಲ್ಲಿ ಇಂದಿಗೆ ಅವಶೇಷಗಳಾಗಿ ಕಂಡು ಬರುವ ಸೂರ್ಯದೇಗುಲಗಳನ್ನು ನೆನಪಿಸುವ ರಚನೆಯಾಗಿದೆ.

3. ಸೂರ್ಯದೇಗುಲವೆಂದರೆ ನೃತ್ಯ ಸೇವೆಗೆ ತೆರವಾಗಿರುವುದಲ್ಲದೆ ಅದರ ಗೋಡೆಗಳಲ್ಲಿ ಮಿಥುನಶಿಲ್ಪಗಳೂ ಇರುತ್ತವೆ - ಇಂಥ ಸೂಚನೆಯನ್ನು ಮುಂದಿನ ಗೋಪುರಗಳಲ್ಲಿ ಹೇಮಕೂಟದ ಕಡೆಗೆ-ಮಿಥುನ ಶಿಲ್ಪಗಳು ಇವೆ. ಇವು ಗಾರೆ ಗಚ್ಚಿನಿಂದ ರಚಿತವಾಗಿದೆ.

4. ಕೃಷ್ಣದೇವರಾಯನ ದ್ವಾರ(ಗೋಪುರ)ಕ್ಕೆ ಗರ್ಭಗುಡಿಗೆ ಅಭಿಮುಖವಾದಂತೆ ದ್ವಾರದಪ್ರವೇಶದಿಂದ ಎಡಭಾಗದಲ್ಲಿ ಒಂದು ಗೂಡಿನಲ್ಲಿನಂತೆ ಸೂರ್ಯ ಮತ್ತು ಆತನ ಪರಿವಾರದ ದೇವತೆಗಳ ಪ್ರತಿಮೆಗಳನ್ನು ಇಂದಿಗೂ ರಕ್ಷಿಸಿಡಲಾಗಿದೆ.

   ಈ ಐತಿಹಾಸಿಕ ದಾಖಲೆಯನ್ನುಪುಣ್ಯವಶಾತ್ ಕೃಷ್ಣದೇವರಾಯನ ಅಭಿಮಾನದಿಂದಲಾದರೂ ರಕ್ಷಿಸಿಡಲಾಗಿದೆಯಷ್ಟೆ.

5. ಈ ವಿಗ್ರಹವಿದ್ದ ಗರ್ಭಗುಡಿಯಲ್ಲಿ ಇಂತಹ ಗರ್ಭಗುಡಿಯ ರಚನೆಯನ್ನು ಹಳೆಯಬೀಡಿನ ಹೊಯ್ಸಳೇಶ್ವರನಿಗೆ ಅಭಿಮುಖವಾಗಿರುವ ಬಸವಣ್ಣನ ಮಂಟಪದಲ್ಲಿ ಸೂರ್ಯನನ್ನು ಪ್ರತ್ಯೇಕವಾಗಿ ಒಂದು ಗರ್ಭಗುಡಿಯಲ್ಲಿ ರಕ್ಷಿಸಿರುವುದನ್ನು- ಕಾಣಬಹುದು.

6. ಈ ಸೂರ್ಯನ ಪರಿವಾರದ ವಿಗ್ರಹಗಳು ಬಹುಶಃ ಕಲ್ಯಾಣ ಚಾಲುಕ್ಯರ ಮುಂಚಿನ ದಿನಗಳದ್ದೆಂದೂ ಗುರುತಿಸಬಹುದಾಗಿದೆ.

   1. ಹೀಗೆ ಹೇಳಲು ಒಂದು ಪ್ರಬಲಕಾರಣವಿದೆ. ಸು. ಕ್ರಿ.ಶ. ಹನ್ನೊಂದನೆಯ ಶತಮಾನದ ನಂತರ ಬೇಲೂರು ಮತ್ತು ಹಳೆಯಬೀಡು- ಕೂಡಿಸಿಯೇ ಸೂರ್ಯದೇವಸ್ಥಾನಗಳು ಕೇವಲ ಅವಶೇಷಗಳಾಗಿವೆ. ಹೊಯ್ಸಳರ ಕಾಲದ ದೇಗುಲದಲ್ಲಿ ಯಾವುದೇ-ಹಿಂದಿನ-ಸೂರ್ಯದೇಗುಲವಾಗಲಿ ತನ್ನ

ಆರಾಧನೆಯನ್ನು ಕಳೆದುಕೊಂಡು ದೇಗುಲಗಳ ಗೋಡೆಗಳ ಹೊರಭಾಗ ದಲ್ಲಿ ರಚಿತವಾಗಿ ಅಲಂಕಾರದರೂಪದಲ್ಲಿವೆ.

2. ಸೂರ್ಯ ದೇವಸ್ಥಾನಗಳಲ್ಲಿ ದೇವದಾಸಿಯರ ಯಾ ಮಹಾಸತಿಗಳ (ನೃತ್ಯ) ಸೇವೆಗೆಂದು ರಚಿತವಾಗಿದ್ದಿರಬಹುದಾಗಿ ಅಂಥ ನೃತ್ಯಮಂಟಪಗಳು ವೈಷ್ಣವ ದೇಗುಲಗಳಲ್ಲಿ ಬೇಲೂರಿನಂತೆ ಉಳಿದುಕೊಂಡಿವೆ-ಈ ದೇವರ ಸೇವೆ ಯನ್ನು ಮಾಡುತ್ತಿದ್ದವರನ್ನು ನಮ್ಮ ಪೂರ್ವಿಕ ಸಮಾಜವು ಆಸ್ತೆಯಿಂದ ಸೃಷ್ಟಿಸಿಕೊಂಡುದು ಸಾಮಾಜಿಕ-ರಾಜಕೀಯ ಕಾರಣಗಳಿಂದ ಷೋಡಶವಿಧ ಪೂಜೆಯಲ್ಲಿ ಅಂದರೆ ಅಂಗಭೋಗದ ಜೊತೆಗೆ ರಂಗಭೋಗವನ್ನೂ ಸೇರಿಸಿರಬಹುದೆಂಬುದನ್ನು ಅಂದಂದಿನ -ಹೊಯ್ಸಳ - ಕಾಲಚೂರಿಗಳೂ ಸೇರಿದಂತೆ-ವೈಷ್ಣವ ದೇಗುಲಗಳಲ್ಲಿ ಮತ್ತು ಕೆಲವು ಬಸದಿಗಳಲ್ಲಿಯೂ ಉಳಿಸಿದಂತಿದೆ.

3. ಈಗಿನ ದಿನಗಳಲ್ಲಿ ಸೂರ್ಯಾರಾಧನೆಯು ಸಾರ್ವಜನಿಕ ದೇಗುಲಗಳಲ್ಲಿ ವಿರೂಪಾಕ್ಷ ದೇಗುಲದಂತೆಯೇ 'ಶೈವ'ವಾಗಿವೆ ಅಥವಾ ಈಗಲೂ ಗುರುತಿಸ ಬಹುದಾದಂತೆ ಸೂರ್ಯ ಪ್ರತಿಮೆಯೇ 'ನಾಮಧಾರಿ'ಯಾದ ಆಂಜನೇಯ ನಂತೆ ಕೂಡ ನಾರಾಯಣ ದೇಗುಲಗಳಾಗಿವೆ.

4. ಒಟ್ಟಿನಲ್ಲಿ ಕರ್ನಾಟಕದಲ್ಲಿ ಎಲ್ಲಿಯೂ ಸೂರ್ಯನ ಆರಾಧನೆಯು ದೇಗುಲ ಗಳಲ್ಲಿ ಉಳಿದಿಲ್ಲ. ಕೆಲವು ಗಣೇಶನ ಗುಡಿಗಳಾಗಿರಬೇಕೆಂಬುದಕ್ಕೆ ಕೂಡ ಗಣೇಶನ ಪಾನಪೀಠದಲ್ಲಿ ಸಪ್ತಾಶ್ವಗಳು ಉಳಿದಿವೆ. ಅಲ್ಲದೆ ಹಳೆಯ ಸೂರ್ಯಪ್ರತಿಮೆಗಳನ್ನು ಒಡೆದು ಹಾಕಿ ದೇಗುಲದ ಒಳಗೋ (ಲಕ್ಕುಂಡಿ ಯಲ್ಲಿ, ಗದಗಿನಲ್ಲಿ, ಸೇಡಂನಲ್ಲಿ ಇತ್ಯಾದಿ) ಹೊರಗೋ ಅವಶೇಷ ವಾಗಿಯೂ ಕಂಡುಬರುತ್ತವೆ.

5. ಇಷ್ಟಕ್ಕೆಲ್ಲಾ ಹಂಪೆಯ ವಿರೂಪಕ್ಷದ ಸನ್ನಿಧಿಯು ಬುನಾದಿಯಾದಂತೆ - ಇತಿಹಾಸವಾದಂತೆ ಕಂಡುಬರುತ್ತಿದೆ.

ವಿಷ್ಣುವರ್ಧನನು 'ತಲಕಾಡುಗೊಂಡ' ಎಂಬ ಬಿರುದನ್ನು ಸು.ಕ್ರಿ.ಶ. ೧೧೧೩ರ ವೇಳೆಗಾಗಲೇ ಪಡೆದಿದ್ದನೆಂಬುದಕ್ಕೆ ದೊಡ್ಡಗದ್ದವಳ್ಳಿಯ ಶಾಸನವು ಆಧಾರವಾಗು ತ್ತಿದೆ. ಆದರೆ ಆತನು ತನ್ನ ಸಾಮ್ರಾಜ್ಯದ ಎಲ್ಲೆಗಳನ್ನು ನಾಲ್ಕು ಪ್ರಸಿದ್ಧ ದೇಗುಲ ಗಳಿಂದ ಗುರುತಿಸುವುದು-ಬೇಲೂರಿನ ಚೆನ್ನಕೇಶವ ದೇವರ ಸಂಸ್ಥಾಪನೆಯ ಅಥವಾ ಪ್ರಾಣಪ್ರತಿಷ್ಠಾಪನೆಯ ಸಂದರ್ಭದಲ್ಲಿ- ಇದರ ಕಾಲಮಾನವು ಕ್ರಿ.ಶ. ೧೧೧೭ ಆಗಿದೆ. ಇದರಂತೆ ಈತನು ಗದಗಿನ ವೀರನಾರಾಯಣನ ಸ್ಥಾಪನೆಯನ್ನು ಈ ವೇಳೆಗಾಗಲೆ ಮಾಡಿದ್ದಂತೆ ತೋರುತ್ತದೆ. ಗದಗಿಗೆ ಹಂಪೆಯು ಬಹಳದೂರದಲ್ಲಿ ಎಂಬುದನ್ನು

ನೆನೆದರೂ ಹಂಪೆಯಲ್ಲಿಯೇ ಹೊಯ್ಸಳ ಸಂಕೇತವೂ ಕೋಟೆಯ ಅವಶೇಷಗಳೂ ಸಾರಿಹೇಳುತ್ತಿವೆ. ಪ್ರಾಯಶಃ ಹಂಪೆಯು ಆತನ ಹೊಯ್ಸಳ ಸಾಮ್ರಾಜ್ಯದ ಎಲ್ಲೆಕಟ್ಟೆಗೆ ಸೇರಿದಂತೆ ತುಂಗಭದ್ರಾನದಿಯ ದಕ್ಷಿಣದಲ್ಲಿದ್ದಿರಬೇಕೆಂಬುದನ್ನು ಗಮನಿಸ ಬಹುದು.

1. ಅಂದಿನ ಇತಿಹಾಸವನ್ನು ಗುರುತಿಸಲು ಹಂಪೆಯು ಒಂದು ಆಧಾರ ವಾಗುತ್ತದೆ. ತುಘಲಕ್‌ನ ಸೇನಾನಿಯಾಗಿ ದೇವಗಿರಿಯನ್ನು-ಅಲ್ಲಿಯ ಯಾದವರನ್ನು ಮಣಿಸಿ - ಮುಗಲ್ ಸಾಮ್ರಾಜ್ಯದ (!) ದಕ್ಷಿಣ ಎಲ್ಲೆಯನ್ನು ಗುರುತಿಸಿದಂತೆ ಆಗುತ್ತದೆ ಯಷ್ಟೆ - ಅಲ್ಲಿಂದ ದಕ್ಷಿಣಕ್ಕೆ ತುಂಗಭದ್ರೆಯ ಉತ್ತರ ದಂಡೆಯಲ್ಲಿದ್ದ ಕಂಪಲಿ ಕೋಟೆಯೂ ಅವನ ಕಣ್ಣುಗಳಿಗೆ ಬಿದ್ದಿರುವಂತಿದೆ ಇದಕ್ಕೆ ಶಾಸನಗಳನ್ನು ಕುಮಾರ ರಾಮನ ವೀರಗಲ್ಲನ್ನು? ಕೂಡ ಗುರುತಿಸಬಹುದು. ಆದರೆ ಒಂದು ತೊಡಕಾಗಿ ಅದರ ಕಾಲವನ್ನು ವಿಜಯನಗರದ ಸರಿ ಸುಮಾರಿಗೆ ಸೇರುವ ಕಾಲಮಾನಕ್ಕೆ ವಿದ್ವಾಂಸರು ಗುರುತಿಸುವ ಕಾರಣ ಪ್ರಶ್ನಿಸಬೇಕಾಗಿದೆ. ಈವರೆಗೆ ಯಾವುದೇ ಇತಿಹಾಸದ ವಿದ್ವಾಂಸರೂ ಮಲ್ಲಿಕಾಫರನು ಸೇನಾ ಸಮೇತನಾಗಿ ಕಂಪಲಿಯನ್ನೂ ತುಂಗಭದ್ರೆಯನ್ನು ದಾಟಿ - ಅವರೆಗೂ ಸುರಕ್ಷಿತವೂ ವೈಭವೋಪೇತವೂ ಆಗಿದ್ದಿರಬಹುದಾದ ಹೊಯ್ಸಳ - ಹಂಪೆಯನ್ನು (ಕಂಡು) ಧಾಳಿ ಮಾಡಿದನೆಂಬುದನ್ನು ಗುರುತಿಸಿರುವುದಿಲ್ಲ. ಇದಕ್ಕೆ ಹಂಪೆಯ ದೇಗುಲದ ಒಂದು ಶಾಸನವು ಅರ್ಧಮಾತ್ರ ಉಳಿದಿದೆಯಷ್ಟೇ. ಈ ಮೊದಲೇ ಹೇಳಿರುವಂತೆ ಹರಿಹರಕವಿಯು ಹಂಪೆಯಲ್ಲಿ 'ಸೂರ್ಯತೀರ್ಥ' ಮತ್ತು ಪಂಪಾತೀರ್ಥಗಳನ್ನು ಗುರುತಿಸಿರುವುದನ್ನು ಅಲ್ಲಿ ಈ ಎರಡೂ ಸೇರಿದಂತೆ ಪುಣ್ಯಕ್ಷೇತ್ರವಿದ್ದಿರಬಹುದೆಂಬುದು ಬಹುಮುಖ್ಯ ಸಂಗತಿ ಯಾಗುತ್ತದೆ.

2. ಸೂರ್ಯಾರಾಧನೆಯೆಂದರೆ ಬ್ರಾಹ್ಮಣರಿಗೆ ನಿತ್ಯ - ಉದಯದಲ್ಲಿ ಸೂರ್ಯ ನಮಸ್ಕಾರ ಮತ್ತು ಅರ್ಘ್ಯವನ್ನು ನೀಡುವುದಲ್ಲದೆ ಪಂಚಾಂಗದ ಒಕ್ಕಣೆಯೇ ಆದೀತು - ಅದರ ಆಧಾರದಿಂದ ಉಳಿದ ವರ್ಣಗಳನ್ನೂ ತನ್ನ ಹತೋಟಿಯಲ್ಲಿ ಇರಿಸಿಕೊಳ್ಳಲು ಸಾಧ್ಯವಾಯಿತೆನ್ನಬಹುದು. ಎಲ್ಲಾ ಆಚರಣೆಗಳಿಗೂ 'ಪಂಚಾಂಗ'ವು ಸಮಯ (ಧರ್ಮ) ನಿರ್ಧಾರಕವೆಂಬುದನ್ನು ಈಗಲೂ ಗುರುತಿಸಬಹುದಾಗಿದೆ. ಆಂಗ್ಲ ಸಂಸ್ಕೃತಿಯ ಪ್ರಭಾವಕೂಡ ಇದನ್ನು ಪರಿಹರಿಸಲು ಸಾಧ್ಯವಾಗಿಲ್ಲ - ಅಂದಮೇಲೆ ಸೂರ್ಯನನ್ನು ಹೊಯ್ಸಳರ ಕಾಲದಲ್ಲಿ ಯುದ್ಧದ ದೇವತೆಯಾಗಿ ಪರಿಗಣಿಸಿದ್ದ ರೆಂಬುದಕ್ಕೆ ಹಳೆಯಬೀಡಿನ ಸೂರ್ಯನ ಉದಾಹರಣೆ ಖಚಿತಪಡಿಸುತ್ತದೆ. ಇದಕ್ಕೆ ಹಳೆಯಬೀಡು ಅನ್ವರ್ಥನಾಮವಾಗಿದೆ. ಯುದ್ಧವೆಂದರೆ ಸೂರ್ಯನಿಗೆ ಆರಾಧನೆ - ನರಬಲಿ, ಆತ್ಮಬಲಿ ಯಲ್ಲದೆ ಹರಕೆಗಳ ವಿಪರೀತಗಳು ಸೇರುತ್ತವೆ. ಮಹಾಸತಿ ಮತ್ತು ವೀರಗಲ್ಲುಗಳನ್ನು ಇಂಥ ಪರಿಸರದಲ್ಲಿಯೇ ಕಾಣುತ್ತಿದ್ದೇವೆ. ಆದುದರಿಂದ ಸೂರ್ಯನಿಗೆ ಆಭರಣಗಳ ಕಾಣಿಕೆ ಕಿರೀಟ ಮಕುಟ, ಮುತ್ತು ರತ್ನಗಳ ಹಾರಗಳು, ಬೆಳ್ಳಿಯ ಪಾದುಕೆಗಳು ಇತ್ಯಾದಿ

ಮೈ ತುಂಬ ಆಭರಣಗಳು ಸೇರುವುದು ಸಹಜ. ಹಂಪೆಯ ಸೂರ್ಯನು ಇಂಥ ಹೊಯ್ಸಳ ಮನೋಧರ್ಮದ ಪ್ರತಿಮೆ. ಅಂದ ಮೇಲೆ ಮ್ಲೇಚ್ಛರಿಗೆ ಬೇಕಾದ ಐಶ್ವರ್ಯವನ್ನು ಸುಲಭವಾಗಿ ಪಡೆಯಲು ಧಾಳಿ ಮಾಡಿದ ವಿಷಯದಲ್ಲಿ ಮೊಟ್ಟಮೊದಲಿಗೆ (?) ಹಂಪೆಯ ಧಾಳಿಯಾಗಿರಬಹುದು ಎಂಬುದನ್ನು ನನ್ನ ಸಮಕಾಲೀನ ವಿದ್ವಾಂಸರಲ್ಲಿ ಮನವಿ ಮಾಡುತ್ತಿದ್ದೇನೆ. ಈ ಚಿಂತನೆಯ ಸಾಕ್ಷ್ಯಾಧಾರಗಳನ್ನು ಮಲ್ಲಿಕಾಫರನು ಎರಡನೆಯ ಬಾರಿ ಬಂಧ್ಯು ಹಳೆಯಬೀಡನ್ನು ಲೂಟಿ ಮಾಡಿರುವುದೂ ಸರಿಯಷ್ಟೆ. ಇಷ್ಟರಲ್ಲಿ ಗದಗು - ಲಕ್ಷ್ಮೇಶ್ವರಗಳೂ ನೆನಪಾಗ ಬಹುದು. ಅಲ್ಲೆಲ್ಲಾ ಸೂರ್ಯನ ದೇಗುಲಗಳು ನಾಶವಾಗಿವೆ. ಈ ಬಗೆಯ ಧಾಳಿ ಯನ್ನು ಹೊಯ್ಸಳ ಸಾಮ್ರಾಜ್ಯದಲ್ಲಿ ಖಚಿತವಾಗಿ ಗುರುತಿಸಲು ಸಾಧ್ಯವಾಗಿದೆಯಲ್ಲದೆ ದಕ್ಷಿಣ ಕನ್ನಡದಲ್ಲಿ ಸೂರತ್‌ವರೆಗೂ ಈ ಬಗೆಯ ಲೂಟಿಯನ್ನು ಮುಂದುವರಿಸಿ ದಂತೆ ಕಂಡುಬರುತ್ತಿದೆ-ಅಂತಹ ಬೇಟೆಯಲ್ಲಿ ಮೊದಲ ರುಚಿಯು ಹಂಪೆಯ ಸೂರ್ಯನಲ್ಲಿ ಕಾಣಬೇಕಾಗಿದೆ.

3. ಮಲ್ಲಿಕಾಫರನ ಹೆಜ್ಜೆಗಳು ಅಂದಿನ ಇತಿಹಾಸದ ಹೆಜ್ಜೆಗಳೇ ಆಗುತ್ತಿವೆ. ಅದುದರಿಂದ ಹಾಳಾದ ಹಂಪೆಯಲ್ಲಿ ಮತ್ತೆ ವಿದ್ಯಾರಣ್ಯರು ವಿಜಯನಗರದ ಸಂಸ್ಥಾಪನೆಯನ್ನು ಮಾಡುವುದರಲ್ಲಿ ಔಚಿತ್ಯವೂ ಅಲ್ಲದೆ ಹೊಯ್ಸಳ ಸಂಪ್ರದಾಯ ವನ್ನು ವೈಭವದ ಕಡೆಗೆ ಒಯ್ಯುವುದರಲ್ಲಿ ಅವರು ಯಶಸ್ವಿಯಾದರೆಂಬುದಕ್ಕೆ ಇಂದಿಗೂ ಹಂಪೆಯ ಅವಶೇಷಗಳು ಕಣ್ಣಿಗೆ ಬೀಳುತ್ತಿವೆ.

4. ಈ ಹಿನ್ನೆಲೆಯಿಂದ ನೋಡಿದಾಗ ವಿಜಯನಗರದ ಸಂಸ್ಥಾಪನೆಯು ಹಂಪೆಯ ಅವಶೇಷಗಳ ಮೊದಲ ಹಂತ. ಮೇಲೆ ನಡೆದಿರುವುದಕ್ಕೆ ವಿರೂಪಾಕ್ಷನ ಸಾಕ್ಷ್ಯಾಧಾರಗಳಿವೆ ಎನ್ನಬಹುದು. ಹೇಗೂ ಇದು ಮಲ್ಲಿಕಾಫರನ ಮೊದಲ ಧಾಳಿಯ, ಅಂದರೆ ಸು. ಕ್ರಿ.ಶ. ೧೩೧೪ ರ ನಂತರವೆ ಜರುಗಿರುವುದರಲ್ಲಿ ಅನುಮಾನವಿರಲಾರದು-

5. ವಿಜಯನಗರದ ಕೋಟೆಯು ಕಲ್ಲಿನ ಬುರುಜುಗಳಿಲ್ಲದ ಹೊಯ್ಸಳ ಕೋಟೆ ಗಳಲ್ಲಿ 'ಏಳು ಸುತ್ತಿನ ಕೋಟೆ' ಎಂಬುದರ ನೆನಪಾಗುತ್ತದೆ. ಇಲ್ಲಿ ಕಾವಲು ಗೋಪುರ ಗಳು (ಬುರುಜುಗಳು) ಮಹಮ್ಮದೀಯಾ ಇಸ್ಲಾಮಿಕ್ ವಜ್ರಗಾರೆಯಲ್ಲಿ ನಿಂತಿರುವುದನ್ನು ಗಮನಿಸಬಹುದು. ಇಂತಹ ಕಾವಲನ್ನು ಹೊಯ್ಸಳರ ಕೋಟೆಗಳಲ್ಲಿ ಕಾಣಲಾರೆವು. ಉದಾ. ಬೇಲೂರು ಮತ್ತು ಬಾಣಾವರಗಳು ಅವು ಚಚ್ಚೌಕ ಕಲ್ಲುಗಳ ಗೋಡೆಗಳಷ್ಟೇ! ಅಂತಹದನ್ನು ವಿಜಯನಗರದ ಅವಶೇಷಗಳಲ್ಲಿ ಕಾಣುತ್ತೇವೆ.

6. ಹೀಗೆ ಸೂರ್ಯದೇಗುಲಗಳ ಲೂಟಿಯ ಐತಿಹಾಸಿಕತೆಯಲ್ಲಿ ನೋಡಿದಾಗ ವಿಜಯನಗರದ ಪತನವೂ ಸೂರ್ಯದೇಗುಲಗಳ ಲೂಟಿಯಿಂದ ಅಗಿರುವಂತೆ ಕಂಡು ಬರಲೂ ಸಾಧ್ಯವಾಗಿದೆ. ಈ ಬಗೆಗೆ ರಾಜಕೀಯವು ತನ್ನ ಪುಟಗಳನ್ನು ತುಂಬಿಸಿಕೊಳ್ಳುತ್ತದೆ ಎಂಬುದನ್ನು ಪರಕೀಯವಾದ ರಾ.ಸೆವೆಲ್ ಮತ್ತು ಲಾಂಗ್ ಹರ್ಸ್ಟ್ ಒಕ್ಕಣೆಗಳಿಂದ ನಿರ್ಧರಿಸಬಹುದಾಗಿದೆ.

ವಿದ್ಯಾರಣ್ಯರು ಸೂರ್ಯದೇಗುಲದಲ್ಲಿ ವಿರೂಪಾಕ್ಷನನ್ನು ಪ್ರತಿಷ್ಠೆ ಮಾಡಿದ್ದ ಲ್ಲದೆ ವಿಜಯನಗರದ ಆಳ್ವಿಕೆಗೆ ಮಾರ್ಗದರ್ಶಕರೂ ಆಗಿದ್ದಿರಬೇಕೆಂಬುದಕ್ಕೆ ಬೇಲೂರಿನಲ್ಲಿ ವಿಷ್ಣುವರ್ಧನನು ಕೇವಲ ಚೆನ್ನಕೇಶವ ಮೂರ್ತಿಯನ್ನು ಒಂದು ವಿಜಯೋತ್ಸವದ ಕಾರಣದಂತೆ ಮಾಡಿರಲು ರಾಮಾನುಜಾಚಾರ್ಯರೂ ಬೆಂಬಲ ನೀಡಿರಬಹುದಾಗಿದೆ. ಅಂತಹ ಒಕ್ಕಣೆಯನ್ನು ಬೇಲೂರು ಕ್ರಿ.ಶ. ೧೧೧೭ರ ಶಾಸನವನ್ನು ಸೂಚಿಸಬಹುದಾಗಿದೆ.

ಉಪಸಂಹಾರ : ವಿಜಯನಗರದ ಸ್ಥಾಪನೆಯು ಬೇಲೂರಿನಲ್ಲಿ ವಿಷ್ಣು ವರ್ಧನನು ವಿಜಯೋತ್ಸವವನ್ನು ಚೆನ್ನಕೇಶವನ ಸಂಸ್ಥಾಪನೆಯಿಂದ ನಡೆಸಿರು ವಂತೆಯೇ ಹಂಪೆಯಲ್ಲಿ (ಅದೇ ರೀತಿಯಲ್ಲಿ!) ಪಂಪಾವತಿಯ- ವಿರೂಪಾಕ್ಷನ ಸ್ಥಾಪನೆಯೂ ನಡೆದಿರುವಂತಿದೆ. ಇದರ ಕಾಲವನ್ನೂ ಕ್ರಿ.ಶ. ಸು. ೧೩೧೪ರಿಂದ ಅದೇ ೧೩೨೦ ರ ನಂತರವೇ ಜರುಗಿಸಿರಬಹುದೆಂದು ಲಕ್ಷ್ಮಣಗೆರೆಯನ್ನು ಎಳೆಯ ಬಹುದಾಗಿದೆ. ರಾ. ಸೆವೆಲ್ ಈ ಕಾಲವನ್ನು ಕ್ರಿ.ಶ. ೧೩೩೬ಕ್ಕೆ ಗುರುತಿಸುವಲ್ಲಿ ನಡೆಸಿರುವ ತರ್ಕಕ್ಕೆ ಮೀರುವಂಥದನ್ನು ಈಗಲೂ ನಡೆಸುತ್ತಿರುವ ವಿದ್ವಾಂಸರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

1. ಆಧಾರಗ್ರಂಥಗಳೂ ಸುಪ್ರಸಿದ್ಧವೇ ಆಗಿವೆ.
2. ಇತ್ತೀಚಿನ 'ಹಂಪಿ' ಎಂಬ ಗ್ರಂಥ - ಮಿಷೆಲ್ (ಅವರದ್ದು).
3. ಹಂಪಿ ಶಾಸನಗಳು-ಕನ್ನಡ ವಿಶ್ವವಿದ್ಯಾಲಯ ಹಂಪಿ. ಸಂಪಾದಕರು: ಡಾ.ದೇವರ ಕೊಂಡಾರೆಡ್ಡಿ

ಅಡಿಟಿಪ್ಪಣಿ

The Karnataka Year book 1915 D.V.G.(section) X History : PP62- "XI,-The sword of Mallik Kafur , the general of Allauddin flashed accross the Hoysala dominions in 1310 A.D.Dwara samudra was sacked and the enemy retrurned to Delhi, literally laden with gold. An earlier campaign directed against the Yadava Prince Rama Deva of Devagiri had given Allaudin "50 mands of gold, 600 of pearls, 2 of jewels, 1,000 of Silver, 4,000 pieces of Silk, besides an annual tribute to be sent to Delhi." Before Karnataka could revive from these ravages, another Mohamadan expedition, despatced this time by Mohamad (Bun) Tugla overran the country and made its ruin complete."

Section XIII - Revengeful time was nursing his own plans in silence and secrecy. The magnificent edifice of Vijayanagar put forth its radiant appearance in 1336 (AD) under the fostering care of the great patriot and pandit, Vidyaranya.... - the whole noble fabric (of Vijayanagar) was battered and lattered on the tragic plains of Talikota (1565 A.D.-) D.V.G.

(Note : ಈ ಯುದ್ಧ ಕ್ಷೇತ್ರವು ರಕ್ಕಸತಂಗಡಿಯಲ್ಲಿ ಜರುಗಿತೆಂದು ನಂತರದಲ್ಲಿ ಮುಂದುವರಿದ ಶೋಧಗಳಿಂದ ನಿಶ್ಚಿತವಾಗಿದೆ. ಉಳಿದ ಅಂಶಗಳು ಸರಿಯಾಗಿವೆ.)

೪೯. ಕನ್ನಡ ವಿಶ್ವವಿದ್ಯಾಲಯದ (ಐತಿಹಾಸಿಕ ಸ್ಥಳಗಳು) ಆವರಣದಲ್ಲಿ ಶಿಲಾಯುಗದ ಸಂಸ್ಕೃತಿ

ಡಾ.ಎಂ. ಕೊಟ್ರೇಶ್

ಕನ್ನಡ ವಿಶ್ವವಿದ್ಯಾಲಯದಲ್ಲಿ ಶಿಲಾಯುಗದ ಸಂಸ್ಕೃತಿ ಎಂಬ ತಲೆಬರಹವನ್ನು ನೋಡಿದೊಡನೆಯೇ ಓದುಗರಿಗೆ ಅತಿಯಾದ ಆಶ್ಚರ್ಯ ಹಾಗೂ ಕುತೂಹಲಗಳು ಉಂಟಾಗುವುದು ಸ್ವಾಭಾವಿಕ. ಹಾಗಾಗಲು ಕಾರಣಗಳಿಲ್ಲವೆಂದಲ್ಲ. ಪ್ರಾಯಶಃ ಕರ್ನಾಟಕದ ಯಾವ ವಿಶ್ವವಿದ್ಯಾಲಯದ ಆವರಣದಲ್ಲಿ ಈ ತೆರನಾದ ಶಿಲಾಯುಗದ ಸಂಸ್ಕೃತಿ ಇದ್ದ ಬಗ್ಗೆ ಮಾಹಿತಿಗಳಿಲ್ಲ.

ಇಲ್ಲಿಯ ಪುರಾತತ್ವ ವಿವರಗಳನ್ನು ಪರೀಕ್ಷಿಸುವ ಮೊದಲು ಬಳ್ಳಾರಿ ಪ್ರದೇಶದ ಪ್ರಾಕ್ ಚರಿತ್ರೆಯನ್ನಷ್ಟು ಹಿನ್ನೆಲೆಯಾಗಿ ತಿಳಿಯುವುದು ಸೂಕ್ತವೆನಿಸುವುದು. ಬಳ್ಳಾರಿ ಮತ್ತು ಅದರ ಸುತ್ತಮುತ್ತಲಿನ ಪ್ರದೇಶವು ಶಿಲಾಯುಗದ ಮಾನವನ ಕಾರ್ಯ ಚಟುವಟಿಕೆಗಳ ಬಹುಮುಖ್ಯವಾದ ತಾಣಗಳಲ್ಲೊಂದಾಗಿತ್ತೆಂಬ ವಿಷಯವು ಕ್ರಿ.ಶ. ೧೮೭೨ರಿಂದಲೇ ತಿಳಿದು ಬಂದಿದೆ. ಕ್ರಿ.ಶ.೧೮೮೪ರಲ್ಲಿ ರಾಬರ್ಟ್ ಬ್ರೂಸ್ ಫೂಟ್ ಎಂಬ ಆಂಗ್ಲ ಅಧಿಕಾರಿಯು ಬಳ್ಳಾರಿ ಜಿಲ್ಲೆಯಲ್ಲಿ ಪ್ರಥಮ ಬಾರಿಗೆ ವ್ಯವಸ್ಥಿತ ರೀತಿಯಲ್ಲಿ ಭೌಗೋಳಿಕ ಸರ್ವೇಕ್ಷಣಾ ಕಾರ್ಯವನ್ನು ನಡೆಸಿದನು. ಆ ಸಮಯ ದಲ್ಲಿ ಸುಮಾರು ೭೭ ಶಿಲಾಯುಗ ಮಾನವ ನಿವೇಶನಗಳನ್ನು ಆತನು ಗುರುತಿಸಿದನು. ಅವುಗಳಲ್ಲಿ ಹಂಪೆಯೂ ಒಂದು. ಜೊತೆಗೆ ಹಂಪಿಗೆ ಅನತಿ ದೂರದಲ್ಲಿ ಎಂದರೆ ಸುಮಾರು೨ಂಕಿ.ಮೀ. ಅಂತರದೊಳಗೆ ಇನ್ನು ೮ ರಿಂದ ೧೦ ನಿವೇಶನಗಳು ಪಟ್ಟಿಯನ್ನು ಮಾಡಿರುತ್ತಾನೆ. ಅವುಗಳು ಇಂತಿವೆ : ದರೋಜಿ ಗುಡ್ಡ, ಗಾದಿಗನೂರು, ಕಾಕುಬಾಳು ಗುಡ್ಡ, ಮಲ್ಲಾಪುರ, ನಾಗಲಾಪುರ, ನಿಂಬಾಪುರ, ತಿಮ್ಮಲಾಪುರ, ತೋರಣಗಲ್ಲು, ಮುಂತಾದವುಗಳು. ಈ ಗ್ರಾಮಗಳ ಹತ್ತಿರ ಕಾಣಬರುವ ಶಿಲಾಯುಗದ ನಿವೇಶನ ಗಳಲ್ಲಿ ಶಿಲಾಯುಗದ ಮಾನವನು ಬಳಸುತ್ತಿದ್ದನೆಂದು ಹೇಳಬಹುದಾದ ಕಲ್ಲಿನಿಂದ ಮಾಡಿದ ಆಯುಧಗಳು ಮಡಿಕೆಚೂರುಗಳು ಮತ್ತಿತರ ಸಲಕರಣೆಗಳನ್ನು ಗುರುತಿಸಲಾಯಿತೆಂಬು ದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಕೆಲವೆಡೆ ಇದೇ ಕಾಲದ ಮಾನವನು ತಾನು ತಯಾರಿಸಿದ ಕಲ್ಲಿನ ಆಯುಧಗಳನ್ನು (Hand axes celts etc) ಹರಿತಗೊಳಿಸಲೋಸುಗ ಹಾಸುಬಂಡೆಗಳ ಮೇಲೆ ಮಸೆಯುವ ಸಮಯದಲ್ಲಿ, ಸವೆತದಿಂದ ಉಂಟಾದ ಕುಳಿಗಳು

(worn - out grooves) ಕಾಣಬಹುದು. ಬಂಡೆಗಲ್ಲುಗಳ ಮೇಲೆ ಅಥವಾ ಅವನು ವಾಸಿಸುತ್ತಿದ್ದ ಗುಹೆಗಳಲ್ಲಿ ಕೊರೆಯಲಾದ ಅಥವಾ ಕೆಂಪು, ಬಿಳಿಯ ಬಣ್ಣಗಳಲ್ಲಿ ಚಿತ್ರಿಸಲಾದ ಶಿಲಾಯುಗದ ರೇಖಾಚಿತ್ರಗಳನ್ನು ಕನ್ನಡ ವಿಶ್ವವಿದ್ಯಾಲಯದ ಆಗ್ನೇಯ ದಿಕ್ಕಿನ ಮಾರಿಹಳ್ಳದ ದಂಡೆಯ ಮೇಲಿರುವ ಒಂಟಿ ಬಂಡೆಯ ಮೇಲೆ, ಹಾಗೂ ನಂತರದ ಕಾಲಾವಧಿಯ ಅಸ್ಪಷ್ಟತೆಯಿಂದ ಕೂಡಿದ ರೇಖಾಚಿತ್ರಗಳು ಗಿರಿಸೀಮೆಯ ಚೋಮಿನ ಮುಂದಿನ ಬಂಡೆಯ ಮೇಲೆ ಹಾಗೂ ಇತ್ತೀಚೆಗೆ ಕಾಣದಾಗಿರುವ ಶಿಲ್ಪ ವನದ ಹಿಂಭಾಗದ ಬಂಡೆಗಳಲ್ಲಿ ಕಾಣಬಹುದು. ಈ ತೆರನಾದ ಕೆಂಪುವರ್ಣದ ರೇಖಾ ಚಿತ್ರಗಳನ್ನು ಹಂಪಿಯ ವಿಜಯ ವಿಠಲ ದೇವಾಲಯದ ಈಶಾನ್ಯಕ್ಕಿರುವ ಮುಸಲಯ್ಯನ ಬೆಟ್ಟದಲ್ಲಿ, ಹೇಮಕೂಟದಲ್ಲಿ ಹಾಗೂ ಚಕ್ರತೀರ್ಥಗಳಲ್ಲಿ ನೋಡಬಹುದು. ಹಂಪೆಯಿಂದ ಸುಮಾರು ೨ ಕಿ.ಮೀ. ದೂರದಲ್ಲಿ ಒಂದು ಚಿಕ್ಕ ಬೂದಿಯ ಗುಡ್ಡ ಅಥವಾ ಮರಡಿ ಕಾಣಬರುತ್ತದೆ. ಅದನ್ನು ಸ್ಥಳೀಯರು ವಾಲಿಕಾಷ್ಠ ಎಂದು ಕರೆಯುವ ವಾಡಿಕೆ. ವಿಜಯನಗರದ ಆಳ್ವಿಕೆಯ ಕಾಲದಲ್ಲಿ ಈ ಭಾಗಕ್ಕೆ ನಿಂಬಾಪುರವೆಂದು ಹೆಸರು. ಈ ಬೂದಿಗುಡ್ಡವನ್ನು ಕ್ಯಾಪ್ಟನ್ ನೀವ್‌ಟೋಲ್ಡ್ ಎಂಬುವವನು ಕ್ರಿ.ಶ.೧೮೭೨ರಲ್ಲಿಯೇ ಗುರುತಿಸಿದ್ದನು. ಇದಕ್ಕೆ ಅನತಿದೂರದಲ್ಲಿರುವ ಕನ್ನಡ ವಿಶ್ವವಿದ್ಯಾನಿಲಯದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಹತ್ತಿರ ಬೂದಿಮಣ್ಣಿನ ರಾಶಿಗಳು ನೆಲದಲ್ಲಿ ಗೋಚರಿಸುತ್ತವೆ. ಇಲ್ಲಿ ಬೃಹತ್ ಶಿಲಾ ಸಂಸ್ಕೃತಿಯ ಸಮಾಧಿ ಕಟ್ಟಡಗಳು ಇದ್ದ ಬಗ್ಗೆ ಅವಶೇಷಗಳಿವೆ. ಇಲ್ಲಿ ಭೂ - ಉತ್ಖನನ ನಡೆಸಿದಲ್ಲಿ ಬೃಹತ್ ಶಿಲಾ ಸಂಸ್ಕೃತಿಯ ಪಳಿಯುಳಿಕೆಗಳನ್ನು ಹೊರ ತೆಗೆಯಬಹುದು. ಈಚೆಗಿನ ವಿಷಯವೆಂದರೆ ಕಮಲಾಪುರದಿಂದ ನೈರುತ್ಯ ದಿಕ್ಕಿನಲ್ಲಿ ಸುಮಾರು ೬ ಕಿ.ಮೀ. ದೂರದಲ್ಲಿರುವ ಒಂದು ಚಿಕ್ಕಹಳ್ಳದಲ್ಲಿ ಪ್ರಾಚೀನ ಶಿಲಾಯುಗದ ಕಲ್ಲಿನಾಯುಧಗಳು ದೊರೆತಿವೆ. ಆ ಕಾಲದ ಮಾನವನು ತನಗೆ ಬೇಕಾದ ಶಿಲಾಯುಧಗಳನ್ನು ದುಂಡಾದ ಕಲ್ಲುಗಳನ್ನು ಒಡೆದೋ, ಕೆತ್ತಿಯೋ ತಯಾರಿಸಿಕೊಳ್ಳುತ್ತಿದ್ದನು. ದುರದೃಷ್ಟವಶಾತ್ ಈ ತೆರನಾದ ಯಾವ ಶಿಲಾಯುಗದ ಆಯುಧಗಳು ಇಲ್ಲಿ ನಮಗೆ ಕಂಡು ಬಂದಿಲ್ಲ. ಬದಲಾಗಿ ಕಬ್ಬಿಣ ತಯಾರಿಕೆಯ ಪ್ರಾಚೀನ ಕುಲುಮೆಗಳಿದ್ದ ಬಗ್ಗೆ ಸ್ಪಷ್ಟ ಆಧಾರಗಳನ್ನು ನಾವಿಲ್ಲಿ ನೋಡಬಹುದು. ಮುಂದೆ ಈ ಪ್ರದೇಶ ವಿಜಯನಗರ ಅಸ್ತಿತ್ವಕ್ಕೆ ಬಂದ ಮೇಲೆ ತನ್ನ ರೂಪರೇಷೆಗಳನ್ನು ಬದಲಾಯಿಸಿಕೊಂಡಿರಬೇಕು. ಇಲ್ಲೊಂದು ಕುಶಲಕೆಲಸಗಾರರ ಕಾರ್ಯಾಗಾರವೇ ನಡೆದ ಬಗ್ಗೆ ಅನೇಕ ಅವಶೇಷಗಳನ್ನು ಗುರುತಿಸಬಹುದು. ಕನ್ನಡ ವಿಶ್ವವಿದ್ಯಾಲಯದ ಇಂದಿನ ಆಡಳಿತ ಸಿಬ್ಬಂದಿಯ ವಸತಿ ಸಮುಚ್ಚಯದಿಂದ ಹಿರಿಯ ಪ್ರಾಥಮಿಕ ಶಾಲೆಯವರೆಗೆ ಸರಳ ರೇಖೆಯಲ್ಲಿ ಗಡಿ ನಿಯಂತ್ರಣ ಕಲ್ಲುಕಂಬಗಳನ್ನು ಬಹಳ ವ್ಯವಸ್ಥಿತವಾಗಿ ನೆಡಲಾಗಿದೆ. ಇವುಗಳ ಪೂರ್ವದ ಒಳಮುಖದಲ್ಲಿ ಕಟ್ಟಡಾ ವಶೇಷಗಳು ಹಾಗೂ ತಳವಿನ್ಯಾಸಗಳು

ಗೋಚರಿಸುವವು. ಹತ್ತಿರದ ನಾಗಬನದಲ್ಲಿ ಬೇವಿನ ಮರದ ಕೆಳಗೆ ವಿಜಯನಗರ ಕಾಲದ ದೇವತೆಯ ಶಿಲ್ಪ ಆರಾಧನೆಗೊಳ್ಳುತ್ತದೆ. ಈ ದೇವತೆಗೆ ಕೊಂಡಮ್ಮನೆಂದು ಸ್ಥಳೀಯರು ಕರೆಯುತ್ತಾರೆ. ನಾಲ್ಕಾರು ನಾಗರಕಲ್ಲುಗಳೂ ಇವೆ. ಪ್ರತಿವರ್ಷ ನೆರೆಯ ಆಂಧ್ರ ಹಾಗೂ ಕರ್ನಾಟಕದ ವಿವಿಧ ಮೂಲೆಗಳಿಂದ ಯುಗಾದಿ ಪಾಡ್ಯದಂದು ನೂರಾರು ಭಕ್ತರು ಇಲ್ಲಿಗೆ ಬರುತ್ತಾರೆ. 'ತುಂಬಾ ಹಿಂದಿನಿಂದಲೂ ನಾವು ಇಲ್ಲಿ ನಡೆದುಕೊಳ್ಳುತ್ತೇವೆ. ನಮಗೆ ಒಳ್ಳೆಯದಾಗಿದೆ' ಎಂಬುದು ಅವರ ಪ್ರತಿಕ್ರಿಯೆ.

ಇಲ್ಲಿಗೆ ಅನತಿಯಲ್ಲಿ ವಿಜಯನಗರಕಾಲಾವಧಿಯ ಬಾವಿ ಇದೆ. ಇದು ದಕ್ಷಿಣೋತ್ತರವಾಗಿ ಸುಮಾರು ೧೨೦ ಅಡಿ ಉದ್ದ ಹಾಗೂ ಪೂರ್ವ ಪಶ್ಚಿಮವಾಗಿ ಸುಮಾರು ೪೦ ಅಡಿ ಅಗಲವಾಗಿದೆ. ಬಾವಿಗೆ ಸುಮಾರು ೮ ರಿಂದ ೧೦ ಅಡಿ ಉದ್ದ ಹಾಗೂ ೨ ½ ಅಡಿ ಅಗಲದ ಬೃಹತ್‌ಗಾತ್ರದ ಶಿಲೆಗಳನ್ನು ಕಡೆದು ಜೋಡಿಸಲಾಗಿದೆ. ಬಾವಿಯು ಪ್ರಸ್ತುತ ಶಿಥಿಲಾವಸ್ಥೆಯಲ್ಲಿರುವುದರಿಂದ ಬಾವಿ ಕಟ್ಟಡದ ಅನೇಕ ಕಲ್ಲುಗಳು ಕಾಣದಾಗಿವೆ. ಕೆಲವು ಸಾಗಿಲ್ಪಟ್ಟಿವೆ. ತನ್ನ ಉಚ್ಛ್ರಾಯ ಸ್ಥಿತಿಯಲ್ಲಿ ಅದೆಷ್ಟು ಜನರಿಗೆ ನೀರಿನದಾಹವನ್ನು ಇಂಗಿಸಿತ್ತೊ! ಈಗ ಕೇವಲ ಬಂದವರಿಗೆ ತನ್ನ ಗತ ಕಾಲದ ಕಥೆಯನ್ನು ಹೇಳುವುದೆ ಅದರ ಕೆಲಸವಾಗಿದೆ. ಅದರ ಜೀರ್ಣೋದ್ಧಾರ ಮಾಡಿ ಮತ್ತೊಮ್ಮೆ ಜೀವ ನೀಡಿದಲ್ಲಿ ಇನ್ನಷ್ಟು ಜನರ ದಾಹವನ್ನು ತಣಿಸಲು ಅದು ಕಾತರದಿಂದ ಕಾಯುತ್ತಿದೆ. ಸ್ಥಳೀಯರು ಕೊಂಡಮ್ಮನ ಬಾವಿಯೆಂದು ಕರೆಯುವರು. ಈ ಬಾವಿಗೆ ಹೊಂದಿಕೊಂಡಂತೆ ಸುಮಾರು ೨೦೦ ಅಡಿ ಅಂತರದಲ್ಲಿಯೇ ವಿಜಯ ನಗರ ಕಾಲಾವಧಿಯ ದೇವಾಲಯವಿದೆ. ಇದು ವೈಷ್ಣವ ಸಂಪ್ರದಾಯಕ್ಕೆ ಸಂಬಂಧಿ ಸಿದ್ದು, ಇತ್ತೀಚೆಗೆ ಇದರ ಜೀರ್ಣೋದ್ಧಾರವನ್ನು ರಾಜ್ಯ ಪುರಾತತ್ವ ಇಲಾಖೆಯವರು ಮಾಡಿದ್ದಾರೆ. ಪೂರ್ವಾಭಿಮುಖವಾಗಿರುವ ಈ ದೇವಾಲಯಕ್ಕೆ ದಕ್ಷಿಣ, ಉತ್ತರ ದಿಕ್ಕುಗಳಿಗೂ ಪ್ರವೇಶದ್ವಾರಗಳಿವೆ. ಇದು ಭೂಮಟ್ಟದಿಂದ ಸುಮಾರು ೮ ಅಡಿ ಎತ್ತರದ ವೇದಿಕೆಯ ಮೇಲಿದೆ. ಈ ದೇವಾಲಯ, ಬಾವಿ, ಬೇವಿನ ಮರದ ಕೆಳಗಿರುವ ಆರಾಧನೆ ದೇವತೆ, ಹತ್ತಾರು ಕಟ್ಟಡಗಳಿದ್ದ ಅವಶೇಷಗಳು. ರಾಶಿ ರಾಶಿ ಕಬ್ಬಿಣದ ಕಿಟ್ಟಗಳು, ಮಡಿಕೆ ಚೂರುಗಳು ಹತ್ತಿರ ದಲ್ಲಿಯೇ ಹಿಂದಿರುವ ಹಳ್ಳ ಇವೆಲ್ಲಾ ಇಲ್ಲಿ ಜನವಸತಿ ಇದ್ದ ಬಗ್ಗೆ ಕುರುಹುಗಳನ್ನು ನೀಡುತ್ತವೆ. ಕೈಫಿಯತ್ತಿನಲ್ಲಿ ಕೊಂಡನರಸನ ಪಾಳ್ಯ ಎಂಬ ಉಲ್ಲೇಖವಿದೆ. ಕೆಲ ಸಂಶೋಧಕರು ಕಮಲಾಪುರಕ್ಕೆ ಕೊಂಡನರಸನ ಪಾಳ್ಯ ಎಂದು ಕರೆದಿರಬಹುದೇ ಎಂಬ ಶಂಕೆ ವ್ಯಕ್ತಪಡಿಸಿದ್ದಾರೆ. ಆದರೆ ವಿಜಯನಗರ ಕಾಲದ ಶಾಸನಗಳಲ್ಲಿ ಕಮಲಾಪುರ ಹೆಸರಿನ ಉಲ್ಲೇಖಗಳಿವೆ. ಕಮಲಾಪುರಕ್ಕೆ ಮೂಲ ಹೆಸರು ಅಂಜನಗಿರಿ ಎಂದಿದ್ದಿತು, ನಂತರ ಕುಮಾರಗುಂಟೆ ಎಂದಾಯಿತು. ಈ ಕುಮಾರಗುಂಟೆ ಕಾಲಾಂತರದಲ್ಲಿ ಕಮಲಾಪುರವೆಂದಾಗಿರಬೇಕು ಎಂಬುದು ಇನ್ನು ಕೆಲವರ ವಾದ. ಇದಕ್ಕೆ

ಅವರು ಒದಗಿಸುವ ಮಾಹಿತಿಗಳೆಂದರೆ ವಿಠ್ಠಲದೇವಾಲಯದ ಶಾಸನದಲ್ಲಿ ಕುಮಾರ ಗುಂಟೆ, ಕೆರೆಯ ಉಲ್ಲೇಖಗಳನ್ನು, ಆದರೆ ಇಲ್ಲಿ ಹತ್ತಾರು ವಸತಿ ಪ್ರದೇಶ ಗಳಿರುವುದರಿಂದ ಅವುಗಳ ಪಕ್ಕದಲ್ಲಿ ಕೆರೆಗಳೂ ಸಹ ಇವೆ. ಯಾವ ವಸತಿಗೆ ಕುಮಾರ ಗುಂಟೆ ಎಂದು ಕರೆಯುತ್ತಿದ್ದರೆಂಬುದು ಸ್ಪಷ್ಟತೆ ಇಲ್ಲ. ಜೊತೆಗೆ ಆ ಶಾಸನದ ಸಮ ಕಾಲೀನ ದ್ಯಾಖಲೆಗಳು ಕಮಲಾಪುರ ಹೆಸರಿನ ಬಗ್ಗೆ ಮಾಹಿತಿಗಳನ್ನು ನೀಡುತ್ತವೆ. ಇಲ್ಲಿ ಗುರುತಿಸಲಾಗಿರುವ ಜನವಸತಿಗೆ ಕುಮಾರಗುಂಟೆ ಎಂದು ಕರೆದಿರಬಹುದೆ ಎಂಬ ಸಂಶಯವು ಬರುತ್ತದೆ.

ಕೈಫಿಯತ್ತು ಉಲ್ಲೇಖಿಸುವ ಕೊಂಡನರಸನ ಪಾಳ್ಯಕ್ಕೆ ಸಮೀಪವೆಂಬಂತೆ ಈ ಪ್ರದೇಶದ ಕೊಂಡಮ್ಮನ ಬಾವಿ. ಕೊಂಡಮ್ಮದೇವಿ ಎಂಬ ಶಬ್ದ ಸೂಚಿಗಳಲ್ಲದೆ ನೂರಾರು ವರ್ಷಗಳಿಂದಲೂ ಜನಪದರಲ್ಲಿ ಉಳಿದು ಬಂದಿದೆ.

ಕನ್ನಡ ವಿಶ್ವವಿದ್ಯಾಲಯದ ಕೂಡಲ ಸಂಗಮ ಕಟ್ಟಡದ ಹಿಂಭಾಗಕ್ಕೆ ವಿಜಯ ನಗರಕಾಲದ ಆಂಜನೇಯನ ದೇಗುಲವಿದೆ. ಇದರಲ್ಲಿರುವ (ಹನುಮಂತ) ಆಂಜನೇಯ ಬಂಡೆಯ ಮೆಲೆ ಕೆತ್ತಲ್ಪಟ್ಟಿದೆ. ಹಾಗಾಗಿ ಇದನ್ನು ಬಂಡೆ ಹನುಮಂತನೆಂದು ಕರೆಯುತ್ತಾರೆ. ಪ್ರಾಯಶಃ ಬೃಹತ್ ಬಂಡೆಯ ಮೇಲೆ ಇದನ್ನು ಕೊರೆದಿರುವದರಿಂದ ಅದು ಇಲ್ಲಿಯೇ ಸುರಕ್ಷಿತವಾಗಿ ಉಳಿದಿದೆ. ಈ ಆಂಜನೇಯನ ದೇವಾಲಯದಿಂದ ವಿಶ್ವವಿದ್ಯಾಲಯದ ಇಂದಿನ ಆಡಳಿತ ಸಿಬ್ಬಂದಿ ವಸತಿ ಸಮುಚ್ಚಯದವರೆಗಿನ ಮಧ್ಯದಲ್ಲಿ ಅನೇಕ ಕಟ್ಟಡಾವಶೇಷಗಳು ಕಂಡು ಬರುತ್ತವೆ.

ವಿಶ್ವವಿದ್ಯಾನಿಲಯದ ಈಶಾನ್ಯಮೂಲೆಗೆ ವಿಜಯನಗರಕಾಲದ ದೇವಾಲಯಗಳು, ಕೆಲ ಕಟ್ಟಡಾವಶೇಷಗಳೂ ಇವೆ. ಈ ಪ್ರದೇಶಕ್ಕೆ ಸಿದ್ಧಾಪುರವೆಂದು ಕರೆಯುತ್ತಿದ್ದುದಾಗಿ ಪಾಳುಮಂಟಪಗಳು ಮಾತ್ರ ಉಳಿದುಕೊಂಡಿವೆ. ಕೃಷಿ ಭೂಮಿಯ ವಿಶ್ವವಿದ್ಯಾ ಲಯದ ನಿತ್ಯೋತ್ಸವ ಮನೆಗಳ ಹಿಂಭಾಗಕ್ಕೆ ವೃತ್ತಾಕಾರದ ಪ್ರಾಚೀನ ಸಮಾಧಿ ಕಟ್ಟಡಾ ವಶೇಷಗಳಿದ್ದಿರಬಹುದಾದ ಮಾಹಿತಿಯನ್ನು ಪ್ರೊ. ಮೈತ್ರಿಯವರು ತಿಳಿಸಿದರು. ಈ ಸ್ಥಳಕ್ಕೆ ಹತ್ತಿರದಲ್ಲಿಯೇ ಒಂಟಿ ಬಂಡೆಯ ಪ್ರಾಚೀನ ರೇಖಾ ಚಿತ್ರಗಳನ್ನು ಕಾಣಬಹುದು. ಈ ಹಿನ್ನೆಲೆಯಲ್ಲಿ ಹೆಚ್ಚಿನ ಸಂಶೋಧನೆಗಳು ಇಲ್ಲಿ ನಡೆದಲ್ಲಿ ಹೊಸ ವಿಷಯಗಳು ಬೆಳಕಿಗೆ ಬರುವ ಸಾಧ್ಯತೆಗಳಿವೆ.

ಇವುಗಳ ರಕ್ಷಣೆಗೆ ಸಲಹೆಗಳು

1. ರಾಜ್ಯ ಪುರಾತತ್ವ ಇಲಾಖೆಯ ಸಹಾಯದೊಂದಿಗೆ ಕೊಂಡಮ್ಮನ ಬಾವಿಯ ಹೂಳನ್ನು ತೆಗೆಸಿ - ಸ್ವಚ್ಛಗೊಳಿಸುವುದು, ಅದರ ಸುತ್ತಲೂ ತಂತಿ ಬೇಲಿ ಹಾಕುವುದು ಹಾಗೂ ಬಾವಿಯ ವಿವರವನ್ನು ಒಳಗೊಂಡ ಫಲಕವನ್ನು ಹಾಕಬೇಕು.

2. ರಾಜ್ಯಪುರಾತತ್ವ ಇಲಾಖೆಯವರು ಗುರುತಿಸಿ ಈಗಾಗಲೇ ಜೀರ್ಣೋದ್ಧಾರ ಮಾಡಿರುವ ವಿಷ್ಣು ದೇವಾಲಯದ ಸುತ್ತಲೂ ತಂತಿಬೇಲಿ ಹಾಕುವುದು, ಅದರ ಬಗ್ಗೆ ವಿವರಗಳುಳ್ಳ ಫಲಕವನ್ನು ಹಾಕುವುದು.

3. ಕ.ವಿ.ವಿ. ಆವರಣದ ಸ.ಹಿ.ಪ್ರಾ. ಶಾಲೆಯ ಸುತ್ತಲೂ ಇರುವ ಕಬ್ಬಿಣ ತಯಾರಿಕೆಯ ಅವಶೇಷಗಳನ್ನು ಒಂದೆಡೆ ಕಲೆ ಹಾಕಿ ಆ ಕಾಲದ ಕಬ್ಬಿಣ ತಯಾರಿಕೆಯ ಮಾದರಿ ಕೃತಿಯನ್ನು ರಚಿಸುವುದು

4. ಕೊಂಡಮ್ಮನೆಂದು ಕರೆಯಲ್ಪಡುವ ಬೇವಿನ ಮರದ ಕೆಳಗಿನ ವಿಗ್ರಹಗಳನ್ನು ಹೊರತೆಗೆದು ಕುಳಿತು ವಿಶ್ರಮಿಸಲು ಅನುಕೂಲವಾಗುವಂತೆ ಕಟ್ಟೆಯನ್ನು ನಿರ್ಮಿಸುವುದು.

5. ಒಂಟೆ ಬಂಡೆ ಹಾಗೂ ಗಿರಿಸೀಮೆ ಇತ್ಯಾದಿ ಕಡೆಗಳಲ್ಲಿ ಕಂಡುಬರುವ ರೇಖಾ ಚಿತ್ರಗಳನ್ನು ರಕ್ಷಿಸಲು ಅನುಕೂಲವಾಗುವಂತೆ ಸುತ್ತಲೂ ತಡೆಗೋಡೆ ನಿರ್ಮಿಸಿ ನಾಮಫಲಕ ಹಾಕುವುದು.

6. ಕೂಡಲ ಸಂಗಮ ಕಟ್ಟಡದ ಹಿಂಭಾಗದ ಆಂಜನೇಯ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿ ಅಲ್ಲಿಗೆ ದಾರಿ ಕಲ್ಪಿಸುವುದು.

೫೦. ಕೃಷ್ಣದೇವರಾಯ ಮತ್ತು ಗಜಪತಿ ರಾಜವಂಶ : ಕೆಲವು ಸಂಗತಿಗಳು

ಡಾ.ಬಿ. ರಾಜಶೇಖರಪ್ಪ

'ವಿಜಯನಗರವನ್ನು ಆಳಿದ ಕೃಷ್ಣದೇವರಾಯ ಭಾರತದ ಶ್ರೇಷ್ಠ ಅರಸರ ಪಂಕ್ತಿಗೆ ಸೇರಿದವನು'. ಇವನು ಆಳಿದ ಕೇವಲ ಎರಡೇ ದಶಕದಲ್ಲಿ ಈ ಸಾಮ್ರಾಜ್ಯ ಅತ್ಯುನ್ನತಿಯನ್ನು ಮುಟ್ಟಿತು. ೨೫ ವರ್ಷದವನಿದ್ದಾಗ ಪಟ್ಟವೇರಿದ್ದ ಈತ ತನ್ನ ೪೬ನೆಯ ವಯಸ್ಸಿನಲ್ಲಿ ಕಣ್ಮರೆಯಾಗುವ ಹೊತ್ತಿಗೆ ಭಾರತದ ಬಹು ಬಲಿಷ್ಠ, ರಾಜನೀತಿ ನಿಪುಣ, ಸುಸಂಸ್ಕೃತ, ಪ್ರತಿಭಾಶಾಲಿ ಕವಿ - ಹೀಗೆ ತನ್ನ ಬಹುಮುಖ ವ್ಯಕ್ತಿತ್ವವನ್ನು ತೋರಿಸಿ ಕೊಟ್ಟನು. ದಾಳಿ ಮಾಡ ಬಂದವರನ್ನು ಯಶಸ್ವಿಯಾಗಿ ನಿಗ್ರಹಿಸಿ ಸಾಮ್ರಾಜ್ಯವನ್ನು ಎಲ್ಲ ಬಿಕ್ಕಟ್ಟುಗಳಿಂದ ರಕ್ಷಿಸಿಕೊಂಡನು. ಈ ನಿಟ್ಟಿನಲ್ಲಿ ಅವನು ನಡೆಸಿದ ದಂಡಯಾತ್ರೆಗಳು ಉಲ್ಲೇಖನೀಯವಾದವು. ಅವನ ದಂಡಯಾತ್ರೆಗಳಲ್ಲೆಲ್ಲ ಅತ್ಯಂತ ಪ್ರಮುಖವಾದದ್ದೆಂದು ಪರಿಗಣಿಸಲ್ಪಟ್ಟಿರುವುದು ಅವನು (ಕಳಿಂಗ ಉತ್ಕಲ ಓಢ್ರ ಮುಂತಾಗಿ ಕರೆಯಲ್ಪಟ್ಟ) ಒರಿಸ್ಸಾದ ಮೇಲೆ ಕೈಕೊಂಡ ದಂಡಯಾತ್ರೆ. ವಿಜಯನಗರದಿಂದ ಒರಿಸ್ಸಾದ ರಾಜಧಾನಿ ಯಾಗಿದ್ದ ಕಟಕಪುರಿಯವರೆಗೆ ಅವನ ಬೃಹತ್ ಸೈನ್ಯ ಕ್ರಮಿಸಿದ ದೂರ ಸುಮಾರು ೨೪೦೦ ಕಿ.ಮೀ.ಗಳಷ್ಟು.[1] ಈ ದಾಖಲೆಯ ದಂಡಯಾತ್ರೆಯಿಂದ ವಿಜಯನಗರ ಸಾಮ್ರಾಜ್ಯ ಉತ್ತರದಲ್ಲಿ ಒರಿಸ್ಸಾದವರೆಗೆ ಹಬ್ಬಿದಂತಾಯಿತು.

ಇಷ್ಟು ಪ್ರಾಮುಖ್ಯವಿರುವ ಈ ದಂಡಯಾತ್ರೆಯನ್ನು ಇತಿಹಾಸ ಗ್ರಂಥಗಳಲ್ಲಿ ವಿವರಿಸಿರುವುದನ್ನು ಹೀಗೆ ಸಂಗ್ರಹಿಸಬಹುದು: ಒರಿಸ್ಸಾ ರಾಜ್ಯ ದುರ್ಭೇಧ್ಯವಾದ ಕೋಟೆ ಕೊತ್ತಲಗಳಿಂದ ಮತ್ತು ದುರ್ಗಮ ಮಾರ್ಗಗಳಿಂದ ಕೂಡ ಗೆಲ್ಲಲು ಅಸಾಧ್ಯವೆನಿಸಿದ್ದಿತು. ಅದನ್ನು ಆಳುತ್ತಿದ್ದವನು ಗಜಪತಿ ಎಂಬ ಹೆಸರಿನ ಪ್ರಸಿದ್ಧ ರಾಜವಂಶದ ದೊರೆ ಪ್ರತಾಪರುದ್ರ. ಅವನು ವಿಜಯನಗರ ಸಾಮ್ರಾಜ್ಯಕ್ಕೆ ಸೇರಿದ್ದ ಉದಯಗಿರಿ ಕೊಂಡವೀಡು ರಾಜ್ಯಗಳನ್ನು ಆಕ್ರಮಿಸಿದ್ದ ಕಾರಣ ಕೃಷ್ಣದೇವರಾಯ ಅವನ ಮೇಲೆ ದಾಳಿ ಮಾಡಬೇಕಾದ ಸಂದರ್ಭ ಒದಗಿತು. ಉದಯಗಿರಿ, ಕೊಂಡವೀಡು, ವಿಜಯವಾಡ, ಕೊಂಡಪಲ್ಲಿ ಮತ್ತು ರಾಜಮಹೇಂದ್ರಿ ಇವುಗಳ ಮೇಲೆ ಸಾಲಿಟ್ಟು ಅವನು ನಡೆಸಿದ ದಂಡಯಾತ್ರೆ, 'ಇವನ್ನು ವಶಪಡಿಸಿಕೊಳ್ಳಲು ಬಳಸಿದ ಸಂಪತ್ಸಾಧನಗಳು, ಯುದ್ಧ - ಸಾಮಗ್ರಿಗಳು, ಸೇನೆ, ಸಮರತಂತ್ರಗಳು ಮತ್ತು ಪ್ರತಾಪರುದ್ರನ ಮೇಲೆ ನಡೆಸಿದ ಅವ್ಯಾಹತ ದಾಳಿ

ಮೊದಲಾದುವನ್ನು ಕಂಡಾಗ ಅಜೇಯ ಕೃಷ್ಣದೇವರಾಯನು ಸೇನಾ ತಂತ್ರದಲ್ಲಿ ನೆಪೋಲಿಯನ್ನನಂತೆ [1a] ಪ್ರತಿಭಾವಂತ ಸಮರ ವಿಚಕ್ಷಣ ತಂತ್ರವಿಶಾರದನೂ ವೀರಯೋಧನೂ ಆಗಿದ್ದನೆಂದು ಹೇಳಬಹುದಾಗಿದೆ.'

ಈ ದಾಳಿಯ ಸಂಬಂಧವಾಗಿ ಇತಿಹಾಸಕಾರರು ಕೊಟ್ಟಿರುವ ವಿವರಣೆಗಳು ಎರಡು ಬಗೆಯವಾಗಿವೆ:

೧) ಕೃಷ್ಣದೇವರಾಯನು 'ಉದಯಗಿರಿ ಕೊಂಡವೀಡು ರಾಜ್ಯಗಳನ್ನು ಆಕ್ರಮಿಸಿದ್ದ ಉತ್ಕಲದ ಗಜಪತಿ ಪ್ರತಾಪರುದ್ರನ ಮೇಲೆ ದಂಡೆತ್ತಿ ಹೋಗಿ ಮೊದಲು ಉದಯಗಿರಿಯನ್ನು ಮುತ್ತಿದ (೧೫೧೩); ಎದುರಿಸಿದ ಪ್ರತಾಪರುದ್ರನನ್ನು ಓಡಿಸಿದ. ೧೮ ತಿಂಗಳು ಮುತ್ತಿಗೆಯ ನಂತರ ಉದಯಗಿರಿ ವಶವಾಯಿತು. ಕೊಂಡವೀಡನ್ನು ಆಕ್ರಮಿಸಲು ಸಾಳುವ ತಿಮ್ಮರಸನನ್ನು ಕಳಿಸಿದ. ಅವನು ಕಂದುಕೂರು, ವಿನುಕೊಂಡ, ನಾಗಾರ್ಜುನ ಕೊಂಡಗಳನ್ನು ಹಿಡಿದು, ಕೊಂಡವೀಡನ್ನು ತಲುಪಿದ ಹೊತ್ತಿಗೆ ರಾಯನೂ ಅವನೊಡನೆ ಸೇರಿ ಆ ಕೋಟೆಯನ್ನು ಏಣಿಗಳಿಂದ ಲಗ್ಗೆ ಹತ್ತಿ ಆಕ್ರಮಿಸಿ, ಗಜಪತಿ ವೀರಭದ್ರ ಮತ್ತು ಅವನ ಹೆಂಡತಿಯನ್ನು ಸೆರೆಹಿಡಿದ (೧೫೧೫). ದಾಳಿಯ ಮುಂದುವರಿಕೆಯಿಂದ ಕರಾವಳಿಯ ವಿಜಯವಾಡ, ರಾಜಮಹೇಂದ್ರಿ, ಸಿಂಹಾಚಲಗಳೂ ತೆಲಂಗಾಣದ ನಲಗೊಂಡ, ವಾರಂಗಲ್ ಪ್ರದೇಶಗಳೂ... ವಶವಾದುವು... ಇವನ ಸೈನ್ಯ ಮುನ್ನಡೆದು ಗಜಪತಿಯ ರಾಜಧಾನಿ ಕಟಕವನ್ನು ಮುತ್ತಿತು. (೧೫೧೮) ರಾಯನನ್ನು ಎದುರಿಸಲಾರದ ಪ್ರತಾಪರುಧ್ರ ಸಂಧಿಮಾಡಿಕೊಂಡು ತನ್ನ ಮಗಳು ಜಗನ್ಮೋಹಿನಿ ಯನ್ನು ಮದುವೆ ಮಾಡಿಕೊಟ್ಟ. ರಾಯ ತಾನು ಆಕ್ರಮಿಸಿದ್ದ ಕೃಷ್ಣಾನದಿಯ ಉತ್ತರದ ಭಾಗವನ್ನೆಲ್ಲ ಉದಾರವಾಗಿ ಗಜಪತಿ ಅರಸಿಗೆ ಬಿಟ್ಟುಕೊಟ್ಟ.'[2]

೨) 'ತಿಮ್ಮರಸನು ಕೊಂಡವೀಡಿನ ಮುಂದೆ ಸೇನಾ ಸಮೇತವಾಗಿ ಬೀಡು ಬಿಡುವುದಕ್ಕೆ ಮೊದಲು ಕಂದುಕೂರು, ವಿನುಕೊಂಡ ಮತ್ತು ನಾಗಾರ್ಜುನಕೊಂಡಗಳನ್ನು ವಶಪಡಿಸಿಕೊಂಡನು. ರಾಜನೂ ಅಲ್ಲಿಗೆ ಬಂದು ಸೇರಿದನು. ಏಣಿಗಳಿಂದ ಕೋಟೆಗೆ ಲಗ್ಗೆ ಹತ್ತಿ ಅದನ್ನು ಕೈ ವಶ ಪಡಿಸಿಕೊಳ್ಳಲಾಯಿತು. ರಾಜನಾದ ವೀರಭದ್ರ ಗಜಪತಿಯನ್ನು ಅವನ ರಾಣಿಯನ್ನೂ ಸೆರೆ ಹಿಡಿಯಲಾಯಿತು...'[3] 'ರಾಜಕುಮಾರ ವೀರಭದ್ರನು ಸೆರೆಯಲ್ಲಿರುವಾಗಲೇ ಆತ್ಮಹತ್ಯೆ ಮಾಡಿಕೊಂಡನೆಂದು ನ್ಯೂನಿಜ್ ಹೇಳುತ್ತಾನೆ... ಆದರೆ ಇದೆಲ್ಲದರ ಕೊನೆಗೆ ಗಜಪತಿಯು ಅತಿ ದೈನ್ಯದಿಂದ ಕ್ಷಮೆಯನ್ನು ಕೋರಿದನು. ತನ್ನ ಮಗಳು ಜಗನ್ಮೋಹಿನಿಯನ್ನು ರಾಜನಿಗೆ ಮದುವೆ ಮಾಡಿಕೊಟ್ಟನು. ಕೃಷ್ಣೆಯ ಉತ್ತರಕ್ಕೆ ಕಳೆದುಕೊಂಡಿದ್ದ ರಾಜ್ಯಗಳನ್ನೆಲ್ಲ ಹಿಂದಕ್ಕೆ ಪಡೆದನು. ಹೀಗೆ ಭಾರತದ ಮಿಲಿಟರಿ ಇತಿಹಾಸದಲ್ಲಿ ಅತ್ಯಂತ ಉಜ್ಜ್ವಲವಾದ ಘಟನೆಗಳಲ್ಲಿ ಒಂದು ಸಮಾಪನಗೊಂಡಿತು. ಪ್ರಸ್ತುತ ಘಟನೆಯು ಕ್ರಿ.ಶ. ೧೫೧೩ರಿಂದ ೧೫೧೮ರವರೆಗೆ ಆರು ವರ್ಷಗಳನ್ನು ಒಳಗೊಂಡಿತ್ತು.'[4]

ಈ ಮೇಲಿನ ವಿವರಣೆಗಳಲ್ಲಿ ಬರುವ ನಾಲ್ಕು ಅಂಶಗಳನ್ನು ಇಲ್ಲಿ ಹೀಗೆ ಹೇಳಬಹುದು.

೧) ಕೃಷ್ಣದೇವರಾಯನು ಒರಿಸ್ಸಾದ ಮೇಲೆ ದಾಳಿ ಮಾಡಲು, ಗಜಪತಿರಾಜ ಉದಯಗಿರಿ ಕೊಂಡವೀಡು ರಾಜ್ಯಗಳನ್ನು ಆಕ್ರಮಿಸಿದ್ದುದು ಕಾರಣ.

೨) ಕೃಷ್ಣದೇವರಾಯ ಸೆರೆ ಹಿಡಿದಿದ್ದು ವೀರಭದ್ರಗಜಪತಿ ಮತ್ತು ಅವನ ಹೆಂಡತಿ.

೩) ರಾಜಕುಮಾರ ವೀರಭದ್ರ ಸೆರೆಯಲ್ಲಿರುವಾಗಲೇ ಆತ್ಮಹತ್ಯೆ ಮಾಡಿಕೊಂಡ.

೪) ಈ ದಂಡಯಾತ್ರೆ ಕ್ರಿ.ಶ. ೧೫೧೩ ರಿಂದ ೧೫೧೮ ರವರೆಗೆ ಆರು ವರ್ಷ ನಡೆಯಿತು.

ಈ ಅಂಶಗಳನ್ನು ಕುರಿತು, ಕೆಲವು ಆಕರಗಳ ಬೆಳಕಿನಲ್ಲಿ ಮರು ಪರಿಶೀಲಿಸುವುದು ಅಗತ್ಯ ಎನಿಸಿತು:

೧) ಮೊದಲನೆಯದರ ಬಗೆಗೆ ಹೇಳುವುದಾದರೆ, ಗಜಪತಿ ವಂಶದವರಿಗೂ ವಿಜಯನಗರದ ಅರಸರಿಗೂ ಶತಮಾನ ಕಾಲದಿಂದ ವೈರವಿತ್ತು. ಕೃಷ್ಣದೇವರಾಯನು ಗಜಪತಿಯ ವಿರುದ್ಧ ದಾಳಿ ಕೈಕೊಳ್ಳಲು ಈ ಹಳೆಯ ದ್ವೇಷ ಒಂದೇ ಸಾಕಾಗಿತ್ತು. ಆದರೆ ನ್ಯೂನಿಜ್ ಒಂದು ವಿಶಿಷ್ಟ ಸಂಗತಿಯನ್ನು ಹೇಳುತ್ತಾನೆ. [5] ಅವನು ಹೇಳುವ ಪ್ರಕಾರ, ಕೃಷ್ಣದೇವರಾಯ, ರಾಜಧಾನಿ ವಿಜಯನಗರದಲ್ಲಿದ್ದು, ಹೊರಗೆಲ್ಲೂ ಹೋಗದೆ, ರಾಜ್ಯದ ವ್ಯವಹಾರಗಳನ್ನು ತಿಳಿದುಕೊಳ್ಳುತ್ತ ಮತ್ತು ಗತರಾಜರ ಮೃತ್ಯು ಪತ್ರಗಳನ್ನು ನೋಡುತ್ತ ಒಂದೂವರೆ ವರ್ಷಕಾಲ ಇದ್ದಾಗ, ಅವುಗಳಲ್ಲಿ (ಅವನ ತಂದೆ ನರಸನಾಯಕ ಮಂತ್ರಿಯಾಗಿದ್ದ) ನರಸಿಂಗರಾಜನದೊಂದು ಮೃತ್ಯುಪತ್ರ ದೊರೆಯಿತು. ಅದರಲ್ಲಿ ರಾಜ ಇಚ್ಛಿಸಿದ್ದನ್ನು ಹೀಗೆ ಬರೆಯಲಾಗಿತ್ತು. ತನ್ನ ಮರಣಕಾಲಕ್ಕೆ ತನ್ನ ವಿರುದ್ಧ ಬಂಡೆದ್ದಿದ್ದ ಶತ್ರುಗಳ ವಶವಾಗಿರುವ ಮೂರು ದುರ್ಗಗಳನ್ನು ತನಗೆ ಸಮಯ ವಿಲ್ಲದುದರಿಂದ ಮರಳಿ ವಶಪಡಿಸಿಕೊಳ್ಳಲಾಗಲಿಲ್ಲ. ನನ್ನ ಮಕ್ಕಳಾಗಲಿ ಅಥವಾ ಈ ರಾಜ್ಯದ ಅಧಿಕಾರಕ್ಕೆ ಬಂದ ಯಾರೇ ಆಗಲಿ ಅವುಗಳನ್ನು ವಶಪಡಿಸಿಕೊಳ್ಳಬೇಕು. ಇಲ್ಲಿ ಹೇಳಿದ ಮೂರು ದುರ್ಗಗಳಲ್ಲೊಂದು ಉದಯಗಿರಿ ಆಗಿತ್ತು. ಅದು ಒರಿಸ್ಸಾದ ಗಜಪತಿಯ ವಶದಲ್ಲಿತ್ತು. ಆ ಮೃತ್ಯುಪತ್ರ ಕೃಷ್ಣದೇವರಾಯನ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರಿತು. ತನ್ನ ಪೂರ್ವಿಕರಿಗೆ ಎಲ್ಲ ಶಕ್ತಿ ಸಾಮರ್ಥ್ಯಗಳಿದ್ದರೂ ಗಜಪತಿಯನ್ನು ಎದುರಿಸಿ ತಕ್ಕ ಪಾಠ ಕಲಿಸಲಾಗದೆ ಹೋದದ್ದರ ಬಗ್ಗೆ ಅವನಿಗೆ ಕೆಟ್ಟದೆನಿಸಿತು. ಈ ಹಿನ್ನೆಲೆಯಲ್ಲಿ ಅವನು ಉದಯಗಿರಿ ಮೇಲೆ ಏರಿ ಹೋಗಲು ನಿರ್ಧರಿಸಿದನು. ಈ ಪ್ರಸಂಗ ಕ್ರಿ.ಪೂ. ಕಾಲದ ಮೌರ್ಯ ಸಮ್ರಾಟ ಅಶೋಕನಿಗೆ ತನ್ನ ಪೂರ್ವಿಕರು ಸತತ ಪ್ರಯತ್ನ ಮಾಡಿಯೂ ಕಳಿಂಗವನ್ನು ಗೆಲ್ಲಲಾಗದೆ ಹೋದದ್ದು ತೀವ್ರ ಪರಿಣಾಮ ಬೀರಿ, ಅವನು ಅದರ ಮೇಲೆ ದಂಡೆತ್ತಿ ಹೋಗಲು ಕಾರಣ ವಾಯಿತೆಂಬ ಪ್ರಸಂಗವನ್ನು ನೆನಪಿಗೆ ತರುತ್ತದೆ.

ಕೃಷ್ಣದೇವರಾಯನು ಆ ದುರ್ಗವನ್ನು ಗೆದ್ದ ಮೇಲೆ ತನ್ನ ಮಂತ್ರಿ ಸಾಳುವ ತಿಮ್ಮರಸನೊಡನೆ ಮಾತಾಡುವಾಗ ಆ ಮೃತ್ಯುಪತ್ರದ ಬಗ್ಗೆ ಪ್ರಸ್ತಾಪಿಸಿ, ತಾನು ಅದರ ಆಶಯದಂತೆ ಆ ದುರ್ಗವನ್ನು ಸಾಧಿಸಿದೆ ಎಂದು ಹೆಮ್ಮೆಯಿಂದ ಹೇಳಿದನೆಂದು ನ್ಯೂನಿಜ್ ಬರೆದಿದ್ದಾನೆ. [6] ನ್ಯೂನಿಜ್ ಇಷ್ಟು ಪ್ರಾಮುಖ್ಯತೆಕೊಟ್ಟು ಹೇಳುವ ಮೃತ್ಯು ಪತ್ರದ ಸಂದರ್ಭ, ಗತಾನುಗತಿಕ ರೀತಿಯಲ್ಲಿ ಚರಿತ್ರೆಯನ್ನು ನಿರೂಪಿಸುತ್ತ ಹೋಗುವ ಚರಿತ್ರಕಾರರಿಗೆ ಅಷ್ಟು ಮುಖ್ಯವೆನ್ನಿಸಲಿಕ್ಕಿಲ್ಲ. ಆದರೆ ಹಿಂದಿನ ದೊರೆ ತನ್ನ ಕಡೆಗಾಲದಲ್ಲಿ ಬರೆಸಿದ್ದ ಮೃತ್ಯುಪತ್ರ ಕೃಷ್ಣದೇವರಾಯನ ಮನಸ್ಸಿನಲ್ಲಿ ತಳಮಳವೆಬ್ಬಿಸಿ ಆ ದಂಡಯಾತ್ರೆಗೆ ಪ್ರೇರಣೆ ಏಕೆ ನೀಡಿದ್ದಿರಬಾರದು? ಹೀಗಾಗಿ ಇದೊಂದು ಸಣ್ಣ ಸಾಧಾರಣ ಸಂಗತಿ ಎಂದು ಭಾವಿಸುವುದಕ್ಕಿಂತ ಯುದ್ಧ ಜರುಗುವುದಕ್ಕೆ ಇರುವ ಕಾರಣ ಪ್ರೇರಣೆ ಗಳಲ್ಲಿ ಇಂಥದೂ ಒಂದಿರಲು ಸಾಧ್ಯ ಎಂದು ಪರಿಗ್ರಹಿಸುವುದು ಅನುಚಿತವಾಗಲಾರದು.

೨) ಎರಡನೆಯದಾಗಿ, ಈ ಯುದ್ಧದ ಸಂದರ್ಭದಲ್ಲಿ ಕೃಷ್ಣದೇವರಾಯನಿಗೆ ಸೆರೆಸಿಕ್ಕವರು ಯಾರು ಎಂಬ ಅಂಶ. ಸೆರೆಸಿಕ್ಕವರು ಗಜಪತಿ ವೀರಭದ್ರ ಮತ್ತು ಅವನ ಪತ್ನಿ - (ಅದೂ ೧೫೧೫ರಲ್ಲಿ) ಎಂಬುದು ಚರಿತ್ರಕಾರರ ಹೇಳಿಕೆ. ನ್ಯೂನಿಜ್‌ರ ಬರವಣಿಗೆ ಹೇಳುವ ಸಂಗತಿ ಹೀಗಿದೆ. [7] ಆ ದುರ್ಗವನ್ನು ಕೃಷ್ಣ(ದೇವ)ಒಂದೂವರೆ ವರ್ಷ ಮುತ್ತಿದ್ದ. ಆ ನಡುವೆ ಸೈನ್ಯದ ಸುಗಮ ಸಂಚಾರಕ್ಕೆ ರಸ್ತೆಗಳನ್ನು ಮಾಡಿಸಿದ. ಅಲ್ಲಿ ಅವನು ರಾಜನ ಕಕ್ಕಿಯೊಬ್ಬಳನ್ನು ಸೆರೆ ಹಿಡಿದು ಜೊತೆಯಲ್ಲಿ ಕೊಂಡೊಯ್ದ. ಹೀಗೆ ಆ ದುರ್ಗ ಗೆದ್ದ ಮೇಲೆ ಕೊಂಡವೀಡಿನ ಮೇಲೆ ಏರಿ ಹೋದ. ಗಜಪತಿ ಭಾರೀ ಸೈನ್ಯದೊಡನೆ ಬಂದ ನಾದರೂ ಕೃಷ್ಣ(ದೇವ) ರಾಯನನ್ನು ಎದುರಿಸಲಾಗದೆ ಓಡಿಹೋಗಬೇಕಾಯಿತು. ಆಗ ಸೆರೆಸಿಕ್ಕವರಲ್ಲಿ ಅನೇಕರು ಉಚ್ಚದರ್ಜೆಯವರಿದ್ದರು. ಅವರಲ್ಲಿ ಒಬ್ಬಳು ರಾಜನ ಪತ್ನಿ, ಒಬ್ಬ ರಾಜಕುಮಾರ ಮತ್ತು ಏಳುಜನ ಪ್ರಮುಖ ದಳವಾಯಿಗಳು. ಅವರೆಲ್ಲ ರನ್ನೂ ಅವನು ರಸ್ತೆಯ ಮೂಲಕ ವಿಜಯನಗರಕ್ಕೆ ಕಳಿಸಿದ. ಇದರಿಂದ ವ್ಯಕ್ತವಾಗುವ ಸಂಗತಿ ಎಂದರೆ ರಾಯನ ಸೆರೆಯಲ್ಲಿದ್ದದ್ದು, ರಾಯನೊಂದಿಗೆ ಯುದ್ಧ ಮಾಡಲಾಗದೆ ತಪ್ಪಿಸಿಕೊಂಡುಹೋದ ಒರಿಸ್ಸಾದ ರಾಜನ ಹೆಂಡತಿಯೇ ಹೊರತು, ಸೆರೆಸಿಕ್ಕ ರಾಜ ಕುಮಾರನ ಪತ್ನಿಯಲ್ಲ. ನ್ಯೂನಿಜ್ ಇಲ್ಲಿ ಯಾರ ಹೆಸರನ್ನು ಹೇಳಿಲ್ಲವಾದರೂ, ಅನ್ಯ ಆಧಾರಗಳಿಂದ ಸ್ಪಷ್ಟವಾಗುವಂತೆ ತಪ್ಪಿಸಿಕೊಂಡವನು ರಾಜ ಪ್ರತಾಪರುದ್ರಗಜಪತಿ ; ಸೆರೆಸಿಕ್ಕವನು ರಾಜಕುಮಾರ ವೀರಭದ್ರ ಗಜಪತಿ.

೩) ಇನ್ನು ಮೂರನೆಯ ಅಂಶಕ್ಕೆ ಬಂದರೆ, ಇದಕ್ಕೆ ಆಧಾರವಾದ ನ್ಯೂನಿಜ್‌ನ ವಿವರವನ್ನೇ ನೋಡುವುದು ಅಗತ್ಯ. [8] ಕೃಷ್ಣ(ದೇವ)ರಾಯ ಒರಿಸ್ಸಾದಿಂದ ಹಿಂತಿರುಗಿದ ಕೆಲವು ದಿನಗಳ ಮೇಲೆ, ಒರಿಸ್ಸಾದ ರಾಜಪುತ್ರನನ್ನು ಕರೆಯಿಸಿಕೊಂಡು ಅವನು ಕತ್ತಿ ವರಸೆಯಲ್ಲಿ ಮಹಾ ಪ್ರವೀಣನೆಂದು ಕೇಳಿರುವುದಾಗಿಯೂ ಅದನ್ನು ತಾನು ನೋಡ ಬಯಸಿರುವುದಾಗಿಯೂ ತಿಳಿಸಿದ. ರಾಜಪುತ್ರ ನಿವೇದನೆ ಮಾಡಿಕೊಂಡಂತೆ ಆ

ಪ್ರದರ್ಶನವನ್ನು ಮರುದಿನಕ್ಕೆ ಮುಂದೂಡಲಾಯಿತು. ಮರುದಿನ ಕೃಷ್ಣದೇವರಾಯ ಅವನೆದುರಿಗೆ ಕತ್ತಿವರಸೆಯಲ್ಲಿ ತುಂಬ ಪ್ರವೀಣನಾಗಿ ತನ್ನ ಕಡೆಯ ಸಾಮಾನ್ಯ ಮನುಷ್ಯನೊಬ್ಬನನ್ನು ಕರೆಸಿ ನಿಲ್ಲಿಸಿದಾಗ, ರಾಜಪುತ್ರ 'ದೇವರೇ ರಾಜರಕ್ತದವನಲ್ಲದವನನ್ನು ಮುಟ್ಟಿ ತನ್ನ ಕೈಗಳನ್ನು ಹೊಲಸುಮಾಡಿಕೊಳ್ಳುವುದನ್ನು ತಪ್ಪಿಸು' ಎಂದವನೇ ತನ್ನನ್ನು ತಾನು ಕೊಂದುಕೊಂಡ. ಮಗ ಹೀಗೆ ಸತ್ತ ಎಂಬ ಸುದ್ದಿ ಕೇಳಿದ ಒರಿಸ್ಸಾದ ರಾಜ ಕೃಷ್ಣ (ದೇವ)ರಾಯನ ವಶದಲ್ಲಿದ್ದ ತನ್ನ ಪತ್ನಿಯ ಬಿಡುಗಡೆ ಕೋರಿ ಮಂತ್ರಿ ಸಾಳುವ ತಿಮ್ಮರಸನಿಗೆ ಪತ್ರ ಬರೆದ. ಆಗ ಆ ರಾಜ ತನ್ನ ಮಗಳನ್ನು ಕೃಷ್ಣದೇವರಾಯನಿಗೆ ವಿವಾಹ ಮಾಡಿಕೊಡಬೇಕೆಂದೂ ಅನಂತರ ಅವನ ಪತ್ನಿ ಹಾಗೂ ರಾಜ್ಯವನ್ನು ಮರಳಿಸುವುದಾಗಿಯೂ ತಿಳಿಸಿದಾಗ, ಆ ಸಲಹೆಗೆ ಒಪ್ಪಿ ಒರಿಸ್ಸಾದ ರಾಜ ತನ್ನ ಮಗಳನ್ನು ಕೃಷ್ಣ ದೇವರಾಯನಲ್ಲಿಗೆ ಕಳಿಸಿಕೊಟ್ಟ. ಅದೇ ರೀತಿ ಕೃಷ್ಣ(ದೇವ)ರಾಯನು ಗೆದ್ದಿದ್ದ ಒರಿಸ್ಸಾ ರಾಜನ ರಾಜ್ಯವನ್ನು ಅವನಿಗೆ ಮರಳಿಸಿದ. ಹೀಗೆ ಅವರು ಮಿತ್ರರಾದರು.

ಈ ಬಗ್ಗೆ ಚರಿತ್ರಕಾರರು ಮೆಚ್ಚುಗೆಯ ಮಾಲೆಯನ್ನೆ ಕೃಷ್ಣದೇವರಾಯನ ಕೊರಳಿಗೆ ಹಾಕಿದ್ದಾರೆ. 'ಮಧುರ ಸ್ನೇಹ ಬಾಂಧವ್ಯವನ್ನು ಗಳಿಸಿದ್ದನ್ನು ಕಂಡರೆ ಕೇವಲ ರಾಜ್ಯ ದಾಹವೇ ಸಾಮ್ರಾಜ್ಯವಿಸ್ತರಣವೆ ಕೃಷ್ಣದೇವರಾಯನ ಪರಮಗುರಿಯಾಗಿರಲಿಲ್ಲವೆಂದು ವ್ಯಕ್ತವಾಗುತ್ತದೆ.'[9] 'ವಶಪಡಿಸಿಕೊಂಡ ರಾಜ್ಯದ ಶತ್ರುವಿನ ಬಗ್ಗೆ ತೋರುತ್ತಿದ್ದ ಮಾನವೀಯತೆಯ ಪರಿಣಾಮವಾಗಿ ಯಾವುದೇ ರೀತಿಯ ಬದ್ದ ದ್ವೇಷದ ಶೇಷ ಉಳಿಯಲು ಸಾಧ್ಯವಾಗಲಿಲ್ಲ'[10] 'ಕೃಷ್ಣದೇವರಾಯನು ಅನೇಕ ಯುದ್ಧಗಳನ್ನು ಕೇವಲ ಸಾಮ್ರಾಜ್ಯದ ಹಿತದೃಷ್ಟಿಯಿಂದ ಸಾಮ್ರಾಜ್ಯದ ಭದ್ರತೆಗೆ ಅಗತ್ಯವಾದಷ್ಟು ಮಟ್ಟಿಗೆ ಮಾತ್ರ ಕೈಕೊಂಡನು.... ಯುದ್ಧ ಕೆಟ್ಟದಾದರೂ ಕೇವಲ ಅನಿವಾರ್ಯ ಸಾಧನ ಮಾತ್ರ ಎಂಬ ನೀತಿಯ ವಿಜೇತ ದೊರೆಯ ಪರಮ ಔದಾರ್ಯವರ್ತನೆ ಮೊದಲಾದ ಶ್ರೇಷ್ಠಾಂಶಗಳನ್ನೂ ಸದ್ಗುಣಗಳನ್ನೂ ಕಾಣಬಹುದಾಗಿದೆ'.[11]

ಮೇಲೆ ಹೇಳಿದ ನ್ಯೂನಿಜ್‌ನ ವಿವರಣೆಯ ಆಧಾರದ ಮೇಲೆಯೇ ಬಹುತೇಕ ಚರಿತ್ರಕಾರರು, ಕೃಷ್ಣದೇವರಾಯನ ಸೆರೆಯಲ್ಲಿ ಮರಣಿಸಿದ್ದು ಗಜಪತಿ ಪ್ರತಾಪರುದ್ರನ ಮಗ ವೀರಭದ್ರ ಎಂದು ಬರೆಯುತ್ತಾರಾದರೂ ಹಿಂದೆಯೇ ಹೇಳಿದಂತೆ ಸೆರೆಯಲ್ಲಿದ್ದ ಮಹಿಳೆಯನ್ನು ಕೆಲವರು ವೀರಭದ್ರನ ಪತ್ನಿ ಎಂದೂ ಬರೆದಿದ್ದಾರೆ. ಆಧಾರ ಒಂದೇ, ಆದರೆ ಹೇಳಿಕೆ ಬೇರೆ ಬೇರೆ - ಇರುವುದು ಆಶ್ಚರ್ಯ ತರುತ್ತದೆ. ಅಂದರೆ ಇವರೆಲ್ಲ ಒಂದು ಕಡೆಯಲ್ಲಿಯ ನ್ಯೂನಿಜ್‌ನ ಹೇಳಿಕೆಯನ್ನು ಸಾರಾಸಗಟಾಗಿ ಒಪ್ಪುತ್ತಾರೆ; ಇನ್ನೊಂದು ಕಡೆಯಲ್ಲಿಯ ಅವನ ಹೇಳಿಕೆಗೆ ವ್ಯತಿರಿಕ್ತವಾಗಿ ಬರೆಯುತ್ತಾರೆ.

ಇದೆಲ್ಲದಕ್ಕಿಂತ ಗಮನಿಸಬೇಕಾದ ಮತ್ತೊಂದು ಆಶ್ಚರ್ಯದ ಸಂಗತಿ ಎಂದರೆ, ಕ್ರಿ.ಶ. ೧೫೧೬ರಲ್ಲಿ ಅದೇ ವೀರಭದ್ರಗಜಪತಿ ವಿಜಯನಗರ ಸಾಮ್ರಾಜ್ಯದ ಮಧ್ಯಭಾಗದ ಒಂದೆರಡು ಪ್ರಾಂತಗಳ ಪಾಳೆಯಗಾರನಾಗಿ ನೇಮಕಗೊಂಡಿದ್ದ ಎಂಬುದು. ಅದೇ

ವರ್ಷದ ಈಗಿನ ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ಮಲೇ ಬೆನ್ನೂರು ಗ್ರಾಮದ ಶಾಸನ, [12] ವೀರಭದ್ರ ಗಜಪತಿ ಆ ಸೀಮೆಯಲ್ಲಿ ಮದುವೆಯ ಸುಂಕ ಬಿಟ್ಟದ್ದನ್ನು ಹೇಳುತ್ತದೆ. ಇದರಲ್ಲಿಯ ಒಕ್ಕಣೆಯನ್ನು ಗಮನಿಸಿ: 'ವೈವಸ್ವತ ಮನುವಂಶ ಪರಾಕ್ರಮ, ಇಕ್ಷ್ವಾಕು ಕುಲಪ್ರದೀಪ ರಾಮಚಂದ್ರ ಚರಿತಾಲಂಕಾರ... ಅಭಿನವ ಪರಶುರಾಮ ಜಿತಾರಿ ಸಮರನಿಶ್ಶಂಕ ರಣರಂಗದ್ರವಿಳ ಮಂಡಲೇಶ್ವರ ನವಕಂದರ್ಪಾವತಾರ ಮಹಾನುಭಾವ ಗಜಪತಿ ಶ್ರೀ ಪ್ರತಾಪರುದ್ರ ಮಹಾರಾಜನ ಕುಮಾರ ಶ್ರೀ ವೀರ ಭದ್ರ ಮಹಾರಾಯರು' ಎಂಬ ಶಬ್ದಾವಳಿ ಗಜಪತಿ ವಂಶದ ಘನತೆ ಸ್ವಾಭಿಮಾನಗಳನ್ನು ಧ್ವನಿಸುವಂತಿದೆ. (ಕೃಷ್ಣರಾಯನಿಗೂ ಅಂಥ ವಿಶೇಷಣಗಳನ್ನು ಬಳಸಿಲ್ಲದಿರುವುದನ್ನು ಗಮನಿಸಬೇಕು) ಮುಂದೆ ಶ್ರೀಕೃಷ್ಣರಾಯ ಮಹಾ ರಾಯರು ಸುಖಸಂಕಥಾ ವಿನೋದದಿಂ ರಾಜ್ಯಂ ಗೆಯ್ಯುತ್ತಿದ್ದಲ್ಲಿ ನಮ್ಮ ನಾಯಕತನಕ್ಕೆ ಪಾಲಿಸಿದ ಮಲೆಯ ಬೆನ್ನೂರು ಸೀಮೆ ಆ ಕಾಲುವಳಿ ಲಿಂಗದಹಳ್ಳಿಯ ಸೀಮೆಯ ಒಳಗಾಗಿ ನಮ್ಮ ಅರಮನೆಗೆ ಸಲುವಂಥಾ ಮದುವೆಯ ಸುಂಕವನು ಶ್ರೀಕೃಷ್ಣರಾಯ ಮಹಾರಾಯರಿಗೆವೂ ನಮ್ಮ ತಂದೆ ಶ್ರೀ ಪ್ರತಾಪರುದ್ರ ಮಹಾರಾಯರಿಗೆವೂ ನಮಗೆವೂ ಧರ್ಮವಾಗಬೇಕೆಂದು ಶ್ರೀಕೃಷ್ಣರಾಯ ಮಹಾರಾಯರ ನಿರೂಪದಿಂದ ಉತ್ಥಾನ ದ್ವಾದಶೀ ಪುಣ್ಯಕಾಲದಲ್ಲಿ ಆಚಂದ್ರರ್ಕಸ್ಥಾಯಿ ಯಾಗಿ ನಡೆಯಲೆಂದು ಸರ್ವಮಾನ್ಯವಾಗಿ ಬಿಟ್ಟೆವು' ಎಂದು ಹೇಳಿದೆ. ಜೊತೆಗೆ ಆರಂಭ ದಲ್ಲಿ ಗಜಪತಿವಂಶದ ಹಿಂದಿನ ಪ್ರಸಿದ್ಧ ದೊರೆಗಳನ್ನು ನೆನಪಿಗೆ ತರುವ ಕಬಲೇಶ್ವರ (ಕಪಿಲೇಶ್ವರ), ರೂಪನಾರಾಯಣ ಮುಂತಾದ ಹೆಸರುಗಳು ಬಂದಿರುವುದು ಗಮನಾರ್ಹ ವಾಗಿದೆ.

ಅದೇ ರೀತಿ ತುಮಕೂರು ಜಿಲ್ಲೆಯ ಪಾವಗಡ ತಾಲೂಕಿನ ಗೊರಲ್‌ಕುಂಟೆಯ ಇನ್ನೊಂದು ಶಾಸನ [13] ಇದೇ ವೀರಭದ್ರ ರಾಜನದೇ ಇದ್ದಂತಿದೆ. ಇಲ್ಲಿ ಅವನ ಹೆಸರನ್ನು ಕೆತ್ತುವಾಗ ಇಲ್ಲವೇ ಓದುವಾಗ ಸ್ವಲ್ಪ ವ್ಯತ್ಯಯವಾಗಿದೆ. ಅವನು ತನ್ನ ನಾಯಕತನಕ್ಕೆ ಕೃಷ್ಣರಾಯರು ನೀಡಿದ್ದ ನಿಡಗಲ್ಲು ಸೀಮೆಯ ಗೊಲ್ಲವಕುಂಟೆ ಗ್ರಾಮಕ್ಕೆ ವೀರಭದ್ರಪುರ ಎಂದು ಪ್ರತಿನಾಮವಿಟ್ಟು, ಅದನ್ನು ನಿಡಗಲ್ಲಿನ ವೀರಭದ್ರ ದೇವರಿಗೆ ದಾನ ನೀಡಿದ್ದನ್ನು ಆಶಾಸನ ತಿಳಿಸುತ್ತದೆ. ಮಲೇಬೆನ್ನೂರು ಶಾಸನದ ದಿನಾಂಕವನ್ನು 'ಶಕವರ್ಷ ೧೪೩೮ನೆಯ ಮೀವ ಸಂವತ್ಸರದ ಕಾರ್ತಿಕ ಶು ೧೨' ಎಂದು ಕೊಟ್ಟಿದ್ದರೆ ಗೊರಲ್ ಕುಂಟೆಯ ಶಾಸನದಲ್ಲಿ 'ಶಕವಷ ೧೪೩೭ನೆಯ ಮೀವ ಸಂವತ್ಸರದ ಕಾರ್ತೀಕ ಶು ೧೫' ಎಂದು ಹೇಳಿದೆ. ಇಲ್ಲಿ ಎರಡರಲ್ಲೂ ಬಂದಿರುವ ಸಂವತ್ಸರ ಯುವ ಎನ್ನುವುದು ಸ್ಪಷ್ಟ. ಅದು ಶಕವರ್ಷ ೧೪೩೮ರಲ್ಲಿ ಬರುತ್ತದೆ. ೧೪೩೭ರಲ್ಲಿ ಅಲ್ಲ. (ಶಕವರ್ಷ ಸಂಖ್ಯೆ ಕೊಡುವಾಗ ಇಂಥ ಸಣ್ಣ ಪುಟ್ಟ ವ್ಯತಾಸಗಳಾಗಿರುವುದು ಹಲವು ಶಾಸನಗಳಲ್ಲಿ ಕಂಡು ಬರುವ ಅಂಶ).

ಇದೇ ವೀರಭದ್ರ ಅದೇ ವರ್ಷದ ಕಾರ್ತಿಕ ಶುದ್ಧ ೧೫ರಲ್ಲಿ ಹಾಕಿಸಿದ ಮತ್ತೊಂದು ಶಾಸನ ಆಂಧ್ರಪ್ರದೇಶ ಜಿಲ್ಲೆಯ ಅನಂತಪುರ ಜಿಲ್ಲೆಯ ಮಡಕಶಿರಾ ತಾಲ್ಲೂಕಿನ ಚೆರುಲಪಲ್ಲಿಯಲ್ಲಿದ್ದದ್ದು ವರದಿಯಾಗಿದೆ.[14] ಅದರ ಹೆಚ್ಚಿನ ವಿವರಗಳು ಸದ್ಯಕ್ಕೆ ಲಭ್ಯವಿಲ್ಲ. 'ವೀರಭದ್ರರಾಯರ್ ನಿರ್ಮೈ' ಎಂಬ ಉಲ್ಲೇಖವಿರುವ ಕ್ರಿ.ಶ. ೧೫೧೮ ಒಂದು ತಮಿಳುಶಾಸನ ವರದಿಯಾಗಿದ್ದು,[15] ಅದು ಗಜಪತಿಯನ್ನು ಉಲ್ಲೇಖಿಸದಿದ್ದರೂ ಇದೇ ವೀರಭದ್ರನದೇ ಆಗಿರಬಹುದೆಂದು ಕಾಣುತ್ತದೆ. ಅದರ ವಿವರಗಳೂ ಸದ್ಯದಲ್ಲಿ ಲಭ್ಯವಿಲ್ಲ.

ಅಂತೂ ಈ ಮೇಲಿನ ಶಾಸನೋಲ್ಲೇಖಗಳಿಂದ ಶ್ರುತಪಡುವ ಸಂಗತಿ ಎಂದರೆ, (ನ್ಯೂನಿಜ್ ಹೇಳುವಂತೆ) ಒರಿಸ್ಸಾದ ರಾಜ ಪುತ್ರ, (ಇನ್ನು ಕೆಲವರು ಇತಿಹಾಸಕಾರರು ಹೇಳುವಂತೆ) ವೀರಭದ್ರ ಗಜಪತಿ ಸೆರೆಯಲ್ಲಿದ್ದಾಗ ಆತ್ಮಹತ್ಯೆ ಮಾಡಿಕೊಳ್ಳಲಿಲ್ಲ, ಬದಲಿಗೆ ಕೃಷ್ಣದೇವರಾಯರ ಉದಾರತೆಯಿಂದ ಅವನನ್ನು ಸೆರೆಯಿಂದ ಮುಕ್ತನನ್ನಾಗಿ ಮಾಡಿ ಅವನ ಅಧೀನನಾಗಿ ವಿಜಯನಗರ ಸಾಮ್ರಾಜ್ಯದ ಮಧ್ಯಭಾಗದ ಒಂದೆರಡು ಪ್ರಾಂತ ಗಳಿಗೆ ಪ್ರಭುವನ್ನಾಗಿ ಮಾಡಿದ್ದನೆಂದು ತಿಳಿಯಬೇಕಾಗುತ್ತದೆ. ದೊಡ್ಡ ರಾಜ್ಯವೊಂದರ ರಾಜಪುತ್ರನೂ ಮುಂದೆ ಆ ರಾಜ್ಯದ ಉತ್ತರಾಧಿಕಾರಿಯಾಗಿ ಆಳಬೇಕಿದ್ದವನು, ತನ್ನ ರಾಜ್ಯದಿಂದ ದೂರೆದ ಬೇರೊಂದೂ ನಾಡಿನ (ಮಧ್ಯಭಾಗದ)ಲ್ಲಿ, ಅದೂ ಶತ್ರು ಗಳಾಗಿದ್ದವರಲ್ಲಿ ಅಧೀನತೆಯನ್ನು ಒಪ್ಪಿ ಪ್ರಾಂತಪ್ರಭುವಾಗಿ ಇರಬೇಕಾದ ಪರಿಸ್ಥಿತಿ ಬಂದದ್ದು, ರಾಜಕೀಯದಲ್ಲಿರುವವರ ಜೀವನದ ವಿಪರ್ಯಾಸಕ್ಕೆ ಒಳ್ಳೆಯ ಉದಾಹರಣೆಯಾಗಿದೆ.

ಹೀಗೆ ವೀರಭದ್ರ ಗಜಪತಿ ಒಬ್ಬ ಪ್ರಾಂತಪ್ರಭುವಾಗಿದ್ದನೆಂಬುದನ್ನು ನೋಡಿದರೆ, ನ್ಯೂನಿಜ್ ಒರಿಸ್ಸಾದ ರಾಜಪುತ್ರ ಸೆರೆಯಲ್ಲಿದ್ದಾಗ ಸ್ವಹತ್ಯೆ ಮಾಡಿಕೊಂಡನೆಂದು ಹೇಳಿರುವುದು ಸರಿಯಲ್ಲವೆಂದು ಹೇಳಬೇಕಾಗುತ್ತದೆ. ನ್ಯೂನಿಜ್ ಹೇಳುವುದು ನಿಜ ವಾಗಿದ್ದರೆ, ಕೃಷ್ಣದೇವರಾಯ ಸೆರೆ ಹಿಡಿದದ್ದು ಒಬ್ಬ ರಾಜಪುತ್ರ ನಿರದೆ ಇನ್ನೊಬ್ಬ ಹೆಚ್ಚಿನವನಿದ್ದಿರಬಹುದೆ? ಹಾಗೇನಾದರೂ ಇದ್ದರೆ ಆಗ ಒಬ್ಬ ಸೆರೆಯಲ್ಲಿ ಸತ್ತು, ಮತ್ತೊಬ್ಬ ಕೃಷ್ಣರಾಯನ ಕೃಪಾಕಟಾಕ್ಷಕ್ಕೆ ಪಾತ್ರನಾಗಿ, ಸೆರೆಯಿಂದ ಬಿಡುಗಡೆಗೊಳಿಸಲ್ಪಟ್ಟು ಪ್ರಾಂತಪ್ರಭುವಾಗಿ ಮಾಡಲ್ಪಟ್ಟಿರಬಹುದೆ ? - ಇಂಥ ಪ್ರಶ್ನೆಗಳು ಹುಟ್ಟುತ್ತವೆ.

ಇಲ್ಲಿ ಇನ್ನೊಂದು ವಿಚಾರ : ಕೃಷ್ಣದೇವರಾಯನು ಉದಯಗಿರಿಯ ಮೇಲೆ ದಾಳಿ ಮಾಡಿದಾಗ, ಅದರಲ್ಲಿದ್ದ ಒರಿಸ್ಸಾ ರಾಜನ ಕಕ್ಕಿಯ (=ಚಿಕ್ಕಮ್ಮನ)ನ್ನು ಸೆರೆಹಿಡಿದ ಎಂದು ನ್ಯೂನಿಜ್ ಬರೆದಿದ್ದಾನೆ. [16] ಇದಕ್ಕೆ ಅಡಿಟಿಪ್ಪಣಿಯಲ್ಲಿ 'ಕೆಲವರು ಕಕ್ಕ ಎಂದು ಹೇಳುತ್ತಾರೆ' ಎಂಬ ವಿವರಣೆಯೂ ಇದೆ. [17] ಇದರಿಂದ ನಡೆದ ಸಂಗತಿಗಳು ನ್ಯೂನಿಜ್‌ನ ಕಿವಿಯನ್ನು ತಲುಪುವ ವೇಳೆಗೆ ಸಾಕಷ್ಟು ಕಲಸು ಮೇಲೋಗರ ಗೊಂಡಿದ್ದುವು ಎಂಬುದು

ಸ್ಪಷ್ಟವಾಗುತ್ತದೆ. ಉದಯಗಿರಿಯಲ್ಲಿ ಕೃಷ್ಣದೇವರಾಯನು ಸೆರೆಹಿಡಿದದ್ದು ಕಕ್ಕಿಯನ್ನಲ್ಲ ಕಕ್ಕನನ್ನು ಎನ್ನುವುದಾರೆ, ಈ ಕಕ್ಕ ಎನ್ನುವ ಸಂಬಂಧವಾದ ಪ್ರತಾಪ ರುದ್ರನಿಗೆ ಹೇಳಿದ್ದೋ ರಾಜಕುಮಾರ ವೀರಭದ್ರನಿಗೆ ಹೇಳಿದ್ದೋ ಎನ್ನುವ ಸಂದಿಗ್ಧತೆಯೂ ಬರುತ್ತದೆ. ಪ್ರತಾಪ ರುದ್ರನಿಗೆ ಅವನು ಕಕ್ಕನಿದ್ದ ಎನ್ನುವುದಾದರೆ, ಅವನು ಪ್ರತಾಪರುದ್ರನಿಗಿಂತ ವಯಸ್ಸಿನವರೇ ಇದ್ದಿರಬೇಕಾಗುತ್ತದೆ. ಇಲ್ಲಿ ಎರಡನೆಯ ಅಂಶ ನಿಜವಾದರೆ, ಜೊತೆಗೆ ಅವನು ಕತ್ತಿವರಸೆಯಲ್ಲಿ ಪ್ರವೀಣನಿದ್ದ ಎಂದೂ ಭಾವಿಸುವುದಾದರೆ, ಆಗ ನ್ಯೂನಿಜ್ ಹೇಳುವ ರೀತಿಯಲ್ಲಿ ಮರಣಿಸಿದವನು ಅವನು ಎನ್ನಬೇಕಾಗುತ್ತದೆ. ಒಂದು ವೇಳೆ ತೀರಾ ಹಿರಿಯ ವಯಸ್ಸಿನವನಿದ್ದರೆ, ಕೃಷ್ಣದೇವರಾಯನು ಅವನ ಕತ್ತಿವರಸೆಯ ಪ್ರಾವೀಣ್ಯ ನೋಡಲು ಉತ್ಸುಕತೆ ತೋರುವುದು ಸಂದೇಹಾಸ್ಪದವೇ. ಒಟ್ಟಿನಲ್ಲಿ ಇನ್ನಷ್ಟು ಹೆಚ್ಚಿನ ಸೂಕ್ತ ಆಧಾರ ಸಿಕ್ಕರೆ ವಾಸ್ತವಾಂಶ ತಿಳಿಯಲು ಸಾಧ್ಯವಾದೀತು. ಅಲ್ಲಿಯವರೆಗೆ ಸೆರೆಯಲ್ಲಿ ಗಜಪತಿಯ ಸಂತಾನನೆನಿಸಿದವನು ಯಾರಾದರೊಬ್ಬ ಮರಣಿಸಿದ್ದು ನಿಜ ಎನ್ನುವುದಾದರೆ ಅವನು ಯಾರೂ ಎಂಬುದು ಸಂದೇಹಗ್ರಸ್ತವಾಗಿಯೇ ಉಳಿಯುತ್ತದೆ.

ಮತ್ತೊಂದು ವಿಚಾರವನ್ನೂ ಇಲ್ಲಿ ಹೇಳಬೇಕು: ಮೇಲೆ ಹೇಳಿದ (ತಮಿಳುಶಾಸನ ಬಿಟ್ಟು ಉಳಿದ) 'ಮೂರು ಶಾಸನಗಳೂ ಒಂದೇ ವರ್ಷ, ಮಾಸ ಮತ್ತು ಪಕ್ಷದವು. ಅವುಗಳ ಅನಂತರ ವೀರಭದ್ರರಾಜನ ಯಾವ ಶಾಸನಗಳೂ ದೊರೆತಿರುವುದಿಲ್ಲ. ಅಷ್ಟೇ ಅಲ್ಲ, ಒರಿಸ್ಸಾ ರಾಜ್ಯದಲ್ಲೂ ಸಹ ಪ್ರತಾಪರುದ್ರನ ಅನಂತರದಲ್ಲಿ ವೀರಭದ್ರರಾಜ ಪಟ್ಟವೇರುವುದಿಲ್ಲ. ಬದಲಿಗೆ, ಅವನ ಇಬ್ಬರು ಮಲಸಹೋದರರು ಪಟ್ಟವೇರಿ, ವಿದ್ಯಾಧರ ಮಹಾಪಾತ್ರನಿಂದ ಕೊಲೆಗೀಡಾಗುತ್ತಾರೆ. ಕೊಂಡವೀಡು ಪತನಾನಂತರ (ಕ್ರಿ.ಶ. ೧೫೧೬) ಒರಿಸ್ಸಾದಲ್ಲಿ ವೀರಭದ್ರನ ಯಾವ ಶಾಸನವೂ ಲಭ್ಯವಿಲ್ಲ.' [16] ಅಲ್ಲದೆ ೧೫೨೮ರ ಹೊತ್ತಿಗೆ ಮಲೇಬೆನ್ನೂರು ಪ್ರಾಂತಕ್ಕೆ ಅದಿಯಪ್ಪನಾಯಕ ಎಂಬುವನೊಬ್ಬ ನನ್ನು ಕೃಷ್ಣದೇವರಾಯ ನಾಯಕನನ್ನಾಗಿ ಮಾಡಿದ್ದುದು ಅಲ್ಲಿಯ ಇನ್ನೊಂದು ಶಾಸನದಿಂದ ತಿಳಿಯುತ್ತದೆ. ಹಾಗಿದ್ದರೆ ವೀರಭದ್ರರಾಜ ಅಲ್ಪಾಯುವಾಗಿ ಮರಣಿಸಿದನೆ? ಹೇಗೆ ಮರಣಿಸಿದ? ಅಥವಾ ಕಾರಣಾಂತರದಿಂದ ಮತ್ತೆ ಸೆರೆಯಲ್ಲಿಡಲ್ಪಟ್ಟು ಅಲ್ಲಿ ಏನಾದರೂ ಅವನು ಮರಣಿಸಿರಬಹುದೆ?ಅರ್ಥಾತ್ 'ಇಷ್ಟೆಲ್ಲ ಗೊಂದಲಗಳ ನಡುವೆ ಅಲ್ಪ ವ್ಯತ್ಯಾಸಗಳೊಡನೆ ನ್ಯೂನಿಜನ ವರದಿ ಸತ್ಯವಿರಬಹುದೇ?' [17] ಹೀಗೆ ಮತ್ತೆಕೆಲವು ಹೊಸ ಪ್ರಶ್ನೆಗಳು ಮೂಡುತ್ತವೆ.

೪) ಕಡೆಯದಾಗಿ, ಕೃಷ್ಣದೇವರಾಯನು ಕೈಕೊಂಡ ಒರಿಸ್ಸಾ ಮೇಲಿನ ದಂಡಯಾತ್ರೆ ೧೫೧೩ರಿಂದ ೧೫೧೮ರವರೆಗೆ ಆರುವರ್ಷ ನಡೆಯಿತು ಎಂಬ ಚರಿತ್ರಕಾರರ ಹೇಳಿಕೆ ಸಹ ಸಂದೇಹಾಸ್ಪದವಾಗಿದೆ. ಏಕೆಂದರೆ ಕ್ರಿ.ಶ. ೧೫೧೫ರಲ್ಲಾಗಲೇ ವೀರಭದ್ರಗಜಪತಿ ಕೃಷ್ಣದೇವರಾಯನಲ್ಲಿ ಅಧೀನ ಪಾಳೆಯಗಾರನಾಗಿದ್ದನೆನ್ನುವುದರಿಂದ ಅಷ್ಟು ಹೊತ್ತಿಗೆ

ಒರಿಸ್ಸಾ ಮೇಲಿನ ಎಲ್ಲ ಸೈನಿಕ ಕಾರ್ಯಾಚರಣೆಯು ಮುಗಿದಿತ್ತೆಂದೇ ತಿಳಿಯಬೇಕಾಗುತ್ತದೆ. ಆದ್ದರಿಂದ ಆ ದಂಡ ಯಾತ್ರೆಗೆ ಆರು ವರ್ಷ ಹಿಡಿಯಿತು ಎನ್ನುವುದಕ್ಕಿಂತ, ಮೂರು ವರ್ಷ ಮಾತ್ರ ಹಿಡಿದಿರಬೇಕು ಎನ್ನುವುದು ವಿಹಿತವಾಗಿ ಕಾಣುತ್ತದೆ.

ಪ್ರಮುಖವೆನ್ನುವ ಒಂದು ದಂಡಯಾತ್ರೆಯ ವಿವರಗಳು ಇಷ್ಟೆಲ್ಲ ಗೊಂದಲ ಗೊಂಡಿರುವುದು ಆಶ್ಚರ್ಯದ ಸಂಗತಿಯೆ. ಈ ಗೊಂದಲಗಳಿಗೆ ಒಂದು ನಿಟ್ಟಿನಲ್ಲಿ ಅಸ್ಪಷ್ಟತೆಗೆ ಎಡೆಕೊಟ್ಟಿರುವ ಆಕರಾಂಶಗಳು ಕಾರಣವಾದರೆ, ಇನ್ನೊಂದು ನಿಟ್ಟಿನಲ್ಲಿ ಕೆಲವರು ಇತಿಹಾಸಕಾರರು ಇರುವ ಆಕರಾಂಶಗಳನ್ನು ಸರಿಯಾಗಿ ನೋಡದೆ ಹೋಗಿ ರುವುದೂ ಕಾರಣವಾಗಿದೆ. ಅಂತೂ ಈ ಮೇಲಿನ ಅಂಶಗಳ ಪರಿಶೀಲನೆ ನಮ್ಮ ಇತಿಹಾಸ ಗ್ರಂಥಗಳ -ಹಾಗೆಯೇ ಪಠ್ಯಪುಸ್ತಕಗಳ ಪದರ ಪದರಗಳಲ್ಲಿ ಹೇಗೆ ಹೇಗೆ ಮತ್ತು ಎಂದೆಂಥ ಅಸಂಗತ ಅಂಶಗಳು ಇತಿಹಾಸ ಕಟ್ಟಡದಲ್ಲಿ ಸೇರಿಹೋಗಿವೆ ಎಂಬುದನ್ನೂ ಹಾಗೆಯೇ ಇಂಥ ಅಂಶಗಳ ಪುನರ್ವಿಮರ್ಶೆ ಎಂಥ ಜರೂರಿನ ಸಂಗತಿ ಎಂಬುದನ್ನೂ ಮನಸ್ಸಿಗೆ ತರುವಂತಿದೆ.

ಅಡಿಟಿಪ್ಪಣಿಗಳು

1) ಜ್ಞಾನಗಂಗೋತ್ರಿ - ಸಂಪುಟ ೧, ಪ್ರಧಾನ ಸಂಪಾದಕರು : ನಿರಂಜನ, ಬೆಂಗಳೂರು, ೧೯೭೦, ಪು. ೨೧೭

1a) ಡಾ. ಪಿ. ಬಿ. ದೇಸಾಯಿ, ಕರ್ನಾಟಕ ಪರಂಪರೆ - ಸಂಪುಟ ೩, ಮೈಸೂರು ರಾಜ್ಯ ಸರಕಾರ, ೧೯೭೦, ಪು. ೩೪

2) ಕನ್ನಡ ವಿಷಯ ವಿಶ್ವಕೋಶ - ಕರ್ನಾಟಕ ಸಂಪುಟ, ಮೈವಿವಿ, ಮೈಸೂರು, ೧೯೭೯, ಪು. ೩೫೧

3) ಪ್ರೊ. ಬಾ. ರಾ. ಗೋಪಾಲ್, 'ವಿಜಯನಗರದ ಇತಿಹಾಸ'; ಕರ್ನಾಟಕ ಚರಿತ್ರೆ (ಕ್ರಿ.ಶ. ೧೩೩೬-೧೭೬೦) ಸಂ : ಪ್ರೊ.ಕೆ.ಎಸ್. ಶಿವಣ್ಣ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪು. ೪೧.

4) ಅದೇ, ಪು. ೪೨

5) ಮರೆತು ಹೋಗಿರುವ ಸಾಮ್ರಾಜ್ಯ ವಿಜಯನಗರ (ಮೂಲ ರಾಬರ್ಟ್ ಸಿವೆಲ್) ಅನು: ಸದಾನಂದಕನವಳ್ಳಿ, ಕನ್ನಡ ವಿವಿ, ಹಂಪಿ -೧೯೯೨, ಪು. ೩೩೭

6) ಅದೇ, ಪು. ೩೩೮

7) ಅದೇ, ಪು. 339

8) ಅದೇ, ಪು. ೩೪೦

9) ಡಾ.ಪಿ.ಬಿ. ದೇಸಾಯಿ, ಕರ್ನಾಟಕದ ಪರಂಪರೆ - ಸಂಪುಟ ೨, ಮೈಸೂರು ರಾಜ್ಯ ಸರಕಾರ, ೧೯೭೦, ಪು. ೩೫.

10) ಅದೇ, ಪು. ೨೬.

11) ಅದೇ ಪು. ೩೮

12) ಎಪಿಗ್ರಾಫಿಯ ಕರ್ನಾಟಕ, ಸಂಪುಟ ೧೧, ಸಂ.ಬಿ.ಎಲ್. ರೈಸ್, ಬೆಂಗಳೂರು, ೧೯೦೩, ಧಾವಣಗೆರೆ ೧೦೭.

13) -"- ಸಂಪುಟ ೭, - " - , - " -, ೧೯೦೪, ಪಾವುಗಡ ೬೨.

14) B 744/ 1917 (1918 ರಿಪೋರ್ಟ್‌ನಲ್ಲಿ ಪ್ರಕಟ), ಮಡಕಶಿರಾ ತಾಲ್ಲೂಕು, ಅನಂತಪುರ ಜಿಲ್ಲೆ,

15) 466/1920 (Annual Report)
ಇದು ಮತ್ತು ಪಾವಗಡ ಹಾಗೂ ಮಡಕಶಿರಾ ತಾಲ್ಲೂಕುಗಳ ಶಾಸನಗಳನ್ನು ನನ್ನ ಗಮನಕ್ಕೆ ತಂದವರು ವಿಜಯನಗರ ಇತಿಹಾಸ ಪರಿಣತರಲ್ಲಿ ಒಬ್ಬರೂ ನನ್ನ ಪ್ರಿಯ ಮಿತ್ರರೂ ಆದ ಡಾ. ಕೆ.ಜಿ. ಗೋಪಾಲಕೃಷ್ಣರಾವ್ ಅವರು. ಅವರಿಗೆ ನನ್ನ ವಂದನೆಗಳು.

16) ಡಾ.ಕೆ.ಜಿ. ಗೋಪಾಲಕೃಷ್ಣರಾವ್, ಅವರ ದಿನಾಂಕ ೧೨-೧೧-೨೦೦೬ರ ಪತ್ರದಲ್ಲಿ.

17) ಡಾ. ಕೆ.ಜಿ. ಗೋಪಾಲಕೃಷ್ಣರಾವ್, ಅದೇ ಪತ್ರದಲ್ಲಿ.

೫೧. ಕೃಷ್ಣರಾಯ ಮತ್ತು ಕಳಿಂಗ ರಾಜಪುತ್ರಿ

ಡಾ. ಕೆ.ಜಿ. ಗೋಪಾಲಕೃಷ್ಣರಾವ್

ವಿಜಯನಗರ ಸಾಮ್ರಾಜ್ಯದ ಅತಿಪ್ರಸಿದ್ಧ ಅಧ್ಯಯನಗಳಲ್ಲಿ ಕೃಷ್ಣರಾಯನದ್ದೇ ಪ್ರಮುಖವಾದದ್ದು. ಹೀಗಾಗಿ ಈ ಚಕ್ರವರ್ತಿಯ ಬಗೆಗೆ, ಅವನ ಜೀವನ ಸಾಧನೆಗಳ ಬಗೆಗೆ ನಡೆದಿರುವ ಸಂಶೋಧನೆಯೂ ಅಪಾರವಾದದ್ದೇ. ನೆಲಟೂರಿಯವರ 'ಕೃಷ್ಣದೇವ ರಾಯ' ಕೃತಿಯಿಂದ ಹಿಡಿದು 1997ರ ಪ್ರೊ. ದೀಕ್ಷಿತ್ ಅವರ ಅದೇ ಹೆಸರಿನ ಗ್ರಂಥದವರೆಗೂ ಅನೇಕ ಸಂಶೋಧನಾ ಗ್ರಂಥಗಳೂ, ನೂರಾರು ಬಿಡಿ ಲೇಖನಗಳೂ ಬರೆಯಲ್ಪಟ್ಟಿವೆ. ಹೀಗಿದ್ದರೂ ಈ ಜೀವನ ಚರಿತ್ರೆಯಲ್ಲಿನ ಅನೇಕ ಭಾಗಗಳೂ ಇನ್ನೂ ಕತ್ತಲೆಯಲ್ಲೇ ಇರುವುದು ಆಶ್ಚರ್ಯ. ಅಂತಹುದರಲ್ಲಿ ಒಂದು ಕಳಿಂಗರಾಜಕುಮಾರಿ ಯೊಡನೆ ಅವನ ವಿವಾಹ. ಈ ವಿವಾಹದ ಬಗೆಗೆ ಇರುವ ಗೊಂದಲ, ಸಂದೇಹ ಮತ್ತು ಭಿನ್ನಾಭಿಪ್ರಾಯಗಳ ಬಗೆಗೆ ವಿದ್ವಾಂಸರ ಗಮನ ಸೆಳೆಯುವುದು ಈ ಲೇಖನದ ಉದ್ದೇಶ.

ಮೊಟ್ಟಮೊದಲಿಗೆ ಒರಿಸ್ಸಾದ ಅಥವಾ ವಿಜಯನಗರ ಸಾಮ್ರಾಜ್ಯದ ಯಾವ ಶಾಸನ ದಲ್ಲೂ ಈ ವಿವಾಹದ ಪ್ರಸ್ತಾಪವಿಲ್ಲ. ರಾಯನ ಅನೇಕ ಶಾಸನಗಳಲ್ಲಿ ಅವನ ರಾಣಿಯರ ಪ್ರಸ್ತಾಪ ಬರುತ್ತದೆ. ಆದರೆ ಎಲ್ಲೂ ತಿರುಮಲದೇವಿಯ ಅಥವಾ ಚಿನ್ನಾದೇವಿಯನ್ನು ಬಿಟ್ಟರೆ ಕಳಿಂಗ ರಾಜಕುಮಾರಿಯ ಪ್ರಸ್ತಾಪವಿಲ್ಲ. ಕ್ರಿ.ಶ. ೧೫೨೦-೨೧ರ ಸುಮಾರಿನ ಕೃಷ್ಣರಾಯನೇ ಬರೆದಂಥ ಆಮುಕ್ತ ಮಾಲ್ಯದಾ ಗ್ರಂಥದಲ್ಲಿ ಈ ವಿವಾಹದ ಪ್ರಸ್ತಾಪ ವಿಲ್ಲ. ಹೀಗೆಯೆ ಪ್ರತಾಪರುದ್ರ ಗಜಪತಿಯ 'ಸರಸ್ವತೀ ವಿಲಾಸಮು' ಗ್ರಂಥವೂ ಇವರ ಬಗ್ಗೆ ಮೌನವಾಗಿವೆ. ಪುರಿ ದೇವಾಲಯದ ಚಾರಿತ್ರಿಕ ದಾಖಲೆಯಾದ (ತಮಿಳುನಾಡಿನ 'ಕೋಯಿಲ್ ಒಳಗು'ಗ್ರಂಥಗಳಂತೆ) 'ಮಾದಾಲಪಾಂಜಿ' ಗ್ರಂಥವೂ ಇದರ ಬಗ್ಗೆ ಏನೂ ಹೇಳುವುದಿಲ್ಲ. ತಿರುಪತಿಯ ದೇವಸ್ಥಾನದಲ್ಲಿರುವ ಸುಮಾರು ಕ್ರಿ.ಶ. ೧೫೨೦-೨೧ರ ಕೃಷ್ಣರಾಯನ ಕುಟುಂಬದ ತಾಮ್ರದ ಮೂರ್ತಿಗಳಲ್ಲಿ ಇಬ್ಬರೇ ರಾಣಿಯರಿದ್ದಾರೆ. ಕಳಿಂಗ ರಾಜಪುತ್ರಿಯಿಲ್ಲ. ಇಷ್ಟೆಲ್ಲ ವಿವರಗಳನ್ನು ನೋಡಿಯೇ ಇತಿಹಾಸಕಾರರೂ, ಒರಿಸ್ಸಾದ ಮುಖ್ಯಮಂತ್ರಿಗಳೂ ಆಗಿದ್ದ ಡಾ. ಹರೇಕೃಷ್ಣ ಮೆಹತಾಬರು ಈ ವಿವಾಹ ನಡೆದೇ ಇಲ್ಲವೆಂದೂ, 'ಕಂಚಿಕಾವೇರಿ' ಕಥೆಗೆ ವಿರೋಧಿಯಾಗಿ ಈ ಕಥೆಯನ್ನು ಕಟ್ಟಲಾಗಿರ ಬಹುದೆಂದೂ ಅಭಿಪ್ರಾಯಪಟ್ಟರು.[1]

ಒರಿಸ್ಸಾ ರಾಜ್ಯವನ್ನು ಹೊರತುಪಡಿಸಿ ಇತರ ಸಾಹಿತ್ಯಾಧಾರಗಳಲ್ಲಿ ವಿವಾಹ ನಡೆಯಿತೆನ್ನುವ ಬಗ್ಗೆ ಉಲ್ಲೇಖ ಸಿಗುತ್ತದೆ. ಉದಾಹರಣೆಗೆ :

1. ಕೃಷ್ಣದೇವರಾಯನ ದಿನಚರಿಯಲ್ಲಿ [2] ವಿವಾಹದ ಪ್ರಸ್ತಾಪವಿದೆ.
2. ಮುಕ್ಕುತಿಮ್ಮನ ಪಾರಿಜಾತಾಪಹರಣಮು ಗ್ರಂಥದಲ್ಲಿ ವಿವಾಹದ ಬಗ್ಗೆ ಮಾಹಿತಿ ಇದೆ.
3. ಪೇಯಸ್ ಮತ್ತು ನ್ಯೂನಿಸ್ ಕಳಿಂಗ ರಾಜಕುಮಾರಿಯು ರಾಯನ ಮೂರನೆಯ ರಾಣಿಯೆಂದು ಸ್ಪಷ್ಟವಾಗಿ ಹೇಳಿದ್ದಾರೆ.

17ನೆಯ ಶತಮಾನದ ತಮಿಳುಗ್ರಂಥ ನವಲೂರು ಚರಿತ್ರಮ್ ಕೂಡ ಆಧಾರ ಒದಗಿಸುತ್ತದೆ. ಶಾಸನಾಧಾರವಿಲ್ಲದಿದ್ದರೂ ಇಷ್ಟೊಂದು ಸಮಕಾಲೀನ ಸಾಹಿತ್ಯಾಧಾರ ವಿರುವುದರಿಂದ ವಿವಾಹವಾದದ್ದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ವಿವಾಹ ನಡೆಯಿತು ಎಂದು ಒಪ್ಪುವ ಈ ಮೇಲಿನ ಯಾವ ಗ್ರಂಥಗಳೂ ವಧುವಿನ ಹೆಸರನ್ನೇ ಹೇಳುವುದಿಲ್ಲ. ಉದಾಹರಣೆಗೆ 'ಕೃಷ್ಣದೇವರಾಯ ದಿನಚರಿ'ಯಲ್ಲಿ ಕಳಿಂಗ ರಾಜಕುಮಾರಿಯನ್ನು ಕೇವಲ 'ಗಜಪತಿ ಕೌಮಾರಿತಿ' ಎಂದು ಕರೆಯಲಾಗಿದೆ. [3] ಪೇಯಸ್ ಮತ್ತು ನ್ಯೂನಿಸ್ ಆಕೆಯನ್ನು ಒರಿಸ್ಸಾದ ರಾಜನ ಮಗಳು ಎಂದು ಕರೆಯುತ್ತಾರೆಯೇ ಹೊರತು ಅವಳ ಹೆಸರು ಹೇಳಿಲ್ಲ. ಬಂಡಾರು ಲಕ್ಷ್ಮೀನಾರಾಯಣನ 'ಸಂಗೀತ ಸೂರ್ಯೋದಯಮು' ಗ್ರಂಥವೂ ಕೂಡ ಈಕೆಯನ್ನು 'ಗಜಪತಿ ಸುತಾ' ಎನ್ನುತ್ತದೆಯೆ ಹೊರತು ಹೆಸರು ಹೇಳುವುದಿಲ್ಲ.

ಹಾಗಾದರೆ ವಧುವಿನ ಹೆಸರು ಎಲ್ಲೂ ಉಕ್ತವಾಗಿಲ್ಲ? ಇದೆ. ಆದರೆ ಈ ಹೆಸರು ಹೇಳುವಲ್ಲೂ ಗೊಂದಲವಾಗಿ ಅನೇಕ ಹೆಸರುಗಳ ಸಂತೆಯೇ ಸೇರುತ್ತದೆ. ಉದಾ :

1. ಕೃಷ್ಣರಾಯನ ಹಿರಿಯಮಗಳಾದ ಮೋಹನಾಂಗೀ ಬರೆದ 'ಮಾರೀಚೀ ಪರಿಣಯಮು' ಗ್ರಂಥದಲ್ಲಿ ಈಕೆಯನ್ನು ಲಕ್ಷ್ಮೀ ಎಂದು ಕರೆಯಲಾಗಿದೆ. [3]
2. ಗಾದೆಂಡ್ಲ ಗೋಪನ 16ನೇ ಶತಮಾನದ ಕೃತಿ 'ಪ್ರಬೋಧ ಚಂದ್ರೋದಯ ವ್ಯಾಖ್ಯೆ'ಯಲ್ಲಿ ಈಕೆಯ ಹೆಸರು 'ಭದ್ರಾ' ಎಂದಿದೆ. [4]
3. 17ನೆ ಶತಮಾನದ ಕುಮಾರ ಧೂರ್ಜಟಿಯ ಕೃತಿ 'ಕೃಷ್ಣರಾಯ ವಿಜಯಮು' ಗ್ರಂಥದಲ್ಲಿ ಈ ಕೆಯ ಹೆಸರು 'ತುಖ್ಖಾ' ಎಂದಿದೆ. [5]
4. ಟೇಲರ್ ತನ್ನ ಗ್ರಂಥದಲ್ಲಿ ಈಕೆಯನ್ನು 'ರುಚೀದೇವಿ' ಎಂದು ಹೇಳುತ್ತಾನೆ.
5. ಎರಡನೆ ವೆಂಕಟಪತಿರಾಯನ ಕಾಲದ 'ವಿಜಯನಗರ ಸಾಮ್ರಾಜ್ಯಮು ಲೇಖನದಲ್ಲಿ ಈಕೆಯನ್ನು ಲಕ್ಷ್ಮೀದೇವಮ್ಮ ಎಂದು ಕರೆಯಲಾಗಿದೆ.
6. ಕೆಲವು ಕೈಫಿಯತ್ತುಗಳಲ್ಲಿ ಈಕೆಯನ್ನು 'ವರದರಾಜಮ್ಮ' ಎಂದು ಕರೆಯಲಾಗಿದೆ.

7. 'ರಾಯವಾಚಕಮು' ಒಂದೇ ಈಕೆಯನ್ನು ಈಗ ಪ್ರಸಿದ್ಧವಾಗಿರುವ 'ಜಗನ್ಮೋಹಿನಿ' ಎಂಬ ಹೆಸರಿನಿಂದ ಕರೆದಿದೆ. ಆದರೆ ಈ ಗ್ರಂಥದ ಕಾಲ ನಿರ್ಣಯ ಗೊಂದಲಮಯವಾಗಿದ್ದು ಇದು 17ನೇ ಶತಮಾನದ್ದು ಎನ್ನುವವರೇ ಹೆಚ್ಚಿದ್ದಾರೆ.
8. 'ನರಪತಿರಾಜುಲ ಚರಿತ್ರೆ' ಎಂಬ ಗ್ರಂಥದಲ್ಲಿ ಈಕೆಯ ಹೆಸರು 'ಲುಖ್ಖಾ' ಎಂದಿದೆ.

ಹಾಗಿದ್ದರೆ ವಧುವಿನ ನಿಜವಾದ ಹೆಸರೇನು?

'ಜಗನ್ಮೋಹಿನಿ'ಯೆಂಬುದು ಕೇವಲ ವಿಶೇಷಣವಾಗಿದ್ದಿರಬೇಕೆಂದೂ, ನಿಜವಾದ ಹೆಸರಿರಲಾರದೆಂದೂ ಎನ್. ವೆಂಕಟರಮಣಯ್ಯ ಅಭಿಪ್ರಾಯ ಪಡುತ್ತಾರೆ. ಇದಕ್ಕೆ ವಿರುದ್ಧವಾಗಿ 'ಜಗಮೋಹನ'ನೆಂಬುದು ಪುರಿಯ ಜಗನ್ನಾಥನ ಅಥವಾ ಓರಿಸ್ಸಾ ದೇಶದ ದೇವಸ್ಥಾನಗಳ ಒಂದು ಭಾಗವಾದ್ದರಿಂದ ಅದೇ ಹೆಸರನ್ನು ಈಕೆಗೂ ಇಟ್ಟಿರಬಹುದೆಂದು ಅಭಿಪ್ರಾಯವಿದೆ.

'ಲಕ್ಷ್ಮೀ'ಎಂಬ ಹೆಸರೇ ನಿಜವೆನ್ನುವ ವಿದ್ವಾಂಸರು ಗಜಪತಿಯು ವೈಷ್ಣವನೆನ್ನುವುದನ್ನೂ 'ಲುಖ್ಖಾ' ಎಂಬ ಹೆಸರು ಲಖ್ಖಿ - ಲಕ್ಷ್ಮೀ ಆಗಿರಬಹುದಾದ ಸಾಧ್ಯತೆಯನ್ನು ಎತ್ತಿ ತೋರಿಸುತ್ತಾರೆ.

'ಕುಖ್ಖಾ' ಎಂಬ ಹೆಸರನ್ನು ಒಪ್ಪದ ವಿದ್ವಾಂಸರು 'ತುಖ್ಖಾರ' ಎಂಬ ಪದವು ಮಧ್ಯ ಪ್ರದೇಶದ ಒಂದು ಭಾಗವನ್ನು ತೋರಿಸುವುದೆಂದೂ ಈ ಭಾಗದ ಜನರನ್ನು ಮತ್ತು ಉತ್ತಮ ಕುದುರೆಗಳನ್ನೂ ಈ ಹೆಸರಿನಿಂದ ಕರೆಯುವುದನ್ನು ಉಲ್ಲೇಖಿಸಿ 'ಕುಖ್ಖಾರ' ಎನ್ನುವುದು ಸೌಂದರ್ಯಕ್ಕೆ ಒಂದು ವಿಶೇಷಣವೆನ್ನುತ್ತಾರೆ.

ಇನ್ನೊಂದು ಗುಂಪಿನ ವಿದ್ವಾಂಸರು ಒರಿಸ್ಸಾದೇಶದಲ್ಲಿ ಪುರಿಯ ಜಗನ್ನಾಥನ ತಂಗಿಯಾದ ಸುಭದ್ರೆಯ ಹೆಸರು ಅತ್ಯಂತ ಜನಪ್ರಿಯವೆಂದು ತೋರಿಸಿ 'ಸುಭದ್ರೆ' ಎಂದೇ ಅವಳ ಹೆಸರೆಂದು ಸಾಧಿಸುತ್ತಾರೆ.

ಇಷ್ಟೆಲ್ಲಾ ಗೊಂದಲಗಳನ್ನು ಬಿಟ್ಟು ಮುನ್ನಡೆದರೆ ಮುಂದಿನ ಪ್ರಶ್ನೆ ಎದುರಾಗುತ್ತದೆ. ವಿವಾಹ ಎಲ್ಲಿ ನಡೆಯಿತು?

ಈ ಪ್ರಶ್ನೆಗೂ ಸಮಾಧಾನಕರವಾದ ಉತ್ತರವಿಲ್ಲ. ಮೇಲೆ ಕಾಣಿಸಿದ ಎಲ್ಲ ಮೂಲಗಳೂ, ಗ್ರಂಥಗಳೂ ಲಗ್ನದ ಬಗ್ಗೆ ಒಂದೆರಡು ವಾಕ್ಯಗಳನ್ನು ಪದ್ಯಗಳನ್ನು ಮತ್ತು ಶ್ಲೋಕಗಳನ್ನು ಹೇಳುತ್ತಾರೆಯೇ ಹೊರತು, ಖಚಿತವಾಗಿ ಏನನ್ನೂ ಹೇಳುವುದಿಲ್ಲ.

1. 17ನೇ ಶತಮಾನದ ಕೃತಿಯಾದ 'ಕೃಷ್ಣರಾಜ ವಿಜಯ'ದಲ್ಲಿ ವಿವಾಹವು ಪೊಟ್ನೂರು / ಸಿಂಹಾಚಲದಲ್ಲಿ ನಡೆದಿರಬಹುದೆಂದು ಸೂಚಿಸುತ್ತದೆಯೇ ಹೊರತು ಖಚಿತವಾಗಿ ಹೇಳುವುದಿಲ್ಲ.
2. ನ್ಯೂನಿಸನ ವರದಿಯಲ್ಲಿ ಗಜಪತಿಯು ತನ್ನ ಮಗಳನ್ನು ಕಳುಹಿಸಿದ ನಂತರ ಶಾಂತಿಯೇರ್ಪಟ್ಟಿತು ಎಂದು ಹೇಳಿ ವಿವಾಹವು ವಿಜಯನಗರ ಪಟ್ಟಣದಲ್ಲಿ ನಡೆದಿರಬಹುದೆಂದು ಸೂಚಿಸುತ್ತಾನೆ.
3. ಕಟಕಪುರಿ ಕೃಷ್ಣರಾಯನ ದಾಳಿಯೊಂದರಲ್ಲಿ ಸುಟ್ಟು ನಾಶವಾದ್ದರಿಂದ ವಿವಾಹವು ಸಿಂಹಾಚಲದಲ್ಲಿ ನಡೆದಿರಬೇಕೆಂದು ಮತ್ತೊಂದು ಅಭಿಪ್ರಾಯ.
4. ಈ ಅಭಿಪ್ರಾಯಗಳ ಗೊಂದಲದಲ್ಲಿ ವಿವಾಹವು ವಿಜಯನಗರದಲ್ಲೇ ನಡೆದಿರಬಹುದಾದ ಅಭಿಪ್ರಾಯಕ್ಕೆ ದಾರಿ ಮಾಡಿಕೊಡುತ್ತದೆ.

ಇನ್ನು ವಿವಾಹ ನಡೆದ ಕಾಲ

ನೇಟಲೂರಿ ವೆಂಕಟರಮಣಯ್ಯನವರು ತಮ್ಮ ಕೃಷ್ಣದೇವರಾಯ ಗ್ರಂಥದಲ್ಲಿ ಯುದ್ಧವು ಸುಮಾರು ಕ್ರಿ.ಶ. ೧೫೧೯ ಸುಮಾರಿಗೆ ಮುಗಿಯಿತೆಂದು ಸೂಚಿಸುತ್ತಾರೆ.

ಪ್ರೊ. ದೀಕ್ಷಿತ್ ಅವರು ಯುದ್ಧವು ಸುಮಾರು ಕ್ರಿ.ಶ. ೧೫೧೮ಕ್ಕೆ ಮುಗಿಯಿತೆಂದು ಹೇಳುತ್ತಾರೆ.

ಆದರೆ ಸಿಂಹಾಚಲದ ಶಾಸನವು ತೋರಿಸುವ ಹಾಗೆ [6] ಕ್ರಿ.ಶ. ೧೫೧೯ರಲ್ಲಿ ಇನ್ನೂ ಯುದ್ಧ ಮುಗಿದು ಶಾಂತಿ ಏರ್ಪಟ್ಟಿರಲಿಲ್ಲ. ತಿರುಪತಿಯಲ್ಲಿ ಸುಮಾರು ಕ್ರಿ.ಶ. 1521ರಲ್ಲಿ ಸ್ಥಾಪಿಸಿದ ತಾಮ್ರದ ಮೂರ್ತಿಗಳಲ್ಲಿ ಕಳಿಂಗ ರಾಜಪುತ್ರಿಯ ಮೂರ್ತಿಯಿಲ್ಲದಿರುವುದರಿಂದ ಕ್ರಿ.ಶ. 1521ರವರೆಗೂ ವಿವಾಹ ನಡೆದಿರಲಿಲ್ಲವೆಂಬ ಅಭಿಪ್ರಾಯಕ್ಕೆ ಪುಷ್ಟಿಯನ್ನೊದಗಿಸುತ್ತದೆ. ವಿವಾಹದ ಬಗ್ಗೆ ಮಾತುಕತೆಯು ಕೃಷ್ಣರಾಯನು ವಿಜಯನಗರಕ್ಕೆ ಹಿಂದಿರುಗಿ ವಿಶ್ರಾಂತಿ ಪಡೆಯುತ್ತಿದ್ದಾಗ ಪ್ರಾರಂಭವಾದವೆಂದು ನ್ಯೂನಿಸನು ಖಚಿತವಾಗಿ ಬರೆದಿರುವುದರಿಂದ ಕ್ರಿ.ಶ. ೧೫೨೧ರ ತಿರುಪತಿಯ ಭೇಟಿಯ ನಂತರವೇ ಮಾತುಕತೆಯೂ, ವಿವಾಹವೂ ಜರುಗಿತೆಂದು ಭಾವಿಸಬಹುದು. [7]

ಆದರೆ ಪೇಯಸನು ರಾಜಧಾನಿಯಲ್ಲಿ ಕ್ರಿ.ಶ. ೧೫೨೦ ಸೆಪ್ಟೆಂಬರ್ ನಿಂದ ಪ್ರಾಯಶ, ಫೆಬ್ರವರಿ, ಮಾರ್ಚ್ ೧೫೨೧ರವರೆಗೆ ಇದ್ದು ಬರೆದ ವರದಿಯ [8] ಲ್ಲಾಗಲೇ ಕಳಿಂಗರಾಜಪುತ್ರಿಯ ಅರಮನೆಯನ್ನು ಉಲ್ಲೇಖಿಸಿರುವುದರಿಂದ ಕ್ರಿ.ಶ. 1521 ಫೆಬ್ರವರಿ, ಮಾರ್ಚ್ ವೇಳೆಗಾಗಲೇ ವಿವಾಹ ಮುಗಿದಿದ್ದರೂ ಮುಗಿದಿರಬಹುದು. ಹೀಗಾಗಿ ಈ ಅಭಿಪ್ರಾಯದ ಪ್ರಕಾರ ವಿವಾಹವು ಮಾರ್ಚ್ ೧೫೨೧ರ ವೇಳೆಗೆ ಖಚಿತವಾಗಿ ನಡೆಯಿತೆಂದು ಹೇಳಬಹುದು.

ಆದರೆ ಈ ವಿವಾಹದ ಬಗ್ಗೆ ಈ ರೀತಿಯ ವಿಶೇಷವಾದ ರಹಸ್ಯ ಏಕೆ ? ಯಾವ ಶಾಸನವೂ ವಿವಾಹವನ್ನು ದಾಖಲಿಸುವುದಿಲ್ಲ. ಸಮಕಾಲೀನ ಸಾಹಿತ್ಯದಲ್ಲಿ ವಿವಾಹವನ್ನು ಕೇವಲ ಚುಟುಕಾಗಿ ಒಂದು ವಾಕ್ಯದಲ್ಲಿ / ಪದ್ಯದಲ್ಲಿ / ಶ್ಲೋಕದಲ್ಲಿ ಮುಗಿಸಲಾಗಿದೆ. ಕುಮಾರ ಧೂರ್ಜಟಿ ಒಬ್ಬನೇ ತನ್ನ ಕೃಷ್ಣರಾಯ ವಿಜಯದಲ್ಲಿ ವಿವಾಹವನ್ನು ೧೫೦ ಪದ್ಯಗಳಲ್ಲಿ ವಿವರಿಸಿದ್ದಾನೆ. ಆದರೆ ಕುಮಾರ ಧೂರ್ಜಟಿ ಸಮಕಾಲೀನನಲ್ಲ. ಕೃಷ್ಣರಾಯ ನಿಗಿಂತ ೧೩೦ ವರ್ಷಗಳಷ್ಟು ಅರ್ವಾಚೀನ. ಈ ಎಲ್ಲ ಕೃತಿಕಾರರೂ ವಧುವಿನ ಹೆಸರಿನ ಬಗ್ಗೆ ಒಮ್ಮತವಿಲ್ಲದೆ ತಮಗೆ ತಿಳಿದಂತೆ ಬರೆದಿದ್ದಾರೆ. ವಿವಾಹ ಎಲ್ಲಿ ನಡೆಯಿತೆಂಬುದೇ ಖಚಿತವಿಲ್ಲ. ಕಾಲವೂ ಅಷ್ಟೇ. ದಕ್ಷಿಣ ಭಾರತದ ಅತಿ ಪ್ರಖ್ಯಾತ ಚಕ್ರವರ್ತಿ ಇನ್ನೊಬ್ಬ ಚಕ್ರವರ್ತಿಯ ಮಗಳನ್ನು ವಿವಾಹವಾದರೆ ಅದನ್ನು ದಾಖಲಿಸುವ ಪರಿ ಇದಲ್ಲ. ಸಮಕಾಲೀನರೆಲ್ಲರೂ ಈ ಮದುವೆಯನ್ನು ಮರೆ ಮಾಚುವ, ಚುಟುಕದಲ್ಲಿ ಹೇಳಿ ಮುಗಿಸುವ, ಮುಚ್ಚಿ ಹಾಕುವ ಪ್ರಯತ್ನ ಮಾಡಿದಂತಿದೆ.

ಈ ಹಿನ್ನೆಲೆಯಲ್ಲಿ ಮಾಹಿತಿಗಳಿಗೆ ಹುಡುಕಾಡಿದಾಗ ಹಲವು ಕುತೂಹಲಕಾರಿ ಸಂಗತಿಗಳು ಕಂಡು ಬಂದವು.

1. ಸಿಂಹಾಚಲದ ಕ್ರಿ.ಶ. ೧೫೧೯ರ ಕೃಷ್ಣರಾಯನ ಶಾಸನ. [9]

"…. ಮಹಾರಾಜಾಧಿರಾಜ ರಾಜಪರಮೇಶ್ವರ ಮೂರುರಾಯರ ಗಂಡ ಅರಿರಾಯ ವಿಭಾಡ ಭಾಷೆಗೆ ತಪ್ಪದ ರಾಯರ ಗಂಡಯವನ ರಾಜ್ಯ ಸ್ಥಾಪನಾ ಚಾರ್ಯ ಕೃಷ್ಣದೇವ ಮಹರಾಯಲು ಪ್ರತಾಪರುದ್ರಗಜಪತಿ ಮಹಾರಾಯಲ ಚಾತನು ಪುಚುಕೊಂನ್ನ ಕಳಿಂಗದಂಡಪಾಟಲೋನಿ ಗ್ರಾಮಾಲು…"

ಇದರಲ್ಲಿ ಕೃಷ್ಣರಾಯನ ಪ್ರಶಸ್ತಿಗಳ ಸರಮಾಲೆಯೇ ಇದೆ. ಯಾವ ಪ್ರಶಸ್ತಿಯೂ ಇಲ್ಲದೆ ಗಜಪತಿಯನ್ನು ಕೇವಲ ಮಹಾರಾಯ ಎಂದು ಕರೆದಿದೆ. ಗಜಪತಿಯ ಕಳಿಂಗ ರಾಜ್ಯವನ್ನು 'ಕಳಿಂಗ ದಂಡಪಾಟ' ಎಂದು ಕರೆಯಲಾಗಿದೆ. ಅಧೀನ ಮಾಂಡಲಿಕನು ಆಳುತ್ತಿರುವ ರಾಜ್ಯಕ್ಕೆ ದಂಡಪಾಟವೆಂದು ಹೆಸರು. ಗಜಪತಿಯೂ ಸೋತ ಸೂಚನೆ ಸ್ಪಷ್ಟವಾಗಿ ಇದೆ. ಇದು ಮೊದಲನೆ ಘಟ್ಟ.

2. ಈಗ ಅಲಸಾನಿ ಪೆದ್ದನನ 'ಮನು ಚರಿತ್ರಮು'ಗ್ರಂಥಕ್ಕೆ ಬರೋಣ. ಪೆದ್ದನ ಕೃಷ್ಣರಾಯನ ಸಮಕಾಲೀನ, ಆಸ್ಥಾನ ಕವಿ. ಎಲ್ಲಕ್ಕಿಂತ ಹೆಚ್ಚಾಗಿ ಕಳಿಂಗ ದಂಡಯಾತ್ರೆ ಯಲ್ಲಿ ಭಾಗವಹಿಸಿದ್ದವನು. ಈತನ 'ಮನುಚರಿತ್ರ'ದ ೩ನೇ ಆಶ್ವಾಸನದ ೧೪೨ನೇ ಪದ್ಯವನ್ನು ನೋಡೋಣ.

"ಹಿಂದೂರಾಜ್ಯ ರಮಾದುರಂಧರ ಭುಜಾಹಿಗ್ರಾಮಣಿ ಕಂಚುಕಕ್ಕಂದ ಸ್ವಚ್ಛ ಯಶೋಗಳುಚ್ಛ! ಯವನ ಕ್ಷೋಣೆಧವ ಸ್ಥಾಪನಾ ಮಂದೀಭೂತ ಕಟಾಕ್ಷ!

ಯಸಕೃನ್ಮಾದ್ಯತ್ಕಳಿಂಗಾಂಗನಾ ಬಂದೀಗ್ರಾಹ ವಿಗಾಹಿತೋತ್ತರ ಕಕುಬ್ಬಾಟೀ ಸಮಾಟೀಕನಾ'. ಇಲ್ಲಿ ಮುಖ್ಯವಾದದ್ದು 'ಕಳಿಂಗಾಂಗನಾ ಬಂದೀಗ್ರಾಹ' ಎಂಬ ಪದಗುಚ್ಛ. ಈ ಪದ್ಯ ಕಳಿಂಗ ರಾಜಕುಮಾರಿಯನ್ನು ಕೃಷ್ಣರಾಯನು ಸೆರೆ ಹಿಡಿದಿದ್ದನ್ನು ದಾಖಲಿಸುತ್ತದೆ.

ಇದೇ ಮನುಚರಿತ್ರೆಯ ಷಷ್ಠ್ಯಂತರ ೪೬ನೇಯ ಪದ್ಯವನ್ನು ನೋಡೋಣ.

"ಧಿಗಧೀಶಾಸಹ್ಯ ಧಗ

ದ್ಧಗಿತೇದ್ಧರುಚಿ ಪ್ರತಾಪ ತಪನ ಸ್ಫುರಣ

ಸ್ಥಗಿತ ದ್ಯುಮಣಿಕಿ ನಿಮಿಷಾ

ರ್ಧ ಗೃಹೀತ ಕಳಿಂಗರಾಜ ತನಯಾಗ್ರಣಿಕಿನ್ "

'ನಿಮಿಷಾರ್ಧ ಗೃಹೀತ ಕಳಿಂಗರಾಜ ತನಯಾಗ್ರಣಿರ್ಕಿ'ಎಂದರೆ ಸುಲಭದಲ್ಲಿ ಸೆರೆಸಿಕ್ಕ ಕಳಿಂಗರಾಜ ಕುಮಾರಿ ಎಂದೇ ಅರ್ಥ.

3. ಈಗ ಸಮಕಾಲೀನ ಗ್ರಂಥ 'ಸಂಗೀತ ಸೂರ್ಯೋದಯಂ' ಅನ್ನು ನೋಡೋಣ. ಇದರ ಕರ್ತೃ ಬಂಡಾರು ಲಕ್ಷ್ಮೀನಾರಾಯಣ. ಕೃಷ್ಣರಾಯನಿಗೂ ಅವನ ಅಂತಃಪುರವಾಸಿಗಳಿಗೂ ಸಂಗೀತದ ಗುರು. ಈತನ ಗ್ರಂಥದ ಅವತಾರಿಕೆಯ 6ನೆಯ ಪದ್ಯ ಹೀಗಿದೆ :

"ಸೋಯಂ ಕೃಷ್ಣ ನರೇಶ್ವರೋ ಗಜಪತಿಂ ಜಿತ್ವಾ ತದೀಯ ಶ್ರೀಯಾ

ಸಾಕಂ ತಸ್ಯ ಸುತಾಮುದೂ ಹ್ಯ ಯವನಕ್ಷ್ಮಾಪಂ ಸಪಾದಂ'.

ಇಲ್ಲಿ 'ತಸ್ಯ ಸುತಾಮುದೂಹ್ಯ' ಎಂಬ ಪದಗಳನ್ನು ಗಮನಿಸಬೇಕು. ಲಗ್ನ, ಪಾಣಿಗ್ರಹಣ, ವಿವಾಹ ಇಂಥ ಹೆಚ್ಚು ಉಚಿತವಾದ ಪದಗಳಿಗೆ ಬದಲಾಗಿ ಲಕ್ಷ್ಮೀನಾರಾಯಣ 'ಉದೂಹ್ಯ' ಎಂಬ ಪದವನ್ನು ಬಳಸಿದ್ದಾನೆ. ಈ ಪದಕ್ಕೆ To push or press upwards, move or bear upwards, move or bear upwards, to throw or turn out, sweep out, push out ಎಂದೆಲ್ಲ, ಅರ್ಥಗಳಿವೆ [10] ಹೀಗಾಗಿ 'ಬಲವಂತದಿಂದ ಈಚೆಗೆ ಬರುವಂತೆ ಮಾಡಿ' ಎಂಬರ್ಥದ 'ಉದೂಹ್' ಎಂಬ ಈ ಪದವನ್ನು ಕವಿ ಉದ್ದೇಶಪೂರ್ವಕವಾಗಿಯೇ ಬಳಸಿದ್ದಾನೆ.

ಈಗ ಕೈಫಿಯತ್ತುಗಳು ಕೊಡುವ ಮಾಹಿತಿಯನ್ನು ನೋಡೋಣ.

1. ಕೊಂಡವೀಡು ಕೈಫಿಯತ್

'ಯೀ ಪ್ರಕಾರಂಗಾ ವೀರಭದ್ರ ಗಜಪತಿ ವಾರಿಃ ಅಭಯಂ ಯಿಚ್ಚಿ ಸಿಂಹಾಚಲ ಪರ್ಯಂತರಂ ದೇಶಮುಲು ಸಾಧಿಂಚಿ ಕಟಕಂ ವರೆಕುವೆಳ್ಳಿ ಗಜಪತಿ ಕುಮಾರ್ತೆನು ಬಲಾತ್ಕಾರಮು ಚೇತನು ವಿವಾಹವು ಚೇಸಿಕೊನಿ...'

'ಬಲಾತ್ಕಾರಮು' ಗೊಂದಲವಿಲ್ಲದ ಸ್ಪಷ್ಟ ನುಡಿಗಳು.

2. ವಿಜಯನಗರ ಸಾಮ್ರಾಜ್ಯಮು. ಈ ಇತಿಹಾಸಗ್ರಂಥ ಎರಡನೆ ವೆಂಕಟಪತಿಯ ಕಾಲದಲ್ಲಿ ಕ್ರಿ.ಶ. ೧೬೧೦ರಲ್ಲಿ ರಚಿಸಲ್ಪಟ್ಟಿತು. ಇದರ ಒಂದು ಉಲ್ಲೇಖ 'ಶ್ರೀಮುಖ ಸಂವತ್ಸರಂ ಚಿತ್ರಮಾಸ ಶ್ರೀರಾಮದಶಮಿ ಗಜಪತಿ ಮೀದಿಕಿ ದಂಡು ಯೆತ್ತಿ ಕರ್ಲಿಪೋಯಿ ಗಜಪತಿ ಕುಮಾರ್ತೆ ಲಕ್ಷ್ಮೀದೇವಮ್ಮ ವಾರಿನಿ ಹವಾಲಾ ಚೇಸಿಕೊನಿ...'[12] ಹವಾಲಾ ಅಂದರೆ ವಶಪಡಿಸಿಕೊಳ್ಳುವುದು. ಈ ಉಲ್ಲೇಖದ ಅಭಿಪ್ರಾಯವೂ ಸ್ಪಷ್ಟವಾಗಿಯೇ ಇದೆ. ಬಲಾತ್ಕಾರ.

ಆದರೆ ಹೀಗೇಕಾಯಿತು? ಕೃಷ್ಣರಾಯನು ಅತ್ಯಂತ ದಯಾಪರ, ಧರ್ಮನಿಷ್ಠ, ನ್ಯಾಯ ನಿಷ್ಠುರ ಎಂದೆಲ್ಲ ಹೆಸರುಗಳಿಸಿದ್ದಾನೆ. ಆತನಿಂದ ಈ ಬಲಾತ್ಕಾರ ವಿವಾಹ ನಡೆದಿರ ಬೇಕಾದರೆ ಅದಕ್ಕೊಂದು ಪ್ರಬಲ ಕಾರಣವಿರಬೇಕೆಂಬ ಹಿನ್ನೆಲೆಯೊಡನೆ ನೋಡಿದಾಗ ನಮಗೆ ಸಿಗುವುದು ಒರಿಸ್ಸಾದ ಪ್ರಸಿದ್ಧ 'ಕಂಚಿಕಾವೇರಿ' ಅಖ್ಯಾಯಿಕೆ. ಈ ಕಥೆ ಹೀಗಿದೆ.

ಪ್ರತಾಪರುದ್ರ ಗಜಪತಿಯ ತಂದೆ ಪುರುಷೋತ್ತಮ ಗಜಪತಿ ಒಮ್ಮೆ ದಕ್ಷಿಣ ದಿಗ್ವಿಜಯ ನಡೆಸುವಾಗ ತಮಿಳುನಾಡಿನ ಮೇಲೆ ದಾಳಿ ಮಾಡಿ ಕಂಚಿಯ ರಾಜಕುಮಾರಿಯ ರೂಪಾತಿಶಯದ ಪ್ರಶಂಸೆಯನ್ನು ಕೇಳಿ ಅವಳನ್ನು ಪಡೆಯಲು ನಿರ್ಧರಿಸಿದ. ಕಂಚಿಯನ್ನು ಮುತ್ತಿ ಆ ದೊರೆಯನ್ನು ಸೋಲಿಸಿ ತನ್ನ ಇಂಗಿತವನ್ನು ತಿಳಿಸಿದ. ತಂದೆ ಮಗಳಿಬ್ಬರೂ ನಿರಾಕರಿಸಿದಾಗ ಬಲವಂತವಾಗಿ ರಾಜಕುಮಾರಿಯನ್ನು ಕಟಕಕ್ಕೆ ಹೊತ್ತೊಯ್ದು ಅಲ್ಲಿ ಅವಳನ್ನು ಅವಮಾನ ಪಡಿಸಿ ಮದುವೆಯಾದ. ಈಗ ಈ ಆಖ್ಯಾಯಿಕೆಯಲ್ಲಿನ ಸತ್ಯವೆಷ್ಟು ಮಿಥ್ಯವೆಷ್ಟು ಎಂಬುದನ್ನು ನೋಡಬಹುದು.

ಕ್ರಿ.ಶ. ೧೪೬೭-೭೦ರಲ್ಲಿ ಪ್ರತಾಪರುದ್ರನ ತಂದೆ ಪುರುಷೋತ್ತಮ ಗಜಪತಿಯು ದಕ್ಷಿಣ ಭಾರತದ ಮೇಲೆ ದಾಳಿ ಮಾಡಿ ರಾಮೇಶ್ವರದವರೆಗೂ ಸಾಗಿದ್ದಕ್ಕೆ ಅನೇಕ ಆಧಾರಗಳಿವೆ. ತಮಿಳುನಾಡಿನ ಮೇಲ್ಕರೈ ನಾಡು, ಆರ್ಕಾಟ್, ತಿರುವಣ್ಣಾಮಲೈಗಳಲ್ಲಿ ಕ್ರಿ.ಶ. ೧೪೬೮ರ ಸುಮಾರಿನಲ್ಲಿ ಈ ಭಾಗದಲ್ಲಿ ಒರಿಸ್ಸಾದ ಸೈನ್ಯವು ನಡೆಸಿದ 'ಆಕ್ರಮಣ ಗಳನ್ನು ಈ ಭಾಗದ ಶಾಸನಗಳು 'ಒಡ್ಡಿಯಾದಿ ಗಲಭೆಗಳು' ಎಂದು ಉಲ್ಲೇಖಿಸುತ್ತದೆ.[13] ರಾಮೇಶ್ವರದವರೆಗೂ ದಾಳಿ ನಡೆದಿದ್ದುದಕ್ಕೆ ಆಧಾರಗಳಿವೆ. ಆದರೆ ಈ ಕಾಲದಲ್ಲಿ ಕಂಚಿಯು ವಿಜಯನಗರದ ಸಾಮಂತರಾಜ್ಯವಾದ್ದರಿಂದ ಅಲ್ಲಿ ಯಾವ ಪಲ್ಲವ ರಾಜಕುಮಾರನೂ ರಾಜ್ಯವಾಳುತ್ತಿರಲಿಲ್ಲ. ಬದಲಿಗೆ ತಮಿಳುನಾಡನ್ನು ಚಂದ್ರಗಿರಿಯಿಂದ ಸಮರ್ಥವಾಗಿ ಆಳುತ್ತಿದ್ದವನು ಮುಂದೆ ಚಕ್ರವರ್ತಿಯಾದ ಸಾಳ್ವ ನರಸಿಂಹ. ಆಗ ಈತ ಸಾಮ್ರಾಜ್ಯದಲ್ಲೇ ಬಲಿಷ್ಠನಾದ್ದರಿಂದ ಪುರುಷೋತ್ತಮ ಗಜಪತಿಯು ಚಂದ್ರಗಿರಿಯನ್ನು ಆಕ್ರಮಿಸಿರಬೇಕು.[14] ದುರದೃಷ್ಟವಶಾತ್ ಸಾಳ್ವ ನರಸಿಂಹನು ಸೋತು

ಉದಯಗಿರಿ ಮೊದಲಾದ ಕೋಟೆಗಳನ್ನೂ ತನ್ನ ಮಗಳನ್ನೂ ಕೊಡಬೇಕಾಗಿ ಬಂದಿರಬೇಕು. ಪುರಿಯ ದೇವಸ್ಥಾನದ ದಾಖಲೆಯಾದ ಮಾದಾಲಪಾಂಜಿ ಸ್ಪಷ್ಟವಾಗಿ ಪುರುಷೋತ್ತಮ ಗಜಪತಿಯು ವಿಜಯನಗರದ ರಾಜಕುಮಾರಿಯನ್ನು ಮದುವೆಯಾದ ನೆನ್ನುತ್ತದೆ. ಸ್ವಾಭಾವಿಕವಾಗಿ ಈ ವಿವಾಹದ ಬಗ್ಗೆ ವಿಜಯನಗರದಲ್ಲಿ ಯಾವ ದಾಖಲೆಯೂ ಇಲ್ಲ. ಆದರೂ ಇದು ಮೇಲೆ ಹೇಳಿದ ದಾಖಲೆಗಳೊಂದಿಗೆ ಅತ್ಯಂತ ಸಂಭಾವ್ಯವಾಗಿ ಕಾಣುತ್ತದೆ. ಸಾಳ್ವ ನರಸಿಂಹನು ತುಳುವ ಕೃಷ್ಣರಾಯನ ದಾಯಾದಿ ಯಾದ್ದರಿಂದ ಈ ಅವಮಾನವನ್ನು ಮನಸ್ಸಿನಲ್ಲಿಟ್ಟುಕೊಂಡು ಕೃಷ್ಣರಾಯನು ಕಳಿಂಗ ರಾಜಪುತ್ರಿಯನ್ನು ಬಲವಂತವಾಗಿ ವಿಜಯನಗರಕ್ಕೆ ತಂದು ವಿವಾಹವಾಗಿರಬೇಕು. ಆದ್ದರಿಂದ ವಿಜಯನಗರದಲ್ಲಾಗಲೀ ಒರಿಸ್ಸಾದಲ್ಲಾಗಲೀ ಈ ಬಗ್ಗೆ ವಿವರಗಳು ದೊರೆಯುವುದಿಲ್ಲ. ಈ ಕ್ರಿಯೆಯಿಂದ ರಾಯನ ದ್ವೇಷವು ತೀರಿತಾದರೂ ಗಜಪತಿ ಯೊಂದಿಗೆ ಜೀವಮಾನವೆಲ್ಲಾ ದ್ವೇಷ, ಯುದ್ಧಗಳಲ್ಲೇ ಕಳೆಯಬೇಕಾಯಿತು. ಜಗನ್ಮೋಹಿನಿಯು ಸಮರಸವಿಲ್ಲದ ಜೀವನ ನಡೆಸಲು ಹೇಸಿ ಕಡಪಾ ಜಿಲ್ಲೆಯ ಕಂಬಂನಲ್ಲಿ ವಾಸ್ತವ್ಯ ಹೂಡಿ ಜೀವನದ ಬಹುಭಾಗವನ್ನು ಅಲ್ಲೇ ಕಳೆದಳು.

ಆಕರಗಳು

1. History or Orissa. ಸಂಪುಟ 1, ಪುಟ 327. ಡಾ|| ಹರೇಕೃಷ್ಣಮೆಹತಾಬ್.
2. ಶ್ರೀಕೃಷ್ಣದೇವರಾಯ ದಿನಚರಿ. ಪುಯ 51. ಸಂ. ಡಾ. ವಿ.ಎಸ್.ಎನ್. ಆಚಾರ್ಯ ಬಿ.ಎಂ.ಶ್ರೀ ಪ್ರತಿಷ್ಠಾನ. ಗವಿಪುರಂ, ಬೆಂಗಳೂರು 19. 1983.
3. 'ಮಾರೀಚೀ ಪರಿಣಯಮು' - ಮೋಹನಾಂಗೀ ಸಂ. ಸಿ.ವಿ. ರಾಮಚಂದ್ರ ರಾವು. ಪುಟ. 106. ಪದ್ಯ 81, ಅವತಾರಿಕ. ಪ್ರಕಾಶಕರು 'ಮಾನಸ' ಗ್ರಂಥ ಮೂಲ. ನೆಲ್ಲೂರು. 1973.
4. Source of Vijayanagar History ಪುಟ ೧೪೫
5. ಕೃಷ್ಣರಾಜವಿಜಯಮು. ನಾಲ್ಕನೇ ಆಶ್ವಾಸ, 24ನೇ ಪದ್ಯ. ಸಂ. ಸಿ.ವಿ. ರಾಮಚಂದ್ರ ರಾವು ಆಂಧ್ರಪ್ರದೇಶ ಸಾಹಿತ್ಯ ಆಕಾಡೆಮಿ, ಹೈದರಾಬಾದು - 4. 1981 ಪುಟಗಳು - 81.
6. S.I.I. VI, No. 695
7. 'Vijayanagara' ಡಾ. ವಸುಂಧರಾ ಫಿಲಿಯೋಜಾ, ನ್ಯಾಶನಲ್ ಬುಕ್ ಟ್ರಸ್ಟ್ ನವದೆಹಲಿ - 16, ಪುಟ 154
8. - ಅದೇ - ಪುಟ 89
9. 6ನೇ ಸಂಖ್ಯೆಯದೇ -
10. A Sanskrit English Dictonary. Sir M.M. Williams. Motilal Baharsidas, Delhi. 1990. ಪುಟ. 186. 'ಉದೂಹ್' ಪದ. ಉದೂಹ್ಯ ಪದವು

'ವಹ್' ಧಾತುವಿನಿಂದ ಬಂದಿದೆ. ಲ್ಯಬಂತದಲ್ಲಿ ಇದು ಉದೂಹ್ಯ ಎಂದಾಗುತ್ತದೆ. ವಿವಾಹ ಎಂಬ ಅರ್ಥವೂ ಇದ್ದರೂ ಪದದ ನೇರ ಅರ್ಥ - ವಹ್ = ಹೊರು! ಸಾವಿರಾರು ವರ್ಷಗಳ ಹಿಂದೆ ಇದ್ದ ಸಂಪ್ರದಾಯವನ್ನು ಈ ವಿವಾಹ ಎಂಬ ಪದದ ಈ ವ್ಯುತ್ಪತ್ತಿಯು ತೋರಿಸಿಕೊಡುತ್ತದೆ.

11. ಕೊಂಡವೀಡು ಕೈಫಿಯತ್. ಮಕೆಂಜಿ ಮ್ಯಾನುಸ್ಕ್ರಿಪ್ಟ್ಸ್. 15-4-40. 18ff.

12. ವಿಜಯನಗರ ಸಾಮ್ರಾಜ್ಯಮು. ಭಾರತೀ VI, ii. P. 622

13. A.R.I.E. B 287/1928 - 29 ಮತ್ತು C 310 / 1919

14. A.R.I.E. 51, 92 / 1919. Para 47. of 1919. ಮತ್ತು ಆಂಧ್ರ ಪತ್ರಿಕ 1928 (ಸಪ್ಲಿಮೆಂಟ್) ಅನಂತಾವರಂ ದಾಖಲೆ.

೫೨. ಕೃಷ್ಣದೇವರಾಯನ ಕಾಲದ ಬೇಹಿನವರು ಮತ್ತು ಕಾಹಿನವರು

ಪಿ. ಯಶೋದಾ ರಾಜಶೇಖರಪ್ಪ

ಯಾವುದೇ ದೇಶದ ಯಾವುದೇ ಕಾಲದ ರಾಜ್ಯಾಡಳಿತದಲ್ಲಿ ಬೇಹುಗಾರಿಕೆ ಅಥವಾ ಗೂಢಚಾರಿಕೆ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ. ಮುಂದಾಗಿ ತಿಳಿಯುವ ಅಂಶಗಳು ರಾಜ್ಯದ ರಾಜಕೀಯವನ್ನೇ ಏರುಪೇರು ಮಾಡುತ್ತವೆ. ಹಾಗೆಯೇ ರಾಜ್ಯದ ಆಡಳಿತವನ್ನು ಸುಮಗವೂ ಮಾಡುತ್ತವೆ. ಗೂಢಚಾರರು ತರುವ ಮಾಹಿತಿಗಳು ಆರ್ಥಿಕ, ಸಾಮಾಜಿಕ, ರಾಜಕೀಯ ಯೋಜನೆಗಳ ರೂಪುರೇಷೆಗಳನ್ನು ನಿರ್ಧರಿಸಲು ಸಹಾಯ ಮಾಡುತ್ತವೆ. ಅದರಲ್ಲೂ ಹಿಂದಿನ ಕಾಲದಲ್ಲಿ ದೇಶದ ರಕ್ಷಣೆಯಲ್ಲಿ, ವಿಸ್ತರಣೆಯಲ್ಲಿ ಬಹಳ ಸಹಾಯ ಮಾಡುತ್ತಿದ್ದವು. ರಾಮಾಯಣ ಕಾಲದಿಂದ ಆಧುನಿಕ ಕಾಲವಾದ ಇಲ್ಲಿಯವರೆಗೂ ಬೇಹುಗಾರಿಕೆಯು ರಾಜ್ಯ ವ್ಯವಸ್ಥೆಯಲ್ಲಿ ಅತ್ಯಂತ ಮಹತ್ತ್ವದ್ದಾಗಿದೆ. ಪ್ರತಿಯೊಂದು ರಾಷ್ಟ್ರವೂ ತನ್ನದೇ ಆದ ಬೇಹುಗಾರಿಕೆಯ ಜಾಲ (ಈಗಿನ ಉದಾಹರಣೆಗಳೆಂದರೆ ಅಮೆರಿಕದ ಸಿ.ಐ.ಎ., ರಷ್ಯದ ಕೆ.ಜಿ.ಬಿ., ಬೇಹುಜಾಲಗಳು) ಹೊಂದಿರುವುದನ್ನು ನೋಡಬಹುದು.

ವಿಜಯನಗರ ಸಾಮ್ರಾಜ್ಯದ ಪ್ರಸಿದ್ಧ ದೊರೆ ಕೃಷ್ಣದೇವರಾಯನು ರಾಜ್ಯವನ್ನು ವಿಸ್ತರಿಸಿದ್ದು, ವೈಭವದಿಂದ ರಾಜ್ಯವಾಳಿದ್ದುದಕ್ಕೆ ಕಾರಣ ಬೇಹುಗಾರಿಕೆಯ ಮಾಹಿತಿಯಿಂದಲೇ ಎಂದರೆ ತಪ್ಪಾಗಲಾರದು. ಕೃಷ್ಣದೇವರಾಯನ ಕಾಲದಲ್ಲಿದ್ದ ಕಾಹಿನವರ ಮತ್ತು ಬೇಹಿನವರ ಎರಡೂ ವಿಭಾಗಗಳು ನೀಡಿದ ಮಾಹಿತಿಗಳು ಆಂತರಿಕ ವೈರಿಗಳನ್ನು ನಿಗ್ರಹಿಸಲು, ಹೊರಗಿನ ಶತ್ರುಗಳನ್ನು ಗೆಲ್ಲಲು, ಸಾಮ್ರಾಜ್ಯದ ಶಾಂತಿಯನ್ನು ಕಾಪಾಡುವುದರಲ್ಲಿ ಪ್ರಮುಖ ಪಾತ್ರವಹಿಸಿವೆ. ಆ ವಿಭಾಗಗಳ ಕ್ರಿಯಾಶೀಲ ಸಹಕಾರ, ಅನುಪಮವಾದ ನಿಷ್ಠೆ ಕೃಷ್ಣದೇವರಾಯನ ಆಡಳಿತದ ಬೆನ್ನೆಲುಬಾಗಿದ್ದು ಅವನ ಆಡಳಿತದಲ್ಲಿ ಅವನು ಬಿಗಿ ಹಿಡಿತಹೊಂದಲು ಕಾರಣವಾಯಿತು. ಅವನ ದಂಡಯಾತ್ರೆಗಳ ದಿಗ್ವಿಜಯಗಳಿಗೆ ಸುಸಂಬದ್ಧ ಆಡಳಿತಕ್ಕೆ ನೆರವಾಗಿದ್ದ ಮುಖ್ಯ ಸತ್ತ್ವಾಂಶವೂ (Factor) ಈ ಬೇಹಿನವರು, ಕಾಹಿನವರು ನಿರ್ವಹಿಸಿದ ಕರ್ತವ್ಯವೇ ಆಗಿದೆ.

ಕೌಟಿಲ್ಯನ ಅರ್ಥಶಾಸ್ತ್ರ, ಮನುಧರ್ಮಶಾಸ್ತ್ರ, ಶುಕ್ರನೀತಿ ಮುಂತಾದವು ಬೇಹುಗಾರಿಕೆಯ ವ್ಯವಸ್ಥೆ ಹೇಗಿರಬೇಕು ಎನ್ನುವುದನ್ನು ವಿವರವಾಗಿ ಹೇಳುತ್ತವೆ. ಕೌಟಿಲ್ಯನ

ಅರ್ಥಶಾಸ್ತ್ರ ಹೀಗೆ ಹೇಳುತ್ತದೆ. 'ರಾಜ್ಯ ವ್ಯವಸ್ಥೆಯಲ್ಲಿ ವೀಕ್ಷಣಾಧಿಕಾರಿಗಳ ಕಾರ್ಯಾಲಯವೊಂದು ಇರಬೇಕು. ಅವರು ಎಂಬತ್ತು ಜನ ಗಂಡಸರು, ಐವತ್ತು ಜನ ಹೆಂಗಸರು ತಾಯ್ತಂದೆಗಳ, ವಯಸ್ಕರ, ಷಂಡರ, ಸಂನ್ಯಾಸಿಗಳ, ಭಿಕ್ಷುಕರ ವೇಷದಲ್ಲಿ ಗುಪ್ತವಾಗಿ ಸಂಚರಿಸುತ್ತ ಶುಚಿರುಚಿಗಳನ್ನು ತಿಳಿದು ಪ್ರಜೆಗಳು ಮತ್ತು ಅಂತಃಪುರವಾಸಿಗಳು ಜೀವನದಲ್ಲಿ ರಾಜನಿಗೆ ಅನುಕೂಲವಾಗುವಂತೆ ಹದಗೊಳಿಸಬೇಕು'. ಎನ್ನುತ್ತದೆ.

ಗೂಢಚಾರರು ಆಚಾರ್ಯ, ಸಂನ್ಯಾಸಿ, ವಿಜ್ಞಾನಿ, ಜ್ಯೋತಿಷಿ, ಕರಕುಶಲಕಲೆಗಳ ಕಲಾವಿದರು, ಕೆಳವರ್ಗದ ಕೆಲಸಗಾರರು ಮುಂತಾದವರಲ್ಲಿ ಆಟ ಪಾಠ ವಿನೋದಗಳಲ್ಲಿ ತೊಡಗಿಕೊಂಡು ವಿಷಯಗಳನ್ನು ಸಂಗ್ರಹಿಸಬೇಕು. ಶ್ರೀಮಂತರ ವೇಷದಲ್ಲಿ, ರೋಗಿಗಳ ವೇಷದಲ್ಲಿ, ಭಿಕ್ಷುಕರ ವೇಷದಲ್ಲಿ, ಹುಚ್ಚರ ವೇಷದಲ್ಲಿ, ಛತ್ರ, ನಾಟ್ಯ ಶಾಲೆಗಳು, ಮಧುಶಾಲೆಗಳು, ದೇವಾಲಯಗಳು, ಸಂತೆಗಳು, ಜೂಜು ಸ್ಥಳಗಳು ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ಬುದ್ಧಿವಂತಿಕೆಯಿಂದ ಕನಿಷ್ಟ ವರ್ಗದ ನೌಕರರನ್ನು ಹೊಗಳಿ, ಹಣ ನೀಡಿ ಮಾಹಿತಿ ಸಂಗ್ರಹಿಸುತ್ತಿದ್ದರು.

ಈ ಬೇಹಿನವರು ಶತ್ರುವಿನ ದುರ್ಗದೊಳಗೆ ವರ್ತಕರಂತೆ, ಕೃಷಿಕರಂತೆ ಪ್ರವಾಸಿಗಳಂತೆ, ಗಡಿ ಪ್ರದೇಶಗಳನ್ನು ಗೊಲ್ಲರಂತೆ, ಪಶುಪಾಲಕರಂತೆ, ಸಂನ್ಯಾಸಿಗಳಂತೆ ಇದ್ದು ಸಂದೇಶಗಳನ್ನು ರವಾನೆ ಮಾಡಬೇಕಿತ್ತು. ಈ ಬೇಹಿನವರು ಹೇಗಿರಬೇಕೆಂದರೆ ಬುದ್ಧಿ ವಿಚಕ್ಷಣರು ಬಹು ಭಾಷಾಂತರಿಗಳು, ಔಚಿತ್ಯ ಜ್ಞಾನಿಗಳು, ಸೂಕ್ಷ್ಮ ಗ್ರಾಹಿಗಳು, ಬಹುರೂಪಿಗಳು, ಬಹುಪರಿಚಿತರು, ಮಾತುಗಾರರೂ ಆಗಿರಬೇಕಾಗಿತ್ತು.

ಕೃಷ್ಣದೇವರಾಯನು ಮನುಧರ್ಮಶಾಸ್ತ್ರ, ಕೌಟಿಲ್ಯನ ಅರ್ಥ ಶಾಸ್ತ್ರ, ಶುಕ್ರನೀತಿ, ಮೊದಲಾದ ಧರ್ಮಶಾಸ್ತ್ರ ಗ್ರಂಥಗಳನ್ನು ಚೆನ್ನಾಗಿ ಓದಿಕೊಂಡಿದ್ದನು. ತಾನು ತಿಳಿದುಕೊಂಡ ರಾಜನೀತಿಯನ್ನು ಹಿರಿಯರಿಂದ ಪಡೆದು ತಿಳಿವಳಿಕೆಯನ್ನು ತನ್ನ ಆಡಳಿತ ಕಾಲದಲ್ಲಿ ದಂಡಯಾತ್ರೆಗಳ ಸಂದರ್ಭದಲ್ಲಿ ಅನುಸರಿಸುತ್ತಿದ್ದನು. ಶತ್ರುಗಳ ಚಲನವಲನಗಳನ್ನು, ಸಂಚುಹೊಂಚುಗಳನ್ನು ದಳಗಳ ಬಲಾಬಲವನ್ನು ಅವರ ಉಪಾಯಗಳನ್ನು ಬೇಹುಗಾರರ ಮೂಲಕ ಮೊದಲೇ ತಿಳಿದು ತನ್ನ ಆಪ್ತರಾದ ಮಂತ್ರಿ, ನಿಷ್ಠರಾದ ಅಧಿಕಾರಿಗಳೊಂದಿಗೆ ಸಮಾಲೋಚನೆ ಮಾಡಿ, ಸಮಯಕ್ಕೆ ತಕ್ಕಂತೆ ತಂತ್ರ ಪ್ರತಿತಂತ್ರಗಳನ್ನು ರೂಪಿಸಿ, ಚತುರುಪಾಯಗಳನ್ನು ಪ್ರಯೋಗಿಸಿ, ಶತ್ರುಗಳ ಬಲ ಹೆಚ್ಚಿದ್ದರೂ ಅವರನ್ನು ಸ್ವಾಧೀನಕ್ಕೆ ಬರುವಂತೆ ಮಾಡುತ್ತಿದ್ದನು.

ಪ್ರಸ್ತುತ ಲೇಖನಕ್ಕೆ ಮುಖ್ಯವಾಗಿ 'ಶ್ರೀ ಕೃಷ್ಣದೇವರಾಯನ ದಿನಚರಿ'ಯನ್ನು ಆಧರಿಸಿದ್ದೇನೆ. ಇದು 'ಕೃಷ್ಣರಾಯರ ದಿನಚರಿಯ ಕೃತ್ಯಗಳ ವಿಸ್ತಾರ' ಎನ್ನುವ ಕೃತಿಯೇ ಆಗಿದ್ದು ವಿದ್ವಾಂಸರು ಇದು 16ನೇ ಶತಮಾನದ್ದಿರಬಹುದು ಎಂದು ಊಹಿಸಿದ್ದಾರೆ. ಇದರಲ್ಲಿ ದೊರೆಯ ಅಪ್ಪಣೆಯಂತೆ ಇದನ್ನು ಮುಕ್ಕು ತಿಮ್ಮಯ್ಯ ಮತ್ತು ಮಾದಯ್ಯ

ನವರ ಮಲ್ಲಯ್ಯ ಎಂಬುವವರು ಬರೆದಂತೆ, ಸೂಚನೆಯಿದೆ. ಇದರಲ್ಲಿ ಬಹುಮುಖ್ಯ ವಾಗಿ ಅವನ ಆಳ್ವಿಕೆಯ ಮೊದಲ ಹತ್ತು ವರ್ಷಗಳ ಮುಖ್ಯ ಘಟನೆಗಳು, ಕೃಷ್ಣದೇವರಾಯನ ವ್ಯಕ್ತಿತ್ವ ಅವನ ದಿನಚರಿಯಲ್ಲಿ ವಿವರವಾಗಿ ನಿರೂಪಿತವಾಗಿವೆ. ಇದರಲ್ಲಿ ಬರುವ ಬೇಹುಗಾರಿಕೆಯ ವಿವರ ವಿಸ್ಮಯ ಮೂಡಿಸುವಷ್ಟು ಮಹತ್ತ್ವದ್ದಾಗಿ ಕಾಣುತ್ತದೆ. ಚರಿತ್ರೆ ಗ್ರಂಥಗಳಲ್ಲಿಯೂ ಕಾಣಸಿಗದ ಕೆಲವು ಮುಖ್ಯ ವಿಚಾರಗಳನ್ನು ಪ್ರಸ್ತಾಪಿಸುತ್ತದೆ. ಸ್ವತಃ ಕೃಷ್ಣ ದೇವರಾಯನೇ ರಾತ್ರಿಯ ವೇಳೆ ವೇಷ ಮರೆಸಿಕೊಂಡು ನಗರ ಶೋಧನೆಗೆ ಹೊರಡುತ್ತಿದ್ದನು. ಅವನೂ ಒಬ್ಬ ಬೇಹುಗಾರನಾಗಿ ತನ್ನ ಬೇಹು ಗಾರರು ತಂದ ಸುದ್ದಿ ನಿಜವೋ ಸುಳ್ಳೋ ಎಂದು ಪರಿಶೀಲಿಸುತ್ತಿದ್ದನು - ಎಂಬ ಅಂಶಗಳನ್ನು ಕೂಡಾ ಇದು ತಿಳಿಸುತ್ತದೆ.

ಕೃಷ್ಣದೇವರಾಯನ ಕಾಹಿನವರು ಮತ್ತು ಬೇಹಿನವರು ಅತ್ಯಂತ ನಿಷ್ಠಾವಂತ ರಾಗಿದ್ದರು. ಶತ್ರುಗಳ ಪಾಳೆಯನ್ನು ಪ್ರವೇಶ ಮಾಡುವುದೆಂದರೆ ಪ್ರಾಣವನ್ನು ಪಣಕ್ಕಿಟ್ಟಂತೆಯೇ ಹೌದು. ಆದರೂ ಧೈರ್ಯದಿಂದ ಬುದ್ಧಿವಂತಿಕೆಯಿಂದ ಆ ಕೆಲಸ ನಿರ್ವಹಿಸುತ್ತಿದ್ದರು. ನಾನಾ ಉಪಾಯಗಳಿಂದ ತಾವು ಸಂಗ್ರಹಿಸಿದ ಮಾಹಿತಿಗಳನ್ನು ಕಳುಹಿಸುತ್ತಿದ್ದರು. ರಾಜನೂಕೂಡಾ ಅವರ ಕೆಲಸಗಳಿಗೆ ಆಗಾಗ್ಗೆ ಉಡುಗೊರೆ, ಕಾಣಿಕೆ, ಸನ್ಮಾನಗಳಿಂದ ಪ್ರೋತ್ಸಾಹಿಸುತ್ತಾ, ಯಥೇಚ್ಛವಾಗಿ ಸಂಬಳವನ್ನೂ ನೀಡುತ್ತಾ, ಶತ್ರುಪಾಳಯದಲ್ಲಿ ಪ್ರಾಣಾಪಾಯ ಸಂಭವಿಸಿದರೆ ಅವರ ಕುಟುಂಬದ ಜೀವನಕ್ಕೆ ಯಾವ ತೊಂದರೆಯೂ ಆಗದಂತೆ ನೋಡಿಕೊಳ್ಳುತ್ತಾ ಇದ್ದನು.

ಕೃಷ್ಣದೇವರಾಯನ ಕಾಹಿನ (ಕಾವಲು) ವ್ಯವಸ್ಥೆ ಬಹಳ ಭದ್ರವಾಗಿತ್ತು. ವಿದೇಶೀ ಪ್ರವಾಸಿ ಅಬ್ದುಲ್ ರಜಾಕ್ ವಿಜಯನಗರ ಸಾಮ್ರಾಜ್ಯಕ್ಕೆ ಭೇಟಿ ಕೊಟ್ಟ ಸಂದರ್ಭದಲ್ಲಿ ಕಾಪಿನ ವ್ಯವಸ್ಥೆ ಹೇಗಿತ್ತು ಎನ್ನುವುದನ್ನು ಹೀಗೆ ಹೇಳುತ್ತಾನೆ. 'ರಾಜನನ್ನು ಕಾಣಬೇಕಾದರೆ 7 ಬಾಗಿಲುಗಳನ್ನೂ ಕಾಪಿನವರನ್ನೂ ಎದುರಿಗೆ ದಾಟಿ ಕಡೆಯಲ್ಲಿ ರಾಜನನ್ನು ಕಾಣಬೇಕಿತ್ತು. ಅರಮನೆಯ ಎದುರಿಗೆ ಟಂಕಸಾಲೆ, ಅದರ ಎದುರಿನಲ್ಲಿ ರಾಜ್ಯಪಾಲರ ಮನೆ ಇತ್ತು. 12,000 ಜನ ಸೈನಿಕರು ಪಹರೆಯಲ್ಲಿ ಸಜ್ಜಾಗಿರುತ್ತಿದ್ದರು. ಕೋಟೆಯ ಒಳಗೆ ನಡೆಯುವ ಪ್ರತಿಯೊಂದು ಘಟನೆಯ ಬಗ್ಗೆಯೂ ತಿಳಿದುಕೊಳ್ಳುವುದು ತನ್ನ ಪಾಲಿನ ಕರ್ತವ್ಯವೆಂದು ಪಹರೆಯವರೂ ಸೈನಿಕರು ತಿಳಿದಿರುತ್ತಿದ್ದರು. ಒಂದು ವೇಳೆ ಯಾವುದೇ ವಸ್ತುವು ಕಳುವಾದರೆ ಅದರ ಬಗ್ಗೆ ಕೂಡಲೇ ವರದಿ ಸಲ್ಲಿಸಬೇಕಿತ್ತು. ಅದಕ್ಕೆ ಸಂಬಂಧ ಪಟ್ಟ ಕರ್ತವ್ಯದ ಕಾಪಿನವರು ಕೂಡಲೇ ಹುಡುಕಿಕೊಡಬೇಕಿತ್ತು. ಹುಡುಕಲಾಗದಿದ್ದರೆ, ಕಳ್ಳರನ್ನು ಪತ್ತೆ ಹಚ್ಚದಿದ್ದರೆ ಅದಕ್ಕೆ ತಗಲುವ ವೆಚ್ಚವನ್ನು ಅವರೇ ಭರಿಸಬೇಕಿತ್ತು. ಯಾವುದೇ ಕಳುವಾದ ವಸ್ತುವು ಗಮನಕ್ಕೆ ಬರದೇ ಇರುತ್ತಿರಲಿಲ್ಲ'. ಇದು ಆಗಿನ ಕಾಲದ ಭದ್ರತಾ ವ್ಯವಸ್ಥೆಯ ಬಿಗಿ ಹೇಗಿತ್ತು ಎಂಬುದನ್ನು ತಿಳಿಸುತ್ತದೆ.

ಕೃಷ್ಣದೇವರಾಯನು ಪ್ರಭುಶಕ್ತಿ, ಮಂತ್ರಶಕ್ತಿ, ಉತ್ಸಾಹಶಕ್ತಿಗಳನ್ನು ಚೆನ್ನಾಗಿ ಅರಿತವನಾಗಿದ್ದನು. ಮಂತ್ರಿಗಳು ಮತ್ತು ಆಪ್ತನಿಷ್ಠಾವಂತ ಅಧಿಕಾರಿಗಳು ಹಾಗೂ ಗೂಢಚಾರಿಗಳೊಡನೆ ಸಂಭಾಷಿಸದೆ ಮಂತ್ರಲೋಚನೆ ಮಾಡದೆ, ಸಲಹೆಗಳನ್ನು ತೆಗೆದುಕೊಳ್ಳದೆ ಯಾವ ದಂಡಯತ್ರೆಯನ್ನೂ ಮಾಡುತ್ತಿರಲಿಲ್ಲ. ಯಾವ ಹೊಸ ಆಜ್ಞೆಗಳನ್ನೂ ಮಾಡುತ್ತಿರಲಿಲ್ಲ. ಜನಾಭಿಪ್ರಾಯವನ್ನು ಸಂಗ್ರಹಿಸಿ ಜನರ ಅನುಕೂಲ ಅನಾನುಕೂಲಗಳನ್ನು ತಿಳಿದು ಕಾನೂನು, ನಿಯಮಗಳನ್ನು ಮಾಡುತ್ತಿದ್ದನು. ಆದ್ದರಿಂದ ತನ್ನ ಆಳ್ವಿಕೆಯ 20 ವರ್ಷಗಳ ಅವಧಿಯಲ್ಲಿ ಗೋದಾವರಿಯಿಂದ ಕನ್ಯಾಕುಮಾರಿ ಯವರೆಗೆ ಸಮಸ್ತ ಪಾಳಯ ಪಟ್ಟುಗಳನ್ನು ಸಾಮಂತರನ್ನು, ಅಧಿಕಾರಿಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು, ಸಾಧ್ಯವಾಯಿತು.

ವಿಜಯನಗರವನ್ನು ಪಾಳೆಯಗಳಾಗಿ ವಿಭಾಗಿಸಲಾಗಿತ್ತು. ಪ್ರತಿವಿಭಾಗದಲ್ಲೂ ಅನೇಕ ಕೇರಿಗಳು ಬೀದಿಗಳು ಇದ್ದವು. ಪ್ರತಿಯೊಂದು ವಿಭಾಗಕ್ಕೂ ಒಬ್ಬ ಮುಖ್ಯ ರಕ್ಷಣಾಧಿಕಾರಿಯು ಇರುತ್ತಿದ್ದ. ಆತನನ್ನು ತಳಾರನೆಂದು ಕರೆಯುತ್ತಿದ್ದರು. ಆತನು ಅನೇಕ ಸಹಾಯಕರೊಡನೆ ಬೀದಿಗಳಲ್ಲಿ ಹಗಲೂ ರಾತ್ರಿ ಗಸ್ತು ತಿರುಗುತ್ತಾ, ಬರುವ ಹೋಗುವ ಜನರನ್ನೂ ಅಪರಿಚಿತರನ್ನೂ ಗಮನಿಸುತ್ತ, ಕಳ್ಳಕಾಕರನ್ನು ಹಿಡಿಯುತ್ತ, ಹೀಗೆ - ನಗರ, ಪಟ್ಟಣ, ಗ್ರಾಮಗಳನ್ನು ರಕ್ಷಿಸಬೇಕಿತ್ತು. ಗ್ರಾಮಾಂತರ ಪ್ರದೇಶಗಳಲ್ಲಿ ಗೌಡನ ಅಧೀನದಲ್ಲಿ ಗೌಡಿನ ರಕ್ಷಕನಾಗಿ ಕೆಲಸ ಮಾಡಬೇಕಿತ್ತು. ಇವರನ್ನು ಕಾಪಿನವರು ಎಂದೂ ಕರೆಯುತ್ತಿದ್ದರು. ತಳವಾರಿಕೆ ವಂಶ ಪಾರಂಪರ್ಯವಾಗಿತ್ತು. ಗ್ರಾಮಗಳಲ್ಲಿ ಭೂಮಿ, ಕಾಣಿಕೆಗಳನ್ನು ದಾನ ಮಾಡಿದಾಗ ಇವರಿಗೂ ಒಂದು ಭಾಗ ಸಲ್ಲುವಂತೆ ವ್ಯವಸ್ಥೆ ಮಾಡಲಾಗಿತ್ತು. ಕ್ರಿ.ಶ. 1528ರ ಒಂದು ಶಾಸನದಲ್ಲಿ ಚೆನಮನಾಯಕರು ಕಂಡಕುಂಟದ ಕೆಳಗಿನ ಭೂಮಿಯನ್ನು, 3 ಭಾಗವಾಗಿ ಮಾಡಿ 2 ಭಾಗವನ್ನು ಬ್ರಾಹ್ಮಣರಿಗೆ ಒಂದು ಭಾಗವನ್ನು ಕಾಪಿನವರಿಗೂ ಕೊಡಬೇಕೆಂದು ತೀರ್ಮಾನಿಸಿದರು ಎಂದು ಹೇಳುತ್ತದೆ.

ಸರ್ಕಾರದ ಆಡಳಿತ ವಿಧಾನದಲ್ಲಿ ಬೇರೆ ಬೇರೆ ವಿಭಾಗಗಳಿಗೆ ಸಂಬಂಧಿಸಿದಂತೆ ಚಾವಡಿಗಳಿದ್ದವು. ಅದರಲ್ಲಿ ಬೇಹಿನ ಚಾವಡಿಯೂ ಒಂದು. ಇದು ಗುಪ್ತಚಾರ ಇಲಾಖೆಯಂತೆ ಕೆಲಸ ಮಾಡುತ್ತಿತ್ತು. ಬೇರೆ ಬೇರೆ ರಾಜ್ಯಗಳಲ್ಲಿ ಬೇಹುಗಾರಿಕೆಯ ನಿಯೋಗಿಗಳೂ ಸ್ಥಾನಪತಿಗಳೂ ಆಗಿದ್ದು ಆ ರಾಜನ ಆಸ್ಥಾನದಲ್ಲಿದ್ದು ಅಲ್ಲಿ ನಡೆಯುವ ಕಾರ್ಯಗಳನ್ನು ತಮ್ಮ ರಾಜನಿಗೆ ವರದಿಮಾಡುತ್ತಿದ್ದರು.

ಕೃಷ್ಣದೇವರಾಯನು ಸಿಂಹಾಸನವನ್ನೇರುತ್ತಿದ್ದಂತೆ ಹಿರಿಯರ ಸಲಹೆ ಮೇರೆಗೆ ಮೊದಲು ಮಾಡಿದ ಕೆಲಸವೆಂದರೆ ತನ್ನ ಹಾಗೂ ಇತರೇ ದೇಶಗಳಲ್ಲಿ ಸಂಚಾರಮಾಡಿ ಅನುಭವ ಪಡೆದುಕೊಂಡದ್ದು. ಸಂಚಾರಕ್ಕೆ ಮುನ್ನ ತಾನು ಹೋಗಬೇಕಾಗಿದ್ದ

ಪ್ರದೇಶಗಳಿಗೆ ಗೋಲಕೊಂಡ, ಅಹಮದ್‌ನಗರ, ಬೇದಂಡಕೋಟೆ, ರಾಜಮಹೇಂದ್ರಿ, ಇಕ್ಕೇರಿ, ಚೆನ್ನಪಟ್ಟಣ, ಶ್ರೀರಂಗಪಟ್ಟಣ, ಉಮ್ಮತ್ತೂರು, ಶಿವನಸಮುದ್ರ, ಪೆನುಗೊಂಡೆ, ಮೊರಸುನಾಡು, ತಿಗುಳಾಣ್ಯ, ಚೋಳದೇಶ, ಮಲಯಾಳ, ಕೊಚ್ಚಿ, ಕೇರಳ, ತುಳುವ, ಹೈರಳ (?), ಚಂದ್ರಗಿರಿ, ತಿರುಪತಿ, ಗುತ್ತಿ, ನಂದ್ಯಾಲ, ರಾಯಚೂರು, ಮುದಗಲ್ಲು ಮುಂತಾದ ಸ್ಥಳಗಳಿಗೆ ಹೋಗಿ ಆ ದೇಶವಾರ್ತೆಗಳು, ಆ ದೇಶದ ದೊರೆಮನ್ನೆಯವರು ಹಾಗೂ ಅವರ ಸ್ವಭಾವಗಳು, ಆ ದೇಶಗಳ ವೈಶಿಷ್ಟ್ಯಗಳು, ಅವರ ದೌರ್ಬಲ್ಯಗಳು, ಜನರು ತಮ್ಮ ದೊರೆಗಳ ಬಗ್ಗೆ ಆಡಿಕೊಳ್ಳುವ ಮಾತುಗಳು, ಪಂಡಿತ ಪಾಮರರ ನಡವಳಿಕೆಗಳು, ಆ ದೇಶಗಳ ಮಾರ್ಗಗಳು, ಮಳೆ ಬೆಳೆ ಕೃಷಿ, ಆರ್ಥಿಕ ರೀತಿ, ಸಾಮಾಜಿಕ ನೀತಿ, ಧಾರ್ಮಿಕತೆ ಇವೆಲ್ಲವುಗಳನ್ನು ತಿಳಿದು ಬಂದು ಹೇಳಬೇಕು ಎಂದು, ಬುದ್ಧಿ ವಿಚಕ್ಷಣರು, ಬಹುರೂಪಿಗಳು, ಬಹುಭಾಷಾಂತರಿಗಳು, ಮಾತುಗಾರರೂ ಆದ ಗೂಢಚಾರರನ್ನು ಕಳುಹಿಸಿದನಂತೆ. ಅನಂತರ ಕೃಷ್ಣದೇವರಾಯ ಲೋಕಸಂಚಾರ ಮಾಡಿದನಂತೆ. ಈ ಲೋಕಾನುಭವ ಅವನ ಆಳ್ವಿಕೆಗೆ ಬಹಳಷ್ಟು ಸಹಾಯ ಮಾಡಿತು.

ಕೃಷ್ಣದೇವರಾಯನ ನಿತ್ಯದ ದಿನಚರಿ ವಿಶಿಷ್ಟವಾದವು. ಎಲ್ಲವೂ ಸಮಯಕ್ಕೆ ಸರಿಯಾಗಿ ನಡೆಯಬೇಕು. ಹೊತ್ತಿಗೆ ಮುಂಚೆ ಎದ್ದು ವೈದ್ಯರನ್ನೂ ಜ್ಯೋತಿಷಿಗಳನ್ನೂ ಕರೆಸಿಕೊಂಡು ಆರೋಗ್ಯದ ಸಮಾಲೋಚನೆ ಮಾಡಿ, ಸಚಿವರು ಸಾಮಂತರುಗಳೊಂದಿಗೆ ವಿಚಾರ ವಿನಿಮಯ ಮಾಡಿ, ಆದಾಯ ವೆಚ್ಚದ ಲೆಕ್ಕ ಪತ್ರಗಳನ್ನು ಪರಿಶೀಲಿಸಿ, ಅಂಗಮರ್ದನ ಮಾಡಿಸಿಕೊಂಡು ಗರಡಿಯಲ್ಲಿ ಸಾಮು ಮಾಡಿ, ಸ್ನಾನ ಪೂಜೆ ಮುಗಿಸಿ ಅಂದಿನ ಅಡುಗೆ ತಿಂಡಿ ತಿನಿಸುಗಳ ಬಗ್ಗೆ ತಿಳಿದು, ಊಟೋಪಚಾರದ ನಂತರ ಸಾಧು ಸಂತರು ಧರ್ಮಾಧಿಕಾರಿಗಳನ್ನು ಭೇಟಿ ಮಾಡಿ ಪುರಾಣಿಕರು, ಕವಿಗಳು, ಸಂಗೀತಗಾರರು ಇವರುಗಳೊಂದಿಗೆ ವಿನೋದ ಗೋಷ್ಠಿ ನಡೆಸಬೇಕು. ಸಂಜೆ ವೇಳೆ ಬೇಹುಗಾರರನ್ನು ವಾತಾಂತದಲ್ಲಿ ಭೇಟಿಯಾಗಿ ಅವರು ತಂದ ಸುದ್ದಿಗಳನ್ನು ಪರಾಂಬರಿಸಿ ಅದಕ್ಕೆ ಸಂಬಂಧಪಟ್ಟಂತ ಪ್ರಮುಖ ವಿಚಾರಗಳಿದ್ದರೆ ಮಂತ್ರಿಯೊಡನೆ ಸಮಾಲೋಚನೆ ನಡೆಸುತ್ತಿದ್ದನು.

ಕೃಷ್ಣದೇವರಾಯನ ವಿಚಕ್ಷಣತೆಗೆ ಒಂದು ಉದಾಹರಣೆಯನ್ನಿಲ್ಲಿ ನೋಡಬಹುದು. ತಳವಾರ ಜಂಗಮಯ್ಯ ಒಬ್ಬ ನಗರ ರಕ್ಷಣಾಧಿಕಾರಿ. ಅವರನ್ನು ಕರೆಸಿ 'ಆಲಾಗತಿ (ಬರುವವರು) ಅಭ್ಯಾಗತಿ (ಹೋಗುವವರು) ಯಾರು? ಯಾರು ಬಂದರು. ಯಾರು ತಿರುಗಿದರು? ಯಾರು ಹೊಸಬರು? ನಗರ ವೈಶಿಷ್ಟ್ಯಗಳೇನು? ಯಾವ ರಾವುತ ಮಾವುತರು ತಿರುಗಾಡುತ್ತಿದ್ದಾರೆ? ಯಾರಾದರೂ ದೌರ್ಬಲ್ಯ ಪ್ರಾಬಲ್ಯದಿಂದ ನಡೆದರಾದರೆ ಅವರಿಗೆ ತಕ್ಕ ಆಜ್ಞೆಯ ಮಾಡಿಸು' ಎಂದು ಹೇಳಿ ಅಷ್ಟಕ್ಕೆ ಸುಮ್ಮನಾಗದೆ ರಾತ್ರೋವೋಲಗ ತೀರಿದ ಮೇಲೆ ನಗರ ಶೋಧನೆಗೆ ಹೊರಟು ಸಕಲವನ್ನು ತಿಳಿದು

ಬೆಳಗ್ಗೆ ಬಂದ ನಂತರ ತಳವಾರ ಜಂಗಮಯ್ಯನನ್ನು ಕರೆಸಿ, ಆತನು ಸಕಲ ವಾರ್ತೆಗಳನ್ನು ಬಿನ್ನಹ ಮಾಡಲು, ತಾವು ನೋಡಿದುದಕ್ಕೂ ತಿಳಿದಿದ್ದಕ್ಕೂ ಸರಿ ಇದ್ದರೆ ಸುಮ್ಮನಿರುವರು. ಇಲ್ಲದೆ ಹೋದರೆ 'ಈ ಪಾಳ್ಯದಲ್ಲಿ, ಇಂಥ ಬೀದಿಯಲ್ಲಿ ಶ್ರೀ ಶ್ರೇಣಿಯ, ಇಷ್ಟನೆಯ ಮನೆಯಲ್ಲಿ ರಾತ್ರೆ ನ್ಯಾಯ ಅನ್ಯಾಯವಾಗಿದೆ. ಇದನ್ನು ನೀನು ತಿಳಿದಿಲ್ಲವಾದರೆ ನೀನು ತಳವಾರಿಕೆ ಮಾಡುವುದಕ್ಕೂ ನಾವು ರಾಜ್ಯ ಪಾಲನೆಯನ್ನು ಮಾಡುವುದಕ್ಕೂ ಚೆನ್ನಾಗಿದೆ'- ಎಂದು ಕೋಪಿಸಿಕೊಂಡರಂತೆ. ಆಗ ತಳವಾರ ಜಂಗಮಯ್ಯ ಈ ಸುದ್ದಿಯನ್ನು ರಾಯರಿಗೆ ಯಾರು ಮುಟ್ಟಿಸಿದರೆಂದು ವಿಚಾರಿಸಿದಾಗ ಯಾರೂ ಹೇಳದೆ ಸ್ವತಃ ರಾಯರೇ ತಿಳಿದು ಕೊಂಡದ್ದೆಂದು ಗೊತ್ತಾದಾಗ ಭಯಗೊಂಡು ಕಾವಲು ಕಟ್ಟಳೆ ಬಿಗಿ ಮಾಡಿ, ರಾಯರು ವೇಷ ಮರೆಸಿ ನಗರ ಸುತ್ತುತ್ತಾರೆ. ಬೀದಿಗಳಲ್ಲಿ ದುಡುಕಬಾರದು ಎಂದು ಎಚ್ಚರಿಕೆಯಿಂದ ಇರಲು ಹೇಳಿ, ಆಪ್ತರಲ್ಲೂ ಎಚ್ಚರಿಸಿ, ರಾಜರು ಅರಮನೆಯೊಳಗಿನಿಂದ ಹೊರಟಾಗ ಅವರನ್ನು ಕಾದಿದ್ದರೂ, ರಾಜರು ಅದು ಯಾವ ಮಾಯದಲ್ಲೋ ಯಾರಿಗೂ ಗೊತ್ತಾಗದಂತೆ ಹೋಗಿ ಬಿಡುತ್ತಿದ್ದರು. ಆಗಾಗ್ಗೆ ಜಂಗಮಯ್ಯನನ್ನು ಕರೆಸಿ 'ನಾನೂ ದಿನವೂ ನಗರ ಶೋಧನೆಗೆ ಬರುತ್ತಿದ್ದೇವೆ; ನೀನು ನಿನ್ನ ಸಹಾಯಕರು ಎಚ್ಚರಿಕೆ ಯಿಂದಿರಬೇಕು' ಎಂದು ಹೇಳಲು ಜಂಗಮಯ್ಯನು ಭಯಗ್ರಸ್ತನಾಗಿ ರಾಯರು ನಗರ ಶೋಧನೆ ಮಾಡಿಹೋಗುವ ಪರ್ಯಂತ ಬೀದಿ ಬೀದಿಗಳಲ್ಲಿ ಸಂಗಡ ತಿರುಗಿ ಮನೆಗೆ ಹೋಗುತ್ತಿದ್ದನು. ಉಳಿದ ಕಾಪಿನವರೂ ಹೀಗೆ ರಾಜಯಾವಾಗ ಬರುತ್ತಾನೋ ಎಂದು ಎಚ್ಚರದಿಂದ ಕಾರ್ಯ ನಿರ್ವಹಿಸುತ್ತಿದ್ದರು. ಈ ವಿಷಯವನ್ನು ಕೇಳಿದ ಅಪ್ಪಾಜಿ ತಿಮ್ಮರಸರು, ಇತರ ಮಂತ್ರಿಗಳು, ತಮ್ಮ ತಮ್ಮ ಮನೆಯಲ್ಲಿಯೂ ಹಗಲೂ ರಾತ್ರಿ ಏನು ಮಾತಾಡಲೂ ಹೆದರುತ್ತಿದ್ದರು. ಇದು ಕೃಷ್ಣದೇವರಾಯನು ಕಾಪಿನವರನ್ನು ಹೇಗಿಟ್ಟುಕೊಂಡಿದ್ದ ಎಂಬುದನ್ನು ತಿಳಿಸುತ್ತದೆ.

ಒಮ್ಮೆ ಕೃಷ್ಣದೇವರಾಯನು ಅಪ್ಪಾಜಿಯವರು (=ಮಂತ್ರಿ ತಿಮ್ಮರಸರು) ತನಗೆ ಸ್ವತಂತ್ರವಾಗಿ ಆಳಲು ಅವಕಾಶಕೊಟ್ಟಿಲ್ಲ ಎಂದು ಮುನಿಸಿಕೊಂಡು ಎರಡು ದಿನ ಕಾಲ ಎಲ್ಲಿಯೋ ಹೋಗಿ ಬಿಟ್ಟರಂತೆ. ಆಗ ಬೇಹಿನನರು ಕೃಷ್ಣದೇವರಾಯರು ಇಂಥಲ್ಲಿಯೇ ಇದ್ದಾರೆ ಎಂದು ಅಪ್ಪಾಜಿಯವರಿಗೆ ಸುದ್ದಿ ಕೊಟ್ಟರಂತೆ. ಆಮೇಲೆ ಅಪ್ಪಾಜಿಯವರು ಈ ಸುದ್ದಿ ಹರಡದ ಹಾಗೆ 'ಸ್ವತಂತ್ರವಾಗಿ ಆಳಲು ಅವಕಾಶಮಾಡಿಕೊಡುತ್ತೇವೆ' ಎಂದು ಕರೆದುತಂದರಂತೆ.

ಕೃಷ್ಣದೇವರಾಯನು ಅರಸನಾದ ಮೇಲೆ ಬಿಜಾಪುರಕ್ಕೆ ಕೆಲವು ಬೇಹಿನವರನ್ನು ಕಳುಹಿಸಿದ್ದನು. ಅವರಲ್ಲಿ ಬೇಹಿನ ಮಾರೀಚರಾಮಯ್ಯನೂ ಒಬ್ಬ. ಅವನು ವಿಜಾಪುರದಿಂದ ತಂದ ಮಾಹಿತಿ ವಿಶೇಷವಾದದ್ದಾಗಿತ್ತು. ಅಲ್ಲಿಯ ಪಟ್ಟಣ ಹೊರಪಾಳ್ಯ, ಕೋಟೆ ಕೊತ್ತಳ, ರಾವುತ ಮಾವುತರ ಸಂಖ್ಯೆ ಚತುರಂಗ ಬಲದ ಸಂಖ್ಯೆ, ಇದಲ್ಲದೆ

ಗೋಲ್ಕೊಂಡದ ವಜೀರರು, ಕುತುಬ್ ಮುಲ್ಕ್, ನಿಜಾಮ್ ಸಾಹೇಬರು, ವಜೀಬರು, ಮುದ್ರಾಪಂಡಿತರು, ದತ್ತೋಪಂಡಿತರು, ಬಾಹುಬಲೇಂದ್ರನವರು, ಬ್ರಹ್ಮಾಪಂಡಿತರು, ಕುಳಿತು ಆಲೋಚನೆ ಮಾಡಿದ್ದನ್ನು ಹೇಳುತ್ತಾನೆ. ಅದೇನೆಂದರೆ 'ಕರ್ನಾಟಕ ಸಿಂಹಾಸನಕ್ಕೆ ನೂತನವಾಗಿ ಕೃಷ್ಣರಾಯರನ್ನು ಅಧಿಷ್ಠಾನ ಕರ್ತರ ಮಾಡಿದಾರಭ್ಯ ಅವರು ತುರುಕರ ಮೇಲೆ ಕಾರ್ಯವ ಮಾಡಬೇಕೆಂದು ಆಲೋಚನೆ ಮಾಡಿ ಅದಕ್ಕೆ ತಕ್ಕಯತ್ನಗಳ ಮಾಡುತ್ತಾಯಿದ್ದಾರೆ - ಎಂಬ ಸುದ್ದಿಯು ಅಲ್ಲೆಲ್ಲಾ ಹರಡಿದೆ. ಗಜಪತಿ, ಅಶ್ವಪತಿ, ನರಪತಿಯರಲ್ಲಿ ನರಪತಿ ಕೃಷ್ಣದೇವರಾಯನು ಬಹಳ ಭಕ್ತಿವಂತರು. ಅವರ ರಾಜ್ಯದಲ್ಲಿ ದೇವಾದಾಯ ಬ್ರಹ್ಮಾದಾಯ ಪುಣ್ಯತೀರ್ಥಗಳು ಉಂಟಾಗಿ ವಿಷ್ಣುವೇ ಪ್ರತ್ಯಕ್ಷವಾಗಿ ವೆಂಕಟಾಚಲದಲ್ಲಿ ಇದ್ದಾರೆ ಎಂದುಕೊಂಡು ಆದಿಲ್‌ಶಾಹ್‌ರ ಕೂಡೆ ವಿಚಾರಮಾಡಿ ಸರಹದ್ದುಗಳನ್ನೆಲ್ಲ ಭದ್ರಗೊಳಿಸಿಕೊಂಡಿದ್ದಾರೆ. ನಾವೂ ಕೂಡಾ ನಮ್ಮ ನಮ್ಮ ಸರಹದ್ದುಗಳನ್ನು ಭದ್ರಗೊಳಿಸಿ ಕುದುರೆ ಆನೆ ಬಲಗಳನ್ನು ಹೆಚ್ಚಿಸಬೇಕಾಗಿದೆ' ಎಂದು ಮಾತಾಡಿದ್ದನ್ನು ಹೇಳುತ್ತಾನೆ. 'ಅಷ್ಟೇ ಅಲ್ಲ, ಅವರು 60 ಜನ ಬೇಹಿನವರನ್ನು ನಮ್ಮ ವಿದ್ಯಾನಗರಕ್ಕೆ (ವಿಜಯನಗರ) ಕಳುಹಿಸಿದ್ದಾರೆ. ವಿಜಾಪುರದ ಜನ ಯಾವಾಗ ಕೃಷ್ಣ ದೇವರಾಯನ ದಾಳಿ ಮಾಡುತ್ತಾನೋ ಎಂದು ಹೆದರಿದ್ದಾರೆ'- ಎಂದು ಹೇಳಿದಾಗ, ಕೃಷ್ಣದೇವರಾಯನು ಮಂತ್ರಿಯೊಡನೆ ಸಮಾಲೋಚಿಸಿ, ಸುದ್ದಿತಂದ ಬೇಹಿನವರನ್ನು ಮೆಚ್ಚಿಕೊಂಡು, ಸಾಕಷ್ಟು ಉಡುಗೊರೆ ಹಣವನ್ನು ಕೊಟ್ಟು, 'ಇನ್ನೂ ಸ್ವಲ್ಪ ಕಾಲ ವಿಜಾಪುರದಲ್ಲಿಯೇ ಇದ್ದು, ಅಲ್ಲಿಯ ರಾಜರ ಬಗ್ಗೆ ಚೆನ್ನಾಗಿ ತಿಳಿದು ಹೇಳಿ. ಅಂದಂದಿನ ಸುದ್ದಿಗಳನ್ನು ಅಂದಂದೇ ಕಳುಹಿಸಿ' ಎಂದು ಕಳುಹಿಸಿಕೊಟ್ಟನಂತೆ. ಅನಂತರ ಮಂತ್ರಿಗಳ ಜೊತೆ ಸಮಾಲೋಚಿಸಿದಾಗ 'ನಾವು ಇನ್ನೂ ಯೋಚನೆ ಮಾಡುವ ಮೊದಲೇ ಅವರು ಮಾಡಿದ್ದಾರೆ'- ಎನ್ನಲು ಮಂತ್ರಿಯು 'ಎಲ್ಲಿ ಧೈರ್ಯವಿರುವುದೋ ಅಲ್ಲಿ ಲಕ್ಷ್ಮಿ ಇರುತ್ತಾಳೆ. ನಾವು ರಾಜ್ಯವನ್ನು ವಿಸ್ತರಿಸಲು ದಂಡಯಾತ್ರೆ ಮಾಡಬೇಕಾಗಿದೆ. ಯಾರಾದರೂ ಓಲೆಕಾರರು ಬೇಹಿನವರು ಬಂದರೆ ತಿಳಿಸಿ' ಎಂದು ಕಾವಲುಗಾರರಿಗೆ ಹೇಳಿದರು. ಅಷ್ಟರಲ್ಲಿ 'ಬೇಹಿನ ರಾಮಯ್ಯ ಮತ್ತು ಬೇಹಿನ ಗೋಪಾಜಿಯೆಂಬುವರು ಬಂದಿದ್ದಾರೆಂದು' ತಿಳಿಸುತ್ತಾರೆ. ಇದು ಅವರು ಬೇಹಿನವರನ್ನು ಎಷ್ಟು ಅವಲಂಬಿಸಿದ್ದರು ಎಂಬುದನ್ನು ತಿಳಿಸುತ್ತದೆ. ಬೇಹಿನರಾಮಯ್ಯ ಮತ್ತು ಬೇಹಿನ ಗೋಪಾಜಿಯವರು ವಿಜಾಪುರನಗರದಿಂದ ಹೊರಟು ಅಹಮದ್‌ನಗರ, ಗೋಲಕೊಂಡ ನಗರಕ್ಕೆ ಹೋದ ವಿವರಗಳನ್ನು ತಿಳಿಸುತ್ತಾರೆ. ವಿಜಾಪುರದ ನಗರ ರಕ್ಷಣ ವ್ಯವಸ್ಥೆಯನ್ನು ತಿಳಿಸುತ್ತಾ 'ಸರಹದ್ದಿನಲ್ಲಿ ಬರುವವರನ್ನು ಹೇಗೆ ಶೋಧಿಸುತ್ತಾರೆ. ಹಾಗೆ ಕಾಗದಗಳನ್ನು ಹಿಡಿದು ಬರುವ ಓಲೆಕಾರರನ್ನು ಹೇಗೆ ಹಿಡಿದು ಶೋಧಿಸಿ ಬಿಡುತ್ತಾರೆ. ಪರಿಚಿತರನ್ನು, ಪರದೇಶೀಯವರನ್ನು ಒಳಗೆ ಬಿಡುವುದೇ ಇಲ್ಲ. ಒಂದು ವೇಳೆ ಅವರಿಗೆ ಅಪರಿಚಿತರಾದ ಸ್ಥಳೀಯರು ಬಂದು ಅವರ ಬಗ್ಗೆ ನಂಬಿಕೆಕೊಟ್ಟು ಅವರ ತಪ್ಪು ಒಪ್ಪುಗಳ ಜವಾಬ್ದಾರಿ

ಯನ್ನು ಹೊತ್ತುಕೊಳ್ಳುವುದಾದರೆ ಮಾತ್ರ ಕೋಟೆಯೊಳಗೆ ಬಿಡುತ್ತಾರೆ. ಹಾಗೆ ಒಳಕ್ಕೆ ಬಿಡುವಾಗ ಕೈಮುದ್ರೆ ಒತ್ತುತ್ತಾರೆ. ಊರಿನಲ್ಲಿ ಓಡಾಡುವಾಗ ಅಪರಿಚಿತರನ್ನು ತಳವಾರರು ತಡೆದರೆ ಈ ಮುದ್ರೆಯನ್ನು ತೋರಿಸಿದರೆ ಸುಮ್ಮನೆ ಬಿಡುತ್ತಾರೆ ಮತ್ತು ಊರಿನಿಂದ ಹೊರಗೆ ಹೋಗುವಾಗಲೂ ಈ ಮುದ್ರೆಯನ್ನು ತೋರಿಸಬೇಕು. ಇಲ್ಲದೆ ಹೋದರೆ ಬಂಧಿಸಿಯೇ ಬಿಡುತ್ತಾರೆ'- ಎಂಬ ವಿವರಗಳನ್ನು ನೀಡುತ್ತಾನೆ.

ಬೇಹಿನ ಗೋಪಾಜಿಯು ಸುಲ್ತಾನರ ಪಟ್ಟಣದ ಭಯಾನಕ ನಿಯಮಗಳು ಶಿಕ್ಷೆಗಳ ವಿವರ ನೀಡುತ್ತಾನೆ. 'ಕುರುಬರ ಪಟ್ಟಣವು ಯಮಪುರಿ. ಅವರನ್ನು ಓಲೈಸಿದವರು ಯಮದೂತರು. ನಡುವಿಗೆ ಹರಿಯ ಹುಯ್ಯುದು, ಗರಗಸದಲ್ಲಿ ಮನುಷ್ಯರ ಕೊಯ್ಸುರು, ಗೋಣಿಯೊಳಗೆ ಮನುಷ್ಯರ ಹಾಕುವರು, ಗುದಿಗೆಯಲ್ಲಿ ಕೊಲ್ಲುವುದು, ಕಾಲು, ಕೈ, ಕಿವಿ, ಮೂಗುಗಳ ಕೊಯ್ಯುದು, ಆನೆ ಕಾಲಿಗೆ ಕಟ್ಟಿ ಎಳೆಸುವುದು, ಅರಮನೆಗೆ ಹಣಗಳ ಕೊಟ್ಟರೆ ಪ್ರಾಣ ಸಹಿತ ಬಿಡುವರು. ಹಾಗೆಯೇ ದಿವಾಣರ (ಅರಮನೆ ಒಳಾಂಗಣ) ಬಾಗಿಲಲ್ಲಿ ಬಿಚ್ಚುಕತ್ತಿಯವರು, ಬೆತ್ತದ ಕೋಲಿನವರು, ಗುದಿಗೆ ಕೈಯವರು ಹೊಸ ಮನುಷ್ಯರನ್ನು ಕಂಡರೆ ಆ ಕ್ಷಣವೇ ಕೊಲ್ಲುವರು. ಅವರ ನೋಡಿದಾಕ್ಷಣ ಮೈ ನಡುಗುವುದು. ದೊರೆಗಳು, ಮನ್ನೆಯರು, ವಜೀರರು, ರಾವುತರು, ಮಾವುತರುಗಳು ನಿಯೋಗಿಗಳು ಇರುವುದಕ್ಕೆ ಏರ್ಪಾಡು ಮಾಡಿದ್ದಾರೆ. ಅಷ್ಟ ಚಾವಡಿಗಳನ್ನು ಅರಮನೆಯ ಇದಿರಲ್ಲಿ ಕಟ್ಟಿದ್ದಾರೆ. ಮಿತಪರಿವಾರದ ಓಲಗವಿದ್ದು ಓಲಗತೀರಿ ಅರಮನೆಯಿಂದ ಹೋಗುವಾಗ ಅಲ್ಲಿ ಚಾವಡಿಯವರು ಕೈ ಮುಗಿಯುತ್ತಾರೆ. ಆಗ ರಾಜನು ಅವರಿಗೆ ನಿತ್ಯಗಟ್ಟಲೆ ಬಹುಮಾನ ಸನ್ಮಾನ ಮಾಡುತ್ತಾನೆ. ರೊಕ್ಕ ಉಡುಗೊರೆ, ದಟ್ಟಿಕಬಾಯಿ (ನಿಲುವಂಗಿ) ಅಡಕೆ ಎಲೆಗಳನ್ನು ಕೊಡುತ್ತಾನೆ. ಅರಮನೆಯ ಒಳಗೆ ಪ್ರವೇಶಕ್ಕೆ ಫಕೀರರಿಗೆ ಮತ್ತು ಅವಧೂತರಿಗೆ ಅಡ್ಡಿ ಆತಂಕಗಳು ಇಲ್ಲ. ಅವರನ್ನು ಗೌರವದಿಂದ ಕಾಣುತ್ತಾರೆ'- ಎಂಬ ಮಾಹಿತಿಯನ್ನು ತಿಳಿಸುತ್ತಾನೆ. 'ಅಷ್ಟೆ ಅಲ್ಲ ಅವರೀಗ ತಮ್ಮ ಸರಹದ್ದುಗಳೆಲ್ಲವನ್ನು ಭದ್ರಪಡಿಸಿ ಯುದ್ಧ ಸಿದ್ಧತೆಗಳಲ್ಲಿ ತೊಡಗಿದ್ದಾರೆ' ಎನ್ನುತ್ತಾ, ಅವರು ಈಗಾಗಲೇ ತಮ್ಮ ಅಧೀನ ಸಾಮಂತರಿಗೆ ಕುದುರೆ ಆನೆ, ಇತ್ಯಾದಿಗಳ ವಿವರ ಕೋರಿ ಕಾಗದಗಳನ್ನು ಬರೆದಿದ್ದಾರೆ. ವಿದ್ಯಾನಗರಕ್ಕೆ (ವಿಜಯನಗರಕ್ಕೆ) ಸು. 170 ಜನ ಬೇಹುಗಾರರನ್ನು ಕಳಿಸಿದ್ದಾರೆ. ಅವರೆಲ್ಲ ಈ ವಿದ್ಯಾನಗರದಲ್ಲಿ (ವಿಜಯನಗರದಲ್ಲಿ) ನಾನಾ ಕಡೆ ತಿರುಗುತ್ತಿದ್ದಾರೆ. ಅವರು ಅಂದಂದಿನ ಮಾಹಿತಿಗಳನ್ನು ಕಳುಹಿಸುತ್ತಿರ ಬಹುದು' ಎಂದು ವರದಿ ಒಪ್ಪಿಸುತ್ತಾನೆ. ಇದನ್ನು ಕೇಳಿಸಿಕೊಡು ಕೃಷ್ಣದೇವರಾಯರು ತಮ್ಮ ಶೌರ್ಯ ಸಾಹಸದ ವಿಷಯಗಳು ಪರದೇಶದಲ್ಲಿ ಹರಡಿರುವ ವಿಷಯ ತಿಳಿದು ಬೇಹಿನವರಿಗೆ ನೂರು ಹೊನ್ನು, ಉಡುಗೊರೆಗಳನ್ನು ಕೊಟ್ಟು ಪಟ್ಟಣದಲ್ಲಿ ಸಂಚರಿಸಿ ನಡೆದ ಘಟನೆಗಳನ್ನೂ ಇನ್ನೂ ಹೆಚ್ಚಿನ ಸುದ್ದಿಗಳನ್ನೂ ತಿಳಿದು ಬಂದು ಹೇಳಿ' ಎಂದು ಕಳುಹಿಸಿಕೊಡುತ್ತಾನೆ.

ಹಾಗೆಯೇ ಕೃಷ್ಣದೇವರಾಯನ ಮತ್ತೊಂದು ನೀತಿಯೆಂದರೆ ವಿದೇಶೀ, ನಿಯೋಗಿಗಳನ್ನು ಬಹಳ ಪ್ರೀತಿ ಗೌರವದಿಂದ ನೋಡಿಕೊಳ್ಳುವುದು. ಅವರಿಗೆ ಒಳ್ಳೆಯ ಬಿಡದಿ ಕಲ್ಪಿಸಿ, ಬೇಕಾದ ಅನುಕೂಲಗಳನ್ನು ಮಾಡಿಕೊಟ್ಟು, ಯಾವುದಕ್ಕೂ ಅವರನ್ನು ಒತ್ತಾಯಿಸದೆ, ಆಗಾಗ್ಗೆ ಉಡುಗೊರೆಗಳನ್ನು ನೀಡುತ್ತಾ, ಸನ್ಮಾನಗಳನ್ನು ಮಾಡುತ್ತಾ ವಿನಯವಾದ ಸರಸ ಸಲ್ಲಾಪಗಳನ್ನು ಮಾಡುತ್ತಾ ಅವರು ತಮ್ಮ ವಿರೋಧವಾದ, ಯಾವ ಸುದ್ದಿಯೂ ಅವರ ರಾಜರಿಗೆ ಮುಟ್ಟದಂತೆ, ಕಾಗದಗಳನ್ನು ಬರೆಯದಂತೆ ನೋಡಿಕೊಳ್ಳುವುದು. ಈ ಬಗೆಯ ತಂತ್ರದ ಮೂಲಕ ಸಹ ಈ ದೊರೆ ಸುತ್ತರ ರಾಜರ ಜೊತೆ ಒಳ್ಳೆಯ ಸಂಬಂಧ ಇಟ್ಟುಕೊಳ್ಳುತ್ತಿದ್ದನು.

ದೊರೆ ಕೃಷ್ಣದೇವರಾಯ ಬೇಹಿನ ರಾಮಯ್ಯ, ಬೇಹಿನ ಗೋಪಾಜಿ ಮತ್ತಿತರ ಬೇಹುಗಾರರು ತಂದ ಸುದ್ದಿಯನ್ನು ಕೇಳಿ, ಮಂತ್ರಿಗಳೊಂದಿಗೆ ಸಮಾಲೋಚಿಸಿ, ಅಮರನಾಯಕರು, ಬೇಡನಾಯಕರನ್ನು ಕರೆಸಿ, ಹದಿನೆಂಟು ಕಂಪಣದವರಿಗೂ ಯುದ್ಧ ಸಿದ್ಧತೆಗಳನ್ನು ಮಾಡಲು ತಿಳಿಸಿ, ಉಮ್ಮತ್ತೂರು, ಶಿವನಸಮುದ್ರಕ್ಕೆ ಬಂದು, ಗಂಗ ರಾಜರನ್ನು ಗೆದ್ದು, ಶ್ರೀರಂಗಪಟ್ಟಣದ ಕೋಟೆಯನ್ನು ನೋಡಿ ಇಕ್ಕೇರಿ ನಗರಕ್ಕೆ ಬಂದು, ರಾಯಚೂರು, ಮುದಗಲ್ಲು, ಆದವಾನಿಗಳನ್ನು ಗೆದ್ದು, ಗೋಲಕೊಂಡಕ್ಕೆ ಬಂದು, ಮೂರು ಬಗೆಯ ಸುಲ್ತಾನರನ್ನು ಗೆಲ್ಲಲು, ಹೊಳೆಯ ಬಳಿ ಡೇರೆ ಹಾಕಿದನಂತೆ. ಮುಂದೆ ಅವರ ಮೇಲೆ ದಾಳಿ ಮಾಡಲು ಸಿದ್ಧತೆ ಮಾಡಿಕೊಂಡು ಬೇಹಿನವರು ಬಂದು ಹೇಳುವ ಸುದ್ದಿಗೆ ಕಾದರಂತೆ. ಅದರಂತೆ ಬೇಹಿನವರು ಬಂದು ಸುಲ್ತಾನರ ಬಲಾಬಲಗಳನ್ನು ಹೇಳಿ ಕೃಷ್ಣೆಯನ್ನು ದಾಟಿ ಬಂದ ಪಾಳ್ಯದಲ್ಲಿರುವ ಸುದ್ದಿಯನ್ನು ತಂದಾಗ ರಾಯನು ತನ್ನ ಮಂತ್ರಿ ಅಮರನಾಯಕರೊಂದಿಗೆ ಸಮಾಲೋಚಿಸಿ ಯುದ್ಧ ತಂತ್ರವನ್ನು ರೂಪಿಸಿ ಸುಲಭವಾಗಿ ಸೋಲಿಸಿ ಅವರ ಆನೆಕುದುರೆಗಳನ್ನು ವಶಪಡಿಸಿಕೊಂಡು, ಗಜಪತಿಯ ರಾಜ್ಯ(ಒರಿಸ್ಸಾ)ವನ್ನು ಗೆಲ್ಲುವುದಕ್ಕೆ ಸಿದ್ಧತೆ ಮಾಡಿಕೊಂಡು ಅಲ್ಲಿಯ ವಿಷಯ ತಿಳಿದುಬರಲು ಬೇಹುಗಾರರಾದ ವಾಯುವೇಗಿ ಹನುಮಂತಯ್ಯ ಮತ್ತು ಮನೋವೇಗಿ ಪುರುಷಾಮೃಗಯ್ಯ ಎಂಬುವವರನ್ನು ಗಜಪತಿ ರಾಜ್ಯಕ್ಕೆ ಕಳುಹಿಸಿದರಂತೆ.

ಈ ಇಬ್ಬರು ಬೇಹಿನವರು ಅಲ್ಲಿಗೆ ಹೋಗಿ ಅನೇಕ ವಿವರಗಳನ್ನು ತರುತ್ತಾರೆ. 'ಗಜಪತಿ ರಾಜ್ಯವು ಅತ್ಯಂತ ಸಮೃದ್ಧವಾದದು. ರಾಜನು ಶೂರನೂ ದೈವಭಕ್ತನೂ ಆಗಿದ್ದಾನೆ. ಅವನ ರಾಜ್ಯದಲ್ಲಿ ಸುಂದರ ಕಟ್ಟಡಗಳು, ಸಭಾಮಂಟಪಗಳು, ಆನೆಕುದುರೆಗಳೂ ಇವೆಯೆಂದೂ 'ಜಗನ್ನಾಥ ಸ್ವಾಮಿಯ ರಥಮಹೋತ್ಸವವೂ ಅತ್ಯಂತ ವೈಭವದಿಂದ ನಡೆಯುತ್ತದೆ'ಯೆಂದೂ, 'ಪಣ್ಯಾಂಗನೆಯರು, ಕ್ಷತ್ರಿಯರು, ಬ್ರಾಹ್ಮಣರು, ವಿದ್ವಾಂಸರು, ವೈಶ್ಯರು, ಶೂದ್ರರೂ, ಕವಿಗಳು, ವಾನಪ್ರಸ್ಥರು, ಬ್ರಹ್ಮಚಾರಿಗಳು ನಾನಾ ಜಾತಿಯವರೂ ಬಂದು ಸ್ವಾಮಿಯ ದರ್ಶನ ಮಾಡುತ್ತಾರೆ. ಆ ಸ್ಥಳವರ್ತಮಾನಗಳನ್ನು

ಮಹಾಪ್ರಭಾವ ಪ್ರಸಾದವನ್ನು ವರ್ಣಿಸಲು ಸಾವಿರ ತಲೆಗಳು ಎರಡುಸಾವಿರ ಜಿಹ್ವೆಗಳೂ ಸಾಲದೆಂದೂ' ವರ್ಣಿಸುತ್ತಾರೆ. 'ಗಜಪತಿ ದೊರೆಯು ಪ್ರತಿದಿನ ಸ್ನಾನಪೂಜೆ ಮಾಡಿ ಹಿರಿಯರಿಂದ ಬ್ರಾಹ್ಮಣರಿಂದ ಆಶೀರ್ವಾದ ಪಡೆಯುತ್ತಾನೆ. ಅವನ ರಾಜ್ಯದಲ್ಲಿ ಅನೇಕ ಜಟ್ಟಿಗಳೂ ಶೂರರೂ ಇದ್ದಾರೆ. ಸಾಹಸಗಳ್ನು ಮಾಡಿದವರಿಗೆ ಉಡುಗೊರೆಗಳನ್ನು ಕೊಟ್ಟು ಸನ್ಮಾನಿಸುತ್ತಾನೆ. ಅವನಿಗೆ ಅತ್ಯಂತ ನಿಷ್ಠರಾದ ಶೂರರಾದ ಸಾಮಂತ ದೊರೆಗಳಾದ16 ಜನ ಮಹಾಪಾತ್ರರು ಇದ್ದಾರೆ. ಗರಡಿ ಮನೆಗಳಿವೆ. ಪೈಲ್ವಾನರು ಇದ್ದಾರೆ. ಗಜಪತಿ ಹಿಂದೆ ಡಿಲ್ಲಿಯ ಸುಲ್ತಾನನು ದಾಳಿ ಮಾಡಿದಾಗ 12 ವರ್ಷದವರೆಗೂ ಸಾಹಸದಿಂದ ಹೋರಾಡಿ ಸುಲ್ತಾನನಿಗೆ ಕೈ ಸೆರೆಯಾದ, ಆದರೆ ಸುಲ್ತಾನನ ತಾಯಿಗೆ ಗಜಪತಿಯ ದೇವರ ಅವತಾರವಾಗಿ ಕನಸಲ್ಲಿ ಕಂಡಿದ್ದ ಕಾರಣ ಸುಲ್ತಾನ ಬಿಡುಗಡೆ ಮಾಡಿ ರಾಜ್ಯವನ್ನು ಮರಳಿಕೊಟ್ಟಿದ್ದಾನೆ. ಗಜಪತಿ ಮಹಾಭಕ್ತನಾದ್ದರಿಂದ ದೇವಾಲಯ ದಲ್ಲಿಯೆ ಶತ್ರುಗಳಿಂದ ತೀರ್ಥದಲ್ಲಿ ವಿಷಪ್ರಾಶನವಾದರೂ ಬದುಕಿ ಉಳಿದಿದ್ದಾನೆ'- ಎಂದು ವಿವರಣೆ ನೀಡುತ್ತಾರೆ. ಈ ವಿಷಯ ಕೇಳಿ ಆಶ್ಚರ್ಯಗೊಂಡ ಕೃಷ್ಣದೇವರಾಯ ಈ ವಾಯುವೇಗಿ ಹನುಮಂತಯ್ಯ ಮತ್ತು ಮನೋರೋಗಿ ಪುರುಷಾ ಮೃಗಯ್ಯ ಇವರಿಗೆ ಅನೇಕ ಉಡುಗೊರೆಗಳನ್ನೂ, ವೆಚ್ಚಕ್ಕೆ 200 ವರಹಗಳನ್ನೂಕೊಟ್ಟು ಗಜಪತಿಯ ರಾಜ್ಯದಲ್ಲಿಯೇ ಇದ್ದು ಇನ್ನೂ ಹೆಚ್ಚಿನ ಮಾಹಿತಿ ತರಲು ಹೇಳುತ್ತಾನೆ. ಗಜಪತಿಯನ್ನು ಗೆಲ್ಲುವ ಸಿದ್ಧತೆಗಳನ್ನು ಆರಂಭಿಸುತ್ತಾನೆ.

ಇಲ್ಲಿ ಬರುವ ಬೇಹಿನವರ ಹೆಸರಿನ ಜೊತೆಗಿನ 'ವಾಯುವೇಗಿ' 'ಮನೋವೇಗಿ' ಎಂಬ ವಿಶೇಷಣಗಳು ಕುತೂಹಲ ಕೆರಳಿಸುತ್ತವೆ. ಇದು ಹನುಮಂತಯ್ಯನಿಗೂ, ಪುರುಷಾಮೃಗಯ್ಯನಿಗೂ ಅವರವರ ಕೆಲಸಕ್ಕೆ ತಕ್ಕಂತೆ ಕೊಟ್ಟ ಬಿರುದುಗಳಿರಬಹುದು, ವಾಯುವೇಗಿಯೆಂದರೆ ಸಾಮಾನ್ಯರಿಗಿಂತಲೂ ಹೆಚ್ಚಿನವೇಗದಲ್ಲಿ ಸುದ್ದಿ ತರುವರು; ಮನೋವೇಗಿಯೆಂದರೆ ವಾಯುವೇಗಿಗಿಂತಲೂ ಶೀಘ್ರವಾಗಿ ಸುದ್ದಿ ತರುವವನು ಎಂದಿರಬಹುದು.

ಗಜಪತಿಯನ್ನು ಜಯಿಸಲು ಹೊರಡುವುದಕ್ಕೆ ಮೊದಲು ಗಜಪತಿಯ ಬಳಿಯಿದ್ದ ನಿಯೋಗಿ ಸ್ಥಾನಪತಿ ಕಮಲನಾಭಯ್ಯನು ಬೇಹಿನವರ ಕೈಯಲ್ಲಿ ಕಳುಹಿಸಿದ ಪತ್ರ ಕೃಷ್ಣದೇವರಾಯ ಮತ್ತು ಮಂತ್ರಿ ತಿಮ್ಮರಸರು ಅವರ ಯುದ್ಧ ತಂತ್ರವನ್ನೇ ಬದಲಾಯಿಸಿತು. ಗಜಪತಿಯ ಆಸ್ಥಾನದಲ್ಲಿ ನಡೆದ ಮಾತುಕತೆ, 16 ಜನ ಮಹಾಪಾತ್ರರು ಗಜಪತಿಗೆ ಕರ್ನಾಟಕದ ಅರಸನನ್ನು ಗೆದ್ದು ಕೊಟ್ಟೇ ತೀರುತ್ತೇವೆಂದು ಮಾಡಿದ ಪ್ರತಿಜ್ಞೆ, ಅವರ ಚತುರಂಗ ಬಲದ ವಿವರಣೆ ಇವೆಲ್ಲವುಗಳನ್ನು ಕೇಳಿ ಸ್ವತಃ ಕೃಷ್ಣದೇವರಾಯನೇ ಭಯಪಟ್ಟು ತಿಮ್ಮರಸನ ಬಳಿ ಆಪ್ತಾಲೋಚನೆ ಮಾಡುತ್ತಾನೆ. ತಿಮ್ಮರಸ 'ಚತುರಂಗ ಬಲದ ಮೂಲಕ ಯುದ್ಧದಲ್ಲಿ ಇವರನ್ನು ಸೋಲಿಸಲು ಸಾಧ್ಯವಿಲ್ಲ. ಇದಕ್ಕೆ ಚಾಣಾಕ್ಷ

ತಂತ್ರವನ್ನು ರೂಪಿಸಬೇಕು. ಮಹಾಪಾತ್ರರನ್ನು ಗಜಪತಿಯನ್ನು ಬೇರೆ ಮಾಡುವ ಭೇದೋಪಾಯವನ್ನು ಪ್ರಯೋಗಿಸಿ ಮಹಾಪಾತ್ರರು ಮೋಸ ಮಾಡಿದರೆನ್ನುವ ಅಭಿಪ್ರಾಯ ಮೂಡಿಸಬೇಕು' ಎಂದು, ಅದೇ ತಂತ್ರ ಮಾಡಿ ಗಜಪತಿಯನ್ನು ಏಕಾಂಗಿ ಯನ್ನಾಗಿ ಮಾಡಿ ಸೋಲಿಸುತ್ತಾರೆ. ಆ ಮೇಲೆ ಕೃಷ್ಣದೇವರ ರಾಜಕೀಯ ಹೊಂದಾಣಿಕೆ ಮಾಡಿಕೊಂಡು ಗಜಪತಿಯ ಮಗಳನ್ನು ವಿವಾಹ ಮಾಡಿಕೊಂಡು ತಿರುಪತಿಗೆ ಭೇಟ್ಟಿಕೊಟ್ಟು ಭಕ್ತಿ ಸಮರ್ಪಣೆ ಮಾಡಿ ವಿಜಯನಗರಕ್ಕೆ ಮರಳುತ್ತಾನೆ.


ಹೀಗೆ ಕೃಷ್ಣದೇವರಾಯನ ದಿಗ್ವಿಜಯಗಳನ್ನು ಆಳ್ವಿಕೆಯನ್ನು ನೋಡಿದರೆ ಅದರ ಹಿಂದೆ ಕಾಪಿನವರ ಮತ್ತು ಬೇಹಿನವರ ಪಾತ್ರ ಪ್ರಧಾನವಾಗಿತ್ತು, ಎಂಬುದು ಗೊತ್ತಾಗದೆ ಇರದು. ಅವರುಗಳು ಶತ್ರುಪಾಳೆಯಕ್ಕೆ ನುಗ್ಗಿ ತಮ್ಮ ಪ್ರಾಣವನ್ನು ಪಣವಾಗಿಟ್ಟು, ಅನೇಕ ಮಾಹಿತಿಗಳನ್ನು ತರುತ್ತಿದ್ದರು. ಇಲ್ಲಿ ಬರುವ ಬೇಹಿನ ರಾಮಯ್ಯ, ಬೇಹಿನ ಗೋಪಾಜಿತಳವಾರ ಜಂಗಮಯ್ಯ, ಬೇಹಿನ ಮಾರೀಚ, ಸ್ಥಾನಪತಿ ಕಮಲನಾಭಯ್ಯ, ವಾಯುವೇಗಿ ಹನುಮಂತಯ್ಯ, ಮನೋವೇಗಿ ಪುರುಷಾ ಮೃಗಯ್ಯ ಮುಂತಾದವರು ಸಲ್ಲಿಸಿದ ನಿಷ್ಠಾವಂತ ಸೇವೆಯು ಕಡಿಮೆಯೇನಲ್ಲ. ಆದರೆ ಈ ಕೆಳವರ್ಗದವರು ಸಲ್ಲಿಸಿದ ಸೇವೆ ಪ್ರಚಲಿತ ಇತಿಹಾಸದಲ್ಲಿ ಮಹತ್ತ್ವ ಪಡೆದಿಲ್ಲ. ಇಂಥವರು ತೆರೆಯ ಮರೆ ಯಲ್ಲಿಯೇ ಉಳಿದು ಬಿಡುತ್ತಾರೆ. ಇಂಥವರೂ ಕೂಡಾ ಇತಿಹಾಸದಲ್ಲಿ ಉಳಿಯಬೇಕು. ಅವರನ್ನು ಗುರುತಿಸಬೇಕು.

೫೩. ವಿಜಯನಗರದ ಅರಸರ ಎರಡು ತಾಮ್ರದ ನಾಣ್ಯಗಳು

ಡಾ. ಆರ್. ಗೋಪಾಲ್

ಇತ್ತೀಚೆಗೆ ತಮಿಳುನಾಡಿನ ನಾಣ್ಯಗಳ ಸಂಗ್ರಹ ಮಾಡುವವರ ಎರಡು ತಾಮ್ರದ ನಾಣ್ಯಗಳು ನನ್ನ ಗಮನ ಸೆಳೆದವು ಮತ್ತು ಅವುಗಳು ಇಲ್ಲಿಯವರೆಗೆ ಬೆಳಕಿಗೆ ಬಂದಿಲ್ಲವೆಂದು ಅಧ್ಯಯನ ಮಾಡಿದ ಮೇಲೆ ತಿಳಿದು ಬಂತು.

ನಾಣ್ಯ ಸಂಖ್ಯೆ: 1 2.2 ಗ್ರಾಂ ತೂಕದ 15 ಮಿ.ಮೀ. ವ್ಯಾಸವುಳ್ಳ ತಾಮ್ರದ ನಾಣ್ಯ; ಗುಂಡಾದ ಆಕಾರ



ಮುಮ್ಮುಖ ಹಿಮ್ಮುಖ


ಮುಮ್ಮುಖ: ಎಡಕ್ಕೆ ಚಲಿಸುತ್ತಿರುವ ಉದ್ದವಾಗಿರುವ ಕೋರೆಗಳನ್ನು ಹೊಂದಿರುವ ಆನೆ. ಆನೆಯ ಮೇಲೆ ಒಬ್ಬ ವ್ಯಕ್ತಿ ಕುಳಿತಿರುವ ಚಿತ್ರ.

ಹಿಮ್ಮುಖ: ಮೂರು ಸಾಲುಗಳ ದೇವನಾಗರಿ ಲಿಪಿ. ಪ್ರತಾಪದೇವರಾಯ

ಈ ನಾಣ್ಯದ ತೂಕ 2.2 ಗ್ರಾಂಗಳಿದ್ದು ಮುಮ್ಮುಖದಲ್ಲಿ ಆನೆಯ ಚಿತ್ರವೂ ಹಿಮ್ಮುಖದಲ್ಲಿ ದೇವರಾಯನೆಂಬ ಬರಹ ಇರುವುದರಿಂದಲೂ ಈ ನಾಣ್ಯವನ್ನು ಸಂಗಮ ವಂಶದ ವಿಜಯನಗರದ ದೊರೆ ಇಮ್ಮಡಿದೇವರಾಯನು (೧೪೨೩-೧೪೪೬) ಟಂಕಿಸಿರುವನೆಂಬ ಅಭಿಪ್ರಾಯಕ್ಕೆ ಬರಲಾಗಿದೆ. ದೇವರಾಯನು ವಿಶೇಷವಾಗಿ ಆನೆಯ ಗುರುತನ್ನು ತನ್ನ ಬಂಗಾರ, ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳ ಮೇಲೆ ಅಚ್ಚು ಹಾಕಿಸುತ್ತಿದ್ದನು. ಈತನಿಗೆ ಗಜಬೇಂಟೆಕಾರನೆಂಬ ಬಿರುದೂ ಸಹ ಇತ್ತು. ಈ ಮೇಲ್ಕಂಡ ತಾಮ್ರದ ನಾಣ್ಯವನ್ನು ವಿಶೇಷವಾಗಿ ತಮಿಳುನಾಡಿನ ಪ್ರದೇಶಗಳಿಗೆ ಉಪಯೋಗಕ್ಕೆಂದು

ಚಲಾವಣೆಗೆ ತರಲಾಗಿದ್ದು, ಈ ನಾಣ್ಯವನ್ನು ಕಾಸು (೧/೨ ಜಿಟ್ಟಲ್) ಎಂದು ಕರೆಯಲಾಗುತ್ತಿತ್ತು.

ನಾಣ್ಯ ಸಂಖ್ಯೆ: ೨ ತಾಮ್ರದ ತೂಕ; ೨ ಗ್ರಾಂಗಳು; ಗುಂಡಾಕಾರವಿದ್ದು ವ್ಯಾಸ ೧೫ ಮಿ.ಮೀ. ಇದೆ.



ಮುಮ್ಮುಖ ಹಿಮ್ಮುಖ

ಮುಮ್ಮುಖ: ಎಡಕ್ಕೆ ಚಲಿಸುತ್ತಿರುವ ಎರಡು ತಲೆಗಳಿರುವ ಗಂಡಭೇರುಂಡ ಚಿತ್ರ.

ಹಿಮ್ಮುಖ: ಗೆರೆಗಳು ಮತ್ತು ಉಬ್ಬು ಚುಕ್ಕೆಗಳು; ಹಿಂಬದಿಯನ್ನು ಮೂರು ಭಾಗಗಳಾಗಿ ವಿಭಾಗಿಸಲಾಗಿದೆ. ಮೊದಲನೆಯ ಸಾಲಿನಲ್ಲಿ ಅಸ್ಪಷ್ಟ ಅಕ್ಷರಗಳಿವೆ. ಎರಡನೆಯ ಸಾಲಿನಲ್ಲಿ ತಿರುಮಲ ಎಂಬ ಕನ್ನಡ ಬರಹವಿದ್ದು ತಿ ಮತ್ತು ಲ ಅರ್ಧ ಅಕ್ಷರಗಳು ಸರಿಯಾಗಿ ಮೂಡಿಲ್ಲ. ಕೊನೆಯ ಸಾಲಿನಲ್ಲಿ ರಾಯ ಎಂದು ಬರವಣಿಗೆ ಇದ್ದು ಇಡೀ ಬರವಣಿಗೆಯನ್ನು ಶ್ರೀ ತಿರುಮ (ಲ) ರಾಯನೆಂದು ಓದಬಹುದಾಗಿದೆ.

ವಿವರ

ತಿರುಮಲರಾಯನು ಅರವೀಡು ವಂಶದ ಮೊದಲನೆಯ ದೊರೆಯಾಗಿದ್ದು (೧೫೬೯-೧೫೭೨) ಈತನು ತಾಳೀಕೋಟೆ ಯುದ್ಧದ ನಂತರ ಪೆನುಗೊಂಡೆಯನ್ನು ರಾಜಧಾನಿಯಾಗಿ ಮಾಡಿಕೊಂಡಿದ್ದನು. ಈತನು ಅನೇಕ ಬಂಗಾರದ ಮತ್ತು ತಾಮ್ರದ ನಾಣ್ಯಗಳನ್ನು ಹೊರಡಿಸಿದ್ದನು. ಈ ಪ್ರಸ್ತುತ ನಾಣ್ಯದಲ್ಲಿ ಗಂಡಭೇರುಂಡದ ಚಿತ್ರವಿದ್ದು ತಮಿಳುನಾಡಿನ ಚಲಾವಣೆಗೆ ಟಂಕಿಸಲಾಗಿದ್ದು ಈ ತೂಕದ ನಾಣ್ಯವನ್ನು ಕಾಸು ಎಂದು ಕರೆಯಲಾಗುತ್ತಿತ್ತು. ಈ ನಾಣ್ಯವನ್ನು ತಿರುಮಲರಾಯನು ಟಂಕಿಸಿರುವನೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

ಗ್ರಂಥಋಣ

1) ಕಾಯಿನ್ಸ್ ಅಂಡ್ ಕರೆನ್ಸೀ ಸಿಸ್ಟಮ್ ಇನ್ ಕರ್ನಾಟಕ ಡಾ.ಎ.ವಿ.ನರಸಿಂಹ ಮೂರ್ತಿ

2) ಕಾಯಿನ್ಸ್ ಆಫ್ ವಿಜಯನಗರ ಎಂಪೈರ್ ಡಾ. ಗಿರಿಜಾಪತಿ ಎಂ. ಮತ್ತು ಗಣೇಶ್ ಕೆ.

3) ಸೌತ್ ಇಂಡಿಯನ್ ನ್ಯೂಮಿಸ್‌ಮ್ಯಾಟಿಕ್ ಸ್ಟಡೀಸ್ ಡಾ. ಮೈಕಲ್ ಮಿಷಿನರ್ ವಾಲ್ಯೂಂ 1

4) ಕಾಯಿನ್ಸ್ ಆಫ್ ವಿಜಯನಗರ ಎನ್.ಶಂಕರನಾರಾಯಣ

೫೪. ಹಂಪಿ ಪರಿಸರದ ಪಂಪಾಪತಿ (ವಿರೂಪಾಕ್ಷ) ದೇವಾಲಯಗಳು

ಡಾ. ವಾಸುದೇವ ಬಡಿಗೇರ

ಹಂಪಿ ಪರಿಸರದಲ್ಲಿ ಹರಿಯುತ್ತಿರುವ ತುಂಗಭದ್ರಾ ನದಿಗೆ ಪಂಪಾತೀರ್ಥವೆಂದು ಕರೆಯಲಾಗಿದೆ. ಈ ತೀರ್ಥದ ಆದಿ ದೇವತೆ ಪಂಪಾಂಬಿಕೆ, ಅವಳು ಉಗ್ರ ತಪಸ್ಸನ್ನು ಆಚರಿಸುವ ಮೂಲಕ ಶಿವನನ್ನು ವರಿಸುತ್ತಾಳೆ. ಆಗ ಇದು ಪಂಪಾಂಬಿಕೆ - ಪಂಪಾಪತಿಯ ಕ್ಷೇತ್ರವಾಗುತ್ತದೆ. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗುವ ಮುಂಚೆ ಸಾಂಸ್ಕೃತಿಕ ಕೇಂದ್ರವಾದ ಹಂಪಿಗೆ ವೀರೂಪಾಕ್ಷನೇ ಒಡೆಯನಾಗಿದ್ದ. ಕಲ್ಯಾಣದ ಚಾಲುಕ್ಯರಿಂದ ವಿಜಯನಗರ ಹಾಗೂ ಅನಂತರದ ಕಾಲಘಟ್ಟದಲ್ಲಿ ಅವನ ಹೆಸರಿನಲ್ಲಿ ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಅನೇಕ ದೇವಾಲಯಗಳು ನಿರ್ಮಾಣಗೊಂಡಿವೆ. ಈ ಪರಿಸರದ ವ್ಯಕ್ತಿಗಳಿಗೆ ಹಾಗೂ ದೇವಾಲಯಗಳಿಗೆ ಇತರ ಧಾರ್ಮಿಕ ಕಾರ್ಯಗಳಿಗೆ ದಾನ-ದತ್ತಿ ಬಿಡುವಾಗ, ಅದನ್ನು ಹಂಪಿಯ ವಿರೂಪಾಕ್ಷನ ಸನ್ನಿಧಿಯಲ್ಲಿ ಕೊಡಲಾಯಿತೆಂದು ಅನೇಕ ಶಾಸನಗಳಲ್ಲಿ ಹೇಳಿದೆ.

ಬಾದಾಮಿ ಚಾಲುಕ್ಯ ಮತ್ತು ರಾಷ್ಟ್ರಕೂಟರ ಶಾಸನಗಳಲ್ಲಿ ಪಂಪಾಪತಿ ಅಥವಾ ವಿರೂಪಾಕ್ಷನ ಉಲ್ಲೇಖವಿಲ್ಲ. ಆದರೆ ಪಂಪಾತಟ ಎಂದು ರೂಢಿಯಲ್ಲಿದ್ದುದು ಬಾದಾಮಿ ಚಾಲುಕ್ಯ ಅರಸ ವಿನಯಾದಿತ್ಯನ ಕ್ರಿ.ಶ. ೬೮೬ರ ತಾಮ್ರಪಟದಿಂದ ತಿಳಿಯುತ್ತದೆ.[೧] ಕ್ರಿ.ಶ. ೧೦೧೪ರ ಚಾಲುಕ್ಯ ಐದನೆಯ ವಿಕ್ರಮಾದಿತ್ಯನ ಶಾಸನದಲ್ಲಿ ಪಂಪಾ ತೀರ್ಥದ ಮಹಾಕಾಳದೇವರಿಗೆ ದಾನ ಬಿಡಲಾಗಿದೆ.[೨] ಇಲ್ಲಿ ಮಹಾಕಾಳ ದೇವರೆಂಬ ಹೆಸರು ಬಂದು ಸೇರಿತು. ಈ ಹೆಸರು, ಹಂಪಿಗೆ ವಿರೂಪಾಕ್ಷ ಮೊದಲೋ, ಮಹಾಕಾಳ ದೇವ ಮೊದಲೋ ಎಂದು ವಿದ್ವಾಂಸರ ವಿಮರ್ಶೆಗಳಿಗೂ ಒಳಗಾಯಿತು. ಡಾ. ದೇವರ ಕೊಂಡಾರೆಡ್ಡಿ ಅವರು ನೊಳಂಬ ಅರಸನ ಕಾಲದಲ್ಲಿ ಹಂಪೆಯಲ್ಲಿದ್ದುದು ಮಹಾ ಬಳದೇವರದ್ದು, ವಿರೂಪಾಕ್ಷ ಅಲ್ಲವೆಂದೂ, ಹಂಪೆಯಲ್ಲಿ ವಿರೂಪಾಕ್ಷನ ಮುಂಚೆ ಮಹಾಬಲದೇವರ ಪೂಜೆ ಇದ್ದು, ಮುಂದೆ ವಿರೂಪಾಕ್ಷನ ರೂಪಕ್ಕೆ ಹೆಚ್ಚಿನ ಆದ್ಯತೆ ಬಂದ ಮೇಲೆ ಮಹಾಬಳ ಎಂಬ ಹೆಸರು ಮಾಯವಾಗಿರಬೇಕು. ಇಂತ ಸ್ಥಳಗಳಲ್ಲಿ ಉಗ್ರರೂಪನ ಹೆಸರಿನ, ಅಂದರೆ ತ್ರಿನೇತ್ರನ ಹೆಸರಿನಲ್ಲಿ ಶಿವಲಿಂಗ ಸ್ಥಾಪನೆಯಾಗುತ್ತದೆ ಎಂದು ಹೇಳಿದ್ದಾರೆ.[೩] ಹಾಗಾದರೆ ನೊಳಂಬರ ಕಾಲದಲ್ಲಿ ಈಗಿರುವ ವಿರೂಪಾಕ್ಷ ದೇವಾಲಯ ಮಹಾಬಳದೇವನದಾಗಿತ್ತೆ ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಹೊಸಪೇಟೆ ತಾಲೂಕಿನ ಗೊನಹಾಳ ಶಾಸನ ಚಾಲುಕ್ಯ ಐದನೆಯ ವಿಕ್ರಮಾದಿತ್ಯನ ಕಾಲದಲ್ಲಿ ಅಂದರೆ ಕ್ರಿ.ಶ. ೧೦೧೪ರಲ್ಲಿ ರಚನೆಯಾದುದು. ಇದರ ಪಾಠ ಶ್ರೀ ವಿದಿಜಿವನೊಟಿಂಬಾಧಿರಾಜರ ... ಶ್ರೀ ... ವಬ್ಬರಸಿಯರು ಸ್ವಸ್ತಿ ಸಕವರ್ಷ ೯೩ (೬)ನೆಯ .. ತ್ಸರದ ಸ್ರಾವಣಮಾಸದೊಳ್ ಪಂಪಾ ... ಮಹಾಕಾಳದೇವರಿರ್ಗ್ಗೆ ಗೊಟ್ಟ ... ಪನ್ನಸು ಎಂದಿರುವುದು. ಈ ಪಾಠದಲ್ಲಿ ಮಹಾಬಲದೇವರ ಉಲ್ಲೇಖವೇ ಇಲ್ಲ. ಇದರಿಂದ ಪಂಪಾ ತೀರ್ಥದಲ್ಲಿ ಮೊದಲು ವಿರೂಪಾಕ್ಷನಿಗೆ ಮಹಾಬಳನೆಂಬ ಹೆಸರು ಅಥವಾ ಪೂಜೆ ಇರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ಗೊನಹಾಳ ಶಾಸನದಲ್ಲಿ ಉಲ್ಲೇಖವಾಗಿರುವುದು ಮಹಾಕಾಳದೇವರೆಂದು. ಇದು ಭೈರವನ ಇನ್ನೊಂದು ಹೆಸರು. ವೀರಯೋಧನಂತೆ ಕಾಣುವ ಭೈರವ ತ್ರಿಶೂಲ - ಡಮರು - ಖಡ್ಗ - ಕಪಾಲ (ಪಾತ್ರೆ)ಗಳನ್ನು ಹಿಡಿದು ನಾಯಿಯೊಂದಿಗೆ ಕಾಣಿಸಿಕೊಳ್ಳುತ್ತಾನೆ. ಈ ಭೈರವನ ಇನ್ನೊಂದು ರೂಪವೇ ಮೈಲಾರನೆಂದು ವಿದ್ವಾಂಸರು ಗುರುತಿಸಿದ್ದಾರೆ. ಈ ಕಾಲಾವಧಿಯಲ್ಲಿ ಹಂಪಿ ಪ್ರದೇಶದ ಕಂಪ್ಲಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕಲ್ಯಾಣದ ಚಾಲುಕ್ಯರ ಸಾಮಂತರಾಗಿ ಆಳ್ವಿಕೆ ಮಾಡಿದವರು ನೊಳಂಬರು. ಭೈರವನ ಆರಾಧಕರಾಗಿದ್ದ ನೊಳಂಬರು ಹಂಪಿ ಪ್ರದೇಶಕ್ಕೆ ಬಂದ ನಂತರ ಮೈಲಾರನ ಪೂಜೆ ಹೆಚ್ಚು ವಿಸ್ತೃತ ಪಡೆಯಿತು. ಪಂಪಾತೀರ್ಥದ ಮಹಾಕಾಳ ದೇವರಿಗೆ ದಾನ ನೀಡಿದ ಅವರು, ಮುಂದೆ ಮೂರು ವರ್ಷ ಕಳೆಯುವುದರಲ್ಲಿ ಶಿರಗುಪ್ಪಿ ತಾಲೂಕಿನ ತೆಕ್ಕಲಕೋಟೆ ಗ್ರಾಮದ ಮಲ್ಲಯ್ಯನ ಗುಡ್ಡದ ಮೈಲಾರನಿಗೆ ದಾನ ಕೊಟ್ಟಿದ್ದಾರೆ. ಕಲ್ಯಾಣ ಚಾಲುಕ್ಯ ಅರಸ ಜಗದೇಕಮಲ್ಲನ ಆಳ್ವಿಕೆಯ ಕ್ರಿ.ಶ ೧೦೧೭ರ ಶಾಸನದಲ್ಲಿ ಅವನ ಮಹಾ ಮಂಡಳೇಶ್ವರನಾದ ಇರುವನೊಳಂಬನು ನೊಳಂಬವಾಡಿ - ೩೨೦೦೦, ಕದಂಬಳಿಗೆ - ೧೦೦೦, ಕೋಗಳಿ - ೫೦೦, ಗಳನ್ನು ಆಳುತ್ತಿದ್ದನು. ಈಗ ಬಲ್ಲಕುಂದೆ ಮುನ್ನೂರ ರೊಳಗಿನ ಪಗರೆಯ ಸಿರಿಯನೂರನ್ನು ಶ್ರೀಮತ್ ಮೈಲಾರದೇವರಿಗೆ ಕೊಟ್ಟ ಉಲ್ಲೇಖವಿದೆ. [೪]

ಹಂಪಿ ಪರಿಸರದಲ್ಲಿ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಭೈರವ ಮತ್ತು ಮೈಲಾರನ ಆರಾಧನೆಯಂತೆ ವಿರೂಪಾಕ್ಷನ ಆರಾಧನೆ ಇರಲಿಲ್ಲವೆಂದು ಹೇಳುವುದು ಸಮಂಜಸ ವಾಗುವುದಿಲ್ಲ. ಕಾರಣ ಈ ಮೊದಲೆ ನಿರ್ಮಾಣವಾಗಿದ್ದ ಮೈಲಾರ ದೇವಾಲಯಕ್ಕೆ ನೊಳಂಬ ಅರಸ ದಾನ ಕೊಟ್ಟಿದ್ದಾನೆ. ಇದರಿಂದ ಅದಕ್ಕಿಂತ ಪೂರ್ವದಲ್ಲಿ ಮೈಲಾರನ ದೇವಾಲಯವಾಗಲಿ ಪೂಜೆಯಾಗಲಿ ಇರಲಿಲ್ಲವೆಂದು ಹೇಳಲಿಕ್ಕಾಗದು. ಇದೇ ಕಾಲಾವಧಿ ಯಲ್ಲಿ ಹಂಪಿ ಮತ್ತು ಇತರ ಸ್ಥಳಗಳಲ್ಲಿ ವಿರೂಪಾಕ್ಷನ ದೇವಾಲಯಗಳೂ ಇದ್ದವು.

ಸಿಂದರ ಎರಡನೆಯ ರಾಚಮಲ್ಲನ ಕ್ರಿ.ಶ. ೧೧೯೯ರ ಶಾಸನದಲ್ಲಿ ಪವಿತ್ರ ಕ್ಷೇತ್ರವಾದ ವಿರೂಪಾಕ್ಷ ತೀರ್ಥದ ರಕ್ಷಣಾರ್ಥವಾಗಿ ಸಾಮಂತ ಮಾದೆಯನಾಯಕನು

ಮತಂಗ ಪರ್ವತವನ್ನು ಪ್ರತಿಪಾಳಿಸುತ್ತಿದ್ದನು. ಇವನ ಕೈಕೆಳಗಿದ್ದ ಮೈದುನ ಚೌಡಯ್ಯ ಪಂಪಾದೇವಿಗೆ ಚೆಂಬೊನ್ನಿನ ಕಳಸವನ್ನು ಮಾಡಿಸಿ, ವಿರೂಪಾಕ್ಷ, ಪಂಪಾದೇವಿ ಹಾಗೂ ಭೈರವಗೃಹಗಳಿಗೆ ಸುಣ್ಣ ಬಳಿಸಿ, ಈ ದೇವಗೃಹಗಳಿಗೆ ಘಂಟೆ, ಅಡ್ಡಣಿಗೆ, ಆರತಿ, ಧೂಪಘಟ್ಟ, ಪರ್ಯಾಣ, ತಿಳಿವಟ್ಟಲು, ಚಂದನ, ಸುಗಂಧ, ಸಿಪ್ಪುಗಳಲ್ಲದೆ ಅನೇಕ ಉಪಕರಣಗಳನ್ನು ದಾನ ಕೊಟ್ಟನು.[೫] ಈ ಶಾಸನದಿಂದ ವಿರೂಪಾಕ್ಷ ಪಂಪಾದೇವಿಯೊಂದಿಗೆ ಭೈರವನ ಗುಡಿಯನ್ನು ಕಾಣುತ್ತೇವೆ. ಇದರಿಂದ ವಿರೂಪಾಕ್ಷನೊಂದಿಗೆ ಭೈರವನ ಆರಾಧನೆಯೂ ಇಲ್ಲಿತ್ತು ಎಂಬುದು ಸುಸ್ಪಷ್ಟ. ಅದೇ ರೀತಿಯಲ್ಲಿ ನೊಳಂಬ ಅರಸಿ ಪಂಪಾತೀರ್ಥದ ಮಹಾಕಾಳ ದೇವರಿಗೆ ದಾನ ಮಾಡಿರುವುದು ಕ್ರಿ.ಶ. ೧೦೧೪ರಲ್ಲಿ. ಮುಂದೆ ನಾಲ್ಕು ವರ್ಷಗಳ ನಂತರ, ಹಂಪಿಯ ಹತ್ತಿರದಲ್ಲಿರುವ ಕುಷ್ಟಗಿ ತಾಲೂಕಿನ ಪುರ ಗ್ರಾಮದ ಕ್ರಿ.ಶ ೧೦೧೮ರ ಶಾಸನದಲ್ಲಿ, ಚಾಲುಕ್ಯ ಅರಸ ಜಗದೇಕಮಲ್ಲನ ದಂಡನಾಯಕ (ಹೆಸರು ಹಾಳಾಗಿದೆ) ಅಗ್ರಹಾರ ಬೈಳನಗೆಯೂರಿನ ಮುಖ್ಯಸ್ಥನಾದ ಕೊಣ್ಣಯವಾರಿ ಅಯ್ಯನಯ್ಯನಿಗೆ ಪಂಪಾತೀರ್ಥದ ವಿರೂಪಾಕ್ಷ ದೇವರ ಸನ್ನಿಧಿಯಲ್ಲಿ ಐದು ಮತ್ತರು ಗದ್ದೆದಾನ ನೀಡಿದ ಉಲ್ಲೇಖವಿದೆ.[೬] ಈ ನಾಲ್ಕು ವರ್ಷಗಳಲ್ಲಿ ದೇವರಕೊಂಡಾರೆಡ್ಡಿಯವರು ಹೇಳುವಂತೆ ಮಹಾಬಲದೇವ ವಿರೂಪಾಕ್ಷನಾಗಿ ಮತ್ತು ಡಾ. ಎಂ.ಎಂ. ಕಲಬುರ್ಗಿಯವರ ಅಭಿಪ್ರಾಯದಂತೆ ವೀರಭದ್ರ - ವೀರಪಚ್ಚ - ವಿರೂಪಾಕ್ಷನಾಗಿ ಸಾಂಸ್ಕೃತಿಕರಣಗೊಂಡನೆಂಬುದು ಅಪ್ರಸ್ತುತವೆನಿಸುತ್ತದೆ. ವಿಜಯನಗರ ಕಾಲದಲ್ಲಿ ಪಂಪಾತೀರ್ಥ ಅಥವಾ ತುಂಗಭದ್ರ ತೀರದಲ್ಲಿ ಅನೇಕ ದೇವಾಲಯಗಳು ನಿರ್ಮಾಣವಾಗಿರುವುದನ್ನು ಕಾಣುತ್ತೇವೆ. ಇದು ಪವಿತ್ರ ಕ್ಷೇತ್ರ ಎಂಬ ಭಾವನೆಯಿಂದ ಇಂಥ ನಿರ್ಮಾಣಗಳು ವಿಜಯನಗರ ಪೂರ್ವದಲ್ಲಿಯೂ ನಡೆದು ಬಂದಿತ್ತು. ಆದ್ದರಿಂದ ಪಂಪಾತೀರ್ಥದಲ್ಲಿ ವೀರೂಪಾಕ್ಷ ಮಾತ್ರವಲ್ಲದೇ ಇತರ ದೇವತೆಗಳ ಹೆಸರೂ ಉಲ್ಲೇಖವಾಗಿರುವುದು ಸಹಜ. ಕ್ರಿ.ಶ. ೧೫೬೩ರ ಶಾಸನದಲ್ಲಿ ಸದಾಶಿವರಾಯನು ಬೆಳಗಲ್ಲು ಸಿದ್ಧೇಶ್ವರ ದೇವರ ಅರ್ಚನಾವೃತ್ತಿಗೆ ದಾನ ಕೊಡುವಾಗ, ಶ್ರೀ ತುಂಗಭದ್ರ ತೀರದ ಶ್ರೀ ವಿರುಪಾಕ್ಷ - ವಿಠಲರ ಸನ್ನಿಧಿಯಲ್ಲಿ ಸಮರ್ಪಿಸಿದೆ ಎಂದು ಹೇಳಲಾಗಿದೆ.[೭] ಇದರಿಂದ ವಿಠಲ ದೇವಾಲಯ ಅನಂತರ ನಿರ್ಮಾಣವಾಗಿದ್ದರೂ ತುಂಗಭದ್ರಾ ತೀರದ ಪ್ರಮುಖ ದೇವತೆಯಾಗಿ ಗುರುತಿಸಿಕೊಂಡಿರುವುದನ್ನು ಗಮನಿಸಬಹುದು. ಆದ್ದರಿಂದ ಪ್ರಾಚೀನ ಶಾಸನ ಮಹಾಕಾಳದೇವರನ್ನು ಉಲ್ಲೇಖಿಸಿದ್ದರಿಂದ ವಿರೂಪಾಕ್ಷನ ಆರಾಧನೆ ಇರಲಿಲ್ಲವೆಂದು ಹೇಳುವುದು ಸರಿಯಾದ ಸಂಶೋಧನೆಯಾಗುವುದಿಲ್ಲ.

ಹಂಪಿ ಪರಿಸರದಲ್ಲಿ ಪಂಪಾದೇವಿ, ಪಂಪಾಪತಿ ಅಥವಾ ವಿರೂಪಾಕ್ಷ, ಮಹಾಕಾಳ ದೇವ ಅಥವಾ ಭೈರವ, ಮೈಲಾರದೇವ ಜನಪದರ ದೈವಗಳಾಗಿ ಪೂಜೆಗೊಳ್ಳುತ್ತಿದ್ದವು. ಕಲ್ಯಾಣದ ಚಾಲುಕ್ಯರ ಮಹಾಮಂಡಳೇಶ್ವರರಾಗಿ ಪ್ರಸಿದ್ಧಿಗೆ ಬಂದ ನೊಳಂಬರ

ಕಾಲದಲ್ಲಿ ಈ ದೈವಗಳಿಗೆ ರಾಜಾಶ್ರಯ ದೊರೆತು ಅನೇಕ ದಾನ -ದತ್ತಿಗಳನ್ನು ಬಿಡುವ ಮೂಲಕ ಶ್ರೀಮಂತಿಕೆಯನ್ನು ಪಡೆದವು. ವಿಜಯನಗರ ಕಾಲದಲ್ಲಿ ವಿರೂಪಾಕ್ಷ, ಮೈಲಾರನ ಆರಾಧನೆ ಮುಂದುವರೆದು, ಭೈರವನ ಸ್ಥಾನದಲ್ಲಿ ವೀರಭದ್ರ ಕಾಣಿಸಿಕೊಳ್ಳುತ್ತಾನೆ. ಆದರೂ ವಿಜಯನಗರ ಕಾಲಾವಧಿಯಲ್ಲಿ ನಿರ್ಮಾಣವಾದ ಭೈರವನ ವಿಗ್ರಹಗಳು ಅಲ್ಲಲ್ಲಿ ಕಂಡು ಬರುತ್ತವೆ. ಗೋವಾ ಪ್ರದೇಶದಲ್ಲಿ ಕಾಣುವಂತೆ, ಇಲ್ಲಿಯೂ ಭೈರವನ ಪೀಠದ ಮೇಲೆ ಚೇಳಿನ ಚಿತ್ರಣಗಳಿವೆ.

ಪಂಪಾತೀರ್ಥದ ವಿರೂಪಾಕ್ಷನ ಸನ್ನಿಧಿಯಲ್ಲಿ ಬಿಟ್ಟ ದಾನ - ದತ್ತಿ : ಈ ಪ್ರದೇಶದ ಸುತ್ತಮುತ್ತಲಿನ ದಾನ-ದತ್ತಿಗಳನ್ನು ಪವಿತ್ರ ಕ್ಷೇತ್ರವಾಗಿದ್ದ ಹಂಪಿ ವಿರೂಪಾಕ್ಷನ ಸನ್ನಿಧಿಯಲ್ಲಿ ಬಿಡಲಾಗಿದೆ. ಇದು ೧೧ನೆಯ ಶತಮಾನದಿಂದ ಶಾಸನಗಳಲ್ಲೂ ದಾಖಲಾಗಿ ಉಳಿದಿದೆ. ಈ ರೀತಿಯ ಶಾಸನಗಳ ಉಲ್ಲೇಖ ಕಲ್ಯಾಣದ ಚಾಲುಕ್ಯ ಅರಸ ಜಗದೇಕಮಲ್ಲನ ಕಾಲದಿಂದ ಆರಂಭವಾಗಿರುವುದನ್ನು ಕಾಣುತ್ತೇವೆ. ಕ್ರಿ.ಶ. ೧೦೧೮ರಲ್ಲಿ ವಿಕೃತ ಸಂವತ್ಸರ ಕಾರ್ತಿಕ ಪೂರ್ಣಿಮೆ ಆದಿವಾರದಂದು ಸೋಮಗ್ರಹಣ ನಿಮಿತ್ಯ ಅಗ್ರಹಾರ ಬೈಳನಗೆಯೂರಿನ ಊರೊಡೆಯ ಕೊಣ್ಡಯವಾರಿ ಅಯ್ಯನಯ್ಯನಿಗೆ ಪಂಪಾತೀರ್ಥದ ವಿರೂಪಾಕ್ಷನ ಸನ್ನಿಧಿಯಲ್ಲಿ ಗದ್ದೆ ದಾನ ಕೊಡಲಾಗಿದೆ. ಇದೇ ಅವಧಿಯ ಬಾಗಳಿ ಶಾಸನದಲ್ಲಿ, ನೊಳಂಬಪಲ್ಲವ ಉದಯಾದಿತ್ಯದೇವ ಕಂಪಿಲಿಯಲ್ಲಿ ಆಳ್ವಿಕೆ ಮಾಡುತ್ತಿರುವಾಗ, ಉತ್ತರಾಯಣ ಸಂಕ್ರಾಂತಿಯಂದು ಪಂಪಾತೀರ್ಥಕ್ಕೆ ಬಂದಾಗ, ಅವನ ಅಪ್ಪಣೆಯಂತೆ ಪೆರ್ಗ್ಗಡೆ ನರಸಿಂಘಯ್ಯನು ಬಾಗಳಿಗೆ ಬಂದು ಸೋಮಸಿಂಗ ಬಳಾರರ ಪಾದ ತೊಳೆದು, ಕಲ್ಲಿಯ ಕಲಿದೇವರಿಗೆ, ತಪೋಧನರ ಸತ್ರಕ್ಕೆ, ಛಾತ್ರ ಭೋಜನಕ್ಕೆ, ಸೂಳೆಯರಿಗೆ ಮತ್ತು ಪರೆಕಾರರಿಗೆ ದಾನ ಕೊಟ್ಟಿದ್ದಾನೆ.[೮] ಇಲ್ಲಿ ಪಂಪಾ ತೀರ್ಥವೆಂದು ಮಾತ್ರ ಉಲೇಖವಾಗಿದ್ದರಿಂದ ಡಾ. ದೇವರಕೊಂಡಾರೆಡ್ಡಿ ಅವರು ಕ್ರಿ.ಶ. ೧೦೨೦ರಲ್ಲಿ ಹಂಪಿಯಲ್ಲಿ ಇದ್ದ ದೇವಾಲಯದ ಮಹಾಬಳದೇವರದ್ದು, ವಿರೂಪಾಕ್ಷ ಅಲ್ಲ. ಈ ಕಾಲಕ್ಕೆ ಹಂಪೆಯಲ್ಲಿನ ಬೆಟ್ಟಗಳೂ ಅಷ್ಟು ಪ್ರಾಮುಖ್ಯ ಪಡೆದಿರಲಿಲ್ಲವೆಂದು ಹೇಳುತ್ತಾರೆ.[೯] ಆದರೆ ಪುರ ಶಾಸನದಲ್ಲಿ ಪಂಪಾತೀರ್ಥರ ವಿರೂಪಾಕ್ಷನೆಂದು ಸ್ಪಷ್ಟ ದಾಖಲೆ ಇದೆ. ಪುರದ ಶಾಸನ ಇತ್ತೀಚೆಗೆ ಬೆಳಕಿಗೆ ಬಂದಿದ್ದರೂ, ಒಂದು ಪ್ರಸಿದ್ಧ ಕ್ಷೇತ್ರದ ದೇವತೆ ಏಕಕಾಲಕ್ಕೆ ಶಾಸನ ಉಲ್ಲೇಖವಾದಾಗ ಹೆಸರು ಬದಲಾವಣೆಗೊಂಡು ವಿಸ್ತೃತ ರೂಪ ಪಡೆದುಕೊಳ್ಳುತ್ತದೆ ಎಂಬ ಸಂಶೋಧಕನ ಆಲೋಚನೆ ಸೂಕ್ತವಾದುದಲ್ಲ. ಕ್ರಿ.ಶ. ೧೦೪೬ರ ಮೊರಗೇರಿಯ ಶಾಸನದಲ್ಲಿ, ತ್ರೈಲೋಕ್ಯಮಲ್ಲ ನನ್ನಿನೊಳಂಬ ಪಲ್ಲವ ಪೆರ್ಮಾನಡಿದೇವನ ದಂಡನಾಯಕ ತಿಕ್ಕಣ್ಣಿ ಮತ್ತು ಲೆಂಕಸಾಸಿರ್ವರು ಮೊರಗೇರಿಯಲ್ಲಿಯ ಭೂಮಿಯನ್ನು ಬಲ್ಲವರಸರಿಂದ ಪಡೆದು, ವ್ಯಯಸಂವತ್ಸರದ ಕಾರ್ತ್ತಿಕ ಪುಣ್ಣಿಮೆ ಸೋಮಗ್ರಹಣದಂದು

ವಿರೂಪಾಕ್ಷದೇವರ ಸಮಕ್ಷಮದಲ್ಲಿ ನೊಳಂಬೇಶ್ವರ ದೇವರಿಗೆ, ವಿದ್ಯಾಭ್ಯಾಸಕ್ಕೆ ಮುಂತಾದವುಗಳಿಗೆ ಸೋಮೇಶ್ವರಪಂಡಿತರ ಪಾದ ತೊಳೆದು ದಾನ ಕೊಡುತ್ತಾರೆ. [೧೦] ಕ್ರಿ.ಶ. ೧೧೬೩ರ ಕುಕನೂರು ಶಾಸನದಲ್ಲಿ, ಸುಭಾನು ಸಂವತ್ಸರದ ಪುಷ್ಯ ಪುಣ್ಣಿಮೆ ಬೃಹಸ್ಪತಿವಾರ ಸೋಮಗ್ರಹಣದಂದು ಹಲವು ಬಾಡಗಳ ಅಧಿಕಾರಿ, ಮಹಾಪ್ರಧಾನರು ಸೇರಿ ಕಲಚುರಿ ಬಿಜ್ಜಳದೇವನಲ್ಲಿ ಬಿನ್ನಹವನ್ನು ಮಾಡಿಕೊಂಡು ಹಂಪಿಯ ವಿರೂಪಾಕ್ಷದೇವರ ಸನ್ನಿಧಿಯಲ್ಲಿ ಎಡೆಹಳ್ಳಿಯನ್ನು ಪುನರ್ದತ್ತಿಯಾಗಿ ಪಡೆದು, ಕುಕನೂರು ಮಲ್ಲಿಕಾರ್ಜುನ ದೇವರಿಗೆ ಮತ್ತು ೧೫ ಜನ ಬ್ರಾಹ್ಮಣರಿಗೆ ದಾನ ಕೊಡಲಾಗಿದೆ. [೧೧]

ಪಂಪಾತೀರ್ಥದ ವಿರೂಪಾಕ್ಷನ ಸನ್ನಿಧಿಯಲ್ಲಿ ಬಿಡುವ ದಾನ - ದತ್ತಿಗಳು ವಿಜಯನಗರ ಕಾಲದಲ್ಲಿಯೂ ಮುಂದುವರೆಯಿತು. ಇನ್ನೂ ಕೆಲವು ಶಾಸನಗಳ ಆರಂಭದಲ್ಲಿ ಶ್ರೀ ವಿರೂಪಾಕ್ಷ, ವಿರೂಪಾಕ್ಷ ಗಣಾಧಿಪತಿ ಎಂದೂ ಮತ್ತು ಶಾಸನಗಳ ಕೊನೆಯಲ್ಲಿ ವಿರೂಪಾಕ್ಷ, ವಿರೂಪಾಕ್ಷನೆ ಗತಿ ಎಂದೂ ಬರೆಯಲಾಗಿದೆ.

ಸಾಮಾನ್ಯವಾಗಿ ದಾನ - ದತ್ತಿಗಳನ್ನು ಹುಣ್ಣಿಮೆ, ಅಮಾವಾಸ್ಯ, ಸಂಕ್ರಾಂತಿ ಮತ್ತು ಗ್ರಹಣ ಮುಂತಾದ ಪ್ರಮುಖ ದಿನಗಳಂದು ಬಿಟ್ಟಿರುವುದನ್ನು ಶಾಸನಗಳು ಉಲ್ಲೇಖಿಸುತ್ತವೆ. ವಿರೂಪಾಕ್ಷನ ಸನ್ನಿಧಿಯಲ್ಲಿ ಬಿಟ್ಟ ಹೆಚ್ಚಿನ ದಾನಗಳು ಚಂದ್ರಗ್ರಹಣದಂದು. ಈ ಕ್ಷೇತ್ರವನ್ನು ಪಂಪಾತೀರ್ಥದಂತೆ ಭಾಸ್ಕರತೀರ್ಥವೆಂದೂ ಕರೆಯಲಾಗಿದೆ. ಇದರಿಂದ ವಿರೂಪಾಕ್ಷನನ್ನು ಭಾಸ್ಕರ ಅಥವಾ ಸೂರ್ಯನ ರೂಪದಲ್ಲಿಯೂ ಪೂಜಿಸುತ್ತಿದ್ದರೆಂದು ವಿದ್ವಾಂಸರು ತರ್ಕಿಸುತ್ತಾರೆ. ಇದಕ್ಕೆ ಹೆಚ್ಚಿನ ಆಧಾರಗಳು ಬೇಕಾಗುತ್ತವೆ.

ಪಂಪಾಪತಿ (ವಿರೂಪಾಕ್ಷ) ದೇವಾಲಯ : ಹಂಪಿಯಲ್ಲಿ ಪ್ರಸ್ತುತ ಮುಖ್ಯ ವಿರೂಪಾಕ್ಷ ದೇವಾಲಯವನ್ನೊಳಗೊಂಡಂತೆ ಹೇಮಕೂಟದಲ್ಲಿ ಮೂಲ ವಿರೂಪಾಕ್ಷ ಮತ್ತು ಭೂ ಮಟ್ಟದ ಪ್ರಸನ್ನ ವಿರೂಪಾಕ್ಷವೆಂಬ ಒಟ್ಟು ಮೂರು ಗುಡಿಗಳಿವೆ. ಕ್ರಿ.ಶ. ೧೦೧೮ರಲ್ಲಿ ಪಂಪಾತೀರ್ಥದ ವಿರೂಪಾಕ್ಷನ ಉಲ್ಲೇಖ ಬಂದಿರುವುದರಿಂದ ಬಹು ಹಿಂದೆಯೇ ವಿರೂಪಾಕ್ಷ ದೇವಾಲಯ ನಿರ್ಮಾಣವಾಗಿತ್ತೆಂದು ಹೇಳಬಹುದು. ೧೧-೧೨ನೆಯ ಶತಮಾನದ ವೇಳೆಗೆ ಇವನ ಪ್ರಭಾವ ಹಂಪಿಯ ಸುತ್ತಮುತ್ತಲಿನಲ್ಲಿ ಆಗಿರುವುದಕ್ಕೆ ಈ ಹೆಸರಿನ ಅನೇಕ ದೇವಾಲಯಗಳ ನಿರ್ಮಾಣದಿಂದ ವ್ಯಕ್ತವಾಗುತ್ತದೆ. ಹಂಪಿಗೆ ಹತ್ತಿರದಲ್ಲಿ ರಾಣೆಬೆನ್ನೂರು ತಾಲೂಕಿನ ಇಟಗಿಯಲ್ಲಿ ಕ್ರಿ.ಶ. ೧೦೬೯ರ ಮುಂಚೆ ವಿರೂಪಾಕ್ಷ ದೇವಾಲಯ ನಿರ್ಮಾಣವಾಗಿತ್ತು. ಈ ವಿರೂಪಾಕ್ಷ ದೇವರ ಸ್ನಾನ, ನೈವೇದ್ಯಕ್ಕೆ ೧೦೬೯ರಲ್ಲಿ ಭೂದಾನ ನೀಡಿದ ಉಲ್ಲೇಖ ಅಲ್ಲಿಯ ಶಾಸನದಲ್ಲಿದೆ. ಮುಂದೆ ರಾಯಮುರಾರಿ ಸೋವಿದೇವನ ಕಾಲದಲ್ಲಿ ಮತ್ತೊಮ್ಮೆ ದಾನ ಬಿಡಲಾಗಿದೆ. ಕ್ರಿ.ಶ. ೧೧೪೯ರಲ್ಲಿ ಓರವಾಯಿ (ಬಳ್ಳಾರಿ ತಾಲೂಕು)ಯ ಕಾಚರಸ, ಗಂಗರಸ, ದೊರವದಿನಾಡ

ಲೋಕರಸ, ಲಖ್ಖೆಯನಾಯಕ, ಅವನ ಸಹೋದರರಾದ ಮಾದೆಯನಾಯಕ ಮತ್ತು ಆಚೆಯನಾಯಕ, ದೊರವದಿ - ೭೦ರ ಪ್ರಭುಗಾವುಂಡರು ಸೇರಿ ಕೂತನೂರಿನಲ್ಲಿ ವಿರೂಪಾಕ್ಷ ಹಾಗೂ ಕುರುಗೋಡಿನಲ್ಲಿ ಭೋಗೇಶ್ವರ ದೇವಾಲಯಗಳನ್ನು ಕಟ್ಟಿಸಿ ಚಳೇಶ್ವರ ಪಂಡಿತನ ಮಗ ಭೀಮರಾಶಿಪಂಡಿತನ ಕಾಲು ತೊಳೆದು ಭೂದಾನ ಕೊಟ್ಟಿದ್ದಾರೆ. [೧೨]

ಹರಪನಹಳ್ಳಿ ತಾಲೂಕಿನ ಬೆಣ್ಣೆಹಳ್ಳಿ ಗ್ರಾಮದಲ್ಲಿ ಪ್ರಾಚೀನ ಕಾಲದ ಪಂಪಾಪತಿ ದೇವಾಲಯವಿದೆ. ಈ ದೇವಾಲಯಕ್ಕೆ ಹೊಯ್ಸಳರ ಕಾಲದಲ್ಲಿ ಅನೇಕ ದಾನ - ದತ್ತಿಗಳನ್ನು ಬಿಟ್ಟಿರುವುದರಿಂದ, ಇದು ಚಾಲುಕ್ಯರ ಕಾಲದಲ್ಲಿಯೇ ನಿರ್ಮಾಣವಾಗಿರಬಹುದು. ಈ ದೇವಾಲಯದ ಕಂಬದಲ್ಲಿ ನಾಲ್ಕು ಶಾಸನಗಳಿವೆ. ಹೊಯ್ಸಳ ವೀರನರಸಿಂಹನ ಕಾಲದ ಕ್ರಿ.ಶ. ೧೧೯೭ರ ಶಾಸನದಲ್ಲಿ, ಉತ್ತರಕ್ಕೆ ಹೆಗ್ಗಡೆ, ಜನಯ್ಯ ಹೆಗ್ಗಡೆಗಳು ವಿರೂಪಾಕ್ಷನ ಲಕ್ಷದಡುಗೆಗೆ, ನೈವೆದ್ಯಕ್ಕೆ ಹಾಗೂ ಬ್ರಾಹ್ಮಣರ ಭೋಜನಕ್ಕೆ ಮೂಲಿಗದರೆ, ಪಂಚಕರುದರೆ, ಮಗ್ಗದರೆ, ಗಾಣದರೆ ಮುಂತಾದ ಕಿರುದರೆಗಳನ್ನು ಕೋಗಳಿನಾಡ ಪ್ರಭುಗಳ ಮುಂದೆ ಚಂಡೇಶ್ವರ ದೇವರಿಗೆ ಬಿಟ್ಟಿದ್ದಾರೆ. [೧೩] ಕ್ರಿ.ಶ. ೧೨೮೨ ರಲ್ಲಿ ಬೆಣ್ಣೆವೂರು ವಿರೂಪಾಕ್ಷದೇವರ ಪೂಜಾರ್ಥ, ೧೨ ಜನರ ಭೋಜನಕ್ಕೆ ಉತ್ತಮ ಹಸರು ಮತ್ತು ಎಮ್ಮೆಗಳನ್ನು ದಾನ ಬಿಡಲಾಗಿದೆ. [೧೪] ಅದೆ ಅವಧಿಯಲ್ಲಿ ಸೂರಭೋವನ ಮಗ ಮಯದಭೋವ, ಸೌದರೆಯ ಬೀರಭೋವನ ಮಗ ಹೆಗ್ಗಡೆ, ನಂನಭೋವನ ಮಗ ಅಯಭೋವ, ಚಿಗಟಗೆರೆಯ ಚಂದಭೋವ, ಹೊಳಗುಂದೆಯ ಗುಂಡಭೋವ, ಕೋಗಳಿಯ ನಂದಿಭೋವ, ಸೂರೆಯಸೋಮೆಯ ಸಾವಂತನ ಮಗ ಮಸನೆಯ ಸಾವಂತ ಇವರೆಲ್ಲರೂ ಸೇರಿ ಬೆಣ್ಣೆನೂರ ಸ್ಥಳದಲ್ಲಿ ಮಹಾನಾಡಾಗಿ ನೆರೆದು, ಆ ಊರ ಶ್ರೀ ಸ್ವಯಂಭು ವಿರೂಪಾಕ್ಷನಿಗೆ, ೧೨ ಮಹಾಜನರಿಗೆ ತಮ್ಮ ಬಿಲುವಡಿಕೆ ಮುಖ್ಯವಾಗಿ ಕಬ್ಬಲದಡಿಕೆಯ ಆದಾಯವನ್ನು ಸರ್ವನಮಸ್ಯವಾಗಿ ಬಿಟ್ಟಿದ್ದಾರೆ. [೧೫] ವೀರಪಾಂಡ್ಯದೇನನು ಉಚ್ಚಂಗಿಯಲ್ಲಿ ಆಳುತ್ತಿದ್ದಾಗ, ಬಾಡಬೆಣ್ಣೆವೂರ ಮಲ್ಲರಸ ಮತ್ತು ಕೊಟ್ಟೂರಿನ ರಾಮದೇವರು ವಿರೂಪಾಕ್ಷನಿಗೆ ಕೆಲವು ಸಾಮ್ಯಗಳನ್ನು ಬಿಟ್ಟಿದ್ದಾರೆ. [೧೬] ಅದೆ ದೇವಾಲಯ ದಲ್ಲಿರುವ ವೀರರಾಮಚಂದ್ರದೇವನ ಕ್ರಿ.ಶ. ೧೨೮೦ರ ಶಾಸನದ ಕೊನೆಯಲ್ಲಿ ಶ್ರೀ ವಿರೂಪಾಕ್ಷ ಎಂದು ಬರೆಯಲಾಗಿದೆ. [೧೭] ಈ ಎಲ್ಲ ಶಾಸನಗಳ ಉಲ್ಲೇಖಗಳಿಂದ ೧೧-೧೨ನೆಯ ಶತಮಾನದಲ್ಲಿ ಇದು ಈ ಭಾಗದ ಪ್ರಮುಖ ದೇವಾಲಯವಾಗಿರುವುದನ್ನು ಗಮನಿಸಬಹುದು.

ಕಲ್ಯಾಣದ ಚಾಲುಕ್ಯ ಶೈಲಿಯಲ್ಲಿ ನಿರ್ಮಾಣವಾದ ಪಂಪಾಪತಿ ದೇವಾಲಯಗಳು ಹಂಪಿ ಪರಿಸರದ ಹನಮನಹಳ್ಳಿ, ಕನಕಗಿರಿ ಮತ್ತು ಗಿರಿಗೆರೆಗಳಲ್ಲಿವೆ. ಹಂಪಿಯ

ತುಂಗಭದ್ರಾ ನದಿಯ ಎಡದಂಡೆಯ ಮೆಲೆ ಆಂಜನಾದ್ರಿ ಮತ್ತು ಹನುಮನಹಳ್ಳಿ ಹತ್ತಿರದಲ್ಲಿ ಗರ್ಭಗೃಹ, ಅರ್ಧಮಂಟಪ, ಸಭಾಮಂಟಗಳಿಂದ ಕೂಡಿದ ಪಂಪಾಪತಿ ದೇವಾಲಯವಿದೆ. ಇದೆ ಮಾದರಿಯಲ್ಲಿರುವ ಕನಕಗಿರಿಯ ಪಂಪಾಪತಿ ದೇವಾಲಯಕ್ಕೆ ಗರ್ಭಗೃಹದ ಮೇಲೆ ಕದಂಬನಾಗರ ಶಿಖರವಿದೆ. ಶಿರಿಗೆರೆಯಲ್ಲಿ ಈ ಹೆಸರಿನ ದೇವಾಲಯ ಹಾಳಾಗಿದ್ದು, ಗರ್ಭಗೃಹ ಮತ್ತು ಅಂತರಾಳ ಮಾತ್ರ ಉಳಿದುಕೊಂಡಿದೆ.

ವಿಜಯನಗರ ಕಾಲಾವಧಿಯಲ್ಲಿ ನಿರ್ಮಾಣವಾದ ಪಂಪಾಪತಿ ದೇವಾಲಯಗಳು ಕುರೆಕುಪ್ಪ, ಕಂಪ್ಲಿ, ಕನಕಗಿರಿ, ಹಳೆ ಅಯೋಧ್ಯ, ಚಿಕ್ಕಜಂತಕಲ್ಲು, ಹಿರೇಜಂತಕಲ್ಲು ಮತ್ತು ಹಚ್ಚೊಳ್ಳಿ ಗ್ರಾಮಗಳಲ್ಲಿವೆ.

ಸಂಡೂರು ತಾಲ್ಲೂಕಿನ ಕುರೆಕುಪ್ಪ ಗ್ರಾಮದಲ್ಲಿ ನಿರ್ಮಾಣವಾದ ವಿರೂಪಾಕ್ಷ ದೇವಾಲಯ ವಿಜಯನಗರ ಶೈಲಿಯಲ್ಲಿದೆ. ಇದು ಗರ್ಭ ಗೃಹ ಹಾಗೂ ವಿಶಾಲವಾದ ಸಭಾಮಂಟಪಗಳಿಂದ ಕೂಡಿದೆ. ಸಭಾಮಂಟಪದ ಕಂಬದ ಮೇಲಿರುವ ವಿಜಯನಗರ ಅರಸರ ಕೃಷ್ಣದೇವರಾಯನ ಕಾಲದ ಕ್ರಿ.ಶ. ೧೫೨೩ರ ಶಾಸನದಲ್ಲಿ, ಅನಂತಸೇತು ಎಂಬ ಪ್ರತಿನಾಮದ ಕುರೆಕುಪ್ಪದಲ್ಲಿ ಹೆಗ್ಗರಸರ ಮಕ್ಕಳು ಘಳಿಯಾರದ ಬಾಗಿಲ ಬೆನಕರಸರು ದೇವಾಲಯವನ್ನು ಕಟ್ಟಿಸಿ, ವಿರೂಪಾಕ್ಷ ದೇವರ ಪ್ರತಿಷ್ಠೆಯನು ಮಾಡಿ, ಆ ದೇವರ ನೈವೆದ್ಯ, ಪೂಜೆ ಪುನಸ್ಕಾರ ನಿತ್ಯ ಸೇವೆಗಳಿಗೆ ಬಸವಾದಿ ದೀಕ್ಷಿತರ ಆಗ್ನಾ ಕ್ರಯದ ವೃತ್ತಿಗಳೊಳಗೆ ಮಹಾಜನಗಳ ಕೈಯಲ್ಲಿ ಕ್ರಮ ದಾನವಾಗಿ ಕೊಂಡು ಧಾರಾ ಪೂರ್ವಕವಾಗಿ ಸಮರ್ಪಿಸಿದರೆಂದಿದೆ. [೧೮]

ತುಂಗಭದ್ರ ನದಿಯ ಎಡದಂಡೆಯ ಮೇಲೆ ನಿರ್ಮಾಣವಾಗಿರುವ ಕಂಪ್ಲಿಯ ಪಂಪಾಪತಿ ದೇವಾಲಯ ವಿಜಯನಗರ ಶೈಲಿಯಲ್ಲಿದೆ. ದ್ವಿಕೂಟಾಚಲದಲ್ಲಿದ್ದು, ಎರಡು ಗರ್ಭಗೃಹ, ಸಭಾಮಂಟಪ ಮತ್ತು ಮುಖ ಮಂಟಪಗಳಿಂದ ಕೂಡಿದೆ. ಸುತ್ತಲೂ ಪ್ರಾಕಾರದ ಗೊಡೆ, ಪ್ರವೇಶ ಗೋಪುರದ ಇಕ್ಕೆಲಗಳಲ್ಲಿ ಜಗತಿಗಳು ಮಾತ್ರ ಉಳಿದಿವೆ. ದೇವಾಲಯದ ಆವರಣದಲ್ಲಿ ಕ್ರಿ.ಶ. ೧೫೫೨ರ ಶಾಸನವಿದೆ. ಅದರಲ್ಲಿ ಅದವಾನಿಯ ಮೂಡನಾಡ ಸುಂಕದ ಬನದರಸನ ಮಗನಾದ ಕರಿಬೇಡ ಸಂಕರಸನು ಕಂಪ್ಲಿ ಮಾಗಣೆಯ ವಿರೂಪಾಕ್ಷದೇವರ ಗುಡಿಯಲ್ಲಿ ಹಂಪಾದೇವಿಗಾಗಿ ಒಂದು ಅಂಕಣ ಕಲ್ಲು ಮಾಳಿಗೆಯನ್ನು ಕಟ್ಟಿಸಿ, ದೇವಿಯ ಪೂಜೆಗಾಗಿ ಕರಬೇಡ ಅಗ್ರಹಾರದ ಉತ್ತಳೆಯಲ್ಲಿ ಕೆಲವು ವೃತ್ತಿಗಳನ್ನು ದಾನ ನೀಡಿದ ಉಲ್ಲೇಖವಿದೆ. [೧೯]

ಗಂಗಾವತಿ ತಾಲೂಕಿನ ಹಿರೇಜಂತಕಲ್ಲು ಗ್ರಾಮದಲ್ಲಿ ಬೃಹತ್ ಪ್ರಮಾಣದ ವಿರೂಪಾಕ್ಷ ದೇವಾಲಯವಿದೆ. ಅದು ವಿಶಾಲವಾದ ಪ್ರಾಕಾರದಲ್ಲಿ ಗರ್ಭಗೃಹ, ಅಂತರಾಳ, ಸಭಾಮಂಟಪ ಹಾಗೂ ಮಹಾಮಂಟಪಗಳಿಂದ ಕೂಡಿದೆ. ಗರ್ಭಗೃಹದಲ್ಲಿ ಸುಮಾರು ಮೂರು ಅಡಿ ಎತ್ತರದ ಶಿವಲಿಂಗ, ಸಭಾಮಂಟಪದಲ್ಲಿ ಆರು ಅಡಿ ಎತ್ತರವ

ನಂದಿ ಮತ್ತು ಬೃಹತ್‌ಗಾತ್ರದ ದ್ವಾರಪಾಲಕ ವಿಗ್ರಹಗಳಿವೆ. ಇದು ವಾಸ್ತುಶಿಲ್ಪ ರಚನೆಯಲ್ಲಿ ಹಂಪಿಯ ದೇವಾಲಯಗಳಿಗೆ ಸರಿಸಮನಾಗಿದೆ.

ಈ ಪ್ರಮುಖ ದೇವಾಲಯಗಳಲ್ಲದೆ ಹೊಸಪೇಟೆ ತಾಲೂಕಿನ ಹಚ್ಚೊಳ್ಳಿ, ಹಂಪದೇವನಹಳ್ಳಿ ಹಾಗೂ ಗಂಗಾವತಿ ತಾಲೂಕಿನ ಚಿಕ್ಕಜಂತಕಲ್ಲು, ಹಳೆಅಯೋಧ್ಯ ಗ್ರಾಮಗಳಲ್ಲಿ ಪಂಪಾಪತಿ ದೇವಾಲಯಗಳು ನಿರ್ಮಾಣವಾಗಿರುವುದು ಕಂಡು ಬರುತ್ತದೆ.

ಹೀಗೆ ಶಾಸನ, ಸ್ಥಳಪುರಾಣ, ಸಾಹಿತ್ಯ ಮತ್ತು ದೇವಾಲಯ ವಾಸ್ತು ಶೈಲಿಯ ಸೂಕ್ಷ್ಮ ಅಧ್ಯಯನದ ಮೂಲಕ ಹಂಪಿಯ ವಿರೂಪಾಕ್ಷನ ಚರಿತ್ರೆಯನ್ನು ಇನ್ನೂ ಪ್ರಾಚೀನ ಕಾಲಕ್ಕೆ ಕೊಂಡೊಯ್ಯಬಹುದು. ಅಲ್ಲದೆ ಜನಪದರದಲ್ಲಿ ಬೇರೂರಿದ್ದ ಪಂಪಾ ತೀರ್ಥದ ಮಹತ್ವ, ಹಂಪಿಯ ವಿರೂಪಾಕ್ಷನನ್ನು ಇತರ ಗ್ರಾಮಗಳಿಗೆ ಕರೆದೊಯ್ದು ದೇವಾಲಯ ಕಟ್ಟಿಸಿ ಆರಾಧಿಸುವ ಪದ್ಧತಿಯನ್ನು ಗಮನಿಸಬಹುದು. ಮೂಲ ಹಂಪಿಯಿಂದ ಇತರ ಪ್ರದೇಶಗಳಿಗೆ ವಿಸ್ತೃತ ರೂಪ ಪಡೆದುಕೊಂಡಿರುವ ವಿರೂಪಾಕ್ಷನ ಕುರಿತು ಹೆಚ್ಚಿನ ಅಧ್ಯಯನದ ಅವಶ್ಯಕತೆಯನ್ನು ಈ ಲೇಖನದಿಂದ ಗ್ರಹಿಸಬಹುದು.

ಅಡಿ ಟಿಪ್ಪಣಿ

೧. I.A., VI, P. 85

೨. S.I.I., IX, Pt.i, No. 791, Gonahal, Hospet Tq.

೩. ದೇವರಕೊಂಡಾರೆಡ್ಡಿ, ೧೯೯೮, ತುಂಗಭದ್ರಾ ವಿರೂಪಾಕ್ಷ ದೇವಾಲಯಗಳು, ಇತಿಹಾಸ ದರ್ಶನ, ಸಂ. ೧೩, ಪು. ೯೮-೧೦೨, ಬೆಂಗಳೂರು.

೪. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - ೧, ಸಂ. ೫೯, ಮಲ್ಲಯ್ಯನಗುಡ್ಡ, ಶಿರಗುಪ್ಪ ತಾ.

೫. S.I.I., IV, No. 791, Hampi, Hospet Tq.

೬. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೨, ಸಂ. ೧೮, ಪುರ, ಕುಷ್ಟಗಿ ತಾ.

೭. S.I.I., IX, Pt.i, No. 677, Yalpikaggallu, Bellary Tq.

೮. S.I.I. IX, Pt.I. No. 81, Bagali, Harapanahalli Tq.

೯. ದೇವರಕೊಂಡಾರೆಡ್ಡಿ, ೧೯೯೮, ತುಂಗಭದ್ರಾ ಪ್ರದೇಶದ ವಿರೂಪಾಕ್ಷ ದೇವಾಲಯಗಳು, ಇತಿಹಾಸ ದರ್ಶನ, ಸಂ. ೧೩, ಪು. ೯೮ - ೧೦೨, ಬೆಂಗಳೂರು

೧೦. S.I.I., IX, Pt.i, No. 104, Morigeri, Hagaribommanahalli Tq.

೧೧. I.K., III, No. 360, Kukkanur, Yalaburga Tq.

೧೨. S.I.I., IX, Pt.i, No. 253, Oravayi, Bellary Tq.

೧೩. Ibid. No. 324, Bennehalli, Harapanahalli Tq.

೧೪. Ibid. No. 349

೧೫. Ibid. No. 350

೧೬. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - ೧, ಸಂ. ೧೯೮, ಬೆಣ್ಣೆಹಳ್ಳಿ, ಹರಪನಹಳ್ಳಿ ತಾ.

೧೭. Ibid. No. 379

೧೮. Ibid. Pt. ii, No. 514, Kurekuppe, Sandur Tq.

೧೯. Ibid. Pt.ii, No. 648, Kampli, Hospet Tq.

೫೫. ಮಾಧ್ವ ತಾತ್ವಿಕತೆಯ ಹಿನ್ನೆಲೆಯಲ್ಲಿ ಹಂಪಿ ಪರಿಸರದ ಶಿಲ್ಪಗಳು

ಡಾ.ಆರ್.ಎಚ್. ಕುಲಕರ್ಣಿ ಮತ್ತು ಶ್ರೀ ಎನ್.ವಿ. ಜೋಷಿ

ಹಿನ್ನೆಲೆ

ಪಂಪಾ ಕ್ಷೇತ್ರ - ಹಂಪಿ ಮತ್ತು ಮಾಧ್ವ ಪರಂಪರೆಗೂ ಅನೂಚಾನವಾದ ಸಂಬಂಧಗಳಿವೆ. ಪಂಪಾಕ್ಷೇತ್ರ- ರಾಮಾಯಣದ 'ಕಿಷ್ಕಿಂಧೆ'ಯಾಗಿತ್ತು ಎಂಬ ಗಟ್ಟಿ ನಂಬಿಕೆ ಮಾಧ್ವರಲ್ಲಿದೆ. ಏಕೆಂದರೆ, ಕಿಷ್ಕಿಂಧೆ ಹನುಮಂತನ ವಾಸಸ್ಥಾನ.[1] ಹನುಮಂತ ಮಾಧ್ವ ಪರಿಕಲ್ಪನೆಯಲ್ಲಿ ಶ್ರೀಮುಖ್ಯಪ್ರಾಣ, ವಾಯು ದೇವರ ಅವತಾರ. ಅವನೇ ಶ್ರೀ ಭಾರತೀ ರಮಣನು ಹೌದು. ಈ ನಂಬಿಕೆಯಿಂದಲೇ ದೇವತಾ ತಾರತಮ್ಯದಲ್ಲಿ, ಮಾಧ್ವರು ತಮ್ಮೆಲ್ಲ ಪ್ರಾರ್ಥನೆ ಪೂಜೆಗಳನ್ನು ಯಾವುದೇ ದೇವರಿಗೆ ಸಲ್ಲಿಸಲಿ - "ಶ್ರೀ ಭಾರತೀರಮಣ ಮುಖ್ಯ ಪ್ರಾಣ ಮಧ್ವಾಂತರ್ಗತ" ಎಂದು ಹೇಳಿ ಹನುಮ - ಭೀಮ ಮತ್ತು ಮಾಧ್ವ ಧರ್ಮದ ಪ್ರವರ್ತಕರಾದ ಮಧ್ವಾಚಾರ್ಯರನ್ನು ಹೆಸರಿಸುತ್ತಾರೆ ಮತ್ತು ಅರ್ಪಿಸುತ್ತಾರೆ. ಮಧ್ವಾಚಾರ್ಯರು ಮಧ್ವ ತತ್ವಗಳನ್ನು ಪ್ರಚುರಪಡಿಸುವುದಕ್ಕೋಸ್ಕರ ಹಲವಾರು ಶಿಷ್ಯಂದಿರನ್ನು ಹೊಂದಿದ್ದರು. ರಾಜ್ಯದ ಉದ್ದಗಲಕ್ಕೂ ಅವರ ಶಿಷ್ಯಂದಿರು ಹೋಗಿ ಮಠ ಸ್ಥಾಪನೆ ಮಾಡಿ, ಧರ್ಮ ಜಾಗೃತಿಯ ಕಾರ್ಯದಲ್ಲಿ, ವೇದಾಧ್ಯಯನ, ಪುರಾಣ ಪ್ರವಚನಗಳಲ್ಲಿ ತೊಡಗಿದ್ದರು.[2]

ಹಂಪಿಗೂ ಮತ್ತು ಮಾಧ್ವ ಪರಂಪರೆಗೂ ಸಂಬಂಧ ಪ್ರಾಯಶಃ ಮೊಟ್ಟ ಮೊದಲು ಏರ್ಪಟ್ಟಿದ್ದು ಶ್ರೀ ನರಹರಿತೀರ್ಥರ ಕಾಲದಿಂದ ಎಂದು ಹೇಳಬಹುದು. ಇವರು ಸುಮಾರು ಕ್ರಿ.ಶ. 1320 ರ ಸುಮಾರಿಗೆ ಆಗಲೇ ಹಂಪಿಯ ಆನೆಗುಂದಿಯಲ್ಲಿ ಶ್ರೀ ನರಹರಿತೀರ್ಥರು ಇದ್ದರೆಂದು ಮಠ ಪರಂಪರೆಯ ದಾಖಲೆಗಳು ತಿಳಿಸುತ್ತವೆ. ಅನಂತರ ನಿರಂತರವಾಗಿ ಮಾಧ್ವ ಯತಿಗಳು ಹಂಪಿಯನ್ನು ತಮ್ಮ ತಾತ್ವಿಕ ಮತ್ತು ಮೋಕ್ಷ ಸಾಧನೆಯ ಕ್ಷೇತ್ರವನ್ನಾಗಿಸಿಕೊಂಡರು.[3]

ಶ್ರೀನರಹರಿತೀರ್ಥರ ನಂತರ ಶ್ರೀಪದ್ಮನಾಭ ತೀರ್ಥರು, ಶ್ರೀವಾಗೀಶ ತೀರ್ಥರು, ಶ್ರೀ ಕವೀಂದ್ರರು ಹಾಗೂ ಶ್ರೀ ವ್ಯಾಸರಾಜರು ಅಲ್ಲದೇ ನಂತರದಲ್ಲಿಯೂ ಹಲವಾರು ಯತಿಗಳು ಇಲ್ಲಿಗೆ ಬಂದು ತಮ್ಮ ಅಂತ್ಯ ದಿನಗಳನ್ನು ಕಳೆದು ಬೃಂದಾವನಸ್ಥರಾಗಿದ್ದಾರೆ.

ಆ ಪರಂಪರೆ ಇಂದಿಗೂ ಕೂಡಾ ಮಾಧ್ವ ಯತಿಗಳನ್ನು ಮತ್ತು ಅನುಯಾಯಿಗಳನ್ನು ಇಲ್ಲಿಗೆ ಸೆಳೆದು ತರುತ್ತದೆ. ಈ ಮೇಲಿನ ಹಿನ್ನೆಲೆಯಲ್ಲಿ ಹಂಪಿ ಮತ್ತು ಮಾಧ್ವ ಸಂಬಂಧವನ್ನು ನೋಡಿದಾಗ ಶ್ರೀವ್ಯಾಸರಾಜರ ಕಾಲದಲ್ಲಿ ಅದು ಪಕ್ವಗೊಂಡು, ಹಂಪಿಯಲ್ಲಿ ಮಾಧ್ವ ಪಂಥಕ್ಕೆ ಒಂದು ವಿಶಿಷ್ಟವಾದ ಸ್ಥಾನ ದೊರೆತಿತ್ತು. ಶ್ರೀಕೃಷ್ಣ ದೇವರಾಯನ ಕಾಲ ವಿಜಯನಗರದ ಸುವರ್ಣ ಯುಗವೆಂದೇ ತಿಳಿಯಲಾಗುತ್ತದೆ. ಅವನಿಗೆ ಧರ್ಮಪ್ರೇರಕರಾಗಿ, ವಿದ್ಯಾ ಪ್ರೇರಕರಾಗಿ ಇದ್ದವರು ಶ್ರೀ ವ್ಯಾಸರಾಜರು. ಶ್ರೀ ವ್ಯಾಸರಾಜರ ಪ್ರಭಾವ ಅಗಣಿತವಾದುದು. ಕೃಷ್ಣದೇವರಾಯ ಅವರನ್ನು ಬಹಳ ಆದರದಿಂದ ಮತ್ತು ಗೌರವದಿಂದ ಕಾಣುತ್ತಿದ್ದ.

ಈ ಕಾಲದಲ್ಲಿ ಕಲಾ ಚಟುವಟಿಕೆಗಳು ವಿಜಯನಗರದ ರಾಜ್ಯದುದ್ದಕ್ಕೂ ಗಣನೀಯವಾಗಿ ನಡೆದವು. ಹಂಪಿ ಪರಿಸರದಲ್ಲಿ ಹಲವಾರು ದೇವಾಲಯಗಳ ನಿರ್ಮಾಣ, ಶಿಲ್ಪಗಳ, ಗಾರೆ ಶಿಲ್ಪಗಳ ರಚನೆ ಅತ್ಯಂತ ಅಗಾಧ ಸಂಖ್ಯೆಯಲ್ಲಿ ನಡೆಯುತ್ತಿತ್ತು. ಈ ಸಂದರ್ಭದಲ್ಲಿಯೇ ಮಾಧ್ವ ತತ್ವಜ್ಞಾನವು ಒಂದು ಘಟ್ಟ ತಲುಪಿ, ಹಂಪಿ ಪರಿಸರದಲ್ಲಿ ತನ್ನ ಅಸ್ತಿತ್ವವನ್ನು ಗಟ್ಟಿಗೊಳಿಸುವ ಪ್ರಯತ್ನ ಎದ್ದು ಕಾಣುತ್ತದೆ. ಕಲಾ ಚಟುವಟಿಕೆಯಲ್ಲಿ ಮಾಧ್ವ ಪರಿಕಲ್ಪನೆಯ ಭಾಗವಾಗಿ ಮೂಡಿಬಂದಿರುವ ಹಲವಾರು ಶಿಲ್ಪಗಳು ಈ ಕಾಲದಲ್ಲಿಯೇ ರಚನೆಗೊಂಡವು. ಏಕೆಂದರೆ, ಶ್ರೀ ವ್ಯಾಸರಾಜರು ಹಂಪಿಯಲ್ಲಿದ್ದು ಕೊಂಡೇ ತಮ್ಮ ಪಾಠಶಾಲೆಯನ್ನು ಬೆಳೆಸಿದರು. ಜೊತೆಯಲ್ಲಿ ಹರಿಯ ಮತ್ತು ಮುಖ್ಯ ಪ್ರಾಣರ ಕುರಿತಾದ ಧರ್ಮ ಜಾಗೃತಿಯನ್ನು ಮಾಡಿದರು. ಸ್ವತಃ ಹನುಮಂತನ ರೂಪವನ್ನು ಪರಿಕಲ್ಪಿಸಿ ಹನುಮ - ಭೀಮ - ಮಧ್ವರೂಪಿಯಾದ ಆಂಜನೇಯನನ್ನು ರಾಜ್ಯದುದ್ದ ಗಲಕ್ಕೂ ಪ್ರತಿಷ್ಠಾಪಿಸಲು ಕಾರಣರಾದರು.

ಹಂಪಿಯೊಂದರಲ್ಲಿಯೇ ನೂರಾರು ಸಂಖ್ಯೆಯಲ್ಲಿ ಹನುಮಂತನ ಶಿಲ್ಪಗಳನ್ನು ನೋಡಬಹುದು. ಮಧ್ವ ಸಿದ್ಧಾಂತದ ಜೊತೆಯಲ್ಲಿ ವಿಜಯನಗರದ ಅಂದು ಅಂದರೆ, ಕೃಷ್ಣದೇವರಾಯನ ಕಾಲದಲ್ಲಿ ಶ್ರೀವೈಷ್ಣವ ತತ್ವಗಳು ಪ್ರಚಲಿತದಲ್ಲಿದ್ದವು. ಪ್ರಾಯಶಃ ಈ ತತ್ವಗಳು ಹೆಚ್ಚು ಜನಪ್ರಿಯವಾಗಿದ್ದಿರಲು ಸಾಕು. ಏಕೆಂದರೆ, ಹೊಯ್ಸಳರ ಸಾಂಸ್ಕೃತಿಕ ಮತ್ತು ಧಾರ್ಮಿಕ ಸಂವೇದನೆಗಳನ್ನೇ ವಿಜಯನಗರದ ಅರಸರು ಮುಂದುವರೆಸಿಕೊಂಡು ಹೋದರು ಎಂಬ ಅಂಶ ಸ್ಪಷ್ಟವಾಗಿದೆ. ಹೊಯ್ಸಳರ ಕಾಲದಲ್ಲಿ ಪ್ರಚಲಿತವಲ್ಲಿದ್ದ ಧಾರ್ಮಿಕ ನಂಬಿಕೆಗಳು ಸಹಜವಾಗಿ ಅಂದಿನ ಕಲಾ ಚಟುವಟಿಕೆಗಳ ಮೇಲೆ ಪ್ರಭಾವ ಬೀರುತ್ತವೆ. ಪ್ರಾಯಶಃ ಶ್ರೀವೈಷ್ಣವ ಪಂಥದಲ್ಲಿ ಹೆಚ್ಚು ಪ್ರಚಲಿತದಲ್ಲಿ ಮತ್ತು ಜನಪ್ರಿಯವೂ ಆಗಿರುವ 'ತಿರುನಾಮ' "ಶಂಖ ಚಕ್ರಗಳ ಮಧ್ಯೆ ಪೀಠಸಹಿತನಾಮ" ಅತ್ಯಂತ ಜನಪ್ರಿಯವಾಗಿ ಶಿಲ್ಪಗಳಲ್ಲಿ ಚಿಹ್ನೆಯ ರೀತಿಯಲ್ಲಿ ರಚನೆಗೊಂಡಿದೆ. ಶಿಲ್ಪಕಲೆಯ ಮೇಲೂ ಈ ಪ್ರಭಾವ ಪರಿಣಾಮಕಾರಿಯಾಗಿತ್ತು.

ಈ ಹಂತದಲ್ಲಿ ರಚನೆಯಾದಂತಹ ವೈಷ್ಣವ ಶಿಲ್ಪಗಳಲ್ಲಿ ಮಾಧ್ವ ತಾತ್ವಿಕವಾದ ಸಂವೇದನೆಗಳು ಸ್ಪಷ್ಟವಾಗಿ ಕಂಡುಬರುತ್ತವೆ. ಈ ಮೇಲೆ ಹೇಳಿದಂತೆ ಈ ಪರಿಸರದಲ್ಲಿ ಕಂಡುಬರುವ ಹನುಮಂತನ ಶಿಲ್ಪಗಳಲ್ಲಿ ಕೆಲವನ್ನು ಇಲ್ಲಿ ನೋಡಬಹುದು.

ಶಿಲ್ಪಗಳ ಚರ್ಚೆ

ರಾಮಾಯಣದ ರಾಮಭಕ್ತ ಹನುಮಂತನ ಪರಿಕಲ್ಪನೆ ಶಿಲ್ಪಗಳಲ್ಲಿ ಬಹು ಪ್ರಾಚೀನ ಕಾಲದಿಂದಲೇ ಬೆಳೆದುಬಂದಿದೆ. ಕರ್ನಾಟಕದ ಮಟ್ಟಿಗೆ ಬಾದಾಮಿ ಚಾಲುಕ್ಯರ ಕಾಲದಲ್ಲಿನ ರಾಮಾಯಣ ಕಥಾ ನಿರೂಪಣಾ ಶಿಲ್ಪಗಳಲ್ಲಿಯೇ ವಿಶಿಷ್ಟವಾದ ರಚನೆಯೊಂದಿಗೆ ಪ್ರಥಮವಾಗಿ ಕಂಡುಬರುತ್ತದೆ. ಬಾದಾಮಿಯ ಮೇಲಣ ಶಿವಾಲಯ (ಉತ್ತರ ಗುಡ್ಡದ ವೈಷ್ಣವ ದೇವಾಲಯ), ಐಹೊಳೆ, ಪಟ್ಟದಕಲ್ಲು ದೇವಾಲಯಗಳಲ್ಲಿರುವ ರಾಮಾಯಣ ಕಥಾ ನಿರೂಪಣೆಯ ಭಾಗವಾಗಿ ನಿರೂಪಣೆಗೊಂಡಿದೆ.[4] ಕಪಿಮುಖ ಮಾನುಷ ದೇಹ ಹಾಗೂ ದ್ವಿಬಾಹುಗಳು, ಬಾಲ ಇವು ಹನುಮಂತನ ರಚನೆಯ ಮುಖ್ಯ ಲಕ್ಷಣಗಳು. ಇದೇ ರೀತಿ, ನಂತರದ ಕಾಲದಲ್ಲಿಯೂ ರಚನೆಯಾಗಿರುವುದು ಕಂಡು ಬರುತ್ತದೆ. ಹೊಯ್ಸಳ ಕಾಲದಲ್ಲಿ ಪ್ರಾಯಶಃ ಹನುಮಂತನ ರಚನೆಗೆ ಸ್ಪಷ್ಟತೆ ಬಂದಿದೆ. ಅದುವರೆಗೂ, ಹನುಮಂತ ಕೇವಲ ಕಥಾ ನಿರೂಪಣೆಯ ಶಿಲ್ಪಗಳಲ್ಲಿ ಕಿರಿದಾಗಿ ತೋರಿಸಲ್ಪಡುತ್ತಿದ್ದರು. ಆದರೆ, ಹೊಯ್ಸಳ ದೇವಾಲಯಗಳಲ್ಲಿ ರಾಮ, ಲಕ್ಷ್ಮಣ ಅಥವಾ ರಾಮ ಸೀತೆಯರ ಶಿಲ್ಪಗಳ ಪಾರ್ಶ್ವದಲ್ಲಿ ಭಕ್ತ ವಿಗ್ರಹದಂತೆ ರಚನೆಯಾದಂತಹ ಉದಾಹರಣೆಗಳು ಹಲವಾರು. ಈ ಕಾಲದಲ್ಲಿ ಹನುಮಂತನ ಒಂದು ಸ್ಪಷ್ಟವಾದ ದೃಶ್ಯ ರೂಪ ಬೆಳವಣಿಗೆಯಾ‍ ತು ಎಂದು ಹೇಳಬಹುದು.[5] ಈ ಕಾಲದ ರೂಪವೇ ನಂತರದ ವಿಜಯನಗರ ಕಾಲದಲ್ಲಿ ಹೆಚ್ಚು ಜನಪ್ರಿಯವಾಗಿ ಹಲವಾರು ಬದಲಾವಣೆಗಳೊಡನೆ ರಚನೆಯಾಗಿದೆ.

ಹಂಪಿ ಪರಿಸರದಲ್ಲಿನ ಹನುಮಂತನ ಶಿಲ್ಪಗಳು ಭಕ್ತವಿಗ್ರಹವಾಗಿ ಹಾಗೂ ಸ್ವತಂತ್ರವಾಗಿ ರಚನೆಯಾಗಿವೆ. ಇವುಗಳ ರಚನೆಯಲ್ಲಿ ಮತ್ತು ನಿರೂಪಣೆಯಲ್ಲಿ ಕುತೂಹಲಕಾರಿಯಾದ ವೈವಿಧ್ಯತೆ ಕಂಡುಬರುತ್ತವೆ. ಮುಖ್ಯವಾಗಿ ಯಂತ್ರೋದ್ಧಾರ ಆಂಜನೇಯ ಹಾಗೂ ಚಕ್ರತೀರ್ಥದ ಬಳಿ ಇರುವ ಚತುರ್ಬಾಹು ಹನುಮಂತನ ಆಕೃತಿಗಳು ಗಮನ ಸೆಳೆಯುತ್ತವೆ. ಈ ಎರಡೂ ಆಕೃತಿಗಳನ್ನು ಈಗಾಗಲೇ ವಿದ್ವಾಂಸರು ಪ್ರಕಟಿಸಿದ್ದಾರೆ.[6] ಆದರೆ, ಸ್ಪಷ್ಟವಾಗಿ ಹಾಗೂ ಸಮಂಜಸವಾದ ಚರ್ಚೆ ನಡೆದಿರುವುದಿಲ್ಲ. ಈ ಪ್ರದೇಶದ ವ್ಯಾಪ್ತಿಯಲ್ಲಿಯೇ ಇರುವ ಹಲವು ವಿಶಿಷ್ಟವಾದ ಹನುಮಂತನ ಶಿಲ್ಪಗಳು ಬೆಳಕಿಗೆ ಬಂದಿವೆ. ಡಾ. ಸುಂದರ ಅವರು ಗಂಗಾವತಿ ತಾಲ್ಲೂಕಿನ ಬೆಣ್ಣೂರಿನಲ್ಲಿನ ಭಾರತೀರಮಣ ಮುಖ್ಯಪ್ರಾಣ ಎಂದು ಗುರುತಿಸಿರುವ, ಹನುಮಂತನ ಸುಖಾಸನ ಭಂಗಿಯ ದಂಪತಿ ಶಿಲ್ಪವನ್ನು ಪ್ರಕಟಿಸಿದ್ದಾರೆ.[7] ಅಲ್ಲದೇ, ಬೆಂಗಳೂರು ಜಿಲ್ಲೆಯ

ಚನ್ನಪಟ್ಟಣ ತಾಲ್ಲೂಕಿನ ಅಬ್ಬೂರು ಮತ್ತು ಬ್ರಹ್ಮಣ್ಯಪುರಗಳಲ್ಲಿ ಮಾಧ್ವ ಸಿದ್ಧಾಂತಕ್ಕೆ ಮತ್ತು ಶ್ರೀವ್ಯಾಸರಾಯರ ಪರಿಕಲ್ಪನೆ ಹಾಗೂ ಲಕ್ಷಣಗಳುಳ್ಳಂತಹ ವಿಶಿಷ್ಟವಾದ ಹನುಮಂತನ ಶಿಲ್ಪಗಳನ್ನು ನಮ್ಮ ಕ್ಷೇತ್ರ ಕಾರ್ಯದಲ್ಲಿ ಗುರುತಿಸಿದ್ದೇವೆ.[8] ಇವು ಗಳಲ್ಲದೇ ಇಂತಹವೇ ಹಲವಾರು ವಿಗ್ರಹಗಳಿವೆ. ನವಬೃಂದಾವನದ ಯತಿಗಳ ಬೃಂದಾವನ ಸಮೂಹದಲ್ಲಿರುವ ಆಸನಭಂಗಿಯ ಹನುಮಂತನ ಶಿಲ್ಪ ಹಾಗೂ ಹಂಪಿಯ ಶ್ರೀವಿದ್ಯಾರಣ್ಯ ಮಠದಲ್ಲಿರುವ ಹನುಮಂತನ ಆಸನ ಶಿಲ್ಪಗಳನ್ನು ಉದಾಹರಿಸಬಹುದು.

ಮಾಧ್ವ ತಾತ್ವಿಕ ಪ್ರಭಾವದಿಂದ ಹನುಮಂತನ ಶಿಲ್ಪಗಳಲ್ಲದೇ ಅಂದು ಪ್ರಚಲಿತದಲ್ಲಿದ್ದ ವಿಜಯನಗರ ಶಿಲ್ಪಶೈಲಿಯಲ್ಲಿಯೇ, ಅಂದಿನ ಮುಖ್ಯವಾಹಿನಿಗೆ ಪೂರಕವಾದಂತಹ ದೇವತಾ ಶಿಲ್ಪಗಳು, ಕಥಾನಕ ಶಿಲ್ಪಗಳು ರಚನೆಯಾಗಿವೆ. ಅಂತಹ ಕೆಲವು ಉದಾಹರಣೆಗಳನ್ನು ನವಬೃಂದಾವನದ ಶ್ರೀ ವ್ಯಾಸರಾಜರ ಬೃಂದಾವನದ ಶಿಲ್ಪಗಳ ದಾಖಲೆಯಿಂದ ನೀಡಬಹುದು. ಅಲ್ಲದೇ ಆ ಕಾಲದಲ್ಲಿಯೇ ರಚಿಸಲಾಗಿರುವ ಶ್ರೀರಘು ನಂದನ ತೀರ್ಥರ ಬೃಂದಾವನದ ಶಿಲ್ಪಗಳನ್ನು ಇಲ್ಲಿ ಉದಾಹರಿಸಬಹುದು. ಕಾಲಮಾನದ ದೃಷ್ಟಿಯಿಂದ ಇಲ್ಲಿ ಶ್ರೀ ರಘುನಂದನತೀರ್ಥರ ಬೃಂದಾವನದ ಶಿಲ್ಪಗಳೇ ಮೊದಲು ರಚನೆಯಾಗಿವೆ.

ಹನುಮಂತನ ಶಿಲ್ಪಗಳ ಚರ್ಚೆ

ಈ ಮೇಲೆ ಹೆಸರಿಸಿದ ಹನುಮಂತನ ಶಿಲ್ಪಗಳನ್ನು ಈ ಕೆಳಗೆ ಸ್ವಲ್ಪ ವಿವರವಾಗಿ ನೋಡಬಹುದು. ಸಾಮಾನ್ಯವಾಗಿ ಯಂತ್ರೋದ್ಧಾರಕ ಆಂಜನೇಯ ಎಂದು ಕರೆಯ ಲಾಗುವ ಆಂಜನೇಯನ ಶಿಲ್ಪವು ವಿನ್ಯಾಸದ ದೃಷ್ಟಿಯಿಂದ ಉತ್ತಮ ದಾಖಲೆಯಾಗಿದೆ. ವೃತ್ತಾಕಾರದ, ಪದ್ಮಗಳ (ಎರಡು ತ್ರಿಕೋನಗಳನ್ನು ಒಂದರ ಮೇಲೊಂದು ರಚಿಸಿದಾಗ ಹೇಳುವುದು) ಮಧ್ಯದಲ್ಲಿ ಧ್ಯಾನಮುದ್ರೆಯಲ್ಲಿ, ಮುಮ್ಮುಖದಲ್ಲಿ ಕುಳಿತ ಹನುಮಂತನ ಆಕೃತಿಯು ಗಮನ ಸೆಳೆಯುತ್ತದೆ. ಇದೊಂದು ಉಬ್ಬು ಶಿಲ್ಪ, ವೃತ್ತಾಕಾರದ ಸುತ್ತಲೂ ಪ್ರಾಣಿರೂಪದ ಕಪಿಗಳನ್ನು ತೋರಿಸಿದ್ದು, ವೃತ್ತವನ್ನು ಸುತ್ತುತ್ತಿರುವಂತೆ ಭಾಸವಾಗುತ್ತವೆ. ವೃತ್ತವು ಸುದರ್ಶನ ಚಕ್ರದಂತೆ ಹೊರಚಾಚಿದ ತ್ರಿಕೋಣಾಕಾರದ ದಂತಗಳನ್ನು ಹೊಂದಿವೆ. ಇದರ ಮಧ್ಯದಲ್ಲಿ ಹನುಮಂತನು ಧ್ಯಾನದಲ್ಲಿ ಕುಳಿತಿದ್ದು, ಒಟ್ಟಾರೆಯಾಗಿ ವೃತ್ತ ತ್ರಿಕೋನಗಳ ರಚನೆಯೇ, ತಾತ್ವಿಕ ಹಿನ್ನೆಲೆಯಲ್ಲಿ ಯಂತ್ರವಾಗುತ್ತದೆ. ಯಂತ್ರವೆನ್ನುವುದು ದೈವೀಕ ಶಕ್ತಿಯನ್ನು ಸೂಚಿಸುವ ಒಂದು ಚಿತ್ರಣವಾಗಿದೆ. ಅದೇ ರೀತಿ ಅದರ ಮಧ್ಯದ ಹನುಮಂತ, ಆ ಎಲ್ಲಾ ಶಕ್ತಿಗಳ ಸಂಭೂತನಾಗಿದ್ದಾನೆ. ಯಂತ್ರದ ಶಕ್ತಿಯ ಕೇಂದ್ರ ಬಿಂದು ಅವನೇ ಆಗಿದ್ದಾನೆ. ಶ್ರೀವ್ಯಾಸರಾಯರು ಈ ವಿಗ್ರಹವನ್ನು ಪ್ರತಿಷ್ಠಾಪಿಸಿದರು ಎಂದು ತಿಳಿದುಬರುತ್ತದೆ. ಈ ವಿಗ್ರಹದ ಸ್ಥಾಪನೆಯ ಹಿಂದೆ ರೋಚಕ ಕಥೆಯೂ ಇದೆ. ಶ್ರೀವ್ಯಾಸರ ತಪವನ್ನು ಪರೀಕ್ಷಿಸುವ ದೃಷ್ಟಿಯಿಂದ ಕೀಟಲೆ ಮಾಡುತ್ತಿದ್ದ



ವಾನರರೂಪಿ ಹನುಮಂತನನ್ನು, ಅವರು ಯಂತ್ರವನ್ನು ರಚಿಸಿ ದಿಗ್ಬಂಧನ ಮಾಡಿದರೆಂದು ಹೇಳಲಾಗುತ್ತದೆ. ಪ್ರಾಯಶಃ ಆ ಯಂತ್ರವೇ ದೈವಿಕ ಶಕ್ತಿಯಾಗಿ ಶಿಲ್ಪರೂಪದಲ್ಲಿ ರಚನೆಗೊಂಡಿದೆ.

ಶ್ರೀ ರಘುನಂದನ ತೀರ್ಥರ ಬೃಂದಾವನದ ಮುಂದೆ ಬಂಡೆಯ ಮೇಲೆ ಇರುವ ಹನುಮಂತನ ಶಿಲ್ಪ, ಹನುಮಂತನ ಆಕೃತಿಗಳಲ್ಲಿಯೇ ವಿಶಿಷ್ಟವಾಗಿದೆ. ಇಲ್ಲಿ ಹನುಮಂತನು ಚತುರ್ಬಾಹು ಹಸ್ತನಾಗಿದ್ದಾನೆ. ಹನುಮಂತನ ಪ್ರತಿಮಾ ಲಕ್ಷಣಕ್ಕೆ ಪ್ರಶ್ನೆಯಾಗಿರುವ ಈ ಆಕೃತಿಯು ವಿಶಿಷ್ಟವೂ ಹಾಗೂ ಕುತೂಹಲವೂ ಆಗಿದೆ ಸಾಮಾನ್ಯವಾಗಿರುವ ಹನುಮಂತನ ಆಕೃತಿಗಳು ದ್ವಿಬಾಹುಗಳನ್ನು ಹೊಂದಿರುತ್ತವೆ. ಪಾರ್ಶ್ವಮುಖ, ಮುಂದೇಹ, ಎಡಗೈಯಲ್ಲಿ ಹಣ್ಣಿನ ಗೊಂಚಲು ಅಥವಾ ಬಳ್ಳಿ, ಬಲಗೈಯನ್ನು ಪರ್ವತ ಎತ್ತಿದ ರೀತಿಯಲ್ಲಿ ಮೇಲಕ್ಕೆತ್ತಿರುವುದು ಹಾಗೂ ಬಾಲವು ಕೈ ಮತ್ತು ತಲೆಯ ಮೇಲೆ ಸುತ್ತು ಹಾಕಿರುವುದು. ಹನುಮಂತನ ಆಕೃತಿಗೆ ಶಿಖೆ ಸಾಮಾನ್ಯವಾಗಿ ಇದ್ದೇ ಇರುತ್ತದೆ. ಅವನಿಗೆ ಸಾಮಾನ್ಯ ಆಭರಣಗಳು ಕಂಠಿಹಾರ, ಕೇಯೂರ, ಅಂಗದ, ಕಟೀವಸ್ತ್ರ, ಅಧೋವಸ್ತ್ರ, ಸೊಂಟದಲ್ಲಿ ಕಿರಿದಾದ ಖಡ್ಗ ಇರುತ್ತವೆ. ಕೆಲವೊಮ್ಮೆ ಖಡ್ಗವಿಲ್ಲದೆಯೂ ಇರಬಹುದು. ಈ ಎಲ್ಲಾ ಲಕ್ಷಣಗಳು ಇದ್ದಾಗ ಅದನ್ನು ಸಾಮಾನ್ಯವಾಗಿ ಶ್ರೀವ್ಯಾಸರು ರಚಿಸಿದ ಹನುಮಂತನ ಚಿತ್ರಣವೆಂದು ಹೇಳಲಾಗುತ್ತದೆ.

ಪ್ರಸ್ತುತ, ಹನುಮಂತ ಈ ಎಲ್ಲಾ ಲಕ್ಷಣಗಳನ್ನು ಹೊಂದಿದ್ದು ವೈವಿಧ್ಯಮಯವಾಗಿದ್ದಾನೆ. ಶ್ರೀರಘುನಂದನ ತೀರ್ಥರ ಹನುಮಂತ, ಚತುರ್ಬಾಹು ಹೊಂದಿದ್ದಾನೆ. ಮುಂದಿನ ಕೈಗಳಲ್ಲಿ ಬಲಗೈಯಲ್ಲಿ ಸಾಲಿಗ್ರಾಮವನ್ನು ಹಿಡಿದಿದ್ದಾನೆ. ಎಡಗೈಯಲ್ಲಿ ಕೆಳಗೆ ಊರಿರುವ ಗದೆ ಇದೆ. ಹಿಂದಿನ ಕೈಗಳಲ್ಲಿ ಬಲಭಾಗದಲ್ಲಿ ಚಕ್ರ, ಎಡಭಾಗದಲ್ಲಿ ಶಂಖವನ್ನು ಹಿಡಿದಿದ್ದಾನೆ. ಈ ಆಕೃತಿಯ ಪ್ರತಿಮಾ ಲಕ್ಷಣಗಳು ಯಾವುವು ಹನುಮಂತನ ಸಹಜ ಲಕ್ಷಣಗಳಲ್ಲ. ಕೇವಲ ಇಲ್ಲಿನ ಅವನ ದೇಹಾಕೃತಿ ಹಾಗೂ ಮುಖಚಹರೆ ಮಾತ್ರ ಹನುಮಂತನಿಗೆ ಸರಿಹೊಂದುತ್ತದೆ. ಇಲ್ಲಿ ಬಿಂಬಿಸಿರುವ ಆಯುಧಗಳೆಲ್ಲವೂ ಶ್ರೀಹರಿಯವು. ಚಕ್ರ, ಶಂಖ, ಗದೆ, ಸಾಲಿಗ್ರಾಮಗಳ ನಿರೂಪಣೆ ಸಾಮಾನ್ಯವಾಗಿ ಬಾದಾಮಿ ಚಾಲುಕ್ಯರ ಕಾಲದ ವಿಷ್ಣುವಿನ ಶಿಲ್ಪಗಳಲ್ಲಿ ಕಂಡುಬರುತ್ತವೆ.[9] ಈ ರೀತಿಯ ನಿರೂಪಣೆ ಸಹಜವಾಗಿಯೇ ಹಲವಾರು ಪ್ರಶ್ನೆಗಳಿಗೆ ಎಡೆಮಾಡಿಕೊಡುತ್ತದೆ. ಮಾಧ್ವರ ತಾತ್ವಿಕತೆಯಲ್ಲಿ ಹನುಮಂತನು ಶ್ರೀಹರಿಯ ನಂತರದ ಸ್ಥಾನದವನು. ಇಲ್ಲಿ ರಾಮನ ಭಂಟ ಹನುಮಂತನನ್ನು ಹರಿಯ ಆಯುಧಗಳನ್ನು ಹಿಡಿದಂತೆ ರಚಿಸಿರುವ ಹಿನ್ನೆಲೆ



ಏನು? ಈ ಶಿಲ್ಪವನ್ನು ಬಿಂಬಿಸಿರುವ ಶಿಲ್ಪಕಲಾವಿದನು ಉದ್ದೇಶಪೂರ್ವಕವಾಗಿ ರಚಿಸಿದನೇ? ಹನುಮಂತನನ್ನು ಕುರಿತು ಅಂದಿನ ಪ್ರಚಲಿತ ಯಾವ ಪ್ರತಿಮಾ ಲಕ್ಷಣ ಗ್ರಂಥಗಳೂ ಈ ರೀತಿಯ ಆಯುಧ ರಚನೆಯ ವಿವರ ನೀಡುವುದಿಲ್ಲ.[10] ಅಂದ ಮೇಲೆ ಈ ಪರಿಕಲ್ಪನೆಯು ಆ ಸಂದರ್ಭದಲ್ಲಿಯೇ ಬೆಳವಣಿಗೆ ಹೊಂದಿದೆ ಎಂದು ಊಹಿಸಬಹುದು. ಪ್ರಯೋಗ ಮುದ್ರೆಯಲ್ಲಿ ಹಿಡಿದಿರುವ ಚಕ್ರ ಶಂಖಗಳು ಹಾಗೂ ಕೆಳಗೆ ಊರಿರುವ ಗದೆಗಳು ವಿಷ್ಣುವಿನ ಚತುರ್ವಿಂಶತಿ ಮೂರ್ತಿ ಲಕ್ಷಣದಲ್ಲಿ "ಜನಾರ್ಧನ" ಆಕೃತಿಯ ಲಕ್ಷಣವಾಗುತ್ತದೆ. ವಿಷ್ಣುವಿನ 'ಜನಾರ್ಧನ' ರೂಪವು ಬಲಮೇಲ್ಕೈಯಲ್ಲಿ ಚಕ್ರ, ಎಡಗಡೆ ಶಂಖ ಹಾಗೂ ಮುಂದಿನ ಎಡಗೈಯಲ್ಲಿ ಗದೆ, ಬಲಗೈಯಲ್ಲಿ ಪದ್ಮವನ್ನು ಹಿಡಿದಿರಬೇಕು.[11] ಇಲ್ಲಿ ಬಲಗೈಯಲ್ಲಿ ಪದ್ಮದ ಬದಲಿಗೆ ಸಾಲಿಗ್ರಾಮನ್ನು ತೋರಿಸಿದೆ.

ಜನಾರ್ಧನ ಲಕ್ಷಣದ ರಚನೆಯನ್ನು ಹನುಮಂತನನ್ನು ಸಮ್ಮಿಳಿತಗೊಳಿಸಿ ರಚಿಸಿರುವುದನ್ನು ಇಲ್ಲಿ ತಾತ್ವಿಕ ಅರ್ಥದಿಂದ ನೋಡಬೇಕಾಗುತ್ತದೆ. ಮೊದಲನೆಯದಾಗಿ ಹನುಮಂತನಿಗೆ ವಿಷ್ಣುವಿನ ಆಯುಧಗಳನ್ನು ನೀಡಿ ರಚಿಸಿರುವುದು. ಹನುಮಂತನನ್ನು ವಿಷ್ಣುವಿನ ಸ್ಥಾನಕ್ಕೆ ಏರಿಸುವ ಉದ್ದೇಶದಿಂದಲೇ ಎಂಬ ಪ್ರಶ್ನೆ ಬರುತ್ತದೆ.


ನಾವು ಪ್ರಸ್ತುತ ಶಿಲ್ಪವನ್ನು ಹೀಗೆ ಅರ್ಥೈಸಬಹುದು. ಒಂದು ವೇಳೆ ಶ್ರೀ ಭಾರತಿರಮಣ ಮುಖ್ಯಪ್ರಾಣ ಎಂದು ಈ ಶಿಲ್ಪವನ್ನು ಕರೆಯುವುದಾದರೆ, ಈಗಾಗಲೇ ಡಾ. ಸುಂದರ ಅವರು ತೋರಿಸಿಕೊಟ್ಟಿರುವ ಬೆಣ್ಣೂರಿನ ಶಿಲ್ಪದಂತೆ ಭಾರತೀದೇವಿಯ ಶಿಲ್ಪ ಇಲ್ಲಿ ಇಲ್ಲ. ಹೀಗಾಗಿ ಆ ಶಿಲ್ಪವಾಗಲು ಸಾಧ್ಯವಿಲ್ಲ. ಆಯುಧಗಳ ಆಧಾರದಿಂದ ಪ್ರಸ್ತುತ ಶಿಲ್ಪವು 'ಜನಾರ್ಧನ' ರೀತಿಯ ಸಂಯೋಜನೆ ಹೊಂದಿದೆ ಎಂದು ಮೇಲೆ ಹೇಳಿದ್ದೇವೆ. ಹೀಗಾಗಿ "ಜನಾರ್ಧನಾತ್ಮಕ ಮುಖ್ಯ ಪ್ರಾಣ" ಅಥವಾ ಹನುಮಂತ ಎಂದು ಹೇಳಬಹುದು. ಅಥವಾ ಸಾಮಾನ್ಯವಾಗಿ ಶ್ರೀವಿಷ್ಣುವಿನ ದ್ವಾರಪಾಲಕರು ಶಿಲ್ಪಗಳಲ್ಲಿ, ಚತುರ್ಬಾಹು ಹೊಂದಿದ್ದು ಶಂಖ-ಚಕ್ರಾದಿಗಳನ್ನು ಹಿಡಿದಿರುವುದು ಕಂಡುಬರುತ್ತದೆ. ಅಂತಹ ಹಲವಾರು ಉದಾಹರಣೆಗಳು ವೈಷ್ಣವ ದೇವಾಲಯಗಳಲ್ಲಿ ಕಂಡುಬರುತ್ತವೆ. ಶ್ರೀ ಹರಿಗೆ ಪ್ರಿಯನಾದ ಹನುಮಂತನನ್ನು ದ್ವಾರಪಾಲಕನ ರೀತಿ ಅಥವಾ ಪ್ರಿಯ ಭಕ್ತ ಭಂಟನ ರೀತಿ ಸರ್ವಾಯುಧಗಳಿಂದ ಇಲ್ಲಿ ತೋರಿಸಿರಬಹುದೆಂದು ಊಹಿಸಬಹುದು.[12]

ಹನುಮಂತನಿಗೆ ಸಂಬಂಧಿಸಿದ ಕೀರ್ತನೆಯೊಂದರಲ್ಲಿ ಶ್ರೀ ಪುರಂದರದಾಸರು ವಿಶಿಷ್ಟ ಬೆಳಕು ಚೆಲ್ಲುತ್ತಾರೆ. ಅವರ "ಘಟಿಕಾಚಲದಿನಿಂತಾ ಹನುಮಂತ|| ಘಟಿಕಾಚಲದಿನಿಂತ ಪಟು ಹನುಮಂತ| ಪಠನೆಯ ಮಾಡುಲುತ್ಕಟದಿ ಪೊರೆವನೆಂದು||" ಎಂಬ ಕೀರ್ತನೆಯ ಕೊನೆಯ ನುಡಿಯಲ್ಲಿ "ಶಂಖ ಚಕ್ರವಧರಿಸಿ ಭಕ್ತರ ಮನ| ಪಂಕವ ಪರಿಹರಿಸಿ| ಪಂಕಜನಾಭ ಶ್ರೀ ಪುರಂದರ ವಿಠಲನ || ಬಿಂಕದ ಸೇವಕ ಸಂಕಟಕಳೆಯುತ

|| ಎಂದು ಹೇಳಿದ್ದಾರೆ. ಶ್ರೀ ಪುರಂದರ ದಾಸರಿಗೆ ಹನುಮಂತನ ಶಂಖ ಚಕ್ರಧಾರಿ ರೂಪದ ಪರಿಕಲ್ಪನೆ ಇದ್ದುದು ಸ್ಪಷ್ಟವಾಗಿ ಈ ಮೇಲಿನ ಸಾಲುಗಳಿಂದ ತಿಳಿದುಬರುತ್ತದೆ. ಅಲ್ಲದೇ ಈ ಕೀರ್ತನೆಯಲ್ಲಿ ಸ್ಪಷ್ಟವಾಗಿ "ಚಕ್ರತೀರ್ಥ"ದ ಉಲ್ಲೇಖ ಬರುತ್ತದೆ. ಪ್ರಸ್ತುತ ಶಿಲ್ಪವು ಇರುವುದು ಚಕ್ರತೀರ್ಥದ ಬಳಿಯ ಶ್ರೀ ರಘುನಂದನತೀರ್ಥರ ಬೃಂದಾವನದ ಮುಂದುಗಡೆಯ ಬಂಡೆಯ ಮೇಲೆ. ಅಂದ ಮೇಲೆ ಶ್ರೀಪುರಂದರು ಆಗಲೇ ಈ ಶಿಲ್ಪವನ್ನು ನೋಡಿದ್ದು, ಇದನ್ನೇ ವರ್ಣಿಸಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಏಕೆಂದರೆ ಮಠಪರಂಪರೆಯ ಪ್ರಕಾರ, ಶ್ರೀ ರಘುನಂದರು ಕಾಲವಾದದ್ದು ಕ್ರಿ.ಶ. 1504 ರಲ್ಲಿ. ಚಾರಿತ್ರಿಕವಾಗಿ ಶ್ರೀಪುರಂದರರು ಅಂದು ಶ್ರೀ ವ್ಯಾಸರಾಜರ ಹತ್ತಿರ ಶಿಷ್ಯವೃತ್ತಿ ಪಡೆದಿದ್ದರು ಮತ್ತು ಹಂಪಿಯಲ್ಲಿಯೇ ಇದ್ದರು. ಶ್ರೀ ವ್ಯಾಸರಾಜರು "ಲೋಕಪಾವನಿ" ಎಂಬ ವಿಶ್ವವಿದ್ಯಾಲಯ ತೆರೆದು ಪಾಠಶಾಲೆಯನ್ನು ಹೊಂದಿದ್ದರು. ವಿದ್ಯಾಲಯವನ್ನು ಘಟಿಕಾಲಯ ಅಥವಾ ಘಟಿಕಸ್ಥಾನ ಎಂದು ಪ್ರಾಚೀನ ಕಾಲದಿಂದಲೂ ಶಾಸನೋಕ್ತವಾಗಿ ತಿಳಿಯಲಾಗಿದೆ. ಹೀಗಾಗಿ ಶ್ರೀಪುರಂದರರ ಈ ಕೀರ್ತನೆ ಶ್ರೀವ್ಯಾಸರಾಯರ ಘಟಿಕಸ್ಥಾನ, ಚಕ್ರತೀರ್ಥ, ಶಂಖ ಚಕ್ರಧರ ಹನುಮಂತರ ವಿಶಿಷ್ಟವಾದ ನೈಜ ವರ್ಣನೆಯನ್ನು ನೀಡುತ್ತಾರೆ. ಈ ಎಲ್ಲ ವಿವರಣೆಯ ಹಿನ್ನೆಲೆಯಲ್ಲಿ ಪ್ರಸ್ತುತ ಶಿಲ್ಪ ಹನುಮಂತನ ಪ್ರತಿಮಾ ಲಕ್ಷಣದ ವಿಶಿಷ್ಟವಾದ ಹೊಸ ಪರಿಕಲ್ಪನೆಯಾಗಿ, ಮಾಧ್ವ ತಾತ್ವಿಕತೆಯ ಅಂತರ್ಯದ ಭಾಗವಾಗಿ ಮೂಡಿಬಂದಿದೆ.

ಈ ಮೇಲಿನ ಶಿಲ್ಪದಂತೆಯೇ ಚರ್ಚೆಗೆ ಅವಕಾಶ ಒದಗಿಸುವ ಮತ್ತೆರಡು ಹನುಮಂತನ ಶಿಲ್ಪಗಳು ಇವೆ. ನವಬೃಂದಾವನ ಸಮೂಹದಲ್ಲಿಯೇ ಇರುವ ಚಿಕ್ಕ ಗುಡಿಯಲ್ಲಿನ ಕುಳಿತ ಭಂಗಿಯ ಅತ್ಯಂತ ಆಕರ್ಷಕ ರಚನೆಯ ಹನುಮಂತನ ಶಿಲ್ಪ. ಇಂತಹದೇ ಮಾದರಿಯ ಶಿಲ್ಪ ಮತ್ತೊಂದು ಪ್ರಸ್ತುತ ಹಂಪಿಯ ಶ್ರೀ ವಿದ್ಯಾರಣ್ಯ ಮಠದಲ್ಲಿದೆ.

ಇಲ್ಲಿ ಹನುಮಂತನನ್ನು ಮುಮ್ಮುಖವಾಗಿ, ಕುಳಿತಂತೆ ತೋರಿಸಲಾಗಿದೆ. ಸುಂದರ ಕೆತ್ತನೆಯಲ್ಲಿ ದೇಹದ ಎಲ್ಲಾ ಭಾಗಗಳು ನೈಜವಾಗಿ ಸೊಗಸಾಗಿ ಮೂಡಿಬಂದಿವೆ. ಈ ಶಿಲ್ಪಗಳ ವೈಶಿಷ್ಟ್ಯತೆ ಇರುವುದು, ಕುಳಿತಿರುವ ಭಂಗಿ ಮತ್ತು ಎರಡೂ ಕೈಗಳಲ್ಲಿ ಪುಸ್ತಕವೊಂದನ್ನು ಹಿಡಿದಿರುವುದು. ಈ ಪುಸ್ತಕಗಳು ಗ್ರಂಥದ ರೀತಿಯಲ್ಲಿ ಆಯಾತಾಕಾರದಲ್ಲಿವೆ. ಇವುಗಳು ಏನನ್ನು ಸೂಚಿಸುತ್ತಿರಬಹುದು ಎಂಬ ಜಿಜ್ಞಾಸೆ ಮೂಡುತ್ತದೆ. ಏಕೆಂದರೆ, ಈ ಗ್ರಂಥಗಳ ಮೇಲೆ ಸ್ಪಷ್ಟವಾದ ಕೆತ್ತನೆ ಕಂಡುಬರುವುದಿಲ್ಲ. ಹೀಗಾಗಿ ಇವುಗಳು ಯಾವ ಗ್ರಂಥವನ್ನು ಸೂಚಿಸುತ್ತವೆ ಎಂದು ಹೇಳುವುದು ಕೊಂಚ ಕಷ್ಟದಾಯಕ ವಿಷಯವೇ. ಆದರೆ ಅವುಗಳ ನಿರೂಪಣೆ, ಶ್ರೀಹರಿಗೆ ಹನುಮಂತನ ಮುಖಾಂತರ ಯತಿಗಳು ರಚಿಸಿದಂತಹ ಕೃತಿಗಳನ್ನು ಸಲ್ಲಿಸುವ ದೃಶ್ಯ ಪರಿಕಲ್ಪನೆ



ಇದಾಗಿರಬಹುದಾಗಿದೆ. ಪ್ರಾಯಶಃ ಶ್ರೀ ವ್ಯಾಸರಾಯರ ಕಾಲದಲ್ಲಿಯೇ ಈ ಶಿಲ್ಪವು ರಚನೆಗೊಂಡಿರಬಹುದಾದ ಸಾಧ್ಯತೆ ಇದೆ. ಶ್ರೀ ವಿದ್ಯಾರಣ್ಯ ಮಠದಲ್ಲಿ ಸಂರಕ್ಷಿಸಿ ಇಟ್ಟಿರುವ ಶಿಲ್ಪವು ಹೆಚ್ಚು ಸ್ಪಷ್ಟವಾಗಿಯೂ ಹಾಗೂ ವಿವರವಾಗಿ ರಚನೆಗೊಂಡಿದೆ. ಆದರೂ ಶೈಲಿಯ ದೃಷ್ಟಿಯಿಂದ ಹಾಗೂ ಕೆತ್ತನಾ ಆಕೃತಿ ನೈಜತೆಯ ದೃಷ್ಟಿಯಿಂದ ನವಬೃಂದಾವನದ ಹನುಮಂತನ ಆಕೃತಿಯೇ ಬಹು ಸೊಗಸಾಗಿ ರಚನೆಗೊಂಡಿದೆ. ಇಲ್ಲಿ ಹನುಮಂತ ಬಾಲಕನ ಹಾಗೆ ಪುಟ್ಟ ಹಾಗೂ ಮುದ್ದಾದ ದೇಹ ರೂಪವನ್ನು ಹೊಂದಿದಂತೆ ಕಂಡುಬರುವುದು ವಿಶೇಷವಾಗಿದೆ.

ಈ ಹಂಪಿ ಪರಿಸರದಲ್ಲಿ ಹನುಮಂತನ ನಿರೂಪಣೆ ಸ್ವತಂತ್ರವಾಗಿಯೂ ಹಾಗೂ ಕಥಾ ನಿರೂಪಣಾ ಶಿಲ್ಪಗಳಲ್ಲಿ ಮೂಡಿಬರುತ್ತವೆ. ಹಜಾರ ರಾಮಚಂದ್ರ ದೇವಾಲಯದಲ್ಲಿನ ರಾಮಾಯಣ, ವಿಠ್ಠಲ ದೇವಾಲಯದ ಸಭಾ ಮಂಟಪದ ತೊಲೆ ಪಟ್ಟಿಕೆಗಳಲ್ಲಿನ ರಾಮಾಯಣ ಕಥಾ ನಿರೂಪಣೆಗಳಲ್ಲಿ ಮೂಡಿಬಂದಿರುವುದು ಕಂಡುಬರುತ್ತದೆ. ಅಲ್ಲದೇ, ವಿಜಯನಗರ ಕೋಟೆಯ ಬಾಗಿಲ ಬಳಿ ಹನುಮಂತ ಅಥವಾ ಭೀಮನ ಶಿಲ್ಪಗಳು ಕಂಡುಬರುವುದು ವಿಶಿಷ್ಟವಾಗಿದೆ.[12] ಇದರಿಂದ ಅನುಪಮ ಶಕ್ತಿಯುಳ್ಳ ಹನುಮ ಭೀಮರು ಸಾಂಕೇತಿಕವಾಗಿ ರಕ್ಷಣಾ ದೇವತೆಗಳಾಗುತ್ತಾರೆ. ಭೀಮನ ಬಾಗಿಲಿನ ಹತ್ತಿನ ಇರುವ ಭೀಮನ ಶಿಲ್ಪವು ಪ್ರಾಯಶಃ ಮಾಧ್ವ ಪರಿಕಲ್ಪನೆಯಲ್ಲಿಯೇ ಮೂಡಿಬಂದಿದೆ.[13]

ಇದಕ್ಕೆ ಪ್ರೇರಕವೆಂಬಂತೆ ಹೊಯ್ಸಳ ಕಾಲದ ಚಿಕ್ಕಮಗಳೂರು ಜಿಲ್ಲೆಯ ಅಮೃತಾಪುರದ ದೇವಾಲಯ ಪ್ರಾಕಾರ ದ್ವಾರದ ಪಾರ್ಶ್ವಗೋಡೆಯ ಮೇಲೆ ಅನುರೂಪವಾದ ಶಿಲ್ಪವಿದೆ. ಅದೂ ಕೂಡಾ ಭೀಮನ ಶಿಲ್ಪವೇ ಎಂಬುವುದರಲ್ಲಿ ಯಾವ ಸಂಶಯವೂ ಇಲ್ಲ.

ಬೃಂದಾವನದ ಮೇಲಿನ ಶಿಲ್ಪಗಳ ಚರ್ಚೆ

ಹನುಮಂತನ ಆಕೃತಿಗಳಿಗಿಂತ ಭಿನ್ನವಾಗಿ, ಯತಿಗಳ ಬೃಂದಾವನಗಳ ಮೇಲೆ ಕೆತ್ತಲಾಗಿರುವ ಕೆಲವು ಶಿಲ್ಪಗಳನ್ನು ಇಲ್ಲಿ ಗಮನಿಸಬಹುದು. ಕಾಲದ ದೃಷ್ಟಿಯಿಂದ ನವಬೃಂದಾವನದ ಶ್ರೀನರಹರಿತೀರ್ಥರ ಬೃಂದಾವನವೇ ಪ್ರಾಚೀನವಾದರೂ, ಅದು ಶಿಲ್ಪರಹಿತವಾದದು. ಹೀಗಾಗಿ ಚಕ್ರತೀರ್ಥದ ಬಳಿ ಇರುವ ಶ್ರೀ ರಘುನಂದನ ತೀರ್ಥರ ಬೃಂದಾವನ ಪ್ರಾಯಶಃ ಮೊದಲ ಶಿಲ್ಪಾಲಂಕೃತ ಮಾಧ್ವ ಬೃಂದಾವನವೆಂದು ಹೇಳಬಹುದು. ಈ ಬೃಂದಾವನವೇ ಒಂದು ದೇವಾಲಯದಂತೆ ರಚನೆಯಾಗಿದೆ. ಆಯತಾಕಾರವಾಗಿರುವ ಇದರ ನಾಲ್ಕು ಮುಖಗಳಲ್ಲಿ ಶ್ರೀಹರಿಯ ವಿವಿಧ ರೂಪಗಳ ಕೆತ್ತನೆ ಇದೆ. ವಿಶೇಷವೆಂದರೆ, ಶಿಲ್ಪಗಳನ್ನು ಕರ್ಣಕಂಬಗಳು, ಕಪೋತ ಹಾಗೂ ಪಟ್ಟಿಕೆಗಳ ಅಲಂಕಾರಿಕ ಚೌಕಟ್ಟಿನಲ್ಲಿ, ಅಲಂಕೃತ ತೋರಣಗಳ ಮಧ್ಯದಲ್ಲಿ ಬರುವಂತೆ ಕೆತ್ತಲಾಗಿದೆ. ಅಂದರೆ, ದೇವಾಲಯ ಗರ್ಭಗೃಹ ಹೊರಭಾಗದ ದೇವಕೋಷ್ಠದಂತೆ ಈ ಶಿಲ್ಪಗಳ ಸಂಯೋಜನೆ ಕಂಡುಬರುತ್ತದೆ. ಈ ಬೃಂದಾವನ ವಿಜಯನಗರ ಕಾಲದ್ದು ಎಂದು ಹೇಳಲು ಪುರಾವೆ ಎಂಬಂತೆ, ಬೃಂದಾವನದ ಕಪೋತ ಪಟ್ಟಿಕೆಯ ಮೆಲೆ ಕುಳಿತ ಭಂಗಿಯ ಎರಡೆರಡು ಸಿಂಹಗಳು ನಾಲ್ಕೂ ಮುಖಗಳಲ್ಲಿ ಕಂಡುಬರುತ್ತವೆ. ಇವುಗಳು ವಿಜಯನಗರ ಕಾಲದ ದೇವಾಲಯಗಳ ಕಂಬ, ಗೋಡೆಗಳಲ್ಲಿ ಸರ್ವೇಸಾಮಾನ್ಯವಾಗಿ ಕಂಡುಬರುತ್ತವೆ. ಇಲ್ಲಿ ಅವುಗಳಿಗೆ ಧಾರ್ಮಿಕ ಚೌಕಟ್ಟಿನ ಜೊತೆಗೆ ಅಲಂಕಾರಿಕ ವ್ಯಾಪ್ತಿಯೂ ಇದೆ.

ಬೃಂದಾವನದ ಶಿಲ್ಪಗಳಲ್ಲಿ ರುಕ್ಮಿಣಿ ಸತ್ಯಭಾಮಾ ಸಹಿತ ವೇಣುಗೋಪಾಲ, ಮಾಧವ, ವಿಠಲ ಮತ್ತು ಕೋದಂಡರಾಮರ ಉಬ್ಬು ಶಿಲ್ಪಾಕೃತಿಗಳು ರಚನೆಗೊಂಡಿವೆ. ಎಲ್ಲಾ ಆಕೃತಿಗಳನ್ನು ಬಹು ಸೊಗಸಾಗಿ ಬಿಂಬಿಸಲಾಗಿದೆ. ಅಂದಿನ ಸಮಕಾಲೀನ ಶಿಲ್ಪಶೈಲಿಗೆ ಹೊಂದಿಕೊಂಡೇ ಇವುಗಳು ರಚನೆಗೊಂಡಿವೆ. ಇಲ್ಲಿನ ವೈಶಿಷ್ಟ್ಯವೆಂದರೆ, ವೇಣುಗೋಪಾಲ ಕೃಷ್ಣ ರುಕ್ಮಿಣಿ ಸತ್ಯಭಾಮೆಯ ಸಹಿತ ಇರುವ ಶಿಲ್ಪಾಕೃತಿಗಳು ಬೃಂದಾವನದ ಮುಂಭಾಗದಲ್ಲಿವೆ. ಅಂದರೆ, ಮೇಲೆ ಚರ್ಚಿಸಿದ ಚತುರ್ಬಾಹು ಹನುಮಂತನಿಗೆ ಎದುರಿಗೆ ಇದೆ. ವಿಠಲನ ಶಿಲ್ಪವು ಎಡಭಾಗದಲ್ಲಿ, ಮಾಧವನ ಶಿಲ್ಪ ಬಲಭಾಗದಲ್ಲಿ ಹಾಗೂ ಕೋದಂಡರಾಮನ ಶಿಲ್ಪವು ಬೃಂದಾವನದ ಹಿಂಭಾಗದಲ್ಲಿ ರಚನೆಗೊಂಡಿವೆ.

ವೇಣುಗೋಪಾಲ ರುಕ್ಮಿಣಿ ಸತ್ಯಭಾಮೆಯರ ಶಿಲ್ಪಗಳನ್ನು ಸಮಾನಾಂತರತೆಯ ಸಂಯೋಜನೆಯಲ್ಲಿ ಬಿಂಬಿಸಲಾಗಿದೆ.[14] ಮಧ್ಯದಲ್ಲಿ ಚತುರ್ಬಾಹು ಹಸ್ತನಾದ ವೇಣುಗೋಪಾಲ ತನ್ನ ಮುಂದಿನ ಕೈಗಳಲ್ಲಿ ಭುಜಕ್ಕೆ ಸಮಾನಂತರವಾಗಿ ಮಡಿಚಿ ಕೊಳಲನ್ನು ಹಿಡಿದಿದ್ದಾನೆ. ಗೋಪಾಲನು ನಿಂತ ಭಂಗಿಯ ತ್ರಿಭಂಗಿಯಲ್ಲಿದ್ದು, ಬಲಗಾಲನ್ನು ಎಡಗಾಲ ಮುಂಭಾಗಕ್ಕೆ ಸೂಚಿ ಪಾದದಲ್ಲಿ ಇಟ್ಟಿದ್ದಾನೆ. ಇದರಿಂದ ಸಹಜ ವಾಗಿ, ಕಟಿಭಾಗ ಕೊಂಚ ಎಡಭಾಗಕ್ಕೆ ಚಾಚಿ ಆಕರ್ಷಕವಾದ ನಿಂತಭಂಗಿಯನ್ನು ರೂಪಿಸಿದೆ. ವೇಣುಗೋಪಾಲನ ಭುಜದಳತೆಯವರೆಗೆ ಬರುವಂತೆ, ರುಕ್ಮಿಣಿ ಸತ್ಯಭಾಮೆ ಯರ ಆಕೃತಿಗಳನ್ನು ರಚಿಸಲಾಗಿದೆ. ಈ ಎರಡೂ ಆಕೃತಿಗಳು ಕೂಡಾ ತ್ರಿಭಂಗದಲ್ಲಿವೆ.



ಕ್ರಮವಾಗಿ ಬಲ ಮತ್ತು ಎಡಗೈಗಳಲ್ಲಿ ಕಮಲ (ಪದ್ಮ)ವನ್ನು ಹಿಡಿದು, ಮತ್ತೊಂದು ಕೈಯನ್ನು ಡೋಲು ಹಸ್ತದಂತೆ ನೀಳವಾಗಿ ಇಳುಬಿಟ್ಟಿರುವ ರೀತಿ, ಆಕೃತಿಗಳನ್ನು ಆಕರ್ಷಕವಾಗಿ ಕಾಣುವಂತೆ ಮಾಡುತ್ತವೆ. ಈ ಆಕೃತಿಗಳು ಅಗಲವಾದ ಮುಖ, ಉದ್ದನೆಯ ಕಿರೀಟ, ಕೊಂಚ ಅಗಲವಾದ ಮತ್ತು ಕುಳ್ಳು ಎನಿಸುವಂತಹ ದೇಹದ ಮೈಮಾಟ ಹೊಂದಿವೆ. ಇವುಗಳು ಉಬ್ಬು ಶಿಲ್ಪಗಳಾಗಿದ್ದರೂ ಸಾಕಷ್ಟು ಹೊರ ಚಾಚಿ ರುವುದರಿಂದ, ದುಂಡು ಶಿಲ್ಪಗಳ ಭಾವನೆ ಕೊಡುತ್ತವೆ. ಈ ಶಿಲ್ಪಗಳ ಆಕೃತಿಗಳು, ವಿನ್ಯಾಸವು ಅಂದಿನ ಸಮಕಾಲೀನ ಲೋಹದ ಶಿಲ್ಪಗಳನ್ನು ಜ್ಞಾಪಕಕ್ಕೆ ತರುತ್ತವೆ. ಅಂದರೆ, ಪ್ರಸ್ತುತ, ವೇಣುಗೋಪಾಲ-ರುಕ್ಮಿಣಿ-ಸತ್ಯಭಾಮೆಯರ ಆಕೃತಿ ವಿಜಯನಗರ

ಶಿಲ್ಪಶೈಲಿಯ ಪ್ರೌಢ ಸಂಪ್ರದಾಯದಲ್ಲಿ ರಚನೆಯಾಗಿದ್ದು, ಲೋಹ ಶಿಲ್ಪಗಳಿಗೆ ಪ್ರೇರಕವಾದವು ಎಂದು ಹೇಳಿದರೆ ತಪ್ಪಾಗಲಾರದು.[15]

ಮಾಧವ, ವಿಠಲ ಹಾಗೂ ಕೋದಂಡರಾಮರ ಶಿಲ್ಪಾಕೃತಿಗಳು ಕೂಡ ಮೇಲೆ ಚರ್ಚಿಸಿದ ಗುಂಪಿಗೆ ಸೇರುತ್ತವೆ. ಮಾಧವನ ಶಿಲ್ಪವು ಸಮಭಂಗದಲ್ಲಿದ್ದು ಬಲಗೈಯನ್ನು ನೆಲದ ಮೇಲೆ ಇಟ್ಟಿರುವ ಗದೆಯ ಮೇಲೆ ಇರಿಸಿದೆ ಮತ್ತು ಎಡಗೈಯಲ್ಲಿ ಪದ್ಮವನ್ನು ಹಿಡಿದಿದ್ದಾನೆ ಹಾಗೂ ಕ್ರಮವಾಗಿ ಮೇಲಿನ ಕೈಗಳಲ್ಲಿ ಬಲಗಡೆ ಚಕ್ರ ಹಾಗೂ ಎಡಗಡೆ ಶಂಖವನ್ನು ಪ್ರಯೋಗ ಮುದ್ರೆಯಲ್ಲಿ ಹಿಡಿದಿದ್ದಾನೆ. ಮಾಧವನ ಗದೆಯನ್ನು ಹಾಗೂ ಚತುರ್ಬಾಹು ಹನುಮಂತನ ಗದೆಯನ್ನು ಕೆತ್ತನೆಯ ದೃಷ್ಟಿಯಿಂದ ಇಲ್ಲಿ ಹೋಲಿಸಬಹುದು. ಎರಡರಲ್ಲೂ ಸಾಮ್ಯತೆ ಕಂಡುಬರುತ್ತದೆ. ಇದರಿಂದ, ಹನುಮಂತನ



ಶಿಲ್ಪವನ್ನು ಬೃಂದಾವನದ ಕಾಲದಲ್ಲಿಯೇ ರಚಿಸಿರಬಹುದೆಂದು ಹೇಳಲು ಸಾಧ್ಯವಾಗುತ್ತದೆ. ವಿಠಲನ ಶಿಲ್ಪವು ಕೂಡಾ ದ್ವಿಬಾಹು ಉಳ್ಳದ್ದಾಗಿದೆ. ಸಮಭಂಗದಲ್ಲಿರುವ ವಿಠಲ, ಎರಡೂ ಕೈಗಳನ್ನು ಕಟ್ಯಾವಲಂಬಿತದಲ್ಲಿರಿಸಿದ್ದಾನೆ. ಎಡಗೈಯಲ್ಲಿ ಶಂಖವನ್ನು ಹಿಡಿದಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಬಲಗೈಯಲ್ಲಿ ಚೀಲದಂತಹ ವಸ್ತುವನ್ನು ಹಿಡಿದಿದ್ದಾನೆ. ಅದು ಅಸ್ಪಷ್ಟವಾಗಿದೆ. ವಿಠಲನ ಶಿಲ್ಪದ ರಚನೆ ಸಹಜವಾಗಿ ಕರ್ನಾಟಕದಲ್ಲಿ ಅಂದು ಪ್ರಚಲಿತದಲ್ಲಿ ವಿಠಲ ಸಂಪ್ರದಾಯಕ್ಕೆ ಪೂರಕವಾಗಿದೆ. ವಿಶೇಷವೆಂದರೆ, ವಿಠಲ ಶಿಲ್ಪಗಳು ಹೊಯ್ಸಳ ಕಾಲದಲ್ಲಿಯೇ



ರಚನೆಗೊಂಡಂತಹ ಹಲವಾರು ಉದಾಹರಣೆಗಳು ದೊರೆಯುತ್ತವೆ. ಹೊಯ್ಸಳ ಶಿಲ್ಪಗಳಲ್ಲಿಯೂ ಮೇಲೆ ನೋಡಿದಂತಹ ಪ್ರತಿಮಾ ಲಕ್ಷಣಗಳೇ ಕಂಡುಬರುತ್ತವೆ.[16] ದ್ವಿಬಾಹು ಹಸ್ತಗಳು ಕಟ್ಯಾವಲಂಬಿತದಲ್ಲಿದ್ದು, ಸಾಮಾನ್ಯವಾಗಿ ಎಡಗೈಯಲ್ಲಿ ಶಂಖ, ಕೆಲವೊಮ್ಮೆ ಬಲಗೈಯಲ್ಲಿ ಚಿಕ್ಕ ಚೀಲ ಅಥವಾ ಅಭಯಹಸ್ತದಲ್ಲಿರುವ ಉದಾಹರಣೆಗಳಿವೆ. ವಿಠಲನ ಕೈಯಲ್ಲಿನ ಚೀಲವನ್ನು ಹಣದ ಚೀಲ (?) ಅವಲಕ್ಕಿ ಚೀಲ (?) ಎಂದೆಲ್ಲ ಗುರುತಿಸುವ ಪ್ರಯತ್ನಗಳೆಲ್ಲ ನಡೆದಿವೆ. ಆದರೆ ಸ್ಪಷ್ಟವಾಗಿ ಯಾವ ಪ್ರತಿಮಾ ಲಕ್ಷಣ ಗ್ರಂಥಗಳು ಚೀಲದ ಮಹತ್ವವನ್ನು ವಿವರಿಸಿಲ್ಲ.[17] ಆದರೆ ವಿಠಲ, ಮಾಧ್ವ ಭಕ್ತಿ ಪಂಥ (ದಾಸ ಸಾಹಿತ್ಯ)ದ ಮುಖ್ಯ ನಾಮಾಂಕಿತ ದೇವನಾಗಿ ಕಂಗೊಳಿಸಿರುವುದು ಸರ್ವವಿದಿತವಾಗಿದೆ.

ಅದೇ ರೀತಿ, ಕೋದಂಡ ರಾಮನ ಶಿಲ್ಪವು ಕೂಡಾ ಸಾಕಷ್ಟು ಆಕರ್ಷಕವಾಗಿಯೇ ಮೂಡಿ ಬಂದಿದೆ. ಎಡಗೈಯಲ್ಲಿ ಧನುಸ್ಸನ್ನು ಮತ್ತು ಬಲಗೈಯಲ್ಲಿ ಬಾಣವನ್ನು ಹಿಡಿದು ನಿಂತಿರುವ ಗಾಂಭೀರ್ಯತೆ, ಆಕೃತಿಯನ್ನು ಆಕರ್ಷಕವಾಗಿಸುತ್ತದೆ. ಕೋದಂಡರಾಮನ ಶಿಲ್ಪಗಳು ವಿಜಯನಗರ ಕಾಲದಲ್ಲಿ ಗಣನೀಯ ಸಂಖ್ಯೆಯಲ್ಲಿ ರಚನೆಗೊಂಡಿವೆ. ಅಲ್ಲದೇ ರಾಮನಿಗಾಗಿಯೇ ಪ್ರತ್ಯೇಕ ದೇವಾಲಯಗಳೂ ನಿರ್ಮಾಣಗೊಂಡಿರುವುದನ್ನು ಇಲ್ಲಿ ಸ್ಮರಿಸಬಹುದು.[18]



ಮಾಧ್ವರಲ್ಲಿ ಮೂಲರಾಮನ ಪರಿಕಲ್ಪನೆ ಇದೆ.[19] ಮೂಲರಾಮದೇವರು ಶ್ರೀ ಮಧ್ವಾಚಾರ್ಯರು ಪೂಜಿಸಿ ನಂತರ ಅವರ ಪರಂಪರೆಯಲ್ಲಿ ಮಂತ್ರಾಲಯ ಮಠಕ್ಕೆ ಸೇರಿದೆ. ಕೋದಂಡ ಹಿಡಿದ ಭಂಗಿಯಲ್ಲಿಯೇ ಮೂಲರಾಮ ದೇವರು ಇರುವುದು. ಹೀಗಾಗಿ ಕೋದಂಡರಾಮನ ಶಿಲ್ಪವೂ ಸಹಜವಾಗಿಯೇ ಮಾಧ್ವರ ಅತ್ಯಂತ ಆದರಣೀಯ ಪೂಜ್ಯ ದೈವವೆಂದು ಹೇಳಬಹುದು. ಶ್ರೀ ರಘುನಂದನ ತೀರ್ಥದ ಬೃಂದಾವನದ ಮೇಲಿನ ಶಿಲ್ಪಗಳು ವಿಜಯನಗರದ ಪ್ರೌಢ ಶಿಲ್ಪಸಂಪ್ರದಾಯದ ಪ್ರತೀಕವಾಗಿ, ಮಾಧ್ವ ಪರಂಪರೆಯ ಗಟ್ಟಿ ದಾಖಲೆಗಳಾಗಿ ನಿಲ್ಲುತ್ತವೆ. ಬೃಂದಾವನದ ಕಾಲವು ಕ್ರಿ.ಶ. 1504 ಆಗಿರುವುದರಿಂದ ಪ್ರಸ್ತುತ ಚರ್ಚೆಗೆ ಹೆಚ್ಚು ಒತ್ತು ದೊರೆಯುತ್ತದೆ.

ಶ್ರೀ ವ್ಯಾಸರಾಜರ ಬೃಂದಾವನವು ನವಬೃಂದಾವನಗಳಲ್ಲಿ ಅತ್ಯಂತ ಅಲಂಕೃತ ವಾದುದು.[20] ಪ್ರಸ್ತುತ ಚರ್ಚೆಯಲ್ಲಿ ಶ್ರೀ ರಘುನಂದನರ ಬೃಂದಾವನದಷ್ಟೆ ಪ್ರಾಮುಖ್ಯತೆ ಇದಕ್ಕಿದೆ. ಶ್ರೀ ವ್ಯಾಸರಾಜರು ಹಂಪೆ ಹಾಗೂ ಶ್ರೀ ಕೃಷ್ಣದೇವರಾಯನ ಸಂಬಂಧವನ್ನು ಸೂಚಿಸುವ ಕೃತಿಗಳು ಆ ಕಾಲದಲ್ಲೇ ರಚನೆಗೊಂಡಿವೆ. ಶ್ರೀವ್ಯಾಸ ರಾಯರು ಕಾಲವಾದ ಮೇಲೆ, ಅಂದು ರಾಜ್ಯಭಾರ ಮಾಡುತ್ತಿದ್ದ ಅಚ್ಯುತರಾಯನೇ ಸ್ವತಃ ಯತಿಗಳ ಬೃಂದಾವನ್ನು ನಿರ್ಮಿಸುವಲ್ಲಿ ಕಣಬದ್ಧನಾಗಿ ಅಲಂಕಾರಿಕ ಕೆತ್ತನೆಗಳುಳ್ಳ ಈ ಬೃಂದಾವನ ವನ್ನು ನಿರ್ಮಿಸಿದನೆಂದು ತಿಳಿದುಬರುತ್ತದೆ. ಶ್ರೀ ಕೃಷ್ಣದೇವರಾಯನು ಕಾಲವಾದ ಮೇಲೂ ಶ್ರೀವ್ಯಾಸರಾಜರು ಸಾಕಷ್ಟು ಪ್ರಭಾವವನ್ನು ಹೊಂದಿದ್ದರು. ಪ್ರಾಯಶಃ ಇದರಿಂದಲೇ ಅಚ್ಯುತರಾಯನ ಕಾಲದಲ್ಲಿ ವಿಠ್ಠಲ ದೇವಾಲಯದ ಆವರಣದಲ್ಲಿ ಯೋಗಾವರದ

ನರಸಿಂಹ ದೇವಾಲಯದಲ್ಲಿ ಮೂರ್ತಿ ಯನ್ನು ಸ್ಥಾಪಿಸಿದ್ದು ಶಾಸನೋಕ್ತ ದಾಖಲೆಯಿಂದ ತಿಳಿದುಬರುತ್ತದೆ.[21] ದುರದೃಷ್ಟ ವಶಾತ್ ಇಂದು ನರಸಿಂಹನ ಆ ಮೂರ್ತಿ ಉಳಿದು ಕೊಂಡು ಬಂದಿಲ್ಲ.

ಶ್ರೀ ವ್ಯಾಸರಾಜರ ಬೃಂದಾವನವು ಸಾಕಷ್ಟು ಆಕರ್ಷಕವಾಗಿದೆ ಎಂದು ಮೇಲೆ ಹೇಳಿದ್ದೇವೆ. ಬೃಂದಾವನವು ಆನೆಗಳ ಸಾಲಿನ ಕೆತ್ತನೆ ಇರುವ ಪೀಠವನ್ನು ಹೊಂದಿದೆ. ಇದು ಕೂಡಾ ಏರು ವಿನ್ಯಾಸದಲ್ಲಿ, ದೇವಾಲಯದ ಅಧಿಷ್ಠಾನದ ರೀತಿಯಲ್ಲಿ ಪೀಠ, ಕುಮುಂದಪಟ್ಟಿ, ಕಂಠಿಕಾ, ಕಪೋತ, ಕಪೋತದ ನಾಲ್ಕು ಮೂಲೆಗಳಲ್ಲಿ ಕೀರ್ತಿ ಮುಖ, ಭದ್ರ, ಕಪೋತ, ಪಟ್ಟಿಕಾ, ಹೀಗೆ ಆಕರ್ಷಕ ವಿನ್ಯಾಸ ಹೊಂದಿದೆ. ಈ ಬೃಂದಾವನದ ಮೇಲೂ ಕೂಡಾ ನಾಲ್ಕು ಮುಖಗಳಲ್ಲಿ ಸುಂದರ ಶಿಲ್ಪಗಳ ಕೆತ್ತನೆ ಇದೆ. ಇಲ್ಲಿನ ಶಿಲ್ಪಗಳ ಸಂಯೋಜನೆ ಆಯಾತಾಕಾರದ ಅಗಲವಾದ ಸ್ಥಳಾವಾಕಾಶದಲ್ಲಿ ಆಗಿದೆ. ಬೃಂದಾವನದ ಮುಖಭಾಗದಲ್ಲಿ ಸುಖಾಸನದಲ್ಲಿ ಪೀಠದ ಮೇಲೆ ಕುಳಿತಿರುವ ರಾಮ-ಸೀತಾ, ಅಂಜಲಿಮುದ್ರೆಯಲ್ಲಿ ಸ್ಥಾನಿಕ ಭಂಗಿಯಲ್ಲಿರುವ ಶ್ರೀವ್ಯಾಸರಾಯರು, ಹಾಗೂ ಲಕ್ಷ್ಮಣರು ಕ್ರಮವಾಗಿ ರಾಮ-ಸೀತೆಯರ ಭಾಗದಲ್ಲಿ ನಿಂತಿದ್ದಾರೆ. ಶ್ರೀ ವ್ಯಾಸರು ಮತ್ತು



ಶ್ರೀರಾಮರ ಮಧ್ಯ- ಶ್ರೀ ರಾಮ ಭಂಟ ಹನುಮಂತನ ಆಸನ ಆಕೃತಿ ಇದೆ. ಬೃಂದಾವನದ ದಕ್ಷಿಣದ ಭಾಗದಲ್ಲಿ ವಿಠಲ, ಪಶ್ಚಿಮದಲ್ಲಿ ನರಸಿಂಹ (ಅಸ್ಪಷ್ಟ ಕೆತ್ತನೆ) ಹಾಗೂ ಉತ್ತರದ ಭಾಗದಲ್ಲಿ ಕಥಾ ನಿರೂಪಣಾ ಶಿಲ್ಪವಿದ್ದು, ಅದರಲ್ಲಿ ಬಾಲಕೃಷ್ಣನ ಲೀಲೆಯ







ಯಮಳಾರ್ಜುನ ಘಟನೆಯ ದೃಶ್ಯ ನಿರೂಪಣೆ ಇದೆ. ವಿಶೇಷವೆಂದರೆ, ಈ ಎಲ್ಲಾ ಶಿಲ್ಪಗಳಲ್ಲಿಯೂ ಶ್ರೀ ವ್ಯಾಸರಾಯರು ಅಂಜಲಿ ಮುದ್ರೆಯಲ್ಲಿ, ಕಮಂಡಲು, ದಂಡಗಳೊಂದಿಗೆ ನಿಂತಿರುವ ದೃಶ್ಯ ನಿರೂಪಣೆ ಇದೆ.[22]

ಸುಖಾಸನದಲ್ಲಿರುವ ರಾಮ ಸೀತೆಯರನ್ನು ಮತ್ತು ಶ್ರೀ ವ್ಯಾಸರಾಯರು ಲಕ್ಷ್ಮಣರನ್ನು ಆಯಾತಾಕಾರದ ಸ್ಥಳಾವಕಾಶದಲ್ಲಿ 'ಸಮಾನಾಂತರತೆಯ' ಸಂಯೋಜನೆ ಮಾಡಲಾಗಿದೆ. ರಾಮಸೀತೆಯರಿಬ್ಬರೂ ಅಭಯಮುದ್ರೆಯಲ್ಲಿದ್ದು, ಎಡಗೈಗಳನ್ನು ತೊಡೆಯ ಮೇಲೆ ಇರಿಸಿದ್ದಾರೆ. ಇಲ್ಲಿಯೂ ಕೆತ್ತನಾ ಶೈಲಿ ಸ್ಪಷ್ಟವಾಗಿ ಹಾಗೂ ಆಕರ್ಷಕ ವಾಗಿ ಮೂಡಿಬಂದಿದೆ. ಲಕ್ಷ್ಮಣ ಧನುಸ್ಸನ್ನು ಎಡಭುಜದ ಮೇಲೆ ಹಾಕಿಕೊಂಡು ವಿನಮ್ರವಾಗಿ ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ.

ಈ ಶಿಲ್ಪಗಳ ಸಂಯೋಜನೆಯಲ್ಲಿರುವ ಯತಿಗಳ ಶಿಲ್ಪವು ಶ್ರೀ ವ್ಯಾಸರಾಜರದ್ದೇ ಎಂದು ನಿಸ್ಸಂದೇಹವಾಗಿ ಗುರುತಿಸಬಹುದು. ಈ ಶಿಲ್ಪವು ರಚನೆಯಲ್ಲಿ ಯತಿಗಳ ವೇಷಭೂಷಣಗಳನ್ನು ಸ್ಪಷ್ಟವಾಗಿ ಹೊಂದಿದೆ. ಮೊಳಕಾಲಿನವರೆಗೂ ಉಟ್ಟುಕೊಂಡ ಮುಗಟ (ಲುಂಗಿ), ಹೆಗಲ ಮೇಲೆ ಹೊದೆದ ಉತ್ತರೀಯ ಎಡಕೈಯ ಮಧ್ಯೆ ಭುಜದ ಮೇಲೆ ಇರಿಸಿಕೊಂಡಿರುವ .ದಂಡ ಹಾಗೂ ಅವರ ಕಾಲ ಪಕ್ಕದ್ದಲ್ಲಿರಿಸಿರುವ ಕಮಂಡಲಗಳು ಇವೆ. ವಿಶೇಷವೆಂದರೆ ಉತ್ತರೀಯವನ್ನು ತಲೆಗೆ ಕಟ್ಟಿಕೊಂಡು, ದೇಹದ



ಎರಡೂ ಪಾರ್ಶ್ವದಲ್ಲಿ ಆಕರ್ಷಕವಾಗಿ ಇಳಿ ಬಿಟ್ಟಿರುವ ವಿಧ, ಸಮಕಾಲೀನ ಶಿಲ್ಪಶೈಲಿಗಳಲ್ಲಿಯೂ ಕಂಡುಬರುತ್ತದೆ. ಇಲ್ಲಿ ಅವರ ಶಿಲ್ಪವನ್ನು ಬಿಂಬಿಸಿರುವ ಉದ್ದೇಶವು ಬಹುಶಃ ಶ್ರೀವ್ಯಾಸರಾಯರು ಕಾಲವಾದ ಮೇಲೆ ನೇರವಾಗಿ ಶ್ರೀಹರಿಯ ಸನ್ನಿಧಿಯನ್ನು ಸೇರಿದರು ಎನ್ನುವುದನ್ನು ಸಾಂಕೇತಿಕವಾಗಿ ಸೂಚಿಸುತ್ತದೆ. ಪ್ರಸ್ತುತ ಶಿಲ್ಪ ನಿರೂಪಣೆ ಇದೇ ಮಾದರಿಯನ್ನು ಬೃಂದಾವನದ ಇನ್ನುಳಿದ ಮುಖದ ಮೇಲೂ ಬಿಂಬಿಸಿರುವುದನ್ನು ನೋಡಬಹುದು.

ಕಥಾ ನಿರೂಪಣಾ ಶಿಲ್ಪವಾದ ಕೃಷ್ಣನ ಯಮಳಾರ್ಜುನ ವಿಜಯದ ನಿರೂಪಣೆಯು ವಿಶಿಷ್ಟವಾಗಿ ಮೂಡಿಬಂದಿದೆ. ಬಾಲಕೃಷ್ಣನು ಕೈಯಲ್ಲಿ ನವನೀತ (ಬೆಣ್ಣೆ) ವನ್ನು ಹಿಡಿದು ಅಂಬೆಗಾಲಲ್ಲಿ ಇದ್ದಾನೆ. ಯಶೋದೆ ಅವನನ್ನು ಒರಳು ಕಲ್ಲಿಗೆ ಕಟ್ಟಿ ಹಾಕಿದ್ದಾಳೆ. ಕೃಷ್ಣನು ಒರಳು ಕಲ್ಲನ್ನು ಎಳೆದುಕೊಂಡು ಬರುವಾಗ ಅದು ನಳಕೂಬ ರಾಕ್ಷಸರು ವಾಸವಾಗಿರುವ ಯಮಳಾರ್ಜುನ ವೃಕ್ಷಕ್ಕೆ ಸಿಕ್ಕಿ ಹಾಕಿ ಕೊಳ್ಳುತ್ತದೆ. ಕೃಷ್ಣನ ಅಗಾಧ ಶಕ್ತಿಗೆ, ಬೇರುಸಹಿತ ವೃಕ್ಷ ಕಿತ್ತು ಬಂದು ಅದರಲ್ಲಿದ್ದ ರಾಕ್ಷಸರು ಮರಣ ಹೊಂದುತ್ತಾರೆ.[23] ಯಶೋದೆ ಕೃಷ್ಣನ ಈ ಕಾರ್ಯವನ್ನು ಮೂಕವಿಸ್ಮಿತಳಾಗಿ ನೋಡುತ್ತಾ ನಿಲ್ಲುತ್ತಾಳೆ. ಈ ವಿವರವನ್ನು ಸಮ್ಮಿಳಿತವಾಗಿ ಸಂಗ್ರಹಿತವಾಗಿ ಯಮಳಾರ್ಜುನ ವಿಜಯದ ದೃಶ್ಯ ನಿರೂಪಣೆ ಇಲ್ಲಿ ರಚನೆಗೊಂಡಿದೆ.[24] ಈ ದೃಶ್ಯಕ್ಕೆ ಸಾಕ್ಷಿ ಎಂಬಂತೆ ಶ್ರೀ ವ್ಯಾಸರಾಜರ ಉಬ್ಬು ಶಿಲ್ಪಾಕೃತಿಯನ್ನು ಕೆತ್ತಲಾಗಿದೆ. ಇಲ್ಲಿಯೂ ವ್ಯಾಸರಾಯರ ಹಿಂದಿನ ಶಿಲ್ಪದ ತದ್ರೂಪಾದ ಆಕೃತಿ ಇದೆ. ಒಟ್ಟಾರೆಯಾಗಿ ಶ್ರೀವ್ಯಾಸರಾಜರ ಬೃಂದಾವನದ ಮೇಲೆ ಅವರ ಆಕೃತಿಯು ರಚನೆಗೊಂಡಿರುವುದು ಐತಿಹಾಸಿಕವಾಗಿ ಅವರನ್ನು ಬಿಂಬಿಸಿರುವುದೇ ಆಗಿದೆ. ಅಲ್ಲದೇ ಪ್ರಸ್ತುತ ಶಿಲ್ಪವು ಶ್ರೀ ವಿರೂಪಾಕ್ಷ ದೇವಾಲಯದ ಮಹಾರಂಗ ಮಂಟಪದ, ಒಳಮಾಳಿಗೆಯ ಯತಿಗಳ ಚಿತ್ರಕ್ಕೆ ಪೂರಕವಾದ ದಾಖಲೆ

ಯಾಗುತ್ತದೆ.[25] ಶ್ರೀವ್ಯಾಸರಾಜರು ಮಾಧ್ವ ಮತದ ಆದ್ಯ ಪ್ರವರ್ತಕದಲ್ಲಿ ಅಗ್ರಗಣ್ಯರು. ಅಲ್ಲದೇ ಕೃಷ್ಣದೇವರಾಯ ಹಾಗೂ ಅಚ್ಯುತರಾಯರ ಆಳ್ವಿಕೆಯ ಕಾಲದಲ್ಲಿ ವಿಜಯ ನಗರದಲ್ಲಿ ಸಾಕಷ್ಟು ಪ್ರಭಾವ ಹೊಂದಿದ್ದರು. ಹೀಗಾಗಿ ವ್ಯಾಸರಾಜರ ಬೃಂದಾವನವು ಅವರ ವರ್ಚಸ್ಸಿಗೆ ಪೂರಕವಾಗಿ ಅಲಂಕೃತವಾಗಿದೆ. ಉದಾಹರಣೆಗೆ ಅವರ ಬೃಂದಾವನದ ಪೀಠದ ಮೇಲಿನ ಆನೆಗಳ ಸಾಲು ಅಲಂಕಾರಿಕ ಕೆತ್ತನೆ, ದೇವತಾ ಶಿಲ್ಪಗಳು ಒಂದು ದೇವಾಲಯದ ರೀತಿಯಲ್ಲಿ ರಚನೆಗೊಂಡಿರುವುದನ್ನು ಪ್ರಸ್ತುತ ಬೃಂದಾವನದಲ್ಲಿ ನೋಡಬಹುದು.

ಹಂಪಿಯ ಶಿಲ್ಪಗಳಲ್ಲಿ ಮಾಧ್ವತತ್ವದ ಪ್ರಭಾವ ಪರೋಕ್ಷವಾಗಿ ಮತ್ತು ಪ್ರತ್ಯಕ್ಷ ವಾಗಿ ಸಿಮೀತ ಶಿಲ್ಪಗಳಲ್ಲಿ ಮಾತ್ರ ಕಂಡುಬರುತ್ತದೆ. ಪ್ರಾಯಶಃ ಆ ಕಾಲದಲ್ಲಿ ದೃಶ್ಯ ಮಾಧ್ಯಮದಲ್ಲಿ ಸಾಧ್ಯವಿದ್ದ ಕಡೆಗೆಲ್ಲಾ ಆಕೃತಿಗಳು ರಚನೆಗೊಂಡಿವೆ. ಶ್ರೀವೈಷ್ಣವ ಧರ್ಮದ ಪ್ರಭಾವದಲ್ಲಿ ಹೊಯ್ಸಳ ಕಾಲದಿಂದಲೇ ಸಾಕಷ್ಟು ವೈಷ್ಣವ ದೇವಾಲಯಗಳು, ಶಿಲ್ಪಗಳು ನಿರ್ಮಾಣಗೊಂಡಿದ್ದವು. ಮಾಧ್ವರು ಕೂಡಾ ವಿಷ್ಣುವಿನ ಆರಾಧಕರಾಗಿದ್ದ ರಿಂದ, ವಿಷ್ಣುವಿನ ಪ್ರಚಲಿತ ದೇವಾಲಯಗಳನ್ನೇ ಒಪ್ಪಿಕೊಂಡಂತೆ ತೋರುತ್ತದೆ. ಆದರೆ, ಹನುಮಂತನ ಪರಿಕಲ್ಪನೆಯ ಪರಿಪಕ್ವತೆಯೊಡನೆ ಹನುಮಂತನ ರೂಪದ ಜನಪ್ರಿಯತೆಗೆ ಮಾಧ್ವ ಧರ್ಮವೇ ಕಾರಣವಾಯಿತೆಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ, ಶ್ರೀವ್ಯಾಸರಾಜರು ಪರಿಕಲ್ಪಿಸಿದ ಹನುಮಂತ ನಿರ್ದಿಷ್ಟ ರೂಪ ಪಡೆದು ಅಗಣಿತ ಸಂಖ್ಯೆಯಲ್ಲಿ ಎಲ್ಲೆಡೆ ಸ್ಥಾಪನೆಗೊಂಡಿರುವುದು ಐತಿಹ್ಯ.

ಹಂಪಿ ಪರಿಸರ, ಮಾಧ್ವ ಮತ, ಒಂದಕ್ಕೊಂದು ಗಟ್ಟಿಯಾದ ಸಂಬಂಧವನ್ನು ಹೊಂದಿವೆ. ವ್ಯಾಸಕೂಟ ದಾಸಕೂಟಗಳು ಈ ನಾಡಿನ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಬೆಳವಣಿಗೆಗೆ ವಿಶಿಷ್ಟವಾದ ಕೊಡುಗೆಯನ್ನು ನೀಡಿವೆ.

ಅಡಿಟಿಪ್ಪಣಿಗಳು

1. ಡಾ.ಎ. ಸುಂದರ ತಮ್ಮ ಅಧ್ಯಯನಗಳಲ್ಲಿ ಹಂಪಿಯೇ ರಾಮಾಯಣದ ಕಿಷ್ಕಿಂಧೆ ಎಂದು ಪ್ರತಿಪಾದಿಸಿದ್ದಾರೆ.
2. ಮಧ್ವಾಚಾರ್ಯರ ನೇರ ಶಿಷ್ಯಂದಿರಲ್ಲಿ ನರಹರಿತೀರ್ಥರು ಆನೆಗುಂದಿಯಲ್ಲಿ, ಅಕ್ಷೋಭ್ಯತೀರ್ಥರು ಮಳಖೇಡದಲ್ಲಿ, ಮಾಧವತೀರ್ಥರು ಮಣೂರಲ್ಲಿ, (ಅಫಜಲ್ ಪುರ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ) ಹಾಗೂ ಪದ್ಮನಾಭತೀರ್ಥರು ಮುಳಬಾಗಿಲಲ್ಲಿ ಮಠ ಸ್ಥಾಪನೆ ಮಾಡಿದ್ದರು ಮತ್ತು ಧರ್ಮ ಜಾಗೃತಿಯ ಕಾರ್ಯ ಕೈಗೊಂಡಿದ್ದರು.
3. ಶ್ರೀನರಹರಿ ತೀರ್ಥರಾದಿಯಾಗಿ ಹಲವಾರು ಯತಿಗಳು ಇಲ್ಲಿ ಬೃಂದಾವನಸ್ಥರಾಗಿದ್ದಾರೆ. ಅಷ್ಟೇ ಏಕೆ, ಇಂದಿನ ನಮ್ಮ ಶ್ರೀ ಪೇಜಾವರ ಶ್ರೀಗಳು ಸನ್ಯಾಸ ದೀಕ್ಷೆ ತೆಗೆದು ಕೊಂಡದ್ದು ಹಂಪಿ ಚಕ್ರತೀರ್ಥದ ದಡದಲ್ಲಿಯೇ

4. ಚಿತ್ರಗಳಿಗೆ ಮತ್ತು ವಿವರಗಳಿಗೆ ನೋಡಿ. ಡಾ. ಆರ್.ಎಚ್. ಕುಲಕರ್ಣಿ, 2001, Pre and Early Chalukya Art in Karnataka, Ph.D.Thesis, Mysore University, ಚಾಲುಕ್ಯ ಶಿಲ್ಪಕಲೆಯ ಭಾಗ

5. ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದ ಅಧಿಷ್ಠಾನದ ಅಲಂಕಾರಿಕ ಪಟ್ಟಿಕೆಯಲ್ಲಿ ಹನುಮಂತನ ನಿರೂಪಣೆ ಇದೆ. ಇಲ್ಲಿನ ಕೇದಾರೇಶ್ವರ, ನುಗ್ಗಿಹಳ್ಳಿ, ಹಾರ್ನಹಳ್ಳಿ, ಹೊಸಹೊಳಲು, ಮೊಸಳೆ, ಜಾವಗಲ್ಲು, ಸೋಮನಾಥಪುರ ದೇವಾಲಯಗಳಲ್ಲಿ ಹನುಮಂತನ ರಚನೆಗಳು ಬಿಡಿಯಾಗಿ ಮತ್ತು ರಾಮನ ಶಿಲ್ಪದೊಂದಿಗೆ ಕಂಡು ಬರುತ್ತವೆ.

6. ಹನುಮಂತರಾವ್.ಎಸ್. (QJMS. vol. XX, April 1930) ಲೇಖನದಲ್ಲಿ ಚರ್ಚೆ ಮಾತ್ರ ಇದೆ. ಬಾಲಸುಬ್ರಹ್ಮಣ್ಯ ; ವಿಜಯನಗರ ಅಧ್ಯಯನ ಸಂ. 5, ಅಲ್ಲದೇ ಮಾನಕರಿ ಶ್ರೀನಿವಾಸಾಚಾರ್ಯ ಶ್ರೀ ಹರಿದಾಸರು ಚಿತ್ರಿಸಿದ ಶ್ರೀ ಮುಖ್ಯಪ್ರಾಣ ಮಹಿಮಾ ವೈಭವ ಮಂತ್ರಾಲಯ, ೨೦೦೪, ಈ ಕೃತಿಗಳಲ್ಲಿ ಚಿತ್ರಗಳನ್ನು ಪ್ರಕಟಿಸಿದ್ದಾರೆ.

7. ಸುಂದರ.ಅ. 1974 "A Rare Bharati Ramana Mukhyaprana Image from Bennur" Studies in Indology and Medieval History. G.H. Khare felicitation vol. Pune.

8. ಚನ್ನಪಟ್ಟಣದಿಂದ ಸುಮಾರು 6 ಕಿ.ಮೀ. ದೂರದಲ್ಲಿ ಆಗ್ನೇಯಕ್ಕೆ ಬ್ರಹ್ಮಣ್ಯಪುರವಿದೆ. ಇದನ್ನು ಸ್ಥಳೀಯರು ಆಡು ಬಾಷೆಯಲ್ಲಿ ಬೊಮ್ಮಣಿಪುರವೆಂದು ಕರೆಯುತ್ತಾರೆ. ಶ್ರೀವ್ಯಾಸರಾಯರ ಗುರುಗಳಾದ ಶ್ರೀ ಬ್ರಹ್ಮಣ್ಯತೀರ್ಥರು ಇಲ್ಲಿ ತಮ್ಮ ಶಕ್ತಿಯಿಂದ ಕೆರೆ ನಿರ್ಮಿಸಿದರೆಂದು ಹೇಳುತ್ತಾರೆ. ಇಲ್ಲಿನ ಹನುಮಂತನನ್ನು ಅವರೇ ಪ್ರತಿಷ್ಠಾಪಿದರೆಂದು ನಂಬಿಕೆ. ಹನುಮಂತ ಮುಮ್ಮಖನಾಗಿದ್ದು, ಎಡಗೈ ಕಟ್ಯಾವಲಂಬಿತದಲ್ಲಿದ್ದು ಮಾವಿನ ಗೊಂಚಲು ಹಿಡಿದಿದೆ. ಬಲಗೈ ಮೇಲೆತ್ತಿದ್ದು ಸಂಜೀವಿನಿ ಪರ್ವತದ ಸಾಂಕೇತಿಕತೆ ಸೂಚಿಸುತ್ತದೆ. ಇದರ ವಿಶೇಷತೆ ಇರುವುದು ಹನುಮಂತನು ಗಂಟು ಹಾಕಿದ ಶಿಖೆಯನ್ನು ಹೊಂದಿರುವುದು. ಶಂಖ ಚಕ್ರಗಳನ್ನು ಎರಡೂ ಪಾರ್ಶ್ವದಲ್ಲಿ ಬಿಂಬಿಸಿರುವುದು ಹಾಗೂ ಮೇಲ್ಭಾಗದಲ್ಲಿ ರಾಮ, ಸೀತಾ, ಲಕ್ಷ್ಮಣರನ್ನು ತೋರಿಸಿರುವುದರಿಂದ ಸೊಗಸಾಗಿ ಮೂಡಿಬಂದಿದೆ. ಇದು ನಿಜವಾಗಿಯೂ ಶ್ರೀವ್ಯಾಸರಾಜರ ಪರಿಕಲ್ಪನೆಯ ಹನುಮಂತನ ಆಕೃತಿಗೆ ಅನುರೂಪಾದ ಉದಾಹರಣೆಯಾಗಿದೆ.

9. ಬಾದಾಮಿ, ಐಹೊಳೆಗಳಲ್ಲಿ ವಿಷ್ಣುವಿನ ಶಿಲ್ಪಗಳಲ್ಲಿ ಸಾಮಾನ್ಯವಾಗಿ ಇಂತಹ ವಿವರಣೆ ಕಂಡುಬರುತ್ತದೆ. ಗುಹಾಲಯ 1 ಮತ್ತು 3 ರಲ್ಲಿ ಹರಿಹರ, ಅನಂತವಿಷ್ಣು, ಅಷ್ಟಭುಜ ವಿಷ್ಣು, ಮಾಲೆಗಿತ್ತಿ ಶಿವಾಲಯದ ಶಿವ ಮತ್ತು ವಿಷ್ಣು, ದುರ್ಗದ ದೇವಾಲಯದ ಹರಿಹರ, ವಿಷ್ಣು ಶಿಲ್ಪಗಳನ್ನು ಇಲ್ಲಿ ಸ್ಮರಿಸಬಹುದು. ಚಿತ್ರಗಳಿಗೆ ನೋಡಿ. ಕುಲಕರ್ಣಿ.ಆರ್.ಎಚ್. 2001, ಪೂರ್ವೋಕ್ತ

10. ಹನುಮಂತನ ಕುರಿತು ಅವನ ದೇಹದ ವರ್ಣನೆ ಅತ್ಯಂತ ಸೊಗಸಾಗಿ ರಾಮಾಯಣದ ಸುಂದರಕಾಂಡದಲ್ಲಿದೆ. (ರಾಮಾಯಣ-ಸುಂದರಕಾಂಡ, ಗೀತಾ ಪ್ರೆಸ್, ಘೋರಕ್‌ಪುರ).

ಆದರೆ, ಹನುಮಂತನನ್ನು ಶಂಖ ಚಕ್ರಗಳ ಮುದ್ರೆಯಿಂದ ತೋರಿಸಿರುವ ದಾಖಲೆಗಳಿವೆ. ಉದಾಹರಣೆಗೆ ಮೇಲೆ ಚರ್ಚಿಸಿದ ಬ್ರಹ್ಮಣ್ಯಪುರದ ಹನುಮಂತ ಅಲ್ಲದೇ ತಮಿಳುನಾಡಿನ ಘಟಿಕಾಚಲದಲ್ಲಿ ಹನುಮಂತನು ನಾಲ್ಕು ಕೈಗಳನ್ನು, ಶಂಖ, ಚಕ್ರ, ಗದೆಗಳನ್ನು ಹೊಂದಿದ್ದು ಆಸನ ಭಂಗಿಯಲ್ಲಿರುವುದಾಗಿ ತಿಳಿದುಬಂದಿದೆ. ಅದನ್ನು ನಾನು ಸ್ವತಃ ಪರಿಶೀಲಿಸಬೇಕಾಗಿದೆ. ಆದರೂ ಕರ್ನಾಟಕದ ಮಟ್ಟಿಗೆ ಇದೇ ಪ್ರಥಮ ಇಂತಹ ವಿಶಿಷ್ಟವಾದ ದಾಖಲೆಯಾಗಿದೆ.

11. "ರೂಪ ಮಂಡನ" ಪ್ರತಿಮಾ ಲಕ್ಷಣ ಕೃತಿಯಲ್ಲಿ ವಿವರವಾಗಿ ಚತುರ್ವಿಂಶತಿ ಮೂರ್ತಿಗಳ ಆಯುಧ ಲಕ್ಷಣಗಳಿವೆ.

12. ಶ್ರೀಹರಿಯ ದ್ವಾರಪಾಲಕರಾದ ಜಯವಿಜಯ ಅಥವಾ ಚಂಡಪ್ರಚಂಡರು ಶಿಲ್ಪಗಳಲ್ಲಿ ಸಾಮಾನ್ಯವಾಗಿ ಚತುರ್ಬಾಹು ಹಸ್ತಗಳನ್ನು ಹೊಂದಿರುತ್ತಾರೆ. ಅವುಗಳಲ್ಲಿ ಶಂಖ ಚಂಕ್ರ ಗದೆಗಳು ಸರ್ವೇ ಸಾಮಾನ್ಯಯಾಗಿ ಕಾಣುತ್ತವೆ. ಹರಿಗೆ ಪ್ರಿಯರಾದ ದ್ವಾರಪಾಲಕರು ಹೇಗೆ ಹರಿಯ ಆಯುಧಗಳನ್ನು ಹೊಂದಿರುವರೋ ಹಾಗೇ ಹನುಮಂತನೂ ಹರಿಗೆ ಪ್ರಿಯನೇ. ಪ್ರಾಯಶಃ ಶಿಲ್ಪ ಕಲಾವಿದ ಅದನ್ನು ತಿಳಿದೇ ಈ ಹೊಸ ದೃಶ್ಯ ನಿರೂಪಣೆ ಮಾಡಿದ್ದಾನೆ.

13. ಭೀಮನ ಬಾಗಿಲನಿನ ಹತ್ತಿರದ ಗೋಡೆಯ ಮೇಲಿನ ಶಿಲ್ಪಗಳನ್ನು ಮಹಾಭಾರತದ ಕತೆಗಳೆಂದು ಡಾ. ವಾಸುದೇವನ್ ಗುರುತಿಸಿದ್ದಾರೆ. ಅದೇ ರೀತಿ ಭೀಮನ ಶಿಲ್ಪವನ್ನು ಪೂರಕವಾಗಿ ರಚಿಸಿರುವ ಸಾಧ್ಯತೆಯನ್ನು ಸೂಚಿಸಿದ್ದಾರೆ. ಅಲ್ಲದೇ ಭೀಮ ಇಲ್ಲಿನ ಕೋಟೆ ಶಂಕರ ಬಾಗಿಲು ಬಳಿಯ ಬಂಡೆಯ ಮೇಲೂ ರಚನೆಗೊಂಡಿದ್ದಾನೆ. ಒಟ್ಟಾಗಿ ರಕ್ಷಣಾ ದೇವತೆ ಅವನಾಗಿದ್ದಾನೆ. ಈ ಪರಂಪರೆ ಹೊಯ್ಸಳ ಕಾಲದಲ್ಲಿಯೇ ಇದ್ದುದನ್ನು ನಾವು ಸ್ಪಷ್ಟಪಡಿಸಬಹುದಾಗಿದೆ. ಆದರೆ, ಮಾಧ್ವ ಮತದ ಬೆಳವಣಿಗೆಯ ನಂತರ ಹನುಮ ಭೀಮ ಮಧ್ವರ ಸಮ್ಮಿಳಿತ ರೂಪದ ಕಲ್ಪನೆಗೆ ಪೂರಕವಾಗಿ ನಾವು ಪ್ರಸ್ತುತ ಭೀಮನ ಶಿಲ್ಪವನ್ನು ನೋಡಬಹುದಾಗಿದೆ.

ನೋಡಿ. ವಾಸುದೇವನ್.ಸಿ.ಎಸ್. ಹಂಪಿಯಲ್ಲಿ ಮಹಾಭಾರತದ ನಿರೂಪಣಾತ್ಮಕ ಉಬ್ಬು ಶಿಲ್ಪಗಳು. 2006, ಪು. 214-228. ವಿಜಯನಗರ ಅಧ್ಯಯನ ಸಂ. 11, ಸಂ. ಡಾ. ಆರ್. ಗೋಪಾಲ್, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆ, ಮೈಸೂರು

14. ಶಿಲ್ಪಸಂಯೋಜನೆಯಲ್ಲಿ 'Symmetry' ಸಮಾನಾಂತರತೆ ಮುಖ್ಯವಾಗಿದೆ. ಇದು ಚಿತ್ರದಲ್ಲಿಯೂ ಕಂಡುಬರುತ್ತದೆ.

15. ಸಾಮಾನ್ಯವಾಗಿ ಮಾಧ್ವ ಮತದವರಲ್ಲಿ ಮನೆಯಲ್ಲಿ ಪೂಜೆಗಾಗಿ ದೇವತೆಗಳ ವಿಗ್ರಹಗಳನ್ನು ಹೊಂದಿರುತ್ತಾರೆ. ಮಾಧ್ವ ಮತಗಳಲ್ಲಿಯೂ ಸಾಕಷ್ಟು ದೊಡ್ಡ ದೊಡ್ಡ ಪ್ರಮಾಣದ ವಿಗ್ರಹಗಳು ಇರುವುದು ಕಂಡುಬರುತ್ತವೆ. ಇವೆಲ್ಲವು ಲೋಹದ ವಿಗ್ರಹಗಳೇ. ಅವುಗಳ ಶೈಲಿಯನ್ನು ಗಮನಿಸಿದಾಗ ವಿಜಯನಗರ ಶಿಲ್ಪಶೈಲಿಗೆ ಪೂರಕವಾದ ರಚನಾ ಶೈಲಿಯನ್ನು ಹೊಂದಿರುತ್ತವೆ.

16. ವಿಠಲ ಎಂಬ ಶಿಲಾಲೇಖನವುಳ್ಳ ಶಿಲ್ಪಗಳು ಹೊಯ್ಸಳ ದೇವಾಲಯಗಳಲ್ಲಿ ಕಂಡು ಬರುತ್ತವೆ. ನುಗ್ಗಿಹಳ್ಳಿ, ಜಾವಗಲ್ಲು, ಹಾರ್ನಹಳ್ಳಿ, ಹೊಸಹೊಳಲು, ಗೋವಿಂದನಹಳ್ಳಿ, ಅಘಲಯಗಳ ದೇವಾಲಯಗಳಲ್ಲಿ ವಿಠಲ ಶಿಲ್ಪಗಳು ಕಂಡುಬರುತ್ತವೆ.

17. ಶ್ರೀನಿವಾಸ ಪಾಡಿಗಾರ 1996, Cult of Vishnu in Karnataka. D.A.M. Mysore ಈ ಕೃತಿಯಲ್ಲಿ ವಿಷ್ಣುವಿನ ವಿವಿಧ ರೂಪಗಳನ್ನು ಅಧ್ಯಯನ ಮಾಡುತ್ತಾ ವಿಠಲನ ಬಗ್ಗೆ ವಿವರಿಸಿದ್ದಾರೆ. ಅವರು ಕೂಡಾ ವಿಠಲನ ಕೈಯಲ್ಲಿ ಚೀಲ ಇದ್ದಿರುವುದನ್ನು ಗುರುತಿಸಿದ್ದಾರೆ. ಆದರೆ ಆ ಕುರಿತು ಯಾವುದೇ ಕೃತಿಗಳಲ್ಲಿ ಉಲ್ಲೇಖವು ಇಲ್ಲವೆಂದೇ ಹೇಳಿದ್ದಾರೆ.

    ವಿಷ್ಣುವಿನ ಶಿಲ್ಪಗಳು ಮತ್ತು ಪ್ರತಿಮಾ ಲಕ್ಷಣಗಳನ್ನು ಹೊಯ್ಸಳ ಶಿಲ್ಪಗಳಿಗೆ ಪೂರಕವಾಗಿ ಅಭ್ಯಾಸ ಮಾಡುತ್ತಿರುವ ನಮ್ಮ ಕಿರಿಯ ಸ್ನೇಹಿತ ಶ್ರೀ ಶೆಲ್ವಪಿಳ್ಳೆ ಅಯ್ಯಂಗಾರ್ ಕೂಡಾ ಯಾವುದೇ ಶಿಲ್ಪ ಲಾಕ್ಷಣಿಕ ಗ್ರಂಥದಲ್ಲಿ ವಿಠಲ ಶಿಲ್ಪದ ಲಕ್ಷಣದ ಚರ್ಚೆ ಇಲ್ಲ ಎಂದು ಗುರುತಿಸಿದ್ದಾರೆ. ವಿಠಲನ ಈ ದೃಶ್ಯಪರಿಕಲ್ಪನೆ ಹೊಯ್ಸಳ ಕಾಲದಲ್ಲಿಯೇ ಗಮನೀಯವಾಗಿ ಮೂಡಿಬಂದಿದೆ. ಅದರ ನೆಲೆ ಹಿನ್ನೆಲೆಯ ಅಧ್ಯಯನದ ಅವಶ್ಯಕತೆ ಇದೆ.

18. ಹಜಾರ ರಾಮಚಂದ್ರ, ಕೋದಂಡರಾಮ, ಮಾಲ್ಯವಂತ ರಘುನಾಥ ದೇವಾಲಯಗಳು ಮುಖ್ಯವಾದವುಗಳು.

19. ಮೂಲರಾಮದೇವರು ಕಳಿಂಗ ದೇಶದ ರಾಜನಲ್ಲಿ ಇದ್ದಿತ್ತು. ಅಲ್ಲಿಯೇ ಕೆಲಸ ಮಾಡುತ್ತಿದ್ದ ನರಹರಿತೀರ್ಥರು ಸನ್ಯಾಸಾಶ್ರಮ ಸ್ವೀಕರಿಸಿದ ಮೇಲೆ ಶ್ರೀ ಮಧ್ವಾಚಾರ್ಯರ ಕೋರಿಕೆಯ ಮೇರೆಗೆ ಅಲ್ಲಿಂದ ತಂದರೆಂದು ಮಾಧ್ವ ನಂಬಿಕೆಗಳು ಹೇಳುತ್ತವೆ. ಈ ಮೂರ್ತಿಯ ಕಾಲದ ಬಗ್ಗೆ ಅಸ್ಪಷ್ಟತೆ ಇದೆ. ಆದರೆ ಶೈಲಿಯ ದೃಷ್ಟಿಯಿಂದ ಸುಮಾರು 10-11 ನೆಯ ಶತಮಾನದ ಕಾಲಕ್ಕೆ ಸೇರುತ್ತದೆ.

20. ಕ್ರಿ.ಶ. 1539 ಮಾರ್ಚ್ 4 ರಂದು ಶ್ರೀವ್ಯಾಸರಾಯರು ದೇಹ ತ್ಯಾಗ ಮಾಡಿದರೆಂದು ತಿಳಿದುಬರುತ್ತದೆ. ಅಚ್ಯುತರಾಯನೇ ರಾಜನಾಗಿದ್ದ.

21. ಬಾಲಸುಬ್ರಹ್ಮಣ್ಯ, 2001, "ವ್ಯಾಸರಾಯರು ಮತ್ತು ವಿಜಯನಗರ", ವಿಜಯನಗರ ಅಧ್ಯಯನ ಸಂ. 6, ಮೈಸೂರು

22. ಶ್ರೀ ವ್ಯಾಸರಾಯರ ಭಾವಶಿಲ್ಪದ ಸ್ಪಷ್ಟ ಐತಿಹಾಸಿಕ ದಾಖಲೆ ಇದಾಗಿದೆ.

23. ಭಾಗವತ ಪುರಾಣದಲ್ಲಿ ಈ ಕಥೆಯ ನಿರೂಪಣೆ ಇದೆ.

24. ಇಂತಹ ಶಿಲ್ಪಗಳು ಹೊಯ್ಸಳ ದೇವಾಲಯ ಕಥಾ ನಿರೂಪಣಾ ಶಿಲ್ಪಗಳಲ್ಲಿ ಹಾಗೂ ವಿಜಯನಗರ ಸಮಕಾಲೀನ ಭಾಗವತ ಪುರಾಣದ ಚಿಕಣಿ ಚಿತ್ರಗಳಲ್ಲಿಯೂ (ರಾಜಸ್ಥಾನ್ ಶೈಲಿ) ಸೊಗಸಾಗಿ ಮೂಡಿಬಂದಿದೆ.

25. ಕುಲಕರ್ಣಿ.ಆರ್.ಎಚ್. 2001, ಹಂಪಿ ವಿರೂಪಾಕ್ಷ ದೇವಾಲಯದ ಮಹಾರಂಗ ಮಂಟಪದ ಒಳಭಿತ್ತಿ ಚಿತ್ರ, ವಿದ್ಯಾರಣ್ಯರದೇ? ವ್ಯಾಸರಾಯರದೇ? 'ಇತಿಹಾಸ ದರ್ಶನ', ಸಂ. 16 ಬೆಂಗಳೂರು ಪು. 178-181.

56. VIJAYANAGARA SCULPTURES IN NATIONAL MUSEUM COLLECTION

C.B. Patil and Sunanda Srivastava

National Museum at New Delhi, as well known, is one of the premier museums in India. Exhibited here are a variety of antiquities and art and architectural relics ranging in time and space from prehistoric times through early and medieval down to colonial period that have been collected from various regions across the country. No serious student of Indian art history or a casual visitor can afford to miss these cultural manifestations that present the panorama of Indian art and artistic traditions.

Among various exhibits, here are a few sculptures that represent Vijayanagara School of Art and also form a part of the collection of this institution. These images belong to Vaishnava and Shaiva traditions. The description and discussion of a few important images and deities forms the subject matter of the present paper.

As is well known, established in the year 1336 AD the Vijayanagara kingdom with its capital of the same name now popularly called as Hampi on the southern bank of the river Tungabhadra under the Rayas of Sangama, Saulva, Tuluva and Aravidu families played in important role in the political, socio-religious and cultural life of the people of Karnataka in particular and India in general. The unprecedented glory and prosperity that it achieved won admiration of the every contemporary visitor to the kingdom. The religious tolerance and royal patronage of these rulers is manifested in numerous huge temples complexes with wide spread bazaars in front of them and artistic creations belonging to Shaiva, Vaishnava and Jaina faith and philosophies including Islamic edifices that were raised throughout their empire that once stretched from the river Krishna in the north to Sri Lanka in the south.

Vaishnavite Images

Vishnu is being worshipped in thousand forms since ancient days and these have been described in Vishnu-sahasra-nama in Anushasanaparvana of the Mahabharata. Among these, twenty-four forms are his vyakta-rupas which are delineated in the images (Desai 1973). All these chaturvinshati-murtis are represented as sthanaka-murtis, four armed, standing in samabhanga posture and can be identified only by the arrangements of attributes they carry in their different hands.

Janardhana

The four armed standing image of Vishnu (Pl. I) in granite media is in samabhanga posture(Acc. No. 59.153/13). Out of four hands, the lower right is mutilated while the upper carries chakra. Although the arm of upper left hand is broken, the attribute sankha is seen and the lower left is holding long club like mace. The eyes and smiling lips delineate the serenity in expression.



The image is bedecked with various ornaments. The headgear is in the form of kirita-mukuta studded with gems and periphery of the crown is treated with pearl tassels. The deity wears long makara-kundalas in the ears, broad vaksha-haras studded with gems around the neck, beaded bhuja-kirtis over the shoulders, broad keyuras and kankanas on the arms and wrists and anguliyakas in the fingers. Both the feet are decorated with nupuras and anguliyakas. The yajnopavita is shown running across the body over the urassutra while designed pitambara is held by a katibandha adorned with mekhala at the waist with a prominent kirtimukha at the center and chchannavira decorates the abdomen. Uttariya is shown tied in looped knot at right whose free end flows down along the image.

Now a question arises as to which form of Vishnu is this image? The ancient treatises like Rupamandana, Padmapurana and Pancharatragama have a vivid description of Vishnu and his twenty-four forms. Among these, the explanation offered in the Rupamandana is quite reasonable. The description of the Janardhana form of Vishnu as provided in the Rupamandana reads as:

Janardanombujam chakram kambu kaumodakim dadhat I

Upendro vahate sankham gadam chakram kusheshyam II

The deity should carry chakra in back right hand while the sankha in the back left one and gada in front left and the padma resting in right hand (Gopinatha Rao 1997). The attributes of the image under discussion are exactly similar to the description mentioned in the Rupamandana cited above except for padma-hasta which can be taken as the mutilated lower right hand. The image, therefore, can be identified as Janardhana.

Vishnu-Krishna

Vishnu sculpted in granite measuring 137x61cm is an asanamurti in lalitasana with right leg folded on the simhasana and left hanging down and resting on a padma-peetha (Acc. No. 59.153/80, Pl. II). The four-armed deity has the lower right hand in abhaya-mudra with padma-rekha and the upper holds the chakra in prayoga-mudra. The sankha is placed in the upper left hand and the lower in simhakarna-mudra. Eyes are wide open whereas elongated bow like eyebrows are shown prominently. A kasturi-tilak on the forehead, sharp nose and lips in half smile reflect a benign expression of the image.


A decorated kirita-mukuta crowns the head. Makara-kundalas adorn the ears and vaksha-haras studded with gems around the neck. The deity is wearing yajnopavita and urassutra and the wavy pitambara clothed up to the ankle. Keyuras strewn with gems and kankanas with pearl strings decorate arms and wrists and nupuras and painjanis the feet.



The attributes of the image account it to be a virasanamurti for a deity seated in simhasana with left leg bent and right extended having chakra in one of the right hands and other in abhaya while the left with sankha and other in simhakarna pose and can be identified as Krishna in the court of Yudhishthira about to slain Shishupala.

Ranganatha

The sayanmurti of Ranganatha(Pl. III) is rendered in black stone measuring 314 cm in length. The head along with mukuta and upraised palm of the right arm are resting on the round pillow(Acc. No. 59. 153/64). The left arm is shown stretched parallel to the body resting on the thigh. While the right leg is kept straight, the left is slightly bent, stretched and leaning on the right and toes of both the feet are broken. The damaged nose, bow shaped eyebrows and half open eyes complete the chubby face of image.



The kirita-mukuta with kirtimukha at the center is relatively simple in design decorated with gems and pearls. The elongated ears are ornamented with heavy makara-kundalas and shoulders with beaded bhuja-kirtis. Jeweled vaksha-hara around neck, double stringed gem studded keyuras and beaded kankanas over the arms and wrists and nupuras on the feet decorate the deity. The deity wears yajnopavita with urassutra and is dressed with multiple folded pitambara up to the ankle tied at the katibandha with mekh0a having a kirtimukha at the center with strings of pearls coming out of its mouth.

Yoga Narasimha

Yoga Narasimha(Acc. No. 87. 917; Pl. IV) also known as Kevala Narasimha is yet another form of Vishnu as Narasimha. The well-known story of killing of Hiranyakashipu by tearing him off by Narasimha is narrated in Kurma-purana, Padma-purana, Vishnu-purana etc besides a few other texts.

The image is shown seated on a padmasana in utkutita posture. The face has the features of a lion with fierce expression. Round popping eyes, raised eyebrows, flaring nostrils and open mouth appear to be roaring in rage. The image is four armed and chakra is held in back right hand and the remaining three are broken. Legs are crossed and front two arms are placed over the knees.

Head of the deity is adorned with a decorated kirita-mukuta. Mane of the lion is spread over the chest. Yajnopavita and chchannavira are held by a urassutra. Arms and wrists are decked with ornamented keyuras and simple kankanas. A yogapatta is running around the crossed legs while nupuras and painjanis decorate the feet of the image



Sridevi and Bhudevi

Sridevi and Bhudevi are the consorts of Vishnu and they invariably appear on either sides of him. These two images are sculpted separately akin to each other in sculptural rendering and only their posture, attributes and decoration differentiate them from one another and they measure respectively 95x 35 cm and 88x 39.5 cm. Sridevi(Acc. No. 59.153/81; Pl. V) is shown seated with her left leg placed on the peetha while the extended right is on padma-peetha where as Bhudevi(Acc. No. 59. 153/79; Pl. VI) is depicted with her extended left leg over padma-peetha and right placed also over peetha. Both the images have round face, almond shaped eyes, arched eyebrows and smiling countenance. Sridevi has placed her extended right hand over a peetha and the left supported by leg holds lotus. Bhudevi has a nilotpala in the right hand and the left on the pitha like her counter part Sridevi.

Both the deities are adorned with lalata-tilakas on the forehead and kirita-mukutas over the head. Sridevi wears makara-kundalas





while Bhudevi ratna-kundalas. Both are similarly bejeweled with ekavali, vaksha-haras, bhujakirtis, chchanvira and Yajnopavitas held by urassutras. Sridevi however, wears a kuchabandha as well. Beaded keyuras, kankanas, nupuras and painjanis are ornamenting the arms, wrists and feet of both the images.

Shaivites Images

Shiva and his various aspects are manifested in the sculptural representations since ancient days. These images are: samharamurtis, anugrahamurtis, nrittamurtis and dakshinamurtis besides many minor divinities that adorn the temples and are also worshiped. Ancient scriptures have vivid descriptions of these images.

Bhairava

Bhairava is manifested in Shivapurana as full form of Shankara or purnarupa for he is bharana (protection) and bhishana (terrific) and appears in sixty-four forms as described in the Rudra-yamala (Gopinatha Rao1997).



The image of Bhairava(Acc. No. 87. 978; Pl. VII) is sculpted in round in grey granite measuring 125x55x29 cm. The griming face shown with dentures and prominent canine teeth and smiling lips delineate the terrific appearance. The ornamentation of the image is simple. The head of the deity is crowned with jata-mukuta and the locks of hairs on either side are treated with beads and pearls. Different kinds of vaksha-haras on the chest, bhujakirtis over the shoulders, keyuras and kankanas around the arms and wrists decorate the image. Garland of skulls is reaching beyond the knees. The image is nude in form and a snake girdle is at loins as kati-bandha. A snarling dog is shown standing behind the deity whose neck and hips are also ornamented. The attributes help in identifying this image as Kshetrapala.

Virabhadra

Virabhadra is one of the samharamurties of Siva that delineates his destructive form manifested while destroying yajna of Daksha and this well-known story is narrated in Kurma-purana, Varaha-purana and Bhagvata-purana with variations in each scriptures.



Four armed standing image of Virabhadra(Acc. No. 59. 153/ 72; Pl.VIII) in granite measuring 124x57cm is shown in tribhanga posture encased in a prabhavali having floral design and kirtimukha at the center. The deity carries a sword in lower right hand and the upper holds an arrow. The upper left hand has the bow and the left rests over the shield placed on a skull. Wide open eyes reflect sentiment of anger, further enhanced by flaring nostrils and prominent canine teeth protruding from smiling lips. The third eye on the forehead also adds to the terrific expression of the image.

The kirita-mukuta is decorating the head and loose hairs extend on the nape of the neck. Ears are adorned with vratta-kundalas and chest with different types of vaksha-haras. Simple keyuras, kankanas and ungaliyakas in arms and hands and nupuras and painjanis in the feet complete the ornamentation. The deity has yajnopavita and rundamala on his body. The pitambara that is above knee is held by a katibandha and the dagger tied to it. On the right of the image, goat headed Daksha is shown standing in anjali-mudra.

Parvati

Parvati is shown usually as consort of Siva in variety of images under different names and forms but the image under consideration is an independent deity sculpted in granite measuring 142x51cm in samabhanga posture (Acc. No. 59.153/168; Pl. IX). Eyes are half open with arched eyebrows and a tilak on the forehead. Nose is slightly chipped off. The smiling lips are rendering a beautiful expression to the round face. Out of four hands, three are damaged while the remaining upper left carries a lotus.



The head of the deity is adorned with an ornamented jatamukuta. The long and wavy kuntala below the crown extend from shoulders upon arms and are decorated with flowers. The ears are decked with makara-kundalas whereas neck is ornamented with kanthahara and two vaksha-haras and shoulders with bhujakirtis. Kankanas are adorning the wrists and nupuras the feet. The image has a yajnopavita passing through bosom and pitambara draping the body up to the ankles is held by a broad katibandha with swinging pearl strings of dukula-abharana.

Kartikeya

The image of Kartikeya in granite measuring 172x120x35 cm having six faces and twelve arms is shown seated in lalitasana on a peacock, framed with a prabhavali ending in a kirtimukha(Pl. X A&B). The main right hand is broken whereas left is in varada-mudra. Remaining five right hands carry sakti, trishula, bana, vajra and ankusa and left hands have pasa, ghanta, dhanus, gada/ musala and khadga. The noses are slightly damaged on the front three faces. The half open eyes, arched eyebrows and smiling lips delineate composed appearance.





All the six heads are crowned with karanda-mukutas. Heavy makara-kundalas in the ears, kantha-hara on the neck, vaksha-haras, including a long one on the chest and bhuja-kirtis on the shoulders decorate the figure. Arms and wrists are ornamented with keyuras and kankanas and feet with nupuras, painjanis and ungaliyakas. The deity has yajnopavita, chchannavira, and urassutra. A short pitambara tied with katibandha and mekhala enfolds the body up to knees. The figure is also decorated on the back with vaksha-haras, ornamented mekhala, yajnopavita and urassutra. Peacock, the vehicle of Kartikeya is ornamented as well. The beak is broken and it is shown holding a snake.

As well known, the gods had to have a commander in chief of their army i.e. Deva-senapati to slain Tarakasura, a demon who could be killed only by a child born to Shiva. Shiva being a yogi is

made to marry Parvati, the daughter of Himavanta and Menaka. Shiva and Parvati were later blessed with Kartikeya and various accounts on his birth are available in different texts.

Subrahmanya

The image of Subrahmanya(Acc. No. 87. 982; Pl. XI) in buff granite measuring 149x92x25 cm is shown in samabhanga posture with three faces and twelve arms. The main right hand is broken which will be usually in abhaya-mudra and left is in katyavalambita pose. Attributes held in other hands are not easy to identify as they are worn out and broken at many places. However, some of them are musala, khadga (?), ankusa and vajra in right hands and sakti, pasa, khetaka, ghanta and khadga (?) in the left. Both the side faces are damaged and the central face reflects serene countenance with prominent open eyes and gentle smile over lips.



All the heads are decorated with kirita-mukutas, neck with kantha-haras, chest with vaksha-haras and ears with kundalas. Broad keyuras and kankanas are adorning all the arms and wrists and nupuras the ankles. Chchannavira around abdomen and a broad katibandha at the waist holding the pitambara are adorning the body of the image.

Blessed to Siva and Girija, Karttikeya is known by several names and these portray different forms and attributes ascribed to them. The present image can be identified as Karttikeya depicting deva-senani form similar in lines with Ganadhisha that describes the deity as:

Abhayamsirthaang chankusham shakti shulam
varada kulish pasham padmadandau gadam cha
dadhatamubhayapaksha dvadashayamhastai
rdvidashakamalanetram devasenanyamide II

It should be with twelve arms and twelve eyes and the attributes in the hands should be padma, khadga, chakra, ankusa, sakti, abhaya, sula, varada,dand and gada (Gopinatha Rao1997).

Sarasvati

Sarasvati, the goddess of learning enjoys a special place among devis of Hindu pantheon and is associated with both, Brahma and Vishnu. The deity under reference is an independent



image in granite measuring 149x48 cm shown standing in samabhanga posture(Acc. No. 69.41; Pl. XII). The round face with meditative eyes with bow shaped eyebrows, aquiline nose and firm lips reflect a divine expression. The nose is damaged. The four armed image has the lower right hand in abhaya-mudra and the upper is holding akshamala where as the upper left hand carries the lotus while the lower is broken which might have carried a book in the out streched palm.

Jatamukuta held by a series of receding tiers, Makara-kundalas adorning the ears are made of pearls and bhujakirti of beads. The deity wears vakshaharas and yajnopavita on the well-sculpted body. Arms are bejeweled with keyuras and wrists with kankanas and feet are ornamented with nupuras and ungaliyakas. The deity is clothed with pitambara having parallel folds held by an ornamented katibandha with dukula-abharana.

These exhibits are only a few manifestations of the grandeur of Vijayanagara art housed in the National Museum. Many more such art and architectural relics might have been displayed in various museums across the country and a comprehensive inventory of all these artistic creations is the need which will facilitate the scholars and people alike endeavouring on the Vijayanagara history, art and culture.

Acknowledgments

The authors are extremely grateful to Dr. AKVS Reddy, Director General and Dr. JE Dawson, Keeper, National Museum for permitting to study these sculptures and making available the photographs that are accompanying this presentation. The Copy Right of photographs rests with the National Museum, New Delhi.

Notes and References

The National Museum was established and housed in the Rashtrapati Bhavan and the art objects sent for an exhibition under the aegis of ASI to London in 1947 formed the nucleus of its collection. It was declared open on the 15th August 1949 and became an independent institution in 1958. The Museum enriches its collection by acquiring the art objects through Art Purchase Committees and the objects so described are also acquired through such Committee.

Desai, Kalpana S. 1973: Iconography of Vishnu. New Delhi, Abhinava Publications: 10.

Balasubramanya 1985: Virabhadra Sculptures in Hampi in Nagarajaja Rao, M. S. (ed.),


Vijayanagara Progress of Research. Mysore, Directorate of Archaeology and Museums in Karnataka: 133-35.

Gopinatha Rao, T. A. 1997: Elements of Hindu Iconography(Rep.), Vol. I. Pts. I-II. Delhi, Motilal Banarsidass Publishers: 89; 150; 176; 182; 232; 377 & Appendix: B: 222; C: 64.

Gupte, R. S. 1972: Iconography of the Hindus, Buddhists and Jains. Bombay, D.B.

Taraporevala: 56.

ವಿಜಯನಗರ ಸಾಮ್ರಾಜ್ಯವನ್ನು ಕುರಿತಾದ ಅಧ್ಯಯನ ಮತ್ತು ಸಂಶೋಧನೆ ಒಂದು ಮುಗಿಯದ ಕಥೆ. ಅದಕ್ಕೆ ಇದರ ವೈಶಾಲ್ಯ, ವೈಭವ ಹಾಗೂ ವೈಶಿಷ್ಟ್ಯಗಳೇ ಮುಖ್ಯ ಕಾರಣ. ಮೊಟ್ಟ ಮೊದಲನೆಯ ಬಾರಿಗೆ ಇಡೀ ದಕ್ಷಿಣ ಭಾರತ ಒಂದುಗೂಡಿ ರಾಜಕೀಯ ಮತ್ತು ಸಾಂಸ್ಕೃತಿಕ ಮೇಲ್ಮೆಯನ್ನು ಸಾಧಿಸಿ, ಹತ್ತಾರು ವಿದೇಶೀಯ ಇತಿಹಾಸಕಾರರನ್ನೂ ಆಕರ್ಷಿಸಿ, ದಕ್ಷಿಣ ಭಾರತದ ಇತಿಹಾಸದಲ್ಲಿ ಸುವರ್ಣಯುಗವೆನಿಸಿಕೊಂಡಿತು. ಇಂತಹ ಸಾಂಸ್ಕೃತಿಕ ಸಾಮ್ರಾಜ್ಯದ ಪರಿಚಯ ಜನಸಾಮಾನ್ಯರಿಗೆ ಆಗುವಂತೆ ಕರ್ನಾಟಕ ಸರ್ಕಾರ ಪ್ರತಿ ವರ್ಷವೂ ಹಂಪಿ ಉತ್ಸವವನ್ನು ಏರ್ಪಡಿಸುತ್ತಿದೆ. ಇದೇ ಸಂದರ್ಭದಲ್ಲಿ ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ ವಿಚಾರಸಂಕಿರಣವನ್ನು ಏರ್ಪಡಿಸಿ ಇಲ್ಲಿ ಮಂಡಿಸಲಾದ ಪ್ರಬಂಧಗಳನ್ನು ಪ್ರಕಟಿಸುತ್ತಿದೆ. ಈ ಮಾಲಿಕೆಯಲ್ಲಿ ಇದು ಹನ್ನೆರಡನೆಯ ಸಂಪುಟ ; ವಿಜಯನಗರದ ವಿವಿಧ ಮಜಲುಗಳನ್ನು ಪರಿಚಯಿಸುವ ಸುಂದರ ಕೈಪಿಡಿ.



ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ

ಅರಮನೆ ಆವರಣ, ಮೈಸೂರು - 560 001